ಶಾಸನ ಪದ್ಯ ಸಿರಿ

ಸಂಪುಟ - ೨

ಸಂಪಾದಕರು
ಕೆ.ಆರ್. ಗಣೇಶ
ದೇವರಕೊಂಡಾರೆಡ್ಡಿ

ಕರ್ನಾಟಕ ಸಾಹಿತ್ಯ ಅಕಾಡೆಮಿ

ಶಾಸನ ಪದ್ಯ ಸಿರಿ

ಸಂಪುಟ ೨

ಪ್ರಧಾನ ಸಂಪಾದಕರು

ಬಿ. ವಿ. ವಸಂತಕುಮಾರ್

ಸಂಪಾದಕರು

ಕೆ. ಆರ್. ಗಣೇಶ

ದೇವರಕೊಂಡಾರೆಡ್ಡಿ

ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-೫೬೦ ೦೦೨
ದೂರವಾಣಿ: ೦೮೦-೨೨೨೧೧೭೩೦ / ೨೨೧೦೬೪೬೦
www.sahithyaacademy.karnataka.in
ಇ-ಮೇಲ್: sahithya.academy@gmail.com

SHASHANA PADYA SIRI : Vol – 2, Edited by Dr. K.R. Ganesh and Dr. Devarakonda Reddy Published by: kariyappa N., Registrar Karnataka Sahithya Academy, Kannada Bhavana, J.C. Road, Bengaluru – 560002.

ಪ್ರಧಾನ ಸಂಪಾದಕರು
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಣ	:	೨೦೨೨
ಪ್ರತಿಗಳು	:	೧೦೦೦
ಬೆಲೆ	:	ರೂ. ೪೦೦/-
ಪುಟಗಳು	:	xxxii + ೭೦೦ = ೭೩೨
ಮುಖಪುಟ ವಿನ್ಯಾಸ	:	ಮುರಳೀಧರ ವಿ. ರಾಥೋಡ್

ISBN	:	978-93-91554-42-2
Pages	:	xxxii + 700 = 732
Price	:	Rs. 400/-
First Impression	:	2022
Copies	:	1000

ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು :
ಶ್ರೀ ಐಶ್ವರ್ಯ ಪ್ರಿಂಟ್ಸ್,
ಬೆಂಗಳೂರು – ೫೬೦೦೮೫.
ಮೊ: ೯೯೮೬೨೧೦೫೫೪

ಪ್ರಧಾನ ಸಂಪಾದಕರ ಮಾತು

'ಶಾಸನ ಪದ್ಯ ಸಿರಿ' ಎರಡು ಸಂಪುಟಗಳಲ್ಲಿ ಪ್ರಕಟವಾಗುತ್ತಿದೆ. ಒಟ್ಟು ೫೯೩೭ ಶಾಸನ ಪದ್ಯಗಳು ಇಲ್ಲಿವೆ. ಕನ್ನಡ ಶಾಸನಗಳಲ್ಲಿರುವ ಎಲ್ಲಾ ಪದ್ಯಗಳನ್ನೂ ಇಲ್ಲಿ ಸಂಪಾದಿಸಿಲ್ಲ. ಸಾಹಿತ್ಯಿಕವಾಗಿ ಮುಖ್ಯವೆನಿಸಿರುವ ಪದ್ಯಗಳನ್ನಿಲ್ಲಿ ಸಂಪಾದಿಸಿ ನೀಡಿದ್ದಾರೆ. ಈ ಮಹತ್ವದ ಎರಡು ಸಂಪುಟಗಳನ್ನು ಸಿದ್ಧಪಡಿಸುವಲ್ಲಿ ಹಿರಿಯ ವಿದ್ವಾಂಸರಾದ ಕೆ. ಆರ್. ಗಣೇಶ ಹಾಗೂ ದೇವರಕೊಂಡಾರೆಡ್ಡಿ ಅವರು ಅವಿರತವಾಗಿ ಶ್ರಮಿಸಿದ್ದಾರೆ, ವಿಶೇಷವಾದ ಕಾಳಜಿಯನ್ನು ವಹಿಸಿದ್ದಾರೆ. ಈ ಈರ್ವರು ಸಂಪಾದಕರಿಗೆ ೨೨ ವಿದ್ವಾಂಸರು ನೆರವಾಗಿದ್ದಾರೆ. ಅವರೆಲ್ಲರಿಗೂ ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವಾದರಗಳೊಂದಿಗೆ ವಂದಿಸುತ್ತದೆ.

ಶಾಸನಗಳು ಮಹತ್ವದ ದಾಖಲೆಗಳು, ಅವುಗಳನ್ನು ಪ್ರಭುತ್ವವೇ ಹಾಕಿಸಿದ್ದರೂ ಅಲ್ಲಿ ಕೇವಲ ರಾಜ ಮಹಾರಾಜರ ವಿಷಯಗಳು ಮಾತ್ರವೇ ಇಲ್ಲ. ಅಲ್ಲಿ ಶ್ರೀಸಾಮಾನ್ಯರಾದಿಯಾಗಿ ಪ್ರಾಣಿಗಳ ಕೊಡುಗೆ ಸಾಹಸಗಳನ್ನೂ ದಾಖಲಿಸಲಾಗಿದೆ. ಹಾಗಾಗಿ ಶಾಸನಗಳನ್ನು ಆಧರಿಸಿ ಶ್ರೀಸಾಮಾನ್ಯರ ಅಸಾಮಾನ್ಯ ಸಾಧನೆಗಳನ್ನು ಜೀವನ ಮೌಲ್ಯಗಳನ್ನು ಸಾಹಿತ್ಯಕ್ಕೆ ನಾಯಕ ನಾಯಕಿಯರಾಗಬಲ್ಲ ಜೀವಂತ ಪಾತ್ರಗಳನ್ನು ಕಾಣುವ ಹಾಗೂ ಕಟ್ಟಿಕೊಳ್ಳುವ ಕಟ್ಟಿಕೊಡುವ ಅವಕಾಶವಿದೆ. ಇವು ಭಾಷೆ, ಸಾಹಿತ್ಯ, ಸಂಸ್ಕೃತಿ, ಇತಿಹಾಸ ಮೊದಲಾದ ಹತ್ತಾರು ನೆಲೆಗಳ ಅಧ್ಯಯನಕ್ಕೆ ಬಹಳ ಪ್ರಮುಖವಾದ ಆಕರಗಳಾಗಿವೆ. ನಮ್ಮ ಪರಂಪರೆಯ ಬೇರುಗಳಿವು.

ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಈಗಾಗಲೇ ಹಿರಿಯ ವಿದ್ವಾಂಸರು ಓಲೆಗರಿಗಳಲ್ಲಿದ್ದ ಕನ್ನಡ ಕಾವ್ಯಗಳನ್ನು ಸಂಗ್ರಹಿಸಿ, ಪರಿಷ್ಕರಿಸಿ, ಸಂಪಾದಿಸಿ ಕೊಟ್ಟಿದ್ದಾರೆ. ಗ್ರಂಥ ಸಂಪಾದನೆ ಎಂಬ ಒಂದು ಶಾಸ್ತ್ರವೇ ಬೆಳೆದಿದೆ. ಅದೇ ಹೊತ್ತಿನಲ್ಲಿ ಜನಪದರ ಬಾಯಲ್ಲಿ ಚಿರಂಜೀವಿಗಳಾಗಿದ್ದ ಜನಪದ ಕಾವ್ಯಗಳನ್ನೂ ಸಂಗ್ರಹಿಸಿ, ಸಂಪಾದಿಸಿ ಮಲೆಯ ಮಹದೇಶ್ವರ ಕಾವ್ಯ ಮೊದಲಾದ ಹಲವು ಮಹಾಕಾವ್ಯಗಳನ್ನೂ ನೀಡಿದ್ದಾರೆ. ಅದೇ ರೀತಿಯಲ್ಲಿ ಶಾಸನಗಳಲ್ಲಿ ಅಡಕವಾಗಿರುವ ಸಾಹಿತ್ಯರಾಶಿಯೂ ಕೂಡ ಸಮಗ್ರವಾಗಿ ಸಂಪಾದನೆಗೊಂಡು ಪ್ರಕಟಗೊಳ್ಳಬೇಕಾದ ಅಗತ್ಯವನ್ನು ಮನಗಂಡ ನಮ್ಮ ತಂಡ 'ಕನ್ನಡ ಶಾಸನ ಸಾಹಿತ್ಯ ಸಿರಿ' ಯೋಜನೆಯನ್ನು ರೂಪಿಸಿತು. ಈ ಸಂಬಂಧ ನಮ್ಮ ನಾಡಿನ ಹಿರಿಯ ವಿದ್ವಾಂಸರಾದಂತಹ ಹಂ. ಪ. ನಾಗರಾಜಯ್ಯ, ಸೀತಾರಾಮ ಜಾಗೀರದಾರ್, ಬಿ. ರಾಜಶೇಖರಪ್ಪ, ಜೆ. ಎಂ. ನಾಗಯ್ಯ, ಪರಮಶಿವಮೂರ್ತಿ, ಎಂ. ಜಿ. ಮಂಜುನಾಥ

ಮೊದಲಾದ ಹಲವು ವಿದ್ವಾಂಸರ ಸಭೆ ಮಾಡಿ ಸಲಹೆಗಳನ್ನು ಪಡೆಯಲಾಯಿತು. ನಮ್ಮ ನಾಡಿನ ಹಿರಿಯ ವಿದ್ವಾಂಸರು, ಶಾಸನತಜ್ಞರಾದ ಪ್ರೊ. ದೇವರಕೊಂಡಾರೆಡ್ಡಿ ಅವರು 'ಶಾಸನ ಸಾಹಿತ್ಯ ಸಿರಿ' ಯೋಜನೆಯ ಸಂಪಾದಕರಾಗಿ ಕೃತಿಗಳನ್ನು ಸಿದ್ಧಪಡಿಸಿ ನೀಡ ಬೇಕೆಂದು ಕೋರಲಾಯಿತು. ಅವರು ಪ್ರೀತಿಯಿಂದ ಒಪ್ಪಿ ೨೦೨೦ರಲ್ಲೇ ಕಾರ್ಯಾರಂಭ ಮಾಡಿದರು. ವಿವಿಧ ವಿದ್ವಾಂಸರಿಗೆ ವಿವಿಧ ಜಿಲ್ಲೆಗಳ ತಾಲ್ಲೂಕುಗಳ ಶಾಸನ ಸಂಪುಟ ಗಳನ್ನು ಹಂಚಿ ಅವುಗಳಲ್ಲಿರುವ ಸಾಹಿತ್ಯಾತ್ಮಕ ಪದ್ಯ ಹಾಗೂ ಗದ್ಯಗಳನ್ನು ಸಂಗ್ರಹಿಸಿ, ಸಂಪಾದಿಸಿ ನೀಡುವಂತೆ ಪ್ರಾರ್ಥಿಸಲಾಯಿತು. ಕಳೆದ ಎರಡು ವರ್ಷಗಳಲ್ಲಿ ಹಲವು ವಿದ್ವಾಂಸರ ಸುದೀರ್ಘ ಪ್ರಯತ್ನದ ಫಲವಾಗಿ 'ಶಾಸನ ಪದ್ಯ ಸಿರಿ' ಚಾರಿತ್ರಿಕವಾಗಿ ದಾಖಲಾಗುವಂತೆ, ಅರ್ಥಪೂರ್ಣವಾಗಿಯೂ, ಮಹತ್ವಪೂರ್ಣವಾಗಿಯೂ, ಅಧ್ಯಯನದ ಮಹಾನ್ ಸರಕಾಗಿಯೂ ಮೂಡಿ ಬಂದಿದೆ. ರಾವ್ ಬಹದ್ದೂರ್ ಆರ್. ನರಸಿಂಹಾಚಾರ್ಯ ಅವರ 'ಶಾಸನ ಪದ್ಯ ಮಂಜರಿ' ಪ್ರಕಟವಾಗಿ ಒಂದು ನೂರು ವರ್ಷ ತುಂಬುತ್ತಿರುವ ಹೊತ್ತಿನಲ್ಲಿ 'ಶಾಸನ ಪದ್ಯ ಸಿರಿ' ಪ್ರಕಟವಾಗುತ್ತಿರುವುದು ಆ ಎಲ್ಲಾ ಹಿರಿಯ ಚೇತನಗಳಿಗೆ ನಾವು ಸಲ್ಲಿಸುತ್ತಿರುವ ಒಂದು ಪುಟ್ಟ ಗೌರವವಾಗಿದೆ. ಪರಂಪರೆಯ ಬೇರುಗಳನ್ನೂ ಕಾಪಿಟ್ಟುಕೊಂಡು ಸಂಸ್ಕೃತಿಯ ಮರ ಸಮೃದ್ಧಗೊಳ್ಳಬೇಕಾದುದು ಅತ್ಯಗತ್ಯ. ಪರಂಪರೆ ಯನ್ನು ಕಳೆದುಕೊಳ್ಳುವ ಜನಾಂಗ ಕಳಾಹೀನವಾಗುತ್ತದೆ. ಹಾಗಾಗಿ ಅದು ಎಂದೆಂದೂ ಕಳೆದುಹೋಗದಂತೆ ನಮ್ಮ ಪೂರ್ವಜರು ಕಲ್ಲು ಲೋಹಗಳಾದಿಯಿಂದ ಹಿಡಿದು ಅನಂತ ಆತ್ಮದಲ್ಲಿಯೂ ಮೂರ್ತವಾಗಿ ಹಾಗೂ ಅಮೂರ್ತವಾಗಿ ಸಂಸ್ಕೃತಿಯ ಅಮೃತತ್ವವನ್ನು ಕೆತ್ತಿ ಕಟ್ಟಿ ಕಡೆದು ನಿಲ್ಲಿಸಿದ್ದಾರೆ. ಆ ಬಯಲ ನಿರ್ಬಯಲ ಗೊಮ್ಮಟನನ್ನು ದರ್ಶಿಸುವ ಅಂತಶ್ಚಕ್ಷುಗಳನ್ನು ಗಳಿಸಬೇಕಾದದ್ದು ಆಯಾಯ ಯುಗದ ಯುವ ನವ ಜನಾಂಗದ ಕರ್ತವ್ಯ. ಅದಕ್ಕೆ ನೆರವಾಗುವುದಷ್ಟೇ ವಿಶ್ವವಿದ್ಯಾನಿಲಯಗಳು, ಅಕಾಡೆಮಿಗಳು ಮಾಡಬಹುದಾದ ಕೆಲಸ.

ಅಂಥ ಕೆಲಸಗಳಲ್ಲಿ 'ಶಾಸನ ಪದ್ಯ ಸಿರಿ'ಯೂ ಒಂದು ಎಂದು ನಂಬಿದ್ದೇನೆ. ಈ ನಿಟ್ಟಿನಲ್ಲಿ ಕೃತಿಯ ಸಂಪಾದಕರಾದ ಕೆ. ಆರ್. ಗಣೇಶ ಹಾಗೂ ದೇವರಕೊಂಡಾರೆಡ್ಡಿ ಅವರು ಬರೆದಿರುವ, 'ಶಾಸನ ಪದ್ಯ ಸಿರಿ'ಯ ಒಳಹೊಗುವ ಮುನ್ನ ಎಂಬ ವಿದ್ವತ್ಪೂರ್ಣ ಪ್ರಸ್ತಾವನೆ ಗಮನಾರ್ಹ. ಅದರಲ್ಲಿ ಅವರು ಬಿ. ಎಲ್. ರೈಸ್, ಆರ್. ನರಸಿಂಹಾಚಾರ್, ಎಚ್. ಕೃಷ್ಣಶಾಸ್ತ್ರಿ, ಎ. ಎಂ. ಅಣ್ಣಿಗೇರಿ, ಮೇವುಂಡಿ ಮಲ್ಲಾರಿ, ತಿ. ತಾ. ಶರ್ಮ, ಡಾ. ಎಂ. ಚಿದಾನಂದಮೂರ್ತಿ, ಡಾ. ಎಂ. ಎಂ. ಕಲಬುರ್ಗಿ ಮೊದಲಾದ ಹಿರಿಯ ವಿದ್ವಾಂಸರು ಈ ಕ್ಷೇತ್ರಕ್ಕೆ ನೀಡಿರುವ ಕೊಡುಗೆ ಹಾಗೂ ಹಾಕಿಕೊಟ್ಟಿರುವ ಮಾರ್ಗವನ್ನು ಪ್ರಸ್ತಾಪಿಸಿದ್ದಾರೆ. ಆ ಹಾದಿಯಲ್ಲಿ ಮತ್ತಷ್ಟು ಸಾಗಬೇಕಾದ ಅಗತ್ಯವಿದೆ ಎಂಬುದನ್ನು ಸೂಚಿಸುವ ಹಾಗೂ ಸಾಗಿಬಂದಿರುವುದರ ಪ್ರತೀಕ 'ಶಾಸನ ಪದ್ಯ ಸಿರಿ'. ಈ ಕೃತಿಗಳನ್ನು ಆಧರಿಸಿ ಶಾಸನಗಳ ಸಾಹಿತ್ಯದ ವಸ್ತು, ಭಾಷೆ, ಶೈಲಿ, ಮೌಲ್ಯ ಮೊದಲಾದ ಹತ್ತು ಹಲವು

ಅಧ್ಯಯನಗಳು ನಡೆದಾಗ ಈ ಕೃತಿಯ ಪ್ರಕಟಣೆಯು ಪೂರ್ಣವಾದಂತಹ ಸಾರ್ಥಕ್ಯವನ್ನು ಪಡೆಯುತ್ತದೆ. ಆ ನಿಟ್ಟಿನಲ್ಲಿ ವಿದ್ವಾಂಸರು ತೊಡಗಿಸಿಕೊಳ್ಳಲಿ ಎಂಬುದು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಆಶಯ.

ಸಂಸ್ಕೃತಿಯ ನಿರ್ಮಾಣ ಹಾಗೂ ಬಲವರ್ಧನೆಯು ಸರ್ವವ್ಯಾಪಿ, ಸರ್ವಸ್ಪರ್ಶಿ, ಸರ್ವೋತ್ಕೃಷ್ಟವಾಗಿ ಆಗಬೇಕು. ಇಲ್ಲವಾದರೆ, ಪ್ರಾದೇಶಿಕವಾದ ಹಾಗೂ ಸಾಮಾಜಿಕವಾದ ಅಸಮಾನತೆ ಹಾಗೂ ಅಸಮತೋಲನಕ್ಕೆ ಕಾರಣವಾಗುತ್ತದೆ. ಎಲ್ಲ ಪ್ರದೇಶ ಹಾಗೂ ಸಮಾಜಗಳು, ಎಲ್ಲ ಕಾಲಗಳಲ್ಲಿ ತಾವೇ ತಮ್ಮ ನೆಲದಲ್ಲಿ ರಾಜಕೀಯ ಬಲವರ್ಧನೆಯಿಂದ ಸುರಕ್ಷೆ, ಆರ್ಥಿಕ ಬಲವರ್ಧನೆಯಿಂದ ಸಮೃದ್ಧಿ ಮಾನಸಿಕ ಬಲವರ್ಧನೆಯಿಂದ ಸಂಸ್ಕೃತಿಯನ್ನು ಕಟ್ಟಿಕೊಳ್ಳುವ ಕೆಲಸಗಳು ಆಗಬೇಕು. ಸಂಸ್ಕೃತಿ ಎಂಬುದು ಶ್ರಮಜೀವಿಗಳ ಫಲವೇ ಹೊರತು, ಸೋಮಾರಿಗಳದ್ದಲ್ಲ. ಆ ಶ್ರಮ ಶಾರೀರಿಕ, ಮಾನಸಿಕ, ಬೌದ್ಧಿಕ, ಆಧ್ಯಾತ್ಮಿಕವಾದ ಸರ್ವಾಂಗೀಣ ಸಂಪೂರ್ಣ ಶ್ರಮವಾಗಬೇಕು. ಅದರಿಂದ ಮಾತ್ರ ಸಮಾಜಪುರುಷ ಅಭಂಗವಾಗಿರುತ್ತಾನೆ. ಶ್ರಮದ ವರ್ಗೀಕರಣವಲ್ಲದೆ ಶ್ರಮಜೀವಿಗಳ ವರ್ಗೀಕರಣವೂ ಆಗಿ ವರ್ಣ ಹಾಗೂ ಜಾತಿಗಳು ಸೃಷ್ಟಿಯಾದದ್ದರ ಪರಿಣಾಮ ಭಾರತೀಯ ಸಂಸ್ಕೃತಿ ಎಷ್ಟೇ ಉತ್ಕೃಷ್ಟವಾಗಿದ್ದರೂ ಸಾಕಷ್ಟು ಪೆಟ್ಟು ತಿಂದಿದೆ.

ಯಾವ ಯಾವ ಕಾಲಘಟ್ಟದಲ್ಲಿ ಯಾರ ಯಾರ ಆಡಳಿತದಲ್ಲಿ ಯಾವ ಯಾವ ಮತ, ಪಂಥ, ಸಮುದಾಯಗಳ ನ್ಯಾಯ-ಅನ್ಯಾಯ; ಧರ್ಮ-ಅಧರ್ಮ; ಹಿತ-ಅಹಿತ; ಪುಣ್ಯ-ಪಾಪಗಳ ಕಾರಣ; ಜಿಲ್ಲೆ, ರಾಜ್ಯ, ರಾಷ್ಟ್ರ ಏನೇನನ್ನು ಅನುಭವಿಸಿದೆ ಎಂಬುದು ನಮ್ಮ ಬೆನ್ನಿಗಿದೆ. ಅದರ ಅರಿವು ಹಾಗೂ ಅನುಭವಗಳ ಮೇಲೆ, ನಾವು ಕಟ್ಟಿಕೊಳ್ಳಬೇಕಾದ ಭವಿಷ್ಯ ನಮ್ಮ ಕಣ್ಣೆದುರಿಗಿದೆ. ಅದು ಸಾಧ್ಯವಾಗಲು ನಮ್ಮ ಮೆದುಳು, ಹೃದಯ, ಕರುಳು, ಕೈ ಕಾಲುಗಳಿಗೆ ಬೇಕಾಗಿರುವ ಬಲ ನಮ್ಮ ಭಾಷೆ, ಸಾಹಿತ್ಯ, ಸಂಸ್ಕೃತಿ, ಪರಂಪರೆಯಲ್ಲಿದೆ. ಅದರ ಪ್ರತೀಕ ಈ ನಮ್ಮ 'ಶಾಸನ ಪದ್ಯ ಸಿರಿ'.

– ೨ –

'ಶಾಸನ ಪದ್ಯ ಸಿರಿ'ಯ ಮೊದಲನೆಯ ಸಂಪುಟದಲ್ಲಿ ಬಂದಿರುವ

ಪುಸಿಯಱಿದ ನುಡಿ ಲೋಭದ
ದೆಸೆಯನಱಿಯದ ಚಾಗಮನ್ಯವನಿತಾಜನದೊಳ್
ಪುಸಿಲಱಿಯದ ಶೌಚಂ ಭಯ
ರಸಮಱಿಯದ ಗಂಡು ರಾಯನಾರಾಯಣನಾ (ಪುಟ ೧೪)

ಎಂಬ ಪದ್ಯ ನಮಗೆ ಅತ್ಯಗತ್ಯವಾಗಿ ಬೇಕಾದ ಮೌಲ್ಯಗಳಾದ ಸತ್ಯ, ತ್ಯಾಗ, ಶೌಚ ಹಾಗೂ ವೀರತ್ವವನ್ನು ತಿಳಿಸುತ್ತದೆ.

'ಬಾಚಿರಾಜ'ನಂತಹ ಒಬ್ಬ ದಂಡಾದೀಶನು

ಬೆಸಕಯ್ಯದ ಮಣ್ಡಲಮಂ
ಬೆಸಕೆಯ್ಸಿದನಂಜದಿರ್ದ ರಿಪೂಭೂಪರನಂ
ಜಿಸಿದಂ ನಿಜನೃಪದತಿಗೆ ಸಾ
ಧಿಸಿಕೊಟ್ಟಂ ಸಾರ್ವಭೌಮ ರಾಜ್ಯಶ್ರೀಯಂ (ಪುಟ ೧೭)

ಎನ್ನುವ ಮೂಲಕ ರಾಜ್ಯಶ್ರೀಯನ್ನು ಸಾಧಿಸುವ ಸಾಹಸಗಾರರನ್ನು ನಾವಿಲ್ಲಿ ಕಾಣಬಹುದು. ಇಂಥ ಹಲವು ನೆಲೆಯ ಸಾಧಕರ ಸಾಹಸಿಗಳ ಕಾರಣದಿಂದಾಗಿ ಭಾರತ ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ ವಿಶ್ವದ ಆತ್ಮಶ್ರೀಯಾಗಿ ಮೇರುಪರ್ವತದಂತೆ ನಿಂತಿದೆ. ಅಂಥ ಭಾರತದ ವರ್ಣನೆ ಹಲವು ಪದ್ಯಗಳಲ್ಲಿವೆ.

ಸಾಧಿಸಿದಂ ನೆಲನಂ ಹಿಮ
ಭೂಧರದಿಂ ಸೇತುವರೆಗಮುದಯದಿನಪರಾಂ
ಬೋಧಿವರಂ ನಿಜಪತಿಗೆ ಯ
ಶೋಧವಳಂ ಕಾಳಿದಾಸ ದಂಡಾದೀಶಂ (ಪುಟ ೧೯)

ಎಂದು ಕ್ರಿ.ಶ. ೧೦೮೫ರ ನಾಗಾಯಿ ಶಾಸನವು ವರ್ಣಿಸಿದರೆ ಕ್ರಿ.ಶ. ೯೯೧ರ ತಳಕಲ್ಲು ಶಾಸನವು

ಸೇತು ಹಿಮಾದ್ರಿಯಿನಸ್ತಾ
ದ್ರೀ ತಟದಿಂದುದಯ ಶೈಳದಿಂದೆಸೆದಖಿಳ
ಕ್ಷ್ಮಾತಳಮಂ ಪ್ರತಿಪಾಳಿಸಿ
ನೀತಿಯೊಳಾಳ್ದೆಸೆದನಿನ್ತು ತೈಲನರೇಂದ್ರಂ (ಪುಟ ៦೮)

ಎಂದು ಕಟ್ಟಿಕೊಡುತ್ತದೆ. ಕುವೆಂಪು ನಾಡಗೀತೆಯಲ್ಲಿ "ಜಯಭಾರತ ಜನನಿಯ ತನುಜಾತೆ ಜಯ ಹೇ ಕರ್ಣಾಟಕ ಮಾತೆ" ಎಂದು ಹಾಡಿದರೆ, ದ. ರಾ. ಬೇಂದ್ರೆಯವರು "ಕನ್ನಡ ಭಾರತ ಜಗವೆಲ್ಲಾ ಒಂದೆ" ಎಂದಿದ್ದಾರೆ. ಇದು ನಮ್ಮ ರಾಷ್ಟ್ರೀಯತೆ ಹಾಗೂ ಸಾಂಸ್ಕೃತಿಕ ಪ್ರಜ್ಞೆ. ಇದನ್ನು ನಮ್ಮ ಪೂರ್ವಜರು ಸಾವಿರಾರು ವರ್ಷಗಳಿಂದ ಉಳಿಸಿಕೊಂಡು ಬೆಳೆಸಿಕೊಂಡು ಬಂದಿದ್ದಾರೆ. ಆದ ಕಾರಣದಿಂದಲೇ ನಮ್ಮ ನಾಡು –

ಸಕಳ ದ್ವೀಪ ಕಳಾಪಮಂ ಮಿಗುವ ಜಂಬೂದ್ವೀಪದೊಳ್ಕೀರ್ತಿವೆ
ತ್ತು ಕರಂ ಭಾರತವರ್ಷಯಿಪ್ಪುದದು ವರ್ಷೋತ್ಕೃಷ್ಟಮಂತಲ್ಲಿ ವಿ
ಶ್ವಕುಳಾಸಂಕುಳ ಜನ್ಮಭೂಮಿ ಭುವನಶ್ರೀರಮ್ಯಹರ್ಮ್ಯಾಗ್ರ ಚೂ
ಳಿಕೆಯಿರ್ಕುಂ ಬಹುಧರ್ಮದೇನುನಿವಹಕ್ಕಾಡುಂಬೊಲಂ ಬೆಳ್ವೊಲಂ (ಪುಟ ೭೩)

ಎಂಬುದಾಗಿದೆ. ಇದನ್ನು ಕ್ರಿ.ಶ. ೧೧೧೨ರ ಇಟಗಿಯ ಶಾಸನ ಕವಿಯೊಬ್ಬರು ಕಟ್ಟಿಕೊಟ್ಟಿದ್ದಾನೆ ಎಂಬುದು ಗಮನಾರ್ಹ. ನಮ್ಮ ನಾಡಿನ ಪ್ರತಿಯೊಂದು ಹಳ್ಳಿಯೂ ಅಮರಾವತಿಗಿಂತ ಸ್ವರ್ಗಕ್ಕಿಂತ ಮಿಗಿಲು ಎಂಬ ಭಾವವೇ ಸಾಧನೆಗೆ ಪ್ರೇರಣೆ. ಅದನ್ನು ಕ್ರಿ.ಶ. ೧೯೮೫ರ ಗದಗಿನ ಶಾಸನವೊಂದರಲ್ಲಿ –

ಸರಸಿಜಯೋನಿ ಬಿಣ್ಪನಱಿಯಲ್ಕಮರಾವತಿ ಲೊಕ್ಕಿಗುಂಡಿಯೆಂ
ಬೆರಡುಮನೆಯ್ದೆ ತೂಗಲಮರಾವತಿ ಮುಟ್ಟಿದುದೂರ್ಧ್ವ ಲೋಕಮಂ
ಧರೆಯೊಳ್ ಲೊಕ್ಕಿಗುಂಡಿ ನೆಲಸಿತ್ತೆನೆ ಬಣ್ಣಿಪರಾರ್ಜಗಕ್ಕಲಂ
ಕಲಿಸುವ ಲೊಕ್ಕಿಗುಂಡಿಯ ಮಹತ್ವಮುಮಂ ದೊರೆವೆತ್ತ ಬಿಣ್ಪಮಂ (ಪುಟ ೧೦೦)

ಎಂದು ವರ್ಣಿಸಲಾಗಿದೆ. ಲೊಕ್ಕಿಗುಂಡಿ ಅಮರಾವತಿಗಿಂತ ಮಿಗಿಲಾದದ್ದು ಎಂಬ ಭಾವದ ಮತ್ತೊಂದು ಅಭಿಪ್ರಾಯವೇ "ಜನನಿ ಹಾಗೂ ಜನ್ಮಭೂಮಿ ಸ್ವರ್ಗಕ್ಕಿಂತ ಮಿಗಿಲು" ಎಂಬ ರಾಮಾಯಣದ ಮಾತಾಗಿದೆ. ಹೂಲಿಗ್ರಾಮದ ಶಾಸನದಲ್ಲಿ,

ಅದು ವೇದಂಗಳ ತಾಯ್ವನೆ
ಯದು ನಾನಾ ತರ್ಕದಿರ್ಕೆದಾಣಂ ಕೇಳಂ
ತದು ಶಾಸ್ತ್ರಂಗಳ ಕಣಿಯೆನಿ
ಸಿದುದವನೀಚಕ್ರದೊಳಗೆ ಪೂಲಿಗ್ರಾಮಂ (ಪುಟ ೪೩೬)

ಕ್ರಿ.ಶ. ೧೧೧೦ರ ಶಾಸನದಲ್ಲಿ ಕಂಡುಬರುವ ಈ ವರ್ಣನೆ ನಮ್ಮ ಊರು, ತಾಲ್ಲೂಕು, ಜಿಲ್ಲೆ, ರಾಜ್ಯ, ರಾಷ್ಟ್ರ, ಜ್ಞಾನದಿಂದ ಅನುಭವದಿಂದ ಅನುಭಾವದಿಂದ ಬಲಗೊಂಡಾಗ ಮಾತ್ರ ಒಂದು ಸಾಂಸ್ಕೃತಿಕ ಪರಮೋನ್ನತಿಯನ್ನು ಮುಟ್ಟಲು ಸಾಧ್ಯ. "ಕೂಡಿಬಾಳಿದರೆ ಸ್ವರ್ಗಸುಖ ಹೊಡೆದಾಡಿಕೊಂಡು ಸತ್ತರೆ ನರಕದುಃಖ" ಎಂಬ ಅರಿವನ್ನು ಮನುಷ್ಯ, ಲೋಕ, ಕಾಲ ಕಳೆದುಕೊಳ್ಳಬಾರದು ಎಂಬುದನ್ನು ನಮ್ಮ ಎಲ್ಲ ಕಾಲದ ಎಲ್ಲ ಊರಿನ ಸಾಹಿತ್ಯ ಪ್ರತಿಪಾದಿಸುತ್ತಾ ಬಂದಿದೆ. ದ್ವೇಷವಿಲ್ಲದ, ಯುದ್ಧವಿಲ್ಲದ ಬಾಳುವೆ ನಮ್ಮದಾಗಬೇಕು ಎಂಬ ಅರಿವು ಅದು ವಿಶ್ವವಿದ್ಯೆ. ಅದು ಇರುವುದರಿಂದ 'ವಿಶ್ವವಿದ್ಯಾಲಯ'. ಇಲ್ಲದಿದ್ದರೆ ಅದು ಕೇವಲ ಆಲಯ ! ಅಥವಾ ಲಯ !! ನಮ್ಮ ಮನ, ಮನೆ, ಊರು "ಅದು ವೇದಂಗಳ ತಾಯ್ವನೆ" ಆಗಬೇಕು. 'ವೇದ' ಎಂದರೆ 'ಜ್ಞಾನ'. ಜ್ಞಾನದ ತೌರುಮನೆ ಅದು ಪ್ರೀತಿ, ವಾತ್ಸಲ್ಯ, ತಾಯ್ತನದ ತಂಪಿನ ಮನೆ. ಅಲ್ಲಿ ಮಾನವೀಯ ಸಂಬಂಧಗಳು ಮನೆಯ ಒಳಗೆ ಹಾಗೂ ಹೊರಗೆ ಬಂಧು-ಮಿತ್ರರಾಗಿ ಇರುತ್ತವೆ. ಅದಕ್ಕೆ ಉದಾಹರಣೆ ಹೂಲಿಯ ಕ್ರಿ.ಶ. ೧೧೦೭ರ ಪದ್ಯ ಅದು ಹೀಗಿದೆ. –

ಒಡನುಂಡ ಕೆಳೆಯನಂ ಸಂ
ಗಡದಾಳಂ ಮೇಳದಾಳನನುವರದೆಡೆಯೊಳ್
ಬಿಡಲಾಗದೆಂದು ಬೋಸಿಗ
ನೊಡನಟಿದಂ ಮಲ್ಲಿಗಂ ಪ್ರತಾಪೋನ್ನತಿಯಂ (ಪುಟ ೪೩೮)

ಒಡನುಂಡ ಗೆಳೆಯ ಬೋಸಿಗನ ಜೊತೆಗೆ ಪ್ರಾಣಕ್ಕೆ ಪ್ರಾಣವಾಗಿ ನಿಂತು ಪ್ರಾಣ ನೀಡುವ ಬೋಸಿಗನ ಮಿತ್ರ ಮಲ್ಲಣನನ್ನು ನೆನೆಯುವಾಗ 'ಸಂಬಂಜದೊಡ್ಡು ಕಣಾ' ಎಂಬ ದೇವನೂರು ಮಹಾದೇವರ ಮಾತು ನೆನಪಾಗುತ್ತದೆ. ಅದಕ್ಕೆ ಬೇಕಾದ 'ಸಾಕವ್ವ'ರು ನಾವೇ ಆಗಬೇಕಾಗುತ್ತದೆ. ಇಂಥ ಸಾವಿರಾರು ಪದ್ಯಗಳು, ಸಾವಿರಾರು ವರ್ಷಗಳಿಂದ ಕಲ್ಲಿನ ಮೇಲೆ ಕುಳಿತು ಇನ್ನೂ ಬದುಕಿ ಉಳಿದಿವೆ. ಅವುಗಳನ್ನು ನಾವು

ನಮ್ಮ ಎದೆಯ ಭಿತ್ತಿಯ ಮೇಲೆ ಬರೆದುಕೊಂಡು ಬದುಕಬೇಕಾದ ಅಗತ್ಯ ಹಿಂದೆಂದಿಗಿಂತಲೂ ಇಂದು ಅತ್ಯಗತ್ಯವಾಗಿದೆ. ಆ ಕಾರಣದಿಂದ ಕರ್ನಾಟಕ ಸಾಹಿತ್ಯ ಅಕಾಡೆಮಿಯ ನಮ್ಮ ತಂಡ ೨೦೧೪ರ ಅಕ್ಟೋಬರಿನಲ್ಲಿಯೇ, ದೇಸೀದರ್ಶನ ಮಾಲೆ, ಕನ್ನಡ ಸಾಹಿತ್ಯದಲ್ಲಿ ಜೀವನಮೌಲ್ಯ ಮಾಲೆ, ಲೌಕಿಕ ಶಾಸ್ತ್ರ ಪಾರಿಭಾಷಿಕ ಪದವಿವರಣ ಕೋಶ ಮಾಲೆ, ಕನ್ನಡ ಶಾಸನ ಸಾಹಿತ್ಯ ಸಿರಿ ಮಾಲೆ, ಕನ್ನಡ ಸಾಹಿತ್ಯದಲ್ಲಿ ಭಾರತದ ಪರಿಕಲ್ಪನೆ ಮಾಲೆ, ಶ್ರೀಸಾಮಾನ್ಯರೆ ಅಸಾಮಾನ್ಯರ್ಜೀವನ ಕಥನ ಮಾಲೆ, ಮೊದಲಾದ ಪ್ರಕಟಣಾ ಮಾಲೆಗಳ ಯೋಜನೆಯನ್ನು ರೂಪಿಸಿತು. ಎಲ್ಲ ವಿದ್ವಾಂಸರ ನೆರವು ಮಾರ್ಗದರ್ಶನ, ಪಾಲ್ಗೊಳ್ಳುವಿಕೆ ಹಾಗೂ ಪರಿಶ್ರಮದ ಕಾರಣ ಈವರೆಗೆ ೧೫೦ಕ್ಕೂ ಹೆಚ್ಚು ಕೃತಿಗಳು ಕಳೆದ ಎರಡು ಮುಕ್ಕಾಲು ವರ್ಷಗಳಲ್ಲಿ ಪ್ರಕಟವಾಗಿ ಬಿಡುಗಡೆಯಾಗಿವೆ. ಆ ಎಲ್ಲಾ ವಿದ್ವಾಂಸರಿಗೆ ವಂದಿಸುತ್ತೇನೆ.

'ಶಾಸನ ಪದ್ಯ ಸಿರಿ' ಸಂಪುಟಗಳನ್ನು ನಿರ್ದಿಷ್ಟ ಕಾಲಾವಧಿಯಲ್ಲಿ ಎದುರಾದ ಎಲ್ಲ ಅಡೆತಡೆಗಳನ್ನೂ ದಾಡಿ ಸಿದ್ಧಪಡಿಸಿಕೊಟ್ಟ ಕೆ. ಆರ್. ಗಣೇಶ ಹಾಗೂ ದೇವರಕೊಂಡಾರೆಡ್ಡಿ ಅವರಿಗೆ, ನೆರವಾದ ಎಲ್ಲಾ ವಿದ್ವಾಂಸರಿಗೆ, ಪ್ರಕಟಿಸಿದ ರಿಜಿಸ್ಟ್ರಾರ್ ಎನ್. ಕರಿಯಪ್ಪ ಅವರಿಗೆ, ಯೋಜನೆ ರೂಪಿಸಿದ ಅಕಾಡೆಮಿಯ ಸರ್ವಸದಸ್ಯರಿಗೆ ನಮ್ಮ ಒಳಗದ ಹರೀಶ್ ಕುಮಾರ್. ವಿ, ಬ್ರಹ್ಮಣೀಪುರ ಹರೀಶ್, ಸೈಯದ್ ಜಾವೀದ್, ಎಸ್.ಜಿ. ಸುಚಿತ್ರ, ಗೋಪಾಲ್. ಎನ್ ಅವರಿಗೆ, ಅರ್ಥಪೂರ್ಣ ಮುಖಪುಟ ನೀಡಿದ ಮುರಳೀಧರ ರಾಥೋಡ್ ಅವರಿಗೆ, ಸುಂದರವಾಗಿ ಮುದ್ರಿಸಿದ ಶ್ರೀ ಐಶ್ವರ್ಯ ಪ್ರಿಂಟ್ಸ್‌ನ ವಿಶ್ವನಾಥ್ ಬಳಗಕ್ಕೆ ವಂದಿಸುತ್ತೇನೆ.

ಕ್ರಿ.ಶ. ೧೧೬೧ರ ಹೆಗ್ಗೆರೆ ಶಾಸನದ ಶಾಂತಲೆಯ ವರ್ಣನೆ ಅದು ಕನ್ನಡ ಮಾತೆಯರ ವರ್ಣನೆಯೂ ಹೌದು. ಅಂತ ಮಾತೆಯರೆ ನಮ್ಮನ್ನೂ ಕಾಪಾಡಲಿ –

ಸ್ಥಿತಗಂಭೀರವುದಾತ್ತಸದ್ಗುಣಸದಾಚಾರತ್ವಮೆಂಬೀಗುಣೋ
ನ್ನತಿಯಂತಾಳ್ದಿಮಹೇಶ್ವರಾಗಮ ಜಿನಶ್ರೀಧರ್ಮ ಸದ್ವೈಷ್ಣವಾ
ಶ್ರಿತಬೌದ್ಧಾಗಮವೆಂಬ ನಾಲ್ಕುಸಮಯ ವ್ಯಾಪಾರಮಂ ಮಾರ್ಪ್ಪಸಂ
ಗತಚಾತುರ್ಯ್ಯೆಗೆ ಕಾನ್ತೆಶಾನ್ತಲೆಗೆ ಪೇಳಾರುಂ ಸಮಂ ಬಪ್ಪರೇ (ಪುಟ ೨೨೬)

ಬಿ.ವಿ. ವಸಂತಕುಮಾರ್

ಅಧ್ಯಕ್ಷರು

ಕರ್ನಾಟಕ ಸಾಹಿತ್ಯ ಅಕಾಡೆಮಿ

'ಶಾಸನ ಪದ್ಯ ಸಿರಿ'ಯ ಒಳಹೊಗುವ ಮುನ್ನ

ಕನ್ನಡ ಶಾಸನಗಳನ್ನು ವ್ಯವಸ್ಥಿತವಾಗಿ, ಪ್ರಕಟಿಸಿದ ಬಿ.ಎಲ್. ರೈಸ್ ಅವರು, ಆಯಾ ಶಾಸನಗಳಲ್ಲಿ ಬರುವ ಪದ್ಯರೂಪಗಳನ್ನು ಕನ್ನಡ ಲಿಪಿಯಲ್ಲಿ ಶಾಸನಗಳಲ್ಲಿರುವಂತೆಯೇ ಸಾಲುಗಳ ರೂಪದಲ್ಲಿ ಕೊಟ್ಟಿದ್ದಾರೆ. ಆದರೆ ಇಂಗ್ಲಿಷ್ ಲಿಪ್ಯಂತರ ರೂಪಗಳಲ್ಲಿ ಪದ್ಯಗಳನ್ನು ಛಂದೋಬದ್ಧವಾಗಿ ಗುರುತಿಸಿದ್ದಾರೆ. ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್ ಸಂಪುಟಗಳ ಪಾಠಗಳಲ್ಲಿ ಕಂಡುಬರುವ ಪದ್ಯಗಳನ್ನು ಆಯಾ ವಿದ್ವಾಂಸರು ಗುರುತಿಸಿದ್ದರೂ ಅವುಗಳ ಛಂದಸ್ಸಿನ ಹೆಸರುಗಳನ್ನು ನಿರ್ದೇಶಿಸಿಲ್ಲ. ಆದರೆ ಎಪಿಗ್ರಾಫಿಯಾ ಇಂಡಿಕಾದ ಸಂಪುಟಗಳಲ್ಲಿ ಪ್ರಕಟವಾದ ಶಾಸನಗಳಲ್ಲಿ ಪ್ರತಿಯೊಂದು ಶಾಸನದ ಲಿಪ್ಯಂತರ ರೂಪಗಳನ್ನು ಕೊಟ್ಟು ಅಲ್ಲಿರುವ ಪ್ರತಿಯೊಂದು ಪದ್ಯವನ್ನೂ ಅದರ ಛಂದಸ್ಸಿನ ಹೆಸರಿನೊಂದಿಗೆ ಗುರುತಿಸುವ ಕೆಲಸವನ್ನು ಆಯಾ ವಿದ್ವಾಂಸರು ಮಾಡಿದ್ದಾರೆ. ಕರ್ನಾಟಕ ಇನ್‌ಸ್ಕ್ರಿಪ್ಷನ್ಸ್ ಸಂಪುಟಗಳಲ್ಲೂ ಈ ಕ್ರಮವನ್ನು ಅನುಸರಿಸಲಿಲ್ಲ. ಮೈಸೂರಿನ ಕುವೆಂಪು ಅಧ್ಯಯನ ಸಂಸ್ಥೆಯಿಂದ ಪ್ರಕಟವಾದ ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟಗಳ ಪರಿಷ್ಕೃತ ಆವೃತ್ತಿಯಲ್ಲಿ ಪದ್ಯಗಳ ಛಂದಸ್ಸನ್ನು ಗುರುತಿಸುವ ಕೆಲಸ ನಡೆಯಿತು. ಪದ್ಯದಲ್ಲಿ ದೋಷವಿದ್ದರೆ ಅದನ್ನು ಅಶುದ್ಧ ಎಂದು ಅಲ್ಲಿ ಗುರುತಿಸಲಾಯಿತು. ನಮಗೆ ತಿಳಿದಂತೆ ಕನ್ನಡ ಶಾಸನಗಳಲ್ಲಿ ಬರುವ ಪ್ರಮುಖವಾದ ಪದ್ಯಗಳನ್ನು ಗುರುತಿಸಿ, ಅವುಗಳಲ್ಲಿರುವ ದೋಷಗಳನ್ನು ಸರಿಪಡಿಸಿ, ಕಾಲಾನುಕ್ರಮವಾಗಿ ಜೋಡಿಸಿ, ಉಚಿತ ಟಿಪ್ಪಣಿ ಹಾಗೂ ಪ್ರತಿಯೊಂದು ಪದ್ಯಕ್ಕೂ ಉಪಶೀರ್ಷಿಕೆಗಳನ್ನು ಕೊಟ್ಟು ಮೊದಲು ಪ್ರಕಟಿಸಿದವರು ರಾವ್‌ಬಹಾದ್ದೂರ್ ಆರ್. ನರಸಿಂಹಾಚಾರ್ಯರು.

ಕೆಲವು ಕಡೆ, ಪದ್ಯಗಳ ಛಂದಸ್ಸಿನ ಹೆಸರನ್ನು ನರಸಿಂಹಾಚಾರ್ಯರ ಕೃತಿಯಲ್ಲಿ ಸೂಚಿಸಿದ್ದರೂ, ಸಾಮಾನ್ಯವಾಗಿ ಪದ್ಯಗಳ ಛಂದಸ್ಸಿನ ಹೆಸರನ್ನು ಅಲ್ಲಿ ಹೇಳಿಲ್ಲ. ಅವರು ಕಂದ ಪದ್ಯಗಳನ್ನು ಎರಡು ಪಾದಗಳಾಗಿ ಮಾಡಿ ಪ್ರಕಟಿಸಿದ್ದಾರೆ. ಪಾಠ ನಿರ್ಣಯ ಮಾಡಲಾಗದ ಕಡೆ, ತ್ರುಟಿತವಾದ ಭಾಗಗಳನ್ನು ತೋರಿಸಿದ್ದಾರೆ. ಒಂದೇ ಪ್ರದೇಶದಲ್ಲಿ ಬರುವ ಪುನರಾವರ್ತನೆಯಾಗುವ ಪಾಠಗಳನ್ನು ಅವರು ಬಿಟ್ಟಿರುವ ಕೆಲಸವಂತೂ ಅಪರೂಪ. ಶಕಟರೇಫ, ಱಟಗಳ ಪ್ರಯೋಗಗಳನ್ನು ಸರಿಪಡಿಸಿದ್ದಾರೆ. ಮೊದಲ ಬಾರಿಗೆ 1923ರಲ್ಲಿ ಪ್ರಕಟವಾದ ಸಂಪುಟದಲ್ಲಿ ಅವರು 285 ಶಾಸನಗಳ ಪದ್ಯಗಳನ್ನು ಕೊಟ್ಟಿದ್ದರು.

ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆಯಲ್ಲಿ ಪ್ರಕಟವಾದ ಆರ್. ನರಸಿಂಹಾಚಾರ್ ಅವರೇ ಸಂಗ್ರಹಿಸಿದ್ದ ಪದ್ಯಗಳನ್ನು ಸೇರಿಸಿ, ಡಾ. ಎಂ. ಚಿದಾನಂದಮೂರ್ತಿಯವರು ಶಾಸನ ಪದ್ಯಮಂಜರಿಯ ಪರಿಷ್ಕೃತ/ವಿಸ್ತೃತ ಆವೃತ್ತಿಯನ್ನು 1975ರಲ್ಲಿ ಹೊರತಂದರು.

ಆದರಲ್ಲಿ ಒಟ್ಟು 345 ಶಾಸನಗಳ ಪದ್ಯಗಳು ಅಡಕವಾಗಿವೆ. ಆರ್. ನರಸಿಂಹಾಚಾರ್ಯರೇ ಮೊದಲ ಆವೃತ್ತಿಯ 'ಅವತರಣಿಕೆ'ಯಲ್ಲಿ ಹೇಳಿರುವಂತೆ, "ಶಾಸನ ಪದ್ಯಗಳು ಕಾಲಕ್ರಮವಾಗಿ ಆನುಪೂರ್ವಿಯಲ್ಲಿ ಮುದ್ರಿತವಾಗಿವೆ. ಒಂದೊಂದು ಶಾಸನದ ಆದಿಭಾಗದಲ್ಲಿಯೂ ಅದರಲ್ಲಿ ಉಕ್ತವಾದ ವಿಷಯವೂ ಇದ್ದು, ಆಗ ಆಳುತ್ತಿದ್ದ ರಾಜನ ಹೆಸರನ್ನು ಹೇಳಿದೆ". ಅವರು "ಮೊದಲು ಈ ಶಾಸನಭಾಗಗಳನ್ನು ಕರ್ಣಾಟಕ ಕವಿಚರಿತೆಯ ಮೂರನೆಯ ಸಂಪುಟದಲ್ಲಿ ಕವಿಗಳು ಗೊತ್ತಿಲ್ಲದ ಗ್ರಂಥಗಳ ಭಾಗಗಳೊಡನೆ ಕೊಡಬೇಕೆಂದು ಎಣಿಸಿದ್ದೆನು" ಎಂದು ಹೇಳಿಕೊಂಡಿದ್ದಾರೆ.

1924ರಲ್ಲಿ, ತೀ.ತಾ. ಶರ್ಮ ಅವರು ಸಂಪಾದಿಸಿದ ರಾವ್ ಬಹದೂರ್ ಎಚ್. ಕೃಷ್ಣಶಾಸ್ತ್ರಿಗಳಿಂದ ಪರಿಶೋಧಿತವಾದ 'ಶಿಲಾಶಾಸನಗಳಲ್ಲಿ ಕಂಡ ಕರ್ಣಾಟಕ ಕವಿಗಳು' ಗ್ರಂಥ ರಚನೆಯಾಯಿತು. ಅದರಲ್ಲಿ 14 ಜನ ಶಾಸನ ಕವಿಗಳನ್ನೂ ಅವರು ರಚಿಸಿದ ವಿಶೇಷ ಪದ್ಯಗಳನ್ನೂ ಕೊಡಲಾಗಿದೆ. 1961ರಲ್ಲಿ 'ಶಾಸನ ಸಾಹಿತ್ಯ ಸಂಚಯ' ಎಂಬ ಗ್ರಂಥವನ್ನು ಹೊರತಂದ ಶ್ರೀಯುತರಾದ ಎ.ಎಂ. ಅಣ್ಣಿಗೇರಿ ಮತ್ತು ಮೇವುಂಡಿ ಮಲ್ಲಾರಿ ಅವರು 'ಶಾಸನ ಪದ್ಯಮಂಜರಿ'ಯಲ್ಲಿದ್ದ ಕೊರತೆಯನ್ನು ದೂರ ಮಾಡಿ, ಹೆಚ್ಚಾಗಿ ಹಳೆಯ ಮೈಸೂರು ಪ್ರಾಂತ್ಯದ ಹೊರಗಿದ್ದ ಇತರ ಕನ್ನಡ ಪ್ರದೇಶಗಳಲ್ಲಿರುವ ಶಾಸನಗಳ ಸಾಹಿತ್ಯವನ್ನು ಸಂಗ್ರಹಿಸಿ, ಒಳ್ಳೆಯ ಶಾಸನ ಗದ್ಯಭಾಗಗಳನ್ನೂ ಆಯ್ದು ಕೊಟ್ಟಿದ್ದಾರೆ. ಸಾಮಾನ್ಯರಿಗೂ ಅನುಕೂಲವಾಗುವ ಉದ್ದೇಶದಿಂದ ಅಗತ್ಯವೆಂದು ತೋರಿದ ಕಡೆಗಳಲ್ಲೂ ಗದ್ಯ ಪದ್ಯಗಳ ವಿಶೇಷಗಳನ್ನು ಗುರುತಿಸಿ ಪದ್ಯಗಳ ಛಂದಸ್ಸನ್ನು ಗಮನಿಸಿ, ಆಯಾ ಶಾಸನದ ಸ್ವಾರಸ್ಯದ ಕಡೆ ಗಮನ ಸೆಳೆಯುವಂತೆ ಟಿಪ್ಪಣಿಗಳನ್ನು ಕೊಟ್ಟಿದ್ದಾರೆ. ಶಾಸನಗಳ ಮೂಲ ಬರವಣಿಗೆಯಲ್ಲಿ ಲಿಪಿಕಾರನಿಂದಾದ ಛಂದೋದೋಷ ಗಳನ್ನು ಸರಿಪಡಿಸಿ, ಅದರ ಮೂಲಪಾಠವನ್ನು ಅಡಿಟಿಪ್ಪಣಿಯಲ್ಲಿ ಕೊಟ್ಟಿದ್ದಾರೆ. ಇದು ಗ್ರಂಥ ಹಾಗೂ ಶಾಸನ ಸಂಪಾದಕರಿಗೆ ಇರಬೇಕಾದ ಶಿಸ್ತು. ಇದರೊಂದಿಗೆ ಶಾಸನ ಕವಿಗಳನ್ನು ಗುರುತಿಸಿದ್ದಾರೆ. ತಾವು ಆರಿಸಿದ ಶಾಸನಗಳ ಮಹತ್ವವನ್ನು ವಿವರಿಸಿ 'ಸಂಚಯದ ಸಮಾಲೋಚನ' ಎಂಬ ಮುನ್ನುಡಿಯಲ್ಲಿ ವಿವರಿಸಿದ್ದಾರೆ.

1963ರಲ್ಲಿ ಶ್ರೀ ಮೇವುಂಡಿ ಮಲ್ಲಾರಿ ಅವರು 'ಕನ್ನಡ ಶಾಸನ ಕವಿಗಳು' ಎಂಬ ಕೃತಿಯನ್ನು ಹೊರತಂದರು. ಅದರ ಬೆಳೆಸಿದ ಆವೃತ್ತಿಯನ್ನು 1978ರಲ್ಲಿ ಪ್ರಕಟಿಸಲಾಯಿತು. 155 ಜನ ಶಾಸನ ಕವಿಗಳ ಪರಿಚಯ ಮಾಡಿಕೊಡುವ ಈ ಕೃತಿಯಲ್ಲಿ ಅನೇಕ ಪದ್ಯ ಗಳನ್ನು ಛಂದೋಬದ್ಧವಾಗಿ ಉದಾಹರಿಸಲಾಗಿದೆ. ಕವಿಯ ಪರಿಚಯವನ್ನು ಮಾಡಿ ಕೊಡಲಾಗಿದೆ. ಕನ್ನಡ ಸಾಹಿತ್ಯ ಚರಿತ್ರೆಗೆ ಅತ್ಯಂತ ಅಮೂಲ್ಯವಾದ ಆಕರಗ್ರಂಥ ಇದು.

ಇದಾದ ನಂತರ ಶಾಸನ ಸಾಹಿತ್ಯವನ್ನು ಯಾರೂ ಅಷ್ಟಾಗಿ ಗಂಭೀರವಾಗಿ ತೆಗೆದುಕೊಳ್ಳಲಿಲ್ಲ.

ದಾನಚಿಂತಾಮಣಿ ಅತ್ತಿಮಬ್ಬೆಯ ಲಕ್ಕುಂಡಿ ಶಾಸನದಲ್ಲಿದ್ದ ಪದ್ಯಗಳ ದೋಷಗಳನ್ನು, ಆಚಾರ್ಯ ತೀ.ನಂ.ಶ್ರೀ. ಅವರು ಸರಿಪಡಿಸಿದುದನ್ನು ಬಿಟ್ಟರೆ 1950 – 60ರ ಅವಧಿಯಲ್ಲಿ ಶಾಸನ ಸಾಹಿತ್ಯ ಅಧ್ಯಯನ ಅಷ್ಟಾಗಿ ನಡೆಯಲಿಲ್ಲ ಎಂದು ತೋರುತ್ತದೆ.

ಡಾ. ಎಂ. ಚಿದಾನಂದಮೂರ್ತಿಯವರ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ'ದ ಉದ್ದೇಶವೇ ಬೇರೆ. ಡಾ. ಎಂ.ಎಂ. ಕಲಬುರ್ಗಿ ಅವರ 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ'ದಲ್ಲಿ ಆಂಧ್ರಪ್ರದೇಶದ 'ದಾನವುಲಪಾಡು'ವಿನಲ್ಲಿ ದೊರೆತ ಬಹುಶಃ ಪಂಪಪೂರ್ವಯುಗದ ಕವಿ ಮೊದಲನೆಯ ಗುಣವರ್ಮನ ಶಾಸನದ ಕಂದಪದ್ಯಗಳ ಉಲ್ಲೇಖವಿದೆ. ಶ್ರೀ ಕಲಬುರ್ಗಿ ಅವರು ತಾವು ನಡೆಸಿದ ಶಾಸನ ಅಧ್ಯಯನಗಳಲ್ಲಿ ಶಾಸನಗಳಲ್ಲಿ ಬರುವ ಅಪೂರ್ವ ಪದ್ಯಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. ಈ ಸಮಯದಲ್ಲಿಯೇ ಆರ್. ನರಸಿಂಹಾಚಾರ್ಯರ 'ಶಾಸನ ಪದ್ಯಮಂಜರಿ'ಯ ವಿಸ್ತೃತ ಆವೃತ್ತಿ ಪ್ರಕಟವಾದದ್ದು.

ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಅಧ್ಯಯನ ಕೇಂದ್ರದಿಂದ ಪ್ರಕಟವಾದ ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟಗಳ ಪರಿಷ್ಕೃತ ಆವೃತ್ತಿಗಳಲ್ಲಿ ಶಾಸನ ಪಾಠಗಳ ಕೆಳಗೆ ಅಡಿಟಿಪ್ಪಣಿಗಳಲ್ಲಿ ಆ ಪಾಠಗಳಲ್ಲಿರುವ ಛಂದೋಬಂಧಗಳ ಹೆಸರನ್ನು ಕೊಡಲಾಗಿದೆ.

ಶಾಸನ ಸಾಹಿತ್ಯದ ಪದ್ಯಭಾಗಗಳನ್ನು ಕಾಲೇಜು ಮಟ್ಟದ ಪಠ್ಯಗಳಲ್ಲಿ ಸೇರ್ಪಡೆ ಮಾಡಿರುವುದು ತುಂಬಾ ಅಪರೂಪ. ತಮ್ಮ ಶಾಸನ ಸಂಗ್ರಹಗಳ ಮುನ್ನುಡಿಗಳಲ್ಲಿ ಆಯಾ ಸಂಪಾದಕರು, ತಾವು ಸಂಗ್ರಹಿಸಿದ ಶಾಸನಗಳ ಪದ್ಯಗಳನ್ನು ಆರಿಸಿಕೊಟ್ಟಿದ್ದಾರೆ. ಎಪಿಗ್ರಾಫಿಯಾ ಕರ್ನಾಟಿಕಾದ ಪರಿಷ್ಕೃತ ಆವೃತ್ತಿಯ ಪ್ರಕಟಣೆಯು ನಮಗೆ ಮಾದರಿಯಾಗಬೇಕಿತ್ತು. ಆದರೆ ಈ ಶಾಸನ ಸಂಗ್ರಹಗಳಲ್ಲಿ ಹಾಗೆ ನಡೆದಿಲ್ಲ. ಹೀಗೆಯೇ ಮಾಡಬೇಕೆಂದು ಎಂಬ ನಿಯಮ ವಿಧಿಸುವುದೂ ಅಪೇಕ್ಷಣೀಯವಲ್ಲ. 'ಹೈದರಾಬಾದ್ ಕರ್ನಾಟಕದ ಶಾಸನಗಳು' ಎಂಬ ಗ್ರಂಥದಲ್ಲಿ ಪ್ರೊ॥ ವಿ. ಶಿವಾನಂದ ಅವರು ಅಪೂರ್ವ ಶಾಸನ ಪದ್ಯಗಳನ್ನು ಛಂದಸ್ಸಿನೊಂದಿಗೆ ಗುರುತಿಸಿ ಪ್ರಕಟಿಸಿದ್ದಾರೆ. ಅವರು ಕೊಟ್ಟಿರುವ ಟಿಪ್ಪಣಿಗಳು ಸಾಕಷ್ಟು ವಿಸ್ತಾರವಾಗಿಯೂ ಇವೆ. ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ ಅವರು ತಮ್ಮ 'ಕನ್ನಡ ಛಂದಃಸ್ವರೂಪ' ಕೃತಿಯಲ್ಲಿ ಅನೇಕ ಶಾಸನ ಪದ್ಯಗಳನ್ನೂ ಅವುಗಳಲ್ಲಿರುವ ಗುಣ–ದೋಷಗಳನ್ನು 'ಛಂದಸ್ಸಿನ ದೃಷ್ಟಿಯಿಂದ' ಗುರುತಿಸಿ ಕೊಟ್ಟಿದ್ದಾರೆ.

ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ, ಅವರು ಪ್ರಕಟಿಸಿದ, ಡಾ. ಕೆ. ಆರ್. ಗಣೇಶ ಅವರ, 'ಶಾಸನ ಸರಸ್ವತಿ'ಯಲ್ಲಿ ಶಾಸನಗಳನ್ನು ಅವುಗಳ ಪದ್ಯ

ರೂಪದಲ್ಲಿಯೇ ಟಿಪ್ಪಣಿಗಳೊಂದಿಗೆ ಕೊಡಲಾಗಿದೆ.

ಕರ್ನಾಟಕದ ಉದ್ದಗಲಕ್ಕೆ ಹಾಗೂ ಕರ್ನಾಟಕಕ್ಕೆ ಹೊಂದಿಕೊಂಡಂತಿರುವ ಆಂಧ್ರಪ್ರದೇಶ, ಮಹಾರಾಷ್ಟ್ರದ ಶಾಸನಗಳನ್ನು ಸಾಹಿತ್ಯದ ದೃಷ್ಟಿಯಿಂದ ಗಮನಿಸಿದಾಗ ಈ ಎಲ್ಲ ಪ್ರದೇಶಗಳೂ ಒಂದೇ ತೆರನಾಗಿ ಕಾಣುವುದಿಲ್ಲ. ಕೆಲವು ಪ್ರದೇಶದಲ್ಲಿ ಸಾಹಿತ್ಯಾಂಶವುಳ್ಳ ಕನ್ನಡ ಶಾಸನಗಳು ಸಿಗದೇ ಶುಷ್ಕವಾಗಿದೆ. ಬೆಂಗಳೂರು ನಗರ ಜಿಲ್ಲೆಯಲ್ಲಿ ಇಲ್ಲವೇ ಇಲ್ಲವೆನ್ನಬೇಕಾಗಿದೆ. ಇದಕ್ಕೆ ಹೊಂದಿಕೊಂಡಂತಿರುವ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಹುಡುಕಿದಾಗ ಒಂದೆರಡು ಶಾಸನ ಪದ್ಯಗಳು ದೊರೆತಿವೆ. ಹಾಗೆಯೇ ಚಾಮರಾಜನಗರ, ಚಿತ್ರದುರ್ಗ, ಯಾದಗಿರಿ, ಬೀದರ್ ಜಿಲ್ಲೆಗಳಲ್ಲಿ ಕಡಿಮೆ ಸಂಖ್ಯೆಯ ಶಾಸನ ಪದ್ಯಗಳು ದೊರೆತಿವೆ. ಹಾಗೆಂದಾಕ್ಷಣ ಈ ಜಿಲ್ಲೆಗಳಲ್ಲಿ ಶಾಸನಗಳಿಲ್ಲವೆಂದಲ್ಲ.

ಕ್ರಿ.ಶ. 10ನೆಯ ಶತಮಾನದವರೆಗೆ ಗಂಗ ದೊರೆಗಳ ಆಳ್ವಿಕೆಯಿದ್ದ ಈ ಪ್ರದೇಶದಲ್ಲಿ ಚಿಕ್ಕಪಾಠವುಳ್ಳ ವೀರಗಲ್ಲುಗಳು ದೊರೆತಿವೆ. 10ನೆಯ ಶತಮಾನದ ನಂತರ ಗಂಗರನ್ನು ಸೋಲಿಸಿ ಬಂದ ಚೋಳರು ತಮಿಳು ಶಾಸನಗಳನ್ನು ಹಾಕಿಸಿದರು. ಚೋಳರ ನಂತರ ಆಳ್ವಿಕೆಗೆ ಬಂದ ಹೊಯ್ಸಳರ ಈ ಪ್ರದೇಶದ ಅನೇಕ ಶಾಸನಗಳೂ ತಮಿಳು ಭಾಷೆಯಲ್ಲಿವೆ. ನಂತರ ಬಂದ ವಿಜಯನಗರದ ಅರಸರು ತಾವು ಶಾಸನ ಬರೆಸುವ ಮಾಧ್ಯಮವನ್ನು ಬದಲಿಸಿದ ಕಾರಣ ಶಾಸನ ರಚನಾ ಪ್ರದೇಶ ವಿಸ್ತಾರವಾಗಿದ್ದರೂ ಪಾಠ ಚಿಕ್ಕದಾಗಿ, ಅವು ಶುಷ್ಕ ಗದ್ಯ ರೂಪದಲ್ಲಿವೆ. ಹೀಗಾಗಿ ಸಾಹಿತ್ಯಾಂಶ ಅವರ ಶಾಸನಗಳಲ್ಲಿ ಕಾಣುವುದಿಲ್ಲ. ಬೆಂಗಳೂರು, ಮೈಸೂರು, ಚಾಮರಾಜನಗರ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಚಿತ್ರದುರ್ಗ ಜಿಲ್ಲೆಗಳಲ್ಲಿ ಕ್ರಿ.ಶ. 10ನೆಯ ಶತಮಾನಕ್ಕಿಂತ ಹಿಂದಿನ ಶಾಸನಗಳು ಹೆಚ್ಚಾಗಿ ದೊರೆತಿವೆ. ಅದರಲ್ಲೂ ಕರ್ನಾಟಕದ ಪೂರ್ವಭಾಗಗಳಲ್ಲಿ ಇವು ಹೆಚ್ಚು. ಇಲ್ಲಿ ಕ್ರಿ.ಶ. 10ನೆಯ ಶತಮಾನದ ನಂತರ ತಮಿಳು ಶಾಸನಗಳು ಹೆಚ್ಚಾದ್ದರಿಂದ ಸಾಹಿತ್ಯ ದೃಷ್ಟಿಯ ಕನ್ನಡ ಶಾಸನಗಳ ಸಂಖ್ಯೆ ತೀರಾ ಕಡಿಮೆಯಾದವು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಾಚೀನ ಶಾಸನಗಳು ತೀರಾ ಕಡಿಮೆ. ಸಿಕ್ಕಿರುವ ಶಾಸನಗಳಲ್ಲಿ ಹೆಚ್ಚಿನವು ವಿಜಯನಗರ ಸಾಮ್ರಾಜ್ಯದ ಅಧಿಕಾರಿಗಳು, ತುಳು ಅರಸರು ಹಾಕಿಸಿರುವಂಥಹವು. ಈ ಶಾಸನಗಳ ಪ್ರಾರಂಭಿಕ ವಿವರಗಳು ಗದ್ಯದಲ್ಲಿದ್ದು ಅದು ಮುಗಿದ ಕೂಡಲೇ ಭೂಮಿ ಅಥವಾ ಭೂಮಿಯ ಇಳುವರಿಯ ಹಂಚಿಕೆಯ ವಿವರಗಳೇ ಶಾಸನದ ತುಂಬಾ ಬಂದಿದ್ದು ಸಾಹಿತ್ಯಾಂಶದ ಶಾಸನಗಳು ಕಡಿಮೆಯಾಗಲು ಕಾರಣವಾಗಿದೆ. ಉತ್ತರ ಕನ್ನಡ ಮತ್ತು ಯಾದಗಿರಿ ಜಿಲ್ಲೆಗಳ ಶಾಸನಗಳ ವ್ಯಾಪಕ ಅಧ್ಯಯನ ನಡೆದಿಲ್ಲ. ನಡೆದಲ್ಲಿ ಇನ್ನೂ ಹೆಚ್ಚಿನ ಸಾಹಿತ್ಯಾಂಶದ ಶಾಸನಗಳು ದೊರಕುವ ಸಾಧ್ಯತೆಗಳಿವೆ. ಬೀದರ್, ಕಲ್ಬುರ್ಗಿ, ರಾಯಚೂರು ಜಿಲ್ಲೆಗಳಲ್ಲಿ ಅನೇಕ ಪ್ರಾಚೀನ ಶಾಸನಗಳ ಪಾಠ ಹಾಳಾಗಿರುವುದು, ಪದ್ಯಗಳನ್ನು ಹುಡುಕುವ ಕೆಲಸಕ್ಕೆ ಅಡ್ಡಿಯಾಗಿದೆ.

ಕನ್ನಡ ಭಾಷೆ ಹಾಗೂ ಸಂಸ್ಕೃತಿಯನ್ನು ಉಳಿಸಿಕೊಂಡಿದ್ದ ಕರ್ನಾಟಕದ ಅರೆಮಲೆನಾಡು ಪ್ರದೇಶವು ಕಲೆಗಳ ಬೀಡೂ ಹೌದು. ಇಂತಹ ಜಿಲ್ಲೆಗಳಲ್ಲಿ ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ಹಾವೇರಿ, ಗದಗ ಜಿಲ್ಲೆಗಳು ಪ್ರಮುಖವಾದವು. ಇವು ಗಂಗರ ಆಳ್ವಿಕೆಯ ಕೈತಪ್ಪಿದ ಕೂಡಲೇ ಕಲ್ಯಾಣದ ಚಾಳುಕ್ಯರ ಮಾಂಡಳಿಕರಾಗಿದ್ದ ಹೊಯ್ಸಳರು, ಸಾಂತರರು, ಉಚ್ಚಂಗಿ ಪಾಂಡ್ಯರು, ಹಾನಗಲ್ಲು ಕದಂಬರು, ನೊಳಂಬರು, ಸಿಂಧರು ಮುಂತಾದ ಪ್ರಮುಖ ಮಾಂಡಳಿಕರ ವಶಕ್ಕೆ ಹೋಯಿತು. ಇವರು ಕಲೋಪಾಸಕರೂ, ಕಲಾಪೋಷಕರೂ, ಕವಿಗಳ ಆಶ್ರಯದಾತರೂ ಆಗಿದ್ದರು. ಒಳಪ್ರದೇಶಗಳಾಗಿದ್ದರಿಂದ ಹೊರಗಿನ ರಾಜರ ದಾಳಿಯಿಂದ ಈ ಪ್ರದೇಶಗಳು ಮುಕ್ತವಾಗಿದ್ದವು. ಸ್ಥಳೀಯ ಘರ್ಷಣೆಗಳನ್ನು ಬಿಟ್ಟರೆ ಉಳಿದಂತೆ ಅವು ಶಾಂತಿಯಿಂದ ಕೂಡಿದ ಪ್ರದೇಶವಾಗಿದ್ದವು. ಕ್ರಿ.ಶ. 9 – 10 ನೆಯ ಶತಮಾನದ ನಂತರ ಎರಡು ಶತಮಾನಗಳವರೆಗೆ ಕರ್ನಾಟಕದಲ್ಲಿ ಪಾಶುಪತ – ಕಾಳಾಮುಖ ಎಂಬ ಶೈವ ಪಂಥವೊಂದು ಪ್ರಾಬಲ್ಯ ಪಡೆಯುತ್ತಾ ಬಂದಿತು. ಈ ಮತ/ಪಂಥವು ಉತ್ತರದ ಮುಸ್ಲಿಂ ದೊರೆಗಳ ದಾಳಿಯವರೆಗೆ ಕರ್ನಾಟಕದಲ್ಲಿ ಬಹುಪ್ರಬಲ ಪಂಥವಾಗಿ ತನ್ನ ಪ್ರಭಾವವನ್ನು ಬೀರಿತ್ತು. ಕ್ರಿ.ಶ. 11ನೆಯ ಶತಮಾನದ ಮಧ್ಯಭಾಗದಲ್ಲಿ ಕರ್ನಾಟಕಕ್ಕೆ ಮತ್ತೊಂದು ಮತದ ಆಗಮನವಾಯಿತು. ಅದೇ ಶ್ರೀವೈಷ್ಣವ ಮತ. ಇದರ ಸ್ಥಾಪಕರಾಗಿದ್ದ ಶ್ರೀ ರಾಮಾನುಜಾಚಾರ್ಯರು ದೇಶದಲ್ಲೆಲ್ಲಾ ಸಂಚರಿಸಿ ತಮ್ಮ ಮತವನ್ನು ಪ್ರಚುರ ಪಡಿಸಿದ್ದಲ್ಲದೆ ಕರ್ನಾಟಕದಲ್ಲಿ ಕೆಲವು ಕಾಲ ನೆಲಸಿದರು ಎಂಬ ಪ್ರತೀತಿ ಇದೆ. ಈ ಕಾರಣದಿಂದ ಶ್ರೀ ವಿಷ್ಣುವಿನ ವ್ಯೂಹಮೂರ್ತಿಗಳಾದ ಕೇಶವ, ಜನಾರ್ಧನ ರೂಪದ ದೇವರುಗಳಲ್ಲದೆ, ವಿಷ್ಣುವಿನ ದಶಾವತಾರ ಮೂರ್ತಿಗಳಾದ ನರಸಿಂಹ, ಕೃಷ್ಣನ ಹೆಸರಿನ ದೇವಾಲಯಗಳೂ ರಚನೆಯಾದವು. ಪಾಶುಪತ – ಕಾಳಾಮುಖ ಮತವು ಕಣ್ಮರೆಯಾದಂತೆ ಈ ಮತವು ಆಗಲಿಲ್ಲ. ವಿಜಯನಗರದ ನಂತರವೂ ಮುಂದುವರೆಯಿತು.

ಪಾಶುಪತ – ಕಾಳಾಮುಖ ಮತದ ಪ್ರಭಾವದಿಂದ ಸಮಾಜದಲ್ಲಿ ಒಂದೆರಡು ಮೂಲಭೂತ ಬದಲಾವಣೆಗಳಾದವು. ಅವೆಂದರೆ, ಅಗ್ರಹಾರದ ಬ್ರಾಹ್ಮಣರ ಹಿನ್ನಡೆ; ಮಠದ ಮತ್ತು ಮಠದ ಸ್ಥಾನಿಕರ ಮುನ್ನಡೆ. ಈ ಕಾರಣದಿಂದ ಅಗ್ರಹಾರಗಳ ರಚನೆ ಕಡಿಮೆಯಾಗಿ ಸಂಸ್ಕೃತ ತಾಮ್ರಶಾಸನಗಳ ರಚನೆ ಕಡಿಮೆಯಾಯಿತು. ದೇವಾಲಯ, ದೇವಾಲಯಕ್ಕೆ ಸೇರಿದ್ದ ಮಠ ಮತ್ತು ದೇವಾಲಯದ ಸ್ಥಾನಿಕರು ಪ್ರಭಾವಶಾಲಿಗಳಾದರು. ರಾಜರ ಜೊತೆಗೆ ಸಾಮಾನ್ಯ ಜನರೂ ತಮ್ಮ ಕೈಲಾದಷ್ಟು ಧಾನ್ಯ ಸಹಾಯವನ್ನು ಈ ಮಠಗಳಿಗೆ ಅಥವಾ ದೇವಾಲಯಕ್ಕೆ ನೀಡಿದರು. ಅನೇಕ ವೃತ್ತಿ ಜಾತಿಗಳು ತಮ್ಮದೇ ಸಂಘಗಳನ್ನು ಮಾಡಿಕೊಂಡಿದ್ದರು. ದೇವಾಲಯ/ಮಠಗಳಿಗೆ ನೀಡುವ ದಾನ-ದತ್ತಿಯ ವಿವರಗಳನ್ನು ಶಿಲಾಶಾಸನಗಳಲ್ಲಿ ದಾಖಲೆ ಮಾಡುವ ಪ್ರವೃತ್ತಿ ಬೆಳೆಯಿತು. ಇದೇ ಅವಧಿ ಯಲ್ಲಿ ದೇವಾಲಯ ಕಟ್ಟಣೆಯ ಕೆಲಸಕ್ಕಾಗಿ ಶಿಲ್ಪಿಗಳು ಬೇರೆ-ಬೇರೆ ಪ್ರದೇಶಗಳಿಂದ

ಮುಖ್ಯವಾಗಿ ಮಧ್ಯಭಾರತದಿಂದ ದಕ್ಷಿಣಕ್ಕೆ ವಲಸೆ ಬರುವಂತಾಯಿತು. ರಾಷ್ಟ್ರಕೂಟ ಮತ್ತು ಕಲ್ಯಾಣದ ಚಾಳುಕ್ಯರು ನಿರಂತರವಾಗಿ ನಡೆಸಿದ ನರ್ಮದೆಯ ಪ್ರದೇಶದ ಮೇಲಿನ ದಾಳಿಯ ಫಲವಾಗಿ ಅಲ್ಲಿನವರಿಗೆ ಕರ್ನಾಟಕ ಅಪರಿಚಿತವಾಗಿ ಉಳಿಯಲಿಲ್ಲ. ಈ ಕಾರಣದಿಂದ ಶಿಲ್ಪಿಗಳು, ಸಣ್ಣಪುಟ್ಟ ರಾಜವಂಶಗಳು, ಅಧಿಕಾರಿಗಳು, ಬ್ರಾಹ್ಮಣರು, ಕವಿಗಳೇ ಮೊದಲಾದವರು, ಚಾಳುಕ್ಯರಾಜ್ಯಕ್ಕೆ ವಲಸೆ ಬಂದರು. ಇವರೊಂದಿಗೆ ಕಾಶ್ಮೀರದಿಂದ ಅಲ್ಲಿನ ವಿದ್ವಾಂಸರೂ ಆಶ್ರಯವನ್ನರಸಿ ಕರ್ನಾಟಕಕ್ಕೆ ಬಂದರು. ಇವರೆಲ್ಲಾ ಇಲ್ಲಿನ ಭಾಷೆಯನ್ನು ಕಲಿತು ಜನರೊಂದಿಗೆ ಬೆರೆತರು.

ಈ ವಲಸೆಯಿಂದ, ಶಾಸನ, ದೇವಾಲಯ ರಚನೆಯ ಶಿಲಾಮಾಧ್ಯಮದ ಬದಲಾವಣೆಯಿಂದ ಹೊಸ ಹುರುಪು, ಹೊಸ ಪ್ರಯೋಗಗಳು, ಕರ್ನಾಟಕದಲ್ಲಿ ಈ ಅವಧಿಯಲ್ಲಿ (ಕ್ರಿ.ಶ. 10 ರಿಂದ 13ನೆಯ ಶತಮಾನದವರೆಗೆ) ನಡೆದವು. ಶಾಸನಕ್ಕೆ ಬಳಸದ ಕಲ್ಲಿನ ಜಾತಿಯ ಕಲ್ಲನ್ನು ಬಳಸಿದ್ದರಿಂದ ಶಾಸನಪಾಠವನ್ನು ಸ್ವಲ್ಪ ಸ್ಥಳದಲ್ಲಿ ವಿಸ್ತಾರವಾಗಿ ಬರೆಯಲಾಯಿತು. ನಿಧಾನವಾಗಿ ಶಾಸನ ಪಾಠ ಸಾಹಿತ್ಯಗುಣವನ್ನು ಪಡೆಯುವಂತಾಯಿತು. ಸ್ಥಳೀಯವಾದ ಚಿಕ್ಕ ಪುಟ್ಟ ಕವಿಗಳು ಕನ್ನಡ ಭಾಷೆಯಲ್ಲಿ ಶಾಸನ ರಚನೆಗೆ ಇಳಿದರು. ಈ ಕವಿಗಳು, ಖರ್ಚು ಮಾಡಲು ಸಿದ್ಧವಿದ್ದ ಶ್ರೀಮಂತರು, ಮಠದ ಮುನಿಗಳು, ರಾಜರು ಇವರ ಗುಣಗಳನ್ನು ಹೊಗಳಿ ಕಾವ್ಯ ರಚಿಸಿದರು. ಇದೇ ಕಾಲಕ್ಕೆ ಶಿಷ್ಟ ಕನ್ನಡ ಸಾಹಿತ್ಯ ರಚನೆ ಪ್ರಾರಂಭವಾಗಿತ್ತು. ಮಠಗಳು, ಕವಿ, ಗಮಕಿ, ವಾಗ್ಮಿ, ಮೊದಲಾದವರಿಗೆ ಆಶ್ರಯ ನೀಡಿದವು. ಕವಿಗಳು ಬರೆದ ಗ್ರಂಥಗಳನ್ನು ಲಿಪಿಕಾರರು ಮತ್ತೆ ಪ್ರತಿಮಾಡಿ ಹಂಚುತ್ತಿದ್ದರು. ಹೀಗೆ ಕಾವ್ಯ ರಚನೆ, ಕಾವ್ಯಗಳ ಪ್ರಸಾರಕಾರ್ಯ ನಡೆಯುತ್ತಿತ್ತು. ಈ ಶಾಸನಗಳನ್ನು ಎಂದೂ ವೈಯಾಕರಣಿಗಳು ಅಥವಾ ಅಲಂಕಾರ ಶಾಸ್ತ್ರ ವಿದ್ವಾಂಸರು ಗಮನಿಸಲೇ ಇಲ್ಲ. ಮುಂದೆ ರನ್ನ, ಜನ್ನ ಮೊದಲಾದ ಕವಿಗಳು ದೇವಾಲಯಗಳ ಬಳಿಯಲ್ಲಿರುವ ಶಾಸನಗಳನ್ನು ರಚಿಸಿದ್ದಾರೆ. ಶಾಸನ ಪಾಠಗಳನ್ನು ರಚಿಸಿದ, ಶಿಲ್ಪಗಳನ್ನು ಬಿಡಿಸಿದ ಕೆಲವರು ಮಾತ್ರ ತಮ್ಮ ಹೆಸರನ್ನು ಹೇಳಿಕೊಂಡಿದ್ದಾರೆ. ಬಹಳಷ್ಟು ಶಾಸನ ಕವಿಗಳು ತಮ್ಮ ಹೆಸರನ್ನಾಗಲೀ ವಿಚಾರವನ್ನಾಗಲೀ ಹೇಳಿಕೊಂಡಿಲ್ಲ. ಹೀಗಾಗಿ ಅನೇಕ ಉತ್ತಮರಾದ ಶಾಸನ ಕವಿಗಳು ಅಜ್ಞಾತರಾಗಿಯೇ ಉಳಿಯುವಂತಾಗಿದೆ.

ಕನ್ನಡ ಮೊದಲ ಉಪಲಬ್ಧ ಶಾಸನ ಹಲ್ಮಿಡಿ ಶಾಸನವು ಗದ್ಯದಲ್ಲಿದ್ದು ಅದರ ಪ್ರಾರ್ಥನಾ ಪದ್ಯ ಸಂಸ್ಕೃತ ಅನುಷ್ಟುಪ್ ಶ್ಲೋಕರೂಪದಲ್ಲಿದೆ. ಆದರೆ, ಈ ಹಲ್ಮಿಡಿ ಶಾಸನ ಮುಂದಿನ ಕರ್ನಾಟಕದ ಶಾಸನಗಳಿಗೆ ಒಂದು ಸಿದ್ಧಮಾದರಿಯ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿದ್ದಂತೂ ನಿಜ. ನಂತರ ದೀರ್ಘವಾದ ಶಿಲಾಶಾಸನಗಳು ರಚಿತವಾದರೂ ಅವು ಸಂಸ್ಕೃತ ಭಾಷೆಯ ಪದ್ಯರೂಪದ ಶಾಸನಗಳಾಗಿದ್ದವು. ಕಾಕುಸ್ಥವರ್ಮನ ಕಾಲದ ಕವಿ ಕುಬ್ಜ ರಚಿಸಿದ ತಾಳಗುಂದದ ಶಾಸನ, ರವಿವರ್ಮನ ಗುಡ್ನಾಪುರದ ಶಾಸನ, ಐಹೊಳೆಯ

ಇಮ್ಮಡಿ ಪುಲಿಕೇಶಿಯ ರವಿಕೀರ್ತಿ ರಚಿಸಿದ ಶಾಸನ, ಮಂಗಳೀಶನ ಮಹಾಕೂಟದ ಶಾಸನ ಮೊದಲಾದವನ್ನು ಇಲ್ಲಿ ಹೆಸರಿಸಬಹುದು.

ಕರ್ನಾಟಕದ ಈ ಸಂಸ್ಕೃತ ಶಾಸನಗಳು ಅಪರೂಪದ ಸಂಸ್ಕೃತ ಛಂದಸ್ಸನ್ನು ಬಳಸಿ ಬರೆದ ಶಾಸನಗಳಾಗಿದ್ದುವಲ್ಲದೆ, ಸಂಸ್ಕೃತದ ಪ್ರಖ್ಯಾತ ಕವಿಗಳಾಗಿದ್ದ ಭಾರವಿ, ಕಾಳಿದಾಸ ಮೊದಲಾದ ಕವಿಗಳ ರಚನೆಗಳಿಂದ ಪ್ರಭಾವಿತವಾಗಿದ್ದವು. ಸಂಸ್ಕೃತದ ಮಹಾಕವಿ ಕಾಳಿದಾಸನ ಕಾವ್ಯದ ಶಾಸನೋಕ್ತ ಉಲ್ಲೇಖ ಮೊದಲು ದೊರೆಯುವುದು ಕರ್ನಾಟಕದ ಸಂಸ್ಕೃತ ಶಾಸನಗಳಲ್ಲಿಯೇ ಎಂಬುದು ಗಮನಾರ್ಹ. ಅಂದರೆ, ಸಂಸ್ಕೃತದ ಕವಿಗಳ ಪ್ರಭಾವ ಇಲ್ಲಿ ರಚಿತವಾದ ಸಂಸ್ಕೃತ ಶಾಸನಗಳ ಕವಿಗಳ ಮೇಲೆ ಬಿದ್ದಿತ್ತೆಂಬುದು ಸತ್ಯ. ಬಾದಾಮಿ ಚಳುಕ್ಯರ ಕಾಲದ ಎರಡು ಕನ್ನಡ ಶಾಸನಗಳ ರಚನಾ ರೀತಿ ಒಂದೇ ರೀತಿ ಇದೆ. ತಮಟಕಲ್ಲು ಹಾಗೂ ಕಪ್ಪೆ ಅರಭಟ್ಟನ ಶಾಸನವೆಂದು ಕರೆಯುವ ಶಾಸನಗಳಲ್ಲಿ ಅದು ಕಾಣುತ್ತದೆ. ಶಾಸನಾರಂಭದಲ್ಲಿ ವೀರನ ಗುಣಗಾನವನ್ನು ಸಂಸ್ಕೃತ ಶ್ಲೋಕದಲ್ಲಿ ಹೇಳುವುದು, ನಂತರ ಅವನ ಗುಣಗಳನ್ನು ಕನ್ನಡ ಪದ್ಯದಲ್ಲಿ ಹೇಳಿರುವುದು ಅಲ್ಲಿನ ಕ್ರಮ. ಹಲ್ಮಿಡಿ ಶಾಸನ ದೊರೆಯುವವರೆಗೆ ತಮಟಕಲ್ಲು ಶಾಸನವನ್ನೇ ಕನ್ನಡದ ಪ್ರಾಚೀನ ಉಪಲಬ್ಧ ಶಾಸನವೆಂದು ತಿಳಿದಿದ್ದರು. ಕನ್ನಡ ಶಾಸನಗಳಲ್ಲಿ ಪದ್ಯರಚನಾ ಕಾರ್ಯ ಸು. ಕ್ರಿ.ಶ. ಆರನೆಯ ಶತಮಾನದಲ್ಲಿ ಪ್ರಾರಂಭವಾಗಿರುವುದು ಕಾಣುತ್ತದೆ. ಇದರ ನಂತರ ಶ್ರವಣಬೆಳಗೊಳದಲ್ಲಿ ಅನೇಕ ಶಾಸನಗಳು ಪದ್ಯರೂಪದಲ್ಲಿ ದೊರೆಯುತ್ತವೆ. ಇವೆಲ್ಲಾ ಪೂರ್ವದ ಹಳಗನ್ನಡ ಭಾಷೆಯಲ್ಲಿವೆ. ಸಾಹಿತ್ಯಾಂಶದ ಶಾಸನಗಳು ಮುಂದೆ ಕ್ರಿ.ಶ. ಸುಮಾರು 900ರವರೆಗೆ ಕಡಿಮೆಯಾದವು. ಮತ್ತೆ ಸುಮಾರು ಕ್ರಿ.ಶ. 1000 ರಿಂದ ಪದ್ಯರಚನೆಯ ಶಾಸನಗಳು ದೊರೆಯಲಾರಂಭಿಸಿದವು. ರಾಷ್ಟ್ರಕೂಟ ಮೂರನೆಯ ಕೃಷ್ಣ ಅಥವಾ ಗಂಗರಾಜ ಬೂತುಗನ ಕಾಲದಿಂದ ದೀರ್ಘವಾದ ಕನ್ನಡ ಶಾಸನಗಳು ರಚನೆಯಾಗಿದ್ದಲ್ಲದೆ, ಮನೋಹರವಾದ ಪದ್ಯಗಳಿಂದ ಕೂಡಿವೆ.

ರಾಷ್ಟ್ರಕೂಟರನ್ನು ಮೂಲೆಗೆ ಸೇರಿಸಿ ಕಲ್ಯಾಣದ ಚಾಳುಕ್ಯರು ಪಟ್ಟಕ್ಕೆ ಬಂದ ಮೇಲೆ ಕನ್ನಡ ಶಾಸನಗಳು ಹೆಚ್ಚಾಗಿ ದೊರೆಯಲಾರಂಭಿಸಿದವು. ಆಗ ಆರಂಭವಾದ ಈ ಪ್ರಕ್ರಿಯೆ ಮುಂದೆ ಹೊಯ್ಸಳರ ಸೋಲಿನವರೆಗೆ, ಅಂದರೆ ಸು. ಕ್ರಿ.ಶ. 1300ರವರೆಗೆ ಏರುತ್ತಾ ಹೋಯಿತು. ಆ ನಂತರ ವಿಜಯನಗರದ ಅರಸರ ಕಾಲದಲ್ಲಿ ಕಡಿಮೆಯಾಗುತ್ತಾ ಬಂದಿತು. ಇದಕ್ಕೆ ಕಾರಣ ವಿಜಯನಗರದ ಅರಸರ ಕಾಲದಲ್ಲಿ ನಾಗರಿ ಲಿಪಿ ಹಾಗೂ ಸಂಸ್ಕೃತ ಭಾಷೆಯ ಬಳಕೆ ಹೆಚ್ಚಾದದ್ದು. ಹೀಗಾಗಿ, ಈ ಕಾಲದ ಕರ್ನಾಟಕದ ಮಲೆನಾಡಿನ ಕೆಲವು ಆಯ್ದ ಜೈನ ಕೇಂದ್ರಗಳಲ್ಲಿನ ಕನ್ನಡ ಶಾಸನಗಳು ಮಾತ್ರ ಪದ್ಯಗಳನ್ನು ಒಳಗೊಂಡಿವೆ.

ವಿಜಯನಗರೋತ್ತರ ಅರಸರ ಶಾಸನಗಳಲ್ಲಿ ಪದ್ಯರಚನೆಗಳು ಕಡಿಮೆ. ಅಲ್ಲಿ ಕೇವಲ ಶಾಸನಗಳು ವಿವರಗಳನ್ನು ನೀಡಲಷ್ಟೇ ಬಳಕೆಯಾಗಿವೆ. ನಿಡುಗಲ್ಲ ಪಾಳೆಯಗಾರರು

ಮಾತ್ರ ಇದಕ್ಕೆ ಅಪವಾದ. ಮೈಸೂರರಸರು ಹೆಚ್ಚಿಗೆ ತಾಮ್ರಶಾಸನಗಳನ್ನು ಬರೆಸಿ ಅಗ್ರಹಾರಗಳನ್ನು ರಚಿಸಿ ದಾನ ನೀಡಿರುವುದರಿಂದ ಅವುಗಳಲ್ಲಿ ಅನೇಕ ಶಾಸನಗಳು ಸಂಸ್ಕೃತ ಭಾಷೆ ಕನ್ನಡ ಲಿಪಿಯಲ್ಲಿವೆ. ಇಲ್ಲವೇ, ಮೇಲೆ ಹೇಳಿದಂತೆ ದಾನದ ವಿವರಗಳನ್ನು ನೀಡುವ ಶಾಸನಗಳಾಗಿವೆ. ಮುಂದೆ ಕಾಗದದ ಬಳಕೆ ಹೆಚ್ಚಾದದ್ದರಿಂದ ಈ ಶಾಸನಗಳೂ ಕಡಿಮೆಯಾದವು.

ಕ್ರಿ.ಶ. 6ನೆಯ ಶತಮಾನದಲ್ಲಿ ಆರಂಭವಾದ ಪದ್ಯರೂಪದ ಶಾಸನಗಳು ತಮ್ಮ ಸೀಮಿತದಲ್ಲಿಯೂ ವೈವಿಧ್ಯವಾದ ಛಂದಸ್ಸಿನ ರೂಪಗಳಲ್ಲಿ ರಚಿತವಾಗಿದೆ. ಪ್ರಾರಂಭದ ತಮಟುಕಲ್ಲು ಶಾಸನ ಅಪರೂಪದ ಅಕ್ಷರ ಛಂದಸ್ಸನ್ನು ಹೊಂದಿದೆ. ಹಾಗೆಯೇ ಬಾದಾಮಿ ಶಾಸನ,ಅಂಶ ತ್ರಿಪದಿಗಳಲ್ಲಿ ರಚಿತವಾಗಿದೆ. ಕನ್ನಡ ಕವಿಗಳು ಖ್ಯಾತ ಕರ್ನಾಟಕ ವೃತ್ತಗಳೆಂದು ಕರೆಯುವ ಅಕ್ಷರ ವೃತ್ತಗಳನ್ನು ತಮ್ಮ ಕಾವ್ಯಗಳಲ್ಲಿ ಬಳಸಿದ್ದಾರೆ. ಶಾಸನಕವಿಗಳೂ ಅದಕ್ಕೆ ಹೊರತಾಗಿಲ್ಲ. ಕಂದಪದ್ಯ, ಚಂಪಕಮಾಲೆ, ಉತ್ಪಲಮಾಲೆ, ಸ್ರಗ್ಧರೆ, ಮತ್ತೇಭವಿಕ್ರೀಡಿತ, ಶಾರ್ದೂಲವಿಕ್ರೀಡಿತ ವೃತ್ತಗಳನ್ನು ಶಾಸನಗಳಲ್ಲಿ ಹೆಚ್ಚಾಗಿ ಬಳಸಿದ್ದಾರೆ. ಅಪರೂಪಕ್ಕೆ ಪಿರಿಯಕ್ಕರ, ವಿವಿಧ ರಗಳೆ ಛಂದಸ್ಸುಗಳನ್ನೂ ಬಳಸಿದ್ದಾರೆ. ಕೆಲವೊಮ್ಮೆ ವೃತ್ತಗಳಲ್ಲಿನ ನಾಲ್ಕು ಪಾದಗಳಿಗೆ ಬದಲಾಗಿ ಐದು ಪಾದಗಳನ್ನೂ, ಮೂರು ಪಾದಗಳನ್ನೂ ಬಳಸಿರುವುದುಂಟು. ಜನ್ನ ಕವಿ ರಚಿಸಿದ ಅಮೃತಾಪುರದ ಶಾಸನ, ರನ್ನ ಕವಿಯ ಲಕ್ಕುಂಡಿ ಶಾಸನದಂತಹ ಒಂದೆರಡು ಶಾಸನಗಳನ್ನು ಹೊರತುಪಡಿಸಿದರೆ ದೀರ್ಘ ಶಾಸನಗಳ ಸಂಖ್ಯೆ ಕಡಿಮೆ.

ಈ ಸಂಗ್ರಹದಲ್ಲಿ ಆಯ್ಕೆ ಮಾಡಿರುವ ಶಾಸನ ಪದ್ಯಗಳು ಸಾಹಿತ್ಯ ದೃಷ್ಟಿಯಿಂದ ಪ್ರೌಢವಾದವು ಎಂದು ನಾವು ತಿಳಿದಿದ್ದೇವೆ. ಕನ್ನಡ ಶಿಷ್ಟ ಕಾವ್ಯಸಾಹಿತ್ಯ 'ಕವಿರಾಜಮಾರ್ಗ'ದ ಪೂರ್ವದಿಂದಲೇ ಆರಂಭವಾದರೂ ಕನ್ನಡ ಕಾವ್ಯಗಳು ದೊರೆಯುವುದು ಕ್ರಿ.ಶ. 10ನೆಯ ಶತಮಾನದ ಆರಂಭದಿಂದ. ಆದರೆ, ಕನ್ನಡ ಶಾಸನಗಳಲ್ಲಿ ಪದ್ಯರಚನೆಗಳು ಆರಂಭವಾದದ್ದು ಕ್ರಿ.ಶ. 6ನೆಯ ಶತಮಾನದಿಂದ. ಹೀಗೆ ಕನ್ನಡ ಕಾವ್ಯದ ಪ್ರವಾಹ ಅಂದಿನಿಂದ ಕ್ರಿ.ಶ. ಸುಮಾರು 14ನೆಯ ಶತಮಾನದವರೆಗೆ ಒಂದೇ ಸಮನೆ ಹರಿಯಿತು.

ಶಾಸನಗಳು ಕನ್ನಡ ಸಾಹಿತ್ಯದ ಮೂಲ ಬೇರುಗಳು. ಕನ್ನಡ ಶಾಸನಗಳಲ್ಲಿ ಒಂದು ಶಾಸನದ ಪಾಠವಿದ್ದಂತೆ ಇನ್ನೊಂದು ಶಾಸನವಿರುವುದು ಕಡಿಮೆ. ಅಷ್ಟರಮಟ್ಟಿಗೆ ಇವು ತಮ್ಮತನವನ್ನು ಕಾಪಾಡಿಕೊಂಡು ಬಂದಿವೆ. ಭಾರತದ ಯಾವ ಪ್ರದೇಶದಲ್ಲೂ ಇಷ್ಟೊಂದು ವೈವಿಧ್ಯವಾದ ಸಾಹಿತ್ಯಾಂಶದ ಶಾಸನಗಳು ದೊರೆತಿಲ್ಲ. ಅಷ್ಟೇ ಅಲ್ಲ, ಈ ಶಾಸನಗಳು ಕನ್ನಡ ಭಾಷೆಯ ಶ್ರೀಮಂತಿಕೆಯನ್ನು ತೋರಿಸುತ್ತವೆ.

ಕನ್ನಡ ಶಾಸನಗಳ ಪದ್ಯಗಳ ಸಂಗ್ರಹವಾದ 'ಶಾಸನ ಪದ್ಯ ಸಿರಿ' ಎಂಬ ಈ ಕೃತಿಯಲ್ಲಿ ನಾವು ಅನುಸರಿಸಿರುವ ಮಾರ್ಗದ ಬಗ್ಗೆ ಎರಡು ಮಾತುಗಳನ್ನು ಹೇಳುವುದು ಸೂಕ್ತ.

1. ಶಾಸನ ಪದ್ಯಮಂಜರಿಯಲ್ಲಿ ಆರ್. ನರಸಿಂಹಾಚಾರ್ಯರು ಕೊಟ್ಟಿರುವ ಪದ್ಯಪಾಠಗಳನ್ನು, ಅವುಗಳ ತಿದ್ದುಪಡಿಗಳೊಂದಿಗೆ ಹಾಗೆಯೇ (ಅಲ್ಲಲ್ಲಿ ಕೆಲವು ತಿದ್ದುಪಡಿಗಳೊಂದಿಗೆ) ಸ್ವೀಕರಿಸಲಾಗಿದೆ. ನರಸಿಂಹಾಚಾರ್ಯರು ಕೊಟ್ಟಿರುವ ಟಿಪ್ಪಣಿಗಳನ್ನು ವಿಷಯಕ್ಕೆ ತಕ್ಕಂತೆ ಉಪಯೋಗಿಸಿಕೊಳ್ಳಲಾಗಿದೆ.
2. ಶಾಸನ ಪದ್ಯಗಳನ್ನು ಜಿಲ್ಲಾವಾರಾಗಿ ವಿಂಗಡಿಸಿ, ತಾಲ್ಲೂಕುವಾರಾಗಿ ಪ್ರಕಟಿಸಲಾಗಿದೆ. ಒಂದೊಂದು ಜಿಲ್ಲೆಗೆ ಒಟ್ಟಾರೆ ಪದ್ಯಸಂಖ್ಯೆಯನ್ನು ನೀಡಲಾಗಿದೆ. ಜಿಲ್ಲೆಯ ಹೆಸರಿನ ಕೆಳಗೆ, ತಾಲ್ಲೂಕಿನ ಹೆಸರನ್ನು ನೀಡಿ, ಆಯಾ ತಾಲ್ಲೂಕಿನ ಶಾಸನಗಳ ಪದ್ಯಗಳನ್ನು ಟಿಪ್ಪಣಿಗಳೊಂದಿಗೆ ಕಾಲಕ್ರಮವಾಗಿ ಜೋಡಿಸಿ ಕೊಡಲಾಗಿದೆ.
3. ಪ್ರತಿಯೊಂದು ಪದ್ಯದ ಛಂದಸ್ಸಿನ ಹೆಸರನ್ನು ಆಯಾ ಪದ್ಯದ ಪ್ರಾರಂಭದಲ್ಲಿ ಕೊಟ್ಟಿದೆ (ನೋಡಿ: ಸಂಕೇತ ಸೂಚಿ).
4. ಪ್ರತಿಯೊಂದು ಪದ್ಯವೂ ಯಾರಿಗೆ ಸಂಬಂಧಿಸಿದ್ದು, ಯಾವುದಕ್ಕೆ ಸಂಬಂಧಿಸಿದ್ದು ಎನ್ನುವುದನ್ನು ಉಪಶೀರ್ಷಿಕೆಗಳಲ್ಲಿ ಕೊಡಲಾಗಿದೆ.
5. ಗದ್ಯಭಾಗಗಳಲ್ಲೂ ಇರುವ ಸುಂದರವಾದ ಅನೇಕ ಭಾಗಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ. ಅವುಗಳಿಗೆ ಸಂಖ್ಯೆಯನ್ನು ನೀಡಿಲ್ಲ.
6. ಛಂದೋದೋಷಗಳು ಮತ್ತು ಭಾಷಾದೋಷಗಳನ್ನು, ೧) ವ್ಯಂಜನಾಂತವಾದ ಪದಗಳು ಸ್ವರಾಂತವಾಗಿರುವುದು. ೨) ಸಂಯುಕ್ತಾಕ್ಷರಗಳನ್ನು ವಿರಳವಾಗಿ ಬರೆದಿರುವುದು. ೩) 'ಶ' ಕಾರವನ್ನು 'ಸ'ಕಾರವಾಗಿ ಬರೆದಿರುವುದು.
   ೪) 'ಱ', 'ೞ'ಗಳ ಪ್ರಯೋಗ. ೫) ಪ್ರಾಸದ ನಿಯಮಗಳನ್ನು ಮೀರಿರುವುದು, ಮೊದಲಾದವುಗಳನ್ನು ಸರಿಪಡಿಸಲಾಗಿದೆ.
7. ಸರಿಪಡಿಸಲಾಗದ ದೋಷಗಳಿಗೆ ಪ್ರಶ್ನಾರ್ಥಕ ಚಿಹ್ನೆ(?)ಯನ್ನು ನೀಡಲಾಗಿದೆ.
8. ಕೆಲವು ಪದ್ಯಗಳು ಅನೇಕ ಶಾಸನಗಳಲ್ಲಿ ಪುನರಾವರ್ತನೆಯಾಗಿವೆ. ಅಂತಹ ಸಂದರ್ಭಗಳಲ್ಲಿ ಪ್ರಾಚೀನ ಪಾಠಗಳನ್ನು ಉಳಿಸಿಕೊಂಡು ಅವುಗಳಲ್ಲಿ ಕಾಣುವ ದೋಷಗಳನ್ನು, ಸಿಗುವ ಆಯಾ ಪದ್ಯಗಳ ಉಳಿದ ಪಾಠಗಳೊಂದಿಗೆ ಹೋಲಿಸಿ, 'ಪಾಠ'ಗಳನ್ನು ಸ್ವೀಕರಿಸಲಾಗಿದೆ. ಈಗಲೂ ಪದ್ಯಗಳು ಪುನರಾವರ್ತನೆಯಾಗಿರುವ ಸಾಧ್ಯತೆಗಳಿವೆ.
9. ಪದ್ಯಗಳ 'ಅ'ಕಾರಾದಿ ಪಟ್ಟಿಯನ್ನು ಎರಡೂ ಸಂಪುಟಗಳಿಗೆ ಪ್ರತ್ಯೇಕವಾಗಿ ನೀಡಲಾಗಿದೆ.
10. ಪದ್ಯಗಳ ಕಠಿಣ ಪದಗಳ ಅರ್ಥಕೋಶವನ್ನು ನೀಡುವ ಉದ್ದೇಶವಿತ್ತು. ಅದು ಸಾಧ್ಯವಾಗಲಿಲ್ಲ.

ಆರ್. ನರಸಿಂಹಾಚಾರ್ಯರು ಹೇಳುವ ಹಾಗೆ "ಈ ಶಾಸನಗಳಿಗೆ ಕಪಿತಾಶೈಲಿ ಯೊಂದರಿಂದಲೇ ಮಹತ್ವವುಂಟಾಗಿದೆ ಎಂದು ತಿಳಿಯಬಾರದು. ಇದು ಆಯಾ ಕಾಲದ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಸಂಗತಿಗಳನ್ನು ಸ್ಪಷ್ಟವಾಗಿ ತಿಳಿಸುತ್ತವೆ. ಇವುಗಳಲ್ಲಿ ರಾಜರುಗಳ ವಿಷಯವಾಗಿಯೂ ಅವರಿಗೆ ಅಧೀನರಾದ ಅಧಿಕಾರಿಗಳ ವಿಷಯವಾಗಿಯೂ ಹೇಳಿರುವ ಚರಿತ್ರ ಸಂಬಂಧಿತ ಅಂಶಗಳು ಬಹಳ ಮುಖ್ಯವಾದವು."

ಶಾಸನ ಪದ್ಯಮಂಜರಿಯ ಪರಿಷ್ಕೃತ ಆವೃತ್ತಿಯ ಪ್ರಸ್ತಾವನೆಯಲ್ಲಿ ಡಾ. ಎಂ. ಚಿದಾನಂದಮೂರ್ತಿಯವರು ಹೇಳಿರುವ ಈ ಮಾತುಗಳನ್ನು ಗಮನಿಸಬೇಕು.

> "ಕವಿಗೆ ಶಾಸನ ರಚನೆಯಲ್ಲಿ ಅನೇಕ ಮಿತಿಗಳಿರುತ್ತವೆ. ಅಲ್ಲಿ ಕೆಲವು ವಾಸ್ತವ ಸಂಗತಿಗಳನ್ನು ಹೇಳಬೇಕು. ವ್ಯಕ್ತಿಗಳನ್ನು ಇಷ್ಟವಿರಲಿ, ಇಲ್ಲದಿರಲಿ ಹೊಗಳಬೇಕು. ರಾಜನ ವಂಶಾವಳಿಯನ್ನು ಕೊಡಬೇಕು. ಹೊಲದ ಗಡಿಗಳನ್ನು ಪಟ್ಟಿ ಮಾಡಬೇಕು. ಶಾಸನೋಕ್ತ ದಾನವನ್ನು ಕಾಪಾಡುವವರಿಗೆ ಏನೇನು ಪುಣ್ಯ ದೊರಕುತ್ತದೆ, ಹಾಳು ಮಾಡಿದವನಿಗೆ ಏನೇನು ದುರ್ಗತಿ ಪ್ರಾಪ್ತವಾಗುತ್ತದೆ ಎಂಬುದನ್ನು ಕೊನೆಯಲ್ಲಿ ತರಬೇಕು. ಶಾಸನಕಾರ ಈ ನಿರ್ಬಂಧಗಳಿಗೆ ಒಳಪಟ್ಟೇ ತನ್ನ ಶಾಸನಪಾಠವನ್ನು ಸಿದ್ಧಪಡಿಸುತ್ತಾನೆ. ಇವುಗಳ ಮಧ್ಯೆ ಯಾವುದೋ ಅನುಭವ, ಏನೋ ಸುಂದರೋಕ್ತಿ, ಅವನ ರಚನೆಯಲ್ಲಿ ಸುಳಿಯಬೇಕು ಎಂದರೆ ಕವಿಯ ಪ್ರತಿಭೆಯ ಸಂಪೂರ್ಣ ಆವಿಷ್ಕಾರಕ್ಕೆ ಶಾಸನವು ಸರಿಯಾದ ಜಾಗ ಎಂದು ಯಾರು ತಾನೇ ಹೇಳಲು ಸಾಧ್ಯ ! ಆದರೂ ಅಲ್ಲಿ ಕಾಣಿಸಿಕೊಂಡಿರುವ ಕಾವ್ಯ ಕಳಪೆಯದೆಂದು ಹೇಳಲು ಸಾಧ್ಯವಿಲ್ಲ."

ಶಾಸನಗಳಿಂದ ಪದ್ಯಗಳನ್ನು ಆರಿಸಿಕೊಳ್ಳುವ ಸಂದರ್ಭದಲ್ಲಿ ಡಾ. ಚಿದಾನಂದಮೂರ್ತಿಯವರು ಹೇಳುವ ಈ ಮಾತುಗಳನ್ನು ಗಮನದಲ್ಲಿಟ್ಟುಕೊಂಡಿದ್ದೇವೆ. ಶಾಸನಗಳನ್ನು ಸಾಹಿತ್ಯವಾಗಿ ನೋಡುವ ಅಥವಾ ಸಾಹಿತ್ಯ ವಿಮರ್ಶೆಯ ಸೂತ್ರಗಳಿಂದ ವಿಮರ್ಶಿಸುವ ಕೆಲಸವನ್ನು ಮಾಡಬಾರದೆಂಬುದೇ ನಮ್ಮ ನಿಲುವು.

ಶಾಸನಗಳ ಪದ್ಯ ರಚನೆಯಲ್ಲಿ ನೂರಾರು ಭಾವಗಳ, ಅನುಭವಗಳ ತೆರೆಗಳನ್ನು ಎಬ್ಬಿಸುವ ಗುಣಗಳು ಕಾಣುತ್ತವೆ. ಅದನ್ನು ಗಮನಿಸುತ್ತಾ ಪದ್ಯಗಳ ಆಯ್ಕೆ ಮಾಡಿದ್ದೇವೆಂದು ನಾವು ಭಾವಿಸಿದ್ದೇವೆ. ನಾವು ಬಿಟ್ಟಿರುವ ಶಾಸನ ಪದ್ಯಗಳ ಪಾಠಗಳು ಕೆಲವರಿಗೆ ಉತ್ತಮ ಎನ್ನಿಸಬಹುದು. ಅಂಥವುಗಳ ಕಡೆಗೆ ಸಹೃದಯರು ನಮ್ಮ ಗಮನ ಸೆಳೆಯಬೇಕೆಂದು ನಮ್ಮ ವಿನಮ್ರ ಕೋರಿಕೆ.

ನಾವು ಆರಿಸಿರುವ ಪದ್ಯಗಳ ಹಿನ್ನೆಲೆಯಲ್ಲಿ ತಮ್ಮ ಹೆಸರನ್ನು ಹೇಳಿಕೊಂಡಿರುವ ಕವಿಗಳ ಪಟ್ಟಿ ಹೀಗಿದೆ.

ಕಾಲ (ಕ್ರಿ.ಶ.)	ಕವಿಯ ಹೆಸರು	ಶಾಸನ ಸ್ಥಳ
930	ಕವಿರಾಜರಾಜ	ಕಳಸ, ಶಿಗ್ಗಾಂವ ತಾ., ಹಾವೇರಿ
980	ಕಮಲಾದಿತ್ಯ	ಸೊಗಲ, ಸವದತ್ತಿ ತಾ., ಬೆಳಗಾವಿ [1]
1007	ರನ್ನ	ಲಕ್ಕುಂಡಿ, ಗದಗ ತಾ., ಗದಗ
1040	ಬರ್ಮಯ್ಯ	ಸಿರೂರು, ಮುಂಡರಗಿ ತಾ., ಗದಗ
1057	ಕವಿರಾಜಬಾಂಧವ ಮಲ್ಲ	ಬೆಳತೂರು, ಹೆಗ್ಗಡದೇವನಕೋಟೆ ತಾ., ಮೈಸೂರು [2]
1067	ರಾಜವಲ್ಲಭ	ಹೊಟ್ಟೂರು, ಶಿಗ್ಗಾಂವ ತಾ., ಹಾವೇರಿ
1068	ಶಾಂತಿನಾಥ	ಬಳ್ಳಿಗಾವೆ, ಶಿಕಾರಿಪುರ ತಾ., ಶಿವಮೊಗ್ಗ
1075	ವೈಜನಾಥ	ಎಸ್. ಕೆ. ಕೊಪ್ಪ, ಬೀಳಗಿ ತಾ., ಬಾಗಲಕೋಟೆ
1080	ನಕುಳಾರ್ಯ	ಸುಳಗೋಡು ಸೋಮವಾರ, ಅರಕಲಗೂಡು ತಾ., ಹಾಸನ
1082	ನಾಗದೇವ	ಕುರ್ತಕೋಟಿ, ಗದಗ ತಾ., ಗದಗ
1092	ಮಾಧವ ಭಟ್ಟ	ಸೊರಟೂರು, ಗದಗ ತಾ., ಗದಗ
1094	ನಾಗಾರ್ಜುನ ಪಂಡಿತ	ಇಂಗಳಗಿ, ಚಿತ್ತಾಪುರ ತಾ., ಕಲಬುರ್ಗಿ
1097	ಮಲ್ಲ	ಚಿಕ್ಕ ಹಂದಿಗೋಳ, ಗದಗ ತಾ., ಗದಗ
1100	ರೇಚಣಭಟ್ಟ	ಮಲಘಾಣ, ಸಿಂದಗಿ ತಾ., ಗದಗ
1102	ಮಲ್ಲ	ಬಳ್ಳಿಗಾವೆ, ಶಿಕಾರಿಪುರ ತಾ., ಶಿವಮೊಗ್ಗ
1108	ಬೊಮ್ಮಣಪಂಡಿತದೇವ	ಕರಿಗುದರಿ, ಹಾನಗಲ್ ತಾ., ಹಾವೇರಿ
1112	ಮಲ್ಲಿಕಾರ್ಜುನಾರ್ಯ	ಬಳ್ಳಿಗಾವೆ, ಶಿಕಾರಿಪುರ ತಾ., ಶಿವಮೊಗ್ಗ
1113	ಮುದ್ದಿಗಾಂಕ	ಕೊಡಗನೂರು, ಜಗಳೂರು ತಾ., ದಾವಣಗೆರೆ

1117	ಸೂರ್ಯಣ	ಬೇಲೂರು, ಬೇಲೂರು ತಾ., ಹಾಸನ
1125	ನಾಗಾರ್ಜುನಪಂಡಿತ	ಮುಗದ, ಕುಂದಗೋಳ ತಾ., ಧಾರವಾಡ
1138	ಸಾಂತಮಹಂತ	ಲಾಳನಕೆರೆ, ನಾಗಮಂಗಲ ತಾ., ಮಂಡ್ಯ
1147	ಮುಖ್ಯಪಂಡಿತ	ಲಕ್ಷ್ಮೇಶ್ವರ, ಲಕ್ಷ್ಮೇಶ್ವರ ತಾ., ಗದಗ
1148	ಮಧುಸೂದನದೇವ	ಕೊಟ್ನಕಲ್ಲು, ಹೂವಿನಹಡಗಲಿ ತಾ., ವಿಜಯನಗರ
1150	ಮಾಧವ	ಹಳೇಬೀಡು, ಬೇಲೂರು ತಾ., ಹಾಸನ
1161	ದೇವಭದ್ರಮುನಿ	ಹೆಗ್ಗೆರೆ, ಚಿಕ್ಕನಾಯಕನಹಳ್ಳಿ ತಾ., ತುಮಕೂರು
1161	ನಾಗಾರ್ಜುನ	ಲಕ್ಷ್ಮೇಶ್ವರ, ಲಕ್ಷ್ಮೇಶ್ವರ ತಾ., ಗದಗ
1164	ಮಹದೇವ	ಬೇಲೂರು, ಬೇಲೂರು ತಾ., ಹಾಸನ
1168	ಶಾಂತಿರಾಜ	ನದಿಹರಳ ಹಳ್ಳಿ, ರಾಣಿಬೆನ್ನೂರು ತಾ., ಹಾವೇರಿ
1169	ಸೂರ್ಯಣ	ಬ್ರಹ್ಮಸಮುದ್ರ, ಕಡೂರು ತಾ., ಚಿಕ್ಕಮಗಳೂರು
1172	ಸೂರಿಯಣ	ಕಡೂರು, ಕಡೂರು ತಾ., ಚಿಕ್ಕಮಗಳೂರು
1173	ದೇವಪಾರ್ಯ	ಅರಸೀಕೆರೆ, ಅರಸೀಕೆರೆ ತಾ., ಹಾಸನ
1178	ದೇವಣ್ಣ	ಹೊಳಲು, ಹೂವಿನ ಹಡಗಲಿ ತಾ., ವಿಜಯನಗರ
1180	ಬೊಪ್ಪಣಪಂಡಿತ (ಸುಜನೋತ್ತಂಸ)	ಶ್ರವಣಬೆಳಗೊಳ, ದೊಡ್ಡಬೆಟ್ಟ, ಹಾಸನ [3]
1183	ಮಲ್ಲಣಪಂಡಿತ	ಅರಸೀಕೆರೆ, ಅರಸೀಕೆರೆ ತಾ., ಹಾಸನ
1186	ಸಜ್ಜನತಿಲಕ	ಸಿರಸಿಂಗಿ, ಸೌದತ್ತಿ ತಾ. ಬೆಳಗಾವಿ [4]

1186	ಭಾಸ್ಕರ	ನಂದೀವರಂ, ಆದೋನಿ ಮಂಡಲ, ಆಂಧ್ರಪ್ರದೇಶ
1187	ರಾಮದೇವಕವಿ	ಕಲಕೇರಿ, ಸಿಂದಗಿ ತಾ., ವಿಜಯಪುರ
1189	ತ್ರಿವಿಕ್ರಮಪಂಡಿತ	ಅರಸೀಕೆರೆ, ಅರಸೀಕೆರೆ ತಾ., ಹಾಸನ
1189	ಶಾಂತಿನಾಥ	ಕಣೆಕಲ್ಲು, ಅರಸೀಕೆರೆ ತಾ., ಹಾಸನ
1189	ಜನ್ನ	ಆನೆಕೆರೆ, ಅರಸೀಕೆರೆ ತಾ., ಹಾಸನ
1190	ಸೋಮನಾಥಪಂಡಿತ	ಹಿರೇಬೇವಿನೂರು, ಇಂಡಿ ತಾ., ವಿಜಯಪುರ
1198	ಜನ್ನ	ಅಮೃತಾಪುರ, ತರೀಕೆರೆ ತಾ., ಚಿಕ್ಕಮಗಳೂರು
1199	ಮಾರಮರಸ	ಹಂಪಿ, ಹೊಸಪೇಟೆ ತಾ., ವಿಜಯನಗರ
1200	ಕೇಶವರಾಜ ಚಮೂಪ	ಅಬಲೂರು, ಹಿರೇಕೆರೂರು ತಾ., ಹಾವೇರಿ
1206	ಸೂರ್ಯಣ	ಆಸಂದಿ, ಕಡೂರು ತಾ., ಚಿಕ್ಕಮಗಳೂರು
1218	ರಾಮದೇವ	ಚಿಕ್ಕಯೆರೆಹಳ್ಳಿ, ಹೊನ್ನಾಳಿ ತಾ., ದಾವಣಗೆರೆ
1244	ದೇವಕವಿ	ಕಲಕೇರಿ, ಸಿಂದಗಿ ತಾ., ವಿಜಯಪುರ
1269	ಅಲ್ಲಾಳ ಬುಧ	ಅಂಬಳೆ, ಚಿಕ್ಕನಾಯಕನಹಳ್ಳಿ ತಾ., ತುಮಕೂರು
1269	ದಾಮೋದರ	ಅಂಬಳೆ, ಚಿಕ್ಕನಾಯಕನಹಳ್ಳಿ ತಾ., ತುಮಕೂರು

1380	ಗೋಪಣ್ಣ	ಹೊಮ್ಮ, ಗುಂಡ್ಲುಪೇಟೆ ತಾ., ಚಾಮರಾಜನಗರ
1381	ನರಸಿಂಹ	ಅರುವನಹಳ್ಳಿ, ಮದ್ದೂರು ತಾ., ಮಂಡ್ಯ
1410	ಮಧುರ	ಹಂಪಿ, ಹೊಸಪೇಟೆ ತಾ., ವಿಜಯನಗರ
1656	ಸಾಸಲಯ	ಎಳಂದೂರು, ಎಳಂದೂರು ತಾ., ಚಾಮರಾಜನಗರ

1. ಇದರಲ್ಲಿ ಸೊಗಲದ ಸ್ಥಳಪುರಾಣ ಇದೆ. 2. ಇದು ಪ್ರಸಿದ್ಧವಾದ ದೇಕಬ್ಬೆಯ ಶಾಸನ. 3. ಇದರಲ್ಲಿ ಪ್ರಸಿದ್ಧವಾದ ಗೊಮ್ಮಟಸ್ತುತಿ ಇದೆ. 4. ಇದರಲ್ಲಿ ಸಿರಸಿಂಗಿಯ ಸ್ಥಳಪುರಾಣ ಇದೆ.

ಶ್ರೀ ಮೇವುಂಡಿ ಮಲ್ಲಾರಿಯವರ ಕನ್ನಡ ನಾಡಿನ ಶಾಸನ ಕವಿಗಳು ಗ್ರಂಥದಲ್ಲಿ ಉಲ್ಲೇಖಿತರಾದ ಅನೇಕ ಕವಿಗಳು ನಮ್ಮ ಪಟ್ಟಿಯಲ್ಲಿಲ್ಲ. ಅವರು ಹೇಳದ ಅನೇಕರು ನಮ್ಮ ಪಟ್ಟಿಕೆಯಲ್ಲಿ ಸೇರಿದ್ದಾರೆ. ಅವರೆಲ್ಲರೂ ಮಹಾಕವಿಗಳಲ್ಲ. ಆದರೆ ಅವರ ರಚನೆಗಳು ಸತ್ವಶಾಲಿ ಕವಿಗಳದ್ದೆಂದು ಹೇಳಲು ಸಾಧ್ಯವಾಗುತ್ತದೆ.

ಕವಿಯ ಹೆಸರು ಗೊತ್ತಿಲ್ಲದ ಕೆಲವು ಮಹತ್ವದ ಶಾಸನಗಳು ಹೀಗಿವೆ:

ಕ್ರಿ.ಶ. 1155ರ ಬೀದರ್ ತಾಲ್ಲೂಕಿನ ರಂಜೋಳದ ಶಾಸನದಲ್ಲಿ 'ಹಜ್ಜನ ಕಥೆ'ಯನ್ನು ಸುಂದರವಾಗಿ ನಿರೂಪಿಸಲಾಗಿದೆ. ಕ್ರಿ.ಶ. 1160ರ ಹುಲಿಕೆರೆಯ ಶಾಸನ ಚಟ್ಟನ ವಂಶಾವಳಿಯನ್ನು ಹೇಳಿದೆ. ಇದು ಒಂದು ಪುಟ್ಟಕಾವ್ಯದಂತೆಯೇ ನಿರೂಪಣೆಯನ್ನು ಒಳಗೊಂಡಿದೆ. ಕ್ರಿ.ಶ. 1138ರ ಕೊಪ್ಪಳ ಜಿಲ್ಲೆಯ ಇಟಗಿ ಶಾಸನದಲ್ಲಿ ಒಂದು ಪುಟ್ಟ ಚಂಪೂಕಾವ್ಯದಂತಹ ನಿರೂಪಣೆಯಿದೆ. ಹಾಗೆಯೇ ಕಲಬುರ್ಗಿ ಜಿಲ್ಲೆಯ ನಿಂಬಡಿಗಿ ಶಾಸನ (ಕ್ರಿ.ಶ. 1134), ಮಹಾರಾಷ್ಟ್ರದ ಕರಾಡಖೇಡದ ಶಾಸನ (ಕ್ರಿ.ಶ. 11 – 12ನೇ ಶತಮಾನ), ಶ್ರವಣಬೆಳಗೊಳದ ಚಿಕ್ಕಬೆಟ್ಟದ ಮೇಲಿರುವ ಕ್ರಿ.ಶ. 1131ರ ಶಾಂತಲೆಯ ಶಾಸನ, ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲ್ಲೂಕಿನ ಕೋಡಿಮಠದ ಶಾಸನ (ಕ್ರಿ.ಶ. 1162). ಬಿಜ್ಜಳನ ದಳವಾಯಿ ಕೇಶವರಾಜನನ್ನು ವರ್ಣಿಸುವ ಶಿಕಾರಿಪುರದ ಬಳ್ಳಿಗಾವೆಯ ಕ್ರಿ.ಶ. 1179ರ ಎರಡು ಶಾಸನಗಳು, ಹಜ್ಜ ಎಂಬುವವನ ಕಥೆಯನ್ನು ನಾಟಕೀಯವಾಗಿ ನಿರೂಪಿಸಿವೆ. ಶಿಕಾರಿಪುರ ತಾಲ್ಲೂಕಿನ ಚಿಕ್ಕಮಾಗಡಿಯ ಕ್ರಿ.ಶ. 1102ರ ಶಾಸನ. ಬೀದರ್ ತಾಲ್ಲೂಕು, ರಂಜೋಳದ ಕ್ರಿ.ಶ. 1090 – 1115ರ ಶಾಸನ. ರಾಯಚೂರು ಜಿಲ್ಲೆ, ಲಿಂಗಸೂಗೂರು ತಾಲ್ಲೂಕಿನ ಕ್ರಿ.ಶ. 1191ರ ಕರಡ್ಕಲ್ ಶಾಸನ; ಮಾನ್ವಿ ತಾಲ್ಲೂಕಿನ ಕ್ರಿ.ಶ. 1196ರ ಮಲ್ಲಟದ ಶಾಸನ. ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದ ತಾಲ್ಲೂಕಿನ ಕ್ರಿ.ಶ. 1203ರ ಬಂದಳಿಕೆ ಶಾಸನ; ಹಾವೇರಿ ಜಿಲ್ಲೆ, ಹಿರೇಕೆರೂರು ತಾಲ್ಲೂಕು, ಕ್ರಿ.ಶ. 1204ರ

ಸಾತೆಯನ ಹಳ್ಳಿಯ ವೆಣ್ಣಲ ಸೆಟ್ಟಿಕವ್ವೆಯ ಶಾಸನ, ಕ್ರಿ.ಶ. 1220ರ ಹಳೇಬೀಡಿನ ಕುವರಲಕ್ಷ್ಮನ ಶಾಸನ; ಹಾವೇರಿ ತಾಲ್ಲೂಕು, ಹರಳಹಳ್ಳಿಯ ಕ್ರಿ.ಶ. 13ನೇ ಶತಮಾನದ ಶಾಸನ; ದಾವಣಗೆರೆ ಜಿಲ್ಲೆ ಹರಿಹರ ತಾಲ್ಲೂಕಿನ ಹರಿಹರ ದೇವಾಲಯದಲ್ಲಿರುವ ಅನೇಕ ಶಾಸನಗಳು; ಕ್ರಿ.ಶ. 1171ರ ಮಹಾರಾಷ್ಟ್ರದ ಮಾಡಗೀಹಾಳ್ ಶಾಸನ. ಇವುಗಳಲ್ಲಿ ಅಪೂರ್ವವಾದ ಪದ್ಯ ರಚನೆಗಳಿವೆ. ಆದರೆ, ಕವಿಗಳು ತಮ್ಮ ಹೆಸರನ್ನು ಹೇಳಿಕೊಂಡಿಲ್ಲ.

ಶಾಸನಗಳನ್ನು ರಚಿಸುವುದಕ್ಕೆ ತಮ್ಮ ಕಾವ್ಯರಚನಾ ಸಾಮರ್ಥ್ಯವನ್ನು ಬಳಸಿಕೊಂಡ ಕವಿಗಳಲ್ಲಿ, ಅನೇಕರು ಶಿಷ್ಟ ಸಾಹಿತ್ಯವನ್ನು ರಚಿಸಿದ್ದಾರೆ. ಅಂತಹ ರನ್ನ, ಜನ್ನ, ಶಾಂತಿನಾಥ, ತಿರುಮಲಾರ್ಯ ಮೊದಲಾದವರು ಇದ್ದಾರೆ. ಅನೇಕ ಶಾಸನಕವಿಗಳು ರಚಿಸಿರುವ ಕಾವ್ಯಗಳು ನಮಗೆ ದೊರೆತಿಲ್ಲ ಅಥವಾ ಅವರು ಏನು ಬರೆದಿದ್ದಾರೆ ಎಂಬುದು ತಿಳಿದಿಲ್ಲ. ಸುಜನೋತ್ತಂಸ(ಬೊಪ್ಪಣ)ನಂತಹ ಕವಿಯ ಕಾವ್ಯಗಳು ನಮಗೆ ಸಿಗದಿರುವುದು ವಿಷಾದದ ಸಂಗತಿ.

ಶಾಸನಗಳ ಸಾಹಿತ್ಯಾಂಶವುಳ್ಳ ಪದ್ಯಗಳ ಸಂಖ್ಯೆಯನ್ನು ಜಿಲ್ಲಾವಾರಾಗಿ ಈ ಮುಂದೆ ನೀಡಲಾಗಿದೆ. ಶಾಸನ ಸಾಹಿತ್ಯ ಅಥವಾ ಸಾಹಿತ್ಯ ಚರಿತ್ರೆಗೆ ಭವಿಷ್ಯದಲ್ಲಿ ಈ ಮಾಹಿತಿ ಪೂರಕವಾಗಬಹುದು ಎಂಬುದು ನಮ್ಮ ನಂಬಿಕೆ.

ಸಂಖ್ಯೆ	ಜಿಲ್ಲೆ	ಪದ್ಯಗಳು
1	ಉತ್ತರ ಕನ್ನಡ	47
2	ಕಲಬುರಗಿ	251
3	ಕೊಪ್ಪಳ	117
4	ಕೋಲಾರ	6
5	ಗದಗ	251
6	ಚಾಮರಾಜನಗರ	25
7	ಚಿಕ್ಕಮಗಳೂರು	337
8	ಚಿತ್ರದುರ್ಗ	25
9	ತುಮಕೂರು	241
10	ದಕ್ಷಿಣ ಕನ್ನಡ	55
11	ದಾವಣಗೆರೆ	248
12	ಧಾರವಾಡ	163
13	ಬಳ್ಳಾರಿ	116

14	ಬಾಗಲಕೋಟೆ	148
15	ಬೀದರ್	54
16	ಬೆಳಗಾವಿ	171
17	ಮಂಡ್ಯ	278
18	ಮೈಸೂರು	79
19	ಯಾದಗಿರಿ	49
20	ರಾಯಚೂರು	85
21	ವಿಜಯನಗರ	349
22	ವಿಜಯಪುರ	296
23	ಶಿವಮೊಗ್ಗ	804
24	ಹಾವೇರಿ	313
25	ಹಾಸನ	1196
26	ಆಂಧ್ರಪ್ರದೇಶ, ತೆಲಂಗಾಣ, ಮಧ್ಯಪ್ರದೇಶ, ತಮಿಳುನಾಡು, ಕೇರಳ, ಮಹಾರಾಷ್ಟ್ರ	233

ಈ ಕೃತಿಯನ್ನು ಸಂಪಾದಿಸುವ ಸಮಯದಲ್ಲಿ, ಶಾಸನ ಸಂಪುಟಗಳಿಂದ ಪದ್ಯಗಳನ್ನು ಗುರುತಿಸಿ, ಅನೇಕ ಮಹನೀಯರು ಅದನ್ನು ಬೆರಳಚ್ಚು ಮಾಡಿಸಿಯೋ, ಕೈಬರಹದ ಮೂಲಕವೋ ನಮಗೆ ತಲುಪಿಸಿ, ಒಂದು ಕಡೆ ಒದಗಿಸಿದ್ದಾರೆ. ಛಂದೋಬದ್ಧವಾಗಿ, ಟಿಪ್ಪಣಿಗಳೊಡನೆ ಪದ್ಯಗಳನ್ನು ವಿಂಗಡಿಸಿ ಕೊಟ್ಟಿದ್ದಾರೆ. ಅನೇಕ ಕಡೆಗಳಲ್ಲಿ ಪಾಠದೋಷಗಳನ್ನು ಗುರುತಿಸಿ, ಸರಿಯಾದ ಪಾಠವನ್ನು ಗುರುತಿಸಿದ್ದಾರೆ. ಅವರುಗಳ ಹೆಸರು ಹಾಗೂ ಪದ್ಯ ಸಂಗ್ರಹಣೆ ಮಾಡಿದ ಸಂಪುಟಗಳ ವಿವರ ಹೀಗಿದೆ.

1.	ಡಾ. ಸ್ಮಿತಾ ರೆಡ್ಡಿ	E.C. I ಮತ್ತು E.C. II
2.	ಡಾ. ಸುಂಕಂ ಗೋವರ್ಧನ	E.C. III ಮತ್ತು IV
3.	ಡಾ. ಗಂಗಾಂಬಿಕೆ	E.C. V
4.	ಡಾ. ಸಂಧ್ಯಾ	1) E.C. VI 2) ಕ.ವಿ.ಶಾ.ಸಂ. IX – ಬಾಗಲಕೋಟೆ ಜಿಲ್ಲೆ

5.	ಡಾ. ಕು. ಸ. ಅಪರ್ಣ	E.C. VII
6.	ಡಾ. ಕೆ. ವಸಂತಲಕ್ಷ್ಮಿ	E.C. VIII
7.	ಡಾ. ಕೆ.ವಿ. ನಳಿನಿ	E.C. IX
8.	ಡಾ. ಲಲಿತಾಂಬ	1) E.C. X 2) ಕ.ವಿ.ಶಾ.ಸಂ. VII – ರಾಯಚೂರು ಜಿಲ್ಲೆ
9.	ಕೆ. ಭಾರತಿ	E.C. XII
10.	ಜಿ. ಕೆ. ದೇವರಾಯಸ್ವಾಮಿ	1) E.C. XIII 2) ಕ.ವಿ.ಶಾ.ಸಂ. II – ಕೊಪ್ಪಳ ಜಿಲ್ಲೆ
11.	ಗುರುಪ್ರಸಾದ್	E.C. XV
12.	ಡಾ. ಎಚ್.ಎಸ್. ಗೋಪಾಲರಾವ್	E.C. XXIV ಮತ್ತು E.C. XXV
13.	ಧನುಷ್	ಕ.ವಿ.ಶಾ.ಸಂ. I – ಬಳ್ಳಾರಿ ಜಿಲ್ಲೆ
14.	ಕಾರ್ತಿಕ್ ಸೂರಿ	ಕ.ವಿ.ಶಾ.ಸಂ. X – ಬಿಜಾಪುರ ಜಿಲ್ಲೆ
15.	ಡಾ. ರವಿ	ಹಾವೇರಿ ಜಿಲ್ಲೆಯ ಶಾಸನಗಳು
16.	ಡಾ. ಜೆ. ಎಂ. ನಾಗಯ್ಯ	ಗದಗ ಜಿಲ್ಲೆಯ ಶಾಸನಗಳು
17.	ಎಂ. ಎನ್. ಪ್ರಭಾಕರ್	E.C. XI (Rice)
18.	ನಿರ್ಮಲ ಎಸ್. ವೈ.	E.C. XIV
19.	ಡಾ. ಪಿ. ವಿ. ಕೃಷ್ಣಮೂರ್ತಿ	1) E.C. IX (Rice) 2) E.C. X (Rice)
20.	ಡಾ. ನೀ. ಕೃ. ರಾಮಶೇಷನ್	E.C. (ಶಿವಮೊಗ್ಗ) (Rice) – ಮೊದಲನೇ ಸಂಪುಟ
21.	ಸೀತಾಲಕ್ಷ್ಮೀ ರಾವ್	1) E.C. XI 2) ಕ.ವಿ.ಶಾ.ಸಂ. VIII – ಬೀದರ್ ಜಿಲ್ಲೆ 3) ಕ.ವಿ.ಶಾ.ಸಂ. II – ಹಂಪಿಯ ಶಾಸನಗಳು
22.	ಗೀತ ಕೈದಾಳ ಗಣೇಶ	1) ಉತ್ತರ ಕನ್ನಡ ಜಿಲ್ಲೆ 2) ದಕ್ಷಿಣ ಕನ್ನಡ ಜಿಲ್ಲೆ
23.	ಡಾ. ಕೆ. ಆರ್. ಗಣೇಶ	1) ಧಾರವಾಡ ಜಿಲ್ಲೆ 2) ಬೆಳಗಾವಿ ಜಿಲ್ಲೆ 3) ಉಡುಪಿ ಜಿಲ್ಲೆ 4) ಕರ್ನಾಟಕ ರಾಜ್ಯದ ಹೊರಗಿನ ಶಾಸನಗಳು

ವಹಿಸಿದ್ದ ಕೆಲಸವನ್ನು ಕೆಲವರು ಮಾಡದೇ ಹೋದದ್ದರಿಂದ, ಅದನ್ನು ಸಂಪಾದಕರೇ ಮಾಡಬೇಕಾದ್ದು ಅನಿವಾರ್ಯವಾಯಿತು. ಬೆಳಗಾವಿ, ಗದಗ, ಕಲಬುರ್ಗಿ, ಧಾರವಾಡ, ಮೊದಲಾದ ಜಿಲ್ಲೆಗಳ ಶಾಸನಗಳ ಸಂಪೂರ್ಣ ಸಂಪುಟಗಳು ಇನ್ನೂ ಬಂದಿಲ್ಲದೇ ಇರುವುದರಿಂದ ಕೆಲಸ ನಿಧಾನವಾಗಲು ಒಂದು ಕಾರಣವಾಯಿತು. ಎಲ್ಲ ಅಡೆತಡೆಗಳ ನಡುವೆಯೂ ಬೆರಳಚ್ಚು ಮಾಡಿಸಿ ಕಳುಹಿಸಿದುದನ್ನು, ಒಂದು ಲೆಕ್ಕಾಚಾರಕ್ಕೆ ಅಳವಡಿಸಿ ಕೊಡಬೇಕಾಗಿ ಬಂದಾಗ ಉಂಟಾದ ತೊಂದರೆಗಳನ್ನು ದಾಟಿ ಈಗ ಈ ಸಂಪುಟಗಳು ಸಿದ್ಧವಾಗಿವೆ.

'ಶಾಸನ ಪದ್ಯ ಸಿರಿ' ಎಂಬ ಈ ಸಾಹಿತ್ಯಾಂಶವುಳ್ಳ ಶಾಸನಗಳ ಪದ್ಯ ಸಂಗ್ರಹವನ್ನು ಸಿದ್ಧಪಡಿಸಿಕೊಡಲು ನಮಗೆ ಒಪ್ಪಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿರುವ ಡಾ. ವಸಂತ ಕುಮಾರ್ ಅವರನ್ನು ಕೃತಜ್ಞತೆಯಿಂದ ನೆನೆಯುತ್ತೇವೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ರಿಜಿಸ್ಟ್ರಾರ್, ಶ್ರೀ ಕರಿಯಪ್ಪನವರಿಗೆ ಅವರ ಕಚೇರಿ ಸಿಬ್ಬಂದಿಗೂ ನಮ್ಮ ನಮನಗಳು ಸಲ್ಲುತ್ತವೆ. ಶಾಸನ ಪದ್ಯ ಸಂಗ್ರಹಣೆಯ ಕಾರ್ಯದಲ್ಲಿ ಭಾಗವಹಿಸಿ ಸಹಕರಿಸಿದ ಎಲ್ಲ ವಿದ್ವಾಂಸರಿಗೆ, ಇದನ್ನು ಡಿ.ಟಿ.ಪಿ. ಮಾಡಿ ಮುದ್ರಣಕ್ಕೆ ಸಿದ್ಧಮಾಡಿಕೊಟ್ಟ ಗೀತ ಕೈದಾಳ ಗಣೇಶ ಅವರಿಗೆ ಹಾಗೂ ಕನ್ನಡ ಗಣಕ ಪರಿಷತ್‌ನ ನರಸಿಂಹಮೂರ್ತಿ ಅವರಿಗೂ, ಇತರ ಬೆರಳಚ್ಚುಗಾರರಿಗೂ, ಇದನ್ನು ಅಂದವಾಗಿ ಮುದ್ರಣ ಮಾಡಿದ ________ ಪ್ರೆಸ್‌ನವರಿಗೂ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಶುಭಕೃತ್, ಆಷಾಢ, ಶು. ಬಿದಿಗೆ,
ಶುಕ್ರವಾರ
(01-07-2022)
ಬೆಂಗಳೂರು

ಕೆ. ಆರ್. ಗಣೇಶ
ದೇವರಕೊಂಡಾರೆಡ್ಡಿ
(ಸಂಪಾದಕರು)

ಆಕರ ಗ್ರಂಥಗಳು ಮತ್ತು ಸಂಕೇತ ಸೂಚಿ

I. ಶಾಸನ ಸಂಪುಟಗಳು

1. Andhra Pradesh Government Archaelogical Series (APGAS) – ಸಂಪುಟಗಳು
2. ಎಪಿಗ್ರಾಫಿಯಾ ಕರ್ನಾಟಿಕಾ (E.C.) – (Rice Edited Volumes);
   E.C. VIII (Rice), E.C. X (Rice), E.C. XI (Rice)
3. ಎಪಿಗ್ರಾಫಿಯಾ ಕರ್ನಾಟಿಕಾ (E.C.) ಸಂಪುಟಗಳು –
   ಪ್ರ: ಕುವೆಂಪು ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
   E.C. I (R) – 1972, E.C. II (R) – 1973, E.C. III (R) – 1974,
   E.C. IV (R) – 1975, E.C. V (R) – 1976, E.C. VI (R) – 1977,
   E.C. VII (R) – 1979, E.C. VIII (R) – 1984, E.C. IX (R) – 1990,
   E.C. X (R) – 1997, E.C. XI (R) – 1998, E.C. XII (R) – 2003,
   E.C. XIII (R) – 2006, E.C. XIV (R) – 2019,
   E.C. XXIV (R) – 2009, E.C. XV (R) – 2009.
4. ಎಪಿಗ್ರಾಫಿಯಾ ಇಂಡಿಕಾ (E.I.) ಸಂಪುಟಗಳು – ಪ್ರ: ದಿ ಡೈರೆಕ್ಟರ್‌ಜನರಲ್, ಆರ್ಕಿಯಾಲಾಜಿಕಲ್‌ಸರ್ವೇ ಆಫ್‌ಇಂಡಿಯಾ, ನ್ಯೂ ಡೆಲ್ಲಿ.
   E.I. V, E.I. XIII, E.I. XV, E.I. XVI, E.I. XVII, E.I. XVIII, E.I. XIX, E.I. XXIX.
5. ಕನ್ನಡ ಶಾಸನ ಸಂಪದ – ಸಂ: ಡಾ. ಆರ್.ಸಿ. ಹಿರೇಮಠ, ಡಾ. ಎಂ. ಎಂ. ಕಲಬುರ್ಗಿ. ಪ್ರ: ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1968.
6. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟಗಳು (ಕ.ವಿ.ಶಾ.ಸಂ.) – 1 ರಿಂದ 10 ಸಂಪುಟಗಳು. ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
   ಕ.ವಿ.ಶಾ.ಸಂ. I – 1998, ಕ.ವಿ.ಶಾ.ಸಂ. II – 1999,
   ಕ.ವಿ.ಶಾ.ಸಂ. III – 2000, ಕ.ವಿ.ಶಾ.ಸಂ. IV – 2000,
   ಕ.ವಿ.ಶಾ.ಸಂ. V – 2001, ಕ.ವಿ.ಶಾ.ಸಂ. VI – 2001,
   ಕ.ವಿ.ಶಾ.ಸಂ. VII – 2003, ಕ.ವಿ.ಶಾ.ಸಂ. VIII – 2006,
   ಕ.ವಿ.ಶಾ.ಸಂ. IX – 2006, ಕ.ವಿ.ಶಾ.ಸಂ. X – 2011.
7. ಕರ್ನಾಟಕ ಇನ್ಸ್‌ಸ್ಕ್ರಿಪ್ಷನ್ಸ್ (K.I.) ಸಂಪುಟಗಳು. ಪ್ರ: ಕನ್ನಡ ರಿಸರ್ಚ್ ಇನ್ಸ್‌ಟಿಟ್ಯೂಟ್, ಧಾರವಾಡ. – K.I. Vol. I, II, III, IV, V ಮತ್ತು VI

8. ಕಲ್ಯಾಣ ಚಾಲುಕ್ಯರ ಶಾಸನಗಳು – ಸಂಪುಟ I ಮತ್ತು ಸಂಪುಟ II. ಸಂ: ಡಾ. ಜೆ. ಎಂ. ನಾಗಯ್ಯ; ಪ್ರ: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, 2011.
9. ಕಲ್ಬುರ್ಗಿ ಜಿಲ್ಲೆಯ ಶಾಸನಗಳು. ಸಂ: ಹನುಮಾಕ್ಷಿ ಗೋಗಿ. ಪ್ರ: ಶಿವಚಂದ್ರ ಪ್ರಕಾಶನ, ಹುಬ್ಬಳ್ಳಿ, 1996.
10. Corpus of Kadamba Inscriptions Volume I ; Editor: Dr. B.R. Gopal. Publisher: Kadamba Institute of Cultural Studies, Sirsi, Uttara Kannaḍa, 1985.
11. ಕುಂದನಾಡಿನ ಶಾಸನಗಳು. ಸಂ: ಡಾ. ಪಿ. ಎನ್.ನರಸಿಂಹಮೂರ್ತಿ. ಪ್ರ: ಸ್ವಾಗತ ಸಮಿತಿ, ಅಖಿಲ ಭಾರತ 74ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಉಡುಪಿ, 2007.
12. ಕಳಚೂರಿ ಶಾಸನಗಳು. ಸಂ: ಜಿ.ಕೆ. ದೇವರಾಯಸ್ವಾಮಿ; ಪ್ರ: ಯುವಸಾಧನೆ, ಬೆಂಗಳೂರು, 2017.
13. ತುಳುನಾಡಿನ ಜೈನ ಶಾಸನಗಳು. ಸಂ: ಡಾ. ದೇವರಕೊಂಡಾರೆಡ್ಡಿ, ಡಾ. ಜಯಪ್ರಕಾಶ್‌ಮಾವಿನಕುಳಿ; ಪ್ರ: ಕನ್ನಡ ವಿಶ್ವವಿದ್ಯಾಲಯ, ಹಂಪಿ, 2004.
14. The Kadambas of Goa and their Inscriptions (KOG) – R.N. Gurav. Ph.D. Thesis, Karnatak University, Dharwad, 1969. (Unpublished).
15. ಧಾರವಾಡ ತಾಲೂಕಿನ ಶಾಸನಗಳು. ಸಂ: ಡಾ. ಎಂ.ಎಂ. ಕಲಬುರ್ಗಿ; ಪ್ರ: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1976.
16. Bombay Royal Asiatic Society of India Journal (BRASI), Volume X.
17. Mysore Archaeological Reports (MAR), 1929.
18. ರಾಷ್ಟ್ರಕೂಟರ ಶಾಸನಗಳು – ಸಂಪುಟ I ಮತ್ತು ಸಂಪುಟ II. ಸಂ: ಡಾ. ಬಿ.ಆರ್. ಭಾರತೀ; ಪ್ರ: ಕುವೆಂಪು ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, 2011.
19. ಲಕ್ಕುಂಡಿಯ ಶಾಸನಗಳು – ಸಂ: ಹನುಮಾಕ್ಷಿ ಗೋಗಿ; ಪ್ರ: ಮಹಿಳಾ ಸಾಹಿತ್ತಿಕಾ, ಹುಬ್ಬಳ್ಳಿ, 2008.
20. ಲಕ್ಷ್ಮೇಶ್ವರದ ಶಾಸನಗಳು – ಸಂ: ಡಾ. ದೇವರಕೊಂಡಾರೆಡ್ಡಿ, ಡಾ. ಕೆ.ಆರ್. ಗಣೇಶ; ಪ್ರ: ಇನ್‌ಫೋಸಿಸ್ ಪ್ರತಿಷ್ಠಾನ, ಬೆಂಗಳೂರು, 2015.
21. ಶಾಸನ ಸಂಗ್ರಹ – ಸಂ: ಎ. ಎಂ. ಅಣ್ಣಿಗೇರಿ, ಡಾ. ಆರ್. ಶೇಷಶಾಸ್ತ್ರಿ; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2007.

22. ಸೌತ್‌ಇಂಡಿಯನ್‌ಇನ್ಸ್‌ಸ್ಕ್ರಿಪ್ಷನ್ಸ್(SII) ಸಂಪುಟಗಳು, ಪ್ರ: ದಿ ಡೈರೆಕ್ಟರ್‌ಜನರಲ್ (ಎಪಿಗ್ರಾಫಿ), ಆರ್ಕಿಯಾಲಾಜಿಕಲ್‌ಸರ್ವೇ ಆಫ್‌ಇಂಡಿಯಾ.
SII VII, SII IX, SII XI, SII XV, SII XVIII ಮತ್ತು SII XX
23. ಸುರಪುರ ತಾಲೂಕಿನ ಶಾಸನಗಳು. ಸಂ: ಹನುಮಾಕ್ಷಿ ಗೋಗಿ; ಮಹಿಳಾ ಸಾಹಿತ್ಯಿಕಾ, ಹುಬ್ಬಳ್ಳಿ, 1995.
24. Hyderabad Archaeological Series (HAS) Volume VIII.

II. ಇತರ ಗ್ರಂಥಗಳು

1. ಇತಿಹಾಸ ದರ್ಶನ – ಸಂಪುಟ 21
2. ಕನ್ನಡ ನಾಡಿನ ಶಾಸನ ಕವಿಗಳು – ಮೇವುಂಡಿ ಮಲ್ಲಾರಿ. ಪ್ರ: ಪ್ರತಿಭಾ ಗ್ರಂಥಮಾಲೆ, ಶಿವಾಜಿ ಬೀದಿ, ಧಾರವಾಡ, 1978.
3. ಕನ್ನಡ ಛಂದಃ ಸ್ವರೂಪ – ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ. ಪ್ರ: ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು, 1996.
4. ಶಬ್ದಾರ್ಥ ವಿಹಾರ – ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ; ಪ್ರ: ಅಪರ್ಣಾ ಪ್ರಕಾಶನ, ಮೈಸೂರು, 1979.
5. ಶಾಸನ ಪದ್ಯ ಮಂಜರಿ (ಕ್ರಿ.ಶ. 700 –1580) – ಸಂಕಲನ: ಆರ್. ನರಸಿಂಹಾಚಾರ್ಯ; ಪ್ರ: ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, 1975.
6. ಶಾಸನ ಸರಸ್ವತಿ, ಸಂಪಾದಕ – ಲೇಖಕ: ಡಾ. ಕೆ. ಆರ್. ಗಣೇಶ; ಪ್ರ: ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ, 2008.
7. ಶಾಸನ ಸಾಹಿತ್ಯ ಸಂಚಯ – ಸಂ: ಎ. ಎಂ. ಅಣ್ಣಿಗೇರಿ, ಮೇವುಂಡಿ ಮಲ್ಲಾರಿ; ಪ್ರ: ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ, 1961.
8. ಶಿವಾನುಭವ (ಪತ್ರಿಕೆ), ಸಂ. 3 – 9.
9. ಶಿಲಾಶಾಸನಗಳಲ್ಲಿ ಕಂಡ ಕರ್ಣಾಟಕ ಕವಿಗಳು – ತೀ. ತಾ. ಶರ್ಮ; ಪ್ರ: ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ, ಭಾರತ ಸರ್ಕಾರ, 1924.
10. ಹೈದರಾಬಾದ್ ಕರ್ನಾಟಕ ಭಾಗದ ಕನ್ನಡ ಶಿಲಾಶಾಸನಗಳು– ಸಂ: ಡಾ. ವಿ.ಶಿವಾನಂದ; ಪ್ರ: ಕನ್ನಡ ಪೀಠ, ಬನಾರಸ್ ಹಿಂದೂ ವಿಶ್ವವಿದ್ಯಾಲಯ, ವಾರಣಾಸಿ, 1992.

ವಿಷಯ ಸೂಚಿ

ವಿಜಯನಗರ ಜಿಲ್ಲೆ

ಕೂಡ್ಲಿಗಿ ತಾಲ್ಲೂಕು

1) ಹಳ್ಯ 3, ಕ.ವಿ.ಶಾ.ಸಂ. I, ಕ್ರಿಶ. 1154

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ಆರನೆಯ ವಿಕ್ರಮಾದಿತ್ಯನ ಆಳಿಕೆಯಲ್ಲಿ ಸಾಮಂತ ಕದಂಬ ವಂಶದ ನಾಚಿದೇವರಸನು ಅಗಸ್ತ್ಯೇಶ್ವರದೇವರಿಗೆ ನೀಡಿದ ದಾನವನ್ನು ಹೇಳಿದೆ.

ನಾಚಿಭೂಪಾಳ

ಮ ವಿ ॥ ವಿನಯಾಂಭೋನಿಧಿ ಸತ್ಯಶೌಚನಿಳಯಂ ಶಿಷ್ಟೇಷ್ಟಕಳ್ಪದ್ರುಮಂ
ದ್ಯುನದೀಜೂಟ ಪದದ್ವಯಾಬ್ಜಮಧುಪಂ ಶ್ರೀನಾಚಿಭೂಪಾಳ ಮಂ
ತ್ರಿನಿದಾನಂ ಗುಣರತ್ನಭೂಷಣನೆನುತ್ತಂ ಬಣ್ಣಿಕುಂ ಧಾತ್ರಿಸ
ಜ್ಜನ ಸಂಸೇಬ್ಯನನೋಳ್ಪ ನಾಳೊಡೆಯನಂ ಸಾಹಿತ್ಯಸರ್ಬಜ್ಞನಂ ॥ 1 ॥

ಎಳಹ

ಕಂ ॥ ಆ ಪುರದುತ್ತರ ಭಾಗದೊ
ಳಾ ಪಡಿಯೆನೆ ನೆಗಳ್ದಯೆಳೆಹಯೆಂಬುದು ಲಕ್ಷ್ಮೀ
ಪರಿವೃತನಗಸ್ತ್ಯೇಶನು
ಮಾಪತಿ ದೇವಾಧಿದೇವನೆಸೆದಿಪ್ಪುದರಿಂ ॥ 2 ॥

2) ಉಜ್ಜನಿ 6, ಕ.ವಿ.ಶಾ.ಸಂ. I, ಕ್ರಿಶ. ಸು. 12ನೇ ಶತಮಾನ

ಇದರಲ್ಲಿ ಜಗದ್ದೇಳ ಪಾಂಡ್ಯದೇವನನ್ನು ಹೊಗಳಿದೆ.

ಕಂ ॥ ತೊಳಪೆಳವೆಜೆ ಕೆಂಜೆಡೆಯೊ
ಳ್ಪೊಳಚ್ಚನರಲಲ್ಲಿ ಬೀಳಿಸೆ ಗಂಗಾನದಿ ಕಣ
ರ್ಗೊಳಿಸುವ ಕಲಿದೇವೇಶಂ
ಸಲೆ ಜಗದಳಪಾಂಡ್ಯ ನೃಪಗೀಗಭಿಮತಮಂ ॥ 3 ॥

ಹಗರಿಬೊಮ್ಮನಹಳ್ಳಿ ತಾಲ್ಲೂಕು

3) ಮೊರಿಗೇರಿ 24, ಕ.ವಿ.ಶಾ.ಸಂ. I, ಕ್ರಿಶ. 1045

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ತ್ರೈಲೋಕ್ಯಮಲ್ಲ ಆಹವಮಲ್ಲ ದೇವನ ಆಳಿಕೆಯಲ್ಲಿ ದಂಡನಾಯಕ ತಿಕಣ್ಣ ಮೊದಲಾದವರು, ನೊಳಂಬೇಶ್ವರ ಲೆಂಕೇಶ್ವರ ದೇವಾಲಯಗಳನ್ನು ಮಾಡಿಸಿ, ದತ್ತಿ ನೀಡಿದುದನ್ನು ದಾಖಲಿಸಿದೆ.

ಚಂ ಮಾ ॥ ನುಡಿವುದು ನನ್ನಿ ಮಾಡುವುದು ಕೀರ್ತ್ತನಮೀವುದೆ ಸದ್ವಿನೋದಮೊ
ಯ್ದಡೆ ಮಱವೊಕ್ಕಱನ್ನಱೆಯೆ ಕಾವಗುಣಂ ಬಸನಂ ಮಹಾಜಿಯೊ
ಳ್ಪಡೆಯದುದುಗ್ಗಿಯೆಂದು ನುಡಿವೀನುಡಿ ಲೆಂಕರೊಳಾವಕಾಲಮುಂ
ನಡೆವುದು ಪಣ್ಡಿತಪ್ರೊರ್ವಗಳೆ ಭೇರಿಯ ಗೋಸನೆ ಭೂತಳಾಗ್ರದೊಳ್ ॥ 4 ॥

ಮೊರಿಗೇರಿ

ಕಂ ॥ ವಾರಿಧಿಪರಿವೃತ ಧಾತ್ರೀ
ನಾರಿಯ ವದನದವೊಲೆಸೆವ ಕೋಗಳಿ ನಾಡೊ
ಳ್ಮೊರಿಂಗೆಱೆ ತಿಳಕಾಳಂ
ಕಾರಮನನುಕರಿಪುದೆನೆ ಜನಂ ಬಣ್ಣಿಸದೇ ॥ 5 ॥

4) ಕೋಗಳಿ 15, ಕ.ವಿ.ಶಾ.ಸಂ. I, ಕ್ರಿ.ಶ. 1055

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ತ್ರೈಲೋಕ್ಯಮಲ್ಲ ಸೋಮೇಶ್ವರನ ಆಳಿಕೆಯಲ್ಲಿ ಕೋಗಳಿಯಲ್ಲಿದ್ದ ಇಂದ್ರಕೀರ್ತಿಮುನಿ ಎಂಬ ಜೈನಮುನಿಯನ್ನು ಕೀರ್ತಿಸಿದೆ.

ಜಿನಸ್ತುತಿ

ಕಂ ॥ ಸ್ವಸ್ತಿ ಸಮಸ್ತ ಸುರಾಸುರ
ಮಸ್ತಕ ಮಣಿ ಮಕುಟ ಜಾಳ ಜಳ ಧೌತಪದ
ಪ್ರಸ್ತುತ ಜಿನೇಂದ್ರ ಶಾಸನ
ಮಸ್ತು ಚಿರಂ ಭದ್ರಮಮಳ ಭವ್ಯ ಜನಾನಾಂ ॥ 6 ॥

ಇಂದ್ರಕೀರ್ತಿಮುನಿ

ಮ ಸ್ರ ॥ ಕಲಿಕಾಳೋದ್ರೇಕದಿಂದಂ ಮನುಜರಱಿವು ಪೋಯ್ತಾಪ್ರ್ಪು ಕುಂದಿತ್ತು ಶೌಚಂ
ತೊಲಗಿತ್ತಾಯಂ ಬಳಿಲ್ದತ್ತಳವಳಿದುದೆನಲ್ವೇಡ ಮಾಣ್ಮಾಣ್ ನೃಳೋಕೈ
ಕಲಲಾಮಂ ಶಿಷ್ಟಚಿಂತಾಮಣಿ ವಿಬುಧಮನೋರಂಜನಂ ವಿಶ್ವವಿದ್ಯಾ
ಲಲನಾಳಂಕಾರನಿಬ್ದಂ ಪ್ರಕಟಿತಯಶನಪ್ಪಿನ್ದ್ರಕೀರ್ತ್ತಿ ಬ್ರತೀನ್ದ್ರಂ ॥ 7 ॥

ಕಂ ॥ ಪರಮ ಜಿನಚರಣಭಕ್ತ
ರ್ಗ್ಗುರು ಭಕ್ತರ್ಮ್ಮುಮುಕ್ಷುಭಕ್ತರಮಳಚರಿತ್ರ
ರ್ದ್ಧರೆಯೊಳ್ನೆಗಟ್ದಿರ್ಸ್ಸುರುಚಿರ
ತರಯಶ ರಮಣೀಯರಿನ್ದ್ರಕೀರ್ತ್ತಿ ಮುನೀನ್ದ್ರರ್ ॥ 8 ॥

ಮ ವಿ ॥ ಇನನುಂ ಧಾತ್ರಿಯುಮುಳ್ಳಿನಂ ನಡೆವ ವಿದ್ಯಾದಾನಕಿರ್ಪ್ಪರ್ತ್ತನಾ
ಲ್ಕೆನೆ ಮತ್ತರ್ಪ್ಪರಿಸಂಖೆಯಾಗೆರೆಯನಿತ್ತಾಹಾರ ದಾನಕ್ಕೆ ಸ
ನ್ಮುನಿಪರ್ಗ್ಗಜ್ಜಿಯರ್ಗ್ಗಿತ್ತರಿಟ್ಟಗೆಯದರ್ಕ್ಕುಂ ಬಾಳಕೋರಂ ಕರಂ
ಮನಮೊಲ್ದರ್ತ್ತಿಯಿನಿನ್ದ್ರಕೀರ್ತ್ತಿ ಮುನಿಪರ್ ಶಿಷ್ಟೇಷ್ಟ ಕಲ್ಪಾಂಘ್ರಿಪರ್ ॥ 9 ॥

ಕಂ ॥ ಪಡುವಣ ಮೂಡಣ ಕಲ್ಲಿವೆ
ಗಡಿಂಬದಿನಾರ್ಕ್ಕವಿದುವೆ ಸಾಯಿರನಾರ್ಕ್ಕಂ
ತಡಮಾಗದಳೆದುಕೊಳ್ವುದು
ಗಡಿಮೆಲ್ಲಂ ಬಡಗದದೆಸೆಯ ಗವಾನ್ತರದೊಳ್ ॥ 10 ॥

ಕಂ ॥ ಇದು ದುರ್ವ್ವಿನೀತನಿಂದಂ
ಮೊದಲೊಳ್ ಬಸದಿಯಿದ ನಾಡ ಮತ್ತರ ಘಳೆಯಿಂ
ವಿದಿತ ಯಶರಿನ್ದ್ರಕೀರ್ತ್ತಿಗ
ಳುದಿತೋದಿತಮಾಗೆ ಮಾಡಿದರ್ಕ್ಕೋಗಳಿಯೊಳ್ ॥ 11 ॥

ತೋಮರ ರಗಳೆ ॥ ಶ್ರೀಮದರುಹಚ್ಚರಣ ಸರಸಿರುಹಭೃಂಗನಂ
ಭೂಮಿ ಕೀರ್ತ್ತಿಸೆ ನೆಗಳ್ದ ಗುಣಗಣೋತ್ತುಂಗನಂ
ಮನುಚರಿತನಿರತನಂ ಗುರುಚರಣಭಕ್ತನಂ
ವಿನಮಿತ ಜಗಜ್ಜನಂ ಧರ್ಮ್ಮಾನುರಕ್ತನಂ
ಪರಹಿತದಿಳೀಪನಂ ನೃಗಭೂಪಚರಿತನಂ
ಸುರುಚಿರ ಯಶೋಧರನನಕಳಂಕ ಚರಿತನಂ
ಪಣ್ಡಿತ ಮುಖಾಂಬುರುಹಷಣ್ಡ ಮಾರ್ತಣ್ಡನಂ
ಕೊಣ್ಡಕುನ್ದಾನ್ವಯ ಸಮೂಹಮುಖಮಣ್ಡನಂ
ದೇಸೀಯ ಗಣ ಕುಮುದವನ ಶರಚ್ಚಂದ್ರನಂ
ಭಾಸುರಗುಣಾಢ್ಯನಂ ಕೋಕಳಿಪುರೀನ್ದ್ರನಂ
ತ್ರೈಳೋಕ್ಯಮಲ್ಲ ಸದ ಸರಸಿ ಕಳಹಂಸನಂ
ಭೂಲೋಕತಿಳಕನಂ ಕರ್ಮ್ಮವಿಧ್ವಂಸನಂ
ಸರ್ವ್ವತೋಭದ್ರ ಜಿನಗೃಹ ಸಮುದ್ಧರಣನಂ
ಸರ್ವ್ವಶಾಸ್ತ್ರಜ್ಞನಂ ವಿಕಳಜನಶರಣನಂ
ಶಿಷ್ಟ ಸುರಭೂಜನಂ ಕವಿಕುಮುದರಾಜನಂ
ಇಷ್ಟ ಸಂತುಷ್ಟನಂ ಖರಕಿರಣ ತೇಜನಂ

ದಶಧರ್ಮ್ಮ ಕುಶಳನಂ ಮೇರುಗಿರಿಧೈರ್ಯ್ಯನಂ
ಶಶಿ ವಿಶದಕೀರ್ತ್ತಿಯಂ ದಾನ ತಾತ್ಪರ್ಯ್ಯನಂ
ವಿನಯ ರತ್ನಾಕರಂ ಕವಿಜನಾಚಾರ್ಯ್ಯನಂ
ಜಿನಧರ್ಮ್ಮದೀಪಕನಧಿಕಭುಜವೀರ್ಯ್ಯನಂ
ತ್ರೈಳೋಕ್ಯಮಲ್ಲೇನ್ದ್ರ ಕೀರ್ತ್ತಿಹರಿಮೂರ್ತ್ತಿಯಂ
ಭೂಲೋಕ ವಿಖ್ಯಾತತರ ಯಶೋವರ್ತ್ತಿಯಂ
ಭವನಬ್ಜಭವನಬ್ಜಜಠರರ್ಗ್ಗೆ ಬಣ್ಣಿಸಲ್
ಅವರ್ಗ್ಗರಿದು ಮಾನವರ್ನ್ನೆಜೆದಪರೆ ಬಣ್ಣಿಸಲ್
ಗುರು ತನಗೆ ಮಿಥ್ಯೈಕವಾದಿ ಗಜ ಮೃಗರಾಜ
ರರಿಯರೆನಿಸಿದರಿನ್ದ್ರಣನ್ದಿ ಪಣ್ಡಿತದೇವ
ರೆನೆ ವಿನಯನಿಧಿ ವಿಪುಳ ಗುಣನಿಳಯನೆನಿಸಿದಂ
ಮನುಮತಮೆ ಮತಮೆನಿಸಿ ಬಹುಮತನುಮೆನಿಸಿದಂ
ತ್ಯಾಗದೊಳ್ ಶಿಬಿಗುತ್ತ ಸಾದೃಶ್ಯಮೆನಿಸಿದಂ
ಭೋಗದೊಳ್ ಸುರಪತಿಗೆ ಮಿಗಿಲೆ ತಾನೆನಿಸಿದಂ
ದಾನದೊಳ್ ಸುರಕರಿಯ ದೊರೆ ಸರಿಸನೆನಿಸಿದಂ
ಕಾನೀನನಂ ತನಗೆ ಹೀನನೆ ದಲೆನಿಸಿದಂ
ಧರ್ಮ್ಮಾನುರಾಗದೊಳ್ ಧರ್ಮ್ಮಸುತನೆನಿಸಿದಂ
ನೆರ್ಮ್ಮಂ ಬುಧಂಗೆ ಹಿಮಕರನಂತಿರೆನಿಸಿದಂ
ಗುರುಸೇವೆಗಿಡದುದಜಿನಮರಪತಿಯೆನಿಸಿದಂ
ಧರಣೀಧರತ್ವದಿಂ ಮೇರುನಗಮೆನಿಸಿದಂ
ವಂದಿಬೃನ್ದಾರಕ ಮಯೂರಾಂಬುದಾಗಮಂ
ವಂದಿಜನ ಚೂತವನ ಮುದ ವಸಂತಾಗಮಂ
ಕವಿಗಮಕ ವಾದಿ ವಾಗ್ಮೀನ್ದ್ರ ಕಳ್ಪದ್ರುಮಂ
ಕವಿಕದಂಬಕ ಕೀರ ಫಳಿತ ಚೂತದ್ರುಮಂ
ಕೇವಳಮೆ ನೆಗಳ್ದಿನ್ದ್ರಕೀರ್ತ್ತಿ ನೃಪ ಪೂಜಿತಂ
ಕೇವಳಮೆ ಸಕಳಗುಣ ಗಣ ಯಶೋರಾಜಿತಂ ॥ 12 ॥

ಫಲಶ್ರುತಿ

ಚಂ ಮಾ ॥ ತೊಲಗದೆ ಜೈನ ಮಾರ್ಗದೊಳು ನಿಶ್ಚಳರಪ್ಪುದು ದೇವಪುತ್ರರಂ
ಸಲೆ ನೆಗಳ್ದಿಟ್ಟ ಕೋಗಳಿಯ ಬದ್ದಿನ ವೃತ್ತಿಯ ಮಾನ್ಯಕಾಜರುಂ

ತೊಲಗಿಸುವ ಧರ್ಮ್ಮಮಂ ಮಱೆದು ದೆಯ್ವಕೆ ಕಾಳ್ ಕುಱಿಯಿಕ್ಕಿರ್ದವ
ಪ್ರೊಲೆಯರವರ್ಗ್ಗೆ ವೃತ್ತಿಯಣಮಾಗದು ವೃತ್ತಿಗೆ ಮಾರ್ಕ್ಕೆ ಭವ್ಯರಂ ॥ 13 ॥

5) ಅಂಬಳಿ 5, ಕ.ವಿ.ಶಾ.ಸಂ. I, ಕ್ರಿ.ಶ. 1083

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ಆರನೆಯ ವಿಕ್ರಮಾದಿತ್ಯನ ಹಾಗೂ ಸಿಂದವಂಶದ ತ್ರಿಭುವನಮಲ್ಲ ಪಾಂಡ್ಯದೇವರಸನ ಆಳಿಕೆಯಲ್ಲಿ ಅನಂತಪಾಲ ದಂಡನಾಯಕನು, ಅಮ್ಮಳೆಯಲ್ಲಿ ಕಲಿದೇವರ ದೇವಾಲಯವನ್ನು ನಿರ್ಮಿಸಿ, ದತ್ತಿಯನ್ನು ಕೊಟ್ಟದ್ದನ್ನು ಹೇಳಿದೆ.

ಕೋಗಳಿ ನಾಡು

ಚಂ ಮಾ ॥ ಜಲನಿಧಿವೇಷ್ಟಿತಾವನಿಗೆ ರಂಜಿಪ ಕುಂತಳದೇಶದೊಳ್ಮನಂ
ಗೊಳಿಪ ಮುಖಕ್ಕೆ ನಾಸಿಕಮೆನಿಪ್ಪವೊಲಿರ್ಪ್ಪ ನೊಣಂಬವಾಡಿನಾ
ಡೊಳಗಿದು ದೃಷ್ಟಿ ತಾನೆನಿಪ ಕೋಗಳಿನಾಳ್ಕತಿರಮ್ಯಮಾಗಿರ
ಮ್ಮಳೆ ತಿಲಕಂಬೊಲಿರ್ಪ್ಪುದಮರಾವತಿಯಂತೆಸೆದೆನ್ತು ನೋರ್ಪ್ಪೊಡಂ
॥ 14 ॥

ಅಮ್ಮಳೆ

ಚಂ ಮಾ ॥ ಬಳಸಿದ ನನ್ದನಾವಳಿಗಳಿಂ ಬೆಳೆದೊಪ್ಪುವ ಗಂಧಶಾಳಿಯಿಂ
ಜಳಜಕುಳಂಗಳಿಂ ಪಿಕಶುಕಭ್ರಮರಾಳಿಗಳಿಂಚರಂಗಳಿಂ
ತೊಳಗುವ ದೇವತಾಭವನದಿಂದೆಸೆದಿರ್ಪ್ಪ ಧರಾಮರರ್ಕ್ಕಳಿಂ
ಜಳಧಿಪರೀತಭೂತಳದೊಳಂಮ್ಮಳೆ ರಂಮ್ಯಮದೆಂತು ನೋರ್ಪ್ಪಡಂ
॥ 15 ॥

ಪಶುಪತಿಭಟ್ಟ

ಕಂ ॥ ಧರೆಗೆಸೆದಿರ್ಪ್ಪಂಮ್ಮಳೆಯಂ
ಧರಣೀಪತಿ ದುರ್ವ್ವಿನೀತ ಗಂಗಂ ಪರಮಾ
ದರದಿಂದೆ ರಾಜ್ಯಚಿಹ್ನಂ
ಬೆರಸು ಕುಡಲ್ಪಡೆದನೆಸೆಯೆ ಪಶುಪತಿಭಟ್ಟಂ ॥ 16 ॥

ಮ ಸ್ರ ॥ ಕಮಳಪ್ರೋದ್ಭೂತವಂಶೋತ್ತಮನಮಳಗುಣಾಳಂಕೃತಂ ವೇದಶಾಸ್ತ್ರಾ
ಗಮವಿದ್ಯಾಪಾರಗಂ ಶಂಕರಪದಯುಗ ಪಂಕೇಜಸದ್ಭಕ್ತಿಯುಕ್ತಂ
ಹಿಮಸೇತುಬ್ರಾತ ಭೂಮಣ್ಡಳವಿಶದಯಶೋರಾಶಿ ಶಿಷ್ಟೇಷ್ಟಕಲ್ಪ
ದ್ರುಮನೆಂನ್ದಿಂತೀ ಜಗಂ ಬಣ್ಣಿಸೆ ಪಶುಪತಿಭಟ್ಟಂ ಜಗತ್ಖ್ಯಾತನಾದಂ ॥ 17 ॥

ಚಾವುಂಡಮಯ್ಯ

ಕಂ ॥ ತತ್ತನಯಂ ಮನ್ಮಾರ್ಗ್ಗಚ
ರಿತ್ರಂ ಚಾವುಣ್ಡಮಯ್ಯನೀಶಪದಾಬ್ಜೋ
ನ್ಮತ್ತಭ್ರಮರಂ ವಿಶ್ವಾ
ಮಿತ್ರಾನ್ವಯವನಜವನ ದಿವಾಕರನೆಸೆದಂ ॥ 18 ॥

ಕಂ ॥ ಮೊದಲೊಂದಯ್ದು ಕವಲ್ವ
ಬ್ಬಿದ ಶಾಖೆ ಸಹಸ್ರಮಾಗೆ ಸಫಳಂ ತಾನಾ
ದುದು ಕಲ್ಪವೃಕ್ಷದಂದದೊ
ಳೊದವಿರ್ದ್ದಂಮ್ಮೆಳೆಯೊಳೆಸೆವ ಸತ್ತ್ರಭುವಂಶಂ ॥ 19 ॥

ಮಹಾಜನರು

ಚಂ ಮಾ ॥ ಮನುಚರಿತಂ ಚರಿತ್ರಮಮರೇಜ್ಯನ ಮಂತ್ರಮೆಮಂತ್ರ ಧರ್ಮನ
ನ್ದನನ ಗುಣಂ ಗುಣಂ ರವಿತನೂಜನ ದಾನಮೆ ದಾನಂ ವೈನತೇ
ಯನವಿಪುಳೋಗ್ರಸಾಹಸಮೆ ಸಾಹಸಮೆಂದು ನಿರನ್ತರಂ ಜಗ
ಜ್ಜನಮೊಲಿದೆಯ್ದೆ ಬಣ್ಣಿಸುವುದುನ್ನತಿಯಂ ನೆಗಬ್ದಿಯ್ವದಿಂಬರಂ ॥ 20 ॥

ಕಲಿದೇವಾಲಯ

ಮ ಸ್ರ ॥ ಜಲಜಪ್ರೋದ್ಭೂತನೇಂ ನಿರ್ಮ್ಮಿಸಿದನೊ ರಜತಾದ್ರೀಂದ್ರವೇಂ ತಾನಿದೊ ಮೇ
ಣ್ಕಲಿದೇವಸ್ವಾಮಿ ದೇವಾಯತನಸಹಿತವೇಂ ಶಂಭುವೊ ಪೇಳಿಮೆನ್ದೀ
ನೆಲನೆಲ್ಲಂ ಬಣ್ಣಿಸಲ್ಮಾಡಿಸಿದನೆಸೆಯಲುತ್ತುಂಗ ವಿಸ್ತೀರ್ಣ್ನ ಕೂಟಾ
ವಳಿಯಿಂದಂ ಕೂಡೆ ಶೋಭಾಕರಮೆನೆ ಶಿವರಾಜಂ ದಿನಾಧೀಶತೇಜಂ
॥ 21 ॥

ಕಂ ॥ ಪಲವುಂ ವಿಚಿತ್ರಕೂಟಾ
ವಳಿ ಪಂಚಾಂಗ ತ್ರಿಭೂಮಿಕೈಳಾಶದಿನೆಸೆಗುಂ
ಸಲೆ ತಾಂ ತ್ರಿಭುವನ ತಿಳಕಂ
ಕಲಿದೇವಸ್ವಾಮಿ ನೆಲಸಿದುದ್ಭವಭವನಂ ॥ 22 ॥

ಶಿವರಾಜ

ಕಂ ॥ ನಾನಾದಾನದೊಳಧಿಕ
ನ್ನಾನೆನೆ ಸರ್ವ್ವಸ್ವದಾನಮಂ ಮಾಡಿದನ

ನ್ತೇನಧಿಕನೊ ಶಿವರಾಜ ಚ
ಮೂನಾಥಂ ಪುಣ್ಯಮೂರ್ತ್ತಿ ಗೋತ್ರಪವಿತ್ರಂ ॥ 23 ॥

ಕಂ ॥ ತ್ರಿಭುವನಮಲ್ಲಕ್ಷಿತಿಪನೊ
ಳಭಿಮತಫಲಸಿದ್ಧಿವೆರಸು ಬಂದಮ್ಮೆಳೆಯ
ಪ್ರಭುಗಳ್ಗಾ ಶಿವರಾಜಂ
ಶುಭಮತಿ ಧರ್ಮ್ಮಪ್ರವೃದ್ಧಿಯಂ ತಾನಱಿಪಲ್ ॥ 24 ॥

ಕಂ ॥ ಭವಭವಭವಾಳಿಯಿಂದು
ದ್ಭವಿಸಿದ ಸುಕೃತದೊಳಗಣ್ಯಪುಣ್ಯದಿನಂ ಸಂ
ಭವಿಸೆ ಶಿವಭಕ್ತಿಲತೆ ಪ
ಲ್ಲ್ವವಿನಂ ಧರ್ಮಪ್ರಯುಕ್ತರತಿಮುದದಿಂದಂ ॥ 25 ॥

ಕಂ ॥ ಸಲೆ ಧರ್ಮರೂಪದಿಂ ಶ್ರೀ
ಕಲಿದೇವಸ್ವಾಮಿಯಲ್ಲೀ ಕೋಪರವಿತ
ಣ್ಡುಲವಗ್ನಿತಪ್ತಮಾಷಂ
ಜಲವಿಷದಳ ಸಪ್ತದಿವ್ಯಮುಂ ವರ್ತ್ತಿಸುಗುಂ ॥ 26 ॥

ಕಂ ॥ ದೇವರ್ಗ್ಗೆ ದಿವ್ಯದ ಮು
ದ್ರಾವಣದಿಂ ಪುಟ್ಟಿದರ್ತ್ಥವಪ್ಪುದು ಸಲೆ ನಿಃ
ಕೇವಳ ನೈಮಿತ್ತಿಕ ಸ
ದ್ಭಾವದೆ ಧರ್ಮ್ಮಬ್ರಯಕ್ಕೆ ಸಲ್ವುದು ಸತತಂ ॥ 27 ॥

6) ಚಿಮ್ನಹಳ್ಳಿ 30, ಕ.ವಿ.ಶಾ.ಸಂ. I, ಕ್ರಿ.ಶ. 1086

ಇದರಲ್ಲಿ ಮೊರಟನಾಡನ್ನು ಆಳುತ್ತಿದ್ದ ಮನ್ನೆಯ ಬೆನ್ನರಸನು ಕಂಬೇಶ್ವರ ದೇವರಿಗೆ ನೀಡಿದ ದತ್ತಿಯನ್ನು ಹೇಳಿದೆ.

ಕಂಬ

ಕಂ ॥ ಬೀರರಸಂಗಂ ಸಿತಪಂ
ಕೇರುಹದಳನಯನೆ ರೆಬ್ಬಿಕಬ್ಬೆಗಮತಿ ಗಂ
ಭೀರಗುಣಂ ಪುಟ್ಟಿದ ಸಾ
ದಾರತೆಯೊಡವುಟ್ಟೆ ಕಂಬನೆಂಬ ಮಹಾತ್ಮಂ ॥ 28 ॥

ಕಂ ॥ ಅನಿಬರ್ಗ್ಗಂ ಕಿಱಿಯಂ ಸ
ಜ್ಜನಪೂಜ್ಯಂ ಸುಜನವನಜವನ ಕಳಹಂಸಂ
ವಿನಯನಿಧಿ ಸಕಳ ವಿದ್ಯಾ
ವರನಿಧಿಯೆನೆ ಕಂಬಗೌಣ್ಡನೊಳ್ಸಮನಾವಂ ॥ 29 ॥

ಕನಕಿಯಬ್ಬೆ

ಕಂ ॥ ಪರಿವಾರಸುರಭಿ ಕಂಬನ
ಪಿರಿಯಂಗನೆ ಹಂಮಿಕಬ್ಬೆ ಬಳಿಕಾದಳ್ ಸು
ನ್ದರ ರೂಪವತಿ ಕಳಾವತಿ
ಕರಮೆಸೆದಳ್ ಕನಕಿಯಬ್ಬೆ ಗೋತ್ರಪವಿತ್ರೇ ॥ 30 ॥

7) ಅಂಬಳಿ 4, ಕ.ವಿ.ಶಾ.ಸಂ. I, ಕ್ರಿಶ. 1106

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ಆರನೆಯ ವಿಕ್ರಮಾದಿತ್ಯನ ಆಳಿಕೆಯಲ್ಲಿ ಅಂಕುಪಲ್ಲವರಾಯ ದಂಡನಾಯಕ ಎಂಬುವವನ ಆಜ್ಞೆಯಂತೆ ಕೆರೆಯ ಜೀರ್ಣೋದ್ಧಾರಕ್ಕೆ ನೀಡಿದ ದಾನವನ್ನು ಹೇಳಿದೆ. ಪಾಂಡ್ಯನೃಪನನ್ನು ಹೊಗಳಿದೆ.

ಪಾಂಡ್ಯನೃಪ

ಉ ಮಾ ॥ ಅಂಬುಜ ಸಂಭವಂ ಪಡೆದು ಪುಟ್ಟಿದ ಕೃಷ್ಣನ ನಾಭಿಪದ್ಮದಂ
ತೆಂಬುದು ಚಂದ್ರಕೌಸ್ತುಭಭವೋಜ್ವಳದುಗ್ಧಪಯೋನಿಧಾನದಂ
ತೆಂಬುದು ಮೆಚ್ಚಿಮೆಚ್ಚಿ ಪರಿಭಾವಿಸಿ ಭಾವಿಸಿ ಧಾತ್ರಿ ಕೂರ್ತ್ತು ಕಾ
ದಂಬಕುಲೋದ್ಭವಾಗ್ರಣಿ ಜಗದ್ದಳ ಪಾಂಡ್ಯನೃಪಾಳವಂಶವಂ ॥ 31 ॥

ಕಂ ॥ ನಳನಹುಷಸಗರಖೇಚರ
ದಿಲೀಪಪುರುಪುತ್ಸಕಾರ್ತ್ತವೀರ್ಯ್ಯಾರ್ಜ್ಜನರೊಂ
ದಳವಳವಾರ್ಪ್ಪಾರ್ಪ್ಪು ಜಗ
ದ್ದಳಪಾಂಡ್ಯನೃಪಾಳನೆಂಬುದವನೀ ಚಕ್ರಂ ॥ 32 ॥

ಕೇತೋಜ

ಕಂ ॥ ಪದಕದ ಮಕುಟದ ಕೇಯೂ
ರದ ಕೆಲಸದೊಳಕ್ಕಸಾಲಿಬಸವೋಜಸುತಂ
ಚದುರಂ ಕೇತೋಜಂ ಮ
ತ್ತಿದೆಂತು ಕಂಡರಿಸಿ ಕಡೆದನೀ ಶಾಸನಮಂ ॥ 33 ॥

8) ಬೆಣ್ಣೆಕಲ್ಲು 2, ಕ.ವಿ.ಶಾ.ಸಂ. I, ಕ್ರಿಶ. 1226

ಇದರಲ್ಲಿ ಹೊಯ್ಸಳರ ದೊರೆ ಎರಡನೇ ನರಸಿಂಹನ ಆಳಿಕೆಯಲ್ಲಿ ಅಮಿತಯ್ಯ ದಂಡನಾಯಕನು ಅನೇಕ ದೇವಾಲಯಗಳನ್ನು ಕಟ್ಟಿಸಿ, ಕೊಟ್ಟ ದತ್ತಿಯನ್ನು ಹೇಳಿದೆ.

ಬಲ್ಲಾಳ ದಂಡಾಧಿಪ

ಮ ವಿ ॥ ಇದು ಸತ್ಯಂ ಪಗೆಮೆಚ್ಚೆಗಂಡನ ಸುತಂ ಬಲ್ಲಾಳ ದಂಡಾಧಿಪಂ
ಕದನಂಬೊಕ್ಕ ಬಳಿಕ್ಕವಾ ರಘುಜನಂತಾ ಪಾರ್ಥನಾ ಭೀಮನಾ
ಮದನಧ್ವಂಸಕನಾ ಹಿರಣ್ಯಕಶಿಪು ಪ್ರಧ್ವಂಸಿಯಾ ಕಾಲನಾ
ತ್ರಿದಶಾಧೀಶ್ವರನಾ ಸಹಸ್ರಭುಜನಾ ಗಾಂಗೇಯನಾ ಷಣ್ಮುಖಂ ॥ 34 ॥

ಬಲ್ಲಾಳನ ಮಗ ನರಸಿಂಹ

ಚಂ ಮಾ ॥ ಸುರಗುರು ಲಗ್ನಮಂ ಕುಡೆ ವಿರಿಂಚಿ ಚಿರಾಯುವನೀಯೆ ಲಕ್ಷ್ಮಿಯಂ
ಹರಿದಯಗೆಯ್ಯೆ ಶಂಭು ಜಯಮಂ ಕುಡೆ ಭಾರತಿ ಬಲ್ಮೆಯೆಲ್ಲಮಂ
ನಿರವಿಸೆ ಮಂತ್ರಿಬಲ್ಲುಗಿಗೆ ಪುಟ್ಟಿದನೀ ನರಸಿಂಹನಳ್ಕಱಿಂ
ಸ್ಥಿರತರ ಪುಣ್ಯಮೂರ್ತಿ ಕುಲದುಂನತಪುಂಣ್ಯದ ಪುಂಜಮೆಂಬಿನಂ
॥ 35 ॥

ಅಮಿತ ದಂಡನಾಥ

ಮ ಸ್ರ ॥
ಖುರಪೀತಾಭ್ರಾಂಗಣಂ ಸಿಂಗಣ ನೃಪನ ಹಯಶ್ರೇಣಿ ಕಳ್ಪಾಂತಧಾರಾ
ಧರ ಮಲ್ಲಾಮಲ್ಲಿಯೊಳ್ ಯಾದವಗಜಘಟೆಯೊಳ್ ತಳ್ತುದಾ ಯುದ್ಧಮಧ್ಯ
ಕ್ಕುರಿಲಿಂಗಂ ನಿಲ್ವವೊಲ್ ನಿಂದೆಳಱೆಪೆಳಱೆ ಮಾರ್ಕ್ಕೊಂಡು ಬೆಂಕೊಂಡು ಕೊಂಡಂ
ತುರಗಭ್ರಾತಂಗಳಂ ನೇಱೆಲಿಗೆಯೊಳಮಿತಂ ದಂಡನಾಥಾಂಜನೇಯಂ ॥ 36 ॥

ಚಂ ಮಾ ॥ ಅಸದೃಶವಿಂದುಮಂಡಳವದಿಂದಮೃತೋಜ್ವಳಕೀರ್ತ್ತಿಕಾಂತಿಗೀ
ಕ್ಷಿಸೆ ಕಱೆವುಳ್ಳುದೊಂದು ಕಱೆಯಿಲ್ಲದುದೊಂದಱಿಂದವಂದು ಹೋ
ಲಿಸಿದಪನಿಂದು ನಾಳೆ ರಿಪುಹರ್ಮ್ಯತಳಂಗಳ ಮೇಲೆ ತಳ್ತ ಪ
ರ್ವ್ವಸಲೆಗೆ ಪಾಯ್ದುವಿಂದವಮೃತಂ ಬಳಿಕೆಂದೆಣೆ ಚಂದ್ರಮಂಡಳಂ ॥ 37 ॥

ಚಂ ಮಾ ॥ ವಿದಿತ ಕಳಂಕನಲ್ಲದ ಕಳಾಧರನುದ್ಧತ ಗೋತ್ರವೈರಿಯ
ಲ್ಲದ ವಿಬುಧಾಧಿಪಂ ಕುವಳಯದ್ವಿಷನಲ್ಲದಿನಂ ದ್ವಿಜಿಹ್ವನ
ಲ್ಲದ ನುತಭೋಗಿ ಭಂಗಯುತನಲ್ಲದ ಚಾರುಗುಣಾಂಬುರಾಸಿಯೆಂ
ಬುದು ಜಗವರ್ತ್ಥಿಯಿಂದಮಿತನಂ ಧುರದೊಳ್ ಪಗೆಮೆಚ್ಚೆಗಂಡನಂ
॥ 38 ॥

ಕಂ ॥ ಪ್ರತಿದಿನವುದ್ಯಾಪನ ಮು
ಖ್ಯತೆಯಿಂ ಹಲವು ಬ್ರತಂಗಳಂ ಚರಿಯಿಸಿಯುಂ
ವಿತರಣವೊಂದವೆ ಜನ್ಮ
ಬ್ರತವೆಂದನುತಿಪ್ಪುದಾರನಮಿತ ಚಮೂಪಂ ॥ 39 ॥

ಸಮುದ್ರ ವರ್ಣನೆ

ಸ್ರಗ್ಧರೆ ॥ ಗಂಭೀರ ಸ್ಫಾರವೇಳಾಬಹಳಪರಿವೃಢಲ್ಲೋಲಕಲ್ಲೋಲಮಾಲಾ
ರಂಭ ಪ್ರೋಡ್ಡೀನಫೇನಪ್ರಬಳಜಳಚರಲ್ಲೋಠಪಾಠೀನಕುಂಭ
ತ್ಕುಂಭೀರಾಭೀಳನಕ್ರ ಪ್ರಕರ ಕಮಠನೀರೇಭರತ್ನ ಪ್ರಭಾವೋ
ಜೃಂಭ ಪ್ರೋದ್ಭಾಸಿವೀಚೀನಿಚಯಘನಘನಧ್ವಾನರೌದ್ರಂ ಸಮುದ್ರಂ ॥ 40 ॥

ಬೆಣ್ಣೆಕಲ್ಲು

ಉ ಮಾ ॥ ಸಾಗರದಂತಜಸ್ರ ಜಳಪೂರ್ಣತಟಾಕಚಯಂಗಳಿಂ ವನಂ
ಪೂಗಮಹೀರುಹಂ ಕದಳಿ ತೆಂಗು ಲವಂಗ ತಮಾಳಜಾಳದಿಂದೆ
ಬಾಗಿಫಲಂಗಳಿದೆಸೆವ ಕಯ್ವೊಲನೊಪ್ಪುವ ಗಂಧಶಾಳಿಯಿಂ
ದಾಗಳು ಬೆಂಣ್ಣೆಕಲ್ಲೆಸೆದು ತೋರ್ಪುದು ಕೋಗಳಿನಾಡೊಳರ್ತ್ಥಿಯಿಂ
॥ 41 ॥

ಮ ವಿ ॥ ಸಿರಿಸಂ ಕಂಮ್ಮರನೀಳೆ ಬಾಳೆವಕುಳಂ ದಾಳಿಂಬವಶ್ವಾದ ತಾ
ಳಗೆ ನೇಜಿಲ್ಘನಸಾಂಬ್ರವತ್ತಿ ತಿಳಕಂ ಕಂಕೆಲ್ಲ ಪುಂನ್ನಾಗ ಪಾ
ದರಿ ಪೂಗದ್ರುಮ ಕೌಂಗು ತೆಂಗು ಬದರಿ ಖರ್ಜೂರ ನಾರಂಗ ಕೇ
ಸರಮೆಂದಿಂತಿವಱಿಂದ ರಂಜಿಸಿವುದುದ್ಯಾನಂ ಪುರೋಪಾಂತದೊಳ್
॥ 42 ॥

ಕಂ ॥ ಶುಕಪಿಕಮರಾಳಕೇಕೀ
ಪ್ರಕರ ಚಕೋರ ದ್ವಿರೇಫಸಂಕುಳದ ರವಂ
ಪ್ರಕಟಿಸಲುದ್ಯಾನವನಂ
ಮಕರಧ್ವಜನಿಕ್ಕೆದಾಣಮೆನೆ ಸೊಗಯಿಸುಕುಂ ॥ 43 ॥

ಕಳೇಶಮುನಿ

ಉ ಮಾ ॥ ಧಾರಿಣಿಯೊಳ್ ವಿರಾಜಿಸುವ ಕಳ್ಪಕುಜಂ ಜಡೆವೊತ್ತುದೋ ರಸಾ
ಧಾರಮತಾಳ್ದಿತೋ ಪರುಸ ಲಾಕುಳಮಂ ಧರಿಸಿತ್ತೋ ಮೇಖಳಾ
ಸಾರಮ ಕಾಮಧೇನು ತಳೆಯಿತ್ತೆನೆ ತಾಪಸವೇಶದಿಂದ ಲ
ಕ್ಷ್ಮೀರಮಣೀ ಕಳೇಶ್ವರನ ಕೀರ್ತ್ತಿಸುವರ್ಬ್ಬುಧರೊಲ್ದು ಸಂತತಂ ॥ 44 ॥

9) ಯೇಣಗಿ 37, ಕ.ವಿ.ಶಾ.ಸಂ. I, ಕ್ರಿಶ. 1259

ಇದರಲ್ಲಿ ಯಾದವ ದೊರೆ ಕಂಧರದೇವನ ಆಳಿಕೆಯಲ್ಲಿ ಹೂವಿನ ಹಡಗಲಿಯ ಮಹಾಜನರು ಕುಸುಮನಾಥ ದೇವರಿಗೆ ಜೀರ್ಣೋದ್ಧಾರಕ್ಕಾಗಿ ನೀಡಿದ ಭೂದಾನವನ್ನು ಹೇಳಿದೆ.

ಪೂವಿನಪಡಂಗಿಲೆ

ಚಂ ಮಾ ॥ ಬಳಸಿದ ಗಂಧಸಾಳಿಯ ಸುಕಾಳಿಗಳಿಂಚರದಿಂದೆ ನಂದನಾ
ವಳಿಗಳಿ ತಳ್ತ ಕೋಕಿಲರವಂಗಳಿನುದ್ಘಸುಗಂಧ ಪುಜ್ಜಿಸಂ
ಕುಳದೊಳು ಬಂಡನುಂಡು ನೊರೆದಾಣತಿಗೆಯ್ವ ಮದಾಳಿಗೇಯದಿಂ
ವಿಳಸಿತಮಾಗಿ ಪೂವಿನಪಡಂಗಿಲೆ ಸೇಬ್ಯಮಿಳಾತಳಾಗ್ರದೊಳ್ ॥ 45 ॥

ಕಂ ॥ ಸೌಧದಮಣಿಭವನಂಗಳ
ದೀಧಿತಿಗಳ್ಗಳ್ಕೀ ಪೊಱಗಳ್ಗುಪವನಮಿದಿನಿ
ರ್ವಾದಿತವಿದಿನರಶ್ಮಿಗ
ಸಾಧಿತವೆಂದಿರ್ಪ್ಪುದಿಲ್ಲಿ ಕರ್ತ್ತಲೆ ವನದೊಳ್ ॥ 46 ॥

ಚಂ ಮಾ ॥ ಸರಸಿಜಷಂಡದಿಂ ಲತೆಯ ಮಂಟಪದಿಂ ಸಹಕಾರಲಕ್ಷ್ಮಿಯಿಂ
ಸುರಮಹೀಜಾತದಿಂ ಮಿಸುಪ ಚಂದನದಿಂದೆಲೆವಳ್ಳಿಯಿಂ ನಿರಂ
ತರವೆಸೆದಿರ್ಪ್ಪ ಪೂಗವನದಿಂ ನವಪಂಚಕಲೀಲೆಯಿಂ ಮನೋ
ಹರಮೆನಿಸಿರ್ದ್ದ ಪೂವಿನಪಡಂಗಿಲೆವೊಪ್ಪುವುದಾವಕಾಲಮುಂ ॥ 47 ॥

ಮಹಾಜನರು

ಉ ಮಾ ॥ ಭೂನುತ ಪಾನವೇ ನೆಗಳ್ದ ದಕ್ಷಿಣಗಂಗೆಯೆನಿಪ್ಪ ತುಂಗಭ
ದ್ರಾನದಿ ವಾರಣಾಸಿಪುರ ಪುಟ್ಟಿಪಡಂಗಿಲೆ ವಿಶ್ವನಾಥನುಂ
ಶ್ರೀನಿಖಿಳಾಮರಾರ್ಚ್ಚಿತಪದದ್ವಯ ಪಂಕಜಕುಸ್ಮನಾಥನಾ
ಸ್ಥಾನದೊಳಿರ್ದ್ದು ಪೂಜಿಪ ಧರಾಮರರೇ ಕೃತಕೃತ್ಯರಲ್ಲರೇ ॥ 48 ॥

ಶಾ ವಿ ॥ ಶ್ರೀಮತ್ ಪಂಕಜಗರ್ಭಸಂಭವಕುಳಪ್ರಖ್ಯಾತರುಂ ರುಗ್ಯಜು
ಸ್ಸಾಮಾಥರ್ವ್ವಣವೇದಶಾಸ್ತ್ರವಿದರುಂ ಶ್ರೀಬ್ಯಾಸವಾಲ್ಮೀಕಿ ವಿ
ಶ್ವಾಮಿತ್ರಾದಿಮುನೀಂದ್ರಸಚ್ಚರಿತರುಂ ನೂಱೆಪ್ಪತಿರ್ಪ್ಪರ್ಗ್ಗುಣ
ಸ್ತೋಮಳಾಂಕರಣ ಪ್ರಸಿದ್ಧರೆಸೆದರ್ ವಿಶ್ವಂಭರಾಭಾಗದೊಳ್ ॥ 49 ॥

ಕಂ ॥ ಸಾರಟ್ಟರಿತ್ತಲು ಮುಳಿದಡೆ
ಮಾರಿಗಳೀ ಪಾರ್ವ್ವರೆಂದು ಕಲಿಯಂ ದೇವಾ
ಗಾರದ ಪಳವಿಗೆ ದೂರದೆ
ಬಾರಿಸುವಂತಿರ್ಕ್ಕುಮಲ್ಲಿ ವಾತೋದ್ಧೂತಂ ॥ 50 ॥

ಹೂವಿನ ಹಡಗಲಿ ತಾಲ್ಲೂಕು

10) ಮೈಲಾರ 23, ಕ.ವಿ.ಶಾ.ಸಂ. I, ಕ್ರಿಶ. 1046

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ತ್ರೈಲೋಕ್ಯಮಲ್ಲ ದೇವನ ಆಳಿಕೆಯಲ್ಲಿ, ಪೆರ್ಗಡೆ ಕಾಳಿದಾಸರಸ ಎಂಬುವವನು ಸ್ವಯಂಭು ದೇವ ಮತ್ತು ಮೂಲಸ್ಥಾನ ದೇವರಿಗೆ ನೀಡಿದ ಭೂದಾನದ ದಾಖಲೆ ಇದೆ.

ಉ ಮಾ ॥ ದಕ್ಷಿಣಗಂಗೆಯ ದ್ವಿಜಸಮೂಹದ ಪೆರ್ಚ್ಚಿದ ವೇದಘೋಷದಿಂ
ದಕ್ಷಯಮೊಳ್ಪುವೆತ್ತ ಕುರುವತ್ತಿಯ ಸತ್ಪ್ರಭು ಧರ್ಮ್ಮಚಿತ್ತದಾ
ಪೇಕ್ಷೆಯೊಳೀಸ್ವರಾಲಯಕೆ ಕೆ x ನೆಯ x ಗೋತ್ರವೃದ್ಧಿಯಿ
ನ್ನಕ್ಷತೆಯಿಕ್ಕಿದರ್ದ್ವಿಜರಿದೇಂ ಕೃತಪುಣ್ಯನೋ ಮಂತ್ರಿಮಾಣಿಕ್ಯಂ ॥ 51 ॥

ಮ ವಿ ॥ ಧರಣೀನ್ದ್ರಂಬರಮೆಯ್ದೆ ಸಪ್ತತಳಮಂ ತಳ್ತರ್ತ್ತುಂಮ್ಮಧ್ಯದದೀ
ನರಲೋಕಂ ಹಿಮಸೇತುಮನ್ದರಮುಮಂ ಕೊಂಬೆತ್ತಿಸುತ್ತಿಱ್ದುವಾ
ಸುರಲೋಕಂಗಳಿನತ್ತಜಾಣ್ಡತಟದೊಳ್ಕೀರ್ತ್ತಿರ್ಲ್ಲತಾವಲ್ಲಿ
ಸ್ತರದಿಂ ಪರ್ವ್ವಿದ ಕಾಳಿದಾಸನ ಮಹಾಸತ್ವಂ ಯಶೋಭಾಗಿಯೋ ॥ 52 ॥

11) ಹಿರೇಹಡಗಲಿ 52, ಕ.ವಿ.ಶಾ.ಸಂ. I, ಕ್ರಿಶ. 1057

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ತ್ರೈಲೋಕ್ಯಮಲ್ಲದೇವನ ಆಳಿಕೆಯಲ್ಲಿ ಮಹಾಮಾತ್ಯ ದೇವರಸ ಎಂಬುವವನು ಪೊಸವದಂಗಿಲೆ ಗ್ರಾಮದಲ್ಲಿ ದೇಮೇಶ್ವರ ದೇವಾಲಯವನ್ನು ಕಟ್ಟಿಸಿ ನೀಡಿದ ದತ್ತಿಯನ್ನು ಹೇಳಿದೆ.

ಶಿವಸ್ತುತಿ

ಸ್ರಗ್ಧರೆ ॥ ಶ್ರೀಮದ್ದೇವಾಧಿದೇವಂ ತ್ರಿಭುವನಜನಕಂ ಸರ್ವ್ವಗಂ ವೇದವೇದ್ಯಂ
ಸೋಮಂಲೋಕತ್ರಯಾಭ್ಯರ್ಚಿತ ಪದಕಮಳಂ ಶಾಶ್ವತಂ ವಿಶ್ವವಿದ್ಯಾ
ಧಾಮಂ ನೂಱಿಪ್ಪದಿಂಬರ್ಗ್ಗಭಿಮತಫಳಮಂ ಮಾಳ್ಕೆ ದೇಮೇಶನೀಶಂ
ಭೂಮೀಂದ್ವಾತ್ಮಾಗ್ನಿತೀವ್ರದ್ಯುತಿಪವನಜಳವ್ಯೋಮಗಾತ್ರಂ ತ್ರಿಣೇತ್ರಂ ॥ 53 ॥

ಜಂಬೂದ್ವೀಪ

ಮ ವಿ ॥ ಗಿರಿಜಾಧೀಶ್ವರನಿತ್ತ ದಿಬ್ಯವರದಿಂ ಪಂಕೇಜಗರ್ಬ್ಭಂ ಸವಿ
ಸ್ತರದಿಂ ನಿರ್ಮ್ಮಿಸಿದಂ ಜಗತ್ತ್ರಯಮನಾಲೋಕಂಗಳೊಳ್ ರಂಜಿಕುಂ
ಧರೆ ತದ್ಧಾತ್ರಿಗೆ ಮಧ್ಯಮೈಯ್ದೆ ಲವಣಾಂಭೋರಾಶಿಸಂವೇಷ್ಟಿತಂ
ಸುರಶೈಳಂ ನಡುವಾಗಲೊಪ್ಪುವುದು ಜಂಬೂದ್ವೀಪಮಾದ್ವೀಪದೊಳ್ ॥ 54 ॥

ಕುಂತಳದೇಶ

ಕಂ ॥ ಹಿಮವದ್ಗಿರಿಯಿಂ ತೆಂಕಲು
ಕಮನೀಯಮೆನಿಪ್ಪ ಭಾರತೋರ್ವ್ವೀರಮಣೀ
ರಮಣೀಯ ಕುನ್ತಳೋಪಮ
ವಿಮಳಶ್ರೀ ನಿರತಮೆಸೆವ ಕುನ್ತಳದೇಶಂ ॥ 55 ॥

ತ್ರೈಳೋಕ್ಯಮಲ್ಲ

ಕಂ ॥ ಮುದದಿಂದದನಾಳ್ದಂ ಸಂ
ದದಟಿಂ ತ್ರೈಳೋಕ್ಯಮಲ್ಲನಾಹವಮಲ್ಲಂ
ಮದವದರಿ ಮೇಘಪವನಂ
ಸದಯಂ ಚಾಳುಕ್ಯಚಕ್ರವರ್ತ್ತಿಲಲಾಮಂ ॥ 56 ॥

ಸೋಮವಂಶ

ಚಂ ಮಾ ॥ ಸರಸಿಜಗರ್ಬ್ಭಮಾನಸಸುತಂ ಮುನಿಪುಂಗವನತ್ರಿ ತಮ್ಮನೀ
ಶ್ವರರಮಣೀಯನೇತ್ರಕಮಳೋದ್ಭವನಿಂದು ಸುಧಾಮಯಂ ಕಳಾ
ಧರನೆಳೆಗಾದುದಾತನಿನಶೇಷಜನಸ್ತುತಸೋಮವಂಶಮಾ
ವರವಿಧುನಂದನಂ ಬುಧನನನ್ತ ಬುಧಾರ್ಚ್ಚಿತಪಾದಪಂಕಜಂ ॥ 57 ॥

ಸತ್ಯಾಶ್ರಯ

ಮ ವಿ ॥ ಉದಯಂಗೆಯ್ದನುದಾತ್ತ ತತ್ಕುಳಸುರೇಶಾದ್ರೀಂದ್ರದುತ್ತುಂಗ ಕೂ
ಟದೊಳುಗ್ರಾರಿತಮೋಹರಂ ವಿಬುಧವಕ್ತ್ರೇಂದೀವರಾನನ್ದದಂ
ಮದವದ್ವೈರಿವಧೂದೃಗುತ್ಪಳವಿಳಾಸಧ್ವಂಸಿ ತೇಜೋನ್ವಿತಂ
ಕದನಾದಿತ್ಯನನೂನಸತ್ಯಸದನಂ ಸತ್ಯಾಶ್ರಯೋರ್ವ್ವೀಶ್ವರಂ ॥ 58 ॥

ತೈಲಪ

ಮ ವಿ ॥ ಕಲಿಸತ್ಯಾಶ್ರಯಭೂಮಿಪಾಲಜನಕಂ ರಾಷ್ಟ್ರಾವನೀರಾಜ ಮ
ಣ್ಡಲಮಂ ನುಂಗೆ ನಿಜಾಸಿರಾಹು ಸಲೆ ಸರ್ವ್ವಗ್ರಾಸದಿಂ ಮರ್ತ್ಯರಾ
ಜಲಸದ್ರಾಗರಸಾಬ್ಧಿಯೊಳ್ ಮುದದಿನೋಲಾಡಲ್ ಜಗಂ ಕೊಳ್ವದಟಂ
ಗೆಲೆ ಚಾಳುಕ್ಯದಿವಾಕರಂ ವಿನತಭೂಭೃಜ್ಜಾಲಪಂ ತೈಲಪಂ ॥ 59 ॥

ಮ ವಿ ॥ ಧರೆ ನಿಚ್ಚಂ ಪೊಗಳ್ಗುಂ ಪರ್ರೈಣಮದವಚ್ಚುಂಡಾಲನಂ ಧಾರಿಣೀ
ಧರಶಾರ್ದ್ದೂಲನನುದ್ಧತಾಹಿತ ಚಮೂನಿರ್ಮ್ಮೂಲನಂ ಸಂಗರಾ
ಜಿರಸಲಾಲನನುದ್ಘದಾನ ಸುಮನಸ್ಸಂಲೀಲನಂ ಸತ್ಯವಿ
ಸ್ತರವಾಕ್ಕೀಲನನರ್ತ್ಥಿಭೀತಸಕಲೋರ್ವ್ವೀಪಾಲನಂ ತೈಲನಂ ॥ 60 ॥

ತ್ರೈಲೋಕ್ಯಮಲ್ಲ

ಮ ವಿ ॥ ಧರೆಯೊಳ್ ಲೋಕಾಶ್ರಯಂವಿಶ್ರುತವಿಶದಯಶಂ ವಿಶ್ವರಾಜಾಧಿರಾಜಂ
ಪರಮೇಶಂಭೂತಳೇಂದ್ರಂ ಸಕಳ ಪರಮಭಟ್ಟಾರಕಂ ನಿತ್ಯಲಕ್ಷ್ಮೀ
ಶ್ವರನರ್ತ್ಥಿಬ್ರಾತಚಿನ್ತಾಮಣಿ ನಿರುಪಮ ವಾಗ್ವಲ್ಲಭಂ ಸದ್ಗುಣೌಘಾ
ಭರಣಂ ತ್ರೈಲೋಕ್ಯಮಲ್ಲಂ ನಿಜಕುಳತಿಳಕಂ ಸಂದವಾರ್ಯ್ಯೋರ್ದ್ಧಶೌರ್ಯಂ
॥ 61 ॥

ಆಹವಮಲ್ಲ

ಉ ಮಾ ॥ ಚೋಳಮದೇಭಪಂಚವದನಂ ಮಗಧಾಂಬುಧಿಬಾಡವಾನಳಂ
ಗೌಳತಮೋದಿನಾಧಿಪತಿ ಲಾಳಘನಾನಿಳನಂಗವಂಗವಂ
ಗಾಳವರಾಳಮಾಳವಕುಳಾಚಳವಾಸವನೆಂದಡಾಂಪರಾ
ರ್ಕ್ಕಾಳಕೃತಾಂತಕೃಷ್ಣಸಮಶೌರ್ಯ್ಯನನಾಹವಮಲ್ಲ ದೇವನಂ ॥ 62 ॥

ಗಂಗಪೆರ್ಮಾಡಿ

ಮ ಸ್ರ ॥
ಪರಿಯಿಟ್ಟೀ ಬಪ್ಪನೀ ಬಪ್ಪನೆ ಕಡುಮುಳಿಸಿಂ ಗಂಗಪೆರ್ಮ್ಮಾಡಿರಾಯಂ
ನಿರುತಂ ತಾನೆನ್ದು ಚೋಳಂ ಮದಮನುಡುಗಿದಂ ಗೌಳನಳ್ಕಾಡಿದಂ ಬ
ರ್ಬ್ಬರರಾಜಂ ಗರ್ಬ್ಬಮಂ ತಾನುಳಿದನಗಿದನಂಧ್ರಂ ತೆರಳ್ದೋಡಿಪೋದಂ
ಮರುಭೂಪಂ ಮಾಳವಂ ಮರ್ಗ್ಗಿದನತಿಭಯದಿಂ ಗೂರ್ಜ್ಜರಂ ಗೂಡುಗೊಂಡಂ
॥ 63 ॥

ವಿಕ್ರಮಾದಿತ್ಯ VI

ಮ ಸ್ರ ॥ ಪರಭೂಪಾಳಾನ್ಧಕಾರಂ ಪರಿಯೆ ವಿನತಭೂಭೃಚ್ಚಮೂಚಕ್ರವಾಕೋ
ತ್ಕರವತ್ಯುತ್ಸಾಹದಿಂದಂ ನಲಿಯೆ ವಿಬುಧವಕ್ತ್ರಾಬ್ಜವಾನನ್ದಮಂ ತಾ
ಳ್ದಿರೆ ವೀರಾರಾತಿ ನಾರೀನಯನಕುವಳಯಶ್ರೇಣಿ ತಾಂ ಕೂಡೆ ಸುತ್ತುಂ
ಕೊರಗಲ್ ಲೋಕಕ್ಕೆ ಕಣ್ಣುಂ ಗತಿಯೆನಲೆಸೆದಂ ವಿಕ್ರಮಾದಿತ್ಯದೇವಂ
॥ 64 ॥

ಪೊಸವಡಂಗಿಲೆ

ಚಂ ಮಾ ॥ ಜಳನಿಧಿಯಿಂ ಪಳಂಚಲೆವನೇಕ ತಟಾಕದಿನಬ್ಜಷಣ್ಡದಿಂ
ಬೆಳದೆಱಗಿರ್ದ್ದ ಕೆಯ್ವೊಲದಿನುಂನತ ಚಂಪಕಚೋಚಮೋಚಪಾ
ಟಳಪನಸಾಂಬ್ರ ಪೂಗವನ ನಾಗಲತಾಳಿಯಿನಗ್ರಹಾರಮಂ
ಗಳಮಣಿದರ್ಪ್ಪಣಂ ಪೊಸವಡಂಗಿಲೆಯೊಪ್ಪುವದೀ ಧರಿತ್ರಿಯೊಳ್ ॥ 65 ॥

ಉ ಮಾ ॥ ತೀಡುವ ತಂಬೆಲರ್ಬ್ಬಳಸಿ ತದ್ವನಲಕ್ಷ್ಮಿಯ ಮುಂದೆ ಮಂಗಳಂ
ಬಾಡುವ ತುಂಬಿ ಕೋಡುವ ಪುಳಿಲ್ನಡೆಪಾಡುವ ಹಂಸೆ ರಾಗದಿಂ
ದಾಡುವ ಸೋಗೆ ಬಾದಿನೊಳವೋದಿನೊಳಂ ವಿಭುದಾಳಿಯಂ ತೊದ
ಲ್ಮಾಡುವ ಕೀರವೀ ಪೊಸವಡಂಗಿಲೆಯೊಪ್ಪುವ ನಂದನಂಗಳೊಳ್ ॥ 66 ॥

ಉ ಮಾ ॥ ಚಾರುತರಪ್ರವಾಳರುಚಿ ಮಿಂಚು ಮದಾಳಿ ಘನಾಳಿ ಮಲ್ಲಿಕಾ
ಕೋರಕಮಾಲಿಕಲ್ ಕುಸುಮರೇಣುಚಯಂ ಸುರಚಾಪವಾಂಬ್ರಭೂ
ಜೋರು ಪಳಂಗಳೋಳ್ಸೊನೆಯ ಸೋನೆಯೆನಲ್ನಿರುತಂ ಬಸಂತಮುಂ
ಕಾರುಮದೊಮ್ಮೆಯುಂ ಪೊಸವಡಂಗಿಲೆಯುದ್ಭವನಾಂತರಾಳದೊಳ್
॥ 67 ॥

ಚಂ ಮಾ ॥ ಎಲರಲಪಿಂ ತೆಱಂಬೊಳೆವ ಕೀಳೆಲೆ ಸೋಂಕೆ ಸಿತೇಕ್ಷುದಂಡದಿಂ
ಸುಲಲಿತಚೂತಪಕ್ವಫಳದಿಂದುಗುತಿರ್ಪ್ಪ ರಸಪ್ರವಾಹಮಂ
ಗಲೆ ತಣಿಯುಂಬ ಪೂಗವನ ನಾಗಲತಾ ನವಗನ್ಧಳಾಳಿಸು
ತ್ತಲುಮೆನೆ ರಂಜಿಕುಂ ಪೊಸವಡಂಗಿಲೆ ವಿಶ್ವಮಹೀತಳಾಗ್ರದೊಳ್ ॥ 68 ॥

ಚಂ ಮಾ ॥ ಜಳಜನಿಭಾಸ್ಯೆ ಕೈರವದಳಾಯತಲೋಚನೆ ಹಂಸಯಾನೆ ಪಾ
ಟಳಸಮಗನ್ಧಿ ಗುಚ್ಛನಿಬಿಡಸ್ತನಿ ಪಲ್ಲವಹಸ್ತೆ ಮತ್ತಕೋ
ಕಿಳರವೆ ಚಾರುಕೇಕಿಕಬರೀಭರೆ ತಾನೆನಿಸಿಪ್ಪ ತತ್ಪುರೀ
ಲಲನೆಯನಾರ್ಪ್ಪನೇ ಪೊಸವಡಂಗಿಲೆಯಂ ಪೊಗಳಲ್ ಚತುರ್ಮ್ಮುಖಂ
॥ 69 ॥

ಕಂ ॥ ಪುರ ಶೋಭೆಯನೀಕ್ಷಿಸಲೀ
ಶ್ವರನಗಧರಸಮರಸಮಿತಿಸುಮನೋವಿಮಾನೋ
ತ್ಕರರೆಳೆಗವತರಿಸಿದರೆನೆ
ಕರಮೆಸೆಗುಂ ಶಂಕರಾಚ್ಯುತಾವಸಪಥಂಗಳ್ ॥ 70 ॥

ಚಂ ಮಾ ॥ ಪುರಿಲಲನಾ ದುಕೂಲಮಗಳೊಳ್ಪರಿರಂಜಿಪ ನಿರ್ಮಳಾಂಬು ಭಾ
ಸುರನವಫೇನರಾಜಿಕಳಕಾಂಚಿವೊಲೊಪ್ಪಿರೆ ಕೋಟೆ ಪೀನಪೀ
ವರಕುಚ ಚಾರುಚೀನ ಚಳದಂಶುಕದನ್ತಿರೆ ಕೇತುಮಾಳೆ ವಿ
ಸ್ತರತರ ದಾನಧರ್ಮದ ತವರ್ಮ್ಮನೆಗಳ್ಮನೆಗಳ್ಮನೋಹರಂ ॥ 71 ॥

ಚಂ ಮಾ ॥ ಮನೆಮನೆ ಶಂಕರಾಚ್ಯುತಬುಧಾತಿಥಿಪೂಜೆಯಿನಗ್ನಿಹೋತ್ರದಿಂ
ದನುಪಮ ವೇದನಾದ ಮಠ ಸತ್ರಸಭಾಶಿವವಿಷ್ಣುವಾಗ್ನಿಕೇ
ತನತತಿ ಕೇರಿಗೇರಿಜನರಿಂ ಸಲೆ ತಿಂತಿಣಿ ಬೀದಿವೀದಿ ತಾ
ನೆನಿಸುವುದಾಗಳುಂ ಪೊಸವಡಂಗಿಲೆ ವಿಶ್ವಮಹೀತಳಾಗ್ರದೊಳ್ ॥ 72 ॥

ಕಂ ॥ ಜನಮೇಜಯದತ್ತಿ ಮಹೀ
ವನಿತಾಮಣಿಮಯಕುಚಾಗ್ರಹಾರಂ ಸಲೆಸ
ನ್ನುಪಮಮಹಾಗ್ರಹಾರಂ
ಜನವನ್ದ್ಯಂ ಧರೆಗೆ ಪೊಸವಡಂಗಿಲೆ ಚೆಲ್ವಂ ॥ 73 ॥

ಕಂ ॥ ಪೊಸಕಾವ್ಯಂ ಪೊಸಗೇಯಂ
ಪೊಸವಾದ್ಯಂ ಪೊಸವಿನೂತರಸವಂ ನೃತ್ತಂ
ಪೊಸವಸ್ತು ಪೊಸವಿಳಾಸಂ
ಪೊಸದೇಸೆ ಸಂಮನ್ತು ಪೊಸವಡಂಗಿಲೆಗೆಲ್ಲಾ ॥ 74 ॥

ಉ ಮಾ ॥ ಶ್ರೀಲಲನೇಶರಂ ಪೊಸವಡಂಗಿಲೆಯಬ್ಜಜವಂಶಮುಖ್ಯರಂ
ಪಾಲಿತಧರ್ಮರಂ ಕೃತವರಾಧ್ವರರಂ ಬಹುವೇದಶಾಸ್ತ್ರವಾ
ಕ್ಕೀಲರನರ್ತ್ಥಿಜಂಗಮಸುರಾವನಿಜಾತರನೆಯ್ದೆ ಮೆಯ್ನುವಿ
ನ್ನಾಲಗೆಯಾದಡಂ ಕಮಳಸಂಭವನುಂ ಪೊಗಳಲ್ಸಮರ್ಥನೇ ॥ 75 ॥

ಮಹಾಜನರು

ಮ ವಿ ॥ ವರದ ಬ್ಯಾಕರಣಾಗಮಂ ಸ್ಮೃತಿಪುರಾಣಸ್ತೋಮ ಷಟ್ತರ್ಕವಿ
ಸ್ತರವಾಗ್ವಲ್ಲಭರುದ್ಧನಿಶ್ಚಳ ಲಸಲ್ಲಕ್ಷ್ಮೀವರಂ ಭೂನುತಾ
ಧ್ವರದೀಕ್ಷಾಯಜಮಾನರೆನ್ದು ಪೊಗಳ್ಗುಂ ಸರ್ವ್ವೋರ್ವ್ವಿನೂಜಿಪ್ಪದಿಂ
ಬರನುದ್ದಾಮವಿಡಂಬರಂ ವಿಜಯಕೀರ್ತ್ತಿಶ್ರೀ ಲತಾಲಂಬರಂ ॥ 76 ॥

ತ್ರಿವಿಕ್ರಮದೇವ

ಕಂ ॥ ಸರಸೀಜಗರ್ಭ್ಭನ ಮಾನಸ
ವರಪುತ್ರಂ ಕೌಶಿಕಂ ತದೀಯಾನ್ವಯ ಶೇ
ಖರರತ್ನನೆಸೆದನಿಳೆಯೊಳ್
ಮುರಹರಸಮವಿಕ್ರಮಂ ತ್ರಿವಿಕ್ರಮದೇವಂ ॥ 77 ॥

ಮ ವಿ ॥ ವಿಮಳಜ್ಞಾನ ಚತುರ್ಮ್ಮುಖಂ ಕೃತಮಖಂ ಸೌಜನ್ಯಲಕ್ಷ್ಮೀಸಖಂ
ಸಮದಾರಾತಿವಿಘಾತಶಾತವಿಶಿಖಂ ಸದ್ವಿದ್ಯೆಗೋಜಂ ಜನಾ
ಳಿಮನೋಜಂ ರವಿತೇಜನರ್ತ್ಥಿಸುರಭೂಜಂ ಸಜ್ಜನಾರಾಧಿತ
ಕ್ರಮನತ್ಯುದ್ಧ ಪರಾಕ್ರಮಂ ವಿಮಳ ಲಕ್ಷ್ಮೀತ್ರಿಕ್ರಮಂತ್ರಿಕ್ರಮಂ ॥ 78 ॥

ಅಕಲಿಮಯ್ಯ

ಕಂ ॥ ತನಯಂ ತ್ರಿಕ್ರಮದೇವಂ
ಗನವದ್ಯಂ ಕೌಶಿಕಾನ್ವಯಾಂಬುಜಸೂರ್ಯ್ಯಂ
ಕನಕಧರಾಧರ ಧೈರ್ಯ್ಯಂ
ಜನವಿನುತೌದಾರ್ಯ್ಯ ನಕಲನಕಲಂಕಯಶಂ ॥ 79 ॥

ಕಂ ॥ ಮನುಚರಿತನಕಲಿಮಯ್ಯಂ
ಗನುಜಂ ದೇಮೇಶಪದಪಯೋರುಹ ಭೃಂಗಂ
ವಿನುತಂ ದೇಮರಸಂ ಸ
ಜ್ಜನನಿಧಿ ವಿಟಚಕ್ರವರ್ತ್ತಿ ಕಲಿಯುಗಕಾಮಂ ॥ 80 ॥

ದೇಮರಸ

ಕಂ ॥ ವನರುಹವದನದ ಮದಪಿಕ
ನಿನದದ ಗುರುಕುಚದ ಕಂಬುಕಂಠದ ಮೃಗಲೋ
ಚನದೆ ಮಳಯರುಹಗಂಧವ
ವನಿತಾನಿಕರಕ್ಕೆ ದೇಮನಭಿನವಕಾಮಂ ॥ 81 ॥

ಚಂ ಮಾ ॥ ಚಲಪಿಳದುಂನ್ನತೀಯ x x ಬೀರದುದಾರದ ಜನ್ಮಭೂಮಿಯಂ
ಮಲೆವರ ಮಾರಿಯಂ ಮಿಗುವರಾರ್ಜ್ಜಗದೊಳ್ ಜಯದಂಕಕಾಜನಂ
ಸುಲಲಿತ ರೂಪನಂ ಸುಬಗಿನಾಗರಮಂ ವಿಟಚಕ್ರವರ್ತ್ತಿಯಂ
ಕಲಿಯುಗಕಾಮನಂ ನೆಗಳ್ದ ದೇಮನನುದ್ಭಯಶೋಭಿರಾಮನಂ ॥ 82 ॥

ಉ ಮಾ ॥ ಮೇನಕೆರಂಭೆಯೂರ್ಬ್ಬಸಿತಿಳೋತ್ತಮೆಯಂನರೆನಿಪ್ಪ ವಾರಕಾ
ಸ್ತಾನಿಕರಗಳುದ್ಭವರಚಕ್ಷುವೊಪ್ಪೆ ನಿಜಾಂಕಮಾಲೆಯಂ
ಮಾನವಮನ್ಮಥಂ ಬರೆದನಾದರದಿಂ ವಿಟಚಕ್ರವರ್ತ್ತಿಧಾ
ತ್ರೀನುತವಾಗಿ ತಿಲ್ ತಿವುಳ ಕಂನಡ ನಾಗರದಕ್ಕರಂಗಳಂ ॥ 83 ॥

ಕಂ ॥ ಕುರುಳಂ ಮುಡಿಯಂ ದಂತಮ
ನುರಮಂ ಕುಗೆಯುನೂರುವಂ ಬೆರಳಂ ದೇ
ಮರಸಂಗೆ ಕೊಟ್ಟು ಸತಿಯ
ರ್ವ್ವರ ಕೆಪ್ಪಂ ಕಚ್ಚಿ ಚಕ್ರವರ್ತಿಯ ಸಭೆಯೊಳ್ ॥ 84 ॥

ಕಂ ॥ ಗೋಳಿಟ್ಟ ಸತಿಯರಂ ವೈ
ಹಾಳಿಯನೇಱಿದನವಳ್ದಿರ ಡಾವಣಿಯಂ
ಲೀಲೆಯೊಳೆ ಕಟ್ಟಿದಂ ಗುಣ
ಬಳಂ ವಿಟಚಕ್ರವರ್ತ್ತಿ ವಿಭು ದೇಮರಸಂ ॥ 85 ॥

ಕಂ ॥ ವಂದನಮಂ ಕಿಳಿಗಿಳಮಂ
ಚಂದನ ಚಾಣಕ್ಯ ಚೌಕ ಪನ್ನವಳಗೆಯಿಂ
ಸನ್ದಣಿಗಡಗನಿಕರಮ
ನ್ನೊನ್ದರೆನಿಮಿಷದೆ ಕೊಣ್ಡಂ ವೀರಪಾಣ್ಡ್ಯಂ ॥ 86 ॥

ಶಂಕರ

ಮ ಸ್ರ ॥ ನುತಭಾರದ್ವಾಜಗೋತ್ರಾಂಬುಜದಿವಸಕರಂ ಚಂದಿರಾಜಾತ್ಮಜಾತಂ
ಪತಿಭಕ್ತಾಚಾರೆ ಚಟ್ಟಾಂಬಿಕೆಯ ತನಯನುದ್ದಾಮಸಂಪನ್ನಗುಣಾ
ನ್ವಿತನರ್ತ್ಥಿವ್ರಾತಚಿಂತಾಮಣಿ ಕುಳತಿಳಕಂ ದಾನಿ ದೇಮೇಶಪಾದೋ
ರ್ಜ್ಜಿತ ಲಕ್ಷ್ಮೀಕಿಂಕರಂ ಶಂಕರನೆಳೆಗೆಸೆದಂ ವಿಪ್ರವಿದ್ಯಾಧರೇಂದ್ರಂ ॥ 87 ॥

ವಿಷ್ಣುವರ್ಧನ

ಮ ವಿ ॥
ತುಳುದೇಶಂ ಚಕ್ರಕೂಟಂ ತಳವನಪುರ ವುಚ್ಚಂಗಿ ಕೋಳಾಲವೇಳುಂ
ಮಲೆವೆಲ್ಲೂರ್ಕ್ಕಂಚಿ ಕೊಂಗರ್ವ್ವಿಸುವಹರಿಯಘಟ್ಟಂ ಬಯಲ್ನಾಡು ನೀಳಾ
ಚಳದುರ್ಗಂ ರಾಯರಾಯೋತ್ತಮಪುರಿ ತೆರೆಯೂರ್ಕ್ಕೋವತೂರ್ಗ್ಗೊನ್ದವಾಡಿ
ಸ್ಥಳಮಂ ಭ್ರೂಭಂಗದಿಂ ಕೊಂಡತುಳಭುಜಬಳಾಟೋಪನೀ ವಿಷ್ಣುಭೂಪಂ ॥ 88 ॥

ಕಂ ॥ ತಳಕಾಡು ಕೊಂಗು ನಂಗಲಿ
ತುಳುನಾಡು ನೊಳಂಬವಾಡಿ ಗಂಗಮಹೀಮ
ಣ್ಡಳಮಂ ಬನವಸಿಯೆಂಬಿವ
ನೆಳಕುಳಿಗೊಣ್ಡಂ ಜಿತಾರಿ ವಿಷ್ಣುನೃಪಾಳಂ ॥ 89 ॥

ಶಂಕರನಾಯಕ

ಚಂ ಮಾ ॥ ಸುರಕರಿಯನ್ತೆ ದಾನಿ ಹರಿಯನ್ತೆ ವಿನೀತನುಮೇಶನನ್ತೆ ವಿ
ಸ್ತರವೃಕ್ಷಸಂಯುತಂ ಕಮಳಬಾನ್ಧವನಂತೆ ಸದಾನಭೋಗನಂ
ಬರತಳದನ್ತೆ ರಾಜಕವಿಮಿತ್ರಗುರುದ್ವಿಜಸೇಬ್ಯನೆಂಬುದಾ
ದರದೊಳೆ ಕೂರ್ತ್ತು ಬೆಳ್ಳಟೆಯ ಶಂಕರನಾಯಕನಂ ಜಗಜ್ಜನಂ ॥ 90 ॥

ಶಾನ್ತಿವರ್ಮ

ಮ ವಿ ॥ ವಿನಯಾಂಭೋನಿಧಿ ಶಾನ್ತಿವರ್ಮ್ಮ ವಿಭುಗಂ ಶ್ರೀಚಂದ್ರಿಕಾಕಾನ್ತೆಗಂ
ತನಯಂ ಕೇಶವದೇವನಾ ಪ್ರಭುವಿನ ಸ್ತ್ರೀ ಕಂಚಿಯಕ್ಕಂಗವಾ
ಮನುಮಾರ್ಗ್ಗಂಗುಣಿ ಕೇಶವರ್ಗ್ಗವುದಯಂಗೆಯ್ದಂ ನುತಂ ವಂಶಮ
ಣ್ಡನಭೂಷಾಮಣಿ ಶಾನ್ತಿವರ್ಮ್ಮನನಘಂ ಶಿಷ್ಟೇಷ್ಟಕಳ್ಪದ್ರುಮಂ ॥ 91 ॥

ಮ ವಿ ॥ ಹರಿಯೆನ್ತನ್ತೆವಿನೀತನಂಬುನಿಧಿಯೆನ್ತನ್ತುದ್ಧಲಾವಣ್ಯನೀ
ಶ್ವರನೆನ್ತನ್ತೆ ವೃಷಾಂಕನುಷ್ಣಕರನೆನ್ತನ್ತೆ ಪ್ರತಾಪಾನ್ವಿತಂ
ಧರೆಯೆನ್ತನ್ತೆ ಸಮಸ್ತಗೋತ್ರನಿರತಂ ನಾಗೇಂದ್ರನೆನ್ತನ್ತೆವಿ
ಸ್ತರಭೋಗಂ ವಿಭು ಶಾನ್ತಿವರ್ಮ್ಮನನಘಂ ಸದ್ಧರ್ಮ್ಮಧರ್ಮ್ಮಾತ್ಮಜಂ ॥ 92 ॥

ಆಲಿಮಯ್ಯ

ಮ ಸ್ರ ॥ ವರಭಾರದ್ವಾಜಗೋತ್ರಾಗ್ರಣಿ ವಿಬುಧನುತಂ ಶಾನ್ತಿವರ್ಮ್ಮಾನುಜಂ ಶ್ರೀ
ಧರನುರ್ವ್ವೀಲೋಕಚಿನ್ತಾಮಣಿ ಸಕಳ ಕಳಾಧಾರನಪ್ಪಾಲಿಮಯ್ಯಂ

ಸ್ಥಿರತೇಜಂ ವಿಪ್ರರಾಜಂ ವಿನಯಜಳಧಿ ದೇಮೇಶಪಾದಾಬ್ಜಭೃಂಗಂ
ಹರಿಣಾಂಕ ಕ್ಷೀರರತ್ನಾಕರ ಸದೃಶ ಲಸತ್ಕೀರ್ತ್ತಿ ಲಕ್ಷ್ಮೀನಿವಾಸಂ ॥ 93 ॥

ಕಂ ॥ ಜನವನ್ದ್ಯನಾಲಿಮಯ್ಯಂ
ಗನುಜಂ ನಿಜವಂಶ ವನಜವನ ದಿವಸಕರಂ
ಮನುಚರಿತಮ್ಮಹದೇವಂ
ಕನಕಾಚಳ ಧೈರ್ಯ್ಯನೆಸೆದನುರ್ವ್ವೀತಳದೊಳ್ ॥ 94 ॥

12) ಹಿರೇಹಡಗಲಿ 55, ಕ.ವಿ.ಶಾ.ಸಂ. I, ಕ್ರಿಶ. 1060

ಇದರಲ್ಲಿ ದೇಮ ಎಂಬುವವನನ್ನು ಹೊಗಳಿದೆ.

ಮ ವಿ ॥ ಅನತಾರಾತಿಗಜೇಯನಂ ಪತಿಹಿತ ಪ್ರಾರಂಭದೊಳ್ ವೈನತೇ
ಯನನನ್ಯಾಂಗನೆಗಂಜನೇಯನನುದೊದ್ಯತ್ಸಕ್ತಿಯೊಳ್ಕಾರ್ತಿ ಕೇ
ಯನಿಷ್ಷೀಪುವಿಧೇಯನಂದೃಢವಚೋಪಾಧ್ಯಾಯನಂವಧಿಗ
ಧಿನ ರಾಧೇಯನನಿಂದ್ರ ಕಾಯನಜನಂ ಬ್ಯಾವರ್ಣ್ನಿಕುಂ ದೇಮನಂ ॥ 95 ॥

13) ಹೂವಿನಹಡಗಲಿ 83, ಕ.ವಿ.ಶಾ.ಸಂ. I, ಕ್ರಿಶ. 1090

ಕಲ್ಯಾಣದ ಚಾಲುಕ್ಯರ ದೊರೆ ತ್ರಿಭುವನಮಲ್ಲ ಆರನೆಯ ವಿಕ್ರಮಾದಿತ್ಯನ ಆಳಿಕೆಯಲ್ಲಿ ಅವನ ಮಾಂಡಲಿಕ ಮಹಾಮಂಡಲೇಶ್ವರ ತ್ರಿಭುವನಮಲ್ಲ ಪಾಂಡ್ಯದೇವನು ಆಳುತ್ತಿರುವಾಗ ಶೂರಬ್ರಾಹ್ಮಣ ಸೇನಾಪತಿ ರವಿಗನ ಪತ್ನಿಯಾದ ರೆಬ್ಬಲದೇವಿಯು ಪೂವಿನಪೊಸವಡಂಗಿಲೆಯಲ್ಲಿ ಕೇಶವ ದೇವಾಲಯ ನಿರ್ಮಿಸಿ ಅನೇಕ ದಾನಗಳನ್ನು ನೀಡಿದುದನ್ನು ಇದರಲ್ಲಿ ಹೇಳಿದೆ.

ರವಿಗ ದಂಡಾಧಿಪ

ಉ ಮಾ ॥ ಆವಜಿದಿಜ್ಞ್ವಿನ್ನೆವರವಿನ್ತಿನಿತಂ ರವಿದೇವನೊಲ್ದು ಸಂ
ಭಾವನೆಯಿನ್ದೆ ಮಾಡಿಸಿದ ಸಂಜೆಮಟಂ ಪ್ರಪಗೋಪ್ರಚಾರ ವಿ
ಶಾವಸಥಂ ಮುರಾರಿಭವನ ದ್ವಿಜಸತ್ರಮಿ xxx ತ್ತಿರೆ ನಾ
ನಾವಿಧ ಧರ್ಮ್ಮಮಿಲ್ಲದೆಡೆಯಿಲ್ಲ ಧರಿತ್ರಿಯೊಳೆಲ್ಲಿ ನೋಳ್ಪೊಡಂ ॥ 96 ॥

ಉ ಮಾ ॥ ನರ್ಮ್ಮದೆ ದೇವಸಿನ್ಧು ಯಮುನಾನದಿಯೆಂಬಿವು ಮುಖ್ಯವಾಗೆ ಸ
ತ್ಕರ್ಮ್ಮನಿವಾಸಮಾದಮಳತೀರ್ತ್ಥತಟಂಗಳೊಳೆಲ್ಲಮೊಲ್ದು ತಾಂ
ನಿರ್ಮ್ಮಿಸಿದಂ ಸುರಾಯತನಮಂ ಪಲವಂ ರವಿದಂಡನಾಯಕಂ
ಧರ್ಮ್ಮವಿನೋದಿ ನಿರ್ಮ್ಮಳಯಶೋನಿಧಿ ಧಾರ್ಮ್ಮಿಕಧರ್ಮ್ಮನನ್ದನಂ ॥ 97 ॥

ರೆಬ್ಬಲದೇವಿ

ಚಂ ಮಾ ॥ ಹರಿಯ ವಿಶಾಳ ವಕ್ಷಮನಳಂಕರಿಸಿಜ್ದಿ ಸರೋಜವಾಸಿಗಂ
ಗಿರೀಶನ ದೇಹಭಾಗಮನಳಂಕರಿಸಿಜ್ದಿ ನಗಾತ್ಮಜಾತೆಗಂ
ಸುರಪತಿಯಂಕಪೀಠಮನಳಂಕರಿಸಿಜ್ದಿ x ಳಾರುಪುತ್ರಿಗಂ
ದೊರೆ ರವಿದಣ್ಣನಾಥನ ಮನಜ್ಪ್ರಿಯೆ ರೆಬ್ಬಲದೇವಿ ಪೆಂಪಿನೊಳ್ ॥ 98 ॥

ಯೋಗೀಶ್ವರ

ಕಂ ॥ ಶ್ರೀವತ್ಸನೆಂಬ ರಿಷಿಯ ಮಹಾ
ಹಾವಂಶದೊಳೊಗೆದು ಗೋತ್ರಮಂಡನನಾವ
ಶ್ರೀವತ್ಸಪದಪವಿತ್ರಿತ
ಭಾವಂ ಯೋಗೀಶ್ವರ ಚತುರ್ವ್ವೇದವಿದಂ ॥ 99 ॥

ಕಂ ॥ ಅಧಿಗತಸಮಸ್ತಶಾಸ್ತ್ರಂ
ವಿದ್ಯಾಯಶೋವಿಭಾಸೀಕೃತನಿಖಿಳಮುಖಂ
ಮಧುಮರ್ದನಪದ ಪಯೋರುಹ
ಮಧುಕರನುದ್ಧೂತಕಳಿಕಳಂಕಪ್ರಸರಂ ॥ 100 ॥

ಕಂ ॥ ಸಕಲಶ್ರುತಿಗುರುವೆನಿಸಿ
ಟ್ಟಿಕಳಂಕಂಗಾ ದ್ವಿಜೋತ್ತಮಂಗೊಗೆತನ್ದಂ
ವಿಕಳಿತ ದುರಿತೌಘಂ ದ್ವೇ
ದಿಕುಮಾರಸ್ವಾಮಿನಾಮಧೇಯನಜೇಯಂ ॥ 101 ॥

ಪಡಂಗಿಲೆ

ಕಂ ॥ ನೆಗಜ್ದಿಟ್ಟಿ ತೆಂಕನಾಡೊಳ್
ಬಗೆಗೊಳಿಸುವ ಪೂಗನಾಗವಲ್ಲೀವನದಿಂ
ಸೊಗಯಿಸುವ ಪಡಂಗಿಲೆ ವಿ
ಪ್ರಗಣಾಸ್ಪದಮಾಗೆ ತನಗೆ ಜನ್ಮಸ್ಥಾನಂ ॥ 102 ॥

ಕಂ ॥ ಕಲಿಯವರ ಸೀಮೆಯಂ ಮೆ
ಟ್ಟಲು ವೊಲ್ಲ ಮೊಱಗೆ ಪೆಜ್ಚಿ ಹೋಮದ ಮೊಗೆಸು
ತ್ತಲುಮಿರೆ ಕೋಟೆವೊಲದು ತನ
ಗಲಂಘ್ಯಮೆಂಬೊಂದು ಬಗೆಯಿನಾ x x ವೇಳ್ಕುಂ ॥ 103 ॥

ಕೇಶವ ದೇವಾಲಯ

ಉ ಮಾ ॥ ಆ ನೆಗೞ್ದಿಟ್ಟಿ ಪೂವಿನಪಡಂಗಿಲೆಯೊಳ್ಪಿರಿದಪ್ಪ ಭಕ್ತಿಯಿಂ
ದಾನವಿನೋದೆ ಧರ್ಮ್ಮದ ತವರ್ಮ್ಮನೆ ರೆಬ್ಬಲದೇವಿ ಶೋಭೆಯು
ದ್ದಾನಿಯುನಾನ್ತು ಕಣ್ಗೆಸೆಯೆ ಕೇಶವ ಗೇಹಮನಿಷ್ಟಶಿಷ್ಟಸ
ನ್ತಾನಮನಾರತಂ ಪೊಗಳೆ ಮಾಡಿಸಿದಳ್ ಭುವನೈಕವನ್ದ್ಯಮಂ ॥ 104 ॥

ಕಂ ॥ ಕಳವೆಯ ಗೞ್ದೆಯುಮಂ ಕ
ಣ್ಗೊಳಿಪಡಕೆಯ ತಳ್ತ ಬನಮುಮಂ ತದ್ವಿಪ್ರಾ
ವಳಿಯೊಸೆದು ತನಗೆಗುಡಲಾ
ಜಳರುಹನಾಭಂಗೆಗೊಟ್ಟಳವಳುತ್ಸವದಿಂ ॥ 105 ॥

ಕಂ ॥ ಅಡಕೆಯ ತೋಟದ ಗೞ್ದೆಯ
ನಡುವಣ ನೀರ್ವ್ವರಿಯ ಬಡಗಣದ ಪೂದೋಂಟಂ
ಗಡಿಂಬದೊಳದೊಂದೆ ಮತ್ತ
ಪ್ಪೊಡವಿಯೊಳೆನಿತನಿತು ಪುಷ್ಪಜಾತಿಯಿನೆಸೆಗುಂ ॥ 106 ॥

ಮ ವಿ ॥ ಇದು ಸದ್ಧರ್ಮನಿವಾಸಮಿನ್ತಿದಘಸಂಘೋನ್ಮೂಳನಸ್ಥಾನಮಿ
ನ್ತಿದು ಪುಣ್ಯೈಕನಿಕೇತಮಿನ್ತಿದು ಸಮಸ್ತೋರ್ವ್ವೀಜನಸ್ತುತ್ಯಮಿ
ನ್ತಿದು ಸಾಕ್ಷಾಜ್ಜಗದೇಕಪಾವನಮಿದಂ ಕಯ್ಕೊಣ್ಡು ಕಾದಂ ಮನೋ
ಮುದದಿಂ ವೈಷ್ಣವಲೋಕದೊಳ್ ರಮಿಯಿಕ್ಕುಂ ಚಂದಾರ್ಕತಾರಂಬರಂ
॥ 107 ॥

14) ಹೊಳಗುಂದಿ 93, ಕ.ವಿ.ಶಾ.ಸಂ. I, ಕ್ರಿಶ. 1097

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ತ್ರಿಭುವನಮಲ್ಲದೇವ ಆರನೆಯ ವಿಕ್ರಮಾದಿತ್ಯನ ಆಳಿಕೆಯಲ್ಲಿ ಚಾವುಂಡರಸನ ಮಗ ಮಹಾಮಂಡಲೇಶ್ವರ ಗಂಗರಸನು ಬಾಳೇಶ್ವರ ದೇವರ ಸೇವೆಗೆ ಭೂದಾನ ಮಾಡಿದುದನ್ನು ಹೇಳಿದೆ.

ಗಂಗರಸ

ಕಂ ॥ ಆತನ ತನಯಂ ಭುವನ
ಖ್ಯಾತಂ ಗಜರಿಪುಪರಾಕ್ರಮಂ ಸಕಳಗುಣ
ವ್ರಾತಂ ವಿಶಿಷ್ಟಜನಸಂ
ಘಾತಂ ವಿಕ್ರಾನ್ತತುಂಗನೆನಿಪಂ ಗಂಗಂ ॥ 108 ॥

ಉ ಮಾ ॥ ಚಾರುಚರಿತ್ರನೆಂದು ಬುಧಬಾನ್ಧವನೆನ್ದು ವಿವೇಕಿಯೆನ್ದು ವಿ
ಸ್ತಾರಿತ ಕೀರ್ತ್ತಿಯೆಂದು ಶುಚಿಯೆಂದು ಗುಣಾಕರನೆಂದು ವಿಶ್ವವಿ
ದ್ಯಾರಮಣೀಮನೋರಮಣನೆನ್ದು ದಯಾಪರನೆಂದು ಬಣ್ಣಿಕುಂ
ಧಾರಿಣಿ ಗಂಗನಂ ಸುಲಲಿತಾಂಗನನಾದಿ ಬುಧಪ್ರಸಂಗನಂ ॥ 109 ॥

ಚಂ ಮಾ ॥ ಕಲಿತನಮುಂಟು ದಾನಗುಣಮುಂಟು ಸುಖಾಸ್ಪದಮುಂಟು ಮಿಕ್ಕದೋ
ರ್ವ್ವಳದೊದವುಂಟುಪಾರ್ಜ್ಜಿತ ಯಶೋಧನಮುಂಟು ವಿವೇಕಮುಂಟು ನಿ
ಶ್ಚಳತೆ ವಿಶೇಷಮುಂಟು ಸೊಬಗುಂಟು ಸುಭಾವಹಮುಂಟು ಚಾರುನಿ
ರ್ಮ್ಮಳತರಭಾವಮುಂಟು ಪರಿಭಾವಿಸಿ ನೋರ್ಪ್ಪಡೆ ಗಂಗಭೂಪನೊಳ್
॥ 110 ॥

ಚಂ ಮಾ ॥ ಕದನದೊಳಾನ್ತರಾತಿಬಳಮಂ ತವಿಪಲ್ಲಿಗಿವಂ ಕೃತಾನ್ತನೆಂ
ಬುದು ನರನೆಂಬುದುಂ ಪರಮೇಶ್ವರನೆಂಬುದು ಕಾರ್ತ್ತಿಕೇಯನೆಂ ?
ಬುದು ಫಣಿವೈರಿಯೆಂಬುದು ವೃಕೋದರನೆಂಬುದು ಕಾಳಸೇನನೆಂ
ಬುದು ರಘುಜಾತನೆಂಬುದು ಧರಾವಳಯಂ ಕಲಿಗಂಗಭೂಪನಂ ॥ 111 ॥

ಮ ವಿ ॥
ಬಗೆಯಲ್ಕರ್ಮ್ಮಿನೊಳಾರ್ಪ್ಪಿನೊಳ್ ವಿಭವದೊಳ್ ಚಾತುರ್ಯ್ಯದೊಳ್ ಶೌರ್ಯ್ಯದೊಳ್
ಮಿಗಿಲಮ್ಮರ್ಮ್ಮಿವನಮ್ಮನಿಂದಮೆನಿಪೊಂದಾಳಾಪದೊಳ್ತಂದೆಗಿಂ
ದಗಿಯೊಳ್ ನೂರ್ವ್ವರಿಸಕ್ಕೆ ದಲ್ ಪಿರಿಯನೆಂಬನಿಂತು ನಾನಾವಿಧಂ
ನೆಗರ್ದ್ದಂ ಗಂಗನರಾತಿಭೂಭುಜ ಮನೋಭಂಗಂ ಧರಾಚಕ್ರದೊಳ್ ॥ 112 ॥

15) ಕುರುವತ್ತಿ 1, ಕ.ವಿ.ಶಾ.ಸಂ. I, ಕ್ರಿಶ. 1099

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ತ್ರಿಭುವನಮಲ್ಲನ ಆಳಿಕೆಯಲ್ಲಿ ಕುರುವತ್ತಿಯ ಮಹಾಜನರು ಅಭಿನವ ಸೋಮೇಶ್ವರ ದೇವರಿಗೆ ನೀಡಿದ ದತ್ತಿಯನ್ನು ಹೇಳಿದೆ.

ಕುರುವತ್ತಿ

ಕಂ ॥ ಇನ್ತು ನೆಗಟ್ದಗ್ರಹಾರಾ
ಭ್ಯನ್ತಿಕದೊಳ್ ತುಂಗಭದ್ರೆ ಪಶ್ಚಿಮಮುಖದಿಂ
ಸನ್ತತವಾಹಿನಿಯೆನಲಿ
ನ್ನಿನ್ತೆಂದೀ ಗ್ರಾಮವಿಭವಮಂ ಬಣ್ಣಿಪರಾರ್ ॥ 113 ॥

ಕಾಳಿದಾಸ

ಚಂ ಮಾ ॥ ಭುವನವಿನೂತಕೀರ್ತ್ತಿವನಿತಾ ಪ್ರಿಯನೆಂದು ಪರೋಪಕಾರಿಯೆಂ
ದವನತಪಾಳನೈಕಪಟುವೆಂದು ಧರಾಮರಪೂಜ್ಯನೆಂದು ಮಾ
ನವನಯಶಾಳಿಯೆಂದಸಮಸಾಹಸನೆಂದು ವಿನೀತನೆಂದು ಬಾ
ನ್ಧವ ಸುರಭೂಜನೆಂದವನಿ ಬಣ್ಣಿಸುತಿರ್ಪ್ಪುದು ಕಾಳಿದಾಸನಂ ॥ 114 ॥

ಕಂ ॥ ಸುತ್ರಾಮಸಮಂ ವಿಭವದೊ
ಳತ್ರೀಕ್ಷಣಜಾತನನ್ನನಾಶ್ರಿತಜನದೊಳ್
ಗೋತ್ರಪವಿತ್ರಂ ವಿಶ್ವಾ
ಮಿತ್ರಾನ್ವಯವಾರ್ದ್ಧಿಚಂದ್ರನೆಂದೆಳೆ ಪೊಗಳ್ಗುಂ ॥ 115 ॥

ಉ ಮಾ ॥ ತತ್ತನಯರ್ಸ್ಸಮಸ್ತಗುಣಸಂಯುತರಲ್ಲಿಯುಮೋರ್ವ್ವ ಸೂನುಲೋ
ಕೋತ್ತಮನಿಷ್ಟಬಾಂಧವಜನಾವಸಥಂ ಗುಣಿ ಸೋಮನಾಥನ
ತ್ಯುತ್ತಮವೃತ್ತರಾತನೊಡವುಟ್ಟಿದರಿರ್ವ್ವರುಮಲ್ಲಿ ಗಂಡರಾ
ದಿತ್ಯನುಮಾಶ್ರಿತಾಂಬುರುಹಮಿತ್ರರೆನಲ್ ಧರೆ ಬರ್ಮ್ಮದೇವನಂ ॥ 116 ॥

ಕಂ ॥ ಆ ನೆಗಟ್ದಿ ಸೋಮನಾಥನ
ಸೂನು ಸುಚಾರಿತ್ರನಮಳಗುಣಗಣಪಾತ್ರಂ
ಸಾನುನಯಂಮನುಜರೊಳಭಿ
ಮಾನಧನಂ ಕಾಳಿದಾಸನಿಷ್ಟಾವಾಸಂ ॥ 117 ॥

ಇನ್ನೂರ್ವರು ಊರೊಡೆಯರು

ಕಂ ॥ ಇನ್ತೂರೊಡೆಯ ಪ್ರಮುಖಂ
ಸನ್ತತವಿನ್ನೂರ್ವ್ವರಬಳರಂ ಪಾಳಿಸುತಂ
ಹನ್ತೃಗಳನ್ಮೂಳಿಸಿ ನಿ
ಶ್ಚಿನ್ತಂ ಸುಖದಿಂದಮಿರ್ದ್ದರಾರ್ಜ್ಜಿತಧರ್ಮ್ಮರ್ ॥ 118 ॥

ಕಂ ॥ ಇನ್ನೂರ್ವ್ವರ ಪ್ರಭಾವಮ
ನೆನ್ನಂದಿಗರಳವೆ ಬಣ್ಣಿಸಲ್ ಭಾವಿಪೊಡಾ
ಪನ್ನಗವರನ ಪಿತಾಮಹ
ನನ್ನರ್ಗ್ಗಮತರ್ಕ್ಯಮೆನ್ದೊಡಾವಂ ಪೊಗಳ್ವಂ ॥ 119 ॥

ಮ ವಿ ॥ ಶರಣಾಯಾತಜನಕ್ಕೆ ವಜ್ರಕವಚಮ್ಮಾಜ್ಞಾನ್ತ ವೀರಂಗೆ ಕೇ
ಸರಿ ಬಾಯಿವಿಟ್ಟೆರದಂಗೆ ಕಲ್ಪಮಹೀಜಂ ಶಾಸ್ತ್ರಕ್ಕೆ ತಾನಾಸ್ಪದಂ
ಪುರುಷಾರ್ತ್ಥಕ್ಕೆ ತವರ್ ಶ್ರುತಿಸ್ಮೃತಿಗೆ ತಾಂ ಲೀಳಾಗೃಹಂ ಧರ್ಮ್ಮದಾ
ಕರಮಿನ್ತೀ ಕುಜುವರ್ತ್ತಿವರ್ತ್ತಿಮಹಿದೇವಾನೀಕಮಿನ್ನೂರ್ವ್ವರುಂ ॥ 120 ॥

ಸೋಮನಾಥ

ಕಂ ॥ ಪ್ರಭು ಮೊದಲಾಗಿನ್ನೂರ್ವ್ವರ
ಶುಭಕರ್ಮ್ಮದಿನಿಲ್ಲಿ ತುಂಗಭದ್ರಾತಟದೊಳ್
ವಿಬುಧಾಭಿನವ ಸೋಮೇಶಂ
ಭುಭುಮಕುಟನಿಘೃಷ್ಟಚರಣಯುಗನುದಯಿಸಿದಂ ॥ 121 ॥

ಚಂ ಮಾ ॥ ತ್ರಿಭುವನ ಸಂಭವಸ್ಥಿತಿಲಯಂಗಳಿಗೋರ್ವ್ವನೆ ಕರ್ತೃವೆಂದು ಸ
ನ್ದ ಭವಿನಿಕಾಯ ಸಂಸರಣಘೋರಮಹಾರ್ಣ್ಣವ ಕರ್ಣ್ಣಧಾರನೆ
ನ್ದಭಿನಯಿಪನ್ತೆ ದಕ್ಷಿಣಸುರಾಪಗೆಯೊಳ್ ನೆರೆಯಲ್ಕೆ ಬನ್ದನೊಲ್ದ
ನಭಿನವಸೋಮನಾಥನಮರೋತ್ಕರನಾಥನನಾಥನವ್ಯಯಂ ॥ 122 ॥

ಕಂ ॥ ಅಭಿನವಸೋಮೇಶೋದಯ
ಮಭಿಮತ ಫಳದಾನಧುರ್ಯ್ಯಮೆನ್ದಾದರದಿಂ
ಪ್ರಭುಮೊದಲಾಗಿನ್ನೂರ್ವ್ವರು
ಮಭಿನವ ಸೋಮೇಶ್ವರಾಶ್ರಮಕ್ಕೈತ್ತನ್ದರ್ ॥ 123 ॥

ಕಾಶ್ಮೀರದೇವ

ಕಂ ॥ ನೀರಾಗರ್ಸ್ಸಕಳಾಗಮ
ವಾರಿಧಿಪಾರಗರಶೇಷಶಾಸ್ತ್ರ ಪ್ರವಣ
ರ್ಕ್ಕಾರುಣಿಕರೆಂದು ಪೊಗಳ್ಗುಂ
ಧಾರಿಣಿ ಕಶ್ಮೀರದೇವರಂ ಸಾದರದಿಂ ॥ 124 ॥

ಜ್ಞಾನಶಕ್ತಿ ಪಂಡಿತ

ಕಂ ॥ ತಚ್ಛಿಷ್ಯರ್ಹರಹಾಸ
ಸ್ವಚ್ಛಯಶರ್ಸ್ಸಕಳಶಾಸ್ತ್ರಪಾರಗುದ್ಯತ್
ಪೃಚ್ಛಯಜಯಿಗಳು ಜಗದೊಳ
ತುಚ್ಛಗುಣಜ್ಞಾನಶಕ್ತಿ ಪಂಡಿತದೇವರ್ ॥ 125 ॥

ಸದ್ಯೋಜಾತವ್ರತಿ

ಕಂ ॥ ವಿದ್ಯಾವಧೂಮುಖಾಬ್ಜ
ಪ್ರದ್ಯೋತನರಾಗಮ ಪ್ರವೀಣರ್ವ್ವಿಜಿತ
ಪ್ರದ್ಯುಮ್ನಪ್ರಾಬಲ್ಯ
ರ್ಸ್ಸದ್ಯೋಜಾತಬ್ರತೀಶ್ವರಭರ್ಘ್ಘ ತಳದೊಳ್ ॥ 126 ॥

ಲಕುಳೀಶ್ವರ ಪಂಡಿತ

ಕಂ ॥ ಸಕಳಾಗಮವಿದರಾಶಾ
ಪ್ರಕಟಿತಕೀರ್ತ್ತಿಗಳಶೇಷಶಾಸ್ತ್ರ ಪ್ರವಣ
ರ್ಮ್ಮಕರಧ್ವಜ ಶೌರ್ಯ್ಯಹರ
ರ್ಲ್ಲಕುಳೀಶ್ವರಪಂಡಿತರ್ದ್ಧರಿತ್ರೀ ತಳದೊಳ್ ॥ 127 ॥

ಗವಜೆಗಳು

ಕಂ ॥ ಗವಜೆಗಳಯ್ನೂರ್ವ್ವರುಮಭಿ
ನವಸೋಮೇಶಂಗಮಿಂದಿನಲು ಪಣಮೊಂದಂ
ಧ್ರುವಮಾಗೆ ಪಸುಂಬೆಗೆ ಹಾ
ಗವನೆಱಿಕದೆ ಕರ್ತ್ತೆಯಲ್ಲಿ ಬೇಳೆಯನಿತ್ತರ್ ॥ 128 ॥

ಕಂ ॥ ಪೆಸಱುಪ್ಪು ಕಡಲೆ ಗೋಧುವೆ
ಮಿಸುಪೆಳ್ಳೆಂಬಿವಱಪೇಱು ಮೂವತ್ತರ್ಕ್ಕೊ
ನ್ದೆಸೆವದವಸಕ್ಕಮಾರ್ಪ್ಪಿ
ನ್ನೊಸೆದಿರ್ಪ್ಪತ್ತರ್ಕ್ಕೆ ಕೊಟ್ಟರೊನ್ದಮ್ಮುದದಿಂ ॥ 129 ॥

ಫಲಶ್ರುತಿ

ಕಂ ॥ ಪತ್ತಿಯಮಳವೆಗಳೊಳ್ ನಾ
ಲ್ವತ್ತರ್ಕ್ಕೊನ್ದನ್ತೆ ಮರದ ತೆಪ್ಪಕ್ಕಂ ನಾ
ಲ್ವತ್ತರ್ಕ್ಕೊನ್ದಂ ಕೊಟ್ಟ
ರ್ಮ್ಮತ್ತಿದನಾರಳಿದರಳಿದರಂ ಯಮನಟಿಗುಂ ॥ 130 ॥

16) ಸೋಗಿ 103, ಕ.ವಿ.ಶಾ.ಸಂ. 1, ಕ್ರಿಶ. 1121

ಕಲ್ಯಾಣದ ಚಾಲುಕ್ಯರ ದೊರೆ ತ್ರಿಭುವನಮಲ್ಲದೇವ ಆರನೆಯ ವಿಕ್ರಮಾದಿತ್ಯನ ಮಾಂಡಲಿಕ ತ್ರಿಭುವನಮಲ್ಲ ಪಾಂಡ್ಯದೇವ ಮತ್ತು ಮಹಾಮಂಡಲೇಶ್ವರ ಘಟ್ಟಿಯರಸನು

ಆಳುತ್ತಿದ್ದರು. ಸೋಗೆಯ ಊರೊಡೆಯ ನಾಗವರ್ಮಯ್ಯನು ಸ್ಥಾಪಿಸಿದ ಕೇಶವದೇವರ ಸೇವಾಕಾರ್ಯಕ್ಕೆ ದಾನ ನೀಡಿದ ವಿಷಯವನ್ನು ಇದು ಹೇಳುತ್ತದೆ.

ಘಟ್ಟಿಯರಸ

ಚಂ ಮಾ ॥ ಶರಣೆನೆ ಕಾಯಲುಂ ಪಿಡಿದನೀಯಲುಮಾಶ್ರಿತವರ್ಗ್ಗಮೆಲ್ಲಮಂ
ಪೊರೆಯಲು ಸತ್ಯಮಂ ನುಡಿಯಲೊಪ್ಪುವ ಧರ್ಮಮನೆಯ್ದೆ ಪಾಳಿಸಲ್
ಧುರದೊಳಿದಿರ್ಚಿ ಬಂದ ರಿಪುವಂ ಗೆಲಲೋರ್ವ್ವನೆ ಸಾಲ್ವನೀಗಳೀ
ಧರೆಯೊಳಗೆಂಬ ಕೀರ್ತ್ತಿವಧುವೊಂದಿದಳೊಪ್ಪುವ ಘಟ್ಟಿಭೂಪನೊಳ್
॥ **131** ॥

ಮಾರಸಿಂಗ

ಮ ವಿ ॥ ಕಲಿದಣ್ಡಾಧಿಪನಾಗವರ್ಮನತುಳ ಶ್ರೀರೂಪುಸೌಜನ್ಯದೊ
ಳ್ಪಲರುಂ ಮೆಚ್ಚೆ ನೆಗರ್ತೆವೆತ್ತು ಪಿರಿಯಂ ತಾನಾದನಾತಂಗೆ ನಿ
ರ್ಮಲತೇಜಂ ಶುಚಿಸತ್ಯವಾಕ್ಯನೆನಿಸಿರ್ದಾ ಮಾರಸಿಂಗಂ ಮನೋ
ಬಲಮಂ ಮಾಡುವ ಪುತ್ರನಾದನವನಂ ಬಣ್ಣಿಪ್ಪರೀ ಧಾತ್ರಿಯೊಳ್ ॥ **132** ॥

ಶಾ ವಿ ॥ ಬೇಗಂ ಬೇಡಿದೊಡೀವನಂಜಿ ಮಱೆಯಂ ಪೊಕ್ಕಿರ್ದ್ದರಂ ಕಾವನು
ದ್ಯೋಗಂ ಮಾಡಿಸಿದರ್ತ್ಥಮಂ ಪಡೆವನಾರಯ್ದನ್ಯಕಾನ್ತಾಜನ
ಕ್ಕೇಗೆಯ್ದುಂ ಮನಮೀಯನುತ್ತಮಿಕೆಯೊಳ್ ಶೌರ್ಯತ್ವದೊಳ್ ಶೌಚದೊ
ಳ್ನಾಗಂ ಸರ್ವಜನಾನುರಾಗನೆನಿಸಲ್‌ಬಲ್ಲಂ ಪೆಱಂಬಲ್ಲನೇ ॥ **133** ॥

ನಾಗವರ್ಮ

ಚಂ ಮಾ ॥ ಜಗದೊಳಗತ್ಯಪೂರ್ವ್ವ ದಿಟವೇ ದಿಟವಾವುದು ಸಾವಿತೀರ್ಥಮೀ
ಯುಗದೊಳುಮೂರ್ತ್ತಿಗೊಣ್ಡು ಬರವೀವುದು ಜಂಗಮತೀರ್ತ್ಥವಾಗಿ ಕೈ
ಮುಗಿಯಲುವೇಡ ಬಣ್ಣಿಸಲುವೇಡ ಕೆಲಕ್ಕೆಡೆಯಾಡವೇಡ ನೀಂ
ನಗುತ ಶರಣ್ಯವೆಂದು ಬಗೆದಪ್ಪುದು ಬೇರ್ಪ್ಪುದು ನಾಗವರ್ಮನಂ ॥ **134** ॥

17) ಕೊಟ್ನಕಲ್ಲು 81, ಕ.ವಿ.ಶಾ.ಸಂ. I, ಕ್ರಿಶ. 1148

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ಜಗದೇಕಮಲ್ಲನ ಆಳಿಕೆಯಲ್ಲಿದ್ದ ಮಾಂಡಳಿಕ ವೀರಪಾಂಡ್ಯದೇವ ಮತ್ತು ಆತನ ತಾಯಿ ಸೋವಲದೇವಿ, ಭಿಲ್ಲವರಾಯನ ಮಗಳು, ವಿಕ್ರಮಾದಿತ್ಯನ ಸಹೋದರಿಯನ್ನು ಕುರಿತ ವಿವರಗಳಿವೆ. ಹಡಗಲಿಯ ಕೋಟಿಶಂಕರದೇವರ ಸೇವಾಕಾರ್ಯಕ್ಕೆ ಹಾಗೂ ಬ್ರಾಹ್ಮಣರ ಆಹಾರಕ್ಕಾಗಿ ವಿಕ್ರಮಾದಿತ್ಯನು ಕೊಟ್ಟಿಗನೂರು ಗ್ರಾಮವನ್ನು ದತ್ತಿ ನೀಡಿದ್ದನ್ನು ಹೇಳಿದೆ. ಈ ಶಾಸನವನ್ನು ಬರೆದವನು ವೀರಪಾಂಡ್ಯನ ಸಂಧಿವಿಗ್ರಹಿಯಾದ ಮಧುಸೂದನದೇವ.

ಸಮುದ್ರ ವರ್ಣನೆ

ಉ ಮಾ ॥ ಸ್ವಸ್ತಿ ಸಮಸ್ತವಸ್ತುಗುಣಸಂಸ್ತುತನಾನತದೇವಮೌಳಿವಿ
ನ್ಯಸ್ತಪದಾಂಬುಜಂ ತ್ರಿಭುವನಪ್ರಭವಂ ಭವನಬ್ಜಜಾಂಡದೊ
ಳ್ವಿಸ್ತೃತವಾಗೆ ಮಾಡಿದ ಧರಿತ್ರಿಯನಾವರಿಸಿಟ್ಟು ಪರ್ವಿ ರೋ
ಧಸ್ತಳಮಂ ಪಳಂಚಲೆವ ಭಂಗುರತುಂಗತರಂಗ ಸಂಗತಂ ॥ 135 ॥

ಕುಂತಳದೇಶ

ಕಂ ॥ ಅಂತೆಸೆವ ಮೇರುಗಿರಿಯಿಂ
ದಂ ತೆಂಕಣದೆಸೆಯೊಳೆಸೆವ ಭಾರತವರ್ಷಾ
ಭ್ಯನ್ತರದೊಳಿಳಾಕಾನ್ತೆಯ
ಕುನ್ತಳಮೆನೆ ಮುಖ್ಯವಾಯ್ತು ಕುನ್ತಳದೇಶಂ ॥ 136 ॥

ಚಾಲುಕ್ಯ ವಂಶ

ಕಂ ॥ ಕುನ್ತಳದೇಶಮನಾಳ್ವರ
ನನ್ತಾಹಿತಮಹಿಪನಿಕರಮಂ ಗೆಲ್ದು ಮಹೀ
ಕಾನ್ತಾವಲ್ಲಭರತಿಶಯ
ಕಾನ್ತಗುಣಾವಾಸರತಿಬಲರ್ಚ್ಚಾಳುಕ್ಯರ್ ॥ 137 ॥

ವೀರಪಾಂಡ್ಯ

ಕಂ ॥ ಎನಿಸಿದ ಚಾಳುಕ್ಯನೃಪಾ
ಳನ ನಚ್ಚಿನ ಕಟ್ಟಿದಲಗಿನನ್ತೆಸೆದಂ ಕೂ
ರ್ಪಿನ ಬಲ್ಪಿನ ತೇಜದಮಾ
ನ್ತನದೊಳ್ಪಿಂ ವೀರಪಾಂಡ್ಯದೇವನರೇಂದ್ರಂ ॥ 138 ॥

ಉ ಮಾ ॥ ಗಂಗ ಕಳಿಂಗ ವಂಗ ಮರುಗೂರ್ಜ್ಜರ ಕೇರಳ ಚೇರ ಚೋಳ ಗೌ
ಡಾಂಗ ವರಾಟ ಲಾಟ ಖಸಬರ್ವ್ವರಕೋಸಳ ಪುಂಡ್ರ ಪಾರಸಿ
ಕೊಂದಣ ಕೊಂಗ ಕೊಂಕಣ ಕುರುಪ್ರದರಾಂಧ್ರ ತುರುಷ್ಕ ಮಾಗಧೋ
ತ್ತುಂಗನೃಪಾಳಜಾಳಮನದಿರ್ಪ್ಪಿದಮೆಯ್ಗಲಿ ಪಾಂಡ್ಯಭೂಭುಜಂ ॥ 139 ॥

ಶಿವಸ್ತುತಿ

ಸ್ರಗ್ಧರೆ ॥ ಶ್ರೀಕಾನ್ತಾಂಭೋಜಗರ್ಭದ್ಯುಮಣಿ ಮಣಿಕಿರೀಟಾಂಶುಪುಷ್ಪಾಂಘ್ರಿಪೀಠಂ
ಶ್ರೀಕಣ್ಠಂನಾಕಸಿಂಧೂಜ್ವಳದಮಳಲಸತ್ಫೇನ ಶುಂಭಪ್ರಸೂನಂ

ಲೋಕೇಶಂ ವಿಕ್ರಮಾದಿತ್ಯರಸನಭಿಮತಾರ್ತ್ಥಂಗಳಂ ಮಾಳ್ಕೆ ನಿಚ್ಚಂ
ಭೂಕೃಷ್ಣಾಧ್ವಾತ್ಮಸೂರ್ಯ್ಯೋದಕಪವನವಿಧು ಬ್ಯೋಮಗಾತ್ರಂ ತ್ರಿಣೇತ್ರಂ
|| 140 ||

ವಿಕ್ರಮಾದಿತ್ಯ VI

ಕಂ || ಎನೆ ನೆಗಳ್ದವೀರಪಾಂಡ್ಯಾ
ವನಿಪನ ಮಾತುಳನುದಾತ್ತಚಿತ್ತಂ ವಿದ್ವ
ಜನವಿನುತ ವಿಮಳಸುಚರಿತ
ನನೂನಗುಣನೆನಿಪ ವಿಕ್ರಮಾದಿತ್ಯನೃಪಂ || 141 ||

ಮ ವಿ || ವಿನಯಾಂಭೋನಿಧಿಯೆಂದು ಧರ್ಮ್ಮತರನೆಂದುದ್ದಾಮ ಪುಣ್ಯೈಕ ಭಾ
ಜನನೆಂದುರ್ವ್ವರೆ ಬಣ್ಣಿಕುಂ ವಿಬುಧವಕ್ತ್ರೇಂದೀವರಾದಿತ್ಯನಂ
ತನುವಿಂ ನಿತ್ಯನನುದ್ಭಸತ್ಯನನಶೇಷೋರ್ವ್ವೀತಳಸ್ತುತ್ಯನಂ
ಮನುಸಾಹಿತ್ಯನನರ್ಕ್ಕಜೆನ್ದೆ ಸತತಂ ಶ್ರೀವಿಕ್ರಮಾದಿತ್ಯನಂ || 142 ||

ಕಂ || ರಾಯಮಹತ್ತರಭಿಲ್ಲವ
ರಾಯತನೂಜಾತನಧಿಕತರವಿಮಳಯಶಃ
ಶ್ರೀಯುವತೀಶ್ವರನೆನಿಪನ
ಮೇಯಗುಣಂ ನೆಗಟ್ದಿ ವಿಕ್ರಮಾದಿತ್ಯನೃಪಂ || 143 ||

ಮ ವಿ || ಅಯದೊಳ್ವಿಕ್ರಮದೊಳ್ಪರೋಪಕೃತಿಯೊಳ್ವಿಖ್ಯಾತಿಯೊಳ್ನೀತಿಯೊ
ಳ್ದಯೆಯೊಳ್ಧರ್ಮ್ಮದೊಳಾರ್ಪ್ಪಿನೊಳ್ವಿನಯದೊಳ್ಸಂಶುದ್ಧಿಯೊಳ್ಬುದ್ಧಿಯೊ
ಳ್ನಿಯತಂ ತನ್ನವೊಲನ್ಯರಾರೆನೆ ಜನಂ ಜೀಯೆಂಬಿನಂ ಸನ್ತತೋ
ದಯಮಂ ತಾಳ್ದಿದಪೆರ್ಮ್ಮನೂರ್ಮ್ಮಡಿವಲಂ ಶ್ರೀವಿಕ್ರಮಾದಿತ್ಯನಂ || 144 ||

ಮ ವಿ || ಜನತಾಸಂಸ್ತುತನಾದನೇಕ ಗುಣದಿಂ ಶ್ರೀವಿಕ್ರಮಾದಿತ್ಯದೇ
ವನೊಳಿನ್ತೀ ಕಲಿಕಾಲಕಲ್ಮಷಮಷೀ ಸಂಶ್ಲಿಷ್ಟರ ಪಾಲಿಪೆ
ಗ್ಗಿನೊಳೇನುನ್ನತ ಸತ್ವಸಂಪದದೊಳಾರಿಂದಗ್ಗಳಂನೋರ್ಪ್ಪಡೆಂ
ಬಿನೆಗಂ ತಾಳ್ದಿದನತ್ಯುದಾತ್ತಚರಿತಂ ದಿಗ್ವರ್ತ್ತಿಸತ್ಕೀರ್ತ್ತಿಯಂ || 145 ||

ಮ ಸ್ರ || ಸ್ಥಿರತೇಜೋಜಾಳವೆಂಟುಂದೆಸೆಗೆ ಪಸರಿಸಲ್ವೈರಿವೀರಾನ್ಧಕಾರಂ
ಪರೆದೋಡಲ್ಭಾಕನತಾಸ್ಯಾಂಬುರುಹವನವದಾನನ್ದಮಂ ತಾಳ್ದೆ ವಿದ್ವಿ

ಟ್ತರುಣೀನೇತ್ರೋತ್ಪಳಂಗಳ್ಕೊರಗೆ ನಿಜಚಮೂ ಚಕ್ರವಾಕೋತ್ಕರಂ ರಾ
ಗರಸಾಂಭೋರಾಶಿಯೊಳ್ಕ್ರೀಸೆ ಧರೆಗೆಸೆವಂ ವಿಕ್ರಮಾದಿತ್ಯದೇವಂ ॥ 146 ॥

ಸೋವಲದೇವಿ

ಕಂ ॥ ರಾಯನೃಪಾಂಗನೆ ಭಿಲ್ಲವ
ರಾಯತನೂಜಾತೆ ವಿಕ್ರಮಾದಿತ್ಯನೃಪಂ
ಜ್ಯಾಯಂ ತನಗೆನೆ ಸೋವಲೆ
ಗೀಯುಗದ ಸ್ತ್ರೀಯರಾರುವೇಂ ಸವನೊಳರೇ ॥ 147 ॥

ಕಂ ॥ ಅನವರತವಿತ್ತ ವಿತರಣ
ವಿನೋದದಿಂ ಕಾಮಧೇನುವಿಂದೆ ಮಿಗಿಲ್ಸ
ಜ್ಜನಕಾಮಧೇನುವೆನಿಸಿದ
ಳೆನೆ ಸೋವಲದೇವಿಗಿತರಸತಿಯರ್ಸ್ಸರಿಯೇ ॥ 148 ॥

ಕಂ ॥ ತಿಲ್ಲವೆಡಂಗಂ ಗಿರಿಜಾ
ವಲ್ಲಭಪದಕಮಳ ಭೃಂಗನವನಿತ ರಿಪುಭೂ
ವಲ್ಲಭವಿದಳನಪಟುವೆನೆ
ಸಲ್ಲಲಿತಂ ತತ್ತನೂಭವಂ ಪೆಸರ್ವಡೆದಂ ॥ 149 ॥

ಶಿವಸ್ತುತಿ

ಮ ಸ್ರ ॥ ಪರಮಂ ಶ್ರೀವಿಕ್ರಮಾದಿತ್ಯರಸ ನಿನಗೆ ದೀರ್ಘಾಯುವಂ ಶ್ರೀಯುಮಂ ಶಂ
ಕರನತ್ಯಾನಂದದಿಂದಂ ಕುಡುಗುಮಮರಸರಿದ್ವಾರಿಪೂತೋಚ್ಚಳವೀ
ಕರತಾರಾಧಾರ ಚಂಚತ್ತರುಣ ಶಶಿಕಳಾಕಾನ್ತಿಸಂತಾನಶೋಭಾ
ಕರಮಜತ್ತುಂಗ ಪಿಂಗದ್ಯುತಿವಿಕಟಜಟಾಜೂಟಕೋಟೀರಭಾರಂ ॥ 150 ॥

ಮಹಾದೇವಿ

ಕಂ ॥ ವಿನಯ ನಿಧಿ ವಿಕ್ರಮಾದಿ
ತ್ಯನಸುತೆ ಕಲಿಕಾಲ ಸೀತೆ ಲಕ್ಷ್ಮೀವಧು ನೂ
ತನಗೌರಿಯೆಂದು ಪೊಗಳ್ಗುಂ
ವಿನುತೆ ಮಹಾದೇವಿರಾಣಿಯಂ ಜಗಮೆಲ್ಲಂ ॥ 151 ॥

ಶಾಸನ ಕವಿ ಮಧುಸೂದನದೇವ

ಕಂ ॥ ಶ್ರೀ ವೀರಪಾಂಡ್ಯದೇವಮ
ಹೀವಲ್ಲಭಮಹಿತ ಪಾದಪರಮಾರಾಧ್ಯ
ಶ್ರೀವಿತರಮ್ಮಧುಸೂದನ
ದೇವರ್ವ್ವಿರಚಿಸಿದರೆಸೆಯೆ ಶಾಸನಕೃತಿಯಂ ॥ 152 ॥

18) ಉತ್ತಂಗಿ 107, ಕ.ವಿ.ವಿ.ಶಾ.ಸಂ, I, ಕ್ರಿಶ. 1150

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ಜಗದೇಕಮಲ್ಲನ ಕಾಲದಲ್ಲಿ ಮಂಡಲೇಶ್ವರ ವೀರಪಾಂಡ್ಯದೇವನು ಆಳುತ್ತಿದ್ದಾಗ ಕುತ್ತಂಗಿಯಲ್ಲಿ ಸೌದರ ಬಸವಯ್ಯನು ಕಟ್ಟಿಸಿದ ಬಸವೇಶ್ವರ ದೇವರ ದೇವಾಲಯಕ್ಕೆ ಭೂದಾನ ನೀಡಿದ್ದನ್ನು ಹೇಳಿದೆ.

ಕುತ್ತಂಗಿ

ಕಂ ॥ ಚಿತ್ತಜನ ಚಿತ್ತಮಂ ಪಡೆ
ದುತ್ತಮನೇಂನ್ನನದೆ ಸುತ್ತಿನಿಂ ಬಲಿರಾಜ್ಯಂ
ವೆತ್ತೆಸೆದು ತೋಱುತಿರ್ಪ್ಪುದು
ಕುತ್ತಂಗಿಯ ಸಿರಿಯನಿನ್ನದೇ ಬಣ್ಣಿಪುದೋ ॥ 153 ॥

ವೀರಗಾವುಂಡ

ಮ ವಿ ॥ ಕೆಳೆಯಂ ಕೊಂದಪೆನೆಂಬವಂಗೆ ಭಯಮಂ ಕಾರುಣ್ಯದಿಂ ಕೊಟ್ಟಪಂ
ಕಲಿಬಲ್ಲಾಳನೆನೆ ಪೊಚ್ಚಱಿಸಿ ಬಲ್ಪಿಂದಾನ್ತೊಡಾವೋವೆವೆನಲ್
ತಲೆಯಂ ಚಕ್ಕನೆ ಕಿರ್ತ್ತು ಮೆಟ್ಟಿಪೊಡೆ ಶಂಡಂ ಪೊಯಿದಪಂ ಭೂರಿಭೂ
ತಳವಾಕಂಪಿಸೆ ಹುಂ ಬಬಾಪ್ಪೆಱಕರಾ ಗಾವುಂಡಗದೇಂ ತವರ್ ॥ 154 ॥

ಉ ಮಾ ॥ ತೊಣ್ಡರಗಂಡನುಗ್ರತರಗಂಡನೊಟ್ಗಿಂಡರಗಂಡನುಕ್ಕದು
ದ್ದಂಡರ ಗಂಡನಂಜದರಗಂಡ ನಡೇಪಡೆಮಾತೇ ಮೀಱಿಮಾ
ರ್ಕ್ಕೊಂಡರ ಗಂಡನೋಳಿಸುವವಂ ವೀರಗಣ್ಡನೆನುತ್ತ ಬೀರಗಾ ?
ವುಂಡನನಕ್ಕಱಿಂ ಪೊಗಳುವುಮದೀ ಭುವನಂ ಪ್ರಜೆಮೆಚ್ಚೆಗಂಡನಂ ॥ 155 ॥

19) ಹೊಳಗುಂದಿ 94, ಕ.ವಿ.ಶಾ.ಸಂ, I, ಕ್ರಿಶ. 1169

ಇದರಲ್ಲಿ ಪಾಂಡ್ಯರ ದೊರೆ ವಿಜಯಪಾಂಡ್ಯದೇವನ ಆಳಿಕೆಯ ಕಾಲದಲ್ಲಿ ಹೊಳಗುಂದೆಯನ್ನು ಆಳುತ್ತಿದ್ದ ಮಲ್ಲಿನಾಥ ಎಂಬುವವನನ್ನು ಹೊಗಳಿದೆ. ಅವನು ಹೊಳಗುಂದಿಯಲ್ಲಿ ಮಲ್ಲಿನಾಥದೇವರಿಗೆ ಬಸದಿಯನ್ನು ಕಟ್ಟಿಸಿ ಭೂಮಿದಾನ ಕೊಟ್ಟಿದ್ದನ್ನು ಹೇಳಿದೆ.

ಮಲ್ಲಿನಾಥಸ್ತುತಿ

ಸ್ರಗ್ಧರೆ ॥ ಶ್ರೀಯುಂ ದೀರ್ಗ್ಘಾಯುವಂ ಸಂತತಿ ವಿಳಸನಮಂ ಸಾಂದ್ರಚಂದ್ರಾಂಶುಕೀರ್ತಿ
ಶ್ರೀಯಂ ಸತ್ ಭವ್ಯ ಚೂಡಾಮಣಿ ಅಖಿಳಜಗದ್ವನ್ದಿ ಬೃಂದದ್ಯು ಭೂಜ
ಪ್ರಾಯಂಗೀ ಮಲ್ಲಿನಾಥ ಪ್ರಭು ಬರದಿನೊಲ್ದೀಗೆ ನಿರ್ನ್ನಿಕ್ತ ಮುಕ್ತಿ
ಶ್ರೀಯೋಷಿದ್ವಲ್ಲಭಂ ಪ್ರೋಲ್ಲಸಿತ ಪರಮ ಬೋಧೋದ್ಗಮಂ ಮಲ್ಲಿನಾಥಂ
॥ 156 ॥

ನೊಳಂಬವಾಡಿ

ಚಂ ಮಾ ॥ ಅದು ವಿವಿಧಾಗ್ರಹಾರ ಕಳಿತಂ ಸಕಳಾಮಳ ಧರ್ಮ್ಮ ಸಂಭವಾ
ಸ್ಪದಹರು ಸಂಪದಾವಿಳ ಜನಾವಳಿ ಲಾಳಿತ ಮಲ್ಲಿಸದ್ಯಶ
ಸ್ಸದನ ನೃಪಾಳಜಾಳಪರಿಪಾಳಿತ ವಸ್ತು ಸಮಸ್ತ ಕಂಟಕಂ
ಹೃದಯ ವಿಕಾಸಿ ಸಜ್ಜನಸಮುಜ್ಜಳಮಂಗಜಜನ್ಮಮಂದಿರಂ ॥ 157 ॥

ವಿಜಯಪಾಂಡ್ಯ

ಮ ವಿ ॥ ಧರಣೀಭಾರಧುರೀಣ ದಕ್ಷಿಣ ಭುಜಸ್ತಂಭಂ ಪೃಥುಶ್ರೀ ವಧೂ
ಭರಸಂಧಾರದಕ್ಷವಕ್ಷನಖಿಳಾಶಾಕಾಮಿನೀ ವಕ್ತ್ರ ಪಂ
ಕರುಹಾನೀಕವಿಕಾಸನಕ್ಷಮಯಶಂ ರಾಜ್ಯಂಗೆಯುತ್ತಿರ್ಪ್ಪನು
ದ್ಧುರವಿಕ್ರಾಂತ ವಿರಾಜಿತಂ ವಿಜಯಪಾಂಡ್ಯ ಪ್ರೌಢಭೂಪಾಳಕಂ ॥ 158 ॥

ಚಂ ಮಾ ॥ ಮನುಚರಿತಂ ಪರಾರ್ತ್ಥನಿರತಂ ಜಯಜನ್ಮಗೇಹಂ ಮದವಿಳಾ
ವನಿಪ ಶಿರೋಂಭುಜಚ್ಛಿದುರಖಳ ಕರಾಳಭುಜಂ ನವೀನಯೌ
ವನವನಿತಾಮನೋಜನ ಧರೀಕೃತ ದುರ್ಯ್ಯಶಶೋನ್ನತೋದಯಂ
ವಿನಯವಿಭೂಲಕ್ಷಣಂ ವಿಜಯಪಾಂಡ್ಯ ನೃಪಂ ಪೆಸರ್ವ್ವೆತ್ತು ರಾಜಿಪಂ
॥ 159 ॥

ಉ ಮಾ ॥ ಆ ನರಪಾಳನುಂನತಿ ಸುರಾದ್ರಿಗೆ ತೇಜವಿನಂಗೆ ಗುಣ್ಪುಪಾ
ಥೋನಿಧಿಗಾರ್ಪ್ಪು ಕಳ್ಪತರುಗುತ್ಕಟಕಾಂತಿ ಸುಧಾಕರಂಗೆ ವಿ
ಜ್ಞಾನಗುಣಂ ವಿರಿಂಚಿಗೆ ಸಮಾಚಿತ ಶೌಚಗುಣಂ ಮರುಂನದೀ
ಸೂನುಗೆ ವೈಭವಂ ನಭಕೆ ಕೂರ್ಪ್ಪಿಭವೈರಿಗೆ ನೋಳ್ಪಡಗ್ಗಳಂ ॥ 160 ॥

ಮ ಸ್ರ ॥ ನಯಚಾಣಕ್ಕಂ ಪ್ರತಾಪಪ್ರಕೃತಿ ವಿಜಯಪಾಣ್ಡ್ಯಾವನೀಪಾಳ ರಾಜ್ಯೋ
ದಯ ಕೃನ್ಮಂತ್ರ ಪ್ರಭಾವಂ ವಿದುಪಿಶದಯಶೋರಾಸಿ ವಿದ್ಯಾತಿತಾಶೌ

ಚಯನರ್ತ್ಥಿಬ್ರಾತಚಿಂತಾಮಣಿ ಸಕಳಕಳಾಪ್ರೌಢನಕ್ಷೂಣ ಲ್ಷಕ್ಮೀ
ಪ್ರಿಯನಾದಂ ಪೆಂಪುವೆತ್ತಂ ನೆಗಳ್ದ ವಿಜಯಪೆರ್ಮ್ಮಾಡಿ ದಂಡಾಧಿನಾಥಂ
|| 161 ||

ಸ್ರಗ್ಧರೆ || ನಾನಾಧರ್ಮ್ಮಂಗಳಂ ಪಾಲಿಸುವ ಬಸನವಾತ್ಮೇಶನಾಜ್ಞಾಂಗಮಂ ಪೂ
ಣ್ದಾ ನಾಲ್ಕುಂ ವಾರ್ದ್ಧಿಯಂ ಮುದ್ರಿಸುವ ಬಸನಮಾಗ್ರಾರಿಸೇನಾರ್ಣ್ನವಂ ಬಂ
ದಾನಲ್ಕೇಕಾಂಗದಿಂದೋಡಿಸುವ ಬಸನಮೆಂದುಂ ನಿಜಂತಂನ್ನೊಳೆಂದಂ
ದಾನೇನಂ ಬಣ್ನಿಪೆಂ ಬಿತ್ತರಿಸಿ ವಿಜಯಪೆರ್ಮ್ಮಾಡಿ ದಂಡೇಶನೊಳ್ಪಂ || 162 ||

ಆಚಿದೇವ

ಕಂ || ಕೋಗಳಿಯಯ್ನೂಱರ ಕಡು
ಚಾಗಿ ಮಹಾಭೋಗಿ ಮಂನೆಯಂ ವಿಶದಯಶೋ
ಭಾಗಿ ರಿಪುನೃಪ ಪಯೋದಸ
ದಾಗತಿ ಕೊಟ್ಟೋರನಾಚಿದೇವಂ ನೆಗಳ್ದಂ || 163 ||

ಹೊಳಲ್ಗುಂದೆ

ಮ ವಿ || ಲಲಿತೋತ್ತುಂಗ ಜಿನೇಂದ್ರ ಗೇಹತತಿಯಂ ಚೆಲ್ವಾದ ದೇವಾಲಯಾ
ವಳಿಯಿಂದೊಪ್ಪುವ ಸೂಳೇಗೇರಿಗಳಿನುದ್ಯಾನಂಗಳಿಂ ಪೂಗೊಳಂ
ಗಳಿನಂ ಭೋಜವಿರಾಜಿಗಳ್ಕೆಱೆಗಳಿಂದೆಂದುಂ ಹೊಳಲ್ಗುಂದೆ ಕ
ಣ್ಗೊಳಿಕುಂ ಗ್ರಾಮಲಲಾಮವರ್ತ್ಥಿಜನಕಳ್ಪಾರಾಮವೆಂಬನ್ನೆಗಂ || 164 ||

ಮಲ್ಲಿನಾಥ ವಿಭು

ಕಂ || ಜ್ಯೋತಿರ್ಗ್ಗಣದಿಂ ನಭವ ಬ
ನೂತಮಣಿಶ್ರೇಣಿಯಂ ಸುಧಾಂಬುಧಿಯೆಸೆವಂ
ತೇತೆಱದೊಳಮಖಿಳಗುಣ
ಬ್ರಾತದಿಂ ಮಲ್ಲಿನಾಥ ವಿಭು ರಂಜಿಸುವಂ || 165 ||

ಮ ವಿ || ಜಿನಪೂಜಾವಿಧಿಯೊಳ್ಜಿನಾಲಯ ಚಮೂನಿರ್ಮ್ಮಾಣದೊಳ್ಸಂದ ಸ
ನ್ಮುನಿದಾನೋದಯದೊಳ್ನಿಜೋರ್ಜ್ಜಿತಧನಂ ಶೀಳೋಪವಾಸ ಬ್ರತಾ
ನನದೊಳ್ಸದ್ಬ್ರತ ರಕ್ಷೆಯೊಳ್ಸಲೆಕೃತಾರ್ತ್ಥಂ ದೇಹವೆರದಂದು ಸ
ಜ್ಜನಸೇಬ್ಯಂ ವಿಭುಮಲ್ಲಿನಾಥನೆ ವಲಂ ಧನ್ಯಂ ಪೆಱರ್ಧನ್ಯರೇ || 166 ||

ಕಂ ॥ ಜ್ಯೋತಿರ್ಮ್ಮಂಡಳಮವನಿಗ
ದೇತೆಱದೊಱವೆಱಗದನ್ತೆ ಮಲ್ಲನಮನಮುಂ
ಮಾತೇಂ ಮತ್ತಿನ ದೆಯ್ವ
ಕ್ಕೆತೆಱದೊಱವೆಱಗದೆಱಗುಗುಂ ಜಿನಪದದೊಳ್ ॥ 167 ॥

ಕಂ ॥ ಮತ್ತಿನಮತ್ತಿನ ಮನುಜರ
ಚಿತ್ತದ ಸಮ್ಯಕ್ತ್ವವಿಂದುವೊಲ್ಮಟಿನಿಳಯಂ
ಬಿತ್ತರಿಸೆ ಮಲ್ಲಿನಾಥನ
ಚಿತ್ತದ ಸಂಮ್ಯಕ್ತ್ವಮಬುಧಿಯೊಲ್ಮಳವಿಳೆಯಂ ॥ 168 ॥

ಕಂ ॥ ಸಲೆ ನೋಡದು ಕನಸಿನೊಳಂ
ಕುಲದೇಯ ಬಂಬಲುಗುರುಳ್ಗಳಂ ನಳಿತೋಳಂ
ನೆಲೆ ಮಾಲೆಯಂ ನಗೆಮೊಗಮಂ
ಸುಲಿಪಲ್ಲಂ ಮಲ್ಲಿನಾಥನಯನ ದ್ವಂದ್ವಂ ॥ 169 ॥

ಕಂ ॥ ಕರ್ಣ್ನಂ ರಸಾಯನವಾಗಲ
ವರ್ಣ್ನಿಸೆ ಪೆಱರನ್ಯಕಾಮಿನಿ ವಿಭ್ರಮಮಂ
ದುರ್ಣ್ನಯಹರನಂ ಮಲ್ಲನ
ಕರ್ಣ್ನವದಾಲಿಸದು ಸೋಲ್ತು ನುಡಿಯದು ವದನಂ ॥ 170 ॥

ಕಂ ॥ ಮಱೆವುಗೆ ಕಾವಂ ಮಾರ್ಮ್ಮಲೆ
ದೆಱಗಿದಡಿಱಿವಂ ಕಡಂಗಿ ಬೇಡಿದೋಡೀವಂ
ಮಿಱುಪನೆಱೆವಱೆಯ ತೆಱನಂ
ನೆಱೆತಳೆದ ಜಸಕ್ಕೆ ನಲ್ಲನೆನಿಪಂ ಮಲ್ಲಂ ॥ 171 ॥

ಮ ಸ್ರ ॥
ಸೆರಗಂ ಪೊದ್ದಿರ್ಪ್ಪಮಾತ್ತಿರ್ಕೆಮ ಬಗೆಯದೆಮಾಱಾನ್ತು ನಿಂದಂದು ತೋರ್ಕ್ಕುಂ
ಪರಭಾಳಾಭೀಳನೇತ್ರಂ ಸಸಿಳನು ತವೆನೋಯಂ ಕ್ರೂರಕಂಠೀರವ ಪ್ರ
ಸ್ಫುರ ಕೋಪಾಟೋಪಮಂ ಮಾರುತಸುತವಿತತೋದ್ರೇಕಮಂ ರಾಮನೊಡಂ
ಬರಮಂ ಕಳ್ಪಾನದುಗ್ರಾನಕನಮಸ್ತಕಮಂ ವೈರಿಗೆ ಮಲ್ಲಿನಾಥಂ ॥ 172 ॥

ಉಪಜಾತಿ (ಮತ್ತೇಭ + ಶಾರ್ದೂಲ) ॥

ತಲೆಯಂ ಕಾಯ್ದೊಡೆ ಸೇನೆಗ್ರ್ಗೊಂಡು ನಡುಗುತ್ತಂ ಭೀತಿಯಿಂದೋಡಿ ಹೋ
ಗಲು ವಾವಾಜೊವುನಿನೆ ಬಿಲ್ಲೆಯೆನುತುಂ ಪುಲುಗಚ್ಚಿ ಮಾಜಾನ್ತಮೆಯ್ಗೆ
ಆಗಳ್ಕೈಮುಗಿದಿರ್ದ್ದದಾವಜಿಯವೀ ಮಲ್ಲಂಗೆ ಮೆಯ್ವೆರ್ಚ್ಚಿ ಮಾ
ರ್ಮ್ಮರದಿರ್ದ್ದುದುರದಿಯ ಜೀವನಮನೆ ವಾಪಾಶನಂ ಮಾಡನೇ ॥ 173 ॥

ಚಂ ಮಾ ॥ ಒದವಿರೆನಾರ್ಪ್ಪಪೆರ್ಗ್ಬೊಲಸೂಸಿದಕೊಳಿಡದೊಳೊಕ್ಕುತ್ತಿರ್ಕ್ಕೆಗ
ಟ್ಟಿದಕರುಳಾಡುವಟ್ಟೆ ಪಡಲಿಟ್ಟ ಪೆಣಂ ಪರಿಯುತ್ತವಿರ್ಪ್ಪ ರ
ಕ್ತದಪೊನಲೊಡ್ಡುಗೊಣ್ಡತಲೆ ಬೊಬ್ಬಿಡುತಿರ್ಪ್ಪ ಪಿಶಾಚಕೋಟಿ ಮಾ
ಳ್ಪುದು ಭಯಮಂ ಕರಂ ಮನಕೆ ಮಲ್ಲನಡುತ್ತಿಜಿದಾಜಿರಂಗದೊಳ್ ॥ 174 ॥

ಉ ಮಾ ॥ ಚಿತ್ತದ ನಲ್ಮೆಯಿಂ ಮುಡಿದುದೊಂಡೆಗರುಳ್ಗಳನಳ್ತಿವಟ್ಟು ಕೆ
ನ್ನೆತ್ತರ ಬೊಟ್ಟನಿಟ್ಟು ನಾಲೆನೆತ್ತರನೀಂಟಿ ಪೊದಳ್ದ ಕಂಡದಿಂ
ಸುತ್ತಲುಂ ಎಂಡೆಯಂಡಿ ಕಲಿಮಲ್ಲನಡುತ್ತಿಜಿದಾಜಿರಂಗದೊಳ್
ಮತ್ತನಿಶಾದೆಯರ್ಪ್ಪದೆದು ಪಾಡುವರಾ ರಣರಂಗ ಮೇರುವಂ ॥ 175 ॥

ಮ ವಿ ॥ ದಡಿಗಂಗೀಕ್ಷಿಪಡೆಕ್ಕಲವಣಮೆಡತ್ಕೌ ಚಂಚುಲಂವಾಗ ವೊ
ನ್ನುರ್ಡಿ ತೇಜಂನಯ ವೋಜೆಯೊಳ್ಪುದಿನಯಸಮೆವೆಂದಿಂತೆವಿ
ನುಡಿನಿಸ್ತೇಜ ಮನೋಜೆಲಭಮವಿವೇಕಂ ದುರ್ನ್ನಯಂ ದುರ್ಮ್ಮದಂ
ಜಡಿಮಂ ನೋಳ್ಪಡೆವನ್ತು ತಾ ಪ್ರಭುವಿನೊಳ್ಮೆಯ್ದೊಜಿಲೆನಾರ್ಪ್ಪುದೇ ॥ 176 ॥

ಚಟ್ಟನ ಹೆಂಡತಿ ಚಾಮಿಗೌಂಡಿ

ಚಂ ಮಾ ॥ ಸಲೆ ಶಶಿಲೇಖೆಯೊಲ್ಕುವಳಯ ಪ್ರಣಯಪ್ರದೆ ಕಾನಿವೊಲ್ಸಮು
ಜ್ವಳತರಧರ್ಮ್ಮಜಾತ ಪರಿಪಾಳನೆ ನನ್ದನಲಕ್ಷ್ಮಿವೊಲ್ಸದಾ
ವಿಳಸಿತ ಗಂಗೆವೊಲ್ತ್ರಿಭುವನ ಸ್ತುತ ಜೀವನೆಯೆಂದು ಧಾರಿಣಿ
ವಳಯವಶೇಷವಾದತಿಜಿ ಬಣ್ಣಿಸುತ್ತಿರ್ಪ್ಪುದು ಚಾಮಿಗೌಂಡಿಯಂ ॥ 177 ॥

ಚಂ ಮಾ ॥ ವಿನಯದ ನನ್ನಿಯುನ್ನತಿಯ ಮಾನ್ತನದೊಳ್ಪಿನ ಸಚ್ಚರಿತ್ರದಾ
ಶ್ವನ ನಿಜಗೋತ್ರರಕ್ಷಣೆಯ ಧರ್ಮ್ಮದಪೆರ್ಮ್ಮೆಯದೊನ್ದನೊನ್ದು ನೆ
ಟ್ಟನೆಮಾಗೆ ಸಚ್ಚರಿತೆ ಕುಳದೀಪಿಕೆ ತಾನೆನಿಸಿರ್ದ್ದ ಚಾಮಿಯ
ಕ್ಕನೊಳೆನೋಯಾರ್ಮ್ಮಹಾಪ್ರಭು ಶಿಖಾಮಣಿ ಚಟ್ಟನ ಪುಣ್ಯಕಾನ್ತೆಯೊಳ್
॥ 178 ॥

ಮಲ್ಲ

ಉ ಮಾ ॥ ಪುಟ್ಟುವುದುಂ ಮಹಾಪ್ರಭು ತೆರನ್ನೊಡವುಟ್ಟಿದುದಳ್ತಿವಟ್ಟು ತಾಂ
ದಟ್ಟಡಿಯಿಟ್ಟು ಕಣ್ಗೊಳಿಸೆ ನಿಟ್ಟಡಿಯಿಟ್ಟುದು ತಂನ ಕೀರ್ತ್ತಿನೇ
ರ್ವ್ವಟ್ಟಿರೆ ಜೌವನಂ ತನಗೆ ತನ್ನಯ ಲಕ್ಷ್ಮಿಯೊಳಾಯ್ತು ಜೌವನಂ
ನೆಟ್ಟನೆನಲ್ಕೆ ಮಲ್ಲನೆಸೆದಂ ದಳಿತಾಂಬುಜ ಪಾಣಿಪಲ್ಲವಂ ॥ 179 ॥

ಕಂ ॥ ಚಿತ್ತಂ ಜಿನಪತಿಪದದೊಳ್
ವಿತ್ತಂ ಚತುರುದಿತದಾನದೊಳ್ ಕೀರ್ತ್ತಿ ದಿಶಾ
ಭಿತ್ತಿಗಳೊಳ್ ಸಂದಿರೆ ಲೋ
ಕೋತ್ತಮನಾದಂ ಬಬಾಜ್ಜುನಾಳ್ವಪ್ರಭುಮಲ್ಲಂ ॥ 180 ॥

ಮಲ್ಲಿನಾಥ ಬಸದಿ

ಉ ಮಾ ॥ ಸಿಂಗದ ಕೇಸರ ಪುಲಿಯ ಮೆಯ್ದೊವಲುಗ್ರವಿಶೋರಗೇಂದ್ರನು
ತ್ತುಂಗ ಫಣಾಣಿರತ್ನಮೆನಿಸಿರ್ಪ್ಪುವು ಮತ್ತಿನವಂದಿರರ್ತ್ಥಮೆ
ಸಂಗತವೆಮ್ಮ ಮಲ್ಲಿನಾಥನಂ ಜಿನಯೋಗಿಗೆ ಜೈನಗೇಹದು
ತ್ತುಂಗತೆಗಾಶ್ರಿತಂಗೆ ಸಮಸಂದುದು ಸಿದ್ಧರಸಂ ಸುಧಾರಸಂ ॥ 181 ॥

ಮಲ್ಲವ್ವೆ

ಮ ವಿ ॥ ಜಿನಪೂಜೋತ್ಸವದೊಳ್ ಶಚೀರಮಣಿಯಂ ಸೌಭಾಗ್ಯದೊಳ್ ಶೈಳನ
ನ್ದನೆಯಂ ದಾನದೊಳತ್ತಿಮಬ್ಬರಸಿಯಂ ಶೀಳಾಳಿಯೊಳ್ ರಾಮಕಾ
ಮಿನಿಯಂ ರೂಪಿನೊಳಂಗಜಾಂಗನೆಯ ಸತ್ತ್ಯುತ್ಕೃಷ್ಟ ಸಮ್ಯಕ್ತ್ವದೊಳ್
ಜಿನರಾಜಾಂಬಿಕೆಯಂ ಸಮಂ ಬರಿಸಿತುಂ ಮಲ್ಲವ್ವೆ ರಾರಾಜಿಪಳ್ ॥ 182 ॥

ಪ್ರಭು ಮಲ್ಲ

ಕಂ ॥ ಚಲದ ಭುಜಬಲದ ಕಲಿತನ
ದಲಘುಗುಣಕ್ಕಾಚೆಯೆನಿಸಿದೀ ಪ್ರಭುಮಲ್ಲಂ
ಕುಲದೀಪಕನಾದಂ ನಿ
ರ್ಮಳಚರಿತಂ ಪಿರಿಯಮಹಿಮೆಯೊಳ್ಪಿರಿಯಣ್ಣಂ ॥ 183 ॥

ಬಾಚಣ

ಮ ವಿ ॥ ಜಿನರಾಜಾಂಘ್ರಿ ಸರೋರುಹಭ್ರಮರನೇಕಂ ವೈರಿನಿರ್ದ್ಧಾರಣಂ
ವಿನಯಾಂಬೋನಿಧಿ ಬಾಚಣಂ ನಿಜಕುಳಶ್ರೀಭೂಷಣಂ ಮೂಕನೆಂ

ಬನುಜರ್ಮ್ಮಲ್ಲನ ದಕ್ಷದಕ್ಷಿಣಭುಜದಂಡಂಗಳಿರ್ಪ್ಪನ್ತೆ ಮೇ
ದಿನಿಯೊಳ್ ರಾಜಿಸುತಿರ್ಪ್ಪರಪ್ರತಿಮರತ್ಯೌದಾರ್ಯ್ಯಸಂಪತ್ತಿಯಿಂ ॥ 184 ॥

ಚಂ ಮಾ ॥ ಒದವಿದ ಕೋಪದಿಂದವಿದುರಾನ್ತ ನರಂಗೆ ಕೃತಾನ್ತರೂಪನೆಂ
ಬುದು ಕುಳಿಶಾಗ್ನಿಯೆಂಬುದು ದವಾನಳನೆಂಬುದು ಸಿಂಹಿಕೇಯನೆಂ
ಬುದು ದಶಕಂಠನೆಂಬುದು ಭಯಂಕರ ಮಾರಿಯಮೂರಿಯೆಂಬುದ
ಲ್ಲದೆ ಪೆಱದೆಂಬುದೆ ನೆಗಳ್ದ ಬಾಚಣನಂ ರಣರಂಗಧೀರನಂ ॥ 185 ॥

ಹಂಪಿಗೌಂಡಿ

ಚಂ ಮಾ ॥ ಪರಮ ಜಿನೇಂದ್ರಚಂದ್ರ ಪದಭಕ್ತಿಯೊಳಾದನುರಕ್ತಿ ಸಜ್ಜನೋ
ತ್ಕರದನುರಕ್ತಿ ಶೀಳಪರಿಪಾಳನದೊಂದನುರಕ್ತಿ ಸನ್ಮುನೀ
ಶ್ವರಗ್ಗೆ ಸಮಾಹಿತಂಬಡೆವ ದಾನದೊಳಾದನುರಕ್ತಿ ತನ್ನೊಳಾ
ವರಿಸಿರೆ ಹಂಪಿಗೌಂಡಿ ಸಲೆ ದರ್ಶನಶುದ್ಧಿಯನೆಯ್ದೆತಾಳಿದಳ್ ॥ 186 ॥

ಚೋಮ

ಕಂ ॥ ಚಿತ್ತದೊಳಾಪ್ಪು್ಪಪೊದಳ್ದ
ಚ್ಚೊತ್ತಿರೆ ಕೂರ್ಪ್ಪು ನಿಮಿರ್ದ್ದು ಬೇರ್ವ್ವರಿದಿರೆ ಪೆಂ
ಪೊತ್ತರಿಸಿ ಬಳೆಯೆ ಸಲೆಸಿರಿ
ಬಿತ್ತರಿಸಿರೆ ಚೋಮನೇಂ ಮನಂಗೊಳಿಸಿದನೋ ॥ 187 ॥

ಮಾಳಿಯಕ್ಕ

ಕಂ ॥ ಮದವದಳಿ ಕುಟಿಳಕುನ್ತಳೆ
ಮದಕೋಕಿಳ ಕಳನಿನಾದೆ ಮದಗಜಲೀಲಾ
ಮೃದಯಾನೆ ಮಾಳಿಯಕ್ಕಂ
ಕದಳೀದಳಕಾನ್ತಿ ತೊಳಗೆ ಗುಣಮಂ ತಳೆದಳ್ ॥ 188 ॥

ನಾಗಚಂದ್ರ ಭಟ್ಟಾರಕ

ಉ ಮಾ ॥ ಮಾರಮದೇಭಕೇಸರಿಗಳಾಗಮಕೋವಿದರಾತ್ಮತತ್ವವಿ
ಸ್ತಾರವಿಶಾರದರ್ಸಕಳಸಂಯಮಸಾರರಶೇಷಭವ್ಯನಿ
ಸ್ತಾರಕರೆಂದು ಕೂಡೆ ಸಲೆಬಣ್ಣಿಸುತಿರ್ಪ್ಪುದು ನಾಗಚಂದ್ರಭ
ಟ್ಟಾರಕದೇವರಂ ತ್ರಿಭುವನಂ ಮನಮೊಲ್ದು ಮಹಾಜನಾವರಂ ॥ 189 ॥

20) ಹೊಳಲು 39, ಕ.ವಿ.ಶಾ.ಸಂ. I, ಕ್ರಿಶ. 1178

ಇದರಲ್ಲಿ ನೊಣಂಬವಾಡಿಯ ದೊರೆ ವಿಜಯಪಾಂಡ್ಯದೇವನ ಆಳಿಕೆಯಲ್ಲಿ ಗವರೇಶ್ವರ ದೇವರಿಗೆ ಬಿಟ್ಟ ದತ್ತಿಯನ್ನು ಹೇಳಿದೆ. ಈ ಶಾಸನವನ್ನು ಬರೆದವನು ದೇವಣ್ಣ.

ಸಮುದ್ರ

ಕಂ ॥ ನೀರೇಭಮಕರಶಪರಕು
ಳೀರಂ ಕಮಠಾದಿ ಜಲಚರ ಪ್ರಾಣಿಗಳಿಂ
ತೋರತರಂಗಳಿನತಿ ಗಂ
ಭೀರಧ್ವಾನದೊಳು ರೌದ್ರಲವಣ ಸಮುದ್ರಂ ॥ 190 ॥

ಕನಕಗಿರಿ

ಕಂ ॥ ಕೂಪಾರವಿಂದನೇಕ
ದ್ವೀಪಕುಳಾದ್ರಿತದಿನೆಸೆಯುತಿರ್ಪ್ಪೀ ಜಂಬೂ
ದ್ವೀಪದ ನಡುವೆ ಕುಂತಾ
ರಾಪಥಮಂ ಮುಟ್ಟಿ ರುಂದ್ರ ಕನಕಗಿರೀಂದ್ರಂ ॥ 191 ॥

ಕುಂತಳದೇಶ

ಕಂ ॥ ಸುರಗಿರಿಯಿಂದಂ ತೆಂಕಲು
ಚರತೋರ್ಪ್ಪಿರೆಯಲ್ಲಿ ಪಲಹದೇಶಂಗಳೊಳೇಂ
ಕರಮೆಸೆದಿದ್ದುದು ಧರಣೀ
ವರವನಿತೆಯ ಕುರುಳಿನಂತೆ ಕುಂತಳದೇಶಂ ॥ 192 ॥

ನೊಣಂಬವಾಡಿ

ಕಂ ॥ ಕುಂತಳದೇಶದೊಳಿದ್ದುದು
ತಿಂತಿಣಿಯಾದೂರ್ಗ್ಗಳಿಂ ಜನಾವಳಿಯಿಂದಂ
ಕನ್ತುಗೆ ನೆಲೆವೀಡಾಯೆಂ
ಬಂತೆಸೆವ ನೊಣಂಬವಾಡಿನಾಡತಿಮುದದಿಂ ॥ 193 ॥

ಕಂ ॥ ಅದು ಧರ್ಮ್ಮಸಂಭವಾಸ್ಪದ
ಮದು ಸಂಪದಭವನಮದು ಸುಖಾವಾಸಮದೇ
ನದುನಾಕಲೋಕನಿಭಮೆನ
ಲದನಾಕುಳಮಿರ್ಕು ನೃಪತೀಪಾಳಿತಮಕ್ಕುಂ ॥ 194 ॥

ವಿಜಯಪಾಂಡ್ಯ

ಕಂ ॥ ಅದನಾಳ್ವನಖಿಳ ರಿಪುನೃಪ
ಮ್ಮದೇಭ ವಜ್ರಾಂಕುಶಂ ಮಹೀಭುಜ ತಿಳಕಂ
ಮದನಾಕಾರನುದಾರಂ
ವಿದಿತಯಶಂ ವಿಜಯಪಾಂಡ್ಯನಾಹವಶೌಣ್ಡಂ ॥ 195 ॥

ಉ ಮಾ ॥ ಆ ನರಪಾಳನುಂನತಿ ಸುರಾದ್ರಿಗೆ ತೇಜಯಿನಂಗೆ ಗುಣೋಪಾ
ರ್ಥೋನಿಧಿಗಾರ್ಪ್ಪು ಕಲ್ಪತರುಗುತ್ಕಟಕಾಂತೆ ಸುಧಾಕರಂಗೆ ವಿ
ಜ್ಞಾನಗುಣಂ ವಿರಿಂಚಿಗೆ ಸಮುಚಿತ ಶೌಚಗುಣಂ ಮರುಂನದಿ
ಸೂನುಗೆ ವೈಭವಂ ನಭಕೇಕೊಪ್ಪಿ ಭವ್ಯವೈರಿಗೆ ನೋಟ್ಬಿಡಗ್ಗಳಂ ॥ 196 ॥

ಚಂ ಮಾ ॥ ನಯವಿದನರ್ತ್ಥಶಾವಿದನನಾಗಮಕೋವಿದನಾಯ್ದಮಂತ್ರಶ
ಕ್ತಿಯುತನುಪಾಯದೊಳ್ ನಿಪುಣ ಷಡ್ಗುಣ ಸಂಯುತ ಸತ್ಯವಾಕ್ಯ ನಿ
ರ್ಭ್ಭಯ ಹರಪಾದಪಂಕಜಸಿ x ಮುಖ ಶಂಕರದಂಡನಾಥ ಪೆ
ರ್ಮೆಯೊಳ್ ಕೊಂಡನಾ ವಿಜಯ ಪಾಂಡ್ಯ ಮಹೀಶ ಮಂಡನಂ ? ॥ 197 ॥

ಗಂಡರಾಕ್ಕಪುರ

ಚಂ ಮಾ ॥ ಬಳಸಿದ ತುಂಗಭದ್ರಾ ತನಗುಟ್ಟ ದುಕೂಲಮುಪಾಂತನಂದನಾ
ವಳಿಯದು ಚೆಂನನಪ್ಪ ಪೊಸಪ x ಯ ಮೇಲುದಾಸೌಧ ಮಾಳಿಕೋ
ಮಳ x ತನುಕಾಮಿನೀಸ್ಮಿತಮೇ ಚಂದನ ಚರ್ಚ್ಚೆಯೆನಲುಂ ಲಕ್ಷ್ಮಿ ಮಿ
ರ್ಮ್ಮಲ ಸತಿ ಗಂಡರಾಕ್ಕಪುರ ಮಂಡಳದೊಳ್ ನೆಲಸಿರ್ಪ್ಪಳಾಗಳುಂ
॥ 198 ॥

ಕಂ ॥ ಸುರಪತಿಗಾಪತಿಯೆಂದೀ
ಪುರವರ ಮನೆಸಾರ್ದ್ದುಂ ಮಕರ ಮರಿಯಲೆಲ್ಲಂ
ವರಲಕ್ಷ್ಮೀ ನಿಧಿಯೆಂಬಂ
ತಿರಲಿನಮದು ಹೊಳಲು ವಿಪ್ರವಿಭವೋಂನ್ನತಿಯಿಂ ॥ 199 ॥

ಮಹಾಜನರು

ಕಂ ॥ ಆ ಪುರದಧಿಪರ್ಸ್ಸಕಳಕ
ಳಾ ಪರಿಣತರಮಳಚರಿತರಭಿನವ ಭರತ
ಪ್ರಾಪವಿದೂರರ್ಮ್ಮನಸಿಜ
ರೂಪನ್ನೂರ್ಜಿಪ್ಪತಿರ್ಬ್ಬರಿಸಿಯುತ್ತಿಪ್ಪರು ॥ 200 ॥

ವಚನ ॥

ಮತ್ತವಯ್ಯಾವಳೆಯ್ಯನೂರ್ಬ್ಬ ಸ್ವಾಮಿಗಳ ಪ್ರಭಾವವೆನ್ತೆಂದಡೆ ಸರ್ವ್ವಸ ಭುವನಭವನವಿಖ್ಯಾತ ಪಂಚಶತವೀರಶಾಸನಲಬ್ಧಾನೇಕ ಗುಣಗಣಾಳಂಕೃತ ಸತ್ಯಶೌಚಾಚಾರಂ ಚಾರಿತ್ರನಯವಿನಯ ವಿಜ್ಞಾನ ವೀರಾವತಾರ ವೀರಬಣಂಜುಧರ್ಮ್ಮಪ್ರತಿಪಾಳನರುಂ ಅನೂನ ಸಾಹಸಸತ್ಯ ಬಳವೀರಲಕ್ಷ್ಮೀ ಸಮಾಲಿಂಗಿತ ವಿಶಾಳವಕ್ಷಸ್ಥಲ ತ್ರಿಭುವನ ಪರಾಕ್ರಮೋನ್ನತರುಂ ಶ್ರೀವಾಸುದೇವಖಂಡಮೂಳಭದ್ರವಂಶೋದ್ಭವರುಂ ಭಗವತಿದೇವಿ ಲಬ್ಧವರ ಪ್ರಸಾದರುಂ ಬಲ್ಲುಂಕದಂಡಹಸ್ತರುಂ ಪರಸಮಯಧೂಮಕೇತುಗಳಂ ತೋಟಿಯೆಂದಡೆ ಕೋಟಿಲಾಭವೆಂಬರುಂ ಹೋಹ ಮಾರಿಯ ಚಲ್ಲವಾಡುವರುಂ ಬಾರದ ಮಾರಿಗೆ ಬಳಿಯನಟ್ಟುವರುಂ ಬಪ್ಪಮಾರಿಯನಿದುರುಗೊಂಬರುಂ ನುಡಿದುಮತ್ತೆಂನರುಂ ಪರಾಂಗನಾಪುತ್ರರುಂ ನೊಣಂಬ ಸಮಯ ಕುಳಕಮಳವನ ಮಾರ್ತ್ತಂಡರುಂ ಬಣಂಜಸಮಯ ಲೀಲಾಭವನ ಮೂಲಸ್ತಂಭರುಂ ಶರಣಾಗತವಜ್ರಪಂಜರರುಮಪ್ಪಯ್ಯಾವಳಯ್ಯನೂರ್ಬ್ಬರ್

21) ಮಾನ್ಯರಮಸಲವಾಡ 61, ಕ.ವಿ.ಶಾ.ಸಂ. I, ಕ್ರಿಶ. 1183

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ಜಗದೇಕಮಲ್ಲದೇವನ ಆಳಿಕೆಯಲ್ಲಿ ಮಹಾಮಂಡಳೇಶ್ವರ ವಿಜಯಪಾಂಡ್ಯದೇವನ ಕಾಲದಲ್ಲಿ, ಮಹಾಮಂಡಳೇಶ್ವರ ವಿಕ್ರಮಾದಿತ್ಯರಸ ಹಾಗೂ ರಾಯರಸ ಎಂಬುವವರು ಜೊತೆಗೂಡಿ ಕಲಿದೇವ ದೇವರಿಗೆ ನೀಡಿದ ದತ್ತಿಯನ್ನು ಹೇಳಿದೆ.

ವಿಕ್ರಮಾದಿತ್ಯ VI

ಕಂ ॥ ಶ್ರೀಯಂ ಲಕ್ಷ್ಮೀಶಂ ವಾಕ್
ಶ್ರೀಯಂ ಕಮಳಜನೆ ಯೆಸೆವ ನಿರ್ಮ್ಮಳಕೀರ್ತ್ತಿ
ಶ್ರೀಯಂ ಗೌರೀಶಂ ವೊಸೆ
ದಾಯತ್ತಂ ಮಾಳ್ಕೆ ವಿಕ್ರಮಾಂಕಂ ನಿನಗನವರತಂ ॥ 201 ॥

ಚಂ ಮಾ ॥ ವಿನಯ ನಿಧಾನನೆಂದು ಸುಜನಾಗ್ರಣಿಯೆಂದು ವಿನೀತನೆಂದು ಸ
ಜ್ಜನನುತನೆಂದು ದೀನಜನಕಲ್ಪಿತಕಲ್ಪ ಕುಜಾತನೆಂದು ಪೆ
ಣ್ಣಿನ ಕಣಿಯೆಂದು ರೂಪಮಕರಧ್ವಜನೆನ್ದಖಿಳಾವನೀತಳಂ
ಮನಮೊಸೆದರ್ತ್ತಿಯಿಂ ಪೊಗಳುತಿರ್ಪ್ಪುದು ಸಂತತ ವಿಕ್ರಮಾಂಕನಂ
॥ 202 ॥

ಚಂ ಮಾ ॥

ನುಡಿವಬೆಡಂಗು ನೋಡುವ ಪರಾಕ್ರಮ ಮಾಡುವ ಸಾಹಸೋಕ್ತಿಯಿಂ
ನಡವ ಚರಿತ್ರಮುಂ ಹೆಸರು ರೂಪು ಗುಣಾರ್ಣ್ಣವನೆಂತು ನೋರ್ಪ್ಪಡಂ
ಕಡುಗಲಿಯಪ್ಪ ವಿಕ್ರಮನ ಗಂಡಿನದೊಂದು ಪೊಡರ್ಪ್ಪನೇನ ಬಣ್ಣಿಸಲಳವಲ್ತೇ
ತೊಡರ್ದ್ದರಗಾಳವೀಧರೆಗೆ ರಂಜಿಸಿದಂ ಸುಜನೈಕಭಾಂಧವಂ ॥ 203 ॥

ಕಂ ॥ ಬಿಡದಡರೆ ಪೊಣರುವ ವೈರಿಯ
ಕಡುಗಾಯ್ಪಿಂದಟ್ಟಿ ಮುಟ್ಟಿ ರಣರಂಗದಲ್ಕಾದಿ
ಯಡಗಿಂಡಿಯಾಡಿ ಗೆಲುವನ್
ಪೊಡವಿಯಿಯಲತಿಸುಭಟ ವಿಕ್ರಮಾಂಕಚಮೂಪಂ ॥ 204 ॥

22) ಹೊಳಲು 35, ಕ.ವಿ.ಶಾ.ಸಂ. I, ಕ್ರಿ.ಶ. 1194

ಈ ವೀರಗಲ್ಲು ಶಾಸನದಲ್ಲಿ ಹೊಯ್ಸಳರ ದೊರೆ ಎರಡನೆಯ ಬಲ್ಲಾಳನ ಆಳಿಕೆಯಲ್ಲಿ ಬಸವೆಯನಾಯಕ ಎಂಬುವವನು ಕಳ್ಳರೊಡನೆ ಹೋರಾಡಿ ಸತ್ತಾಗ, ಊರಿನ ಮಹಾಜನರು, ಅವನ ಮಗನಿಗೆ ನೀಡಿದ ಭೂಮಿ ದತ್ತಿಯನ್ನು ಹೇಳಿದೆ.

ಚಂ ಮಾ ॥ ಬಸವೆಯನಾಯಕಂ ಧುರದೊಳಚ್ಚರಿಯಾಗಿರೆ ಚೋರಯೂಥಮಂ
ಪೆಸವರಿಗೆಯ್ದು ಭೂತಗಣಕುತ್ಸವಮಾಗಿರೆ ತಂನವೀರವ
ತ್ಯಸದಳವಾಗೆ ಭೂಜಗದೊಳಿತ್ತ ಸುರಾಂಗನೆಯರ್ಸ್ಸಮಂತು ಸಂ
ತೊಸದೊಳೆ ಕೊಂಡುಪೋದರತಿಸೇವ್ಯನನೂರ್ಜಿತ ವೀರಗಂಡನಂ
॥ 205 ॥

23) ಮಾಗಳ 67, ಕ.ವಿ.ಶಾ.ಸಂ. I, ಕ್ರಿ.ಶ. 1209

ಇದರಲ್ಲಿ ಹೊಯ್ಸಳರ ಎರಡನೆಯ ಬಲ್ಲಾಳನ ಆಳಿಕೆಯಲ್ಲಿ ಮಾಂಗೊಳದ ಕಾಳಿಮಯ್ಯನ ಮಗ ಮರ್ಮರಸನು ತ್ರಿಕೂಟ ದೇವಾಲಯವನ್ನು ಕಟ್ಟಿಸಿ ದಾನ ನೀಡಿದುದನ್ನು ಹೇಳಿದೆ.

ಸಳ

ಮ ವಿ ॥ ಯದುವಂಶಾಂಬರಭಾನು ದಕ್ಷಿಣಧರಾಧೀಶಾಂನ್ವಯಂ ಪೇಳ್ವಡಂ
ತದುವೈಚಿತ್ರ್ಯಮದೆಂತುಟೆಂದಡೆ ನೃಪಪ್ರಖ್ಯಾತ ಶೋಭಾಕರಾ
ಸ್ಪದನೊಬ್ಬಂ ಸಳನೆಂಬ ಭೂಪತಿ ಹಿಮಾಂಶುಚ್ಛಾಯೆಯಂ ತಾಳ್ದಿತೆಂ
ದದನೋಡಲ್ ಶಶಕಾಪುರಕ್ಕೆ ಮುದದಿಂ ಬಂದಂ ಕುಮಾರೋತ್ತಮಂ
॥ 206 ॥

ಉ ಮಾ ॥ ಬಂದುಕುಲಾಧಿದೇವತೆ ವಸನ್ತಕಿಯಂಘ್ರಿಸರೋಜಮಂ ಕುಭೃ
ನ್ನಂದನನರ್ಚ್ಚಿಸುತ್ತಮಿರಲುದ್ಧನಖಾಸ್ತ್ರನಡುರ್ತ್ತುಪಾಯೆ ಸಿ
ದ್ಧಂದಯೆಯಿಂದೆ ಕೊಟ್ಟ ಸೆಳೆಯಿಂ ಪುಲಿಯಂ ಮಿಗೆ ಪೊಯ್ಸಳೆಂದೊಡಾ
ಟಂದಲಿನಿತ್ತ ಹೊಯ್ಸಣಕುಲಾನ್ವಯರಾದರಿಳಾತಳಾಗ್ರದೊಳ್ ॥ 207 ॥

ಎರೆಯಂಗ

ಕಂ ॥ ವಿನಯಾದಿತ್ಯನ ರಾಜ್ಯದಿ
ನನನ್ತರಂ ನಿಖಿಳಧಾತ್ರಿಗೆಱೆಯಂ ತಾನೆಂ
ಬನಿತು ಗುಣದಾತ್ಮಜಂಭೂ
ವಿನುತಂ ರಾಜ್ಯಪ್ರಯುಕ್ತನೆಱೆಯಂಗನೃಪಂ ॥ 208 ॥

ಸಿಂಗ

ಕಂ ॥ ಪಾಳಡವಿಗಳೂರಾದಪು
ವಾಳುವ ಕಾಲುವಳಿ ನಗರವಾದಪುವೆನೆ ತಾಂ
ಪಾಳಿಸುವನುರ್ಬ್ಬಿಯಂ ಬ
ಲ್ಲಾಳನ ಭಂಡಾರಿ ಸಿಂಗನಂ ಬಯಸದರಾರ್ ॥ 209 ॥

ಇನ್ನೂರ್ವರು ದ್ವಿಜರು

ಚಂ ಮಾ ॥ ಪರಹಿತರಾಗಿಯುಂ ಪರಭಯಂಕರರುಂ ಹರಿಭಕ್ತರಾಗಿಯುಂ
ಸ್ಫುರಿತಹರಿಪ್ರತಾಪರಖಿಳದ್ವಿಜರಾಜಸಮಾಖ್ಯರಾಗಿಯು
ರ್ಬ್ಬರೆಗೆ ಕಳಂಕದೋಷರಹಿತರ್ದ್ವಿಜರಾಜರು ಮಾಗೊಳಾಧಿಪ
ರ್ನ್ನರ ಹರಿಪಾದ ಪಂಕರುಹಷಟ್ಟದರೀ ದ್ವಿಶತದ್ವಿಜೋತ್ತಮರ್ ॥ 210 ॥

ಸಂಕಣ್ಣ

ಮ ಸ್ರ ॥ ವಿಳಸದ್ದುಗ್ಧಾಬ್ಧಿಯೊಳ್ಕೌಸ್ತುಭಮುಡುಪತಿಕಳ್ಪದ್ರುಮಂ ಸುಪ್ರತೀಕಂ
ಗೆಲೆಪುಟ್ಟಿರ್ಪ್ಪನ್ತೆ ಪದ್ಮಯ್ಯನ ವನಿತೆ ಮಹಾಪ್ರಖ್ಯೆಚಂಡಾಂಬಿಕಾಖ್ಯೋ
ಜ್ವಳಕುಕ್ಷಿಕ್ಷೀರವಾರಾಶಿಯೊಳತಿಮುದದಿಂ ಪುಟ್ಟಿದರ್ಪ್ಪುತ್ರರುದ್ಯ
ದ್ಬಳಕಾಮಂ ನಾರಸಿಂಹಂಗನುಜನೆಸೆವ ಸಂಕಣ್ಣನುದ್ದಾಮಧರ್ಮ್ಮಂ
॥ 211 ॥

ಮ ಸ್ರ ॥ ಪಿರಿದುಂ ಬ್ರಹ್ಮಂ ಧರಾಚಕ್ರದೊಳೆಸೆಯಲ್ಕೆನ್ದರ್ತ್ತಿಯಿಂ ಮಾಡಿಸಿಟ್ಟಂ
ನ್ತಿರಲುದ್ಯನ್ಮಾಗೊಳಗ್ರಾಮದ ಸಮೆಯದ ಮರ್ಮ್ಮಾಂಕನುದ್ಯತ್ರಿಕೂಟೋ

ತ್ಕರದಿಂ ದೇವಾಲ್ಯಮಂ ಮಾಡಿಸಿ ಗಿರಿಶನುಪೇಂದ್ರಾಹ್ವಯಾರ್ಕ್ಕ ಪ್ರತಿಷ್ಠೆ
ಸ್ಥಿರಮಾಗಲ್ಮಾಡಿದಂ ದೇವಕಿಯ ಪತಿ ಮಹಾಖ್ಯಾತ ಕಾಮಾನುಜಾತಂ
॥ 212 ॥

ಪದ್ಮನಾಭ

ಕಂ ॥ ತರಣಿಗೆ ತೇಜೋವಿಭವಂ
ಮುರರಿಪುಗುದ್ಯುತ್ಸುದರ್ಶನಂ ಪುಟ್ಟುವವೊಲ್
ಹರಿಭಕ್ತಮರ್ಮ್ಮರಾಜನ
ವರಸುತನುದಯಿಸಿದ ಪದ್ಮನಾಭಮಹಾತ್ಮಂ ॥ 213 ॥

24) ಹಿರೇಹಡಗಲಿ 53, ಕ.ವಿ.ಶಾ.ಸಂ. I, ಕ್ರಿಶ. 1212

ಇದರಲ್ಲಿ ಹೊಯ್ಸಳರ ದೊರೆ ಎರಡನೆಯ ಬಲ್ಲಾಳನ ಆಳಿಕೆಯಲ್ಲಿ ಮಹಾಪ್ರಧಾನ ಗಂಗಿಮಯ್ಯ ಮತ್ತು ರಾಮಣ ದಂಡನಾಯಕರು ನೀಡಿದ ದತ್ತಿಯನ್ನು ಹೇಳಿದೆ.

ವಿನಯಾದಿತ್ಯ

ಕಂ ॥ ವಿಳಸದ್ವಿಶಿಷ್ಟಹೃದ್ವಾ
ಕುಳದ ತಮಂ ಪರೆಯೆ ಹೊಯ್ಸಣಾನ್ವಯಭೂಭೃ
ತ್ಕುಳದಿಂದ ವೊಗೆದು ನಿಜಭುಜ
ಬಲದೆ ಜಗಚ್ಚಕ್ಷುವೆನಿಪ ವಿನಯಾದಿತ್ಯಂ ॥ 214 ॥

ಪೊಸಪಡಂಗಿಲೆ

ಕಂ ॥ ಸುರುಚಿರವನರಾಜಿಗಳಿಂ
ವರಪೂರ್ಣತಟಾಕದಿಂದಮೊಪ್ಪುವುದನ್ತ
ಃಪುರಮಗ್ರಹಾರ ಲಕ್ಷ್ಮೀ
ಕರಮೆನಿಪುದು ರಸೆಗೆ ಪೊಸಪಡಂಗಿಲೆ ಚೆಲ್ವಂ ॥ 215 ॥

ಮಹಾಪ್ರಧಾನ ಗಂಗಿಮಯ್ಯನಾಯಕನ ವಂಶಾವಳಿ

ಚಂ ಮಾ ॥ ಸುಕವಿಕದಂಬಕಳ್ಪಕುಜವಾಶ್ರಿತಯೂಥರಸಾಬ್ಧಿಪೂರಸಾ
ತ್ವಿಕಜನವಿನ್ನುವರ್ಗ್ಗನಿಧಿ ಗೌತಮಗೋತ್ರದ ಕಾಮಧೇನು ವಾ
ಜಕುಳದಿನೇಶನೇಚಲೆಮಹಾತ್ಮೆಯವಲ್ಲಭ ಗಂಗಿಮಯ್ಯನಾ
ಯಕ ವಿಭುವಿಂದಮೀ ಪೊಸಪಡಂಗಿಲೆಯೊಪ್ಪುವುದೀ ಧರಿತ್ರಿಯೊಳ್
॥ 216 ॥

ದಾವಣ

ಕಂ ॥ ಮನುಚರಿತನಖಿಳಗುಣಸ
ಜ್ಜನವಿನುತಂ ಮಂತ್ರಿದಾವಣಂ ಜಗದಾರಾ
ಧ್ಯನುಪಮಸುಖರೂಪಪ್ರಭು
ವಿನಾಚರಣಸರೋಜಭೃಂಗ ಮನುಜೋತ್ತುಂಗಂ ॥ 217 ॥

25) ಮಾಗಳ 65, ಕ.ವಿ.ಶಾ.ಸಂ. I, ಕ್ರಿಶ. 1215

ಇದರಲ್ಲಿ ಹೊಯ್ಸಳರ ದೊರೆ ಎರಡನೆಯ ಬಲ್ಲಾಳನ ಆಳಿಕೆಯಲ್ಲಿ ಹರಿಹರ ಊರೊಡೆಯ, ಗೋವಿಂದ ಹಾಗೂ ಮಾಂಗೊಳದ ಮಹಾಜನರು ಒಡಗೂಡಿ ದೇವರ ಸೇವೆಗೆ ದತ್ತಿ ನೀಡಿದುದನ್ನು ಹೇಳಿದೆ.

ದೇವಸ್ತುತಿ

ಸ್ರಗ್ಧರೆ ॥ ಶ್ರೀಕಾಂತೋರಸ್ಥಳಾಲಿಂಗಿತಭುಜಯುಗಶಾಖಾಕರಾಗ್ರಪ್ರವಾಳ
ಪ್ರಾಕಾರೋದ್ಭಾಸಿ ಬಾಸ್ವದ್ರತ್ನ ಖಚಿತಕರ್ಣಾವತಂಸಂಸುಪುಜ್ಪಾ
ನೀಕಂದಾತ್ಮತ್ವಸತ್ವಂ ಫಳಮಗಣಿತಗೋಪಾಳಕಳ್ವದ್ಮ ಮಂತ್ರೈ
ಲೋಕ್ಯಕಾಧಾರನಿಂನ್ನೊರ್ಬ್ಬರಿಗಭಿಮತಮಂ ಮಾಳ್ಕತಿಪ್ರೀತಿಯಿಂದಂ
॥ 218 ॥

ಮ ವಿ ॥ ಶತಮಂನ್ಯುಸ್ತುತನಬ್ಜನಾಭನಖಿಳಶ್ರೀಗೋಪಕನ್ಯಾವರಾ
ವೃತವೃಂದಾವನಮಧ್ಯಗೋಪನಿವಹಪ್ರೋದ್ಭಾಸಿಹೇಮಾಂಬರೋಂ
ನ್ನತಸೂತ್ರಂ ಕಟಿಯೊಳ್ಪೊದಳ್ದೆಸೆಯಲುದ್ಯಂನ್ವೇಣುನಾದಂಗಳಿಂ
ಶೃತಿಯಂ ಬಾಜಿಪ ಗೋಪಿನಾಥನೊಲಿದೀಗಿಷ್ಟಾರ್ತ್ಥಸಂಸಿದ್ಧಿಯಂ ॥ 219 ॥

ಮಸಣೆಯ ದಂಡನಾಥ

ಚಂ ಮಾ ॥ ಕುಸುಮಶರಂಗೆ ತಾನಧಿಕನರ್ಕ್ಕಜನಿಂದ ವಿಶೇಷವಾರ್ಪ್ಪಿನೊಳ್
ಶ್ವಸನತನೂಜನಿಂ ಮಿಗಿಲು ರೂಪಿನೊಳೀವ ಗುಣಪ್ರಭಾವದೊ
ಳ್ಮಿಸುಪಭುಜಪ್ರತಾಪದೊಳ್ ಪೇಳಮೃತೇಶಪದಾಬ್ಜಭೃಂಗನೀ
ಮಸಣೆಯ ದಂಡನಾಥನವೊಲಾರ್ದ್ದೊರೆ ಮಂತ್ರಿಗಳೀ ಧರಿತ್ರಿಯೊಳ್
॥ 220 ॥

ಸೋಮ

ಚಂ ಮಾ ॥ ವಸುಮತಿಯೆಂಬ ಕಾಂತೆಯ ಪಯೋಧರಮೌಕ್ತಿಕಹಾರದನ್ತೆ ಕ
ಣ್ಗೆಸೆವ ಮಹಾಗ್ರಹಾರಮೆನಿಪಿಟ್ಟಗೆಯೊಳ್ವರಕಶ್ಯಪಾನ್ವಯಂ

ಪಸರಿಸೆ ಪುಂಣ್ಯಮೂರ್ತ್ತಿ ವಿರುಪಾಕ್ಷನ ಸಾದ್ವಿಪತಿಬ್ರತಾಮದಾ
ಲಸೆಯರಸೊವ್ವೆಗುತ್ಸವದೆ ಪುಟ್ಟಿದ ಸೋಮನಿಳಾತಳಾಗ್ರದೊಳ್ ॥ 221 ॥

26) ಕುರುವತ್ತಿ 21, ಕ.ವಿ.ಶಾ.ಸಂ. I, ಕ್ರಿಶ. ಸು. 13ನೇ ಶತಮಾನ

ಇದರಲ್ಲಿ ನಾಗರಕಲ್ಲನ್ನು ಪ್ರತಿಷ್ಠೆ ಮಾಡಿದ ವ್ಯಕ್ತಿಯ ಹೊಗಳಿಕೆ ಇದೆ.

ಚಂ ಮಾ ॥ ಪರದನ ಚಾಗಮೇ ಪರದನುನ್ನತಿಯಂ ಮಿಗಿಲಾರ್ಪ್ಪವೆಂಬ ಧೀ
ಶ್ವರರನಮೋಘಮಾನಖಿಸಿಕಣ್ಡ ಬನಿಂನೆನೆವೇಡೆ ಚಾಗದೊ
ಳ್ಸುರತರುವಂ ಪಳಂಚಲೆವ ಭೋಗದೊಳಿಂದ್ರನೆಯಾದ ವತ್ಸನುಂ
ಪರದನೆಱಕ್ಕದೆಂ ಬೆಸೆವ ಮತ್ತಿನದಂದಕರುಂ ನರೇಂದ್ರರೇ ॥ 222 ॥

ಹರಪನಹಳ್ಳಿ ತಾಲ್ಲೂಕು

27) ಉಚ್ಚಂಗಿದುರ್ಗ 6, ಕ.ವಿ.ಶಾ.ಸಂ. I, ಕ್ರಿಶ. 1064

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ಆಹವಮಲ್ಲದೇವನ ಮಗ ವಿಜಯಾದಿತ್ಯದೇವನ ಆಳಿಕೆಯಲ್ಲಿ, ಅವನ ದಂಡನಾಯಕನಾದ ಮೂಕರಾಜನ ಕೋರಿಕೆಯಂತೆ, ಕಲಚೂರ್ಯರ ಬಿಜ್ಜಳದೇವನು, ಕಳೇಶ್ವರ ಪಂಡಿತನ ಪಾದವನ್ನು ತೊಳೆದು ಗಳಗೇಶ್ವರದೇವರ ಸೇವೆಗಾಗಿ ದತ್ತಿ ನೀಡಿದ ವಿವರವಿದೆ.

ಆಹವಮಲ್ಲ

ಮ ವಿ ॥ ಅವನೀಮಣ್ಡಳಮಂ ನಿರಂತರಿತಮಾ ಹೇಮಾದ್ರಿಯಂ ದಕ್ಷಿಣಾ
ಬ್ಧಿವರಂ ದೋರ್ವ್ವಳದರ್ಪ್ಪದಿಂ ಪದುಳಮಾ ಪೂರ್ವ್ವಾಬ್ಧಿಯಂ ಪಶ್ಚಿಮಾ
ಬ್ಧಿವರಂ ಪಾಳಿಸಿದಂ ಮದೋದ್ಧತವಿರೋಧಿಕ್ಷೋಣಿಭೃನ್ಮಲ್ಲನಾ
ಹವಮಲ್ಲಂ ವಿಜಯಕ್ಕೆ ನಲ್ಲನದಟಂ ಶ್ರೀರಾಯನಾರಾಯಣಂ ॥ 223 ॥

28) ಕೆರೆಗುಡಿಹಳ್ಳಿ 209, ಕ.ವಿ.ಶಾ.ಸಂ. I, ಕ್ರಿಶ. 1065

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ತ್ರೈಲೋಕ್ಯಮಲ್ಲ ದೇವನ ಆಳಿಕೆಯಲ್ಲಿ, ಕಲಚೂರ್ಯರ ಬಿಜ್ಜಲದೇವ ಎಂಬುವವನು ನೊಳಂಬೇಶ್ವರದೇವರಿಗೆ ನೀಡಿದ ಗ್ರಾಮದತ್ತಿಯನ್ನು ಹೇಳಿದೆ.

ಬಿಜ್ಜಳ

ಉ ಮಾ ॥ ಧರ್ಮ್ಮಜನಂ ವಿಚಾರಪರನಂ ಸುಜನಪ್ರಿಯನಂ ನೃಪೋತ್ತಮಂ
ನಿರ್ಮ್ಮಳಿನಂ ದಯಾಪರನಿ ಭೂಪಶಿಖಾಮಣಿ ವಿಷ್ಣುವರ್ದ್ಧನಂ
ಧರ್ಮ್ಮವಿಚಾರದೊಳ್ ನೆಱೆಯೆ ಭಾವಿಸುವಂ ಜಗದೇಕದಾನಿಯೊಳ್
ಕರ್ಮ್ಮಶರೀರಿಯಾದ ನೃಪರಾರ್ದ್ದೊರೆ ಬಿಜ್ಜಲದೇವಭೂಪನೊಳ್ ॥ 224 ॥

ಚಂ ಮಾ ॥ ಅರಿಮದಗನ್ಧಸಿನ್ಧುರಘಟಾಳಿಗೆ ಬಿಜ್ಜಳದೇವನೆಂಬ ಕೇ
ಸರಿಯ ನಖಾಗ್ರದರ್ಪ್ಪಹತಕಂ ತಡೆ ಶತ್ರುಘಟಾಳಿಯುಂ ಭಯಂ
ಕರಭರದಿಂ ಪಡಲ್ವಡೆದಂತಿರೆಯಾಹವಮಲ್ಲನಂಕಕಾ
ಱರೊಳರಿಸೈನ್ಯ ಭೈರವನೊಳಾರ್ದ್ದೊರೆ ಬಿಜ್ಜಲದೇವ ಭೂಪನೊಳ್
॥ 225 ॥

29) ಬಾಗಳಿ 100, ಕ.ವಿ.ಶಾ.ಸಂ. I, ಕ್ರಿಶ. 1079

ಕಲ್ಯಾಣದ ಚಾಲುಕ್ಯರ ದೊರೆ ತ್ರಿಭುವನಮಲ್ಲ ಆರನೆಯ ವಿಕ್ರಮಾದಿತ್ಯನ ಆಳಿಕೆಯಲ್ಲಿ ಪಾಂಡ್ಯದೇವ ಅವನ ಸಾಮಂತನಾಗಿದ್ದನು. ಆಗ ಅರಸಿಕೆರೆಯ ಕಲಿಯಮಗೌಡನ ಮಗಳೂ, ಪಿರಿಯಾಡಪೆರ್ಗ್ಗಡೆಯ ಹೆಂಡತಿಯಾದ ಬಾಚಲದೇವಿಯು ಬಾಗುಳಿಯ ಕಲಿದೇವರ ಪೂಜೆಗೆ ಭೂದಾನ ನೀಡಿದ್ದನ್ನು ಇದರಲ್ಲಿ ಹೇಳಿದೆ.

ಬಾಗಳಿಪುರ

ಕಂ ॥ ಜಳನಿಧಿ ಪರಿವೃತ ಧಾತ್ರೀ
ತಳದೊಳ್ ಭೂವನಿತೆಗೆಸೆವ ಕುಂತಳಮೆಂತಂ
ತಳವಡೆ ಕುಂತಳೆ ಪಯಕ್ಕ
ಕ್ಕಳಳಂಕೃತ ಬಾಳ್ಗುಳಿಪುರಂ ಸೊಗಯಿಸುಗುಂ ॥ 226 ॥

ಕಲ್ಲಿನಾಥ

ಕಂ ॥ ಇದು ಪುಣ್ಯದೊದವು ಲೋಕ
ಕ್ಕಿದು ಸುಖದೊಂದೇಳ್ಗೆಯೆಂದು ಬಾಳ್ಗುಳಿ ಪುರದೊಳ್
ತ್ರಿದಶಮುನಿ ವಂದುನಿಶಂ
ಮುದದಿಂ ಶ್ರೀಕಲ್ಲಿನಾಥನಲ್ಲಿಯೆ ನಿನ್ದಂ ॥ 227 ॥

ಮಹಾಜನರು

ಕಂ ॥ ಕಯ್ವಾರದ ಯಾಚಕಜನ
ಮುಯ್ವಂ ನೋಡಲ್ಕೆ ಧನವನವನೀತಳದೊಳ್
ಕಯ್ವಾರದೀವವರೆನಲಿಂ
ದಯ್ವತಿಂಬರ ಜಸಕ್ಕೆ ಸರಿಯಾರ್ಧರೆಯೊಳ್ ॥ 228 ॥

30) ನೀಲಗುಂದ 88, ಕ.ವಿ.ಶಾ.ಸಂ. I, ಕ್ರಿಶ. 1079

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ವಿಕ್ರಮಾದಿತ್ಯನ ಆಳಿಕೆಯಲ್ಲಿ ಮಹಾಮಂಡಳೇಶ್ವರ ತ್ರಿಭುವನಮಲ್ಲ ರಾಯಪಾಂಡ್ಯದೇವನು ಹಳೆಯಹಾಳ ಸ್ವಯಂಭುರಾಮೇಶ್ವರದೇವರ ಸೇವೆಗಾಗಿ

ನೀರ್ಗುಂದದ ಮಹಾಜನರಿಗೆ ದತ್ತಿ ನೀಡಿದ ವಿವರವಿದೆ.

ಕೋಗಳಿ ನಾಡು

ತ್ರಿಪದಿ ॥ ನಾಡುಗಳೊಳಗೆಲ್ಲ ಗಾಡಿವೆತ್ತಸಮದ
ನಾಡುಗಳರಸನತಿ ಚೆಲ್ವ ಕೋಗಳಿ
ನಾಡು ನೋಡಲ್ಕೆ ಸೊಗಯಿಕ್ಕುಂ ॥ 229 ॥

ತ್ರಿಪದಿ ॥ ಆ ನಾಡೊಳೆಸೆವುದು ನಾನಾ ವಿದ್ವಜ್ಜನ
ಸ್ಥಾನಂ ನೀರ್ಗುಂದವೆನಿಪಗ್ರಹಾರವ x
ತ್ಯಾನನ್ದಕಾರಿ ಜಗಕ್ಕೆಲ್ಲಂ ॥ 230 ॥

ಶ್ರೀಗರೆ

ಕಂ ॥ ರಾಮೇಶ್ವರ ಪಾದದ್ವಯ
ತಾಮರಸಭ್ರಮರನಖಿಳಶಿವಭಕ್ತರ ತೊ
ತ್ತೀಮಹಿಯೊಳೆಸೆದನಲ್ತೆ ಧ
ರಾಮರಕುಳಸಂಭವೋತ್ತಮಂ ಶ್ರೀಗರೆಯಂ ॥ 231 ॥

ಕಂ ॥ ಆತಂ ತಾನೀ ದೇವನಿ
ಕೇತನಮಂ ಭಕ್ತಿಯಿನ್ದ ಮಾಡಿಸಿ ನೆಗರ್ದ್ದಾ
ಭೂತಳಬಾಳೆಲ್ಲ ಜನಮುಂ
ಪ್ರೀತಿಯೆ ಪೊಗಳಲ್ಕೆ ಕೂರ್ತ್ತುಮೆನದೊಲವಿನ್ದಂ ॥ 232 ॥

31) ಕೆರೆಗುಡಿಹಳ್ಳಿ 208, ಕ.ವಿ.ಶಾ.ಸಂ. I, ಕ್ರಿ.ಶ. 1111

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ತ್ರಿಭುವನಮಲ್ಲದೇವ ಆರನೆಯ ವಿಕ್ರಮಾದಿತ್ಯನ ಆಳಿಕೆಯಲ್ಲಿ ಅವನ ಸಾಮಂತ ತ್ರಿಭುವನಮಲ್ಲ ಪಾಂಡ್ಯದೇವನು ಆಳುತ್ತಿರುವಾಗ ಅವನ ಮಹಾಸಾಮಂತ ಕಾಮರಸ ಮತ್ತು ಚಟ್ಟಬ್ಬೆಯ ಮಗನಾದ ಸಿಂಗರಸನು ನೊಳಂಬೇಶ್ವರದೇವರ ಸೇವೆಗಾಗಿ ದತ್ತಿ ನೀಡಿದುದನ್ನು ಹೇಳಿದೆ.

ದಿವ್ಯಶಕ್ತಿ ಪಂಡಿತ

ಕಂ ॥ ಶ್ರೀಪರಮನ ಪದಕಮಳಮ
ನಂ ಪೊತ್ತು ಸ್ಮರಣೆಮಾರ್ಪ ಪೂಜಿಪ ಬಗೆಯಿಂ
ಬ್ಯಾಪಕನೊಡಗೂಡುವ ನಿ
ಷ್ಠಾಪರತೆಯ ದಿವ್ಯಶಕ್ತಿಪಂಡಿತದೇವರ್ ॥ 233 ॥

ವರೇಶ್ವರ ದೇವರು

ಮ ಪ್ರ ॥ ದುರಿತೇಭೇಂದ್ರಕಠೋರ ಕುಂಭದಳನಂ ಶ್ರೀಘನವಕ್ತ್ರೋಗ್ರಸ
ತ್ಕರಶಾಖಾಂಕುರ ಧರ್ಮ್ಮನಿರ್ಮ್ಮಳಗುಣಂ ಪಂಚೇಂದ್ರಿಯ ಪ್ರೌಢತ
ಸ್ಕರಸಾಮೂಹಭಯಂಕರಂ ಪ್ರಭಳಶೌಚಾಚಾರಶೀಳಂ ವರೇ
ಶ್ವರದೇವ ಪ್ರಭುನಾಮಧೇಯನೆಸೆದಂ ವಿಶ್ವಂಭರಾಚಕ್ರದೊಳ್ ॥ 234 ॥

32) ರಾಮಘಟ್ಟ 24, ಕ.ವಿ.ಶಾ.ಸಂ. I, ಕ್ರಿಶ. 1122

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ತ್ರಿಭುವನಮಲ್ಲ ಆರನೆಯ ವಿಕ್ರಮಾದಿತ್ಯ ಹಾಗೂ ಮಹಾಮಂಡಳೇಶ್ವರ ತ್ರಿಭುವನಮಲ್ಲರಾಯ ಪಾಂಡ್ಯದೇವನ ಆಳಿಕೆಯಲ್ಲಿ, ಹಾಲಮರಸನು ತಾನು ಕಟ್ಟಿಸಿದ ದೇವಾಲಯಕ್ಕೆ ತ್ರಿಭುವನಮಲ್ಲರಾಯನಿಗೆ ನಿವೇದಿಸಿ ರಾಮಘಟ್ಟದ ರಾಮೇಶ್ವರದೇವರಿಗೆ ಭೂದಾನ ನೀಡಿದುದನ್ನು ಹೇಳಿದೆ.

ಕೆಂಗ

ಚಂ ಮಾ ॥ ಬಿರುದರ ತೋಳೊಳಿರ್ದ್ದ ಜಯಲಕ್ಷ್ಮಿಯನೊಪ್ಪುವ ತನ್ನ ತೋಳ ದು
ರ್ದ್ಧರಭುಜಗರ್ವ್ವದಿಂ ಪರಿಸಿ ಕೂರಿಸಿ ಕೂರ್ತ್ತು ಧರಿತ್ರಿ ನಿಲ್ವಿನಂ
ಸ್ಥಿರತರವಾಗೆ ಸಜ್ಜನಿಕೆವಾಡಿದ ಸನ್ತತಶೌರ್ಯ್ಯಮುರ್ಬ್ಬಿಗಂ
ಬಗೆಯೆನೆ ಬಣ್ಣಿಸಲ್ಪವಣೆ ಸಾಹಣಿ ಕೆಂಗನನಾಡಲಂಪಿನಿಂ ॥ 235 ॥

ಕಂ ॥ ಅದಟಿನೊಳದಟರನದಟಲೆ
ವದಟ ಬಿರುದರ ಸೊರಗೆ ಬಿರುದರ ಬೆಂಕೊಳ್ವಂ
ಕದ ಬಿರುದಂ ನೆಗಟ್ಟಭಿನವ
ಮದನಂ ಕೆಂಗಂ ವಿನೂತ ವಿಕ್ರಮತುಂಗಂ ॥ 236 ॥

33) ರಾಗಿಮಸಲವಾಡ 34, ಕ.ವಿ.ಶಾ.ಸಂ. I, ಕ್ರಿಶ. 1127

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ಭೂಲೋಕಮಲ್ಲದೇವನ ಆಳಿಕೆಯಲ್ಲಿ, ಸಹವಾಸಿ ಬ್ರಾಹ್ಮಣರ ಗುಂಪಿನ ದಂಡನಾಯಕ ಯಿನ್ದರಾಣಿ ಭಟ್ಟಯ್ಯ ಮತ್ತು ಅವನ ಪೆರ್ಗಡೆ ವುಜ್ಜಿಭಟ್ಟ ಎಂಬುವವನು ವಿನಾಯಕನನ್ನು ಪ್ರತಿಷ್ಠಾಪಿಸಿ ದೇವರ ಸೇವೆಗಾಗಿ ನಾಲ್ಕು ಪಣವನ್ನು ನೀಡಿದುದನ್ನು ಹೇಳಿದೆ.

ಇಂದ್ರರಾಣ

ಕಂ ॥ ಶ್ರೀಮದ್ವಿಪ್ರ ಕುಳವ್ಯೋ
ಮಾಮೃತ ಕಿರಣನಖಿಳಜನ ಸಂಸ್ತುತ್ಯಂ ಶ್ರೀ
ರಾಮಂಧಾಮನುದಾತ್ತ
ಪ್ರೇಮಂ ನೆಗಳ್ದಿಂದ್ರರಾಣ ದಣ್ಡಾಧೀಶಂ ॥ 237 ॥

ಮ ವಿ ॥ ಮರನೆಂಬರ್ಪ್ಪಲುವೆಂಬರಿತ್ತಡವನಂ ಕಲ್ಲೆಂಬರೀ ಧೇನುಮಂ
ಪುರುಷಾಕಾರದೆ ನೀಗಲೆಂದೊಗೆದುದೋಭೂಲೋಕದೊಳ್ ನೋಡೆ ತ
ತ್ಸುರಭೂಜಂ ಸುರಧೇನುವುತ್ಸವದೆ ಚಿನ್ತಾರತ್ನವೆಂದೆಂದು ಬಿ
ತ್ತರಿಕುಂ ಧಾರಿಣಿಯಿಂದೆ ರಾಣನನಿಳಾಲೋಕಯ್ಯವಿಖ್ಯಾತನಂ ॥ 238 ॥

ರತ್ನಿಯಕ್ಕ

ಕಂ ॥ ಭಾಗ್ಯಂ ಸಮನಿಸಿದಡೆ ಸೌ
ಭಾಗ್ಯಂ ಸಮನಿಸದು ಮತ್ತಿನಬಲೆಯರ್ಗ್ಗಿನ್ತುಂ
ಭಾಗ್ಯಮುಮಂ ನಿರವಧಿಸೌ
ಭಾಗ್ಯಮುಮಂ ರತ್ನಿಯಕ್ಕನೋರ್ವ್ವಳೆ ಪಡೆದಳ್ ॥ 239 ॥

ವುಜ್ಜಭಟ್ಟ

ಮ ವಿ ॥ ಸ್ಥಿರನೇ ಮೇರುಮಹಾದ್ರಿ ಸತ್ಯಯುತನೇ ಕಾನೀನನತ್ಯಂತಸು
ನ್ದರನೇ ಕನ್ತುನಿಭಂ ಪ್ರತಾಪಧರನೇ ಭೀಮಾನುಜಂ ತ್ಯಾಗಿಯೇ
ಸುರಭೂಜಂ ಶುಚಿಯೇ ಬಬಾಪ್ಪು ಪರನಾರೀದೂರನೆಂದೆಂದು ಬಿ
ತ್ತರಿಕುಂ ಧಾರಿಣಿ ವುಜ್ಜಭಟ್ಟನನಿಳಾಲೋಕಯ್ಯವಿಖ್ಯಾತನಂ ॥ 240 ॥

ಪೆರ್ಗ್ಗಡೆ ಜೋಗದೇವ

ಚಂ ಮಾ ॥ ವಿನಯದ ಮೇರುವೆನ್ದು ಶುಚಿಯೆಂದು ಬುಧಾಶ್ರಿತಧಾರನೆಂದು ಸ
ಜ್ಜನನಿಧಿಯೆಂದು ಸತ್ಯದ ತವರ್ಮ್ಮನೆಯೆಂದು ವಿವೇಕಿಯೆಂದು ಪೆಂ
ಪಿನಕಣಿಯೆಂದು ಸಾರ್ದ್ದರೆಡಜೆಂಬ ತಮಕ್ಕಿನನೆಂದು ರೂಢಿವೆ
ತ್ತನುಪಮ ಧೈರ್ಯ್ಯನೆಂದು ಪೊಗಳ್ಗುಂ ಧರೆ ಪೆರ್ಗ್ಗಡೆ ಜೋಗದೇವನಂ
॥ 241 ॥

34) ಚಟ್ನಹಳ್ಳಿ 1, ಕ.ವಿ.ಶಾ.ಸಂ. I, ಕ್ರಿಶ. 1146

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ಜಗದೇಕಮಲ್ಲದೇವನ ಆಳಿಕೆಯಲ್ಲಿ ವೀರಪಾಂಡ್ಯನು ಅಜೇಯರಾಯ ಪಾಂಡ್ಯದೇವನ ಕೋರಿಕೆಯಂತೆ ಉಚ್ಚಂಗಿನಾಡಿನ ಮಾಕೆರೆಯ ನೊಯ್ಯೇಶ್ವರದೇವರ ಸೇವೆಗಾಗಿ ಭೂದಾನ ಮಾಡಿದದನ್ನು ಹೇಳಿದೆ.

ವೀರಪಾಂಡ್ಯ

ಮ ಸ್ರ ॥
ಎಣಿಸಲ್ಕಾರ್ಪ್ಪನ್ನರಾರಿನ್ತಗಣಿತಮಹಿಮಂ ಮಾನವಬ್ರಾತಮೀ ಧಾ
ರಿಣಿಯೊಳ್ ನಾನಾವಿನೋದಂಗಳ ರಚನೆಯಿಸೌದಾರ್ಯ್ಯದಿಂ ಶೌರ್ಯ್ಯದಿಂ ಸ

ದ್ಗುಣದಿಂ ಸೌಜನ್ಯದಿಂ ಸೌಂದರತೆಯಿನತಿಗಾಂಭೀರ್ಯದಿಂ ಧೈರ್ಯದಿ
ನ್ನೆಣೆಯಾರೀ ವೀರಪಾಣ್ಡ್ಯ ಕ್ಷಿತಿಪತಿಗೆ ಸಮಸ್ತೋರ್ವ್ವಿಯೊಳ್ ಭೂಮಿಪಾಳರ್ ॥ 242 ॥

35) ಬೆಣ್ಣೆಹಳ್ಳಿ 199, ಕ.ವಿ.ಶಾ.ಸಂ. I, ಕ್ರಿಶ. 1149

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ಎರಡನೇ ಜಗದೇಕಮಲ್ಲ ದೇವನ ಆಳಿಕೆಯಲ್ಲಿ ಮಹಾಮಂಡಳೇಶ್ವರ ಜಗದೇಕಮಲ್ಲ ವೀರಪಾಂಡ್ಯನು ಉಚ್ಚಂಗಿಯ ರಾಜಧಾನಿಯಿಂದ ಆಳುತ್ತಿರುವಾಗ ಬೆಣ್ಣೆಗನೂರನ್ನು ಸ್ವಯಂಭು ದೇವರಿಗೆ ದತ್ತಿಯಾಗಿ ನೀಡಿರುವುದನ್ನು ಹೇಳಿದೆ.

ಶಿವ ಸ್ತುತಿ

ಕಂ ॥ ರಕ್ಷಿಸುಗೆ ವಿರೂಪಾಕ್ಷನ
ಪೇಕ್ಷೆಯನೊಸೆದಿತ್ತು ಧರ್ಮ್ಮಮಂ ಶಾಸನದಿಂ
ರಕ್ಷಿಪರಂ ಬೆಂಣ್ಣೆಗನೂ
ರಕ್ಷಯನಮಳಂ ಸ್ವಯಂಭುವಾಚಂದ್ರಾರ್ಕ್ಕಂ ॥ 243 ॥

ವೀರಪಾಂಡ್ಯ

ಮ ವಿ ॥ ಮಲೆಯಂ ಕೀಳ್ಮಲೆ ಮಾಡಿ ಸಾಂತಳಿಗೆಯಂ ನಿಶ್ಚಿಂತದಿದಾಳ್ವನಾ
ಮಲೆಪಂ ಮನ್ನೆಯರಾದಿಯಾದಖಿಳರಂ ನಿಷ್ಕಂಟಕಂ ಮಾಡಿ ದೋ
ರ್ಬ್ಬಲಮಂ ತೋಱಿದನಿನ್ನರಾರೆನಿಸಿದಂ ಸರ್ಬ್ಬಜ್ಞದಣ್ಡಾಧಿಪಂ
ನೆಲನುಂ ನೇಸಱುಮುಳ್ಳಿನಂ ನಿಲಿಸಿದಂ ಲೋಕೈಕವಿಖ್ಯಾತಿಯಿಂ ॥ 244 ॥

ವತ್ಸ ಚಮೂಪತಿ

ಚಂ ಮಾ ॥ ದಳಿತಸರೋಜವಿರ್ದ್ದ ಕೊಳನಿಂದ್ರಕುಜಂ ನೆಲೆಸಿರ್ದ್ದ ನನ್ದನಂ
ಕುಳಿ ವಸುಧಾಂಶುವಿರ್ದ್ದ ಗಗನಸ್ಥಳಿ ಮಾಣಿಕವಿರ್ದ್ದ ಲೋಹಣಾ
ಚಳವೆನಿಸಿರ್ದ್ದ ಪೂರ್ವ್ವಗಿರಿ ವತ್ಸಚಮೂಪತಿಯಿರ್ದ್ದ ರಾಜದ
ಣ್ಡಾಳ ವೃದಿ x x ತೋದಿತಂ ಶುಭದವುನ್ನತವೂರ್ಜ್ಜಿತವುತ್ತರೋತ್ತರಂ ॥ 245 ॥

ವೆಣ್ಣಲದೇವಿ

ಕಂ ॥ ವರಗುಣಿ ವತ್ಸಣದಣ್ಡೇ
ಶ್ವರನ ಮನೋಹಾರಿ ಪತಿಬ್ರತಾನ್ವಿತ ಭಾಸ್ವ
ದ್ಧರಣೀಸುತೆಯೆಂದೊಡಾ
ರ್ದ್ದೊರೆ ವೆಣ್ಣಲದೇವಿಗಖಿಳ ಭುವನಾನ್ತರದೊಳ್ ॥ 246 ॥

36) ಬಾಗಳಿ 184, ಕ.ವಿ.ಶಾ.ಸಂ. I, ಕ್ರಿ.ಶ. 1160

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ಜಗದೇಕಮಲ್ಲನ ಹಾಗೂ ಅವನ ಸಾಮಂತ ವೀರಪಾಂಡ್ಯನ ಆಳಿಕೆಯಲ್ಲಿ, ಚಿದ್ದಣನ ಪತ್ನಿಯಾದ ಧರ್ಮವ್ವೆ ಎಂಬುವವಳು ಬಾಗುಳಿಯಲ್ಲಿ ಲಕ್ಷ್ಮೀನಾರಾಯಣ ದೇವರ ಪೂಜೆಗಾಗಿ ಭೂದಾನ ನೀಡಿದುದನ್ನು ಹೇಳಿದೆ.

ವಿಷ್ಣುಸ್ತುತಿ

ಶಾ ವಿ ॥ ಶ್ರೀನಾರೀಪ್ರಿಯನುರ್ಬ್ಬರಾಮರಸುವಂಶರ್ಗ್ಗಯ್ವದಿಂಬರ್ಗ್ಗೆ ದೇ
ವಾನೀಕೋಂನತ ಚಾರುಮೌಳಿಮಣಿರುಕ್ಯುಜ್ವಾರ್ಚ್ಚಿತಾಂಘ್ರಿದ್ವಯಂ
ನಾನಾನನ್ತಗುಣಾಸ್ಪದಂ ವಿವಿಧವಿದ್ಯಾಧೀಶ್ವರಂ ವಿಷ್ಣು ಲ
ಕ್ಷ್ಮೀನಾರಾಯಣದೇವನೀಗೆ ಸುಖಮಂ ಚಂದ್ರಾರ್ಕ್ಕರುಳ್ಳಂನೆಗಂ ॥ 247 ॥

ವೀರಪಾಂಡ್ಯ

ಮ ವಿ ॥
ಗಿರಿದುರ್ಗ್ಗಕ್ಕಶನಿಸ್ವರೂಪನಚಳತ್ಕಾನ್ತಾರದುರ್ಗ್ಗಕ್ಕೆ ಭೀ
ಕರದಾವಾನಳನತ್ಯುದಾತ್ತಜಳದುರ್ಗ್ಗಕ್ಕೌರ್ವ್ವನೆಂದಂದು ಸಂ
ಗರದೊಳ್ ಮಾರ್ಮ್ಮಲೆದೊಡ್ಡಿ ನಿಂದು ಬಯಲೊಳ್ ಮಾಜಿಾನ್ತು ಬಾಳ್ವಂನರಾ
ನ್ನರನಾಥಾಗ್ರಣಿ ವೀರಪಾಂಡ್ಯನೊಳಿಳಾಲೋಕೈಕವಿಖ್ಯಾತನೊಳ್ ॥ 248 ॥

ಮ ವಿ ॥ ತುರಗಾರೋಹಣವಿದ್ದೆಗೋಜನೆನಿಪಂ ರೇವನ್ತದೇವಂಗೆ ಸ
ದ್ಗುರುವೆನ್ದುಂ ಭೃಗುವಿಂಗೆ ಶಸ್ತ್ರಕಳೆಯೊಳ್ ಶಾಸ್ತ್ರಾಗಮಾಜ್ಞಾನದೊಳ್
ಪಿರಿಯಂ ಪದ್ಮಭವಂಗೆ ದುಷ್ಟಗಜಶಿಕ್ಷಾಚಾರ್ಯ್ಯನಿಂದ್ರಂಗೆನಲ್
ದೊರೆಯಾರ್ಭ್ಭೂಪತಿ ವೀರಪಾಂಡ್ಯ ನಿನಗೀ ವಿಶ್ವಂಭರಾಚಕ್ರದೊಳ್॥ 249 ॥

ಮ ವಿ ॥ ಶರಣಾಯಾತ ಜನಕ್ಕೆ ವಾರಿನಿಧಿಯಾಯ್ತುದ್ವೃತ್ತರಂ ಕೂಡೆ ಸಂ
ಹರಿಸಲ್ ಕತ್ತರಿವಾಣಿಯಾಯ್ತುರು ಯಶೋವಲ್ಲೀವಿತಾನಕ್ಕೆ ದಲ್
ಪರಿನೀರಾಯ್ತೊಸೆದಾಗಳುಂ ವಿಜಯಲಕ್ಷ್ಮೀ ದೇವಿಗಾಡಲ್ ಸರೋ
ವರಮಾಯ್ತೊಳುಗಲಿ ವೀರಪಾಂಡ್ಯಭುಜದಂಡೋಗ್ರಾಸಿಧಾರಾಜಳಂ॥ 250 ॥

ಚಂ ಮಾ ॥ ನರಪತಿ ಪಾಂಡ್ಯ ನೀಂ ತಗುಳೆ ಮತ್ತ್ರಿಯರಂ ನೆಜೆ ಕಾದುದೀ ತ್ರಿಣಂ
ವರಮುನಿವೃತ್ತಿಲಿಂಗವುರಗಾಲೆಯವಂಚಯವೆಂದು ಪೂಜಿಪ
ನ್ನರದು ಕಱುಂಕೆಯೆಂದು ಜಿನನೆಂದು ಗಜಾಜಿನಧಾರಿಯೆಂದು ನಾ
ಗರಪೊಸತೆಂದು ಜಕ್ಕಿಯರೆನುತ್ತವನುದ್ಧತವೈರಿಕಾಂತೆಯರ್ ॥ 251 ॥

ಮಹಾಜನರು

ಉ ಮಾ ॥ ಶ್ರೀಲಲನಾನ್ವಿತರ್ಸ್ಸಕಳವೇದವಿದರ್ಬ್ಬಹುಶಾಸ್ತ್ರಕೋವಿದ
ರ್ಪ್ಪಾಲಿತ ಧರ್ಮ್ಮರಾರ್ಜ್ಜಿತಮುಖರ್ಕೃತಪುಣ್ಯರೆನಲ್ಕೆ ಸತ್ಯವಾ
ಕ್ಶೀಲರನಿಷ್ಟಶಿಷ್ಟಜನಕಲ್ಪಮಹೀಜರನೆಯ್ದೆ ಮೆಯ್ಸುವಿ
ರ್ನ್ನಾಲಗೆಯಾದಡಂ ಪೊಗಳಲಾರ್ಕುಮೆ ವಾಸುಗಿಯಯ್ವದಿಂಬರಂ
॥ 252 ॥

ಧರ್ಮ್ಮವ್ವೆ

ಮ ಸ್ರ ॥ ಸತಿರತ್ನಂ ಚಿದ್ದರಾಜಾಂಗನೆ ಪತಿಹಿತದಿಂ ಸೀತೆ ಸೌಭಾಗ್ಯದಿಂ ಪಾ
ರ್ವ್ವತಿ ನಿತ್ಯೈಶ್ವರ್ಯ್ಯದಿಂ ಶ್ರೀವಧು ಮತಿಯೊದವಿಂ ಭಾರತೀ ಕಾನ್ತೆಯೆನ್ಸು
ಧೃತಿಯಿಂದಂ ಧಾತ್ರಿ x ನಯವಿನಯಸದಾಚಾರಚಾರಿತ್ರಶೋಭಾ
ನ್ವಿತೆಯಂ ಸದ್ಧರ್ಮೆಯಂ ಧರ್ಮ್ಮವೆಯನಖಿಳಭೂಮಂಡಳಂ ರಾಗದಿಂದಂ
॥ 253 ॥

ಕಂ ॥ ಗಿರಿರಾಜಮೇನಕೀ ಭಾ
ಸುರಜಠರದೊಳದ್ರಿಜಾತೆ ಪುಟ್ಟಿದವೊಲ್ ಪ
ದ್ಮರಸಂಗಂ ಗಂಗವೆಗಂ
ಧರಣೀಸುತೆ ಧರ್ಮ್ಮವನಿತೆಯುದಯಂಗೆಯ್ದಳ್ ॥ 254 ॥

ಚಂ ಮಾ ॥ ಸುಲಲಿತದಿಬ್ಯಕಳ್ಪಲತೆಯಿಂ ವನವಾಡುವ ರಾಜಹಂಸೆಯಿಂ
ಕೊಳನಮೃತಾಂಶುಲೇಖೆಯನಿರುಳ್ದಿನಪ ಪ್ರಭೆಯಿಂ ನಭಂ ಮಹೀ
ವಳಯದೊಳೊಪ್ಪುವಂತೆ ಗುಣಿ ಧರ್ಮ್ಮವೆಯಿಂ ವರಕಾಶ್ಯಪಾನ್ವಯಂ
ತಳೆದುದು ಪೆರ್ಮ್ಮೆಯಂ ಪೆಸರನುಂನತಿಯಂ ಯಶಮಂ ಪ್ರಭುತ್ವಮಂ
॥ 255 ॥

37) ನೀಲಗುಂದ 79, ಕ.ವಿ.ಶಾ.ಸಂ. I, ಕ್ರಿಶ. 1162

ಇದರಲ್ಲಿ ಕಲಚೂರ್ಯರ ದೊರೆ ಬಿಜ್ಜಳದೇವನ ಆಳಿಕೆಯಲ್ಲಿ ಅಧಿಕಾರಿಯಾಗಿದ್ದ ಕಲ್ಲಿಮಯ್ಯನ ವರ್ಣನೆ ಇದೆ.

ಕಂ ॥ ಮುದ್ರಾಧಿಕಾರಿ ರಿಪುಕುಳ
ವಿದ್ರಾವಣನಖಿಳ ಬಾಂಧವನರ್ತ್ಥಿ ಜನಕ
ಲ್ಪದ್ರುಮಾನವದ್ಯಗುಣಯುತ
ನದ್ರೀಂದ್ರಸುತಾಪ್ರಿಯಾಂಘ್ರಿಕಮಳಭ್ರಮರಂ ॥ 256 ॥

ಕಂ ॥ ಕಲಿದೇವದಣ್ಡನಾಥಂ
ಕಲಿಕಾಳಕಳಂಕರಹಿತನತಿಶಯಮಹಿಮಂ
ಚಲದಿಂ ಭುಜಬಲದ ಚಾಗದ
ನೆಲೆಯೆನೆ ನೆಗಟ್ದಂ ಸಮಸ್ತವಸುಧಾತಳದೊಳ್ ॥ 257 ॥

38) ಅಲಗಿಲವಾಡ 48, ಕ.ವಿ.ಶಾ.ಸಂ. I, ಕ್ರಿಶ. 1169

ಇದರಲ್ಲಿ ಪಾಂಡ್ಯದೊರೆ ವಿಜಯಪಾಂಡ್ಯದೇವನ ಪ್ರಧಾನರನ್ನು ವರ್ಣಿಸಿದೆ.

ವಿಜಯಪಾಂಡ್ಯ

ಕಂ ॥ ಮೀಱೆ ಮದವೈಱೆ ತಾ ತಲೆ
ದೋಱೆ ರಣೋತ್ಸವದಿನಾಂತು ನಿಜಭುಜ ಬಳಮಂ
ತೋಱಿದಡೆ ಜವನ ಮುಳಿಸಂ
ತೋಱಿದೆ ಮಾಣ್ದಪನೆ ವಿಜಯಪಾಂಡ್ಯಮಹಿಪಂ ॥ 258 ॥

ಪೆರ್ಮ ದಂಡಾಧೀಶ

ಕಂ ॥ ಎಱಗದ ವಿರೋಧಿವರ್ಗ್ಗಮ
ನೆಱಗಿಸಿನಿಜಪತಿಗೆ ವಿಜಯಪಾಂಡ್ಯ ಮಹಿಪಂ
ಗೆಱಗಿಸಿದ ಸಾಮ್ರಾಜ್ಯಮ
ನೆಱೆಯೇ ಜಗವಿಜಯಿ ಪೆರ್ಮ್ಮದಣ್ಡಾಧೀಶಂ ॥ 259 ॥

ಕೇತ ದಂಡನಾಥ

ಚಂ ಮಾ ॥ ಸುರುಚಿರ ಚಕ್ರನತ್ಯಮಳಚಂದ್ರಿಕೆಯೊಳ್ ಮದ್ದಚಾರು ಲಕ್ಷ್ಮಿಯೊಳ್
ಸುರಕರಿ ದುಗ್ಧವಾರ್ಧಿನವ ವಿದ್ರುಮ ವಲ್ಲರಿಯೊಳ್ ಶಶಾಂಕ ಭಾ
ಸುರಮಣಿಕಾಂತಕಾಂತಿನವಮಂಜರಿಯೊಳ್ ನೆರೆದೊಪ್ಪಿ ತೋರುವಂ
ತಿರೆ ಸೊರಮಿಪ್ಪನಾನತನ ಚಮೂಪತಿ ಕೇತದಂಡನಾಥಯೆನಿಸೀ ?
॥ 260 ॥

ಪೆರ್ಗಡೆ ದಾಸ

ಕಂ ॥ ನಿರ್ಗ್ಗರ್ವ್ವನಖಿಳ ಬುಧನಂ
ಸರ್ಗ್ಗೋದಿತವಿಮಳ ಗುಣಗಣಾಭರಣಂ ನೈ
ಸರ್ಗಿಕ ವಿನಯವಿನೂತಂ
ಪೆರ್ಗ್ಗಡೆದಾಸಂ ಶಿವಾಂಪಂಕಜದಾಸಂ ॥ 261 ॥

ಅರಸಿಯಕ್ಕ

ಕಂ ॥ ಅರಸಿ ಗುರುವಿನಯ ವಿನತೆಯ
ಗ್ಗ್ರರಸಿ ನಿಜಾನ್ವಯ ಪವಿತ್ರ ಸೀಮಂತಿನಿಯ
ಗ್ಗ್ರರಸಿ ಬುಧನಿಕರ ವಿನುತೆಯ
ಗ್ಗ್ರರಸಿವೆಸರ್ಸಾರ್ತ್ಥಯರಸಿಯಕ್ಕಗಳದಜೞಂ ॥ 262 ॥

39) ನೀಲಗುಂದ 80, ಕ.ವಿ.ಶಾ.ಸಂ. I, ಕ್ರಿಶ. 1224

ಇದರಲ್ಲಿ ಹೊಯ್ಸಳರ ದೊರೆ ಎರಡನೆಯ ನರಸಿಂಹನ ಆಳಿಕೆಯಲ್ಲಿ, ಭೀಮೇಶ್ವರದೇವರಿಗೆ ಬಿಟ್ಟ ದತ್ತಿಯನ್ನು ಹೇಳಿದೆ. ನರಸಿಂಹನ ತಂದೆಯಾದ ಎರಡನೆಯ ಬಲ್ಲಾಳನ ಶೌರ್ಯವನ್ನು ಹೊಗಳಿದೆ.

ಬಲ್ಲಾಳ II

ಮ ಸ್ರ ॥ ಎರಡುಂ ಲಕ್ಕಂಬರಂ ಸುತ್ತಣಯರಸನಿಸಂನಾಹದಿಂ ಪಂನೆರಡುಸಾವಿರ
ವರುಶಶ್ರೇಣಿವೊಲಂ ಕವಣೆಯ ಮಣಿಯ ಪರಿಯಾಣದಿಂ ತೋರ್ಕೆವೆತ್ತೆ
ಯ್ತರೆ ತಂನೊಂದಾನೆಯಿಂ ಸೇವುಣ ನೃಪಬಳಮಂ ನೂಂಕಿ ಬೆಂನಟ್ಟಿ ಕೊಂದಂ
ಸೊರಟೂರಿಂ ಕೃಷ್ಣವೇಣೀ ನದಿಯ ತಡಿವರಂ ವೀರಬಲ್ಲಾಳರಾಯಂ
॥ 263 ॥

ಹೊಸಪೇಟೆ ತಾಲ್ಲೂಕು

40) ಹಂಪೆ 55, ಕ.ವಿ.ಶಾ.ಸಂ. III, ಕ್ರಿಶ. 1199

ಇದರಲ್ಲಿ ಸಿಂದವಂಶದ ಇಮ್ಮಡಿ ರಾಚಮಲ್ಲನ ಮಗನಾದ ಕಲಿದೇವನ ಆಳಿಕೆಯನ್ನು ಹೇಳಿದೆ. ಅವನ ಅಧಿಕಾರಿ ಚೌಡ ಎಂಬುವವನು ಪಂಪಾದೇವಿಗೆ ಚಿನ್ನದ ಕಲಶಗಳನ್ನು ಮಾಡಿಸಿದಾಗ ವಿರೂಪಾಕ್ಷದೇವರಿಗೆ ಬಂದ ದತ್ತಿಗಳನ್ನು ಇದರಲ್ಲಿ ಹೇಳಿದೆ. ಚೌಡನ ಹೆಂಡತಿ ಹಾಚಲೆಯನ್ನು ಬಣ್ಣಿಸಿದೆ. ಈ ಶಾಸನವನ್ನು ಕವಿತಿಳಕ ಮಾರಮರಸ ರಚಿಸಿದ್ದಾನೆ.

ವಿರೂಪಾಕ್ಷ ಸ್ತುತಿ

ಸ್ರಗ್ಧರೆ ॥ ಶ್ರೀಮದ್ಗೌರೀ ಸಮೇತಂ ನೆಲಸಿರಲಿದು ತಾಂ ತಕ್ಕುದೀ ಪುಣ್ಯ ತೀರ್ಥ
ಶ್ರೀ ಮೆಯ್ವೆತ್ತೊಪ್ಪುವೀ ಹೇಮಶಿಲೆಯಿದೆನುತುಂ ತಚ್ಛಿಲೇಂದ್ರಾಗ್ರಮೆಂದುಂ
ಧಾಮನ್ತಾನಾಗೆ ಸನ್ತಂ ನೆಲಸಿ ಸೊಗಯಿಪಾ ಶ್ರೀ ವಿರೂಪಾಕ್ಷದೇವಂ
ಪ್ರೇಮಂ ಕೈಗಣ್ಮಲೀ ಮೈದುನ ಚವುಡನಭೀಷ್ಟಾರ್ತ್ಥಮಂ ಮಾಡುಗೆಂದುಂ
॥ 264 ॥

ಪಂಪಾಂಬಿಕಾಸ್ತುತಿ

ಮ ವಿ ॥ ನಳಿತೋಳ್ಗಾಖೆಗಳಂ ತಳಂ ತಳಿರ್ಗಳಂ ವೃತ್ತಸ್ತನಂ ಪೌಳ್ಪಿಮಂ
ವಿಳಸತ್ಕುಂತಳಮಾಗೆ ಭೃಂಗತತಿಯಂ ನೀಳ್ದೋಳ್ವೆರಲ್ಕುಟ್ಮಲಂ
ಗಳ ಚೆಲ್ವಂ ಗೆಲೆ ಕಲ್ಪವೃಕ್ಷದವೊಲಾ ಪಂಪಾಂಬಿಕಾದೇವಿ ಕೋ
ಮಳೆ ಚೌಡಯ್ಯನ ಕಾನ್ತೆ ಹಾಚಲೆಗೆ ಮಾಳ್ಕಿಷ್ಟಾರ್ತ್ಥ ಸಂಸಿದ್ಧಿಯಂ ॥ 265 ॥

ಬಲ್ಲಕುಂದೆ ನಾಡು

ಕಂ ॥ ವಾರಾಶೀಪರಿತೋದ್ಯ
ದ್ಧಾರಿಣಿ ಮಧ್ಯಮೆನಲೆಸೆವ ಮೇರುವ ತೆಂಕಲ್
ರಾರಾಜಿಪ ಕುಂತಳ ಧರೆ
ಗೋರನ್ತಿರೆ ಬಲ್ಲಕುಂದ ನಾಡೆಸೆದಿರ್ಕುಂ ॥ 266 ॥

ಕಂ ॥ ಫಳಿತ ಸುರಕುಜದ ಚೆಲ್ವಂ
ತಳೆದಿರ್ದಾ ಬಲ್ಲಕುಂದೆ ನಾಡೊಳ್ತಳ್ತೊಂ
ದೊಳುಗೊಂಬೆನೆ ದೊರವದಿನಾ
ಡಿಳೆಯೊಳ್ ರಂಜಿಪುದು ನೋಡೆ ನಾಡುಗಳರಸಂ ॥ 267 ॥

ಕಂ ॥ ವಿಲಸದ್ಗಂಗಾನದಿಯಿಂ
ಹಲವು ತೀರ್ಥಂಗಳಿಂ ಸುದೇವಾಯತನಾ
ವಲಿಯಂ ತಾಪಸತತಿಯಿಂ
ಸಲೆಯೊಪ್ಪುವದಖಿಳಜನ್ಮ ಪಾಪಾಪಹರಂ ॥ 268 ॥

ಕಲಿದೇವ ನೃಪ

ಕಂ ॥ ಆ ನಾಳ್ಕೆ ಪಟ್ಟಣಂ ಲ
ಕ್ಷ್ಮೀ ನಿಳಯಂ ತಾನೆನಿಪ್ಪ ಕುಱುಗೋಡದನು
ರ್ವ್ವೀತನು ಕಲಿದೇವ ನೃಪಂ
ತಾನೊಲವಿಂ ಪಾಳಿಸುತ್ತಮಿರೆ ಫಣಿವಂತಂ ॥ 269 ॥

ಪಂಪಾಕ್ಷೇತ್ರ

ಮ ವಿ ॥ ಅದು ಪುಣ್ಯೋದಯ ಜನ್ಮಭೂಮಿ ದುರಿತೌಘಚ್ಛೇದನಾವಾಸಮ
ಭ್ಯುದಯಾನೀಕ ಫಳಪ್ರದಂ ಸುಖಲತಾ ಸಂವರ್ದ್ಧನಕ್ಷೇತ್ರಮಾ
ವುದು ಭಕ್ತರ್ಗಭಿವಾಂಛಿತಾರ್ಥ ಸುಖಮನ್ತಾನೀವ ಸಂಸ್ಥಾನವೆಂ
ಬುದು ಲೋಕಂ ಭುವನತ್ರಯೈಕ ಹಿತಮಂ ಪಂಪಾವರಕ್ಷೇತ್ರಮಂ ॥ 270 ॥

ಚೌಡಯ್ಯನ ವಂಶ

ಕಂ ॥ ಕಾಮವ್ವೆ ನಾಯಕಿತಿಯುಂ
ಸೋಮಯ್ಯ ಹೆಗಡೆಯುಮೆಸೆಯಲೊಡವುಟ್ಟಿದರು
ದ್ದಾಮ ಗುಣರ್ ಸಿರಿವೆರಸಾ
ಸೋಮಂ ದುಗ್ಧಾಬ್ಧಿಯಲ್ಲಿ ಹುಟ್ಟುವ ತೆಱದಿಂ ॥ 271 ॥

ಕಾಮವ್ವೆ ನಾಯಕಿತಿಯ ಮಕ್ಕಳು, ಲಕ್ಷ್ಮಣ, ಮಾದಯ್ಯ, ಆಚಯ್ಯ

ಕಂ ॥ ಆ ಕಾಮವೆ ನಾಯಕಿತಿಗೆ
ಲೋಕಸ್ತುತನಪ್ಪ ಲಕ್ಷ್ಮಣಂ ಮಾದಯ್ಯಂ
ಸ್ವೀಕೃತ ಗುಣನಾಚಯ್ಯಂ
ಭೂಕಾನ್ತರ್ತನಯರಾದರಿಂತೀ ಮೂವರ್ ॥ 272 ॥

ಲಕ್ಷ್ಮಣ

ಕಂ ॥ ಸಿಡಿಲೆಸೆವ ಕಾಯ್ಪಿನೀಶನ
ಕಡುಗೋಪಮನಂತಕನ ಲಸನ್ಮಸಕಮನ
ಯ್ದೊಡಗೂಡಿ ಲಕ್ಷ್ಮಣನ ತಾಂ
ಪಡೆದಂ ಮಾಂಧಾತೃ ಬಳಿಕೆ ಜಗಮಂ ಪಡೆದಂ ॥ 273 ॥

ಮಾದಯ್ಯ- ಮಾಧವ

ಕಂ ॥ ಶತವರ್ಷಮನರಿಸೇನೆಗೆ
ಹಿರಣ್ಯವರ್ಷಮನೆ ಬುಧರ್ಗೆ ಕರ್ಪೂರದ ಬ
ಲ್ಸರಿಯಂ ಸಮಸ್ತ ಜನತಾ
ದರದಿಂದಂ ಕಜೆವುದಲ್ತೆ ಮಾಧವಹಸ್ತಂ ॥ 274 ॥

ಆಚಯ್ಯ

ಕಂ ॥ ಬಿಲ್ವಿಡಿದವರ್ಗಳ್ ತೆಗೆಯ
ಲ್ಕಲ್ವರ್ಧಾರಿಣಿಯೊಳೆಲ್ಲಮಿದು ವಿಪರೀತಂ
ಬಿಲ್ವಿದ್ಯೆಯಾಚಿಗಾಂಕಂ
ಬಿಲ್ವಿಡಿವಡೆ ತೆಗೆವುದಹಿತಮಂಡಲಮತ್ತಲ್ ॥ 275 ॥

ಚೌಡ

ಉ ಮಾ ॥ ಆತನ ಬಲ್ಪನಾತನವುದಾರ್ಯಮನಾತನ ತೇಜಮಮಂ ಸಮಂ
ತಾತನ ಪುಂಣ್ಯದುನ್ನತಿಯನಾತನ ಲಕ್ಷ್ಮಿಯನಾತನೊಳ್ಗುಣ
ವ್ರಾತಮನಾತನುದ್ಭವಮನಾತನ ಧರ್ಮರತತ್ವಮಂದಲಿಂ
ತೀ ತೆಱನೆಂದು ಬಣ್ಣಿಪೊಡೆ ವಾಸುಗಿಯಲ್ಲದೆ ಮಿಕ್ಕರಾರ್ಪ್ಪರೇ ॥ 276 ॥

ಕಂ ॥ ಹರಳಲ್ಲದ ಚಿನ್ತಾಮಣಿ
ಮರನಲ್ಲದ ಕಲ್ಪಭೂರುಹಂ ಪಶುತೆಯಂನಾಂ
ತಿರದ ಸುರಧೇನುವೆಂದೀ
ಧರೆ ಪೊಗಳ್ಗುಂ ಚೌಡಗಾಂಕನೀವುನ್ನತಿಯಂ ॥ 277 ॥

ಕಂ ॥ ಒಲಿಸುವದರಿದಬಲೆಯರಂ
ಸಲೆ ಮೆಲ್ಪಿಂ ಬಲ್ಪಿನಿಂದೆ ಸಂಗರದೊಳ್ತಂ
ನಲಗಿನ ಮೊನೆಯೊಳೆ ಚೌಡಣ
ನೊಲಿಸಿದ ಪರಿ ಹೊಸತು ನೋಡೆ ವಿಜಯಶ್ರೀಯಂ ॥ 278 ॥

ಚಂ ಮಾ ॥ ಸಡೆದು ದವಾನಳಂ ನಡೆಯುತಿರ್ಪುದು ಪುಲ್ವಿಡಿದಾಂತ ಭೀತಿಯಿಂ
ಮಿಡುಕುವುದಲ್ತು ನೀರೊಳಗಣಿಂ ಬಡವಾನಳನಪ್ಪಿ ಶಂಭುವಂ
ಬಿಡದೆ ಲಲಾಟನೇತ್ರ ಶಿಖಿಯಾದುದು ಚೌಡನ ತೇಜದೇಳ್ಗೆಯು
ಗ್ಗಡಕಗಿದುಗ್ರವಹ್ನಿಯೆನಲಾರ್ಗಳ ತೇಜಮನಾಂತು ಬಾಳ್ವವರ್ ॥ 279 ॥

ಮ ಸ್ರ ॥ ಹರಿದೆಯ್ದಿಡಟ್ಟಿ ಮುಟ್ಟಿತ್ತಡಸಿ ಹಿಡಿದೊತ್ತಿತ್ತು ಸುತ್ತಿತ್ತು ಕುತ್ತಿ
ತ್ತೊರಸಿತ್ತೆತ್ತಿತ್ತು ಬೀಸಿತ್ತೊಗೆದುದೊದೆದುದೀಡಾಡಿ ತೌಂಕಿತ್ತುರುಳ್ಚಿ
ತ್ತುರಮಂ ಮೆಟ್ಟಿತ್ತು ಮಾಱಾಂತರನಡಿದಡೆ ಹೊಯ್ದೊಕ್ಕಲಿಕ್ಕಿತ್ತು ಕಾಯ್ವಂ
ಧುರದೊಳ್ಸಾಮಂತ ಲಕ್ಷ್ಮೀಧರನ ಮಯಿದುನಂ ಚೌಡನೆಂಬಾ ಮದೇಭಂ
॥ 280 ॥

ಕಂ ॥ ಅಂಕುಶಕೆ ನಿಲ್ವುವುವಾನೆಗ
ಳಂಕುಶಕಿದು ನಿಲ್ವುದಲ್ತು ಲಕ್ಷ್ಮನ ನುಡಿಯೆಂ
ಬಂಕುಶಕೆ ನಿಲ್ವುದುಕ್ಕಿನ
ಡೊಂಕಿಗೆ ನಿಂದಪುದೆ ಚೌಡನೆಂಬ ಮದೇಭಂ ॥ 281 ॥

ಕಂ ॥ ಹರಿತನುವಿನ ಸಸಿಬಿಂಬದ
ಹರಕಂಠದ ಕಪ್ಪು ಪಿಂಗೆ ಚವುಡನ ಜಸದಿಂ
ಸಿರಿ ಹರಿಯಂ ಕುಮುದಿನಿ ಶಶಿ
ಧರನಂ ಶಂಕರನನಗಜೆಯಜ಼ಿಯಳ್ ಕುಜ಼ುಪಂ ॥ 282 ॥

ಚೌಡನ ಹೆಂಡತಿ ಹಾಚಲೆ

ಕಂ ॥ ಕೇಸವ ಹೆಗ್ಗಡೆಗಂ ಮಹಿ
ಮಾ ಸೌಭಾಗ್ಯಯುತೆ ಮಾದಲೆಗಮುದಯಿಸಿದಾ
ಭಾಸುರ ಸುಪುಣ್ಯೆ ಹಾಚಲೆ
ಭೂಸಂಸ್ತುತನಪ್ಪ ಚೌಡಯನ ವಧುವಾದಳ್ ॥ 283 ॥

ಮ ಸ್ರ ॥
ದೊರೆಯೇ ಚೌಡಯ್ಯನುದ್ಯತ್ಸತಿಯೆನಿಸಿದ ಹಾಚವ್ವೆಗೀ ಧಾತ್ರಿಯೊಳ್ಭಾ
ಸುರ ಚಾತುರ್ಯೋಕ್ತಿಯಂ ವಾಗ್ವಧು ಸೊಬಗಿನೊಳಾ ರಂಭೆ ಸೌಭಾಗ್ಯದಿಂದಂ
ವರಗಂಗಾದೇವಿ ಶೌಚವ್ರತದೊಳೆ ನೆಗಳ್ದಾ ಸೀತೆಯೌದಾರ್ಯದಿಂದಂ
ಸುರಭುಜಂ ರೂಪಿನಿಂದಂ ರತಿ ಸಿರಿ ವಿಳಸಲ್ಲಕ್ಷಣಾನೀಕದಿಂದಂ ॥ 284 ॥

ಚಂ ಮಾ ॥ ಅನುಪಮ ಪಾತ್ರದಾನ ವರಹಸ್ತಿನಿ ಶಂಭುಪದಾರವಿಂದಚಿ
ತ್ತಿನಿ ದುರಿತೌಘ ಶಂಕಿನಿ ಲಸಚ್ಚವುಡಯ್ಯನ ಹೃತ್ಸರೋಜ ಪ
ದ್ಮಿನಿಯೆನೆ ನಾಲ್ಕುಜಾತಿಯಬಳಾಗುಣಮಂ ಗುಣದಿಂದೆ ತಾಳ್ದಿದಳ್
ವಿನಯ ನಿಧಾನೆ ಹೆಗ್ಗಡಿತಿ ಹಾಚಲೆಯೆಂಬುದು ಧಾರಿಣೀ ಜನಂ ॥ 285 ॥

ಕಂ ॥ ಅಯ್ದೆ ಮದನಾಸ್ತ್ರದಂತಿರ
ಲಯ್ದುದ ಬಿಂದುಗಳನಾಂತ ಶುಕ್ತಿಕೆವೊಲ್ ಮು
ತ್ತಯ್ದೆಯೆನಿಪ್ಪಳ್ ಲಕ್ಮನ
ಮಯ್ದುನ ಚೌಡಣ್ಣನ ವನಿತೆ ಹಾಚಲೆಯೆಂದುಂ ॥ 286 ॥

ಚೌಡ

ಮ ವಿ ॥ ಧನಮಾ ಬಯ್ತಿಡಲೆಂದು ಪೇಳ್ವಡೆವನೇ ದಾನಕ್ಕೆ ಧರ್ಮಕ್ಕೆ ಸ
ಜ್ಜನರ್ಗ್ಗಿಷ್ಟರ್ಗ್ಗೆರೆದರ್ಗೆ ಬಾಂಧವರ್ಗೆ ಜೀರ್ಣೋದ್ಧಾರ ಸಂಸ್ಥಾಪನ
ಕ್ಕನಿಶಂ ಮಾಡುವ ದೇವತಾರ್ಚನಕೆ ಯೆಂದೆಂದಾರ್ಜಿಪೆಂಬೆಜಿ ಸ
ದ್ವಿನಿಯೋಗಕ್ಕೆದಲೆಂದು ಪೇಳ್ವಡೆವನೇ ಚೌಡಯ್ಯನೇಂರಂದದಿಂ ॥ 287 ॥

ಚೌಡ – ಹಾಚಲೆಯರ ಧರ್ಮಕಾರ್ಯಗಳು

ಕಂ ॥ ಪಂಪಾದೇವಿಗೆ ನೆಱೆ ಚೆ
ಲ್ವಂ ಪಡೆದಿರೆ ಕಂಚಿನ ಮೆಳ್ವಡಿಗಳಂ ಚೆಂಬೊ
ನ್ನಿಂ ಪೊಳೆವ ಕಳಶವಂ ಭುವ
ನಂ ಪೊಗಳಲ್ ಮಾಡಿಸಿದನೆಸೆಯೆ ಚೌಡಯ್ಯಂ ॥ 288 ॥

ಕಂ ॥ ಮುದದೆ ವಿರೂಪಾಕ್ಷ ಗೃಹ
ಕ್ಕೊದವಿದ ಪಂಪಾಲಯಕ್ಕೆ ಬ್ರಹ್ಮೇಶ ಲಸ
ತ್ಸದನಕ್ಕೆ ಭೈರವಗೃಹ
ಕ್ಕುದಾರಿ ಚೌಡಯ್ಯನೆಸೆಯೆ ಸೊದೆವಳಿಯಿಸಿದಂ ॥ 289 ॥

ಚಂ ಮಾ ॥ ಸೊಗಯಿಪ ಘಂಟೆ ಯಡ್ಡಣಿಗೆ ಯಾರುತಹಿಧೂಪಘಟಂ ಸುಪರ್ಯ್ಯಣಂ
ಜಗತತಿ ಚೆಲ್ವಿನಪ್ಪ ಕಳಶಂ ತಿಳಿವಟ್ಟಲೆ ಸಪ್ತಚಂದನಂ
ಮೃಗಮದದಂಪನಿಕ್ಕುವ ಸುಗಂಧದ ಸಿಪ್ಪು ಸುವಸ್ತ್ರಭೂಷಣಾ
ದಿಗಳನನೇಕಮಂ ಮುದದೆ ಮೈದುನ ಚೌಡಣನಿತ್ತನೊಪ್ಪಿರಲ್ ॥ 290 ॥

ಕಂ ॥ ಪತಿಮಾಳ್ಪ ಧರ್ಮಕಾರ್ಯೋಣಂ
ನತಿಯಂ ತಾಂ ಮುಂದುವರಿದು ಮಾಡುವ ಗುಣದುಂ
ನತಿಯಂ ಹಾಚಲೆ ಪಡೆದಳ್
ಕ್ಷಿತಿಯೊಳ್ ಸ್ತ್ರೀರತ್ನಮೀಕೆಯೆಂಬೊಳ್ಪೆಸರಂ ॥ 291 ॥

ಕಂ ॥ ಪಡೆದೊಡಮೆಯಪುದೆಂತುಂ
ಕಿಡುವಡೆ ಕಿಡಿದೊಡಮೆ ಧರ್ಮ್ಮವೆಂದಾರ್ಜ್ಜಿಸುವ
ರ್ತಡೆಯದೆ ಧರ್ಮವನಾರಿಂ
ಕಡುಜಾಣರೊ ಚೌಡಿಗಾಂಕನುಂ ಹಾಚಲೆಯುಂ ॥ 292 ॥

41) ಹಂಪೆ 57, ಕ.ವಿ.ಶಾ.ಸಂ. III, ಕ್ರಿ.ಶ. 1410

ಇದರಲ್ಲಿ ವಿಜಯನಗರದ ಸಂಗಮವಂಶದ ದೊರೆ ಪ್ರತಾಪದೇವರಾಯನ ಆಳಿಕೆಯಲ್ಲಿ, ಆತನ ಮಂತ್ರಿಯಾಗಿದ್ದ ಲಕ್ಷ್ಮೀಧರನು ಮಾಲ್ಯವಂತ ಪರ್ವತದ ಗುಹೆಯಲ್ಲಿ ಮಹಾಗಣಪತಿಯ ಮೂರ್ತಿಯನ್ನು ಪ್ರತಿಷ್ಠಾಪಿಸಿದುದನ್ನು ಹೇಳಿ, ಅವನ ಗುಣಗಳನ್ನು ವರ್ಣಿಸಿದೆ. ಈ ಶಾಸನವನ್ನು ರಚಿಸಿದವನು ಮಧುರಕವಿ.

ಗಣಪತಿಸ್ತುತಿ

ಸ್ರಗ್ಧರೆ ॥ ಶ್ರೀಮತ್ಸಿಂಧೂರ ಬಂಧಾರುಣಬಿದು ನವಸಂಧ್ಯಾಂಬುದಂ ಪುಷ್ಕರ ಪ್ರೋ
ದ್ದಾಮಾಂಭಃ ಶೀಕರಂ ತಳ್ತುಡುಗಣಮುರುದಂಷ್ಟ್ರಾಂಕುರಂ ಬಾಲಚಂದ್ರಂ
ಪೋ ಮಾತೇನೆಂಬ ನೇರ್ಪ್ಪಿಂ ನಭಮನಣಕಿಪಂತಿರ್ದ್ದ ನಿತ್ಯೋಂ ನಮತ್ತೇ
ಜೋಮೂರ್ತ್ತಿ ಶ್ರೀ ಮಹೇಭಾನನನವರತಂ ಕೂರ್ತು ರಕ್ಷಿಕ್ಕೆ ನಿಂಮಂ
॥ 293 ॥

ಚಂ ಮಾ ॥ ತಣಿಯೆ ಸದಾಳಿಯಂ ಪೊರೆವ ದಾನಗುಣಂ ಪರಿಪೂರ್ಣ ಭದ್ರಲ
ಕ್ಷಣಮಳವಟ್ಟ ಶಕ್ತಿ ಸುಮನಸ್ತುತಮಾದನವದ್ಯ ವಿದ್ಯೆ ಸಂ
ದಣಿಯರಮಾವನೊಳ್ನೆಗಳ್ದುದೆಂನವೊಲೆಂದು ಮುದಂ ಮಿಗಲ್ಮಹಾ
ಗಣಪತಿ ಕೂರ್ಮ್ಮೆಯಿಂ ಕುಡುಗೆ ಲಕ್ಷಣಮಂತ್ರಿಗಭೀಷ್ಟ ಸಿದ್ಧಿಯಂ ॥ 294 ॥

ಭಾಗೀರಥಿ

ಕಂ ॥ ಘೋರಭವಭಯನಿದಾಘದಿ
ನೋರಂತಳವಳಿದು ಬಂದವರ್ಗ್ಗೊಳ್ಪಂ ಭಾ
ಗೀರಥಿ ಜನಿಯಿಸಿದಾನಂ
ದಾರಾಮ ಪದಂಗಳೀವುದೊಂದಚ್ಚರಿಯೇ ॥ 295 ॥

ಲಕ್ಷ್ಮೀಧರ

ಕಂ ॥ ಶ್ರೀ ಲಕ್ಷ್ಮೀಧರಗುರುಪದ
ನಾಳೀಕ ನವೀನ ಗಂಧದೊಳ್ಬಗೆದಂದಾ
ಲೋಲತೆಯನುಳಿದ ಮನುಜಮ
ದಾಳಿಗೆ ಸೊಗಯಿಪುದೆ ಜಡಪದಾಂಬುಜ ಸಂಗಂ ॥ 296 ॥

ವರಾಹಸ್ತುತಿ

ಕಂ ॥ ಪೊಂಬೆಟ್ಟಮೆ ಪೊಸಕೇಸರ
ಮೆಂಬವೊಲಳವಟ್ಟ ಕುವಲಯಂ ಕುಮಲಯದಂ
ತಿಂಬಾಗಿರೆ ತಂನಯ ತುದಿ
ಗೊಂಬಿನೊಳಂಬುಧಿಯೊಳೆಸೆದನಾದಿವರಾಹಂ ॥ 297 ॥

ಸಮುದ್ರವರ್ಣನೆ

ಸ್ರಗ್ಧರೆ ॥
ಆ ಮಾಯಾಪೋತ್ರಿ ಧಾತ್ರೀಭರಮನಜಿಸಿ ತುಳ್ಕಾಡಿದಂದಾರ್ದ್ದ ಮರ್ತ್ಯ
ಸ್ತೋಮಂ ಮಂದಾದ್ರಿಯಂ ಮಂನಿಸದೊದೆಗಡೆದಂದಿಂಬುಗೊಂಡೋವದಂಬಿಂ
ರಾಮಂ ಕೈವೋಗದೆಚ್ಚಂದಳವಳಿಯದ ಗಾಂಭೀರ್ಯ್ಯಧಾಮಂ ತಿತಿಕ್ಷಾ
ಸೀಮಂ ಭೂಮಂಡಲಕ್ಕಾಭರಣಮೆನಿಸಿದಂ ಭೂರಿಭದ್ರಂ ಸಮುದ್ರಂ ॥ 298 ॥

ಬ್ರಹ್ಮ

ಉ ಮಾ ॥ ಅಂತೆಸೆವಂಬುರಾಶಿಯ ಮಗಳ್ಸಿರಿ ತಂನಯ ರಾಣಿಯಾಗಲೋ
ರಂತಿರನಂತತಳ್ಪತಳದೊಳ್ನಿಜಲೀಲೆಯನಿಂಬುಗೊಂಡು ನಿ
ಶ್ಚಿಂತೆಯಿನಿರ್ದ್ದ ನೀರರುಹನಾಭಿಯ ನಾಭಿಸರೋಜದೊಳ್ಜಗ
ತ್ಕಾಂತನಲಂಪಿನಿಂದೊಗೆದನೂರ್ಜಿತಶಾಸನನಂಬುಜಾಸನಂ ॥ 299 ॥

ಯದುವಂಶ

ಕಂ ॥ ಸರಸಿಜಭವಾತ್ರಿವಿಧುಬುಧ
ಪುರೂರವಾಯುಃ ಕ್ಷಿತೀಶ ನಹುಷಯಯಾತ್ಯಾ
ದ್ವರನುಕ್ರಮದಿಂ ಯದುಧರೆ
ಗರಸೆನಿಸಿದನಾದುದಾತನಿಂ ಯದುವಂಶಂ ॥ 300 ॥

ಬುಕ್ಕರಾಯ I

ಸ್ರಗ್ಧರೆ ॥ ಶ್ರೀಮತ್ಸೋಮಾಂನ್ವಯಕುದ್ಭವಿಸಿದ ಯದುವಂಶಾವನೀಪಾಲರೊಳ್ನಿ
ಸ್ಸೀಮಶ್ರೀ ಸಂಗಮಕ್ಷ್ಮಾಪತಿ ದೊರೆವಡೆದಂ ತತ್ತನೂಜಂ ಸಮಸ್ತೋ
ರ್ವ್ವೀಮಾನ್ಯಂ ರೂಢಿವೆತ್ತಂ ಹರಿಹರನದಟಿಂ ತಂ ನರೇಂದ್ರಾನುಜಂ ಸು
ತ್ರಾಮೋದ್ದಾಮಪ್ರತಾಪಂ ತಳೆದನಖಿಳ ಭೂಚಕ್ರಮಂ ಬುಕ್ಕರಾಯಂ
॥ 301 ॥

ಹರಿಹರ II

ಕಂ ॥ ಆತಂಗೆ ಜನಿಸಿದಂ ವಿ
ಖ್ಯಾತಂ ನಳ ನಹುಷನೃಗ ಭಗೀರಥರೊರೆಗೇ
ಮಾತೋ ಸರಿಮಿಗಿಲೆನಲ್ಧ
ರ್ಮ್ಮಾತತರೂಪಂ ಪ್ರತಾಪ ಹರಿಹರ ಭೂಪಂ ॥ 302 ॥

ಕಂ ॥ ದಾನವ ಮರ್ದ್ದನನಂತಿರೆ
ಮೀನಾಗದೆ ಪಂದಿಯಾಗದಪ್ರತಿರೂಪಂ
ತಾನಾ ಪ್ರತಾಪ ಹರಿಹರ
ನೇನುದ್ಧರಿಸಿದನೊ ವೇದಮಂ ಮೇದಿನಿಯಂ ॥ 303 ॥

ದೇವರಾಯ I

ಸ್ರಗ್ಧರೆ ॥ ಆ ಭೂಮೀಪಾಲ ಪುಣ್ಯಾಂಕುರಮದು ಪುರುಷಾಕಾರದಿಂ ಪುಟ್ಟಿದಂತಾ
ಶಾಭಾಗ ಪ್ರಸ್ಫುರತ್ಪಾವನಯಶನಶನಿಪ್ರೌಢ ಬಾಹುಪ್ರತಾಪಂ
ಸೌಭಾಗ್ಯ ಶ್ರೀನಿವಾಸಂ ಜನಿಯಿಸಿ ಸಕಲಕ್ಷತ್ರ ಚೂಡಾಧಿರೂಢಾ
ಜ್ಞಾಭಾರಂ ಸಾರ್ವಭೌಮೋಂನತಿಯೊಳೆಸಗಿದಂ ದೇವರಾಜಾವನೀಂದ್ರಂ
॥ 304 ॥

ಮ ಸ್ರ ॥ ಸಲೆ ನಾನಾ ಸಸ್ಯಸಂಪತ್ತಿಯನೊದವಿಸಿ ಸಂತುಷ್ಟಿಯಂ ದಾನಧಾರಾ
ಜಲದಿಂ ಸಂತಾಪಮಂ ತಳ್ಗಿಸಿ ವಿತತ ಸಿತಚ್ಛತ್ರ ಸುಚ್ಛಾಯೆಗೊಯ್ದು
ಜ್ವಲಿಪಾಜ್ಞಾದಾಮದಿಂದಂ ನಿಯಮಿಸಿ ನಿಜದೋಃ ಸ್ತಂಭದೊಳ್ಕಟ್ಟಿಗೋಮಂ
ಡಲಮಂ ಸತ್ಕೀರ್ತಿ ದುಗ್ಧಂಗಱೆದನಱಕೆಯಿಂ ದೇವರಾಜಾವನೀಂದ್ರಂ
॥ 305 ॥

ಮ ವಿ ॥ ಮಱೆಮಾತೇಂ ಪಗೆಗೊಂಡ ಪಾರ್ತ್ಥಿವರನತ್ಯುಗ್ರಾಜಿಯೊಳ್ಕಾಯ್ದು ತ
ಳ್ತಿಱಿವಾಗಳ್ನೆಗಳ್ದುಚ್ಚವಂ ಬೆರಸು ಭೇತಾಳಾಳಿ ಬೆಂನೆತ್ತರಂ
ಸುಱಿದಿರ್ಪಾಱದ ಕೈಗಳಿಂ ಕಡೆವರಂ ದಿಗ್ಭಿತ್ತಿಯೊಳ್ಪೂಡಿ ಚ
ಟ್ಟಱಿದಂತಿರ್ದ್ದಪುದಪ್ರತರ್ಕ್ಯತರ ತೇಜಂ ದೇವರಾಜೇಂದ್ರನಾ ॥ 306 ॥

ಕಂ ॥ ಪೊಡಕರಿಪ ಗಂಡಗುಣ ದು
ಗ್ಗಡಮೆಂತುಟೊ ಬಿಡದೆ ಜಡಿಯೆ ಜಯವಧುವತ್ತಿ
ತ್ತಡಿಯಿಡದೆ ಬಾಳಬಾಯೊಳೆ
ನಡೆವಳ್ ಶ್ರೀ ದೇವರಾಯ ಭೂವಲ್ಲಭನಾ ॥ 307 ॥

ಮಾದರಸ – ಸಾಯಣ

ಕಂ ॥ ಆ ದೇವರಾಯ ಭೂಪನ
ಯಾದವ ವಂಶ ಪ್ರದೀಪನಂನ್ವಯದೊಳ್ಸಂ
ದಾದಿ ಪ್ರಧಾನರೀ ಧರೆ
ಗಾದಮ್ಮಾದರಸ ಸಾಯಣಾಖ್ಯಮುಖ್ಯರ್ ॥ 308 ॥

ಉ ಮಾ ॥ ತೋಡದ ಭಾವಿಯಿಲ್ಲ ಮರೆಕಟ್ಟದ ಪೆರ್ಗ್ಗೆಱೆಯಿಲ್ಲ ಲೀಲೆಯಿಂ
ಮಾಡದ ದೇವತಾಭವನಮಿಲ್ಲೊಲವಿಂ ಬಿಡದಗ್ರಹಾರಮಿ
ಲ್ಲಾಡಲದೇನೊ ಭೂಭುವನ ಭುಂಭುಕಮಾದುದು ಕೀರ್ತ್ತಿ ಬಾಪು ನಾ
ಪಾಡಿಯೆ ಸೈಪು ಮಾದರಸ ಸಾಯಣರೆಂಬ ಮಹಾಪ್ರಧಾನರಾ ॥ 309 ॥

ಸಿಂಗಲೆ

ಕಂ ॥ ಅವರಂ ಬಲಭದ್ರಾಚ್ಯುತ
ರಿವರೆನೆ ಜನವವರ ತಂಗಿ ಸಿಂಗಲೆ ಭುವನ
ಸ್ತವನೀಯ್ಯಚರಿತೆ ಸಂತತ
ಮವನೀ ತಳದೊಳ್ಸುಭದ್ರೆಯೆನಿಪುದು ಪಿರಿದೇ ॥ 310 ॥

ರಾಮರಸ

ಉ ಮಾ ॥ ಆ ತರುಣೀ ಶಿಖಾಮಣಿಗೆ ವಲ್ಲಭನಾರೆನೆ ವಿಷ್ಣುವೃದ್ಧವಿ
ಖ್ಯಾತ ಪವಿತ್ರ ಗೋತ್ರದೊಳು ಗೋಸನೆವೆತ್ತೊಗೆದಂ ಜಗಜ್ಜನ
ಪ್ರೀತಿಕರಂ ಗುಣಾಕರನಲಂಕೃತ ಭೂಭುವನಂ ಬುಧಾಳಿ ಲೀ
ಲಾತಿಶಯ್ಯೆಕ ತಾಮರಸನೆಂದೆನೆ ರಾಮರಸಂ ಧರಿತ್ರಿಯೊಳ್ ॥ 311 ॥

ರಾಮರಸನ ಮಕ್ಕಳು

ಚಂ ಮಾ ॥ ಅನಿಮಿಷನಂದನಕ್ಕಮರಭೂರುಹ ಪಂಚಕಮೀಶ್ವರಂಗೆ ನೆ
ಟ್ಟನೆ ಮುಖಪಂಚಕಂ ನೃಪನಯಾಭಿಮತಕ್ಕಮರ್ದಂಗಪಂಚಕಂ
ಜನಿಯಿಸಿ ಲೋಕರೂಢಿವಡೆದಂತೆ ಸಮಸ್ತಜನಂ ಮನಂಗೊಳ
ಲ್ಜನಿಸಿದುದಾ ಗುಣೈಕನಿಧಿ ರಾಮರಸಂಗೆ ತನೂಜಪಂಚಕಂ ॥ 312 ॥

ಲಕ್ಷ್ಮೀಧರ, ಚೆನ್ನಮಂತ್ರಿ, ಬುಕ್ಕಣ್ಣ, ಮಾಧವ, ಪೆರ್ಗ್ಗಡೆ

ಕಂ ॥ ಕ್ರಮದಿಂ ಲಕ್ಷ್ಮೀಧರ ಚೆ
ನ್ನಮಂತ್ರಿ ಬುಕ್ಕಂಣ ಮಾಧವಂ ಪೆರ್ಗ್ಗಡೆಯೆಂ
ದಮರ್ದಿರೆ ನಾಮಂ ನೆಗಳ್ದ
ರ್ಸಮನಿಸಿ ಸಿಂಗಾಂಬಿಕಾ ಪವಿತ್ರೋದರದೊಳ್ ॥ 313 ॥

ಲಕ್ಷ್ಮೀಧರ

ಕಂ ॥ ಆ ಮೆಱೆವೈವರೊಳಾಂತಂ
ಶ್ರೀ ಮದ್ಭೀಮಪ್ರತಾಪನರ್ಜ್ಜುನಕೀರ್ತ್ತಿ

ಪ್ರೇಮಂ ಲ್ಕ್ಷ್ಮೀಧರನೆನ
ಲೀ ಮಹಿಯೊಳ್ಧರ್ಮ ಸಂಭವ ಪ್ರಭವಮಮಂ ॥ 314 ॥

ಕಂ ॥ ಕಂನಡಿಗ ಕುಲಕ್ಕೆ ರಂನದ
ಕಂನಡಿಯೆನೆ ವಿಶ್ವವಿದಿತವೃತ್ತ ಶ್ರೀ ಸಂ
ಪಂನಂ ಲಕ್ಷ್ಮೀಧರದೇ
ವಂ ನಿರ್ಮ್ಮಲನಾಗಿ ನೆಗಳ್ದನೊಳಗಂ ಪೊಱಗಂ ॥ 315 ॥

ಸ್ರಗ್ಧರೆ ॥ ಶ್ರೀರಾಮಮಂ ತಂದೆ ದೇವೋತ್ತಮ ದಶರಥ ರಾಮಂ ಮನೋದ್ಯೈವಮಾನಂ
ದಾರಾಮಂ ರೂಢಿವೆತ್ತಗ್ಗದ ಕುಲಗುರುವೆಂದಂದೆ ಪೋಷಿಪ್ಪದೇನಿಂ
ನಾರಂ ಸುಗಾಂಬಿಕಾ ಮಂಗಳಜಠರ ಸುಧಾವಾರ್ಧಿ ಸಂಜಾತನಂತಾ
ನಾರಾಮಂ ಲಕ್ಷ್ಮಣಾಮಾತ್ಯನೆ ಸಕಲ ಜಗಜ್ಞಾತ ಚೇತೋಭಿರಾಮಂ ॥ 316 ॥

ಮ ವಿ ॥ ಕೆಱೆಯಂ ಕಟ್ಟಿಸು ಭಾವಿಯಂ ಸವಸು ದೇವಾಗಾರಮಂ ಮಾಡಿಸ
ಜ್ಜೆಱೆಯೊಳ್ಸಿಲ್ಕಿದನಾಥರಂ ಬಿಡಿಸು ಮಿತ್ರರ್ಗ್ಗಿಂಬುಕೆಯ್ ನಂಬಿದ
ರ್ಗ್ಗೆಱೆವೆಟ್ಟಾಗಿರು ಶಿಷ್ಟರಂ ಪೊರೆಯೆನುತ್ತಿಂತೆಲ್ಲವಂ ಪಿಂದೆ ತಾ
ಯೆಱೆದಳ್ಪಾಲೆಱೆವಂದು ತೊಟ್ಟು ಕಿವಿಯೊಳ್ ಲ್ಕ್ಷ್ಮೀಧರಾಮಾತ್ಯನಾ ॥ 317 ॥

ಕಂ ॥ ಕಯ್ಯೆಂದೊಡೆ ಮಂದಾರದ
ಕಯ್ಯುಂ ಮಂತ್ರೀಂದ್ರ ಲಕ್ಷ್ಮಣಾಂಕನ ಕಯ್ಯುಂ
ಕಯ್ಯಲ್ಲದುಳಿದ ಮನುಜರ
ಕಯ್ಯೆಂಬುವು ಮರುಳಕೈಗಳೇತಱ ಕೈಗಳ್ ॥ 318 ॥

ಚಂ ಮಾ ॥ ವೊಡವೆಯನೋವಿ ನೋಡಿ ಬಿಡಲಾಱದೆ ಚರ್ಮ್ಮಮನೆಲ್ವನೊಳ್ಳುವೆ
ತ್ತೊಡಲ ನೆಗಳ್ಚಿ ಕೊಟ್ಟಳಿದರಂತಕಟಾ ಸಚಿವೇಂದ್ರ ಲಕ್ಷ್ಮಣಂ
ಪೊಡವಿಯೊಳಂದೆ ಪುಟ್ಟವಡೆ ವಂದಿಗಳಿಷ್ಟಮನಿತ್ತು ಜೀವಮಂ
ಪಡೆಯನೆ ಸೂತಜಾತನ ದಧೀಚಿಯ ಖೇಚರಚಕ್ರವರ್ತಿಯಾ ॥ 319 ॥

ಕಂ ॥ ಮಾತೇನೋ ದೇವರಾಯಂ
ಗಾತಂ ಸಂನ್ಮತ್ರಿಯೆನಿಸಿ ನೆಗಳ್ದಿರೆ ವಿಬುಧ
ಪ್ರೀತಿ ಮಿಗೆ ನಿಖಿಳ ವಿದ್ಯಾ
ನೀತಿಗೆ ಗುರುವೆಂನದಿರ್ಪ್ಪರೇ ಲ್ಕ್ಷ್ಮಣನಂ ॥ 320 ॥

ಮ ಸ್ರ ॥
ಸುಮನೋ ವಿಂನ್ಯಾಸದಿಂ ವಿಶ್ರುತ ವಿಬುಧ ಜನಾನೂನ ಸಂನ್ಮಾನ ದಾನ
ಕ್ರಮದಿಂದೀ ರಾಮಚಂದ್ರಾತ್ಮಜ ಸಚಿವ ಶಿರೋರತ್ನ ಲಕ್ಷೀಧರಂಗಾ
ಸ್ಸ್ವಮರೆಂದಾನಳ್ಕಜಿಂ ಕೇಳ್ದೊಡೆ ಬಿಡು ಪೋಸತೇಂ ಪೋಗಿಯುಂ ಬಂದುಕಲ್ಪ
ದ್ರುಮವೊಂದಂ ಪೇಳ್ವೆ ಮತ್ತುಳ್ಳೊಡೆ ನುಡಿ ಜಗತೀಚಕ್ರದೊಳ್ಸತ್ಕವೀಂದ್ರಾ ॥ 321 ॥

ಮ ವಿ ॥ ಪುಸಿದಾನರ್ಜ್ಜಿಸುವರ್ತ್ಥವೇಂ ಮುನಿದ ಕಯ್ಯೊಳ್ಪೇಳಲೇಂ ವಂದಿ ವಾ
ದಿಸದಿರ್ವ್ವಂಶ ವಿಶುದ್ಧಿಯೊಳ್ವಿಭವದೊಳ್ವಿಖ್ಯಾತಿಯೊಳ್ನೀತಿಯೊ
ಳ್ಜಸದೊಳ್ಜಾಣ್ಮೆಯೊಳತ್ಯುದಾರ ಗುಣದೊಳ್ಗಾಂಭೀರ್ಯ್ಯದೊಳ್ಕೂರ್ತ್ತು ಲ
ಕ್ಷಿಸೆ ಲಕ್ಷ್ಮೀಧರನಲ್ಲದುಂಟೆ ಸಭೆಯೊಳ್ ಶ್ರೀ ದೇವರಾಜೇಂದ್ರನಾ ॥ 322 ॥

ಮ ಸ್ರ ॥ ಧರಣೀಚಕ್ರಂ ಮನಂಗೊಳ್ವುದೆಯಮುರುತಮಸ್ತೋಮವಲ್ಲಾಡುವಾತ್ಮಾ
ಚರಣಂ ಸಂನ್ಮಾರ್ಗ್ಗಮುದ್ಯೋತಿಸುವ ರುಚಿ ಸದಾಲೋಕಮುರ್ವ್ವೇಳ್ವ ತೇಜಂ
ಸ್ಫುರಣಂ ನಿತ್ಯಾನುರಾಗಕ್ಕೆಡೆಗುಡಲೆಸೆವೀ ಪೆರ್ಮ್ಮೆಯಿಂ ದೇವಭೂ ಭೃ
ದ್ವರಪಾದಾಸಂನನೇನುಂನತಿ ವಡೆದನೊ ಲಕ್ಷ್ಮೀಧರಾಮಾತ್ಯ ಮಿತ್ರಂ ॥ 323 ॥

ಉ ಮಾ ॥ ಪೂವಿನ ಬಿಲ್ಲನೇಱಿಸುವ ಬಂದಬಸಂತನನಾಸೆಮಾಡುವಿಂ
ಮಾವಿನರಲ್ಗಳಂಬನಸಗೆಯ್ವೆಳೆದಿಂಗಳ ಪಂಗುಗೊಳ್ವ ಬ
ಲ್ವೇವುದೆನುತ್ತ ಚಿತ್ತಭವನಾವನ ಮೆಯ್ ವಳಿಗೊಂಡು ಕಂಡ ಕಾಂ
ತಾವಳಿಯಂ ಮರಳ್ಚುವನೆನಲಲ್ಲೊಬಗೆಂತುಟೊ ಲಕ್ಷ್ಮಣಾಂಕನಾ ॥ 324 ॥

ಸ್ರಗ್ಧರೆ ॥ ಸಾರಶ್ರೀ ನೀತಿವಾಕ್ಯಾಮೃತ ಪರಿಸರದೊಳ್ಪುಟ್ಟಿ ಮೆಯ್ ಗುಂದದಾನಂ
ದಾರಾಮಾಸಂನರಾಮಾಯಣದೊಳಮರ್ದ್ದು ತಳ್ತಾವಗಂ ಕೃಷ್ಣಲೀಲಾ
ಧಾರಂ ತಾನಾಗಿ ನಾನಾ ಫಲಮನಿಳೆಗೆ ಬೀಱಿತ್ತು ಸಂಸಾರ ಸೌಖ್ಯಾ
ಕಾರಂ ಸಂನ್ಮಂತ್ರಿ ಲಕ್ಷ್ಮೀಧರನುರುಕವಿತಾ ಕಲ್ಪವಲ್ಲೀವಿತಾನಂ ॥ 325 ॥

ಮ ವಿ ॥ ಪದಪಿಂದಂ ಕವಿರಾಜ ಲಕ್ಷ್ಮಣನ ಕಾವ್ಯಾಲಾಪಮಂ ಕೂರ್ತ್ತು ಕೇ
ಳದೆ ಮುಂ ಪೋದರೆ ಪಾದವೊಂಮೆ ಕಿವಿಗೊಟ್ಟೆತ್ತಾನುಮಾರ್ಯ್ಯೆದು ಸಂ
ಮುದದಿಂ ಸೈತಿರದೋರು ದೂತಿಯರ ಮಾತಂ ಮೀಱಿ ಕಣ್ಗೊಂಡು ನೋ
ಡಿದ ಪೆಂಣ್ಗಳ್ಪುದಿದಿದ್ದ ಪೂಗಣೆಯ ಪುಂಣಿಂದಂಣಿ ಪುಯ್ಯಲ್ಚರೇ ॥ 326 ॥

ಕಂ ॥ ವೋದಿ ಪರವಂಚನಂಗೆ
ಯ್ವೋದುಗಳಂತಿರ್ಕ್ಕೆ ಲಕ್ಷ್ಮಣಾಮಾತ್ಯನ ವೊ
ಲಾದರಿಸಿ ಸಚಿವರಾದವ
ರೋದುವುದೋರಂತೆ ಪತಿಹಿತಾರ್ತ್ಥಾಗಮಮಂ ॥ 327 ॥

ಸ್ರಗ್ಧರೆ ॥
ಸ್ವಾಮಿದ್ರೋಹರ್ಕ್ಕೆಲಂಬರ್ಮ್ಮಸಗಿ ಮಸೆದ ಬಾಳ್ಗೊಂಡು ಚಂಡ ಪ್ರತಾಪೋ
ದ್ದಾಮಶ್ರೀ ದೇವ ಭೂವಲ್ಲಭನ ಗೃಹ ಮಹಾದ್ವಾರಮಂ ಮತ್ತೆ ಮತ್ತಿಂ
ನೇ ಮಾತೀಮಾತಿನಿಂ ಮುಂನುಱುಬಿ ತಱುಬೆ ನೂಱಿಂಕಮಂ ಸ್ವಾಮಿಕಾರ್ಯ್ಯ
ಕ್ಕಾಮೆಂದುರ್ವ್ವೇಳ್ವರುತ್ಸಾಹಮನದಟಲದಂ ಲೋಕದೊಳ್ ಲಕ್ಷ್ಮಣಾಂಕಂ ॥ 328 ॥

ಚಂ ಮಾ ॥
ಕೆಲಬಲನಂ ವಿಚಾರಿಸದೆ ಬಂದ ಭಟರ್ಬ್ಬಲವಂತರೆಂದೆನು
ತ್ತಲಸದೆ ನಿಂದು ತಂನ ಪತಿಕಾರ್ಯ್ಯಮೆ ಕಾರ್ಯ್ಯಮೆನುತ್ತ ಪೂಣ್ದು ಮೆಯ್
ಗಲಿ ತಲೆಮಟ್ಟವೀರ್ವ್ವಡೆದ ಮುಂದಲೆಯೊಂದೆ ಜಗಜ್ಜನಕ್ಕೆ ಮೂ
ದಲೆಯೆನಿಸಿತ್ತದೇವೆಱಗೊ ಲಕ್ಷ್ಮಣಮಂತ್ರಿಯ ಸಂದ ಸಾಹಸಂ ॥ 329 ॥

ಕಂ ॥ ನೆಲದೊಳ್ಪತಿಹಿತರಾವೆಂ
ದುಲಿವರ ನಾಲಿಗೆಯನಲುಗಲಿಯ್ಯದ ಬಲು ಸಂ
ಕಲೆಯಾದುದು ಮುಂ ಕೀರ್ತ್ತಿಯ
ಕಲೆ ಮೂಜಗವಱಿಯೆ ಮಂತ್ರಿ ಲಕ್ಷ್ಮೀಧರನಾ ॥ 330 ॥

ಕಂ ॥ ಆರಾನುಂ ದಾನೋದಕ
ಧಾರೆಯನೊಸೆದಾಂಪರವಸಿಸುರರೊಳ್ವೆರಗಂ
ಪಾರದೆ ಲಕ್ಷ್ಮಣನಂತಸಿ
ಧಾರೆಯನಾಂಪವರ್ಗಳುಂಟೆ ವಸುಧಾತಳದೊಳ್ ॥ 331 ॥

ಮ ಪಿ ॥ ಗಣನಾಮಾತ್ರಮೆ ದೇವರಾಯ ನರನಾಥಾಸ್ಥಾನದೊಳ್ಮಾನವಾ
ಗ್ರಣಿಗಳ್ಸ್ವೈತೆ ವಿಚಾರಿಪಾಗಳುಪಧಾ ಸಂಶುದ್ಧಿಯಿಂ ಬುದ್ಧಿಯಿಂ
ಗುಣದಿಂ ಗೌರವದಿಂ ಪೊದಳ್ದೆಸೆವ ಮುದ್ರಾಮಾತ್ಯಯೋಗಂಧರಾ
ಯಣ ಚಾಣಾಕ್ಯ ಸುಮಂತ್ರರೊಳ್ದೊರೆಗೆವಂದಂ ಮಂತ್ರಿ ಲಕ್ಷ್ಮೀಧರಂ
॥ 332 ॥

ವಚನ ॥

ಆ ಮಹಾಪ್ರಧಾನ ಲಕ್ಷ್ಮೀಧರನೊಂದು ರಾತ್ರಿಯೊಳ್ಸುಖಸುಪ್ತಿಯನಪ್ಪುಗೆಯ್ದಿರ್ಪಿನಂ
ಸ್ವಪ್ನದೊಳ್ ಅಪ್ರತಿಮ ತೇಜನಖಿಲಚರಾಚರಜನನ ಬೀಜಂ
ಬೀಜಾಪೂರ ಸಮುಚಿತಾಯುಧ ವಿಶೇಷ ವಿಲಸಿತ ದಶಭುಜಾದಂಡಂ
ಖಂಡೇಂದುಮಂಡಿತ ಮಣಿಮಕುಟ ಮಹನೀಯ್ಯಶಿಖಂಡಂ
ಗಂಡಸ್ಥಳಗಳಿತ ಮದಮದಿರಾ ಪ್ರಮತ್ತಝೇಂಕಾರ ಮುಖರಿತ ನಿಖಿಲದಿಗ್ವಿಲಯಂ
ವಲಯಾಂಗದಾಂಗುಲೀಯ್ಯಕಾದಿ ಭೂಷಣ ವಿಭೂಷಿತ ಸರ್ವಾಂಗನ್
ಅಂಗೀಕೃತ ಭುಜಂಗ ಪರಿವೃಢ ಪ್ರಾಲಂಬಂ ಲಂಬೋದರ ಕಲಿತ ಕಾಕೋದರ
ಫಣಾಮಣಿ ಮರೀಚಿ ನಿರಾಕೃತನಾಭೀಕುಹರ ವಿಹರದ ಪಾರಾಂಧಕಾರಂ
ಕನಕಕಟೀಸೂತ್ರ ವಿಚಿತ್ರಿತ ಜಘನಮಂಡಲಂ
ವೀರಕಟಕ ನೂಪುರ ಪುರಸ್ಕೃತ ಪದಸರೋಜ ಸನಾಥಂ
ಯಥೋಚಿತ ದಿಶಾನಿಷಂಣ ನಿಜನಿಜಶಕ್ತಿಯುಕ್ತ ಹರಿಹರ ವರಾಹ ಕುಸುಮಸಾಯಕಂ
ಸೇವಕಜನ ಮನೋರಥದಾಯಕಂ ಸಕಲ ಲೋಕೈಕನಾಯಕಂ ಮಹಾವಿನಾಯಕಂ
ಬಂದು ಎಲೆ ಲಕ್ಷ್ಮೀಧರಾ

ವಿರೂಪಾಕ್ಷ ದೇವಾಲಯ

ಮ ವಿ ॥ ಲವಣಾಂಬೋನಿಧಿ ತಳ್ತು ಸುತ್ತಿಱಿದ ಜಂಬೂದ್ವೀಪಮಧ್ಯಸ್ಥ ಮೇ
ರುವ ತೆಂಕಲ್ಭರತಾವನೀತಳದೊಳುಂಟಾಹ್ಲಾದಕಂ ಪುಣ್ಯ ಸಂ
ಭವ ಸದ್ಮಂ ಹರಿಪದ್ಮಗರ್ಭಮುಖ ಲೇಖಾನೀಕ ಲೀಲಾಮಹೋ
ತ್ಸವಗೇಹಂ ಪರಿಧೂತ ಮೋಹಮಮಲನ್ಧಾಮಂ ವಿರೂಪಾಕ್ಷನಾ ॥ 333 ॥

ತುಂಗಭದ್ರಾ ನದಿ

ಕಂ ॥ ಯೆಡದ ಮಡದಿಗೆ ಬಿಗುರ್ತಾ
ಜಡೆವೆಟ್ಟೆಗೊಂಡಮರನದಿಯದೇ ಸೊಬಗೆನೆ ನೇ
ರ್ಪಡೆ ತುಂಗಭದ್ರೆ ದೇವನ
ಬಿಡದಡಸಿದ ವಾಮಭಾಗದೊಳ್ಸೊಗಯಿಸುಗುಂ ॥ 334 ॥

ಕಂ ॥ ಜಲಮಮೃತಮಯಂ ಸೊಗಯಿಪ
ಜಲವಿಹಗಂ ಪರಮಹಂಸಮಯಮೆಂದುಂ ತ
ಜ್ಜಲಚರಮನಿಮಿಷಮಯಮೆನ
ಲೆಲೆ ಬಂಣಿಪನಾವನದಱ ತೀರದ ಸಿರಿಯಂ ॥ 335 ॥

ವಚನ ॥

ಆ ಪಾವನ ನದೀ ಪಯಃಪಾನ ಪರಿಣೆತ ಪರ್ಣಿಲ ತೃಣ
ನಾಳಿಕೇರ ಚೂತ ಮಾತುಳುಂಗ ರಂಭಾಜಂಭೀರ ಪೂಗ ನಾಗ
ಕೇಸರಾದಿ ಭೂಜಾತಜಾತಿ ಕೇತಕೀಮುಖ ನಿಖಿಲ ಕುಸುಮ ಸುಗಂಧ
ಬಂಧುರ ಗಂಧಶಾಳೀ ಪಾಳೀ ಪರಿಕಲಿತ
ಕಳಹಂಸ ಶುಕ ಪಿಕ ಶಿಖಾವಳ ಕೇಕೀವಿಳಾಸವಿಚಿತ್ರಂ
ಸಕಲಭುವನಪವಿತ್ರಂ ದುರಿತಲತಾಲವಿತಂ ಭವಾಂಬುಧಿ ಬಹಿತ್ರಂ
ವಾರಾಣಶೀ ಶ್ರೀಪರ್ವ್ವತಾದಿ ಸಿದ್ಧಸ್ಥಾನ ಮಣಿಗಣಮಾಲಾಸೂತ್ರಂ ಪಂಪಾಕ್ಷೇತ್ರಂ
ಸೊಗಯಿಪ್ಪುದುದಱ ಪೂರ್ವ್ವದಿಗ್ಭಾಗದೆ
ಮಾಲ್ಯವತ್ಪರ್ವತದ ತೆಂಕವಕ್ಕದೊಳೊಂದು ಮಹಾಗುಹೆಯುಂಟು
ಅದು ಅಪ್ರತಿಮ ದಿವ್ಯಾಗಾರಂ
ಅದಱೊಳೆಂನ್ನಂ ಸುಪ್ರತಿಷ್ಠೆಗೆಯ್ವೆದೆಂದು ನಿರೂಪಿಸೆ
ಮಹಾಪ್ರಸಾದವೆಂದು ಕೈಕೊಂಡು

ಲಕ್ಷ್ಮೀಧರ

ಸ್ರಗ್ಧರೆ ॥ ಆ ಸನ್ಮಂತ್ರೀಂದ್ರ ಲಕ್ಷ್ಮೀಧರನಮರಗುರುಶ್ರೀ ವಿರೂಪಾಕ್ಷಲೀಲಾ
ವಾಸಂ ತಾನಾದ ಪಂಪಾಪುರ ಪರಿಸರದೀ ಮಾಲ್ಯವದ್ಭೂಧ್ರದೊಳ್ನಾ
ನಾಸಿದ್ಧಿಶ್ರೀಯ್ಯನೀಯಲ್ನೆಲೆಗೊಳಿಸಿ ಮಹಾಶಕ್ತಿ ಹೇರಂಭನಂ ವಿ
ಶ್ವಾಸಂ ಮೆಯ್ವೆತ್ತ ಭಕ್ತಿಪ್ರಭವ ವಿಭವದಿಂ ಧಾತ್ರಿಯೊಳ್ಕೀರ್ತ್ತಿವೆತ್ತಂ ॥ 336 ॥

ಶಾಸನದ ಕಾಲ

ಉ ಮಾ ॥ ತತ್ಸಮಯಕ್ಕೆ ದೃಕ್ಪುರ ಶಿಖೀಂದು ಶಶಾಂಕಮಿರಲ್ವಿರೋಧಿ ಸಂ
ವತ್ಸರ ಫಾಲ್ಗುಣ ಪ್ರಥಮವಾಸರದೊಳ್ಗುರುವಾಸರಮೊಂದೆ ವಿ
ದ್ವತ್ಸಭೆ ಬಂಣಿಪಂತೆಸಗಿದಂ ಸಚಿವಾಗ್ರಣಿ ಲಕ್ಷ್ಮಣಂ ಸಮ
ಸ್ತೋತ್ಸವಮುಣ್ಮಿಪೊಣ್ಮಿರೆ ಮಹಾಗಣನಾಥ ನವಪ್ರತಿಷ್ಠೆಯಂ ॥ 337 ॥

ಮ ಸ್ರ ॥ ಗುರುದೈವಂ ಮೆಚ್ಚಿ ನಿಚ್ಚಂ ಬಗೆದಣಿವ ಮನೋಭಕ್ತಿ ವಿದ್ವಜ್ಜನಂ ಬಾ
ಪುರೆ ಬಾಪೆಂದೆತ್ತಿ ಕೊಂಡಾಡುವ ವಿವಿಧಕಳಾಪ್ರೌಢಿ ವಂದಿಬ್ರಜಂ ಕಂ
ಡಿರದಿಷ್ಟಾರ್ಥಂಗಳಂ ಕೊಂಡಡರೆ ಪೊಗಳ್ವ ವಿಶ್ರಾಣನಂ ವಿಶ್ವವಂದ್ಯಂ
ಚರಿತಂ ತಾನಾಗಲೇನುಂನತಿವಡೆದನೊ ಲಕ್ಷ್ಮೀಧರಾಮಾತ್ಯವರ್ಯ್ಯಂ
॥ 338 ॥

ಕಂ ॥ ಅವನಿಯನಾಕ್ರಮಿಪುದು ದಾ
ನವಿಚಿತ್ರಂ ಲೋಕವಱಿಯೆ ಶುಚಿಯೆನಿಸಿರ್ದ್ದಂ
ಶಿವನುಟ್ಟ ಸೀರೆಯಂ ಪಿಡಿ
ದವಗಡಿಪಳ್ಕೀರ್ತ್ತಿಲಕ್ಷ್ಮಿ ಲಕ್ಷ್ಮೀಧರನಾ ॥ 339 ॥

ಮ ವಿ ॥ ಪೊಗಳಲ್ಪೊಂಬುಳಿಯೋದ ಪೆಂಪಿನ ಯಶೋಲಕ್ಷ್ಮೀಧರಂ ಬಲ್ಲವ
ರ್ಬ್ಬಗೆಗೊಳ್ವಿಂಪಿನ ಸೊಂಪುವೆತ್ತ ಕವಿತಾ ಲಕ್ಷ್ಮೀಧರಂ ರಾಜನೀ
ತಿಗೆ ನೇರ್ಪ್ಪಾದ ಮಹಾಪ್ರಧಾನ ಪದವೀ ಲಕ್ಷ್ಮೀಧರಂ ಧಾತ್ರಿಯೊ
ಳ್ನೆಗಳ್ದಂ ನಿರ್ಮ್ಮಲ ರಾಮಚಂದ್ರ ತನಯಂ ಸಂನ್ಮಂತ್ರಿ ಲಕ್ಷ್ಮೀಧರಂ ॥ 340 ॥

ದೇವಕಿ – ಸೋಮಲೆ

ಕಂ ॥ ಧರೆ ಪೊಗಳ್ವಿನಮಾ ಲಕ್ಷ್ಮೀ
ಧರಂಗೆ ದೇವಕಿಯುಮೆಸೆವ ಸೋಮಲೆಯುಂ ಕೈ
ನೆರದರಸಿಯರಾದರ್ ಕೂ
ರ್ತರಸಿಯರಾದಂತೆ ಹರಿಗೆ ಸಿರಿಯುಂ ಧರೆಯುಂ ॥ 341 ॥

ದೇವಕಿ

ಕಂ ॥ ಪಿರಿಯಳೆನೆ ಸಂದ ಪೆರ್ಮ್ಮೆಯ
ಪಿರಿಯಳ್ ಸೌಭಾಗ್ಯದಿಂದ ಪಿರಿಯಗಳ್ಗುಣದಿಂ
ಪಿರಿಯಳ್ಪಾತಿವ್ರತ್ಯದೆ
ಪಿರಿಯಳೆನಲ್ಪಿರಿಯಳಮಮ ದೇವಕಿ ನೆಗಳ್ದಳ್ ॥ 342 ॥

ಉ ಮಾ ॥ ಪೂವಿನ ಮಾಲೆ ತುಂಬಿದಿರುಳೀಶನ ಜೂಟಕೆ ಚಂದ್ರಲೇಖೆ ಲ
ಕ್ಷ್ಮೀವರನೊಳ್ಪುರಕ್ಕೆ ವನಮಾಲೆ ಸಮಂತಮರ್ದ್ದಂತೆ ವಿಶ್ವಧಾ
ತ್ರೀ ವಿನುತ ಪ್ರಸಿದ್ಧ ಗುಣಲಕ್ಷ್ಮಣ ಮಂತ್ರಿಗೆ ತಾನೆ ಸತ್ಕಳಾ
ಭಾವಕಿ ಸೇಸೆವೆತ್ತೆಸೆದ ದೇವಕಿ ವಲ್ಲಭೆಯಾದಳಾವಗಂ ॥ 343 ॥

ರಾಮಚಂದ್ರ

ಉ ಮಾ ॥ ಆ ನೆಗಳ್ದೊಳ್ಪುವೆತ್ತೆಸೆವ ದೇವಕಿ ದೇವಕಿಯೆಂತು ಧಾತ್ರಿ ಸ
ಮ್ಮಾನಿತ ರಾಮಕೃಷ್ಣಯುಗಮಂ ಪಡೆದಳ್ಪಡೆದಳ್ದಲಂತೆ ಪ
ದ್ಮಾನನದೊಳ್ಪುಮೀ ಕುವಲಯಾಂಗದ ನೇರ್ಪ್ಪುಮೊಡಂಬಡಲ್ಕೆ ತೇ
ಜೋನಿಧಿ ಭಾನುವಂ ವಿಬುಧಸೇವ್ಯ ಕಳಾನಿಧಿ ರಾಮಚಂದ್ರನಂ ॥ 344 ॥

ಲಕ್ಷ್ಮೀಧರ

ಮ ವಿ ॥ ತನುವಂ ಮಂನ್ಮಥ ಸೌಮ್ಯಭಾವ ಮೊಳಕಯಲ್ಲಂದನ ಶ್ರೀಮುಖಂ
ತನಗಾನಂದಮನೀಯೆ ವಿಕ್ರಮ ಜಯಂಗಳ್ದೋಳ್ಗೊಳಿಂಬಾಗೆ ನೆ
ಟ್ಟನೆ ಸಾಧಾರಣಮಲ್ಲದೀಶ್ವರ ಪದಾಬ್ಜಂ ಪಾರ್ಥಿವಶ್ರೀಯನೀ
ಯೆ ನಯಂಬೆರ್ತ್ತುದು ಕೀರ್ತಿದುಂದುಭಿ ನಿನಾದಂ ಲಕ್ಷ್ಮಣಾಮಾತ್ಯನಾ ॥ 345 ॥

ಶಾಸನ ಕವಿ ಮಧುರ

ಕಂ ॥ ಪಿಂಗದೆ ಲಕ್ಷ್ಮೀಧರ ಸಚಿ
ವಂಗಾಚಂದ್ರಾರ್ಕ್ಕಮೊದವಿದಾಯುಂ ಶ್ರೀಯುಂ
ಸಂಗತಿವಡೆದಿರೆ ಬರೆದಂ
ಮಂಗಳಮಯಮಾಗೆ ಮಧುರನೀ ಶಾಸನಮಂ ॥ 346 ॥

ಮ ಸ್ರ ॥ ಬಗೆಗೊಳ್ವಂತಿರ್ವರಂ ಮೆಚ್ಚಿಸಿದ ಸುಕವಿ ಸುಕ್ಷೇತ್ರ ಹಸ್ತ್ಯಶ್ವ ಭೂಷಾ
ದಿಗಳಂ ಮುಂ ಪೆತ್ತೊಡಂ ಭೂಭರದೊಳಣಿಯದೀ ಲೋಕಮೆಂದೆಂಬು
ದುಗಮುಂವೇಳಲ್ಕವೀಂದ್ರಾಭರಣ ಮಧುರನಂ ಮಾನ್ಯನಂಗೂಡಿ ತನ್ನಿಂ
ಮಿಗಿಲೆಂಬಂತಳ್ಕಜಿಂ x x x x x ನವನಿಯೊಳ್ಮಂತ್ರಿ ಲಕ್ಷ್ಮೀಧರಾಂಕಂ ॥ 347 ॥

ಮ ವಿ ॥ ಗಣಿದಂಗೊಳ್ವೆಡೆ ಮಿಕ್ಕನಕ್ಕರದ ಮಾತಂತಿರ್ಕ್ಕೆ ತನ್ನಾಣೆ ಘೋ
ಷಣೆ ಸಲ್ಗುಂ ಸುಕವೀಂದ್ರ ವೃಂದ ಸಭೆಯೊಳ್ ತಾನೆಂದೊಡಂಮಂಮ ಧಾ
ರಿಣಿಯೊಳ್ಕೇಳ್ಕಜಿಯಾರ್ಜಡಾ ಮಧುರನಂ ನಿರ್ನ್ನಿತ ಕರ್ನ್ನಾಟ ಲ
ಕ್ಷಣ ಪಾದಸರೋಜನಂ ಪ್ರವಿಲಸದ್ಧಾತ್ರೀಮುಖಾಂಭೋಜನಂ ॥ 348 ॥

ಕಂ ॥ ಯೀ ಸಿದ್ಧಶಾಸನಂ ಕೈ
ಲಾಸಂ ಹಿಮಗಿರಿ ಸುಮೇರು ವಾರಾಶಿ ನೆಲಂ
ನೇಸಱು ನೆಗಳ್ವಿನಮೆಂದುಂ
ಮಾಸದೆ ಮಸುಳಿಸದೆ ನಿಲ್ಕೆ ನಿಃಪ್ರತ್ಯೂಹಂ ॥ 349 ॥

ಶಿವಮೊಗ್ಗ ಜಿಲ್ಲೆ

ತೀರ್ಥಹಳ್ಳಿ ತಾಲ್ಲೂಕು

1) ದಾನಶಾಲೆ 173, E.C. XIII (R), ಕ್ರಿ.ಶ. 1103

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ಆರನೆಯ ವಿಕ್ರಮಾದಿತ್ಯನ ಆಳಿಕೆಯ ಕಾಲದಲ್ಲಿ ತ್ರಿಭುವನಮಲ್ಲ ಸಾಂತರಸು ಆನಂದೂರಿನಲ್ಲಿ ಬಸ್ತಿಯನ್ನು ಕಟ್ಟಿಸಿ ದಾನ ನೀಡಿರುವುದನ್ನು ಹೇಳಿದೆ.

ತ್ರಿಭುವನಮಲ್ಲಸಾಂತರ (ತೈಲ)

ಮ ಸ್ರ ॥

ಕನಕಾದ್ರೀಂದ್ರಕ್ಕಮಂಭೋನಿಧಿಗಮವನಿಗಂ ಪೆಂಪಿನೊಳ್ ಗುಣ್ಪಿನೊಳ್ ತಿ
ಣ್ಪಿನೊಳೆಂತುಂ ತಾನೆ ಪೋ ಪಾಸಟಿ ಸರಿ ಸಮನೆಂದಂದದಾವಂ ಸಮಸ್ಕಂ
ಧನದಾವಂ ಪೋಲ್ವನಾವಂ ಪಡಿಯೆನಿಸುವವಂ ರಾಜಸರ್ವಜ್ಞನೊಳ್ ತೈ
ಲನೊಳರ್ಥಿಸ್ತೋಮಚಿಂತಾಮಣಿಯೊಳಖಿಳಭೂಭಾಗದೊಳ್ ನೋಟ್ಪೊಡೆಂತುಂ
॥ 1 ॥

ಕಂ ॥ ಅದಟನಿದಿರಾಂತ ಭೂಪರ
ನದಟಲೆದೆರೆದರ್ಥಿನಿಕರಮಂ ತಣಿಪಿ ಜಗ
ದ್ವಿದಿತಯಶಂ ನೆಗಟ್ದಂ ಭೂ
ಪದಿಳೀಪಂ ವೈರಿವೀರಕಾಳಂ ತೈಳಂ ॥ 2 ॥

ಕಂ ॥ ಚಾಗದದಗುಂತಿ ಯಾಚಕ
ರಾಗಿಸಿದುದು ಪಲಬರರಸರಂ ಬೀರದದೊಂ
ದೋಗಡಿಸದೇಟ್ಗೆ ವನಚರ
ರಾಗಿಸಿದುದು ಪಲಬರಹಿತರಂ ತೈಲುಗನಾ ॥ 3 ॥

ಶಿಕಾರಿಪುರ ತಾಲ್ಲೂಕು

2) ಬಂದಳಿಕೆ 150, E.C. XIV (R), ಕ್ರಿ.ಶ. 911

ಇದರಲ್ಲಿ ರಾಷ್ಟ್ರಕೂಟರ ದೊರೆ ಎರಡನೇ ಕನ್ನರದೇವನ ಆಳಿಕೆಯಲ್ಲಿ ಜಕ್ಕಿಯಬ್ಬೆ ಎಂಬುವವಳು ಸಲ್ಲೇಖನ ವಿಧಿಯಿಂದ ಮರಣ ಹೊಂದಿದುದನ್ನು ಹೇಳಿದೆ. ನಾಳ್ಗಾವುಂಡ ನಾಗಾರ್ಜುನನ ಪತ್ನಿಯಾದ ಜಕ್ಕಿಯಬ್ಬೆಯು ಗಂಡನ ಮರಣಾನಂತರ, ಅವನ ಅಧಿಕಾರ ಪದವಿಯನ್ನು ಪಡೆದಿದ್ದಳು.

ಮಲ್ಲಿಕಾಮಾಲೆ ॥ ಉತ್ತಮ ಪ್ರಭುಶಕ್ತಿಯುಕ್ತೆ ಜಿನೇಂನ್ದ್ರಶಾಸನಭಕ್ತೆ ಕಾ
ನ್ತ್ಯಾತ್ತ ವಿಭ್ರಮೆ ಜಕ್ಕಿಯಬ್ಬೆ ಸಮನ್ತು ನಾಗರಖಣ್ಡಮೆ
ಪ್ಪತ್ತುಮಂ ವಧುವಾಗಿಯುಂ ನಿಜವೀರವಿಕ್ರಮಗರ್ಭದಿಂ
ಪೆತ್ತವಂ ಪ್ರತಿಪಾಳಿಸುತ್ತೋಷದಿಟ್ಟಿಳಿಟ್ಟವಸಾನದೊಳ್ ॥ 4 ॥

ಚಂ ಮಾ ॥ ತನುರುಜೆಯಂ ಪುದುಙ್ಗುಳಿಸೆ ಸಂಸ್ಕೃತಿಭೋಗವಸಾರಮೆನ್ದು ನಿ
ಚ್ಚನಿಸಿ ನಿಜಪ್ರಿಯಾತ್ಮಜೆಗೆ ಸನ್ತತಿಯಂ ಕರೆದಿತ್ತು ಮೋಹ ಬ
ನ್ಧನದ ತೊಡರ್ಪಿನೊಳ್ತೊದಟ್ಟು ಮೋಹಿಸಿ x x ಙಬಲ್ಲೆಬನ್ದು ಬ
ನ್ದನಿಕೆಯ ತೀರ್ಥದೊಳ್ತೊಬಿದುದಚ್ಚರಿ x x x ಜಕ್ಕಿಯಬ್ಬೆಯಾ ॥ 5 ॥

3) ಬಂದಳಿಕೆ 151, E.C. XIV (R), ಕ್ರಿಶ. 1015

ಈ ವೀರಗಲ್ಲು ಶಾಸನದಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ಎರಡನೇ ಜಯಸಿಂಹನ ಆಳಿಕೆಯಲ್ಲಿ ಯುದ್ಧದಲ್ಲಿ ಮಡಿದ ಸಾನ್ತರರ ನಾಗವರ್ಮವನ್ನು ಹೊಗಳಿದೆ.

ಕಂ ॥ ತನ್ದೆ ತನಗೀಯೆ ಭಾರಮ
ನೊನ್ದುತ್ತರಮಾಗೆ ಸಲಿಸಿ ನಿಜಸಾಹಸದಿಂ
ಕುನ್ದದೆ ಧರೆ ಪೊಗಳುತ್ತಿರೆ
ಬನ್ದಣಿಕೆಯ ನಾಗವರ್ಮನಮಳಚರಿತ್ರಂ ॥ 6 ॥

ಕಂ ॥ ಸಾನ್ತಱರ ನಾಗವರ್ಮನು
ದಾತ್ತಗುಣಂ ಪುಟ್ಟೆ ಕೀರ್ತಿಯುಂ ಧರ್ಮಮುವಿ
ರ್ಪತ್ತು ತಲೆವರೆಗೆಮೆಸೆದಿರೆ
ಸತ್ತು ಸುರಾಂಗನೆಯರೊಡನೆ ಸುಖದಿಂದಿಟ್ಟಂ ॥ 7 ॥

4) ಬಳ್ಳಿಗಾವೆ 237, E.C. XIV (R), ಕ್ರಿಶ. 1019

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆಯಾದ ಜಯಸಿಂಹನ ಸಾಮಂತ ಕುಂದಮರಸನು ಬಲಿಪುರದ ನಂದಿಕೇಶ್ವರ ದೇವರಿಗೆ ಭೂಮಿಯನ್ನು ದತ್ತಿ ಬಿಟ್ಟಂತೆ ಹೇಳಿದೆ.

ತ್ರಿಮೂರ್ತಿಗಳು

ಉ ಮಾ ॥ ಶ್ರೀಪತಿ ಚಕ್ರಧಾರಿ ಗರುಡಾಸನನಂಬುರುಹಾಕ್ಷನದ್ರಿಜಾ
ತಾಪತಿ ಶೂಲಧಾರಿ ವೃಷಭಾಸನನಬ್ಧಧಿಕೇಕ್ಷಣಂ ವಚ
ಶ್ರೀಪತಿ ಪಾಶಧಾರಿ ಕಳಹಂಸಗನಷ್ಟಮಿತಾಕ್ಷನೆಂದಿವರ್
ತ್ರೈಪುರುಷರ್ ತ್ರಿಲೋಕಜನಪೂಜಿತರೀಗೆಮಗಿಷ್ಟಸಿದ್ಧಿಯಂ ॥ 8 ॥

ಕಂ ॥ ರಟ್ಟರ ಕೈಗೆವಿರ್ದೆಳೆಯುಂ
ಪಟ್ಟಮುಮಂ ರಟ್ಟರಾಜ್ಯದರಸುಗಳಂ ಮುಂ
ಬಿಟ್ಟು ತಱಿದೊಟ್ಟಿ ರಟ್ಟಘ
ರಟ್ಟಂ ಚಾಳುಕ್ಯ ರಾಜ್ಯ ಪಟ್ಟಮನಾನ್ತಂ ॥ 9 ॥

ಕಂ ॥ ಆ ಜಯಸಿಂಘನೃಪಾಳಂ
ಭೋಜ ನೃಪಾಂಭೋಜರಾಜನಿನನಿಭತೇಜಂ
ರಾಜೇಂದ್ರ ಚೋಳಗಜಮೃಗ
ರಾಜಂ ರಾಜಾಧಿರಾಜನೆನಿಪುದು ಪಿರಿದೇ ॥ 10 ॥

ಜಯಸಿಂಹ I

ಚಂ ಮಾ ॥ ಪಸರಿಸಿ ಪರ್ಬಿ ಗೊಂದಳಿಸಿ ನಿಂದ ತಮಸ್ತಮಮಂ ತೆರಳ್ಚಿ ಬಂ
ದೊಸೆದಿನನೇಱುವಂತುದಯಪರ್ವತಮಂ ಕಲಿಕಾಲದೇಳ್ಗೆಯಂ
ದೆಸೆಗಿಡೆ ತೂಳ್ದಿ ತಾಳ್ದಿ ಕೃತಲಕ್ಷ್ಮಿಯನೊಳ್ಪಿನ ತೆಳ್ಪುಗಳ್ ಜಗ
ಕ್ಕೆಸೆದಿರೆ ಸಿಂಹವಿಷ್ಟರಮನೇಱಿದನಾಜಯಸಿಂಹವಲ್ಲಭಂ ॥ 11 ॥

ಉ ಮಾ ॥ ಮಾಳವಮೇಳುಮಂ ಪುಡುಕೆಗಟ್ಟಿಸಿ ದತ್ತಱಿಯಟ್ಟಿ ಚೇರನಂ
ಚೋಳನುಮಂ ಸಮುದ್ರದೊಳಗರ್ದಿದುದರ್ದಿದಂದಂದು ತೇಜದು
ರ್ಬೇಳು ಸಮುದ್ರಮುಂಗಳಿಯೆ ಪರ್ಬಿಪೊದಳ್ದುದು ದಿಗ್ಜಯಂ ದಿಶಾ
ಪಾಳರನಳ್ಕಿಸಿತ್ತಿದಿರಲಾಂಪವರಾರ್ಜಯಸಿಂಘದೇವನಾ ॥ 12 ॥

5) ಬಳ್ಳಿಗಾವೆ 263, E.C. XIV (R), ಕ್ರಿ.ಶ. 1047

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆಯಾದ ತ್ರೈಲೋಕ್ಯಮಲ್ಲನ ಸಾಮಂತ ಚಾಮುಂಡರಾಯನು ಬಳ್ಳಿಗಾವೆಯಲ್ಲಿ ಗಂಡಭೇರುಂಡಸ್ತಂಭವನ್ನು ನಿಲ್ಲಿಸಿ ಭೇರುಂಡೇಶ್ವರ ದೇವರಿಗೆ ಭೂಮಿಯನ್ನು ದತ್ತಿ ನೀಡಿದಂತೆ ಹೇಳಿದೆ.

ಚಾಮುಂಡರಾಯ

ಚಂ ಮಾ ॥ ಇನಜನೆ ದಾನಿ ದಾನಿಗಳೊಳಾತನುಮುಂತೆ ಹಿರಣ್ಯದಾನಿ ವ
ರ್ಣನೆಗೆ ಹಿರಣ್ಯದಾನಗುಣಮೊಂದುಮದೇಗುವುದೆಂದು ಮೆಚ್ಚದೊ
ರ್ಬನನೆ ಹಿರಣ್ಯದಾನಿ ಗಜದಾನಿ ತುರಂಗಮದಾನಿ ದಿವ್ಯವ
ಸ್ತ್ರನಿಕರದಾನಿಯೆಂದು ಮಹಿ ಬಣ್ಣಿಪುದೀ ಜಗದೇಕದಾನಿಯಂ ॥ 13 ॥

ಚಂ ಮಾ ॥ ನೆಗಟ್ದಿ ವನೀಪಕವ್ರಜಕೆ ರಾಯನ ಕೊಟ್ಟ ಪೊದಟ್ದಿ ಪೊನ್ನ ರಾ
ಶಿಗಳುಮನುನ್ಮದೇಭನಿವಹಂಗಳುಮಂ ಬಹುವರ್ಣವಾಜಿರಾ
ಜಿಗಳುಮನೆಯ್ದೆ ನೋಡಿ ಮನಮಿಕ್ಕಿ ಗಟಿಲ್ಲೆನೆ ಸತ್ತು ಮಾಯ್ದ ಲೋ
ಭಿಗಳ ಪವಣ್ಗೊಳಲ್ ಮನುಜರಿರ್ಕಜನಾದೊಡಮೇಂ ಸಮರ್ಥನೇ
॥ 14 ॥

ಮ ವಿ ॥ ಅರಿಯಂಗುರ್ಕುಡಿ ಬಲ್ಲಿದಂಗೆ ಘಟಸರ್ಪಂ ಗಂಡುದೋರ್ಪಂಗೆ ಮಾ
ರಿ ರಣಾರಂಭಿಗೆ ಕಾಳಚಕ್ರಮುಜಿದಾಟರ್ಪಂಗಗುರ್ವಪ್ಪ ದ
ಳ್ಳುರಿ ಮಾರ್ಕೊಳ್ವ ಭಟಂಗೆ ತಾಂ ಬಜಿಸಿಡಿಲ್ ದೋರ್ದರ್ಪದಿಂದುರ್ಕಿ ಮ
ಚ್ಚರಿಪಂಗಚ್ಚರಿಯಿಂ ಕೊಲಲ್ಕೆಟಿಲ್ದ ಸಿಂಹಂ ಗಂಡಕಾಲಾನಲಂ ॥ 15 ॥

ಕಂ ॥ ಎಳೆಯೊಳ್ ಬಳೆದಡರ್ದು ದಿಶಾ
ವಳಿಯಂ ದಾಂಗುಡಿಮರಲ್ದು ಪಲ್ಲವಿಸೀ ನಭ
ಸ್ಥಳದಿಂ ಮತ್ತತ್ತಲಿದೇಂ
ಬಳೆದುದೊ ಕೀರ್ತಿಲತೆ ಗಂಡಕಾಲಾನಲನಾ ॥ 16 ॥

6) ಬಳ್ಳಿಗಾವೆ 230, E.C. XIV (R), ಕ್ರಿ.ಶ. 1054

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆಯಾದ ಆಹವಮಲ್ಲನ (ತ್ರೈಲೋಕ್ಯಮಲ್ಲ) ಆಳಿಕೆಯಲ್ಲಿ ವಡ್ಡವ್ಯವಹಾರಿ ಸೋವಿಸೆಟ್ಟಿ ಬಳ್ಳಿಗಾವೆಯಲ್ಲಿ ಅಭಿನವಸೋಮೇಶ್ವರಲಿಂಗವನ್ನು ಪ್ರತಿಷ್ಠೆ ಮಾಡಿಸಿ ಭೂಮಿಯನ್ನು ದತ್ತಿ ನೀಡಿದಂತೆ ಹೇಳಿದೆ.

ತ್ರಿಮೂರ್ತಿಗಳು

ಶಾ ವಿ ॥ ಶ್ರೀವಾಣೀಗಿರಿಜಾಧಿಪರ್ ಗರುಡಹಂಸೋಕ್ಷಾಸನರ್ ವಾರ್ಧಿರಾ
ಜೀವಾದ್ರೀಂದ್ರನಿವಾಸಿಗಳ್ ಮಧುಪರಕ್ತಾಂಭೋರುಹೇಂದುಪ್ರಭರ್
ದೇವರ್ ಸತ್ವರಜಸ್ತಮೋಗುಣಯುತರ್ ದ್ವ್ಯಷ್ಟತ್ರಿನೇತ್ರೋತ್ಪಲರ್
ಗೋವಿಂದಾಬ್ಜಜಶಂಕರತ್ರಿಪುಷರ್ ಪಾಲಿಕ್ಕೆ ನಿಮ್ಮಂ ಚಿರಂ ॥ 17 ॥

ಆಹವಮಲ್ಲ

ಉ ಮಾ ॥ ಮೇರುಗಿರೀಂದ್ರದಂತೆ ವಿಬುಧಾಶ್ರಯನೀಶ್ವರನಂತುಮೇಶನಾ
ಶಾರದನೀಂದ್ರನಂತಧಿಕದಾನನಹೀಶ್ವರನಂತೆ ವಿಶ್ವಭೂ
ಭಾರಭರಕ್ಷಮಂ ವಿಧುವಿನಂತೆ ಕಲಾಸ್ಪದನಬ್ಧಿಯಂತೆ ಲ
ಕ್ಷ್ಮೀರಮಣೀಯಜನ್ಮನಿಲಯಂ ನೆಗಟ್ದಾಹವಮಲ್ಲವಲ್ಲಭಂ ॥ 18 ॥

ಉ ಮಾ ॥ ಚೋಳಮದೇಭ ಕೇಸರಿ ಕಳಿಂಗ ಘನಾಘನ ಚಣ್ಡವಾಯು ಪಾಂ
ಚಾಳತಮಸ್ತಮೋರಿ ಮಗಧಾವನಿಜ ಬ್ರಜದಾವಪಾವಕಂ
ಮಾಳವಗೋತ್ರ ಶೈಳಪವಿ ಕೇರಳ ಪಂನಗಪಂನಗಾರಿ ನೇ
ಪಾಳ ಬಳಾಂಬುರಾಸಿ ಬಡವಾನಳನಾಹವಮಲ್ಲವಲ್ಲಭಂ ॥ 19 ॥

ಚಂ ಮಾ ॥ ಪ್ರವಿಮಳಕೀರ್ತಿಯೊಳ್ ವಿಭವದೊಳ್ ಸುಚರಿತ್ರದೊಳಾರ್ಪಿನೊಳ್ ಮಹಾ
ಹವಬಯದೊಳ್ ಗುಣೋನ್ನತಿಯೊಳಾಹವಮಲ್ಲನೊಳಾಂ ಸಮಾನಮೆಂ
ಬವನಿವನೇಂ ಯಯಾತಿಯೊ ಭಗೀರಥನೋ ಪುರುಕುತ್ಸನೋ ಪುರೂ
ರವನೊ ದಿಲೀಪನೋ ಭರತನೋ ನಳನೋ ನಹುಷಾವನೀಶನೋ ॥ 20 ॥

ಚಂ ಮಾ ॥ ಎಱಗದ ವೀರರಂಜದದಟರ್ ಶರಣೆನ್ನದ ರಾಯರೆಂದುದಂ
ತಿಱಿದಟವೀಶ್ವರರ್ ಜವನ ಬಾರಿಗೆ ವೋಗದ ಯುದ್ಧಲಾಲಸರ್
ಮಱೆವುಗದಂಕಚೇಯರಿಱಿದೋಡದ ದುರ್ಗದ ಗಂಡರಳ್ಕಿ ಬೆ
ಳ್ಕುಱದ ಮದಾಂಧರಿಲ್ಲಿದು ಪರಾಕ್ರಮಮಾಹವಮಲ್ಲದೇವನಾ ॥ 21 ॥

ಮ ವಿ ॥ ಕ್ಷಣದಿಂ ಮಾಳವಮೇಱುಮೆಯ್ದೆ ವಿಳಯಕ್ಕೆಯ್ದತ್ತು ಸಂದಿರ್ದ ಕೊಂ
ಕಣಮೇಱುಂ ಮಲೆಯೇಱುಮಂಜಿ ಬೆಸಕೆಯ್ದುತ್ತೋವದಾಂತಾಹವಾಂ
ಗಣದೊಳ್ ಚೋಳಿಕನಣ್ಮಿ ಸತ್ತನಖಿಳದ್ವೀಪಾವನೀಪಾಳಕಾ
ಗ್ರಣಿಗಳ್ ಕಪ್ಪಮನಿತ್ತರೇನದಟನೋ ತ್ರೈಳೋಕ್ಯಮಲ್ಲಾಧಿಪಂ ॥ 22 ॥

7) ಬೇಗೂರು ಅಗ್ರಹಾರ 334, E.C. XIV (R), ಕ್ರಿಶ. 1066

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆಯಾದ ತ್ರೈಲೋಕ್ಯಮಲ್ಲನ ಆಳಿಕೆಯಲ್ಲಿ ಸರ್ವನ್ಯಾಂಕನು ಬೇಹೂರಲ್ಲಿ ಕೆರೆಗಳನ್ನು ಕಟ್ಟಿಸಿ ಮಲ್ಲಿಕಾರ್ಜುನದೇವರ ಮಠದ ವಿದ್ಯಾರ್ಥಿಗಳ ಆಹಾರದಾನದ ಸತ್ರಕ್ಕೆ ಭೂಮಿಯನ್ನು ದತ್ತಿ ಬಿಟ್ಟಂತೆ ಹೇಳಿದೆ.

ಸರ್ವನ್ಯಾಂಕನ ಪಿತಾಮಹ ಕೊಂತದ ಬೀರ

ಕಂ ॥ ಕರಿಘಟೆಗಳೊಡ್ಡನೊಡೆಯಿಱಿ
ದರಿಬಳಮಂ ಗೆಲ್ದು ಚಕ್ರಿತೈಲಪನಂ ಸಂ
ಗರದೊಳ್ ಮೆಚ್ಚಿಸಿದದಟಂ
ಪರಬಳಮಲ್ಲಂ ಪ್ರತಾಪಿ ಕೊಂತದ ಬೀರಂ ॥ 23 ॥

ಸರ್ವನ್ಯಾಂಕ

ಕಂ ॥ ಹರಚರಣಕಮಳಭೃಂಗಂ
ಧುರದೊಳ್ ಪೆಱಪಿಂಗನನ್ಯವನಿತಾಪುತ್ರಂ
ಸ್ಥಿರವಾಕ್ಯಂ ಬುಧಮಿತ್ರಂ
ಸುರತರುವೆರೆದವರ್ಗೆ ಬಿರುದ ಸರ್ವನ್ಯಾಂಕಂ ॥ 24 ॥

8) ಬಳ್ಳಿಗಾವೆ 281, E.C. XIV (R), ಕ್ರಿಶ. 1067

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ಆಹವಮಲ್ಲ ಮೊದಲನೇ ಸೋಮೇಶ್ವರನ ಆಳಿಕೆಯಲ್ಲಿ ಬೌದ್ಧಧರ್ಮದ ತಾರಾಭಗವತಿಯ ಶಿಲ್ಪವನ್ನು ನಾಗಿಯಕ್ಕ ಎಂಬುವವನು ಮಾಡಿಸಿದುದನ್ನು ಹೇಳಿದೆ.

ಕಂ ॥ ನೆಗಳ್ದಿರ್ದ ಬಳ್ಳಿಗಾವೆಯೊ
ಳಗಣ್ಯ ಪುಣ್ಯಾತ್ಮೆ ನಾಗಿಯಕ್ಕಂ ತಾರಾ
ಭಗವತಿಯಂ ಮಾಡಿಸಿದ
ಳ್ವ x ಲಲನಾವಿಲಾಸ ಮುಖಮಣ್ಡನೆಯಂ ॥ 25 ॥

9) ಬಳ್ಳಿಗಾವೆ 248, E.C. XIV (R), ಕ್ರಿಶ. 1068

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆಯಾದ ಭುವನೈಕಮಲ್ಲನ ಪಸಾಯಿತ ಲಕ್ಷ್ಮರಸನು ಬಳ್ಳಿಗಾವೆಯ ಮಲ್ಲಿಕಾಮೋದ ಶಾಂತಿನಾಥದೇವರ ಬಸದಿಗೆ ಶಿಲಾಕರ್ಮವನ್ನು ಮಾಡಿಸಿದಂತೆ ಹೇಳಿದೆ. ಇದನ್ನು ರಚಿಸಿದವನು 'ಸುಕುಮಾರ ಚರಿತೆ' ಕಾವ್ಯವನ್ನು ರಚಿಸಿದ ಶಾಂತಿನಾಥಕವಿ.

ಭುವನೈಕಮಲ್ಲ (ಸೋಮೇಶ್ವರ II)

ಮ ಸ್ರ ॥ ಜಯಮಂ ಧರ್ಮಕ್ಕೆ ಧರ್ಮಾನ್ವಯಮನಸದಳಂ ಸಾಧುವರ್ಗಕ್ಕೆ ವರ್ಗ
ತ್ರಯಮಂ ತನ್ನಂತರಂಗಕ್ಕೊಡರಿಸಿ ಧರೆಯಂ ಕೂಡೆ ಸನ್ಮಾನದಾನ
ವ್ಯಯದಿಂ ಸಂತೈಸಿ ಕಾಲಂ ಕೃತಯುಗಮಯಮಾಯ್ತೆಂಬಿನಂ ತನ್ನ ರಾಜ್ಯೋ
ದಯದೊಳ್ ಲೋಕಕ್ಕೆ ರಾಗೋದಯಮೊದವಿದುದೇಂ ಧನ್ಯನೋ
ಸಾರ್ವಭೌಮಂ ॥ 26 ॥

ಮ ಸ್ರ ॥ ನವರಾಜ್ಯಂ ವೀರಭೋಜ್ಯಂ ಪುಗಲಿದವಸರಂ ಸುತ್ತುವೆಂ ಗುತ್ತಿಯಂ ಮು
ತ್ತುವೆನೆಂಬೀಗರ್ಭದಿಂ ಚೋಳಿಕನಧಿಕಬಲಂ ಮುತ್ತಿಮಾರ್ಗುತ್ತಿಯಂ ಪ
ಣ್ಣುವುದಂ ಕೇಳ್ದೆತ್ತೆನುತ್ತೆತ್ತಿದ ತುರಗದಳನ್ತಾಗೆ ಸಯ್ತಾಗದಗ್ರಾ
ಹವದೊಳ್ ಬೆಂಗೊಟ್ಟು ಸೋಮೇಶ್ವರನೃಪನ ಬಳಕ್ಕೋಡಿದಂ
ವೀರಚೋಳಂ ॥ 27 ॥

ಮ ಸ್ರ ॥ ಪೆಸರಂ ಕೇಳ್ದಳ್ಕಿ ಬೆಳ್ಕುತ್ತುದು ಪರಧರಣೀಮಂಡಲಂ ಗಂಡುಗೆಟ್ಟಾ
ಳ್ವೆಸನಂ ಪೂಣ್ದತ್ತು ಶೌರ್ಯ್ಯೋನ್ನತಿಗಗಿದಸುಹೃನ್ಮಂಡಲಂ ಮೆಲ್ಪನಾವ
ರ್ಜಿಸಿದೊಂದಾಜ್ಞಾ ವಿಶೇಷಕ್ಕೆಳಸಿದುದು ಸುಹೃನ್ಮಂಡಲಂ ಸಂತಮಿಂತಾ
ದೆಸಕಂ ಕೆಯ್ಗಣ್ಮೆ ಸೋಮೇಶ್ವರನೃಪತಿ ಮಹೀಚಕ್ರಮಂ ನೆಟ್ಟನಾಳ್ದಂ ॥ 28 ॥

ಶಾ ವಿ ॥ ಆನ್ತಃಕಂಟಕರಂ ಪಡಲ್ಪಡಿಸಿದುರ್ಗಾಧೀಶರಂ ದುಷ್ಟ ಸಾ
ಮನ್ತದ್ರೋಹರನುದ್ಧತಾಟವಿಕರಂ ನಿರ್ಮೂಳನಂ ಗೈಯ್ದು ವಿ
ಕ್ರಾನ್ತಾರಾತಿಗಳಂ ಕಳಲ್ಚಿ ಧರೆಯಂ ನಿಷ್ಕಂಟಕಂ ಮಾಡಿ ನಿ
ಶ್ಚಿನ್ತಂ ಶ್ರೀಭುವನೈಕಮಲ್ಲ ಮಹಿಪಂ ರಾಜ್ಯಂಗೆಯ್ಯುತ್ತಿರ್ಪಿನಂ ॥ 29 ॥

ಲಕ್ಷ್ಮರಸ

ಕಂ ॥ ಭುವನೈಕಮಲ್ಲದೇವನ
ಭವನದೊಳಂ ತಾನೆ ಮಾನಸಂ ತಾನೆ ಮಹಾ
ವ್ಯವಸಾಯಿ ತಾನೆ ವಿಜಯ
ಪ್ರವರ್ಧಕಂ ತಾನೆ ಪಸಯಿತಂ ಲಕ್ಷ್ಮನೃಪಂ ॥ 30 ॥

ಮ ವಿ ॥ ಅಣುಗಾಳ್ ಕಾರ್ಯದ ಶೌರ್ಯದಾಳ್ ವಿಜಯದಾಳ್ ಚಾಳುಕ್ಯರಾಜ್ಯಕ್ಕೆ ಕಾ
ರಣಮಾದಾಳ್ ತುಱಿಲಾಳ್ತನಕ್ಕೆ ನೆಱೆದಾಳ್ ಕಟ್ಟಾಯದಾಳ್ ಮಿಕ್ಕ ಮ
ನ್ನಣೆಯಾಳ್ ಮಾಂತನದಾಳ್ ನೆಗೞ್ತೆವಡೆದಾಳ್ ವಿಕ್ರಾಂತದಾಳ್ ಮೇಳದಾಳ್
ರಣದಾಳಾಳ್ದನ ನಚ್ಚುವಾದೆದೆಯೊಳಂ ವಿಶ್ವಾಸದಾಳ್ ಲ್ಷ್ಕ್ಮಣಂ ॥ 31 ॥

ಮ ವಿ ॥ ಎರಡುಂ ರಾಜ್ಯದೊಳೆ ಪ್ರಜಾಪರಿಜನಂ ಕೊಂಡಾಡೆ ಚಕ್ರೇಶ್ವರಿ
ರ್ಬರುಮೋರಂದದ ಕೂರ್ಮೆಯಿನ್ದೆ ವನವಾಸೀ ದೇಶಮಂ ಶಾಸನಂ
ಬರೆದಶ್ವದ್ವಿಪ ಪಟ್ಟಸಾಧನ ಸಮೇತಂ ಕೊಟ್ಟ ಕಾರುಣ್ಯದಿಂ
ಪೊರೆಯಲ್ಮಣ್ಡಳಿಕ ತ್ರಿಣೇತ್ರನೆಸೆದಂ ಭೂಭಾಗದೊಳ್ ಲಕ್ಷ್ಮಣಂ ॥ 32 ॥

ಮ ವಿ ॥ ಕಿರಿಯಂ ವಿಕ್ರಮ ಗಂಗ ಭೂಪನೆನಗಾ ಪೆರ್ಮಾಡಿ ದೇವಂಗೆ ನೇ
ರ್ಗಿಱಿಯಂ ವೀರನೊಳಂಬದೇವನೆನಗಂ ಪೆರ್ಮಾಡಿಗಂ ಸಿಂಗಿಗಂ
ಕಿಱಿಯೈ ನೀಂ ನಿನಗೆಲ್ಲರುಂ ಕಿಱಿಯರೆನ್ದಗ್ಗಯ್ಸಿ ಕಾರುಣ್ಯದಿಂ
ನೆಱೆಕೊಟ್ಟಂ ಪ್ರತಿಪತ್ತಿ ವೃತ್ತಿಪದಮಂ ಲ್ಷ್ಕ್ಮಂಗೆ ಸೋಮೇಶ್ವರಂ ॥ 33 ॥

ಚಂ ಮಾ ॥ ಮಿಗೆ ಬನವಾಸೆನಾಡ್ಗೆ ವಿಭುಲಕ್ಷ್ಮಣನಾಗೆ ನೊಳಂಬ ಸಿಂದವಾ
ಡಿಗೆ ವಿಭುವಾಗೆ ವಿಕ್ರಮನೊಳಂಬನಳಂಪುರಮಾದಿಯಾದ ಭೂ
ಮಿಗೆ ವಿಭು ಗಂಗಮಣ್ಡಳಿಕನಾಗೆ ಯಮಾಶೆಗೆನೀಳ್ದ ಲಾಳವಿ
ಣ್ಡೆಗೆಯೆನೆ ಕಣ್ಬುಕೊಟ್ಟನ ವರ್ಗಾನೆಲನಂ ಭುವನೈಕವಲ್ಲಭಂ ॥ 34 ॥

ಮ ವಿ ॥ ಮದವದ್ವೈರಿ ನರೇಂದ್ರ ಮಣ್ಡಳಿಕ ಸೇನಾ ಭಂಜನಂ ವೀರನೀ
ರದ ದುರ್ವಾರಸಮೀರಣಂ ವಿತರಣ ಕ್ರೀಡಾವಿನೋದಂ ಪ್ರತಾ
ಪ ದಿಳೀಪಂ ರಿಪುಪುಂಜಕಂ ಜವನಕೇಳೀಕುಂಜರಂ ಲಂಜಿಕಾ
ಮದನಾಸ್ತ್ರಂ ಚಲದಂಕರಾಮನೃಪ ಲಕ್ಷ್ಮೀಲಕ್ಷ್ಮಣಂ ಲ್ಷಕ್ಮಣಂ ॥ 35 ॥

ಕಂ ॥ ಬಲಿವಲೆವ ಮಲೆವ ಕೆಲೆವದ
ಟಲೆವ ಪಳಂಚಲೆವ ಮಲೆಪರೆಲ್ಲಂ ಮುಱಿದಂ
ಮಲೆಯದ ಕೆಲೆಯದ ಬಲಿಯದ
ಮಲೆಪರನಿಸುವೆಸಕೆ ಬೆಸಸಿದಂ ಲ್ಷಕ್ಮನೃಪಂ ॥ 36 ॥

ಉ ಮಾ ॥ ಧಾಳಿಯನಿಟ್ಟು ಕೊಂಕಣಮನಂಕಣಿಯೊಕ್ಕಿದಪಂ ತಗುಳ್ದು ಕೊಂ
ಬೇಳುಮನಟ್ಟಿ ಮುಟ್ಟಿ ಮಲೆಯೇಳುಮನಾಗೆ ಮಗುರ್ಚಿ ಮುಕ್ಕಿನಿ
ರ್ಮೂಳಿಸಿದಪ್ಪನೆಂದು ಮಲೆಪರ್ತಲೆದೋಱದೆ ರಾಯದಣ್ಡಗೋ
ಪಾಳನೃಪಂ ಮುಂದುವರಿದೆಂದುದನೆಂದಪರೇಂ ಪ್ರತಾಪಿಯೋ ॥ 37 ॥

ಉ ಮಾ ॥ ಆಳ್ವಲಮುಳ್ಳೊಡಶ್ವಬಲಮಿಲ್ಲ ಭಟಾಶ್ವಬಲಂಗಳುಳ್ಳೊಡಂ
ತೋಳ್ವಲಮಿಲ್ಲ ಭೃತ್ಯಹಯದೋರ್ಬಲಮುಳ್ಳೊಡಮೇರ್ವಲಂಗಳಿ
ಲ್ಲಾಳ್ವೆಸಗೆಯ್ವುದೇಕೆ ಬಲಿವರ್ ಮಲೆಪರ್ ಮಲೆಯೆಂಬುದೇನದಂ
ಬೇಳ್ವೊಲಮಾಗೆ ಮುಂ ತುಱಿದನಲ್ಲನೆ ಲ್ಷಕ್ಮಣನೆಂಬ ರಾವಣಂ ॥ 38 ॥

ಮ ಸ್ರ ॥ ಕವಿ ದುರ್ಗಂ ಚಾತುರಂಗಂ ಬ x ಸೆ ದಳವುಳಂ ದಾಟಿ ಸೂಱೆಜೆನಿಪ್ಪಾ
ಹವದೊಳ್ ಚಾಳುಕ್ಯರಾಮಂ ಬೆಸಸೆ ರಿಪುಬಳಕ್ಕೆನ್ನನಿಂದ್ರಾರಿಯನ್ನಂ
ಭವನನ್ನಂ ಭದ್ರನನ್ನಂ ಸಿಡಿಲ ಬಳಗದನ್ನಂ ಜ್ವಲಜ್ಜ್ವಾಲಿಯನ್ನಂ
ಜವನನ್ನಂ ಮಾರಿಯನ್ನಂ ಸಮರಸಮಯದೊಳ್ ಲ್ಷಕ್ಮಣಂ ರಾಮನನ್ನಂ
॥ 39 ॥

ಚಂ ಮಾ ॥ ಕುದುರೆಯ ಮೇಲೆ ಜಿಲ್ ಪರಶು ಶೂಲಿಗೆ ತೀರಿಕೆ ಭಿಂಡಿವಾಳಮೆ
ತ್ತಿದ ಕರವಾಳಮಾಟಿಡುವ ಕರ್ಕಡೆ ಪಾಱುವ ಚಕ್ರಮೆಂದೊಡೆಂ

ತೊದಱುವರೆಂತು ಪಾಯಿಸುವರೆಂತು ತಱುಂಬುವರೆಂತು ನಿಲ್ವರೆಂ
ತೊದವುವರೆಂತು ಲ್ಷ್ಕ್ಮಣನೊಳಾಂತು ಬರ್ದುಂಕುವರನ್ಯಭೂಭುಜರ್
॥ 40 ॥

ಉ ಮಾ ॥ ಈಯಲ್ ಬಂದೊಡೆ ಕಲ್ಪವೃಕ್ಷಮಿದಿರಂ ಬಂದಾಂತ ವಿದ್ವಿಷ್ಟರಂ
ಸೋಯಲ್ ಬಂದೊಡಕಾಲಮೃತ್ಯು ಶರಣಾಯಾತಾವನೀಪಾಲರಂ
ಕಾಯಲ್ ಬಂದೊಡೆ ವಜ್ರಶೈಲಕೃತದುರ್ಗಂ ಲೌಲ್ಯಭಾವಂ ಪರ
ಸ್ತ್ರೀಯೊಳ್ ಬಂದೊಡೆ ರಾವಣಾತ್ಮಜಚಮೂವಿದ್ರಾವಣಂ ಲ್ಷ್ಕ್ಮಣಂ ॥ 41 ॥

ಚಂ ಮಾ ॥ ಬಿಸುಪಱಿದರ್ಕನುರ್ಕುಡಿಗುಮಿಂದುವ ಕಾಂತಿ ಕಟಿಲ್ದುಮಾಗಸಂ
ಕುಸಿಗುಮಿಳಾತಳಂ ತಳರ್ಗುಮಂಬುಧಿ ಬತ್ತುಗುಮಿಲ್ಲಿ ಲ್ಷ್ಕ್ಮಣಂ
ಮುಸಿದೊಡಮಾರ್ಗೆ ಟೆಪ್ಪರಮನೊಡ್ಡಿದೊಡಂ ಮನಮೊಲ್ದು ಕೂಡಿ ಭಿ
ದ್ರಿಸಿದೊಡಮನ್ಯನಾರಿಗೆ ಮರುಳ್ದೊಡಮಾಹವದೊಳ್ ಮರಲ್ದೊಡಂ
॥ 42 ॥

ಶಾ ವಿ ॥ ಶತ್ರುಘ್ನಂ ಹರಿಶೌರ್ಯನಂಗದಭುಜಂ ಸುಗ್ರೀವನಾತ್ಮೇಶಸೌ
ಮಿತ್ರಂ ರಾಮನಪಾಮರಂ ನರವರಂ ದುರ್ಯೋಧನಂ ಭೀಮಗಾ
ತ್ರತ್ರಂ ಭೀಷ್ಮ ಯುಧಿಷ್ಠಿರಂ ಗುರುಕೃಪಂ ಸತ್ಕರ್ಣನೆಂದಂದೆ ದಲ್
ಚಿತ್ರಂ ಭಾವಿಸೆ ಲಕ್ಷ್ಮಭೂಪಚರಿತಂ ರಾಮಾಯಣಂ ಭಾರತಂ ॥ 43 ॥

ಚಂ ಮಾ ॥ ಕಲಿತನಮಿಲ್ಲ ಚಾಗಿಗೆ ವದಾನ್ಯತೆ ಮೆಯ್ಗಲಿಗಿಲ್ಲ ಚಾಗಿ ಮೆ
ಯ್ಗಲಿಯೆನಿಪಂಗೆ ಶೌಚಗುಣಮಿಲ್ಲ ಕರಂ ಕಲಿ ಚಾಗಿ ಶೌಚಿಗಂ
ನಿಲೆ ನುಡಿವೋಜೆಯಿಲ್ಲ ಕಲಿ ಚಾಗಿ ಮಹಾಶುಚಿ ಸತ್ಯವಾದಿ ಮಂ
ಡಲಿಕರೊಳೀತನೆಂದು ಪೊಗಟ್ದುಂ ಬುಧಮಂಡಲಿ ಲಕ್ಷ್ಮಭೂಪನಂ ॥ 44 ॥

ಕಂ ॥ ಮುನಿಯಿಂ ಕಿಸುಕಣ್ಚುವರೊಸೆ
ದು ನಗುವರಿನ್ತಿನಿತೆ ಪೆಱರ ಮುನಿಸುಂ ಮೆಚ್ಚುಂ
ಮುನಿಯಿಸೆ ಮುನಿದವಂ ಹ
ರ್ಷನಾಗೆ ಹರ್ಷಂಗೆ ವೃಷಭಲ್ಷ್ಕ್ಮಂ ಲಕ್ಷ್ಮಂ ॥ 45 ॥

ಶಾಂತಿನಾಥಕವಿ

ಮ ಸ್ರ ॥ ಕವಿತಾ ಚೂತಾಂಕುರ ಶ್ರೀಮದಕಳಕಳಕಣ್ಠೋಪಮಂ ಕಾವ್ಯ ಸೌಧಾ
ರ್ಣವವೇಳಾಪೂರ್ಣಚಂದ್ರಂ ಸಮವಿಷಮ ಮಹಾಕಾವ್ಯವಲ್ಲೀ ತಲಾಂತೋ

ತ್ಸವ ಚಂಚಚ್ಚಂಚರೀಕಂ ವಸುಧೆಗೆಸೆದನುರ್ವೀನುತಂ ದಣ್ಡನಾಥ
ಪ್ರವರಂ ಶ್ರೀಶಾನ್ತಿನಾಥಂ ಪರಮಜಿನಮತಾಂಭೋಜಿನೀ ರಾಜಹಂಸಂ ॥ 46 ॥

ಮ ಸ್ರ ॥ ಕುನಯಂಗಳ್ ಮಾರ್ಗಮೃತದೊಳಿರೆ ಜಲಕ್ಷೀರದನ್ತಲ್ಲಿ ಸದ್ವಾ
ಕ್ಯ ನಿಶಾತೋಚ್ಚಂಚುವಿನ್ದಂ ಕುಮತ ಕಲುಷ ಪಾನೀಯಂ ತೂಳ್ದಿ ಜೈನಾ
ನನನಿರ್ಯತ್ತತ್ವದುಗ್ಧಾಮೃತಮನಖಿಳ ಭವ್ಯೋತ್ಕರಂ ಮೆಚ್ಚಲಾಸ್ವಾ
ದನೆಗೆಯ್ದೊಳ್ಪಿಂದಮಾದಂ ಪರಮಜಿನಮತಾಂಭೋಜಿನೀ ರಾಜಹಂಸಂ
॥ 47 ॥

ಕಂ ॥ ಸಹಜಕವಿ ಚತುರ ಕವಿ ನಿ
ಸ್ಸಹಾಯಕವಿ ಸುಕವಿ ಸುಕರಕವಿ ಮಿಥ್ಯಾತ್ವಾ
ಪಹ ಕವಿ ಶುಭಗ ಕವಿ x ನುತ
ಮಹಾಕವೀನ್ದ್ರಂ ಸರಸ್ವತೀ ಮುಕುರಂ ॥ 48 ॥

ಕಂ ॥ ಸುಕರ ರಸಭಾವದಿಂ ವ
ನ್ನಕದಿಂ ತತ್ವಾರ್ಥನಿಚಯದಿಂ ಸೂಕ್ತಮೆನ
ಲ್ಸುಕುಮಾರ ಚರಿತಮಂ ಪೇ
ಳ್ದ ಕವೀನ್ದ್ರಾಗ್ರಣಿ ಸರಸ್ವತೀ ಮುಖ ಮುಕುರಂ ॥ 49 ॥

ಕಂ ॥ ಅಸಹಾಯನಾಗಿಯುಂ ಸುಜ
ನ ಸಹಾಯಂ ಮದವಿಹೀನನಾಗಿಯುಮರ್ತ್ಥಿ
ಪ್ರಸರೋತ್ಕಟದಾನಿಯಧಿಕ
ನಸದೃಶ ವಿಭವಂ ಸರಸ್ವತೀ ಮುಖ ಮುಕುರಂ ॥ 50 ॥

ಮ ಸ್ರ ॥ ಹರಹಾಸಾಕಾಶ ಗಂಗಾಜಳ ಜಳರುಹನೀಹಾರನೀಹಾರ ಧಾತ್ರೀ
ಧರ ನೀಹಾರಾಂಶು ತಾರಾವನಿಧರ ಶರದಂಭೋಧರ ಕ್ಷೀರನೀರಾ
ಕರ ತಾರ ಭಾರತೀ ದಿಗ್ರದನಿರದನ ಪೀಯೂಷದಿಣ್ಡೀರ ಮುಕ್ತಾ
ಕರ ಕುಂದೇನ್ದ್ರೇಭ ಹಂಸೋಜ್ವಳ ವಿಶದ ಯಶೋವಲ್ಲಭಂ ಶಾನ್ತಿನಾಥಂ
॥ 51 ॥

ಕಂ ॥ ಎನೆ ನೆಗಟ್ದಿ ಶಾನ್ತಿನಾಥಂ
ಜಿನಶಾಸನ ಸತ್ಸರೋಜಿನೀ ಕಳಹಂಸಂ
ವಿನಯದೆ ನಿಜಾಧಿಪತಿ ಲ
ಕ್ಷ್ಮನೃಪಂಗೆ ಸುಧರ್ಮಕಾರ್ಯಮಂ ಬಿನ್ನವಿಪಂ ॥ 52 ॥

ಕಂ ॥ ಆದಾರುಕರ್ಮ ನಿರ್ಮಿತ
ಮದಂ ಶಿಳಾಕರ್ಮಮಾಗೆ ಮಾಡಿಸು ಕೋಳ್ವೋ
ದುದು ನಿನಗೆ ಧರ್ಮಮೆಂಬುದು
ಮದರ್ಕೆ ಬಗೆದಂದು ಧರ್ಮನಿರ್ಮಳಚಿತ್ತಂ ॥ 53 ॥

10) ಬಳ್ಳಿಗಾವೆ 222, E.C. XIV (R), ಕ್ರಿಶ. ಸು. 1070

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆಯಾದ ಭುವನೈಕಮಲ್ಲನ ಸಾಮಂತ ಉದಯಾದಿತ್ಯನು ದತ್ತಿಯನ್ನು ಬಿಟ್ಟಂತೆ ತೋರುತ್ತದೆ.

ದೇವಸ್ತುತಿ

ಮ ಸ್ರ ॥ ನಿಜಕೋಟ್ಯರ್ಕಪ್ರಭಾ ಭಾಸುರ ತನುರುಚಿಯೊಳ್ತಳ ಕಣ್ಗೌಸಿತ ಜ್ಯೋ
ತಿ ಜಗದ್ದೀಪ ಪ್ರದೀಪಾಧರಮಳಿಣತೆಯಂ ಪೋಲೆ ಕಣ್ಗೊಪ್ಪುಗುಂ ನಾ
ಕಜ ನಾನಾಮೌಳಿ ಮಾಳಾಮಣಿಗಣಘೃಣಿ ಮತ್ಪಾದಪದ್ಮಂ ವಿಭಾಸ್ವ
ದ್ಭುಜಗೇಂದ್ರಾಳು ಕೃತಾತ್ಯಾಯತ ಭುಜಭುಜಗಂ ರಕ್ಷಿಸುತ್ತಿರ್ಕೆ ನಮ್ಮಂ
॥ 54 ॥

ಆಹವಮಲ್ಲ

ಉ ಮಾ ॥ ಆ ನೆಗಳ್ದಾಹವಾರ್ಜಿತ ಜಯಾಧಿಪನಾಹವಮಲ್ಲದೇವನಂ
ಭೋನಿಧಿ ಮೇಖಳಾವಲಯ ರಮ್ಯಮಹೀಮಹಿಳಾಮನಜ್ಪ್ರಿಯಂ
ಸೂನೃತವಾಕ್ಸುಧಾಮಯಸುಧಾನಿಧಿ ಚಾರುಚಳುಕ್ಯ ರಾಜ್ಯ ಲ
ಕ್ಷ್ಮೀನಿಳಯಂ ನೆಗರ್ತೆವಡೆದಂ ನಿಜಭೂರಿಭುಜಪ್ರತಾಪದಿಂ ॥ 55 ॥

ತ್ರೈಲೋಕ್ಯಮಲ್ಲ

ಮ ಸ್ರ ॥ ಶರಣೆಂದು ಭೀತಿಯಿಂ ಕೆಯ್ಮುಗಿದುಮಿರದೊಡಮ್ಮಮ್ಮ ದೋರ್ವಿಕ್ರಮಾಡಂ
ಬರದಿಂ ತ್ರೈಲೋಕ್ಯಮಲ್ಲಂ ಮಸಗಿ ಮುಳಿದು ಮೇಲೆತ್ತಿದಂ ದಾೞಿಯಿಟ್ಟಂ
ಪರಿಯಿಟ್ಟಂ ಮುತ್ತಿದಂ ತೊಟ್ಟುೞಿದುೞಿದನಡಂಗೊತ್ತಿದಂ ತುತ್ತಿದಂ ಬೇ
ರ್ವೆರಸಂತನ್ನೆತ್ತಿ ಕಿೞ್ತೆತ್ತಿದನಹಿತರನೆಂಬಿಂತಿದಂ ಕೇಳಲಕ್ಕುಂ ॥ 56 ॥

ಉ ಮಾ ॥ ತನ್ನೃಪನಂದನಂ ಭುವನವಂದ್ಯಗುಣಂ ಭುವನೈಕಮಲ್ಲ ದೇ
ವನ್ನರನಾಥ ರಾಜ್ಯರಮಣೀಯ ಪರಾರ್ಧ್ಯ ಭೂಷಣಂ
ಪನ್ನಗರಾಜಭೂಷಣ ಪದಾಬ್ಜಪರಾಗಪವಿತ್ರ ಶೇಖರಂ
ಪ್ರೋನ್ನತಕೀರ್ತಿಧೀಪತಿಸುಧಾಧವಳೀಕೃತವಿಶ್ವವಿಷ್ಟಪಂ ॥ 57 ॥

ಭುವನೈಕಮಲ್ಲ

ಚಂ ಮಾ ॥ ಕವಿವ ನೆಣಂ ಪೊದಟ್ಟಿ ಬಿಸುನೆತ್ತರ ಧಾರೆ ಸಿಡಿಲ್ವ ಮುತ್ತು ಪಾ
ಱುವ ರದನಾಳಿ ಸೋರ್ವ ಕರುಳಣ್ಮುವ ಖಂಡಮೆಟಿಲ್ವ ಮಸ್ತಕಂ
ತವುವ ಬಲಂ ಕಟಿಲ್ವ ನಖಮೇಱುವ ಸುಯ್ ಸುರಿವೇಱು ತೋಱೆ ನು
ರ್ಗವೆ ರಿಪುದಂತಿಗಳ್ ಪರಿಯೆ ಗಂಧಗಜಂ ಭುವನೈಕಮಲ್ಲನಾ ॥ 58 ॥

ಗಂಗ

ಶಾ ವಿ ॥ ಆ ಪೃಥ್ವೀಶ್ವರ ಪಾದಪಂಕೇರುಹ ಸೇವಾತತ್ಪರಂ ವಿಕ್ರಮಾ
ಟೋಪ ಪ್ರೋದ್ದಳನಾಹಿತ ಪ್ರಕರನನ್ಯಕ್ಷೋಣಿಪಾಳಾರ್ಚಿತ
ಶ್ರೀಪಾದಾಂಬುರುಹಂ ವಿರೋಧಿ ನೃಪಚೂಡಾರೋಪಿತಾನ್ಯಾಪ್ರಭಾ
ವೋಪೇತಂ ಭುವನೈಕವೀರನೆಸೆದಂ ಶ್ರೀಗಂಗಚಕ್ರಾಯುಧಂ ॥ 59 ॥

11) ಬಳ್ಳಿಗಾವೆ 241, E.C. XIV (R), ಕ್ರಿ.ಶ. 1071

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆಯಾದ ಭುವನೈಕಮಲ್ಲನು ದಂಡನಾಯಕ ಉದಯಾದಿತ್ಯನ ಬಿನ್ನಪದಿಂದ ಬಳ್ಳಿಗಾವೆಯ ಹರಿಹರಾದಿತ್ಯದೇವರಿಗೆ ಬಿದಿರಿಂಗೆರೆಯೆಂಬ ಗ್ರಾಮವನ್ನು ದತ್ತಿ ಬಿಟ್ಟಂತೆ ಹೇಳಿದೆ.

ಗುಣಗಳ್ಳಮುನಿ

ಕಂ ॥ ಶ್ರೀಮನ್ಮುಕ್ತಿವಧೂಲೀ
ಲಾಮಂಗಳತಿಳಕನೆಸೆದನದ್ವಯಮಹಿಮೋ
ದ್ದಾಮಂ ಸಂಪೂರ್ಣಂ ವಿ
ದ್ಯಾಮೂರ್ತಿ ಜಿತಾತ್ಮನಕ್ಷರಂ ಗುಣಗಳ್ಳಂ ॥ 60 ॥

ಕಂ ॥ ಅಚಳನ ದೆಸೆಯಿಂದುದಯಿಸು
ವ ಚರಾಚರಮಚಳನಿಂದೆ ಪೊಱಗಣಮಲ್ತೆಂ
ದಚಳಿತಚಿತ್ತದಿನಿರ್ಪಂ
ಪ್ರಚಂಡನದ್ವೈತಿ ನಿರುಪಮಂ ಗುಣಗಳ್ಳಂ ॥ 61 ॥

ಕಂ ॥ ಸರ್ಬಜ್ಞಂ ಸರ್ಬಗತಂ
ಸರ್ಬಾತ್ಮನೆನಿಪ್ಪಗುರ್ಬಿನದ್ವೈತ ಧನಂ
ನಿರ್ಬಾಣಯೋಗಿ ಶಾನ್ತಂ
ಸರ್ಬಂ ಸರ್ಬೀಯ ಕಾರಣಂ ಗುಣಗಳ್ಳಂ ॥ 62 ॥

ಕಂ ॥ ಜ್ಞಾನಮೆ ನಾಂ ನಿನಗೊಡಲೆಸೆ
ವಾನಂದಂ ತೋರ್ಪುವೆಲ್ಲಮೆನ್ನ ನೆಱಲ್ ಮ
ತ್ತೇನುಂ ಬೇಱಲ್ಲೆಂಬನಿ
ಳಾನುತನದ್ವೈತಶೇಖರಂ ಗುಣಗಳ್ಳಂ ॥ 63 ॥

ಕಂ ॥ ಆನನ್ದಾದ್ವಯ ಸತ್ಯ
ಜ್ಞಾನಮಯರ್ನೆಗಟ್ದಿರಖಿಳದೊಳ್ ನಿಷ್ಕಳನಾ
ದಾನನ್ದರ್ತನ್ನಾಮಾ
ಧೀನರ್ಗುಣಗಳ್ಳ ನಾಗವರ್ಮಾಚಾರ್ಯರ್ ॥ 64 ॥

ಚಂ ಮಾ ॥ ಕರುಣದಿನೊಳ್ಪಿತಾಗೆ ಗುಣಗಳ್ಳ ಮಹಾಮುನಿಯಂತೆ ಸಂತತಂ
ಭರವಸದಿನ್ದೆ ತತ್ಪದಮಿದೀ ಕ್ರಮದಿಂ ನಡೆದಂತೆ ಸಾಧ್ಯಮೆಂ
ದೆರದುಮನಾವಗಂ ತಿಳಿಪಿ ಬೇಸರದಿರ್ಪದಯಾಱುವಪ್ಪ ಸ
ದ್ಗುರುವಕೆದಂದೆ ಶಿಷ್ಯರಭಿವಾಂಛೆಯದಾಗದೆ ಸಿದ್ಧಿಯಾಗದೇ ॥ 65 ॥

ತ್ರಿಪದಿ ॥ ಮುಕ್ತಿಶ್ರೀಸತಿಗನುರಕ್ತಂ ಸಂಸಾರವಿ
ರಕ್ತಂ ನಿರ್ವಿಷಯ ನಿರಪೇಕ್ಷಂ ಶುಚಿ ಜೀವ
ನ್ಮುಕ್ತಂ ನಿರ್ವಾಣಿ ಗುಣಗಳ್ಳಂ ॥ 66 ॥

ತ್ರಿಪದಿ ॥ ಅಱವಣ್ಮು ವೈರಾಗ್ಯಂ ತಱಸಲವಭ್ಯಾಸಂ
ನೆಱೆ ಭಕ್ತಿ ಶಾಂತಿ ಧೃತಿ ತುಷ್ಟಿಯೆಂಬಿವ
ರ್ಕೆಱವಟ್ಟಾಗಿರ್ದಂ ಗುಣಗಳ್ಳಂ ॥ 67 ॥

ಮ ಸ್ರ ॥
ದೊರೆಕೊಂಡೀದೇಹದೊಳ್ ಮೋಹಮನೆಲೆ ಗುಣಗಳ್ಳಾರ್ಯಂ ನೀಂ ಮಾಣ್ದು ಬೆಂಕೊಂ
ಡರಿಷಡ್ವರ್ಗಂಗಳಂ ಭೇದಮನಿಱದಳಿಪಂ ಬಿಟ್ಟು ಕರ್ಮಂಗಳೆಲ್ಲಂ
ಬೆರಸಾನೆಂದಿರ್ಪಹಂಕಾರಮನವಯವದಿಂ ಸುಟ್ಟು ಸಾನಂದದಿಂದಂ
ಪರಿಪೂರ್ಣಜ್ಯೋತಿ ನೀನಾಗಿರೆ ಬಿಡುವಳೆ ಪೇೞ್ ಮುಕ್ತಿ ನಿನ್ನಂ ಮುನೀಂದ್ರಾ ॥ 68 ॥

12) ಬಳ್ಳಿಗಾವೆ 242, E.C. XIV (R), ಕ್ರಿಶ. 1071

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ಭುವನೈಕಮಲ್ಲನ ಆಳಿಕೆಯಲ್ಲಿ ಗಂಗರ ಉದಯಾದಿತ್ಯನ ಅಪೇಕ್ಷೆಯಂತೆ ಬಳ್ಳಿಗಾವೆಯ ನರಸಿಂಹರ ದೇವರ ಸೇವೆಗೆ ಗ್ರಾಮವೊಂದನ್ನು ದತ್ತಿ ನೀಡಿದಂತೆ ಹೇಳಿದೆ.

ಭುವನೈಕಮಲ್ಲ ಸೋಮೇಶ್ವರ

ಉ ಮಾ ॥ ತನ್ನೃಪನನ್ದನಂ ಭುವನವನ್ದ್ಯಗುಣಂ ಭುವನಯ್ಕಮಲ್ಲ ದೇ
ವನ್ನರನಾಥ ರಾಜ್ಯರಮಣೀ ರಮಣೀಯ ಪರಾರ್ಧ್ಯ ಭೂಷಣಂ
ಪನ್ನಗರಾಜಭೂಷಣ ಪದಾಬ್ಜ ಪರಾಗ ಪವಿತ್ರ ಶೇಖರಂ
ಪ್ರೋನ್ನತ ಕೀರ್ತಿದೀಧಿತಿ ಸುಧಾಧವಳೀಕೃತ ವಿಶ್ವವಿಷ್ಟಪಂ ॥ 69 ॥

ಗಂಗ

ಶಾ ವಿ ॥ ಆ ಪೃಥ್ವೀಶ್ವರ ಪಾದಪಂಕರುಹ ಸೇವಾತತ್ಪರಂ ವಿಕ್ರಮಾ
ಟೋಪಪ್ರೋದ್ದಳನಾಹಿತಪ್ರಕರನನ್ಯಕ್ಷೋಣಿಪಾಳಾರ್ಚಿತ
ಶ್ರೀಪಾದಾಂಬುರುಹಂ ವಿರೋಧಿನೃಪಚೂಡಾರೋಪಿತಾಜ್ಞಾ ಪ್ರಭಾ
ವೋಪೇತಂ ಭುವನೈಕವೀರನೆಸೆದಂ ಶ್ರೀಗಂಗ ಚಕ್ರಾಯುಧಂ ॥ 70 ॥

13) ಬಳ್ಳಿಗಾವೆ 236, E.C. XIV (R), ಕ್ರಿಶ. 1077

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆಯಾದ ಆರನೆಯ ವಿಕ್ರಮಾದಿತ್ಯನು, ದಂಡನಾಯಕ ಬರ್ಮದೇವನ ಪ್ರಾರ್ಥನಾನುಸಾರವಾಗಿ ಬಳ್ಳಿಗಾವೆಯ ಪೆರ್ಮಾಡಿಬಸದಿಗೆ ಗ್ರಾಮಗಳನ್ನು ದತ್ತಿ ನೀಡಿದಂತೆ ಹೇಳಿದೆ.

ವಿಕ್ರಮಾದಿತ್ಯ

ಮ ಸ್ರ ॥ ಅಲಗಂ ಚೋಳಾವನೀಶಂಗಣಸನಣೆಯರಂ ಲಾಳಭೂಪಂಗೆ ಬಾಹಾ
ಬಲದಿಂದಂ ತೋಱಿ ಮೀಱುತ್ತಡಸಿದುಭಯಚಕ್ರೇಶಸಾಮಂತಭೂಭೃ
ತ್ಕುಲಮಂ ತನ್ನೇಱಿದುಗ್ರೇಭದಿನುಱಿದುಱೆ ಬೆಂಕೊಂಡು ಚಾಳುಕ್ಯರಾಜ್ಯೋ
ಜ್ವಲಲಕ್ಷ್ಮೀನಾಥನಾಳ್ದಂ ಭುವನಜನನುತಂ ವಿಕ್ರಮಾದಿತ್ಯದೇವಂ ॥ 71 ॥

ಶಾ ವಿ ॥ ಧಾರಾನಾಥ ಮಹಾಭಯಜ್ವರಕರಂ ಚೋಳೋಗ್ರಕಾಳಾನ್ತಕಂ
ಸೌರಾಷ್ಟ್ರಂಗ ಕಳಿಂಗ ವಂಗ ಮಗಧಾಂದ್ರಾವನ್ತಿ ಪಾಂಚಾಳ x
x ರಾಜಾವಳಿ ಮೌಳಿಲಾಳಿತ ಪದಂ ಪೂರ್ವಾಪರಾಂಭೋದಿ ವೇ
ಳಾರಾಮಾನ್ತರ ಶೈಳಕೇಳಿ ವಿಭವಂ ಚಾಳುಕ್ಯ ದಿಕ್ಕುಂಜರಂ ॥ 72 ॥

ಮ ಸ್ರ ॥ ನರಸಿಂಹಾಕಾರದಿಂ ದಾನವಪತಿಯುರಮಂ ಸೀಳ್ದನಣ್ಮಣ್ಮು ರುದ್ರಂ
ಬೆರಸಾಕ್ಕೈಲಾಸಮಂ ತೂಗಿದನಳವಳವಾರ್ತರ್ತಿಯಿಂ ಚರ್ಮಮಂ ನೆ
ಟ್ಟೆರೆದಿಂದ್ರಂಗಿತ್ತನಾರ್ಪಾರ್ಪಖಿಳಧರೆ ಗತಕ್ಷತ್ರಮಪ್ಪಂತೆ ಧಾತ್ರೀ
ಶರನಿರ್ಪತ್ತೊಂದು ಸೂೞ್ ಕೊಂದನ ಚಲಮೆ ಚಲಂ ವಿಕ್ರಮಾದಿತ್ಯ ನಿನ್ನಾ
॥ 73 ॥

ಮ ಸ್ರ ॥ ಪುದುವೇಕನ್ಯರ್ಗ್ಗಮಾನೊರ್ಬನೆ ತಳೆಯಲಿದಂ ಸಾಲ್ವೆನೆಂದಾಮಹಾಕೂ
ರ್ಮದ ಬೆನ್ನಿಂದಾಭುಜಂಗಾಧಿಪನ ಪೆಡೆಗಳಿಂದಾದಿಶಾಕುಂಜರಸ್ಕಂ
ಧದಿನಾಭೂಭೃದ್ದರೀಮೂಲದಿನಖಿಲಧರಾಭಾರಮಂ ತಂದು ವಿಕ್ರಾಂ
ತದ ಬಲ್ಪಿಂ ತನ್ನ ತೋಳೊಳ್ ಪದುಳಮಿರಿಸಿದಂ ವಿಕ್ರಮಾದಿತ್ಯದೇವಂ
॥ 74 ॥

ಬರ್ಮದೇವ

ಮ ಸ್ರ ॥ ಧರೆಗೆಲ್ಲಂ ತನ್ನ ಬಾಹಾಬಲದ ನೆಱವು ತನ್ನಣ್ಮು ತನ್ನುಗ್ರತೇಜ
ಸ್ಫುರಿತಂ ತನ್ನಾರ್ಪು ತನ್ನೊರ್ನ್ನುಡಿಯ ನಿಲವು ತನ್ನೂರ್ಜಿತಖ್ಯಾತಿಯೊಳ್ಪು
ಚ್ಚರಿಯಾಗುತ್ತಿರ್ಪಿನಂ ರಂಜಿಸಿ ಸಕಲಗುಣಾನರ್ಘ್ಯರತ್ನಕ್ಕೆ ರತ್ನಾ
ಕರನಾದಂ ದಂಡನಾಥಾಗ್ರಣಿ ಸಕಲಜಗನ್ಮಂಡನಂ ಬರ್ಮದೇವಂ ॥ 75 ॥

ಮ ಸ್ರ ॥ ಜನಕೆಲ್ಲಂ ತಾನೆ ಕಣ್ಣುಂ ಗತಿಯುಮೆನಿಸಿ ತನ್ನಿಂ ರಿಪುಕ್ಷತ್ರನಕ್ಷ
ತ್ರನಿಕಾಯಂ ನಿಲ್ಲದೆಲ್ಲಂ ಮಸುಳೆ ಕಲಿಮಿಳದ್ಧ್ವಾಂತಮಟ್ಟಾಡೆ ವಿಶ್ವಾ
ವನಿಯಂ ಮಿಕ್ಕೇಳ್ಗೆಯಿಂದಂ ಬೆಳಪೆಸಕಮನಾಂತಿರ್ದಪಂ ವಿಕ್ರಮಾದಿ
ತ್ಯನ ತೇಜಶ್ಚಕ್ರಮಿರ್ಪಂತೆವೊಲನವಧಿಸತ್ವೋದಯಂ ಬರ್ಮದೇವಂ ॥ 76 ॥

ಮ ವಿ ॥ ಹರಿಯಿಂ ಚಾಳಿತಮಾದುದಂಕದಚಳೇಂದ್ರಂ ದೈತ್ಯನಿಂ ಸಾರ್ದುದು
ರ್ವಿ ರಸಾಗರ್ಭಮನಾಲಯಾನಿಲನ ಪೊಯ್ಲಿಂ ಪಾಱಿತಾಶಾಗಬೋ
ತ್ಕರಮೆಂದಂದಿವರಲ್ಲಿ ಧೀರಗುಣಮೆಲ್ಲಿತ್ತೆಂದಿವಂ ನಕ್ಕು ಧಿ
ಕ್ಕರಿಪಂ ನಿಶ್ಚಲಮಾದ ಧೈರ್ಯಗುಣದೊಳ್ಪಿಂ ಬರ್ಮದಂಡಾಧಿಪಂ ॥ 77 ॥

ಚಂ ಮಾ ॥ ಕುಡುವೆಡೆಗಾದುದೇಂ ಮಡಗಲಾದುದೆ ವಿತ್ತಮರಾತಿಯಂ ಪಡ
ಲ್ವಡಿಪೆಡೆಗಾದುದೇಂ ಬಱಿದೆ ಪೊತ್ತಿರಲಾದುದೆ ಕೆಯ್ದು ಸತ್ಯಮಂ
ನುಡಿವೆಡೆಗಾದುದೇಂ ಪುಸಿಯಲಾದುದೆ ನಾಲಗೆಯೆಂದು ಕೀರ್ತಿ ದಾಂ
ಗುಡಿವಿಡೆ ಬರ್ಮದೇವನನಿತುಂ ಕ್ಷಣದುನ್ನತಿಯಂ ನೆಗಳ್ಚಿದಂ ॥ 78 ॥

ಸಿಂಗರಾಜ

ಚಂ ಮಾ ॥ ವಿನಯದ ಸೀಮೆ ಧರ್ಮದ ತವರ್ಮನೆ ಸತ್ಯದ ಜನ್ಮಭೂಮಿ ಮಾಂ
ತನದೆಱೆವಟ್ಟು ಪೆಂಪಿನದಗುಂತಿ ವಿವೇಕದ ಬೀಡುದಾಣಮಾ
ರ್ಪಿನ ಕಣಿಯೆಂದು ಬಣ್ಣಿಪುದು ಭೂವಳಯಂ ಪ್ರತಿಕಂಠಸಿಂಗನಂ
ಜಿನಪತಿಪಾದಪಂಕರುಹಭೃಂಗನನುದ್ಘಗುಣಪ್ರಸಂಗನಂ ॥ 79 ॥

ಚಂ ಮಾ ॥ ಬರೆಪದ ಬಲ್ಮೆ ಬಾಜನೆಯ ಜಿನ್ನಣಮೊಪ್ಪುವ ಲೆಕ್ಕದೋಜೆ ಶಂ
ಕರಸುತನೊಳ್ ಸರಸ್ವತಿಯೊಳಂಬುರುಹಾಸನನೊಳ್ ವಿಚಾರಿಸಲ್
ದೊರೆ ಸರಿ ಪಾಟಿಯೆಂದು ನಿಖಿಳೋರ್ವರೆ ಬಣ್ಣಿಸುತಿರ್ಪುದೆಂದೊಡೇಂ
ಪಿರಿಯನೊ ಸಿಂಗನುಜ್ವಲಯಶೋವಿಭವಂ ಪ್ರತಿಪನ್ನಮಂದರಂ ॥ 80 ॥

ಚಂ ಮಾ ॥ ಶುಚಿ ಸುರಸಿಂಧುಜಂ ಸುರಸರಿದ್ಭವನಿಂದನಿಲಪ್ರಿಯಾತ್ಮಜಂ
ಶುಚಿ ಗಗನಾಪಗಾತನಯನಿಂ ಪವಮಾನತನೂಜನಿಂ ಶುಕಂ
ಶುಚಿ ನೆಗಱ್ದಾ ನದೀಸುತನಿನಾಕಪಿರಾಜನಿನಾಶುಕರ್ಷಿಯಿಂ
ಶುಚಿಯೆನೆ ಸಂದನೇದೊರೆತೊ ಶೌಚಗುಣಂ ಪ್ರತಿಕಂಠಸಿಂಗನಾ ॥ 81 ॥

ಚಂ ಮಾ ॥ ಫಳಭರಿತಾಮ್ರ ಭೂರುಹಕೆ ಪಕ್ಷಿಗಣಂ ಭ್ರಮರಾಳಿ ಪುಷ್ಪಸಂ
ಕುಳ ನವಸೌರಭಕ್ಕೆಯ್ದುವಂತೆ ಬುಧಾಳಿ ನಿಯೋಗಮೆಂಬ ದೀ
ವಳಿಗೆಯ ಪರ್ವದೊಳ್ಬರೆ ಯಥೋಚಿತದಿಂ ತಣಿಪಿಂ ಬಳಿಕ್ಕೆ ಸಂ
ಚಳತರಮಾನಿಯೋಗಮೆನುತಿರ್ಪುದು ಗೋಸನಿ ಸಿಂಗರಾಜನಂ ॥ 82 ॥

ಚಂ ಮಾ ॥ ಪರಹಿತಮಂ ಕಡಂಗಿ ನೆಱೆ ಮಾಡಲೆ ಕಲ್ತನಶೇಷಸದ್ಬುಧೋ
ತ್ಕರಮನೊಱಲ್ದು ಮನ್ನಿಸಲೆ ಕಲ್ತನೆಡರ್ ಪಿರಿದೆಂಬ ಶಿಷ್ಟರಂ
ಪೊರೆಯಲೆ ಕಲ್ತನುತ್ತಮಗುಣಾಧಿಕರೊಳ್ ದೊರೆಯಪ್ಪೆನೆಂದು ಮ
ಚ್ಚರಿಸಲೆ ಕಲ್ತನಿಂತುಟಿದು ಕಲ್ತ ಗುಣಂ ಪ್ರತಿಕಂಠಸಿಂಗನಾ ॥ 83 ॥

ಕಂ ॥ ಜಿನಧರ್ಮಾಂಬರ ದಿನಪಂ
ಜಿನಧರ್ಮ ಸುಧಾಂಬುರಾಶಿವರ್ಧನ ಚನ್ದ್ರಂ
ಜಿನಧರ್ಮ ಪ್ರಾಕಾರಂ
ಜಿನಪತಿ ಚರಣಾಂಬುಜಾತ ಭೃಂಗಂ ಸಿಂಗಂ ॥ 84 ॥

ಗುಣಭದ್ರದೇವ

ಮ ವಿ ॥ ಜಸಮೆಂಬುಜ್ವಳ ದೀಪ್ತಿ ಪಜ್ವಳಿಸೆ ಭವ್ಯಾಂಭೋಜಿ ನೀರಾಜಿರಾ
ಜಿಸೆ ದುಷ್ಕರ್ಮ ತಮೋಬಳಂ ಬೆದರೆ ಲೋಕಸ್ತುತ್ಯ ಜೈನಾಗಮ
ಪ್ರಸರವ್ಯೋಮ ವಿಭಾಗದೊಳ್ನೊಗಯಿಕುಂ ರತ್ನತ್ರಯ ಶ್ರೀಗುಣಾ
ವಸಥ ಶ್ರೀಗುಣಭದ್ರದೇವ ಮುನಿಪಾಂಭೋಜಾತ ಮಿತ್ರೋದಯಂ ॥ 85 ॥

ಮಹಾಸೇನ

ಕಂ ॥ ಏನೋ ದೂರಂ ಪರಮ ತ
ಪೋನಿಧಿ ತನ್ಮುನಿಗಣೇಶ ಸಹಧರ್ಮಿ ಲಸದ್
ಜ್ಞಾನಪರಂ ನೆಗಳ್ದ ಮಹಾ
ಸೇನಬ್ರತಿತದ್ಬ್ರತೀಶ ಶಿಷ್ಯರ್ನೆಗಳ್ದರ್ ॥ 86 ॥

ರಾಮಸೇನ

ಚಂ ಮಾ ॥ ಒದವಿದ ಶಬ್ದಶಾಸ್ತ್ರದೆಡೆಯೊಳ್ಭುವನಸ್ತುತ್ಯಪೂಜ್ಯಪಾದರೆಂ
ಬುದು ನೆಜೆತರ್ಕಶಾಸ್ತ್ರದ ವಿವೇಕದೊಳಿನ್ತಕಳಂಕ ದೇವರೆಂ
ಬುದು ಕವಿತಾಗುಣೋತ್ಕರ ಮಹತ್ವದೊಳೆಯ್ದೆ ಸಮನ್ತಭದ್ರರೆಂ
ಬುದು ಸಲೆ ರಾಮಸೇನ ವಿಬುಧೋತ್ತಮರಂ ನಿಖಿಳೋರ್ಬಿರಾಜನಂ
॥ 87 ॥

14) ಬಳ್ಳಿಗಾವೆ 219, E.C. XIV (R), ಕ್ರಿಶ. 1077 ರಿಂದ 1125

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ಆರನೆಯ ವಿಕ್ರಮಾದಿತ್ಯನ (ತ್ರಿಭುವನಮಲ್ಲ) ಆಳಿಕೆಯಲ್ಲಿ ಬಹುಶಃ ಕೇದಾರೇಶ್ವರ ದೇವರಿಗೆ ಒಬ್ಬ ದಂಡನಾಯಕನು ನೀಡಿದ ದತ್ತಿಯನ್ನು ಹೇಳಿದೆ.

ವಿಕ್ರಮಾದಿತ್ಯ VI

ಮ ಸ್ರ ॥ ಬಳವದ್ವಿದ್ವಿಷ್ಟಭೂಪಾಳಕತಿಮಿರಚಯಂ ಪಿಂಗೆ ಚಾಳುಕ್ಯಭೂಭೃ
ತ್ಕುಳಪಂಕೇಜಾತಷಂಡಕ್ಕಮರ್ದೆಸೆಯೆ ವಿಕಾಸಂ ತ್ರಿಲೋಕಂಗಳೆಲ್ಲಂ
ಬೆಳಗಲ್ ತ್ರೈಲೋಕ್ಯಮಲ್ಲಪ್ರಿಯಸುತನಧಿಕಂ ವಿಕ್ರಮಾದಿತ್ಯದೇವಂ
ವಿಳಸದ್ವಸ್ತುಪ್ರಶಸ್ತೋದಯಗಿರಿನಿಭಸಿಂಹಾಸನಾಸೀನನಾದಂ ॥ 88 ॥

ಮ ಸ್ರ ॥ ಚತುರಂತಾಖಂಡಭೂಮಂಡಲಪತಿ ಚತುರಾಶಾಂತಸಂಶ್ರಾಂತತೇಜಂ
ಚತುರಾಶಾಪಾಲಶೀಲಪ್ರತಿನಿಧಿ ಚತುರಂಭೋಧಿಗಾಂಭೀರ್ಯಧುರ್ಯಂ
ಚತುರಾಸ್ಯೋದ್ಯತ್ಕಳಾಳೀನಿಧಿ ಚತುರುಪಧಾಶುದ್ಧಬುದ್ಧಿಪ್ರಭಾವಂ
ಚತುರಂಗಾನೀಕಭಾರಪ್ರಚಳಿತದಿಗಿಭಂ ವಿಕ್ರಮಾದಿತ್ಯದೇವಂ ॥ 89 ॥

15) ತುಂಬರ ಹೊಸೂರು 134, E.C. XIV (R), ಕ್ರಿಶ. 1079

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ಆರನೆಯ ವಿಕ್ರಮಾದಿತ್ಯನ (ತ್ರಿಭುವನಮಲ್ಲ) ಆಳಿಕೆಯಲ್ಲಿ ಬಲದೇವ ದಂಡನಾಯಕ ಹಾಗೂ ಪ್ರಧಾನರ ಆಶಯದಂತೆ ವಡ್ಡರಾವುಳ ಮೊದಲಾದ ತೆರಿಗೆಗಳನ್ನು ಬಿಟ್ಟದ್ದನ್ನು ಹೇಳಿದೆ.

ವಿಕ್ರಮಾದಿತ್ಯ VI

ಮ ವಿ ॥ ವಿನಯಕ್ಕಾಸ್ಪದಮಾದ ವಿಕ್ರಮನೊಳಂಬಂ ವಿಕ್ರಮಾದಿತ್ಯ ದೇ
ವನಚಿತ್ತಕ್ಕಮಳುಂಬಮಾದ ಕೆಳೆಯಂ ಚಾಲುಕ್ಯರಾಮಕ್ಷಿತೀ
ಶನ ಕೊಣ್ಡೇರಿದ ಕೂರ್ಮೆವೆತ್ತಣುಗದಮ್ಮಂ ರಾಯಕನ್ದರ್ಪದೇ
ವನ ಸಮ್ಮೋಹನ ಪುಜ್ಜಬಾಣಮೆನಲಿನ್ನೇವಣ್ಣಿಪಂ ಬಣ್ಣಿಪಂ ॥ 90 ॥

ವೀರನೊಳಂಬ ಜಯಸಿಂಹ

ಮ ಸ್ರ ॥ ಪೊಗೆಯುತ್ತಿರ್ದಪ್ಪುದಿನ್ನುಂ ದಹಳೆ ಹಿಮನಗಾರಣ್ಯಮಂ ಲಾಳನಿನ್ನುಂ
ಪುಗಲೆಂದಿರ್ದಪ್ಪನಿನ್ನುಂ ನೆಲಸದೆ ತಿವುಳಂ ಲಂಕೆಯಿಂ ತೆಂಕಲೋಡಲ್
ಬಗೆಯುತ್ತಿಬ್ದಿಪ್ಪನಿನ್ನುಂ ಮುಳಿದಪನೆನುತುಂ ಕೊಂಕಣಂ ಸಂಕೆಯಿಂ ಗುಂ
ದುಗೊಳುತ್ತಿಬ್ದಿಪ್ಪನೇಂ ಬಲ್ಲಿದನೊ ಚಕಿತವಿದ್ವಿಟ್ಕದಂಬಂ ನೊಳಂಬಂ ॥ 91 ॥

ಬಲದೇವ

ಕಂ ॥ ತತ್ಪದಪಯೋಜ ಸೇವಾ
ತತ್ಪರನಕಳಂಕಚರಿತನುದ್ಧತರಿಪುಭೂ
ಭೃತ್ಪತಿ ದಂಡಾಧಿಪ ಸಂ
ಪತ್ಪತಿ ಪತಿಕಾರ್ಯಸಾಧಕಂ ಬಲದೇವಂ ॥ 92 ॥

ಮ ಸ್ರ ॥ ಅರಿದಾಗೇಂ ಬಲ್ಲಿತೆಂಬಲ್ಲಿಗಮಸದಳಮೀಕಾರ್ಯಮೆಂಬಲ್ಲಿಗಂ ಸಂ
ಗರಮಣ್ಮುಟ್ಟೆಂದುದೆಂಬಲ್ಲಿಗಮರ್ದೆಗದರುಂ ಬೀಡಿಗೆಂಬಲ್ಲಿಗಂ ಬೇ
ಟ್ಬರ ತಂಡಕ್ಕೀವೆನೆಂಬಲ್ಲಿಗಮತಿಶುಚಿಯೆಂಬಲ್ಲಿಗಂ ಬಲ್ಲಿಗಂ ಬಾ
ಪ್ಪುರೆ ಪಾರ್ಥೇಂದ್ರೇಜ್ಯಭೀಮಾಂತಕಬಲಿಮನು ತಾನೆಂದೊಡಿಂ ಧನ್ಯನಾವಂ
॥ 93 ॥

ಕಂ ॥ ಒಡವುಟ್ಟಿರ್ದುದು ಕರಮಾ
ರ್ಪೊಡವಳೆದುದು ಜೈನಧರ್ಮಮೊಡನಾಡಿದುದೊ
ಳ್ಪೊಡನೆ ಸಲೆ ಪೊಕ್ಕುವಂತೇ
ನೆಡೆಯೊಳ್ ಕಲ್ತನೆ ಗುಣಂಗಳಂ ಬಲದೇವಂ ॥ 94 ॥

ಕಂ ॥ ಆರಯ್ವೊಡೆ ಕಲಿಕಾಲದೊ
ಳಾರುಂ ಬಲದೇವನೊರೆಗೆ ವಂದಪರೆ ಗುಣೋ
ದಾರತೆಯೊಳಱಿವಿನೊಳ್ ವಾ
ಕ್ಸಾರತೆಯೊಳ್ ದಾನಧರ್ಮದೊಳ್ ಪರಹಿತದೊಳ್ ॥ 95 ॥

16) ಹಳೇಬನ್ನೂರು 440, E.C. XIV (R), ಕ್ರಿ.ಶ. 1080

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ಆರನೆಯ ವಿಕ್ರಮಾದಿತ್ಯನ ಆಳಿಕೆಯಲ್ಲಿ ಕೆರೆಯ ನಿರ್ಮಾಣಕ್ಕೆಂದು ತ್ರೈಲೋಕ್ಯ ಜಯಸಿಂಹ ನೊಳಂಬನು (ದೊರೆಯ ತಮ್ಮ) ಎರಡು ಗ್ರಾಮಗಳನ್ನು ದತ್ತಿ ನೀಡಿದುದನ್ನು ಹೇಳಿದೆ.

ತಂಬ ದಂಡಾಧಿಪ

ಕಂ ॥ ಮಡಕೆದೊರೆಯಲ್ಲಿ ಚೋಳನ
ಪಡೆಯಂ ಬೆಂಕೊಣ್ಡು ತಮ್ಬದಣ್ಡಾಧೀಶಂ
ನಡಿಸಿ ಜಯಸ್ತಂಭಮನೇಂ
ಪಡೆದನೊ ಚಾಳುಕ್ಯ ಚಕ್ರವರ್ತಿಗೆ ಜಸಮಂ ॥ 96 ॥

ಮ ವಿ ॥ ಪಡೆಮಾತೇಂಗಳ ಗಂಗೆಗೊಣ್ಡಪುರದಾ ಚೋಳಂ ಜಯಂಗೊಣ್ಡನಾ
ಳ್ಕಡಿವೋದಂ ಜಯಗೊಣ್ಡ ಚೋಳಪುರದೊಳ್ ಕೀರ್ತಿಧ್ವಜ ಸ್ತಂಭವಂ
ಗುಡಿಯಂ ಕಟ್ಟಿಸಿ ಶಾಸನಂ ನಿಲಿಸಿದಂ ಶ್ರೀವೀರಸಿಂಘಾಸನಂ
ವೊಡೆಯಂ ಕುಂತಳ ಚಕ್ರವರ್ತಿ ಬೆಸಸಲ್ ತಂಬಂ ಜಯಸ್ತಂಭಮಂ ॥ 97 ॥

ಮ ವಿ ॥ ದ್ರವಿಳಾಳೀಪತಿಯೆಂಬ ಚೋಳಿಕರ ರಾಜ್ಯಾಪಕ್ರಮ ಶ್ರೀಗೆ ಕಾಂ
ಚಿವೊಲಿರ್ದೊಪ್ಪುವ ಕಂಚಿ ಸಂಚಳಿಸೆ ತೆಂಕಲ್ ಘಟ್ಟಮಂ ದಾಂಟಿ ಸಾ
ನುವಿನೊಳ್ ರಾಜಿಗನೊಕ್ಕಲಂ ಬಡಿದು ತಂದೊಕ್ಕಲ್ ಜವಂ ನಟ್ಟಮೇ
ಟಿವೊಲಾದತ್ತನೆ ನೆಟ್ಟನೊಟ್ಟಜಿಕೆಯಿಂ ತಂಬಂ ಜಯಸ್ತಂಭಮಂ ॥ 98 ॥

ಮ ಸ್ರ ॥ ಪಿರಿದದ್ರೀಂದ್ರಂ ನಗೇಂದ್ರಕ್ಕವನಿ ಪಿರಿದುಮಾಭೃದ್ಧರಾಚಕ್ರದಿಂದಂ
ಪಿರಿದಂಭೋರಾಸಿ ಶೈಳಾವನಿಜ x x ಳ ಸನ್ದೋಹದಿಂ ದಿಕ್ತಟಂ ತಾ
ಪಿರಿದನ್ತಾ ಪರ್ವತಕ್ಕಂ ಧರೆಗಮಬ್ಧಿಗಂ ದಿಗ್ವಿಭಾಗಕ್ಕೆ ಮತ್ತಂ
ಪಿರಿದೇಕಂ ಖ್ಯಾತಿ ಮತ್ತಂ ಪಿರಿಯನನಿತರಿಂ ತಂಬ ದಣ್ಡಾಧಿನಾಥಂ ॥ 99 ॥

ಕಂ ॥ ವಿನಯಮನೊಪ್ಪನೆ ನುಡಿವೊ
ಪ್ಪನೆ ಮಾಡುವ ಮಾಡಿ ಕೃತಕವಿಲ್ಲದೆ ನೆಗಳ್ದೀ
ಮನುಚರಿತನೆನಿಪ ಲೋಕನ
ವಿನಯಂ ಬುಧಜನದ ಮನಮನಿರ್ಕುಳಿಗೊಳ್ಗುಂ ॥ 100 ॥

ಕಂ ॥ ಸರಸಿಜಮನಲರ್ಚಲ್ ರವಿ
ಪರಿಣತನೆನ್ತಂತೀ ಶಿಷ್ಟರ ಪೊರೆಯಲಿದೇಂ

ಪರಿಣತನೊ ಲೋಕನಾಥಂ
ಸರಸ್ವತೀಚರಣ ನೂಪುರಾಳಂಕಾರಂ ॥ 101 ॥

17) ಬಳ್ಳಿಗಾವೆ 226, E.C. XIV (R), ಕ್ರಿಶ. 1096

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆಯಾದ ವಿಕ್ರಮಾದಿತ್ಯನ ದಂಡನಾಯಕ ಸರ್ವದೇವನು ಬಳ್ಳಿಗಾವೆಯಲ್ಲಿ ಸರ್ವೇಶ್ವರ ದೇವಸ್ಥಾನವನ್ನು ಕಟ್ಟಿಸಿ ಭೂಮಿಯನ್ನು ದತ್ತಿ ಬಿಟ್ಟಂತೆ ಹೇಳಿದೆ.

ವಿಕ್ರಮಾದಿತ್ಯ VI

ಮ ಸ್ರ ॥
ಪಿರಿಯಂ ಚಾಲುಕ್ಯರೊಳ್ ತೈಲಪನೃಪನವನಿಂದಂ ಬಳಿಕ್ಕೆ ಪ್ರತಾಪ
ಕ್ಕೊರೆಯಾತ್ರೈಲೋಕ್ಯಮಲ್ಲ ಕ್ಷಿತಿಪತಿವರನಲ್ಲಿಂದಮಿತ್ತಾದಿ ಭೂಪಾ
ಳರಿಗಂ ಚಾತುರ್ಯದೊಳ್ ಶೌರ್ಯದೊಳನುಪಮಸಂಭೋಗದೊಳ್ ಚಾಗದೊಳ್ ತಾಂ
ಸುರತೇಜೋಮೂರ್ತಿಯೊಳ್ ಕೀರ್ತಿಯೊಳಧಿಕನಿವಂ ವಿಕ್ರಮಾದಿತ್ಯದೇವಂ ॥ 102 ॥

ಕಾಳಿದಾಸ ಚಮೂಪ

ಕಂ ॥ ತ್ರಿಭುವನಮಲ್ಲಂ ಪೆರ್ಮಾ
ಡಿ ಭೀಮಭುಜನಖಿಳಧರೆಯನಾಳುತ್ತಿರೆ ವೀ
ರಭಟಶಿರಶ್ಶೇಖರನಹಿ
ತ ಭಯಂಕರನೆನಿಪ ಕಾಳಿದಾಸ ಚಮೂಪಂ ॥ 103 ॥

ಕಂ ॥ ಎನೆ ನೆಗರ್ದ ಸರ್ವದೇವನ
ಮನುಮಾರ್ಗನ ಸುಜನಜನ ಮನೋರಂಜನನಾ
ರ್ಪಿನ ಕಣಿಯ ಜಸದ ಬೆಸನೀ
ತನ ನೆಗರ್ದ ವಂಶಾವತಾರಮೆಂತೆನೆ ಪೇಳ್ವೆಂ ॥ 104 ॥

ಉ ಮಾ ॥ ನೆಟ್ಟನೆ ದುಗ್ಧವಾರ್ಧಿಯೊಳಗೀ ಜಗಮಂ ಬೆಳಗಲ್ ಸುಧಾಕರಂ
ಪುಟ್ಟುವ ಮಾರ್ಗದಿಂ ಸರಸಿಜೋದ್ಭವ ವಂಶಜ ವತ್ಸಗೋತ್ರದೊ
ಳ್ಪಿಟ್ಟಳವಪ್ಪ ಕಮ್ಮೆಕುಲದೊಳ್ ಕುಲಮಂ ಬೆಳಗಲ್ ಕುಲೋತ್ತಮಂ
ಪುಟ್ಟಿದನೆಲ್ಲರುಂ ಪೊಗಳೆ x ಯನಜೇಯನಪಾರ ಪೌರುಷಂ ॥ 105 ॥

ನಾಗಿಯಕ್ಕ

ಕಂ ॥ ಪತಿಭಕ್ತಿಗೆ ಪರಮನ ಪಾ
ರ್ವತಿ ಚಾತುರ್ಯೋಕ್ತಿಗಜನ ಭಾರತಿ ಸಿರಿಗ

ಚ್ಯುತನ ಸಿರಿ ನಾಗವರ್ಮನ
ಸತಿಭಾವಿಸೆ ನಾಗಿಯಕ್ಕನೆಂಬುದು ಲೋಕಂ ॥ 106 ॥

ಚಾವುಂಡ ದಂಡೇಶ

ಮ ವಿ ॥ ಗಿರಿಶಂಗಂ ಗಿರಿಜಾತೆಗಂ ಗಣಪನಂ ಸೇನಾನಿಯುಂ ಪುಟ್ಟುವಂ
ತಿರೆ ವಿದ್ಯಾನಿಧಿ ನಾಗವರ್ಮವಿಭುಗಂ x ನಾಗಿಯಕ್ಕಂಗವಾ
ದರದಿಂ ಪುಟ್ಟಿದ ಸರ್ವವಿಭುವುಂ ಚಾವುಂಡದಂಡೇಶನುಂ
ಸಿರಿಯಂ ಸಂತತಮಾಗಿ ಭೋಗಿಸುಗೆ ಚಂದ್ರಾದಿತ್ಯರುಳ್ಳನ್ನೆಗಂ ॥ 107 ॥

ಸರ್ವದೇವ

ಕಂ ॥ ರಾಮಂ ಲಕ್ಷ್ಮಣನಂತಿರ
ಲೀಮಹಿಯೊಳ್ ಸರ್ವದೇವನುಂ ರಾಯನುವು
ದ್ದಾಮ ಭುಜವೀರ್ಯರಧಿಕ
ಪ್ರೇಮದೆ ಸುಖಮಿರ್ಕೆ ಲಕ್ಕೆ ದೀವಳಿಗೆವರಂ ॥ 108 ॥

ಸರ್ವದೇವ, ಚಾವುಂಡರಾಯ

ಮ ಸ್ರ ॥ ಪಿರಿದಪ್ಪೈಶ್ವರ್ಯಮಂ ಮಾಡುಗೆ ವಿದಿತಯಶಂ ಸರ್ವದೇವಂಗೆ x ಭಾ
ಸುರತೇಜಂ ವಿಪ್ರವಿದ್ಯಾಧರನೆನಿಸುವ ಚಾವುಣ್ಡರಾಯಂಗೆ ಸರ್ವೇ
ಶ್ವರದೇವಂ ದೇವ ಬೃಂದಾರ್ಚಿತ ಪದಯುಗಳಂ ಚಂದ್ರಲೇಖಾವತಂಸಂ
ಗಿರಿಜೇಶಂ ವ್ಯೋಮಕೇಶಂ ಸಕಳದುರಿತ ವಿಧ್ವಂಸನೀಶಂ ಮಹೇಶಂ ॥ 109 ॥

ಸರ್ವದೇವನ ಸಹೋದರ ಚಾಮುಂಡರಾಯ

ಮ ಸ್ರ ॥
ಹರಿಯಿಂದಂ ಮಂದರಂ ಮಂದರಮಥನದಿನಂಭೋಧಿಯಂಭೋಧಿಯಿಂದಂ
ಧರೆ ಬನ್ನಂಬೆತ್ತುವಾಮಂದರಗಿರಿ ಸರಿಯೇ ತಿಣ್ಪಿನೊಳ್ ವಾರ್ಧಿಯೆತ್ತಂ
ದೊರೆಯೇ ಪೇಟ್ ಗುಣ್ಪಿನೊಳ್ ಧಾರಿಣಿ ಸರಿಸಮೆನಲ್ ಬರ್ಪುದೇ ಬಿಣ್ಪಿನೊಳ್ಮಂ
ದರಶೈಲಕ್ಕರ್ಣವಕ್ಕುರ್ವರೆಗಧಿಕಗುಣಂ ನೋಡೆ ಚಾವುಂಡರಾಯಂ ॥ 110 ॥

ಮ ಸ್ರ ॥ ಧರೆ ಕಂಪಂಗೊಳ್ಗುಮಾಶಾಕರಿ ಪೆಡಱುಗುಮಂಭೋಜಜಂ ಬೆರ್ಚುಗುಂ ಸಾ
ಗರಮೆತ್ತಂ ಮೇರೆಯಂ ದಾಂಟುಗುಮನುಪಮದೋಸ್ಸಾಹಸಂ ಸರ್ವದೇವಂ
ಧುರದೊಳ್ ಪಿಂಮೆಟ್ಟಿದಂದುಂ ಪರವನಿತೆಗೆ ಸೋಲ್ತಂದುಮಿತ್ತರ್ಥಿಗಿಲ್ಲೆಂ
ದೆರಡಂ ಮಾತಾಡಿದಂದುಂ ಭಯವಶದೆ ಶರಣ್ಬೊಕ್ಕರಂ ಕಾಯದಂದುಂ
॥ 111 ॥

ಚಂ ಮಾ ॥ ನುಡಿ ಕನಕಾದ್ರಿಯೊಳ್ ಕಡಸಿದಕ್ಕರಮಣ್ಮು ಮದೇಭವೈರಿಯೊಳ್
ಮಡಗಿದ ಬಯ್ಕೆ ದಾನಮಮರಾವನಿಜಾತದ ಜೌವನಂ ಧನಂ
ಬಡವನ ಬಯ್ತ ವಸ್ತು ಕಲುಷಂ ಪ್ರಳಯಾನಳನೇೞ್ಗೆಯಂದಮೆಂ
ದೊಡೆ ಬೞಿಕೇನನೆಂದಪೆ ಮಹೋನ್ನತಿಯಂ ವಿಭುಸರ್ವದೇವನಾ ॥ 112 ॥

ಸಾನ್ತಲದೇವಿ

ಕಂ ॥ ವಿನಯ ನಿಧಾನಂ ವಿದ್ವ
ಜನತಿಳಕಂ ಸರ್ವದೇವ ದಂಡಾಧಿಪನೊಂ
ದನುಪಮ ಲ್ಷಕ್ಮಿಯಿದೆನಿಸುವ
ವನಿತೆ ಮಹಾಸತಿಯರೊಳಗೆ ಸಾನ್ತಲದೇವೀ ॥ 113 ॥

ಸೋವಿದೇವ

ಕಂ ॥ ಸತಿರತ್ನ ಸಾನ್ತಿಕಬ್ಬೆಗ
ವಿತರಣದೊಳು ನೆಗರ್ದ ಸರ್ವದೇವ ಚಮೂಪಂ
ಗತುಳಬಳನೊಸೆದು ಪುಟ್ಟಿದ
ನತಿಶಯಮಾಗೆಸೆವ ಸೋವಿದೇವ ಕುಮಾರಂ ॥ 114 ॥

ಸೋಮ

ಕಂ ॥ ಪುರಿಕರನಗರದ ಸೋಮೇ
ಶ್ವರದೇವರ ಪ್ರಸಾದದಿಂದಂ ಸೋಮೇ
ಶ್ವರನುದಯಿಸಲುದಯಿಸಿದುದು
ಸಿರಿ ಸಲೆ ನಿಲೆ ಸರ್ವದೇವನನ್ವಯಕೆಲ್ಲಂ ॥ 115 ॥

ಕಂ ॥ ಸೋಮಂ ಬುಧಜನ ವಾರಿಧಿ
ಸೋಮಂ ಕವಿಗಮಕವಾದಿ ವಾಗ್ಮಿತ್ವಗುಣಾ
ರಾಮಂ ವಾರವಧೂಜನ
ಕಾಮಂ ಸಂಗ್ರಾಮರಂಗದೆಡೆಯೊಳ್ ಭೀಮಂ ॥ 116 ॥

ಕಂ ॥ ಹರಪಾದಪದ್ಮಷಟ್ಪದ
ನುರುತೇಜಂ ಸರ್ವದೇವನನ್ವಯಕೆಲ್ಲಂ
ದುರಿತಹರಂ ಮಾಡುವ ಸ
ದ್ಗುರುಕುಳಮಂ ಭಕ್ತಿಯಿಂದಮೆಸೆದಿರೆ ಪೇಳ್ವೆಂ ॥ 117 ॥

ವರೇಶ್ವರ ಮುನಿ

ಮ ವಿ ॥ ವರಕಾಳಾಮುಖ ಚಕ್ರವರ್ತಿ ಮುನಿದಿವ್ಯಜ್ಞಾನಿ ಕಾಶ್ಮೀರ ದೇ
ವರ ಸಂತಾನದೊಳಾ ತ್ರಿಲೋಚನ ಮುನೀಂದ್ರಂಗಗ್ರ ಶಿಷ್ಯಂ ವರೇ
ಶ್ವರದೇವಂ ತಪದಂಕಕಾರನಮಳಂ ನಿಷ್ಠಾಪರಂ ಪಣ್ಡಿತಾ
ಭರಣಂ ದೇವರದೇವನೀಶ್ವರನ ಪಾದಾರಾಧಕಂ ಧಾರ್ಮಿಕಂ ॥ 118 ॥

ಸರ್ವೇಶ್ವರ ದೇವಾಲಯ

ಮ ವಿ ॥ ಖಳಕರ್ಮಾಂತಕನೀ ವರೇಶ್ವರ ಮುನೀಂದ್ರಂ ಶಿಕ್ಷೆ ಮಾಡಲ್ಕೆ ನಿ
ರ್ಮಳ ಭಾವೋಕ್ತಿಯ ಸರ್ವದೇವವಿಭು ವಲ್ಲಿಗ್ರಾಮೆಯೊಳ್ ರೂಢಿಯಂ
ತಳೆದಿರ್ಪ ತ್ರಿಪುರಾನ್ತಕಕ್ಕೆ ತಿಳಕಂ ಮತ್ತಂತೆ ನೋರ್ಪಾಗ ಪೊಂ
ಗಳಸಂತಾನೆನಿಸಲ್ಕೆ ಮಾಡಿಸಿದನೀ ಸರ್ವೇಶ್ವರಾವಾಸಮಂ ॥ 119 ॥

ಮ ವಿ ॥ ಎಳೆಗೆಲ್ಲಂ ಬಲಿರಾಜಧಾನಿ ನಯನಕ್ಕಾನಂದಮೆಂದಿಂದ್ರ ನೀ
ಪೊಳಲಂ ನೋಡುತಮಿರ್ದದಿಲ್ಲಿಯೆ ವಿಮಾನಂ ನಿನ್ದುದೆಂಬಂತಿರಿ
ಟ್ಟಳಮಾಗೊಪ್ಪಿರೆ ಸರ್ವದೇವನಮಳ ಶ್ರೀಕಾಮಿನೀ ವಲ್ಲಭಂ
ಕಳಸಾರೋಹಣಮಾಗೆ ಮಾಡಿಸಿದನೀ ಸರ್ವೇಶ್ವರಾವಾಸಮಂ ॥ 120 ॥

ಮ ವಿ ॥ ಇದು ಲೋಕೋತ್ತರಮೆಂಬಿನಂ ನೆಗಳ್ದಿ ವಲ್ಲಿಗ್ರಾಮದೊಳ್ ಮೇರು ತಾ
ನಿದು ಕೈಲಾಸಮಿದೆಂಬಿನಂ ಧರೆಗವಾಕಾಶಕ್ಕಮೂಡಿಟ್ಟನಿಂ
ತಿದನಂಭೋಜಜನೆಂಬಿನಂ ಜನನುತಂ ಶ್ರೀಸರ್ವದೇವಂ ಮನೋ
ಮುದದಿಂ ಮಾಡಿಸಿದಂ ವಿಚಿತ್ರತರಮಂ ಸರ್ವೇಶ್ವರಾವಾಸಮಂ ॥ 121 ॥

18) ಬಳ್ಳಿಗಾವೆ 218, E.C. XIV (R), ಕ್ರಿ.ಶ. 1098

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ಆರನೆಯ ವಿಕ್ರಮಾದಿತ್ಯನ (ತ್ರಿಭುವನಮಲ್ಲ) ಆಳಿಕೆಯಲ್ಲಿ, ಲೋಕರಸ, ಜೋಗರಸರು, ಬಳ್ಳಿಗಾವೆಯಲ್ಲಿ ಲೋಕೇಶ್ವರ, ಜೋಗೇಶ್ವರ ದೇವರ ಪ್ರತಿಷ್ಠೆ ಮಾಡಿಸಿ ನೀಡಿದ ದತ್ತಿಯನ್ನು ಹೇಳಿದೆ.

ಬಳ್ಳಿಗಾವೆ

ಚಂ ಮಾ ॥ ಜಳರುಹಷಂಡದಿಂ ಮಧುಕರಾವಳಿಯಿಂ ಕಳಹಂಸ ಕೀರ ಕೋ
ಕಿಳ ಸಹಕಾರ ಭೂರುಹವನಾವಳಿಯಿಂ ನವನಾಗಪೂಗ ಪಾ
ಟಳ ಮುಚುಕುಂದ ಕುಂದಲತಿಕಾ ವೃತದಿಂದವೆ ಬಳ್ಳಿಗಾಮೆ ಕುಂ
ತಳ ವಿಷಯಾಂಗನಾ ಕುಟಿಲ ಕುಂತಳದಂತಿರಲೊಪ್ಪಿ ತೋಱುಗುಂ ॥ 122 ॥

19) ಹಳೇ ಅಮಟೇಕೊಪ್ಪ 436, E.C. XIV (R), ಕ್ರಿಶ. ಸು. 1100

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆಯಾದ ಆರನೆಯ ವಿಕ್ರಮಾದಿತ್ಯನ ಆಳಿಕೆಯಲ್ಲಿ ಸೋಮನೃಪನ ಕುಮಾರಿಯರು ಒಂದು ಜಿನಾಲಯವನ್ನು ಕಟ್ಟಿಸಿದಂತೆ ಹೇಳಿದೆ.

ಜೂಜ

ಚಂ ಮಾ ॥ ತೊಡರೆ ತೊಡಂಕು ಮಚ್ಚರಿಸೆ ಗಂಟಲ ಸಿಲ್ಕಿದ ಗಾಳಮುರ್ಕಿ ಮಾ
ರ್ನುಡಿದೊಡೆ ಜಿಹ್ವಮಂ ಪಿಡಿದು ಕೀಳ್ವ ತೊಡರ್ಪಿನ ಪಾಶಮೆಂದೊಡೆಂ
ತೆಡಱುವರೆಂತು ಮಚ್ಚರಿಪರೆಂತು ಕರಂ ಕಡುಕೆಯ್ದು ದರ್ಪಮಂ
ನುಡಿದಪರಣ್ಣ ಬಾಪ್ಪು ಮುಳಿದಂಬದ ಜೂಜನೊಳನ್ಯಭೂಭುಜರ್ ॥ 123 ॥

ಕಂ ॥ ಬಿಡದೆಡಱೆ ಸೆಣಸಿ ಚುನ್ನಂ
ನುಡಿವೀ ಮನ್ನೆಯರ ಬೆನ್ನ ಬಾರಂ ಮಿಡಿಯಿಂ
ಪೆಡತಲೆವರಮಾಳ್ವೊತ್ತುವ
ಕಡುಗಲಿ ಶಶಿವಿಶದಕೀರ್ತಿ ಜೂಜಕುಮಾರಂ ॥ 124 ॥

ಸೋಮನೃಪ

ಚಂ ಮಾ ॥ ಶರಣೆಮಗೆನ್ನದೇವುದೆಮಗೇ ಬೆಸನಾವುದು ಬುದ್ಧಿಯೆನ್ನದುಂ
ಬರಿಸಿ ನಿತಾನ್ತಮೇಱಿಸಿದ ಬಿಲ್ಲವೊಲುದ್ಧತವೃತ್ತಿಯೆನೆ ಪೆಂ
ಡಿರ ಕೆಲದೊಳ್ ಕೆಳಲ್ದು ಬೀರುವ ಬಿಡೆಬೀಱುವಧಿಕ ವೈರಿಭೂ
ಪರನಾತನತ್ತರ ಮರುಳ ತಂಡಮನೋಡನೆ ಸೋಮ ಭೂಮಿಪಂ ॥ 125 ॥

20) ಬಳ್ಳಿಗಾವೆ 210, E.C. XIV (R), ಕ್ರಿಶ. 1102

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ಆರನೆಯ ವಿಕ್ರಮಾದಿತ್ಯನ (ತ್ರಿಭುವನಮಲ್ಲ) ಆಳಿಕೆಯಲ್ಲಿ ಬಳ್ಳಿಗಾವೆಯ ಕೇದಾರೇಶ್ವರದೇವರ ಸೇವೆಗೆ, ಆಚಾರ್ಯ ಸೋಮೇಶ್ವರ ಪಂಡಿತನಿಗೆ ನೀಡಿದ ದತ್ತಿಯನ್ನು ಹೇಳಿದೆ. ಈ ಶಾಸನವನ್ನು ರಚಿಸಿದವನು ಮಲ್ಲಿದೇವಕವಿ.

ಅನಂತಪಾಳ ದಂಡಾಧೀಶ

ಕಂ ॥ ಪತಿಹಿತರೊಳೆಲ್ಲಮಗ್ಗದ
ಪತಿಹಿತನತಿಶುಚಿಗಳೆನಿಸಿ ನೆಗಳ್ದವರೊಳ್ ಮಿ
ಕ್ಕತಿಶುಚಿದಕ್ಷರೆನಿಪ್ಪರೊ
ಳತಿದಕ್ಷನನನ್ತಪಾಳ ದಂಡಾಧೀಶಂ ॥ 126 ॥

ಕಂ ॥ ಅರಿವೀರವಿಳಯಕಾಳಂ
ವರವಿಬುಧಾಂಭೋಜವನಮರಾಳನಿದೇಂ ಬಿ

ತ್ತರಿಸಿದನೊ ಲೋಕದೊಳ್ ಭಾ
ಸುರಯಶಮನನನ್ತಪಾಳನಾಹಳ ? ॥ 127 ॥

ಗೋವಿಂದ

ಕಂ ॥ ಶ್ರೀ ವನಿತಾಕುಚ ಸಂಭೃತ
ಪೀವರವಕ್ಷಸ್ಥಳಂ ಲಸದ್ಗುಣಮಣಿಮಾ
ಳಾ ವಿಳಸಿತನೇನೆಸೆದನೊ
ಗೋವಿಂದಂ ಸಕಳವಿಬುಧಜನತಾನನ್ದಂ ॥ 128 ॥

ಮ ವಿ ॥ ಅನತಾರಾತಿಯನೋವದಿಕ್ಕಿ ಜಯಮಂ ತಾಳ್ದಲ್ ಸಮರ್ಥಾತ್ಮನಾ
ವನೊ ಗೋವಿಂದನೆ ಸಾರ್ದಶಿಷ್ಟರೆಡಱಂ ತೂಳ್ದಲ್ಕೆ ಸಾಲ್ವಂನನಾ
ವನೊ ಗೋವಿಂದ ಕೀರ್ತಿಯಂ ಪಡೆದು ಜೀಯಯ್ಯೆಂಬಿನಂ ಸಂದನಾ
ವನೊ ಗೋವಿಂದನೆ ಮತ್ತೆ ಮತ್ತೆ ಪೆರರಂ ಕಾಣೆಂ ಧರಾಚಕ್ರದೊಳ್
॥ 129 ॥

ಚಂ ಮಾ ॥ ಶರಣೆಮಗೆಂದು ಬಂದಡಱಿಯೆಂ ಮಲೆದಾನ್ತಡೆ ಭಾಳದೊಳ್ ಪೊದ
ಱ್ದುರಿವುರಿಗಣ್ಣನುಗ್ರಫಣಿಕುಣ್ಡಳಮಂ ಕಿವಿಯೊಳ್ ಕರಾಬ್ಜದೊಳ್
ಸುರುಚಿರ ಶೂಲಮಂ ಮಿಱುಪದಾಡೆಗಳಂ ನಿಜವಕ್ತ್ರದೊಳ್ ವಿಭೀ
ಕರಮೆನೆ ತೋಱುಗುಂ ಸಮರರಂಗದೊಳೀ ರಣರಂಗಭೈರವಂ ॥ 130 ॥

ಚಂ ಮಾ ॥ ಉರಿವುರಿಗಣ್ಣನೀಱ್ದುರಿವೊಲಾಗೆ ಭಯಂಕರಕೋಪವಹ್ನಿ ಭೀ
ಕರಕರಕೂಳಮಂ ಕರಮಗುರ್ಬಿಸುತಿರ್ಪ ಕರಾಸಿತಾನೆ ಪೋ
ಲ್ತಿರೆಗಣಮಾಗೆಸದ್ಭಟಗಣಂ ರಿಪುಸೇನೆಗೆ ಪೋಲ್ಕುಮುಗ್ರ ಸಂ
ಗರಧರೆಯೊಳ್ಮಹಾಪ್ರಳಯಭೈರವನಂ ರಣರಂಗಭೈರವಂ ॥ 131 ॥

ಚಂ ಮಾ ॥ ಬಱಸಿಡಿಲಂ ತುಡುಂಕುವ ಮದಾನ್ಧಗಜಕ್ಕಿದಿರಾಗಿ ಕೋಳ್ಕಳಂ
ಮುಱಿವುರದಿನ್ದ ಪೆರ್ಬುಲಿಯ ಮೀಸೆಯೊಳುಯ್ಯಲನಾಡುವೊಂದು ಪೇ
ರಱಿಕೆಯ ಬೀರರಾನ್ತಡಮದೇವೆಸಗೊಣ್ಡಪೆ ನೆತ್ತರಂ ನೆಲ
ಕ್ಕೆಱೆಯದೆ ಮಾಣ್ಗುಮೀ ಸಮರರಂಗದೊಳೀ ರಣರಂಗಭೈರವಂ ॥ 132 ॥

ಚಂ ಮಾ ॥ ಅರಿಭಟರಳ್ಗೆರುಳ್ಚಿಣಿಲ ಬಾಸಿಗದಿಂ ನೊರೆನೆತ್ತರೆಂಬ ಬ
ನ್ಧುರತರ ಕುಂಕುಮದ್ರವದಿನುದ್ಧಶಿರಃ ಸರಸೀರುಹಂಗಳಿಂ
ಕರಮೊಸೆದರ್ಚಿಪಂ ನಿಜಭುಜಾಸಿಲತಾಸ್ಥಿತಚಣ್ಡಿಕಾ ಪದಾಂ
ಬುರುಹಯುಗಂ x x ಸಮರರಂಗದೊಳೀ ರಣರಂಗಭೈರವಂ ॥ 133 ॥

ಕಂ ॥ ಅರಿವೀರ ಭಟರನತಿ ಭೀ
ಕರಭುಜ ನಿಶ್ರೇಣಿಮಾರ್ಗದಿಂ ಸರ್ಗಮನ
ಚ್ಚರಿಯೆನಲೇಱಿಸುವಂ ಸಂ
ಗರದೊಳ್ ರಣರಂಗ ಭೈರವಂ ಗೋವಿನ್ದಂ ॥ 134 ॥

ಕಂ ॥ ಬಿರುದರ ಜವನದಟರ ಗೋ
ಳ್ಮರಿ ಮಲೆವರ ಮಾರಿಗಣ್ಡವಚ್ಚರದೊಳ್ಮ
ಚ್ಚರಿಸುವರಮಿಳ್ತು ಶೌರ್ಯಾ
ಭರಣಂ ರಣರಂಗ ಭೈರವಂ ಗೋವಿನ್ದಂ ॥ 135 ॥

ಕಂ ॥ ರಣರಂಗ ಭೈರವಂ ಗುಣ
ಮಣಿಮಣ್ಡನನಣ್ಣನಂಕಕಾಱಿಂ ಸುಭಟಾ
ಗ್ರಣಿಯೆನೆ ನೆಗಟ್ದಿರ್ದಂ ಧಾ
ರುಣಿಯೊಳ್ ಗೋವಿಂದನಹಿತದನುಜ ಮುಕುನ್ದಂ ॥ 136 ॥

ಕಂ ॥ ಅದಟಿನೊಳಣ್ಮಿನೊಳಾಯದೊ
ಳೊದವಿದ ನಿಚ್ಚಟಿಕೆಯೊಳ್ ಪೆಱರ್ಸಮನಿಲ್ಲೆಂ
ಬುದನೆನಿಸುವ ಸುಭಟಂ ಜಿತ
ಕದನಂ ರಣರಂಗಭೈರವಂ ಗೋವಿನ್ದಂ ॥ 137 ॥

ಮ ವಿ ॥ ವರವಿದ್ಯಾನಿಧಿ ಕೇಶಿರಾಜ ವಿಭುಗಂ ನೀಲಬ್ಬೆಗಂ ಪುಟ್ಟಿ ಭಾ
ಸುರ ಕೀರ್ತಿಪ್ರಿಯನಾಗಿ ಸಂದ ಗುಣರತ್ನಂ ದಾಸಿರಾಜಂ ಪರಾ
ಶರಗೋತ್ರಾಂಬರ ತಿಗ್ಮರೋಚಿಜನಕಂ ತಾಯ್ಜೂರು ನಾನಾಗುಣಾ
ಕರೆ ಸೋಮಾಂಬಿಕೆ ತಾನೆನಲ್ಕೆ ಜಗದೊಳ್‌ಗೋವಿಂದನೇಂ ಧನ್ಯನೋ
॥ 138 ॥

ಶ್ರೀಕಂಠದೇವ ಮುನಿ

ಮ ಸ್ರ ॥
ಹರಪಾದಾಂಭೋಜದೊಳ್ ಚಿತ್ತಮನೆಸೆವ ಮುಖಾಂಭೋಜದೊಳ್ ಭಾರತೀಸುಂ
ನ್ದರಿಯಂ ಚಾರಿತ್ರದೊಳ್ ನಿರ್ಮಳತೆಯನಖಿಳಾಶಾನ್ತದೊಳ್ ಶಕ್ರ ದಿಕ್ಕುಂ
ಜರಭಾಸ್ವತ್ಕೀರ್ತಿಯಂ ಬಿತ್ತರದೆ ನಿರಿಸಿದಂ ಸದ್ಗುಣಾಢ್ಯಂ ಮುನೀಂದ್ರಾ
ಭರಣಂ ಶ್ರೀಕಣ್ಠದೇವಂ ಬುಧಕುಳತಿಳಕಂ ತರ್ಕವಿದ್ಯಾಸಮುದ್ರಂ ॥ 139 ॥

ಸೋಮೇಶ್ವರ ಸೂರಿ

ಮ ವಿ ॥ ಅಕಳಂಕಾಂಬ್ರ ಮಹೀಜ ಚೈತ್ರ ಸಮಯಂ ಲೋಕಾಯತಾಂಬೋಧಿ ಶೀ
ತಕರಂ ಸಾಂಖ್ಯಧರಾದಿ ಶಾರದನಿಮೀಮಾಂಸಾಂಗನಾಕಂಬುಕ
ಣ್ಠಕನನ್ಮೌಕ್ತಿಕ ಭೂಷಣಂ ಸುಗತನೀರೇಜಾತ ಚಣ್ಡಾಂಶು ತಾ
ರ್ಕಿಕ ಸೋಮೇಶ್ವರಸೂರಿ ಪೆಂಪುವಡೆದಂ ನೈಯಾಯಿಕಾಗ್ರೇಸರಂ ॥ 140 ॥

ಮ ವಿ ॥ ಕೆಲಬರ್ತ್ತರ್ಕ್ಕವಿಶಾರದರ್ಕೆಲಬರಾಪ್ತಾಳಾಪ ಸಂಬೋಧಕ
ರ್ಕೆಲಬರ್ನಾಟಕ ಕೋವಿದರ್ಕೆಲಬರೊಳ್ಗಬ್ಬಂಗಳಂ ಬಲ್ಲವ
ರ್ಕೆಲಬರ್ವ್ಯಾಕರಣಜ್ಞರಿನ್ತಿನಿತುಮಂ ಬಾಪ್ಪಿನ್ತು ವಿಶ್ವಂಭರಾ
ತಳದೊಳ್ ಬಲ್ಲವರಾರೆನಲ್ಕೆ ನೆಗಟ್ದಿಂ ವಿದ್ಯಾಬ್ಧಿಸೋಮೇಶ್ವರಂ ॥ 141 ॥

ಶಾಸನ ಕವಿ ಮಲ್ಲಿದೇವ

ಕಂ ॥ ವಿನುತಮಧುರೋಕ್ತಿಯಿಂತಂ
ನನತಿಶಯ ವಚೋವಿಭೂತಿಗಿದುವೆ ಯಶಶ್ಶಾ
ಸನಮಾದುದೆಂಬಿನಂ ಶಾ
ಸನಮನಿದಂ ಬರೆದನಾಶುಕವಿ ನಿಟಿಳಾಕ್ಷಂ ॥ 142 ॥

ಚಂ ಮಾ ॥ ಪರಿಕಿಸೆ ಮಲ್ಲಿದೇವವಿಭುಗಾರ್ಸಮನಿರ್ಬರುಮಿರ್ಕೆಲಂಗದೊಳ್
ಬರೆದುವಿನಂತ್ಯದಿಂ ಬರೆವ ಭಾಜಿಪ ಭಾಜಿಪ ಕಬ್ಬಮೆನ್ತುಟ
ನ್ತಿರೆ ಪೊಸಗಬ್ಬಮಂ ನುಡಿವ ಭಾವಿಸಿ ಕೇಟ್ವಿ ಕಥಾಚತುಷ್ಕಮೆಂ
ಧರೆಪರಿಕರ್ಮಮೆಂದಿನಿತುಮಂ ಗುಣಿಯಿಪ್ಪಮತಿ ಪ್ರಭಾವದೊಳ್ ॥ 143 ॥

21) ಬಳ್ಳಿಗಾವೆ 243, E.C. XIV (R), ಕ್ರಿಶ. 1103

ಇದರಲ್ಲಿ ಕಲ್ಯಾಣದ ಚಾಲುಕ್ಯ ದೊರೆಯಾದ ಆರನೆಯ ವಿಕ್ರಮಾದಿತ್ಯನ ಆಳಿಕೆಯಲ್ಲಿ ಈಶ್ವರಯ್ಯನು ಬಳ್ಳಿಗಾವೆಯ ನರಸಿಂಹದೇವರಿಗೆ ಭೂಮಿಯನ್ನು ದತ್ತಿ ನೀಡಿದಂತೆ ಹೇಳಿದೆ.

ವಿಕ್ರಮಾದಿತ್ಯ

ಕಂ ॥ ಸ್ವಸ್ತಿಶ್ರೀವನಿತಾರ್ಪಿತ
ವಿಸ್ತೀರ್ಣೋರಸ್ಥಳಂ ರಿಪುವ್ರಜಮಸ್ತ
ನ್ಯಸ್ತಚರಣಂ ಸಮಸ್ತಜ
ನಸ್ತುತಸಿತಕೀರ್ತಿ ವಿಕ್ರಮಾದಿತ್ಯನೃಪಂ ॥ 144 ॥

ಕಂ ॥ ಅರಿರಾಯಜಗದಳಂ ದಿ
ಕ್ಕರಿದಂತವಿಲಗ್ನಕೀರ್ತಿ ಮೂರ್ತೀಭೂತ
ಸ್ಮರನೇಕಚ್ಛತ್ರೀಕೃತ
ಧರಾತಳಂ ಸೋಮವಂಶಚೂಡಾರತ್ನಂ ॥ 145 ॥

ಕಂ ॥ ಆಳ್ವಲಮಂ ತೋಳ್ವಲಮಂ
ಬಾಳ್ವಲಮಂ ಮೀಱುವರೀ ಭೂಭುಜರೇ
ವೇಳ್ವೆನೊ ಪೊಂಗೆ x x ರ್ದಪ
ರಾಳ್ವೆಸದೊಳ್ ವೈರಿವೀರಕೋಳಾಹಳನಾ ॥ 146 ॥

ಅನಂತಪಾಳ ಚಮೂಪ

ಕಂ ॥ ತತ್ಪಾದಪದ್ಮ ಮಧುಕರ
ನುತ್ಪಾಟಿತ ಬಳವದಹಿತ ಬಾಹುಬಳಂ ವಿ
ದ್ವತ್ಪೂಜ್ಯಂ ಗುಣರತ್ನ ಸ
ರಿತ್ಪತಿಯೆನಿಸಿದನನನ್ತಪಾಳ ಚಮೂಪಂ ॥ 147 ॥

ಗೋವಿಂದರಾಜ

ಕಂ ॥ ಶ್ರೀವನಿತಾಕುಚಸಂಶ್ರಿತ
ಪೀವರವ್ಯಕ್ಷಸ್ಥಳಂ ಲಸದ್ಗುಣಮಣಿಮಾ
ಲಾವಿಲಸಿತನೇನೆಸೆದನೊ
ಗೋವಿಂದಂ ಮದವದಹಿತದನುಜಮುಕುಂದಂ ॥ 148 ॥

ಚಂ ಮಾ ॥
ಶರಣೆಮಗೆಂದು ಬಂದೊಡಱಿಯೆಂ ಮಱೆದಾಂತೊಡೆ ಭಾಳದೊಳ್ ಪೊದ
ಱ್ದುರಿವುರಿಗಣ್ಣನುಗ್ರಫಣಿಕುಂಡಲಮಂ ಕಿವಿಯೊಳ್ ಕರಾಬ್ಜದೊಳ್
ಸುರುಚಿರಶೂಲಮಂ ಮಿಱುಪ ದಾಡೆಗಳಂ ನಿಜವಕ್ತ್ರದೊಳ್ ವಿಭೀ
ಕರಮೆನೆ ತೋಱುಗುಂ ಸಮರರಂಗದೊಳೀ ರಣರಂಗಭೈರವಂ ॥ 149 ॥

ಗೋವಿಂದ

ಮ ವಿ ॥ ವರವಿದ್ಯಾನಿಧಿ ಕೇಶಿರಾಜ ವಿಭುಗಂ ನೀಲಬ್ಬೆಗಂ ಪುಟ್ಟಿದಾ
ಸುರಕೀರ್ತಿ ಪ್ರಿಯದಾನಿ ಸಂದಗುಣರತ್ನಂ ದಾಶಿರಾಜಂ ಪರಾ
ಶರಗೋತ್ರಾಂಬರ ತಿಗ್ಮರೋಚಿ ಜನಕಂ ತಾಯ್ಬ್ಬಾ x ನಾನಾಗುಣಾ
ಕರೆ ಸೋಮಾಂಬಿಕೆಯೆಂದಡೀ ಭುವನದೊಳ್ ಗೋವಿಂದನೇಂ ಧನ್ಯನೋ ॥ 150 ॥

ವಶಿಷ್ಟ

ಕಂ ॥ ಶ್ರೀಮಶ್ಮಕಳ ಮುನೀಂದ್ರ ಶಿ
ಖಾಮಣಿ ಭುವನೈಕ ವಿನುತನತಿ ವಿಮಲತರಂ
ಶ್ರೀಮಹಿತಂ ನೆಗರ್ದಂ ಗುಣ
ಧಾಮಂ ದ್ವಿಜಕುಳ ವರಿಷ್ಟನೆನಿಪ ವಶಿಷ್ಟಂ ॥ 151 ॥

ಚಟ್ಟ

ಕಂ ॥ ಎನೆ ನೆಗಟ್ದಂ ವಶಿಷ್ಠಮುನೀಂ
ದ್ರನ ಗೋತ್ರದೊಳೊಗೆದನಖಿಳ ಜನನುತಮಿದುತಾ
ನೆನಿಪ ಸಿರಿಗುಪ್ಪೆಗೊಳದೊಳ್
ವಿನಯಾಂಬುಧಿ ದುರಿತಕುಳಘರಟ್ಟಂ ಚಟ್ಟಂ ॥ 152 ॥

ಈಶ್ವರಯ್ಯ

ಕಂ ॥ ವಾರಾಶಿಪರಿವೃತಾಖಿಳ
ಧಾರಿಣಿಯೊಳ್ ಪೋಲ್ವೊಡಮ್ಮ ಪೋಲ್ಕೆಮ ಪುರುಷಾ
ಕಾರದೊಳೆ ಪುರುಷಕಾರದೊ
ಳಾರುಂ ನೆಗಟ್ದೀಶ್ವರಾರ್ಯನಂ ಪೋಲ್ತಪರೇ ॥ 153 ॥

ಉ ಮಾ ॥ ಮಂದರ ಧೈರ್ಯನಪ್ರತಿಮ ಸಾಹಸನಾಶ್ರಿತ ರಾಜಕೀರಮಾ
ಕಂದನನೂನ ದಾನಿನಟುಗುಂದದ ವಿಪ್ರಗಣಾಗ್ರಗಣ್ಯನಾ
ನಂದಿತ ಬಂಧುವರ್ಗನಿವನೆಂಬುದು ಭೂತಳವೆಮ್ಮ ವೀರಗೋ
ವಿಂದನ ಸನ್ಧಿವಿಗ್ರಹಿಯನೀಶ್ವರನಂ ಸುಜನೈಕಬನ್ಧುವಂ ॥ 154 ॥

ಮ ಸ್ರ ॥
ಅನಿಮೇಶಾಂದ್ರಾಶೆಯೊಳ್ ಶಾಸನ ಬರೆಪಮನಾಂತಿರ್ದ ಕಲ್ಗಳ್ ದಿವಾಕ್ರ
ತ್ತನುಜಾಶಾ ವಕ್ತ್ರದೊಳ್ ಬೆಂಡೆಯಕೆಱೆಯ ಜಳಾಧೀಶ ದಿಕ್ಕೋಟಿವಾರ್ಧೀ
ಶನ ಕಾಷ್ಠಾಭಾಗದತ್ತಲ್ ಬಲಿನಗರದ ಸೀಮಾಂತದಿಂ ಶ್ರೀಪುರಕ್ಕಿಂ
ಬೆನೆ ಪೋದದ್ದಂ ಕುಬೇರಾಶೆಯೊಳಳೆಯಕೊಳಂ ಸೀಮೆ ತಾನಾಗಿ ತೋರ್ಕುಂ ॥ 155 ॥

ಫಲಶ್ರುತಿ

ಮ ವಿ ॥ ಸಕಳೋರ್ವೀಸ್ತುತಮಪ್ಪಧರ್ಮವನಿದಂ ಕಾದಂ ಚಿರೈಶ್ವರ್ಯ ಭುಂ
ಭುಕನಕ್ಕುಂ ವಿಪರೀತದಿಂದಳಿದವಂ ಗಂಗಾ ಗಯಾ ವಾರಣಾ

ಸಿ ಕುರುಕ್ಷೇತ್ರ ದೊಳೆಯ್ದೆ ಗೋ ದ್ವಿಜ ಮುನಿ ಬ್ರಾತಂಗಳಂ ಕೊನ್ದ ಪಾ
ತಕನಕ್ಕುಂ ಬಿಡದಿರ್ಕುವಾ ಪುರುಷನೆಂದುಂ ರೌರವಸ್ಥಾನಮಂ ॥ 156 ॥

22) ಬಳ್ಳಿಗಾವೆ 211, E.C. XIV (R), ಕ್ರಿ.ಶ. 1112

ಇದರಲ್ಲಿ ಕಲ್ಯಾಣದ ಚಾಲುಕ್ಯ ದೊರೆ ಆರನೆಯ ವಿಕ್ರಮಾದಿತ್ಯನ (ತ್ರಿಭುವನಮಲ್ಲ) ಆಳಿಕೆಯಲ್ಲಿ ಪಾಂಡ್ಯ ವಂಶದ ಕಾಮದೇವ ಎಂಬುವವನು ಬಳ್ಳಿಗಾವೆಯ ಕೇದಾರೇಶ್ವರ ದೇವಾಲಯಕ್ಕೆ ನೀಡಿದ ದತ್ತಿಯನ್ನು ಹೇಳಿದೆ. ಶಾಸನವನ್ನು ಬರೆದ ಕವಿ ಮಲ್ಲಿಕಾರ್ಜುನಾರ್ಯ.

ವಿಕ್ರಮಾದಿತ್ಯ VI

ಮ ಸ್ರ ॥ ಬಿರುದಂ ಬಿಟ್ಟಟ್ಟೆಕಣ್ಡಿರ್ಪತಿಯನ ರಸದಿನ್ತಮ್ಮತಮ್ಮಾಳ್ವವಿಶ್ವಂ
ಭರೆಯಂ ಬಿಟ್ಟದ್ರಿಕುಂಜಂಗಳೊಳುಜಿದುಜಿದಿರ್ಪುರ್ಕ್ಕಿ ಮಾಜಾನ್ತು ಯುದ್ಧಾ
ಜಿರದೊಳ್ಬಿಟ್ಟಾತ್ಮಕಾನೌಘಮನಮರವಧೂವರ್ಗದೊಳ್ಕೀಳೆಯಿಂದಂ
ನೆರೆದಿರ್ಪುರ್ದ್ಯೋಗಮಂ ಶಾತ್ರವರ್ಗೆ ಸಲಿಸುವಂ ವಿಕ್ರಮಾದಿತ್ಯದೇವಂ
॥ 157 ॥

ಪಾಂಡ್ಯರು

ಮ ಸ್ರ ॥ ಜಗದೊಳ್ಮಂಖ್ಯಾತಿಯನ್ತಾಳ್ದಿದ ಮೃಗಧರನಾಮ್ನಾಯದೊಳ್ರಾಜಭಾವಂ
ನೆಗಳ್ದಾಖ್ಯಾಸಾಮ್ಯದಿಂದಾ ಶಶಿಗೆಗತಕಳಂಕಾತ್ಮರೊಳ್ತಮ್ಮೊಳೆನ್ತುಂ
ನೆಗಳ್ದತ್ತಿಲ್ಲರ್ಥಸಾದೃಶ್ಯದಿನೆನಿಸಿ ಜಸಂಬೆತ್ತ ನಾನಾ ಕವೀಂದ್ರೋ
ಕ್ತಿಗಡರ್ಪಾದೊಳ್ಪು ತಮ್ಮೊಳ್ನೆಗಳೆನೆಗಳ್ದ ಪಾಣ್ಡ್ಯರ್ಕಳೊಳ್ಪುಣ್ಯಪುಂಜರ್
॥ 158 ॥

ಪರಶುರಾಮ

ಕಂ ॥ ಕೃತಯುಗದೊಳ್ಜಮದಗ್ನಿಗೆ
ಕೃತಕೃತಂಗೊಗೆದು ರೇಣುಕೀರಪತಿಗಂಗೀ ?
ಕೃತಗುರುವಧನಂ ವಧಿಯಿಸಿ
ಕೃತವೀರ್ಯಾತ್ಮ ಜನನತಿಬಳಂ ಪರಶುಧರಂ ॥ 159 ॥

ಮ ವಿ ॥ ಧರಣೀಮಣ್ಡಳದೊಳ್ಧರಾಭುಜರನಿರ್ಪತ್ತೊನ್ದು ಸೂಳ್ಕೊನ್ದು ತ
ದ್ಧರಣೀ ಮಣ್ಡಳಮಂ ಸಮಸ್ತಧರಣೀದೇವರ್ಗೆ ವಾರ್ಧನ್ತಿಕಂ
ಬರಮಿತ್ತಲ್ಲಿ ಧರಾಮರಸ್ವದೊಳಿರಲ್ಕಾಗೆನ್ದು ಪೋಗುತ್ತೆ ಸಾ
ಗರಮಂ ಚಾಪದಕೊರ್ಪಿನೊಳ್ಬುಧನುತ ಶ್ರೀರೇಣುಕಾನನ್ದನಂ ॥ 160 ॥

ಕಂ ॥ ಕಣಮಾತ್ರೋದಕಮನಿರ
ಲ್ಕಣಮೀಯದೆ ಪಶ್ಚಿಮಾಬ್ಧಿ ತೆಗೆದೆಡೆಯೊಳ್ಕೊಂ
ಕಣಸಪ್ತಕಮಂ ಫಣಿಕಂ
ಕಣವರದೆ ನಿಜಾಶ್ರಯಾರ್ಥಮಾ ವಿಭುಪಡೆದಂ ॥ 161 ॥

ಸಿಸುಗಲಿ

ಕಂ ॥ ಕೊಂಕಣಧಾತ್ರೀವನಿತೆಯ
ಕಂಕಣದನ್ತೆಸೆವ ಹೈವೆಯೊಳ್ಸಿಸುಗಲಿ ಸ
ನ್ದಂಕದ ನಾಯಕ ಮಣಿವೊ
ಲ್ಬಿಂಕಂ ಪಡೆದಿರ್ಕುಮತುಳ ಶೋಭಾಸದನಂ ॥ 162 ॥

ಕಂ ॥ ಪೆಸರರಿಗಳಲ್ಲಿ ಪುಟ್ಟಿದ
ಸಿಸುಗಂ ಕಲಿತನಮನಿತ್ತು ಪನ್ದೆತನಕ್ಕಾ
ವಸತಮೆನಿಸಿರ್ಪರದಱಿಂ
ಸಿಸುಗಲಿಯೆನಿಸಿತ್ತು ರಾಜಧಾನಿಶ್ರೇಷ್ಠಂ ॥ 163 ॥

ಚಂದ್ರರಾಜ I

ಕಂ ॥ ಜನತಾ ಮನೋಭಿನನ್ದನ
ಮೆನೆ ಕೀರ್ತಿಜ್ಯೋತ್ಸ್ನೆ ಬೆಳಗೆ ಜಗದೊಳಗೆ ಜಳ
ಕ್ಕನೆ ಚಂದ್ರಾಮ್ನಾಯ ಪಯೋಧಿ
ವನಧಿಯೊಳುದಯಿಸಿದನುರ್ವರಾ ಪತಿಚಂದ್ರಂ ॥ 164 ॥

ಕಮ್ಮಲದೇವಿ

ಕಂ ॥ ಲಲನಾಜನರತ್ನಂ ಕ
ಮ್ಮಲದೇವಿಜನಾಭಿವನ್ದ್ಯೆಯಾ ಚಂದ್ರಂಗು
ಜ್ವಳಚಂದ್ರಿಕೆಯನ್ತನ್ತ
ಗ್ಗಳಿಸಿದಳೆಸೆದೊಳ್ಪನಾತ್ಮಸಂಗತಿಯಿಂದಂ ॥ 165 ॥

ಕಾಮದೇವ I

ಕಂ ॥ ಸುತನೊಗೆದಂ ವಿಭು ತದ್ದಂ
ಪತಿಗಳ್ಗಬ್ಧಿಜೆಯುಮಬ್ಧಿಶಯನನುವಿವರೀ
ಕ್ಷಿತಿಗೆನಿಪವರ್ಗತಿ ಸುಭಗಂ
ಚತುರ ಸ್ತ್ರೀಜನ ಮನೋಭಿರಾಮಂ ಕಾಮಂ ॥ 166 ॥

ಭಾಗಲದೇವಿ

ಕಂ ॥ ಚತುರೆಗುಣರೂಪವತಿ ಜನ
ನುತೆ ಭಾಗಲದೇವಿರಾಜಪುತ್ರೀ ರತ್ನಂ
ರತಿ ತಾನೀ ಕಾಮಂಗೀ
ಸತಿಯೆನಲಾ ವಿಭುಗೆ ಚಿತ್ತವಲ್ಲಭೆಯಾದಳ್ ॥ 167 ॥

ಚಂದ್ರರಾಜ II

ಕಂ ॥ ಅಲಘುಭುಜಾಬಲನಾ ಭಾ
ಗಲದೇವಿಗಮಾ ನೃಪೇಂದ್ರಕಾಮಂಗಂ ನಿ
ರ್ಮಲತರಯಶನುದಯಿಸಿದಂ
ವಿಳಸಿತ ವಿಭವಾನುಕೃತ ಸುರೇಂದ್ರಂ ಚಂದ್ರಂ ॥ 168 ॥

ಚಂ ಮಾ ॥ ಕಲಿತನಮಾರ್ಗಮೀಕಲಿ ಕಟಾಕ್ಷಿಸುವನ್ನೆಗಮೆಲ್ಲಿಯುಂ ಭುಜಾ
ಬಲದಳವೀ ಭುಜಾಬಲಿ ವಿರೋಧಿಸುವನ್ನೆಗಮೇಕ ಮಾರ್ಗದಿಂ
ಸಲುತಿರಲಕ್ಕು ಮರ್ಬಿದದಟೀಯದಟಂ ಭ್ರುಕುಟಿ ಪ್ರಭಾವಮಂ
ನೆಲೆಗೊಳಿಪ್ಪನ್ನೆಗಂ ಮುಖದೊಳೆಂಬುದು ಚಂದ್ರನರೇಂದ್ರನಂ ಜಗಂ
॥ 169 ॥

ಸಾವಲದೇವಿ

ಕಂ ॥ ವನಿತಾಜನವನ್ದ್ಯ ಯಶೋ
ಧನೆ ಸಾವಲದೇವಿ ಸುದೃಢ ಪುರುಷವ್ರತೆಯ
ನೆನಿಪಾ ಚಂದ್ರಂಗೀ ಭಾ
ಮಿನಿ ರೋಹಿಣಿ ತಾನೆನಲ್ಕೆ ವಲ್ಲಭೆಯಾದಳ್ ॥ 170 ॥

ಕಾಮದೇವ II

ಚಂ ಮಾ ॥ ರತಿಗೆಣೆಯಾಗೆ ಬೀರಸಿರಿ ಮಾಧವಮಾಗೆ ಮಹಾಹವಂಸಮೂ
ರ್ಜಿತ ವಿಷಮಾಸ್ತ್ರ ಪಾತದಿನರಾತಿಗಳಂ ದಿವಿಜೇಂದ್ರ ಕಾಮಿನೀ
ತತಿಗೆರಗಿಪ್ಪ ಬಳ್ಕೆ ನಿಜಮಾಗಿರೆ ಸನ್ದ ಸಮಗ್ರನಂಬ ಬಾ
ಪ್ಪತಿಶಯ ಕಾಮದೇವನಿವನೆನ್ದಪುದುರ್ವರೆ ಕಾಮದೇವನಂ ॥ 171 ॥

ಅನಂತಪಾಲ

ಕಂ ॥ ವನವಾಸಿದೇಶಮಂತ್ರಿ ಭು
ವನಮಲ್ಲ ನೃಪಾಳ ಕೀರ್ತಿ ಲಕ್ಷ್ಮೀಲತಿಕಾ

ವನಪಾಳನಖಿಳ ವಿದ್ವ
ಜ್ಜನಪಾಳನನನ್ತಪಾಳನಧಿಪತಿಯೀಯಲ್ ॥ 172 ॥

ಕಂ ॥ ರಣರಂಗಭೈರವಂ ವಾ
ರಣರಿಪುವಿಕ್ರಮ ವಿಭಾಸಿ ವಿಶ್ರುತತ ರಸ
ದ್ಗುಣನಣ್ಣನಂಕಕಾಱಂ
ಪ್ರಣುತ ಯಶಂ ಕೃಷ್ಣರಾಜನಣುಗಿನ ತಮ್ಮಂ ॥ 173 ॥

ಗೋವಿಂದ

ಕಂ ॥ ಮಲೆಯದೆ ಬೆಸಕಯ್ವ ಬೆಸಂ
ಮಲೆಯದೆನಲ್ಪಾಳಿಸುತ್ತಮಿರೆ ಬನವಸೆಯಂ
ಮಲೆಪರ ಜೂಬು ಸುಧಾನಿ
ರ್ಮಲ ಪರಮಯಶಃಪ್ರಭಾವನಿಧಿ ಗೋವಿನ್ದಂ ॥ 174 ॥

ಶ್ರೀಕಂಠಮುನಿ

ಕಂ ॥ ಅನಘಂ ಶ್ರೀಕಣ್ಠಂ ಬುಧ
ಜನನುತ ಕೇದಾರ ಶಕ್ತಿ ಸೂನು ಹೃದಬ್ಜಾ
ಸನ ನಿರತ ಶ್ರೀಕಣ್ಠಂ
ಮುನಿಪತಿ ಪರಿರಬ್ಧವರವಚಃ ಶ್ರೀಕಣ್ಠಂ ॥ 175 ॥

ಮ ವಿ ॥ ಪರಮಾತ್ಮಾಗಮವೇದಿಯಾಗಿಯುಮತಿ ಪ್ರೋಚಣ್ಡವಾದಿತ್ವಮೊ
ಪ್ಪಿರೆ ಜಾಂಬೂನದಮಪ್ಪ ಪೊಂಗೆ ಕಡುಗಂ ಪಾಯ್ತೆಂಬಿನಂ ಸನ್ದ ನೀ
ಶ್ವರಪಾದಾಂಬುಜ ಶೇಖರಂ ದೃಢತಪಃ ಸಂಪತ್ತಿ ಜಾಯಾಸ್ವಯಂ
ವರನಾಚಾರ್ಯ ಗುಣೌವಳೀ ವಿಳಸಿತಂ ಶ್ರೀಕಣ್ಠಯೋಗೀಶ್ವರಂ ॥ 176 ॥

ಸೋಮೇಶ್ವರ ಮುನಿ

ಕಂ ॥ ಶ್ರೀಕಣ್ಠಸುತಂ ನತಯತಿ
ಲೋಕಂ ಸೋಮೇಶ್ವರಂ ಮುನೀಶ್ವರ ರೂಪಂ
ಶ್ರೀಕಣ್ಠಂ ದುರಿತಾಸುರ
ವೈಕುಣ್ಠಂ ಸ್ವಕೃತೀಘೋಷವದ್ಬುಧಕಣ್ಠಂ ॥ 177 ॥

ಮಲ್ಲಿಕಾರ್ಜುನಾರ್ಯ (ಶಾಸನ ಕವಿ)

ಕಂ ॥ ಕವಿನುತಮೆನಲೊದತಿಪಟು
ಕವಿಸಾರಸ್ವತ ಮಹೋದಯನ ಕಿಂಕರನೀ

ಶಿವಧರ್ಮ ಶಾಸನವನಭಿ
ನವಮಾಗಿರೆ ಮಲ್ಲಿಕಾರ್ಜುನಾರ್ಯಂ ಬರೆದಂ || 178 ||

23) ಬಳ್ಳಿಗಾವೆ 249, E.C. XIV (R), ಕ್ರಿಶ. 1114

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆಯಾದ ಆರನೆಯ ವಿಕ್ರಮಾದಿತ್ಯನ ದಂಡನಾಯಕ ಗೋವಿಂದರಾಜನು ಬಳ್ಳಿಗಾವೆಯಲ್ಲಿ ಅಬ್ಧಿಶಯನಮೂರ್ತಿಯನ್ನು ಮಾಡಿಸಿ ಭೂಮಿಯನ್ನು ದತ್ತಿ ಬಿಟ್ಟಂತೆಯೂ, 25 ಬ್ರಾಹ್ಮಣರಿಗೆ ವೃತ್ತಿಗಳನ್ನು ಕೊಟ್ಟಂತೆಯೂ ಹೇಳಿದೆ.

ವಿಷ್ಣುಸ್ತುತಿ

ಕಂ || ಶ್ರೀಕಾಂತಂ ಶಾಶ್ವತ ಲ
ಕ್ಷ್ಮೀಕಾತಂ ನಿಜತಳೋದರಸ್ಥಿತ ಲೋಕಾ
ಲೋಕಂ ಬಗೆಗೊಂಡಂ ನತ
ನಾಕೌಕನನಂತ ಭೋಗಶಯನನನಂತಂ || 179 ||

ಕಂ || ಶ್ರೀವರನೆಸೆವುದರದ ಪೊಂ
ದಾವರೆಯರಲೊಳಗಿಂ ಕಮಳವನವಲರ್ದುದಿದೇಂ ?
ಭಾವಿಸೆ ಚಿತ್ರಮೋ ತಾನೆನ
ಲಾವನ ಮುಖ ಕಮಳವನವರಲ್ದೆಸೆದಿರ್ಕುಂ || 180 ||

ತೈಲ

ಕಂ || ಎಳೆಯಂ ರಸೆಗದ್ದೊಡನಾ
ಕುಳವಾದಿ ವರಾಹನೆತ್ತುವಂತಾತ್ಮ ಭುಜಾ
ಬಳದಿಂ ಪರನೃಪಗತೆಯಂ
ಸಲೀಲನುದ್ಧರಿಸಿ ಸಾರ್ವಭೌಮ ತೈಲಂ || 181 ||

ಉ ಮಾ || ವಾರ್ಧಿಯೆ ಸೀಮೆ ತನ್ನ ಭುಜಗರ್ವದಿನಾರ್ಜಿಸಿದುರ್ವಿಗಿಂದುಸಂ
ಸ್ಪರ್ಧೆಯಿನುರ್ವಿ ಪರ್ವಿದ ಜಸಕ್ಕೆ ದಿಗಂತಮೆ ಸೀಮೆಯೆಂಬಿನಂ
ದುರ್ಧರಬಾಹುವೀರ್ಯನೆಳೆಯಂ ಬಗೆಗೊಂಡು ಚಳುಕ್ಯರಾಜ್ಯಸಂ
ವರ್ಧನನಾಳ್ದನುತ್ಪಲಶಿರಃಕಮಲಾರ್ಚಿತಚಂಡಿಕಾಪದಂ || 182 ||

ಕಂ || ಹೃತ್ಕೀಲನರಾತಿಗೆ ಕುಲ
ಕುತ್ಕೀಲಂ ಪೆರ್ಮೆಗೆನಿಸಿ ನೆಗಲ್ದಂ ರಾರಾ
ಜತ್ಕೀರ್ತ್ಯಮರಧುನೀಹಿಮ
ವತ್ಕುತ್ಕೀಲಂ ಪ್ರತಾಪಶೈಲಂ ತೈಲಂ || 183 ||

ವಿಕ್ರಮಾದಿತ್ಯ V

ಕಂ ॥ ವಿಕ್ರಮನೂರ್ಜಿತನಿಜಭುಜ
ವಿಕ್ರಮನಾಳ್ದಂ ಧರಿತ್ರಿಯಂ ತತ್ತನುಜಂ
ಶಕ್ರನಿವನೆನಿಸಿ ನತಪರ
ಚಕ್ರಂ ದಿಕ್ಚಕ್ರವರ್ತಿತೇಜಶ್ಚಕ್ರಂ ॥ 184 ॥

ಕಂ ॥ ಕೂರ್ಮನವೋಲೆಳೆಯಂ ದಶ
ವರ್ಮಂ ಕಿನ್ನೆಲಕೆವಿರ್ದು ತಳೆದನೆ ತಳೆದಂ
ನೂರ್ಮಡಿ ಮೇಲೆನಲಾಧ್ಯರ
ಪೆರ್ಮೆಗೆ ನಿಜಮಹಿಮೆ ತದನುಜಂ ವಸುಮತಿಯಂ ॥ 185 ॥

ಆಹವಮಲ್ಲ

ಕಂ ॥ ಧರೆಯಂ ನಗತುಂಗ ಪಯೋ
ಧರೆಯಂ ಪೂಗಪ್ರಕಾಂಡ ಬಂಧುರಮೃದುಕಂ
ಧರೆಯಂ ಪಲ್ಲವ ಲಲಿತಾ
ಧರೆಯಂ ತತ್ತನುಜನಾಳ್ದನಾಹವಮಲ್ಲಂ ॥ 186 ॥

ವಿಕ್ರಮಾದಿತ್ಯ VI

ಕಂ ॥ ಅಬ್ಧಿಪರಿವೇಷ್ಟಿತ ಮನ
ಕ್ಷುಬ್ಧಮನೋಜಳಧಿ ವಿಜಯಲಕ್ಷ್ಮೀಸಾವ
ಷ್ಟಬ್ಧಘನಾಸಂ ಪ್ರಥಮಕ
ಕುಬ್ಧವನಿವನೆನಿಸಿ ವಿಶ್ವವಿಶ್ವಂಭರೆಯಂ ॥ 187 ॥

ಮ ಸ್ರ ॥ ಗತವೇಳಂ ಚೋಳನುತ್ಪಲ್ಲವಕಲಿತಕರಂ ಪಲ್ಲವಂ ಸಂಭ್ರಮಾನ್ವೇ
ಷಿತಭೂಭೃದ್ರಂಧ್ರನಂಧ್ರಂ ಕ್ವಥಿತಪೃಥುಳಹೃಜ್ಜಾಂಗಳಂ ಸಿಂಗಳಂ ಲಂ
ಘಿತಮಾಳಂ ಮಾಳವಂ ಜರ್ಜರಭುಜಕುಧರಂ ಗುರ್ಜರಂ ಬಟ್ಟಿನೇ ಸಂ
ತತಮಾತ್ಮೀಯಪ್ರತಾಪೋನ್ನತಿಯಿನೆನಿಸಿದಂ ವಿಕ್ರಮಾದಿತ್ಯದೇವಂ ॥ 188 ॥

ಕಂ ॥ ಭೂರಿಭುಜೋದ್ಧುರತರತರ
ವಾರಿಯ ವಾರಿಯೊಳೊಜಿಲ್ದು ನೀರ್ಮಾನಸೆವೋಲ್
ವೀರಶ್ರೀ ನೆಲಸಿರ್ಪಳ
ನಾರತಮನಪಾಯೆ ರಾಯಕೋಳಾಹಳನಾ ॥ 189 ॥

ಕಂ ॥ ಚಾಳುಕ್ಯ ಮಹೀಶನ ಕೂ
ರ್ಬಾಳಟ್ಟೀರೊಳಗೆ ನೋಡೆ ಪೊಳೆವುತ್ತಿರ್ಪಾ
ಬಾಳೆಗೆರೆಯೋಡುವರಿನರ
ಪಾಳರ ಗಜಘಟೆಗಳೇನಿದೊಂದಚ್ಚರಿಯೋ ॥ 190 ॥

ಕಂ ॥ ಓಡಿದಲಾಳಂ ಕಿವಿವಿಡಿ
ದಾಡಿದ ಚೋಳಂ ವಿನಷ್ಟರಾಜ್ಯಂ ಬೈಕಂ
ಬೇಡಿದ ಕಳಿಂಗನೇಂ ಭಯ
ಕೂಡಲ್ಲದೆ ಪಗೆಗೆ ರಾಯಕೋಳಾಹಳನಾ ॥ 191 ॥

ಅನಂತಪಾಳ ದಂಡನಾಥ

ಉ ಮಾ ॥ ಮಾನವರೂಪದಿಂದೊಗೆವ ಕಳ್ಪಕುಜಂ ದ್ವಿಜಪೂರ್ವಜನ್ಮಕೃ
ದ್ದಾನ ಫಳೋದಯಂ ಸುಕೃತಜನ್ಮಗೃಹಂ ಸುಕವೀಂದ್ರ ಬೃಂದ ಹೃ
ನ್ಮಾನಸ ರಾಜಹಂಸನಪಪಾಪಕಳಾಪನೆನುತ್ತೆ ರಾಗದು
ದ್ದಾನಿಯನೊಲ್ದು ಬಣ್ಣಿಪ ಜನಂಗಳನನನ್ತವನನ್ತಪಾಳನಾ ॥ 192 ॥

ಚಂ ಮಾ ॥ ಅವಸರಮಾಗೆ ಪಾರ್ದು ಕಿವಿವರ್ಚುವ ಸಂಗರಮಾಗೆ ನೋಡಿ ಬೆ
ರ್ಚುವ ಪತಿಯರ್ಥಮಂ ಕಳಲೊಡರ್ಚುವ ಮತ್ತಿನ ದಂಡನಾಯಕರ್
ಸವನೆ ವಿರೋಧಿಯೊಟ್ಟಿರುಳನುರ್ಚುವ ಲಕ್ಷ್ಮಿಯನಾಳ್ದವಂಗೆ ಸಾ
ರ್ಚುವ ನೆಲನಂ ಪಯೋಧಿವರಮೆಯ್ದೆ ನಿಮಿರ್ಚುವನಂತಪಾಳನೊಳ್
॥ 193 ॥

ಗೋವಿಂದ ದಂಡಾಧಿಪ

ಮ ವಿ ॥ ವನವಾಸಂ ವನವಾಸವಾಯ್ತಿತರದಣ್ಡಾಧೀಶರಾಳ್ದಂದು ಶಿ
ಷ್ಟನಿಕಾಯಕ್ಕನಿಮಿತ್ತಮಿತ್ರನನವದ್ಯಾಚಾರಪಾತ್ರಂ ಜಗ
ದ್ವಿನುತಂ ತನ್ನ ನಿಯೋಗದೊಳ್‌ವಿಪುಳರಾಜ್ಯಶ್ರೀ ಸಮುದ್ದಾಮ ಯೌ
ವ್ವನವಾಸಂ ಬುಧರ್ಗಾದುದಾದವೆನಿಪಂ ಗೋವಿನ್ದ ದಣ್ಡಾಧಿಪಂ ॥ 194 ॥

ಮ ವಿ ॥ ಕಮಳಪ್ರೋದ್ಭವವಂಶಸಂಭವರೊಳೆಲ್ಲಂ ಸಂದ ತನ್ನಾರ್ಪು ತ
ನ್ನ ಮಹತ್ವಂ ನೆಗಟ್ದಿರ್ದ ತನ್ನಱಿವು ತನ್ನಾಜ್ಞಾಫಳಂ ತನ್ನ ಕೀ
ರ್ತಿ ಮಹೀಚಕ್ರಮನೆಲ್ಲಮಂ ಬೆಳಗೆ ದಂಡಾಧೀಶರತ್ನಂ ಚಳು
ಕ್ಯಮಹೀನಾಥಭುಜಾಸಿದಂಡಮೆನಿಪಂ ಗೋವಿಂದದಂಡಾಧಿಪಂ ॥ 195 ॥

ಮ ಸ್ರ ॥ ಎನಗಿಂ ಸ್ವೇಚ್ಛಾವಿಹಾರವ್ಯತಿಕರಮೊಗೆದತ್ತೇಕೆ ಗೋವಿಂದದಂಡೇ
ಶನ ಚಿತ್ತಂ ದೃಪ್ತಸಾಪತ್ನಿಕಬಳದಳನೋದ್ರೇಕದೊಳ್‌ತಳ್ತುದಿನ್ನಾ
ತನೊಳಾಂತುಗ್ರಾರಿವೀರವ್ಯತಿಕರಗತಿ ಮದ್ಬಿಂಬಸಂಭೇದನಂ ಕೆ
ಮ್ಮನೆ ತಾನಿಂ ಪೋಗದೆಂದುದ್ಭಯದೆ ತಪನನಿಂದಾದನುತ್ತಪ್ತದೇಹಂ
॥ 196 ॥

ಮ ವಿ ॥ ಮನದೊಳ್ಮಂತಣವಿರ್ದರಾತಿನೃಪವಂಶೋನ್ಮೂಳನಂಗೆಯ್ಯಲಿ
ರ್ಜನವಾಮಾತನಭೂತಚಾರ ವಚನವ್ಯಾಪಾರವಾತ್ಮಾವನೀ
ಜನಿತೋತ್ಪಾತ ಶತಂಗಳಿಂದಱಿದು ಭೀತಾತ್ಮರ್ನೃಪರ್ಬಂದು ತೊ
ಟ್ಟನೆ ಕಂಡರ್ಗಡಿದೇಂ ಪ್ರತಾಪಪರನೋ ಗೋವಿಂದ ದಂಡಾಧಿಪಂ ॥ 197 ॥

ಸ್ರಗ್ಧರೆ ॥ ದಿಗ್ದಾಹಂ ವೈರಿನಿರ್ನಾಶನಮೊದವಿದುದಲ್ತಲ್ತುದಗ್ರಕ್ರುಧುಗ್ರಂ
ದಿಗ್ದಂತಿವ್ರಾತನೇತ್ರಾರುಣರುಚಿ ದೆಸೆಯಂ ಪರ್ವಿತಲ್ಲಲ್ತಿದುದ್ಯ
ದ್ದಿಗ್ದೇವೀಕುಂಕುಮಸ್ಥಾಸಕಮೆನಲುರಿಗಳ್‌ಸುಟ್ಟನುಚ್ಚಿಷ್ಟರೋಷ
ಪ್ರಾಗ್ದೇಶಂ ಶತ್ರುದೇಶಂಗಳನತುಳಬಳಭ್ರಾಜಿ ಗೋವಿಂದರಾಜಂ ॥ 198 ॥

ಕಂ ॥ ತೊಳಗುವ ರನ್ನದ ಸೊಡರ್ವೊಲ್
ಬೆಳಗಿದಪಂ ವಿಕ್ರಮಾಂಕನೃಪನರಮನೆಯೊಳ್
ತೊಳೆದಿತರಚಮೂಪತಮೋ
ಮಳಮಂ ಗೋವಿಂದರಾಜದಂಡಾಧೀಶಂ ॥ 199 ॥

ಕಂ ॥ ರಾಯರ್ಝುಳಪ್ಪನ ಭುಜಕೌ
ಕ್ಷೇಯಕಮೆನಿಪಳವನಾಂತ ಗೋವಿಂದಚಮೂ
ನಾಯಕನೊಳ್ ಸೆಣಸುವವಂ
ನಾಯಕದೊಳ್ ಸೆಣಸುವೊಡೆದ ಕಾಬಂ ಪೋಲ್ಕುಂ ॥ 200 ॥

ಕಂ ॥ ಎತ್ತಣ ಪರಮಂಡಲಮುಂ
ಮುತ್ತಿಂಗೊಳಗಾಗಿ ದಾರದಂತಿರ್ಪುವು ಕಾ
ಯ್ದೆತ್ತಲೊಡಮಮಿದೇನು
ದ್ವೃತ್ತನೊ ರಣರಂಗಭೈರವಂ ಗೋವಿಂದಂ ॥ 201 ॥

24) ತಾಳಗುಂದ 111, E.C. XIV (R), ಕ್ರಿ.ಶ. 1121

ಇದರಲ್ಲಿ ಹೊಯ್ಸಳ ದೊರೆಯಾದ ಎರಡನೆಯ ಬಲ್ಲಾಳನ ಆಳಿಕೆಯಲ್ಲಿ ಸಾಮಂತ

ತ್ರಿಲೋಚನದೇವನು ಪ್ರಯಾಗದ ಮಾಧವದೇವರನ್ನು ತಾಳಗುಂದದಲ್ಲಿ ಪ್ರತಿಷ್ಠೆ ಮಾಡಿಸಿ, ಅದಕ್ಕೆ ನೀಡಿದ ದತ್ತಿಯನ್ನು ಹೇಳಿದೆ.

ತಾಣಗುಂದ

ಉ ಮಾ ॥ ಆರವೆಯಿಂ ಪೊದಟ್ಟಿ ಗಿಳಿವಿಂಡುಗಳಿಂ ಕಳಮಾಲಯಂಗಳಿಂ
ವಾರಿಜಷಂಡದಿಂ ಬಹುತಟಾಕದಿನುದ್ಘಲತಾಗೃಹಂಗಳಿಂ
ಚಾರುವನಂಗಳಿಂ ಬೆಳೆದ ಕೆಯ್ವೊಲದಿಂ ಸೊಗಯಿಪ್ಪ ತಾಣಗುಂ
ದೂರತಿಶೋಭಿಕುಂ ಸಿರಿಯ ಕಣ್ಬೊಲದಂತೆ ಧರಾತಳಾಗ್ರದೊಳ್ ॥ 202 ॥

ಕಂ ॥ ಕತ್ತಲಿಸುವೆಳೆಯ ಕೌಂಗಿಂ
ಸುತ್ತಿಱಿದೆಳೆವಳ್ಳಿಯಾಯ್ತು ಚೆಂದೆಂಗು ಫಲಂ
ಬೊತ್ತೊಱಿಕ್ಕಿದ ನಾರಂಗಂ
ಬಿತ್ತರಿಸಲ್ಕರಿದು ತಾಣಗುಂದೂರವನಂ ॥ 203 ॥

ಕಂ ॥ ಅಂಗಭವಂ ಸಂಗಡಿಗಂ
ತಿಂಗಳೆ ಪೊಂಗೊಡನಪಾರಸುಧೆ ನೀರೂಟಂ
ಪಿಂಗದ ಮಧು ವನಪಾಳಂ
ಸಂಗಡಿಸಲ್ ಬೆಳೆದುದೆಂಬುದೇನಚ್ಚರಿಯೇ ॥ 204 ॥

ಶಾ ವಿ ॥ ವೇದಂ ನಾಲ್ಕವಱಂಗಮಾಱು ಕುಱುಪಿಂ ಮೀಮಾಂಸೆ ಕಾಣ್ಡತ್ರಯಂ
ಬಾದಿಂಗೋದುವತರ್ಕಮಾಱು ಪದಿನೆಂಟುದ್ಯತ್ ಪುರಾಣ ಸ್ಮೃತಿ
ಪ್ರಾದುರ್ಭಾವ ವಿಶೇಷ ವಾಸ್ತು ಭರತಾದ್ಯಂ ಚೌಕಳಾ ಕೌಶಲಂ
ಮಾದೇವಂಗೆ ತದಾಜ್ಞೆಯಿಂ ದ್ವಿಜರ್ಗಾಶ್ರಿತಂ ತಾಣಗುಂದೂರಿನಾ ॥ 205 ॥

ಮಾಕಿಮಯ್ಯ

ಸ್ರಗ್ಧರೆ ॥ ಮೂವತ್ತಿತ್ಸಾಸಿರಕ್ಕಂ ತಿಳಕಮಾತೊಡವೋ ಲೋಚನ ಸ್ಥಾನವೆಂಬೀ
ಭಾವಂ ಲೋಕೋತ್ತರಂಗಕ್ಕುದಯಿಸೆಲೆಸೆವಾಚಕ್ರಯಖ್ಯಾತವಂಶ
ಪ್ರ್ಯಾವೃತ್ತಾನನ್ತ ವಿಪ್ರಪ್ರಕರಸಮಧಿಕಂ ಸಾತ್ವಿಕಂ ಸಾತ್ವಿಕಂ ಸತ್ಯಶೀಲಂ
ದೇವಬ್ರಹ್ಮಾಗ್ರಪೂಜಾಪರನೆನೆ ನೆಗಳ್ದಂ ಮಾಕಿಮಯ್ಯರ್ ದ್ವಿಜೇಂದ್ರಂ
॥ 206 ॥

ಮ ಸ್ರ ॥ ಮನುಮಾರ್ಗಂ ಸಚ್ಚರಿತ್ರಂ ವಿನುತ ಸಕಳಶಾಸ್ತ್ರಾನ್ವಿತಂ ಸತ್ಯವಾಕ್ಯಂ
ಜನತಾಪ್ರಖ್ಯಾತನತ್ಯೂಜಿತ x x ವಿಭವಂ ಬ್ರಹ್ಮವಂಶಾವತಾರಂ

ಜನವಂದ್ಯಾಕಾರನೆಂದೀ ಸಕಳ ಬುಧಜನಂ ಬಣ್ಣಿಸಲ್ ಬಲ್ಲರಿಲ್ಲೆಂ
ದೆನೆ ವಿಶ್ವಾಮಿತ್ರ ಗೋತ್ರಂ ನೆಗಳ್ದ ನೆಲೆಯೊಳೀ ಮಾಕಿರಾಜಾಂಕನಾಗಳ್
॥ 207 ॥

ಚಂ ಮಾ ॥ ಸರಸಿಜ ಸಂಭವಂ x ಭಕ್ತಿಯಿಂ ಪ್ರಣವೇಶ್ವರನ ಪ್ರತಿಷ್ಠೆಯಂ
ವಿರಚಿಸಿತಕ್ಕೆ ನೂತನ ವಿರಂಚಿಯೊಲುಂ ನೆಗಳ್ದೀ ತ್ರಿಲೋಚನಂ
ಪಿರಿದತಿ ಭಕ್ತಿಯಿಂದೆಸೆವ ಮಾಧವ ದೇವರ ಸುಪ್ರತಿಷ್ಠೆಯಾ
ಗಿರೆ ನೆರೆ ಮಾಡಿದಂ ಕಮಳಭಾರಿತಿಯಂ ಪ್ರರುಡಿಲ್ಲದಿರ್ಪಿನಂ ॥ 208 ॥

ಕಂ ॥ ನಿರ್ಮಳಚಿತ್ತಂ ವೃತ್ತಂ
ಧರ್ಮರತಿ ಪ್ರೀತಿ ರುಚಿರ ಗುಣಗಣನಿಕರಂ
ಪೆರ್ಮೆಯುಮಾಗಿರೆ ನೆಗಳ್ದಾ
ಬೆಂಮ x ಕರುಮಾತ್ಯವಂಶವಾತನೆ ಧನ್ಯಂ ॥ 209 ॥

25) ಬಳ್ಳಿಗಾವೆ 212, E.C. XIV (R), ಕ್ರಿಶ. 1129

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆಯಾದ ಭೂಲೋಕಮಲ್ಲನ (ಸೋಮೇಶ್ವರ) ಆಳಿಕೆಯಲ್ಲಿ ಕದಂಬ ರಾಜನಾದ ತೈಲನು ದಕ್ಷಿಣ ಕೇದಾರಮಠಕ್ಕೆ ಭೂಮಿಯನ್ನು ದತ್ತಿ ಬಿಟ್ಟಂತೆ ಹೇಳಿದೆ.

ಚಾಲುಕ್ಯ ದೊರೆಗಳು

ಉ ಮಾ ॥ ಶ್ರೀರಮಣೀಮನಃಪ್ರಿಯನ ನಾಭಿಸರೋರುಹಮಧ್ಯದೊಳ್ವಚಃ
ಶ್ರೀರಮಣೀಶನುದ್ಭವಿಸಿದಂ ತದುದಗ್ರಭುಜಂಗಳಿನ್ದೆ ದು
ರ್ವಾರಣಬಾಹುವೀರ್ಯ ಪರಿಪಾಳಿತವಾರ್ಧಿಪರೀತ ಭೂತಳ
ಶ್ರೀರಮಣೀಶನಂಶಮೆನೆ ಪುಟ್ಟಿದರಾದಿಚಲುಕ್ಯಭೂಭುಜರ್ ॥ 210 ॥

ತೈಲಪ

ಕಂ ॥ ರಸೆಯಂ ರಸೆಗುಯ್ದಸುರನ
ನಸಮಭುಜಾಬಳದೆ ಸಮರಸಮಯದೊಳುಜ್ಜೆ ಮ
ರ್ದಿಸಿ ತಂದ ಚಕ್ರಿಯಂ ನೆನೆ
ಯಿಸುವಂ ಭುಜಬಳಮಹತ್ವದಿಂ ತೈಲನೃಪಂ ॥ 211 ॥

ವಿಕ್ರಮಾದಿತ್ಯ

ಮ ಸ್ರ ॥ ನಿರುತಂ ಕೀಟ್ಬಿಟ್ಟು ಮುಂ ಮಾನಸಿಕೆಯ ದೆಸೆಯಂ ಬಿಟ್ಟು ಕೂರ್ಮಾವತಾರಂ
ಬೆರಸಿಂತೀವಿಶ್ವವಿಶ್ವಂಭರೆಯನಸದಳಂ ತಾಳ್ದಿದಂದಿಂದಮಾದಾ

ಪರಿವಾದಕ್ಕಂಜಿ ತಾಂ ಮಾನಸಿಕೆಯನಧಿಕಂ ತಾಳ್ದಿ ಮೇಲಾಗಿ ಪಿಶ್ವಂ
ಭರೆಯಂ ನಿಃಕ್ಲೇಶದಿಂ ತಾಳ್ದಿದ ಹರಿಯೆನಿಪಂ ವಿಕ್ರಮಾದಿತ್ಯದೇವಂ
॥ 212 ॥

ಮ ವಿ ॥ ಕಲಿಕಾಲಾವನಿಪಾಲಜಾಲಚಿರದೋರ್ವಾಸೋಪಜಾತೋದ್ಧತಾ
ಖಿಲಕಾಲುಷ್ಯಕಲಂಕಪಟಲಪ್ರಕ್ಷಾಳನಂ ಮಾಡಲೆಂ
ದೊಲವಿಂ ತೀರ್ಥ ಜಲಾವಗಾಹನಮನಾದಂ ಮಾಡುತಿರ್ಪಂತೆ ನಿ
ಚ್ಚಲುಮಿರ್ಪಳ್ ಜಯಲಕ್ಷ್ಮಿ ಖಡ್ಗಜಲದೊಳ್ ಚಾಳುಕ್ಯಚಕ್ರೇಶನಾ ॥ 213 ॥

ಕಂ ॥ ಅಳವಟಿದರಾತಿಭೂಪತಿ
ಗಳ ಬಳಗಂ ತಂದು ಕುಡುವ ಗಜಮದಧಾರಾ
ಜಳದ ಹಯಂಗಳ ಲಾಲಾ
ಜಳದ ಪೊನಲ್ ಬಹುಳಮಾ ನೃಪೇಂದ್ರಾಲಯದೊಳ್ ॥ 214 ॥

ಉ ಮಾ ॥ ಮಾಳವ ಚೋಳ ಗೌಳ ಮಗಧಾಂಗ ತುರುಷ್ಕ ಕಳಿಂಗ ವಂಗ ಭೂ
ಪಾಳಕರಂಜಿ ಬೆರ್ಚಿ ಬೆಸಕೆಯ್ದೊಸೆದೆಂದುದನೆಂದು ರಾಜ್ಯಸ
ಲ್ಲೀಲೆಯೊಳಿರ್ಪರಾನಱಿಯೆನಲ್ಲದೊಡಾಗಳೆ ದೇವರಾಜ್ಯಸ
ಲ್ಲೀಲೆಯೊಳಾ ನೃಪೋತ್ತಮರನೆಯ್ದಿಪನೋವದೆ ಕುಂತಳೇಶ್ವರಂ ॥ 215 ॥

ಉ ಮಾ ॥ ಎನ್ತತಿಚಾರುಲಕ್ಷಣಗುಣಂ ಮಣಿರೋಹಣಭೂಧರಕ್ಕೆ ತಾ
ನೆನ್ತಮೃತಾಂಬುರಾಶಿಗೆ ಸುಧಾಕರನೆನ್ತುದಯಾಚಳಕ್ಕೆ ತ
ಧ್ವಾನ್ತವಿರೋಧಿ ಸಂಜನಿತಮನ್ತೆ ನೃಪಾನ್ವಯಮನ್ದನಂ ಕಳಾ
ಕಾನ್ತನುದಗ್ರತೇಜನನೆ ಸೋಮ ಮಹೀಭುಜನನ್ದು ಪುಟ್ಟಿದಂ ॥ 216 ॥

ಸೋಮೇಶ್ವರ III

ಉ ಮಾ ॥ ಪುಟ್ಟುವುದುಂ ವಿರೋಧಿನೃಪಸಂತತಿಗಾರ್ತತೆ ತೊಟ್ಟೆನಲ್ ಕರಂ
ಪುಟ್ಟಿದದೆಲ್ಲಿಯುಂ ನಿಖಿಳಕುಂತಳ ಭೂತಳ ರಾಗವರ್ಧನಂ
ಪುಟ್ಟಿದುದಾವಗಂ ನೆಗಟ್ದಿ ಭಾರತಿಗಂದು ಸನಾಥತೋದಯಂ
ಪುಟ್ಟಿದುದೆಂದೊಡಾರ್ದೊರೆಗೆವರ್ಪ ನೃಪಾಳಕರಾ ನೃಪಾಳನೊಳ್
॥ 217 ॥

ಕಂ ॥ ಮಣಿಯದರಿನೃಪರ ಚೂಡಾ
ಮಣಿಯುಮನಾನೃಪರ ಕುಂಭಿಕುಂಭೋತ್ಥಲಸ

ನ್ಮಣಿಯುಮನಣಿಯರಮವನುಡೆ
ವಣಿಗಟ್ಟಲ್ ಬಗೆವನಾತ್ಮಶೈಶವದಶೆಯೊಳ್ ॥ 218 ॥

ಕಂ ॥ ನಡೆಗಲಲೊಡರಿಸಲಾತಂ
ನಡೆಗಲಲೊಡರಿಸಿದರಹಿತರಡವಿಗೆ ಭಯದಿಂ
ನುಡಿಗಲಲೊಡರಿಸೆ ಬೇಗಂ
ನುಡಿಗಲಲೊಡರಿಸಿದರರಿನೃಪರ್ ವನಚರರೊಳ್ ॥ 219 ॥

ಕಂ ॥ ಪೊಡೆಸೆಂಡಾಡುವ ಪದದೊಳ್
ಪೊಡೆಸೆಂಡಂ ಪೊಡೆಯಲೊಲ್ಲದರಿನೃಪಶಿರಮಂ
ಪೊಡೆಸೆಂಡಾಡುವನಿರದೆಂ
ದೊಡೆ ಭುಜಬಳದಳವನವನೊಳಳೆವವನೊಳನೇ ॥ 220 ॥

ಚಂ ಮಾ ॥ ಸದಮಳರಾಗವಾರ್ಧಿರಸಪೂರ್ಣತೆ ವಿಕ್ರಮಚಕ್ರಿಗಾದುದಾ
ದುದು ಮುಕುಳೀಕೃತತ್ವಮಸುಹೃತ್ಕರಪಂಕರುಹಕ್ಕೆ ಬೇಗಮಾ
ದುದು ನಿಖಿಲೋರ್ವಿಗಾಯತಧೃಗುತ್ಪಳಹಾಸಮಿದೆಂಬಿನಂ ಸಮಂ
ತುದಯಮಹಾಮಹೀಧರಮನೇಱಿದನೊಪ್ಪಿರೆ ಸೋಮವಲ್ಲಭಂ ॥ 221 ॥

ಮ ಸ್ರ ॥
ಧರೆಯಂ ಪೊತ್ತಿರ್ದು ಭಾರಾವ್ಯಪಗಮವಿವಶಂ ಭೋಗಮಂ ಕಾಣನೆಂದುಂ
ನಿರುತಂ ಭೋಗೀಶನೆಂದುಂ ತಱೆದುದು ಧರೆಯಂ ಪೊತ್ತು ಬೆನ್ಕೂರ್ಮರಾಜಂ
ಗಿರದಿನ್ನಾಪ್ರಾಣಿಗಳ್ ವಿಶ್ರಮಿಸುಗೆ ಸುಖದಿಂದೆಂಬವೋಲ್ ವಿಶ್ವವಿಶ್ವಂ
ಭರೆಯಂ ದೋರ್ದಂಡದೊಳ್ ತಾಳ್ದಿದನತುಳಬಳಂ ಸೋಮಚಾಳುಕ್ಯಭೂಪಂ ॥ 222 ॥

ಉ ಮಾ ॥ ಶ್ರೀಕಾಂತಾರಮ್ಯಹರ್ಮ್ಯಂ ನೆಗೞ್ದ ನಿಜಮಹೋರಸ್ಥಳಂ ಚಾರುವೀರ
ಶ್ರೀಕಾಂತಾಕೇಳಿಶುಂಭನ್ಮಣಿಮಯಭವನಂ ನೈಜತೀವ್ರಾಸಿ ವಿದ್ಯಾ
ಶ್ರೀಕಾಂತಾಲಾಸ್ಯರಂಗಂ ನಿಜಮುಖಕಮಳಂ ನಿಚ್ಚಮೆಂಬನ್ನೆಗಂ ಧಾ
ತ್ರೀಕಾಂತಂ ತಾಳ್ದಿದಂ ಶ್ರೀಗಳನತುಳಬಳೋದ್ಭಾಸಿ ಭೂಲೋಕಮಲ್ಲಂ
॥ 223 ॥

ಮ ವಿ ॥ ವಿನತಾರಾತಿನೃಪಾಳಮೌಳಿಮಣಿಗಳ್ ನಕ್ಷತ್ರಮಾತ್ಮೀಯಕೀ
ರ್ತಿ ನವಾಭ್ಯುನ್ನತಚಂದ್ರಿಕಾಪ್ರಸರಮೋರಂತಸ್ತತಾಪಂ ಜಗ
ಜ್ಜನಮೆಲ್ಲಂ ಸುಚಕೋರಕಾವಳಿಯೆನಲ್ ಸೋಮಾಖ್ಯೆ ಭೂಚಕ್ರದೊಳ್
ತನಗನ್ವರ್ಥಮೆನಲ್ ವಿರಾಜಿಸಿದಪಂ ಸೋಮೇಶ್ವರೋರ್ವೀಶ್ವರಂ ॥ 224 ॥

ಮ ಸ್ರ ॥ ಸ್ವಕಳಾಳೀದಾನದಿಂದಂ ವಿಬುಧತತಿಗತಿಪ್ರೀತಿಯಂ ಮಾಳ್ಪೊಡಂ ಶೀ
ತಕರಂ ಶ್ರೀಕಂಠಭೂಷಾಮಣಿ ಕವಳಯಸಂತರ್ಪಣಾಧಾಯಿಯೆಂದಿಂ
ತು ಕರಂ ಸಂಸ್ತುತ್ಯನಾಗಿರ್ಪೊಡಮೆಸೆವ ವಿನಿರ್ದೋಷನೊಳ್ ನಿಷ್ಕಳಂಕ
ಪ್ರಕರಪ್ರಖ್ಯಾತನೊಳ್ ತಾಂ ಸಮನೆನಿಪನೆ ಪೇಟ್ ಸೋಮನೊಳ್
ವ್ಯೋಮಸೋಮಂ ॥ 225 ॥

ಕಂ ॥ ಅರಿಭೂಪರ ತೇಜದ ದ
ಳ್ಳುರಿ ಮಟ್ಟುಗುವುದೊರ್ಮ್ಮೆ ತನ್ನ ಪೆಸರ್ಗೊಳಲೇನ
ಚ್ಚರಿವಡೆದುದೊ ಜಗದೊಳ್ ಭೀ
ಕರತರ ತರವಾರಿವಾರಿ ಸೋಮೇಶ್ವರನಾ ॥ 226 ॥

ಉ ಮಾ ॥ ಕುಂತಳಮಾತ್ಮವಲ್ಲಭೆಯ ಕುಂತಳಮೊಪ್ಪುವ ಕಾಂಚಿ ಕಾಂಚಿ ಶು
ದ್ಧಾಂತನಿತಂಬಿನೀಜನದ ಧಾರೆ ನಿಜೋನ್ನತದಾನಧಾರೆಯೆಂ
ಬಂತಿರೆ ಸುತ್ತಲುಂ ಸಲೆ ನಿಮಿರ್ಚೆ ನಿಜೋಗ್ರಭುಜಪ್ರತಾಪಮಾ
ಶಾಂತಮನೆಯ್ದೆ ಪಾಲಿಸಿದನುರ್ವಿಯನೊರ್ವನೆ ಸೋಮವಲ್ಲಭಂ
॥ 227 ॥

ತೈಲ

ಕಂ ॥ ಶ್ರೀಮತ್ಕದಂಬವಂಶಶಿ
ಖಾಮಣಿ ಮಂಡಳಿಕಮಕುಟವಿಭ್ರಾಜಿತಚೂ
ಡಾಮಣಿ ವಿದ್ವಜ್ಜನಚಿಂ
ತಾಮಣಿ ಧೈರ್ಯಪ್ರಸಿದ್ಧಶೈಲಂ ತೈಲಂ ॥ 228 ॥

ಬಳ್ಳಿಗಾವೆ

ಚಂ ಮಾ ॥ ಅದು ವಿಭುದೈಕವಾಸಮಮರಾವತಿಯಂತತಿಭೋಗಿಸೇವ್ಯಮಂ
ತದು ಪೆಸರ್ವೆತ್ತು ರಂಜಿಸುವ ಭೋಗವತೀಪುರದಂತೆ ಭಾವಿಸ
ಲ್ಕದು ಧನದಪ್ರಸೇವ್ಯಮಳಕಾಪುರದಂತೆನೆ ಬಳ್ಳಿಗಾವೆಗಾ
ವುದೊ ಪಡಿ ಪಟ್ಟಣಂ ನೆಗಟ್ದಿ ವಾರ್ಧಿಪರೀತಸಮಸ್ತಧಾತ್ರಿಯೊಳ್ ॥ 229 ॥

ಬಳ್ಳಿಗಾವೆಯ ಮಹಾಜನರು

ಚಂ ಮಾ ॥ ಪರಹಿತರೇಕವಾಕ್ಯರಜಿವಿಂಗೆ ತವರ್ಮನೆ ಧರ್ಮದಾಗರಂ
ಸರಸಕವೀಶ್ವರಾವಳಿಗೆ ಕೇಳಿಗೃಹಂಕಣಿ ಪೆರ್ಮೆಗೊರ್ಮೆಯುಂ

ಹರಿಹರಪಂಕಜಾಸನ ಜನಾದಿ ವಿನಿರ್ಮಳ ಧರ್ಮರೆಂದೊಡಾ
ದೊರೆಯರೊ ಬಳ್ಳಿಗಾವೆಯ ಮಹಾನಗರಂಗಳೊಳೀ ಧರಿತ್ರಿಯೊಳ್ ॥ 230 ॥

ಬಳ್ಳಿಗಾವೆಯ ವರ್ತಕರು

ಕಂ ॥ ಕಿಡುವೊಡಮೆಯನೊಂದನೆ ಕೊ
ಟ್ಟೆಡೆಮಡಗದಿಹಂ ಪರಂಗಳೆಂಬೆರಡುಮನಂ
ಗಡಿಯೊಳ್ ಕಿಡದೊಡಮೆಯನಡಿ
ಗಡಿಗಾರ್ಜಿಪರಲ್ಲಿ ನೆಗಟ್ದಿ ನಗರಜನಂಗಳ್ ॥ 231 ॥

ಚಂ ಮಾ ॥ ಸುರಪತಿಯಂತೆ ಸರ್ವವಿಬುಧಾಶ್ರಯರಿಂದ್ರಗಜೇಂದ್ರದಂತೆ ಭಾ
ಸುರತರದಾನಸಂಪದಧಿಕೋನ್ನತರಿಂದುವಿನಂತೆ ಸತ್ಕಲಾ
ಧರರಹಿರಾಜನಂತೆ ನಿಖಿಲಕ್ಷಮೆಗಾಸ್ಪದರೆಂದೊಡೀಗಳಾರ್
ದೊರೆಯರೊ ಬಳ್ಳಿಗಾವೆಯ ಮಹಾನಗರಂಗಳೊಳೀಧರಿತ್ರಿಯೊಳ್
॥ 232 ॥

ಕಂ ॥ ಕರಿಗೆ ರದನಂ ಭಯಂಕರ
ತರದಂಷ್ಟ್ರಾಂಕುರಮಿಭಾರಿಗುನ್ನತಪಕ್ಷಂ
ಶರಭರಿಪುಗಾದುದೆಂಬಂ
ತಿರಲೆಸೆವರ್ ಪ್ರಭುಗಳಲ್ಲಿ ತತ್ತತ್ತನದೊಳ್ ॥ 233 ॥

ಪಂಚಮಠಗಳು

ಕಂ ॥ ಹರಿಹರ ಕಮಳಾಸನ ವೀ
ತರಾಗ ಬೌದ್ಧಾಲಯಂಗಳನ್ದಿನ್ತು ವಸು
ನ್ಧರೆಗೆಸೆವ ಪಂಚಸರದ
ನ್ತಿರೆ ಪಂಚಮಠಂಗಳೆಸೆವುದಾ ಪಟ್ಟಣದೊಳ್ ॥ 234 ॥

ಕಂ ॥ ಮೂಱುಂ ಪುರಂಗಳಲ್ಲಿಯ
ಮೂಱುಂ ಕಣ್ಗಳ್ಸಮಗ್ರ ಲಕ್ಷ್ಮಿಗೆ ಮೇಣಾ
ನೀಱೆಯ ಕೊರಳೊಳ್ಸೆಲಸಿದ
ಮೂಱುಂ ಮುತ್ತಿನ ಸರಂಗಳೆಂಬನ್ತಿರ್ಕುಂ ॥ 235 ॥

ಕಂ ॥ ದಕ್ಷಿಣಕೇದಾರಂ ಪಾ
ಪಕ್ಷಯಕಾರಣಮಶೇಷನಗರಜನ ಪ್ರ

ತ್ಯಕ್ಷೀಕೃತ ಶಿವಸನ್ನಿಧಿ
ಸಾಕ್ಷಾತ್ಕೃತ ಕೃತಯುಗ ಪ್ರಭಾಸರ್ವಸ್ವಂ ॥ 236 ॥

ಕಂ ॥ ಕಲಿ ಕಲುಷ ಖಳರ ಭಯದಿಂ
ಬಲಿರ್ದಪನಿಲ್ಲಿ ಕೃತಯುಗಾಧಿಪನಿನ್ತೀ
ಕಲಿಗೋಂಟೆಯ ಬಲಿದಿಹನೆನ
ಲ್ಕಲಘುಗುಣಾಕಾರಮೆಸೆವುದಾ ಪ್ರಾಕಾರಂ ॥ 237 ॥

ಕೇದಾರಶಕ್ತಿಪಂಡಿತ

ಕಂ ॥ ಮೂವರ ಕೋಣೆಯ ಸನ್ತತಿ
ದೇವಬ್ರತನೆಸೆವ ಪರ್ವತಾವಳಿಯೊಳ್ತಾ
ನಾವಿರ್ಭವಿಸಿದನಮಳ ಯ
ಶೋವಿಭು ಕೇದಾರಶಕ್ತಿ ಪಣ್ಡಿತದೇವಂ ॥ 238 ॥

ಕಂ ॥ ಶ್ರೀಕಣ್ಠಂ ಮೌಕ್ತಿಕ ಮಾ
ಳಾಕಲ್ಪಿತ ಕಣ್ಠವೆಸೆವ ಸರಸತಿಗೆನೆ ವಿ
ದ್ಯಾಕನಕನಿಷನಾನತ
ಲೋಕಂ ತಚ್ಛಿಷ್ಯನೆಸೆದನಲ್ಲಿಂ ಬಳಿಯಂ ॥ 239 ॥

ಸೋಮೇಶ್ವರಾರ್ಯ

ಕಂ ॥ ಆ ಮುನಿಪನ ಶಿಷ್ಯಂ ವಿ
ದ್ಯಾಮಹಿಮ ಕ್ಷೀರವಾರ್ಧಿವರ್ಧನ ಸೋಮಂ
ಸೋಮೇಶ್ವರಾರ್ಯನೆಸೆದಂ
ಕಾಮವಿನೀಳಾಬ್ಜಷಣ್ಡಚಣ್ಡದ್ಯೋತಂ ॥ 240 ॥

ಚಂ ಮಾ ॥ ಜಳಧಿಪರೀತ ಭೂತಳಮನೆಯ್ದೆ ನಿಜೋನ್ನತ ಸೌಧರಶ್ಮಿ ಮ
ಣ್ಡಳದಿನನಾರತಂ ಬೆಳಗಿ ಸೋಮನತಿಶ್ರಮದಿಂದೆ ಮಾಣ್ಬುದೇಂ
ನಳಿನಸಖಂ ಸಹಸ್ರಕರದಿಂ ಬೆಳಪಂದವೆನಿಪ್ಪುದಾಯ್ತು ನಿ
ರ್ಮಳಮತಿ ವಾಮಶಕ್ತಿಮಠಮಂ ಪರಿರಕ್ಷಿಸಲೆನ್ದು ನಿಲ್ವುದುಂ ॥ 241 ॥

ಗೌತಮಮುನಿ

ಚಂ ಮಾ ॥ ಲಲಿತತರ ಪ್ರದೀಪದವೊಲಾ ಮಠಮಂ ಪಲಬರ್ಮುನೀಂದ್ರರು
ಜ್ವಳಗುಣಮಣ್ಡನರ್ಬೆಳಗಿದರ್ಬೆಳೆಯಂ ಮುನಿಗೌತಮಂ ವಿನಿ

ರ್ಮಳತರರತ್ನ ದೀಪ ಕಳಿಕಾಂಕುರದನ್ತೆ ನಿರಂತರಂ ಜಗ
ದ್ವಿಳಸಿತಕೀರ್ತಿದಲ್ಬೆಳಗಿದಂ ಧರೆಕೈಮುಗಿದೊಲ್ದು ಜೀಯೆನಲ್ ॥ 242 ॥

26) ಬಳ್ಳಿಗಾವೆ 224, E.C. XIV (R), ಕ್ರಿಶ. 1140

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ಭೂಲೋಕಮಲ್ಲನ (ಸೋಮೇಶ್ವರ III) ಆಳಿಕೆಯಲ್ಲಿ ಕುಸುವೇಶ್ವರ ದೇವರನ್ನು ಮಾಡಿದ ಬಾವಣ ಮತ್ತು ರಾವಣ ಎಂಬ ಶಿಲ್ಪಿಗಳನ್ನು ಹೊಗಳಿದೆ.

ಕಂ ॥ ಶಿಲ್ಪಿಗಳತಿವಿಮಲಗುಣಾ
ಕಲ್ಪರ್ಬಾವಣನುಮೆಸೆವ ರಾವಣನುಂ ಸ
ತ್ಕಲ್ಪರ್ಧರ್ಮಶ್ರವಣಾ
ನಲ್ಪಸೋದರರುದಾತ್ತ ವಿಮಳಚರಿತ್ರರ್ ॥ 243 ॥

ಮ ವಿ ॥ ನಿಜತಾತಂ ಗಡ ರಾಘವಂ ಜನನಿ ತಾಂ ಬಲ್ಲವ್ವೆ ಗೌರೀಶದಾ
ಸಜನಂಗಳ್ ತವಗಿಷ್ಟ ಬನ್ಧುನಿಕರಂ ಶ್ರೀಗೌತಮಾರ್ಯಂ ಮುನಿ
ಬ್ರಜವನ್ದ್ಯಂ ಮೊದಲಾಗೆ ಕೋಡಿಯಮಠಕ್ಕಾಚಾರ್ಯರಾಗಿರ್ದವ
ರ್ನಿಜಸತ್ತ್ವಾಮಿಗಳೆನ್ದೊಡೇವೊಗಳ್ವುದೋ ತತ್ಕೀರ್ತಿಯಂ ಲೋಕದೊಳ್
॥ 244 ॥

27) ಬಳ್ಳಿಗಾವೆ 215, E.C. XIV (R), ಕ್ರಿಶ. 1149

ಇದರಲ್ಲಿ ಸಾಂತರ ದೊರೆಯಾದ ಜಗದ್ದೇವನು ಬಳ್ಳಿಗಾವೆಯ ಕೇದಾರೇಶ್ವರ ದೇವರಿಗೆ ಭೂಮಿಯನ್ನು ದತ್ತಿ ಬಿಟ್ಟಂತೆ ಹೇಳಿದೆ.

ಶಾಂತರರು

ಕಂ ॥ ಶಾಂತತಮೋಗುಣಗಣರತಿ
ಶಾಂತಸಮಗ್ರಾರಿವರ್ಗದೋರ್ಬಲವಿಭವರ್
ಶಾಂತಭಯಲೋಭಧರದಜಿಂ
ಶಾಂತರವೆಸರಾದುದವರ್ಗೆ ಭೂಮಂಡಲದೊಳ್ ॥ 245 ॥

ಜಗದ್ದೇವ

ಮ ಸ್ರ ॥ ಜಿನಧರ್ಮಕ್ಷೀರನೀರಾಕರ ವಿಶದಶರಚ್ಚಂದ್ರನುತ್ಕೃಷ್ಟ ವಿದ್ವ
ಜ್ಜನಸೂಕ್ತಿ ಬ್ರಾತ ತಾರಾತರಳತರ ಲಸನ್ಮೌಕ್ತಿಕೋದಾರಹಾರಂ
ವಿನುತೋದ್ಯತ್ಕೀರ್ತಿ ಚಂದ್ರಾತಪಧವಳಿತ ದಿಕ್ಪಾಳದಿಗ್ರದ್ಯುಹರ್ಮ್ಯಂ
ಜನತಾನೇತ್ರಾಂಗ ಸಂತರ್ಪಣಕರನೆನಿಪಂ ಶ್ರೀಜಗದ್ದೇವಭೂಪಂ ॥ 246 ॥

ಉ ಮಾ ॥ ಈವ ಗುಣಕ್ಕೆ ತನ್ನ ತೊಡೆಸಕ್ಕಿ ನಿಜಾಶ್ರಿತಪಂಡಿತರ್ಕಳೊಳ್
ತೀವಿದುದಗ್ರಲಕ್ಷ್ಮೀ ನಿಜದೋರ್ಬಲದೇಱ್ಗೆಗೆ ಸಕ್ಕಿ ಶತ್ರುಪೀ
ರಾವನಿಪಾಲಕಾಂತೆಯರ ಕರ್ಣಕರಚ್ಯುತನೂತ್ನರತ್ನಭೂ
ಷಾವಳಿಯೆಂದೊಡಾರ್ ದೊರೆಗೆವಂದಪರೀ ಜಗದೇವಭೂಪನೊಳ್
॥ 247 ॥

ಮ ಸ್ರ ॥ ಕುಸುಮಸ್ರಗ್ಭಾರಶೂನ್ಯೋದ್ಧತಕಚಭರಮುದ್ದಾಮಹೈಮಪ್ರಕಾಂಚೀ
ಪ್ರಸರಾಪೇತಪ್ರಶುಂಭದ್ಘನಜಘನತಟಂ ಮೌಕ್ತಿಕೋದಾರಹಾರಾ
ಲಸರಂಗತ್ತುಂಗಪೀನಸ್ತನಕಲಶಯುಗಂ ಶ್ರೀಜಗದ್ದೇವಭೂಪಾ
ಲಸುಹೃದ್ಭಾವವ್ಯಪೇತಕ್ಷಿತಿಪತಿತತಿಶುದ್ಧಾಂತಕಾಂತಾಕದಂಬಂ ॥ 248 ॥

ಜಯಕೇಶಿ

ಚಂ ಮಾ ॥ ಎರಗದರಾತಿ ಭೂಭುಜರನಾತ್ಮಭುಜಾಬಳದಿಂ ಪದಾಂಬುಜ
ಕ್ಕೆರಗಿಸಿ ಸಪ್ತಕೊಂಕಣ ಸಮುನ್ನತ ಲಕ್ಷ್ಮಿಯನಾಳ್ದು ಮೀಱಿಬಾ
ಳ್ವಱಿಕೆಯ ಬೀರರಿಲ್ಲ ತನಗೆಂಬಿನೆಗಂ ಜಯಕೇಶಿ ಭೂಭುಜಂ
ನೆಱೆದ ನೃಪಾಳನೀತಿ ಗುಣದುನ್ನತಿಯಿಂ ಜಸಮಂ ನಿಮಿರ್ಚಿದಂ ॥ 249 ॥

ಉ ಮಾ ॥ ಚಾಗಮನೀಸಿಕೊಳ್ಳದ ವನೀಪಕರಿಲ್ಲ ವನೀಪಕರ್ ಮದೋ
ದ್ಯೋಗಮನೊಕ್ಕು ಬಾಟಿದವರಿಲ್ಲ ಜಯೋತ್ಸುಕನಾಗಿ ಪೋಗೆ ಕೊ
ಳ್ಪೋಗದ ದೇಶಮಿಲ್ಲೆನಿಸುವಾ ಜಯಕೇಶಿ ನಿಜಾಗ್ರಜಾತನಾ
ಶಾಗಜವರ್ತಿಕೀರ್ತಿಯೆನಲಾರ್ ಜಗದೇವನವೋಲ್ ಯಶಸ್ವಿಗಳ್ ॥ 250 ॥

ಸಿಂಗಿದೇವ

ಚಂ ಮಾ ॥ ಉಗುಳುಗುಳೆಂದು ನಂಜನುಗಳಿಪ್ಪನುದಗ್ರವಿಷಾಹಿಕಣ್ಠಮಂ
ಸುಗುವಿನಮೊತ್ತಿ ಚಕ್ಕನೆ ತದೀಯ ಫಣಾಗಣನೂತ್ನರತ್ನಮಂ
ತೆಗೆದು ನಿಜಾಗ್ರಜಂಗೆಸೆವ ತೋಳ್ವಣೆಯಾಗಿರೆ ಮಾಳ್ಪನೆಂದೊಡಾ
ರ್ಪೊಗಳರೊ ಸಿಂಗಿದೇವನ ಪರಾಕ್ರಮದುನ್ನತಿಯಂ ಧರಾಗ್ರದೊಳ್
॥ 251 ॥

ಕಂ ॥ ಹರಚರಣಕಮಳದಳಷ
ಟ್ಚರಣಂ ಶಿಷ್ಟೇಷ್ಟನಿಕರಭರಣಂ ಯುದ್ಧೋ
ದ್ಧುರಹರಣ ಕರಣ ಪರಿಣತ
ಕರ ಕರಣಂ ಧರ್ಮಶಾಸ್ತ್ರವಿಹಿತಾಚರಣಂ ॥ 252 ॥

ಬಮ್ಮರಸ

ಉ ಮಾ ॥ ಬೇಡಿದವಂಗೆ ಕಲ್ಪಮಹಿಜಂ ಭುಜಗರ್ವದೆ ಬಂದು ಯುದ್ಧಮಂ
ಮಾಡಿದವಂಗೆ ನುಂಗುವ ಜವಂ ಶರಣಾಗತನಪ್ಪವಂಗೆ ಕ
ಯ್ಗೂಡಿದವಜ್ರ ಸನ್ನಿಹನಮೀತನೆದಲ್ ಪೆಱರಾರೆನಿಪ್ಪನಾ
ಡಾಡಿಯರೂಡಿಯಂ ಮಿಗುವರೂಡಿಯ ಬಮ್ಮರಸಂ ಸಮಾಹಿತಂ ॥ 253 ॥

28) ಬಳ್ಳಿಗಾವೆ 220, E.C. XIV (R), ಕ್ರಿಶ. 1155

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ತ್ರೈಳೋಕ್ಯಮಲ್ಲನ (ಮೂರನೆಯ ಸೋಮೇಶ್ವರ) ಆಳಿಕೆಯಲ್ಲಿ, ಮಹಾಮಂಡಳೇಶ್ವರ ಕಲಚುರ್ಯರ ಬಿಜ್ಜಳನ ದಂಡನಾಯಕ ಮಹದೇವ ಎಂಬುವವನು ಕೇದಾರೇಶ್ವರ ದೇವಾಲಯದ ವಾಮಶಕ್ತಿ ದೇವನಿಗೆ ನೀಡಿದ ದತ್ತಿಯನ್ನು ಹೇಳಿದೆ.

ಜಗದೇಕಮಲ್ಲ

ಕಂ ॥ ಅಲ್ಲಿಂ ಬಳಿಕ್ಕೆ ಕೀರ್ತಿಗೆ
ನಲ್ಲಂ ನಿರ್ಮಿತ ಜಟಾಳರಿಪುವನಿತಾಥ
ಮ್ಮಿಲ್ಲಂ ಭೂಪಾಳಕುಳ
ಕ್ಕೆಲ್ಲಂ ಜಗದೇಕಮಲ್ಲನಪ್ರತಿಮಲ್ಲಂ ॥ 254 ॥

ಮ ವಿ ॥ ಅರಿಧಾತ್ರೀಪತಿ ಚೋಳಗೂರ್ಜರ ಚಮೂವಾರಾಶಿಯೊಳ್ ಬಾಗು ಮ
ನ್ದರಮನ್ಥ ಕ್ರಿಯೆಯಿನ್ದ ಪುಟ್ಟಿದ ಕರೀಂದ್ರ ಶ್ರೇಣಿಯಂ ಲಕ್ಷ್ಮಿಯಂ
ತುರಗಾನೀಕಮೆನೆಯ್ದೆ ಕೊಂಡು ಜಗದೊಳ್ವಿಖ್ಯಾತಿಯಂ ತಾಳ್ದಿದಂ
ಸ್ಥಿರತೇಜಂ ಜಗದೇಕಮಲ್ಲವೆಸರಿಂ ಚಾಲುಕ್ಯ ಚಕ್ರೇಶ್ವರಂ ॥ 255 ॥

ನೂರ್ಮಡಿ ತೈಲಪ

ಕಂ ॥ ಇರ್ಮಡಿ ದಶಕಣ್ಠಂಗೆ ಪ
ದಿರ್ಮಡಿ ದಶಶತಭುಜಂಗೆ ರಾಮಂಗಂತಾ
ನೂರ್ಮಡಿಯೆನಿಸೆ ಮಹೇಶಗೆ
ನೂರ್ಮಡಿ ತೈಲಪಮಹೀಪನೂರ್ಜಿತನಾದಂ ॥ 256 ॥

ಮ ವಿ ॥ ಭಸಿತೋದ್ಧೂಳಿತ ನಿರ್ಮಳಾಂಗ ರುಚಿಯಿಂ ತಾರಾದ್ರಿಯೆಂತಂತೆ ಕ
ಣ್ಗೆಸೆದತ್ಯುಜ್ವಳ ಜೀ x ದಂತ ರುಚಿಯಿಂದಾಸ್ಥಾನದೊಳ್ಚಂದ್ರಿಕಾ
ಪ್ರಸರಂ ಪರ್ವಿದುದೆಂಬಿನಂ ಮುನಿನುತಂ ಧರ್ಮಪ್ರಸಂಗ ಕ್ರಿಯಾ
ವ್ಯಸನಂತದ್ಗುರುತರ್ಪಿತೋದ್ಯನುಳಿದಂ ಕೇದಾರಶಕ್ತೀಶ್ವರಂ ॥ 257 ॥

29) ಬಳ್ಳಿಗಾವೆ 216, E.C. XIV (R), ಕ್ರಿಶ. 1156

ಇದರಲ್ಲಿ ಕಳಚುರ್ಯ ದೊರೆಯಾದ ಬಿಜ್ಜಳನ ಮಹಾಪ್ರಧಾನಿ ಮಾಯಿದೇವನು ಬಳ್ಳಿಗಾವೆಯ ಕೇದಾರೇಶ್ವರದೇವರಿಗೆ ಕೆಲವು ಸುಂಕಗಳನ್ನು ಬಿಟ್ಟುಕೊಟ್ಟನೆಂದು ಹೇಳಿದೆ.

ಮಾಯಿದೇವ

ಮ ವಿ ॥ ಕುದಿದೆಲ್ಲಂದದಿನಂದು ನಂದಕುಲಮಂ ಗೆಲ್ದಾತ್ಮಮಂತ್ರಕ್ಕೆ ನಾ
ಣ್ಚದೆ ಚಾಣಕ್ಯನದೇಕೆ ಮಂತ್ರಿಯೆನಿಪಂ ಪೇಟೆಂದನಾಯಾಸದಿಂ
ದೆ ದೃಢಾರಾತಿಕುಲಂಗಳಂ ತವಿಸಿ ತನ್ನ ಸ್ವಾಮಿಗತ್ಯುನ್ನತಾ
ಭ್ಯುದಯಶ್ರೀಯನೊಡರ್ಚುತಿರ್ಪನೊಲವಿಂ ಶ್ರೀಮಾಯಿದಂಡಾಧಿಪಂ
॥ 258 ॥

ಮ ಸ್ರ ॥
ವಿದಿತಂ ಕಯ್ಯಾಂತು ತನ್ನಂ ಪದೆದೆರೆದ ಬುಧಂ ಪೋಗಿ ಮತ್ತೋರ್ವನಂ ಬೇ
ಡಿದೊಡಂ ಸಂಗ್ರಾಮದೊಳ್ ನಿರ್ಜಿತಮದನೆನಿಪಂ ಪೋಗಿ ಮತ್ತೊರ್ಮ್ಮೆ ಬಿಲ್ವೊ
ಯ್ದಿದಿರೊಳ್ ಬಂದಾಂತೊಡಂ ದಾನದ ಭುಜಬಲದುರ್ವಲ್ತದೆಂದೆಂದು ನಿಚ್ಚಂ
ಮುದದಿಂ ವ x ಲ್ವನೆಂದಂದಿತರಜನಸಮಸ್ಕಂಧನೇ ಮಾಯಿದೇವಂ ॥ 259 ॥

ಗೌತಮ ಮುನಿ

ಕಂ ॥ ಮೂವರಕೋಣೆಯ ಸನ್ತತಿ
ದೇವವ್ರತನೆಸೆವ ಪರ್ವತಾವಳಿಯೊಳ್ ತಾ
ನಾವಿರ್ಭವಿಸಿದನಮಳಯ
ಶೋವಿಭವ ವಿನೂತನೆನಿಪ ಗೌತಮ ಮುನಿಪಂ ॥ 260 ॥

ವಾಮಶಕ್ತಿಪಂಡಿತ

ಕಂ ॥ ಆ ಗೌತಮನ ತನೂಜಂ
ಶ್ರೀಗಿರಿಜಾಪತಿ ಪದಾಂಬುಜೋನ್ಮದ ಭೃಂಗಂ
ರಾಗಪರಾಙ್ಮುಖನುಚಿತೋ
ದ್ಯೋಗಂ ಶ್ರೀವಾಮಶಕ್ತಿಪಂಡಿತದೇವಂ ॥ 261 ॥

30) ತಾಳಗುಂದ 110, E.C. XIV (R), ಕ್ರಿಶ. 1157

ಇದರಲ್ಲಿ ಕಳಚುರ್ಯ ದೊರೆಯಾದ ಬಿಜ್ಜಳನ ದಂಡನಾಯಕ ಕೇಶಿಮಯ್ಯನು ತಾಣಗುಂದೂರ ದೇವರಿಗೂ ಕನ್ನಡ ಅಕ್ಷರ ಕಲಿಸುವ ಉಪಾಧ್ಯಾಯರ ಮತ್ತು ಶಿಷ್ಯರ ಆಹಾರ ವಸ್ತ್ರಗಳಿಗೂ ತಗುಳದ್ದಿ ಗ್ರಾಮವನ್ನು ದತ್ತಿ ಬಿಟ್ಟಂತೆ ಹೇಳಿದೆ.

ದೇವತಾ ಸ್ತುತಿ

ಸ್ರಗ್ಧರೆ ॥ ಶ್ರೀಮದ್ದೇವಾಧಿದೇವಂ ಪ್ರಣವಪತಿ ಮಹೀಸೋಮಸೂರ್ಯಾತ್ಮ ವಾಯು
ವ್ಯೋಮಾಗ್ನ್ಯಂಬು ಪ್ರಜಾತ ಪ್ರಯುತತನುಭವಾನೀ x x x ಷ್ಣು ವೇದ
ಶ್ರೀ ಮಂಪ್ರವ್ಯಂಜಕ ಪ್ರಸ್ಫುರದತುಳ ದಯಾಳೋಕನಂದ ದಣ್ಣನಾಥೋ
ದ್ದಾಮಂ ಶ್ರೀಕೇಶಿರಾಜಪ್ರಮುಖನಿಖಿಳ ಭಕ್ತರ್ಗೆ ಮಾರ್ಕೊಳ್ವ x x ॥ 262 ॥

ಬ್ರಹ್ಮ

ಕಂ ॥ ಆ ಪದ್ಮಾಕ್ಷನವರನಾ
ಭೀ ಪದ್ಮದಿನೊಗೆದನುದಿತ ವೇದಮುಖಂ ವಾ
ಣೀಪತಿ ವಿಶ್ವೋತ್ಪತ್ತಿ
ವ್ಯಾಪಾರಪರಂ ಹಿರಣ್ಯ ಗರ್ಭಂ ಬ್ರಹ್ಮಂ ॥ 263 ॥

ಅಪ್ರಮೇಯ

ಕಂ ॥ ತ್ರಿಜಗದ್ವಂದ್ಯನ ಮತದಿಂ
ತ್ರಿಜಗಮನಂತಲ್ಲಿ ದೇವತಿರ್ಯಗ್ಮನುಜ
ಬ್ರಜಮಂ ಕರ್ಮಾಕರ್ಮಮ
ನಜೇಯಮತಿಪಡೆದನಪ್ರಮೇಯಹನೀತನ್ ॥ 264 ॥

ಕುಂತಳ ದೇಶ

ಮ ವಿ ॥ ವಿತತಾನೇಕ ಸರಿತ್ಪತಿಪ್ರವೃತ ಜಂಬೂದ್ವೀಪ ಪೀಠಪ್ರತಿ
ಷ್ಠಿತಲಿಂಗಾಕೃತಿಯಾಗೆ ಕಣ್ಗೆಸೆದು ತೋರ್ಕುಂ ಮೇರು ತನ್ಮೇರು ಪ
ರ್ವತದಿಂ ತೆಂಕಣಭಾಗದೊಳ್ಭರತ ಭೂಚಕ್ರಂ ಕರಂ ರಯ್ಯವಾ
ಕ್ಷಿತಿಯೊಳ್ನಡೆ ವಿರಾಜಿಕುಂ ವಸುಮತೀ ಶ್ರೀಕುಂತಳಂ ಕುಂತಳಂ ॥ 265 ॥

ಬಿಜ್ಜಳ

ಮ ಸ್ರ ॥ ಜಗಮಂ ಕೆಯ್ಯಾನಿಸಿತ್ತಾರ್ಪಹಿಮಕರಸಮಸ್ಪರ್ಧಿಯಾದತ್ತು ತೇಜಂ
ಮಿಗೆವಂದತ್ತಬ್ಧಿಯಂ ಗುಣ್ಪಲೆದುದು ಕಲಿಯಂ ಚಾರುಚಾರಿತ್ರಮುಗ್ರಾ
ರಿಗಣಪ್ರಾಣಾಂಬುವಿಂದಂ ತಣಿದುದಸಿಲತಾಯಷ್ಟಿ ದಿಗ್ದಂತಿದಂತಾ
ನುಗಮಾದತ್ತುದ್ಧಕೀರ್ತಿಪ್ರಸರಮೆನಿಸಿದಂ ಬಿಜ್ಜಳಕ್ಷೋಣಿಪಾಳಂ ॥ 266 ॥

ಕೇಶಿಮಯ್ಯ

ಮ ವಿ ॥ ತನುಸೌಂದರ್ಯದೊಳಿಂದ್ರಜಂ ಸೊಬಗಿನೊಳ್ ಪುಷ್ಪಾಯುಧಂ ನೀತಿಯೊಳ್
ಮನು ಚಾತುರ್ಯದೊಳಬ್ಜಜಂ ಪರಹಿತ ವ್ಯಾಪಾರದೊಳ್ ಖೇಚರಂ

ಘನಶೌರ್ಯೋನ್ನತಿಯೊಳ್ ನೆಗಟ್ದಿ ರಘುರಾಮಮಂ ತಾನೆನುತ್ತುಂ ಜಗ
ಜ್ಜನಮೀ ಕೇಶವದಂಡನಾಥನನನೂನಪ್ರೀತಿಯಿಂ ಬಣ್ಣಿಕುಂ ॥ 267 ॥

ಚಟ್ಟಿರಾಜ, ಮೈಳಾರ, ಪೋತರಸ ಮತ್ತು ಸೋಮ

ಮ ವಿ ॥ ಜಗಮೆಲ್ಲಂ ಪೊಗಟ್ಟುಂ ವಿವೇಕನಿಧಿಯಂ ಕಯ್ವಾರದಿಂ ಚಟ್ಟಿ ರಾ
ಜನನಾ ದಿಗ್ನಿವಹ ಪ್ರವರ್ತಿತಯಶಂ ಮೈಳಾರ ದಂಡಾಧಿನಾ
ಥನನೌದಾರ್ಯಗುಣಾಬ್ಧಿ ಪೋತರಸನಂ ನಾನಾ ನಯೋಪಾಯಚ
ರ್ಚನ ಚಾಣಿಕ್ಯನಂನಕ್ಕಜಿಂ ಸಕಳಲಕ್ಷ್ಮೀ ಧಾಮನಂ ಸೋಮನಂ ॥ 268 ॥

ರೇಚರಸ

ಕಂ ॥ ಸರಸೀರುಹತತಿ ದಿನಕರ
ಕರದಿಂದಲರ್ವಂತೆ ಜನದ ಮನಮಲರ್ವಿನೆಗಂ
ಸರಸೋಕ್ತಿಯುಕ್ತಿಯಿಂ ರೇ
ಚರಸಂ ಧರ್ಮಪ್ರಸಂಗಮಂ ಪುಟ್ಟಿಸಿದಂ ॥ 269 ॥

31) ಬೇಗೂರು ಅಗ್ರಹಾರ 333, E.C. XIV (R), ಕ್ರಿಶ. 1158

ಇದರಲ್ಲಿ ಕಳಚುರ್ಯ ದೊರೆಯಾದ ಬಿಜ್ಜಣದೇವನ ಸಾಮಂತ ನನ್ನಿಯ ಗಂಗನ ಆಳಿಕೆಯಲ್ಲಿ ಸೇನಬೋವ ಸೋಮನು ಬೇಗೂರ ಮಲ್ಲಿಕಾರ್ಜುನ ದೇವರಿಗೆ ಭೂಮಿಯನ್ನು ದತ್ತಿ ನೀಡಿದಂತೆ ಹೇಳಿದೆ.

ನನ್ನಿಯ ಗಂಗ

ಉ ಮಾ ॥ ಬೇಡಿದೊಡಲ್ಲದೀಯದು ನಿಳಿಂಪಕುಜಂ ಕರೆದೀವ ದಾನದಿಂ
ನೋಡೆ ಸುರಾವನೀಜಮದು ಪೇಟ್ ದೊರೆಯೇ ಮಣಿ ಚಿಂತಿಸಲ್ಕೆ ಕೆ
ಯ್ಗೂಡುವುದಲ್ಲದಿರ್ದೊಡದು ತಾಂ ಕುಡದರ್ಥಿಜನಕ್ಕೆ ರಾಗದಿಂ
ನೀಡಿರದೀವನೀ ವಸುಧೆಯೊಳ್ ಸಲೆ ನನ್ನಿಯ ಗಂಗಭೂಭುಜಂ
॥ 270 ॥

ಮ ವಿ ॥

ಶರಣಾಯಾತ ರಿಪುಬ್ರಜಾಕುಳಕುಭೃತ್ ಗಂಭೀರನೀರಾಕರ
ದುರಿತ ದ್ರೋಹ ವಿರೋಧಿ ವಾರಣ ಘಟಾವ್ಯೂಹಕ್ಕೆ ಪಂಚಾನನ
ರ್ಧರೆಯೊಳ್ ಮಾರ್ಕೊಳುಮಗ್ರವೈರಿ ರಜನೀ ಸಂಘಾತಮಂ ತೂಳ್ವ ಭಾ
ಸುರ ಸೂರ್ಯಾಂಶುವೆನಲ್ಕೆ ಸಾಸಿರದ ಮೂನೂರ್ವರ್ಯಶೋಮೂರ್ತಿಗಳ್
॥ 271 ॥

ಬೇಗೂರ ಮಹಾಜನಗಳು

ಕಂ ॥ ಪ್ರತ್ಯೇಕಮಾ ಧರಾಮರ
ಸತ್ಯದ ಶೌಚದ ಕುಲಾಭಿಮಾನದ ಜಸದೊಂ
ದತ್ಯುನ್ನತಿಕೆಯನಜನುಂ
ನಿತ್ಯಸ್ಥಿತನೆಯ್ದೆ ಪೊಗಟಲೇಂ ನೆಱೆದಪನೇ ॥ 272 ॥

ಮಾದಿಯಣ

ಚಂ ಮಾ ॥ ಸಕಳಕಳಾ ಕಳಾಪ ಬಹುವಿದ್ಯೆ ವಿಚಾರದೊಳಿಂದ್ರ ಮಂತ್ರಿಯಂ
ಪ್ರಕಟಿತಕೀರ್ತಿತತ್ವನಯ ಕೋವಿದ ಕಾಬ್ಯ ಪುರಾಣ ನಾಟಕ
ಪ್ರಕರ ಮಹತ್ವದೊಳ್ ಮನುವನೇಳಿಸುವಂ ಚತುರಾಸ್ಯ ವಂಶವ
ರ್ಧಕನಿವನೆಂದು ಮಾದಿಯಣನಂ ಪೊಗಳ್ಗುಂ ಧರೆಯೊಳ್ ಜಗಜ್ಜನಂ ॥ 273 ॥

ಭಾಸ್ಕರ ದೇವ

ಮ ವಿ ॥ ಮುನಿಸಿಂದಂ ಕಡಲಂ ಕಡಂಗಿ ಕುಡಿದಂತಾತಾಪಿ ವಾತಾಪಿಯಂ
ಘನಮಪ್ಪೊಂದುದರಾಗ್ನಿಯಿಂ ಕಿಡಿಸಿ ವಿಂಧ್ಯಾದ್ರೀಂದ್ರಮಂ ತದ್ವಿಲೋ
ಚನದಿಂ ನೋಡಿ ನಿಜಾಜ್ಞೆಯಿಂ ನಿಲಿಸಿದಾ ಕುಂಭೋದ್ಭವಂ ಕೋಪಸಂ
ಜನಿತಂ ಭಾಸ್ಕರದೇವನೊಳ್ ಸಮನೆ ಶೌಚಾಚಾರನಿಷ್ಕೋಪಿಯೊಳ್ ॥ 274 ॥

32) ಬಳ್ಳಿಗಾವೆ 214, E.C. XIV (R), ಕ್ರಿಶ. 1162

ಇದರಲ್ಲಿ ಕಳಚೂರ್ಯರ ದೊರೆಯಾದ ಬಿಜ್ಜಳನು ಬಳ್ಳಿಗಾವೆಯ ಕೇದಾರೇಶ್ವರ ದೇವರಿಗೆ ನೀಡಿದ ಗ್ರಾಮ ದತ್ತಿಯನ್ನು ಹೇಳಿದೆ. ಆ ದೇವಾಲಯದಲ್ಲಿದ್ದ ಕೋಡೀಮಠದ ವಿದ್ಯಾಕೇಂದ್ರವನ್ನೂ, ಅಲ್ಲಿನ ಕಾಳಾಮುಖ ಮುನಿಪರಂಪರೆಯನ್ನೂ ವರ್ಣಿಸಿದೆ.

ಬಿಜ್ಜಳ

ಚಂ ಮಾ ॥ ಅಸುಹೃದುದಗ್ರಭೂಭುಜರ ತೇಜದ ದಳ್ಳುರಿಯಂ ಸಮಂತು ಮ
ಟ್ಟಿಸೆ ನಿಜ ದೋರ್ವ್ವಳ ಪ್ರಥಿತ ಖಡ್ಗ ಸಮುಚ್ಚಳದುಚ್ಚವಾರಿ ಸಂ
ಪ್ರಸರವಶೇಷ ಭೂತಳಮನಿಲ್ಲ ಮಹೀಭುಜರನ್ಯರೆಂಬಿನಂ
ಪೆಸರ್ವ್ವಡೆದೀಗ ಬಿಜ್ಜಲ ಮಹೀಭುಜನೋರ್ವ್ವನೆ ತಾನೆ ತಾಳ್ದಿದಂ ॥ 275 ॥

ಶಾ ವಿ ॥ ವೀರಾರಾತಿ ನೃಪೋತ್ತಮನಾನನಲಸದ್ವಲ್ಮೀಕ ಸಂಚಾರಿ ದು
ರ್ವ್ವಾರೋದಗ್ರ ತದೀಯ ರಕ್ತ ಜಳಧಾರಾಕ್ಷೀರ ಸಂಸೇವಿತ
ಚ್ಚಾರಿ ಪ್ರಾಣ ಸಮೀರ ಪಾಯಿ ಪಿರಿದುಂ ಮತ್ತಂ ಕ್ಷುಧೋಗ್ರಾನಳಾ
ಧಾರಂ ಭೀಕರ ಖಡ್ಗ ಕಾಳಭುಜಗಂ ಶ್ರೀ ಬಿಜ್ಜಲಕ್ಷ್ಮಾಪನಾ ॥ 276 ॥

ಚಂ ಮಾ ॥ ಕೆದಱಿದರಾತಿ ಭೂಪರ ಶಿರೋಮಣಿಗಳ್ ನೆಗೞ್ದಾಲಿ ಕಲ್ಗಳು
ರ್ವ್ವಿದ ಭಟ ಶಸ್ತ್ರ ಸಂಚಯದ ಮಿಂಚುಗಳೊಪ್ಪುವ ಮಿಂಚುಗಳ್‌ಸಮಂ
ತೊದವಿದ ರಕ್ತಜಾಳ ಜಳಧಾರೆಗಳಾಗಿರೆ ವರ್ಷಮಿಂತು ಪೋ
ಲ್ತುದು ಮಱೆಗಾಲಮಂ ನೆಗೞ್ದ ಬಿಜ್ಜಲದೇವನ ಸಂಗರಾಂಗಣಂ ॥ 277 ॥

ಚಂ ಮಾ ॥ ಸುರಿದ ಕರುಳ್ ಕರುಳ್ ತೊಡರೆ ಬಿೞ್ದ ಭಟರ್ಬ್ಬಟಶಸ್ತ್ರ ಘಾತದಿಂ
ದುರುಳ್ದ ಹಯಂ ಹಯಂಗಳೆಡೆಯೊಳ್ ಕುಣಿವಟ್ಟೆಗಳಟ್ಟೆಯಂ ಭಯಂ
ಕರತರಮಾಗೆ ನೋೞ್ಪ ಮರುಳಾ ಮರುಳಂ ಗೆಲೆ ಸೋವತಂ ನಿಶಾ
ಚರಿಯರೆನಲ್ಕೆ ನೋಡಲರಿದಾಯ್ತು ರಣಂ ಗಿರಿದುರ್ಗ್ಗಮಲ್ಲನಾ ॥ 278 ॥

ಚಂ ಮಾ ॥ ನುಡಿದನೆ ಮೇರು ಮಂದರ ಶಿಳಾಕ್ಷರಮಿತ್ತನೆ ಬೇಡಿ ಬಂದವಂ
ಗೆಡಱಿನ ಕೇಡುಕಾದನೆ ಸರಣ್ಬುಗು ತಂದ ನೃಪಾನ್ವಯಕ್ಕೆ ಬೆಂ
ಬಿಡದ ಜರಾಮರತ್ವವೆನಲಿಂನನಂನ್ಯ ನರೇಂದ್ರರೊಳ್ ಸಮಂ
ನುಡಿಯದಿರಣ್ಣ ಬಿಜ್ಜಲಮಹೀಪನನಾಹವರೌದ್ರರೂಪನಂ ॥ 279 ॥

ಕಸಪಯನಾಯಕ

ಚಂ ಮಾ ॥ ಕಸಮೆನಿತಿರ್ದ್ದೊಡಂ ನಿಜ ನಿರೀಕ್ಷಣ ಮಾತ್ರದೆ ತತ್ ಕ್ಷಣಂ ಕರಂ
ಕಸವರಮಾಗಿ ತೋರ್ಪ್ಪುದು ನಿಜೇಷ್ಟ ವಿಶಿಷ್ಟಜನಕ್ಕೆ ಸತ್ಕುಲ
ಪ್ರಸವ ಜನಕ್ಕೆ ತದ್ಗೃಹ ಗೃಹಂಗಳೊಳಂತದಱಿಂದಮೆಲ್ಲಿಯುಂ
ಕಸಪಯ ನಾಯಕಾಖ್ಯೆ ಪೆಸರ್ವ್ವೆತ್ತುದು ವಾರ್ಧಿಪರೀತ ಧಾತ್ರಿಯೊಳ್
॥ 280 ॥

ಮ ವಿ ॥ ಮನಮಂ ಶಂಕರಪಾದಪಂಕರುಹದೊಳ್ ಧರ್ಮ್ಮಾರ್ಜ್ಜಿತಾತ್ಮೀಯ ಕಾಂ
ಚನಮಂ ಶಿಷ್ಟ ಜನಂಗಳೊಳ್ ನಿಜಭುಜಕ್ರೂರತ್ವಮಂ ಸ್ವಾಮಿವೈ
ರಿನರಾಧೀಶ್ವರ ಯುದ್ಧದೊಳ್ ತಳೆದನೆಂದಂದನ್ಯ ಸಾಮಾನ್ಯನೇ
ಜನತಾಮಸ್ತಕಮಂಡನಂ ಕಸಪಯಂ ವಿಶ್ವಂಭರಾಚಕ್ರದೊಳ್ ॥ 281 ॥

ಕಂ ॥ ಹರಚರಣ ಕಮಳಯುಗ ಷ
ಟ್ಚರಣಂ ನುತ ವಿವಿಧ ವಿಬುಧ ವಿನುತ ಸಮಗ್ರಾ
ಭರಣಂ ಸುಭಟ ಜನೈಕಾ
ಭರಣಂ ಕೇವಳಮೆ ಕಸಪಯಂ ವಸ್ಮತಿಯೊಳ್ ॥ 282 ॥

ಕಂ ॥ ಇತರರಧಿಕಾರದಿಂ ನಾ
ಶಿತದೇಶಮನಕ್ಕಟಿಕ್ಕೆಯಿಂ ಕೈಕೊಂಡೂ

ರ್ಜ್ಜಿತಮಾಗಿ ಮಾಳ್ಪನೆನೆ ಪರ
ಹಿತಕಾರ್ಯ್ಯದೊಳಾರೊ ಕಸಪಯಂಗೆಣೆವಪ್ಪರ್ ॥ 283 ॥

ಬಮ್ಮರಸ

ಉ ಮಾ ॥ ತನ್ನಧಿಕಾರಮೆಂಬಮೃತವೃಷ್ಟಿಗಳಿಂ ಬಳೆಯಿಪ್ಪನೆಯ್ದೆ ವಿ
ದ್ಯೋನ್ನತ ವಿಪ್ರಶಿಷ್ಟ ಜನ ಸಸ್ಯಚಯಂಗಳನೆಂದು ಸಂತತಂ
ಸನ್ನುತಿಗೆಯ್ಯುತಿರ್ಪ್ಪುದವನೀತಳಮುದ್ಧಕಳಾ ವಿಶೇಷ ಸಂ
ಪನ್ನನನೊಲ್ದು ಕೆಯ್ಮುಗಿದು ಬಂಮ್ಮರ್ನನಾಶ್ರಿತ ಶರ್ಮ್ಮಕರ್ಮ್ಮನಂ ॥ 284 ॥

ಕಂ ॥ ಅಧಿಕಾರಿಗಳರೆಬಬ್ಬುಧ
ರ್ಗಧಿಕಾರಿಗಳೆನಿಪರಲ್ಲದಿಂತೀತನವೋ
ಲಧಿಕಾರಿಗಳೆನಿಪವರಾ
ಬ್ಬುಧರ್ಗೆನಿಪಂ ಬರ್ಮ್ಮನಖಿಳ ಬುಧಜನಶರ್ಮ್ಮಂ ॥ 285 ॥

ಕರಣಗಳು

ಚಂ ಮಾ ॥ ಪರಹಿತ ಕಾರ್ಯ್ಯರಬ್ಧಿಸಮಧೈರ್ಯ್ಯರಬಾಧಿತ ಮಂತ್ರವೀರ್ಯರು
ದ್ಧರತರ ಸಿಂಹ ಶೌರ್ಯ್ಯರುಪಧಾ ಚತುರಾರ್ಯ್ಯರವಾರ್ಯ್ಯಕಾರ್ಯ್ಯರು
ತ್ಸ್ಫುರಿತಯಶೋನದತ್ಪ್ರಬಳ ತೂರ್ಯ್ಯರುಪಾರ್ಜ್ಜಿತ ಪುಣ್ಯವರ್ಯರೀ
ಶ್ವರಪದ ಭಕ್ತಿಧುರ್ಯ್ಯರೆನಿಪರ್ಕ್ಕರಣಂಗಳಿದೇಂ ಮಹಾತ್ಮರೋ ॥ 286 ॥

ರವಿದೇವ

ಚಂ ಮಾ ॥ ಅಲರ್ಗೆಮ ಮಂತ್ರಿಮುಖ್ಯರ ಮುಖಾಂಬುರುಹಂ ರವಿದೇವ ಮಂತ್ರ ನಿ
ರ್ಮ್ಮಲ ಕಿರಣಂಗಳಿಂ ಮುಗಿವುವೇಕೆಯೊ ಹಸ್ತ ಸರೋರುಹಂಗಳು
ಳ್ಳಲರ್ದಪುದೇಕೆ ಬಂಮ್ಮರಸನುದ್ಧತ ರಾಜ್ಯ ಸಮಗ್ರ ದೇವತಾ
ಲಲಿತ ವಿಲೋಚನೋತ್ಪಳ ವಿದಚ್ಚರಿನೋಜ್ಪೊಡಶೇಷ ಧಾತ್ರಿಯೊಳ್ ॥ 287 ॥

ವಚನ ॥
ದಕ್ಷಿಣ ಕೇದಾರಸ್ಥಾನಮುಂ
ಶಿವಲಿಂಗಪೂಜಾ ಪುಳಕ ಸಸ್ಯ ಸರಸ ಕೇದಾರಸ್ಥಾನಮುಂ
ನೈಷ್ಠಿಕ ಬ್ರಹ್ಮಚರ್ಯ್ಯ ಶಿವ ಮುನಿಜನಾನುಷ್ಠಾನ ನಿಷ್ಠಿತಸ್ಥಾನಮುಂ
ಸಾಂಗ ಋಗ್ಯಜುಸ್ಸಾಮಾಥರ್ವ್ವ ಚತುರ್ವ್ವೇದ ಸ್ವಾಧ್ಯಾಯಸ್ಥಾನಮುಂ
ಕೌಮಾರ ಪಾಣಿನೀಯ ಶಾಕಟಾಯನ ಶಬ್ದಾನುಶಾಸನಾದಿಬ್ಯಾಕರಣ
ಬ್ಯಾಖ್ಯಾನಸ್ಥಾನಮುಂ

ನ್ಯಾಯ ವೈಶೇಷಿಕ ಮೀಮಾಂಸಾ ಸಾಂಖ್ಯ ಬೌದ್ಧಾದಿ ಷಡುದರ್ಶನ ಬ್ಯಾಖ್ಯಾನಸ್ಥಾನಮುಂ
ಲಾಕುಳ ಸಿದ್ಧಾನ್ತ ಪಾತಂಜಳಾದಿ ಯೋಗಶಾಸ್ತ್ರಬ್ಯಾಖ್ಯಾನ ಸ್ಥಾನಮುಂ
ಅಷ್ಟಾದಶಪುರಾಣ ಧರ್ಮ್ಮಶಾಸ್ತ್ರ ಸಕಳ ಕಾಬ್ಯ ನಾಟಕ ನಾಟಕಾದಿ ವಿವಿಧ ವಿದ್ಯಾಸ್ಥಾನಮುಂ
ದೀನಾನಾಥ ಪಂಗ್ವಂಧ ಬಧಿರ ಕಥಕ ಗಾಯಕ ವಾದಕ ವಾಂಶಿಕ ನರ್ತ್ತಕ ವೈತಾಳಿಕ
ನಗ್ನಭಗ್ನ ಕ್ಷಪಣಕೈಕದಂಡಿ ತ್ರಿದಂಡಿ ಹಂಸ ಪರಮಹಂಸಾದಿ ನಾನಾ ದೇಶ ಭಿಕ್ಷುಕ
ಜನಾನಿವಾರ್ಯ್ಯಾಂನದಾನಸ್ಥಾನಮುಂ
ನಾನಾನಾಥ ರೋಗಿ ಜನ ರೋಗ ಭೈಷಜ್ಯಸ್ಥಾನಮುಂ
ಸಕಲ ಭೂತಾಭಯಪ್ರದಾನಸ್ಥಾನಮುಂ ಆಗಿ ಕೋಡಿಯಮಠವಿರ್ಪ್ಪುದು

ವಾಮಶಕ್ತಿಮುನಿ

ಚಂ ಮಾ ॥ ಗುರುಕುಲ ದೀಪರೆಂಬಿನೆಗಮಾ ಮಠಮಂ ಪಲರುಂ ಮುನೀಶ್ವರ
ರ್ವ್ವರ ಗುಣಮಣ್ಣನರ್ವ್ವೆಳಗಿದರ್ವ್ವಿಳೆಯಂ ಮುನಿ ವಾಮಶಕ್ತಿ ಭಾ
ಸುರತರ ರತ್ನ ದೀಪ ಕಳಿಕಾಂಕುರದನ್ತೆಮ ಚಂದ್ರನನ್ತೆ ಭಾ
ಸ್ಕರ ಕಿರಣಂಗಳನ್ತೆ ಬೆಳಪಂ ಧರೆ ಕೆಯ್ ಮುಗಿದೊಲ್ದು ಜೀಯೆನಲ್ ॥ 288 ॥

33) ಬಂದಳಿಕೆ 173, E.C. XIV (R), ಕ್ರಿಶ. 1162

ಇದರಲ್ಲಿ ಕಳಚುರ್ಯ ದೊರೆಯಾದ ಬಿಜ್ಜಳನ ಆಳಿಕೆಯಲ್ಲಿ ಕಾದಂಬ ಸೋಮದೇವನ ಸಾಮಂತ ಮಾಚೆಯನಾಯಕನು ಬಂದಣಿಕೆಯಲ್ಲಿ ಸೋಮೇಶ್ವರ ದೇವಸ್ಥಾನವನ್ನು ಮಾಡಿಸಿ ಭೂಮಿಯನು ದತ್ತಿ ಬಿಟ್ಟಂತೆ ಹೇಳಿದೆ.

ಬಿಜ್ಜಳ

ಚಂ ಮಾ ॥ ಭುಜಬಳ ಚಕ್ರವರ್ತಿ ಕಳಚುರ್ಯಕುಳಾಂಬರಭಾನು ವೈರಿಭೂ
ಭುಜರನತಿ ಪ್ರತಾಪದಿನಡಂಗಿಸಿ ಪಿಂಗಿಸಿ ಧಾರಿಣೀ ಜನ
ಬ್ರಜದ ದರಿದ್ರತಾಗುಣಮನಂಬುಧಿಸೀಮೆವರಂ ನಿಮಿರ್ಚಿದಂ
ವಿಜಯವಿನೋದಿ ಬಿಜ್ಜಲ ಮಹೀಪತಿ ಭೂತಳಮಂ ನಿರಂತರಂ ॥ 289 ॥

ಬರ್ಮರಸ

ಕಂ ॥ ಧರ್ಮಾಂಭೋನಿಧಿ ಮೀಱುವ
ದುರ್ಮದ ವೀರಾರಿದರ್ಪದಳನಂ ಜನತಾ
ಶರ್ಮಗುಣಂ ಬಂದಣಿಕೆಯ
ಬರ್ಮರಸಂ ಪೆಂಪುವೆತ್ತನವನೀತಳದೊಳ್ ॥ 290 ॥

ಬೊಪ್ಪರಸ

ಮ ವಿ ॥ ವಿನಯಾಂಭೋನಿಧಿ ವಿಕ್ರಮಯ್ಕರಸಿಕಂ ಶಿಷ್ಟೋಷ್ಟ ಪಂಕೇಜನೀ
ದಿನನಾಥಂ ಪ್ರಭುಮಂತ್ರಶಕ್ತಿನಿರತಂ ದರ್ಪಿಷ್ಟ ವಿದ್ವಿಷ್ಟ ಕಾ
ನನ ದಾವಾನಳನೆಂದು ಬಣ್ಣಿಸೆ ಜನಂ ತಂನಂದನಂ ತ್ಯಾಗ ಭೋ
ಗನುತಂ ಬೊಪ್ಪರಸಂ ನೆಗಳ್ತೆವಡೆದಂ ವಿಶ್ವಂಭರಾಭಾಗದೊಳ್ ॥ 291 ॥

ಉ ಮಾ ॥ ಆದಿವರಾಹನಾಗಿ ಧರೆಯಂ ಪ್ರತಿಪಾಳಿಸಿ ಪೆಂಪುವೆತ್ತ ದಾ
ಮೋದರನೆಂಬುದೀ ಜಗದ ದುಸ್ಥಿತಿಯಂ ಕಿಡಿಸಲ್ಕೆ ಭೂಪರೂ
ಪಾದ ವಿಶಿಷ್ಟ ಕಲ್ಪಕುಜಮೆಂಬುದು ವೈರಿಜನಕ್ಕೆ ಸಿಂಹರೂ
ಪಾದ ನೃಸಿಂಹನೆಂಬುದು ಧರಿತ್ರಿ ನೆಗಳ್ತೆಯ ಸೋಯಿದೇವನಂ ॥ 292 ॥

ಕಾದಂಬ ಸೋಮದೇವ

ಮ ಸ್ರ ॥ ಶರಣಾರ್ಥೀವ್ರಾತರಕ್ಷಾಕರಣಪರಿಣತಂ ತನ್ನ ತೀವ್ರಾಸಿ ವಿದ್ವಿ
ಟ್ತರುಣೀವೈಧವ್ಯದೀಕ್ಷಾಕರಣಪರಿಣತಂ ತನ್ನ ದೋರ್ಮಂಡಳಂ ಬಂ
ದೆರೆದಂಗಿಷ್ಟಾರ್ಥತುಷ್ಟೀಕರಣಪರಿಣತಂ ತನ್ನುದಾರತ್ವಮಾಯ್ತೆಂ
ಬರ ಮಾತಂ ನನ್ನಿಮಾಳ್ಪಂ ನಿರುಪಮಮಹಿಮಂ ಸೋಯಿದೇವಕ್ಷಿತೀಶಂ
॥ 293 ॥

ಚಂ ಮಾ ॥ ದೆಸೆದೆಸೆಯೊಳ್ ತರಂಬಿಡಿದು ಪಾಱುವ ವೀರರ ಸೆಕ್ಕೆಗಂಡದಿಂ
ವಿಸಸನಭೂಮಿ ಕೋೞ್ಮಿದುಳ ನೆತ್ತರ ಕಾಳ್ಗೆಸಱಿಂ ತಗುಳ್ದು ನ
ರ್ತಿಸುವ ಕಬಂಧದಿಂದೊಱೆವ ಲೋಹಿತಧಾರೆಗಳಿಂ ನಭಂ ವಿಗು
ರ್ವಿಸುವುದಿದೇಂ ವಿಚಿತ್ರಮೊ ಕದಂಬರ ಸೋಮನಿದಿರ್ಚಿದಾಜಿಯೊಳ್
॥ 294 ॥

ಚಂ ಮಾ ॥ ತನು ತನುಮಂ ತಱುಂಬೆ ಮಿಗೆ ಕೂರಸಿ ಕೂರಸಿಯಂ ಪಳಂಚೆ ಥೊ
ಪ್ಪೆನೆ ಕರುಳಿಂಡೆಗೊಂಡಡಗು ಥಿಪ್ಪೆನೆ ಬೋರೆನೆ ರಕ್ತವಾರಿ ಬಾ
ಪ್ಪೆನೆ ಮರುಳಾರ್ದು ವೈರಿನೃಪರಂ ಚಲದಿಂದಮೆ ಕಾದಿ ಗೆಲ್ವ ವೀ
ರನೊಳಿದಿರಾಂತು ಗೆಲ್ವದಟನಾವನೊ ಸೋಮನೊಳಾಜಿರಂಗದೊಳ್
॥ 295 ॥

ಸೋಮದೇವನ ಹೆಂಡತಿ ಮಾಳಲದೇವಿ

ಮ ವಿ ॥ ಜಗಮಂ ರಕ್ಷಿಸಿದತ್ತು ಕೀರ್ತಿ ಮುಗಿಲಂ ಮುಟ್ಟಿತ್ತು ಪೆಂಪಾತ್ಮದಾ
ನಗುಣಂ ಜೀಯೆನಿಸಿತ್ತು ವಿಶ್ವಜನತಾಸಂಸ್ತುತ್ಯಮಾದತ್ತು ಸ
ತ್ಯಗುಣಂ ತಾನೆನೆ ಸೋವಿದೇವನೃಪರಾಜ್ಯಶ್ರೀ ಜಯಶ್ರೀಯೆನಲ್
ನೆಗೞ್ದೀ ಮಾಳಲದೇವಿಯುನ್ನತಿಯನಿನ್ನೇವಣ್ಣಿಪೊಂ ಬಣ್ಣಿಪೊಂ ॥ 296 ॥

ಮಾಚೆಯನಾಯಕ

ಮ ವಿ ॥ ಶಿವತತ್ತ್ವಂ ಶಿವಧರ್ಮನಿರ್ಮಳ ಗುಣಾಳಂಬಂ ಶಿವಾರಾಧನಂ
ಶಿವಪೂಜಾವಿಧಿಸಲ್ಗು x ವಿಭುವಿನಿಂ ಧಾತ್ರಿಜನಕ್ಕೆಂದು ತಾಂ
ಶಿವನೀಯಲ್ಪಡೆದಳ್ ಮಹೇಶವರದಿಂ ಮಲ್ಲವ್ವೆ ವಿಖ್ಯಾತನಂ
ಶಿವಪಾದಾಂಬುಜ ಭೃಂಗನಂ ತನಯನಂ ಸದ್ವಾಚಿಯ ಮಾಚಿಯಂ ॥ 297 ॥

ಮ ವಿ ॥ ವಿನಯಂ ಸಜ್ಜನ ಸಂಪದಂ ಪ್ರಭುತೆ ಲೋಕಸ್ತುತ್ಯಮಾಜ್ಞಿಷ್ಟಶಿ
ಷ್ಟನಿಕಾಯೋತ್ಸವಕಾರಿ ಧರ್ಮಚರಿತಂ ಸತ್ಪೂಜಿತಂ ವಿಶ್ವದಿ
ಗ್ವನಿತಾಚಂದನಲಿಪ್ತಕೀರ್ತಿ ಪರನಾರೀದೂರಮಾಚಾರಮಾ
ಯ್ತೆನಲೇವೇಟ್ಬುದೊ ಮಾಚಿಗಾಂಕನೆ ವಲಂ ಧನ್ಯಂ ಮಹೀಚಕ್ರದೊಳ್
॥ 298 ॥

ಮ ವಿ ॥ ಪತಿಗರ್ಥಾರ್ಜನೆಯಿಂ ಪ್ರಜಾಪ್ರತತಿಗಂ ಮರ್ಯಾದೆಯಂ ದಾಂಟದು
ನ್ನತಿಯಿಂ ಸ್ವಪ್ನದೊಳಪ್ಪೊಡಂ ಪುಸಿಯದೆಂತುಂ ಪೊರ್ದದಾತ್ಮೀಯಸ
ನ್ನುತಸತ್ಯವ್ರತದಿಂ ವಿರೋಧಿಬಳಮಂ ಬೆಂಕೊಳ್ವ ವಿಕ್ರಾಂತದಾ
ಯತಿಯಿಂ ನಾಯಕ ಮಾಚಿಗಾಂಕನೆ ವಲಂ ವಿಖ್ಯಾತಿಯಂ ತಾಳ್ದಿದಂ
॥ 299 ॥

ಚಂ ಮಾ ॥ ಪರವಧುಗಾಸೆಗೆಯ್ಯದ ಮನಂ ಜಗಮಂ ಪೊರೆವಾರ್ಪಸತ್ಯದೊಳ್
ಪೊರೆಯದ ವಾಣಿ ವೈರಿಜಯಮಂ ಪಡೆವಾಚರಣಂ ಕಳಂಕದೊಳ್
ನೆರೆಯದ ಕೀರ್ತಿ ಪೂಜಿತಮಹೇಶಪದಾಂಬುಜಭಕ್ತಿ ತಾನದ
ಚ್ಚರಿಯೆನೆ ಬಣ್ಣಿಸಲ್ಕಳವೆ ಮಾಚಿಯನಾಹವಸವ್ಯಸಾಚಿಯಂ ॥ 300 ॥

ದೇವಶಕ್ತಿ ವ್ರತೀಂದ್ರ

ಮ ಸ್ರ ॥ ಯಮಮುಖ್ಯಾಷ್ಟಾಂಗ ಯೋಗಾನುಭವರಖಿಳ ವೇದಾಂತ ಸಿದ್ಧಾಂತ ಶೈವಾ
ಗಮ ದುಗ್ಧಾಂಭೋಧಿ ಪಾರಾಯಣರಮಳ ಕಳಾಜ್ಞಾನಸಾರರ್ ಪ್ರಸಿದ್ಧೋ
ತ್ತಮ ಯೋಗೀಂದ್ರಾಗ್ರಗಣ್ಯರ್ ನಿರುಪಮ ಮಹಿಮಾಳಂಕೃತರ್ಪೆಂಪುವೆತ್ತ
ಕ್ರಮಯುಕ್ತರ್ ಖ್ಯಾತಕಾಳಾಮುಖ ಮುಖತಿಳಕರ್ದೇವಶಕ್ತಿಬ್ರತೀಂದ್ರರ್
॥ 301 ॥

ಮ ವಿ ॥ ಎಸೆಯಲ್ ಚಿತ್ರವಿಚಿತ್ರಪತ್ರನುತಮಂ ಪ್ರಾಸಾದಮಂ ನಾಡೆಕ
ಲ್ವೆಸದಿಂ ಮಾಡಿಸಿ ಮಾಡಿ ಪೊಂಗಳಸಮಂ ದೇವಾಲಯಾಗ್ರಕ್ಕೆ ರಾ
ಜಿಸೆ ತಜ್ಞರ್ಬಗೆಗೊಂಡು ಬಣ್ಣಿಸುವಿನಂ ತತ್ಪುಣ್ಯಮಂ ಕೂಡೆ ಪೆ
ರ್ಚಿಸಿದಂ ಸುಪ್ರಭು ಮಾಚಿಗಾಂಕನ ಸಕೃತ್ಸತ್ಕೀರ್ತಿಯಂ ಧಾತ್ರಿಯೊಳ್
॥ 302 ॥

34) ಮಾಯಿತಮ್ಮನ ಮುಚ್ಚಡಿ 369, E.C. XIV (R), ಕ್ರಿ.ಶ. 1165

ಇದರಲ್ಲಿ ಕಳಚುರ್ಯ ದೊರೆಯಾದ ಬಿಜ್ಜಳನ ಆಳಿಕೆಯಲ್ಲಿ ಕದಂಬಸೋಮದೇವನ ಮಹಾಪ್ರಧಾನ ನಾಕರಸನು ಜಗದೇಕಮಲ್ಲೇಶ್ವರ ದೇವರಿಗೆ ಭೂಮಿಯನ್ನು ದತ್ತಿ ನೀಡಿದಂತೆ ಹೇಳಿದೆ.

ಕದಂಬ ಸೋಮದೇವ

ಕಂ ॥ ಚಂಡರಿಪುನ್ನಪತಿತಮಮಾ
ರ್ತಂಡಂ ಕದನಪ್ರಚಂಡನಹಿತರ ಗಂಡಂ
ಮಂಡಳಿಕವನಜವನವೇ
ತಂಡಂ ಬಾಂಧವಪುರಾಧಿನಾಥಂ ಸೋಮಂ ॥ 303 ॥

ಮ ಸ್ರ ॥ ಹೃದಯಂ ಲಕ್ಷ್ಮೀವಧೂಮಂಡನಮಣಿಭವನಂ ಬಾಹುದಂಡಂ ಜಯಶ್ರೀ
ಸುದತೀನೃತ್ಯಶ್ರಮೋದ್ಯದ್ವಿಪುಳಕನಕದಂಡಂ ಸುಧಾಸ್ಮೇರಪೂರಂ
ವದನಂ ವಾಕ್ಕಾಮಿನೀನರ್ತನಕನಕಗೃಹಂ ತಾನೆನಲ್ ಕೀರ್ತಿಕಾಂತಾ
ಸ್ಪದನಾದಂ ಸೋವಿದೇವಂ ವಿಬುಧಜನಸುರೇಂದ್ರಾವನೀಜಪ್ರಭಾವಂ
॥ 304 ॥

ನೊಣಂಬೇಶ್ವರ ಮಠ

ಕಂ ॥ ಮಠಮಿದು ನೈಷ್ಠಿಕ ಮಠಮೀ
ಮಠದೊಡೆಯಂ ಬ್ರಹ್ಮಚರ್ಯಮಿಲ್ಲದೊಡಂದೀ
ಮಠದಿಂ ಪೋಜಿಮಡಿಸುವುದೀ
ಮಠ ಅರಸಿಕೆರೆಯ ನೊಣಂಬೇಶ್ವರ ಮಠದ ಸನ್ತತಿಯ ಮಠಂ ॥ 305 ॥

35) ಬಳ್ಳಿಗಾವೆ 203, E.C. XIV (R), ಕ್ರಿ.ಶ. 1168

ಇದರಲ್ಲಿ ಕಳಚುರ್ಯ ದೊರೆಯಾದ ರಾಯಮುರಾರಿ ಸೋವಿದೇವನ ಮಹಾಪ್ರಧಾನ ಬ್ಯಾಳಿಕೆಯ ಕೇಶಿದಣ್ಣಾಯಕನು ಬಳ್ಳಿಗಾವೆಯ ಕೇದಾರೇಶ್ವರದೇವರಿಗೆ ಗ್ರಾಮವನ್ನು ದತ್ತಿ ಬಿಟ್ಟಂತೆ ಹೇಳಿದೆ.

ಸೋವಿದೇವ

ಮ ವಿ ॥ ರಿಪುಭೂಪಾಳತಮೌಘಮೋಡೆ ಕುಮುದವ್ರಾತಂ ಕರಂ ಪೆರ್ಚೆ ತ
ದ್ರಿಪು ಕಾಂತಾಮುಖಪಂಕಜಂ ಕೊರಗೆ ನಕ್ಷತ್ರೋದಯೇಶಂ ಕಲಾ
ಳಿಪರಿಭ್ರಾಜಿತನೂರ್ಜಿತೋರ್ಜಿತಯಶಶ್ರೀಚಂದ್ರಿಕಾಧೀಶ್ವರಂ
ನೃಪನೇ ಸೋಮನೆನಲ್ಕೆ ಬಿಜ್ಜಣಮಹೀಪಾಲಾಬ್ಧಿಯೊಳ್ ಪುಟ್ಟಿದಂ
॥ 306 ॥

ಕೇಶಿದಣ್ಣಾಯಕ

ಮ ವಿ ॥ ಇದು ವಿದ್ಯಾಧರಲೋಕಮಲ್ಲದಿದು ನಾಕಾನೀಕಮಂತಲ್ಲದಿಂ
ತಿದು ಗಂಧರ್ವನಿಕಾಯಮಲ್ಲಣಮಿದಾಸತ್ಕಿನ್ನರವ್ರಾತಮ
ಲ್ಲಿದಲೇ ಬ್ಯಾಳಿಕೆಕೇಶಿಮಯ್ಯವಿಜಯಪ್ರಾರಂಭದೊಳ್ ಮಚ್ಚಿಮೋ
ದದಟಕ್ಷ್ಮಾಪನಿಕಾಯಪುಷ್ಪಕಚಯಂ ವ್ಯೋಮೈಕಸಾಂಕೀರ್ಣಕಂ ॥ 307 ॥

ಚಂ ಮಾ ॥ ಮನುಚಯಸೇವ್ಯವೃತ್ತಿ ನಿಜವೃತ್ತಿ ಪುರಾತನರಾಜನೀತಿ ತಾಂ
ತನಗಳವಟ್ಟ ನೀತಿಯೆ ಪರಾರ್ಥಮೆ ತನ್ನ ಭುಜಾರ್ಜಿತಾರ್ಥಮಾ
ಳ್ದನ ಮಹಿಮೋನ್ನತತ್ವಮೆ ನಿಜೋನ್ನತಿಯಾಶ್ರಿತತುಷ್ಟಿ ತನ್ನದೆಂ
ದೆನಿಪ ನೆಗಟ್ತೆ ಪೆರ್ಚೆ ಸಲೆ ಜೀವಿಪಂ ಕೇಶವದಂಡನಾಯಕಂ ॥ 308 ॥

36) ಬಳ್ಳಿಗಾವೆ 262, E.C. XIV (R), ಕ್ರಿಶ. 1171

ಈ ವೀರಗಲ್ಲು ಶಾಸನದಲ್ಲಿ ಕಳಚುರ್ಯ ದೊರೆಯಾದ ರಾಯಮುರಾರಿ ಸೋವಿದೇವನ ಆಳಿಕೆಯಲ್ಲಿ ಹೆಲ್ಲಿಗ ಎಂಬುವವನು ಕಳ್ಳರನ್ನು ಕೊಂದು ಸತ್ತನೆಂದು ಹೇಳಿದೆ.

ಚಂ ಮಾ ॥ ಉರವರಿಯಿಂದೆ ದೂರದೊಳೆ ತಾಗಿದ ವೀರಧನುರ್ಧರರ್ಕಳಂ
ತ್ವರಿತದಿನೆಚ್ಚು ಕೂರ್ಗಣೆಗಳಿಂ ಧರೆಗಿಕ್ಕಿ ಕರಂ ಕಡಂಗಿ ಭೋ
ರ್ಗರೆದಿರದೆಯ್ದಿ ಗೇಣ್ಗಳನೆ ಕಿಟ್ತಿಜಿವಂಕದ ನಾಯಕರ್ಕಳಂ
ಸುರಿಗೆಯನಾಂತು ಕೊಂದು ಧುರದಲ್ಲಟಿದಂ ಪಡೆಮೆಚ್ಚೆ ಹೆಲ್ಲಿಗಂ ॥ 309 ॥

ಕಂ ॥ ಮೆಚ್ಚೆಮಗೆಂದಾಗಸದಿಂ
ಚೆಚ್ಚರಮಿೞಿತಂದು ಕೊಂಡುಪೋದರ್ ನಲವಿಂ
ದಚ್ಚರಸೆಯರಾದರದಿಂ
ದಚ್ಚರಿವಡೆ ಭೂಜನಂಗಳಾ ಹೆಲ್ಲಿಗನಂ ॥ 310 ॥

37) ಬಂದಳಿಕೆ 167, E.C. XIV (R), ಕ್ರಿಶ. 1173

ಇದರಲ್ಲಿ ಕಳಚುರ್ಯ ದೊರೆಯಾದ ರಾಯಮುರಾರಿ ಸೋವಿದೇವನ ಆಳಿಕೆಯಲ್ಲಿ ಕದಂಬ ಸೋಮದೇವನ ಪ್ರಧಾನ ಮಾಚರಸನು ಬಂದಣಿಕೆಯಲ್ಲಿ ಬೊಪ್ಪೇಶ್ವರ ದೇವಸ್ಥಾನವನ್ನು ಮಾಡಿಸಿ ಭೂಮಿಯನ್ನು ದತ್ತಿ ಬಿಟ್ಟಂತೆ ಹೇಳಿದೆ.

ಶಿವ ಸ್ತುತಿ

ಮ ವಿ ॥ ಭುವನಂಗಳ್ ಪದಿನಾಲ್ಕುಮಂ ಪಡೆದು ತನ್ನೊಂದಷ್ಟಮೂರ್ತಿತ್ವದಿಂ
ಭವನೆಂಬೀ ಹೆಸರಂ ನಿಮಿರ್ಚಿ ಗಿರಿಜಾಪ್ರೇಮೋರ್ದ್ವಗಂಗಾಧರಂ

ಪವಮಾನಪ್ರಿಯ ಚಂದ್ರಸೂರ್ಯನಯನಾಬ್ಜಂ ಬ್ಯೋಮಕೇಶಂ ಸದಾ
ಶಿವರೂಪಂ ಮೆಱೆದಿರ್ದನಾ ಪುರುಷಮಂ ಮುನ್ನೀಶ್ವರ ಶಾಶ್ವತಂ ॥ 311 ॥

ಭೂಮಿ

ಉ ಮಾ ॥ ಆ ಪರಮೇಶ್ವರಂಗೆ ಶಿವಶಕ್ತಿಯ ಸತ್ವರಜಸ್ತಮೋಗುಣ
ಬ್ಯಾಪಕವೃತ್ತಿಯಿಂ ಜನಯಿಸಿರ್ದುದು ಮೂಜಗವಲ್ಲಿ ಪುಣ್ಯ ಪುಂ
ಜೋಪಮಮೆಂನ್ತೊ ಮಧ್ಯಮಮೆನಿಪ್ಪುದು ಮಧ್ಯಮಲೋಕವೆಂಬಿನಂ
ರೂಪವಿಳಾಸದಿಂದೆಸೆದುದುರ್ವರೆವುರ್ವರೆಯಲ್ಲದೆಂಬಿನಂ ॥ 312 ॥

ಭರತಕ್ಷೇತ್ರ

ಉ ಮಾ ॥ ಮೇರುವ ಮೇರುವಂ ಪಡೆದು ಕಿಂಪುರುಷಂ ಪರಿವೇಷ್ಟಿಸಿತ್ತದಂ
ನೇರಿತಿದೇಮ ಹರ್ಷಭರದಿಂ ಹರಿವರ್ಷಮೆನುತ್ತೆ ವರ್ಷಸ
ನ್ನಾರವಿದೆಂದದಂ ಮುದದೆ ಪೊರ್ದೆ ಹಿಮಾಚಳವಾ ನಗಕ್ಕೆ ಗಂ
ಗಾರಮಣೀಯವೆಂದು ಭರತಕ್ಷಿತಿಸಾರ್ದುದು ದಕ್ಷಿಣಾಸೆಯಂ ॥ 313 ॥

ಉ ಮಾ ॥ ಬಾಜಿಸೆ ಡಕ್ಕೆಯಂ ಪ್ರಿಯರ ಮೆಲ್ಲೆರ್ದೆ ತುಂಬಿಗಳಿಂಬುವೆತ್ತಿರಲ್
ರಾಜಿಸಿ ಪಾಡೆ ಕೆಂದಳಿರೆ ಕೈದಳಮಾಗಿರೆ ಮಂದಮಾರುತಂ
ಯೋಜಿಸೆ ತಾಳಮಂ ರತಿಯನಾಡಿಸೆ ಮನ್ಮಥನಂತರಂಗದೊಳ್
ಸಾಜಮೆನಿಪ್ಪುದಲ್ತೆ ಭರತಾಹ್ವಯಮಂ ಭರತೋರ್ವಿಗುರ್ವಿನಿಂ ॥ 314 ॥

ಕಳಚುರಿ ವಂಶ

ಮ ಸ್ರ ॥ ಗುರುವಶ್ವತ್ಥಾಮನಾ ಸೋಮನಿನತಿಮುದದಿಂ ಸ್ಮಶ್ರುಕೂರ್ಚಂ ಕಳಾಪೋ
ತ್ಕರ ರೇಖಾವ್ಯಾಪ್ತಿಯಂ ಮಾಡಿಸುತೆ ಪರಶುರಾಮಪ್ರಕೋಪಾಗ್ನಿ ಭೂಪಾ
ಳರನಿಂಬಿಂ ತಳ್ತುವಂದಾನನತಿಮುದದಿಂ ಕಾದು ತನ್ನೊಂದು ಚಿಹ್ನಂ
ಬೆರಸಿತ್ತಂ ರಾಗಿಸುತ್ತಂ ಕಳಚುರಿ ವೆಸರಂ ತತ್ ಕುಳಕ್ಕೀಶ್ವರಾಂಶಂ ॥ 315 ॥

ಶಾ ವಿ ॥ ಅಂತಿಂತೊಂದು ದಿನಂ ಮನೋಮುದದಿನಶ್ವತ್ಥಾಮನುಂ ಸೋಮಭೂ
ಕಾನ್ತಾಧೀಶನುವರ್ತ್ತಿಯಿಂದೆಸೆವ ಕೈಲಾಸಾದ್ರಿಗಾ ಪಾರ್ವತೀ
ಕಾನ್ತಾರಾಧನೆಗೆಂದೆ ಪೋಗೆನುತನಾನಂದ ಕ್ಷಿತೀಶಂ ಸುಖ
ಸ್ವಾಂತಂ ಪೂಜಿಸುತಿರ್ದನೀಶಪದಮಂ ನಾನಾಪ್ರಸೂನಂಗಳಿಂ ॥ 316 ॥

ಮ ಸ್ರ ॥ ಶಿವನಂ ಪುತ್ರಾರ್ಥದಿಂ ಪಲವುದೆವಸವಾರಾಧಿಸುತ್ತಿರ್ದನಾತ್ಮೋ
ದ್ಭವಂ ಕಾರುಣ್ಯದಿಂ ಶಂಕರನೆನಗಿನಿಸಂ ಕೊಟ್ಟನಿಲ್ಲೆಂದು ಚಿಂತಿ

ಸುವೊಡೆ ಆ ಚಿಂತೆವೇಡೆಂಬವೊಲೆಸೆವ ಕದಂಬ ಪ್ರಸೂನಾಳಿಗಳ್ ಕಿ
ತ್ತುವುದಂ ಕಂಡಾನ್ನೃಪಂ ಪೂಜಿಸಿದನಭವನಂ ತತ್ಪ್ರಸೂನಂಗಳಿಂದಂ ॥ **317** ॥

ಕದಂಬ ಕುಲ

ಉ ಮಾ ॥ ಪೂಜಿಪುದುಂ ಭವಬರವನಿತ್ತು ಕದಂಬಕುಳಾಭಿದಾನದಿಂ
ರಾಜಿಪ ಪುತ್ರರಿರ್ವರವನೀಪತಿಗಾದಪರಂತವರ್ಗಿನೀಂ
ಯೋಜಿಸಿ ಶಸ್ತ್ರ ಶಾಸ್ತ್ರಕಳೆಯಂ ಪರಿಪಾಳಿಸೆನುತ್ತೆ ಶಂಭುವಾ
ರಾಜನನೀಶ್ವರಾಂಶನೊಡನಪ್ಪಯಿಸಲ್ ಮೆರೆದತ್ತು ತತ್ ಕುಳಂ ॥ **318** ॥

ಶಾ ವಿ ॥ ಆ ಕಾದಂಬಕುಳೋದ್ಭವರ್ಮೆಜೆದರಂತಾ ಕೀರ್ತಿವರ್ಮಾಂಕನುಂ
ಲೋಕಪ್ರಸ್ತುತಮೆಯ್ತುವರ್ಮನುಮವರ್ಗಾ ಧ್ರೋಣಿವಿದ್ಯಾಗಮಾ
ನೀಕ ಶ್ರೀವಿಭವಂಗಳಂ ಪಡೆಯಲ್‌ಕಾದಂಬವಂಶಂ ಯಶ
ಸ್ವೀಕಾರಂ ಬೆರೆಸೊಪ್ಪಿದತ್ತಖಿಳರಾಜ್ಯೈಶ್ವರ್ಯ ಸಂಪತ್ತಿಯಿಂ ॥ **319** ॥

ಕಳಚುರ್ಯ ಬಿಜ್ಜಳ

ಮ ಸ್ರ ॥
ಕಳಚುರ್ಯಾಮ್ನಾಯ ರಾಜ್ಯಂ ಬೆಳಗಿ ಭುವನಮಂ ಸೋಮನಿಂ ಪೆಮ್ಮನಿಂ ನಿ
ರ್ಮಳಭಾವಂಬೆತ್ತು ಯೋಗೋರ್ವಪನಿನೆಸೆದು ಭೋಗಂಗಳಿಂ ವಜ್ರನಿಂದೋ
ರ್ವಳಮಂ ಕೈಗೊಂಡು ಯೋಗಕ್ಷಿತಿಪತಿಯನತಿಸ್ಥೈರ್ಯದಿಂ ತಾಳ್ದಿ ಸೌಖ್ಯಾ
ವಿಳವಾಗಿರ್ದ್ದೊರ್ಪಿ ಪೆರ್ಮಡಿಯಿನೊದವಿದುದಾ ಬಿಜ್ಜಣೋರ್ವೀಶನಿಂದಂ ॥ **320** ॥

ಮ ಸ್ರ ॥ ನಿಸದ ಶ್ರೀಬಿಜ್ಜಣೋರ್ವೀಪತಿ ಯೆಸಕದಿನಾ ಗೂರ್ಜರಂ ಪೆರ್ಜರಂ ಬೊ
ತ್ತೆಸಕಂಗೆಟ್ಟಂ ಕಳಿಂಗಂ ಕಳಿದನೆಳಸಿದಂ ಮಾಳವಂ ಮಾಳವಂ ಮೂ
ರ್ಛಿಸಿದಂ ಭೀತಾಂಗನಂಗಂ ಭಯಹುತವಹಶುಷ್ಕಂ ತುರುಷ್ಕಂ ಸುರುಳ್ದಂ
ಬಿಸುಟಂ x ಚೋಳನಾಳೋಳಿಯೊಳೆ ನಡೆದನಾ ರಂಧ್ರನಾಗಿರ್ದನಂಧ್ರಂ
॥ **321** ॥

ಮ ಸ್ರ ॥ ನಿಜಶೌರ್ಯೋದ್ರೇಕದಿಂ ನೂರ್ಮಡಿಪಿ ಮಗನನಾ ಬಿಜ್ಜಣ ಕ್ಷೋಣಿಪಾಳಂ
ತ್ರಿಜಗಂ ನಾಥಂ ನಿಜಾಜ್ಞಾರಚಿತ ಭುವನಯೂಥಂ ವರಕ್ಷೋದ್ಯದ್ವರೂಥಂ
ವಿಜಿತಾಗೋದ್ಭೂತಯೂಥಂ ಪುರಿಕರನಿಳಯಂ ಸೋಮನಾಥಂ ಕುಡಲ್ ಪೆ
ತ್ತು ಜಯಶ್ರೀಧಾಮನಂ ಸೋಮನನಮಳಗುಣಸ್ತೋಮನಂ ರಂಜಿಸಿರ್ದಂ
॥ **322** ॥

ರಾಯಮುರಾರಿ ಸೋವಿದೇವ

ಉ ಮಾ ॥ ಕಾಯಲುಮೀಯಲುಂ ನೆಱೆಯದುರ್ವಿಪರಿಂದಡಿಗಟ್ಟಿ ಭೂಮಿಯಂ
ಜೀಯೆನೆ ಧಾತ್ರಿ ಕಾಯೆನೆ ವಿರೋಧಿಗಳರ್ಥದೆ ತೃಪ್ತಿವೆತ್ತು ಹೋ
ಹೋಯೆನೆ ವಂದಿಗಳ್ ಧರೆಯನೊಪ್ಪುವ ಕೋಡಿನೊಳೆತ್ತಿ ತಾಳ್ದಿದಂ
ರಾಯಮುರಾರಿಯೆಂಬ ಹೆಸರೊಪ್ಪಿರೆ ಸೋಮಮಹೀಶ್ವರರೇಶ್ವರಂ ॥ 323 ॥

ಮ ವಿ ॥ ಖಸನಂ ಸೀಳ್ದು ಕಳಿಂಗನಂ ನಲಪಿನಿಂದಂ ಹೋಳ್ದು ಕಿಮ್ಮೀರನಂ
ನಿಸದಂ ನುಂಗಿ ತುರುಷ್ಕನಂ ನೊಣೆದು ಚೇರೋರ್ಭೀಶನಂ ತಿಂದು ತೇ
ಗಿ ಸುರಾಷ್ಟ್ರ ಪ್ರಭುವಂ ತಳಕ್ಕೆದೆಗೆದಿಂಬಿಂತೇದು ಕೈಯಿತಟ್ಟೆ ಗೊಂ
ಡೆಸೆಗುಂ ರಕ್ಕಸಿಯಂತೆ ಮಿಕ್ಕಸಿಕರಂ ಶ್ರೀಸೋಮರಾಜೇಂದ್ರನಾ ॥ 324 ॥

ಉ ಮಾ ॥ ಕೊಟ್ಟುಕದಂಬರುದ್ರನಿವನೆಂದೊಲವಿಂದೆ ವಿಭೂತಿಯಿಂದೆ ಬೊ
ಟ್ಟಿಟ್ಟು ಲಲಾಟದೊಳ್ ಕನಸಿನಿಂದವೆ ದಕ್ಷಿಣ ಸೋಮನಾಥನೊ
ಲ್ದಿಟ್ಟು ಸುಧಾಂಬರ ಪ್ರತತಿಯಂ ಮಿಗೆ ನಂದಿಯನೇರಿ ಬಂದುಕ
ಣ್ಗೆಟ್ಟಳವೊಪ್ಪಿ ಸೋಮವೆಸರಿಜ್ಞೊಡನಾ ಸತಿಕಂಡಳರ್ತ್ಥಿಯಿಂ ॥ 325 ॥

ಶಾ ವಿ ॥ ಕಂಡಾಪಾಂಗಿನ ಪುತ್ರನಂ ಪಡೆದು ಸೋಮಂನಾಮದಿಂದೆಂದುಕ
ಯ್ಕೊಂಡಿಂಬಿಂ ನಲಿದಾಡೆ ರಾಜಿಸಿದನನ್ತಾ ಸೋಮನುದ್ಯತ್ಸುಧಾ
ಪಿಂಡಂ ನಿರ್ಮಳನೇಳ್ಗೆವಾಡಿವದ ಸೋಮಂ ತಾನೆನಲ್ ಧಾತ್ರಿ ಷ
ಟ್ಖಂಡೋರ್ವೀತಳವರ್ತಿ ಕೀರ್ತಿದಮನ ಶ್ರೀಮೂರ್ತಿಸಂಪತ್ತಿಯಿಂ ॥ 326 ॥

ಚಂ ಮಾ ॥ ಹುಸಿವರಸೂಲನೆಂಬ ತಿಸುಳಂ ನುತಸತ್ಯ ಪತಾಕನೆಂಬುದೊಂ
ದೆಸಕದ ಜಾಹ್ನವೀರಮಣಿಗಂಡರದಾವಣಿಯೆಂಬ ನಾಮದಿಂ
ದೆಸೆವ ಕರೋಟಿಮಾಲೆಯುತ ಸೋಮಸಮಾಖ್ಯೆಯ ಸೋಮನೆಂದು ಬ
ಣ್ಣಿಸುವುದು ಧಾತ್ರಿಮಂಡಳಿಕ ಭೈರವನಂ ನಿಗಳಂಕಮಲ್ಲನಂ ॥ 327 ॥

ಚಂ ಮಾ ॥ ಜನನುತವಾದುದಿಂತೆಸೆವ ಸತ್ಯಪತಾಕನ ಸತ್ಯದೇಳ್ಗೆ ಸೋ
ಮನ ನಯನೋತ್ಸವ ಪ್ರಕೃತಿಗಂಡರ ದಾವಣಿಯೊಳ್ ಗುಣಂ ಕದಂ
ಬನ ನೃಪರಾಜಿಸಿರ್ದ ಸುಮನಃ ಪ್ರಭವಂ ನಿಗಳಂಕ ಮಲ್ಲಭೂ
ಪನ ಜಯಕೀರ್ತಿ ಮಂಡಳಿಕ ಭೈರವನುದ್ಧತ ಶತ್ರುಮರ್ದನಂ ॥ 328 ॥

ಮ ಸ್ರ ॥
ಮುನಿಸಿಂದಂ ಭ್ರೂವಿಳಾಸಂ ನೊಸಲಡರ್ದುದು ಭಾಳಾಕ್ಷಿಯನ್ತೋರ್ಪ ಚಂಗಾ
ಳ್ವನ ರೂಪಂಧಾಸುರಂ ಕೂರದೆ ಪದನಿಗಳಾಕೀಳಿತಂ ತೋಱೆ ಮಾಱಾಂ
ಪನನೀ ಕಾದಂಬರುದ್ರಂ ಭುಗುಭುಗುಭುಗಿತೋದ್ರೇಕ ಕೋಪಾಗ್ನಿಯಿಂ ನು
ಣ್ಣನೆ ನುಂಗಲ್ ಕಾವನಾವೊಂ ಬಳಿಕೆನುತರಿಭೂಪಾಳರುನ್ಮುಳುಕುತಿರ್ಪರ್ ॥ 329 ॥

ಕದಂಬ ಸೋಮದೇವ

ಉ ಮಾ ॥ ಲೀಲೆಯನಾಗುಮಾಡೆ ಬನವಾಸೆಗೆ ವೀರರಸಂ ಪೊದಟ್ಟಿ ಬಾ
ಳ್ವೇಲಿಯಿದೆಂಬಿನಂ ಬಳಸಿ ರಕ್ಷಿಸೆ ತನ್ನಯ ತೋಳ ಬಾಳ್ ಜಸಂ
ಸಾಲೆ ಬೆಡಂಗುವೆತ್ತ ಪೊಸ ಸುಗ್ಗಿಯನಾರ್ಜಿಸೆ ನಾಡು ನಾಡೆ ಸೌ
ಖ್ಯಾಲಯಮಾಗೆ ಮಾಡಿದುದು ಸತ್ಯಪತಾಕನ ರಾಜವೈಭವಂ ॥ 330 ॥

ಮಾಚರಸ

ಕಂ ॥ ವಿಜಿಗೀಷು ಸೋಮಪಾದೋ
ಪಜೀವಿ ಸೋಮನೃಪಖಡ್ಗವಲ್ಲೀ ವಿಳಸ
ನ್ನಿಜವೀರರಸಂ ಸೋಮ
ಪ್ರಜಾರ್ಣವೋದ್ವೀಚಿ ಮಾಚಿ ಸೊಗಯಿಸಿ ತೋರ್ಪಂ ॥ 331 ॥

ಕಂ ॥ ಶರಣೆಂದರೆರ್ದೆಯ ಕೈ ಮ
ಚ್ಚರಿಪದಟರ ಮೊಗದ ಕೈ ಜನಸ್ತುತಮಾಹೇ
ಶ್ವರತತಿಯ ಮುಗಿದ ಕೈ ಬೇ
ಟ್ಟಿರ ಪಿಡಿಕೈ ಮಾಚಿಗಂ ಚತುರ್ಭುಜನಾದಂ ॥ 332 ॥

ಕಂ ॥ ಗಂಡುಳಿದು ಸಿತಗರೆಲ್ಲಂ
ಪೆಂಡಿರವೋಲ್ ಕುರುಳ ಬೆರಳ ಹುರುಳಂ ಕೊಟ್ಟುಂ
ಕಂಡುಂ ನಡೆವರ್ ಸಿತಗರ
ಗಂಡಂ ಶ್ರೀಮಾಚಿ ಜಡಿವನಸಿಯನೆನುತ್ತುಂ ॥ 333 ॥

ಚಂ ಮಾ ॥ ಸಿತಗರ ಗಂಡನೆಯ್ದಿದನೆನಲ್ ಕಹಳಾರವಮನ್ಯಭೂಭುಜರ್
ಸತಿಯರ ರೂಪಿನಿಂ ಪಿಡಿದು ಪೆಂಡಿರ ಕೈಗಳನೋಡೆ ಮಂದಿಯೊಳ್
ಮತಿ ಮಱೆದಲ್ಲಿ ದಂಪತಿಯೆನಲ್ ಸತಿಯಾಂ ಪತಿಯೆಂದು ಸೂರುಳಲ್
ಪತಿ ಸತಿ ನಂಬದಂತುಟವರ್ಗಾದುದು ಮಾಚನ ಖಡ್ಗರೋಚಿಯಿಂ ॥ 334 ॥

ಚಂ ಮಾ ॥ ಇದು ನಿಗಳಂಕಮಲ್ಲನ ಭುಜಾಸಿಯಕೂರ್ಪಿದು ಸೋಮಭೂಪನ
ಭ್ಯುದಯವಿದೊಳ್ಪುವೆತ್ತೆಸೆವ ಸತ್ಯಪತಾಕನ ನನ್ನಿಯೊಳ್ಗೆಯಿಂ
ನ್ತಿದು ಮೆರೆದಿರ್ದ ಮಂಡಳಿಕ ಭೈರವನುದ್ಧುರಬಾಳನೇತ್ರವೆಂ
ಬುದು ಧರೆ ವೀರ ವೈಭವಕಳಾಬಳಮಂ ರುತವಾಚಿ ಮಾಚಿಯಾ ॥ 335 ॥

ಚಂ ಮಾ ॥ ತಳ ಹೆಡೆಯಾಗಲಿಕ್ಕಿದ ಸುವರ್ಣದ ಮುದ್ರಿಕೆ ರತ್ನಮಾಗೆ ಸಂ
ಚಳಿಪುಗುರೆಲ್ಲ ಸಂದೆಸೆವ ದಂತದ ಪಂತಿಗಳಾಗೆ ರೌದ್ರದಿಂ
ಬಳೆದ ಸುಕೋಪಮೆಂಬುದೆ ವಿಷಂ ತನಗಾಗಲರಾತಿಜೀವಮಂ
ಘಳಿಲೆನೆ ನುಂಗುತುಂ ನಲಿಯುತಿರ್ದುದು ಮಾಚನ ಬಾಹುಪನ್ನಗಂ
॥ 336 ॥

ನಾಗರಖಂಡ

ಮ ಸ್ರ ॥
ತರದಿಂ ಪೊಂಬಾಳೆಗಳ್ ಪಣ್ಗೊಲೆಗಳುಗುವ ಪೆರ್ವಾಡಿನಿಂ ತೆಂಗುಗಳ್ ಕಾ
ಯ್ವಿರಿಪಿಂ ಬರ್ಪಂಬುವಿಂ ಮಾವುಗಳೆಸೆವ ರಸಾಸಾರದಿಂ ಕರ್ವುಗಳ್ ಸು
ರ್ವುರು ಸೋಂಕಿಂದೊಕ್ಕ ಸಾಱಿಂ ಬಳೆದು ಬಳಿಕಮಂತೆಲ್ಲಮೊಂದಾಗಿಯಾ ನಾ
ಗರಖಂಡಪ್ರಾಂತದೊಳ್ ಕಾಲ್ವರಿಯಿಸೆ ಬೆಳೆಗುಂ ಕೂಡೆ ಕೇದಾರವರ್ಗಂ ॥ 337 ॥

38) ಬಳ್ಳಿಗಾವೆ 207, E.C. XIV (R), ಕ್ರಿ.ಶ. 1179

ಇದರಲ್ಲಿ ಕಳಚುರ್ಯ ದೊರೆಯಾದ ಸಂಕಮದೇವನು ಬಳ್ಳಿಗಾವೆಯ ಕೇದಾರೇಶ್ವರ ದೇವರಿಗೆ ಗ್ರಾಮವನ್ನು ದತ್ತಿ ಬಿಟ್ಟಂತೆ ಹೇಳಿದೆ.

ಸಂಕಮದೇವ

ಉ ಮಾ ॥ ಗೌಳಗಜಂ ತುರುಷ್ಕತುರಗಂ ವರಸಿಂಹಳನಾಥಮೌಕ್ತಿಕಂ
ಚೋಳಸುಧಾಂಬರಂ ಮಗಧಕತ್ತುರಿಯಿಂ ಮಳಯೇಶಚಂದನಂ
ಲಾಳನ ಬಾಳಕಂ ನೆಱೆಯಿವೆಂದು ಚರರ್ ಸಲೆ ಬಿನ್ನಪಂಗಳಂ
ಕೇಳಿಸುತಿರ್ಪರೋಲಗದೊಳಂ ವಿಭುಸಂಕಮದೇವಭೂಪನಾ ॥ 338 ॥

ಕಂ ॥ ತತ್ಸಮನಂತರದೊಳ್ಧರೆ
ಗುತ್ಸವಮಂ ಮಾಡಿ ಸತ್ಯಶೌಚಬ್ರತದ ಸ
ರಿತ್ಸುತ ದೊರೆಯಂ ನವಪುರು
ಕುತ್ಸಂ ಸಂಕಂಮದೇವನಾಳ್ದಂ ಧರೆಯಂ ॥ 339 ॥

ತೈಲಪದೇವ

ಮ ಸ್ರ ॥ ಕದನಕ್ಕುಗ್ರಾರಿಯಣ್ಮಲ್ ತ್ರಿದಶಭುವನಮಂ ಪ್ರೀತಿಯಿಂ ಬಂದು ಕಾಣ್ಬಂ
ಗೊದವಿರ್ದೈಶ್ವರ್ಯಮಂ ಭೀತರಿಗಸುಗತಿಯಂ ಮಾಳ್ಪನೇ ನೋಳ್ಪೆವೆಂದಂ
ಗಿದೆ ದಲ್ ಮಾಳ್ಪಂ ಕಱುತ್ತೆಕ್ಕಲನೃಪತನಯಂ ತೈಲಪಕ್ಷೋಣಿಪಾಲಂ
ಮುದದಿಂದಂ ಪ್ರೀತಿಯಿಂದಂ ಹೃದಯದ ಕೃಪೆಯಿಂ ನಾಡು ಮೆಚ್ಚಲ್ಕೆ ನಿಚ್ಚಂ ॥ 340 ॥

ಎರಹರಸ

ಕಂ ॥ ಧುರದೊಳಗೋಡಿದ ರಿಪುನೃಪ
ರರಸಿಯರ ಕಟಾಕ್ಷರುಚಿಯನೀಕ್ಷಿಸರಿನ್ನುಂ
ಧರೆಯೊಳಗೆಱಹರಸನ ಪೊಸ
ಕರವಾಳಿನ ಬೆಳಗೆ ಪೊಳೆಯಿತೆಂಬತಿಭಯದಿಂ ॥ 341 ॥

39) ಬಳ್ಳಿಗಾವೆ 235, E.C. XIV (R), ಕ್ರಿಶ. 1179

ಇದರಲ್ಲಿ ಕಳಚುರ್ಯ ದೊರೆಯಾದ ಬಿಜ್ಜಳನ ದಂಡನಾಯಕ ಕೇಶವ ರಾಜನು ತಾನು ಮಾಡಿಸಿದ ಕೇಶವಪುರವೆಂಬ ಅಗ್ರಹಾರದ ವೃತ್ತಿಗಳಿಗಾಗಿ ಬೆಳುವಣಿ ಗ್ರಾಮವನ್ನು ದತ್ತಿ ಬಿಟ್ಟಂತೆ ಹೇಳಿದೆ.

ಕೇಶವಸ್ತುತಿ

ಶಾ ವಿ ॥ ಶ್ರೀಕಾನ್ತಾಪತಿ ವಿಕ್ರಮಾರ್ಜಿತ ಬಳಿಕ್ಷೋಣೀತಳಂ ವಿಶ್ವಲೋ
ಕೈಕಸ್ತುತ್ಯ ದಶಾವತಾರಯುತನುದ್ಯಚ್ಛಂಖಚಕ್ರಾಬ್ಜಲ
ಕ್ಷ್ಮಾಕೀರ್ಣಾತ್ಮಕರಾಗನೆನ್ನವೊಲಿವಂ ತಾನೆನ್ದು ಸಾನನ್ದದಿಂ
ದಾಕಲ್ಪಾಯುವನೀಗೆ ಕೇಶವ ಚಮೂಪಂಗಾಗಳುಂ ಕೇಶವಂ ॥ 342 ॥

ಬ್ರಹ್ಮೋತ್ಪತ್ತಿ

ಮ ಸ್ರ ॥ ಅಮೃತಾಂಭೋರಾಶಿಶಯ್ಯಾಸದನದೊಳುರುವೀಚೀಸಮುತ್ತುಂಗಮಂಚಾ
ಗ್ರಿಮಶೇಷಾನಲ್ಪತಲ್ಪಸ್ಥಳದೊಳಘಹರಂ ಶ್ರೀಧರಂ ಯೋಗನಿದ್ರೋ
ದ್ಯಮದಿಂದಿರ್ದೆಟ್ಟು ವಿಶ್ವೋಜ್ಜನನವಿಧಿಗೆ ಚಿತ್ತಂದರಲ್‌ತನ್ನ ಸಾಮ
ರ್ಥ್ಯಮೆ ರೂಪಾದಂತೆ ನಾಭ್ಯಂಬುರುಹದಿನೊಗೆದಂ ಚಿನ್ಮಯಂ ಪದ್ಮಸದ್ಮಂ ॥ 343 ॥

ಮ ಸ್ರ ॥ ಕ್ರಮದಿಂ ತತ್ಪದ್ಮಜಂ ಮಾಡಿದ ಸಕಳ ಜನಚ್ಚಕ್ರದೊಳ್ನಾಡೆಯುಂ ಮ
ಧ್ಯಮಲೋಕಂ ಚೆಲ್ವನಾಲೋಕದೊಳವತಿ ಮನೋಹಾರಿಯಾಗಿರ್ಪುದತ್ಯು
ತ್ತಮ ಜಂಬೂದ್ವೀಪವಾ ದ್ವೀಪದೊಳತಿಶಯಂ ಭಾರತೋರ್ವೀತಳಂ ಮ
ತ್ತಮೆನಿತ್ತಾನುಂ ತದುರ್ವೀತಳದೊಳವನಿಶಂ ಕುಂತಳಕ್ಷೋಣಿರಯ್ಯಂ ॥ 344 ॥

ಚಾಳುಕ್ಯ ಕುಲ

ಕಂ ॥ ಪರಮಹರಿನಾಭಿಕಮಳೋ
ದರದೊಳ್ಜನಿಯಿಸಿದ ವಿನುತ ಚತುರಾಸ್ಯನ ಭಾ
ಸುರತರ ಸವ್ಯೇತರದೋ
ಳ್ಪರಿಘದಿನುದಯಿಸಿದುದಲ್ತೆ ಚಾಳುಕ್ಯಕುಲಂ ॥ 345 ॥

ತೈಲಪ

ಚಂ ಮಾ ॥ ಶಿಪುವೆಟೆದುಯ್ದ ಭೂತಳಮನೆಯ್ದೆ ರಸಾತಳದಿಂದೆ ತಂದ ತ
ದ್ರಿಪುವ ಪರಾಕ್ರಮಕ್ಕೆ ನಿಜವಿಕ್ರಮಮಿರ್ಮಡಿಯಾಗೆ ರಟ್ಟರಿಂ
ದಪಹೃತಮಾದ ವಿಶ್ವಧರಣೀತಳಮಂ ಬಿಡದೀಟ್ಟುಕೊಂಡ ತೈ
ಲಪನೃಪನಾದಮುದ್ಧರಿಸಿದಂ ದಲತರ್ಕ್ಯಚಳುಕ್ಯವಂಶಮಮಂ ॥ 346 ॥

ಆಹವಮಲ್ಲ

ಕಂ ॥ ಇಳೆಯಂ ತಮಾಳಕುಳಕುಂ
ತಳೆಯಂ ನವಪೂಗಕಾಂಡಮಂಡಿತಗಳಕಂ
ದಳೆಯಂ ಭೂಭೃತ್ಕುಚಮಂ
ಡಳೆಯಂ ತತ್ತನಯನಾಳ್ದನಾಹವಮಲ್ಲಂ ॥ 347 ॥

ಜಗದೇಕಮಲ್ಲ

ಉ ಮಾ ॥ ಮಾಲವಮಾಲವಾದಿಹರಣಂ ಧೃತಪಲ್ಲವಪಲ್ಲವಾವನೀ
ಪಾಲಕಮಂಡಲಂ ಮುಕುಳಹಸ್ತಯುಗಾತ್ತಲಲಾಟಲಾಟಭೂ
ಮೀಲಲನಾಧಿಪಂ ವಿಪದನೂನಕಳಿಂಗಕಳಿಂಗನೆಂಬುದಾ
ಭೀಲಪರಾಕ್ರಮಕ್ರಮಮನೆಯ್ದೆ ಜಗಂ ಜಗದೇಕಮಲ್ಲನಾ ॥ 348 ॥

ಕೇಶಿರಾಜ ದಂಡಾಧೀಶ

ಕಂ ॥ ತದ್ಭೂಪಪಾದ ಪದ್ಮಮಿ
ಳದ್ಭೃಂಗಂ ಬ್ರಾಹ್ಮಶೀಲ ಶಂಬಾಪಾತ
ಪ್ರೋದ್ಭಿಂನ ಕಳಿನಗಂ ನಿ
ತ್ಯೋದ್ಭವನಿಧಿ ಕೇಶಿರಾಜ ದಂಡಾಧೀಶಂ ॥ 349 ॥

ಭಾರದ್ವಾಜ

ಕಂ ॥ ಬ್ರಹ್ಮನ ಕುಲದೊಳ್ ಪರಮ
ಬ್ರಹ್ಮವಿದಂ ಸಕಳ ಮುನಿಜನಾನಂದಕರಂ

ಬ್ರಹ್ಮರ್ಷಿ ಪುಟ್ಟಿ ನೆಗಳ್ದನ
ಜಿಹ್ಮ ಚರಿತ್ರಾಂಬುರಾಶಿ ಭಾರದ್ವಾಜಂ ॥ 350 ॥

ಚಾಮುಂಡರಾಜ

ಕಂ ॥ ಒಗೆದಂ ಬ್ರಾಹ್ಮಗುಣಾಕರ
ನಗಣ್ಯ ಪುಣ್ಯೋದಯಂ ದಿಶಾಕರಿದನ್ತಾ
ನುಗಕೀರ್ತಿ ಬುಧನುತೋದಾ
ರಗುಣಂ ಚಾಮುಂಡರಾಜನೂರ್ಜಿತ ತೇಜಂ ॥ 351 ॥

ಪಂಪಾದೇವಿ

ಕಂ ॥ ರತಿಯಂ ಪಾರ್ವತಿಯನರುಂ
ಧತಿಯಂ ಭಾರತಿಯನೆಸೆವ ರೂಪಿಂ ಪೆಂಪಿಂ
ಪತಿಹಿತದಿಂ ಚದುರಿಂ ತ
ತ್ಸತಿ ಪಂಪಾದೇವಿ ನಾಡೆಯುಂ ಧಿಕ್ಕರಿಪಳ್ ॥ 352 ॥

ಕೇಶವರಾಜ

ಚಂ ಮಾ ॥ ಮುನಿದಡೆ ಕೇಶಿರಾಜಪೃಥನೀಶ್ವರನಾಜ್ಞೆಗೆ ಸಾಧ್ಯವಾಯ್ತು ಸಂ
ಕನಮಲೆ ಸಂದ ಸಾಂತಳಿಗೆ ಕೊರ್ವಿದಗುರ್ವಿನ ತಾಗರೆಚ್ಚ ಮ
ಲ್ಲನ ನೆಲೆ ಗಾವಟೂರ್ಮೊಗಲ ನಾಟ್ಸರಿವೂರ್ವನವಾಸಿದುರ್ಗವು
ರ್ವಿನವೆನಿಸಿರ್ದ ಕೊಂಡರಟೆ ಹೈವೆ ನೆಗಟ್ತೆಯ ಗುತ್ತಿ ಹೆತ್ತಿಳಂ ॥ 353 ॥

ಮ ಸ್ರ ॥ ನಿರುತಂ ದಣ್ಡಾಧಿಪಂ ಕೇಶವನ ಸದೃಶ ಸನ್ಮೂರ್ತಿಯಂ ಕಂಡು ಕಾಮಂ
ಪರಿಮುಕ್ತಾಕಾರನಾದಂ ಬಟಿಕವನ ದುರ್ವಾರ ವಿಕ್ರಾನ್ತಮಂ ಕೇ
ಸರಿಕಣ್ಡಂದಿನ್ದಡಂಗಿತ್ತವನ ಬಹಳ ತೇಜೋಂಶು ಸಂದೋಹದೊಂದೆ
ಳ್ತರವಂ ಕಾಣುತ್ತೆ ನಿಚ್ಚಂ ಮುಗುಳುದಯಿಪನಕ್ಷೋಭನೋ ವಾಸರೇಂದ್ರಂ
॥ 354 ॥

ಕಂ ॥ ಇನಜಂ ಕೊಟ್ಟತೊವಲ್ಮೆಬಿ
ಮುನಿಕೊಟ್ಟಡಗಾ ದಧೀಚಿ ಕೊಟ್ಟೆಲ್ವುಗಳೇಂ
ಧನದನ್ತೆಸೇವ್ಯಮೇ ಪೇ
ಟೆನುತಂ ಹೊಂಗಳನೆ ಕೇಶವಂ ಕುಡುತಿರ್ಪಂ ॥ 355 ॥

ಶಾ ವಿ ॥ ಶ್ರೀಕಾಂತಾಪತಿ ವಿಕ್ರಮಾರ್ಜಿತಬಲಿಕ್ಷೋಣೀತಳಂ ವಿಶ್ವಲೋ
ಕೈಕಸ್ತುತ್ಯದಶಾವತಾರಯುತನುದ್ಯಚ್ಛಂಖಚಕ್ರಾಬ್ಜಲ

ಕ್ಷ್ಮಾಕೀರ್ಣಾತ್ಮಕರಾಗ್ರನೆನ್ನವೊಲಿವಂ ತಾನೆಂದು ಸಾನಂದದಿಂ
ದಾಕಲ್ಪಾಯುವನೀಗೆ ಕೇಶವಚಮೂಪಂಗಾಗಳುಂ ಕೇಶವಂ ॥ 356 ॥

ಚಂ ಮಾ ॥ ಉದಯಿಸಿದಂ ಪ್ರತಾಪನಿಧಿ ಕೇಶವದೇವನುದಾತ್ತಸಚ್ಚರಿ
ತ್ರದ ನೆವದಿಂದೆ ತತ್ಕೃತಯುಗಂ ಪರಿವರ್ತಿಸೆ ತನ್ನತರ್ಕ್ಯವಾ
ಕ್ಯದ ನೆವದಿಂದೆ ರಾಮವಿಶಿಖಂ ಪರಿವರ್ತಿಸೆ ಕೀರ್ತಿ ರುಂದ್ರಭಾ
ವದ ನೆವದಿಂದೆ ವಾಸರದೊಳಂ ಪರಿವರ್ತಿಸೆ ಚಂದ್ರಿಕೋತ್ಕರಂ ॥ 357 ॥

ಕಂ ॥ ಪುಸಿಯಲ್ಲು ಬೇಟ್ಪರಂ ಪು
ಟ್ಟಿಸುವ ಬೆಸಂ ಬರ್ಮನದು ಸಮಂತವರಂ ರ
ಕ್ಷಿಸುವ ಬೆಸಂ ತನ್ನದು ಗಡ
ನಿಸದಂ ಕೇಶವನಿದೇನುದಾತ್ತನೊ ಧರೆಯೊಳ್ ॥ 358 ॥

ಮ ವಿ ॥ ಧುರದೊಳ್ ಕೇಶವದಂಡನಾಥನ ಭುಜೋತ್ಖಾತಾಸಿಘಾತಕ್ಕೆ ವಿ
ಶ್ವ ರಿಪೂರ್ವೀಶ್ವರರಂಜಿ ಹುತ್ತಡರ್ದು ಜೀವಂಬೆತ್ತೊಡೆಮ್ಮೆಮ್ಮ ಕಾಂ
ತರನೊಲ್ದಿಂತಿದು ರಕ್ಷಿಸಿತ್ತಿದುವೆ ದೈವಂ ತಾನೆನುತ್ತಾ ವಧೂ
ತ್ಕರದಿಂದಾದುದು ಹುತ್ತನೂದುವ ಕೃತವ್ಯಾಪಾರಮೀ ಧಾತ್ರಿಯೊಳ್ ॥ 359 ॥

ಮ ವಿ ॥ ಮುರವಿದ್ವೇಷಿಗದೆನ್ತು ವಾರ್ಧಿಸುತೆಯುಂ ತತ್ಸತ್ಯಭಾಮಾ ಮನೋ
ಹರಿಯುಂ ಶಂಭುಗದೆಂತು ಪಾರ್ವತಿಯುವಂತಾ ಗಂಗೆಯುಂ ಸ್ತ್ರೀಯರಾ
ದರೆನಿಪ್ಪಂತಿರೆ ಕೇಶವಂಗೆನುತ ಲಕ್ಷ್ಮೀದೇವಿಯುಂ ಭಾಗ್ಯಭಾ
ಸುರೆಯಪ್ಪಾ ಸಿರಿದೇವಿಯುಂ ಸತಿಯರಾದರ್ಲೋಕ ಸಂಸ್ತುತ್ಯೆಯರ್
॥ 360 ॥

ದೋಣರಾಜ

ಮ ಸ್ರ ॥ ತದಮಾತ್ಯಂ ಕೀರ್ತಿವೆತ್ತಂ ಧರೆಯೊಳನುಪಮಂ ದೋಣರಾಜಂ ಬುಧೇಷ್ಟ
ಪ್ರದಚಂಚತ್ಕಲ್ಪಭೂಜಂ ನಿಜಕುಲಕುಮುದಾನಂದರಾಜಂ ವಧೂದ್ಯ
ಜ್ಮದಭೃಂಗೀಹರ್ಷಸಂಪಾದಕವದನಸರೋಜಂ ಸುಶೀಲಾಂಗರಾಜಂ
ವಿದಿತೋದ್ಯತ್ಸತ್ಯಭಾಜಂ ರಿಪುಗಜಮೃಗರಾಜಂ ಸಮಗ್ರೋಗ್ರತೇಜಂ
॥ 361 ॥

ನರಸಿಂಗನಾಯಕ

ಕಂ ॥ ಹುಸಿ ನೆಲಸದ ನುಡಿ ಲೋಭದ
ದೆಸೆ ಪೊರ್ದದುದಾರಮೊಳ್ಪು ಕುಂಡದ ಚರಿತಂ

ಮಸುಳದ ಜಸದೆಸಕಂ ಭಾ
ವಿಸುವೊಡೆ ನರಸಿಂಗನಾಯಕಂಗಿವು ಸಾಜಂ ॥ 362 ॥

ತಿಕ್ಕರಸ

ಕಂ ॥ ಸಚಿವಾಗ್ರಣಿಕಾರ್ಯ್ಯಾ ಕಾ
ರ್ಯ್ಯಚತುರತಾಗುಣ ಬೃಹಸ್ಪತಿನುತಂ ನಿತ್ಯೋ
ಪಚಿತ ಯಶೋಧನನಾಶ್ರಿತ
ನಿಚಯ ವಿವರ್ಧಕನುದಾರನಿಧಿ ತಿಕ್ಕರಸಂ ॥ 363 ॥

ಮಮ್ಮರಸ

ಕಂ ॥ ಪ್ರತಿಹಸ್ತಂ ದಾನಗುಣಾ
ಪ್ರತಿಹಸ್ತಂ ಚಾರುಚಂದ್ರನಿರ್ಮ್ಮಳಕೀರ್ತಿ
ದ್ಯುತಿವಿಸರಾಚ್ಛಾದಿತ ದಿ
ಕ್ಪತಿ ಮಮ್ಮರಸಂ ಧರಿತ್ರಿಯೊಳ್ಪೆಸರ್ವೆತ್ತಂ ॥ 364 ॥

ರೆಬ್ಬರಸ

ಕಂ ॥ ಅಮಳಗುಣಮಳಕುಲನ
ತ್ಯಮಳ ಚರಿತ್ರೈಕನಿಲಯನಮಳನಯಪ್ರ
ಕ್ರಮನಮಳಯಶೋರೋಚಿ
ಸ್ಸಮಾವೃತಾಶಾಳಿಯೆನಿಸಿದಂ ರೆಬ್ಬರಸಂ ॥ 365 ॥

ಚಟ್ಟಿರಾಜ

ಕಂ ॥ ಕರಣಂ ಬ್ರಾಹ್ಮ್ಯ ಚರಿತ್ರಾ
ಭರಣಂ ಶ್ರೀವರ ಪದಾಬ್ಜಯುಗ ಸೇವಾ ಷ
ಟ್ಚರಣಂ ವಿಪದ್ವಿಪಕ್ಷಿ
ತ್ಯರಣಂ ಶ್ರೀಚಟ್ಟಿರಾಜನೆಸೆದಂ ಧರೆಯೊಳ್ ॥ 366 ॥

ಮೈಲಾರ

ಕಂ ॥ ಕರಣಶಿರೋಮಣಿ ವಿಬ್ಧೋ
ತ್ಕರ ಚಿಂತಾಮಣಿ ನಿಜಾನ್ವಯಾಂಬರ ಭಾಸ್ವ
ತ್ತರಣಿಯೆನಲ್ಪೆಸರ್ವಡೆದಂ
ಧರೆಯೊಳ್ಮೈಲಾರನಮಳ ಚರಿತ್ರಾಧಾರಂ ॥ 367 ॥

ಪೋತರಸ

ಕಂ ॥ ಪರಿಚಿತ ಬಹುನಾಟಕಕಾ
ವ್ಯರಸಂ ಬುಧಜನ ಮನೋಮಧುಬ್ರತ ನುತತಾ
ಮರಸಂ ಕರಣಾಗ್ರಣಿ ಪೋ
ತರಸಂ ಸ್ವಕುಲ ಪ್ರಭೂತಜನ ಸಿದ್ಧರಸಂ ॥ 368 ॥

ಮಹದೇವನಾಯಕ

ಕಂ ॥ ಪರಮ ಶ್ರೀಕೇದಾರೇ
ಶ್ವರದೇವ ಪದಾಬ್ಜ ಭೃಂಗನನವರತ ಕೃತ್ತೋ
ದ್ಧುರ ಶಿವಕಥಾಪ್ರಸಂಗಂ
ಕರಣದ ಮಹದೇವನಾಯಕಂ ಮನುಚರಿತಂ ॥ 369 ॥

ಮ ವಿ ॥ ಧರೆನಿಚ್ಚಂ ಪೊಗಳ್ಗುಂ ಗೃಹೀತ ಕಮಳಾದ್ಯಗ್ರೋಚಿಯಂ ನಾಚಿಯಂ
ಸರಸಾನೇಕ ಕವಿಬ್ರಜಾಗ್ರನಿಹಿತೋದ್ಯತ್ಪ್ರೇಮನಂ ಸೋಮನಂ
ಸ್ಥಿರಚಿತ್ತಾತ್ತ ಮುಕುನ್ದನಂ ಸುಜನನಂ ಗೋವಿನ್ದನಂ ಕೀರ್ತಿಪಾಂ
ಕುರಿತ ವ್ಯೋಮಕರಣ್ಣನಂ ಪದಪಿನಿಂ ಮಾರ್ತಣ್ಣನಂ ಸಂತತಂ ॥ 370 ॥

ರೇಚಣ

ಚಂ ಮಾ ॥ ವನಜಜ ಚಿತ್ತಜಂ ವಿಭು ಮರೀಚಿಗೆ ಕಶ್ಯಪನಾತ್ಮಜಾತನಾ
ತನ ಕುಲದಲ್ಲಿ ರೇವಣ ಚಮೂಪಸುತಂ ವಿಭುಸೋಮನಾಥನಾ
ತನ ತನಯಂ ಶಿವೈಕಶರಣಂ ವಿಭುದಾಗ್ರಣಿ ಚಟ್ಟಿರಾಜನಾ
ತನ ಸತಿ ಮಾದಿಯಕ್ಕನವರ್ಗಾತ್ಮಭವಂ ಸುಕೃತಾರ್ಥಿ ರೇಚಣಂ ॥ 371 ॥

ಕಂ ॥ ದುರಿತಾರಿ ಮನೋಭಂಗಮ
ನುರುಲಕ್ಷ್ಮೀನಾಟ್ಯರಂಗಮಂ ಸತ್ಸುಖ ಸಾ
ಗರ ಘನ ತರಂಗಮಂ ರೇ
ಚರಸಂ ಧರ್ಮಪ್ರಸಂಗಮಂ ಪುಟ್ಟಿಸಿದಂ ॥ 372 ॥

ರೇಚರಸ

ಕಂ ॥ ಅಮಳಗುಣನಮಳಕುಳನ
ತ್ಯಮಳಚರಿತ್ರೈಕನಿಳಯನಮಳನಯಪ್ರ
ಕ್ರಮನಮಳಯಶೋರೋಚಿ
ಸ್ಸಮಾವೃತಾಶಾಳಿಯೆನಿಸಿದಂ ರೇಚರಸಂ ॥ 373 ॥

ಪೋತರಸ

ಕಂ ॥ ಪರಿಚಿತಬಹುನಾಟಕಕಾ
ವ್ಯಸರಂ ಬುಧಜನಮನೋಮಧುವ್ರತ ನುತತಾ
ಮರಸಂ ಕರಣಾಗ್ರಣಿ ಪೋ
ತರಸಂ ಸ್ವಕುಲಪ್ರಭೂತಜನಸಿದ್ಧರಸಂ ॥ 374 ॥

ಬಲಿಪುರ

ಮ ಸ್ರ ॥ ಇದು ದಲ್ಲಾನಾಯುಗ ಪ್ರಸ್ಥಿತವಿದಜೊಳೆ ಮುನ್ನಾದಿ ದಣ್ಣಾಧಿಪರ್ಮಾ
ಡಿದ ಶತ್ರಾರಾಮದೇವಾಸ್ಪದ ವಿಪುಳತಡಾಗ ಪ್ರಪಾಸಂಕುಳಂ ಭೂ
ವಿತಂ ತಾನಾದುದಾದಂ ಬಲಿಪುರವಿದು ಧರ್ಮೋದ್ಭವಸ್ಥಾನವಿಂತಿ
ಲ್ಲಿ ದಿಟಂ ಶ್ರೀಕೇಶವ ಸ್ಥಾಪನಮನೋಡರಿಸಲ್ಕಕ್ಕುವತ್ಯಂತ ಪುಣ್ಯಂ ॥ 375 ॥

ಕಂ ॥ ಪರಿಕಿಪೊಡೆ ಸಕಳ ಹೋಮಾ
ಧ್ವರ ಜಪನಿಯಮಂಗಳಿಂದವಾಗದ ಪುಣ್ಯಂ
ದೊರೆಕೊಳ್ಗುಂ ಸಲೆಕೇಶವ
ಪರಮೇಶಾ ಪ್ರತಿಕೃತಿ ಪ್ರತಿಷ್ಠಾವಿಧಿಯಿಂ ॥ 376 ॥

ಕಂ ॥ ಭೂದಾನದ ಪೆಂಪಂ ಸಂ
ಪಾದಿಪೊಡಂತಲ್ಲಿ ಧಾನ್ಯಸಸ್ಯಂಗಳೆನಿ
ತ್ತಾದುವನಿತ್ತುವನಂತ ಫ
ಳೋದಯವಂ ಮಾಱ್ಕುವೆಂದೊಡೇನೆಂದಪುದೋ ॥ 377 ॥

ಕೇಶವಪುರ

ಚಂ ಮಾ ॥ ಇದು ಕೃತಕಲ್ಪಜನ್ಮನಿಲಯಂ ದಿಟಮಿಂತಿದು ವಿಶ್ವವೇದದ
ಭ್ಯುದಯನಿವಾಸಮಿಂತಿದು ಪವಿತ್ರಚರಿತ್ರಗುಣಾಕರಂ ಸಮಂ
ತಿದು ಘನಪುಣ್ಯಸಂಪದನಿಕೇತನಮೆಂಬಿನಮೊಪ್ಪಿ ತೋಱುತಿ
ರ್ಪುದು ಸಲೆ ವೀರಕೇಶವಪುರಂ ಧರಣೀನವರತ್ನನೂಪುರಂ ॥ 378 ॥

ಕೇಶವ ದೇವಾಲಯ

ಮ ಸ್ರ ॥ ತರುಪಾಷಾಣಾದಿಕರ್ಮಾಂತರಪರಿಣತಿಯಂ ಪದ್ಮಜಂ ಲೋಕದೊಳ್ ಬಿ
ತ್ತರಿಸಲ್ವೇೞ್ಕುಂ ದಲೆಂದಿಂತಿದಜೊಳೆ ಪಡಿಯಚ್ಚಾಗಿ ಮಾಡಿಟ್ಟನೆಂಬಂ
ತಿರೆ ಚೆಲ್ವಂ ತಾಳ್ದಿ ದೃಙ್ಮಂಡನಮೆನಿಪ ಲಸತ್ಕೇಶವಾವಾಸಮಂ ನಿ
ರ್ಭರಭಕ್ತಿಭ್ರಾಜಿತಂ ಮಾಡಿಸಿದನೆಸೆಯೆ ದಂಡಾಧಿಪಂ ಕೇಶಿರಾಜಂ ॥ 379 ॥

ಲಕ್ಕರಸ

ಕಂ ॥ ಪರಿಕಿಪೊಡೆ ಶೌರ್ಯನಿಧಿ ಭಾ
ಸುರ ತೇಜೋನಿಧಿ ವಿವೇಕನಿಧಿ ವಿಮಳಯಶೋ
ತ್ಕರನಿಧಿಯುದಾರ ನಿಧಿಯೆನೆ
ಪರಿದುಂ ಪೆಸರ್ವೆತ್ತನೆ ಲಕ್ಕರಸಂ ಧರೆಯೊಳ್ ॥ 380 ॥

40) ಬಳ್ಳಿಗಾವೆ 231, E.C. XIV (R), ಕ್ರಿಶ. 1181

ಇದರಲ್ಲಿ ಕಳಚುರ್ಯ ದೊರೆಯಾದ ಆಹವಮಲ್ಲನ ಪ್ರಧಾನ ಕೇಶವರಾಜ ಮುಂತಾದವರು ಬಳ್ಳಿಗಾವೆಯ ಗವರೇಶ್ವರದೇವರಿಗೆ ಅಪುತ್ರಿಕಮೃತಕಧನವನ್ನು ದತ್ತಿ ನೀಡಿದಂತೆ ಹೇಳಿದೆ.

ಶಿವಸ್ತುತಿ

ಸ್ರಗ್ಧರೆ ॥ ಶ್ರೀಮಂನಮ್ರಾಮರೇಶ ಪ್ರಕರಮಕುಟಮಾಣಿಕ್ಯಜಾಳ ಪ್ರಭಾಳಿ
ವ್ಯಾಮಿಶ್ರಾಕೀರ್ಣವರ್ಣಂ ಪದಸರಸಿಜವಾಪಾದಪಂಕೇಜಕಂ ಹೃ
ದ್ವ್ಯೋಮಾವಾಸಂ ತ್ರಿಮೂರ್ತೀಶ್ವರರ ವರಗುಣಂ ತ್ರೈಜಗತ್ಕಾರ್ಯವಂತಾ
ವ್ಯೋಮಾಧೀಶಂ ಮಹೇಶಂ ಕುಡುಗಭಿಮತಮಂ ಕೇಶಿರಾಜಂಗೆ ನಿಚ್ಚಂ
॥ 381 ॥

ಆಹವಮಲ್ಲ

ಉ ಮಾ ॥ ಗೌಳಮುದದ್ವಿಪದಕ್ಷುಭಿತ ಕೇಸರಿ ಚಾಳಿಕೆ ಸೈನ್ಯಮಚ್ಚ ಸಂ
ಚಾಳಿತಗಾಳನಂಧ್ರ ವಸುದೇಶ ಘನಾಘನ ದಕ್ಷಿಣೌನಿಳಂ
ಮಾಳವ ರಾಜಹಂಸ ನಿಚಯೋದ್ಗತ ಮೇಘನಿಕಾಯ ನಿಸ್ವನಂ
ಪಾಳಿಸಿದಂ ಮಹೀತಳಮನಾಹವಮಲ್ಲ ನೃಪಾಳನಟ್ಕಿಱಿಂ ॥ 382 ॥

ಚಂದುಗಿದೇವ ದಂಡನಾಥ

ಕಂ ॥ ಗಂಡಿನ ವಿಜಯಾದಿತ್ಯನ
ಮಂಡಳಮಂ ಸುಟ್ಟು ಚೋಳ ಹೊಯ್ಸಳ ರಾಜ್ಯಂ
ಗೊಂಡುಱಿದರಿದ ನೃಪಾಳರ
ನಂಡಲೆವಂ ದಂಡನಾಥ ಚಂದುಗಿದೇವಂ ॥ 383 ॥

ರೇಚಣ ದಂಡನಾಥ

ಉ ಮಾ ॥ ವೈರಿನೃಪಾಲಪಟ್ಟಮಹಿಷೀವರಪಾಂಡುರಗಂಡಕಾಂತಿಯಿಂ
ಸೈರಣೆಗೆಟ್ಟ ಚಾತಕಕುಳಂ ಹಿಮದೀಧಿತಿಯೆಂದು ಷಟ್ಪದಂ
ಚಾರುಸಿತಾಬ್ಜಮೆಂದು ಕಳಹಂಸಕುಳಂ ಬಿಸಕಾಂಡಮೆಂದು ಸಂ
ಚಾರಿಸಿ ಲೋಕಮಂ ನಗಿಸುಗುಂ ವಿಭುರೇಚಣದಂಡನಾಥನಾ ॥ 384 ॥

ಸೋವಣಚಮೂಪ

ಚಂ ಮಾ ॥ ಪರಹಿತವೃತ್ತಿಯೊಳ್ ಶಿಬಿ ಪರಾರ್ಥದೊಳಾ ರವಿನಂದನಂ ನೃತಾ
ದರತೆಗೆ ಧರ್ಮನಂದನನನೆ ಮುಂ ತೊಣೆಯಪ್ಪೊಡದಕ್ಕುಮಲ್ಲದಾ
ಪರಹಿತವೃತ್ತಿಗಂ ವಿತರಣೋನ್ನತಿಗಂ ವರಸತ್ಯವಾಣಿಗಂ
ದೊರೆಯೆನಲಾರೊ ಸೋವಣಚಮೂಪತಿಯಂತಿರಿಳಾತಳಾಗ್ರದೊಳ್ ॥ 385 ॥

ಕಾವಣ ದಂಡನಾಯಕ

ಚಂ ಮಾ ॥ ದೆಸೆಯ ಗಜಂಗಳಲ್ಲಿ ಸುರದನ್ತಿ ಮೃಗಾಳಿಗಳೊಳ್ಮೃಗೇಶ್ವರಂ
ಕಸವರದಲ್ಲಿ ರತ್ನನಿಧಿ ನಾಕನಿಕಾಯದೊಳಿಂದ್ರನಬ್ಧಿಯೊ
ಳ್ಮಿಸುಗುವ ಪಾಲ್ಗಡಲ್ ಜಸಮನಾಳ್ದವೊಲೆಂದುವಳಂಬ ಪೆಂಪುವೆ
ತ್ತೆಸೆದನಿಳಾತಳಾಗ್ರದೊಳಣಂ ವಿಭು ಕಾವಣ ದಂಡನಾಯಕಂ ॥ 386 ॥

ಕೇಶವ ದಂಡನಾಯಕ

ಚಂ ಮಾ ॥ ಮನುಚಯ ಸೇವ್ಯವೃತ್ತಿ ನಿಜವೃತ್ತಿ ಪುರಾತನ ರಾಜನೀತಿ ತಾಂ
ತನಗಳವಟ್ಟ ನೀತಿಯೆ ಪರಾರ್ಥಮೆ ತನ್ನ ಭುಜಾಜಿತಾರ್ತ್ಥವಾ
ಳ್ದನ ಮಹಿಮೋನ್ನತಿತ್ವಮೆ ನಿಜೋನ್ನತಿಯಾಶ್ರಿತತುಷ್ಟಿ ತನ್ನದೆಂ
ದೆನಿಪ ನೆಗಳ್ತೆಯಿಂದಲೆ ಸಲೆ ಜೀವಿಸೆ ಕೇಶವ ದಂಡನಾಯಕಂ ॥ 387 ॥

ಕೇಶವಚಮೂಪ

ಚಂ ಮಾ ॥ ಮಲೆವವರಿಲ್ಲ ಗಂಡೆಸೆವರಿಲ್ಲಿದಿರಪ್ಪವರಿಲ್ಲ ತೇಜಮೆಂ
ದುಲಿವವರಿಲ್ಲ ಟೆಂಟಣಿಪರಿಲ್ಲುಱದಿರ್ಪವರಿಲ್ಲ ಕಾಯ್ದು ಬಂ
ದಲೆವವರಿಲ್ಲ ತನ್ನ ಬಿರುದಲ್ಲದೆ ಕಬ್ಬದ ಗೀತದಲ್ಲಿ ಮಾ
ರ್ತಲೆಯವರಿಲ್ಲ ಕೃಷ್ಣವಿಭುಕೇಶವದೇವಚಮೂಪರಾಜ್ಯದೊಳ್ ॥ 388 ॥

ತಿಕ್ಕರಾಜ

ಕಂ ॥ ಬಲ್ಮೆಯ ಮಾತಿನೊಳೇಂ ಕಲಿ
ಕಲ್ಮಷರಹಿತಂಗೆ ತಿಕ್ಕರಾಜಂಗುಱದೀ
ಪುಲ್ಮಾನಸರಂ ದೊರೆಯೆನೆ
ಕಲ್ಮಾಣಿಕದಂತುಟೆಂದೊಡೆಂತಂತೆ ದಿಟಂ ॥ 389 ॥

ಆಚಯ್ಯ

ಕಂ ॥ ಬರವದು ಕೂರ್ತಡೆ ದೆಯ್ವದ
ಬರವದು ಮೇಣೊಲ್ಲದಿರ್ದನಾದಡವನ್ತಾ

ಬರವಂ ಬಾರಿಸುವನೆನ
ಲ್ಬರವಂ ಬಾರಿಸುವನೆಂದುಮೆಂಬಾಚಯ್ಯಂ ॥ 390 ॥

ಸೋವಿದೇವ

ಕಂ ॥ ಭಂಡಾರ ಸೋವಿದೇವಂ
ಭಂಡಾರಂ ವಂದಿಜನಕೆ ಹೊಂಗಳಲೆ ತಕ್ಕಂ
ಬಂಡಾರಿವೆಸರಿನಂನ್ಯ
ರ್ಪಂಡಿತ ನಿವಹಕ್ಕೆ ವಿಷಯರವರೇ ದೊರೆಯರ್ ॥ 391 ॥

ಚಾಮಯ್ಯ

ಕಂ ॥ ಪತಿಯ ಮನದಲ್ಲಿ ಕಾರ್ಯ
ಪ್ರತತಿಯೆ ತನಗುಱದವಂದಿರೆಡೆಯೊಳ್ ಮೃತ್ಯು
ಪ್ರತತಿಯೆ ಬೇಡಲ್ ಸುರಭಿ
ಪ್ರತತಿಯೆ ತಾನೆನಿಸಿ ತೋಱುವಂ ಚಾಮಯ್ಯಂ ॥ 392 ॥

ಬೀಚಿರಾಜ

ಕಂ ॥ ಭಕ್ತಿ ಶಿವಪದದೊಳೆಂದುಂ
ಸೂಕ್ತಿಯೆ ನುಡಿವಲ್ಲಿ ಪರಹಿತಾರ್ತ್ಥದೊಳತ್ಯಾ
ಸಕ್ತಿಯೆನಿಸಿರ್ದ ಗುಣದಿಂ
ದಿಕ್ತತಿಯೊಳ್ಮೆಱೆಯೆ ಬೀಚಿರಾಜಂ ಜಸವಂ ॥ 393 ॥

ದಾಸಿರಾಜ

ಕಂ ॥ ಅರ್ತ್ಥಾರ್ಜನೆಯ ವ್ಯಸನವ
ದರ್ತ್ಥಿಗಳಿಷ್ಟಾರ್ತ್ಥ ಸಿದ್ಧಿಗಲ್ಲದೆ ಪೆಱತೊಂ
ದರ್ತ್ಥಕ್ಕಲ್ಲಂ ಸಲೆ ಶಿವ
ತೀರ್ತ್ಥ ಶ್ರೀದಾಸಿರಾಜನೂರ್ಜಿತ ತೇಜಂ ॥ 394 ॥

ಕರಣರು (ಅಧಿಕಾರಿಗಳು)

ಚಂ ಮಾ ॥ ಸರಸ ಕವೀಂದ್ರ ಸಂಸ್ತುತ ಗುಣರ್ಕಮಾಳಸನ ವಕ್ತ್ರ ಸಂಭವ
ರ್ಪರಹಿತ ಕಾರ್ಯಧುರ್ಯರುಚಿತೋಕ್ತಿ ವಿಳಾಸ ನಿಕಾಯವರ್ಯರಾ
ದರಿತ ಧರಾಮರ ಪ್ರಕರರಬ್ಧಿಸಮಾನಗಭೀರ ಧೀರರೀ
ಶ್ವರಪದಭಕ್ತಿ ಲೋಲರೆನಿಪರ್ಕರಣಂಗಳದೆಂತುನೋಳ್ಪಡಂ ॥ 395 ॥

ವಾಮಶಕ್ತಿಮುನಿ

ಮ ವಿ ॥ ಮುನಿಚಾರಿತ್ರನೆ ಕಾಪಿಲೋನ್ನತಕುಲಂ ರೂಪಸ್ವಿಯೇ ಕೇಶವಂ
ಗೆನಸುಂ ನಚ್ಚಿನ ನಂದನಂ ಶಿವದ್ರುಗೆ ಶ್ರೀವಾಮಶಕ್ತೀಶ ಸ
ನ್ಮುನಿ ಹಸ್ತಾಂಕಿತ ಮಸ್ತಕಂ ಚತುರನೇ ಪೇಳ್ವಾಮಿದೇವಂ ದಿಟ
ಕ್ಕನೆ ಪೆಂಪಿಂ ಚಲದಂಕರಾಮನೊಸೆದಂ ಮೂರುಂ ಪುರಾಮಾರ್ತ್ಯಕಂ ॥ 396 ॥

ಸಾವಿದೇವ ಸಚಿವ

ಚಂ ಮಾ ॥ ಸ್ಥಿರತೆಗೆ ಮೇರು ಸಚ್ಚರಿತದೊಳ್ಮನು ವಾದ್ಯ ಕವೀಂದ್ರವೃತ್ತಿಯೊಳ್
ಸರಸತಿ ತೋಡು ಪಾಸಟಿ ಸಮಂ ಗುಣಮುಳ್ಳಡವರ್ಕೆ ಸೂನುವಾ
ಸ್ಥಿರತೆಗವಾಚರಿತ್ರತೆಗವಾರಸವೃತ್ತಿ x ವಾರ್ಧರಿತ್ರಿಯೊ
ಳ್ದೊರೆಯೆನೆ ಸಾವಿದೇವ ಸಚಿವಂ ಮುದದಿಂ ನುಡಿದಂ ಯತಾರ್ಥವಂ ॥ 397 ॥

ಬಲಿಪುರ

ಕಂ ॥ ರಾಕ್ಷಸನೆನಿಸಿದ ಬಲಿಯಂ
ದೀಕ್ಷೇತ್ರದೊಳಿರ್ದುಕೊಟ್ಟು ಮನ್ವಂತರದೊಳ್
ಸಾಕ್ಷಾದಿಂದ್ರನೆಯೆನಿಸಿದ
ನಾಕ್ಷರಿಕಂ ಪೊಗಳಲಱಿಯೆನಾಂ ಬಲಿಪುರಮಂ ॥ 398 ॥

ವ್ಯಾಪಾರಿಗಳು

ಚಂ ಮಾ ॥ ಸ್ಥಿರಗತಿ ಧೀರರಾಶ್ರಿತ ಜನೇಷ್ಟಫಳಪ್ರದರೇಕವಾಕ್ಯರೀ
ಶ್ವರ ಪದಭಕ್ತರಾಱು ಸಮಯಂಗಳ ಸೀಮೆ ಪೊದಲ್ದ ನೀತಿಗಾ
ಕರವೆನಿಸಿರ್ದ ಸಚ್ಚರಿತರುದ್ಧೃತಸತ್ವರುದಗ್ರಪುಣ್ಯರಾ
ದರಿತವಿಶಿಷ್ಟರೆಂಬುದಿದು ಸಂಸ್ತುತಿಯಲ್ತು ಬಣಂಜು ಧರ್ಮರಂ ॥ 399 ॥

41) ಚಿಕ್ಕಮಾಗಡಿ 75, E.C. XIV (R), ಕ್ರಿಶ. ಸು. 1182

ಇದರಲ್ಲಿ ಕಳಚುರ್ಯ ದೊರೆಯಾದ ಆಹವಮಲ್ಲನ ಆಳಿಕೆಯಲ್ಲಿ ಸಾಮಂತ ಶಂಕರನು ಮಾಗುಂಡಿಯಲ್ಲಿ ಮಾಡಿಸಿದ ರತ್ನತ್ರಯಬಸದಿಗೆ ವಸುಧೈಕಬಾಂಧವ ರೇಚರಸನು ಗ್ರಾಮವನ್ನು ದತ್ತಿ ಬಿಟ್ಟಂತೆ ಹೇಳಿದೆ.

ಜಂಬೂದ್ವೀಪ

ಕಂ ॥ ವಾರ್ವಳಯನಿಕರಮೆಂಬಾ
ನೀರ್ವೇಲಿಯ ನಡುವೆ ನೆಱೆದು ಜಂಬೂಚಿಹ್ನಂ

ಸಾರ್ವಿನಮೀಪ್ಸಿತಫಳಮಂ
ಪಾರ್ವಿನಮೆಳೆಗಿಂಬಿದಾಯ್ತು ಜಂಬೂದ್ವೀಪಂ ॥ 400 ॥

ಕಂ ॥ ಬಳಿಕಂ ನಲಪಿಂ ಸಾರ್ದಳ್
ಚಳುಕ್ಯ ರಾಜ್ಯರಮೆ ಬಿಜ್ಜಲೋರ್ವೀಪತಿಯಂ
ಕಳಚುರಿ ತಿಳಕನನೇಂ ಪೆ
ಣ್ಗಳ ಚಿತ್ತಂ ಹೊಸತನಱಸುತಿರ್ಪುದು ಹೊಸತೇ ॥ 401 ॥

ಚಾಳುಕ್ಯರು

ಕಂ ॥ ಕ್ರಮದಿಂ ವಿಕ್ರಮದಿಂ ದಾ
ನಮನೋಹರವೃತ್ತಿಯಂ ಚಳುಕ್ಯನೃಪಾಳೋ
ತ್ತಮರಾತ್ಮಕೀರ್ತಿಯಾ ಭೂ
ರಮಣಿಗೆ ಮುತ್ತುಗಳ ತೊಡವೆನಲ್ ಪ್ರಿಯರಾದರ್ ॥ 402 ॥

ಬಿಜ್ಜಳ

ಚಂ ಮಾ ॥ ಅಸಿಲತೆ ಕೂಡೆ ಗಂಡುಮಗುಟ್ದಿತ್ತಹಿತಾವನಿಪಾಳಭೂಮಿ ಪೆ
ಣ್ಮಸಗಿದುದಂಜದಾಂತವರೊಳಾಸುರಕಾಂತೆಯರ್ಗಾಂತ ಬೇಟಮು
ಬ್ಬಸಮೆನಿಸಿತ್ತು ಕಾದಿದೆಡೆ ನೆತ್ತರ ಜೌಗಿನೆ ಕೇಸೊಱಿಂತೆಯಂ
ಪಸರಿಸಿತೆಂದು ಬಂದು ಶರಣೆಂಬುದು ಬಿಜ್ಜಳನಂ ದ್ವಿಷಜ್ಜನಂ ॥ 403 ॥

ಮ ಸ್ರ ॥ ಬಳೆದಂತಾ ಬಿಜ್ಜಳಂಗೇನದಟೆಸೆದುದೊ ಪೇಟ್ ಸಿಂಹಳಾಧೀಶ್ವರಂ ಬೆ
ತ್ತಳಿಗಂ ನೇಪಾಳಕಂ ಘಟ್ಟಿವಳನಡಪದಾಳ್‌ಕೇರಳಂ ಗುರ್ಜರಂ ಕ
ಮ್ಮಳಿಗಂ ಮತ್ತಾ ತುರುಷ್ಕಂ ಕುದುರೆವೆಸದವಂ ಲಾಳನಾದಚ್ಚುಳಾಯ್ತಂ
ಹೆಳೆಯಂ ಪಾಂಡ್ಯಂ ಕಳಿಂಗಂ ಕರಿಪರಿಚರನಾಗಾಳ್ವೆಸಂಗೆಯ್ಯೆ ನಿಚ್ಚಂ ॥ 404 ॥

ರಾಯಮುರಾರಿ ಸೋಯಿದೇವ

ಮ ಸ್ರ ॥ ಕ್ರಮದಿಂ ಕರ್ಣಾಟಮಂ ಕುಂತಳಮನೊಲವಿನಿಂ ತಿಳ್ದಿ ತಟ್ಕೈಸಿ ರಮ್ಯಾಂ
ಗಮನಿಂಬಿಂ ಬಿಂಬಿಪೊಳ್ಪಂ ಪಡೆದು ಪೃಥುಲಲಾಟಕ್ಕೆ ಕಾಂಚೀಪ್ರದೇಶ
ಕ್ಕೆ ಮನಂಬೆತ್ತೆಯ್ದೆ ರಾಗಂಬುದಿದ ಕರಸರೋಜಾತಮಂ ನೀಡಿಯಾರಾ
ಯಮುರಾರಿಕ್ಷೋಣಿಪಂ ಮೇದಿನಿಯನಿನಿಸುವಂದೇಕಭೋಗ್ಯಕ್ಕೆ ತಂದಂ
॥ 405 ॥

ಸಂಕಮ

ಕಂ ॥ ಸಂಕನ ಕೀರ್ತಿಪ್ರಭೆಯಿಂ
ದಂ ಕಾಮಿನಿ ಭೂಮಿ ಗೌರರುಚಿಯಿಂದೆಸೆದೇಂ

ಶಂಕಿನಿಯಾದಳೊ ಗೀತಾ
ಲಂಕೃತನಾನಾವಿನೋದವಿಳಸಿತಗತಿಯಿಂ ॥ 406 ॥

ಮ ಸ್ರ ॥ ಕ್ರಮದಿಂದಾ ಬಿಜ್ಜಲೋರ್ವೀಪತಿಗೆ ಪಡೆದು ಸಪ್ತಾಂಗಸಂಪತ್ತಿಯಂ ಮ
ತ್ತಮದಂ ತಚ್ಚಕ್ರಿಯಿಂದತ್ತಲುಮೊದವಿದರಾಜಾವಳೀ ಲೀಲೆಗಂ ತಂ
ದುಮಿದೇ ಸಪ್ತಾಂಗಮಂ ಕಾಣಿಸಿದನೆನೆ ಜಗಂ ಮಂತ್ರದಿಂ ತಂತ್ರದಿಂ ವಿ
ಕ್ರಮದಿಂ ಶ್ರೀಯಿಂ ಸದಾಚಾರದಿನೊಸೆದೆಸೆದಂ ರೇಚಿದಂಡಾಧಿನಾಥಂ
॥ 407 ॥

ರೇಚರಸ

ಮ ವಿ ॥ ಕಳುಚುರ್ಯ್ಯಕ್ಷಿತಿಪಾಳರಾಜ್ಯಲತೆ ಪರ್ವಲ್ ತನ್ನ ದೋಶ್ಶಾಖೆಯಂ
ವಿಳಸನ್ಮಂದರಸಾನುಗಂ ವಿಬುಧಸೇವ್ಯಂ ವಿಸ್ತೃತಚ್ಛಾಯನ
ಸ್ಖಳಿತೌದಾರ್ಯವಿಳಾಸಭಾಸಿ ಸಮನಸ್ಸಂಪೂರ್ಣನುದ್ಯದ್ಯಶಃ
ಫಳದಿಂ ರೇಚಣದಂಡನಾಥನೆಸೆದಂ ಲೋಕೈಕಕಲ್ಪದ್ರುಮಂ ॥ 408 ॥

ಮ ವಿ ॥ ಜಿನನಂ ತನ್ನ ಮನಂ ಮನಃಪ್ರಕೃತಿಯಂ ಸದ್ವಿದ್ಯೆಯಾವಿದ್ಯೆಯಂ
ತನುವಂತಾತನುವಂ ವಿಳಾಸಮದನುದ್ಯಲ್ಲಕ್ಷ್ಮಿಯಾಲಕ್ಷ್ಮಿಯಂ
ವಿನುತೌದಾರ್ಯಮದಂ ಜಗಂ ಜಗಮನಿಂಬಿಂ ಕೀರ್ತಿಯಾಲಿಂಗಿಸಲ್
ಜನವಂದ್ಯಂ ವಿಭು ರೇಚಿರಾಜನೆಸೆದಂ ಚಾರಿತ್ರರತ್ನಾಕರಂ ॥ 409 ॥

ಚಂ ಮಾ ॥ ಕವಿತತಿ ಬಲ್ಮೆಗೋಲಗಿಸೆ ಕಾಮಿನಿಯರ್ ಸೊಬಗಿಂಗೆ ಸೋಲೆ ಬೇ
ಟ್ಟಿವರ್ಗಳುದಾರವೃತ್ತಿಗೊಲವಿಂ ನರಶಾಸನಮಾಗೆ ರಾಜ್ಯಮು
ದ್ಭವದಿನೊಡರ್ಚೆ ಜೈನಸಮಯಾಂಬುಧಿ ಕೀರ್ತಿಸುಧಾಂಶುವಿಂ ಪೊದ
ಟ್ಟೆವಡೆಯೆ ರೇಚಿರಾಜನೆಸೆದಂ ಜಸದಿಂ ವಸುಧೈಕಬಾಂಧವಂ ॥ 410 ॥

ಚಂ ಮಾ ॥ ನಡೆದ ನೆಲಂ ರಣೋರ್ವರೆಯೊಳಂತನಿತುಂ ತನಗಜ್ಜಪಜ್ಜರಿಂ
ಪಡೆದ ನೆಲಂ ದಲೆಂಬನಸಿಗನ್ಯನೃಪಾಳರನಿಕ್ಕದುಂತೆ ಕಿ
ಚ್ಚೊಡೆ ಕಡುದೋಷಮೆಂಬನಸಹಂ ಮಿಗೆ ಬೆಂಗುಡೆ ಪತ್ತೆ ತಾನೆ ಬೆಂ
ಗುಡುವವೊಲೆಂಬನೇನದಟನೋ ಕಲಿರೇಚಣದಂಡನಾಯಕಂ ॥ 411 ॥

ಚಂ ಮಾ ॥ ಅನುಪಮದಾನ ಶೌರ್ಯ ರಣಶೌರ್ಯಮನೇವೊಗಟ್ಟಿಪ್ಪೆನಾಂ ದ್ವಿಷ
ಜ್ಜನಪರೊಳೊಂದುವಚ್ಚರಸೆಯರ್ಗ್ಗೆ ಸಯಂಬರಮಾಗೆ ಸಗ್ಗದೊಳ್
ಜನಿಯಿಸಿತಿಂದ್ರಭೂರುಹಕೆ ತೋರಣದಿಂ ತವಿಲೆಂಬುದೆಯ್ದೆ ಮೇ
ದಿನಿ ವಸುಧೈಕಬಾಂಧವಚಮೂಪತಿ ರೇಚಣನೇಂ ಕೃತಾರ್ಥನೋ॥ 412 ॥

ಚಂ ಮಾ ॥ ಪೆಡೆವಣೆ ಶೇಷನೊಳ್ ಸರಸಿಜೋದರನಂಬುಧಿಯೊಳ್ ಮೃಗಾಂಗಮಂ
ದುಡುಪನೊಳದ್ರಿಜಾರ್ಧಮಭವಾಂಗದೊಳಾಮದ ಲುಬ್ಧಭೃಂಗಮಿ
ರ್ಪೆಡೆ ದಿಗಿಭಂಗಳೊಳ್ ಕುಱುಪುದೋರ್ಪಿನೆಗಂ ಜಗಮಂ ಮುಸುಂಕಿತಿಂ
ಗಡಲೆನೆ ಕೀರ್ತಿ ರೇಚನೆಸೆದಂ ಜಸದಿಂ ವಸುಧೈಕಬಾಂಧವಂ ॥ 413 ॥

ಉ ಮಾ ॥ ಶ್ರೀವಚ್ಚಂ ಸಿರಿಯಿಂ ಸಮೃದ್ಧನೆಸೆವಾ ನಾಗಾಂಬಿಕಾಸೂನು ಭೋ
ಗಾವಾಸಂ ವಸುಧೈಕಬಾಂಧವನುದಾರಂ ಸ್ತುತ್ಯಗೌರೀಸುಖ
ಶ್ರೀವಿಷ್ಟಂ ವೃಷಭಧ್ವಜಪ್ರಿಯತಮಂ ನಾರಾಯಣಾತ್ಮೋದ್ಭವಂ
ಭಾವಂಬೆತ್ತಿರೆ ಚೆಲ್ವನೆಂದೆನಿಸಿದಂ ಶ್ರೀರೇಚಿದಂಡಾಧೀಪಂ ॥ 414 ॥

ನಾಗರಖಂಡ

ಚಂ ಮಾ ॥ ಕುಸುಮರಜಂ ರಸಾವಳಿ ತಳಿರ್ ಸೊವಡಾಡುವ ಕೀರಜಾಳಮಂ
ಬೆಸಕದೆ ಚೆಲ್ವುವೇಱಿದ ನೆಲಂ ನೆಲೆವೆರ್ಚಿದ ಪೂಗೊಳಂ ಬಿಸು
ರ್ಪೆಸಗದ ನುಣ್ಬಸಿಲ್ ಸುೞಿವ ಕಮ್ಮೆಲರೀಕ್ಷಿಸೆ ಹಚ್ಚನೊಪ್ಪುವಾ
ಗಸಮೆಸೆಯಲ್ಕೆ ನಾಡೆಸೆವುದಿಂತು ಬಸಂತದ ಸೃಷ್ಟಿಯೆಂಬಿನಂ ॥ 415 ॥

ಕಂ ॥ ಮೇದಿನಿಗೆ ಬೊಪ್ಪದೇವನಿ
ನಾದುದು ಹಗೆಹುಗದಬಾಳ ಬಾಳ್ವೇಲಿಯವಂ
ಗಾದಳ್ವಲ್ಲಭೆ ವಿನುತ
ಶ್ರೀದೇವಿಯವರ್ಗೆ ಪುಟ್ಟಿದಂ ಸೋಮನೃಪಂ ॥ 416 ॥

ಚಂ ಮಾ ॥ ನುಡಿಗಲಲಲಂದೆ ಮುದ್ದುನುಡಿಸತ್ಯಪತಾಕನೆನಿಪ್ಪುದೊಪ್ಪಿ ದ
ಟ್ಟಡಿ ನಿಗಳಂಕಮಲ್ಲನೆನೆ ರಾಜಿಪುದೋಜೆ ಕಡಂಬರುದ್ರನೆಂ
ಬೊಡೆತನವಂ ನೆಗಳ್ಚಿದುದು ಗಂಡರ ದಾವಣಿಯೆಂಬ ನಾಮಮಂ
ಪಡೆದುದು ಸೋಮಭೂಮಿಪನ ಶೌರ್ಯಗುಣಾವಳಿಯೇಂ ಕೃತಾರ್ಥನೋ
॥ 417 ॥

ಕದಂಬಸೋಮನೃಪ

ಮ ಸ್ರ ॥ ನಿನಗಂತಾ ಕಾಮನೀಗಳ್ ಕೆಳೆಯನೆನಿಪುದಂ ತೋರ್ಪವೋಲೆಮ್ಮನೆಚ್ಚೆ
ಚ್ಚು ನಿತಾಂತಂ ನಿನ್ನ ಪಾದಕ್ಕೆಱಗಿಪನೆನುತುಂ ಕಾಂತೆಯರ್ ಜೋಲೆ ಕಾಲ್ಗಾ
ನನಕಾಶ್ಮೀರದ್ರವಂ ಪತ್ತಿದ ನಿಗಳದ ಚಂಗಾಳ್ವನಂಗಕ್ಕೆ ಸೇವಾ
ಜನಿತಾರಾಗಂಬೊಲಾಗಳ್ ಮೆಱೆವುದನುದಿನಂ ಸೋಮಭೂಮೀಶಪಾದಂ
॥ 418 ॥

ಚಂ ಮಾ ॥ ಮುನಿದೊಡೆ ಸೋಮಭೂಪನೆಮಗಿರ್ಪೆಡೆಯಾ ಬನವಾಸೆಯಂತದಿಂ
ತನಿತುಮದೀಗಳಾತನ ಭುಜಾಸಿಲತಾವೃತಮಾಯ್ತು ಪೊಕ್ಕು ಸಿ
ಲ್ಕಿನೊಳಿರೆ ಪೊಲ್ಲದೆಂದಹಿತರೋಡಿ ಸಮುದ್ರದ ವೇಳೆಗಂಡು ತಾ
ಮನುಮಿಸಿ ವೇಳೆಗೊಂಡು ಸುಖಮಿರ್ಪರಿದೇನದಟಿಂಗೆ ನೋಂತನೋ
॥ 419 ॥

ಮ ಸ್ರ ॥-
ಬಿರುದರ್ ಭೀತೋರ್ವಿಪಾಳರ್ ಮದನಪರವಶೀಭೂತೆಯರ್ ವಿದ್ಯೆಯುಳ್ಳರ್
ಶರಣೆಂದರ್ ಸೇವಕರ್ ಬೇಟ್ಟುವರೆನಿಪಿವರ್ಗೊಲ್ದೀವನೀ ಸೋಮಭೂಮೀ
ಶ್ವರನೆಂದುಂ ರಾಗದಿಂ ಸಂಗರಮನಭಯಮಂ ಬೇಟಮಂ ತುಷ್ಟಿಯಂ ಸ
ಯ್ತಿರವಂ ಸಂಪ್ರೀತಿಯಂ ಬೇಟ್ಟುದನೆನೆ ಜನಮೌದಾರ್ಯದಿಂ ವರ್ಣ್ಯನಾದಂ ॥ 420 ॥

ಸೋಮನೃಪನ ಹೆಂಡತಿ ಲಚ್ಚಲದೇವಿ

ಉ ಮಾ ॥ ತೋಳ ತೊಡರ್ಪು ಮಚ್ಚಿಪೆರ್ದೆವತ್ತುಗೆ ಚುಂಬಿಸುವಿಂಬು ಸೋಮಭೂ
ಪಾಳನೊಳೇಕಭೋಗ್ಯಮೆನಿಸಲ್ ತನಗಾಗಿರಲಾ ಸ್ಥಳಂಗಳಂ
ಪಾಳಿಪ ಕಾಪು ಬೀರಸಿರಿ ಲಕ್ಷ್ಮಿ ಸರಸ್ವತಿಯೆಂದೆ ಸ್ವೈರಿಪಳ್
ಮೇಳಿಸಲೀವಳೇ ಪೆಱರನೆಂದೆನೆ ಲಚ್ಚಲದೇವಿಯೊಪ್ಪುವಳ್ ॥ 421 ॥

ಮ ವಿ ॥ ಎನಿಪಾ ದಂಪತಿಯೊಲ್ಮೆಗಗ್ಗಳಿಸಲೊಪ್ಪಂ ಪ್ರಾಜ್ಯಸಾಮ್ರಾಜ್ಯ ಕಾ
ಮಿನಿ ಮಾಡಲ್ಬಗಿಯಪ್ಪವೆಯ್ತರೆ ಪರೋರ್ವೀಪಾಳರಿಂ ಕಪ್ಪವಿ
ನ್ತಿನಿಸುಂ ಮಾಡದಿರಲ್ಕೆ ದುಷ್ಟತತಿ ತಪ್ಪಂಪುಟ್ಟಿದಂ ಬೊಪ್ಪನೆಂ
ಬಿನೆಗಂ ಬೊಪ್ಪ ನೃಪಾಳನ ಪ್ರತಿಮಪುಣ್ಯಂ ರಾಜಿಸಿತ್ತುರ್ವಿಯೊಳ್ ॥ 422 ॥

ಸೋಮನೃಪನ ಪೂರ್ವಿಕ ಬೊಪ್ಪ

ಕಂ ॥ ಈ ಬೊಪ್ಪಂ ದೇವಕಿಗಾ
ದಾ ಬೊಪ್ಪಂ ತಪ್ಪದಪ್ಪನಱಿದೆಂ ಕೀರ್ತಿ
ಶ್ರೀ ಬಾಯ್ದೆಱೆದೊಡೆ ಕಾಣ
ಲ್ಕೀ ಬಂದುದೆ ಭುವನನಿಕರಮೆನೆ ಪೆಸರ್ವಡೆದಂ ॥ 423 ॥

ಮ ವಿ ॥ ನಗೆಯಲ್ತೇ ಎಮೆಯಿಕ್ಕುತಿರ್ದ ಹದಿನೆಂಟಕ್ಷೋಹಿಣೀಸೇನೆಗಂ
ದುಗುರಿಂ ಸತ್ತ ಹಿರಣ್ಯಕಾಕ್ಷಕನೆನಿಪ್ಪಂಗಂದದೇಂ ಬಿಟ್ಟ ಕ
ಣ್ಗಿಗಿದಂತಾಭಯದಿಂದೆ ಬೆಂದ ಮದನಂಗಂದಾ ಮಹಾಭಾಗರ
ಣ್ಮುಗೆಯೆಂದೀವಿಭು ಬೊಪ್ಪದೇವನಲೆವಂ ಸತ್ವಾಧಿಕಾನ್ಯೌಘಮಂ ॥ 424 ॥

ಮ ವಿ ॥ ಕದನಕ್ರೀಡೆಯೊಳುಳ್ಳ ನಿನ್ನ ದಯೆಯೇಕಿಂತೊರ್ಮೆಯುಂ ತೋಱದೀ
ಮದನಕ್ರೀಡೆಯೊಳುಟ್ಟುದಂ ಮಱೆದೊಡಂ ನೀರ್ವೊಕ್ಕೊಡಂ ನಾಣ ಪು
ತ್ತುದಲೊಂದಿರ್ದೊಡಮಿತ್ತೊಡಂ ತಲೆಯನೇ ಸಂಪ್ರೀತಿಯಂ ತೋಱೆಯೆಂ
ದೊದವಿಂ ಮೇಳಿಸೆ ಕಾಂತೆಯರ್ ಮಱೆವನೀ ಶ್ರೀಬೊಪ್ಪಭೂಪಾಳಕಂ
॥ 425 ॥

ಉ ಮಾ ॥ ಲೋಕಮನಾವಗಂ ಬೆಳಗಿದಂ ಜಸದಿಂ ಮುನಿಚಂದ್ರದೇವನ
ಪ್ರಾಕೃತ ಜೈನಯೋಗನಿಳಯಂ ಪ್ರಕಟೀಕೃತಾರ್ಥನಿರ್ಣಯಂ
ಸ್ವೀಕೃತ ಶಬ್ದ ಶಾಸ್ತ್ರನುರರೀ ಕೃತತರ್ಕಕಳಾಕಳಾಪನೂ
ರೀಕೃತ ಕಾವ್ಯನಾಟಕ ನದಃ ಕೃತಮೀನ ಪತಾಕ ವಿಕ್ರಮಂ ॥ 426 ॥

ಉ ಮಾ ॥ ಶಾನ್ತರಸೋತ್ತಮೂರ್ತಿ ದಿಗಿಭಬ್ರಜಮಸ್ತಕವರ್ತಿಕೀರ್ತಿ ಸೈ
ದ್ಧಾನ್ತಿಕ ಚಕ್ರವರ್ತಿ ಜಿನಪಾದನಿಧಾನ ಸುದೀಪವರ್ತಿ ಚೈ
ರನ್ತನ ಜೈನಯೋಗಿ ಸಮವರ್ತಿಯೆನಲ್ ಮುನಿಭಾನುಕೀರ್ತಿ ಪೆಂ
ಪಂ ತಳೆದಂ ಸ್ವಮನ್ತ್ರಗತಿಧೂರ್ತ ಜನಕ್ಕತಿವರ್ತಿಯೆಂಬಿನಂ ॥ 427 ॥

ಚಂ ಮಾ ॥ ವರವನಿತಾವಶಂಕರನರಾತಿ ನೃಪಾಳ ಭಯಂಕರಂ ಜಿನೇ
ಶ್ವರಯತಿಕಿಂಕರಂ ಸ್ವಪತಿಚಿತ್ತಮುದಂಕರನಿಷ್ಟ ವರ್ಗಶಂ
ಕರನಖಿಳಾರ್ಥ ಶಾಸ್ತ್ರ ಸುದೃಢಂಕರನಾತ್ಮಸುಖಂಕರಂ ಮನೋ
ಹರನೆನೆ ಶಂಕರಂ ಪಡೆದನೊಪ್ಪೆ ಚರಿತ್ರದೊಳಂತು ಕೀರ್ತಿಯಂ ॥ 428 ॥

ಸಾಮಂತಶಂಕರ

ಮ ಸ್ರ ॥ ದಿನಮೆಲ್ಲಂ ದಾನಕೇಳೀಸಮಯಮೆ ತನಗೆಂದೆಂಬಿನಂ ನೀತಿಯೆಲ್ಲಂ
ತನಗೆಂದಾಗಿರ್ದುವೆಂದೆಂಬಿನಮರಿಕುಳಮೆಲ್ಲಂ ಸ್ವಖಡ್ಗಾಹತಂ ಶಾ
ಕಿನಿಯರ್ಗೆಂದಾದುದೆಂದೆಂಬಿನಮೊಡಮೆಯದೆಲ್ಲಂ ಜಗತ್ಪೋಷಣಕ್ಕೆಂ
ಬಿನಮಾ ಸಾಮಂತಶಂಕಂ ನೆಗಟ್ದಿನೆಳೆಗಮಾತಂಕಮಾಗಲ್ಕೆ ತನ್ನಿಂ ॥ 429 ॥

ಶಂಕರನು ಮಾಡಿಸಿದ ಜಿನಗೃಹ

ಮ ವಿ ॥ ಪ್ರತಿಬಿಂಬಂ ಪದಘಾತಮಂ ಕಳೆವುದಾರಂಗಕ್ಕೆ ಕಂಭಕ್ಕೆ ಹೃ
ದ್ಗತಮಂ ಮಾಟ್ಪುದು ಸಾಲಭಂಜಿಕೆಗಳಂ ಚಿತ್ರಿಪ್ಪುದಾ ಭಿತ್ತಿಸಂ
ತತಿಯಂ ಜಂಗಮಚಿತ್ರದಿಂದೆನೆ ಜನಂ ಸಾಮಂತಶಂಕಂ ಜಗ
ನ್ನುತಮಂ ಮಾಡಿಸಿದಂ ಜಿನೇಂದ್ರಗೃಹಮಂ ಮಾಗುಂಡಿಯೊಳ್ ರಾಗದಿಂ
॥ 430 ॥

ಉ ಮಾ ॥ ಆ ಭುವನೈಕಮಂಡನ ಜಿನಾಲಯಮಮಂ ನಲವಿಂದೆ ನೋಡಿ ಸೂ
ರ್ಯಾಭರಣಾಹ್ವಯಂ ಬಲಿಪುರಿ ತ್ರಿಪುರಾಂತಕಸೂರಿ ಸಂಸ್ತುತಂ
ಶೋಭಿಸುತಿರ್ದುದೀ ಬಸದಿ ತೀರ್ಥಂಕರರ್ಶಿವಸತ್ವದಸ್ಥರೆಂ
ದಾಭವಭಾವದಿಂ ಮುನಿವರಂ ಸ್ಥಳವೃತ್ತಿಯನಿತ್ತನುತ್ತಮಂ ॥ 431 ॥

ಶಾ ವಿ ॥ ಅಂತಾ ಧರ್ಮನಿಕಾಯಮಮಂ ಸಲಿಸುತಂ ನ್ಯಾಯಾರ್ಜಿತ ದ್ರವ್ಯದಿಂ
ದಂನ್ತೀವೃತ್ತಖಿಳಾಶೆಯಂ ಸದುಪಭೋಗಾನೀಕಮಂ ಭೋಗಿಸು
ತ್ತಂನ್ತಾ ಶಂಕಮದೇವ ಚಕ್ರಿನಡೆದಂ ಬಲ್ಲಾಳಭೂಪಾಳನಂ
ಸನ್ತಂ ತನ್ನ ಪದಾಬ್ಜ ಸೇವೆಗೆದರಲ್ ಶೌರ್ಯಾರ್ಣವಂ ಘೂರ್ಣಿಸಲ್
॥ 432 ॥

42) ಬಳ್ಳಿಗಾವೆ 217, E.C. XIV (R), ಕ್ರಿಶ. 1192

ಇದರಲ್ಲಿ ಹೊಯ್ಸಳ ದೊರೆ ಎರಡನೇ ಬಲ್ಲಾಳನ ಆಳಿಕೆಯಲ್ಲಿ ಮಹಾಪ್ರಧಾನರಾದ ಎರೆಯಣ್ಣ ಮತ್ತು ನಾಗಲಾದೇವಿ, ರಾಜಗುರು ವಾಮಶಕ್ತಿದೇವರಿಗೆ ನೀಡಿದ ದತ್ತಿಯನ್ನು ಹೇಳಿದೆ.

ನರಸಿಂಹ I

ಚಂ ಮಾ ॥ ಮುನಿ ಮುನಿದೀಂಟದಬ್ಧಿ ಮರನಲ್ಲದಕಲ್ಪಕುಜಂ ಸುರಾರಿ ಸೂ
ದನನದಟಿಂದವೇಳಿದತಿಭಂಗದೊಳೊಂದದ ಮಂದರಾದ್ರಿ ನೆ
ಟ್ಟನೆ ಮೃಗರೂಪಮಂ ತಳೆದು ಹುಟ್ಟದ ಕೇಸರಿಗುರ್ಣ್ವಿನಾರ್ಪಿನೊ
ಳ್ವಿನುತವೆನಿಪ್ಪ ಬಿಣ್ಪಿನ ಪರಾಕ್ರಮದೊಳ್ನರಸಿಂಹ ಭೂಭುಜರ್ ॥ 433 ॥

ಚಂ ಮಾ ॥ ತೆರಳದರಾತಿ ಭೂಭುಜರ ನಿಟ್ಟೆಲುವಂ ಸಲೆ ತೇದು ಬೊಟ್ಟನಿ
ಟ್ಟುರುಳ್ವ ಶಿರಂಗಳಂ ಬಲುಗರುಳ್ಗಳೊಳಾಗಡೆ ಕೊಯ್ದು ಕಂಠದೊ
ಳ್ಧರಿಸಿ ಕಪಾಲಮಂ ಪಿಡಿದು ನೆತ್ತರನೀಂಟಿ ಮನೋನುರಾಗದಿಂ
ಧುರದೊಳು ಖಡ್ಗಕಾಳಿ ಕುಣಿದಾಡುವಳೀ ನರಸಿಂಹಭೂಪನಾ ॥ 434 ॥

ಬಲ್ಲಾಳ II

ಸ್ರಗ್ಧರೆ ॥ ಲಾಳಂ ಬೇಳಾಗಿನಿಂದಂ ಮಗಧನಗಿದನ x ದ್ರತಂದನಾದಂ
ಗೌಳಂ ಸೌಳಾದನಾ ಕೊಂಕಣ ನೃಪತಿಭಯಾಶಂಕನಾಗಿರ್ದನಾ ನೇ
ಪಾಳಂ ಚಾಪಚ್ಯುತಂ ಮಾಳವಮದವಳಿದುಂ ಮಾಳವಂ ಬೊಕ್ಕು ಬೀಟ್ಟಿಂ
ಚೋಳಂಗೋಳುಂಡೆಗೊಂಡಂ ಜಡಿದಡಸಿಯನಾ ವೀರಬಲ್ಲಾಳದೇವಂ
॥ 435 ॥

ಮ ವಿ ॥ ನಿಜರಾಜ್ಯಚ್ಯುತರಾಗಿ ಬಲ್ದಪೆವೆನುತ್ತುಂ ಭೀತಿಯಿಂ ವೈರಿಗ
ಳ್ಭುಜವೇಱೋಡಿಬಹಿತ್ರವೇಱಿ ಕೆಲಬರ್ಪುರ್ಙತ್ತೇಱಿ ಭೂಪಾಳಕ
ಬ್ರಜವೆಲ್ಲಂ ಗಿರಿದುರ್ಗವೇಱಿ ಸುಭಟ ಶ್ರೀವೀರಬಲ್ಲಾಳ ಭೂ
ಭುಜನಂತರ್ತ್ತಿಯೊಳೇಱಿದಂ ರಿಪುಕುಳಧ್ವಾಂತಾರಿವೈಹಾಳಿಯಂ ॥ 436 ॥

ವಾಮಶಕ್ತಿಮುನಿ

ಮ ವಿ ॥ ಕಡೆವಂದಂಬುಧಿಯೊಳ್ಸುರೇಂದ್ರಗಜಮಂ ಸ್ತ್ರೀರತ್ನಮಂ ಲಕ್ಷ್ಮಿಯಂ
ತೊಡೆವಂ ಕೌಸ್ತುಭಮಂ ಸರಸತಿಯುಮಂ ದೇವಾದಿಗಳ್ಮುನಿವಂ
ಪಡೆದಂತೀ ಸತುಪುತ್ರನಂ ಸುಜನನಂ ಧರ್ಮಜ್ಞನಂ ಧನ್ಯನಂ
ಪಡೆದಂ ಸದ್ಗುಣಿ ವಾಮಶಕ್ತಿಯಂ ಲೋಕೋತ್ತಮಂ ಗೌತಮಂ ॥ 437 ॥

43) ಚಿಕ್ಕಮಾಗಡಿ 78, E.C. XIV (R), ಕ್ರಿ.ಶ. ಸು. 12ನೇ ಶತಮಾನ

ಇದರಲ್ಲಿ ಶಂಕಯ್ಯ ನಾಯಕ, ಮುದ್ದವ್ವೆಯರ ಮಗಳು ಶಾಂತವೆ, ಜಿನಸ್ತುತಿ ಮಾಡುತ್ತಾ ಮರಣ ಹೊಂದಿದುದನ್ನು ಹೇಳಿದೆ.

ಕಂ ॥ ದಾನದ ಗುಣದುನ್ನತಿಯಿಂ
ತಾನೀ ಧರೆಗಧಿಕೆಯೆನಿಸಿ ಸಾಂತವೆ ಸುಖದಿಂ
ಧ್ಯಾನಿಸಿ ಜಿನಪತಿಪದಮಂ
ತಾನೆಯ್ದಿದಳಮರಲೋಕಮಂ ಹಲರಱೆಯಲ್ ॥ 438 ॥

44) ಬಂದಳಿಕೆ 156, E.C. XIV (R), ಕ್ರಿ.ಶ. 1203

ಇದರಲ್ಲಿ ಹೊಯ್ಸಳ ದೊರೆ ಎರಡನೇ ಬಲ್ಲಾಳನ ಆಳಿಕೆಯಲ್ಲಿ ಕವಡೆಯ ಬೊಪ್ಪಸೆಟ್ಟಿ ಎಂಬುವವನು ಬಂದಣಿಕೆಯಲ್ಲಿ ಶಾನ್ತಿನಾಥದೇವರ ಬಸದಿಯ ಮಂಟಪವನ್ನು ನಿರ್ಮಾಣ ಮಾಡಿಸಿದುದನ್ನು ಆಗ ಬಂದ ದತ್ತಿಗಳನ್ನೂ ಹೇಳಿದೆ.

ಕವಡೆಯ ಬೊಪ್ಪಸೆಟ್ಟಿ

ಚಂ ಮಾ ॥ ಕವಿನಿವಹಸ್ತುತಂ ನೆಗಳ್ದ ರೇಚ ಚಮೂಪತಿಯಿಂ ಬಳಿಕ್ಕಮಾ
ಭುವನದೊಳಿಂತನಂತ ಜಿನಧರ್ಮವನುದ್ಧರಿಪರ್ದ್ದರೇಚನಂ
ಸುವಿದಿತಮಾಗೆ ಭಾಂದವಪುರಾಧಿಪ ಶಾನ್ತಿಜಿನೇಶತೀರ್ಥಮಂ
ಕವಡೆಯ ಬೊಪ್ಪನುದ್ಧರಿಸಿದಂ ಯದುವಲ್ಲಭರಾಜ್ಯಭೂಷಣಂ ॥ 439 ॥

ಕಂ ॥ ಮಡಗಿಡಲೆಂದೇಂ ಧನಮಂ
ಪಡೆವನೆ ನಾಳ್ದೆಱದ ದಾನಮಂ ಮಾಡಲ್ಕೆಂ

ದೊಡಮೆಯನರ್ಜ್ಜಿಪನಾರಿಂ
ಕಡುಜಾಣಂ ಭವ್ಯರೊಳಗೆ ಕವಡೆಯಬೊಪ್ಪಂ || 440 ||

ಕಳಚುರ್ಯ ಬಿಜ್ಜಳ

ಮ ವಿ || ವಸುಧಾಕಾನ್ತೆಯ ಕುಂತಳೋಪಮವೆನಿಪ್ಪೀ ಕುಂತಳ ಕ್ಷೋಣಿಯಂ
ಪೆಸರ್ವೆತ್ತಾ ನವನಂದ ಗುಪ್ತಕುಲ ಮೌರ್ಯಕ್ಷ್ಮಾಪರಾಳ್ದರ್ಲಸ
ಜ್ಜಸದಾಣ್ಮರ್ಕ್ಕಲಿರಟ್ಟರಾಳ್ದರವರಿಂ ಚಾಳುಕ್ಯರಾಳ್ದರ್ವಳಿ
ಕ್ಕೆಸೆದಿರ್ದಾ ಕಳಚುರ್ಯವಂಶಜರೊಳಾಳ್ದಂ ಬಿಜ್ಜಲ ಕ್ಷೋಣಿಪಂ || 441 ||

ಹೊಯ್ಸಳ ವಂಶ

ಮ ವಿ || ಸಳನಾದಂ ಯದುವಂಶದೊಳ್ಮದವಂ ವಾಸಂನ್ತಿಕಾ ದೇವಿಯಂ
ಚಳನಾರಾಧನೆಯಂ ಪೊಣರ್ಚೆ ಶಶಕೋದ್ಯದ್ಗ್ರಾಮದೊಳ್ಪಾಯ್ದೊಡಾ
ಗಳೆ ಪೆರ್ಬುಲಿ ಪೊಯ್ಸಳೆಂದು ಸೆಳೆಯಂ ಜೈನಬ್ರತೀಂದ್ರಂ ಜಗ
ತ್ತಿಲಕಂ ಕೊಟ್ಟೊಡೆ ಪೊಯ್ಯೆ ಪೊಯ್ಸಳವೆಸರ್ತಾನಾದುದೀ ಧಾತ್ರಿಯೊಳ್
|| 442 ||

ಬಲ್ಲಾಳ I

ಕಂ || ನಿರಿದಿದಿರಾಂತವರಂ ನಿಜ
ಚರಣಕ್ಕೆಱಗಿದರನೊಸೆದು ರಕ್ಷಿಸಿ ಧರೆಯಂ
ಪರಿಪಾಳಿಸುತಂ ಸುಖದಿಂ
ದಿರೆ ವಿಜಯ ಸಮುದ್ರದಲ್ಲಿಯಾ ಬಲ್ಲಾಳಂ || 443 ||

ನಾಗರಖಂಡ

ಕಂ || ಧರಣೀಕಾಂತೆಯ ಮುಖದಂ
ತಿರೆ ಬನವಸೆನಾಡು ರಂಜಿಸುವುದದಱೊಳ್ ನಾ
ಗರಖಂಡಂ ತಿಲಕದವೊಲ್
ಪರಿಶೋಭಿಪುದಾವಕಾಲಮುಂ ಸಿರಿಯೊದವಿಂ || 444 ||

ಉ ಮಾ || ಊರೂರ್ ನಂದನದಿಂ ಲತಾಭವನದಿಂದೂರೂರ್ ತಟಾಕಂಗಳಿಂ
ದೂರೂರ್ ತಳ್ತೆಲೆವಳ್ಳಿಯಿಂ ಕೊಳಗಳಿಂದೂರೂರ್ ಫಲೋರ್ವೀಜದಿಂ
ದೂರೂರ್ ಕರ್ಬಿನ ತೋಂಟದಿಂ ಕಟವೆಯಿಂದೂರೂರ್ ಪ್ರಜಾವ್ರಾತದಿಂ
ದೂರೂರ್ ದೇವಗೃಹಂಗಳಿಂ ವಿಬುಧರಿಂದೂರೂರ್ ಕರಂ ರಂಜಿಕುಂ
|| 445 ||

ಬಾಂಧವನಗರ (ಬಂದಣಿಕೆ)

ಕಂ ॥ ಪರಲೊಳ್ ಪರುಸಂ ಧೇನೂ
ತ್ಕರದೊಳ್ ಸುರಧೇನು ನಂದನದೊಳಮರಕುಜಂ
ಕರಮೆಸೆವಂತಿರೆ ಸಲೆ ನಾ
ಗರಖಂಡದೊಳೆಸೆವುದೆಸೆವ ಬಾಂಧವನಗರಂ ॥ **446** ॥

ಚಂ ಮಾ ॥ ಅದು ಬಳಸಿರ್ದ ನಂದನದಿನಂಬುಜಷಂಡದಿನೊಳ್ಗವುಂಗಿನಿಂ
ಪುದಿದೆಲೆವಳ್ಳಿಯಿಂ ಬೆಳೆದ ಶಾಳಿಯಿನೊಪ್ಪುವ ಕೋಂಟೆಯಿಂ ಸಮಂ
ತೊದವಿದ ಲಕ್ಷ್ಮಿಯಿಂ ವಿಭವದಿಂ ವಿಳಸಜ್ಜದಿಂ ಸುದೇವಗೇ
ಹದ ಕಡುಚೆಲ್ವಿನಿಂದಮಳಕಾಪುರಮಂ ನಗುತಿರ್ಪುದೊರ್ಮೆಯುಂ
॥ **447** ॥

ಬೊಪ್ಪದೇವ

ಮ ವಿ ॥ ಅದನಾಳ್ವಂ ಪ್ರಜೆಮೆಚ್ಚೆಗಂಡನದಟಂ ಕಾದಂಬ ವಂಶೋದ್ಭವಂ
ಮುದದಿಂ ಸೋಮನೃಪಾತ್ಮಜಾತನೆನಿಸಿರ್ದಾ ಬೊಪ್ಪದೇವಂ ಪು
ಟ್ಟಿದ ಸತ್ಪುತ್ರನನೂನ ಶೌರ್ಯನಿಳೆಯಂ ಕಂದರ್ಪಸನ್ಮೂರ್ತಿಯ
ಭ್ಯುದಯಾಳಂಕೃತನಾತ ಕೀರ್ತಿರಮಣಂ ಶ್ರೀಬ್ರಹ್ಮಭೂಪಾಲಕಂ ॥ **448** ॥

ಮಹಾಜನರು

ಉ ಮಾ ॥ ನಾಗರಖಣ್ಡದೊಳ್ ಹರನವಕ್ತ್ರದವೊಲ್ನೆಗಳ್ದಗ್ರಹಾರಮ
ಯ್ದಾಗಳುಮೊಪ್ಪುಗುಂ ನಿಖಿಳವೇದಪುರಾಣಸುನೀತಿಶಾಸ್ತ್ರತ
ರ್ಕಾಗಮ ಕಾಬ್ಯ ನಾಟಕ ಕಥಾಸ್ಮೃತಿಯಜ್ಞವಿಧಾನಮಂ ಮನೋ
ರಾಗದಿನೋದುವೋದಿಸುವಶೇಷಮಹಾಜನದೊಂದು ಘೋಷದಿಂ ॥ **449** ॥

ಕಂ ॥ ಪ್ರತ್ಯೇಕ ಬೃಹಸ್ಪತಿಗ
ಳ್ನಿತ್ಯಾನುಷ್ಠಾನ ಚಾರುಚಾರಿತ್ರಪರ
ರ್ಸತ್ಯಯುತತರ್ತೇಜದೊಳಾ
ದಿತ್ಯ ಸದೃಶರಲ್ಲಿಯಿರ್ಪ ಮಹಾಜನವೆಲ್ಲಂ ॥ **450** ॥

ಸಂಕರಸೆಟ್ಟಿ

ಚಂ ಮಾ ॥ ಉಱದೆ ಬಣಂಜು ಧರ್ಮದೊಳಗಂ ನಯದಿಂ ನಡೆಯುತ್ತಮಿರ್ಪರಂ
ತಱದು ಸುಧರ್ಮದಿಂ ನಡೆವರಂ ಪ್ರತಿಪಾಳಿಪ ಸೆಟ್ಟಿಕವ್ವೆಯ

ಕ್ಕಱಿನ ಸುತಂಗೆ ಪುಣ್ಯನಿಧಿ ಸಂಕರಸೆಟ್ಟಿಗೆ ಸೆಟ್ಟಿಗುತ್ತರಾ
ರ್ಪಱಿರೆಣೆ ಸತ್ಯದಿಂ ವಿಭವದಿಂ ನುತ ಶೌರ್ಯದಿನುದ್ಧಧೈರ್ಯದಿಂ ॥ 451 ॥

ಮುದ್ದಸಾಮಂತ

ಚಂ ಮಾ ॥ ಕವಿಗಳ ಮುದ್ದನಾಶ್ರಿತರ ಮುದ್ದನನಾಥರ ಮುದ್ದನಿಷ್ಟರ
ಪ್ಪವರ್ಗಳ ಮುದ್ದನರ್ಥಿಗಳ ಮುದ್ದನೆಡರ್ ನೆಲೆಗೊಂಡ ಶಿಷ್ಟಬಾಂ
ಧವರೆಸೆವೊಂದು ಮುದ್ದನೆನಸುಂ ಪರಿವಾರದ ಮುದ್ದನಂಗನಾ
ನಿವಹದ ಮುದ್ದನೆಯ್ದೆ ಸಲಿಪಂ ಪ್ರಭುಮುದ್ದನಿಳಾತಳಾಗ್ರದೊಳ್ ॥ 452 ॥

ಕಂ ॥ ಸ್ವಚ್ಛತರಕೀರ್ತಿಯಿಂದೇಂ
ಕಚ್ಛವಿಯೂರೊಡೆಯ ಬಿಟ್ಟಿಯರಸಂ ಜಗಮಂ
ಪ್ರಚ್ಛಾದಿಸಿದನವಂಗತಿ
ತುಚ್ಛರೆನಿಪ್ಪೂರೊಡೆಯರದೇಂ ಪೇಳೆಣೆಯೇ ॥ 453 ॥

ಬೇಗೂರಿನ ಮಾಳಗೌಡ

ಕಂ ॥ ಸಾಗರವಳಯಿತು ಧರಣೀ
ಭಾಗದೊಳತ್ಯುನ್ನತಿಕ್ಕೆಯಿಂ ಬಲ್ಪಿಂ ಸ
ತ್ಯಾಗದಿನಱಿವಿಂದೆಣೆಯೇ
ಬೇಗೂರ ಪ್ರಭುಗೆ ಮಾಳಗೌಡಂಗಂನ್ಯರ್ ॥ 454 ॥

ಎರೆಕಾಟಿಗೌಡ

ಕಂ ॥ ಸೊಗಯಿಪ್ಪ ಕಣ್ಣಸೋಗೆಯ
ನೆಗಳ್ದಿರ್ದೆಱೆಕಾಟಿಗೌಡನಜಿತವನಾರ್ಪಂ
ಮೃಗರಿಪು ವಿಕ್ರಮಮಂ ನೆಱೆ
ಪೊಗಳಲ್ಕಾ ಜಲಜಭವನುಮೇನಾರ್ತಪ್ಪನೇ ॥ 455 ॥

ಅಬ್ಬಲೂರಿನ ಸೋಮಗವುಂಡ

ಕಂ ॥ ಚಲದ ನೆಲೆ ಚಾಗದಾಗರ
ಮಲಘುಗುಣಂಗಳ ನಿಧಾನಮಱಿತದ ತವರು
ಜ್ವಲಕೀರ್ತಿಯ ಕರುವೆನಿಪಂ
ಸಲೆ ಹಲರಿಂದಬ್ಬಲೂರ ಸೋಮಗವುಂಡಂ ॥ 456 ॥

ಶುಭಚಂದ್ರಪಂಡಿತ

ಕಂ ॥ ಅವರಾನಂದನ ನಂದನ
ನವನೀಸಂಸ್ತುತ್ಯಮೆನಿಪ ಕಾಣೂರ್ಗಣ ಕೈ
ರವಚಂದ್ರನೆನಿಸಿ ನೆಗಳ್ದಂ
ವಿವೇಕಿ ಶುಭಚಂದ್ರವಿನುತ ಪಂಡಿತದೇವಂ ॥ 457 ॥

ಕಂ ॥ ಮಳಿನತೆಯಿಲ್ಲದ ಕುಂದಂ
ತಳೆಯದೆ ಸಲೆ ರಾಹುಪೀಡೆಯೆಯ್ದದ ದೋಷಾ
ವಳಿಯೊಳ್ ಚರಿಯಿಸದಸ್ತಾ
ಚಳಕೆಳಸದ ಚಂದ್ರನೆನಿಸುವಂ ಶುಭಚಂದ್ರಂ ॥ 458 ॥

ಕಂ ॥ ಬಂದಣಿಕೆಯ ತೀರ್ಥವನಾ
ನಂದಾಚಾರ್ಯರವೊಲುದ್ಧರಿಸಿದಂ ಜಗದಾ
ನಂದಕರ ಲಲಿತಕೀರ್ತಿಯ
ನಂದನ ಶುಭಚಂದ್ರ ವಿನುತ ಪಣ್ಡಿತದೇವಂ ॥ 459 ॥

ಉ ಮಾ ॥ ಇಂತಿದು ಚಿತ್ರಮೆಂಬಿನಗಮೆಯ್ದೆಮೊಸರ್ಪೋಱಸೂಸೆ ಪಾಲ್ಗಳೋ
ರಂತಿರೆ ಪುತ್ತಿ ನೋಳ್ಪುಗೆ ಜಲಾತಿಶಯಂ ನವಪುಷ್ಪ ಮಾಳಿಕಾ
ಸನ್ತತಿಯಿಂದಮಾದತಿಶಯಂತಿರದೊಪ್ಪುವ ಶಾನ್ತಿನಾಥ ತೀ
ರ್ಥಂಕರ ಪಾರಿಪತ್ಯದೆಸವಂ ಶುಭಚಂದ್ರ ಮುನೀಂದ್ರನೊರ್ಮೆಯುಂ
॥ 460 ॥

ಮಲ್ಲದಂಡಾಧಿಪ

ಸ್ರಗ್ಧರೆ ॥ ಶ್ರೀಮದ್ಬಲ್ಲಾಳ ಭೂಪಾಳಕನ ವಿನುತ ಸನ್ಮಂತ್ರಿ ವಿಪ್ರಾನ್ವಯಾಬ್ಜ
ಸ್ತೋಮೋದ್ಯದ್ಭಾನು ನಾರಾಯಣ ಪದಕಮಳ ದ್ವಂದ್ವಭೃಂಗಂ ಯಶಶ್ರೀ
ಧಾಮಂ ಸಾಹಿತ್ಯ ವಿದ್ಯಾಧರನಖಿಳಗುಣಾಳಂಕೃತಮಾನ್ತನಪ್ರೋ
ದ್ದಾಮಂ ಶ್ರೀಮಲ್ಲನೀ ಬಂದಣಿಕೆಯನೊಲವಿಂ ಪಾಲಿಸುತ್ತಿರ್ಪನೊಳ್ಪಿಂ
॥ 461 ॥

ಮ ಸ್ರ ॥ ಕಡಿವಂ ಮಾಱಾಂತರಂ ಬೇಗದೆ ಕರಗಿಸುವಂ ಶತ್ರುಸೈನ್ಯಂಗಳಂ ಸಂ
ಗಡಕೆಲ್ಲಂ ಧೈರ್ಯವರ್ಣಕ್ರಮಮನೆಸೆಯೆ ತಾಂ ತೋಱುವಂ ಕೀರ್ತಿಯಚ್ಚಂ
ಕಡುಚೆಲ್ವಪ್ಪಂತಿರಚ್ಚೊತ್ತುವನಖಿಳದಿಶಾದಂತಿದಂತಂಗಳೊಳ್ ನೋ
ಳ್ಪೊಡೆ ಸಂತಂ ಕಮ್ಮಟಕ್ಕಂತೊಡೆಯನೆನಿಸುವಂ ಮಲ್ಲದಂಡಾಧಿನಾಥಂ
॥ 462 ॥

ಸೂರ್ಯಚಮೂಪ

ಚಂ ಮಾ ॥ ಅಳಱೆ ವಿರೋಧಿಸಂತಮಸಮಳ್ಕಿರೆಯಾಟವಿಕೋದ್ಧ ಕೈರವಂ
ಸಲೆ ಪೊದಟ್ದೆಯ್ದೆ ಸಜ್ಜನಬಿಸಂ ಪ್ರವಿಕಾಸಮನೆಯ್ದೆ ರಾಗಮ
ಗ್ಗಳಿಸಿರೆ ಮಿತ್ರಚಕ್ರಚಯದೊಳ್ ಬೆಳಪಂ ನುತವಿಶ್ವಧಾತ್ರಿಯಂ
ಸುಲಲಿತಮೂರ್ತಿ ಕೀರ್ತಿನಿಧಿ ಸೂರ್ಯಚಮೂಪತಿ ಸೂರ್ಯನಂದದಿಂ ॥ 463 ॥

45) ಗೊಗ್ಗ 56, E.C. XIV (R), ಕ್ರಿಶ. ಸು. 1205

ಇದರಲ್ಲಿ ಏಚರಸ ಎಂಬುವವನು ಬೆಳಗವತ್ತಿಯಲ್ಲಿ ಬಸದಿಯೊಂದನ್ನು ಕಟ್ಟಿಸಿದನೆಂದು ಹೇಳಿದೆ. ಅವನ ಪತ್ನಿ ಸೋವಲದೇವಿಯ ಗುಣಗಳನ್ನು ಹೊಗಳಿದೆ.

ಏಚಣ

ಕಂ ॥ ಊರೊಳ್ ತಪ್ಪದೆ ಬಸದಿಯ
ನೋರಂತಿರೆ ಮಾಡಿ ಬೆಳಗವತ್ತಿಯ ನಾಡಂ
ಧಾರಿಣಿಗೆ ನೆಗಟ್ದ ಕೊಪಣ
ಕ್ಕೋರಗೆಮಾಡಿದನುದಾರನಿಧಿಯೇಚರಸಂ ॥ 464 ॥

ಏಚಣನ ಹೆಂಡತಿ ಸೋವಲದೇವಿ

ಚಂ ಮಾ ॥ ಎಱೆಯನ ದೈವಮಾವುದದು ತನ್ನಯ ದೈವಮದಾವುದಾತನೊಳ್
ನೆಱೆದ ಗುಣೋನ್ನತಿಕ್ಕೆಯದು ತನ್ನಯ ಮಿಕ್ಕ ಗುಣೋನ್ನತಿಕ್ಕೆ ಕ
ಣ್ದೆಱೆದುದದಾವ ಧರ್ಮಮಧಿನಾಥನೊಳಂತದೆ ತನ್ನ ಧರ್ಮಮೆಂ
ದೆಱಕದೆ ಮಂತ್ರಿಯೇಚಣನ ವಲ್ಲಭೆ ಸೋವಲದೇವಿ ಭಾವಿಪಳ್ ॥ 465 ॥

ಕಂ ॥ ನಗೆ ನಗೆಮೊಗಮಂಬುಜಂ
ಮಿಗೆ ಮೃಗವೀಕ್ಷಣಮನೀಕ್ಷಣಂ ಮೃಗಧರನಂ
ತೆಗೞೆ ಮುಖಕಾಂತಿ ಚೆಲ್ವಂ
ತ್ರಿಗುಣಿಸಿದುದು ನಿನ್ನ ರೂಪು ಸೋವಲದೇವೀ ॥ 466 ॥

46) ಚಿಕ್ಕಮಾಗಡಿ 74, E.C. XIV (R), ಕ್ರಿಶ. ಸು. 1212

ಈ ನಿಸದಿಗಲ್ಲು ಶಾಸನದಲ್ಲಿ ಹೊಯ್ಸಳ ರಾಜನಾದ ಎರಡನೆಯ ಬಲ್ಲಾಳನ ಆಳಿಕೆಯಲ್ಲಿ ಜಕ್ಕವ್ವೆ ಸನ್ಯಸನ ವಿಧಿಯಿಂದ ಜೀವವನ್ನು ತೊರೆದು ಸ್ವರ್ಗಸ್ಥೆಯಾದಂತೆ ಹೇಳಿದೆ.

ಚಂ ಮಾ ॥ ಮತಿಜಿನಪಾದಪಂಕಜದೊಳನ್ವಿತಮಾದುದು ದೃಷ್ಟಿನಾಸಿಕಾ
ಗ್ರತೆಯೊಳೆ ನಿನ್ದುವಾಗಮಪದಂಗಳನಾಲಿಸುತಿರ್ದುವಾಗಳುಂ

ಶ್ರುತಿಯುಗಳಂ x ದೃಷ್ಟಿಯುತ ಸನ್ಯಸನಂ ನೆಱೆದೊಪ್ಪೆ ನಾಕಸಂ
ಗತಿನಡೆದಳ್ಸಮಾಧಿವಿಧಿಯಿಂ ವರಜಕ್ಕಲೆಯೇಂ ಕೃತಾರ್ಥೆಯೋ ॥ 467 ॥

ಮ ಸ್ರ ॥ ಸಲೆ ಮೋಹಧ್ವಾಂತದಿಂದಂ ಮುಗಿದ ಹೃದಯನೀರೇಜಮಂ ಜೈನವಾಕ್ಯಾ
ಮಲಭಾನುಜ್ಯೋತಿಯಿಂದಂ ವಿಕಚಿಸಿಯದಱೊಳ್ ದೇವದೇವೇಶನಂ ನಿ
ಶ್ಚಲಮಾಗಿರ್ದಾತ್ಮ ಸಂತೋಷದೊಳೆ ಜಿನಪನಂ ಜಾನಿಸುತ್ತಾ ಲತಾಕೋ
ಮಲೆ ಬಿಟ್ಟಳ್ ಜಕ್ಕಿಯಕ್ಕಂ ತನುವನುೞಿದರಾರ್ ಪೋಲ್ವರೆಂಬಂತು ತನ್ನಂ
॥ 468 ॥

ಚಂ ಮಾ ॥ ನೆಱೆಯೆ ಮುನೀಂದ್ರರುಂ ಪೊಗೞ್ದಿಣಂ ತಲೆದೂಗೆ ಪರಿಗ್ರಹಂಗಳಂ
ತೊಱೆದು ಗೃಹೀತಸನ್ಯಸನದಿಂ ನಿಜಬಾಂಧವಮೋಹಪಾಶಮಂ
ಪಱಿದು ಸುವೃತ್ತೆ ಜಕ್ಕಲೆ ಮಹಾಸತಿ ಚಿತ್ತಮನಾಪ್ತತತ್ವದೊಳ್
ನಿಱಿಸಿ ಸಮಾಧಿಯಿಂ ನೆಱೆಯೆ ಸಾಧಿಸಿದಳ್ ಸುರಲೋಕಸೌಖ್ಯಮಂ
॥ 469 ॥

ಚಂ ಮಾ ॥ ತಳರ್ದಿರದೇಕಪಾರ್ಶ್ವನಿಯಮಸ್ಥಿತಿ ದೃಷ್ಟಿ ಸುನಾಸಿಕಾಗ್ರದಿಂ
ಕಳಿವೆಡೆ ಬಲ್ಪು ಬಳ್ಕಿರದೆ ಮೆಯ್ ಮಿಡುಕಾಡದೆ ಜೈನಭಕ್ತಿ ಸಂ
ಚಳಿಸದೆ ಮಾಣದುಚ್ಚರಿಸಿ ಪಂಚಪದಂಗಳನಾತ್ಮ ತತ್ವದೊಳ್
ನೆಲಸಿದ ಸತ್ಸಮಾಧಿವಿಧಿ ಜಕ್ಕಲೆನಾರಿಗಿದೆಕ್ಕಲಾವಣಂ ॥ 470 ॥

ಉ ಮಾ ॥ ತತ್ವಮನಾ ಜಿನೇಂದ್ರಮತದಿಂ ತಿಳಿದುಜ್ವಳಮಾದ ಶುದ್ಧದೃ
ಷ್ಟಿತ್ವಗುಣಾರ್ಕನಿಂದಲರೆ ಶೀಲಗುಣವ್ರತವಾರಿಜಾಳಿ ಮಿ
ಥ್ಯಾತ್ವ ತಮಸ್ತಮಂ ಪರೆಯೆ ಸತ್ಪಥವರ್ತಿನಿಯಾಗಿ ಶುದ್ಧಸಂ
ವಿತ್ವದಿನೆಯ್ದಿದಳ್ ನೆಗೞ್ದ ಜಕ್ಕಲೆನಾರಿ ಸುರೇಂದ್ರಲೋಕಮಂ ॥ 471 ॥

ಚಂ ಮಾ ॥ ಲಲಿತಪತಿವ್ರತಾಚರಣಚಾರುನದೀಸಲಿಲಪ್ರವಾಹದಿಂ
ಕಲಿಮಲಮಂ ಕೞಲ್ಚಿ ನಿಜನಿರ್ಮಳಕೀರ್ತಿಲತಾವಿತಾನಮಂ
ಬಳೆಯಿಸಿ ಶೀಲಶಾಲಿವನಮಂ ಪರಿವರ್ಧಿಸಿ ಪುಣ್ಯನಂದನಂ
ಗಳನೆ ನಿಮಿರ್ಚಿ ಜಕ್ಕಲೆ ವಲಂ ಪಡೆದಳ್ ಸುಮನೋವಿಭೂತಿಯಂ ॥ 472 ॥

ಚಂ ಮಾ ॥ ಪರಿಕಿಸಿ ಸದ್ಬುಧರ್ಪೊಗೞೆ ತನ್ನ ಚರಿತ್ರಗುಣಾಂಕಮಾಲೆಯಂ
ವಿರಚಿಸಿ ಸುಪ್ರಬಂಧಮನೆ ದಿಕ್ಕುಳಭಿತ್ತಿಗಳೊಳ್ ತೆರಳ್ಚಿ ಮುಂ
ಬರೆದುದನೀಗಳಾ ದಿವಿಜಲೋಕದೊಳೊಪ್ಪುವ ಲೇಖಜಾಳದೊಳ್
ಬರೆಯಿಪೆನೆಂದು ಜಕ್ಕಲೆಮಹಾಸತಿಯೇಱಿದಳಲ್ತೆ ಸಗ್ಗಮಂ ॥ 473 ॥

47) ಬಂದಳಿಕೆ 174, E.C. XIV (R), ಕ್ರಿಶ. 1214

ಈ ವೀರಗಲ್ಲು ಶಾಸನದಲ್ಲಿ ಯಾದವ (ಸೇವುಣ) ದೊರೆ ಸಿಂಘಣನ ಆಳಿಕೆಯಲ್ಲಿ ಮಾಚ ಎಂಬುವವನ ಮಗ ಹೆಗ್ಗಡೆ ಸೋಮ ಎನ್ನುವವನು ಉದ್ದರೆಯಲ್ಲಿ ನಡೆದ ಯುದ್ಧದಲ್ಲಿ ಮರಣಿಸಿದುದನ್ನು ಹೇಳಿದೆ.

ಮ ಸ್ರ ॥ ಸ್ತುತಿಗೆಯ್ಯಲ್ ಅನ್ಯ ಸೈನ್ಯಂ ಪೊಗಳೆ ನಿಜಬಲಂ ಪಾಡೆ ಗಂಧರ್ವವೃತ್ತಂ
ಪತಿಯೊಳ್ ಕೀರ್ತಿಪ್ರತಾನಂ ಪಸರಿಸೆ ಸಮರೋತ್ಸಾಹದಿಂ ಕಾದಿ ಜಿತಂ
ಧ್ರುತಿಯಿಂದಂ ಪ್ರಾಪ್ತನಾದಂ ಸುರಯುವತಿಕುಚಾಭೋಗಕ್ಕೆ ನಿಚ್ಚಂ
ಮತಿಯಿಂದಂ ಸ್ವಾಮಿಭಕ್ತಿ ಬ್ರತದೊಳು ನಿರತಂ ಮಾಚನಂ ಔನ್ನತ್ಯದಿಂ
॥ 474 ॥

48) ಗುತ್ತನಹಳ್ಳಿ 54, E.C. XIV (R), ಕ್ರಿಶ. 1257

ಇದರಲ್ಲಿ ಬನವಾಸಿಪುರವರಾಧೀಶ್ವರ ವೀರರಾಮದೇವರಸ ಆಳಿಕೆಯಲ್ಲಿ ರಾವಗವುಡನು ತುರುಗೋಳಿನಲ್ಲಿ ಕಾದಿ ಮಡಿದನೆಂದು ಹೇಳಿದೆ.

ಕಂ ॥ ಪೊಳೆವ ಸಿಡಿಲಂತೆ ಜವನಂ
ತಳವಡಿಸುವ ಕಾಲಮೃತ್ಯುವೆಂಬಂತದಟಿಂ
ದಳವಿಯೊಳೆ ಪೊಯ್ದನಾಗಳ್
ಕುಲದೀಪಕನೆನಿಪ ರಾಮಗವುಡಂ ಪಲರಂ ॥ 475 ॥

ಕಂ ॥ ಸುರಿದರ್ ಪೂವಿನ ಮಱೆಯಂ
ಸುರದುಂದುಭಿಯೊಡನೆ ಶಂಖ ಕಹಳಾರವಮುಂ
ಬೆರಸು ಸುರಾಂಗನೆಯರ್ ತಾಂ
ಪಿರಿಯನನಾ ರಾಮಗವುಡನಂ ದಿವಕುಯ್ದರ್ ॥ 476 ॥

49) ಬಂದಳಿಕೆ 172, E.C. XIV (R), ಕ್ರಿಶ. 1396

ಇದರಲ್ಲಿ ವಿಜಯನಗರದ ಸಂಗಮವಂಶದ ದೊರೆ ಎರಡನೆಯ ಹರಿಹರನ ಆಳಿಕೆಯಲ್ಲಿ ಬಂದಣಿಕೆಯ ಬನದೇವಿಗೆ ಅನೇಕ ಜನ ನೀಡಿದ ದತ್ತಿಯನ್ನು ಹೇಳಿದೆ.

ಬಂದಳಿಕೆ

ಚಂ ಮಾ ॥ ವನಧಿವೃತೋರ್ವರಾಂಗನೆಯ ಕುಂತಳದಂತೆಸೆದಿರ್ದ ಕುಂತಳಾ
ವನಿ ವಿಷಯಕ್ಕಿದಲ್ತೆ ಮುಖಮೆಂಬವೊಲಾವಗವೊಪ್ಪಿ ತೋರುಗುಂ
ಬನವಸೆನಾಡದಕ್ಕೆ ತೊಡವಿರ್ಪವೊಲಿರ್ದುದು ವಿಶ್ವಧಾರುಣೀ
ಜನನುತಮಪ್ಪ ಬಂದಣಿಕೆ ಸಂದಮರಾವತಿಯಂತಿರೊಪ್ಪುಗುಂ ॥ 477 ॥

ಶಿವಮೊಗ್ಗ ತಾಲ್ಲೂಕು

50) ಆಲಹಳ್ಳಿ ಗ್ರಾಮ 7, E.C. XIII (R), ಕ್ರಿಶ. 1112

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ಆರನೆಯ ವಿಕ್ರಮಾದಿತ್ಯನ ಆಳಿಕೆಯಲ್ಲಿ, ಭುಜಬಳಗಂಗನ ಪತ್ನಿ ಬಾಚಲದೇವಿಯು ಬನ್ನಿಕೆರೆಯಲ್ಲಿ ಜಿನಗೃಹವನ್ನು ಮಾಡಿಸಿ ದತ್ತಿಯನ್ನು ಬಿಟ್ಟಂತೆ ಹೇಳಿದೆ.

ಗಂಗನ ಮಕ್ಕಳು

ಕಂ ॥ ಕೋಳಾಲಪುರವರೇಶನ್ನ
ಪಾಳಸುತಂ ಮದಗಜೇಂದ್ರಲಾಂಛನರ್ ಅರಿಭೂ
ಪಾಳಕುಳವನ ಜವನ ಶುಂ
ಡಾಳರ್ನ್ನೆಗರ್ದರ್ಸ್ಸಮಸ್ತ ಸುಭಟಾಗ್ರಣಿಗಳ್ ॥ 478 ॥

ಬಾಚಲದೇವಿ

ಕಂ ॥ ಈ ಚತುರಂಬುಧಿವೇಷ್ಟಿತ
ಭೂಚಕ್ರದ ಸತಿಯರೆನ್ನಲಾದಡವೇನೋ
ಬಾಚಲದೇವಿಗೆ ಸಮನೆ
x x ಚಮಣಿ ಪ್ರತತಿ ದೊರೆಯೆ ಚಿಂತಾಮಣಿಯೊಳ್ ॥ 479 ॥

ಕಂ ॥ ಶ್ರೀವಧು ಜಯವಧು ಕೀರ್ತಿ
ಶ್ರೀವಧು ವಾಗ್ವಧುವೆನಿಪ್ಪ ವಧು ಗಂಗನೃಪಂ
ಗೀವಧುವೆನಿಸಿದ ಬಾಚಲ
ದೇವಿಯೊಳೆಣೆಯೆನ್ನೆನುಟಿದ ನೃಪವನಿತೆಯರಂ ॥ 480 ॥

ಫಲಶ್ರುತಿ

ಕಂ ॥ ಧರೆ ಪುಸಿವೋಗದೆ ಬೆಳೆಗೀ
ಧರೆಯಂ ಭುಜಬಳದಿನಾಳ್ಗೆ ಭುಜಬಳಗಂಗಂ
ಪರೆದಿರ್ಕೆ ಜೈನಧರ್ಮಂ
ಧರೆಯೊಳ್ ಚಂದ್ರಾರ್ಕತಾರಮುಳ್ಳನ್ನೆವರಂ ॥ 481 ॥

ಮ ವಿ ॥ ಸಕಳೋರ್ವಿಸ್ತುತಮಪ್ಪ ಧರ್ಮಮನಿದಂ ಕಾದಂ ಚಿರೈಶ್ವರ್ಯಭುಂ
ಭುಕನಕ್ಕುಂ ವಿಪರೀತದಿಂ ನಡೆದವಂಗಾ ಗಂಗೆಯಾವಾರಣಾ
ಸಿಕುರುಕ್ಷೇತ್ರದೊಳೆಯ್ದೆ ಗೋದ್ವಿಜಮುನಿಸ್ತ್ರೀಯರ್ಕಳಂ ಕೊಂದ ಪಾ
ತಕಮಕ್ಕುಂ ಬಿಡದಿರ್ಕುಮಾಪುರುಷನೆಂತುಂ ರೌರವಸ್ಥಾನಮಂ ॥ 482 ॥

ಕಂ ॥ ಶಾಸನಮಿದಾವುದೆಲ್ಲಿಯ
ಶಾಸನಮಾರಿತ್ತರೇಕೆ ಸಲಿಸುವೆನಾನೀ
ಶಾಸನಮನೆಂಬ ಪಾತಕ
ನಾಸಕಳಂ ರೌರವಕ್ಕೆ ಗಳಗಳನಿೞಿಗುಂ ॥ 483 ॥

51) ನಿಧಿಗಿ 64, E.C. XIII (R), ಕ್ರಿಶ. 1115

ಇದರಲ್ಲಿ ಗಂಗರ ದೊರೆಯಾದ ನನ್ನಿಯಗಂಗ ಪೆರ್ಮಾಡಿಯ ಆಳಿಕೆಯಲ್ಲಿ ಬರ್ಮಿಸೆಟ್ಟಿ ಎಂಬುವವನು ಬಸದಿಗಾಗಿ ದಾನ ನೀಡಿದುದನ್ನು ಹೇಳಿದೆ.

ಬರ್ಮದೇವ

ಕಂ ॥ ಭರದಿಂದಾಂತದಟಂಗಂ
ಶರಣೆಂದ ನೃಪಂಗಮೆರೆದು ಬಂದ ನರಂಗಂ
ಸುರಗಿರಿ ವಜ್ರಾಗಾರಂ
ಸುರಭೂಜಂ ಬರ್ಮದೇವನದಟರ ದೇವಂ ॥ 484 ॥

ರಕ್ಕಸಗಂಗ

ಮ ವಿ ॥ ಸ್ಥಿರನೇ ಮೇರುಗಿರೀಂದ್ರನೊಳ್ ಸೆಣಸುವಂ ಗಂಭೀರನೇ ವಾರ್ಧಿಯೊಳ್
ಪುರುಡಿಪ್ಪಂ ಕಲಿಯೇ ಸುರೇಂದ್ರಸುತನಂ ಮೆಚ್ಚಂ ಮಹಾದಾನಿಯೇ
ಸುರಭೂಜಕ್ಕೊರೆಗಟ್ಟುವಂ ಚದುರನೇ ಪಾಂಚಾಳನಂ ಗೆಲ್ದನೆಂ
ದಿರದೀ ಧಾರಿಣಿ ಬಣ್ಣಿಕುಂ ರಣಜಯಪ್ರೋತ್ತುಂಗನಂ ಗಂಗನಂ ॥ 485 ॥

ಚಂ ಮಾ ॥ ನುಡಿದುದೆ ನನ್ನಿ ಮಾಡಿದುದೆ ಶಾಸನಮಿತ್ತುದೆ ರಾಮರೇಸು ಮಾ
ರ್ಪಡಿದುದೆ ವಜ್ರಲೇಪಮುಱದಿರ್ದುದೆ ಮೃತ್ಯು ಪರೋಪಕಾರದೊಳ್
ನಡೆದುದೆ ಬಟ್ಟೆ ಸದ್ಗುಣಮೆ ಮೆಯ್ಯೆನೆ ನಿನ್ನವೊಲಿಂತು ನೀತಿಯೊಳ್
ನಡೆವ ನೃಪೇಂದ್ರನಾವನಖಿಲಾವನಿಯೊಳ್‌ಕಲಿಗಂಗಭೂಪತೀ ॥ 486 ॥

ಗುಣನಂದಿ

ಕಂ ॥ ಗುಣಿಯೆನೆ ಜಿನಮತರಕ್ಷಾ
ಮಣಿಯೆನೆ ಕವಿಗಮಕಿವಾದಿವಾಗ್ಮಿಪ್ರವರಾ
ಗ್ರಣಿಯೆನೆ ಪಂಡಿತಚೂಡಾ
ಮಣಿಯೆನೆ ಗುಣನಂದಿದೇವರೆಸೆದರ್ ಧರೆಯೊಳ್ ॥ 487 ॥

ಗುಣಚಂದ್ರ

ಮ ವಿ ॥

ಅಳವೇ ಪೇಟ್ ನುಡಿಯಲ್ಕೆ ನಿನ್ನ ಬಿರುದಂ ಮಾಣ್ ಮಾಣೆಲೇ ಸಾಂಖ್ಯ ವಾ
ಗ್ಬಳಮಂ ನಚ್ಚದೆ ನೀನಡಂಗೆಡಱದಿರ್ ಚಾರ್ವಾಕ ನೈಯಾಯಿಕಾ
ಮಲೆಯಲ್ವೇಡಿರು ಮಟ್ಟಮೇಕೆ ಚಲದಿಂದೀಬಂದಪಂ ಕೆಮ್ಮನಂ
ಡಲೆಯಲ್ ಶ್ರೀಗುಣಚಂದ್ರದೇವನಮಳಂ ವಾದೀಭಕಂಠೀರವಂ ॥ 488 ॥

52) ಕಲ್ಲೂರು ಗುಡ್ಡ 14, E.C. XIII (R), ಕ್ರಿ.ಶ. 1122

ಇದರಲ್ಲಿ ಗಂಗರಾಜನಾದ ನನ್ನಿಯ ಗಂಗಪೆರ್ಮಾಡಿ ತನ್ನ ಅಜ್ಜ ಬರ್ಮದೇವನು ಮಾಡಿಸಿದ ಮಂಡಳಿಯ ಪಟ್ಟದ ತೀರ್ಥದ ಬಸದಿಯನ್ನು ಕಲ್ಲುವೆಸನಾಗಿ ಮಾಡಿಸಿ ದತ್ತಿ ಬಿಟ್ಟಂತೆ ಹೇಳಿದೆ.

ಗಂಗಾನದಿ

ಚಂ ಮಾ ॥ ತರಳ ತರಂಗ ಭಂಗುರ ಸಮನ್ವಿತೆಯಂ ಝಷ ಚಕ್ರವಾಕಭಾ
ಸುರಕಳಹಂಸ ಪೂರಿತೆಯನುದ್ಬಲತಾಂಕಿತ ಗಾತ್ರೆಯಂ ಮನೋ
ಹರನವ ಶೈತ್ಯಮಾಂದ್ಯಶುಭಗನ್ಧಸಮೀರ ನಿವಾಸೆಯಂ ತಳೋ
ದರಿ ನೆಱೆಗಂಗೆಯಂ ನಲಿದುಮೀವಭಿವಾಂಛೆಯನೆಯ್ದೆ ತಾಳ್ದಿದಳ್ ॥ 489 ॥

ಜೈನಬಸದಿ

ಮ ಸ್ರ ॥

ಭರದಿಂದಂಚರ್ಚ್ಚುವಾಯ್ದಂ ಪೊಗಳೆ ಬುಧಜನಂ ಬಂದ ಕಾವೇರಿಯೊಳ್ ಭೀ
ಕರಮಾಗಲ್ ವೀರಲಕ್ಷ್ಮೀನಯನ ಕುಮುದಿನೀ ಚಂದ್ರಮಂ ನಿನ್ದು ನೋಡಲ್
ಪರಿವಾರಂ ತಂನಕೀರ್ತ್ತಿಪ್ರಭೆ ಬಳಸೆ ದಿಶಾಭಾಗಮಂ ಚೋದ್ಯಮಾಗಲ್
ಪರಮಶ್ರೀ ಜೈನಪಾದಂ ನೆಲಸೆ ಹೃದಯದೊಳ್ ಮೇರುಶೈಲೋಪಮಾನಂ ॥ 490 ॥

ರಕ್ಕಸಗಂಗ

ಕಂ ॥ ತೆಂಗನುಡಿದಡರ್ದು ಕಿಟ್ಟಿಂ
ಕೌಂಗಂ ಮಿಡುಕದಿರಲೆಡದ ಕೆಯ್ಯೊಳ್ ಮದಮಾ
ತಂಗಮನೆ ಪಿಡಿದು ನಿಲಿಸಿದ
ಗಂಗಂ ಸಾಮಾನ್ಯನೃಪನೆ ರಕ್ಕಸಗಂಗಂ ॥ 491 ॥

ಭುಜಬಳಗಂಗ

ಕಂ ॥ ಭುಜಬಳದಿಂ ಶತ್ರುಮಹೀ
ಭುಜಕುಜಮಂ ಕಿಱ್ತು ಮುತ್ತಿ ಕೋಂಟೆಗಳಂ ಕೊಂ
ಡಜಿತಬಲನೆನಿಸಿ ನೆಗಱ್ದಿಂ
ಭುಜಬಳಗಂಗಕ್ಷಿತೀಶನವನಿಪತಿಳಕಂ ॥ 492 ॥

ನನ್ನಿಯಗಂಗ

ಚಂ ಮಾ ॥ ದೆಸೆಗಳನೆಯ್ದೆ ಪರ್ವಿದ ನೆಲಕ್ಕಿದೆ ತಾಂ ನೆಲಗಟ್ಟೆನಿಪ್ಪ ಬ
ಳ್ವೆಸೆವುದು ತೋಳೊಳೆಣ್ದೆಸೆಯ ಗಂಡರ ಮೀಸೆಯ ಮೇಲೆ ಮೇಲೆ ವ
ರ್ತಿಸುವುದು ಗಂಡಗರ್ವದ ಜಸಂ ಬಡಬಾಗ್ನಿಯ ಬಾಯನೆಯ್ದೆ ಬ
ತ್ತಿಸುವುದು ತೇಜಮೇನಧಿಕನಾದನೊ ನನ್ನಿಯ ಗಂಗಭೂಭುಜಂ ॥ 493 ॥

ಚಂ ಮಾ ॥ ಪದನಖದೊಳ್ ದಶಾನನತೆ ನಮ್ರನೃಪಾಳಿಮುಖಾಂಕದಿಂ ಜಯಾ
ಸ್ಪದಭುಜದಲ್ಲಿ ಷಣ್ಮುಖತೆ ದುರ್ಜಯಶಕ್ತಿಧರತ್ವದಿಂ ಚತು
ರ್ವದನತೆ ವಕ್ತ್ರದೊಳ್ ಚತುರವಾಣಿಯಿನೊಪ್ಪಿರಲೆಂತು ನೋೞ್ಪೊಡ
ಭ್ಯುದಯಮನೆಯ್ದಿದತ್ತು ಪಲವುಂ ಮುಖದಿಂ ತವೆ ಕೀರ್ತಿ ಗಂಗನೊಳ್
॥ 494 ॥

ಮ ಸ್ರ ॥ ಮುನಿಸಿಂ ದಿಗ್ದಂತಿದಂತಂಗಳನವಯವದಿಂದೊತ್ತಿ ಬೇಗಂ ಥಳಿಲ್ಲೆಂ
ಬಿನೆಗಂ ಕಿೞ್ತೆತ್ತನೇ ತಾರಗೆಗಳನದಟಿಂದಾಲಿಕಲ್ಲಂದದಿಂ ಸೂ
ಸನೆ ವಾರ್ಧಿವ್ರಾತಮಂ ಸುಜ್ಜನೆ ತವುವಿನೆಗಂ ಪೀರನೇ ಕೋಪದಿಂ ಪೊ
ಯ್ಯನೆ ಬೆಟ್ಟಂ ಪಿಟ್ಟುಪಿಟ್ಟಾಗಿರೆ ಸಮರದೊಳೀ ವೀರಪೆರ್ಮಾಡಿದೇವಂ
॥ 495 ॥

ಗುಣನಂದಿ

ಕಂ ॥ ಎಳೆಗೆ ಗುಣರುಚಿಯಿನೊಳ್ಪ
ಗ್ಗಳಿಸಿರೆ ಗುಣರುಚಿವಿಕಾಸವಾಗ್ರಶ್ಮಿಯಿನಂ
ಜ್ಜಳಿಸೆ ವದನೇಂದು ಪೆಂಪಂ
ತಳೆದಂ ಗುಣನಂದಿದೇವಶಬ್ದಬ್ರಹ್ಮಂ ॥ 496 ॥

ಪ್ರಭಾಚಂದ್ರ

ಮ ವಿ ॥ ಚತುರಾಸ್ಯಂ ಚತುರೋಕ್ತಿಯಿಂ ಪ್ರಭುತೆಯಿಂದೀಶಂ ಗುಣವ್ಯಾಪಕ
ಸ್ಥಿತಿಯಿಂ ವಿಷ್ಣು ಸುಬುದ್ಧಿವಿಸ್ತರತೆಯಿಂ ಬೌದ್ಧಂದಲೀ ಜೈನಪ

ದ್ಧತಿಯಿಂದಿರ್ದುಮಿದೇಂ ವಿಚಿತ್ರತರಮೋ ಚಾತುರ್ಯಮಾಯ್ತೀಸಮು
ನ್ನತಸಿದ್ಧಾಂತವಿಭೂಷಣಂಗೆನಿಸಿದಂ ಶ್ರೀಮತ್ಪ್ರಭಾಚಂದ್ರಮಂ ॥ 497 ॥

ಕಂ ॥ ವಾದಿವನದಹನ ಹುತವಹ
ವಾದಿ ಮನೋಭವ ವಿಶಾಳ ಹರನಿಟಿಳಾಕ್ಷಂ
ವಾದಿಮದರದನಿ ಬಿದುವಂ
ಭೇದಿಪ ಮೃಗರಾಜ ಜಯತು ಶ್ರುತಕೀರ್ತ್ತಿಬುಧಂ ॥ 498 ॥

ಕಂ ॥ ಕವಿಗಮಕಿವಾದಿ ವಾಗ್ಮಿಗ
ಳವಂದಿರಂ ಗೆಲ್ದು ಕನಕನನ್ದಿ ತ್ರೈವಿ
ದ್ಯವಿಳಾಸಂ ತ್ರಿಭುವನ ಮ
ಲ್ಲ ವಾದಿರಾಜಂ ದಲೆನಿಸಿದಂ ನೃಪಸಭೆಯೊಳ್ ॥ 499 ॥

ಬುಧಚಂದ್ರ

ಚಂ ಮಾ ॥ ವಸುಮತಿಗೊಳ್ಪುವೆತ್ತ ಧವಳಾತಪವಾರಣಮಾಗಿ ಕೀರ್ತಿ ನ
ರ್ತಿಸುವುದು ಪೆಂಪುವೆತ್ತ ಮಹಿಮೋನ್ನತಿ ಮೇರುಗೆ ಮಂಡಪಂ ದಲಾ
ಗೆಸೆವುದು ಸದ್ಗುಣಪ್ರತತಿ ಮೌಕ್ತಿಕಮಾಲೆಯ ಲೀಲೆಯಂ ಸಮ
ರ್ಥಿಸುವುದು ಸಜ್ಜನಕ್ಕೆ ಸಹಜಾತಮೆನಲ್ ಬುಧಚಂದ್ರದೇವರಾ ॥ 500 ॥

ಮ ವಿ ॥ ಕರಮಂ ವಾರುಣಿಗೆಂದು ನೀಡಿ ಪಿರಿದುಂ ನಿಸ್ತೇಜಮೆಯ್ದಿರ್ದ್ದ ತ
ನ್ನಿರವಂ ನೋಡದೆ ಸತ್ವದಪ್ರಭುತೆಯ ತಾಳ್ದಿರ್ಪ ದೋಷಾಕರಂ
ದೊರೆಯೇ ಪೇಟೆನುತುಂ ಕಳಂಕರಹಿತಂ ಸದ್ವೃತ್ತದಿಂದಂ ತಿರ
ಸ್ಕರಿಪಂ ಚಂದ್ರನನೊಳ್ಪುವೆತ್ತ ಬುಧಚಂದ್ರಂ ಸಂತತೋತ್ಸಾಹದಿಂ ॥ 501 ॥

ಮ ವಿ ॥ ನುಡಿಗಳ್ ಸತ್ಯಸುವರ್ಣಭೂಷಣಗಣಂ ಚಿತ್ತಂ ಸುರತ್ನಂಗಳಂ
ಮಡಗಿಟ್ಟಿರ್ಪ ಕರಂಡಕಂ ತನು ತಪಶ್ರೀಭಾಮಿನೀಭಾಸಿಯೆಂ
ದೊಡೆ ದುಷ್ಕೀರ್ತಿಯನಾಂತ ಮತ್ತಿನ ಶಠರ್ ದುರ್ಬೋಧರಸ್ಪೃಶ್ಯರೇಂ
ಪಡಿಯೇ ಸದ್ಬುಧಸೇವ್ಯನಪ್ಪ ಬುಧಚಂದ್ರಖ್ಯಾತಯೋಗೀಂದ್ರನೊಳ್ ॥ 502 ॥

53) ಪುರಲೇ 68, E.C. XIII (R), ಕ್ರಿ.ಶ. 1172

ಇದರಲ್ಲಿ ಹೊಯ್ಸಳರ ದೊರೆ ಒಂದನೆಯ ನರಸಿಂಹನ ಆಳಿಕೆಯಲ್ಲಿ ಸತ್ಯಗಂಗದೇವನು ಕುರುಳಿ ತೀರ್ಥದಲ್ಲಿ ಗಂಗಜಿನಾಲಯವನ್ನು ಮಾಡಿಸಿ ದಾನ ನೀಡಿರುವುದನ್ನು ತಿಳಿಸಿದೆ.

ವಿನಯಾದಿತ್ಯ

ಮ ವಿ ॥ ಅದಱೊಳ್ ಕೌಸ್ತುಭದೊಂದನರ್ಘ್ಯಗುಣಮಂ ದೇವಭದುದ್ದಾಮಸ
ತ್ವದಗುರ್ವಂ ಹಿಮರಶ್ಮಿಯುಜ್ವಳಕಳಾಸಂಪತ್ತಿಯಂ ಪಾರಿಜಾ
ತದುದಾರತ್ವದ ಪೆಂಪನೊರ್ವನೆ ನಿತಾಂತಂ ತಾಳ್ದಿತಾನಲ್ತೆ ಪು
ಟ್ಟಿದನುದ್ವೇಜಿತ ವೀರವೈರಿ ವಿನಯಾದಿತ್ಯಾವನೀಪಾಲಕಂ ॥ 503 ॥

ಕಂ ॥ ವಿನಯಾದಿತ್ಯನೃಪಂ ಸ
ಜ್ಜನರ್ಗಂ ದುರ್ಜನರ್ಗಮಾತ್ಮವಿನಯಂ ತೇಜಂ
ಜನಿಯಿಸೆ ನಯಮಂ ಭಯಮಂ
ವಿನೂತನಾಳ್ದಂ ವಿಶಾಲಭೂಮಂಡಲಮಂ ॥ 504 ॥

ಎಱೆಯಂಗ ಹೊಯ್ಸಳನ ಅಳಿಯ ಹೆಮ್ಮಾಡಿಯರಸ

ಮ ಸ್ರ ॥ ಇವನಿಂದಂ ಕಂಡೆನೇೞುಂ ಕಡಲ ಕಡೆಯನೇೞುಂ ಕುಭೃತ್ಕೂಟಮಂ ದಿ
ಗ್ಧವದಂತಿವ್ರಾತಮಂ ಲೋಕದ ಪವಣನೆನುತ್ತುಂ ಯಶೋಲಕ್ಷ್ಮಿ ಮೆಯ್ವೆ
ರ್ಚುವಿನಂ ತನ್ನಣ್ಮು ತನ್ನೊಂದಱಿವಿನಳವು ತನ್ನಾರ್ಪು ತನ್ನೇೞ್ಗೆ ತನ್ನೊಂ
ದು ವಿಳಾಸಂ ತನ್ನ ಪೆಂಪತ್ತಳಗಮೆನಿಸಿದಂ ಹೆರ್ಮಮಾಂಧಾತಭೂಪಂ
॥ 505 ॥

ವಿಷ್ಣುವರ್ಧನ

ಕಂ ॥ ಎಳೆಗೆಸೆವ ಕೋಯತೂರ್ ತ
ತ್ತಳವನಪುರಮಂತೆ ರಾಯರಾಯಪುರಂ ಬ
ಳ್ವಳಬಳೆದ ವಿಷ್ಣುತೇಜೋ
ಜ್ವಳನದೆ ಬೆಂದುವು ಬಲಿಷ್ಠ ರಿಪುದುರ್ಗಂಗಳ್ ॥ 506 ॥

ಗಂಗಾನದಿ

ಚಂ ಮಾ ॥ ತರಳ ತರಂಗ ಭಂಗುರ ಸಮನ್ವಿತೆಯಂ ಝುಷಚಕ್ರವಾಕ ಭಾ
ಸುರ ಕಳಹಂಸ ಪೂರಿತೆಯನುದುಘಲತಾಂಕಿತಗಾತ್ರೆಯಂ ಮನೋ
ಹರನವಶೈತ್ಯಮಾಂದ್ಯಶುಭಗಂಧಸಮೀರನಿಭಾಸ್ಯೆಯಂ ತಳೋ
ದರಿನೆಱೆಗಂಗೆಯಂ ನಲಿದುಮೀವಭಿವಾಂಚ್ಛೆಯನೆಯ್ದೆ ತಾಳ್ದಿದಳ್ ॥ 507 ॥

ಭುಜಬಳಗಂಗ

ಸ್ರಗ್ಧರೆ ॥ ಮಾರಿಟ್ಟಾಶಾಂತಮಂ ಬಳ್ಳದೊಳಳೆದುದಧಿವ್ರಾತಮಂ ತೂಗಿ ಸಂದಾ
ಮೇರುಕ್ಷೋಣೀಧ್ರಮಂ ತ್ರಾಸಿನೊಳೆಣಿಸಿ ತರಂಗೊಂಡು ನಕ್ಷತ್ರಮಂ ಪೇ

ಬಾರಾನುಂ ಬಲ್ಲರೇ ಬಲ್ಲೊಡೆ ಪೊಗೞ್ಗೆಮ ವಿಶ್ವಂಭರಾಭಾರವೀರ
ಶ್ರೀರಾಮಾಲೀಢವಜ್ರದ್ರಢಿಮಘನಭುಜಸ್ತಂಭನಂ ಗಂಗ ನಿನ್ನಂ ॥ 508 ॥

ಸಾಗರ ತಾಲ್ಲೂಕು

54) ಆಚಾಪುರ 3, E.C. XV (R), ಕ್ರಿಶ. 1042

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆಯಾದ ಮೊದಲನೆಯ ಜಯಸಿಂಹನ ಆಳಿಕೆಯಲ್ಲಿ ದಂಡನಾಯಕ ಗೋನರಸನು ಕೆರೆಗಳನ್ನು, ದೇವಾಲಯಗಳನ್ನು ಕಟ್ಟಿಸಿ, ಒಂದು ಅಗ್ರಹಾರವನ್ನು ನಿರ್ಮಾಣ ಮಾಡಿಸಿ ಬ್ರಾಹ್ಮಣರಿಗೆ ದತ್ತಿಯಾಗಿ ನೀಡಿದಂತೆ ಹೇಳಿದೆ.

ಗೋನರಸ

ಕಂ ॥ ಆಹವರಂಗದೊಳಹಿತ ಸ
ಮೂಹಮನಿಱಿದಲ್ಲಿ ಕೊಂಕಿದಸಿಯಂ ಮತ್ತೊಂ
ದಾಹವದೊಳ್ ತಿರ್ದ್ದುವಂ
ಸಾಹಸದೊಳ್ಗಂಡನಲ್ತೆ ಬಿಜ್ಜನ ಬಂಟಂ ॥ 509 ॥

ಕಂ ॥ ಆರ್ವ್ವಮರುಳರುಣಜಳಮಂ
ಪೀರ್ವ್ವ ಮರುಳ್ಪಱಿದ ಮೂಳೆಯಂ ಮೊಳಕಾಲಂ
ಕಾರ್ವ ಮರುಳ್ ಶಬಳಾಗೆ
ಪೂರ್ವ ಮರುಳ್ಗೋನನಿಱಿದು ಗೆಲ್ದಾಹವದೊಳ್ ॥ 510 ॥

ಕಂ ॥ ಹರನ ನಿಟಿಲಾಕ್ಷಿವಹ್ನಿ
ಸ್ಫುರಣಂ ಮುರಹರನ ಚಕ್ರಮಬ್ಜಜಪಾಶಂ
ಸುರರಾಜವಜ್ರಮೆನಿಪುದು
ಧುರದೊಳ್ ರಿಪುನೃಪರ್ಗೆ ಗೋನಭೂಪನ ಕರವಾಳ್ ॥ 511 ॥

ಮ ಸ್ರ ॥ ಅರಿಭೂಪಾಳೋಗ್ರವೀರಪ್ರಮುಖಮನಿಱಿದಾಟಂದಪಂ ಕೊಂದಪಂ ಮ
ಚ್ಚರದಿಂದೆಬ್ಬಿಟ್ಟಿಪಂ ಮುಟ್ಟಪನತಿಭರದಿಂ ನೇರ್ದಪಂ ಸೀಳ್ದಪಂ ಕೋ
ವರಚಕ್ರಾಕಾರದಿಂ ತಿಜ್ಜಿನೆ ತಿರಿಪಿದಪಂ ಸುತ್ತಿಪಂ ಮುತ್ತಿಪಂ ಸಂ
ಗರದೊಳ್ ಶ್ರೀಗೋನಭೂಪಂ ಪ್ರಳಯಶಿಖಿಶಿಖಾಟೋಪಕೋಪಪ್ರತಾಪಂ
॥ 512 ॥

ಚಂ ಮಾ ॥ ಪಱಿದ ಶಿರಂಗಳಿಂ ಕೆದಱಿ ಬಿದ್ದಿ ಗಜಂಗಳಿನಾಡುವಟ್ಟೆಯಿಂ
ಸುಱಿದರುಣಾಂಬುವಂ ನಲಿವ ರಾಮೆಯರಿಂ ಪೆಣದತ್ತ ಸಾರ್ವ ಪೆಂ

ತೆಜೆಯರಿನಲ್ಲಿ ಮಾಂಸರಸಮಂ ಸವಿದಾಡುವ ರಕ್ಕಸರ್ಗೆ ಪ
ಲ್ದೆಜೆವ ಮರುಳ್ಗಳಿಂ ಸಮರಮಾಸುರಮಾದುದು ಗೋನಭೂಪನಿಂ॥ 513 ॥

ಮ ವಿ ॥ ಅರಿಭೂಭೃದ್ಗಳಕಾಳದಂಡನೊಹೊಹೋ ಕೊಂದಿಕ್ಕಿಪಂ ಮುಕ್ಕಿಪಂ
ನಿರುತಂ ಪೋರ್ದಪನೀಬ್ದು ಪೀರ್ದಪನೆಲೇ ಮದ್ರಕ್ತಮಂ ಕೂಡೆ ಕಿಂ
ಕರರಪ್ಪಂ ಶರಣೆಂಬಮಾತನನಿಳಾವಿಖ್ಯಾತನಂ ನಿಚ್ಚಮೆಂ
ದರಿವರ್ಗಂ ಕುದಿಯುತ್ತುಮಿರ್ದಪುದಿದಕ್ಕುಂ ಗೋನನಾಡಂಬರಂ ॥ 514 ॥

ಚಂ ಮಾ ॥ ರಣದೊಳರಾತಿಭೂಭುಜಬಲಂಗಳನುಗ್ರಭುಜಾಸಿಯೊಳ್ ಖಣಿಲ್
ಖಣಿಲೆನೆ ತಳ್ತು ಪೊಯ್ದು ಪಡಲಿಟ್ಟವೊಲಾಗಿರೆ ಮಾಡಿ ಸಂದ ಬ
ಲ್ಕಣಿಗಳ ನೆತ್ತರಿಂ ನೆಣದಿನಳ್ಗರುಳಿಂದಮೆ ಭೂತಕೋಟಿಯಂ
ತಣಿಪಿ ನೆಗಟ್ತೆಯಂ ಪಡೆದನೀಧರೆಯೊಳ್ ಸಲೆ ಗೋನಭೂಮಿಪಂ॥ 515 ॥

ಮ ವಿ ॥ ಧುರದೊಳ್ ಗೋನುಗಭೂಪ ನಿನ್ನ ನಿಶಿತಾಸ್ತ್ರಾಘಾತದಿಂ ಸತ್ತ ಭೂ
ಪರ ಪೆಂಡಿರ್ ಬಿಸುಸುಯ್ಯೆ ನೀಳ್ವ ಶಿಖಿ ತನ್ನಂ ಮುಟ್ಟೆ ನೊಂದಿಂದು ನಿ
ತ್ತರಿಸಲ್ ತಾನಣಮಾಜಿದೀಶ್ವರಜಟಾಜೂಟಾಟವೀ ಸಿಂಧುಸೀ
ವರಮಂ ಸೇವಿಸಲಿರ್ದನುಂತು ಶಶಿಗಂ ದೇವಂಗಮೇ ಸಮ್ಮದಂ ॥ 516 ॥

ಚಂ ಮಾ ॥ ತೊಡರ್ವ ವಿರೋಧಿಗೆಂಬೆರ್ದೆಯೆ ಮೀಜುವ ವೈರಿಗೆ ಮೂಜು ಕಣ್ಣೆ ಮಾ
ರ್ನುಡಿವವನೇಂ ಚತುರ್ಭುಜನೆ ಮಚ್ಚರಿಪಣ್ಣಲೆ ಬರ್ಮನೊಳ್ ಬರಂ
ಬಿಡಿದನೆ ಮೀಜಿ ಬಾಜ್ವೊಡವನೇಂ ಜವನೇ ಕಡಿಕೆಯ್ದು ಕಾದಲೆಂ
ದೊಡರಿಸುವಾತನೇಂ ಭುಜಗಮರ್ದನನೇ ಕಲಿಗೋನಭೂಪನೊಳ್
॥ 517 ॥

ಮ ವಿ ॥ ಎಲೆ ಕೇಳ್ ಗೋನಮಹೀಪ ನಿನ್ನ ಯಶಮಂ ಶ್ರೀಕಾಂತೆಯಾಶಾಂತದೊಳ್
ನೆಲಸಿರ್ದುನ್ಮದದಂತಿದಂತಯುಗದೊಳ್ ತನ್ನಟ್ತಿಯಿಂ ಕಟ್ಟಿದು
ಯ್ಯಲನಾನಂದದೊಳೇಜಿ ದಿಗ್ವನಿತೆಯರ್ ತೂಗಲ್ಕೆ ನಿನ್ನೊಳ್ಗುಣಂ
ಗಳನಾಲೋಳಮದಾಳಿಮಂದ್ರಮಧುರಪ್ರಧ್ವಾನದಿಂ ಪಾಡಿದಳ್ ॥ 518 ॥

55) ಬೇಸೂರು 153, E.C. XV (R), ಕ್ರಿ.ಶ. 1089

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ತ್ರಿಭುವನಮಲ್ಲನ (ವಿಕ್ರಮಾದಿತ್ಯ VI) ಆಳಿಕೆಯಲ್ಲಿ ಮಹಾಮಂಡಳೇಶ್ವರ ರಾಯಸಾನ್ತರ ತೈಲಪದೇವನ ಮಂತ್ರಿಯಾದ ಕನ್ನಯ್ಯ ಎಂಬುವವನು ಬೆಸವೂರಿನಲ್ಲಿ ಕನ್ನೇಶ್ವರ ದೇವಾಲಯವನ್ನು ಕಟ್ಟಿಸಿದುದನ್ನೂ ಆ ದೇವರ

ಸೇವೆಗೆ ಬಂದ ದತ್ತಿಯನ್ನೂ ಹೇಳಿದೆ.

ಪೆರ್ಗಡೆ ಕನ್ನ

ಉ ಮಾ ॥ ವಾರಿಧಿ ಬತ್ತುಗುಂ ವಸುಧೆ ಪೊತ್ತುಗುಂ ದಿಗ್ಗಜಮಳ್ಕಿ ಬಳ್ಕುಗುಂ
ಮೇರು ನಗಾದ್ರಿ ನೀರನೆಳಲಂ ತತಿ ಸಂಚಳಮಾಗಿ ತೋರ್ಕುಮೇ
ಕಾರಣಮೋಮ ಸತ್ಯಪರನಾದಡಮನ್ಯ ಸತೀ ಜನಕ್ಕೆ ಕೈ
ವಾರದೆ ಸೋಲ್ತಡಂ ನೆಗಟ್ಟಿ ಪೆರ್ಗಡೆ ಕನ್ನನಿಳಾತಳದೊಳುಂ ॥ 519 ॥

ಕಂ ॥ ಅದಟಿನ ಬಿರುದರನದಟಲೆ
ವದಟಿನ ಪಟುತರ ವಿಶಲಬಿರುದರನಮಮ ಮೆ
ಟ್ಟಿದುದು ಪಿಡಿದ ಸೀಕಳಿದುದು
ಮದರಿಪುರದನಿಗಳ ತೈಲಭೂಪನ ಸಿಂಗಂ ॥ 520 ॥

ಉ ಮಾ ॥ ಕನ್ನನುದಾತ್ತ ವೀರಗುಣ ಕನ್ನನುದಾರತೆ ಕನ್ನನೊಂದು ಸೌ
ಜನ್ಯತೆ ಕನ್ನನೊಂದು ಮಹಿಮೋನ್ನತ ಕನ್ನನ ಭದ್ರ ಲಕ್ಷಣಂ
ಕನ್ನನ ಕೀರ್ತಿ ಕನ್ನನಭೀಮಾನತೆ ಕನ್ನನ ಸಚ್ಚರಿತ್ರಮಿ
ನ್ತೆನ್ನರುಮಾ x x x x x ಜಗಮಂ ಸಲೆ ಭಾಸಣಿಸಲ್ಕೆ ಸಾಲದೇ ॥ 521 ॥

ಕಂ ॥ ಕುಂಭಿನಿತಳದೊಳ್ ದಿಗಿಭರ
ಕುಂಭಾಗ್ರದೊಳಾ ನಭಸ್ಥಳದ ಕಡೆಗಡೆಯೊಳ್
ತಾಂಭಾರತಿ ಪರಿವಾರ
ಸ್ತಂಭಂ ಬಿಲ್ಲಂಕರಾಮವೆಸರಂ ಬರೆದಳ್ ॥ 522 ॥

56) ಆವಿನಹಳ್ಳಿ 13, E.C. XV (R), ಕ್ರಿಶ. 1096

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆಯಾದ ಆರನೆಯ ವಿಕ್ರಮಾದಿತ್ಯನ ಆಳಿಕೆಯಲ್ಲಿ ತ್ರಿಭುವನಮಲ್ಲ ಸಾಂತರನ ಅಧಿಕಾರಿ ಪಡೆವಳ ಸಿಂಗಣನು ಕೆರೆಯನ್ನೂ ಎರೆಯಮೇಶ್ವರ ದೇವಾಲಯವನ್ನೂ ಕಟ್ಟಿಸಿದುದನ್ನು ಹೇಳಿದೆ.

ಸಿಂಗಗೌಡ

ಚಂ ಮಾ ॥ ವಿದಿತಗುಣಾಢ್ಯನೆಂಬುದು ಬುಧಸ್ತುತನೆಂಬುದು ಸತ್ಯವಾಕ್ಯನೆಂ
ಬುದು ಸುಚರಿತ್ರನೆಂಬುದು ಯಶೋಂಚಿತನೆಂಬುದು ಸುಂದರಾಂಗನೆಂ
ಬುದು ಮನುಮಾರ್ಗನೆಂಬುದು ದಯಾಪರನೆಂಬುದು ಶಿಷ್ಟರತ್ನೆಂ
ಬುದು ಪೆಱತೆಂಬುದೇಂ ನೆಗಟ್ಟಿ ಧಾರಿಣಿಯೊಳ್ ಸಲೆ ಸಿಂಗಗೌಂಡನಂ
॥ 523 ॥

ಅರ್ಜುನಗೌಡ

ಚಂ ಮಾ ॥ ವಿನಯದ ಜನ್ಮಭೂಮಿಯಭಿಮಾನದ ಮಂದಿರಮಾರ್ಪಿನಬ್ಧಿ ಪೆಂ
ಪಿನ ಕಣಿ ಶಿಷ್ಟವರ್ಗದ ತವರ್ಮನೆಯಾಶ್ರಿತಕಲ್ಪಭೂಜಮೊ
ಳ್ಪಿನ ಮೊದಲೂರ್ಜಿತಾಮಳಯಶೋನಿಧಿಯಿಷ್ಟ ನಿಧಾನಮೆಂದು ಕೂ
ರ್ತನುನಯದಿಂದೆ ಬಣ್ಣಿಸುವುದರ್ಜುನಗೌಂಡನನೀ ಧರಾತಳಂ ॥ 524 ॥

ಎಱೆಗ

ಕಂ ॥ ಅರಿನರಪರರುಣಜಳದಿಂ
ದರಿಭಟಕರಕಮಳಮುಕುಳಿತಾಂಜಳಿಪುಟದಿಂ
ದರಿನರರಾನಮ್ರತೆಯಿಂ
ಕರಮೆಸೆದುದು ಪಡೆವಳೆಱೆಗನಾಹವರಂಗಂ ॥ 525 ॥

ಕಂ ॥ ಎಡರುವವರಿದೇಂ ಬಱಸಿಡಿ
ಲಡಸುವ ಬಲ್ವಾರಿಜವನಚಾರಿಯ ಸೂಲಂ
ಕುಡುದಾಡೆಯರಕ್ಕಸನಾ
ಗಡಮಂಜಿಪ ಜೂಜು ಪಡವಳೆಱೆಗಂ ಜಗದೊಳ್ ॥ 526 ॥

ಪಡೆವಳ ಸಿಂಗ

ಚಂ ಮಾ ॥ ಮದವದರಾತಿ ಮಂಡಳಿಕ ಮಂಡಳ ಖಾಂಡವಂ x ಹೋತ್ರನೆಂ
ಬುದು ವನಿತಾವಿಳೋಳ ನಯನೋತ್ಪಳ ಚಾರು ಸುಧಾಂಶು ರೇಖನೆಂ
ಬುದು ಜಯಲಕ್ಷ್ಮೀವಲ್ಲಭನುದಾತ್ತ ಯಶೋನಿಧಿಶಿಷ್ಯರತ್ನನೆಂ
ಬುದು ಪಡೆವಳ್ಳ ಸಿಂಗನ ಗುಣಾವಳಿಯಿಂ ಮನವೊಲ್ ನಿಚ್ಚಲುಂ ॥ 527 ॥

57) ಹೆರೆಕೆರೆ 228, E.C. XV (R), ಕ್ರಿ.ಶ. 1159

ಇದರಲ್ಲಿ ಚಾಲುಕ್ಯ ರಾಜನಾದ ನೂರ್ಮಡಿತೈಲನ ಆಳಿಕೆಯಲ್ಲಿ ಸಾಂತರ ಕಾಮನ ಮಗಳಾದ ಅಳಿಯಾದೇವಿ ಸೇತುವಿನಲ್ಲಿ ಜಿನಬಸದಿಯನ್ನು ಮಾಡಿಸಿ ಭೂಮಿಯನ್ನು ದತ್ತಿ ಬಿಟ್ಟಂತೆ ಹೇಳಿದೆ.

ತೈಲಸಾಂತರ

ಚಂ ಮಾ ॥ ಅದಟಿನಳುರ್ಕೆ ಮೈಮೆಯ ನಿಮಿರ್ಕೆ ಯಶೋಧನದಿರ್ಕೆ ರಾಜವಂ
ಶದ ಕಡುದೆಳ್ಪು ದಾನಗುಣದೊಳ್ಪು ಗುಣಂಗಳ ತಳ್ಪು ರಾಜ್ಯಸಂ
ಪದದ ಪೊದಟ್ಕೆ ತೇಜದ ತೆರಳ್ಕೆ ವಿರೋಧಿಯ ಬಾಟ್ಕೆ ತನ್ನದೆಂ
ಬುದನೆನೆ ಪೆರ್ಮೆಯಿಂ ತಳೆದನಾ ನೃಪರೊಳ್ ನೃಪತೈಲಸಾಂತರಂ ॥ 528 ॥

ಅಳಿಯಾದೇವಿಯ ಅಣ್ಣ ಜಗದೇವ

ಚಂ ಮಾ ॥ ಅದಿರದ ವೀರರಿಲ್ಲಳವುಗುಂದದ ಮನ್ನೆಯರಿಲ್ಲ ಕೂಗಡಂ
ಗದ ನರನಾಥರಿಲ್ಲ ನಡಪೆನ್ನದ ರಾಜಕುಮಾರರಿಲ್ಲ ಚಾ
ಗದ ಬಳವಂತರಿಲ್ಲ ಕೆಡೆದೊಡ್ಡಿಸಿ ಪೋಗದ ದುರ್ಗವರ್ಗಮಿ
ಲ್ಲೊದವಿದ ಶೌರ್ಯಶಕ್ತಿಗೆ ದಿಟಂ ಜಗದೊಳ್ ಜಗದೇವಭೂಪನಾ ॥ 529 ॥

ಉ ಮಾ ॥ ಉನ್ನತಿ ಮೇರುವಿಂಗೆ ಮಣಿಮಾಲಿಕೆಯಾದುದು ಸರ್ವಶಾಸ್ತ್ರಸಂ
ಪನ್ನತೆ ಭಾರತೀವಚನಮಾದುದು ದಾನಗುಣಂ ಸಮಸ್ತವಿ
ದ್ವನ್ನಿಕರಕ್ಕೆ ಕೆಯ್ಪಿಡಿವೊಲಾದುದು ತನ್ನ ಜಸಂ ಜಗಕ್ಕೆ ಕೆ
ಯ್ಗನ್ನಡಿಯಾದುದೇನೆಸೆದನೋ ಜಗದೊಳ್ ಜಗದೇವಭೂಭುಜಂ ॥ 530 ॥

58) ಬೈರಾಪುರ 155, E.C. XV (R), ಕ್ರಿಶ. 1194

ಈ ವೀರಗಲ್ಲು ಶಾಸನದಲ್ಲಿ ಶಾನ್ತರ ದೊರೆ ವೀರಶಾನ್ತರದೇವನ ಆಳಿಕೆಯನ್ನು ಹೇಳಿದೆ. ಹಿರಿಯಹಾರಕ ಎಂಬ ಗ್ರಾಮದ ತುರುಗೋಳ್‌ಸಂದರ್ಭದಲ್ಲಿ ಬೆಳಯ್ಯಗೌಡ ಎಂಬುವವನು ದೇಸಿಂಗವೆರ್ಗಡೆ ಮೊದಲಾದವರವನ್ನು ಎದುರಿಸಿ ಮರಣ ಹೊಂದಿದ್ದನ್ನು ಹೇಳಿದೆ.

ಕಂ ॥ ಕಕ್ಕಂ ಮೊನೆಯಂಬಿಂ ನೆಲೆ
ಗಕ್ಕಂ ಬಿಲ್ಲಾಂತು ಕೆಲ್ಲ ಕೆಲ್ಲಂಬುಗಳಿಂ
ಚಕ್ಕನೆ ಪೊಣರ್ದರ ತಲೆಗಳ್
ವೊಕ್ಕನೆ ಪೋಪಿನೆಗಮೆಚ್ಚಂ ಬೆಳಯನಾಹವದೆಡೆಯೊಳ್ ? ॥ 531 ॥

ಕಂ ॥ ಅರುವ ಮರುಳರುಣ ಜಳಮಂ
ಪೀರುವ ಮರುಳ್ ಪೆಣದ ವಹಳೆಯ ಮೊಳಕಾಲಂ
ಕಾರುವ ನರಿಯಂ ಹಗಂ
ಪಾರುವ ಖಗ ಬೆಳಯನಿಜಿದ ಸಮರಾಂಗಣದೊಳ್ ॥ 532 ॥

ಉ ಮಾ ॥ ಆಂತ ವಿರೋಧಿ ಸೇನೆಯನಗುರ್ಬ್ಬಿನೊಳಾಂತಿಜಿದಲ್ಲಿ ವೀರ ವಿ
ಕ್ರಾಂತ ಶರಾಳಿಗಳ್ ತನುವನುರ್ಚ್ಚಲೊಡಂ ಶಿವಯೆಂದು ವೀರಸಿ
ದ್ಧಾಂತದ ಪೊಸ್ತಕಂ ತವಣೆಕೋಲೊಳಳುರ್ವ್ವಿಸಿದಂತೆ ವೀರವಿ
ಕ್ರಾಂತವನಾಸೆವಟ್ಟು ಕಲಿ ಬೆಳಯನೆಯ್ದಿದ ದೇವಲೋಕಮಂ ॥ 533 ॥

59) ನಾಡಕಲಸಿ 123, E.C. XV (R), ಕ್ರಿಶ. 1218

ಇದರಲ್ಲಿ ಹೊಯ್ಸಳರ ದೊರೆಯಾದ ಎರಡನೆಯ ಬಲ್ಲಾಳನ ಆಳಿಕೆಯಲ್ಲಿ

ಬಾಲೆಯಮ್ಮವೆರ್ಗಡೆ ಎಂಬುವವನು ಕಲಿಸೆಯಲ್ಲಿ ಸೋಮನಾಥ ದೇವಸ್ಥಾನವನ್ನು ಕಟ್ಟಿಸಿದನೆಂದು ಹೇಳಿದೆ.

ಬಾಳೆಯಮ್ಮ

ಶಾ ವಿ ॥ ನಿಸ್ಸಾಣಧ್ವನಿತಂಬಟಸ್ಫುಟಧಡಂಧಂನಾದಭೀತರ್ ಪಲರ್
ನಿಸ್ಸತ್ವರ್ ಬಿಸುಟೋಡಿ ನಾಡ ನಗರೀಭಂಡಾರಮಂ ಪೆಂಡಿರಂ
ಸುಸ್ವಸ್ಥರ್ ಗಿರಿಗಹ್ವರಸ್ಥರದಟರ್ ಮಾಱಾಂತು ತತ್ಖಡ್ಗದಿಂ
ಸುಸ್ವಸ್ಥರ್ ಕೆಲರೆಂಬ ಕೌತುಕಮಿದೇಂ ಪ್ರೋದ್ದಾಮನೋ ಬಾಳೆಯಂ
॥ 534 ॥

ಉ ಮಾ ॥ ಸೂಸುವ ನೆತ್ತರುಣ್ಮುವ ನೆಣಂ ಪೊಱಪೊಣ್ಮುವ ಕೋಟ್ಮೆದುಳ್ ಪೊದ
ಬ್ದಾಸುರಮಾಗೆ ಸೋರ್ವ ಕರುಳಾ ಕರುಳ್ಗಾಟಿಪ ಬಳ್ಳು ಬಳ್ಳುವಂ
ಸೋಸುವ ವೀರರಟ್ಟೆ ಭಟರಟ್ಟೆಯನಟ್ಟುವ ಭೂತಕೋಟಿಯಿಂ
ದಾಸುರಮಾಯ್ತು ಮಂಡಳಿಕಬಾಳೆಗನಾಂತಿಱಿದಾಹವಾಂಗಣಂ ॥ 535 ॥

ಉ ಮಾ ॥ ಮೂಳೆಯ ಸನ್ನೆಗಾಳೆವಿಡಿಯಲ್ ನೂರೆನೆತ್ತರನೀಂಟಿ ಸೊಕ್ಕಿ ಕ
ಣ್ಣಾಲಿಯ ಮಾಲೆಸೂಡಿ ಬಲುಗಂಡದ ದಂಡೆಯನೊಪ್ಪೆ ಕಟ್ಟಿಕೊಂ
ಡಾಳಿಸಿಯುಟ್ಟು ಪಂದೊವಲನಾಹವದೊಳ್ ನಲಿದಾಡಿ ಪಾಡಿದರ್
ಸೂಳೆಮರುಳ್ಗಳುಗ್ಗಡಿಸಿ ಹೆಗ್ಗಡೆಬಾಳೆಗನಂಕಮಾಲೆಯಂ ॥ 536 ॥

ಚಂ ಮಾ ॥ ಅದಟರ ಗಂಡನಂಜದರ ಗಂಡನದಿರ್ಪರ ಗಂಡನಾಜಿಗ
ಳ್ಕದ ಮದವದ್ವಿರೋಧಿಗಳ ಗಂಡನುದಗ್ರರ ಗಂಡನದ್ಭುತಾ
ಸ್ಪದಕದನಪ್ರಚಂಡನೊಳುಗಂಡನೆರಬ್ಬಿಡೆ ಮೆಚ್ಚೆ ಗಂಡನೆಂ
ಬುದು ಕದನೋಗ್ರಮಂಡಳಿಕಬಾಳೆಗನಗ್ಗದ ಕಾಹಳಾರವಂ ॥ 537 ॥

ಚಂ ಮಾ ॥ ತೊಡರ್ದರನೊತ್ತಿ ತೊಂಡರನವುಂಕಿ ಕಡಂಗುವರಂ ಕಟಲ್ಚಿ ಮಾ
ರ್ಪಡೆಯ ವಿರೋಧಿಯಂ ತವಿಸಿ ಮೀಱಿದರಂ ಮುಱಿದಾಂತುದಗ್ರರಂ
ಕಡೆಕಳಕಿಕ್ಕಿ ಗಂಡಗಳಗತ್ತರಿ ಬಾಳೆಮಮಂಡಲೀಕ ತಾಂ
ಪಡೆದನಪಾರಶೌರ್ಯಮಹಿಮೋನ್ನತಿಯಂ ವಸುಧಾತಳಾಗ್ರದೊಳ್ ॥ 538 ॥

60) ಹೊಸಗುಂದ 241, E.C. XV (R), ಕ್ರಿಶ. 1265

ಈ ವೀರಗಲ್ಲು ಶಾಸನದಲ್ಲಿ ಬೊಮ್ಮರಸನು ಸಾಂತಳಿಗೆಯನ್ನು ಆಳುತ್ತಿದ್ದಾಗ, ಹೊಯ್ಸಳರ ದೊರೆ ಮೂರನೆಯ ನರಸಿಂಹನ ಕಡೆಯ ಸಂಗ ಎಂಬುವವನು ಹಣಜೆ ಊರಿನ ತುರುಗಳನ್ನು ಹಿಡಿದಾಗ, ದೇಸುನಾಯಕ ಎಂಬ ವೀರನು ಹೋರಾಡಿ ಮಡಿದನೆಂದು ಹೇಳಿದೆ.

ದೇಸುನಾಯಕ

ಮ ಸ್ರ ॥
ಕರವಾಳಿಂ ದೇಸುವೇಟ್ಟಿಂದಿಱಿಯಲಹಿತರಂ ಯುದ್ಧದೊಳ್ ಖುದ್ಧಕೋಪಂ
ನೊರೆನೆತ್ತರ್ ಸೂಸೆ ಕಂಡಂ ಸಡಿಲೆ ಕಟಿಲಲಾಕಾಳಿಜಂ ಮೂಳೆ ಬೀಟಿ
ಲ್ವರಿಯಲ್ ನುರ್ಗಾಗೆ ಬಿಕ್ಕೊಕ್ಕುರುಳೆ ತೊರಳೆಗಳ್ ಸಿಂಘಗಳ್ ತಾಱಿ ಪಾಱಲ್
ಕರುಳೊಕ್ಕಾಸಂಧಿಬಂಧಂ ಬಿಡಲತಿಭಯದಿಂ ಘೋರಮಾಯ್ತಾಜಿರಂಗಂ ॥ 539 ॥

ಉ ಮಾ ॥ ತೋಳ್ಗಳ ಸಾಲ್ಗಳಿಂ ತೊಡೆಯ ತಂಡಗಳಿಂ ಭಟ್ಟರಟ್ಟೆಯೊಟ್ಟಲಿಂ
ಬಾಳ್ಗಳ ಘಾಯದಿಂ ಪಱಿದ ಪಂದಲೆಯೋಳಿಯಿನೆಲ್ಲಿ ನೋೞ್ಪೊಡಂ
ಕೀೞ್ಗಳನಡ್ಡಗರ್ಚಿ ಕೆಡೆದಿರ್ದ ತುರಂಗದ ಪೆರ್ವೆಣಂಗಳಿಂ
ದಾಳ್ಗಳ ದೇವ ದೇಸುವಿಱಿದಾಹವಮದ್ಭುತಮಾಯ್ತು ಧಾತ್ರಿಯೊಳ್ ॥ 540 ॥

ಮ ವಿ ॥ ಪಡೆಮಾತೇಂ ಹೊಗಟಿಲ್ಕದಾರ್ಗಮರಿದುಗ್ರಾಟೋಪದಿಂ ದೇಸು ಮಾ
ರ್ಪಡೆಯಂ ಕೂರಸಿಯಿಂ ಪಡಲ್ವಡಿಸಲಾ ಪೆರ್ಮಾರಿ ಪೇಸಿತ್ತಿದಂ
ಸುಡಲಿನ್ನೆಂದುದು ಮೃತ್ಯು ಮತ್ತೊಗಡಿಸಿತ್ತಾ ಭೂತವರ್ಗಂ ಜವಂ
ಕಡು ಬೇಸತ್ತಪನುಯ್ಯಲಾಂತರಸುವಂ ತಾನೆಂದೊಡುಗ್ರಾಜಿಯಂ ॥ 541 ॥

ಕಂ ॥ ವೊಡಲಂ ಪದೆದೇಳ್ತಂದವ
ನೆಡವಟ್ಟೆಯನೊಡಲೊಳಿಟ್ಟು ರಕ್ಷಿಸುತಿರ್ದ್ದಂ
ನಡೆಗೋಂಟೆಯೆಂದು ಲೋಕಂ
ನುಡಿಯೆ ಜಸಂಬಡೆದನಲ್ತದಟನರಾಯಂ ॥ 542 ॥

ಕಂ ॥ ಹಿರಿಯಂ ಹಣಜೆಯ ತಂನಯ
ಪರಿವಾರಂ ಬೆರಸು ದೇಸುನಾಯಕ ನಿತ್ಯ ಕೇ ?
ಸರಿಯ ಗುಹೆಗುರ್ಕ್ಕಿ ಸೊರ್ಕ್ಕಿಂ
ಕರಿಯೊಳ್ತಪ್ಪಂತೆ ಸಂಗನಲ್ಲಿಗೆ ಬಂದನ್ ॥ 543 ॥

61) ಹೊಸಗುಂದ 239, E.C. XV (R), ಕ್ರಿ.ಶ. 1269

ಈ ವೀರಗಲ್ಲು ಶಾಸನದಲ್ಲಿ ಮಹಾಮಂಡಳೇಶ್ವರ ಬೊಮ್ಮರಸನು ಮಹಾಮಂಡಳೇಶ್ವರ ಅಣ್ಣಮವೆಗ್ಗಡೆಯ ಮೇಲೆ ಆಕ್ರಮಣ ಮಾಡಿ ಕೊಡದೂರುದುರ್ಗವನ್ನು ವಶಪಡಿಸಿಕೊಂಡಾಗ ಕರಿಯಮುದ್ದ ಎಂಬುವವನು ಹೋರಾಡಿ ಮಡಿದುದನ್ನು ಹೇಳಿದೆ.

ಕಂ ॥ ಕುದುರೆಗಳನಿಱಿದು ಮೆದೆಮೆ
ಟ್ಟಿದಿರಾಂತೊಳ್ಳಾಳ್ಗಳಟ್ಟೆ ಮೆಟ್ಟಿಲನಿಡುತುಂ
ಕದನದೊಳಹಿತರ ತಂನಯ
ಮಿದುಳೊಳಗಲಸುವಿನಮಿಱಿದು ಮುದ್ದಂ ಮೆಱೆದನ್ ॥ 544 ॥

62) ಸಂಣಚಟಿಕೊಪ್ಪ 209, E.C. XV (R), ಕ್ರಿ.ಶ. 1292

ಈ ವೀರಗಲ್ಲು ಶಾಸನದಲ್ಲಿ ಕಾಮದೂರಿನ ಕಾಳಗದಲ್ಲಿ ಮಡಿದ ಆಲೂರಿನ ಜಕ್ಕೆನಾಯಕನ ಸಾಹಸವನ್ನು ವರ್ಣಿಸಿದೆ.

ಕಂ ॥ ತೊಟ್ಟನಿಱಿದಂತೆ ಕುದುರೆಯ
ತಟ್ಟಿನೊಳಂತೆಯ್ದೆ ಪೊಕ್ಕು ಕೋಟಿ ನೃಪಾಳರ
ನೆಟ್ಟನೆ ಪೊರೆದಾಳಗ್ಗದ
ಜೆಟ್ಟಿಗನಾಲೂರಜಕ್ಕ ಕೌತುಕ ವೀರಂ ॥ 545 ॥

63) ಕಂಬಳಿಕೊಪ್ಪ 32, E.C. XV (R), ಕ್ರಿ.ಶ. 1307

ಈ ವೀರಗಲ್ಲು ಶಾಸನದಲ್ಲಿ ಬೋಳೆಯನಾಯಕ ಎಂಬ ವೀರನು ಕದಂಬರ ವೀರ ಕಾಮದೇವರಸರ ಆಳಿಕೆಯಲ್ಲಿ ಹಲಸಿಗೆನಾಡ ಮಂಗರೆಯ ಮಾಯಿದೇವ ರಾಜ್ಯದ ಮೇಲೆ ನಡೆದ ಯುದ್ಧದಲ್ಲಿ ಮರಣಿಸಿದ್ದನ್ನು ಹೇಳಿದೆ.

ಬೋಳೆಯನಾಯಕ

ಕಂ ॥ ಅರಿದ ತಲೆ ಸುರಿವ ನೆತ್ತರು
ಕರುಳುಗಳ ಬಳ್ಳಿ ಕಾಲಂ ಸುತ್ತಿ ಮೊರೆವ ಪೆಣಗಳಂ x x ?
ಮರುಳ ಪಡೆವುಂಡು ತಣಿದವು
ಸುರಲೋಕವ ಸೂಱೆಗೊಂಡ ಬೋಳೆಯ ನಾಯಕಂ ॥ 546 ॥

64) ಹೊಗೇಕೆರೆ 232, E.C. XV (R), ಕ್ರಿ.ಶ. ಸು. 1488

ಇದರಲ್ಲಿ ಸಂಗೀತಪುರದ ದೊರೆಯಾದ ಸಾಳುವೇಂದ್ರನು ಪದ್ಮಣ ಮಂತ್ರಿಗೆ ಒಗೆಯಕೆರೆಯೆಂಬ ಗ್ರಾಮವನ್ನು ದತ್ತಿ ನೀಡಿದಂತೆ ಹೇಳಿದೆ.

ತೌಳವದೇಶ

ಶಾ ವಿ ॥ ಶ್ರೀಮದ್ಭೂಭುವನ ಪ್ರಸಿದ್ಧತರ ಜಂಬೂದ್ವೀಪ ಮಧ್ಯಸ್ಥ ತುಂ
ಗಾಮರ್ತ್ಯಾಚಲ ದಕ್ಷಿಣಾಂತ್ಯ ಭರತಾರ್ಯಾಖಂಡ ನೈಋತ್ಯ ದಿ
ಕ್ಸೀಮೋಪಾಬ್ಧಿ ತಟೋಪಕಂಠ ವಿಲಸದ್ವರ್ಣಾಶ್ರಮಾಕೀರ್ಣ ಭೂ
ಧಾಮಂ ತೌಳವ ದೇಶಮಿರ್ಪುದಿಳೆಯೊಳ್ ಸಪ್ತಾಂಗ ಸಂಪತ್ತಿಯಿಂ
॥ 547 ॥

ಸಂಗೀತಪುರ

ಮ ಸ್ರ ॥ ಅದಜೊಳ್ ಮಾಂಗಲ್ಯಗೇಹಂ ಬಹು ವಿಧ ವಿಭವ ಪ್ರೋಲ್ಲಚ್ಚೈತ್ಯ ಗೇಹಂ
ಸುದತೀ ಸಂತಾನ ಜನ್ಮಾಲಯಮಖಿಲ ಸುಖಿ ತ್ಯಾಗಿ ಭೋಗಿ ಪ್ರವಾಹಂ
ಮದವದ್ದಂತ್ಯಶ್ವ ಯೂಥ ಪ್ರಬಲಪಟುಭಟಾರ್ಕೀರ್ಣಮುತ್ತುಂಗ ಸೌಧೋ
x x ರಾಜದ್ರಾಜ ಸಂಗೀತಪುರಮದೆಸೆಗುಂ ಪ್ರೌಢ ಸಂಗೀಯಮಾನಂ ॥ 548 ॥

ಕಂ ॥ ಕವಿ ಗಮಕಿ ವಾದಿ ವಾಗ್ಮಿ
ಪ್ರವೇಶ ಸಂಗೀತ ವಿಷಯ ಸಾಹಿತ್ಯ ರಸೋ
ದ್ಭವಭಾವ ಚತುರ ಸಂಸ್ತುತ
ವಿವಿಧ ಕಲಾ ಭಂಗಿ ಸಂಗಿ ಸಂಗೀತಪುರಂ ॥ 549 ॥

ಪದ್ಮಣ ಮಂತ್ರಿ

ಮ ವಿ ॥ ಜಿನಪಾದಾನತಿ ಮಸ್ತಕಕ್ಕೆ ಜಿನ ಬಿಂಬಾಲೋಕನಂ ದೃಷ್ಟಿಗಾ
ಜಿನ ಶಾಸ್ತ್ರ ಶ್ರವಣಂ ಸ್ವಕರ್ಣ ವಿವರಕ್ಕೆ ಶ್ರೀ ಜಿನಸ್ತೋತ್ರಮಾ
ನನ ಪದ್ಮಕ್ಕೆ ಚಿದಾತ್ಮ ಭಾವನೆ ಮನಕ್ಕಂ ಪಾತ್ರದಾನಂ ಕರ
ಕ್ಕೆ ನಿಜಾಲಂಕೃತಿಯಾಗೆ ಪದ್ಮಣ ಮಹಾಮಂತ್ರೀಶನೇಂ ಧನ್ಯನೋ ॥ 550 ॥

ಕಂ ॥ ಪದ್ಮಂ ವಿನಮಿತ ಜಿನ ಪದ
ಪದ್ಮಂ ಸಜ್ಜನರೊಳೆಸೆವ ವಿಗತಚ್ಛದ್ಮಂ
ಪದ್ಮಾ ಪ್ರಿಯಕರ ಗುಣ ಗಣ
ಸದ್ಮಂ ನಿತ್ಯ ಪ್ರಸನ್ನ ನಿಜಮುಖ ಪದ್ಮಂ ॥ 551 ॥

ಮ ವಿ ॥ ಹಿತನೀತಂ ಪ್ರಿಯಸತ್ಯವಾದಿ ನಿಪುಣಂ ಧರ್ಮಾರ್ಥಸಂಪಾದಕಂ
ಚತುರಂ ಸಚ್ಚರಿತಂ ದಯಾರ್ದ್ರಹೃದಯಂ ಶಾಸ್ತ್ರಜ್ಞನೆಮ್ಮನ್ವಯಾ
ಗತನೀ ಪದ್ಮಣಮಂತ್ರಿಯೆಂದಡೆ ಕುಳಿಕ್ಕೋಟದಲ್ಕೆ ಸಾಳ್ವೇಂದ್ರ ಭೂ
ಪತಿಯಾಚಂದ್ರಧರಾರ್ಕಮಿತ್ತನುಜೆ ಮಾನ್ಯಗ್ರಾಮ ಸಂಪತ್ತಿಯಂ ॥ 552 ॥

ಕಂ ॥ ಪ್ರಭುಗಳ್ಪುರಜನ ಪರಿಜನ
ಸಭಾಸದರ್ಮೆಚ್ಚೆ ಸಾಳುವೇಂದ್ರ ನೃಪಾಲಂ
ವಿಭವದಿ ಪದ್ಮಣಮಂತ್ರಿಗೆ
ಶುಭಮಸ್ತ್ವೆಂದೊಗೆಯಕೆಜೆಯನವನೊಲ್ದಿತ್ತಂ ॥ 553 ॥

ಮ ವಿ ॥ ಎನಗೀ ಭೂಪಕೃಪಾವಲೋಕನದಿನೆನ್ನೀ ಪೋಷ್ಯವರ್ಗ್ಗಕ್ಕೆ ತ
ಕ್ಕನಿತುಂಟೀ ಧನಧಾನ್ಯ ಸಂಪದಮದೀ ಸಾಳ್ವೇಂದ್ರನೊಲ್ದಿಂತು ಕೊ
ಟ್ಟನಿತುಂ ಗ್ರಾಮಮನೆಂತು ಧರ್ಮ್ಮಮೆನಗಾಚಂದ್ರಾರ್ಕ್ಕಮಪ್ಪಂತು ಮಾ
ಳ್ಪನಿದೊಂದೇ ಕಡೆಗಂಡ ಕಜ್ಜಮೆನುತುಂ ನಿಶ್ಚಯಿಸಿದಂ ಚಿತ್ತದೊಳ್ ॥ 554 ॥

ಮ ಸ್ರ ॥ ಜಿನಚೈತ್ಯಾವಾಸಮಂ ಮಾಡಿಸಿ ಸಮುಚಿತಸಾಲಾದಿಯಿಂ ಕೂಡೆ ಪಾರ್ಶ್ವೇ
ಶನ ಬಿಂಬಸ್ಥಾಪನಂಗೆಯ್ದನುದಿನಮೆಸೆಯಲ್ನಿತ್ಯಪೂಜಾಭಿದಾನಂ
ಮುನಿದಾನಂ ತಪ್ಪದೊಳ್ಪಿಂದೊಗೆಯಕೆಱೆಯೊಳಪ್ಪಂತೆ ತಾಂ ಕೊಟ್ಟನೀ ಶಾ
ಸನಮಂ ತಚ್ಛಾಸನಪ್ರಾಂತದೊಳೆ ಬರೆಸಿದಂ ಪದ್ಮಣಾಂಕಪ್ರಧಾನಂ ॥ 555 ॥

65) ಗೋವರ್ಧನಗಿರಿ 89, E.C. XV (R), ಕ್ರಿಶ. ಸು. 1560

ಇದರಲ್ಲಿ ಗೇರುಸೊಪ್ಪೆಯ ರಾಜನಾದ ದೇವರಾಯನ ಆಳಿಕೆಯಲ್ಲಿ ಅಂಬಣಸೆಟ್ಟಿ ಗೇರುಸೊಪ್ಪೆಯ ನೇಮಿಜಿನಾಲಯದ ಮುಂದೆ ಕಂಚಿನ ಮಾನಸ್ತಂಭವನ್ನು ನಿಲ್ಲಿಸಿದಂತೆ ಹೇಳಿದೆ.

ನೇಮಿನಾಥ ಸ್ತುತಿ

ಮ ಸ್ರ ॥ ಅಮೃತ ಶ್ರೀಕಾಂತಮಾಗಿರ್ದಖಿಲ ಸುಖ ಸಮುಚ್ಚಾಯಮಾಗಿರ್ದ ನಾನಾ
ಸಮಲ ಪ್ರಧ್ವಂಸಿಯಾಗಿರ್ದನಿಮಿಷ ಖಗ ಸಂಸೇವ್ಯಮಾಗಿರ್ದ ದೇವೋ
ತ್ತಮನಾಗೀಶೋತ್ತಮಂಗಾರ್ಪಿತ ನಿಜಪದಮಾಗಿರ್ದ ವಾರಾಶಿ ಚಂದ್ರೋ
ಪಮಮಾಗಿರ್ದೀ ನಿಜಾಕಾರಮೆ ರಮೆಗೆ ವಿಲಾಸಾಸ್ಪದಂ ನೇಮಿನಾಥಾ
॥ 556 ॥

ಮ ವಿ ॥ ಜನನೇತ್ರ ಭ್ರಮರಾವಲೀ ಕುಸುಮಿತೋದ್ಯಾನಂ ಮುನೀಂದ್ರೌಘ ಚಿ
ತ್ತ ನವೀನಾಂಬುರುಹ ಪ್ರಭಾತ ಸಮಯಂ ವಿದ್ವಜ್ಜನ ಸ್ತೋತ್ರ ದಿ
ವ್ಯ ನದೀಪೂರ ಹಿಮಾಚಲಂ ನಿಜ ಮಹಾಸೌಂದರ್ಯಮೆಂದೆಂಬ ಸ
ಜ್ಜನತಾ ಸಂಸ್ತುತಿ ನಿನ್ನೊಳೇನಮರ್ದುದೈ ಶ್ರೀನೇಮಿತೀರ್ಥೇಶ್ವರಾ ॥ 557 ॥

ಗೇರುಸೊಪ್ಪೆ

ಚಂ ಮಾ ॥ ವರ ಜಿನಚೈತ್ಯಗೇಹ ನೃಪಸದ್ಮ ನಿಯೋಗಿನಿವಾಸ ವೈಶ್ಯಮಂ
ದಿರ ನಿಕುರುಂಬದಿಂ ವಿಮಲಧರ್ಮ ದಯಾನ್ವಿತ ದಾನಶೌಂಡರಿಂ
ಗುರು ಯತಿವೃಂದದಿಂ ಕವಿ ಬುಧೋತ್ಕರದಿಂ ಬರ ಭವ್ಯಕೋಟಿಯಿಂ
ಸುರುಚಿರ ಗೇರುಸೊಪ್ಪೆಯವೊಲಾವ ಪುರಂ ಜಗದೊಳ್ ಪ್ರಸಿದ್ಧಮೋ
॥ 558 ॥

ಸಾಳ್ವಮಲ್ಲ

ಮ ಸ್ರ ॥ ಸಮರಾಂಭೋ ರಾಶಿಯೊಳ್ ಸುತ್ತುವ ಸುೞಿಗಳಿವೆಂಬಂತೆ ನೀನೇಱಿದಶ್ವೋ
ತ್ತಮದಿಂದಂ ವೇಡೆಯಂಗಳ್ ಪಸರಿಸೆ ರಿಪು ರಾಜೇಂದ್ರರೇಱಿರ್ದ ಮತ್ತೇ
ಭ ಮಹಾ ವಾಜಿವ್ರಜಂಗಳ್ ಪಡಗುಗಳವೊಲಟ್ಟಿಲ್ಕೆ ನುಂಗುತ್ತುಮಿರ್ಕುಂ
ಕ್ರಮದಿಂ ತ್ವತ್ಪಾದಯುಗ್ಮಂ ಮಕರಯುಗದವೋಲ್ ಸಾಳ್ವಮಲ್ಲ ಕ್ಷಿತೀಶಾ
॥ 559 ॥

ದೇವರಸಿ

ಉ ಮಾ ॥ ಆತನ ಕಾಂತೆ ಶೀಲಗುಣವಂತೆ ಕಲಾ ಗುಣವಂತೆ ಜೈನಮಾ
ರ್ಗಾತತ ಚಿತ್ತೆ ಧರ್ಮಪರವಿತ್ತೆ ಜನಸ್ತುತ ವೃತ್ತೆ ಸತ್ಕುಲ
ಖ್ಯಾತ ಸುರೂಪೆ ಸನ್ಮತಿ ಕಲಾಪೆ ವಿನಿರ್ಗತ ಕೋಪೆಯೆಂದು ಧಾ
ತ್ರೀತಳಮೊಪ್ಪೆ ದೇವರಸಿಯಂ ಪೊಗೞ್ಗುಂ ಗುಣರತ್ನ ರಾಶಿಯಂ ॥ 560 ॥

ಯೋಜಣ್ಣ

ಕಂ ॥ ಪ್ರಿಯತಮೆಯ ದ್ವಯದಿಂದಂ
ನಯನದ್ವಯದಿಂದೆ ವಕ್ತ್ರಮೊಪ್ಪುವ ತೆಱದಿಂ
ಜಯದಂಕದಾನೆ ದಂತ
ದ್ವಯದಿಂದೆಸೆವಂತೆಯೊಪ್ಪಿದಂ ಯೋಜಣ್ಣಂ ॥ 561 ॥

ನಾಗಮ್ಮ

ಮ ವಿ ॥ ಪತಿ ಚಿತ್ತಾನುಗುಣ ಪ್ರವರ್ತನದಿನತ್ಯಾಶ್ಚರ್ಯ ಸೌಕರ್ಯ ಸಂ
ಯುತ ಶೀಲೋನ್ನತಿಯಿಂ ಜಿನೇಂದ್ರ ಪದ ಪೂಜಾಸಕ್ತ ಸದ್ಭಕ್ತಿಯಿಂ
ಸತತೋತ್ಸಾಹ ಸುದಾನದಿಂ ಪರಹಿತ ವ್ಯಾಪಾರ ಚಾತುರ್ಯದಿಂ
ಕ್ಷಿತಿಯೊಳ್ ನಾಗಮನಾಂತಳುತ್ತಮ ಯಶಃ ಸೌಭಾಗ್ಯಮಂ ಭಾಗ್ಯಮಂ
॥ 562 ॥

ಮಾನಸ್ತಂಭ

ಮ ಸ್ರ ॥ ಭರದಿಂ ಜನ್ಮಾಬ್ಧಿಯಂ ದಾಂಟಿಸುವ ವರ ಮಹಾಧರ್ಮಮೆಂದೆಂಬ ಪೋತ
ಕ್ಕುರು ಕೂಪಸ್ತಂಭಮಂಬಾಂಕನ ವಿಶದ ಯಶಃಪಟ್ಟಿಕಾ ಸ್ತಂಭಮೆಂಬಂ
ತಿರೆ ಮಾನಸ್ತಂಭಮಾ ಕೂಟದೊಳೆಸೆವ ಚತುರ್ಜೈನಬಿಂಬಾಂಘ್ರಿ ಪೂಜಾ
ಪರಿಕೀರ್ಣಾಸ್ಫಾರ ಪುಷ್ಪಾಂಜಲಿವೊಲೆಸೆವುದೀ ವ್ಯೋಮತಾರಾ ಕದಂಬಂ
॥ 563 ॥

ಸೊರಬ ತಾಲ್ಲೂಕು

66) ಕಕ್ಕರಿಸಿ 474, E.C. VIII (Rice), ಕ್ರಿ.ಶ. 954

ಇದರಲ್ಲಿ ರಾಷ್ಟ್ರಕೂಟರ ದೊರೆ ಮೂರನೇ ಕೃಷ್ಣನ ಆಳಿಕೆಯಲ್ಲಿ ಬ್ರಹ್ಮಕ್ಷತ್ರಿಯ ವಂಶದ ಮಾಚಿಯರಸನು ಎಡೆನಾಡಿನಿಂದ ಬನವಾಸಿಯನ್ನು ಆಳುತ್ತಿದ್ದ ವಿಷಯವಿದೆ. ಕಕ್ಕರಸಿಯ ಮಣ್ಣಿಗ ಮತ್ತು ಬರದವೋಳಿಗ ಎಂಬುವವರು ಪೆರ್ಗಡೆಗಳಾಗಿದ್ದಾಗ ಮುಟ್ಟಗುಪ್ಪೆಯ ಮಹಾಜನರಿಗೆ ದೇವಾಲಯಕ್ಕಾಗಿ ನೀಡಿದ ದತ್ತಿಯನ್ನು ಹೇಳಿದೆ.

ಚಂ ಮಾ ॥ ಪತಿಹಿತಮಮ್ಮನಂಗೊಳೆ ನೃಪಂ ನೃಪಕಾರ್ಯ್ಯ ವಿಚಾರದೊಳ್ ಬೃಹ
ಸ್ಪತಿಯೆನೆ ದಾನಧರ್ಮದ ನೆಗಟ್ತೆಯ ಶೌಚದ ಪೆಂಪಿನೊಳ್ಗುಣ
ಪ್ರತತಿಯೆ ವಯ್ಯುಗ್ಗಣಂಗಳೆನೆ ಬಿಟ್ಟಿರ ವರ್ಸಲ್ ಕೂಡಿದಲ್ಲಿ ಬಿ
ಚ್ಚತನೆನೆ ಕೀರ್ತಿ ಪರ್ವ್ವಿರೆ ಧರಾತಳದೊಳ್ನೆಗಟ್ಟಾತಯೂರ್ಜಿತಂ ॥ 564 ॥

67) ಹೆಚ್ಚೆ ಗ್ರಾಮ 477, E.C. VIII (Rice), ಕ್ರಿ.ಶ. 991

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ಆಹವಮಲ್ಲನ ಆಳಿಕೆಯ ಕಾಲದಲ್ಲಿ ಬ್ರಹ್ಮಕ್ಷತ್ರಿಯ ವಂಶದ ಶಾಂತಿವರ್ಮನು ಜೋಗಯ್ಯ ಎಂಬುವವನಿಗೆ ನೀಡಿದ ದತ್ತಿಯನ್ನು ಹೇಳಿದೆ.

ಕಂ ॥ ಓಡಿದನಂ ಧುರದೊಳ್ ಮುಂ
ಮ್ಮಾಡಿದ ಮರಿಯಾದೆಯನಜಿವನಂ ತನನ್ನಂ
ನೋಡಿ ನಗುವ ಸರಿ ದೊರೆಕೊಳೆ
ನೋಡಲೊಳಂ ನೋಂಪನಲ್ತೆ ವಿಕ್ರಮಸಿಂಗಂ ॥ 565 ॥

68) ಬೆಟ್ಟದ ಕೂರಲಿ 206, E.C. VIII (Rice), ಕ್ರಿ.ಶ. ಸು. 10ನೇ ಶತಮಾನ

ಇದು ಹೆಮ್ಮಗಾವುಂಡನ ವೀರಗಲ್ಲು ಶಾಸನ.

ಉ ಮಾ ॥ ತೊಟ್ಟನೆ ಕಂಡರಾತಿ ಭಟ ಸಂಕುಳವೆಣ್ದೆಸೆ ಗೈಯ್ದೆವಂದು ಕ
ಟ್ಟಿಟ್ಟಳಮಾಗಿ ಮುತ್ತೆ ಕಡೆಗಾಲದ ಭೈರವನಂ x x ಕಯ್ದುಗೊಂ
ಡೊಟ್ಟಜೆಕಾಜಿರಟ್ಟೆಗಳನಾಡಿಸಿದಂ ಕಿಡಿಕೆಯ್ದು ವೀರರಂ
ದೊಟ್ಟಿ ಸಿಗುಳ್ದುಕೊಂಡು ಮೆಜೆದಂ ಭುಜಶೌರ್ಯ್ಯಮನಾಜಿರಂಗದೊಳ್
॥ 566 ॥

69) ಕುಪ್ಪಗಡ್ಡೆ, ಸೊರಬ ತಾ. 184, E.C. VIII (Rice), ಕ್ರಿ.ಶ. 1032

ಈ ಶಾಸನದಲ್ಲಿ ಕಲ್ಯಾಣದ ಚಾಲುಕ್ಯರ ದೊರೆಯಾದ ಮೊದಲನೆಯ ಜಯಸಿಂಹನ ಆಳಿಕೆಯಲ್ಲಿ, ಮಹಾಸಾಮಂತಾಧಿಪತಿ ಆಲಯ್ಯನು ಕುಪ್ಪಗಡ್ಡೆಯಲ್ಲಿ ಮಂಡಲಿಕ ಕುಂದಮನೊಡನೆ ಕಾದಿ ಸಾಯಲು ಅವನ ಮಗ ಜಯಸಿಂಗನು ತಂದೆಯ ಹೆಸರಿನಲ್ಲಿ

ಆಲೇಶ್ವರ ದೇವಸ್ಥಾನವನ್ನು ಕಟ್ಟಿಸಿ ಭೂಮಿಯನ್ನು ದತ್ತಿ ನೀಡಿದಂತೆ ಹೇಳಿದೆ.

ಯುದ್ಧರಂಗ

ಚಂ ಮಾ ॥ ಕೆಡೆವ ಭಟರ್ಬ್ಬಟಾಂತ್ರ ವೃತ್ತದಿಂದೆ ಮರುಳ್ವ ಹಯಂ ಹಯಾಳಿಯಂ
ಪುಡಿಪುಡಿಯಾಗೆ ಮೆಟ್ಟುವ ಗಜಂ ಗಜಮಾಂಸಮನುರ್ಬ್ಬಿ ತಿಂದು ಕೂ
ಗಿಡುವ ಮರುಳ್ಮರುಳ್ಪಡೆಯನಟ್ಟುವ ಸಿದ್ಧಗಣಂ ಗಣಂಗಳಂ
ಬಡಿವ ನಿಶಾಚರರ್ಸ್ಸಮರಧೀರರಿರುತ್ತಿಱಿದಾಜಿರಂಗದೊಳ್ ॥ 567 ॥

ಸಿಂಹಭೂಪಾಲ

ಕಂ ॥ ರಿಪುಸೈನ್ಯಮೊತ್ತೆ ಧುರದೊಳ್
ನೃಪರಿಂ ಮುನ್ನಿಱಿದು ಪಲವು ಕಾಳೆಗದೊಳ್ ಭೂ
ಮಿಪ ಚೂಡಾಮಣಿ ಸಿಂಗಂ
ನೃಪರಿಂ ಮುನ್ನಿಱಿವನೆಂಬ ಪೆಸರಂ ಪಡೆದಂ ॥ 568 ॥

ಮ ವಿ ॥ ಮಲೆವರ್ಸುರ್ಕ್ಕಿರೆ ಮನ್ನೆಯರ್ಸ್ಸುಗ್ಗಿಯೆ ಸಾಮಂತಮ್ಮನಂಗುಂದೆ ಮ
ಣ್ಡಲಿಕರ್ಸ್ಸಂಕಿಸೆ ಬೇಡರರ್ಬ್ಬಿಸೆ ಕುಱುಂಬರ್ಬ್ಬೆಚ್ಚೆ ತನ್ನೊಂದೆ ತೋ
ಳ್ವಲದಿಂ ಭೂತಳಮಂ ನಿಮಿರ್ಚ್ಚಿ ಜನಕಂಗತ್ತಗ್ಗಳಂ ನಾಲ್ವೆರ
ಲ್ವಲದೊಳ್ ಶೌರ್ಯ್ಯದೊಳೆಂಬಿನಂ ಧರೆಗೆ ಸಂದಂ ಸಿಂಹಭೂಪಾಳಕಂ
॥ 569 ॥

ಆಲಯ್ಯ

ಚಂ ಮಾ ॥ ಬಳವದರಾತಿಸೇನೆ ಕಿಡೆ ವಾಜಿಬಳಂ ಪೆಱಪಿಂಗೆ ಹಸ್ತಿಸಂ
ಕುಳಮಳಿರ್ವಳ್ಕೆ ಬಳ್ಕೆ ತನಗಾಂತಧಿಕೋಗ್ರ ವಿರೋಧಿಸಾಧನಂ
ವಳಿಕೆ ಬಟಲ್ಚಿ ನುರ್ಗಿ ಪಲರಂ ತವೆ ಕೊಂದು ಮಹಾಜಿರಂಗದೊಳ್
ತೊಲಗದ ಗಂಡನಾಂತಿಱಿಯೆ ಭುಂಭುಕಮದ್ಭುತವಾದುದೆತ್ತಲುಂ ॥ 570 ॥

ಜಯಸಿಂಗ

ಮ ವಿ ॥ ಮುಳಿಸತ್ಯದ್ಭುತಮಾಯಮೆಂದುಮಚಳಂ ದಾನಂ ಬುಧಾಹ್ಲಾದಿ ಕೇ
ವಳಮಲ್ಲುನ್ನತಸತ್ಯಶೌಚಮಜಿತಂ ಲೋಕೋತ್ತರಂ ಕೀರ್ತಿ ದಿ
ಗ್ವಳಯಾಂತಂ ನುಡಿ ಮೇರುಶೈಲಲಿಖಿತಂ ಧರ್ಮ್ಮಂ ಜಗನ್ಮುದ್ರೆ ಭೂ
ತಳವಂದ್ಯಂ ಚರಿತಂ ನಯಂ ಜನನುತಂ ಶ್ರೀಸಿಂಹಭೂಪಾಳನಾ ॥ 571 ॥

70) ತೊರವಂದ 299, E.C. VIII (Rice), ಕ್ರಿ.ಶ. 1073

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆಯಾದ ಭುವನೈಕಮಲ್ಲನ ಮಹಾಪ್ರಧಾನ

ಉದಯಾದಿತ್ಯ ದಂಡನಾಯಕನ ಆಜ್ಞೆಯಂತೆ ದಾಸಗಾವುಂಡ ಎಂಬುವವನು ಗಂಗೇಶ್ವರದ ಸ್ವಯಂಭುದೇವರಿಗೆ ಭೂಮಿಯನ್ನು ದತ್ತಿಯಾಗಿ ಬಿಟ್ಟಂತೆ ಹೇಳಿದೆ.

ಉದಯಾದಿತ್ಯ

ಮ ವಿ ॥ ಜಗಮೇಕಚ್ಛತ್ರಮಾಯ್ತುರ್ಕಿದ ಧರಣೀಧರದ್ರೋಹರಟ್ಟಾಡಿದರ್ ಭೂ
ನಗರಂ ಸಿಂದೂರಮುದ್ರಾಂಕಿತಮೆನಿಸಿದುದನ್ಯಾವನೀಪಾಳಕರ್ ಕೆ
ಯ್ಮುಗಿದಿತ್ತುಂ ತೆತ್ತುಮಾಜ್ಞಾವಶಗತರೆನಿಸಿರ್ದರ್ ಸಮಂತೆತ್ತಲುಂ ಚ
ಕ್ರಿಗೆ ತನ್ನಿಂದೆಂದೊಡೇಂ ವೀರನೊ ನೆಗಟ್ಟುದಯಾದಿತ್ಯದಂಡಾಧಿನಾಥಂ
॥ 572 ॥

ಮ ವಿ ॥ ಇದಿರೊಳ್ ರಾವಣಿ ನಿಂದು ಮಾರ್ಮಲೆದೊಡಂ ಗೆಲ್ದುಂ ಜಗಂ ಬೇಡಿ ಬಂ
ದಿದಿರೊಳ್ ನಿಂದೊಡಮೀಗುಮಿಂತಿವೆರಡರ್ಕಂದಿನ್ನಮಿತ್ತಂ ಕಱು
ತ್ತಿದಿರಾಗಿಂ ಕವಿತಂದು ಬೇಡಿಮಿಱಿಗುಂ ಪೂಣ್ದೀಗುಮೆಂದಂದು ಬಾ
ಪ್ಪುದಯಾದಿತ್ಯನೊಳಣ್ಮಿನಾರ್ಪಿನೆಸಕಂ ಮೆಯ್ವೆತ್ತು ಕಣ್ಗೊಪ್ಪುಗುಂ ॥ 573 ॥

71) ಕೊರಕೋಡು 175, E.C. VIII (Rice), ಕ್ರಿಶ. 1077

ಇದೊಂದು ವೀರಗಲ್ಲು ಶಾಸನ. ಬಾವಗೌಡನ ಮಕ್ಕಳಾದ ದೇವಗೌಡ ಮಲ್ಲಗೌಡರು ತುರುಗಾಳಗದಲ್ಲಿ ಮಡಿದರು. ಆಗ ಅವರ ತಮ್ಮ ಬೊಪ್ಪಗೌಡನು ಸೈರಿಸಲಾರದೆ 'ನೀವಾದುದಾಗುವೆ'ನೆಂದು ಒಬ್ಬನೇ ಹಗೆಗಳ ಬೆನ್ನು ಹತ್ತಿ ತುರುಗಳನ್ನು ಬಿಡಿಸಿದ ಸಂಗತಿ ಇಲ್ಲಿ ಬಂದಿದೆ. ತುರುಗಾಳಗದ ವಿಶದವಾದ ಪ್ರತ್ಯಕ್ಷವರ್ಣನೆಯನ್ನು ಇದರಲ್ಲಿ ಮಾಡಿದೆ.

ವಚನ ॥

ಶ್ರೀಮನ್ಮಹಾಮಂಡಳೇಶ್ವರಂ ಜಗದೇವರಸರ ಬೆಸದಿಂ ಮದಸಾಲೆಯ ಕಾಳರಸಂ ಸಮಸ್ತ ಸಾಮಾತ್ತಿಯಂ ಬೆರಸು ಬಂದು ಶ್ರೀಮದನಾದಿಯಗ್ರಹಾರಂ ಕುಪ್ಪಗಡೆಯಹಳ್ಳಿ ಕೊರಕೋಡನಿಱಿದು ತುಱುವಂ ಕೊಂಡುಡೆಯುರ್ಚ್ಚಿ ಹೋಹಾಗಳಲ್ಲಿ ಹುಟ್ಟಿದ ಬಾವಗಾವುಂಡನ ಮಗಂದಿರು ದೇವಗಾವುಂಡನುಂ ಮಲ್ಲಗಾವುಂಡನುಂ ಬಿಲ್ಲಮಂಬುಮಂಕೊಂಡಿರ್ವ್ವರುಂ ಹೆಬ್ಬಾಗಿಲೊಳಡ್ಡಂ ನಿಂದುಂ, ಗುಹೆಯ ಬಾಗಿಲೊಳ್ ಸಿಂಹನಿರ್ಪ್ಪಂತೆ ತಾಗಿ ತಳ್ದೆಸುವಾಗಳ್, ಕಾರಮಳೆ ಕಱೆದಂತೆಯುಂ, ಕಡಂದುಱ ಹುಟ್ಟಿಯಂ ಕೆಣಕಿದಂತೆಯುಂ, ಕವಿದ ಕಾಲ ಬಾಯೊಳಂ ಜವನೊಕ್ಕಲಿಕ್ಕಿದಂತೆ ತೊತ್ತಳದುಳಿದವೊಲುತುಂ ಕಯ್ಯನರೆದುಂ, ಬಿಲ್ಲ ತಿರುಮಂ ಪಱಿವನ್ನಮೆಚ್ಚು ನೆಱೆಯದೆ, ಕಟ್ಟಿದಲಗಂ ಕಿತ್ತು x x ಲ್ಕುಱಿಯ ಹಿಂಡಂ ತೋಳಂ ಪೊಕ್ಕಂತೆಯುಂ ಕಬ್ಬುದೋಂಟಮನಾನೆ ಪೊಕ್ಕಂತೆಯುಂ ನಿಕ್ಕುರಳಿಲ್ ಪೊಕ್ಕುದೋಳಹಿಂಡು ಕುತ್ತಿ ನೂಂಕುತ್ತ ಬಪ್ಪಾಗಳ್ ॥

ಚಂ ಮಾ ॥ ಮಲೆದಿದಿರಾಂತ ಮಾರ್ವ್ವಲವನಳ್ಕುಱೆ ತಾಗಿ ಭುಜಪ್ರತಾಪದಿಂ
ದಲಗನೆ ಕಿರ್ತ್ತು ಪೊಯ್ಯೆ ನಿರತಂ ಕಣಕಾಲ್ಮೊಳಕಾಲ್ಮುಖಂ ಭುಜಂ
ತಲೆಬಳೆಯಾಗೆ ಸಂಬಳಿತಯೋಪಿನಮೊಂದೆರಡಟ್ಟೆಯೋಡಲುಂ
ತೊಲಗದೆ ನಿಂದು ತಳ್ತಿಱಿದರಿರ್ಬ್ಬರುಮಾಹವರಂಗಭೂಮಿಯೊಳ್॥ 574 ॥

ವಚನ ॥

ಅಂತವರಿಬ್ಬರುಂ ಪೋಗದೆ ನಿಂದುದಂ ಕಂಡು ಪೊರಿದಾಳು ಕುದುರೆಯಮೊರ್ಬ್ಬಂ ತಾಗಿಯೆಸಲ್ವಿಱಿಯಲುಂ ಕೋಲ್ಕೊಂತಂಗಳೂಡಾಗಿ ಬಿರ್ದ್ದು ಸುರಲೋಕಪ್ರಾಪ್ತರಾದರವರಿರ್ಬ್ಬರ ಪೆಣನಂ ಮೆಟ್ಟಿ ತುಱು ಪರಿಯಲವರಿರ್ಬ್ಬರಿಂ ಕಿಱಿಯಂ ಬೊಪ್ಪಗಾವುಂಡಂ ತಮ್ಮಣ್ಣಂದಿರಿಬ್ಬರ ಕಳೇಬರವಂ ಕಂಡು ಸೈರಿಸಲಾಱದೆ, ನಿಮ್ಮಾದುದನಪ್ಪೆನಲ್ಲದೊಡೇಂ ತುಱುವಂ ಮಗುಳ್ಚಿ ಬಪ್ಪೆನೆಂದೊಂದೆಮೆಯ್ಯೊಳ್ ಹಿಂದೆಹತ್ತಲಾತಂಗೆ ಪಡಿಬಲಮಾಗಿ, ಮಂಡಳಿಕಂ ಉದ್ದರೆಯೆಕ್ಕಲರಸನ್ ಆಳ್ಕುದುರೆಯಂ ಹೇಳಲಾನೆಱವಂ ಕೂಡಿಕೊಂಡು ಹಾಲ್ಗಟ್ಟದ ಬಯಲಲೊಡ್ಡನೊಡ್ಡಿದರಿಬಲವಂ ಬೊಪ್ಪಗವುಂಡಂ ಕೊಂದು, ತುಱುವಂ ಮಗುಳ್ಚಿಕೊಂಡು ಬಂದಣ್ಣಂದಿರಂ ಸಂಸ್ಕಾರಿಸಿ, ಜಳದಾನಕ್ರಿಯೆಯುಮಂ ಪರೋಕ್ಷವಿನಯಮುಮಂ ಮಾಡಿಯಿರ್ಬ್ಬರ್ಗ್ಗಂ ಕಲ್ಲಂ ನಿಱಿಸಿದಲ್ಲಿ ಮಂಗಳಮಹಾಶ್ರೀ.

72) ಭಾರಂಗಿ 325, E.C. VIII (Rice), ಕ್ರಿ.ಶ. 1118

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆಯಾದ ಆರನೆಯ ವಿಕ್ರಮಾದಿತ್ಯನ ಆಳಿಕೆಯಲ್ಲಿ ಚಟ್ಟಗಾವುಂಡನು ಭಾರಂಗಿಯಲ್ಲಿ ಮಲ್ಲಿಕಾರ್ಜುನ ದೇವಸ್ಥಾನವನ್ನು ಕಟ್ಟಿಸಿ ಭೂಮಿಯನ್ನು ದತ್ತಿಯಾಗಿ ಬಿಟ್ಟಂತೆ ಹೇಳಿದೆ.

ಸಮುದ್ರ

ಮ ಸ್ರ ॥ ಮಕರವ್ರಾತಾಭಿಘಾತೋಚ್ಚಳಿತಕಮಠಸಂಘಟಸಂಸ್ಪರ್ಧಿ ಮೀನ
ಪ್ರಕರಪ್ರಕ್ಷೋಭಿತೋದ್ವೃತ್ತರಳತರತರಂಗೋತ್ಕರಕ್ಷಿಪ್ತಮುಕ್ತಾ
ನಿಕರಂ ಕಣ್ಗೆಯ್ದೆ ಚೆಲ್ವಂ ಪಡೆದುದವಿರಳೊತ್ತಾಳಕಲ್ಲೋಳಮಾಳಾ
ಧಿಕಸ x x ರ್ಷ ಪ್ರಬಳಘನಘನಧ್ವಾನರೌದ್ರಂ ಸಮುದ್ರಂ ॥ 575 ॥

ಮ ಸ್ರ ॥ ಅದು ನಾನಾನಕ್ರಚಕ್ರಕ್ರಮಕರಿಮಕರೋಡ್ಡೀನಪಾಠೀನಪುಚ್ಛ
ಚ್ಛದವಾತಾಘಾತಭೀತಾಚಳಚಳನಚಳತ್ತುಂಗರಂಗತ್ತರಂಗೌ
ಘ ದುರಂತಪ್ರಾಂತಮುಜ್ಜೃಂಭಿತಬಹಳತಡಿಜ್ಜಾಳಲೀಳಾವಿನೀಳಾಂ
ಬುದಬಿಂಬಾಡಂಬರಂ ಕಣ್ಗೆಸೆವುದು ಲಹರೀಲೋಳಬಾಳಪ್ರವಾಳಂ ॥ 576 ॥

ಅನಂತಚಮೂಪ

ಉ ಮಾ ॥ ಶಾರದನೀರದಂ ಪುದಿದುದೋ ನಭಮಂ ಸುತನಂ ಸುಧಾಂಶುವಂ
ಕ್ಷೀರಗಭೀರನೀರಧಿ ನಿರೀಕ್ಷಿಸಲೆಂದಿರದೆಯ್ದೆವಂದು ನಿಂ
ದೀ ರಸೆಯಿಂ ನಭಕ್ಕೊಗೆಯಲಿರ್ದುದೊ ಪೇೞೆನಿಪುದ್ಧಕೀರ್ತಿವಿ
ಸ್ತಾರಮನೆಯ್ದೆ ಬಣ್ಣಿಪುದನಂತಚಮೂಪನನೀ ಜಗಜ್ಜನಂ ॥ 577 ॥

ಗೋವಿಂದ

ಮ ವಿ ॥ ಹರಿಪುತ್ರಂ ಹರಿನನ್ದನಂ ಹರಿಸುತಂ ಬಿಳ್ವರ್ಗೆ ಮಾಱಾಂಪವ
ರ್ಗರವಿಂದಾಸ್ಯೆಯರ್ಗ್ಗೆಂದೊಡಾರ್ಗ್ಗುಪಮನತ್ಯೌದಾರ್ಯದಿಂ ಶೌರ್ಯದಿಂ
ಏಕ ರೂಪೋಂನತಿಯಿಂ ನವೀನಪುರುಷರ್ಗ್ಗೆಂದೆಂದು ವಿಶ್ವೋರ್ವ್ವಿಯಾ
ದರದಿ ಬಣ್ಣಿಪುದೀ ವಿಶಿಷ್ಟ ಜನ ಕಳ್ಪಾರಾಮ ಗೋವಿಂದನಾ ॥ 578 ॥

ಚಟ್ಟ

ಕಂ ॥ ಚಟ್ಟಂ ಪರವನಿತೆಯರಂ
ಮುಟ್ಟಂ ವಿತರಣಮನಮರಭೂರುಹದೊಳ್ ಕೋ
ಡಿಟ್ಟಂ ಪಾಪದ ಪಥಮಂ
ಮೆಟ್ಟಂ ಶಾಶ್ವತಪದಕ್ಕೆ ಕಳಸಮನಿಟ್ಟಂ ॥ 579 ॥

73) ಉದ್ರಿ 141, E.C. VIII (Rice), ಕ್ರಿ.ಶ. 1127

ಈ ವೀರಗಲ್ಲು ಶಾಸನದಲ್ಲಿ ಕಲ್ಯಾಣದ ಚಾಲುಕ್ಯರ ದೊರೆಯಾದ ಭೂಲೋಕಮಲ್ಲನ ಆಳಿಕೆಯಲ್ಲಿ ಕದಂಬ ತೈಲಪನಿಗೂ ಪೆರ್ಮಾಡಿ ಸಾಂತರನಿಗೂ ಯುದ್ಧವಾದಾಗ ಬಮ್ಮುಸಾಂತನು ಕಾದಿ ಸುರಲೋಕಪ್ರಾಪ್ತನಾದನೆಂದು ಹೇಳಿದೆ.

ಕಂ ॥ ಕಡುಮುಳಿದು ಬಮ್ಮು ಸಾಂತಂ
ಕಡಿತಲೆ ಪಲಗೆಯುಮ ಕೊಂಡು ಸಾಂತರನಾಳಂ
ಕಡಿಖಂಡಮಾಡಿ ಪೊಯ್ದೊಡೆ
ಕೆಡೆದುದು ಧಾರಿಣಿಯ ಮೇಲೆ ವೈರಿಸಮೂಹಂ ॥ 580 ॥

ಕಂ ॥ ರಣರಂಗಶೂದ್ರಕಂ ಬ
ಲ್ಕಣಿ ಸುಭಟಂ ಸೆಣಸುವರಿಬಲಂಗಳ ಶಿರಮಂ
ಖಣಿಲೆನೆ ಪೊಯ್ದಾರ್ದಾಗಳೆ
ಪೆಣಮಯವಾಯ್ತೆಂದು ನೂಂಕಿದರಿಬಲಮನಿತುಂ ॥ 581 ॥

74) ಉದ್ರಿ 233, E.C. VIII (Rice), ಕ್ರಿಶ. 1137

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ಸೋಮೇಶ್ವರ ಜಗದೇಕಮಲ್ಲನ ಆಳಿಕೆಯ ಕಾಲದಲ್ಲಿ ಕನಕ ಜಿನಾಲಯಕ್ಕೆಂದು ಅಲ್ಲಿಯ ಜೈನಮುನಿ ಭಾನುಕೀರ್ತಿಗೆ ಕೊಟ್ಟ ದತ್ತಿಯನ್ನು ಹೇಳಿದೆ.

ಉದ್ದರೆ

ಮ ಸ್ರ ॥ ಬೆಳೆದಿರ್ದಾ ಗಂಧಶಾಳೀವನಪರಿವೃತದಿಂ ತೆಂಗು ಪಂಕೇಜ ಷಂಡಂ
ಗಳಿನೊಪ್ಪಂಪೆತ್ತು ತೋಪ್ಪಾವಕುಳತಿಳಕದಿಂ ಚಂಪಕಾಶೋಕ ಜಂಬೂ
ಕುಳದಿಂ ಜಂಬೀರ ಪೂಗದ್ರುಮ ಕುರವಕದಿಂ ನಾಗವಲ್ಲೀ ತಟಾಕಂ
ಗಳಿನಾದಂ ಹರ್ಮ್ಯದಿಂದುದ್ದರೆ ಬುಧಜನ ಸಂಪ್ರೀತಿಯಂ ಮಾಡುತಿರ್ಕ್ಕುಂ
॥ 582 ॥

ಎಕ್ಕಲಭೂಪ

ಕಂ ॥ ಗಂಗಕುಳ ಕಮಳ ದಿನಕರ
ನಂಗಜ ಸಂನಿಭನನೂನದಾನವಿನೋದಂ
ಭಂಗಿಸಿದ ವೈರಿಗಳಂ
ತುಂಗಯಶಂ ನೆಗಳ್ದನೊಪ್ಪೆ ಯೆಕ್ಕಲಭೂಪಂ ॥ 583 ॥

ಮ ಸ್ರ ॥ ಪರಮಾರ್ತ್ಥಂ ವೀರತೀರ್ತ್ಥಂ ಪರಹಿತಚರಿತಾರ್ತ್ಥಂ ಸದಾಭಾವಿತಾರ್ತ್ಥಂ
ತರುಣೀ ಸಂಮೋಹನಾರ್ತ್ಥಂ ಮನಸಿಜಜನಿತಾ ರೂಪ ಸಂಶುದ್ಧಿತಾರ್ತ್ಥಂ
ವರಶಿಷ್ಟಾನೀಕ ಕರ್ತ್ಥಂ ಸಲೆ ಕುಡೆ ಪಡೆಗುಂ ಲೋಕ ಸಂರಕ್ಷಣಾರ್ತ್ಥಂ
ಪುರುಷಾರ್ತ್ಥಂ ಸ್ವಾರ್ತ್ಥಮೆಂದೆಕ್ಕಲ ನರಪತಿ ಭೂಲೋಕಕನ್ತಿಣ್ಣಿತಿರ್ಕ್ಕುಂ
॥ 584 ॥

ಮ ಸ್ರ ॥ ಬಳವದ್ವಿದ್ವಿಷ್ಟ ಭೂಪಾಳರನವಯವದಿಂ ಕಾದಿ ಬೆಂಕೊಂಡ ಗಂಡಂ
ದಳವೆಲ್ಲಂ ವೋಡೆ ಗಂಡಂ ಬಿರುದಭಟರು ಬೆನ್ನಿತ್ತು ಪೋಪಲ್ಲಿ ಗಂಡಂ
ಕಳನಂ ಪೇಳ್ವಟ್ಟೆ ಗಂಡಂ ರಿಪುಮದಹರಣಂ ಗಂಗಮಾರ್ತಾಂಡ ದೇವಂ
ತಳೆದಂ ಭೂಕಾನ್ತೆಯಂ ಯೆಕ್ಕಲ ನೃಪತಿಳಕಂ ಚಾರು ದೋರ್ದ್ದಂಡದಿಂ
॥ 585 ॥

ಸ್ರಗ್ಧರೆ ॥ ಕ್ರೂರಾರಾತೀಭ ಕುಂಭಸ್ಥಳ ವಿದಳನ ಕಂಠೀರವಂ ವಿಶ್ವವಿದ್ಯಾ
ಧಾರಂ ಶ್ರೀ ಭಾರತೀ ಮಂಡನ ಕುಚಮಣಿಹಾರಂ ಮನೋಜಾತರೂಪಾ
ಕಾರಂ ಗಂಭೀರ ನೀರಾಕರನಮಳಗುಣಂ ಸತ್ಯಭಾಷಾವಿಭೂಷಂ
ತಾರಾಶುಭ್ರಾಭ್ರ ಗಂಗಾಶಶಿ ವಿಶದ ಯಶಂಗೆಕ್ಕಲಂಗೊಪ್ಪುತಿರ್ಕ್ಕುಂ ॥ 586 ॥

ಸುಗ್ಗಿಯಬ್ಬೆ

ಕಂ ॥ ಅಮರ್ದಿನ ಬರಿವೊನಲಿಂದಂ
ಕಮನೀಯ ಕಳ್ಪವಲ್ಲಿ ಪುಟ್ಟುವ ತೆರದಿಂ
ಪ್ರಮದಾರತ್ನಂ ಜನಿಯಿಸ
ಲಮಳಾಂಗನೆ ಸುಗ್ಗಿಯಬ್ಬರಸಿ ಧಾರಿಣಿಯೊಳ್ ॥ 587 ॥

ಚಟ್ಟಿಯಬ್ಬೆ

ಕಂ ॥ ಸುರಕುಜಮನಿಳಿಸಿ ಶಕ್ರನ
ಸುರಭಿಯನಿನ್ನೇವುದೆಂದು ಚಿಂತಾಮಣಿಯ
ಪರಿಹರಿಸಿ ಕುಡಲೆ ಬಲ್ಲಳ್
ಪರಮಾರ್ತ್ಥಂ ಚಟ್ಟಿಯಬ್ಬರಸಿ ಧಾರಿಣಿಯೊಳ್ ॥ 588 ॥

ಕೇತನ

ಚಂ ಮಾ ॥ ವಿಮಳಯಶೋವಿತಾನನಕಳಂಕನುಪಾರ್ಜ್ಜಿತ ಜೈನಧರ್ಮನಾ
ಗಮಕ ಜನ ಪ್ರಪೂರ್ಣ್ನ ವಿಕಜಾಬ್ಜ ಸರೋವರ ರಾಜಹಂಸನೆಂ
ದಮಮ ಧರಿತ್ರಿ ಬಣ್ಣಿಪುದು ಭವ್ಯಶಿಖಾಮಣಿ ಭವ್ಯಬಂಧುವಂ
ಸುಮತಿ ನಿವಾಸನ ನೆಗಳ್ದ ಕೇತನನುತ್ತಮದಾನಸತ್ವನಂ ॥ 589 ॥

75) ಉದ್ರಿ 138, E.C. VIII (Rice), ಕ್ರಿಶ. 1145

ಇದರಲ್ಲಿ ಕಲ್ಯಾಣದ ಚಾಲುಕ್ಯ ದೊರೆ ಜಗದೇಕಮಲ್ಲನ ಆಳಿಕೆಯಲ್ಲಿ ಗಂಗವಂಶದ ಎಕ್ಕಲದೇವನನ್ನೂ ಅವನ ಹೆಂಡತಿಯನ್ನೂ ಹೊಗಳಿದೆ.

ಬನವಾಸಿ ದೇಶ

ಮ ವಿ ॥ ವರರತ್ನಾಕರದಿಂದಳಂಕರಿಸಿ ಮೆಯ್ವೆಚ್ಚಿರ್ದ ಭೂದೇವಿಗಾ
ದರದಿಂ ಕುಂತಳದಂತೆ ಕುಂತಳ ಸುದೇಶಂ ತೋರ್ಕುಮಾ ದೇಶಕಾ
ದರಣೀಯಂ ಬನವಾಸಿದೇಶಮದು ಭೋಗಕ್ಕಾಗರ ಸೌಖ್ಯಸಾ
ಗರಮಾಹ್ಲಾದಕರಂ ನಿರಂತರವಿಳಾಸಾವಾಸಲಕ್ಷ್ಮೀಕರಂ ॥ 590 ॥

ಎಕ್ಕಲದೇವ

ಮ ಸ್ರ ॥
ಕರವಾಳಿಂ ಪೊಯ್ಯೆ ಮಾಱಾಂತಹಿತರ ತಲೆಗಳ ಸೆಂಡುವೊಯ್ದಂತೆ ಪಾಱು
ತ್ತಿರೆ ಮುಂಡಂ ಜಿಂಡುಮುಂದಾಗುರುಳುತಿರೆ ರಣಕ್ಷೋಣಿಯೊಳ್ ಭೂತವೇತಾ

ಳರ ಪರ್ವಂ ತಾನಿದೆಂದಚ್ಚರಿವಡೆ ಸುರಟಿಂದಾಂತರಂ ಕೊಲ್ವನತ್ಯು
ದ್ದುರವೀರಾಡಂಬರಂ ತ್ರೈಭುವನಭರಿತಮಾಗೆಕ್ಕಲಕ್ಷೋಣಿಪಾಳಂ ॥ 591 ॥

ಮ ಸ್ರ ॥ ಬಳವದ್ವಿಕ್ರಾಂತದೊಳ್ ಕಾಯ್ಪಿನೊಳದಟಿನೊಳಾಕ್ಷೇಪದೊಳ್ ಭೀಮಸೇನಂ
ಬಳವದ್ರಾಮಾನುಜಂ ಬಾಡವಶಿಖಿ ಹನುಮಂ ವೈನತೇಯಂ ಸಮಂ ತ
ನ್ನೊಳೆನಿಪ್ಪಂ ಮಾರ್ಮರಾರಾಂತರನದಟಲೆವಂ ಕೊಲ್ವನಾಟಂದು ಗೆಲ್ವಂ
ವರವೀರಾಡಂಬರಂ ತ್ರಿಭುವನಭರಿತಮಾಗೆಕ್ಕಲಕ್ಷೋಣಿಪಾಳಂ ॥ 592 ॥

ಚಂ ಮಾ ॥ ಮುಳಿದಿದಿರಾಂತ ದುರ್ಧರವಿರೋಧಿಬಳಾಂಬುಧಿಗುಗ್ರಬಾಡವಾ
ನಳನದಟಿಂದೆ ಮಚ್ಚರಿಪ ದರ್ಪದ ಮನ್ನೆಯರೆಂಬಹೀಂದ್ರಮಂ
ಡಳಿಗೆ ಫಣೀಂದ್ರವೈರಿಯೆನಲಾಂತು ಬರ್ದುಂಕುವನಾವನುದ್ಧದೋ
ರ್ಬಳದಿನರಾತಿವೀರಭಟನೆಕ್ಕಲವೀರನೊಳಾಜಿರಂಗದೊಳ್ ॥ 593 ॥

ಚಂ ಮಾ ॥ ಶರಣೆಮಗಂದು ಬಂದು ಮಱೆವೊಕ್ಕು ಬರ್ದುಂಕದೆ ಕೀಱಿ ಮೀಱಿ ಮ
ಚ್ಚರಿಸುವ ವೈರಿಮನ್ನೆಯರ ಕೋೞ್ಮಿದುಳಿಂ ಪೊಸ ಕಂಡದಿಂಡೆಯಿಂ
ಕರುಳ ಪಿಣಿಲ್ಗಳಿಂ ರುಧಿರದಿಂದೆ ಮರುಳ್ವಡೆಗುದ್ಧರಾಗಮಂ
x x x ವಿಪನೆಂದೊಡಾಹವದೊಳೆಕ್ಕಲವೀರನನಾಂಪ ಗಂಡರಾರ್ ॥ 594 ॥

ಎಕ್ಕಲದೇವನ ಹೆಂಡತಿ ಬೊಪ್ಪಾದೇವಿ

ಮ ವಿ ॥ ಉಮೆ ಸೌಭಾಗ್ಯದೊಳೊಳ್ಪುವೆತ್ತ ರತಿ ರೂಪಾಶ್ಯದೊಳ್ ಲಕ್ಷ್ಮಿ ವ
ಕ್ಷಮನಂಗೀಕರಿಸಿರ್ಪ ನಲ್ಮೆಯೊಳತಿಪ್ರಾಗಲ್ಭ್ಯದೊಳ್ ಸೂಕ್ತಿಲ
ಕ್ಷ್ಮಿ ಮಹೀಲೋಕದೊಳೀಪ್ರಮೋದವತಿ ಬೊಪ್ಪಾದೇವಿಯೆಂಬೀ ಪ್ರಭಾ
ವಮನಾಂತೆಕ್ಕಲದೇವನಗ್ರಮಹಿಷೀತ್ವಶ್ರೀಯಿನುದ್ಯೋತಿಪಳ್ ॥ 595 ॥

76) ಹಿರೇಚೌಟಗ್ರಾಮ, MAR 1928, p. 79, ಕ್ರಿಶ. 1149

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆಯಾದ ಮೂರನೆಯ ಜಗದೇಕಮಲ್ಲನ ಆಳಿಕೆಯಲ್ಲಿ ಕಳಚುರ್ಯ ವಂಶದ ವಿಜಯಾದಿತ್ಯನ ಸಾಮಂತನಾದ ಬಮ್ಮಯ್ಯನು ಬನವಸೆನಾಡನ್ನು ಆಳುತ್ತಿರಲು ಕಾಮಗಾವುಂಡನು ಎಮ್ಮನೂರ ರಾಮೇಶ್ವರದೇವರಿಗೆ ಭೂಮಿಯನ್ನು ದತ್ತಿ ನೀಡಿದಂತೆ ಹೇಳಿದೆ.

ವಿಜಯಾದಿತ್ಯ

ಮ ವಿ ॥ ಪರಭೂಪಾಳಕರಂ ಪಳಂಚಲೆದು ದೋರ್ವಿಕ್ರಾಂತದಿಂ ತ್ಯಾಗದಿಂ
ನೆರೆದರ್ಥಿಪ್ರಕರಕ್ಕೆ ಮಾಡಿ ಮುದಮಂ ಕಾರುಣ್ಯದಿಂ ಕಾದು ತ

ಚ್ಚರಣಾಯಾತರನಾತ್ಮ ಸತ್ವಗುಣದಿಂ ಮರ್ಯಾದೆಯಿಂದಾಳ್ವನಾ
ದರದಿಂ ಕುಂತಳ ಚಕ್ರವರ್ತಿ ವಿಜಯಾದಿತ್ಯಂ ಮಹೀಚಕ್ರಮಂ ॥ 596 ॥

ಬಮ್ಮಯ್ಯ

ಕಂ ॥ ನೆಗಟೆ ಜಯಂ ಪೊಗಟೆ ಜಗಂ
ಮಿಗೆ ತನ್ನಳವನುಜೆ ಬಮ್ಮಯಂ ಪಾಲಿಸುವಂ
ನೆಗಟ್ದೀ ಬನವಸೆ ನಾಡಂ
ದಿಗಿಭಂಬರಮೆಯ್ದೆ ಕೀರ್ತಿಲತೆಯುಂ ಶ್ರೀಯುಂ ॥ 597 ॥

ಎಮ್ಮನೂರು

ಚಂ ಮಾ ॥ ಬನವಸೆ ದೇಶದೊಳ್ ನೆಗಟ್ದ ನಾಗರಖಂಡಮೆ ಸಾರಮಾದುದಾ
ಜನಪದದೊಳ್ ವಿರಾಜಿಸುವ ಕೆಯ್ವೊಲದಿಂ ವನದಿಂ ತಟಾಕದಿಂ
ವನರುಹ ಷಂಡದಿಂ ಬಳಸಿ ನಾಡೆ ಮನಂಗೊಳಿಪೆಮ್ಮನೂರಿಳಾ
ಜನ ಜನಿತಾನುರಾಗ ವಿಭವೋದಯಮಕ್ಷತ ಸೌಖ್ಯ ಸಂಪದಂ ॥ 598 ॥

ಕಾಮಗಾವುಂಡ

ಕಂ ॥ ಜಳನಿಧಿಯೊಳ್ ಹಿಮಧಾಮಂ
ಕುಳಗಿರಿಯೊಳ್ ಸಿಂಹಮೊಗೆವವೋಲೊಗೆದಂ ನಿ
ರ್ಮಳ ಕೀರ್ತಿ ಕೇತಿಸೆಟ್ಟಿಗೆ
ಲಳಿತಾಕೃತಿಯೆಮ್ಮನೂರ ಕಾಮಗವುಂಡಂ ॥ 599 ॥

ಕಂ ॥ ಧರ್ಮದ ಕಣಿ ಸತ್ಯದ ನಿಧಿ
ಪೆರ್ಮೆಯ ನೆಲೆ ಭೋಗದಾಗರಂ ವಿಜಯ ಶ್ರೀ
ಗಾರ್ಮಂ ಕಾಮಗವುಂಡಂ
ನಿರ್ಮಳತರಕೀರ್ತಿ ವಿಕ್ರಮಾಳಂಕಾರಂ ॥ 600 ॥

ಕಂ ॥ ಮಂಗಳಮಂ ಮಾಡುಗೆ ಜಯ
ಸಿಂಗ ನೃಪಂಗೆ ನೆಗಟ್ದೆಮ್ಮನೂರೊಡೆಯಂ ದೇ
ವಂ ಗುಣನಿಧಿ ಕಾಮಗವುಂ
ಡಂಗಿಂತೀ ನೆಲನುಮಿನನುವುಳ್ಳನ್ನೆವರಂ ॥ 601 ॥

77) ದೇವಸ್ಥಾನ ಹಕ್ಕಲುಗ್ರಾಮ 270, E.C. VIII (Rice), ಕ್ರಿ.ಶ. 1150

ಇದರಲ್ಲಿ ಕಲ್ಯಾಣದ ಚಾಲುಕ್ಯ ದೊರೆಗಳ ಆಳಿಕೆಯಲ್ಲಿ ಎಕ್ಕೋಟಿ ಚಕ್ರವರ್ತಿ ರುದ್ರಶಕ್ತಿದೇವರಿಗೆ ಸೋಯಿದೇವ, ಎಕ್ಕದೇವ ಮೊದಲಾದವರು ನೀಡಿದ ದತ್ತಿಯನ್ನು ಹೇಳಿದೆ.

ಸೋಯಿದೇವ

ಕಂ ॥ ಧರೆಯೊಳ್ ಮಾಱಾಂಪದಟರ
ಯಿರುಳು ಹಗಲಱಿಸಿ ತೊಳಲ್ದು ಕಾಣದೆ ಸೋಯಂ
ಸುರಲೋಕದೊಳಗೆ ಕಲಿಗಳ
ನಱಿಸುವ ತೆಱದಿಂದ ಯಿಂದ್ರಪುರಮಂ ಪೊಕ್ಕಂ ॥ 602 ॥

78) ಕಾತವಳ್ಳಿ 369, E.C. VIII (Rice), ಕ್ರಿ.ಶ. 1157

ಈ ವೀರಗಲ್ಲು ಶಾಸನದಲ್ಲಿ ಕಲ್ಯಾಣದ ಚಾಲುಕ್ಯರ ದೊರೆಯಾದ ತ್ರೈಲೋಕ್ಯಮಲ್ಲನ ಆಳಿಕೆಯಲ್ಲಿ ಕನ್ನೆಯ ಎಂಬುವವನು ಕಾತಿಕವಳ್ಳಿಯ ತುರುಗೋಳಿನಲ್ಲಿ ಕಾದಿ ಸತ್ತನೆಂದು ಹೇಳಿದೆ.

ಉ ಮಾ ॥ ಎತ್ತಿದ ಮಾರ್ವಲಕ್ಕಿದಿರನಳ್ಕದೆ ತಾಗಿಯೆ ವೀರರೆಲ್ಲರಂ
ಮುತ್ತಿದನೊತ್ತಿದಂ ಪೆಣನನಂಬರಕೆತ್ತಲು ಭೂತಕೋಟಿ ಪಾ
ಡುತ್ತಿರೆ ಮಂಗಳಂ ಜಯ ಜಯಧ್ವನಿ ಘೂರ್ಣಿಸೆ ವೀರಲಕ್ಷ್ಮಿ ಮೆ
ಯ್ವೆತ್ತಿದ ಸಾಹಸಂಬಡೆದ ಕನ್ನೆಯನೀಗಳಿದೇಂ ಕೃತಾರ್ಥನೋ ॥ 603 ॥

ಕಂ ॥ ರಣದೊಳ್ ತಾಗಿದ ಸುಭಟರ
ಪೆಣಮಯಮಂ ಮಾಡಿದಾಗಳರಿಬಲಮೆಲ್ಲಂ
ಕಣೆಯಮಯವಾಗಿ ಕಱೆದೊಡೆ
ಕಣೆಹಂಜರದಲ್ಲಿ ಕನ್ನ ಮಱೆದೊಱಗಿರ್ದಂ ॥ 604 ॥

79) ಭಾರಂಗಿ 328, E.C. VIII (Rice), ಕ್ರಿ.ಶ. 1159

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆಯಾದ ನೂರ್ಮಡಿತೈಲನ ಆಳಿಕೆಯಲ್ಲಿ ಬೀರಿಸೆಟ್ಟಿಯು ಕಾದಂಬ ಸೋಯಿದೇವನ ಸಮ್ಮತಿಯಿಂದ ಕೇದಾರೇಶ್ವರದೇವರಿಗೆ ದತ್ತಿಯನ್ನು ಬಿಟ್ಟಂತೆ ಹೇಳಿದೆ.

ಸೋಯಿದೇವ

ಮ ಸ್ರ ॥ ಪೆಸರ್ವೆತ್ತಂ ತೋಳ ಕೂರ್ವಾಳರಿನೃಪರ ಕುಲಧ್ವಂಸಮಂ ಮಾಡೆ ವಾಕ್ಯ
ಪ್ರಸರಂ ಶ್ರೀರಾಮಬಾಣಕ್ಕಧಿಕತೆಯನಣಂ ತಾಳ್ದೆ ಭಾಸ್ವದ್ವಿವೇಕಂ
ಬಿಸಜಪ್ರೋದ್ಭೂತನಂ ಧಿಕ್ಕರಿಸೆ ವಿತರಣಂ ವಂದಿಸಂದೋಹಮಂ ರ
ಕ್ಷಿಸೆ ತನ್ನಾಚಾರಮೀ ಕಲ್ಕಿಯನಲೆಯೆ ಧರಾಧೀಶ್ವರಂ ಸೋವಿದೇವಂ॥ 605 ॥

ಬೀರಿಸೆಟ್ಟಿ

ಚಂ ಮಾ ॥ ಅರಿಗಬಳಾಜನಕ್ಕೆರೆದ ವಂದಿಗೆ ವೀರದಿನಾತ್ಮರೂಪಸುಂ
ದರತೆಯಿನಾರ್ಪಿನಿಂ ಪಲವು ಕೂರ್ಗಣೆಯಂ ನನೆಯಂಬಿನೋಳಿಯಂ
ಸುರುಚಿರಕಾಂಚನಪ್ರಕರಮಂ ಸಲೆ ತನ್ನಯ ಹಸ್ತಯುಗ್ಮದಿಂ
ಸುರಿದಪನೆಂದೊಡಾರ್ ಬಗೆದು ಬಣ್ಣಿಸರೀ ನುತ ಬೀರಿಸೆಟ್ಟಿಯಂ ॥ 606 ॥

ಕಂ ॥ ಬೀರಂ ಸಿವಸಮಯಕ್ಕಾ
ಧಾರಂ x ಸುಜನಪ್ರಹರ್ಷನಸತೀದೂರಂ
ಬೀರಂ ಶಿವಪದನತನೀ
ಬೀರಂ ನಿಜಕುಲ ಪಯೋಧಿವರ್ಧನ ಚಂದ್ರಂ ॥ 607 ॥

ಕೇತ – ಬೀರಿಸೆಟ್ಟಿಯ ಮಗ

ಕಂ ॥ ಕಮನೀಯ ಕಾಮಿನೀಮುಖ
ಕಮಳ ದಳ ಸ್ಫುಟಿತ ಭಾನುಲಕ್ಷ್ಮೀ ಲಲನಾ
ರಮಣೀಯ ಸ್ತನಹಾರಂ
ಸಮನೆನಿಪಂ ಕೇತನೀಯನಾ ಸುರಕುಜದೊಳ್ ॥ 608 ॥

80) ದೇವಸ್ಥಾನ ಹಕ್ಕಲುಗ್ರಾಮ 277, E.C. VIII (Rice), ಕ್ರಿ.ಶ. 1165

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆಯಾದ ನೂರ್ಮಡಿತೈಲನ ಆಳಿಕೆಯಲ್ಲಿ ಮಹಾದೇವ ದಂಡನಾಯಕನು ಬಲಿಪುರದಲ್ಲಿ ದತ್ತಿಯನ್ನು ನೀಡಿದಂತೆ ಹೇಳಿದೆ.

ಕಾಳಿದಾಸ

ಚಂ ಮಾ ॥
ನುಡಿದೊಡೆ ತಾಂಬ್ರಪತ್ರ ಲಿಖಿತಾಕ್ಷರಮಿತ್ತನೆ ಪೊಯ್ದುಡ್ವಚ್ಚಲಂ
ಬಿಡಿದನೆ ವಜ್ರಲೇಪಸಹಿತಾವನಿಪಾಳನಾಜಿರಂಗದೊಳ್
ತೊಡರ್ದಗೆ ಕೊಂದನೆಂಬುದಿದು ಭೇರಿಯ ಘೋಸನೆ ನಿಂನ ಮೆಚ್ಚು ಮೇಣ್
ನುಡಿಯಿಸು ಬೇಡು ಮೊಪ್ಪಿಡಿದೊಡರ್ ತೊದಳಾದುದೊ ಕಾಳಿದಾಸನೊಳ್ ॥ 609 ॥

ಮಹಾದೇವ ದಂಡನಾಯಕ

ಚಂ ಮಾ ॥ ಚಲದಭಿರಾಮನಣ್ಮಿನ ತವರ್ಮನೆ ಚೆನ್ನರ ಚಕ್ರವರ್ತಿ ಭೂ
ವಲಯದ ಭೂಷಣಂ ಚದುರರಾಜನುದಾರನುದಾತ್ತಮೂರ್ತಿ ನಿ
ರ್ಮಲತೆಯ ಜನ್ಮಭೂಮಿ ಸುಜನತ್ವದ ಸುಗ್ಗಿ ವಿಲಾಸದಾಗರಂ
ಕಲಿಗಳ ದೇವನೆಂಬುದನಿಶಂ ಮಹದೇವನನೀ ಜಗಜ್ಜನಂ ॥ 610 ॥

ಬನವಾಸಿ

ಚಂ ಮಾ ॥ ಫಲಭರದಿಂ ಮನಂಗೊಳಿಪ ಪೂಗವನಂ ವನದೊಳ್ ಸರೋಜಲಂ
ಜಲದ ಪೊನಲ್ಗಳಿಂ ಬೆಳೆದು ಕತ್ತಲಿಸಿರ್ಪೆಲೆವಳ್ಳಿ ಬಳ್ಳಿ ಗೊಂ
ಡುಲಿವ ಪಿಕಂ ಪಿಕಧ್ವನಿಗಳಿಂ ನಲಿದಾಡುವನಂಗನಂಗನಾ
ಕುಲಮದೆ ಲಕ್ಷ್ಮಿ ಲಕ್ಷ್ಮಿಗೆ ಸಮೃದ್ಧಿಕರಂ ಬನವಾಸೆದೇಶದೊಳ್ ॥ 611 ॥

ಬಲಿಪುರ

ಕಂ ॥ ಕಲಹಂಸಗತಿಯ ಮೃದುಕೋ
ಕಿಲನಾದದ ನೀಲಕಚದ ತನುಮಧ್ಯದ ಮಂ
ಗಲಕಲಶಕುಚದ ಸೊಗಯಿಪ
ಲಲಿತಮನೋಜನಮದೆತ್ತಲುಂ ಬಲಿಪುರದೊಳ್ ॥ 612 ॥

81) ಕಲ್ಲೂರು 286, E.C. VIII (Rice), ಕ್ರಿ.ಶ. 1168

ಇದರಲ್ಲಿ ಕಳಚೂರ್ಯರ ದೊರೆಯಾದ ರಾಯಮುರಾರಿ ಸೋವಿದೇವನ ಆಳಿಕೆಯಲ್ಲಿ ನಾಳ್ಪ್ರಭು ತಾರಕಗೌಡನು ಶಿವದೇವಸ್ಥಾನವನ್ನು ಕಟ್ಟಿಸಿ ಭೂಮಿಯನ್ನು ದತ್ತಿಯಾಗಿ ಬಿಟ್ಟಂತೆ ಹೇಳಿದೆ.

ಬನವಾಸಿ

ಉ ಮಾ ॥ ಸಾಗರಪರಿವೇಷ್ಟಿತಸಮಸ್ತಧರಾರಮಣೀಘನಸ್ತನಾ
ಭೋಗಮಿದೆಂಬಿನಂ ವಿದಿತವಿಸ್ತೃತಸಾರತರಾಗ್ರಹಾರದಿಂ
ನಾಗರಖಂಡಪತ್ರಪರಿವೇಷ್ಟನದಿಂ ಜನನೇತ್ರಪುತ್ರಿಕಾ
ರಾಗಮನಿತ್ತು ಮಾಣ್ದುದೆ ಮನಸ್ಸುಖದಂ ಬನವಾಸಿಮಂಡಲಂ ॥ 613 ॥

ತಾರಕಗೌಡ

ಕಂ ॥ ಎತ್ತಿಸಿದ ಶಿವಗೃಹಮಂ
ಸುತ್ತಿಸಿದಂ ಕೀರ್ತಿಲತಿಕೆಯಂ ದಶದಿಶೆಯಂ
ಮತ್ತೆನಿಸದೆ ಪ್ರಜೆಯಂ ಮೆ
ಯ್ವೆತ್ತಿಸಿದಂ ಸತ್ಯದಿಂದೆ ತಾರಕಗೌಂಡಂ ॥ 614 ॥

ಕಂ ॥ ನಾಕದಿನಿಳಿತಂದುದೊ ಫಣಿ
ಲೋಕದಿನೊಗೆತಂದುದೊ ವಸುಂಧರೆಗೆಂದೀ
ಲೋಕಂ ಬಣ್ಣಿಸೆ ತಾರಕ
ಶ್ರೀಕಂಠಾಲಯಮನೆಸೆವಿನಂ ಮಾಡಿಸಿದಂ ॥ 615 ॥

82) ತೆವರತೆಪ್ಪ 345, E.C. VIII (Rice), ಕ್ರಿಶ. 1170

ಇದರಲ್ಲಿ ಕಾದಂಬಸೋಯಿದೇವನ ಆಳಿಕೆಯುಲ್ಲಿ ತೆವರತೆಪ್ಪದ ಲೋಕಗೌಡನು ರತ್ನತ್ರಯದೇವರನ್ನು ಮಾಡಿಸಿ ಭೂಮಿಯನ್ನು ದತ್ತಿಯಾಗಿ ಬಿಟ್ಟಂತೆ ಹೇಳಿದೆ.

ಬನವಾಸಿ

ಚಂ ಮಾ ॥ ಬಳಸಿದ ನಂದನಾವಳಿಗಳಿಂ ಶುಕಸಂಕುಳದಿಂ ಪಿಕಾಳಿಯಿಂ
ಬೆಳೆದೆಜಿಗಿರ್ದ ಶಾಳಿವನದಿಂ ಭ್ರಮರಾಳಿಯಿನಿಕ್ಷುವಾಟಿಯಿಂ
ತಿಳಿಗೊಳದಿಂ ಲತಾಭವನದಿಂ ಕಮಳಾಕರದಿಂ ಕುಮುದ್ವತೀ
ಕುಳದಿನಿದೇಂ ಮನಂಗೊಳಿಪುದೋ ಸತತಂ ಬನವಾಸಿ ಮಂಡಲಂ
॥ 616 ॥

ಸೋಯಿದೇವ

ಮ ಸ್ರ ॥ ಅದಟರ್ ಮೆಯ್ಯಿಕ್ಕೆ ಬೀರರ್ ಬಿರುದನುಜಿದು ಕುಂಬಿಕ್ಕೆ ವಿದ್ವಿಷ್ಟಭೂಪರ್
ಮದಮಂ ಬಿಟ್ಟಿಕ್ಕೆ ಶೇಷಾಕ್ಷತಮನೊಸೆವರೋತಿಕ್ಕೆ ಸರ್ವಸ್ವಮಂ ಬ
ಲ್ಲಿದರುಂ ತಂದಿಕ್ಕೆ ಮಾಜಾಂತವನಿಪಸತಿಯರ್ ಕಣ್ಣ ನೀರಿಕ್ಕೆ ಪೊಣ್ದಿ
ಕ್ಕಿದನಾ ಚಂಗಾಳ್ವಧಾತ್ರೀಪತಿಗೆ ನಿಗಳಮಂ ಸೋವಿದೇವಕ್ಷಿತೀಶಂ ॥ 617 ॥

ಚಂ ಮಾ ॥ ಮದವದರಾತಿಯಂ ತವಿಸಲಗ್ಗಳಗಣ್ಣ ಕಡಂಬ ರುದ್ರನೆಂ
ಬುದೆ ಪೆಸರುಗ್ರಂ ಮಂಡಳಿಕ ಗಂಡರ ದಾವಣಿಯೆಂಬುದೇ ದಿಟ
ಕ್ಕದಿರದರಾತಿ ಮಂಡಳಿಕ ಭೈರವನೆಂಬುದೆ ಸೋವಿದೇವನೆಂ
ಬುದೆ ನಿಗಳಂಕಮಲ್ಲ ನೃಪನೆಂಬುದೆ ಸತ್ಯಪತಾಕನೆಂಬುದೇ ॥ 618 ॥

ಲೋಕಗೌಡ

ಕಂ ॥ ಉದಯಗಿರಿಯಿಂ ದಿನಾಧಿಪ
ನುದಧಿಯಿನಮೃತಾಂಶು ಮಂಡಳಿಕ ಶುಕ್ತಿಕೆಯಿಂ
ದೊದವಿದ ಮೌಕ್ತಿಕ ವೊಸೆವಂ
ತುದಯಿಸಿದಂ ಲೋಕ ಗೌಂಡನೆಂಬ ಮಹಾತ್ಮಂ ॥ 619 ॥

ಉ ಮಾ ॥ ಆತನ ಮಾತೆ ಮಾತು ಧರೆಗಾತನ ಪೂಣ್ಕೆಯೆ ಮಿಕ್ಕ ಪೂಣ್ಕೆ ಸಂ
ದಾತನ ಬಂಟೆ ಬಂಟು ನೆಗೞ್ದಾತನ ಬುದ್ಧಿಯೆ ಶುದ್ಧ ಬುದ್ಧಿ ಮಿ
ಕ್ಕಾತನ ಸಾಹಸಂ ನೆಜೆಯೆ ಸಾಹಸಮೆಂದಭಿವರ್ಣಿಕುಂ ಧರಿ
ತ್ರೀತಳಮಾಗಳುಂ ತೆವರತೆಪ್ಪದ ನಾಟ್ಪ್ರಭು ಲೋಕಗೌಂಡನಂ ॥ 620 ॥

ಉ ಮಾ ॥ ಎತ್ತಿಸಿದಂ ಜಿನೇಂದ್ರಗೃಹಮಂ ಧರೆ ಬಣ್ಣಿಸಲೆಯ್ದೆ ತನ್ನ ಮೆ
ಯ್ವೆತ್ತಿಸಿದಂ ಪ್ರಜಾಪ್ರಕರಮಂ ರಿಪುವರ್ಗದ ಬಾಯ ಬಾಗಿಲೊಳ್
ತೆತ್ತಿಸಿದಂ ಪಲರ್ ಬೆದಱೆ ಕೂರಲಗಂ ನಿಜಕೀರ್ತಿವಲ್ಲಿಯಂ
ಪತ್ತಿಸಿದಂ ದಿಗಂತಮನಿದೇಂ ಕೃತಕೃತ್ಯನೊ ಲೋಕನುರ್ವಿಯೊಳ್ ॥ 621 ॥

ಮುನಿಚಂದ್ರದೇವ

ಉ ಮಾ ॥ ಮಂತಣಮೇಂ ಸಮಸ್ತ ಪರಮಾಗಮದೊಳ್ ಪದ ಶಾಸ್ತ್ರದೊಳ್ ಪ್ರಮಾ
ಣಾನ್ತರದೊಳ್ ಸಮಸ್ತ ಗಣಿತಂಗಳೊಳೊರ್ವನೆ ತಜ್ಞನಾಗಿ ಜೈ
ನನ್ತನ ಮಾರ್ಗದಿಂ ನಡೆದು ವಿಶ್ವನುತಂ ಮುನಿಚಂದ್ರದೇವ ಸೈ
ದ್ಧಾನ್ತಿಕ ಚಕ್ರವರ್ತ್ತಿ ಜಸಮಂ ದೆಸೆಯಂತುವರಂ ನಿಮಿರ್ಚ್ಚಿದಂ ॥ 622 ॥

ಮ ವಿ ॥ ಪೆಸರ್ವೆತ್ತುಗ್ರ ಸಮಗ್ರ ದೇವತೆಯರುಂ ತಂತಮ್ಮ ಪೀಠಾಗ್ರದಿಂ
ಪೆಸರ್ಗೇಳಲ್ ಬಿಱುತೋಡಿ ಪೋಗಿ ನಡುಗುತ್ತಿರ್ಪರ್ಕರಂ ಯಕ್ಷರಾ
ಕ್ಷಸ ಗಂಧರ್ವ ಪಿಶಾಚ ಭೂತ ಫಣಿ ವೇತಾಳಾದಿ ತೀಬ್ರಗ್ರಹಂ
ಬೆಸನೇನೆಂಬುವು ಭಾನುಕೀರ್ತ್ತಿ ಮುನಿಪಾಜ್ಞಾಕೀರ್ತ್ತಿ ಸಾಮಾನ್ಯಮೇ ॥ 623 ॥

ಮ ವಿ ॥ ಉರಗಂ ಗೋಗ್ರಹ ಶಾಕಿನೀ ವಿಹಗ ಭೂತ ಪ್ರೇತರನಟ್ಟಂಗಭೇರಿ ?
ತರ ಪೈಶಾಚ ನಿಶಾಚರಾದ್ಭುತಗಣಂ ಭೂಚಕ್ರದೊಳ್ ತೋಱಲು
ದ್ಧರಿಸಿತ್ತನ್ನದೆ ಯಂತ್ರವೋದಿದುದೆ ಮಂತ್ರಂ ಕೊಟ್ಟ ಬೇತ್ತರಂತ್ರವ
ಚ್ಚರಿ ಸೈದ್ಧಾನ್ತಿಕ ಭಾನುಕೀರ್ತ್ತಿ ಮುನಿನಾಥೋಗ್ರಾಜ್ಞೆ ಸಾಮಾನ್ಯಮೇ ॥ 624 ॥

83) ಕುಪ್ಪಗಡ್ಡೆ 179, E.C. VIII (Rice), ಕ್ರಿ.ಶ. 1188

ಕಲ್ಯಾಣದ ಚಾಲುಕ್ಯರ ದೊರೆ ವೀರ ಸೋಮೇಶ್ವರನ ಆಳಿಕೆಯ ಕಾಲದಲ್ಲಿ ಮಹಾಮಂಡಳೇಶ್ವರನಾದ ಕದಂಬ ವಂಶದ ಕಾಮದೇವರಸನು ಬನವಾಸಿ ೧೨೦೦೦ ಹಾಗೂ ಹಾನುಗಲು ೫೦೦ ಅನ್ನು ಆಳುತ್ತಿದ್ದ. ಕೋಡಿಯ ಮಠದ ವಾಮಶಕ್ತಿಮುನಿಯ ಹೇಳಿಕೆಯಂತೆ ದೊರೆಯು ಕುಪ್ಪಗಡ್ಡೆಯ ರಾಮೇಶ್ವರ ದೇವರಿಗೆ ನೀಡಿದ ದತ್ತಿಯನ್ನು ಇದರಲ್ಲಿ ಹೇಳಿದೆ.

ಕಾಮನೃಪ

ಮ ವಿ ॥ ಮಿಗೆ ತೇಜಂ ಪೆಱರ್ಗ್ಗಾಗೆ ಸೈರಿಸುವನೇ ಮಿತ್ರಂ ದಿಟಕ್ಕೆಂದು ಭಾ
ನುಗೆ ಸೈರಿಪ್ಪನುದಾತ್ತದಾನಗುಣಮಂ ಸನ್ತಾನಮೆಂದಳ್ಕಱಿಂ
ನೆಗಳ್ದಾ ಕಲ್ಪಕುಜಕ್ಕೆ ಸೈರಿಸುವನುತ್ತುಂಗತ್ವಮಂ ಗೋತ್ರಮೆಂ
ದಗದೊಳ್ ಸೈರಿಪನುಂತೆ ಸೈರಿಸುವನೇ ಕಾದಂಬ ಕಂಠೀರವಂ ॥ 625 ॥

ಕಂ ॥ ಧರೆಗುರುಳೆ ತಂಮ ತಲೆಗಳ್
ಕರಿಶಿರಮಂ ನಿಜ ಕಬನ್ಧದೊಳ್ ಪತ್ತಿಸಿ ಬೀ
ರರ ತಂಡಂಗಣಪರವೊಲ್
ಕರಮೆಸೆದರ್ಕ್ಕಾಮಭೂಪನಿಱಿದಾಹವದೊಳ್ ॥ 626 ॥

ಕಂ ॥ ಖರದಂಡಂ ಸರಸಿಜದೊಳ್
ವಿರಹಂ ಚಕ್ರಹ್ವಯಂಗಳೊಳ್ ನಿಸ್ತೇಜಂ
ಪರಭೂಪಾಳರೊಳಲ್ಲದೆ
ನಿರವದ್ಯಮಿವಿಲ್ಲ ಕಾಮನೃಪನಾಳ್ವೆಳೆಯೊಳ್ ॥ 627 ॥

ಕಂ ॥ ಮೊಱೆಯೆಂಬುದು ಬಾಂಧವರೊಳ್
ತೊಱೆಯೆಂಬುದು ನದ ನದೀ ನಿಕಾಯದೊಳಾದಂ
ಸೆಱೆಯೆಂಬುದು ಜೂದುಗಳೊಳ್
ಪೆಱತೆಡೆಯೊಳಿವಿಲ್ಲ ಕಾಮನೃಪನಾಳ್ವೆಳೆಯೊಳ್ ॥ 628 ॥

84) ಉದ್ರಿ 140, E.C. VIII (Rice), ಕ್ರಿ.ಶ. 1198

ಇದರಲ್ಲಿ ಹೊಯ್ಸಳರ ದೊರೆಯಾದ ಎರಡನೆಯ ಬಲ್ಲಾಳನ ಮಂತ್ರಿ ಮಹದೇವದಂಡನಾಯಕನು ಎರಗಜಿನಾಲಯುವನ್ನು ಮಾಡಿಸಿ ಶಾಂತಿನಾಥನನ್ನು ಪ್ರತಿಷ್ಠಿಸಲು. ಎಕ್ಕಲರಸ ಮೊದಲಾದವರು ಭೂಮಿಯನ್ನು ದತ್ತಿ ಬಿಟ್ಟಂತೆ ಹೇಳಿದೆ.

ಬಲ್ಲಾಳ

ಮ ಸ್ರ ॥ ಭುವನಂ ಭೂಚಕ್ರಚಕ್ರಾಯುಧನೆನೆ ನೆಗಟ್ದಂ ವೀರಬಲ್ಲಾಳನುರ್ವೀ
ಸ್ತವನೀಯಪ್ರಾಂಶುಮತ್ಸ್ಯಚ್ಛವಿ ಸುಚರಿತಕೂರ್ಮೋದಯಂ ಸಾರಸೌಕ
ರ್ಯವಿಳಾಸಂ ವಿಕ್ರಮ ಶ್ರೀನರಹರಿ ಪರಮಂತ್ರಿಕ್ರಮಂ ರಾಮರಾಮೋ
ತ್ಸವರಾಮಾನಂದಿ ವಿದ್ಯಾಸುಗತನತಿಕಲಿಪ್ರಾಭವಪ್ರೌಢತೇಜಂ ॥ 629 ॥

ಮ ಸ್ರ ॥ ಬಲವದ್ಬಲ್ಲಾಳನುಗ್ರಾಹವಪಟಹರವಂ ಕರ್ಣಮಂ ತಾಗೆ ವಿದ್ವಿ
ಟ್ಕುಲಕಾಂತಾಕರ್ಣಪತ್ರಂ ಕೆಡವುದಣಕಮಲ್ತೊಂದೆ ಕೇಳ್ ವಿಸ್ಮಯಂ ಕ
ಣ್ಮಲರಿಂ ಬಾಷ್ಪಾಂಬು ಕಯ್ಯಿಂ ಕಡಗಮಡಿಗಳಿಂ ನೂಪುರಂ ವಕ್ತ್ರದಿಂ ಸುಯ್
ತಲೆಕಟ್ಟಿಂ ಮಾಲೆವೂವಾಕೆಗಳ ಗಳಕದಿಂ ಬೀೞ್ವುದುತ್ತಾರಹಾರಂ ॥ 630 ॥

ಮ ಸ್ರ ॥ ಜಿತಧಾತ್ರೀಚಕ್ರಚಕ್ರಾಧಿಪ ನೃಪವರ ಬಲ್ಲಾಳ ಕೇಳ್ ನಿನ್ನೊಳಾಂತು
ದ್ಧತವೀರಾರಾತಿಯೂಥಂ ವಿಗತವಿಭವಮಾಗಿರ್ದೊಡಂ ರಂಜಿಕುಂ ವಿ

ಶ್ರುತನಾನಾವಾಹಿನೀಸಂಕುಲಪರಿಗತಶೋಭಾನುಕೂಲ್ಯಂ ಸದಾಸೇ
ವಿತರಾಜದ್ರಾಜವಂಶಂ ಸಕಲಕವಿನಿಕಾಯಸ್ವನಾಕೀರ್ಣ ಕರ್ಣಂ ॥ **631** ॥

ಮ ಸ್ರ ॥ ಎನಸುಂ ತೀವ್ರಪ್ರತಾಪಕ್ಕಗಿದು ದಿನಕರಂ ಮಿತ್ರನಾಗಿರ್ದಪಂ ನೆ
ಟ್ಟನೆ ರಾಜಂ ರಾಜನಾಮಂ ತನಗೆ ಪಗೆಯೆನಿಪ್ಪುಮ್ಮಳಂ ಪೆರ್ಚೆ ಕಂದಿ
ರ್ಪನವಂ ಮತ್ತಾವನಣ್ಮಂ ಮೆಱೆವನದಟಿನಿಂ ತೋರ್ಪನಾವಂ ಮಹೋಗ್ರಾ
ರಿನೃಪಾಳಂ ವಿಶ್ವಭೂಚಕ್ರದೊಳೆಲೆ ಚಲದಿಂ ವೀರಬಲ್ಲಾಳ ನಿನ್ನೊಳ್॥ **632** ॥

ಉ ಮಾ ॥ ಆನೊಲವಿಂದೆ ಬಣ್ಣಿಸದೊಡೇಂ ಗಳ ದಕ್ಷಿಣಚಕ್ರಿ ಯುದ್ಧದೊಳ್
ತಾನಸಹಾಯಶೂರನೆನಿಪುನ್ನತಿಯಂ ರಿಪುರಾಯಸೇವುಣಾ
ನೂನಗಜಾಶ್ವಸದ್ಭಟಬಲಂಗಳನಳ್ಕುಱಿದೊಂದೆ ಮೆಯ್ಯೊಳೊಂ
ದಾನೆಯೊಳೊಕ್ಕಲಿಕ್ಕಿದ ಪರಾಕ್ರಮದುನ್ನತಿ ತಾನೆ ಹೇಳದೇ ॥ **633** ॥

ಬನವಾಸಿ ದೇಶ

ಮ ವಿ ॥ ಪಲವುಂ ಪೂರ್ಣತಟಾಕದಿಂ ಬೆಳೆದ ನಾನಾಶಾಳಿಕೇದಾರದೊ
ಳ್ಪೊಲದಿಂ ವಾರಿಜಷಂಡದಿಂ ಪರಿಮಳಭ್ರಾಂತಾಳಿಮಾಳೋದ್ಭವು
ಷ್ಪಲತಾಸಂಕುಳದಿಂ ಫಳೋನ್ನಮಿತಚೂತಾದಿಕ್ಷಮಾಜಂಗಳಿಂ
ನೆಲೆಯಾಗಿರ್ಪುದು ಮನ್ಮಥಂಗೆ ಬನವಾಸಿದೇಶಮತ್ತೆತ್ತಲುಂ ॥ **634** ॥

ಉದ್ಧರೆಯ ಪುರ

ಚಂ ಮಾ ॥ ಸರಸಿಜವಕ್ತ್ರದಿಂ ಕುಮುದಲೋಚನದಿಂ ವಿಳಸಲ್ಲತಾಂಗದಿಂ
ಸುರುಚಿರಪಲ್ಲವಾದರದಿನಾಶಂಕಭಾಷಣದಿಂದೆ ಮಲ್ಲಿಕಾ
ಪರಿಮಳದಿಂ ಮದಾಳಿಕುಳಕುಂತಳದಿಂ ವನಲಕ್ಷ್ಮಿ ರೂಪನು
ದ್ಧರೆಯ ಪುರೋಪಕಂಠವನದೊಳ್ ಪಡೆದೊಪ್ಪುವಳಾವಕಾಲಮುಂ
॥ **635** ॥

ಎಱಗ

ಕಂ ॥ ಮಱೆದುಂ ಪರಸತಿಯರ್ಗ್ಗ
ಲ್ಕಿಱಿಯೊಳಚ್ಯುತನಲ್ಲದನ್ಯದೈವಕ್ಕಾರ್ಪಂ
ಮಱೆಯಿಪ ನಿಜಧನಲೋಭ
ಕ್ಕೆಱಗನೆಱಗನೆಱಗನೆಱಗನೃಪನೆನೆ ನೆಗಟ್ಟಂ ॥ **636** ॥

ಎಕ್ಕಲರಸ

ಮ ವಿ ॥ ಜವನಂ ಜಕ್ಕುಲಿಪಂ ಕಡಂಗಿ ಸಿಡಿಲಂ ಮಾರ್ಕೊಳ್ವನಾಭೀಳಕಾ
ಳವಿಷೋಗ್ರಾಹಿಯನೆತ್ತಿ ಮಾರಿಡುವನೌರ್ವಜ್ವಾಳೆಯಂ ಮಟ್ಟಿಪಂ
ತವಿಪಂ ತೀವ್ರನಿಶಾಟದಗ್ಗಳಿಕೆಯಂ ತಾನೆಂದೊಡಿಂದುರ್ಕಿ ನಿ
ಕ್ಕುವಮಾರಾಂತಪರೆಕ್ಕಲಕ್ಷಿತಿಪನಂ ಸಂಗ್ರಾಮರಂಗಾಗ್ರದೊಳ್ ॥ 637 ॥

ಮ ವಿ ॥ ದವರೂಪಂ ರಿಪುಕಾನನಕ್ಕೆ ಪವಿರೂಪಂ ಶತ್ರುಶೈಲಕ್ಕೆ ಬಾ
ಡವರೂಪಂ ದ್ವಿಷದರ್ಣವಕ್ಕೆ ನಿಜತೀವ್ರಾತ್ಯುಗ್ರಕೋಪಪ್ರರೂ
ಪವೆನಲ್ ಪೊಂಗಿ ಕಡಂಗಿ ನಿಂದತುಳಬಾಹಾಗರ್ವದಿಂದಾಂಪರಾ
ರವನೀಪಾಳಕರೆಕ್ಕಲಕ್ಷಿತಿಪನಂ ಸಂಗ್ರಾಮರಂಗಾಗ್ರದೊಳ್ ॥ 638 ॥

ಉ ಮಾ ॥ ಇಂ ಬೆಸಗುಳ್ವುದೇನೊ ಸುಭಟೋತ್ತಮನೆಕ್ಕಲದೇವನಿಷ್ಠರೊಳ್
ನಂಬುಗೆದಪ್ಪಿದಂದು ಪರಕಾಂತೆಯೊಳೊಲ್ದೊಡಗೂಡಿದಂದು ಲೋ
ಭಂಬಡಿದರ್ಥದತ್ತಳಿಪಿದಂದಿದಿರಾಂತೊಡೆ ಕೊಲ್ಲದಂದು ಕೇ
ಳಂಬುಧಿ ಮೇರೆಯಿಂ ತೊಲಗುಗುಂ ತಳರ್ಗುಂ ನೆಲೆಯಿಂ ಸುರಾಚಳಂ
॥ 639 ॥

ಉ ಮಾ ॥ ತಕ್ಕತನಕ್ಕೆ ಮಿಕ್ಕ ಪರಕಾಮಿನಿಯರ್ಕಳನೆಮ್ಮ ತಂಗೆಯ
ಮ್ಮಕ್ಕನೆನುತ್ತೆ ನಂಬೆ ಮೊಜೆಗೊಂಡೊಡಗೂಡುವ ಸಾಧುಗಳ್ಗರೇ
ತಕ್ಕುಪಯೋಗ್ಯವಾಮಹಿಪರೇಂ ಗಳ ಪೋಲ್ವರೆ ಶೌಚದೇಟ್ಟೆಯಿಂ
ದೆಕ್ಕಲಭೂಪನಂ ಪರವಧೂವಿನುತೋದರಪದ್ಮಗರ್ಭನಂ ॥ 640 ॥

ಮ ಸ್ರ ॥ ಗತಿ ಭಾವಂ ಚಾರಿ ಸೂತ್ರಂ ನಿಜಿಸಳವಿ ಬಳಂ ಕಾಣ್ಕೆ ಬಲ್ಪೋಜೆ ಕಾಯ್ಪು
ನ್ನತಿ ಗಾಢಂ ಲಾಗು ಬೇಗಂ ತೆಜಿಪು ಪಸರಮಾರಯ್ಕೆ ತೇರೈಕೆ ಕೂರ್ಪಂ
ಕಿತಮಾಕಾರಂ ತಡಂ ಕಿತ್ತಡಮೆನಿಪ ಭೃಗಂಪ್ರೌಢಿಯಿಂ ಕೊಲ್ವನುಗ್ರಾ
ಹಿತನಂ ಮಾಜಿಂಕಮಂ ಮಾರ್ಮಲೆದೊಡೆ ಚಲದಿಂದೆಕ್ಕಲಕ್ಷೋಣಿಪಾಳಂ
॥ 641 ॥

ಬೊಪ್ಪ

ಮ ವಿ ॥ ಎರೆದಾದರ್ಥಿಚಯಕ್ಕೆ ಕಲ್ಪಕುಜಮಿರ್ಪಂತಿರ್ಪನಂ ಬೊಪ್ಪನಂ
ವರವಂಶಾಂಬುಧಿವರ್ಧನಕ್ಕೆ ಶಶಿಯಿರ್ಪಂತಿರ್ಪನಂ ಬೊಪ್ಪನಂ
ನಿರವದ್ಯಾಚರಣಕ್ಕೆ ತೀರ್ಥಕರನಿರ್ಪಂತಿರ್ಪನಂ ಬೊಪ್ಪನಂ
ಧರೆ ಬಣ್ಣಿಪ್ಪುದುದಾತ್ತಕೀರ್ತಿವನಿತಾಕಂದರ್ಪನಂ ಬೊಪ್ಪನಂ ॥ 642 ॥

ಸೋಮ ಚಮೂಪ

ಉ ಮಾ ॥ ಸೂರಿಚಕೋರಸೋಮನನವದ್ಯಕಳಾಗಮಸೋಮನುದ್ಧತೋ
ಗ್ರಾರಿಸರೋಜಸೋಮನತಿನಿರ್ಮಳವಂಶಪಯೋಧಿಸೋಮನಾ
ಚಾರವನಪ್ರವರ್ಧನವಸಂತಕಸೋಮನಶೇಷಭವ್ಯಹೃ
ತ್ಕೈರವಸೋಮನೆಂದೆನಿಪ ಸೋಮಚಮೂಪನಿದೇನುದಾತ್ತನೋ ॥ 643 ॥

ರಾಮ ಚಮೂಪ

ಮ ವಿ ॥ ಪರಸೇನಾಜಯಂವಿಕ್ರಮೋನ್ನತಿಯೊಳಾದಂ ಭೀಮನುಂ ರಾಮನುಂ
ಧರಣೀಸ್ತುತ್ಯಕಳಾವಿಳಾಸದೊದವಿಂದಾ ಸೋಮನುಂ ರಾಮನುಂ
ವರನಾರೀಜನಮೋಹನಾಕೃತಿಯೊಳುದ್ಯತ್ಕಾಮನುಂ ರಾಮನುಂ
ಸರಿಯೆಂದೀ ಜಗಮೆಯ್ದೆ ಬಣ್ಣಿಪುದು ಕೀರ್ತಿಪ್ರೇಮನಂ ರಾಮನಂ ॥ 644 ॥

ಕೇಶವ

ಕಂ ॥ ಶ್ರೀರಾಮನನುಜನೆನಿಸಿದ
ನಾರಾಮಚಮೂಪನನುಜನುರುಲಕ್ಷ್ಮಣವಿ
ಸ್ತಾರಸುಮಿತ್ರಾಧಿಕಪು
ಣ್ಯಾರಾಮಂ ಕೇಶವಂ ಜಗಜ್ಜನವಿನುತಂ ॥ 645 ॥

ಮ ವಿ ॥ ಎರೆದಂದಾಗಳೆ ಮಾಣಿಪಂ ಬುಧವಿಪತ್ಸಂಕ್ಲೇಶವಂ ಕೇಶವಂ
ಬಿರುದಿಂದಾಂತರನೆಯ್ದಿಪಂ ಸ್ಫುರದರಣ್ಯೋದ್ದೇಶವಂ ಕೇಶವಂ
ಶರಣಾಗೆಂದೊಡೆ ನೀಡುವಂ ಬಹಳಬಾಹಾಪಾಶಮಂ ಕೇಶವಂ
ಚಿರಕೀರ್ತಿಪ್ರಭೆಯಿಂ ಬೆಳಪ್ಪನಖಿಳಾಶಾಕಾಶವಂ ಕೇಶವಂ ॥ 646 ॥

ಮಹದೇವಮಂತ್ರಿ

ಚಂ ಮಾ ॥ ಮಱಿಸಿ ಪರಾರ್ಥಮಂ ತೆಗೆವ ಮೇಳಿಸಿ ಪೊರ್ದಿ ಪರಾಂಗನಾರತ
ಕ್ಕೆಱಗುವ ನಂಬಿದಾಳ್ದನಿರೆ ಮತ್ತೆ ಪತಿತ್ವಮನಾಸೆಗೆಯ್ದು ಬೇ
ಸಱನುಸಿರ್ವನ್ಯಮಂತ್ರಿನಿಕರಕ್ಕದಟಿಂ ತೊಡರಿಕ್ಕಿದಂ ಗಡೇ
ನಱಿಯಿರೆ ಸಾಮಿವಂಚಕರ ಗಂಡನನೀ ಮಹದೇವಮಂತ್ರಿಯಂ ॥ 647 ॥

ಚಂ ಮಾ ॥ ಪರವಧು ರಂಭೆಗಂ ರತಿಗಮಗ್ಗಳಮೊಪ್ಪುವೊಡಂ ಪರಾರ್ಥಮೀ
ಶ್ವರಸಖನರ್ಥದಿಂ ವರುಣನರ್ಥದಿನೂರ್ಜಿತಮಾಗಿ ಬರ್ಪೊಡಂ

ಪರನೃಪನೊಲ್ದು ಮನ್ನಿಸುವೊಡಂ ಪಿರಿದೀವೊಡಮತ್ತ ಚಿತ್ತ ಮೋ
ಸರಿಸದಿದೇಂ ಮಹತ್ವದೊದವೋ ಮಹಿಯೊಳ್ ಮಹದೇವಮಂತ್ರಿಯಾ
॥ 648 ॥

ಮ ಸ್ರ ॥ ಬಹುವಕ್ತ್ರಂ ಪದ್ಮಗರ್ಭಂ ದನುಜಗುರು ಗುರುದ್ವೇಷಿ ಜೀವಂ ಸುರಾಧೀ
ಶಹಿತಾತ್ಮಂ ಸುಪ್ರಬುದ್ಧೋದ್ಧವನೆನಿಪವನುಂ ತಾನಕರ್ರ‍್ಯಪ್ರಯುಕ್ತಂ
ಮಹಿಯೊಳ್ ಪೋಲ್ವನ್ನನಾವಂ ತನಗೆನೆ ನೆಗಳ್ದಿಂ ವಿಶ್ವಲೋಕಪ್ರಸಿದ್ಧಂ
ಮಹದೇವಂ ಮಂತ್ರಿಮುಖ್ಯಂ ಮನುಮುನಿಚರಿತಂ ಮಂತ್ರಯುದ್ಧಪ್ರವೀಣಂ
॥ 649 ॥

ಮ ಸ್ರ ॥
ಗೆಡೆಗೊಂಡಂ ಧನ್ಯನೊಲ್ದೋಲಗಿಸಿದನೆ ಕೃತಾರ್ಥಂ ಮನಂಬೆತ್ತು ಮೆಯ್ಸಾ
ರ್ದೊಡನುಂಡಂ ಪುಣ್ಯಪುಂಜಂ ಪೊರೆವ ನೃಪನೆ ನೈರ್ಮಲ್ಯಧರ್ಮಾನುಸಂಗಂ
ನುಡಿಗಲ್ತಂ ವಿಶ್ವವಿದ್ವಜ್ಜನವಿನುತಕಳಾಪ್ರೌಢನೆಂದಂದು ತನ್ನೊಳ್
ಪಡಿಯಾವಂ ಮಂತ್ರಿವರ್ಯಂ ಬುಧನಿಧಿ ಮಹದೇವಂಗೆ ಮತ್ತೊರ್ವನನ್ನಂ ॥ 650 ॥

ಚಂ ಮಾ ॥ ಮತಿ ಕೃತಿಗಳ್ಗೆ ದೃಷ್ಟಿಯೆನಿಸಿರ್ಪುದು ತನ್ನಯ ಸೂಕ್ತಿಶಕ್ತಿ ಭಾ
ರತಿಗೆ ವಿವೇಕಮಂ ಕಲಿಸುವೋಜುವೊಲಿರ್ಪುದು ಚಾರುಸತ್ಕಳಾ
ಜ್ಞತೆ ಚತುರಾನನಂಗಜೀವನೀವೆಱವಟ್ಟೆನಿಸಿರ್ಪುದೆಂದು ವಂ
ದಿತತಿ ನಿರಂತರಂ ಪದೆದು ಬಣ್ಣಿಪುದೀ ಮಹದೇವಮಂತ್ರಿಯಂ ॥ 651 ॥

ಮಹದೇವನ ಹೆಂಡತಿ ಲೋಕಲದೇವಿ

ಚಂ ಮಾ ॥ ಅತನು ಮನಃಪ್ರಿಯಂ ರತಿಗೆ ಲಕ್ಷ್ಮಿಗೆ ಭಾವಿಪೊಡೊರ್ವ ಗೋವಳಂ
ಪತಿ ಗಿರಿರಾಜಪುತ್ರಿಗೆ ಮರುಳ್ಗೆಜೆಯಂ ವರನೆನ್ನ ಕಾಂತನ
ಚ್ಯುತನತಿಸೇವನೂರ್ಜಿತಕಳಾಧರನೆಂದಿಟೆಕೆಯ್ವಳೀ ಮಹಾ
ಸತಿ ಮಹದೇವಮಂತ್ರಿಯ ಮನಃಪ್ರಿಯೆ ಲೋಕಲದೇವಿ ಸಂತತಂ ॥ 652 ॥

ಚಂ ಮಾ ॥ ಚತುರತೆಗಾದ ಸೈಪು ಸುಚರಿತ್ರತೆಗಾದ ಪೊಡರ್ಪು ಜೈನದು
ನ್ನತಿಕೆಗೆ ಸಾರ್ದ ಪುಣ್ಯಮಭಿಮಾನಕೆ ತಳ್ತ ಮಹತ್ವಮೀ ಜಗ
ನ್ನುತಮಹದೇವಮಂತ್ರಿಯ ಮನಃಪ್ರಿಯೆ ಲೋಕಲದೇವಿ ನಿನ್ನ ಸ
ತ್ವತಿಹಿತದಿಂದಮಾಯ್ತೆನಲದೇವೊಗಳ್ವೆಂ ನಿಜಸದ್ಗುಣಂಗಳಂ ॥ 653 ॥

ಕುಲಭೂಷಣವ್ರತಿ

ಮ ವಿ ॥ ತನಗಾದಂ ಪರಿಚಾರಿಕಾಕೃತಿ ಯಶಶ್ರೀ ಚಾರುಚಾರಿತ್ರಕಾ
ಮಿನಿ ರಾಜಚ್ಚಮರೀಜಕಾಂತೆ ಮನೆಗಾದಿರ್ಪಾಕೆ ನಿಚ್ಚಂ ದಯಾಂ
ಗನೆ ವಾಗ್ವಲ್ಲಭೆ ಬುದ್ಧಿವಾನಸೆ ಕರಂ ಭಾಸ್ವತ್ತಪೋಲಕ್ಷ್ಮಿ ಸ
ಜ್ಜನಮಾಗಲ್ ಕುಲಭೂಷಣವ್ರತಿವರಂ ಸ್ತ್ರೀರಾಜ್ಯದಿಂ ರಾಜಿಪಂ ॥ 654 ॥

ಸಕಲಚಂದ್ರ

ಕಂ ॥ ಶ್ರೀವನಿತೆಗೆ ಮೊಗಮಿತ್ತು ತ
ಪೋವನಿತೆಗೆ ಮೆಯ್ಯನೊಡ್ಡಿ ಮುಕ್ತ್ಯಂಗನೆಯಂ
ಭಾವಿಸುವ ಬಮ್ಮಚಾರಿಯ
ನೇವೊಗಟ್ವುದೊ ಸಕಲಚಂದ್ರಭಟ್ಟಾರಕರಂ ॥ 655 ॥

85) ಸೊರಬ 28, E.C. VIII (Rice), ಕ್ರಿಶ. 1208

ಇದರಲ್ಲಿ ಹೊಯ್ಸಳರಾಜನಾದ ಎರಡನೆಯ ಬಲ್ಲಾಳನ ಆಳಿಕೆಯಲ್ಲಿ ನೇಮಿಸೆಟ್ಟಿ ಕೊಡಕಣಿಯಲ್ಲಿ ಶಾಂತಿನಾಥ ಬಸದಿಯನ್ನು ಮಾಡಿಸಿ ಭೂಮಿಯನ್ನು ದತ್ತಿ ನೀಡಿದಂತೆ ಹೇಳಿದೆ.

ಭರತಕ್ಷೇತ್ರ

ಕಂ ॥ ಅಂಬುಧಿಕಮಲಾಕರದೊಳ್
ಜಂಬೂದ್ವೀಪಾಬ್ಜದೊಂದು ಕರ್ಣಿಕೆಯೆನಿಕುಂ
ಪೊಂಬೆಟ್ಟದಱಿಂ ತೆಂಕಲ್
ಚೆಂಬೆತ್ತೆಸಟಿನಿಪುದು ಭರತಕ್ಷೇತ್ರಂ ॥ 656 ॥

ಬನವಾಸಿದೇಶ

ಕಂ ॥ ಭರತಶ್ರೀಭೂಷಣದಂ
ತಿರೆ ಕುಂತಣದೇಶಮಲ್ಲಿ ನಾಯಕಮಣಿಯಂ
ತುರುತರಶೋಭಾವಿಭ್ರಮ
ಕರಮೆನೆ ಬನವಾಸದೇಶವೊಳ್ಪಂ ಪಡೆಗುಂ ॥ 657 ॥

ಬಲ್ಲಾಳ II

ಕಂ ॥ ಉದಯಿಸಿದನಮೃತವಾರ್ಧಿಯೊ
ಳುದಯಂಗೆಯ್ದುಮರಭೂಜಮೆಂಬಿನೆಗಂ ಚೆ
ಲ್ವೊದವಿರೆ ಬಲ್ಲಾಳನೃಪಂ
ಯದುಕುಲದೊಳ್ ವಿಶದಕೀರ್ತಿ ದಾನಾಭರಣಂ ॥ 658 ॥

ಮ ಸ್ರ ॥ ಘುರರಂಗಂ ನೃತ್ಯರಂಗಂ ಪರನೃಪತಿ ಕಪಾಲಾಳಿ ತಾಳಾಳಿ ಸಕ್ತಂ
ಚರಿಯರ್ಕಳ್ ಪಾಡುವರ್ ತದ್ವಿಜಯರುಹಯಶಂ ದುಂದುಭಿಧ್ವಾನಮಾಗು
ತಿರೆ ವಿದ್ವಿಷ್ಟಾವನೀಪಾಳಕನಿಕರದ ರುಂಡಂಗಳಿಂ ತಾಂಡವಾಡಂ
ಬರಮಂ ಮಾಳ್ಪೊಳ್ಪಿನಿಂ ನಟ್ಟವಿಗನೆನಿಸಿದ ವೀರಬಲ್ಲಾಳಭೂಪಂ ॥ 659 ॥

ಕಂ ॥ ಪಗೆವರ ಪೆಂಡಿರ ಕಣ್ಣಿಂ
ದೊಗೆದಂಜನಪಂಕಿತಾಂಬುವಿಂದಂ ಬೆಳಕಂ
ಮಿಗುವುದು ವಿಚಿತ್ರಮಿಂತಿದು
ಜಗದೊಳ್ ಬಲ್ಲಾಳಭೂಪ ನಿಜವಿಶದಯಶಂ ॥ 660 ॥

ಮಸಣಗಾವುಂಡ

ಕಂ ॥ ವನವಾಸದೇಶಭೂಷಣ
ನೆನಿಪಂ ಗಾವುಂಡಮಂಡನಂ ದಿಕ್ಕಾಂತಾ
ಸ್ತನಮಂಡಳಪರಿಶೋಭಿತ
ಘನತರತೇಜಃಪ್ರಕಾಶಘುಸೃಣಂ ಮಸಣಂ ॥ 661 ॥

ಕೀರ್ತಿಗಾವುಂಡ

ಮ ಸ್ರ ॥ ದ್ಯುನದೀಪ್ರೋತ್ತುಂಗರಂಗದ್ಬಹಳಲಹರಿಕಾಂದೋಳನೋದ್ಭೂತಸಂಘಾ
ತನಮೇರೂದ್ಯಲ್ಲತಾಂತಾವಳಿವಳಯಿತ ಡಿಂಡೀರಪಿಂಡಪ್ರಭಾಮಂ
ಡನಪಾಂಡುಪ್ರೌಢಕೀರ್ತಿಪ್ರಸರವಿಸರಿತೋರ್ವಿನಭಶ್ಚಕ್ರದಿಕ್ಚ
ಕ್ರನಿಕಾಯಂ ತಾನೆನಿಪ್ಪೊಂದೆಸಕದಿನೆಸಪಂ ಕೀರ್ತಿಗಾವುಂಡನಾದಂ ॥ 662 ॥

ಕಂ ॥ ಆರ್ತೀವ ದಾನಿಯಂ ಧರೆ
ಕೀರ್ತಿಕುಮಭಿಮಾನಮೂರ್ತಿಯಂ ಘನತೇಜ
ಸ್ಫೂರ್ತಿಯನೀಪ್ರಭುಮಂಡನ
ಕೀರ್ತಿಯನಂಗಭವಮೂರ್ತಿಯಂ ಪ್ರಿಯದಿಂದಂ ॥ 663 ॥

ಮಹಾದೇವಚಮೂಪ

ಮ ವಿ ॥ ವಿತತೈಶ್ವರ್ಯನುಮಾಧಿನಾಥವಿಭವಂ ರಾಜಪ್ರಿಯಂ ವಾಹಿನೀ
ಪತಿ ಭೋಗೀಶ್ವರಭೂಷಣಂ ನುತವೃಷಾಂಕಂ ಕೇಶವಪ್ರೇಮವಿ
ಶ್ರುತನೆಂಬೊಳ್ಪೆನಸುಂ ವಿರಾಜಿಸೆ ಮಹಾದೇವಂ ಮಹಾದೇವನೆಂ
ಬ ತದೀಯಾಂಕಮನನ್ವಿತಾರ್ಥಮೆನಲರ್ಥವ್ಯಕ್ತಿಯಂ ಮಾಡಿದಂ ॥ 664 ॥

ಮ ವಿ ॥ ಸುಮನೋಭೂಧರರಾಜಿತಂ ವಿಪುಳಶಾಖಂ ಬಂಧುರಸ್ಕಂಧಮೂ
ರ್ತಿ ಮಹೀಜಾತವರಂ ಸುಪತ್ರನಿಚಯಸ್ತುತ್ಯಂ ಧರಾಶೇಖರಾಂ
ಘ್ರಿ ಮಹೋದಾರಿ ದಲೆಂಬ ತನ್ನೆಸಕದಿಂದಂ ಭವ್ಯಕಲ್ಪಾವನೀ
ಜಮೆನಿಪ್ಪ ವಿಬುಧಸ್ತುತಂ ವಿಭು ಮಹಾದೇವಂ ಚಮೂಪೋತ್ತಮಂ
॥ 665 ॥

ಕಂ ॥ ಕವಿರಿಪು ಗುರು ಗುರುರಿಪು ಭೃಗು
ವವರೇವರೆನಲ್ ಧರಿತ್ರಿ ಕವಿಗುರುಜನತೋ
ದ್ಭವಮೊದವೆ ಮಂತ್ರಗುಣಮೊ
ಪ್ಪುವುದು ಮಹಾದೇವದಂಡನಾಥೋತ್ತಮನೊಳ್ ॥ 666 ॥

86) ದೇವಸ್ಥಾನ ಹಕ್ಕಲುಗ್ರಾಮ 276, E.C. VIII (Rice), ಕ್ರಿ.ಶ. 1215

ಇದರಲ್ಲಿ ಸೇವುಣರಾಜನಾದ ಸಿಂಹಣನ ಆಳಿಕೆಯಲ್ಲಿ ಅವನ ಅಧಿಕಾರಿಗಳೊಳಗೆ ಹಲವರು ಕುಪ್ಪಟೂರು ಕೋಟಿನಾಥ ದೇವರಿಗೆ ದತ್ತಿಯನ್ನು ಬಿಟ್ಟಂತೆ ಹೇಳಿದೆ.

ಕುಪ್ಪಟೂರು

ಚಂ ಮಾ ॥ ಅಳಿಗಿಳಿವಿಂಡಿನಿಂದುಲಿವ ನಂದನದಿಂ ಕಳಹಂಸಮತ್ತಕೋ
ಕಿಳಕಳನಾದದಿಂದೆಸೆವಲರ್ಗೊಳನಿಂ ಬೆಳೆದೊಪ್ಪಿ ತೋರ್ಪ ಕೆ
ಯ್ವೊಲನಿನನೇಕರತ್ನ ಮಣಿಕೂಟದಿನೊಪ್ಪುವ ದೇವತಾಲಯಂ
ಗಳಿನುಱೆ ಕುಪ್ಪಟೂರ್ ಕರಮೆ ರಂಜಿಸುಗುಂ ಧರಣೀತಳಾಗ್ರದೊಳ್॥ 667 ॥

ಸಿಂಹಣ

ಮ ವಿ ॥ ಚಲದಿಂ ಧಾತ್ರಿಯೊಳುಳ್ಳ ಭೂಭುಜರುಮಂ ದೋರ್ವಿಕ್ರಮೋದ್ಯಚ್ಛಿಖೋ
ಜ್ವಳನಿಂದಂ ನೆಱೆ ಸುಟ್ಟು ವೈರಿಲಲನಾವೈಧವ್ಯಮಂ ಮಾಡಿ ಕುಂ
ದಲತಾಂತೋಜ್ವಳಕೀರ್ತಿಯಂ ಮೆಱೆದು ಪಾರಾವಾರರ್ಯಂತ ಮಾ
ರ್ತಲೆಯಿಲ್ಲೆಂಬ ನೆಗೞ್ತೆವೆತ್ತನತುಳಂ ಶ್ರೀಸಿಂಹಣೋರ್ವೀಶ್ವರಂ ॥ 668 ॥

87) ಗುಡುವೆ 58, E.C. VIII (Rice), ಕ್ರಿ.ಶ. 1218

ಈ ವೀರಗಲ್ಲು ಶಾಸನದಲ್ಲಿ ಕದಂಬ ವಂಶದ ಮಲ್ಲಿದೇವರಸನ ಆಳಿಕೆಯಲ್ಲಿ ಕೊಡಕಣಿಯ ಭೀಮ ಎಂಬವವನು ತುರುಗೋಳೊಂದರಲ್ಲಿ ಸತ್ತದ್ದನ್ನು ಹೇಳಿದೆ.

ಕಂ ॥ ಬರಸಿಡಿಲ ಮಾಳ್ಕೆಯಿಂ ಬಂ
ದುಱೆ ಮಿಗೆ ಕೊಡಕಣಿಯ ಭೀಮನದಟಿಂ ರಿಪುವಂ
ನೆಱೆ ನಿಜಭುಜಾಸಿಯಿಂದಂ
ತುಱುಗೋಳೊಳ್ ಕಾದಿ ಕೊಂದು ಸಗ್ಗಕೆ ಸನ್ದಂ ॥ 669 ॥

88) ಉದ್ರಿ 135, E.C. VIII (Rice), ಕ್ರಿಶ. 1218

ಇದರಲ್ಲಿ ಸೇವುಣರ ದೊರೆಯಾದ ಸಿಂಘಣದೇವನ ಆಳಿಕೆಯಲ್ಲಿ ಜಸವಂತ ದಂಡನಾಯಕನು ಉದ್ಧರೆಯ ಮಹಾಜನರಲ್ಲಿ ಒಬ್ಬನಾದ ವೈಜನಾಥ ಭಟ್ಟ ಮೊದಲಾದವರಿಗೆ ನೀಡಿದ ದತ್ತಿಯನ್ನು ಹೇಳಿದೆ.

ಉದ್ಧರೆ

ಕಂ ॥ ಈಳೆಯ ಬಾಳೆಯ ಬನದೊಳ್
ಮೇಳಿಸಿ ಕತ್ತಲಿಸಿ ತೋರ್ದಕವುಂಗಿನ ಸಸಿಯೊ
ಳ್ಳಾಳಸಗೊಂಡಂತಿರೆ ಮಧು
ಲೀಲೆಯನುದ್ಧರೆಯ ಸುತ್ತಲುಂ ಸೊಗಯಿಸುಗುಂ ॥ 670 ॥

89) ಗೆಂಡ್ಲಗ್ರಾಮ 224, E.C. VIII (Rice), ಕ್ರಿಶ. 1218

ಈ ವೀರಗಲ್ಲು ಶಾಸನದಲ್ಲಿ ಕದಂಬ ದೊರೆ ಮಲ್ಲಿದೇವರಸನ ಆಳಿಕೆಯಲ್ಲಿ ಬಿನವ ಎಂಬುವವನು ಕಳ್ಳರೊಡನೆ ಕಾದಿ ಸತ್ತನೆಂದು ಕೇಳಿದೆ.

ಕಂ ॥ ತಾಗಿದಡೆ ಮುಳಿದು ಕಳ್ಳರ್
ಪೋಗದೆ ನಿಲ್ ನಿಲ್ಲೆನುತ್ತೆ ಕವಿತರೆ ಬಿನವಂ
ರಾಗಿಸಿ ಬೊಬ್ಬಿಱಿದಟ್ಟಿದೆ
ನಾಗಂಗಳ ಕಂಡ ಗರುಡನಂತಾಂತಿಱಿದಂ ॥ 671 ॥

ಕಂ ॥ ಜವನುಂಡು ಕಾಱಿದಂದದಿ
ನವಂದಿರಂ ಕೊಂದು ಬಿನವ ತಾಂ ಬಸವಱಿಯ
ಲ್ಕವನಂ ವಿಮಾನದೊಳ್ ವಾ
ಸವನ ಪುರಕ್ಕೊಯ್ದರಮರಗಣಿಕೆಯರೊಲವಿಂ ॥ 672 ॥

90) ಕುಪ್ಪಗುಡ್ಡೆ ವೀರಗಲ್ಲು, MAR 1929, No. 72, ಕ್ರಿಶ. 1254

ಇದರಲ್ಲಿ, ಬೀರದೇವರಸನಿಗೂ ಬಿದಿರೂರ ಈಡುಸಾಮಂತನಿಗೂ ನಡೆದ ಯುದ್ಧದಲ್ಲಿ ಮಾಳಿಗನು ಪರಾಕ್ರಮವನ್ನು ತೋರಿಸಿ ಸುರಲೋಕಪ್ರಾಪ್ತನಾದನೆಂದು ಹೇಳಿದೆ.

ಚಂ ಮಾ ॥ ಬಿರುದರ ಬಿಂಕಮಂ ಮುಱಿದು ಬಿಂಕದ ಗಂಡರನೊಕ್ಕಲಿಕ್ಕಿ ಸಂ
ಗರದೆಡೆಯಲ್ಲಿ ಮಾರ್ಮಲೆವ ವೈರಿ ಶಿರಂಗಳ ಸೆಂಡನಾಡಿ ತ
ತ್ತುರಗ ಖುರ ಪ್ರಘಾತದೆಡೆ ತೂಳ್ದು ತೆರಳ್ಚಿದನಂದು ಮೆಚ್ಚುತುಂ
ಧರೆ ಪೊಗಟಲ್ಕೆ ವೀರವರನಗ್ಗದ ಮಾಳಿಗನಾಜಿ ರಂಗದೊಳ್ ॥ 673 ॥

91) ದೇವಸ್ಥಾನ ಹಕ್ಕಲುಗ್ರಾಮ 275, E.C. VIII (Rice), ಕ್ರಿಶ. 1235

ಇದರಲ್ಲಿ ಸೇವುಣರಾಜನಾದ ಸಿಂಹನ ಆಜ್ಞೆಯಂತೆ ವಾಸುಗಿನಾಯಕನು ಕುಪ್ಪಟೂರು ಕೋಟಿನಾಥ ದೇವರಿಗೆ ಗ್ರಾಮವನ್ನು ದತ್ತಿಯಾಗಿ ಬಿಟ್ಟಂತೆ ಹೇಳಿದೆ.

ಕುಪ್ಪಟೂರ ಉಪವನ

ಮ ವಿ ॥ ತಳಿರಿಂದೊಪ್ಪುವಶೋಕ ಪಣ್ಭರದಿನಿಂಬಾಗಿರ್ದ ರಂಭಾವನಂ
ತಿಳಿನೀರಂ ತಳೆದಿರ್ಪ ಕಾಯ್ದುಱುಗಲಂ ಪೇಱಿರ್ದ ಚೆಂದೆಂಗು ಕ
ತ್ತಲೆಯಂ ಸಂದಿಪ ನಾಗವಲ್ಲಿ ಕೊನೆಯಿಂ ಚೆಲ್ವಾದ ಪೂಗದ್ರುಮಂ
ಕಲಿಕಾವ್ರಾತಮನಾಂತ ಚೂತಮೆಸೆಗುಂ ಕೋಟೀಶಪೌರಾಂತ್ಯದೊಳ್
॥ 674 ॥

ಕಂ ॥ ಪಾಡುವ ತುಂಬಿಗಳ ಕಡು
ಗೋಡುವ ಪುೞಿಲಿಂ ತಳಿರ್ತ ವನರಾಜಿಗೆ ಬಂ
ದಾಡುವ ನವಿಲಿಂ ವಿರಹಿಗೆ
ಸೂಡು ಮಾಡುವ ಲತಾವನಂ ಪೌರವನಂ ॥ 675 ॥

ಸೋಯಿದೇವ

ಉ ಮಾ ॥ ಕಾಮನುರ್ವ್ವಿ‌ಕ್ರೋಧಮನಡರ್ಪ್ಪಿಸಿ ಲೋಭಮನೆಯ್ದೆ ತೂಳ್ದ ಮ
ತ್ತಂ ಮುಳಿಸಿಂದೆ ಮೋಹದಳವಂ ಪೆಱಪಿಂಗಿಸಿ ಯುನ್ಮರಂಗಳಂ
ಸಾಮದಿಂ ನೂಂಕಿ ಮಾತ್ಸರ್ಯ್ಯಮಂ ಬಿಡಱಿಸಿದೆಂದೆನಲ್ಕೆ ಮತ್ತಾ
ಮುನಿ ಪುಂಗವಂಗೆ ಹರಮೂರ್ತ್ತಿಯಾರ್ದೊರೆ ರುದ್ರಶಕ್ತಿಯೊಳ್ ॥ 676 ॥

ರುದ್ರಶಕ್ತಿ

ಚಂ ಮಾ ॥ ಗಿರಿಜೆಯ ಸಂಗಮಿಲ್ಲದ ಮರುನ್ನದಿಯೊಳ್ ಸಮಸಲ್ಲದಾವಗಂ
ಮರುಳ ಗಣಂಗಳೊಳ್ ಬೆರಸಿಯಾಡದ ಶೂಲಮನೊಲ್ದು ಹಸ್ತದೊಳ್
ಧರಿಸದ ರುಂಡಮಾಲೆ ಕೊರಲಲ್ಲಿನಿಸಿಲ್ಲದ ಶಂಭುವೆಂಬುದೀ
ಶ್ವರವರಮೂರ್ತಿಯೆಂಬುದು ಯತೀಂದ್ರನತಂದ್ರನ ರುದ್ರಶಕ್ತಿಯಂ ॥ 677 ॥

ಸರ್ವೇಶ್ವರ

ಮ ವಿ ॥ ವನಮಂ ಪೊಕ್ಕ ವಸಂತಕಂ ಭಯದೆ ಪುತ್ತಂ ಪೊಕ್ಕನಾ ಚಂದ್ರಮಂ
ಜಿನುಗುತ್ತುಂ ಬಿಡೆ ಸಾರಿದತ್ತಳಿಕುಳಂ ತೆಂಗಾಳಿ ಮೆಯ್ಯೊಕ್ಕುವಿಂ
ನೆನಗಾರುಂ ನೆರವಿಲ್ಲ ಮತ್ತೆ ಗೆಲಲಿಂ ಸೇನಾರ್ಪ್ಪನೆಂದಂ ಗಜ
ತನುವಂಬೀ x ಸಿ ಭೀತಿಗೊಂಡನೆನಲಿಂನೇನೆಂಬೆ ಸರ್ವೇಶನಾ ॥ 678 ॥

ಕಂ ॥ ಕೊರಲೊಳ್ ಕಜೆ ಸಿರದೊಳ್ ಪೆಜೆ
ಪಿರಿದುಂ ಜಡೆಯಲ್ಲಿ ಗಂಗೆ ತೊಡೆಯೊಳ್ ಶಿವೆ ಮ
ತ್ತುರದೊಳ್ ಕರೋಟಿ ತೊಲಗಿದ
ಹರನೆಂಬುದು ಯತಿವರೇಣ್ಯ ಸರ್ವೇಶ್ವರನಂ ॥ 679 ॥

ಮ ವಿ ॥ ಜಡೆಯಿಂದೊಪ್ಪುವ ಪುಷ್ಪಚಾಪಸಿತಭಸ್ಮೋದ್ಧೂಳಿತಾಂಗಕ್ಕೆ ನೇ
ರ್ಪಡೆದಿರ್ದ್ದಂ ಗಜ ಮಿತ್ರ ಚಾರುತರ ಕಾಶಾಪ್ರಚ್ಛದಾಚ್ಛಾದಿತ
ಕ್ಕೆಡೆಗೊಟ್ಟಿರ್ಪ್ಪ ಶಶಾಂಕನೆಂಬ ನುಡಿಯಂ ಲೋಕಕ್ಕೆ ನಿಶ್ಚೈಸಿದಂ
ಗಡ ತಾನೆಂದೊಡದೇ ವೊಗಳ್ದಪುದೋ ಪೇಳ್ಸರ್ವೇಶ ಯೋಗೀಂದ್ರನಾ
॥ 680 ॥

ಕಂ ॥ ಶೂಲಿಯ ನೊಸಲುರಿಗಣ್ಣೆನೆ
ಭಾಳೇಂದು ಪ್ರಭನ ಕೋಪದುರುತರಶಿಖಿಯೆನೆ
ಕಾಳಾಗ್ನಿರುದ್ರನೆಂದೆನೆ
ಸಾಲ್ವಂ ಸರ್ವ್ವೇಶ ಮುನಿಪಂ ದೋರ್ವ್ವಳ ವಿಜಯಂ ॥ 681 ॥

ಮ ವಿ ॥ ಭರದಿಂದಂ ಬಲುವಿಲ್ಲು ದಿಬ್ಯಕರವೆತ್ತಾನುಂ ಕರಂ ಕೈಗೆವಂ
ದಿರದತ್ತಾದೊಡೆ ಪೇಳಲೇನಜಿಯೆನೆತ್ತಂ ಬಂದು ಸನ್ನದ್ಧನಾ
ಗಿರೆ ನಿಂದಿರ್ದ್ದೊಡೆವುಗ್ರಕೋಪಶಿಖಿಯಿಂದಂ ಭಸ್ಮಮೇನಾಗದೇ
ಧರಣೀ ಮಂಡಳಿಯಂ ಹರಂ ತ್ರಿಪುರಮಂ ಸುಟ್ಟಂತೆ ಸರ್ವೇಶನಾ
॥ 682 ॥

ಚಂ ಮಾ ॥ ಸಿಡಿಲ ಪೊಡರ್ಪ್ಪುವುಗ್ರತರ ಮಾರಿಯ ಮಾಮಸಕಂ ಗಜಾರಿಯೊ
ಳ್ತೊಡದ ಪರಾಕ್ರಮಂ ತರಣಿ ಮಂಡಳದುಂಡೆಯ ತೇಜರಾಜಿನೋ
ರ್ಪ್ಪೊಡೆ ಲಯಕಾಲರುದ್ರನುರುಮೂರ್ತ್ತತೆ ಭೈರವನಾಂತ ರೌದ್ರನೇ
ರ್ಪ್ಪಡೆದಿರೆ ಚಿಕ್ಕದೇವಯತಿಪಾಗ್ರಣಿಯೊಳ್ನೆಲೆಗೊಂಡು ನಿಂತುದೋ ॥ 683 ॥

ಕಂ ॥ ನಚ್ಚಿದ ಬಿಲ್ಲುಂ ನಾಕಂ
ಉಚ್ಚಿ ಕರಂ ಪಾಯ್ವ ಬಾಣ ಪಾಶುಪತಾಸ್ತ್ರಂ
ಹೆಚ್ಚಿದ ಕೋಪಾನಳನೊಸ
ಲಚ್ಚಿಯೆನಲ್ ಕಲಿಕಾಲರುದ್ರನೀ ಸರ್ವೇಶಂ ॥ 684 ॥

92) ಉದ್ರಿ 146, E.C. VIII (Rice), ಕ್ರಿಶ. 1388

ಈ ನಿಸಿದಿಗಲ್ಲು ಶಾಸನದಲ್ಲಿ ವಿಜಯನಗರದ ರಾಜನಾದ ಎರಡನೆಯ ಹರಿಹರನ ಆಳಿಕೆಯಲ್ಲಿ ಮುನಿಭದ್ರ ದೇವನು ಸನ್ನಸನ ವಿಧಿಯಿಂದ ಮುಡಿಪಿದಂತೆ ಹೇಳಿದೆ.

ಮುನಿಭದ್ರದೇವ

ಉ ಮಾ ॥ ಕ್ಷೇಮಮಮರ್ವ್ವಿನಂ ವಿಮಳಕೀರ್ತಿ ದಿಗಂತಮನೆಯ್ದುಡರ್ವ್ವಿನಂ
ಕಾಮನ ಚಾಪಚಾಪಲತೆ ಸೋರ್ವಿನಮೊಪ್ಪಿದರಂ ಪೊಗಟ್ದಿಪೆಂ
ಶ್ರೀಮುನಿಭದ್ರದೇವರನಿಳಾವಿನುತೋರುಶುಭಸ್ವಭಾವರಂ
ಪ್ರೇಮದೊಳರ್ಥಿಗರ್ಥಮುಮನೀವರನುಗ್ರತಪಃಪ್ರಭಾವರಂ ॥ 685 ॥

ಮ ವಿ ॥ ಮುನಿಸಂ ಮನ್ಮಥಯುದ್ಧದೊಳ್ ನಿರುತಮಂ ತತ್ವಾರ್ಥದೊಳ್ ಭಕ್ತಿಯಂ
ಜಿನಪಾದಾಂಬುಜದೊಳ್ ದ್ರವಾಧಿಕತೆಯಂ ಸಚ್ಚಿತ್ತದೊಳ್ ದೇಸೆಯಂ
ವಿನುತಾಚಾರಚಯಂಗಳೊಳ್ ವಚನಮಂ ವಕ್ತೃತ್ವದೊಳ್ ರುಕ್ಮರಂ
ಜನೆಯಂ ದೇಹದ ಕಾಂತಿಯೊಳ್ ನಿಜಿಸಿದರ್ ವಾಕ್ಯಾದಿವರ್ಣಾಹ್ವಯರ್ ॥ 686 ॥

ಕಂ ॥ ನೀರೊಳಗಣ ತಾವರೆಯೆಲೆ
ನೀರಂ ಪೊಜಿದಂತೆ ಬಾಹ್ಯವಸ್ತುವನೆಲ್ಲಂ
ದೂರಂ ಮಾಡಿ ಬಳಿಕ್ಕಂ
ವೀರರ್ ಮುನಿಭದ್ರದೇವರಗಣಿತ ಮಹಿಮರ್ ॥ 687 ॥

93) ಕಳಸವಳ್ಳಿ 264, E.C. VIII (Rice), ಕ್ರಿಶ. 1393

ಇದರಲ್ಲಿ ಕುಪಟೂರಿನ ಗೋಪಗೌಡ ಎಂಬುವವನ ಮರಣವನ್ನು ಹೇಳಿದೆ.

ಕಂ ॥ ವಪುವಂ ಗೋಪತಿವುಳಿಯ
ಲ್ವಿಪುಳತರ ಪರೋಕ್ಷನುತಿಯ ಪೇಳ್ದಂ ವಜ್ರಂ
ತಪನ ಸಸಿಯಿರ್ಪ್ಪಿನಂ ವ
ರ್ತ್ತಿಪ ತೆರದಿಂ ಸದ್ಬುಧಾಳಿ ಪೊಗಳಲ್ಕ್ಕುತಿಯಂ ॥ 688 ॥

94) ಕಳಸವಳ್ಳಿ 261, E.C. VIII (Rice), ಕ್ರಿಶ. 1408

ಇದರಲ್ಲಿ ವಿಜಯನಗರದ ದೊರೆಯಾದ ಮೊದಲನೆಯ ದೇವರಾಯನ ಆಳಿಕೆಯಲ್ಲಿ ಕುಪ್ಪಟೂರ ಪ್ರಭು ಗೋಪಗೌಡನು ಸನ್ನಸನ ವಿಧಿಯಿಂದ ಸತ್ತನೆಂದು ಹೇಳಿದೆ.

ಸಮುದ್ರ

ಉ ಮಾ ॥ ತನ್ನೊಳಗಿರ್ದ ಮೌಕ್ತಿಕಮಿಳಾಧರಮದ್ರಿಧರಾಂಗರೋಚಿಗಳ್
ತನ್ನೊಳಗೊಳ್ಪುವೆತ್ತು ಪೊಱಪೊಣ್ಮುವವೋಲ್ ಜಳಶೀಕರಂಗಳಿಂ
ದುನ್ನತಮಾದ ಬಲ್ದೆರೆಗಳಿಂ ತೆರೆಮಾಲೆಯ ನೀಲರೋಚಿಯಿಂ
ತನ್ನ ತಿಗುಣ್ಪು ಘೋಷದೊದವಿಂ ಲವಣಾಂಬುಧಿ ನಾಡೆ ರಂಜಿಕುಂ ॥ 689 ॥

ಕರ್ಣಾಟ ದೇಶ

ಮ ಸ್ರ ॥ ಜಿನಧರ್ಮಾವಾಸಮಾದತ್ತಮಳವಿನಯದಾಗಾರಮಾದತ್ತು ಪದ್ಮಾ
ಸನನಿರ್ಪಾಸದ್ಮಮಾದತ್ತತಿವಿಶದಯಶೋಧಾಮಮಾದತ್ತು ವಿದ್ಯಾ
ಧನಜನ್ಮಸ್ಥಾನಮಾದತ್ತಸಮತರಳಗಂಭೀರಸದ್ಗೇಹಮಾದ
ತ್ತೆನಿಸಲ್ಕಿಂತುಳ್ಳ ನಾನಾಮಹಿಮೆಯೊಳೆಸೆಗುಂ ಚಾರುಕರ್ಣಾಟದೇಶಂ ॥ 690 ॥

ಕುಪ್ಪಟೂರು

ಕಂ ॥ ಪೂಲತೆ ಪೂಗಿಡು ಪೂಮರ
ಸಾಲಿಂದಲ್ಲಲ್ಲಿ ಕೇರಿಕೇರಿಗಳೊಳ್ ಚೈ
ತ್ಯಾಲಯದ ಮುಂದೆ ತುಂಬಿಯ
ಜಾಲಂ ಮದಮೇಱೆ ಮೆಱೆವುವಾಪರಿಮಳದೊಳ್ ॥ 691 ॥

ಗೋಪಣ್ಣ

ಉ ಮಾ ॥ ವಾರಿಜಸದ್ಮೆ ಸದ್ಮದೊಳಗಿರ್ದವೊಲಿಂ ನುತಿಸಿರ್ದ ಪಾರದಂ
ಪಾರದೆ ಬಂದ ತೋರ್ಕೆ ಸುಮನೋಮಣಿ ಸನ್ಮಣಿಹಾರದಲ್ಲಿ ಬಂ
ದೋರಣಮಾಗಿ ನಿಂದ ಪರಿ ವಂದಿಜನಕ್ಕೆನಿಪೊಂದು ದಾನಗಂ
ಭೀರತೆಯಾದುದೇವೊಗಳ್ವೆನಾಂ ಸಿರಿಯಣ್ಣತನೂಜಗೋಪನಂ ॥ 692 ॥

ಉ ಮಾ ॥ ಸತ್ಯದ ಮೇಲಣೆಚ್ಚಱಿಕೆ ಧರ್ಮದ ಮೇಲಣ ಲೋಭಮಿಂತು ಸಾ
ಹಿತ್ಯದ ಮೇಲಣಾಸೆ ಜಿನಪಾದದ ಮೇಲಣ ನಿಷ್ಠೆ ನಾಡೆ ಸ
ದ್ಭೃತ್ಯರ ಮೇಲಣಾದರಣೆ ಕೀರ್ತಿಯ ಮೇಲಣ ಕೂರ್ಮೆ ಲೋಕಸಂ
ಸ್ತುತ್ಯದ ಗೋಪಣಪ್ರಭುವಿಗುಂಟುಱಿದರ್ಗ್ಗಿನಿತುಂಟೆ ಧಾತ್ರಿಯೊಳ್ ॥ 693 ॥

ಚಂ ಮಾ ॥ ಕರುಣರಸಂ ಪೊನಲ್ಕವಿದು ಧರ್ಮಮಹಾಲತೆಗಾಲವಾಲಸು
ಸ್ಥಿರಜಲಮಾಗೆ ತಲ್ಲತೆ ಜಿನಾಗಮಕಲ್ಪಮಹೀಜಮಂ ಮನೋ
ಹರತರದಿಂದೆ ಪರ್ವಿ ನಿಲೆ ಗೋಪನ ತುಂಗಕೃಪಾನುಭಾವಮಂ
ನಿರುಪಮಧರ್ಮಮಂ ವರಜಿನಾಗಮದುನ್ನತಿಯಂ ಪೊಗಳ್ವರಾರ್ ॥ 694 ॥

95) ಭಾರಂಗಿ 329, E.C. VIII (Rice), ಕ್ರಿಶ. 1415

ಈ ನಿಸಿದಿ ಶಾಸನದಲ್ಲಿ ಅಭಯಚಂದ್ರ ಸಿದ್ಧಾಂತದೇವರ ಶಿಷ್ಯನಾದ ಭಾರಂಗಿಯ ಗೋಪಣ್ಣನು ಸಮಾಧಿ ವಿಧಿಯಿಂದ ಮರಣಿಸಿದನೆಂದು ಹೇಳಿದೆ.

ನಾಗರಖಂಡ

ಚಂ ಮಾ ॥ ಫಲಭರವಾಂತ ಶಾಳಿ ತಳಿರೇಳ್ದಿದ ಚೂತಕುಜಾಳಿ ತೆಂಗು ಕ
ಣ್ಗೊಳಿಸುವ ಕೌಂಗು ಪೂತ ಲತೆ ಪೂಗಿಡು ಪೂಮರದೋಳಿ ಪಲ್ಲವಂ
ಗಳ ಪೊಳಪೊಂದಿ ತಾಂ ನಿಮಿರ್ವಶೋಕಕುಜಂ ತಿಳಿನೀರ್ಗೊಳಂಗಳಿಂ
ಸುಲಲಿತಮಾಗಿ ರಂಜಿಪುದು ನಾಗರಖಂಡಮದೆತ್ತ ನೋಳ್ಪೊಡಂ ॥ 695 ॥

ಗೋಪಣ್ಣ

ಉ ಮಾ ॥ ಗೋಪತಿವಾಹನಪ್ರಭೆಯನೇಳಿಸಿ ಗೋಪತಿವಾಹನಾಂಶುವಂ
ರೂಪುಗಿಡಲ್ಕೆ ತಾಂ ಜಜೆದು ಗೋಪತಿವಾಹನಕಾಂತಿಯಂ ಮಹಾ
ಟೋಪದೆ ತಾನೆ ನಿಂದಿಸಿ ಮನೋಹರದೇಳ್ಗೆಯೊಳೊಪ್ಪುತುಂ ಬಹು
ದ್ವೀಪಮನೆಯ್ದೆ ಪರ್ವಿದುದು ಗೋಪಣನಗ್ಗದ ಕೀರ್ತಿ ಪಾಂಡುರಂ ॥ 696 ॥

96) ಹಿರೇ ಆವಲಿ 107, E.C. VIII (Rice), ಕ್ರಿಶ. 1416

ಇದರಲ್ಲಿ ವಿಜಯನಗರದ ದೊರೆ ದೇವರಾಯನ ಆಳಿಕೆಯಲ್ಲಿ ಹಿರೇ ಆವಲಿಯ ನಾಳ್ಪ್ರಭು ರಾಯಗೊಂಡನ ಮಗ ಹಾರುವ ಗೌಂಡನು ಮರಣಹೊಂದಿದ್ದನ್ನು ಹೇಳಿದೆ.

ಕಂ ॥ ನೋಡಿದಡೆ ಮದನ ಸಂನಿಭ
ಜೂಢಿಯೊಳತಿ ಕೀರ್ತ್ತಿವೆತ್ತ ಸಜ್ಜನ ಪುರುಷಂ
ಪಾಡಳಿದ ಹಾರುವ ಗೌಂಡ
ಬೇಡಿದವಂಗನ ಹೊಂನು ವಸ್ತ್ರವನೀವಂ ॥ 697 ॥

ಕಂ ॥ ಜಿನರ ನುಡಿ ಜಿನರ ಭಾವನೆ
ಜಿನಬಿಂಬಕ್ಕಲ್ಲದನ್ಯದೆಯ್ವಕ್ಕೆಱಗಂ
ಜಿನಪದ ನಳಿನ ಭ್ರಮರಂ
ಜಿನಧರ್ಮ್ಮೋದ್ಧಾರ ಹಾರುವ ಗೌಂಡನುದಾರಂ ॥ 698 ॥

97) ಹಿರೇ ಆವಲಿ 119, E.C. VIII (Rice), ಕ್ರಿಶ. 1417

ಇದರಲ್ಲಿ ವಿಜಯನಗರದ ದೊರೆ ಪ್ರತಾಪ ದೇವರಾಯನ ಆಳಿಕೆಯಲ್ಲಿ ಹಿರಿಯ ಆವಲಿಯ ರಾಮಗೌಡನ ಮಗ ಗೋಪಗೌಂಡನು ಸಮಾಧಿ ವಿಧಿಯಿಂದ ಮರಣಹೊಂದಿದುದನ್ನು ಹೇಳಿದೆ.

ಉ ಮಾ ॥ ವೀರ ಜಿನೇಂದ್ರ ಪಾದ ಪದಪಂಕಜ ಭೃಂಗಮದಾಳಿ ಚಿತ್ತನು
ದ್ದಾರಕನಂತ ಜೀರ್ಣ್ನ ಜಿನವಾಸವ ನಿರ್ಮಿತ ದಾನವಾರಣಂ
ಗೋ ರದ ದಾಸಿ ವೇಸಿ ಪರನಾರಿ ಸಹೋದರ ಮಾರಿ ಸನ್ನಿಭಂ
ಪಾರದ ಗೋಪಗೌಂಡ ಪ್ರಭುವಂ ಪುರ ಬಣ್ಣಿಸುತಿರ್ಕ್ಕುಮಾಗಳುಂ ॥ 699 ॥

98) ಭಾರಂಗಿ 330, E.C. VIII (Rice), ಕ್ರಿ.ಶ. 1465

ಈ ನಿಸಿದಿ ಶಾಸನದಲ್ಲಿ ದೇವಚಂದ್ರಮುನಿಯ ಶಿಷ್ಯನಾದ ಭಾರಂಗಿಯ ಬುಳ್ಳಪ್ಪನು ಸಮಾಧಿ ವಿಧಿಯಿಂದ ಮರಣಿಸಿದಂತೆ ಹೇಳಿದೆ.

ಮ ವಿ ॥ ಕಲಿಯಂ ಮಾಂಕರಿಸಿತ್ತು ತನ್ನ ಚರಿತಂ ಕಲ್ಪಾವನೀಜಾತದೊಳ್
ಚಲಮಂ ಮಾಡಿದುದತ್ಯುದಾರತೆ ಮಹಾಧರ್ಯಂ ಸುರೋರ್ವೀಧ್ರದೊಳ್
ಮಲೆದತ್ತೆಂದೊಡೆ ಬುಳ್ಳಪಪ್ರಭುಗೆ ಭವ್ಯಾಚಾರದಿಂ ಚಾಗದಿಂ
ವಿಲಸದ್ಧೈರ್ಯದಿನೀಧರಾತಳದೊಳನ್ಯರ್ ಪೋಲಲೇನಾರ್ಪರೇ ॥ 700 ॥

ಕಂ ॥ ಚಾಗದೆ ಧನರಾಸಿಯನುರು
ಭೋಗದೆ ತನ್ನಾಯುರಾಸಿಯಂ ಸವೆಯಿಸಿದಂ
ತ್ಯಾಗಂ ಶ್ರೇಯಾಂಸನೊಳುರು
ಭೋಗಂ ಸುಕುಮಾರನಲ್ಲಿ ಸಮನೆಂಬಿನೆಗಂ ॥ 701 ॥

ಮ ವಿ ॥
ಸರಿಗಾಣೆಂ ಧರೆಯಲ್ಲಿ ಚಾಗಿಗಳೊಳೆನ್ನೊಳ್ ಪೋಲ್ಕೆವರ್ಪನ್ನರಂ
ಸುರಭೂಜಂ ಸಮನಪ್ಪೊಡಪ್ಪುದದನಾಂ ನೋಟ್ಪೆಂ ಸಮಂತೆಂಬವೋಲ್
ಧರೆಯೊಳ್ ಪೊಮ್ಮಳೆ ಸೋರ್ದ ಪಾಂಗಿನೊಳೆ ಚಾಗಂಗೆಯ್ದು ಸೋಪಾನಮಾ
ಗಿರೆ ಧರ್ಮಂ ತ್ರಿದಿವಕ್ಕೆ ಬುಳ್ಳಪನಮರ್ತ್ಯಾವಾಸಮಂ ಪೊರ್ದಿದಂ ॥ 702 ॥

99) ಹಿರೇ ಆವಲಿ 125, E.C. VIII (Rice), ದುಂದುಭಿ ಸಂವತ್ಸರ

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ಜಗದೇಕಮಲ್ಲನ ಆಳಿಕೆಯಲ್ಲಿ ಮದ್ದಗಾವುಂಡ ಮೊದಲಾದವರು ಆವಲಿಯಲ್ಲಿ ಜಿನಪ್ರತಿಷ್ಠೆಯನ್ನು ಮಾಡಿಸಿದರೆಂದೂ ಅಲ್ಲಿಯ ಪಾರ್ಶ್ವದೇವರಿಗೆ ದತ್ತಿಯನ್ನು ನೀಡಿದರೆಂದೂ ಹೇಳಿದೆ.

ಯೋಗೇಶ್ವರ ದಂಡನಾಯಕ

ಕಂ ॥ ಚಿತ್ತದಲುಮಲ್ಲದೆ ತನ್ನ
ಸತ್ವದ ಗುಣವಿಲ್ಲ ಘನದೆ ನೀರೇರಿ ಕರಂ

ನಿತ್ತರ್ಸಿ ಮೂಱು ಲೋಕಮ
ನುತ್ತರ್ಸಿತು ನಿನ್ನ ಕೀರ್ತಿಲತೆಯುಂ ಕೃತಿಯುಂ ॥ 703 ॥

ಮಲ್ಲ

ಕಂ ॥ ಅಯ್ದುಂ ಜಿನಪದಗಣೆಗಂ
ಮೆಯ್ದೆಗೆಯದೆ ಮಾದಧೃತಿಯ ಕಾಮಿನಿಯರೊಳಂ
ತೆಯ್ದೆ x x x ಬೆಸಸೆ x x ಸುಲು
ಮಯ್ದುನ ಮಲ್ಲಂ ರಸಕಯನಾಹವರಾಮಂ ॥ 704 ॥

100) ಮಲ್ಲಾಪುರ 250, E.C. VIII (Rice), ಸಿಂಹಣದೇವವರ್ಷ 36, ಹೇವಿಳಂಬಿ ಸಂವತ್ಸರ

ಇದರಲ್ಲಿ ಸೇವುಣರ ದೊರೆ ಸಿಂಹಣದೇವನ ಆಳಿಕೆಯಲ್ಲಿ ಕುಪ್ಪಟೂರಿನ ತುರುಗಳನ್ನು ಗುತ್ತಿಯ ಸೋವಿದೇವನು ಹೊಡೆದುಕೊಂಡು ಹೋಗುತ್ತಿದ್ದಾಗ ಹೊಮ್ಮಿಸೆಟ್ಟಿ ಮತ್ತು ಮಾಚನಹಳ್ಳಿಯ ಮಾರ, ಕಾಮ ಎಂಬುವವರು ಹಸುಗಳನ್ನು ಹಿಂತಿರುಗಿಸುವಾಗ ನಡೆದ ಹೋರಾಟದಲ್ಲಿ ಮರಣಿಸಿದುದನ್ನು ಹೇಳಿದೆ.

ಕಂ ॥ ಆಸುರದಿ ಬರ್ಪ್ಪ ಬಲಮಮ
ನೋಸರಿಸಿದೆ ಪೊಕ್ಕುಮಾರ ಕಾಮಂ ರಣದೊ
ಳ್ಳೇ ಸೇಜೆ ಹೊಯ್ದು ಕೊಂದಿಂ
ತಾಸುಕರಂ ಬೆರಸು ತವಿಸಿದರ್ಮಾರ್ಪಡೆಯಂ ॥ 705 ॥

101) ಬೆನ್ನೂರು 358, E.C. VIII (Rice), ಪಿಂಗಳ ಸಂವತ್ಸರ

ಈ ವೀರಗಲ್ಲು ಶಾಸನದಲ್ಲಿ ಮಹಾಮಂಡಳೇಶ್ವರ ಬೀರದೇವರಸನ ಆಳಿಕೆಯಲ್ಲಿ ಲಖರಸ ಎಂಬುವವನು ಬೆನವೂರಿಗೆ ಮುತ್ತಿಗೆ ಹಾಕಿದಾಗ ಕಲ್ಲಗೌಂಡನ ಮಗ ಹೆಗ್ಗಡೆ ಕಾಮಯ್ಯನು ಹೋರಾಟದಲ್ಲಿ ಮರಣ ಹೊಂದಿದುದನ್ನು ಹೇಳಿದೆ.

ಕಂ ॥ ಒಡನಾಡಿದಂಗೆ ನಂಟಂ
ಗೆಡಱಿಡರ್ಸಿದವಂಗೆ ಬೇಳ್ಪವಂಗೆ ಬುಧಂಗಂ
ಪೊಡವಿಗೆ ಕಲ್ಲಣನ ಸುತಂ
ಕೊಡುವೆಸಕದ ಕಾಮಧೇನುವಿಭು ಕಾಮಯ್ಯನ್ ॥ 706 ॥

102) ಬೆನ್ನೂರು 366, E.C. VIII (Rice), ಪಿಂಗಳ ಸಂವತ್ಸರ

ಈ ವೀರಗಲ್ಲು ಶಾಸನದಲ್ಲಿ ಮಹಾಮಂಡಳೇಶ್ವರ ಬೀರದೇವರಸನ ಆಳಿಕೆಯಲ್ಲಿ ಲಖರಸ ಎಂಬುವನು ಬೆನವೂರಿಗೆ ಮುತ್ತಿಗೆ ಹಾಕಿದಾಗ ಬೊಪ್ಪಸೆಟ್ಟಿ ಸಾಂತಯ್ಯನು ಹೋರಾಟದಲ್ಲಿ ಮರಣ ಹೊಂದಿದುದನ್ನು ದಾಖಲಿಸಿದೆ.

ಕಂ ॥ ಒಡನಾಡಿದಂಗೆ ನಂಟಂ
ಗೆಡಱಡರ್ಸಿದವಂಗೆ ಬೇಳ್ಪವಂಗೆ ಬುಧಂಗಂ
ಪೊಡವಿಗೆ ಬೊಪ್ಪಣನ ಸುತಂ
ಕೊಡುವೆಸಕದ ಕಾಮಧೇನುವಿಭು ಸಾಂತಯ್ಯನ್ ॥ 707 ॥

103) ಎಲೆವಾಳ 391, E.C. VIII (Rice), ಧಾತು ಸಂವತ್ಸರ

ಇದರಲ್ಲಿ ದೇವಗಿರಿಯ ಯಾದವರ ದೊರೆಯ ಆಳಿಕೆಯ ಕಾಲದಲ್ಲಿ ಬಂದಳಿಕೆಯ ಸೋಮನಾಥದೇವರ ಸ್ಥಾನಪತಿ ಭೈರಮಜೀಯ, ನಾಗೇಶ್ವರದೇವಿಯ ದೇವರ ಸ್ಥಾನಪತಿ ನಾಕೆಯಜೀಯ, ಮೊದಲಾದವರಿಗೆ ನೀಡಿದ ದತ್ತಿಯನ್ನು ಹೇಳಿದೆ.

ನಾಗರಖಂಡ

ಉ ಮಾ ॥ ಪೂಗವನಂಗಳಿಂ ಬೆಳೆದ ಶಾಳಿವನಂಗಳಿನೊಪ್ಪುತಿಪ್ಪ ಪೊಂ
ನಾಗವನಂಗಳಿಂ ವಿಳಸದಾಂಬ್ರವನಂಗಳಿನಾಗಳುಂ ಮನೋ
ರಾಗಮನೀವ ಚಂಪಕವನಂಗಳಿನಾ ಕದಳೀವನಂಗಳಿಂ
ನಾಗರಖಂಡ ಕಂಪಣಯಿಳಾಮಣಿ ದರ್ಪ್ಪಣಮೊಪ್ಪಿ ತೋಱುಗುಂ ॥ 708 ॥

104) ಕುಂಟುಗಳಲೆ 568, E.C. VIII (Rice), ಧಾತು ಸಂವತ್ಸರ

ಇದರಲ್ಲಿ ಮಹಾಮಂಡಳೇಶ್ವರ ಕೀರ್ತಿದೇವನ ಹಿರಿಯ ಸೇನಾಪತಿ ಕೀರ್ತಿಯಣ್ಣನು ಹಯ್ವೆಯಿಂದ ಕಪ್ಪವನ್ನು ತರಲು ಹೋಗಿದ್ದಾಗ ಕೀರ್ತಿಯಣ್ಣನ ಮೈದುನ ಬಿಂಜನಮಯ್ಯನ ಮಗ ವೇಮಣ್ಣನು ಬಯಲುವಡದ ಕಾಳಗದಲ್ಲಿ ಮರಣ ಹೊಂದಿದುದನ್ನು ಹೇಳಿದೆ.

ಕಂ ॥ ವೀರಾವತಾರನಹಿತರ
ಬೇರಂ ನಿರ್ಮೂಳಮಾರ್ಪ್ಪ ವಜ್ರಕುಠಾರಂ
ಭಾರತ ಪುರುಷರ ಕಳಶಂ
ಧಾರಿಣಿಯೊಳ್ ಸುಭಟರತ್ನ ಬಿಂಜನದೇವಂ ॥ 709 ॥

105) ಕುಂಬತಿ ಗ್ರಾಮ 497, E.C. VIII (Rice), ಕಳಚೂರ್ಯ ಸೋವಿದೇವ 10ನೇ ವರ್ಷ, ದುರ್ಮುಖಿ ಸಂವತ್ಸರ

ಇದು ಕಳಚೂರ್ಯರ ದೊರೆ ಸೋವಿದೇವನ ಆಳಿಕೆಯಲ್ಲಿನ ವೀರಗಲ್ಲು ಶಾಸನ. ಬಹುಶಃ ಬಸವನಾಯಕ ಹಾಗೂ ಮತ್ತೊಬ್ಬನ ಸ್ಮಾರಕ.

ಕಂ ॥ ಸ್ಥಿರಚಿತ್ತಬುದ್ಧಿಮಂತಂ
ಪುರಸಾಗ್ರಣಿ ಮಾಚ ಪಲರ ಕೊಂದಾಕ್ಷಣದೊಳ್
ಸುರಿದರಲ ಮಳೆಯನಾಗಳೆ
ಸುರಗಣಿಕೆಯರೊಡನೆ ಪಸೆಯಲಿರ್ದ್ದಂ ಸುಖದಿಂ ॥ 710 ॥

106) ಚಿಟ್ಟೂರು 514, E.C. VIII (Rice), ವೀರಬಲ್ಲಾಳ ವರ್ಷ 11, ಪಿಂಗಳ ಸಂವತ್ಸರ

ಇದರಲ್ಲಿ ಹೊಯ್ಸಳರ ದೊರೆ ವೀರಬಲ್ಲಾಳನ ಆಳಿಕೆಯಲ್ಲಿ ಅಧಿಕಾರಿಯಾಗಿದ್ದ ಅರಸಿಯಕೆರೆಯ ಮಹದೇವ ದಣ್ಣಾಯಕನು ಚಿಟ್ಟೂರಿನ ರಾಮನಾಥದೇವರಿಗೆ ನೀಡಿದ ದತ್ತಿಯನ್ನು ಹೇಳಿದೆ.

ಕಂ ॥ ತೊಡರ್ದಂಗೆ ಮಾರಿ ತಂನೊಳ್
ಬಿಡೆ ಸೆಣಸುವವಗೆ ಮೃತ್ಯು ರಣರಂಗದೊಳಂ
ತಡವಡಿಪ ಸಿಡಿಲು ವೈರಿಗ
ಗಡನಂ ಮಾಯರಸಿಕೆಜೆಯ ಮಹದೇವನೃಪನ್ ॥ 711 ॥

ಕಂ ॥ ಶರಣೆನಲು ಕಾವನೀತಂ ರ
ಣರಂಗದೊಳಾಂತವರ್ಗೆ ಜವರಾಜ್ಯದ ಸಿವಂ
ಪಿರಿದೀವೆಡೆಯೊಳ್ ಕರ್ಣ್ನಂ
ಸರಿಯಾರ್ ಮಹದೇವ ದಂಡನಾಥಂಗೀಗಳ್ ॥ 712 ॥

ಹೊಸನಗರ ತಾಲ್ಲೂಕು

107) ಹುಂಚ 94, E.C. XV (R), ಕ್ರಿಶ. 1062

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆಯಾದ ತ್ರೈಲೋಕ್ಯಮಲ್ಲನ ಆಳಿಕೆಯಲ್ಲಿ ವೀರಸಾಂತರಸನು ನೊಕ್ಕಿಯಬ್ಬೆಯ ಬಸದಿಯನ್ನು ಮಾಡಿಸಿದಾಗ, ಅವನ ಹೆಂಡತಿ ಚಾಗಲದೇವಿಯು ಮಕರತೋರಣವನ್ನು ಮಾಡಿಸಿದಳೆಂದು ಹೇಳಿದೆ.

ಚಾಗಲದೇವಿ

ಮ ವಿ ॥
ಗುಣದೊಳ್ ರೂಪಿನೊಳೊಳ್ಪಿನೊಳ್ ಸೊಬಗಿನೊಳ್ ಶೃಂಗಾರದೊಳ್ ಸೌಮ್ಯಲ
ಕ್ಷಣದೊಳ್ ಮೈಮೆಯೊಳೋಜೆಯೋಳ್ ವಿಭವದೊಳ್ ಶೀಲಂಗಳೊಳ್ ಭೃತ್ಯಪೋ
ಷಣದೊಳ್ ಭೋಗದೊಳಾರ್ಪಿನೊಳ್ ವಿಭುತೆಯೊಳ್ ಕಾರುಣ್ಯದೊಳ್ ಪೋಲಿಸ
ಲ್ಕೆಣೆಯಾರ್ ಗೆಲ್ವಬೆಡಂಗಿಗೆಂದನುದಿನಂ ವಿದ್ವಜ್ಜನಂ ಬಣ್ಣಿಕುಂ ॥ 713 ॥

ಕಂ ॥ ಸಲುಗೆಗೆ ಸಾಮ್ಯಕ್ಕಕ್ಕೆಗೆ
ಪಲರಕ್ಕೆಮ ಸತಿಯರಹಿತರಂ ಗೆಲ್ವೆಡೆಯೊಳ್
ಗೆಲುವ ಬೆಡಂಗಿಯೆ ಬೀರನ
ಬಲದ ಭುಜಾದಂಡದಲ್ಲಿ ಕೆಲದೊಳ್ ನಿಲ್ವಳ್ ॥ 714 ॥

ಕಂ ॥ ಪತಿಯಂ ವಂಚಿಸಿ ಸಲೆ ನಿಜ
ಕೃತಕದಿನರ್ಥಾವಳೋಕನಾಕ್ಷಿಗಳಿಂ ಭ್ರೂ
ಲತೆಯೊಳಮೊಳಪೊಯ್ವಿದು
ರ್ವ್ರತೆಯರ್ ಪೋಲ್ತಪರೆ ಚಾಗಿಯಬ್ಬರಸಿಯರಂ ॥ 715 ॥

ಚಂ ಮಾ ॥ ಅತಿಶಯಮಪ್ಪ ರೂಪಿನೊಳುದಾರತೆಯೊಳ್ ವಿನಯೋಪಚಾರದೊಳ್
ಪತಿಗತಿಭಕ್ತಿಯೊಳ್ ವಿಪುಳಭೋಗದೊಳಿಂ ಪೆಱತೇನನೆಂಬೆ ಮಾಣ್
ರತಿಗನುಸಾರಿ ಪಾರ್ವತಿಗೆ ತೋಡು ಕುಜಾತೆಗೆ ಪಾಟಿ ನೋಡರುಂ
ಧತಿಗೆಣೆ ವಾಸವಾಂಗನೆಗೆ ಪಾಸಟಿ ಚಾಗಲದೇವಿ ಧಾತ್ರಿಯೊಳ್ ॥ 716 ॥

108) ಹುಂಚ 106, E.C. XV (R), ಹೊ.ಸ. 106, ಕ್ರಿಶ. 1062

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ತ್ರೈಲೋಕ್ಯಮಲ್ಲದೇವ ಹಾಗೂ ಶಾನ್ತರ ದೊರೆ ವೀರಸಾನ್ತರದೇವನ ಆಳಿಕೆಯಲ್ಲಿ, ಪಟ್ಟಣಸ್ವಾಮಿ ನೊಕ್ಕಯ್ಯ ಸೆಟ್ಟಿ ಎಂಬುವವನು ತಾನು ಕಟ್ಟಿಸಿದ್ದ ಪಟ್ಟಣಸ್ವಾಮಿ ಜಿನಾಲಯಕ್ಕೆ ನೀಡಿದ ದತ್ತಿಯನ್ನು ಹೇಳಿದೆ. ಈ ಶಾಸನವನ್ನು ಮಲ್ಲಿನಾಥಕವಿ ರಚಿಸಿದ್ದಾನೆ.

ಬೀರದೇವ

ಅಕ್ಕರ ॥ ಈವರೆಂದತ್ತಿ ಪಲ್ಗಿರಿದಪರ್ಬೂತಾಗಿ ಬಟ್ಟಿಪರ್ಲ್ಲಜ್ಜೆಗೆಟ್ಟು
ಕಾವರೆಂದಲೆ ಸರಣೆಂದು ಬಂದಪರ್ತ್ತಾವಂಜಿ ಮಱೆವೊಕ್ಕುಂ ಬಾಳ್ವೆಮೆಂದು
ಸಾವಬಂಗದಾ ಮಱೆವೊಕ್ಕುಂ ಬಟ್ಟುಕರಾಬಿಡಿಯುಂ ನಿದ್ದೆ ಪಟ್ಟಿಯದನ್ದು
ಜೀವಂ ಜೀವಕೆ ತೂಕಕ್ಕೆ ಬಾರದೆ ಕಿಳ್ವಟ್ಟು ಬರವೇಕೆ ಬೀರದೇವಾ ॥ 717 ॥

ಶಾನ್ತರ

ಕಂ ॥ ಧುರದೊಳಸಿಲತೆಯನುಚ್ಚಿದ
ಡರಿನೃಪ ಯುವತಿಯರ ಮುಗುಳ ಕಂಕಣದಾಕೀ
ಲ್ತರದಿನುಚ್ಚಿದುವು ನಿಜ
ಕರ ಖಟ್ಗಮವರ್ಕ್ಕೆ ಕೀಳೆ ಶಾನ್ತರ ನೃಪತೀ ॥ 718 ॥

ನೊಕ್ಕ

ಉ ಮಾ ॥ ಬಲ್ಲವಲನಪ್ಪ ಪೊರ್ಬುಸಿಯ ಬೈಕಿಗೆ ಭಾಜನಮಾದದೊಳ್ಗೆ ಬೀ
ಳಲ್ಪರಿವಂತೆ ನೇಲ್ದನಲೆಗಡ್ಡದ ದೊಡ್ಡರ ಬೆಲ್ಲವಾತುಗ
ಳ್ದೊಲ್ಲುಗಮವಾರ್ಕೆ ಕೆಮ್ಮನೆಡೆಯಾಡರಿದೋವೆಲೆ ಶಿಷ್ಟ ಬೇಡಿಕೊ
ಳ್ಳೊಲ್ಪಡೆ ನಮ್ಮ ಧರ್ಮದ ತವರ್ಮನೆ ಪಟ್ಟಣಸಾಮಿ ನೊಕ್ಕನಂ ॥ 719 ॥

ಕವಿ ಮಲ್ಲಿನಾಥ

ಕಂ ॥ ಸುಜನ ಜನಕುಮುದ ಚಂದ್ರನ
ಸುಜನ ಜನಾನವಿಲೋಕ ಮಣಿಮುಕುರನನಾ
ಸುಜನ ಜನವನಜ ಹಂಸನ
ಸುಜನಂ ಜನ ಪೊಗಳೆ ಮಲ್ಲಿನಾಥಂ ನೆಗಟ್ದಿಂ ॥ 720 ॥

109) ಹುಂಚ 105, E.C. XV (R), ಕ್ರಿಶ. 1077

ಇದರಲ್ಲಿ ಸಾನ್ತರ ದೊರೆ ವೀರಸಾನ್ತರನ ಆಳಿಕೆಯಲ್ಲಿ ಅವನ ಹಿರಿಯ ಮಗನಾದ ಭುಜಬಳ ಸಾನ್ತರನು ಪಟ್ಟಣಸ್ವಾಮಿ ನೊಕ್ಕಯ್ಯಸೆಟ್ಟಿ ಮಾಡಿಸಿದ ತೀರ್ಥದ ಬಸದಿಗೆ ದತ್ತಿಯನ್ನು ನೀಡಿದುದನ್ನು ಹೇಳಿದೆ.

ನೊಕ್ಕಯ್ಯಸೆಟ್ಟಿ

ಮ ಸ್ರ ॥
ಜಿನತತ್ವವ್ಯಾಪ್ತ ಚಿತ್ತಂ ಜಿನಮತ ತಿಳಕಂ ಜೈನಕಳ್ಪಾವನೀಜಂ
ಜಿನಧರ್ಮ್ಮಾಂಬೋಧಿ ಚಂದ್ರಂ ಜಿನಸಮಯ ಸರೋಜಾಕರೋತ್ತಂಸ ಹಂಸಂ
ಜಿನರಾಜಸ್ತೋತ್ರಮದ್ರಾವಿಳ ಮುಖಕಮಳೋದ್ಭಾಸಿ ಸಿದ್ಧಾನ್ತರತ್ನಾ
ಕರ ದೇವ ಶ್ರೀ ಪದಾಂಭೋರುಹ ಮಧುಪನೆನಲ್ಪಟ್ಟಣಸ್ವಾಮಿ ಸನ್ದಂ ॥ 721 ॥

ಮ ವಿ ॥ ಹರಿಸಂಘಾತದೆ ಕಟ್ಟುಪೆತ್ತ ಬಡವಜ್ವಾಳಾಳಿಯಿಂ ಬೆನ್ದ ಭೀ
ಕರ ಪಾಠೀನ ತಿಮಿಂಗಿಳಾಳಿಯಿನತಿಕ್ಷೋಭಕ್ಕೆ ಸನ್ದಿಟ್ದಿಗ
ಸ್ತ್ಯರಿನ ಪ್ರಾಸನಕೆಯ್ದೆವಾರದತಿತೀಕ್ಷ್ಣ ಕ್ಷಾರವಾರಿಪ್ರಭಂ
ಗುರುವಾರಾಸಿಯೊಳೆನ್ತು ಪೋಲಿಪುದೊ ಪೇಳ್ಸಮ್ಯಕ್ತ್ವವಾರಾಸಿಯಂ
॥ 722 ॥

ಮ ವಿ ॥ ಸಿರಿಗಾವಾಸಮನೇಕ ರತ್ನ ನಿಚಯೋತ್ಸತ್ತ್ಯಾಶ್ರಯಂ ಭೀರುರ
ಕ್ಷರತಂ ಚಂದ್ರಕಣ ಪ್ರವರ್ದ್ಧನ ಮುದಂ ಪೀಯೂಷ ಪಿಣ್ಡಾಸ್ಪದಂ
ವರವೇಳಾ ವಳಯಾವೃತಂ ಸಮತೆಯಿಂ ವಾರಾಸಿ ಪೋಲ್ತುಂ ಮನೋ
ಹರದಾನತ್ವದಿನೆಯ್ದೆ ಪೋಲದೆ ವಲಂ ಸಮ್ಯಕ್ತ್ವವಾರಾಸಿಯಂ ॥ 723 ॥

ಮಲ್ಲಿಕಾ ಮಾಲೆ ॥ ಕನ್ತುದರ್ಪ್ಪಹರಂ ಜಿನಂ ತನಗಾಪ್ತನಾಳ್ದನವಾರ್ಯ್ಯ ವಿ
ಕ್ರಾನ್ತನೊಳ್ಗಲಿ ವೀರಶಾನ್ತರನಮ್ಮಣಂ ಗುಣಿ ತನ್ದೆ ದಿ
ಗ್ದನ್ತಿ ವರ್ತ್ತಿತ ಕೀರ್ತಿಗಳ್ಗುರುಗಳ್ದಿವಾಕರಣನ್ದಿ ಸಿ
ದ್ಧಾನ್ತ ದೇವರೆನಲ್ಕೆ ಪಟ್ಟಣಸ್ವಾಮಿ ನೊಕ್ಕನೆ ಸನ್ನುತಂ ॥ 724 ॥

ಕಂ ॥ ಪೂಸಿ ನುಡಿವ ಚಪಳ ವಿತ್ತಿಯೊ
ಳಸದಳಮೆಸಗುವ ಪರಾಂಗನಾಸಂಗತ ಗಾ
ಡಿಸುವ ತೆವಳಿಲ್ಲದೊಳ್ವಂ
ಪಸರಿಪ ನರರಣ್ಮಂ ನೊಕ್ಕನ ಪೋಲ್ತಪರೇ ॥ 725 ॥

110) ಹುಂಚ 83, E.C. XV (R), ಕ್ರಿಶ. 1077

ಕಲ್ಯಾಣದ ಚಾಲುಕ್ಯರ ದೊರೆ ತ್ರಿಭುವನಮಲ್ಲನ (ವಿಕ್ರಮಾದಿತ್ಯ VI) ಮಹಾಮಂಡಲೇಶ್ವರ ವೀರಸಾನ್ತರದೇವನು ಹುಂಚದಲ್ಲಿ ಆಳುತ್ತಿದ್ದಾಗ ಇದ್ದ ಬೀರುಗ ಮತ್ತು ಅವನ ಮಗ ಭುಜಬಲನನ್ನು ವರ್ಣಿಸಿದೆ.

ಶಾನ್ತರ

ಕಂ ॥ ಗಜಬಜಸದಸಿಯಮೆಸೆಗಜ
ಗಜಿಸಿರೆ ರಿಪುಗಜದರದನದೊಳ್ವರಿಸುವ ಭೂ
ಭುಜಭುಜ ನಿಜಭುಜ ವಿಜಯದ
ಭುಜಬಳ ಶಾನ್ತರನ ಭುಜಬಳಂ ಪ್ರಬಳ ಬಳಂ ॥ 726 ॥

ಕಂ ॥ ಭುಜಬಳ ಶಾನ್ತರನಿನ್ತೀ
ಭುಜ ವಿಜಯದ ಪಟಹಲಟಹಮಂ ಕೇಳಲೊಡಂ
ಗುಜುಗುಜುಗೊಳುತಿರಲಲ್ಲದೆ
ಗಜಬಜಿಸುವ ಮಲೆಪರಳವೆ ನಿನ್ನೊಳ್ಜವನೊಳ್ ॥ 727 ॥

ಕಂ ॥ ತೊಡರ್ದರ್ತ್ಥಿಗೆ ಕುಡು ನೀನೆ
ನ್ದಡೆ ವೇಡಿರಲವರುಮಿನ್ದುನಾಳೆಯ್ವೆಬಾಯೆಂ
ಬೆಡಚರನೆ ಜಡಿದು ಗೊಗ್ಗಿಯ
ಕುಡುವರನಂ ಸೂಳೆಯನ್ತೆ ಕಯ್ಗೆಯ್ದಿರ್ಕ್ಕುಂ ॥ 728 ॥

111) ಹುಂಚ 81, E.C. XV (R), ಕ್ರಿಶ. 1077

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ತ್ರಿಭುವನಮಲ್ಲದೇವನ (ವಿಕ್ರಮಾದಿತ್ಯ VI) ಆಳಿಕೆಯಲ್ಲಿ ಚಟ್ಟಲದೇವಿ ಮತ್ತು ಆಕೆಯ ನಾಲ್ವರು ಸಹೋದರರು ತಾವು ನಿರ್ಮಿಸಿದ ಪಂಚಕೂಟ ಬಸದಿಗೆ ನೀಡಿದ ದತ್ತಿಯನ್ನು ಹೇಳಿದೆ.

ಕಂ ॥ ಅರ್ದ್ಧಪಥಮಿದಿರ್ಗೆವಂದು ತ
ದರ್ದ್ಧಾಸನಮೆನಿಪಲೋಹವಿಷ್ಟರದೊಳ್ ಸಂ

ವರ್ದ್ಧಿತ ಶಾಂಕರನೆನಿಪ ಧ
ನುರ್ದ್ಧರನಂ ಚಕ್ರವರ್ತ್ತಿ ನಿಲಿಸಿದನೆಸೆಯಲ್ ॥ 729 ॥

ಕುಮಾರಸೇನ

ಕಂ ॥ ದುರಿತಕುಳ ಪ್ರಧ್ವಂಸಂ
ಸ್ಮರಮಾದ್ಯತ್ಕುಂಬಿ ಕುಂಭದಳನ ಮೃಗೇಂದ್ರಂ
ವರವಾಗ್ವನಿತಾ ಕಾಂತಂ
ಧರೆಯೊಳ್‌ನೆಗರ್ದ್ದಿ ಕುಮಾರಸೇನ ದೇವಮುನೀಂದ್ರಂ ॥ 730 ॥

ಬೀರಲದೇವಿ

ಮ ವಿ ॥ ಎಲಗೇ ಚೆನ್ನನೆ ಬೀರುಗಂ ವಪುವಿನಿಂ ಭಾವೋದ್ಭವಂ ತಕ್ಕನೆಂ
ತೆಲಗೇ ಬೀರನೆ ಬೀರುಗಂ ಬಿರುದಿನಿಂ ಭೀಮೋಪಮಂ ಬಾಪ್ಪುಮ
ತ್ತೆಲಗೇ ದಾನಿಯ ಬೀರುಗಂ ಪಿರಿಯನಾಕರ್ನ್ನಾಖ್ಯನಿಂದಕ್ಕುಮೆಂ
ತೆಲಗೇ ಬೀರಲದೇವಿ ನೋಂತಳಮನೊಳ್ ಕೂಡಿರ್ಪ ಸೌಭಾಗ್ಯಮಂ
॥ 731 ॥

112) ಹುಂಚ 80, E.C. XV (R), ಕ್ರಿ.ಶ. 1077

ಕಲ್ಯಾಣದ ಚಾಲುಕ್ಯರ ದೊರೆ ತ್ರಿಭುವನಮಲ್ಲನ (ವಿಕ್ರಮಾದಿತ್ಯ VI) ಮತ್ತು ಸಾನ್ತರ ದೊರೆ ನನ್ನಿಸಾಂತರನ ಆಳಿಕೆಯಲ್ಲಿ ರಕ್ಕಸಗಂಗನ ಮಗಳಾದ ಚಟ್ಟಲದೇವಿ ಎಂಬುವವಳು ಹುಂಚದ ಪಂಚಬಸದಿಯನ್ನು ಮಾಡಿಸಿ ದತ್ತಿ ನೀಡಿದುದನ್ನು ಇದರಲ್ಲಿ ಹೇಳಿದೆ.

ನನ್ನಿಸಾಂತರ (ಗೋವಿಂದರ)

ಚಂ ಮಾ ॥ ಚರಣವಿನಮ್ರನಾಗೆ ತೊದಳೇಂ ಬಿದಿ ಮುನ್ನೆ ಲಲಾಟಪಟ್ಟದೊಳ್
ಬರೆದ ದುರಕ್ಷರಾವಳಿಗಳಂ ತೊಳೆದಪ್ಪುವು ತಾಮೆ ನಿನ್ನ ಸ
ಚ್ಚರಣರಜಂಗಳೆಂದೊಡುಟಿದರ್ ನಿನಗಾರ್ ದೊರೆ ದೇವ ಮಂಡಳೇ
ಶ್ವರಕಳಭೈಕಕೇಸರಿ ನರೇಂದ್ರಶಿಖಾಮಣಿ ನನ್ನಿಸಾಂತರಾ ॥ 732 ॥

ಮ ಸ್ರ ॥
ಪ್ರತಿಬಿಂಬಂ ರೂಪಿನೊಳ್ ಪೋಲ್ಕೆಮ ಗುಣದೊಳದಾರ್ ಪೋಲ್ತಪರ್ ನಿನ್ನನೆಂಬೀ
ಸ್ತುತಿಯಂ ನಿಶ್ಚೈಸಿ ಗೋವಿಂದರ ಬೆಸೆಯದಿರೆಂತೆಂಬ ನಿನ್ನಂತೆ ನೋಡು
ನ್ನತಿಯಾಳ್ ಹೇಮಾಂಚಳಂ ಕ್ಷಾಂತಿಯೊಳವನಿತಳಂ ಮೇರೆಯೊಳ್ ವಾರ್ಧಿ ಶೌಚ
ವ್ರತದೊಳ್ ಸಿಂಧೂದ್ಭವಂ ಸತ್ಯದೊಳಿನತನಯಂ ಶೌರ್ಯದೊಳ್ ಭೀಮಸೇನಂ
॥ 733 ॥

ಬೀರದೇವ

ಮ ಸ್ರ ॥ ವರಲಕ್ಷ್ಮೀ ಲಕ್ಷ್ಮಣಂ ಶಾನ್ತರ ಕುಳತಿಳಕಂ ಸೂರ್ಯ್ಯತೇಜ ಪ್ರಭಾವಂ
ಪರನಾರೀ ದೂರನಾವರ್ಜ್ಜಿತಗುಣನಿಳಯಂ ವೈರಿಕಾಳಾನಳಂ ಮಂ
ದರ ಧೈರ್ಯ್ಯಂ ನೀತಿಪಾರಾಯಣನಮಳಲಸತ್ಕೀರ್ತ್ತಿ ಮೂರ್ತ್ತೀವಿತಾನಂ
ಧರೆಯಂ ಕಾಯಲ್ಸಮರ್ತ್ಥಂ ಸುರಪತಿವಿಭವಂ ಪುಟ್ಟಿದಂ ಬೀರದೇವಂ
॥ 734 ॥

ಕಂ ॥ ಧುರದೊಳಸಿಲತೆಯನುರ್ಚಿದೊ
ಡರಿನೃಪಯುವತಿಯರ ಮುಗುಳ ಕಂಕಣದಾ ಕೀಲ್
ತರತರದಿನುರ್ಚಿದುವು ನಿಜ
ಕರಖಡ್ಗಮವರ್ಕೆ ಕೀಲೆ ಸಾಂತರನೃಪತೀ ॥ 735 ॥

ಕಂ ॥ ಭುಜಬಳಸಾಂತರನೃಪತಿಯ
ಭುಜಬಳದಳವುಂ ಪ್ರತಾಪಮುಂ ಶೂರತೆಯುಂ
ವಿಜಿಗೀಷುವೃತ್ತಿಯುಂ ನಿಜ
ವಿಜಯಮುಮೀಲೋಕದೊಳಗೆ ಭುಂಭುಕಮೆನಿಕುಂ ॥ 736 ॥

ಮಾಧವ

ಕಂ ॥ ಮಾಧವನ ಜಯಶ್ರೀರಾ
ಮಾಧವನ ಭುಜಾವಲೇಪಮಂ ಬಣ್ಣಿಸಲಾ
ಮಾಧವನುಂ ತ್ರಿಭುವನದೊಳ್
ಮಾಧವನುಂ ನೆಜೆಯರುಟಿದವರ್ ನೆಜೆದಪರೇ ॥ 737 ॥

ಕಂ ॥ ಅವಿನೀತರಿಪುಬಳಾಟವಿ
ನೀತರಮೋಘಮೆನಿಸಿಂ ವಿಸ್ಮಯಮುಗ್ರಾಹವದೊಳ್
ವಿನೀತರೆನಿಸಿದರವನಿಯೊಳೆ
ವಿನೀತದುರ್ ವಿನೀತ ನರೇಂದ್ರರ್ ನರೇಂದ್ರರ್ ॥ 738 ॥

ದುರ್ವಿನೀತ

ಚಂ ಮಾ ॥ ವಸುಧೆಗೆ ರಾವಣ ಪ್ರತಿಮನೆಂಬ ನೆಗರ್ತೆಯ ಕಾಡುವೆಟ್ಟಿಯಂ
ವಿಸಸನ ರಂಗದೊಳ್ ಪಿಡಿದು ತನ್ನ ತನುಜೆಯ ಪುತ್ರನಂ ಪ್ರತಿ
ಷ್ಠಿಸಿ ಜಯಸಿಂಹ ವಲ್ಲಭನನನ್ವಯ ರಾಜ್ಯದೊಳುರ್ಬ್ಬಿಯೊಳ್ ವಿಗುರ್
ಬಿಸಿದಬಿದೇನಗುರ್ ಬೋ ನಿಜದೊರ್ ಬಳದುನ್ನತಿ ದುರ್ವಿನೀತನಾ ॥ 739 ॥

ಶ್ರೀವಿಕ್ರಮ

ಕಂ ॥ ತಾವಿಯ ತಡಿವರಗಂ ಧರ
ಣೀವಳಯಮನಾಳ್ದು ಬಾಹಾ ವಿಕ್ರಮದಿಂ
ಶ್ರೀವಿಕ್ರಮ ಭೂವಿಕ್ರಮ
ಭೂವಲ್ಲಭ ರಥಿಕಕೀರ್ತಿವಲ್ಲಭರಾದರ್ ॥ 740 ॥

ಉ ಮಾ ॥ ಶಾತ್ರವಸಂಕುಳ ಪ್ರಳಯ ಭೈರವನೆಂಬ ಯಶಂಪೊದಳ್ದಲೋ
ಕತ್ರಯ ಮಧ್ಯದೊಳ್ವರೆಯೆ ಬೀರದ ಕಂಚಿಯ ಕಾಡುವೆಟ್ಟಿಯಂ
ಚಿತ್ರವಿದಂ ಚಿಳದೆಯೊಳಗಸುಗೊಳೆ ಕಾದಿ ತದೀಯ ಪಲ್ಲವ
ಬ್ಧತ್ರಮನಿಟ್ಟು ಕೊಂಡು ಮೆಱೆದಂ ಭುಜಗರ್ಬ್ಬಮನಾಮಹೀಭುಜಂ ॥ 741 ॥

ಪೆರ್ಮಾನಡಿ

ಕಂ ॥ ಆ ನೃಪ ಚೂಡಾಮಣಿ ಕಾಂ
ಚೀನಾಥನ ಕೈಯೊಳಿರ್ದ್ದ ಕೊಂಡಂ ಗಡ ಪೆ
ರ್ಮ್ಮಾನಡಿಯೆಂಬೀಪೆಸರುಮ
ನೇನೆಂಬುದೊ ಗಂಗನೃಪರ ಶೌರ್ಯ್ಯೋನ್ನತಿಯಂ ॥ 742 ॥

ಶಿವಮಾರ

ಕಂ ॥ ಏವೇಳ್ವುದೋ ಶಿವಮಾರಮ
ಹೀವಳಯಾಧಿಪನ ಸುಭಗಕವಿತಾಗುಣಮಂ
ಭೂವಳಯದೊಳ್ಗಜಾಷ್ಟಕ
ಮೋವನಿಗೆಯ್ದೆಮೊನಕೆವಾಡುಮಾದುದೇ ಪೇಳ್ಗುಂ ॥ 743 ॥

ರಾಜಮಲ್ಲ

ಉ ಮಾ ॥ ತಾನಿರದಂದು ಕೊಂದಪುದು ಮಣ್ಡಲಮಂ ಪೆಱಿರೊಳ್ಸಮಾನಮೆಂ
ಬೀನುಡಿ ವೇಡ ಕೊಳ್ಕೊಡೆಗೆ ಬಲ್ಲಹನಾತನ ಸಂಚಿವಾರದು
ದ್ದಾನಿಗೆ ರಾಯನಾಪೆಡೆಗೆ ಚೋಳನಿವಂ ದೊರೆಯೆನ್ದೊಡಿನ್ನಭೂ
ತೋನಭವಿಷ್ಯಮೆನ್ನದವರಾರಳವಂ ಜಯದುತ್ತರಂಗನಂ ॥ 744 ॥

ಮಾರಸಿಂಹ

ಕಂ ॥ ಆ ಮರುಳದೇವನನುಜಂ
ಭೀಮಾನುಜ ಸನ್ನಿಭ ಪರಾಕ್ರಮ ಸಿಂಹಂ

ಶ್ರೀಮಾರಸಿಂಹದೇವಂ
ಹೇಮಾದ್ರಿ ಶಿರೋವಿಲಗ್ನ ಕೀರ್ತಿಪತಾಕಂ ॥ 745 ॥

ರಾಜಮಲ್ಲ

ಕಂ ॥ ಶ್ರೀರಾಜಮಲ್ಲದೇವಂ
ಭಾರವಿಕೇಯೂರ ರಾಜಶೇಖರನಾತಂ
ಭಾರವಿ ಸಾಕ್ಷಾದ್ಬಾಣ ಮ
ಯೂರಂ ವಾಲ್ಮೀಕಿ ಕಾಳಿದಾಸ ವ್ಯಾಸಂ ॥ 746 ॥

ಕಂ ॥ ನಿರವದ್ಯ ಚರಿತನನ್ವಯ
ದುರಂಧರಂ ಸತ್ಯವಾಕ್ಯನಿರ್ಬ್ಬರಗಣ್ಡಂ
ಪರಚಕ್ರ ಕರ್ಕ್ಕಶಂ ಗ
ಣ್ಡರ ಮುಕುತಿಗಣ್ಡದಲ್ಲಳಂ ನೃಪತಿಳಕಂ ॥ 747 ॥

ಮಾರ್ತಂಡದೇವ

ಮ ಸ್ರ ॥ ವಸುಧಾಳಂ ಕಾರನಾರೋಹಕರ ಮೊಗದ ಕೈ ಬಲ್ಕಣೆಬ್ರಹ್ಮನುಗ್ರಾ
ರಿಸಮೂಹೋತ್ಸಾಹಶಕ್ತಿ ಪ್ರಳಯಕರ ಕರಾಭೀಳ ಖಳ್ಗಂ ಯಶಶ್ರೀ
ಪ್ರಸರಂ ಪ್ರಚ್ಛನ್ನವಿಗ್ಮಣ್ಡಳನಧಿಕಬಳಂ ಗಂಗನಾರಾಯಣಂ ರ
ಕ್ಕಸಗಂಗಂ ಗಂಗಚೂಡಾಮಣಿ ನೃಪತಿಳಕಂ ವೀರಮಾರ್ತ್ತಣ್ಡದೇವಂ
॥ 748 ॥

ಕಂ ॥ ತಳಿಯದಾಟುವ ಕರಿಯಂ
ಫಳಿನನೆವಿಡಿದುಗಿಯೆ ನಿಜಶಿರಂ ಪೇಚಕಮಂ
ಕಳಿದುದು ಕರಿಸಿರಮುರಮಂ
ಫಳಿಲನೇ ತಾಗಿದುದು ಕದನಕಣ್ಣೀರವನಂ ॥ 749 ॥

ಕಾಳ

ಕಂ ॥ ಆತನನುಜಂ ಜಗದ್ವಿ
ಖ್ಯಾತಂ ಕೊಮರಂಕ ಭೀಮನರುಮುಳಿದೇವಂ
ನೀತಿಜ್ಞನಧಿಕತೇಜ
ನ್ನರಾತಿಬಳಪ್ರಳಯ ಕಾಳನಾಹವಧೀರಂ ॥ 750 ॥

ಚಟ್ಟಲೆ, ಕಂಚಲೆ

ಕಂ ॥ ಸರಸತಿಯುಂ ಸಿರಿಯುಂ ದಿನ
ಕರನುಂ ಪುಟ್ಟಿರ್ದ್ದುವೆಂಬಿನಂ ಚಟ್ಟಲೆಯುಂ
ವರವಧು ಕಂಚಲೆಯುಂ ಸ
ತ್ಪುರುಷೋತ್ತಮನೆನಿಪ ರಾಜವಿದ್ಯಾಧರನುಂ ॥ 751 ॥

ರಕ್ಕಸಗಂಗ

ಕಂ ॥ ಪುಟ್ಟೆತನಗೆಂದು ರಾಜ್ಯದ
ಪಟ್ಟಂ ಕೈ ಸಾರ್ದ್ದುದೆಂದು ರಕ್ಕಸಗಂಗಂ
ನಿಟ್ಟಿಸಿ ತನ್ನರಮನೆಯೊ
ಳ್ಪಟ್ಟನೆ ತಂದಿರಿಸಿದಂ ಮಹೋತ್ಸವದಿಂದಂ ॥ 752 ॥

ತೈಲ, ಗೊಗ್ಗಿ

ಕಂ ॥ ದಶರಥನ ತನಯರನ್ದಮ
ನೆಸೆದಿರೆ ಪೋಲ್ತಿರ್ದ್ದ ತೈಲನುಂ ಗೊಗ್ಗಿಗನುಂ
ನೆಟ್ಟನರಿನೃಪರ ಗೃಹದೊ
ಳ್ಪುಟ್ಟಿದುವುತ್ಪಾತ ಭೀತಿ ಚೇತೋವಿಕಳಂ ॥ 753 ॥

ನನ್ನಿಸಾಂತರ

ಉ ಮಾ ॥ ದೇವ ಸಮುದ್ರಮುದ್ರಿತವಸುಂಧರೆಯೊಳ್ ನೃಪರಾದರೆಲ್ಲರಂ
ಭಾವಿಸಿ ಕಂಡೆನಾಂತ ರಿಪುಸಂತತಿಯಂ ನೆಲೆಗೆಟ್ಟು ಪೋಪಿನಂ
ಸೋವ ಬುಧಾಳಿಗಾರ್ತು ಪಿರಿದೀವ ಶರಣ್ಬುಗೆ ಕಾವ ಸದ್ಗುಣ
ಕ್ಕಾವನೊ ನಿನ್ನವೊಲ್ ನೆಜೆದ ಮಂಡಳಿಕಂ ಕಲಿ ನನ್ನಿಸಾಂತರಾ ॥ 754 ॥

ಮ ಸ್ರ ॥ ಪಿರಿದೆತ್ತಂ ಮೇರುಗಂ ಸಾಗರಮೆ ಜಗದೊಳಾ ಮೇರುಗಂ ಸಾಗರಕ್ಕಂ
ಧರಣೀಚಕ್ರಂ ಕರಂ ಭಾವಿಸುವೊಡೆ ಪಿರಿದಾ ಮೇರುಗಂ ಸಾಗರಕ್ಕಂ
ಧರಣೀಚಕ್ರಕ್ಕಮಾಶಾಳಿಯೆ ಕಡುವಿರಿದಾ ಮೇರುಗಂ ಸಾಗರಕ್ಕಂ
ಧರಣೀಚಕ್ರಕ್ಕಮಾಶಾಳಿಗಮೆಲೆ ಪಿರಿಯಂ ಸಾಂತರಾದಿತ್ಯದೇವಂ ॥ 755 ॥

ಕಂ ॥ ಖ್ಯಾತಿಯನೇನಂ ಪೇಳ್ವುದೊ
ಬೂತುಗ ಪೆರ್ಮ್ಮಾಡಿ ಪಡೆದ ಮಹಿಮೋನ್ನತಿಯಂ
ಭೂತಳದೊಳ್ ಶಾಂತರನುಪ
ಮಾತೀತಂ ಚಕ್ರಿಕುಡಲ್ ಪಡೆದನಮೋಘಂ ॥ 756 ॥

ಕಂ ॥ ಅರ್ದ್ಧಪಥಮಿದಿರ್ಗ್ಗೆವಂದು ತ
ದರ್ದ್ಧಾಸನಮೆನಿಪ ಲೋಹವಿಷ್ಟರದೊಳ್ ಸಂ
ವರ್ದ್ಧಿತ ಶಾನ್ತರನೆನಿಪ ಧ
ನುರ್ದ್ಧಾರನಂ ಚಕ್ರವರ್ತ್ತಿ ನಿಲಿಸಿದನೆಸೆಯಲ್ ॥ 757 ॥

ಚಟ್ಟಲದೇವಿ

ಕಂ ॥ ಶ್ರೀವಿಜಯದೇವರುಗ್ರತ
ಪೋವಿಭವರ್ಗ್ಗುರುಗಳಖಿಳಶಾಸ್ತ್ರಾಗಮಸಂ
ಭಾವಿತರೆನಿಸಲ್ ಚಟ್ಟಲ
ದೇವಿಯೆ ಕೃತಪುಣ್ಯವನ್ತೆ ವಿಶ್ವಂಭರೆಯೊಳ್ ॥ 758 ॥

ಮ ವಿ ॥ ಜನಕಂ ರಕ್ಕಸಗಂಗಭೂಮಿಪತಿ ಕಾಂಚೀನಾಥನಾತ್ಮಪ್ರಿಯಂ
ವಿನುತರ್ ಶ್ರೀ ವಿಜಯರ್ಸ್ಸುಶಿಕ್ಷಕರೆನಲ್ ವಿದ್ವಿಷ್ಟ ಭೂಪಾಳಸಂ
ಹನವಿಕ್ರಾನ್ತಯಶೋವಿಳಾಸ ಭುಜಖಳ್ಗೋಲ್ಲಾಸಿತಾಂಗೊಗ್ಗಿನ
ನ್ದನನಾಚಟ್ಟಲದೇವಿಗೆನ್ದೊಡೆಯಶಶ್ರೀಗಿನ್ತು ಮುನ್ನೋನ್ತರಾರ್ ॥ 759 ॥

ಕಂ ॥ ಕೆಱೆ ಭಾವಿ ಬಸದಿ ದೇಗುಲ
ಮಱವಂಟಿಗೆ ತೀರ್ತ್ಥ ಸತ್ರಮಾರವೆ ಮೊದಲಾ
ಗಱಿಕೆಯ ಧರ್ಮ್ಮಾಧಿಗಳಂ
ನೆಱೆಮಾಡಿಸಿ ನೋನ್ತಳ್ ಚಟ್ಟಲದೇವೀ ॥ 760 ॥

ಕಂ ॥ ಉತ್ತುಂಗ ಪ್ರಾಸಾದ ಮ
ನುತ್ತರ ಮಧುರೇಶನಪ್ಪ ಗೊಗ್ಗಿಯತಾಯ್ಲೋ
ಕೋತ್ತರಮೆನೆ ಮಾಡಿಸಿದ
ಳ್ಚಿತ್ತರದಿಂ ಪಂಚಕೂಟ ಜಿನಮಂದಿರಮಂ ॥ 761 ॥

ಕಂ ॥ ದೆಸೆಯಾಗಸಮೆಂಬೆರಡುಮ
ನಸದಳಮೆಯಿರ್ದ್ದವೆಂಬಿನಂ ಪೊಸಗೆಱೆಯುಂ
ಬಸದಿಯುಮಂ ಮಾಡಿಸಿ ತ
ನ್ನೆಸಮಂ ಶಾನ್ತರನ ತಾಯ್ ನಿಮಿಚ್ಚಿದಳೆತ್ತಂ ॥ 762 ॥

ವಾದಿರಾಜ

ಕಂ ॥ ಆದಿತ್ಯನಕೆಲದೊಳ್ ಚಂ
ದ್ರೋದಯಮೆಸೆಯದವೋಲೀಧರಾಮಣ್ಡಲದೊಳ್
ವಾದಿಗಳೆಂಬೀಟುಂಟುಕ
ವಾದಿಗಳೆಸೆದಪರೆ ವಾದಿರಾಜನ ಕೆಲದೊಳ್ ॥ 763 ॥

ಮ ಸ್ರ ॥ ಅಳವೇ ದಿಗ್ದನ್ತಿದನ್ತಂ ಬರಮೆಸೆದುದು ಸದ್ಗದ್ಯಪದ್ಯೋಕ್ತಿವಿದ್ಯಾ
ಬಲವೇ ಸರ್ವ್ವಜ್ಞ ಕಳ್ಪಂ ಬಿರುದನುಳಿವುದಿಂನನ್ಯವಾದೀನ್ದ್ರನಿಂ ಚಾ
ವಳಿ ಸಲ್ವೇಡೋ ಹೊ ಪತ್ರಂ ಗುಡದಿಕೆದಱಿಳಿರ್ಬ್ಬನ್ದಪಂ ಪೇಳ್ವೊಂಡಿನಿ
ನ್ನಳವೆಲ್ಲಂ ವಾದಿರಾಜಂ ಪರಮತಕುಭೃತಾಭೀಳವಾಗ್ವಜ್ರಪಾತಂ ॥ 764 ॥

113) ಹುಂಚ 85, E.C. XV (R), ಕ್ರಿ.ಶ. 1087

ಇದರಲ್ಲಿ ಚಟ್ಟಲದೇವಿ ಹಾಗೂ ಇತರರು ಪಂಚಕೂಟ ಬಸದಿಯನ್ನು ನಿರ್ಮಾಣ ಮಾಡಿಸಿ, ದತ್ತಿಯನ್ನು ನೀಡಿದುದನ್ನು ಹೇಳಿದೆ.

ಶಾನ್ತರ

ಕಂ ॥ ಅರಿಬಿರುದ ಭೂಭುಜರ್ಕಳ
ಬಿರುದಂ ಬೇರಿನ್ದೆ ಕಿರ್ತು ವೀರಶ್ರೀಯೊ
ಳ್ನೆರೆದದಟುಪಮಾತೀತಂ
ಧರೆಗೆನೆ ಭುಜಬಳನೆ ಶಾನ್ತರಾನ್ವಯತಿಳಕಂ ॥ 765 ॥

ಕಂ ॥ ಬಿರುದರಿಪುನೃಪರಶಿರಮಂ
ಭರದಿಂ ಸೆಣ್ಡಾಡಿ ವೀರಲಕ್ಷ್ಮಿಯನೊಲಿಸ
ಲ್ನರಪತಿಗಳಾರೊ ಧುರದೊಳ್
ನಿರುತಂ ನಿನ್ನನ್ತೆ ನನ್ನಿಶಾನ್ತರ ನೃಪತೀ ॥ 766 ॥

ಕಂ ॥ ಒಡ್ಡಿದರಿನರಪರೊಡ್ಡಂ
ಕಡ್ಡಿಕಡಿದಣ್ಣನಂಕಕಾಱವೆಸರ್ಕ್ಕೆ
ಜೊಡ್ಡುಗನೊಳೆಸೆಯೆ ಜಗದೊಳ
ಗೊಡ್ಡುಗನರಸಂಕಕಾಱವೆಸರಂ ತಳೆದಂ ॥ 767 ॥

ಬಮ್ಮಗ

ಕಂ ॥ ಕುಱಿದಱಿದಱಿದಂ ಪಗೆಯಂ
ಬಱಿಕೆಯ ಕಾನನಮನದಟರದಟಮುಱಿದಂ
ನೆಱೆದದಟಂ ಬಮ್ಮಗನೆಂ
ಬಱಿ ತಳ ಕಣಿ ಬಿರುದ ಕೊಮರ ಚೂಡಾರತ್ನಂ ॥ 768 ॥

ಚಟ್ಟಲದೇವಿ

ಉ ಮಾ ॥ ಬೇರಿನಹೀನ್ದ್ರನಂ ನಡುವಿನಾಗಸಮಂ ಕುಡಿಯಿಂ ದಿವಾಗ್ರಮಂ
ತಾರನಗಂಗಳಂ ಕವಲಿನೊಳ್ಳೆಲೆಯಿಂ ದೆಸೆಯಂ ಮುಗುಳ್ಗಳಿಂ
ತಾರಕೆಯಂ ಸಿತಾಬ್ದಮನೆ ಪುಷ್ಪದೆ ಪೊಲ್ವುದು ಪಣ್ಣಿನಿನ್ದುವಂ
ನೀರೆಱೆದನ್ತೆ ದುಗ್ದಮನೆ ಚಟ್ಟಲದೇವಿಯ ಸದ್ಯಶೋದ್ರುಮಂ ॥ 769 ॥

ಒಡ್ಡುಗ

ಚಂ ಮಾ ॥ ಒದೆದು ತಟತ್ತಟೆಂಬ ಪದತಾಟನೆಯಿನ್ದೆ ದಿಶಾಗಜಾದಿಗ
ಳ್ಮದಮುಡುಗಿಟ್ಟುವಂಜಿ ಪುಗುವಿರ್ಪೆಡೆಗಾಣನೆ ನಾಗರಾಜನುಂ
ಕದಳಡಗಂಪದಿನ್ದಮೆಳೆ ಕಂಪಿಸೆ ಕೂಡೆ ಕಲಂಕೆ ಸಾಗರಂ
ಬಿದಿರ್ದಲಗಿನ್ದೆ ತಾರಕಿ ಕಳಲ್ತರಲೊಡ್ಡುಗನಾರ್ದ್ದಡೋಡುಗುಂ ॥ 770 ॥

ಚಂ ಮಾ ॥ ಅದಿರದೆ ಬರ್ಪ್ಪ ಚಪ್ಪರಿಪ ಕಪ್ಪರಿಪಾರ್ದಲಗೊತ್ತಿಶಾಸ್ತ್ರಮಂ
ಬಿದಿರ್ದು ಮರಲ್ಮರಲ್ಲೆನುತೆ ಕುತ್ತುವ ಕುತ್ತಿದೊಡಾನ್ತು ಕಟ್ಟಿದಾ
ಪದದೊಳೆ ಸುತ್ತಿ ಮುತ್ತಿದವೊಲೇಱಿನೆ ತೋಱುವಗೇಣ ಬಿನ್ನಣ
ಕ್ಕೊದವುದ ಬಿನ್ನಣಂ ನೆಗಳಲೊಡ್ಡುಗ ನೀ ನರಸಂಕಗಾಳನ್ಯೆ ॥ 771 ॥

ಚಂ ಮಾ ॥ ಪರಿದುದರಾಗ್ನಿಯಂ ಮಱೆದು ತಿನ್ದ ಪೆಣಂಗಳಿನಾದ ಜೀರ್ಣ್ಣದಿಂ
ಮರುಳ ಬಳಾಳಿ ವೈದ್ಯ ಮರುಳಂ ಬೆಸಗೊಣ್ಡಡೆ ದನ್ತಿ ಮದ್ದೆನ
ಲ್ಕರಿಯನೆ ನುಂಗಿ ಸೂಡುಕೊಳೆ ವೈದ್ಯ ಮರುಳ್ಗೆ ವೀರಲಕ್ಷ್ಮನೋ
ಡರಿಹರ ನಿನ್ನಿನಾಯ್ತಿದೆನೆ ವಿಕ್ರಮ ಶಾನ್ತರನಾದನೊಡ್ಡುಗಂ ॥ 772 ॥

114) ಹುಂಚ 82, E.C. XV (R), ಕ್ರಿಶ. 1147

ಕಲ್ಯಾಣದ ಚಾಲುಕ್ಯರ ದೊರೆ ಜಗದೇಕಮಲ್ಲನ ಆಳಿಕೆಯಲ್ಲಿ, ಸಾನ್ತರ ದೊರೆ ವಿಕ್ರಮಸಾನ್ತರನು ಅರಸನಾಗಿದ್ದ. ವಿಕ್ರಮಸಾನ್ತರ, ಪಂಪಾದೇವಿ ಮತ್ತು ಮಗಳು ಬಾಚಲದೇವಿ ಸೇರಿ, ಪಂಚಕೂಟ ಬಸದಿಯ ಉತ್ತರ ದಿಕ್ಕಿನ ಪಟ್ಟಸಾಲೆಯನ್ನು ಮಾಡಿಸಿ, ದತ್ತಿ ನೀಡಿದುದನ್ನು ಇದರಲ್ಲಿ ಹೇಳಿದೆ.

ಬೀರಳಲದೇವಿ

ಕಂ ॥ ಆತನ ಹೃದಯಾರ್ದ್ಧಾಂಗದೊ
ಳಾತತತನುಲತಿಕೆಯೊಂದೆ ಸಂದಿಸೆ ಮಿಕ್ಕ
ಳ್ಮಾತೇನೋ ಸಿರಿಯುಮಂ ಗಿರಿ
ಜಾತೆಯುಮಂ ಸತಿಯರೊಳಗೆ ಬೀರಳಲದೇವೀ ॥ 773 ॥

ಶಾನ್ತರ

ಕಂ ॥ ನಿಜಭುಜಬಲದಿಂದರಿಭೂ
ಭುಜರಂಕೊಂಡೊತ್ತಿಕೊಂಡು ದೇಶಮನಂ ತಾ
ವಿಜಿಗೀಷು ತೈಲಭೂಪಂ
ಭುಜಬಳ ಶಾನ್ತರನೆನಿಪ್ಪ ಪೆಸರಂ ಪಡೆದಂ ॥ 774 ॥

ಬಮ್ಮದೇವಸಾಂತರ

ಕಂ ॥ ಪರನರಪ ಶಿರಃಕಂಜೋ
ತ್ಕರಕರಿ ಕಮಳಾಪಯೋಧರದ್ವಯಹಾರಂ
ಸ್ಮರಮೂರ್ತಿ ಸಕಳದಿಙ್ಮುಖ
ಪರಿಚುಂಬಿತಕೀರ್ತಿ ಬಮ್ಮದೇವಕುಮಾರಂ ॥ 775 ॥

ಚಟ್ಟಲದೇವಿ

ಮ ವಿ ॥ ಜನಕಂ ರಕ್ಕಸಗಂಗ ಭೂಮಿಪತಿ ಕಾಂಚೀನಾಥನಾತ್ಮ ಪ್ರಿಯಂ
ವಿನುತರ್ ಶ್ರೀವಿಜಯರ್ ಸುನಿಕ್ಷಕರೆನಲ್ವಿದ್ವಿಷ್ಟ ಭೂಪಾಳಸಂ
ಹನವಿಕ್ರಾಂತ ಯಶೋವಿಳಾಸ ಭುಜಬಳ್ಗೋಲ್ಲಾಸಿತಾಂ ಗೊಗ್ಗಿನಂ
ದನನಾ ಚಟ್ಟಲದೇವಿಗೆನ್ನೊಡೆ ಯಶಃಶ್ರೀಗಿನ್ತು ಮುಂ ನೋಂತರಾರ್ ॥ 776 ॥

ತೈಲಸಾಂತರ

ಕಂ ॥ ಪುಟ್ಟಿದನಿನಂಗೆ ತೇಜಂ
ದಿಟ್ಟಿ ಮೊಗಕ್ಕಮರ್ದು ಚಂದ್ರಮಂಗೆಟ್ಟಿರದಿಂ
ಪುಟ್ಟುವವೊಲಖಿಳವೈರಿಘ
ರಟ್ಟಂ ಶರದಿಂದುಕೀರ್ತಿ ತೈಲನೃಪಾಲಂ ॥ 777 ॥

ಚಂ ಮಾ ॥ ನಳನೆ ವಿನೋದಿ ಧರ್ಮಜನೆ ಧಾರ್ಮಿಕನಬ್ಧಿಯೆ ರತ್ನದಾಗರಂ
ಕುಳಿಶಮೆ ಶಸ್ತ್ರಮರ್ಜುನನೆ ಧನ್ವಿ ಸುರೇಂದ್ರನೆ ಭೋಗಿ ಮಂದರಾ

ಚಳಮೆ ಗಿರೀಂದ್ರಮಪ್ರತಿಮರಾಯರ್ಝುಳಪ್ಪಣನೆ ಚಕ್ರಿ ತೈಲಮಮಂ
ಡಳಿಕನೆ ದಾನಿಯೆಂದು ಮುಡಿಗಿಕ್ಕಿದೆನಾರ್ಪವರೆತ್ತಿಕೊಳ್ಳಿರೇ ॥ 778 ॥

ಪಂಪಾದೇವಿ, ಶ್ರೀವಲ್ಲಭ

ಶಾ ವಿ ॥ ಸಂಪನ್ನೋತ್ಸವ ಭಾವಮಂ ತಳೆದು ಲೀಲಾಯಾವನಶ್ರೀಯನಾಂ
ತಿಂಪಿಂದಾ ಮಿಥುನಂ ಮನೋರಥಮನಾಂತಿರ್ಪನ್ನೆಗಂ ಪುಟ್ಟಿದ
ಪ್ಪಂಪಾದೇವಿಯುಮುಗ್ರ ವಂಶತಿಳಕಂ ಶ್ರೀ ವಲ್ಲಭೋರ್ವ್ವೀಶನುಂ
ಪೆಂಪಂ ಪುಟ್ಟುವವೋಲ್ ಸುಧಾರ್ಣ್ಣವದೊಳಾಶ್ರೀಯುಂ ಸುರಕ್ಷ್ಮಾಜಮುಂ
॥ 779 ॥

ಶ್ರೀವಲ್ಲಭಸಾಂತರ

ಮ ವಿ ॥ ಪರಭೂಪಾಳಸಮುದ್ರದೊಳ್ ನಿಜಕರಪ್ರೋತ್ಖಾತನಿಸ್ತ್ರಿಂಶಮಂ
ದರಮಂ ಸಂಧಿಸಿ ವಿಕ್ರಮದ್ಭುಜಫಣೀಂದ್ರಾವೇಷ್ಟಿತಪ್ರಾಂತಮಂ
ಭರದಿಂದಂ ಕಡೆದುಗ್ರವಂಶತಿಳಕಂ ಶ್ರೀಕಾಂತೆಯಂ ತನ್ನ ಪೇ
ರುರದೊಳ್ ತಾಳ್ದೆ ಬುಧಾಳಿಯೇಂ ಪೊಗಟದೋ ಶ್ರೀವಲ್ಲಭಾಖ್ಯಾನಮಂ
॥ 780 ॥

ಮ ಸ್ರ ॥ ಧರೆಯೆಲ್ಲಂ ಚಿತ್ರ ಚೈತ್ಯಾಲಯ ನವರಚನಾಚೂಳಕಂ ದಿಕ್ಕರೀದ್ರೋ
ತ್ಕರ ಕರ್ಣ್ಣಶ್ರೇಣಿಯೆಲ್ಲಂ ಜಿನಸವನಿನದತ್ತೂರ್ಯ್ಯಶೋತ್ತಾಳ ತಾಳಂ
ಸ್ಫುರಿತೋದ್ಯದ್ವ್ಯೋಮಮೆಲ್ಲಂ ಪರಮಜಿನಪತೀಜ್ಯಾಧ್ವಜಂ ತಾನೆನಲ್
ವರಪಂಪಾದೇವಿಯೆತ್ತಂ ಬೆಳಗುವಳರ್ಹಚ್ಛಾಸನಶ್ರೀಯ ಪೆಂಪಂ ॥ 781 ॥

ಚಂ ಮಾ ॥ ವಿನುತ ಮಹಾಪುರಾಣಂ ಜಿನನಾಥ ಕಥೋಕ್ತಿಯೆ ಕರ್ಣ್ಣ ಭೂಷಣಂ
ಜಿನಮುನಿಗಳ್ಗೆ ಮಾಡುವ ಚತುರ್ವ್ವಿಧ ದಾನಮೆ ಹಸ್ತ ಕಂಕಣಂ
ಜಿನಪತಿಭಕ್ತಿ ಸೂಕ್ತಿ ನುತಿಮಾಲೆಯೆ ಬಂಧುರ ಕಂಠಮಂಡನಂ
ತನಗೆನೆ ತೈಲಭೂಪ ಸುತೆ ಮೆಚ್ಚುವಳೇ ತನುಭಾರಭೂಷೆಯಂ ॥ 782 ॥

ಉ ಮಾ ॥ ವಿಕ್ರಮಗರ್ವಮಂ ತಳೆದು ತಾಗಿದ ವೈರಿನೃಪಾಳಜಾಳದೋ
ಶ್ಚಕ್ರದೊಳಿರ್ದ ವಿಕ್ರಮವಧೂಟಿಯನಿಟ್ಟುಳಿಗೊಂಡು ಬಲ್ಪಿನಿಂ
ವಿಕ್ರಮವಜ್ರವೇದಿಭುಜಮಂಡಪದೊಳ್ ತಳೆದೊಲ್ದು ತಾಳ್ದಿದಂ
ವಿಕ್ರಮಶಾಲಿಗಳ್ ಪೊಗಟೆ ವಿಕ್ರಮಸಾಂತರನೆಂಬ ನಾಮಮಂ ॥ 783 ॥

ಕಂ ॥ ಕತ್ತುರಿಯ ಬೊಟ್ಟೊ ಮೇಣಿದು
ಪುತ್ತಳಿಗೆಯೊ ನೀಲಮಣಿಯ ತೋಳ್ಗಂಬದೊಳೇಂ

ತೆತ್ತಿಸಿದುದೆನಿಸಿ ಧರೆಯಂ
ಪೊತ್ತುದು ಭುಜವಜ್ರಕೋಟಿ ಸಿರಿವಲ್ಲಭನಾ ॥ 784 ॥

ಹುಂಚ

ಕಂ ॥ ಕುನ್ತಳ ದೇಶದೊಳೊಪ್ಪುವ
ಶಾಂತಳಿಗೆಯ ನಡುವೆನಿಪ್ಪ ಪೊಂಬುರ್ಚ್ಚಮಿಳಾ
ಕಾಂತೆಯ ಪೆಱೆನೊಸಲೆನಿಸೆ ನಿ
ರನ್ತರಮೆಸೆವೊಂದು ತಿಳಕಮುರ್ವ್ವೀತಿಳಕಂ ॥ 785 ॥

115) ಹಾಲುಗುಡ್ಡೆ 78, E.C. XV (R), ಕ್ರಿ.ಶ. 1162

ಈ ವೀರಗಲ್ಲು ಶಾಸನದಲ್ಲಿ ಶಾಂತರ ದೊರೆ ತೈಲಪದೇವನ ಆಳಿಕೆಯಲ್ಲಿ, ತಳಪ್ರಹಾರಿ ನಾಯಕನ ಮಗ ಗೊಗ್ಗಿನಾಯಕ ಎಂಬುವವನು ಪಾಂಡ್ಯ ದೊರೆಯ ವಿರುದ್ಧ ನಡೆದ ಹೋರಾಟದಲ್ಲಿ ಮಡಿದುದನ್ನು ಹೇಳಿದೆ.

ಗೊಗ್ಗಿ

ಕಂ ॥ ರೂಪಿನೊಳೆ ಕಾಮ ಸನ್ನಿಭ
ಕೂರ್ಪಿನೊಳಾ ನರ ತನೂಜನಭಿಮನ್ಯುವೆ ತಾಂ
ಬೇಟ್ಪ ಜನಕ್ಕೀವೆಡೆಯೊಳ್
ನೋೞ್ಪೊಡೆ ಕಲಿ ಗೊಗ್ಗಿ ಕಲ್ಪವೃಕ್ಷಂ ಜಗದೊಳ್ ॥ 786 ॥

ಚಂ ಮಾ ॥ ಅಣಿಯರಮೊಡ್ಡಿದಡ್ಡಣದ ವೀರರನಾಂತಿಸುತಿರ್ಪ ಬಿಲ್ಲ ಬ
ಲ್ಲಣಿಯ ತುರಂಗ ಸಾಧನಮನಾಂತಿಱಿವಲ್ಲಿ ಮಹಾ ಭಯಂಕರಂ
ನೆಣಮಯ ಖಂಡದಿಂದೆ ನೊರೆ ನೆತ್ತರ ಕಾಲ್ಪುರಮಂದು ನೋೞ್ಪೊಡೇ
ನಣಕಮೊ ಗೊಗ್ಗಿಯಾಂತಿಱಿದ ವಿಕ್ರಮಮಾಹವ ರಂಗಭೂಮಿಯೊಳ್
॥ 787 ॥

ಚಂ ಮಾ ॥ ಕಲಹದೊಳಾಂತ ವೀರ ಚತುರಂಗ ಬಲಂಗಳನಾಂತು ಗೊಗ್ಗಿತೋ
ಳ್ವಾಳದಟಿಂದೆ ತೂಳ್ದಿಱಿಯೆ ಬಿದ್ದರಿಸೇನೆಯ ಲೋಹಿತಾಂಬುವಿಂ
ಪಲವು ಸಿರಂಗಳ x x x x ರಲ್ದ ವೊಲೊಪ್ಪಿರೆ ವೀರರಟ್ಟೆಗಳ್
ತೊಲತೊಲಗೆಂದು ತಳ್ತಿಱಿವ ಸಂಭ್ರಮ ಸಂಗರ ರಂಗಭೂಮಿಯೊಳ್
॥ 788 ॥

ಕಂ ॥ ಸಂಗರದೊಳಿಱಿದ ವೀರಮೆ
ಶೃಂಗಾರಮನೆಕ್ಕೆವೆತ್ತ ಗೊಗ್ಗಿಯ ತಮ್ಮು

ತ್ಸಂಗದೊಳಿಟ್ಟುಯ್ದು ನಿಳಿಂ
ಪಾಂಗನೆಯರ್ x x x ಸಾರ್ದರಮರಾವತಿಯಂ ॥ 789 ॥

116) ಹುಂಚ 90, E.C. XV (R), ಕ್ರಿಶ. 1257

ಇದರಲ್ಲಿ ಸನ್ಯಸನ ವಿಧಿಯಿಂದ ಮರಣ ಹೊಂದಿದ ಪುಷ್ಪಸೇನದೇವ ಹಾಗೂ ಅಕಲಂಕದೇವರನ್ನು ಹೇಳಿದೆ.

ಪುಷ್ಪಸೇನ

ಕಂ ॥ ಇಲ್ಲೆಂಬನೆ ಕುಡುವವಸರ
ವಲ್ಲೆಂಬರೆ ಮುಂನಿನಂದವಲ್ಲದು ಕಾಲಂ
ಹೊಲ್ಲೆಂಬರೆ ಬೇಳ್ಪವಸರ
ನಿಲ್ಲೆಂಬರೆ ಪುಟ್ಪಿಸೇನ ಯತಿಪತಿ ಧರೆಯೊಳ್ ॥ 790 ॥

117) ಮಾಸೂರುಗುಡ್ಡೆ ಕೊಪ್ಪ 47, E.C. XV (R), ಕ್ರಿಶ. 1290

ಇದು ಪೊಟ್ಟಿಪೊಂಬುರ್ಚಪುರದ ದೊರೆ, ಕೋಟೆ ಸೋಮೆಯನಾಯಕನ ಆಳಿಕೆಯಲ್ಲಿ ಕಾಲದ್ದು. ಈ ವೀರಗಲ್ಲು ಶಾಸನದಲ್ಲಿ ಮಾಸೂರಿನ ಜಕ್ಕೆಯನ ಮಗ ಬಮ್ಮೆಯ ನಾಯಕನು ಶತ್ರುಗಳ ವಿರುದ್ಧ ಹೋರಾಡಿ ಮರಣಿಸಿದ್ದನ್ನು ಹೇಳಿದೆ.

ಕೋಟೆ ಸೋಮೆಯನಾಯಕ

ಕಂ ॥ ಪಟ್ಟಕ್ಕತಿ ರಥಮಲ್ಲಂ
ಕಟ್ಟುಗ್ರದ ಮಂಡಳೀಕರೆಲ್ಲಂ ಚಲ್ಲಂ
ದುಷ್ಟರ ಶಿಕ್ಷಿಸ ಬಲ್ಲಂ
ಕಟ್ಟುಗ್ರದ ಕೋಟಿಸೊಯ್ಯ ಸಾಧಿಸಿಕೊಲ್ವಂ ॥ 791 ॥

ಕಂ ॥ ಸರ್ವ್ವರಸ ಸಹಿತ ಸದೆದಂ
ಮೊರ್ವ್ವಂಬ್ರಂಹ್ಮಾಂಡ ವೊಡೆಯೆ ಮಸಗಿನಳಿದಂ
ಗರ್ವ್ವದ ಬಿಯಮನ ಬಂಕಿಯ
ಸರ್ವ್ವಸ್ವವನೆಳೆದು ಸೋಯ ಕೊಂಡಪೆನೆಂದಂ ॥ 792 ॥

ಬಮ್ಮೆಯ ನಾಯಕ

ಕಂ ॥ ಕರಸಿದ ಬಂಮ್ಮನ ಸೊಯ್ಯಂ
ಪರೆಯಾಳದ ವೀಳೆಯವಂ ಕೊಡುತಿಂತೆಂದಂ
ಕರಕಮಳಂಗಳ ತಾಳ್ದಲ್
ಸರಭಾವತವಗಿ x x x ದುರ್ಗ್ಗವಂ ಗೆಲುಗೆಂದಂ ॥ 793 ॥

ಕಂ ॥ ವುಟ್ಟನ್ ಪೊಂಬಟ್ಟೆಗಳಂ
ಕಟ್ಟಿದನೊಲ್ಪಟ್ಟದಾಮಸಿರ ಪಟ್ಟಿಗಳಂ
x ಟ್ಟಣ ಹರಿಗೆಗೂಳಿಯ
ವೊಟ್ಟಯ್ಯುತ ಸುರಭದತ್ತ ಕಟ್ಟುಗ್ರದೊಳಂ ॥ 794 ॥

ಕಂ ॥ ತಳ್ತಿಱೆದೆಡೆಗೊಡದೆ ವುಯ
ಲುಳ್ಕಿತ್ತಾಸುಯಪಡೆಯ ಬೆಂನಂದೊಳೆಯಲ್
ಅಳ್ಕದಿಱೆದಟ್ಟೆ ವೇಡಲ್
ಬಳ್ಳಿತ್ತಾಪಿಡಿದ ಕಯ್ದು ಕಱಿಂದುದಿರಲುಂ ॥ 795 ॥

ಕಂ ॥ ಕುತ್ತಿದ ಕಾಲಾಳ್ಕುದುರೆಯ
ಕೊತ್ತಿಸಿಕೊಂಡೊತ್ತಿದವುಡ ಕಚ್ಚಿದ ನಗುತಂ
ಅತ್ತಿಯ ಮರನಂ ಮಲಗಲ್
ಅತ್ತಲ್ ಬಿಡಿದುಯ್ದರಚ್ಚಕಂನೆಯರಾಗಳ್ ॥ 796 ॥

118) ಕೋಟೆ ಗ್ರಾಮ 11, E.C. XV (R), ಕ್ರಿ.ಶ. 1296

ಈ ವೀರಗಲ್ಲು ಶಾಸನದಲ್ಲಿ ಬೇಲ ಎಂಬ ವೀರನು ದೇವರಸನ ಪರವಾಗಿ, ಮಾಯಿದೇವನ ಎದುರಿಗೆ ಹೋರಾಡಿ ಮರಣಿಸಿದ್ದನ್ನು ಹೇಳಿದೆ.

ಕಂ ॥ ಅರಿದ ತಲೆ ಹೊರಳ್ದ ಮುಂಡಂ
ಕರುಳ್ಸುತ್ತಿದ್ದ ಕಾಲತೊಡರು ಹರಿವುತ ರಕ್ತಂ
ಮರಳ್ದಾಂತ ನಿಲುವು ಸುಭಟರ
ಮರುಳ್ಮಸಗಿದ ಜವನ ತೆಱದೆ ಬೇಲನಾಂತಿಱಿದಂ ॥ 797 ॥

119) ಆವರಗ 107, E.C. XV (R), ಕ್ರಿ.ಶ. 1302

ಈ ವೀರಗಲ್ಲು ಶಾಸನದಲ್ಲಿ ಬೀರಮ ಎಂಬ ವೀರನು ಸೋದಲದೇವಿ ಮತ್ತು ವಿಟಲನಾಯ್ಕರ ನಡುವೆ ನಡೆದ ಯುದ್ಧದಲ್ಲಿ ಮರಣಿಸಿದ್ದನ್ನು ಹೇಳಿದೆ.

ಕಂ ॥ ಧುರದೊಳ್ ಮಲಪರಿಸುಭಟರ
ಸಿರಿವುರುಳಿಯ ಕರುಳುಸೂಸೆ ಧರೆಯಲಿ ಬೀಳಲ್
ತುರವಣಿಸಿ ತೀವಿದು ಬೀರ
ಸುರಗಣಿಕೆಯರೊಡನೆ ಪರಮ ಸುಖದಿಂದಿರ್ದ್ದಂ ॥ 798 ॥

120) ಹುಂಚ 121, E.C. XV (R), ಕ್ರಿಶ. 1320

ಈ ವೀರಗಲ್ಲು ಶಾಸನದಲ್ಲಿ ಹೊಯ್ಸಳರ ದೊರೆ ಮೂರನೆಯ ಬಲ್ಲಾಳನ ಆಳಿಕೆಯಲ್ಲಿ ಕುರಕನಾಯಕ ಎಂಬುವವನು ಬಲ್ಲಾಳ ಮತ್ತು ಕೋಟಿನಾಯಕರ ಪರವಾಗಿ ಹೋರಾಡಿ ಮಡಿದುದನ್ನು ಹೇಳಿದೆ.

ಯುದ್ಧ

ಕಂ ॥ ದೊರೆ ಕಕ್ಕಲನೇಱಿದೊಡಂ
ಧುರದೊಳ್ ಕಂಪಕನು ತಿವಿದ ಕುದುರೆಯ
ಶಿರವಮುರವಣೆಸಿದ ರಾವು
ತರ ಕರುಳುಗಿಯಲ್ ತಿವಿದನಮಮ ಸಮರಾಂಗಣದೊಳ್ ॥ 799 ॥

ಮರುಳುಗಳು

ಕಂ ॥ ಮರುಳುಗಳು ಕರುಳ ಮಾಲೆಯ
ಕೊರಳೊಳ್ ಸರವಿಟ್ಟು ರುಧಿರ ತಿಳಕಮನಿಟ್ಟುಂ
ಹರಸುತ್ತಿದರೀ ಕೂರುಕ
ನುರವಣೆಯೊಳ್ ತನಕೆ ಮೆಚ್ಚಿ ಸಮರಾಂಗಣದೊಳ್ ॥ 800 ॥

121) ಹುಂಚ 93, E.C. XV (R), ಕ್ರಿಶ. 1530

ಇದು ಸಾಳುವ ದೊರೆಯಾದ ಕೃಷ್ಣದೇವನ ಆಳಿಕೆಯ ಕಾಲದ್ದು. ಇದರಲ್ಲಿ ವಿದ್ಯಾನಂದ ಸ್ವಾಮಿ/ವಾದಿ ವಿದ್ಯಾನಂದನೆಂಬ ಪಂಡಿತನ ವರ್ಣನೆ ಇದೆ.

ಕಂ ॥ ಸ್ಥಿತಿಯೊಳ್ವಿದ್ಯಾನಂದ
ವ್ರತಿಪತಿಮುಖ ಜಾತವಾಣಿ ವಿಬುಧರ ಮನದೊ
ಳ್ಸತತಂ ರಂಜಿಸುತಿರ್ಕುಂ
ಬ್ರತಿ ವಿರಹಿತ ಕಾಂತ ರಚಿತ ಭಾಷ್ಯದ ತೆರದಿಂ ॥ 801 ॥

ಕಂ ॥ ವಿದ್ಯಾನಂದ ಸ್ವಾಮ್ಯನ
ವದ್ಯೋಪನ್ಯಾಸ ಮುದ್ರೆ ಕವಿಗಳ ಮನದೊ
ಳ್ಸದ್ಯಂ ಸುಖಕರ ಬಾಣನ
ಗದ್ಯಾತ್ಮಕ ಕಾವ್ಯದಂತೆ ರಂಜಿಸಿ ತೋರ್ಕುಂ ॥ 802 ॥

ಕಂ ॥ ಶ್ರೀರಂಗನಗರ ಕಾರ್ಯನ
ಪೇರಂಗಿಯ ಮತಮನಳಿದು ವಿದ್ವತ್ಸಭೆಯೊಳ್

ಶಾರದೆಯಂ ವಶಮಾಡಿಯೆ
ಧಾರಿಣಿಗಭಿವಂದ್ಯನಾದೆ ವಿದ್ಯಾನಂದಾ || 803 ||

ಕಂ || ಶ್ರೀ ಸಾಳ್ವಮಲ್ಲಿರಾಯನ
ಪೂಸರಗೆಣೆಯೆನಿಸಿ ತೋರ್ಪ್ಪ ಜಾಣನ ಸಭೆಯೊಳ್
ಶಾಸನದೊಳಧಿಕರಾದರ
ಬಾಸೆಯ ಮನ್ನಿಸಿದೆ ವಾದಿವಿದ್ಯಾನಂದಾ || 804 ||

ಹಾವೇರಿ ಜಿಲ್ಲೆ

ರಾಣಿಬೆನ್ನೂರು ತಾಲ್ಲೂಕು

1) ಮಾಕನೂರು, SII Vol XVIII, No. 149, ಕ್ರಿ.ಶ. 1144

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ಎರಡನೇ ಜಗದೇಕಮಲ್ಲನ ಆಳಿಕೆಯಲ್ಲಿ ಬೊಪ್ಪಗೌಡನು ಮಾಕನೂರಿನಲ್ಲಿ ಶಿವಾಲಯವನ್ನು ಕಟ್ಟಿಸಿ ದತ್ತಿಯನ್ನು ನೀಡಿದ್ದನ್ನು ಹೇಳಿದೆ.

ಬೊಪ್ಪ

ಕಂ ॥ ದಿವಿಜರೆಱಗಲ್ಕೆ ಪದನಖ
ದ ವಿರಳರುಚಿಮಕುಟಮಣಿಗಳೊಳ್ ಬೆಳಗಲ್ಕೊ
ಪ್ಪುವ ಪಾರ್ವ್ವತೀಶನತ್ಯು
ತ್ಸವಮಂ ಬೊಪ್ಪಂಗೆ ಮಾಡುತಿರ್ಕ್ಕನವರತಂ ॥ 1 ॥

ಕಂ ॥ ಸಿರಿಯ ಕೊನೆಗಣ್ಣ ಕಾನ್ತಿಯ
ಸುರುಚಿರ ಮಾಳಾಳಿ ಕೃಷ್ಣನಂಗದ್ಯುತಿಯೊಳ್
ಪೊರೆಯೆ ಸಿತರುಚಿಯಿನೊಪ್ಪುವ
ಹರಿ ರಕ್ಷಿಸುತಿರ್ಕ್ಕೆ ಬೊಪ್ಪಗಾವುಣ್ಡನುಮಂ ॥ 2 ॥

ಕಂ ॥ ಎಱಗಿದ ದಿವಿಜವ್ರಾತದ
ಮಿಱುಗುವ ಮಣಿಮಕುಟದಲ್ಲಿ ಪದನಖರುಚಿಗಳ್
ತುಱುಗಿ ಸೊಗಯಿಸುವ ಮುಕ್ಕೊಡೆ
ಯೆಱೆಯಂ ರಕ್ಷಿಸುಗೆ ಬೊಪ್ಪಗಾವುಣ್ಡನುಮಂ ॥ 3 ॥

ಚಂ ಮಾ ॥ ಜನಕನನೂನಭಾಗ್ಯನಿಧಿ ಮಾಳಗವುಣ್ಡನಗಣ್ಯಪುಣ್ಯ ಭಾ
ಜನೆಯೆನೆ ಪೆಂಪುವೆತ್ತ ಸತಿ ಮುದ್ದವೆತಾಯಿ ಹರಿಯಯ್ಯಗೌಡನೊ
ಳ್ಪಿನಕಣಿ ಚಟ್ಟಗೌಂಡನೆಸೆವಾರ್ಪ್ಪಿನ ಬೂಚಣನಲ್ತೆ ಸೋದರ
ರ್ಜ್ಜನನೆ ಕುಲಾಧಿದೆಯ್ವವೆನೆ ಬೊಪ್ಪಗವುಣ್ಡನಿದೇಂ ಕೃತಾರ್ತ್ಥನೋ ॥ 4 ॥

ಕಂ ॥ ಮುಸುವಡಿಯ ಸಾಂದಗುಲದೊಳ್
ಪೆಸರೆನಿಸಿದ ಬಾಲಿವಂಶದೊಳ್ ಪುಟ್ಟಿಯುವೊ
ಳ್ಪಸದಳಮಾದುದು ಬಾಪ್ಪುರೆ
ವಸುಧೆಯೊಳೀ ಮಾಕನೂರ ಬೊಪ್ಪಣನಿಂದಂ ॥ 5 ॥

ಕಂ ॥ ಕನ್ತುಹರನಂ ಪ್ರತಿಷ್ಠಿಸಿ
ಸನ್ತೋಷದಿಂ ಬರಸಿ ನಿಲಿಸಿ ಶಾಸನಮಂ ತಾ
ನನ್ತೆಸೆಯೆ ದೇವತಾಲಯ
ಮನ್ತಡೆಯದೆ ಬೊಪ್ಪನತಿಶಯಂ ಮಾಡಿಸಿದಂ ॥ 6 ॥

ಚಟ್ಟವೆ

ಕಂ ॥ ಆತಂಗೆ ಕಿಱಿಯೇ ಚಟ್ಟವೆ
ನೀತಿಯೊಳೊಲಿದವಳಗ್ಗಳ ಪತಿಭಕ್ತಿ ?
ಖ್ಯಾತಿವಿದೆಯೆನಿಪ ಪೆಂಪಿನೊ
ಳಾತಿಶಯಂ ಧರೆಯೊಳೆಂದಡೇ ಬಣ್ಣಿಪುದೋ ॥ 7 ॥

ಕಂ ॥ ತನಗೆ ಪರಹಿತಮೆ ಮುಖ್ಯಂ
ವಿನಯವೆ ಮುಖ್ಯಂ ಬುಧಪ್ರಸಂಗಮೆ ಮುಖ್ಯಂ
ಮನಮೊಲ್ದೀವುದು ಮುಖ್ಯಮಿ
ವಿನಿತುಂ ಬೊಪ್ಪಣನ ಸಹಜಮೆನಿಪ ಗುಣಂಗಳ್ ॥ 8 ॥

ಉ ಮಾ ॥ ಮಾನ್ತನವೊಂದು ಸತ್ಯವೆರಡಾಗಮಭಾವನೆ ಮೂಱು ಕಾರ್ಯ್ಯ ನಿ
ಶ್ಚಿಂತತೆ ನಾಲ್ಕು ಶೌಚಗುಣವಯ್ದು ಗಂಭೀರತೆಯಾಱು ಶೀಳ ವೇ
ಳಂತರಶುದ್ಧಿಯೆಂಟು ನಯವೊಂಬತುದಾತ್ತತೆ ಹತ್ತೆನಿಪ್ಪ ರೂ
ಪಂ ತಳೆದೊಪ್ಪುತಿರ್ಪ್ಪನೆನೆ ಬೊಪ್ಪಣನಿಂ ಕೃತಪುಣ್ಯನಾವನೋ ॥ 9 ॥

ಕಂ ॥ ಸಮಯಂ ನಾಲ್ಕುಮನೆನ್ತುಂ
ಕ್ರಮದಿಂದಂ ವರ್ಧಿಸಲ್ಕವೀ ನಾಲ್ವರ್ತ್ತ
ಮ್ಮಮನಶ್ವಿನಿಂದೆ ಮಾಡುವ
ಸಮಯೊಚಿತಮವರ್ಗ್ಗೆ ಸಂದುದಿಂತನವರತಂ ॥ 10 ॥

2) ನದಿಹರಳಹಳ್ಳಿ, SII Vol. XVIII ?, ಕ್ರಿಶ. 1168

ಇದರಲ್ಲಿ ಕಳಚೂರ್ಯರ ದೊರೆ ಬಿಜ್ಜಳದೇವನ ಆಳಿಕೆಯಲ್ಲಿ ನಾಗಗಾವುಂಡನು ಗೊಟ್ಟಗಡಿಯಲ್ಲಿ ಆದಿನಾಥ ತೀರ್ಥಂಕರ ಜಿನಾಲಯವನ್ನು ಕಟ್ಟಿಸಿ ದತ್ತಿ ಬಿಟ್ಟಿದ್ದನ್ನು ಹೇಳಿದೆ. ಇದನ್ನು ಶಾಂತಿರಾಜಕವಿ ರಚಿಸಿದ್ದಾನೆ.

ವೃಷಭನಾಥಸ್ತುತಿ

ಕಂ ॥ ಶ್ರೀಗೆ ನೆಲೆಯೆನಿಪ ವಾಣಿ
ಶ್ರೀಗೆ ತವರ್ಮ್ಮನೆ ದಲೆನಿಪ ನಿರವಧಿಚೋದ
ಶ್ರೀಗಾಣ್ಮನೆನಿಪನೊಲ್ದೆಮ
ಗೀಗೊಳ್ಗಂ ಗೊಟ್ಟಗಡಿಯ ವೃಷಭಜಿನೇಂದ್ರಂ ॥ 11 ॥

ಕುಂತಳವಿಷಯ

ಕಂ ॥ ಶ್ರೀಕಾಂತಮೆನಿಸಿ ಭರತ ಮ
ಹೀ ಕಾಂತೆಗೆ ಕುಂತಳಂಬೊಲೆಸೆಗುಂ ವಿಷಯಂ
ಲೋಕನುತಂ ಕುಂತಳಮಂ
ತಾ ಕುಂತಳವಿಷಯ ಮಧ್ಯದೊಳ್ಸೊಗಯಿಸುಗುಂ ॥ 12 ॥

ಬನವಾಸಿ

ಕಂ ॥ ದೊರೆವೆತ್ತು ತುಂಗಭದ್ರೆಯ
ವರದೆವೆಳೆ ಮಧ್ಯಪ್ರದೇಶದೊಳ್ಸೊಗಯಿಸುಗುಂ
ಸಿರಿಯ ತವರ್ಮ್ಮನೆ ಸೌಖ್ಯಾ
ಕರಮೆನೆ ಬನವಾಸೆದೇಶವತುಳವಿಳಾಸಂ ॥ 13 ॥

ಕಂ ॥ ವನರುಹವನದಿಂ ವನರುಹ
ವನ ಮಧುಮುದಿತಾಳಿಮಾಳೆಯಿಂದಳಿ ಮಾಳಾ
ಧ್ವನಿ ಹೃದ್ಯೋದ್ಯಾನದಿನಾ
ಜಿನಪದವೊಡರಿಸುಮದಖಿಳ ವನಸುಖಪದರೆಂ ॥ 14 ॥

ಕಂ ॥ ಪಿಕರವದಿಂ ತೆಂಬೆಲರಿಂ
ಶುಕಶತ ಚಾರುಪ್ರಚಾರದಿಂದೆಳೆ ನೀರಿಂ
ವಿಕಸಿತ ವನರುಹ ವನದಿಂ
ಸಕಳೇಂದ್ರಿಯ ತೃಪ್ತಿಚತುರ ವಿಷಯಂ ವಿಷಯಂ ॥ 15 ॥

ಕಂ ॥ ಕಳಕಂಠದಿನಾಮ್ರವನಂ
ಗಿಳಿವಿಂಡಿಂ ಗಂಧಶಾಳಿವನವಳಿಕುಳದಿಂ
ಲಲಿತ ಲತಿಕಾವನಂ ಕ
ಣ್ಗೊಳಿಸುಗುಮದಜೊಳ್ಮರಾಳದಿಂ ವನಜವನಂ ॥ 16 ॥

ಜಿಟ್ಟಿಹಳ್ಳಿ

ಕಂ ॥ ಕೂಡೆ ಸೊಗಯಿಸುವ ಬನವಸೆ
ನಾಡೊಳ್ಕಣ್ಗೆಸೆವ ಕಂಪಣಂ ವರ ಲಕ್ಷ್ಮೀ
ನೀಡಂ ರೂಢಿಯ ನೂಱುಂ
ಬಾಡಂ ಭೂಯುವತಿನೂತ್ನ ರತ್ನಾಪೀಡಂ ॥ 17 ॥

ಕಂ ॥ ಅದನಾಳ್ವಂ ಸಕಳ ಜಗ
ದ್ವಿದಿತಯಶಂ ಶ್ರೀನಿಕೇತನಂ ಕೇತರಸಂ
ಗುದಯಿಸಿದ ಪಾಂಡ್ಯನಮಳಿನ
ಹೃದಯಂ ಸೌಂದರ್ಯ್ಯಸದನನಭಿನವಮದನಂ ॥ 18 ॥

ಪಡವಳ ಚಾವುಂಡ

ಕಂ ॥ ಆ ವಿಜಯಾಭರಣನ ಪಾಂ
ಡ್ಯವನೀಪಾಳಕನ ಪಡವಳಂ ಪರಬಳ ವಿ
ದ್ರಾವಣ ವಿಧಾನ ಶೌಂಡಂ
ಚಾವುಂಡಂ ಗುಣಕರಂಡನೊಳ್ಪಿನಪಿಂಡಂ ॥ 19 ॥

ಗೊಟ್ಟಗಡಿ

ಚಂ ಮಾ ॥ ವಿವಿಧ ತಡಾಗ ಕೂಪ ಸರಸೀ ಸರಸೀರುಹ ಷಂಡಮಂಡಿತಂ
ನವನವಮಾಳೀಕಾಮಳ ಯಜಾರ್ಜ್ಜುನ ಭೂರ್ಜ್ಜ ಲವಂಗ ಲುಂಗಭಂ
ಗವನ ವಿರಾಜಿತಂ ಚಳಚಕೋರ ಮಯೂರ ಮರಾಳ ಷಟ್ಪದೀ
ರವವೃತಮಪ್ಪ ಗೊಟ್ಟಗಡಿಗೇಂ ಪಡಿಯಕ್ಕುಮೆ ಭೋಗಭೂಮಿಯುಂ
॥ 20 ॥

ಜೈನಧರ್ಮ

ಕಂ ॥ ಎಳೆಗೆಸೆವ ಗೊಟ್ಟಗಡಿಯೊಳ
ಗೊಳಗೊಕ್ಕಲ್ಪೊಬಿಗೆ ಪೊಲೆಯರೆನಿತನಿತುಂ ನಿ
ರ್ಮ್ಮಳ ಜೈನಧರ್ಮ್ಮಪರರು
ಜ್ವಳಸಂಯಮನಿರತ ಚರಿತರಪಗತದುರಿತರ್ ॥ 21 ॥

ಕೇತಗಾವುಂಡ

ಕಂ ॥ ಅಲ್ಲಿಯ ವಿಭುವಿಶದ ಯಶೋ
ವಲ್ಲಿ x ವೆಲ್ಲಿತದಿಗಂತರಾಳಂ ರಿಪು ಹೃ

ತ್ಸಲ್ಲಂಖಿಳ ಸಂಸರ್ಗ್ಗ
ಕ್ಕಲ್ಲಂ ಸದ್ಗುಣನಿಕೇತನೆನಿಪಂ ಕೇತಂ ॥ 22 ॥

ಕಂ ॥ ವಿನಯಧರಣಿ ದಯೆಯ ತವ
ರ್ಮ್ಮನೆ ಸತ್ಯದಬಿತ್ತು ಚಾಗದಾಗರವಸುಹೃ
ಜ್ಜನಕೇತು ಕೇತಗಾವುಂ
ಡನೆನಿಪ್ಪಂ ಕೆಲದ ಬಲದ ಗಾವುಂಡಗಳೊಳ್ ॥ 23 ॥

ಕೇತನ ಸತಿ ಲೋಕವ್ವೆ

ಕಂ ॥ ಆತನ ವಧು ಶೀಳಗುಣೋ
ಪೇತೆ ಜಗಖ್ಯಾತೆ ಸೀತೆಯೆನೆ ಪೆಸರ್ವಡೆದಳ್
ಭೂತಳದೊಳ್ ಲೋಕವ್ವೆಗ
ದೇ ತೆಱದಿಂ ಪಡಿಯೆ ಸತಿಯರಿಭಪತಿಗತಿಯೊಳ್ ॥ 24 ॥

ಬರ್ಮ್ಮಗಾವುಂಡ

ಕಂ ॥ ಅಂತವರ್ಗ್ಗೆ ವುಟ್ಟಿದಂ ಶ್ರೀ
ಕಾಂತಂ ತಾನೆನಿಪ ಬರ್ಮ್ಮಗಾವುಂಡಂ ವಿ
ಕ್ರಾಂತಾಕ್ರಾಂತ ನಿಜಪ್ರ
ತ್ಯಂತಂ ಪ್ರಜೆಮೆಚ್ಚೆಗಂಡನಾಹವಷೌಡಂ ॥ 25 ॥

ಕಂ ॥ ಎಡಱಿದೊಡಿಱಿವುದು ಬೇಡಿದೊ
ಡೆದಱೆಡೆಗಿಡೆ ಕುಡುವುದಱಿದುವಱಿಯದೆ ಪುರುಷಂ
ನುಡಿದಡದಂ ಸಲೆನಿಲೆ ನೆಱೆ
ನುಡಿವುದೆನಿಪ್ಪೋಜೆಗಾರ್ಮ್ಮನೆನಿಪಂ ಬರ್ಮ್ಮಂ ॥ 26 ॥

ಅರಸಿಯಕ್ಕ

ಕಂ ॥ ಎನೆ ನೆಗಳ್ದ ಬರ್ಮ್ಮಗಾವುಂ
ಡನ ಸತಿ ಗುಣವತಿ ವಿಳಾಸವತಿ ನಯವತಿ ನಂ
ದನವತಿ ತಾನೆನಲೆಸೆದಳ್
ವನಿತೆಯರೊಳಗರಸಿಯೆಂಬ ಪೆಸರೆಸೆವಿನೆಗಂ ॥ 27 ॥

ಕಂ ॥ ಮಾತೇನಾರುಗ್ಮಿಣಿಗಂ
ಸೀತೆಗವಂ ಬೋಧಿಜಾತೆಗಂ ಖ್ಯಾತಿಯೊಳಂ

ನೀತಿಯೊಳವರಸಿಯಕ್ಕಂ
ಭೂತಳದೊಳ್ಮಿಗಲೆನಿಪ್ಪ ಪೆರ್ಮ್ಮೆಗೆ ನೋಂತಳ್ ॥ 28 ॥

ನಾಗಗಾವುಂಡ – ಕೇತಗಾವುಂಡ

ಕಂ ॥ ಜನಿಸಿದರವರ್ಗ್ಗೆ ಸುರುಚಿರ
ವಿನಯರ್ನ್ನೆಗಳ್ತಿರ್ದ್ದ ನಾಗಗಾವುಂಡನುಮೊ
ಳ್ಪಿನರಾಶಿ ಕೇತಗಾವುಂ
ಡನುಮೆನೆ ಪೆಸರ್ವಡೆದ ಪುತ್ರರಮಳಚರಿತ್ರರ್ ॥ 29 ॥

ನಾಗಗಾವುಂಡ

ಕಂ ॥ ನಾಗಂ ಯಶೋವೃತಾಶಾ
ಭಾಗಂ ನಟನಗ್ನಭಗ್ನತರ್ಪ್ಪಣ ವಿಹಿತೋ
ದ್ಯೋಗಂ ಜಿನಪೂಜೋತ್ಸವ
ರಾಗಂ ಧರ್ಮ್ಮಪ್ರಸಂಗಕೃತ ಸಂಯೋಗಂ ॥ 30 ॥

ಮ ವಿ ॥ ದಯೆ ದಾನಂ ಧೃತಿ ಸತ್ಯವಣ್ಮು ವಿನಯಂ ದಾಕ್ಷಿಣ್ಯವಾಪ್ತಾಗಮಾ
ನ್ವಯವರ್ತ್ತಿಬ್ರಜರಕ್ಷಣೊತ್ಕ ಹೃದಯಂ ಸದ್ಧೈರ್ಯ್ಯವೌದಾರ್ಯ್ಯವಾ
ರಯೆ ಮೆಯ್ವೆತ್ತುದು ತಂನೊಳೆಂಬೆಸಕರೆಂ ಸಾರೆನ್ತನಾಗಂ ಗುಣಾ
ಶ್ರಯನೇಂ ಪೆತ್ತನೊವೀರವೈರಿವನಿತಾ ವೈಧವ್ಯ ದೀಕ್ಷಾಕ್ಷಮಂ ॥ 31 ॥

ಮ ವಿ ॥ ಜಿನಪೂಜೋತ್ಸವ ಮಂಗಳಾನಕರವಂ ಜೈನಾಭಿಷೇಕಾರ್ಚ್ಚನಾ
ವಿನೂತಸ್ತೋತ್ರರವಂ ಜಿನೇಂದ್ರಚರಿತ ಪ್ರಖ್ಯಾಪನಾಕರ್ಣ್ಣನಂ
ಜಿನಭಕ್ತಪ್ರಕರ ಪ್ರಭಾವ ಕಥನಂ ಜೈನಬ್ರತಾಶಂಸನಂ
ಮನೆಯೊಳ್ ನಿತ್ಯವಿನೋದನೆಂದೆಡೆಳೆಯೊಳಾಗೇಂದ್ರನೇಂ ಧನ್ಯನೋ
॥ 32 ॥

ಕಂ ॥ ಭವ್ಯಜನ ಕುಮುದಿನೀ ಸಂ
ಸೇವ್ಯ ಶರಚ್ಚಂದ್ರನಾಪ್ತತತ್ವವಿಚಾರ
ಪ್ರವ್ಯಕ್ತ ಹೃದಯನುಚಿತಧ
ನವ್ಯಯ ಶೀಳಂ ಗಡಂ ಕೃತಾರ್ತ್ಥನೊ ನಾಗಂ ॥ 33 ॥

ಕಂ ॥ ಪದೆದೀವ ಚತುರ್ವ್ವಿಧ ದಾ
ನದಪೆರ್ಮ್ಮೆಯಿನುಚಿತ ಚಾರುಚರಿತದ x x

ಸದಮಳ ಜಿನಪೂಜಾಮಹಿ
ಮದಿನೆಸೆದಂ ಗೊಟ್ಟಗಡಿಯವಿಭುನಾಗೇಂದ್ರಂ ॥ 34 ॥

ಉ ಮಾ ॥ ಕಳ್ಪಮಹೀರುಹಕ್ಕೆ ವಸುಧಾವಸನಕ್ಕೆ ಸುರಾಚಳಕ್ಕೆ ಪೆಂ
ಪಲ್ಪಮೆನುತ್ತುದಾರತೆ ಗಭೀರತೆ ಧೀರತೆ ಮಾನ ಗರ್ವ್ವಸಂ
ಕಲ್ಪಮನಪ್ಪುಕೆಯ್ವುದೆನಲುಂನತಿಯಂ ಕಲಿಕಾಲ ಲೋಲುಪ
ರ್ಪ್ಪೊಲ್ವರೆ ಸಾಂದವಂಶ ಕುಮುದೇಂದುವನಿಪ್ರಭು ನಾಗವರ್ಮ್ಮನಂ ॥ 35 ॥

ಕಂ ॥ ಧೈರ್ಯ್ಯ ದಯಾ ದಮ ದಾನೌ
ದಾರ್ಯ್ಯಂಧನಂಗಿಗೆ ನಾಗಗಾವುಂಡಂಗೈ
ಶ್ವರ್ಯ್ಯಮನಹಿತ್ನಿದ್ವಾ
ಚಾರ್ಯೋಪಾಧ್ಯಾಯ ಸರ್ವ್ವಸಾಧುಗಳ್ ನಗರೇ ॥ 36 ॥

ವಾಸುಪೂಜ್ಯ

ಶ್ಲೋಕ ॥ ಶ್ರೀ ಮೂಲಸಂಘ ಸೂರಸ್ಥೋದ್ಗಣ ಭೂಷಣಭೂಷಿತಂ
ಚಿತ್ರಕೂಟಾನ್ವಯಧಾರಾ ವಾಸುಪೂಜ್ಯ ಮುನೀಶ್ವರಾ ॥ 37 ॥

ಶ್ಲೋಕ ॥ ಸೂರಸ್ಥಗಣವಿಯತ್ತಳಸೂರಂ ಪೆಸರೆಸೆವ ಚಿತ್ರಕೂಟಾನ್ವಯ
ಜಾತಾರುಣಮಣಿ ಸಿದ್ಧಾಂತೋದ್ಧಾರಿತ ಚಕ್ರೇಶ ವಾಸುಪೂಜ್ಯ ಮುನೀಂದ್ರಂ
॥ 38 ॥

ಕಂ ॥ ಸಿದ್ಧಾಂತತ್ರಯಮೆಂಬುದು
ಸುದ್ಧಗೆಯೆನಿಸಿದುದು ವಾಸುಪೂಜ್ಯ ಮುನೀಂದ್ರಂ
ಸಿದ್ಧಾಂತ ಚಕ್ರವರ್ತ್ತಿಜ
ಗದ್ಧವಳಿತ ಕೀರ್ತಿಯೆಂಬುದೊಂದುಚ್ಚರಿಯೇ ॥ 39 ॥

ಕಂ ॥ ಜಿನಪತಿ ಪರಮಾರಾಧ್ಯಂ
ಮುನಿಪತಿ ಗುರು ತನಗೆ ರಾವಣಂದಿ ಮುನೀಂದ್ರ
ವಿನಯನಿಧಿ ಬರ್ಮ್ಮನಮ್ಮಂ
ಜನನಿಗಡರಸವ್ವೇ ನಾಗನೆನನುಪಮನೋ ॥ 40 ॥

ಕೇತ

ಕಂ ॥ ಆತನನುಜಾತನತಿ ವಿ
ಖ್ಯಾತಂ ಗುರುಜನ ವಿನೂತನುಪಮಾತೀತಂ
ಭೂತಳವಿನುತೌದಾರ್ಯ್ಯಾ
ನ್ವಿತ ಸೌಜನ್ಯಂ ಗುಣಂಪತೀತಂ ಕೇತಂ ॥ 41 ॥

ಮ ವಿ ॥ ವಿನಯಂ ಶೀಳಗುಣಂ ವಿನೂತ ಚರಿತಂ ಶಿಷ್ಟೇಷ್ಟ ಸಂರಂಕ್ಷಣಂ
ಜಿನಪಾದಾಂಭುಜ ಸೇವಭವ್ಯಜನತಾಸಂಪ್ರೀತಿಬಂಧು ಪ್ರಮೋ
ದನ ತಾತ್ಪರ್ಯ್ಯಮುದಾರಶೌರ್ಯ್ಯವನವದ್ಯೌದಾರ್ಯ್ಯವಂಪ್ರೀಕೃತಂ
ತನಗೆಂದಂದುಜಸಂ ಜಗದ್ವಿದಿತವಾಯ್ತಿ ಕೇತಗಾವುಂಡನಂ ॥ 42 ॥

ಈಜಿಯಕ್ಕ

ಕಂ ॥ ನಾಗನ ಸತಿಗಂ ರತಿಗಂ
ಶ್ರೀಗವರುಂಧತಿಗವದ್ರಿಸುತೆಗಂ ಧರಣೀ
ಭಾಗದೊಳೆಣೆಯೊಳರೆ ಕುಲ
ಸ್ತ್ರೀಗಳೊಳೆನಿಪೋಜೆನೀಜಿಯಕ್ಕನೊಳೆಸೆಗುಂ ॥ 43 ॥

ಗೊಟ್ಟಗಡಿಯ ಜಿನೇಂದ್ರ ಭವನ

ಕಂ ॥ ಮನಮೊಸೆದು ನಾಗಗಾವುಂ
ಡನುದಾತ್ತ ವಿಶದಕೀರ್ತ್ತಿಲತೆಗಿದಡಪ್ಪೋ
ಯ್ತೆನೆ ಗೊಟ್ಟಗಡಿಯೊಳೊಪ್ಪಿರೆ
ಜಿನಭವನಂ ಭುವನವಿನೂತಮೆನೆ ಮಾಡಿಸಿದಂ ॥ 44 ॥

ಮ ಸ್ರ ॥ ವರಸೌಧಾತ್ಮಾಂಶುವಿಂ ಕಾಂಚನಕಳಶ ಕನತ್ಕಾಂತಿಯಿಂ ನೀಳರತ್ನ
ಸ್ಫುರಿತಾಂತರ್ಬ್ಬೋರುಚಿಸ್ತೋಮದಿನರುಣಮಣಿಸ್ತಂಭ ನಿರ್ಯ್ಯತ್ಪ್ರಭಾನಿ
ರ್ಭ್ಬರ ಶೋಭಾಭೋಗದಿಂ ಶೋಭಿಸಿ ಸಕಳ ಜಗದ್ಭವ್ಯ ಲಕ್ಷ್ಮೀಕರಂ ಪಾಂ
ಡುರಿತಂ ಪೈಶಂಗಿತಂ ಕಬ್ಬೂರಿತವರುಣಿತಂ ರುಂದ್ರಜೈನೇಂದ್ರಗೇಹಂ
॥ 45 ॥

ಉ ಮಾ ॥ ದಾನವಿನೋದನೆಂಬುದು ಗುಣಾಂಬುಧಿಯೆಂಬುದು ಸತ್ಯಶೌಚ ಸ
ನ್ಮಾನ ನಿಧಾನನೆಂಬುದವನೀತಳಕೇತನೆ ತೀರ್ತ್ಥನೆಂಬುದ
ನ್ಮಾನಿಸದೀವ ಕಲ್ಪತರುವೆಂಬುದು ಸಾಂದಕುಳ ಪ್ರದೀಪನಂ
ಮಾನಸನೆಂಬುದೇ ನೆಗಳ್ದ ಲೋಕಜನಸ್ತುತ ನಾಗಗೌಂಡನಂ ॥ 46 ॥

ಚಂ ಮಾ ॥ ಅದು ನಿಜಪುಂಣ್ಯಪುಂಜವದು ತಂನ ವಿಶುದ್ಧ ಯಶಸ್ಸಮೂಹವಂ
ತದುತದುಪಾರ್ಜ್ಜಿತ ಪ್ರಬಳ ಧರ್ಮ್ಮ ಸಮುಚ್ಚಯವಂತದಾತ್ಮವಂ
ಶದ ಸುಚರಿತ್ರಸಂಸ್ತವನ ಶಾಸನಶೈಳವೆನಿಪ್ಪ ಪೆರ್ಮೆಗಾ
ಸ್ಪದನೆನೆ ನಾಗವರ್ಮ್ಮ ವಿಭು ಮಾಡಿಸಿದಂ ಜಿನರಾಜಗೇಹಮಂ ॥ 47 ॥

ಕಂ ॥ ಅನುಪಮ ಮಹಿಮಂ ಸುರನರ
ವಿನುತಂ ಮಾಡುಗೆ ಜಿನೇಂದ್ರಚಂದ್ರಂ ದಯೆಯಿಂ
ಮನಮೊಸೆದು ನಾಗಗಾವುಂ
ಡನ ಮನದಭಿಲಷಿತ ಫಳಮನಾಚಂದ್ರಾರ್ಕ್ಕಂ ॥ 48 ॥

ಶಾಸನಕವಿ ಶಾಂತಿರಾಜ

ಕಂ ॥ ಧರೆಪೊಗಳೆ ಶಾಂತಿರಾಜಂ
ವಿರಚಿಸಿದಂ ಸುಕವಿ ತಿರ್ದ್ದಿ ಕವಿ ಪರಮಾತ್ಮಂ
ಬರೆಯಿಸಿದಂ ಬರೆದಂ ಸಾ
ಕ್ಷರತಿಳಕಂ ಶಂಕಣಾರ್ಯ್ಯನೀ ಶಾಸನಮಂ ॥ 49 ॥

ಶಿಗ್ಗಾಂವ ತಾಲ್ಲೂಕು

3) ಕಳಸ, E.I. Vol. XIII, p. 329, ಕ್ರಿಶ. ಸು. 930

ಇದರಲ್ಲಿ ರಾಷ್ಟ್ರಕೂಟರ ದೊರೆಯಾದ ಮೂರನೆಯ ಗೋವಿಂದನ ಆಳಿಕೆಯಲ್ಲಿ ಕಾಡಿಯೂರಿನ ಮಹಾಜನರನ್ನು ವರ್ಣಿಸಿದೆ. ಈ ಶಾಸನವನ್ನು ಬರೆದವನು ಕವಿರಾಜರಾಜ.

ಗೋವಿಂದ

ಮ ವಿ ॥ ಪಗೆಗೊಣ್ಡಾಡುವ ಶತ್ರುಭೂಪತಿಗಳಂ ದೋರ್ಗ್ಗರ್ವ್ವದಿಂದೇಱಿದು
ಗ್ರಗಜೇಂದ್ರಂ ಬೆರಸೋವದನ್ತಕನ ಬಾಯೊಳ್ ತೂನ್ತಿ ಮತ್ತಂ ಶರ
ಣ್ಬುಗಲೆಂದಿರ್ಪ್ಪವನೀಶ್ವರಪ್ರತತಿಯಂ ಕೈಕೊಣ್ಬು ಕಾದೆಯ್ದೆ ಗೊ
ಜ್ಜಿಗದೇವಂ ನೃಪತುಂಗನೆಂಬಳವನೊಲ್ದಂಗೀಕೃತಂ ಮಾಡಿದಂ ॥ 50 ॥

ಕಂ ॥ ಇಭಪರಿಣತಿಯೊಳಮಾನುಷ
ವಿಭವದೊಳೌದಾರ್ಯ್ಯವೃತ್ತಿಯೊಳ್ ಸಾಹಸದೊಳ್
ಸುಭಟತೆಯೊಳ್ ಗೊಜ್ಜಿಗವ
ಲ್ಲಭನಂ ಮಿಗಲುರ್ವ್ವಿನೃಪರನಾಂ ಕಣ್ಡಱಿಯೇ ॥ 51 ॥

ಕಂ ॥ ಮುನಿದಿದಿರಾಗೆ ಶರಣ್ಬುಗೆ
ಮನಮೊಲ್ದುದನೆರೆಯೆ ಫಲ್ಗುಣಂ ಧಾತ್ರಂ ಕ
ರ್ಣ್ಣನೆನಲ್ ಗೊಜ್ಜಿಗಭೂಪಾ
ಳನನೆಯ್ದುವ ಭೂಮಿಪಾಳಕರ್ಕ್ಕೆಲರೊಳರೇ ॥ 52 ॥

ವೀಸೋತ್ತರ ಪಂಡಿತ

ಮ ಸ್ರ ॥ ಗುಡಿ ಶಂಖಂ ಚಾಮರಂ ಬೆಳ್ಗೊಡೆ ಘಳಿಗೆ ವಿಚಿತ್ರಾತಪತ್ರವ್ರಜಂ ಪೆ
ರ್ವ್ವಿಡಿ ಸೌಧಂ ಚಿತ್ರದಣ್ಡಂ ಪಳಿಯೆಸೆವ ಝಳಂಬಂ ಗಜೇಂದ್ರಂ ತುರಂಗಂ
ನಡೆಮಾಡಂ ದಣ್ಡನಾಥೋತ್ತಮಪದವಿ ಮಹಾತೂರ್ಯ್ಯಮೆಂಬಿಂತಿವಂತುಂ
ಪಡೆದಂ ಚೆಲ್ವಿಂದೆ ವೀಸೋತ್ತರವಿದಿತಧರಾದೇವನಿಷ್ಟಪ್ರಭಾವಂ ॥ 53 ॥

ಪುಲಿಗೆರೆ

ಕಂ ॥ ಭರತಮಹೀಮಣ್ಡಲಕಾ
ಭರಣಂ ಕುನ್ತಳಧರಾತಳಂ ತದ್ವಿಷಯ
ಕ್ಕೆರಡಱುನೂಱು ಲಲಾಟಂ
ಪುರಿಕರಜನಪದಮದಕ್ಕೆ ನವಪವಿಮುಕುರಂ ॥ 54 ॥

ಕಂ ॥ ಆ ಪುಲಿಗೆಱೆನಾಡೊಳಗೆ
ಶ್ರೀಪುಂಜಂ ದೇವತಾನಿವಾಸವಿಳಾಸ
ವ್ಯಾಪಾರಕೃತಂ ನೆಗಟ್ದಿ ಮ
ಹಾಪಟ್ಟಣಮೊಳ್ಪನಾಳ್ದ ಪುಲಿಗೆಱೆಯೆಸೆಗುಂ ॥ 55 ॥

ಕಾಡಿಯೂರು

ಚಂ ಮಾ ॥ ಪೊಱವೊಳಲೊಳ್ಪೊದಳ್ದ ನವನನ್ದನಬೃನ್ದದಿನೊಳ್ಪನಾಳ್ದ ಪೆ
ರ್ಗ್ಗಱೆಗಳಿನೊನ್ದೆ ಗಾವರಿಸುತಿರ್ಪ್ಪ ಮದಾಳಿಯಿನೆಯ್ದೆ ಪೂತ ಕಿ
ಕ್ಕಿಱ್ ನಿಮಿರ್ದ್ದಿರ್ದ್ದ ಪಾದರಿಯಿನೂದುವ ತೆಂಬೆಲರಿಂ ಬೆಡಂಗುವೆ
ತ್ತೆಱೆಯನ ಕಾಡಿಯೂರ್ವ್ವಯಸಿ ನೋರ್ಪ್ಪರ ಕಣ್ಗೆಸೆದೊಪ್ಪಿ ತೋಱುಗುಂ
॥ 56 ॥

ಚಂ ಮಾ ॥ ತುಱುಗಿ ಕವಲ್ತು ಕತ್ತಲಿಪ ಚೂತಕುಜಂಗಳೊಳೊಂದಿ ಕಂಪಿನೊ
ಳ್ಪೆಱೆದು ರಸಂಗಳಂ ತಳೆದ ಪಣ್ಗೊಲೆಯಂ ಗಿಳಿವಿಣ್ದು ಚಂಚುವಿಂ
ದಿಱಿದಡೆ ಸೋರೆ ಸೋನೆಯೊಳೆ ದಾಂಗುಡಿ ಮಿನ್ದೆಸೆದಿರ್ಪ್ಪವೊಳ್ಪಿನಿ
ನ್ದೆಱೆಯನ ಕಾಡಿಯೂರ ಲತೆವಳ್ಳಿಯುಮಲ್ಲಿಯ ನಾಗವಲ್ಲಿಯುಂ ॥ 57 ॥

ಕೊಂಡಲಿಗೆಱೆ

ಚಂ ಮಾ ॥ ಕುಲಗಿರಿ ಭೀತಿಯಿನ್ದೆ ಮಱೆಮೊಕ್ಕಡೆ ಕೊಂಡ ಸರೋರುಹಾಧರಂ
ನೆಲಸಿದನಬ್ಜವಾಹನನೆನಲ್ದಿನರಾಜನಿವಾಸಮಾದ ಭೂ
ತಳಸತಿಗೊಳ್ಪನಾಳ್ದು ನವಮೇಖಳೆಯೆಂಬ ಸಮುದ್ರದನ್ತೆ ಕೊ
ಣ್ಡಲಿಗೆಱೆಯೊಪ್ಪಿತೋರ್ಪ್ಪುದೆನೆ ಬಿಣ್ಪಿನೊಳಾವರಿಸಿರ್ದ್ದ ಪೆಂಪಿನೊಳ್ ॥ 58 ॥

ಚಂ ಮಾ ॥ ಕ್ರಮದಿನಳುರ್ಕ್ಕೆವೆತ್ತು ನಿಬಿಡೋನ್ನತಮಾಗಿ ಬೆಡಂಗಿನಿಂ ಚತು
ಸ್ಸಮಯದ ದೇವತಾನಿಳಯಮೊಪ್ಪುಗುಮಲ್ಲಿಯ ಪೂಜೆಯಲ್ಲಿಯು
ತ್ತಮಮುನಿನಾಥರಲ್ಲಿಯ ಮಹಾಮಹಸಂಪದಮಲ್ಲಿಯೊಳ್ಪನಾ
ಳ್ದೆಸೆದಮರ್ದ್ದೆತ್ತಲುಂ ಮಿಳಿರ್ದ್ದ ಕೇತನರಾಜಿ ಕರಂ ವಿರಾಜಿಸಲ್ ॥ 59 ॥

ಕಂ ॥ ಬಳಸಿದ ದೇವಾಲಯಮುಂ
ಘಳಿಗೆಯುಮಾಹಾರಧಾನಿಯುಂ ಪ್ರಪೆಯುಂ ಬೆ
ಳ್ವೆಳಿಸಿಟ್ಟಿ ಶಾಸ್ತ್ರದಾನಮು
ಮಳವಟ್ಟವೊ ಕಾಡಿಯೂರೊಳಾನ್ನೋಡುವಡೇ ॥ 60 ॥

ಕಾಡಿಯೂರ ಜನಗಳು

ವಚನ ॥

ಮತ್ತಮಲ್ಲಿ ಬಡಿವುದುಂ ಬಿಡುವುದುಂ ಚಾಪವಿದ್ಯೆಯೊಳ್
ಕೃತ್ರಿಮಮುಮನಿತ್ಯಮುಮಿಂದ್ರಜಾಲದೊಳ್
ಕಡಂಗುವುದುಂ x x x ಇಸುವುದುಮಭ್ರಪಟಳದೊಳ್
ಸರಳತೆಯುಂ ಬಡತನಮುಮಬಳಾಮಧ್ಯದೊಳ್
ನಡುಕಮುಮಾಱಿಡಿಯುಂ ಚೂತಮಂಜರಿಯೊಳ್
ಕುಂದುಂ ಕಳಂಕಮುಂ ಹರಿಣಾಂಕನೊಳ್
ಉರ್ಕ್ಕುಮುಂ ಕಂಪಣಮುಂ ಮಣ್ಡಳಾಗ್ರದೊಳ್
ಸೆಱೆಯುಮೇಱುಂನೆತ್ತ ಮಾಡುವರೊಳ್
ಲೋಭಮುಮೆಳೆಕೊನೆಯೊಳ್ಪಿನೊಳ್
ನಿರೋಧಮುಂ ನಿಷ್ಪರಿಗ್ರಹಮುಂ ತಪೋವೃತ್ತಿಯೊಳ್
ಪೆಱತೊಂದೆಡೆಯೊಳಿಲ್ಲೆನಿಸಿದ
ತಾರ್ಕ್ಷ್ಯಪಕ್ಷದನ್ತೈಕ್ಯಪಕ್ಷಪ್ರತಿಪಾಳನೆಯುಮಂ
ಮಕರಕೇತನದಂತೆ ಮರ್ಯ್ಯಾದೆಯುಮಂ

ಪರ್ವ್ವತರಾಜನನ್ತೆ ಪ್ರತಿಪನ್ನತೆಯುಮಂ
ಉರ್ವ್ವರೆಯನ್ತೆ ಕ್ಷಾನ್ತಿಯುಮಂ
ಕವಿರಾಜರಾಜವಚಃಪ್ರಭಾವದನ್ತಳಂಕಾರಮುಮಂ
ಒಳಕೊಣ್ಡ ಜನಂಗಳಿಂ ಮನಂಗೊಳಿಸುತ್ತಮಿರ್ಪ್ಪುದು

ಚಂ ಮಾ ॥ ಉದಧಿವೃತಾವನೀತಳದೊಳೇಜ್ವೊಡೆವಾಳಿಸೆ ಕಾಡಿಯೂರನೆ
ಯ್ದಿದಪುವೆ ಮತ್ತಿನೂರ್ ವಿಬುಧರಲ್ಲಿದರನ್ವಿತಸತ್ತ್ವವೀಧ್ರರ
ಲ್ಲಿದರಭಿಧೀನರಲ್ಲಿದರುದಾರಿಗಳಲ್ಲಿದರಾಗಮಜ್ಞರ
ಲ್ಲಿದರನವದ್ಯತತ್ತ್ವವಿದರಲ್ಲಿದರಲ್ಲಿದರೆಲ್ಲಮಲ್ಲಿದರ್ ॥ 61 ॥

ಕಾಡಿಯೂರ ಇನ್ನೂರ್ವರು

ಕಂ ॥ ನಿರವದ್ಯವೇದವಿದ್ಯಾ
ಪರಿಣತರತಿವಿಷಮಶಬ್ದವಿದ್ಯಾಗಮಸ
ತ್ವರಿಣತರೆನಿಸಿರ್ದ್ದಿನ್ನೂರ್
ವ್ವರ ಚರಣವಿಪ್ರಕುಳಂ ವಿಚಿತ್ರಾಭರಣಂ ॥ 62 ॥

ಮ ಸ್ರ ॥ ಶರಧಿವ್ಯಾವೇಷ್ಟಿತೋರ್ವ್ವೀತಳದೊಳೆಸೆಯುತಿರ್ಪ್ಪಗ್ರಹಾರಂಗಳಂ ಧಿ
ಕ್ಕರಿಸಲ್ಸಾಲ್ದತ್ತು ನಾನಾಫಳವಿಳಸನದಿಂ ಕಾಡಿಯೂರಲ್ಲಿಯಿನ್ನೂ
ರ್ವ್ವರ ವಿದ್ಯಾಭ್ಯಾಸಮಿನ್ನೂರ್ವ್ವರ ವಿಧಿಲಸದಾಚಾರಸಂಪತ್ತಿಯಿನ್ನೂ
ರ್ವ್ವರ ದಾನೋದಾರಿಯಿನ್ನೂರ್ವ್ವರ ವಿಮಳಯಶಃಶ್ರೀವಿಚಿತ್ರಂ ಪವಿತ್ರಂ
॥ 63 ॥

ಚಂ ಮಾ ॥ ನೆಱೆಯೆ ಬೆಡಂಗನಾವರಿಸಿ ತೋರ್ಪ್ಪ ಮಹಾಪದಕಕ್ಕೆ ಪದ್ಮಜಂ
ಮಿಱುಗುವ ರತ್ನಮಂ ರಚನೆ ಮಾಡಿದವೋಲ್ ನಡೆ ನೋರ್ಪ್ಪುವರ್ಗ್ಗೆ ಕಿ
ಕ್ಕಿಱಿಗಿಱಿದೊನ್ದನೊನ್ದು ಮಿಗುವೆನ್ದೊಡಕೊತ್ತಿ ವಿರಾಜಿಸುತ್ತಮಿ
ರ್ಪ್ಪಱೆಯನ ಕಾಡಿಯೂರುಮೆಸೆವಲ್ಲಿಯ ವಿಪ್ರರುಮೊಪ್ಪಿ ತೋಱುಗುಂ
॥ 64 ॥

ಕಂ ॥ ವ್ಯಾಕರಣಮರ್ತ್ಥಶಾಸ್ತ್ರಾ
ನೀಕಂ ಸಾಹಿತ್ಯವಿದ್ಯೆಯಿತಿಹಾಸಂ ಮಿ
ಕ್ಕೇಕಾಕ್ಷರಮಿನಿತರ್ಕ್ಕಂ
ಟೀಕಂ ಬರೆಯಲ್ಸಮಗ್ರರಾಭ್ಯಾಸಿಸುವರ್ ॥ 65 ॥

ಮ ವಿ ॥ ಪಿರಿಯರ್ಮೇರುವಿನಿಂ ಧರಾವಳಯದಿಂ ವಾರಾಶಿಯಿಂ ಜಿಣ್ಣಿನೊಳ್
ನಿರಹಂಕಾರತೆಯೊಳ್ ಗಭೀರತೆಯೊಳೆನ್ದತ್ಯುತ್ತಮರ್ವ್ವರ್ಣ್ಣಿಸು
ತ್ತಿರೆ ಪೆಂಪಂ ಕ್ಷಮೆಯಂ ಸ್ಥಿರತ್ವಮನುದಾತ್ತಮ್ಮಾಡಿ ಸತ್ಕೀರ್ತ್ತಿಗಾ
ಗರಮಾಗಿರ್ದ್ದ ಮಹಾಮಹರ್ದ್ವಿಜರೊಳೊಳ್ಪಂ ತಾಳ್ದಿದಿನ್ನೂರ್ವ್ವರುಂ
॥ 66 ॥

ಮ ವಿ ॥ ಜಸಮಂ ತಾಳ್ದಿದಿಳಾಮರಪ್ರಚಯಮತ್ಯುತ್ಸಾಹದಿಂ ಗೆಯ್ದು ಬ
ಣ್ಣಿಸೆ ತಮ್ಮುನ್ನತಿ ತಮ್ಮ ಸತ್ಯದೆಸಕಂ ತಮ್ಮೋಜೆ ತಮ್ಮಾರ್ಪ್ಪು ತ
ಮ್ಮ ಸದಾಚಾರತೆ ತಮ್ಮ ನಿರ್ಮ್ಮಳತೆ ತಮ್ಮೌಚಿತ್ಯಸಂಪತ್ತಿ ತ
ಮ್ಮ ಸಮಗ್ರಾಸ್ಪದಮೊಪ್ಪೆ ವರ್ತ್ತಿಸುತಮಿರ್ದ್ದನ್ನೋರ್ಪ್ಪೊಡಿನ್ನೂರ್ವ್ವರುಂ
॥ 67 ॥

ಮ ವಿ ॥ ನಿಯಮಂ ತಮ್ಮೊಳುಪಾಶ್ರಯಂಬಡೆಯೆ ಷಟ್ಕರ್ಮ್ಮಕ್ರಮಂ ತಮ್ಮೊಳೋ
ಜೆಯಿಸುದ್ಯೋಗಿಸೆ ಪೌರುಷೇಯಕರಣೀಯಂ ತಮ್ಮೊಳೆನ್ತನ್ತೆ ನಿ
ರ್ಣ್ಣಯಮಾಗುತ್ತಿನ ಕೀರ್ತ್ತಿ ತಮ್ಮೊಳೆಸೆಯುತ್ತುಂ ಬೆಳ್ಪು ತಳ್ಪೊಯ್ದು ವಾ
ರ್ದ್ಧಿಯನೆಯ್ದುತ್ತಿರೆ ಧಾತ್ರಿಯೊಳ್ನೆಗೞ್ದರಿನ್ತೊಳ್ಪಿಂದಮಿನ್ನೂರ್ವ್ವರುಂ ॥ 68 ॥

ಕವಿರಾಜರಾಜ

ಕಂ ॥ ಕವಿರಾಜರಾಜ ವಿಬುಧ
ಪ್ರವರಂ ಶ್ರೀಕಾಡಿಯೂರನಲ್ಲಿಯೆ ಕಮಳೋ
ದ್ಭವವಂಶಪ್ರೋತ್ತಮರಂ
ನವೀನವರ್ಣ್ಣನೆಯಿನೆಸೆಯಲಭಿವರ್ಣ್ಣಿಸಿದಂ ॥ 69 ॥

4) ಹೊಟ್ಟೂರು, E.I. Vol. XVI, p. 77, ಕ್ರಿಶ. 1037

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆಯಾದ ಎರಡನೆಯ ಜಯಸಿಂಹನ ಆಳಿಕೆಯಲ್ಲಿ ಪೊಟ್ಟಯೂರಿನ ಮಾರಗಾವುಂಡ ಎಂಬುವವನನ್ನು ವರ್ಣಿಸಿದೆ.

ಹೆಳವರ ಮಾರಗಾವುಣ್ಡ

ಕಂ ॥ ದಾನಂ ಪರೋಪಕಾರಂ
ಜ್ಞಾನಂ ಶಿವಭಕ್ತಿ ಸತ್ಯಮೆಂಬೊಳ್ಗುಣದೊಳ್
ತಾನಧಿಕನೆನಿಸಿ ನೆಗೞ್ದಭಿ
ಮಾನಧನಂ ಪೊಟ್ಟಯೂರ ಮಾರನುದಾರಂ ॥ 70 ॥

ಚಂ ಮಾ ॥ ವಿದಿತಯಶೋತ್ಥನೆಂಬುದು ಬುಧಸ್ತುತನೆಂಬುದು ಸತ್ಯವನ್ತನೆಂ
ಬುದು ನಯಶಾಳಿಯೆಂಬುದು ದಯಾಪರನೆಂಬುದು ಸುಂದರಾಂಗನೆಂ
ಬುದು ಮನುಮಾರ್ಗ್ಗಿಯೆಂಬುದು ಗುಣಾಗ್ರಣಿಯೆಂಬುದು ಗೋತ್ರರತ್ನನೆಂ
ಬುದು ಸಕಳಾವನೀತಳದೊಳೇಂ ಪೆಱತೆಂಬುದೆ ಮಾರಗೌಣ್ಡನಂ ॥ 71 ॥

5) ಶಿಗ್ಗಾಂವ, E.I. Vol. XIII, p. 170 ; K.I. Vol. I, p. 21, ಕ್ರಿ.ಶ. 1055

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆಯಾದ ತ್ರೈಲೋಕ್ಯಮಲ್ಲನ ಸಾಮಂತ ಕದಂಬ ಹರಿಕೇಸರಿಯು ಕೇತಿಸೆಟ್ಟಿಯ ಪ್ರಾರ್ಥನೆಯಂತೆ ಕದಂಬೇಶ್ವರದೇವರಿಗೆ ದತ್ತಿಯನ್ನು ಬಿಟ್ಟಂತೆ ಹೇಳಿದೆ.

ಹರಿಕೇಸರಿಯ ಹೆಂಡತಿ ಲಚ್ಚಲದೇವಿ

ಉ ಮಾ ॥ ಭೂವನಿತಾವರಂ ಹರಿಗನಾನೃಪವೀರನುರಸ್ಥಳಕ್ಕೆ ಲ
ಕ್ಷ್ಮೀವಧು ಪೀನಬಾಹುಯುಗಳಕ್ಕೆ ಜಯಾಂಗನೆ ತನ್ಮುಖಕ್ಕೆ ವಾಕ್
ಶ್ರೀವಧುವಾಗಿ ರಂಜಿಸಿ ಮಹೋನ್ನತಿಯಂ ಪಡೆದುದ್ಧಕೀರ್ತಿಲೀ
ಲಾವತಿಯೆಂದು ಬಣ್ಣಿಪುದು ಲಚ್ಚಲದೇವಿಯನೀ ಜಗಜ್ಜನಂ ॥ 72 ॥

ಚಂ ಮಾ ॥ ವಿನಯದ ಮೇರೆ ಧರ್ಮದ ತವರ್ಮನೆ ಸತ್ಯದ ಜನ್ಮಭೂಮಿ ಮಾಂ
ತನದದಗುಂತಿ ಚಾಗದ ಮಹಾನಿಧಿ ಪೆಂಪಿನ ರತ್ನರಾಶಿ ಸ
ಜ್ಜನಿಕೆಯ ರಮ್ಯಹರ್ಮ್ಯಮಱಿವಿಂಗೆಱೆವಟ್ಟು ವಿದಗ್ಧಮುಗ್ಧೆ ಸ
ಜ್ಜನನುತೆಯೆಂದು ಬಣ್ಣಿಪುದು ಲಚ್ಚಲದೇವಿಯನೀ ಜಗಜ್ಜನಂ ॥ 73 ॥

6) ಹೊಟ್ಟೂರು, E.I. Vol. XVI, p. 83, ಕ್ರಿ.ಶ. 1067

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆಯಾದ ಮೊದಲನೆಯ ಸೋಮೇಶ್ವರನ ಆಳಿಕೆಯಲ್ಲಿ ಮಾರಗಾವುಂಡ ಎಂಬುವವನ ಮಗ ಕೇಶಿಗಾವುಂಡನನ್ನು ವರ್ಣಿಸಿದೆ. ಈ ಶಾಸನವನ್ನು ರಚಿಸಿದವನು ರಾಜವಲ್ಲಭ.

ಹೆಳವರ ಮಾರಗಾವುಂಡ

ಕಂ ॥ ಆ ನಾಡೊಳಖಿಳಘಟಿಕಾ
ಸ್ಥಾನವಿದೆನಿಸಿತ್ತು ಪೊಟ್ಟಿಯೂರದಱಲ್ ಸ
ಲ್ಲೀನಮತಿ ಮಾರನುಚಿತವ
ಚೋನಿಧಿ ಗಾವುಣ್ಡಸಾಮ್ಯದೊಳ್ ಸುಖವಿಟ್ಟಂ ॥ 74 ॥

ಮ ವಿ ॥ ಕುಡುವವರ್ವೇಡಿದೊಡರ್ತ್ಥಿಗರ್ತ್ಥಚಯಮಂ ಶ್ರೀಮಂತರುಂತೇನುಮಂ
ಕುಡರೀ ಲೋಕದೊಳೊನ್ದಪೂರ್ವ್ವವೆನಿಸಲ್ಕಾಲಿಲ್ಲದರ್ವ್ವೇಡಿ ಬಂ

ದಡೆ ಕಾಲಂ ನಿಜಶಕ್ತಿಯಿಂ ಪಲರ್ಗ್ಗೆಗೊಟ್ಟಂ ಮಾರಗಾವುಣ್ಡನೆ
ನ್ದಡೆ ತತ್ಸತ್ತ್ವದ ತತ್ತ್ವದುನ್ನತಿಯನಂತಿಂತುಂತೆನಲ್ಬೇರ್ಕುಮೇ ॥ 75 ॥

ಕಂ ॥ ಗುಣದೊಳಳವಿನೊಳಂ ಮನು
ಗೆಣೆಯೆನೆ ಪೆಳವಂಗೆ ಕಾಲನಿತ್ತುದಱಿಂ ದ
ಕ್ಷಿಣಸೋಮನಾಥನೆನೆ ಧಾ
ರಿಣೀತಳಂ ನೆಗೞ್ದನಲ್ತೆ ಮಾರನುದಾರಂ ॥ 76 ॥

ಕೇಶಿಗಾವುಂಡ

ಮ ಸ್ರ ॥ ಪಡೆದಂ ಕಾದಂಬವಂಶಾಗ್ರಣಿ ಹರಿಗಮಹೀಪಾಳನೊಳ್ ಚಾಮರೌಘಂ
ಗುಡಿ ಚೌಕಂ ಭೇರಿ ಸಂಕಂ ಬರುಹಿ ಬಹಳಪಿಂಛಾತಪಂ ವಾರಣಂ ಬೆ
ಳ್ಗೊಡೆಯೆಂಬೀ ರಾಜ್ಯಚಿಹ್ನಬ್ರಜಮನುದಿತ ತೀವ್ರಪ್ರಭಾಭಾಸಿ ತಾನೆಂ
ದಡೆ ಹೋ ಬಾಪ್ಪಪ್ಪುದಿಂತೀ ಭುವನಭವನದೊಳ್ ಕೇಶಿ ತೇಜೋವಿಳಾಸಂ
॥ 77 ॥

ಕಂ ॥ ಮಗನೆನಗೀತನೆ ಚಾಳು
ಕ್ಯಗಂಗಪೆರ್ಮ್ಮಾಡಿಯೆಂದು ಪೆಸರ್ಗ್ಗೊಟ್ಟಂ ಕೇ
ಶಿಗೆ ಮೆಚ್ಚಿ ನಚ್ಚಿ ಚಾಳು
ಕ್ಯ ಗಂಗ ಪೆರ್ಮ್ಮಾಡಿ ವಿಕ್ರಮಾದಿತ್ಯನೃಪಂ ॥ 78 ॥

ಮ ವಿ ॥ ಪರಮೋತ್ಸಾಹದಿನಿತ್ತನುತ್ತಮಸಿತಚ್ಛತ್ರಾಸ್ಪದಂ ಹೇಮಚಾ
ಮರಯುಗ್ಮಂ ಗುಡಿ ವೀರಭೇರಿ ಶಿಖಿಪಿಂಛಚ್ಛತ್ರಮೆಂದಿಂತು ಗಂ
ಗರ ಚಾಳುಕ್ಯರ ರಾಜ್ಯಚಿಹ್ನಚಯಮಂ ಶ್ರೀವಿಕ್ರಮಾದಿತ್ಯ ಭೂ
ಧರನೆಂಬುನ್ನತಿ ಕೇಶಿರಾಜವಿಭುವಿಂಗಕ್ಕುಂ ಪೆಱಂಗಕ್ಕುಮೇ ॥ 79 ॥

ಮ ವಿ ॥ ಉದಕಸ್ವರ್ಣ್ನಚಯಾನ್ನದಾನಗುಣದಿಂ ಗೋದಾನದಿಂ ಭೂಮಿದಾ
ನದಿನುಕ್ಷಬ್ರಜದಾನದಿಂ ವಿವಿಧವಿದ್ಯಾದಾನದಿಂ ನಿತ್ಯದಾ
ನದಿನುದ್ವೃತ್ತಿಳದಾನದಿಂ ನಿಖಿಳಕನ್ಯಾದಾನದಿಂ ತುಷ್ಟಿ ಮಾ
ಡಿತನುತ್ಕೃಷ್ಟಜನಕ್ಕೆ ಕೇಶವನಿದೇಂ ಸಚ್ಚಿತ್ತಸಂಪನ್ನನೋ ॥ 80 ॥

7) ನೀರಲಗಿ, E.I. Vol. XVI, 70, ಕ್ರಿ.ಶ. 1074 – 75

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆಯಾದ ಭುವನೈಕಮಲ್ಲನ ಆಳಿಕೆಯಲ್ಲಿ ಕದಂಬ ಶಾಂತಿವರ್ಮನು ಪೊಂಬಳ್ಳಿಯ ರಾಮೇಶ್ವರ ದೇವಸ್ಥಾನಕ್ಕೆ ದತ್ತಿಯನ್ನು ಬಿಟ್ಟನೆಂದು ಹೇಳಿದೆ.

ಕದಂಬ ಶಾಂತಿವರ್ಮ

ಮ ಸ್ರ ॥ ಬಳವದ್ವಿದ್ವಿಷ್ಟಭೂಪಾಳಕರೆಱಗಿ ಶರಣ್ಬೊಕ್ಕು ದುರ್ವಾರಬಾಹಾ
ಬಳಮಂ ಮಾಣ್ದೆಂದುದಂ ಕೊಟ್ಟಳುಕಿ ಬಳುಕಿ ಭೃತ್ಯತ್ವಮಂ ಪೂಣ್ದರೆಂದಂ
ದೆಲೆಲೇ ಮೀಱಲ್ ಕಡಂಗಲ್ ತೊಡರಲೆಡಱಲೊಟ್ಟಯ್ಸಲುಕ್ಕಲ್ ಪಳಂಚಲ್
ಪೊಳೆಪಿಂ ಮಾಱಾಂತು ಕಾದಲ್ ನೆಱೆವರೆ ಧುರದೊಳ್ ದೇವ
ಕಾದಂಬರುದ್ರಾ ॥ 81 ॥

ಮ ಸ್ರ ॥ ಬಳವತ್ಕೋಪಾಗ್ನಿಯಿಂದಾಂತಹಿತರನೆಲೆಲೇ ಕೊಲ್ವುದಂತಿರ್ಕೆ ಬಾಹಾ
ಬಳದಿಂದಮ್ಮಮ್ಮ ದಿಕ್ಪಾಳರನಳುಕಿಸಲದ್ರೀಂದ್ರಮಂ ಚಾಳಿಸಲ್ ಭೂ
ತಳಮಂತುಂ ಕಂಪಿಸಲ್ ದಿಗ್ಗಜಮನಳಱಿಸಲ್ ವಾರ್ಧಿಯಂ ಶೋಷಿಸಲ್ಕೇಂ
ಚಳಮೋ ಪೇೞ್ ಸಾಲನೇ ತತ್ಕ್ಷಣದೊಳೆ ಮುಳಿದಂದೋಹೊ
ಕಾದಂಬರುದ್ರಂ ॥ 82 ॥

ಮ ಸ್ರ ॥
ಕಡುಪಿಂದಂ ದೇವ ನಿನ್ನೊಳ್ ಬಿಡದೆಡಱುವವಂಗುಂಟೆ ಶೂಲಂ ಕಪಾಲಂ
ಕೊಡೆ ಖಟ್ವಾಂಗಂ ಪಿನಾಕಂ ಪೊಳೆವ ನೊಸಲ ಕಣ್ ಹಸ್ತಿಚರ್ಮಂ ಶಿರೋದ್ಯ
x x x ಭೀಳಭೂತಾವಳಿ ಕಱೆಗೊರಲರ್ಧಾಂಗದೊಳ್ ಗೌರಿ ಪೆಂಪಂ
ಪಡೆದರ್ಧೇಂದುಪ್ರಭಾಭಾಸುರವಿಕಟಜಟಾಜೂಟಕೋಟೀವಿಟಂಕಂ ॥ 83 ॥

ಹಾನಗಲ್ಲು ತಾಲ್ಲೂಕು

8) ಕರಿಗುದರಿ, E.I. Vol. X, p. 251, ಕ್ರಿ.ಶ. 1108

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ಆರನೆಯ ವಿಕ್ರಮಾದಿತ್ಯನ ಆಳಿಕೆಯಲ್ಲಿ ಕದಂಬ ಕುಲದ ಮಯೂರವರ್ಮನು ಅಶ್ವಮೇಧ ಯಾಗಗಳನ್ನು ಮಾಡಿದನೆಂದೂ, ಅಹಿಚ್ಛತ್ರನಗರದಿಂದ ಬ್ರಾಹ್ಮಣರನ್ನು ಕರೆತಂದು ಕುಂತಳದೇಶದಲ್ಲಿ ನೆಲೆಗೊಳಿಸಿದನೆಂದು ಹೇಳಿದೆ. ಈ ಶಾಸನವನ್ನು ರಚಿಸಿರುವವನು ಬಹುಶಃ ಬೊಮ್ಮಣಪಂಡಿತದೇವ.

ತೈಲಪ

ಮ ಸ್ರ ॥ ನುಡಿ ಸತ್ಯಂ ಸಚ್ಚಾರಿತ್ರಂ ನಡೆ ಗುಣಮುಖಿಲಾನಂದಮುದ್ವೃತ್ತತಾಪಂ
ತೊಡರ್ಬರ್ದಾರಾತಿ ಭೂಪಾಳಕಬಳವಿಜಯಶ್ರೀಸಹಕ್ರೀಡೆ ಚಿತ್ರಂ
ಮೃಡಪಾದಾಂಭೋಜಭಕ್ತಿಪ್ರಬಳತೆ ಶರಣಾರ್ಥಿವ್ರಜಾಧೀನಮೆಂತು
ಪಡೆದರ್ಥಂ ಕೂಡೆ ಲೋಕೋತ್ತರವಿಶದಯಶಂ ತೈಲಭೂಪಾಲದೇವಂ
॥ 84 ॥

ಕದಂಬರ ಮಯೂರವರ್ಮ

ಕಂ ॥ ಶ್ರೀಮಚ್ಛಶಾಂಕಮೌಳಿಗ
ವೀ ಮಹಿಗಂ ಜನಿಸಿ ಸಕಲರಿಪುನೃಪರಂ ಗೆ
ಲ್ದಾ ಮಹಿಮಾಸ್ಪದನೆನಿಪು
ದ್ದಾಮಯಶಂ ಶ್ರೀಮಯೂರವರ್ಮ್ಮಂ ನೆಗಟ್ದಂ ॥ 85 ॥

ಮ ವಿ ॥ ಹಿಮವನ್ತಸ್ಫಟಿಕಶ್ಶಿಳಾತಳದ ಶುಂಭಸ್ತಂಭದೊಳ್ ಕಟ್ಟಿದಂ
ಸಮದೇಭಂಗಳನಶ್ವಮೇಧಮೆನಿಪೀ ಯಜ್ಞಂಗಳಂ ಮಾಡಿದಂ
ಕ್ರಮದಿಂದಂ ಪದಿನೆಂಟನಾ ದ್ವಿಜರುಮಂ ತಾನಂದಹಿಚ್ಛತ್ರದಿಂ
ದಮೆ ತನ್ದೆಯ್ದೆ ಸಕುನ್ತಳಾವನಿಯೊಳಂ ಸಂಸ್ಥಾಪ್ಯಮಂ ಮಾಡಿ ವಿ
ಕ್ರಮಮಂ ತಾಳ್ದಿ ಮಯೂರವರ್ಮ್ಮನೆಸೆದಂ ವಿಶ್ವಂಭರಾಭಾರದೊಳ್
(ಪಂಚಪಾದ ವೃತ್ತ) ॥ 86 ॥

9) ಹೇರೂರು, ಡಾ. ಬಿ. ಆರ್. ಹಿರೇಮಠರ ಶಾಸನ ಅಧ್ಯಯನ, ಪು. 52, ಕ್ರಿ.ಶ. 1245

ನಂದಿಭಟ್ಟಾಕರ ಶಿಷ್ಯೆಯಾದ ಕನಕವ್ವೆಯು ಸಮಾಧಿಮರಣ ಹೊಂದಿದ ಚಿತ್ರಣ ಈ ನಿಸಿಧಿ ಶಾಸನದಲ್ಲಿದೆ. ಇದು ಯಾದವ ದೊರೆ ಸಿಂಹಣದೇವನ ಆಳಿಕೆಯ ಕಾಲದ್ದು.

ಕನಕಾಂಬಿಕೆ

ಚಂ ಮಾ ॥ ತಮತಮಗಳ್ಕಿ ಬನ್ಧುಗಳು ಬಾಯ್ವಿಡೆ ತಂನವರೆಲ್ಲಮಾವಗಂ
ಸಮತೆಯನಿಕ್ಕು ಗೋಳಿಡೆ ನಿಜಾನ್ವಯರಕ್ಕಟಗಾತ್ರಯೆಂದು ದುಃ
ಖಮನೊಳಕೊಂಡು ಶೋಕಿಸೆ ಸಮಾಧಿವಿಧಾನದಿನೆಯ್ದಿ ದೇವಲೋ
ಕಮನಮರತ್ವಮಂ ಪಡೆದಳೇಂ ಕನಕಾಂಬಿಕೆ ಧೈರ್ಯವಂತೆಯೋ ॥ 87 ॥

ಚಂ ಮಾ ॥ ನಿರುಪಮ ಜೈನಯೋಗಿ ಜಿನರಾಜಗೆ ದಾನಮನಿತ್ತು ಚಿತ್ತದೊಳ್
ಚಿರಮಿರಿಸಿಟ್ಟ ಜೈನಪದಪಂಕಜಮಂ ವರ ಜೈನಮಾರ್ಗ ಬ
ನ್ಧುರತರಮಾದ ಸನ್ಯಸನಮಂ ತಳೆದಾ ಕನಕವ್ವೆಯೆಯ್ದಿದಳ್
ಸುರುಚಿರ ದೇವಲೋಕಜನಿತಾನುಪಮಾನ ಸುಖಾನುಭೂತಿಯಿಂ ॥ 88 ॥

ಹಾವೇರಿ ತಾಲ್ಲೂಕು

10) ಕುಳೇನೂರ್, E.I. Vol. XV, 329, ಕ್ರಿ.ಶ. 1028

ಈ ಶಾಸನದಲ್ಲಿ ಕಲ್ಯಾಣದ ಚಾಲುಕ್ಯರ ದೊರೆಯಾದ ಜಯಸಿಂಹನ ಆಳಿಕೆಯಲ್ಲಿ ಕುಂದರಾಜನ ಹೆಂಡತಿ ಕುಂದಲದೇವಿ ಕುಳೇನೂರ್ ದೇವಸ್ಥಾನಕ್ಕೆ ಭೂಮಿಯನ್ನು ದತ್ತಿ ಬಿಟ್ಟಂತೆ ಹೇಳಿದೆ.

ಕುಂದರಾಜ

ಚಂ ಮಾ ॥ ಮಲೆಪರ ಪೊಂಗಡಂಗಿದುದು ಮನ್ನೆಯರುರ್ಕು ಕಟಿಲ್ದುದನ್ಯಮಂ
ಡಲಿಕರ ದರ್ಪಮೋಗಡಿಸಿತಾಂತು ಬಿಗುರ್ತರಿವರ್ಗಮಳ್ಕಿ ಬಾ
ಟ್ದಿಲೆಗಳನಿತ್ತು ಕಂಡು ಬೆಸಗೆಯ್ದಪರೀದೊರೆತುಗ್ರಮಪ್ಪ ತೋ
ಳ್ವಲದ ಪೊಡರ್ಪುಮೊಟ್ಟಜೆಯುಮುನ್ನತಿಯುಂ ಸಲೆ ಕುಂದರಾಜನಾ ॥ 89 ॥

ಕುಂದಲದೇವಿ

ಕಂ ॥ ಸರಸಿರುಹದಲರ ನಡುವಣ
ಸಿರಿಯವೊಲತ್ಯಂತಮಪ್ಪ ತೇಜದಿನಂತಃ
ಪುರಮನಲಂಕರಿಪುದಱಿಂ
ಧರೆ ಸವತಿತಳಪ್ರಹಾರಿಯೆನೆ ಸಲೆ ನೆಗಟ್ದಿಳ್ ॥ 90 ॥

ಕಂ ॥ ಸರಸತಿಗೆ ರತಿಗೆ ರಂಭೆಗೆ
ಗಿರಿಜೆಗರುಂಧತಿಗೆ ರಘುಕುಲೇಶನ ಸತಿಗಂ
ದೊರೆ ಪಾಸಟಿ ಮಿಗಿಲೆಂದೀ
ಧರೆ ಪೊಗಟ್ಟುದು ನೆಗಟ್ದಿ ಸವತಿಗಜಕೇಸರಿಯಂ ॥ 91 ॥

11) ಹಾವೇರಿ, ಶಾಸನ ಪದ್ಯಮಂಜರಿ 12, ಕ್ರಿಶ. ಸು. 1140

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ಜಗದೇಕಮಲ್ಲನವರೆಗೆ ಚಾಳುಕ್ಯವಂಶವನ್ನು ಹೇಳಿದೆ. ಇಲ್ಲಿ ಕೊಟ್ಟಿರುವ ರಾಜ ಪರಂಪರೆಗೂ ಇತರ ಗ್ರಂಥಗಳಲ್ಲಿ ಹೇಳಿರುವ ರಾಜ ಪರಂಪರೆಗೂ ಸ್ವಲ್ಪ ವ್ಯತ್ಯಾಸವಿದೆ.

ವಿಕ್ರಮಾದಿತ್ಯ

ಮ ವಿ ॥ ಕಲಿಕಾಳಾವನಿಪಾಳ ಜಾಳ ಚಿರ ದೋರ್ವಾಸೋಪಜಾತೋದ್ಧತಾ
ಖಿಲ ಕಾಲುಷ್ಯ ಕಳಂಕ ಪಂಕ ಪಟಲ ಪ್ರಕ್ಷಾಳನಂ ಮಾಡಲೆಂ
ದೊಲವಿಂ ತೀರ್ಥ ಜಳಾವಗಾಹನಮನಾದಂ ಮಾಡುತಿರ್ಪಂತೆ ನಿ
ಚ್ಚಲುಮಿರ್ಪಳ್ ಜಯಲಕ್ಷ್ಮಿ ಖಡ್ಗಜಳದೊಳ್ ಚಾಳುಕ್ಯ ಚಕ್ರೇಶನಾ ॥ 92 ॥

ಸೋಮೇಶ್ವರ

ಮ ವಿ ॥ ವಿನತಾರಾತಿ ನೃಪಾಳ ಮೌಳಿಮಣಿಗಳ್ ನಕ್ಷತ್ರಮಾತ್ಮೀಯ ಕೀ
ರ್ತಿ ನವಾಭ್ಯುನ್ನತ ಚಂದ್ರಿಕಾ ಪ್ರಸರಮೋರಂತಸ್ತತಾಪಂ ಜಗ
ಜ್ಜನಮೆಲ್ಲಂ ಸುಚಕೋರಕಾವಳಿಯೆನಲ್ ಸೋಮಾಖ್ಯೆ ಭೂಚಕ್ರದೊಳ್
ತನಗನ್ವರ್ಥಮೆನಲ್ ವಿರಾಜಿಸಿದಪಂ ಸೋಮೇಶ್ವರೋರ್ವೀಶ್ವರಂ ॥ 93 ॥

ಕಂ ॥ ಅರಿಭೂಪರ ತೇಜದ ದ
ಳ್ಳುರಿ ಮಟ್ಟುಗುಮೊರ್ಮೆ ತನ್ನ ಪೆಸರ್ಗೊಳಲೇನ
ಚ್ಚರಿವಡೆದುದೊ ಜಗಕತಿ ಭೀ
ಕರತರ ತರವಾರಿ ವಾರಿ ಸೋಮೇಶ್ವರನಾ ॥ 94 ॥

ಜಗದೇಕಮಲ್ಲ

ಮ ಸ್ರ॥
ಹರಿ ದುಗ್ಧಾಂಭೋಧಿಯೊಳ್ ವಿಶ್ರಮಿಸಿ ಸುಖದೊಳಂದಿರ್ದನಾ ಕೂರ್ಮ ರಾಜಂ
ಪಿರಿದುಂ ಪಾತಾಳ ಪಂಕ ಪ್ರಥಿತ ಪೃಥುಳ ದೇಶಂಗಳಂ ಪೊಕ್ಕು ಲೀಲಾ
ಕರನಾದಂ ಭೋಗಿ ಭೋಗಂಗಳನನವರತಂ ಸೇವಿಸುತ್ತಿರ್ದನತ್ಯಾ
ದರದಿಂ ಶ್ರೀಮತ್ಪ್ರತಾಪಕ್ಷಿತಿಪತಿ ಧರಣೀಭಾರಮಂ ತಾಳ್ದಿದಾಗಳ್ ॥ 95 ॥

12) ನೀರಲಗಿ, SII Vol XVIII, No. 151, ಕ್ರಿ.ಶ. 1148

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ಎರಡನೆಯ ಜಗದೇಕಮಲ್ಲನ ಆಳಿಕೆಯಲ್ಲಿ ಮಲ್ಲಿನಾಥ ಎಂಬುವವನು ಮಲ್ಲಿನಾಥ ತೀರ್ಥಂಕರ ಜಿನಾಲಯವನ್ನು ಮಾಡಿಸಿ ದತ್ತಿ ನೀಡಿದುದನ್ನು ಹೇಳಿದೆ.

ನಾಳ್ಪ್ರಭು ಮಲ್ಲ

ಕಂ ॥ ಚಿತ್ತಂ ಜಿನಪತಿ ಪದದೊಳ್
ವಿತ್ತಂ ಚತುರುದಿತ ದಾನದೊಳ್ ಕೀರ್ತ್ತಿ ದಿಶಾ
ಭಿತ್ತಿಗಳೊಳ್ ಸಂದಿರೆ ಲೋ
ಕೋತ್ತಮನಾದಂ ಬಬಾಪ್ಪು ನಾಳ್ಪ್ರಭು ಮಲ್ಲಂ ॥ 96 ॥

ಕಂ ॥ ಮಲ್ಲಂ ಪರವಧುವೆಳಸಿದೊ
ಡೊಲ್ಲಂ ಮಿಥ್ಯಾಮತಕ್ಕೆ ಸಲ್ಲಂ ರಿಪು ಹೃ
ಚ್ಛೆಲ್ಲಂ ಪರಹಿತ ಗುಣದೊಳ್
ಪಲ್ಲವಿಪ ಜಸಕ್ಕೆ ತಾನೆ ತಾಯ್ಗುರುವಾದಂ ॥ 97 ॥

ಮ ವಿ ॥ ಸ್ವಭುಜೋಪಾರ್ಜ್ಜಿತಮಾಗುಪಾರ್ಜ್ಜಿಸಿದನಿನ್ತೀ ವೃತ್ತಿಯಂ ನೋಡ ನಾ
ಳ್ಪ್ರಭುವೀ ಬೆಳ್ ಹುಗೆ ಸಂದ ನೇಜಿಲಗೆ ವಿಖ್ಯಾತಾಕರಂ ಕೊಳನೂ
ರ್ವ್ವಿಭವಾಳಂಕೃತವೆಮ್ಮೆವಳ್ಳಿ ವಸುಧಾಶೋಭಾಕರಂ ಶ್ರೀಕರ
ಪ್ರಭವಂ ಕಲ್ ಹೊಳೆಗುಲುಗವಳ್ಳಿಯುಮನೀ ಮಲ್ಲಂ ಯಶೋವಲ್ಲಭಂ
॥ 98 ॥

ಕಂ ॥ ತೊಱೆಯಿಗುಳೆಯನಂ ಕೊಲಗೆಯ
ನೆಱೆದ ಮಹತ್ವ ಪ್ರಭುತ್ವಮಮಂ ತಾಳ್ದಿ ಜಸಂ
ನೆಱೆದಿಂಗಳ ತಣ್ಗದಿರೆನೆ
ಮಿಱುಗಲ್ ಬಳಿಯ ಕುಳದೀಪಕ ಪೆಸರ್ವೆತ್ತಂ ॥ 99 ॥

ಚಂ ಮಾ ॥ ಕುಲದ ಮದಂ ವಿವೇಕದ ಮದಂ ಪ್ರಭುಶಕ್ತಿ ಮದಂ ಸಮಗ್ರದೋ
ರ್ವ್ವಳದ ಮದಂಗಳಂ ಮನದೆಗೊಳ್ಳದೆ ಬಾಪ್ಪುರೆ ತನ್ನ ಮುತ್ತ ಮೂ
ದಲೆಯರೊಳಿನ್ನರಾರುಮಣಮಿಲ್ಲೆನೆ ಪೆಂಪಿನಗುಂಪುವೆತ್ತ ನೇ
ಱಿಲಗೆಯ ಮಲ್ಲನಲ್ಲದರಿಹಂಪರವಿಲ್ಲದರೊಳ್ಪನೊಲ್ಲದರ್ ॥ 100 ॥

ದಡಿಗ

ಕಂ ॥ ವಿನುತ ಜಿನಧರ್ಮ್ಮವಾರ್ಮ್ಮಂ
ಜಿನಮುನಿಗಳ್ ತನಗೆ ಪರಮ ಗುರುಗಳೆನಲ್ ಸ
ಜ್ಜನನುತ ಚತುರ್ತ್ಥಕುಳ ಮ
ಣ್ಡನನಾದಂ ವಿನಯನಿಧಿ ಮಹಾಪ್ರಭು ದಡಿಗಂ ॥ 101 ॥

ಮ ವಿ ॥ ನುಡಿ ಕಲ್ಲೊಳ್ ಕಡೆದಕ್ಕರಕ್ಕೆ ಮಱುವಕ್ಕಂ ವಿಕ್ರಮಂ ಸಿಂಹಮಂ
ಜಡಿಗುಂ ತನ್ನಯ ದಾನಶಕ್ತಿ ಸುರಭೂಜಾನೀಕದೊಳ್ ಪೂಣ್ದು ಕೋ
ಡಿಡುಗುಂ ಕಂತುಗೆ ಕಿಂತುವಂ ಜನಿಯಿಕುಂ ಸೌಂದರ್ಯ್ಯಮೆಂದಂದು ಪೇಳ್
ದಡಿಗಂಗಾರ್ಪ್ಪಡಿ ಪಾಟಿಪಾಸಟಿ ಸಮಂ ಪಟ್ಟಾನ್ತರಂ ಮಾನವರ್ ॥ 102 ॥

ಕಂ ॥ ಬಲ್ಲಹನೆನೆ ನೆಗರ್ದ್ದಾಹವ
ಮಲ್ಲಂ ಕೊಡೆಯೆಡಪಮಂ ದಳಂ ಸೀಗುರಿಯೆಂ
ಬೆಲ್ಲಾ ಚಿಹ್ನಮನದಟರ
ಮಲ್ಲಂ ದಡಿಗಂಗೆ ಕೊಟ್ಟನನ್ಕಾದರದಿಂ ॥ 103 ॥

ರೇವಕಬ್ಬೆ

ಕಂ ॥ ಆ ಪ್ರಭುವಿನ ಕುಲವಧು ಶೀ
ಲಪ್ರಭೆಯಿಂದತ್ತಿಮಬ್ಬೆಗಂ ರೇವಕಗಂ
ಭೂಪ್ರಣುತೆ ಸಮನೆನಿಪ್ಪ ಯ
ಶಃ ಪ್ರಕಟಿತೆ ರೇವಕಬ್ಬೆಗೆಣೆಯಾರ್ಸ್ಸತಿಯರ್ ॥ 104 ॥

ಎಜಿಕ

ಉ ಮಾ ॥ ಪುಟ್ಟಿದನಂತವರ್ಗ್ಗೆಜಿಕನೆಂಬ ಮಹಾಪ್ರಭು ವಂಶವರ್ಧನಂ
ಜೆಟ್ಟಿಗನರ್ಹದಂಘ್ರಿ ನಳಿನಾನತಭೃಂಗನುದಾರಿ ಬಿಣ್ಪು ಮಾ
ರ್ಕಟ್ಟಳೆಯಾಯ್ತು ಮಂದರನಗಕ್ಕೆ ಬಣಂಜುಕುಳಕ್ಕೆ ನಾಳ್ಕೆ ತ
ನ್ನಿಟ್ಟುದೆ ಬೊಟ್ಟು ಕಟ್ಟಿದುದೆ ಕಣ್ಠಿಕೆ ಬಿಟ್ಟುದೆ ತಾಂಬ್ರಶಾಸನಂ ॥ 105 ॥

ದೇವಲಬ್ಬೆ

ಕಂ ॥ ಆ ವಿಭುವಿಗೆ ದೇವಲಬೆ ಗು
ಣಾವಳಿಯಿಂ ಪುರುಷಭಕ್ತಿಯಿಂ ಶೀಳದೊಳಂ
ತೀವಿ ಜಿನಮತಕೆ ಶಾಸನ
ದೇವಿಯೆನಲ್ ಪೆಂಪುವೆತ್ತ ಕುಲವಧುವಾದಳ್ ॥ 106 ॥

ಚಟ್ಟಗಾವುಂಡ

ಉ ಮಾ ॥ ಬೆಟ್ಟದ ನುಣ್ಪಿನಂತೆ ಕಡುದೂರದೊಳೊಳ್ಪಿದರೆಯ್ದೆವೋಗೆ ಕಲು
ಗಟ್ಟೆನಿಪನ್ನರೇನೊ ಮಹಿಮೋನ್ನತಿಯಿಂದಿಳಿಕೆಯ್ವನೆಯ್ದೆ ಪೊಂ
ಬೆಟ್ಟಮನಾ ಗಭೀರತೆಯಿನಂಬುಧಿಯಂ ಗೆಲೆವಂದನೆಂಬುದಾ
ಚಟ್ಟನನನ್ಯ ಸೈನಿಕ ಘರಟ್ಟನನನ್ವಯರತ್ನಪಟ್ಟನಂ ॥ 107 ॥

ಚಾಯಿಕವ್ವೆ

ಕಂ ॥ ಎನೆ ನೆಗರ್ದ್ದ ಚಟ್ಟಗಾವು
ಣ್ಡನ ಮಾನಿನಿ ಜಾಯಿಕವ್ವೆ ಗಾವುಂಡಿ ಜಗ
ಜ್ಜನಕೆ ಬುಧಜನಕೆ ಜಿನಜನ
ಕನುಪಮ ನಿಜಜನಕೆ ಕಲ್ಪಲತೆಯವೊಲೆಸೆದಳ್ ॥ 108 ॥

ಚಂ ಮಾ ॥ ವಿನಯದ ಪೆಂಪಿನುನ್ನತಿಯ ಮಾನ್ತನದೊಳ್ಪಿನ ಸಚ್ಚಾರಿತ್ರದಾ
ರ್ಪಿನ ನಿಜಗೋತ್ರರಕ್ಷಣೆಯ ಧರ್ಮದ ಪೆರ್ಮೆಯವೊಂದನೊನ್ದು ನೆ
ಟ್ಟನೆ ಮಿಗೆ ಸಚ್ಚತುರ್ಥಕುಳದೀಪಿಕೆ ತಾನೆನಿಸಿರ್ದ್ದ ಚಾಮಿಯ
ಕ್ಕನೊಳೆಣೆಯಾರ್ಮ್ಮಹಾಪ್ರಭು ಶಿಖಾಮಣಿ ಚಟ್ಟನ ಪುಣ್ಯಕಾನ್ತೆಯೊಳ್ ॥ 109 ॥

ಚಟ್ಟಗಾವುಂಡನ ಮಗ ಮಲ್ಲ

ಕಂ ॥ ಚಲದ ಭುಜಬಲದ ಕಲಿತನ
ದ ಲಘುಗುಣಕ್ಕಾದಿಯೆನಿಸಿದೀ ಪ್ರಭು ಮಲ್ಲಂ

ಕುಲದೀಪಕನಾದಂ ನಿ
ರ್ಮ್ಮಳಚರಿತಂ ಪಿರಿಯ ಮಹಿಮೆಯಿಂ ಪಿರಿಯಣ್ಣಂ ॥ 110 ॥

ಮಲ್ಲನ ಸಹೋದರರು – ಎಱಿಕ, ಬಾಚ, ಮೂಕ

ಮ ವಿ ॥ ಜಿನಪಾದಾಂಬುಜಚಂಚರೀಕನೆಱಿಕ ವೀರಾರಿನಿರ್ದ್ಧಾರಣಂ
ವಿನಯಾಂಭೋನಿಧಿ ಬಾಚಣಂ ನಿಜಕುಳಪ್ರಖ್ಯಾತಕಂ ಮೂಕನೆಂ
ಬನುಜರ್ಮ್ಮಲ್ಲನ ದಕ್ಷದಕ್ಷಿಣಭುಜಾದಣ್ಡಂಗಳೊಪ್ಪಂತೆ ಮೇ
ದಿನಿಯೊಳ್ ರಾಜಿಸುತಿರ್ದ್ದರಪ್ರತಿಮರತ್ಯೌದಾರ್ಯದಿಂ ಶೌರ್ಯದಿಂ
॥ 111 ॥

ಬಾಚಣ

ಚಂ ಮಾ ॥ ಒದವಿದ ಕೋಪದಿಂದಮಿದಿರಾನ್ತ ನರಂಗೆ ಕೃತಾಂತರೂಪನೆಂ
ಬುದು ಕುಳಿಶಾಗ್ನಿಯೆಂಬುದು ದವಾನಳನೆಂಬುದು ಸಿಂಹಿಕೇಯನೆಂ
ಬುದು ದಶಕಣ್ಠನೆಂಬುದು ಭಯಂಕರಮಾರಿಯ ಮೂರಿಯೆಂಬುದ
ಲ್ಲದೆ ಪೆಱದೆಂಬುದೇ ನೆಗರ್ದ ಬಾಚಣನಂ ರಣರಂಗಧೀರನಂ ॥ 112 ॥

ಮಲ್ಲ

ಕಂ ॥ ಕೊಂಡಾಡಿದ ಪರವಧುಗಳ
ತಂಡದ ಮೊಲೆಯುಂಡು ಮೊಲೆ ಬಸಿರ್ಪ್ಪೆತ್ತ ಬಸಿ
ರ್ಮ್ಮಂಡಳವಱಿಯಲ್ ತನಗಿದ
ಖಂಡಿತಸಚ್ಚರಿತವೆನಿಪನೀ ಪ್ರಭು ಮಲ್ಲಂ ॥ 113 ॥

ಮಲ್ಲಿಯಕ್ಕ

ಕಂ ॥ ಆ ವಿಭುವಿನ ಸತಿ ನೆಗರ್ದ್ದಾ
ರೇವಕಿಗೆ ಸುಳೋಚನಾ ಮಹಾದೇವಿಗೆ ಸಂ
ದೀ ವಧು ಜಿನಪತಿ ಪದಯುಗ
ಸೇವೆಗೆ ಸಮನೆನಿಸಿ ಮಲ್ಲಿಯಕ್ಕಂ ನೆಗರ್ದಳ್ ॥ 114 ॥

ಚೋಮ

ಕಂ ॥ ಚೋಮಮಂ ವರವನಿತಾ ಜನ
ಕಾಮಂ ನಿಜಕುಳಲಲಾಮನುದ್ಧತಭಯಕೃ
ದ್ಧೀಮಂ ವಿನೂತ ವಿಬುಧ
ಪ್ರೇಮಂ ನಿಜಗೋತ್ರಭೂಷಣಂ ಧರೆಗೆಸೆದಂ ॥ 115 ॥

ಮಲ್ಲಿನಾಥ

ಚಂ ಮಾ ॥ ಜನನಿ ಜಗಜ್ಜನೋದ್ಘಹಿತಮಾಗಿರೆ ಕಲ್ಪಮಹೀಜದೊಂದು ಪ
ಣ್ಣನೆ ಸವಿದಾ ಫಳಂ ಸಫಳಮಾಗಿರೆ ಪೆತ್ತಳೋ ನಿನ್ನನಲ್ಲದಂ
ದನಿಮಿಷಧೇನುದುಗ್ಧ ಪರಿಸೇವೆಯೊಳೀ ವಪುವರ್ದ್ಧನಪ್ರಚೋ
ದನೆಗೆಡೆಯಾಯ್ತೋ ಪೇಳೆನಿಪುದಾರ್ಪ್ಪು ಮಹಾಪ್ರಭು ಮಲ್ಲಿನಾಥನಂ
॥ 116 ॥

ಮ ಸ್ರ ॥
ಸಿಡಿಲೊಂದೇಳೆಂಟು ಕಾಳಾಂತಕನ ಮಸಕವೇಳೆಂಟು ರಾಹುಪ್ರಕೋಪಂ
ಪಡಿಯೇಳೆಂಟಪ್ಪಡಕ್ಕುಂ ನಿನಗೆ ಸಮರದೊಳ್ ಮಲ್ಲ ತಾಂಗಲ್ ತಱುಂಬಲ್
ಕಡುಕೆಯ್ಯಲ್ ಕೆಯ್ದುಕೆಯ್ಯಲ್ ಮರೆಯಲುಲಿಯಲುರ್ವ್ವಳಲೊಟ್ಟಯ್ಸಲೆಯ್ತುಂ
ದಡೆಯಿಂ ಮುಂದಣ್ಗೆ ಮತ್ತೊಂದಡಿಯನಿಡುವ ಮಲ್ಲಯ್ಯ ಕೆಲ್ಲಯ್ಯನಾವೊಂ ॥ 117 ॥

ಉ ಮಾ ॥ ಏ ದೊರೆಯಂ ಗಡಿತ್ತು ಜಸವಂ ಪಡೆವರ್ಗ್ಗೆ x ಚಾಗವುದ್ಧತಂ
ಗೇ ದೊರೆಯಂಗವಂಳುಕದ ಪರಾಕ್ರಮಮಳುಕಿ ಶರಣ್ಯಮೆಂದು ಬಂ
ದೇ ದೊರೆಯಂಗೆ ವಜ್ರಕವಚಂ ಬಗೆದಾಗಳೆ ಬೇಡು ಕೊಟ್ಟಪಂ
ಕಾದಿದಪಂ ಶರಣ್ಗೆವರೆ ಕಾದಪನೀ ಪ್ರಭುಮಲ್ಲನುರ್ವ್ವಿಯೊಳ್ ॥ 118 ॥

ಮ ವಿ ॥ ಕಲಿಯೇ ಸೂದ್ರಕನೀವನೇ ಸುರಕುಜಂ ಗಂಭೀರನೇ ವಾರ್ದ್ಧಿನಿ
ರ್ಮ್ಮಳಚಾರಿತ್ರನೆ ಜಾಹ್ನವೀ ಪ್ರಿಯಸುತಂ ಸತ್ಯವ್ರತಖ್ಯಾತನೇ
ಗೆಲೆವನ್ನಂ ನೆಗರ್ದ್ದರ್ಕ್ಕಪುತ್ರನುಮನೆನ್ನಾನನ್ದದಿಂ ವಿಶ್ವಭೂ
ತಳಮೆಲ್ಲಂ ಪೊಗಳುಂ ವಚಃಕಬರಿಕಾಪ್ರೋತ್ಫಲ್ಲನಂ ಮಲ್ಲನಂ ॥ 119 ॥

ಉ ಮಾ ॥ ಸಿಂಗದ ಕೇಸರಂ ಹುಲಿಯ ಮೆಯ್ದೊವಲುಗ್ರವಿಷೋರಗೇಂದ್ರನು
ತ್ತುಂಗ ಫಣಾಳಿರತ್ನಮೆನಿಸಿಪ್ಪುವು ಮತ್ತಿನವನ್ದಿರರ್ತ್ಥವೇ
ಸಂಗತವೆಮ್ಮ ಮಲ್ಲನ ಧನಂ ಜಿನಯೋಗಿಗೆ ಜೈನಗೇಹದು
ತ್ತುಂಗತೆಗಾಶ್ರಿತಂಗೆ ಸಮಸಂದುದು ಸಿದ್ಧರಸಂ ಸುಧಾರಸಂ ॥ 120 ॥

ಮಲ್ಲಿನಾಥ ಜಿನಾಲಯ

ಕಂ ॥ ದಡಿಗನ ನೇಱಿಲಗೆಯೊಳೊಳು
ಪೊಡರಿಸಲುತ್ತುಂಗಮಮಂ ಶಿಲಾಮಯಮಮಂ ನೇ
ರ್ಪ್ಪಡೆ ಮಲ್ಲಿಜಿನಾಶ್ರಯಮಮಂ
ಪಡಿಯಿಲ್ಲೆನೆ ಮಲ್ಲಿನಾಥವಿಭು ಮಾಡಿಸಿದಂ ॥ 121 ॥

ಹರಿಣಂದಿದೇವ

ಮ ವಿ ॥ ಸ್ಮರಮತ್ತೇಭ ಕಿಶೋರಕೇಸರಿ ಮನೋಜೋರ್ವ್ವೀಧ್ರವಜ್ರಂ ರತೀ
ಶ್ವರ ನೀಳೋತ್ಪಳಷಣ್ಡಚಣ್ಡಕರನಾಶಾಯೋಷಿದುತ್ತಂಸ ಬಂ
ನ್ಧುರಮುಕ್ತಾಫಳರಶ್ಮಿ ನಿರ್ಮ್ಮಳಯಶಃಶ್ರೀರೋಚಿಯಾಗಲ್ ದಿಗಂ
ಬರ ಪೂಜ್ಯಂ ಹರಿಣನ್ದಿದೇವನೆಸೆದಂ ಚಾರಿತ್ರ ಚಕ್ರೇಶ್ವರಂ ॥ 122 ॥

ಆರ್ಯಿಕೆ ಚಂದ್ರಮತಿ

ಚಂ ಮಾ ॥ ಸರಸತಿ ಕುಂಚಮಂ ಧರಿಯಿಸಿರ್ದ್ದಳೊ ಶಾನ್ತರಸಂ ತಪಸ್ವಿನೀ
ಚರಿತಮನಾನ್ತುದೊ ಸಕಳಭವ್ಯಜನಂಗಳ ಪುಣ್ಯವೃದ್ಧಿ ಪೆ
ಣ್ಬರಿಜಿನೊಳಾರ್ಯ್ಯಿಕಾಕೃತಿಯನಾನ್ತುದೊ ಪೇಳಿಮಿದೆಂದೊಡಿಲ್ದು ಬಿ
ತ್ತರಿಪುದು ಧಾತ್ರಿ ಚಂದ್ರಮತಿಯವ್ವೆಗದಂ ವಸುಧಾಂತರಾಳದೊಳ್ ॥ 123 ॥

13) ಹಾವೇರಿ, SII Vol XVIII, No. 159, ಕ್ರಿ.ಶ. 1157

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ತ್ರೈಲೋಕ್ಯಮಲ್ಲನ ಆಳಿಕೆಯಲ್ಲಿ ಹಾವೇರಿಯಲ್ಲಿ ಹೆಗ್ಗೆರೆಯನ್ನು ಕಟ್ಟಿಸಿದುದನ್ನು ಹೇಳಿದೆ.

ಹೆಗ್ಗೆರೆ

ಚಂ ಮಾ ॥ ಇನಿಯಳ ಕೂಟದನ್ತೆ ರುಚಿ ಚಂದ್ರಕರಾಂಶುವಿನಂತೆ ತಣ್ಪು ಬಾ
ಣನ ಕೃತಿಯಂತೆ ಸರ್ವ್ವಲಘುಚಂದನದನ್ತೆ ಸುಗಂಧಬನ್ಧುರ
ಮುನಿಕುಳದಂತೆ ನಿರ್ಮ್ಮಳಮೆನಿಪ್ಪ ಜಳೌಘದಿನೊಪ್ಪಿ ತೋರ್ಪ್ಪಮಾ
ನ್ತನಮೆನಿಸಿರ್ದ್ದ ಹಾವರಿಯ ಹೆರ್ಗ್ಗೆಜೆಯಾ ನಳಚಕ್ರಿ ಮಾಡಿದಂ ॥ 124 ॥

ಹಾವೇರಿ

ಕಂ ॥ ಹರಿವ ಹರಿನೀರ್ಗ್ಗೆಯಡ್ಡಂ
ಬರಲುರಗಂ ಕಂಡು ನಳನದಂ ಕಟ್ಟಿಸೆ ನಿ
ರ್ಭ್ಭರದಿಂ ಹಾವೇರಿಯೆನಲ್
ಪರಮಾರ್ತ್ಥಂ ನಾಮಮಾದುದಾಕೃತಯುಗದೊಳ್ ॥ 125 ॥

14) ಹಾವೇರಿ, SII Vol XVIII, No. 155, ಕ್ರಿ.ಶ. ಸು. 12ನೇ ಶತಮಾನ

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ಜಗದೇಕಮಲ್ಲನ ಆಳಿಕೆಯಲ್ಲಿ, ಚಾಳುಕ್ಯ ವಂಶದ ವಂಶಾವಳಿಯನ್ನು ವರ್ಣಿಸಿದೆ.

ಚಾಳುಕ್ಯ ವಂಶ

ಕಂ ॥ ಜಳರುಹನಾಭನ ನಾಭಿಯ
ಜಳಜದೊಳುದಿಸಿದ ಜಳಜಜಜಾತನ ಕರದೊಳ್
ಚುಳುಕೋದಕದಿಂದೊಗೆದತಿ
ಬಳನಿಂದಾದುದು ಚಳುಕ್ಯ ಭೂಪಾಳ ಕುಳಂ ॥ 126 ॥

ಉ ಮಾ ॥ ತೈಲಪದೇವನಗ್ರತನಯಂ ಕಲಿಸತ್ತಿಗನಾತನಾತ್ಮಜಂ
ಶ್ರೀಲಲನಾಧಿಪಂ ನೆಗಳ್ದ ವಿಕ್ರಮನಾತನತಮ್ಮನುದ್ವಿಷ
ತ್ತೂಲತಿಕಾಕುಠಾರನೆನಿಪಂ ದಶವರ್ಮ್ಮನೃಪಂ ತದಾತ್ಮಜಂ
ಶ್ರೀಲತೆಗಾದಡರ್ಪ್ಪೆನಿಸಿ ಪಾಳಿಸಿದಂ ಜಯಸಿಂಹನುರ್ವ್ವಿಯಂ ॥ 127 ॥

ಆಹವಮಲ್ಲ ಸೋಮೇಶ್ವರ I

ಕಂ ॥ ಅಪ್ರತಿಮಲ್ಲಂ ಜಯಸಿಂ
ಹಪ್ರಿಯತನುಜಾತನೆಸೆವನಾಹವಮಲ್ಲಂ
ಪಪ್ರಭ ಮಾಳವವಾಧಾ
ರಾಪ್ರೋದ್ಘಾಟವಿಧಾನಭುಜಜಾದಂಡಂ ॥ 128 ॥

ಪೆರ್ಮಾಡಿದೇವ

ಕಂ ॥ ಆತನ ನಿಜತನಯಂ ಕ್ಷ
ತ್ರಖ್ಯಾತಂ ಪೆರ್ಮ್ಮಾಡೀದೇವಂನೆಸೆದಂ
ಜಯಶ್ರೀತರುಣೀ ನವಮಣಿ
ಮಯಪೂತ ಮಹಾಸಿಂಹಪೀಠ ನಿಜವಿಜಯಭುಜಂ ॥ 129 ॥

ಮ ವಿ ॥ ಕಲಿಕಾಳಾವನಿಪಾಳಜಾಳ ಚಿರದೊರ್ವ್ವಾಸೋಪಜಾತೋದ್ಧತಾ
ಖಿಲಕಾಲುಶ್ಯ ಕಳಂಕಪಂಕ ಪಟಳಪ್ರಕ್ಷಾಳನಂ ಮಾಡಲೆಂ
ದೊಲವಿಂ ತೀರ್ತ್ಥಜಳಾವಗಾಹನಮನಾಗಂ ಮಾಡುತಿರ್ಪ್ಪಂತೆ ನಿ
ಚ್ಚಲವಿರ್ಪ್ಪಳ್ಜಯಲಕ್ಷ್ಮಿ ಖಡ್ಗಜಳದೊಳ್ ಚಾಳುಕ್ಯ ಚಕ್ರೇಶನಾ ॥ 130 ॥

ಸೋಮೇಶ್ವರ II

ಕಂ ॥ ಆತನ ತನುಜಾತಂ ಜ
ಗತೀತರುಣಕಾಮನುದ್ಧತಾಹವಭೀಮಂ
ಭೂತಳಲಲಾಮನಖಿಳಕ
ಳಾತರುಣ ನವೋತ್ಸಳಾಗ್ರಸೋಮಂ ಸೋಮಂ ॥ 131 ॥

ಮ ವಿ ॥ ವಿನತಾರಾಶಿನೃಪಾಳಮೌಳಿಮಣಿಗಳ್ ನಕ್ಷತ್ರಮಾತ್ಮೀಯಕೀ
ರ್ತ್ತಿನವಾಭ್ಯುಂನತಚಂದ್ರಿಕಾಪ್ರಸರಮೋರನ್ತಸ್ಥತಾಪಂ ಜಗ
ಜ್ಜನಮೆಲ್ಲಂ ಸುಚಕೋರಕಾವಳಿಯೆನಲ್ಲೋಮಾಖ್ಯ ಭೂಚಕ್ರದೊಳ್
ತನಗನ್ವರ್ತ್ಥವೆನಲ್ ವಿರಾಜಿಸಿದ ಸೋಮೇಶ್ವರೋರ್ವ್ವೀಶ್ವರಂ ॥ 132 ॥

ಕಂ ॥ ಅರಿಭೂಪರ ತೇಜದ ದ
ಳ್ಳುರಿ ಮೊಗ್ಗುವುದೊರ್ಮ್ಮೆ ತನ್ನ ಪೆಸರ್ಗ್ಗೆಳಲೇನ
ಚ್ಚರಿವಡೆದುದೊ ಜಗತೀಭೀ
ಕರತರ ತರವಾರಿವಾರಿ ಸೋಮೇಶ್ವರನಂ ॥ 133 ॥

ಉ ಮಾ ॥ ಇಂಗಡಲಿಂಗೆ ಚಂದ್ರನುದಯಾದ್ರಿಗೆ ಚಂಡಮರೀಚ ರೋಹಣೋ
ತ್ತುಂಗ ಮಹಾಮಹೀಧರಕನರ್ಘ್ಯ ಮಹಾಮಣಿ ಪುಟ್ಟುವನ್ತೆ ಸೋ
ಮಂಗೆ ಸಮಂತು ಪುಟ್ಟಿದನಿವಂ ಧರೆ ಜೀಯೆನಲೆಂದು ಬಣ್ಣಿಕುಂ
ಸಂಗತಸತ್ವನಂ ಪಡೆದು ವಿಶ್ವಜನಂ ಜಗದೇಕಮಲ್ಲನಂ ॥ 134 ॥

ಮ ಸ್ರ ॥
ಹರಿದುಗ್ಧಾಬೋಧಿಯೊಳ್ ವಿಶ್ರಮಿಸಿ ಸುಖದೊಳಂದಿರ್ದ್ದನಾ ಕೂರ್ಮ್ಮರಾಜಂ
ಪಿರಿದುಂ ಪಾತಾಳಪಂಕಪ್ರಥಿತ ಪೃಥುಳದೇಶಂಗಳಂ ಪೊಕ್ಕು ಸೂ
ಕರನಾದಂ ಭೋಗಿಭೋಗಂಗಳನನವರತಂ ಸೇವಿಸುತಿರ್ದ್ದನತ್ಯಾ
ದರದಿಂ ಶ್ರೀಮತ್ ಪ್ರತಾಪ ಕ್ಷಿತಿಪತಿ ಧರಣೀಭಾರಮಂ ತಾಳ್ದಿದಾಗಳ್ ॥ 135 ॥

ಮ ಸ್ರ ॥ ಧರೆಯಂ ಕೀಳ್ವಟ್ಟು ಮುಂತಾಳ್ದಿದನುಚಿತ ಪರಿವಾರಮಂ ತನ್ನೊಳಾದಂ
ದೊರೆಕೊಂಡೀ ಲೋಕಮಂ ಪರ್ವ್ವಿದುದನಧಿ x x ಮಾಣಿಸಲ್ಕೀಗಳತ್ಯಾ
ದರದಿಂ ದೋರ್ದ್ದಂಡಚಂಡಾಕೃತ ತಳೆದನಿದಂ ತಾನೆ ಮೇಲಾಗಿ ಭೋಗೀ
ಶ್ವರ x x x ರ್ದ್ದಡಾ ಭೂಭುಜ ಭುಜವಿಜಯಸ್ತಂಭ ಶುಂಭದ್ಭುಜಂಗಂ
॥ 136 ॥

15) ಹಾವೇರಿ, SII Vol XVIII, No. 186, ಕ್ರಿಶ. ಸು. 12ನೇ ಶತಮಾನ

ಇದರಲ್ಲಿ ಕಳಚೂರ‍್ಯ ದೊರೆ ಬಿಜ್ಜಳ ಹಾಗೂ ಅವನ ಮಗ ರಾಯಮುರಾರಿ ಸೋವಿದೇವನ ಶೌರ್ಯವನ್ನು ವರ್ಣಿಸಿದೆ.

ಕಂ ॥ ಕಳಚುರ್ಯ್ಯವಂಶದಾದಿಯೊ
ಳೆಳೆಗಧಿಪತಿಯೆನಿಸಿ ವೀರ ಬಿಜ್ಜಣಭೂಪಂ

ಕಳಕುಳಮಾಗಿಟ್ಟಿದಟರ
ನಳವಡಿಸಿಯೆ ನಡವುತಿರಲುವಾತನ ತನಯಂ ॥ 137 ॥

ಮ ವಿ ॥ ಕದನಂ ಕುರ್ಕಿದ ವೀರಾರಾತಿನೃಪರಂ ಸಂಗ್ರಾಮ ರಂಗಾಗ್ರದೊಳ್
ಮದವದ್ದಂತಿಯಲಟ್ಟಿ ಮುಟ್ಟಿ ತಲೆಯಂ ಸೆಂಡಾಡಿ ವಿಖ್ಯಾತದಿಂ
ಪುದುವಂ ಮಾಣಿಸಿ ಭೂಮಿಯಂ ತಳೆದನೇಕಚ್ಛತ್ರದಿಂ ಲೋಕದೊಳ್
ವಿದಿತಂ ರಾಯಮುರಾರಿ ಶೂದ್ರಕನೃಪಂ ಸೋಮೇಶ್ವರೋರ್ಬ್ಬೀಶ್ವರಂ
॥ 138 ॥

16) ಅಕ್ಕೂರು, SII Vol XVIII, No. 351, ಕ್ರಿಶ. ಸು. 12ನೇ ಶತಮಾನ

ಇದರಲ್ಲಿ ಜೈನಧರ್ಮದ ಮೂಲಸಂಘದೇವಗಣದ ಸುಧಾಕರದೇವನ ಶಿಷ್ಯ ಸೋಮದೇವಕುಮಾರನ ಗುಣಗಳನ್ನು ಹೊಗಳಿದೆ.

ಕಂ ॥ ದೇವಗಣ ಕುಮುದಚಂದ್ರಂ
ದೇವಗಣ ಪ್ರಣುತ ಜಿನಮತಾಂಬುಧಿ ಚಂದ್ರಂ
ಪಾವನಚರಿತಂ ಚಿತ್ರಂ
ಭಾವಿತ ಶುದ್ಧಾತ್ಮ ಸೋಮದೇವಕುಮಾರಂ ॥ 139 ॥

17) ಹರಳಹಳ್ಳಿ, SII Vol XVIII, No. 227, ಕ್ರಿಶ. ಸು. 13ನೇ ಶತಮಾನ

ಇದರಲ್ಲಿ ದೇವಗಿರಿಯ ಯಾದವ/ಸೇವುಣರ ದೊರೆಯಾದ ಸಿಂಘಣದೇವನ ಆಳಿಕೆಯಲ್ಲಿದ್ದ ದಂಡನಾಯಕ ಬೀಚಿಸೆಟ್ಟಿಯ ಪರಾಕ್ರಮವನ್ನು ವರ್ಣಿಸಿದೆ. ಕವಿಯ ಹೆಸರಿನ ಭಾಗ ನಾಶವಾಗಿದೆ.

ವರಾಹಸ್ತುತಿ

ಕಂ ॥ ತೊಳಗುವ ಹಿಮಗಿರಿಶಿಖರದೊ
ಳಳವಡುವನ್ತಿಟ್ಟ ನೀಳಮಣಿಕಳಶದವೋ
ಲಿಳೆ ತುದಿಗೋಡೊಳ್ಸಲೆ ಕ
ಣ್ಗೊಳಿಪಾದಿವರಾಹನೊಸೆದು ಪೊರೆಗುರ್ಬ್ಬರೆಯಂ ॥ 140 ॥

ಶಿವಸ್ತುತಿ

ಉ ಮಾ ॥ ಶಾಶ್ವತಮೂರ್ತ್ತಿ ಶಂಭು ಪರಿಪಾಳಿಸುತಿರ್ಕ್ಕೆ ಸಮಸ್ತ ಪೃಥ್ವಿಯಂ
ವಿಶ್ವಪತಿ ಪ್ರಸನ್ನ ಯಜಮಾನಮಹೀಗಗನಾನಳೇಂದು ಸ
ಪ್ತಾಶ್ವಪಯಃ ಪ್ರಭಂಜನ ಸಮನ್ವಿತ ಸನ್ನುತ ಪುಂಣ್ಯಮೂರ್ತ್ತಿ ಚಿ
ಕ್ಕೇಶ್ವರನೀಶ್ವರಂ ನತಶಚೀಶ್ವರನಾನಗನನ್ದನೇಶ್ವರಂ ॥ 141 ॥

ಸಮುದ್ರ ವರ್ಣನೆ

ಮ ವಿ ॥ ಧರಣಿ ಶ್ರೀಮಣಿಮೇಖಳಾವಿಳಸಿತಂ ಕ್ಷೌಮೋಪಮಾನಸ್ಫುರ
ನ್ಮುರಜಿನ್ಮಂದಿರವೆಂದು ಪೊಪ್ಪುವುದು ನಾನಾಸತ್ವಪೀಯೂಶ ಸಾ
ರರಮಾಕೌಸ್ತುಭ ಪಾರಿಜಾತ ಮಹಿಜಾತೋಚ್ಚೈಶ್ರವಶ್ಯಕ್ರ ಸಿಂ
ಧುರ ಚಂದ್ರಾದಿ ಸಮಸ್ತವಸ್ತುನಿಕರಕ್ಕಾದಾಗರಂ ಸಾಗರಂ ॥ 142 ॥

ಜಂಬೂದ್ವೀಪ, ಕುಂತಳ

ಮ ಸ್ರ ॥ ವರಜಂಬೂದ್ವೀಪವಂಭೋಧಿಯ ನಡುವೆ ಸರೋಜಾತದಂತಿರ್ಪ್ಪುಗೆಂದು
ಸುರಶೈಳಂ ಕರ್ಣ್ನಿಕಾಕಾರದಿನೆಸೆವುದು ತನ್ಮೇರುವಿಂ ತೆಂಕಲಕ್ಕುಂ
ಸಿರಿಯಂತಾಭಾರತಂ ತನ್ಮಹಿಮುಖಮುಕುರಾಕಾರದಿಂ ಕುಂತಳಂ ಬಿ
ತ್ತರಿಸಿಂ ತತ್ಕುಂತಳಕ್ಷ್ಮಾತಳದೊಡೆಯರದಾರಾದವರ್ಯ್ಯಾದವರ್ಕ್ಕಳ್॥ 143 ॥

ಯಾದವಕುಲ

ಕಂ ॥ ಅಸದೃಶ ಯಾದವಕುಳದು
ಗ್ಧ ಸಮುದ್ರದೊಳಾದವೊಂದೆರಡೆ ನೃಪರತ್ನಂ
ಪೆಸರ್ಗೊಂಬಡೆ ಬಹುರತ್ನಾ
ವಸುಂಧರಾಯೆಂಬ ತೆಱದೆ ಪಲಬರ್ನ್ನೆಗಳ್ದರ್ ॥ 144 ॥

ಭಿಲ್ಲಮ

ಕಂ ॥ ಅವರೊಳಗುದಯಿಸಿದಂ ಗ್ರಹ
ನಿವಹದೊಳಿನನುದಯಿಪನ್ತೆ ಮಲ್ಲುಗಿ ಭೂಪ
ಪ್ರವರಂ ತಜ್ಜನಪತಿಗು
ದ್ಭವಿಸಿದನತುಳ ಪ್ರತಾಪ ಭಿಲ್ಲಮದೇವಂ ॥ 145 ॥

ಜೈತುಪಾಳರಾಯ

ಚಂ ಮಾ ॥ ಜನನುತ ಭಿಲ್ಲಮಂ ಪಡೆದನಾತ್ಮಜನಂ ಕುಳಿಶಾಯುಧಂ ಜಯ
ನ್ತನನನಿಳಂ ವೃಕೋದರನನತ್ರಿ ಮೃಗಾಂಕನನರ್ಕ್ಕನಂಗರಾ
ಜನನವನೀತಳಂ ಪೊಗಳೆ ಪೆತ್ತವೊಲಗ್ಗದ ಜೈತುಪಾಳರಾ
ಯನನತಿ ಪುಂಣ್ಯಕಾಯನನಜೇಯನನಾಶ್ರಿತಭಾಗದೇಯನಂ ॥ 146 ॥

ಸಿಂಘಣದೇವ

ಮ ಸ್ರ ॥ ಕ್ಷಿತಿಪಾಳಂ ಜೈತಪಾಳಂ ಪಡೆದ ಮಗನದೇಂ ವೀರನೋ ಯಾದವೋರ್ಬ್ಬಿ
ಪತಿರಾಜ್ಯೋತ್ಪತ್ತಿಶುಂಭತ್ಸರಸಿರುಹಭವಂ ಸುಪ್ರಸಿದ್ಧಾಂಧ್ರರಾಜ್ಯ

ಸ್ಥಿತಿಕೃಷ್ಣಂ ಲಾಟರಾಜ್ಯ ಪ್ರಳಯ ಫಣಿಧರಂ ಗೌಳರಾಜ್ಯಪ್ರದೀಪೋ
ದ್ಧತವಾತಂ ಚೋಳರಾಜ್ಯತ್ರಿಣದಹನದವಂ ಸಿಂಘಣಕ್ಷೋಣಿಪಾಳಂ ॥ 147 ॥

ಚಂ ಮಾ ॥ ಅವನಿಪಸಿಂಗಣಂ ಬಜೆಯೆ ಯಾದವನೇ ಸ್ಥಿರರಾಜ್ಯಲಕ್ಷ್ಮಿ ಯಾ
ದವನಮೃತಾಂಶುಕೀರ್ತ್ತಿಪತಿಯಾದವನೂರ್ಜಿತ ವಿಷ್ಣುಭಕ್ತಿ ಯಾ
ದವನಬಳಾ ವಶೀಕರಣಕಾರಣಕಾಮನಿಕಾಮಮೂರ್ತ್ತಿ ಯಾ
ದವನಖಿಳೋರ್ಬ್ಬಿಗುನ್ನತ ನೆಲೆಯಾದವನೆಂದು ವುದಾರಿಯಾದವಂ ॥ 148 ॥

ಚಂ ಮಾ ॥ ಪರಮಪಯೋಧಿಯೆಂಬ ಜಲದುರ್ಗದೊಳಚ್ಯುತನಿರ್ದ್ದ ತಾರಭೂ
ಧರಗಿರಿದುರ್ಗ್ಗದೊಳ್ಗಿರಿಶನಿರ್ದ್ದವನೆಂದುದನ್ತಿವರೆಂದಡಿಂ
ನರಸುಗಳಾವ ದುರ್ಗ್ಗದೊಳಗಿರ್ದ್ದಡವರ್ಗ್ಗಡ ರಾಯಸಿಂಘಣಂ
ಬರೆ ಸಲೆ ಕಪ್ಪಮಂ ತೆಱದೆ ಜೀವಿಪರಾಬ್ಧಿವನಾಂತರಾಳದೊಳ್ ॥ 149 ॥

ಮ ವಿ ॥ ಬಳವಚ್ಚೋಳನೃಪಾಳತೂಳಪವನಂ ಲಾಟಾಟವೀಪೇಟ ಕಾ
ನಳನಂಗಾಂಗಜತುಂಗ ಭಾಳನಯನಂ ಪಾಂಚಾಳಚಂಚಲ್ಲತಾ
ಳಿಲವಿತ್ರಂ ವಿಷಮಾಂಧ್ರಸಿಂಧುಪತಿಶುಂಭತ್ಕುಂಭಜಂ ವೀರಕೇ
ರಳಕಾಳಂ ಜಯಭಾಮಿನೀಭವನ ಭಾಸ್ವತ್ಪ್ರಾಂಗಣಂ ಸಿಂಗಣಂ ॥ 150 ॥

ಉ ಮಾ ॥ ಧಾರಿಣಿಗೊಂದೆ ಬೆಳ್ಗೊಡೆಯನಾತನೆ ಮಾಡಿದನಾರ್ಗ್ಗವುಂತು ಕೈ
ಸಾರದ ದುರ್ಗ್ಗವರ್ಗ್ಗಮನದೊರ್ಬ್ಬನೆ ದೋರ್ಬ್ಬಳದಿಂದೆ ಕೊಂಡನೇಂ
ವೀರನೊ ಸಿಂಘಣಂ ವಿಷಯಮಂಡವ ಖಾಂಡವಶಕ್ರಸೂನು ಭಂ
ಭೇರಿಗಭೀರಶೈಳಪವಿ ಧೋರಸಮುದ್ರ ಸಮುದ್ರಕುಂಭಜಂ ॥ 151 ॥

ಉ ಮಾ ॥ ತೆಂಕಣ ಚಕ್ರವರ್ತ್ತಿ ಪಡೆದಾನೆಗಳಂ ಮಣಿಭಂಡವೆಲ್ಲವಂ
ಸುಂಕಿಸಿ ಮದ್ರನಂ ಹಿಡಿದು ಮೆಯ್ದೆಜೆಗೊಂಡು ಕಡಂಗಿ ಲಾಳನಿ
ರ್ದ್ದಂಕದ ಬೀಡನಿಟ್ಟೊರಸಿ ಮಂಡವಮಂ ತೆಱವೇಳ್ದು ತೇಜದಿಂ
ಝುಂಕಿದನೋವೊ ರಾಯನೊ ನಿಯೋಗಿಯೊ ಯಾದವಚಕ್ರಿ ಸಿಂಘಣಂ
॥ 152 ॥

ಬೀಚ

ಕಂ ॥ ಯಾದವರಾಯನ ಶೌರ್ಯ್ಯ ಶು
ಭೋದಯಮಂ ಪೊಗಳ್ವಡೆಂತ ನಿಂನಳವೆಯದಿ

ಕ್ಕಾದರರದೆ ಕೀರ್ತಿಪೊಂ ತ
ತ್ಪಾದಾಂಭೋಜೋಪಜೀವಿ ಬೀಚನ ಪೆಂಪಂ ॥ 153 ॥

ಚಿಕ್ಕದೇವ

ಕಂ ॥ ಯತಿಮಾತ್ರಮೆ ಚಿಕ್ಕೌವ್ವೆಯ
ಪತಿ ವಿಭವದಿನಮರಪತಿ ವಿವೇಕದ ವಾಣೀ
ಪತಿ ಶಾಂತತೆಯಿಂ ತಾರಾ
ಪತಿಯೆಂದಭಿನ್ನಿಸಲ್ಕೇ ತಕ್ಕಂ ಚಿಕ್ಕಂ ॥ 154 ॥

ಚಿಕ್ಕದೇವನ ಮಕ್ಕಳು

ಮ ವಿ ॥ ಪುರುಷಾರ್ಥತ್ರಯರೂಪರಂ ತನುಜರಂ ಚಿಕ್ಕೌವ್ವೆಯುಂ ಚಿಕ್ಕನುಂ
ಹರಕಾರುಂಣ್ಯದೆ ಪೆತ್ತರೆಂಬ ತೆಱದಿಂದಂ ಮೂವರುಂ ಪೆತ್ತರಾ
ದರದಿಂ ಧಾರ್ಮ್ಮಿಕ ಮಲ್ಲಿಕಾರ್ಜ್ಜುನನನತ್ಯೈಶ್ವರ್ಯ್ಯಯುಕ್ತಂ ಗುಣಾ
ಭರಣಂ ಬೀಚಣನಂ ಭುಜಾಬಳಮರುನ್ಮಾತಂಗನಂ ಸಿಂಗನಂ ॥ 155 ॥

ಬೀಚ

ಕಂ ॥ ಆ ಚಿಕ್ಕಯ್ಯನ ಸುತರೊ
ಳ್ಬೀಚನೆ ಗಂಭೀರಪಾತ್ರನತಿ ಸುಚರಿತ್ರಂ
ಬೀಚನೆ ವೀರೋದಾರಂ
ಬೀಚನೆ ಲೋಕೈಕ ಮಾನ್ಯನೆಂತುಂ ಧಂನ್ಯಂ ॥ 156 ॥

ಮ ಸ್ರ ॥ ತ್ರಿಜಗಂ ಬ್ಯಾವರ್ಣ್ಣಿಕುಂ ಚಿಕ್ಕನ ಪಿರಿಯ ಮಗಂ ಮಲ್ಲನಂ ಮತ್ತದಂತಿ
ಧ್ವಜನಂ ಬಾಪ್ಪಾತನುಂ ಕೇವಳಿಗನೆ ಶಿವಸದ್ಭಕ್ತಿಯಿಂ ಸತ್ಯದಿಂ ದೋ
ರ್ವ್ವಿಜೆಯಾವಷ್ಟಂಭದಿಂ ತೇಜದಿನತುಳಬಳಂ ಬೀಚನಣ್ಣಂ ಸುಮಿತ್ರಾ
ತ್ಮಜನಂಣ್ಣಂ ಭೀಮನಂಣ್ಣಂ ಕಮಳನಯನನಣ್ಣಂ ಕಳಾಮೂಳಿಯಣ್ಣಂ
॥ 157 ॥

ಕಂ ॥ ದೊರೆವೆತ್ತ ಸಿಂಗನಿಂದಂ
ಹಿರಿಯನೆನಿಪ್ಪೊಳ್ಪು ಹೊಸತೆ ಭಾಗ್ಯದೆ ಮಂತ್ರೀ
ಶ್ವರರೆನಿಬರನಿಬರಿಂದಂ
ಹಿರಿಯಂ ಜಾಜವರ ಕಟಕದೊಳ್ಗಡ ಬೀಚಂ ॥ 158 ॥

ಮ ವಿ ॥ ಯೆನಸುಂ ಗೋಪಿಗೆ ಪುಟ್ಟಿ ವಿಷ್ಣುಬಿನದಂ ಕೈಮಿಕ್ಕು ಗೋಪಾಳನೆಂ
ದೆನಿಸಿರ್ಪ್ಪಂದದಿ ಚಿಕ್ಕಮಾಂಬಿಕೆಗೆ ದೇಶಾಧೀಶ್ವರಂ ಪುಟ್ಟಿ ನೆ
ಟ್ಟನೆ ವಡ್ಡಬ್ಯವಹಾರಲೀಲೆಯೊಳೆ ರಾಜಶ್ರೇಷ್ಠಿ ಮಾರ್ತಂಡನೆಂ
ದೆನಿಸುತ್ತಿರ್ದ್ದನನೂನಭಾಗ್ಯನಿಳಯಂ ಧೈರ್ಯ್ಯಾಚಳಂ ಬೀಚಣಂ ॥ 159 ॥

ಚಂ ಮಾ॥ ತುರಗಮವೆಯ್ದದಶ್ವಪತಿಯಾನೆಗಳೆಯ್ದದ ತದ್ಗಜೇಶ್ವರಂ
ನರಪತಿಯಾಳ ಸೋಡರಣೆಗೆಯ್ದದೆ ರಾಯಸವಿತ್ತು ತಾಂ ಸಮು
ದ್ಧರಿಸುವುದೆಂಮ ರಾಜ್ಯವಿವು ತಂನವೆನುತ್ತುಡಲಟ್ಟಿ ಬೇಡುತಿ
ರ್ಪ್ಪರೆನೆ ಗುಣಾಢ್ಯ ಚಿಕ್ಕಮನ ಬೀಚಿಗನೇಂ ಬ್ಯವಹಾರಿ ಮಾತ್ರವೇ ॥ 160 ॥

ಮ ಸ್ರ ॥ ಜನನಾಥಂ ಸಿಂಘಣಂ ಬೀಚನ ಸುಚರಿತವಂ ಬೀಚನೈಶ್ವರ್ಯ್ಯಮಮಂ ಬೀ
ಚನ ಮಂತ್ರಪ್ರೌಢಿಯಂ ಬೀಚನ ಭುಜಬಳಮಂ ಬೀಚನುದ್ಯೋಗಮಂ ಬೀ
ಚನ ತೇಜಸ್ಫೂರ್ತಿಯಂ ಕಂಡೆನಗೆ ಸಚಿವನಾಗಲ್ಕೆ ತಕ್ಕಾತನೀಯೋ
ರ್ಬ್ಬನೆನುತಂ ಸೆಟ್ಟಿ ಬೀಚಂಗೊಸೆದಖಿಳ ನಿಯೋಗಂಗಳಂ ಮೆಚ್ಚಿ ಕೊಟ್ಟಂ ॥ 161 ॥

ಸ್ರಗ್ಧರೆ ॥ ಮಾತೇಂ ತಂನಾಪ್ತರಿರ್ದ್ದಂತತುಳಬಳಚಮೂನಾಥರಿರ್ದ್ದಂತೆ ಮಂತ್ರಿ
ಬ್ರಾತಂ ಮುಂನುಳ್ಳರಿರ್ದ್ದಂತೆನಗಾದಾತಂ ನಿಯೋಗಕ್ಕೆ ಕಾರ್ಯ್ಯಕ್ಕೆ ಖಳ್ಗ
ಕೀತಂ ಬೇಳ್ವಾತನೆಂದಗ್ಗಿಸಿ ಪೊರೆವನಧೀಶಂ ಗಡೇಂ ಶ್ಲಾಘ್ಯನೊ ವಿ
ಖ್ಯಾತಂ ಶ್ರೀಸಿಂಹಣೋರ್ಬ್ಬೀಶ್ವರನರಮನೆಯೊಳ್ಬೀಚ ದಂಡಾಧಿನಾಥಂ ॥ 162 ॥

ಮ ವಿ ॥ ಯೆಲೆ ಕೇಳ್ ಸ್ವಾಮಿಯಂ ಭೃತ್ಯನಂ ತರವೆ ಪೇಳ್ ಶ್ರೀಯಾದವಾಧೀಶ್ವರಂ
ಗೆ ಲಸಚ್ಚಕ್ರವುದಾತ್ತ ಸಾಹಣಿ ಸಮುದ್ರಂಗಲ್ತೆ ಚಂದ್ರಂ ಭುಜ
ಬಳಭೀಮಂಗೆ ಬೃಹದ್ಭುಜಾಪರಿಘದಂಡಂ ರಾಯಸಿಂಹಂಗೆ ನಿ
ಶ್ಚಳದಂಷ್ಟ್ರಾಂಕುರವೆಂದಡೇನದಟನೋ ದಂಡಾಧಿಪಂ ಬೀಚಣಂ ॥ 163 ॥

ಮ ಸ್ರ ॥ ಧನದೊಳ್ಬೇಜಿಲ್ಲ ತಚ್ಚಿತ್ತದ ಬಗೆಯದು ಬೇಜಿಲ್ಲ ಸಾಮ್ರಾಜ್ಯಭೋಗಂ
ತನಗಂ ಚಕ್ರೇಶ್ವರಂಗಂ ವಿವ x x ರಿಡದು ಬೇಜಿಲ್ಲ ನೋಡಾಳದರಾ
ಳ್ದನದಾರೆಂದೆಂಬ ತದ್ಭೇದಮನಜಿಯದಜಿಂ ಸಿಂಘಣಂ ಬಂದು ಸಿಂಹಾ
ಸನದೊಳ್ಕುಳ್ಳಿರ್ದ್ದವಂ ಕೈಮುಗಿದು ಕೆಲದೊಳೊಪ್ಪಿರ್ದ್ದವಂ ಮಂತ್ರಿಬೀಚಂ ॥ 164 ॥

ಚಂ ಮಾ ॥ ಪಡೆವಡೆ ಚಕ್ರವರ್ತ್ತಿಯ ಮನಂಬಿಡಿದಿಂತಧಿಕಾರಲಕ್ಷ್ಮಿಯಂ
ಪಡೆವುದು ಬೀಚನಂತಿರವನನ್ಯಧಿಕಾರಿಯೆ ನೋಳ್ಪಡಾತನಿಂ
ದೊಡೆಯನ ನೋಳ್ಪ ಕಣ್ ನುಡಿವ ನಾಲಗೆ ಕೊಡುವ ಭಾಗ್ಯವೀವ ಕ
ಯ್ಯಿಡುವ ಸುದರ್ಶನಂ ಪಿಡಿವ ಖಂಡಯವರ್ಚ್ಚಿಸಿ ಗೆಲ್ವ ಸಿಂಧುರಂ
॥ 165 ॥

ಮ ಸ್ರ ॥ ಯಿದಿರಾಯ್ತೀಸೇನೆ ಹೇಳ್ಬೀಚನನಳವಡದಾ ನಾಡು ಹೇಳ್ಬೀಚನಂ ಹೊ
ಕ್ಕುದು ಬಲ್ಪಿಂ ಕೋಂಟೆ ಹೇಳ್ಬೀಚನನನುನಯದಿಂ ಕಪ್ಪಮಂ ದರ್ಪ್ಪದಿಂದೀ
ಯದ ಶತ್ರುಶ್ರೇಣಿ ಹೇಳ್ಬೀಚನನೆನುತೊಡೆಯಂ ಮೆಚ್ಚುವಾಳ್ನಚ್ಚುವಾಳ್ಕಾ
ರ್ಯ್ಯದ ಕೂರಾಳ್ಬಗ್ಗದೊಳ್ಬಾಳ್ ಯದುಕುಲನೃಪನಾಸ್ಥಾನದೊಳ್ಬೀಚಿದೇವಂ
॥ 166 ॥

ಮ ಸ್ರ ॥ ಪಲವುಂ ದೇಶಂಗಳಂ ನುಂಗಿದ ವಿಷಯವಿಷಂ x x ಳಂ x ಡು ಹಲ್ವಾ
ಗಿಲ ಹುತ್ತಂ ಹೊಕ್ಕು ಪಾಂಡ್ಯೋರಗನಿರಲದನೇರ್ವ್ವಟ್ಟಿದಾಳ್ಗಟ್ಟಿ ದಾಳ್ತೋ
ಳ್ವಲದಿಂದಂ ನಂಜುವಲ್ಲಂ ಕಳೆದು ಬಿಸುಟ ಕಟ್ಟಾಯದಾಳ್ಪುಟ್ಟಿದಂ ಭೂ
ತಳನಾಥಂ ರಾಯನಾರಾಯಣನ ಸುಭಟಸೌಪರ್ಣ್ಣನೀ ಬೀಚಿದೇವಂ
॥ 167 ॥

ಮ ಸ್ರ ॥ ಘನದರ್ಪ್ಪೋದ್ರೇಕದಿಂ ಬೆರ್ವ್ವರಿದುದುಭಯರಾಯರಕ್ಕೀಳಲ್ಬಾರದಿಂತೀ
ತನ ರಾಜಶ್ರೀಯನೆಂದುಂಮ್ಮಳಿಪ ಜನದ ದುರ್ಮ್ಮೃತ್ಯುವಂ ಕೀಳ್ವವೋಲ್ಬಿ
ಕ್ಕನ ಪುತ್ರಂ ತಂನ ಬಾಹಾಬಲದೆ ಚಲದಿನೆಳ್ತಂದು ಕಿಳ್ತಿಕ್ಕಿ ತತ್ಪಾಂ
ಡ್ಯನ ಬೇರಂ ತುಂಗಭದ್ರಾಜಳದೊಳಗಳಿದಂ ಬೀಚಸೇನಾಧಿನಾಥಂ ॥ 168 ॥

ಮ ಸ್ರ ॥ ಮದವದ್ವಿದ್ವಿಷ್ಟ ರೌದ್ರಕ್ಕೆಲೆ ನಡೆಯೆನುತುಂ ಸಿಂಘಣಂ ಪೇಳ್ವದುಂ ಪ
ರ್ಬ್ಬಿದ ಬಾಹಾಗರ್ಬ್ಬದುರ್ಬ್ಬಂ ಸಿವಸಿವ ಬಳಿಕೇನೆಂದಪೆಂ ವಾಯು ಹೊತ್ತಿ
ಕ್ಕಿದ ದಾವಜ್ವಾಳೆ ಶಕ್ರಂ ಮಸಗಿಸಿದ ಮರುದ್ದಂತಿ ಕಂಸಾರಿ ಕಾಯ್ದು
ಟ್ಟಿದ ಚಕ್ರಂ ಬಾಜ್ಪಿದೇಂ ನಿಪ್ಪಸರದ ಕಲಿಯೋ ಬೀಚಿದಂಡಾಧಿನಾಥಂ
॥ 169 ॥

ಉ ಮಾ ॥ ರಾಯರೊಳಟ್ಟಿಯೊನೆದೆಱೆಗೊಳ್ಳನೆ ಮಂಡಳಿಕರ್ಗ್ಗೆ ದುರ್ಗ್ಗ ಸಿ
ದ್ಧಾಯಮನಿಕ್ಕಿವೆಂದುಱದೆ ಮುತ್ತನೆ ಮಂನೆಯರೆಂಬರೆಂದುವಂ
ನ್ಯಾಯಿಗಳೆಂದು ಮಂಡೆದೆರೆಗೊಳ್ಳನೆ ಸಿಂಘಣ ರಾಯಮಂತ್ರಿ ಕೌಂ
ತೇಯ ಬಳಾಢ್ಯ ಬೀಚನಧಿಕಾರ್ಯ್ಯೋಶತ್ರುಂಗೆ x ಬಂದಮಾರ್ಯ್ಯೋ ?
॥ 170 ॥

ಕಂ ॥ ವುಚ್ಚಂಗಿಯೊದ್ದಡಿಗ್ಗೇ
ಣ್ವೆರ್ಚುವುದು ಗಡೆಂತು ಬೀಚ ನಿಂನ ದಳಂ ಮೆ
ಯ್ವೆಚ್ಚಿ ನಡೆದಾರೆ ನಿಮಿಷವಿ
ದಿರ್ಚ್ಚದೆ ಕಡುಗುಂದಿ ಕುಸಿದು ಹೋಯ್ತಿದು ಚಿತ್ರಂ ॥ 171 ॥

ಮ ವಿ ॥ ಮುಳಿದಾಂತುದ್ಧ ಸ್ಥಿರಂ x x ದ್ರಘ್ಯತದಿಂ ಭೂತಂಗಳೋರುಂಡು ಕ
ಯ್ದೊಳೆಯಲ್ಸಾಗರವೇಳುಮಂ ನಿಜಯಶಶ್ರೀಕಾಂತೆ ತಾಂ ದಾಂಟಿ ಕಾ
ಲ್ದೊಳೆಯಲ್ಕಾಕಾದಿಯಮರ್ತ್ತ ತಂನ ಹಯಮಂ ಕಾವೇರಿಯೊಳ್ತಂದು ಮೆ
ಯ್ತೊಳದಂದು ಯಾದವರಾಯಮಂತ್ರಿ ಧೃತಿಧೈರ್ಯ್ಯೇಂದ್ರಾಚಳಂ ಬೀಚಣಂ ॥ 172 ॥

ಚಂ ಮಾ ॥ ಜನಪತಿ ಸಿಂಘಣಂಗೆ ಸಿರಿಯೆಕ್ಕಿದ ಸತ್ತಿಗೆಯಂತೆ ತಂನೃಪಾ
ಳನ ನಿಜರಾಜ್ಯದೊಳ್ಭುಜಪರಾಕ್ರಮನೋರ್ವ್ವನೆ ದಂಡನಾಥನೋ
ರ್ಬ್ಬನೆ ಯಧಿಕಾರಿಯೋರ್ಬ್ಬನೆ ಪಸಾಯಿತನೋರ್ಬ್ಬನೆ ಮಂತ್ರಯುಕ್ತನೋ
ರ್ಬ್ಬನೆ ಮರ್ಖು ಬಾಪ್ಪು ಚಿಕ್ಕನ ಸುತಾಗ್ರಣಿ ಬೀಚನದೇಂ ಸಭಾಗ್ಯನೋ ॥ 173 ॥

ಚಾಮಲದೇವಿ

ಚಂ ಮಾ ॥ ಎಣೆಪಡೆ ಕಾಮಕಾಮಿನಿಗೆ ರಾಮನ ರಾಮೆಗೆ ಸೋಮನೋಪ ರೋ
ಹಿಣಿಗೆಣೆ ಎಂಬದೊಂದು ಪರಕೀರ್ತಿಯ ಮೆಯ್ವಳೆಯೇಕೆ ತಾನೆ ಸದ್
ಗುಣವತಿ ತಾನೆ ಪುಣ್ಯವತಿ ತಾನೆ ಕಳಾವತಿ ತಾನೆ ಸರ್ಬ್ಬ ಲ
ಕ್ಷಣವತಿಯಾಬೀಚನ ಮನೋಹರಿ ಚಾಮಲದೇವಿ ರಂಜಿಪಳ್ ॥ 174 ॥

ಕಂ ॥ ಸುರಪತಿಯುಂ ಶಚಿಯಂ ಸು
ಸ್ಥಿರ ರಾಜ್ಯಗೆಯ್ವತೆರದೇ ಸಲೆ ಬೀಚಚಮೂ
ವರನುಂ ಚಾಮಲದೇವಿಯು
ವರಸುತನಂಗೆಂಯುತಿರ್ದ್ದಡೇವಣ್ಣಿಪುದೋ ॥ 175 ॥

ಕಂ ॥ ಮಾತೇಂ ಬೀಚಂ ಭಾಗಿ ಮ
ಹೀತಳಕಲ್ಲದೊಡೆ ಸಿಂಗಣಂ ಹೆದ್ದೊಳೆಯಿಂ
ದೀ ತಡಿಯ ಭೂಮಿಯೆನಗೆಂ
ತಾ ತಡಿ ನಿನಗೆಂದು ಸಕಲಮಂ ನಿರವಿಪನೇ ॥ 176 ॥

18) ಹಾವೇರಿ, SII Vol XVIII, No. 390, ಕ್ರಿಶ. ಸು. 13ನೇ ಶತಮಾನ

ಹಾವೇರಿಯ ಒಂದು ಬಸದಿಗೆ ಮಾದರಸ ಎಂಬುವವನು ಮೆಟ್ಟಿಲುಗಳನ್ನು ನಿರ್ಮಿಸಿದ್ದಾಗಿ ಇದು ತಿಳಿಸುತ್ತದೆ.

ಕಂ ॥ ಪರಹಿತಚರಿತಂ ಪಾವನ
ತರತತ್ತ್ವವಿಚಾರನಮಳ ಗುಣಮಣಿಕೋಶಂ
ಸುರಚಿತ ನವಪದಮಂ ಮಾ
ದರಸಂ ಮಾಡಿಸಿದನೆಸೆಯೆ ಜಿನಮಂದಿರದೊಳ್ ॥ 177 ॥

19) ಸಂಗೂರು, SII Vol XVIII, No. 274, ಕ್ರಿಶ. 1396

ಈ ನಿಸಿದಿ ಶಾಸನ ಗೋವೆಯ ಕದಂಬರ ದಂಡನಾಯಕನಾಗಿದ್ದ ಮಲ್ಲಪನ ಮಗ ಸಂಗಮನ ಸನ್ಯಸನವನ್ನು ಹೇಳುತ್ತದೆ.

ಚಂಗಪುರ (ಸಂಗೂರು)

ಉ ಮಾ ॥ ಚಾಗಿಗಳಿಕ್ಕೆ ಭೋಗಿಗಳ ಮಂದಿರ ಮತ್ತಮನೋಜ ಸೌಖ್ಯ ನಿ
ರ್ವೇಗಿಗಳಾಶ್ರಯಂ ಪರಮಯೋಗಿ ಗಣೇಶವಿಹಾರ ಭೂಮಿ ಜೈ
ನಾಗಮದಾಗರಂ ಚತುರಸಾಗರಮೆಂದಿಳೆ ಬಣ್ನಿಕುಂ ಮನೋ
ರಾಗದಿನೆಯ್ದೆ ಚಂಗಪುರಮಂ ಮಲಿಕಾರ್ಜ್ಜುನ ಜನ್ಮಭೂಮಿಯಂ ॥ 178 ॥

ಮಲ್ಲಪನ ಮಗ ಸಂಗಮನೃಪ

ಚಂ ಮಾ ॥ ಉದಯ ಗಿರೀಂದ್ರದೊಳ್ದಿನಪನೊಲ್ದುದಿಪಂತಮೃತಾಬ್ಧಿಯಲ್ಲಿ ಕೌ
ಮುದಿಯುದಿಪಂತೆ ಮೇರುಗಿರಿ ನಂದನದಲ್ಲಿ ಸುರದ್ರುಮಂ ಸುಖ
ಪ್ರದಮುದಿಪಂತೆ ಸಂಗಮನೃಪಂ ಮಲ್ಲಿಕಾರ್ಜ್ಜುನ ಗರ್ಭದಲ್ಲಿ ತಾ
ನುದಯಿಸಿದಂ ವಿವೇಕನಿಧಿ ಸದ್ಗುಣರಾಸಿ ವಿನೇಯಪುಂಗವಂ ॥ 179 ॥

ಮ ವಿ ॥ ಜಿನರಾಜಕ್ರಮಪೂಜನಾ ಪರಿಕರ ವ್ಯಾಸಂಗನಂ ಸಂಗನಂ
ಮನುಮಾರ್ಗ್ಗಪ್ರಕಟೀಕೃತಾಶಯ ಮಹಾಹಾರ್ದಾಂಗನಂ ಸಂಗನಂ
ಜನತಾನಂದಮನೀವ ಪಾವನಗುಣವ್ರೋತ್ತುಂಗನಂ ಸಂಗನಂ
ಮನಮೊಲ್ದಾಂ ಪೊಗಳ್ವೆಂ ವಿರೋಧಿಕದಳೀ ಮಾತಂಗನಂ ಸಂಗನಂ
॥ 180 ॥

ಕಂ ॥ ಯಾದವರ ಕುಲಂ ತುಂಗಮ
ದಾದುದು ನೇಮೀಶ ಮಾಧವರಿನುಚಿತ ಶ್ರೀ
ಯಾದವ ಕುಲ ಸಂಗಮನೇ
ನೇ ದೊರೆಯಂ ನೇಮಿನಾಥ ಮಾಧವ ಜನಕಂ ॥ 181 ॥

ಕಂ ॥ ಪಾವನಚರಿತಂ ವಿಮಲ ಯ
ಶೋವಲ್ಲಭನಮಮ ಬೆಳುವಲಾದಿತ್ಯಂ ದಾ
ಸೀವೇಸೀ ಪರವನಿತಾ
ವ್ಯಾವರ್ಜ್ಜಿತಸಂಗ ಸಂಗರಾಂಗಣಸಿಂಗಂ ॥ 182 ॥

ಕಂ ॥ ರಣರಂಗ ಪಟುಕಟಾರಂ
ತ್ರಿಣೇತ್ರನಾ ತ್ಯಾಗಿರಾಯನಕಲಂಕ ಗುಣಾ
ಗ್ರಣಿ ರತ್ನತ್ರಯ ಮಹಾ ?
ಮಣಿಭೂಷಣನೆನಿಸಿ ಸಂಗಮಾರ್ಯ್ಯಂ ನೆಗಳ್ದಂ ॥ 183 ॥

ಕಂ ॥ ಮನಮೆ ದಯಾರಸದ ತವ
ರ್ಮ್ಮನೆ ವಚನಂ ವಿನಯ ಸತ್ಯರಚನಾ ರಚಿತಂ
ಮನುಚರಿತ ಸಂಗಮಾರ್ಯ್ಯನ
ಘನಚಾರಿತ್ರಂ ಪರೋಪಕಾರಾಯತ್ತಂ ॥ 184 ॥

ಚಂ ಮಾ ॥ ಧವಳಿಸಿ ಕೀರ್ತ್ತಿ ಚಂದನದ ಚರ್ಚ್ಚೆಗಳಿಂ ದಿಗಧೀಶರೆಲ್ಲರಂ
ಭುವನಮನಾಗಳುಂ ತಣಿಪಿ ಸತ್ಕೃತಿಯೆಂಬ ಸುಧಾ ಪ್ರವರ್ಷದಿಂ
ಕವಿ ಗಮಕಿ ಪ್ರಮುಖ್ಯ ವಿಬುಧಾವಳಿಗೀಪ್ಸಿತಮಿತ್ತು ಬರ್ದ್ದಿದಂ
ಪ್ರವರನಿದೇಂ ಕೃತಾರ್ತ್ಥನೆಲೆ ಸಂಗಮದೇವನಿಳಾತಳಾಗ್ರದೊಳ್ ॥ 185 ॥

ಚಂ ಮಾ ॥ ತೊಲಗಿಸಿದಂ ನಿಜೋಭಯಪರಿಗ್ರಹದೊಂದು ತೊಡರ್ಪ್ಪಿನಾರ್ಪ್ಪಿನಿಂ
ಚಲಿಸದೆ ಶತ್ರುಮಿತ್ರ ಸುಖದುಃಖ ತನುಚ್ಯುತಿ ಜೀವಿತಂಗಳೊಳ್
ತಳೆದು ಸಮತ್ವಮಂ ಪರಮಸಂನ್ಯಸನಕ್ಕೆಡೆಯಾಗಿ ದೇಹದಿಂ
ತೊಲಗಿದನಾತ್ಮಭಾವನೆಯೊಳೆಂದೆನೆ ಸಂಗಮನಿಂ ಕೃತಾರ್ತ್ಥರಾರ್ ॥ 186 ॥

ಕಂ ॥ ಅಭಿನವಮೆಂದೆನಿಪ ಮಹಾ
ವಿಭವಮನಾಂತಿರ್ದ್ದು ಕಡೆಗೆ ಸಂನ್ಯಸನಮನಾಂ
ತುಭಯದೆ ದಿವಮಂ ಪೊಕ್ಕಂ
ದುಭಯಭವಂ ಸಫಲಮಾದುದಾ ಸಂಗಮನಾ ॥ 187 ॥

ಚಂ ಮಾ ॥ ಪ್ರಜೆ ಮಱುಗಿತ್ತು ಪಂಡಿತಜನಂ ಬೆಜಗಾದುದು ಯಾಚಕಾಳಿ ನೀ
ರಜಮುರಿತಾಗಿದಂತೆ ಕಡುಗಂದಿದುವಂಧಕರಾಗೆ ಬಂಧುಗ

ಳು ಜನರ ಸಂಭ್ರಮಂ ಪರಿದುದಧೃತಿವೆತ್ತರನಾಥರಂಜಿದ
ರ್ಭುಜಗಮಡರ್ದ್ದವೋಲ್ಲುರುಜನರ್ಗ್ಗಣಿ ಸಂಗಮನಸ್ತಮಾನದೊಳ್
॥ 188 ॥

ಉ ಮಾ ॥ ಬೇಡುವೆವಾರನೆಂದಳಲಿತರ್ತ್ಥಿಜನಂ ಧ್ರುವಗೀತಜಾತಿಯಂ
ಪಾಡುವೆವಾರಮುಂದೆನುತ ಗಾಯಕರತ್ತುದನೇಕಚಿತ್ರದಿಂ
ದಾಡುವೆವಾರಮುಂದೆನುತ ಬಾಯ್ವಿಡುತಿರ್ದ್ದುದು ನರ್ತ್ತಕಾಳಿ ನಾ
ಡಾಡಿಯ ರೂಢಿಯೆ ಸುಕೃತಿ ಸಂಗಮನಸ್ತಮಯಾ ಧರಾಗ್ರದೊಳ್ ॥ 189 ॥

ಹಿರೇಕೆರೂರು ತಾಲ್ಲೂಕು

20) ಅಬಲೂರು, E.I. Vol. V, p. 218, ಕ್ರಿಶ. 1101

ಈ ಶಾಸನದಲ್ಲಿ ಕಾಳಾಮುಖ ಯತಿಗಳಾದ ಕೇದಾರಶಕ್ತಿಯತಿ, ಶ್ರೀಕಂಠದೇವ, ಸೋಮೇಶ್ವರಸೂರಿ ಎಂಬ ಮೂರು ತಲೆಮಾರಿನ ಗುರು-ಶಿಷ್ಯರ ತಪೋಶಕ್ತಿಯನ್ನು ವರ್ಣಿಸಿದೆ.

ಕೇದಾರಶಕ್ತಿ

ಕಂ ॥ ಧರೆಗೆಸೆವ ಶಕ್ತಿಪರ್ಷೆಗೆ
ಕರಮಗ್ರಣಿಯೆನಿಪ ಪರ್ವ್ವತಾವಳಿಯೊಳ್ ಮೂ
ವರ ಕೋಣೆಯ ಸಂತತಿಗಾ
ಭರಣಂ ಕೇದಾರಶಕ್ತಿ ಯತಿಪತಿ ನೆಗಳ್ದಂ ॥ 190 ॥

ಶ್ರೀಕಂಠದೇವ

ಮ ಸ್ರ ॥
ಹರಪಾದಾಂಭೋಜದೊಳ್ ಚಿತ್ತಮನೆಸೆವ ಮುಖಾಂಭೋಜದೊಳ್ ಭಾರತೀ ಸೌಂ
ದರಮಂ ಚಾರಿತ್ರದೊಳ್ ನಿರ್ಮ್ಮಳತೆಯನಖಿಳಾಶಾಂತದೊಳ್ ಶಕ್ರದಿಕ್ಕುಂ
ಜರಭಾಸ್ವತ್ಕೀರ್ತ್ತಿಯಂ ಬಾಪ್ಪುರೆ ನಿಲಿಸಿದನುದ್ಯದ್ಗುಣೌಘಂ ಮುನೀಂದ್ರಾ
ಭರಣಂ ಶ್ರೀಕಂಠದೇವಂ ಬುಧಜನತಿಲಕಂ ತರ್ಕ್ಕವಿದ್ಯಾಸಮುದ್ರಂ ॥ 191 ॥

ಸೋಮೇಶ್ವರಸೂರಿ

ಮ ವಿ ॥ ಕೆಲಬರ್ತ್ತರ್ಕ್ಕವಿಶಾರದರ್ಕ್ಕೆಲಬರಾಪ್ತಾಲಾಪ ಸಂಬೋಧಕ
ರ್ಕ್ಕೆಲಬರ್ನ್ನಾಟಕ ಕೋವಿದರ್ಕ್ಕೆಲಬರೊಳ್ಗಬ್ಬಂಗಳಂ ಬಲ್ಲವ
ರ್ಕ್ಕೆಲಬರ್ಬ್ಯಾಕರಣಜ್ಞರಿಂತಿನಿತುಮಂ ಬಲ್ಲನ್ನರಿಲ್ಲೆಲ್ಲಮಂ
ಸಲೆ ಸೋಮೇಶ್ವರಸೂರಿ ಬಲ್ಲನನಘಂ ನಯ್ಯಾಯಿಕಾಗ್ರೇಶ್ವರಂ ॥ 192 ॥

21) ಹಿರೇಹಳ್ಳಿ, K.I. Vol. IV, p. ?, ಕ್ರಿಶ. 1121

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆಯಾದ ಆರನೆಯ ವಿಕ್ರಮಾದಿತ್ಯನ ಆಳಿಕೆಯಲ್ಲಿ ಗೊಟ್ಟಗಡಿಯ ಸೆಟ್ಟಿ – ಶಾನುಭೋಗರ ಗುಣವಿಶೇಷಗಳನ್ನು ವರ್ಣಿಸಿದೆ.

ವಿಕ್ರಮಾದಿತ್ಯ VI

ಚಂ ಮಾ ॥ ಅದಿರದ ದುರ್ಗ್ಗವಿಲ್ಲಳವುಗುಂದದ ಸಾಸಿಗರಿಲ್ಲ ಕೊಟ್ಟು ಕಾ
ಣದ ನೃಪರಿಲ್ಲ ಚಾಗೆಜಿಗೆಯ್ಯದ ಜಟ್ಟಿಗರಿಲ್ಲ ಕಾದಿ ಸೋ
ಲದ ರಣಧೀರರಿಲ್ಲೊಜೆಯ ಬಾಯೊಳೆ ನೇಲದ ರಾಯರಿಲ್ಲ ಜೆ
ರ್ಚ್ಚದ ಪರರಾಷ್ಟ್ರಮಿಲ್ಲ ಭುಜಶಕ್ತಿಗೆ ವಿಕ್ರಮ ಚಕ್ರವರ್ತ್ತಿಯಾ ॥ 193 ॥

ಬನವಾಸಿ ನಾಡಿನ ಬ್ಯಾಸಪುರ

ಕಂ ॥ ಆ ನಾಳ್ಗೆ ತಿಲಕದಂತಿರೆ
ಭೂನಾರಿಯ ಕೊರಲ ಪದಕದಂತಿರಲುದಿತ
ಶ್ರೀನಿಳಯಮಾಗಿ ರಂಜಿಪು
ದೇನೆಂಬೆಂ ಬ್ಯಾಸಪುರದ ಮಹಿಮೋನ್ನತಿಯಂ ॥ 194 ॥

ಕಂ ॥ ಅದು ನೂಱನಾಲ್ವತೆಂಬೀ
ಪದುಳಿಕೆಯಂ ತಳೆದು ಕಂಪಣಂ ಶ್ರೀಯಿಂದ
ಭ್ಯುದಯಂ ಲಕ್ಷ್ಮಿನಿವಾಸಾ
ಸ್ಪದವೆನಲೀ ಬ್ಯಾಸಪುರವರಂ ರಂಜಿಸುಗುಂ ॥ 195 ॥

ಕಾಗಿನೆಲೆ

ಕಂ ॥ ಅಲ್ಲಿಗೆ ತಿಳಕದವೊಲ್ ಚೆ
ಲ್ವೆಲ್ಲಮನೊಳಕೊಂಡು ವಿಮಳಕೀರ್ತ್ತಿಶ್ರೀಯಂ
ಪಲ್ಲವಿಸಿ ಕಾಗಿನೆಲೆ ಭೂ
ವಲ್ಲಭೆಯೆನಿಸಿರ್ದ್ದ ಸಿರಿಯ ನೆಲೆಯವೊಲೆಸೆಗುಂ ॥ 196 ॥

ಚಂ ಮಾ ॥ ಅದು ಸಿರಿಯಿರ್ಕ್ಕೆದಾಣವದು ಭಾಸುರಕೀರ್ತ್ತಿಯ ಜನ್ಮಗೇಹವ
ನ್ತದು ವಿಜಯಾಂಗನಾನಿಳಯವನ್ತದು ಪುಣ್ಯಲತಾಪ್ರಬನ್ಧವ
ನ್ತದು ಪುರುಷಾರ್ತ್ಥತೀರ್ತ್ಥವದು ಸತ್ಯದ ತಾಯ್ವನೆ ಮಿಕ್ಕ ಹೆಮ್ಮೆಗಾ
ಸ್ಪದಮೆನಿಸಿತ್ತು ಕಾಗಿನೆಲೆ ಪನ್ನೆರಡೆಂಬ ನಿಜಾಭಿಧಾನದಿಂ ॥ 197 ॥

ಶೋಭನಗೌಂಡ

ಕಂ ॥ ಆ ಕಾಗಿನೆಲೆಯ ವಿಪುಳ
ಶ್ರೀಕಾನ್ತೆಗೆ ತಾನೆ ನೆಲೆಯೆನಿಪ್ಪಂ ವೀರ
ಶ್ರೀಕಾನ್ತೆಯ ಮನದಿನಿಯಂ
ಪ್ರಾಕಟದೋರ್ದ್ದಣ್ಡನೆನಿಪ ಶೋಭನಗೌಣ್ಡಂ ॥ 198 ॥

ಚಂ ಮಾ ॥ ಉದಧಿಯನಾತ್ಮಕೀರ್ತ್ತಿ ಪರಿವೇಷ್ಟಿಸೆ ಕುನ್ತಳ ಚಕ್ರವರ್ತ್ತಿಯೊಳ್
ವಿದಿತವೆನಲ್ಕೆ ತಾನೆ ಪಡೆದಂ ಧರೆ ಬಣ್ಣಿಸಲಂಗಚಿತ್ತಮಂ
ಸದಮಳರಾಜಚಿಹ್ನವನಗುರ್ವ್ವಿನ ಹೆಮ್ಮೆಯನೊಳ್ಪುವೆತ್ತ ಚಂ
ದ್ರದ ಕೊಡೆಯಂ ಬಬಾಪ್ಪಮಮ ಶೋಭನಗೌಣ್ಡನಿದೇಂ ಪ್ರಚಣ್ಡನೋ
॥ 199 ॥

ಜಕ್ಕಿಸೆಟ್ಟಿ

ಚಂ ಮಾ ॥ ಅನುಪಮವಾಯ್ತು ಧರ್ಮ್ಮಗುಣದುನ್ನತಿ ಲೋಕಹಿತಾರ್ತ್ಥವಾಯ್ತು ನೆ
ಟ್ಟನೆ ಪಡೆದರ್ತ್ಥದಿಂದೊಸೆದು ಮಾಳ್ಪ ಪರಾರ್ತ್ಥವಿಳಾತಳಕ್ಕೆ ಜೌ
ವನದೊದವಾಯ್ತು ಭಾವಿಸುವೊಡಾ ಬ್ಯವಸಾಯವೆನುತ್ತೆ ಜಕ್ಕಿಸೆ
ಟ್ಟಿಯನನುರಾಗದಿಂ ಪದೆದು ಬಣ್ಣಿಸುತಿಪ್ಪುದು ಭೂವಿಭೂತಳಂ ॥ 200 ॥

ಕಂ ॥ ದಿಕ್ಕಾಮಿನಿಯರ ಕುಚದೊಳ್
ದಿಕ್ಕರಿಗಳ ಧವಳಯುಗ್ಮದಂತಚ್ಛವಿಯೊಳ್
ಜಕ್ಕಂ ಧರ್ಮ್ಮದ ಕಣಿಯೆಂ
ಬಕ್ಕರವಂ ಕೀರ್ತ್ತಿ ಬರೆದಳೀ ಜಗವಜಿಯಲ್ ॥ 201 ॥

ಜಕ್ಕಿಸೆಟ್ಟಿಯ ಮಗ ಶೋಭನಸೆಟ್ಟಿ

ಚಂ ಮಾ ॥ ಪರಮಪರೋಪಕಾರಗುಣದೊಳ್ಸುಚರಿತ್ರದೊಳಾರ್ಪ್ಪಿನೊಳ್ ಕಳಾ
ಪರಿಣತಿಯೊಳ್ ಜನಂ ಪೊಗಳ್ವ ಸಮೃದ್ಧಿಯೊಳತ್ಯುದಾರದೊಳ್
ನಿರುಪಮ ಧರ್ಮ್ಮಕಾರ್ಯ್ಯದೆಡೆಯೊಳ್ ಸಲೆ ಶೋಭನಸೆಟ್ಟಿಯೊಳ್ದಿಟಂ
ಸರಿ ದೊರೆ ಪಾಟಿ ಪಾಸಟಿ ಸಮಂ ತೊನೆಯೆಂದಡೆ ದೋಷಮಾಗದೇ
॥ 202 ॥

ಗೊಟ್ಟೆಗಡಿ – ಶ್ರೀ ಅಂಗಜೇಶ್ವರ

ಕಂ ॥ ಇಂತಿನಿಬರುಮುತ್ಸವದಿಂ
ಸಂತೊಸವಂ ತಳೆದು ಗೊಟ್ಟೆಗಡಿಯೊಳ್ ಸಲೆ ನಿ

ಶ್ಚಿಂತದಿನಿರುತಂ ಧರ್ಮ್ಮದ
ಚಿಂತನೆಯಿಂದಂಗಜೇಶ ದೇವಾಲಯಮಂ ॥ 203 ॥

ಚಂ ಮಾ ॥ ಇದು ಕವಿಳಾಸದಂದವಿದು ಭಾವಿಪೊಡಾ ಸಿರಿಶೈಳದೊಪ್ಪವಿ
ನ್ತಿದು ರಜತಾಚಳಕ್ಕೆ ದೊರೆಯೆಂಬಿನೆಗಂ ನೆಗಳ್ದಂಗಜೇಶನೊ
ಳ್ಪೊದವಿದ ದೇವತಾಸದನಮಂ ನೆಱೆ ಮಾಡಿದರೆಂದೊಡಿನ್ನದಾ
ವುದೊ ಪಡಿ ಮಿಕ್ಕ ಗೊಟ್ಟೆಗಡಿಗಬ್ಧಿಪರೀತಧರಾತಳಾಗ್ರದೊಳ್ ॥ 204 ॥

ಚಂ ಮಾ ॥ ದಿನಕರನಿಂದೆ ಪದ್ಮವನಮೊಪ್ಪುವವೊಲ್ ಶಶಿಯಿಂದಮುತ್ಪಳಂ
ಜನನುತಮಾಗಿ ರಂಜಿಸುವವೊಲ್ ಚೆಲುವಾದ ವಸಂತನಿಂದೆ ನ
ನ್ದನವನಮೊಳ್ಪನಾನ್ತವೊಲು ಮಾಡಿಪನೆಂಬ ನೆಗರ್ತ್ತೆಯಂಗಜೇ
ಶನ ಪುರದಿಂದೆ ಗೊಟ್ಟೆಗಡಿ ರಂಜಿಸುಗುಂ ಬನವಾಸೆ ದೇಶದೊಳ್
॥ 205 ॥

ಕಂ ॥ ಬಗೆಗೊಂಡು ಗೊಟ್ಟೆಗಡಿಯೊಳ್
ಸೊಗಯಿಸಿ ತೋರ್ಪ್ಪಂಗಜೇಶದೇವನ ಪುರಮಂ
ಪೊಗಳಲ್ನೆಱೆಯದೆ ನಾಲ್ಕುಂ
ಮೊಗವಾದಂ ಬ್ರಹ್ಮನುಂತೆ ಚತುರಾನನನೇ ॥ 206 ॥

22) ಯಮ್ಮಿಗನೂರು, K.I. Vol IV, No. 17, ಕ್ರಿಶ. 1166

ಕಳಚೂರ್ಯರ ದೊರೆ ಬಿಜ್ಜಳದೇವನ ಆಳಿಕೆಯ ಈ ವೀರಗಲ್ಲು ಶಾಸನದಲ್ಲಿ ಮಸಣ ಎಂಬುವವನ ಮರಣವನ್ನು ಹೇಳಿದೆ.

ಕೇತಮಲ್ಲಸೆಟ್ಟಿ

ಕಂ ॥ ಪರಹಿತ ಚರಿತಂ ಪರೋಪ
ಕಾರಾರ್ತ್ಥಮರ್ಥಮೀಶ್ವರ ಪಾದಾಂ
ಬುರುಹೈಕಭೃಂಗನೆನಲಾ
ರ್ದ್ಧರೆಯಾದರ್ಕ್ಕೇತಮಲ್ಲಸೆಟ್ಟಿಯ ಗುಣದೊಳ್ ॥ 207 ॥

ಚಂ ಮಾ ॥ ಕರಿಘಟೆಯನ್ತುರಗಚಯಮಂ ನರ ಸದ್ಭಟ ಕೋಟಿಯೂಥಮಂ
ಸುರಪತಿ ಹವ್ಯವಾಹನ ಕುಬೇರರ ವಾಹನವೆನ್ದು ವೈರಿಸಂ
ಗರ ನೆವದಿಂದ ದೇವಚಯಮಂ ಕರೆದೀವನೆನಲ್ಕೆ ಬಂಣ್ಣಿಸ
ಲ್ಪರಿಣತವಿದ್ಯನಾವನವನೀತಳದೊಳ್ಕಲಿ ಕೇತಮಲ್ಲನಂ ॥ 208 ॥

ಮಸಣ

ಕಂ ॥ ಒಡನುಂಡಂಗೆಡಱಾದಡೆ
ಕಡುಗಲಿ ಕಡೆಗಣಿಸಲಾಗದೆಂದುತ್ಸವದಿಂ
ಪಡೆಮೆಚ್ಚೆಗಂಡನಾಹವ
ದೆಡೆಯೊಳ್ ಸಿತಗರ್ಗ್ಗೆ ಗಂಡನೆಸೆದಂ ಮಸಣಂ ॥ 209 ॥

ಕಂ ॥ ಒಂದಲಗಿನ ಮೊನೆಯಿಂ ರಿಪು
ಬೃಂನ್ದಮನಾಂತೆತ್ತಿ ಸುರರೊಳಿರಿಸುವನೆನಲಿ
ನ್ನೆನ್ದು ಹೊಗಳ್ವಳವೆ ಮಸಣಂ
ಸಂದಾಯದ ಕಲಿಯದಂಡೆ ಸಿತಗರಗಂಡಂ ॥ 210 ॥

23) ಕಾಗಿನೆಲೆ, SII Vol XVIII, No. 345, ಕ್ರಿ.ಶ. ಸು. 11 – 12ನೇ ಶತಮಾನ

ಇದರಲ್ಲಿ ಕಾಗಿನೆಲೆಯ ಆದಿತ್ಯವರ್ಮನನ್ನು ಹೊಗಳಿದೆ.

ಮ ವಿ ॥ ಪಱಿಗುಂ ನೆರ್ಕ್ಕನೆ ವೈರಿಯೆಂಬ ತೊಡರಂ ವಿದ್ವಿಷ್ಟರಂ ಸಜ್ಜನ
ಲ್ನೆಱೆ ಸೀಳ್ದಿಕ್ಕಿಯೆ ದುಷ್ಟದಾಯಿಗರ ನಿಟ್ಟೆಲ್ವಂ ಬಿರಿಲ್ಲೆಂಬಿನಂ
ಮಱಿದೀಡಾಡಿ ನಭೋನ್ತದೊಳ್ ನಿಲಿಸಿ ಕೋಡೇಱಿಂ ನಿಜೋತ್ಸಾಹದಿಂ
ಮೆಱೆಗುಂ ಕಾಳನ ಗನ್ಧವಾರಣಮೆಲೇಱೇಹಯ್ಯ ಬಾಪ್ಪೆಂಬಿನಂ ॥ 211 ॥

ಕಂ ॥ ಅರಿಬಿರುದ ಸುಭಟಗಿರಿನಿ
ರ್ಭ್ಭರಶಿಖರೋದ್ದಳನತಟ ತಡಿದ್ರವತೀಕ್ಷ್ಣೋ
ತ್ಕರವಜ್ರನೆನಿಸಿ ಮಚ್ಚರಿ
ಸುವರಾರ್ಣ್ನೆಗಟ್ಟಿ ವೈರೀನಾರಾಯಣನೊಳ್ ॥ 212 ॥

24) ಅಬಲೂರು, E.I Vol. V, pp. 245 – 252; ಶಾಸನ ಸರಸ್ವತಿ, ಕ್ರಿ.ಶ. 1200

ಕಳಚೂರ್ಯರ ದೊರೆ ಬಿಜ್ಜಳ, ಕಲ್ಯಾಣದ ಚಾಲುಕ್ಯರ ದೊರೆ ನಾಲ್ಕನೆಯ ಸೋಮೇಶ್ವರ ಹಾಗೂ ಹಾನಗಲ್ಲಿನ ಕದಂಬ ಕಾಮದೇವರಸನ ಶಾಸನಗಳ ಸಂಕಲಿತ ಶಾಸನ ಇದು. ಏಕಾಂತ ರಾಮಯ್ಯ ಎಂಬುವವನ ಪವಾಡಭರಿತ ಕಥೆಯನ್ನು ನಿರೂಪಿಸುತ್ತದೆ. ಕೇಶವರಾಜ ಚಮೂಪ ಎಂಬುವವನು ರಚಿಸಿದ ಈ ಶಾಸನವನ್ನು ತಿದ್ದಿ ಬರೆದವನು ಸರಣ.

ಶಿವಸ್ತುತಿ

ಸ್ರಗ್ಧರೆ ॥ ಶ್ರೀಮದ್ಗಂಗಾತರಂಗೋಚ್ಚಳಿತ ಜಳಕಣಶ್ರೇಣಿ ಪುಃಪಾಳಿಶೋಭಾ
ಧಾಮಂ ಚಂಚಜ್ಜಟಾಪಲ್ಲವಮಮೃತಕರೋದ್ಯತ್ಫಳಂ ಬಾಹುಶಾಖಾ

ರಾಮಂ ಗೌರೀಲತಾಲಿಂಗಿತಮಮರನುತಂ ಶಂಭುಕಲ್ಪದ್ರುಮಾದಂ
ರಾಮಂಗೀಗರ್ಥಿಯಿಂ ವಾಂಚ್ಛಿತಫಳಚಯಮಂ ಸಂತೋತ್ಸಾಹದಿಂದಂ
॥ 213 ॥

ಸ್ರಗ್ಧರೆ ॥ ಶ್ರೀಕಣ್ಠಂ ರಾಮದೇವಂಗನುಪಮ ಮಹಿಮಂಗೀಗೆ ಸಂಪತ್ತನೆಂದುಂ
ನಾಕೌಕಾನೀಕಮೌಳಿಪ್ರಕರಮಣಿಗಣ ಶ್ರೇಣಿಶೋಣಾಂಶುಜಾಳ
ವ್ಯಾಕೀರ್ಣಾಂಘ್ರಿದ್ವಯಾಳಂ ಕೃತನಮರವರಂ ಶೀತಶೈಲೇಂದ್ರ ಕನ್ಯಾ
ಲೋಕಾಂಶು ಶ್ರೀನಿವಾಸಂ ಸಕಳಗಣವೃತಂ ವೀರಸೋಮೇಶನೀಶಂ ॥ 214 ॥

ಸಮುದ್ರ ವರ್ಣನೆ

ಮ ಸ್ರ ॥ ಚಳದುಗ್ರಗ್ರಾಹವಕ್ತ್ರಚ್ಯುತ ತಿಮಿನಿಕರಾತುಚ್ಚಪುಚ್ಛಾಗ್ರ ಘಾತಾ
ಕುಳಿತಾಂಭಃ ಕುಂಭಿಯೂಥಪ್ರಕರಸಜಳ ಘೂತ್ಕಾರಹಸ್ತಾಭ್ರ ಮಾಳಾ
ಮಿಳಿತಂ ಸುತ್ತಿರ್ಪೊದುದ್ಯನ್ಮಣಿಗಣಕಿರಣಸ್ಫಾರಮುಕ್ತಾಂಶು ವೇಳಾ
ಚಳಮಾಳಂ ಭೂರಮಾಮಣ್ಡನ ವಿಪುಳಕಟೀದೇಶಮುದ್ರಂ ಸಮುದ್ರಂ
॥ 215 ॥

ಹಿಮವತ್ಪರ್ವತ

ಮ ಸ್ರ ॥ ಎಸೆಗುಂ ಪೂರ್ವಾಪರಾಂಭೋನಿಧಿಮಿತಿ ವಿತತಾಯಾಮದಿಂ ಸಿದ್ಧಕನ್ಯಾ
ವಿಸರಾನಂಗೋರುಕೇಳೀಶ್ರಮಶಮ ಮಹಿಮಾಕಂದರಂ ಸ್ವರ್ಧುಣೀವಾಃ
ಪ್ರಸರೋಪಕ್ಷುಣ್ಣ ನಾನಾನಗನಿಕರಗಳದ್ಗಣ್ಡಶೈಳಾಳಿಮಾಳಾ
ವಿಸರಂ ಪ್ರಸ್ಫಾರ ಶೀತದ್ಯುತಿರುಚಿನಿಚಯಭ್ರಾಜಿತಂ ಶೀತಶೈಲಂ ॥ 216 ॥

ಅಲಂದೆ

ಕಂ ॥ ಸೊಗಯಿಪುದಲನ್ದೆಯೆಂಬುದು
ನಗರಂ ಚೆಲುವೆಸೆದು ನಾಡೆಯಮರಾವತಿಗಂ
ಮಿಗಿಲೆನಿಸಿ ವಿಬುಧ ಜನದಿಂ
ದಗಣಿತ ಧನ ಧಾನ್ಯಜಳಸಮೃದ್ಧಿಯಿನೆಂದುಂ ॥ 217 ॥

ಕಂ ॥ ಪ್ರಕಟಿತಕಮರಾವತಿಯೊಳ್
ಸುಕೇಶಿಯುಂ ಮಂಜುಘೋಷೆಯುಂ ತಾಮಿರ್ಬ್ಬ
ರ್ಸಕಳ ವಧೂತತಿಯೆಲ್ಲಂ
ಸುಕೇಶಿಯರ್ಮಂಜುಘೋಷೆಯರ್ತ್ತತ್ಪುರದೊಳ್ ॥ 218 ॥

ಮ ವಿ ॥ ಅದು ನಾನಾವಿಧ ಗಂಧಸಾಳಿವನದಿಂ ಸರ್ವ್ವರ್ತ್ತುಕೋದ್ಯಾನ ನಂ
ದನದಿಂ ಪೂರ್ಣ್ಣತಟಾಕಕೂಪಸರಸೀಸಂನ್ದೋಹದಿಂ ಸಾರಸೋ
ನ್ಮದಭೃಂಗೀ ಪಿಕಕೋಕಕೇಕಿಶುಕ ಸಂಘಾನೀಕ ಶಾಕುಂತನಾ
ದದಿನೆತ್ತಂ ಗಣಿಕಾವಿನೋದಕೃತವೀಣಾನಾದದಿಂದೊಪ್ಪುಗುಂ ॥ 219 ॥

ಚಂ ಮಾ ॥ ಅವತರಿಸಿರ್ದ್ದನಲ್ಲಿ ರಜತಾಚಳದಿಂ ಗಿರಿಜಾಸಮೇತಮು
ತ್ಸವದೊಳೆ ಸೋಮನಾಥನಖಿಳಾಮರ ಮೌಳಿ ವಿನದ್ಧರತ್ನ ಸಂ
ಭವಕಿರಣಪ್ರಭಾಪಟಲ ಪುಂಜ ಪರಾಗ ಪದಾಬ್ಜನರ್ಥಿಯಿಂ
ದವನತ ಭಾಕ್ತಿಕಾಭಿಮತಸಿದ್ಧಿ ಫಳೋದಯ ಕಲ್ಪಭೂರುಹಂ ॥ 220 ॥

ಪುರುಷೋತ್ತಮ

ಕಂ ॥ ಆ ಸೋಮನಾಥಪುರ ಸಂ
ವಾಸಿತರೊಳ್ ಬ್ರಹ್ಮಪುರಿಗಳೊಳ್ವಿಪ್ರರೊಳಾ
ವ್ಯಾಸ ಶುಕವಾಮದೇವ ಪ
ರಾಶರ ಕಪಿಳಾದಿ ಸದೃಶನೊರ್ಬ್ಬನ್ನೆಗಳ್ದಂ ॥ 221 ॥

ಕಂ ॥ ಶ್ರೀವತ್ಸಗೋತ್ರನುರ್ವ್ವೀ
ದೇವನುತಂ ನಿಖಿಳವೇದ ವೇದಾಂಗವಿದಂ
ಪಾವನ ಚರಿತ್ರ ಗುಣ ಸ
ದ್ಭಾವಂ ಪುರುಷೋತ್ತಮಂ ದ್ವಿಜೋತ್ತಮನೆನಿಪಂ ॥ 222 ॥

ಪದ್ಮಾಂಬಿಕೆ

ಕಂ ॥ ಆ ವಿಪ್ರನಸತಿ ಸೀತಾ
ದೇವಿಗಮಾಸತ್ಯತಪನಸತಿಗಂ ಗುಣಸ
ದ್ಭಾವದೆ ಪದ್ಮಾಂಬಿಕೆ ಸಲೆ
ಪಾವನಸುಚರಿತ್ರೆ ಪತಿಹಿತವ್ರತೆಯೆನಿಪಳ್ ॥ 223 ॥

ವಚನ ॥

ಆ ದಂಪತಿಗಳ್ಪಲಕಾಲವನಪತ್ಯರಾಗಿರ್ದ್ದೊಂದು ದೆವಸಂ ನಾಪುತ್ರಸ್ಯ ಲೋಕೋಸ್ತಿ ಎಂಬ ವೇದವಾಕ್ಯಮಂ ತಿಳಿದು

ಕಂ ॥ ಪುತ್ರಾರ್ತ್ಥವಾಗಿ ಸತ್ಯಪ
ವಿತ್ರಾಚರಣಂ ನೆಗಳ್ದ ಪುರುಷೋತ್ತಮನಾ

ಪತ್ತ್ರಾಣನೀಶನೆಂದು ಕ
ಳತ್ರಾನ್ವಿತನಾಗಿ ಶಂಭುವಂ ಪೂಜಿಸಿದನ್ ॥ 224 ॥

ವಚನ ॥
ಅಂನೆಗಮಿತ್ತ ದಿವಿಜ ದನುಜವೃಂದ ವಂದಿತ ಪಾದಾರವಿಂದನಪ್ಪ ಮಹೇಶ್ವರಂ ಕವಿಳಾಸ ಪರ್ವ್ವತದ ರಮ್ಯಭೂಮಿಯೊಳ್ ಕೇಶವ ವಾಸವಾಬ್ಜಭವರೋಲಗಿಸಲಸಂಖ್ಯಾತಗಣ ಪರಿವೃತನುಮಾಸಹಿತಂ ವಡ್ಡೋಲಗದೊಳ್ ಸುಖಸಂಕಥಾವಿನೋದದಿಂದಮಿರೆ ನಾರದನೆಂಬ ಗಣೇಶ್ವರನಿಂತೆಂದಂ

ಉ ಮಾ ॥ ಓಹಿಲದಾಸಿ ಚೆಂನ ಸಿರಿಯಾಳ ಹಳಾಯುಧ ಬಾಣನುದ್ಭಟ
ದೇರ್ಹದೊಳೊಂದಿ ಬಂದ ಮಳಯೇಶ್ವರ ಕೇಶವರಾಜರಾದಿಯಾ
ಗ್ಯೆಹಿಕ ಸೌಖ್ಯಮಂ ಬಿಸುಟಸಂಖ್ಯಗಣಂ ನಿಜವಾದ ಭಕ್ತಿ ಸ
ದ್ಗೇಹದೊಳಿಲ್ಲಿರಲ್ ಸಮಯಮುಕ್ತಟವಾದುವು ಜೈನಬೌದ್ಧರೊಳ್ ॥ 225 ॥

ವಚನ ॥
ಎಂಬುದುಂ ಮಹೇಶ್ವರಂ ದರಹಸಿತ ವದನಾರವಿಂದನಾಗಿ ವೀರಭದ್ರನಂ ನೀಂ ಮನುಷ್ಯಲೋಕದೊಳ್ ನಿಂನಂಶದೊಳೊರ್ಬ್ಬನಂ ಪುಟ್ಟಿಸಿ ಪರಸಮಯಂಗಳಂ ನಿಯಾಮಿಸೆಂಬುದುಂ

ವೀರಭದ್ರನುಂ ಪುರುಷೋತ್ತಮಭಟ್ಟರ್ಗ್ಗೆ ಸ್ವಪ್ನದೊಳ್ತಾಪಸರೂಪದಿಂ ಬಂದು ಪುತ್ರಂ ಪರಸಮಯ ನಿಯಾಮಕಂ ನಿಮಗೆ ಪುಟ್ಟುಗುಮೆಂದು ಪರಮ ಪ್ರಸಾದಂ ಮಾಡಿ ಪೋಪುದುಂ

ಪುರುಷೋತ್ತಮ ಭಟ್ಟರುಂಕೃತಾರ್ತ್ಥರಾಗಿ ಸಂತಸಂಬಟ್ಟು ಮಗನಂ ಪಡೆದು ಜಾತಕರ್ಮಾದಿ ಕ್ರಿಯೆಗಳಂ ಮಾಡಿ ದೇವತೋದ್ದೇಶದಿಂ ರಾಮನೆಂದು ಪೆಸರನಿಟ್ಟರ್

ಆತನುಂ ತನ್ನ ದಿವ್ಯಜನ್ಮಾನುರೂಪಮಾಗೆ ಶಿವಯೋಗಯುಕ್ತನಾಗಿ ನಿಸ್ಪೃಹವೃತ್ತಿಯಿಂ ಚರಿಯಿಸುತ್ತುಂ

ಏಕಾಂತರಾಮ

ಕಂ ॥ ಏಕಾಗ್ರ ಭಕ್ತಿಯೋಗದಿ
ನೇಕಾಕಿಯೆನಲ್ಕೆ ಸಂದು ಶಿವನಂ ಪಿರಿದ
ಪ್ಪೇಕಾಂತದೊಳಾರಾಧಿಸಿ
ಯೇಕಾಂತದ ರಾಮನೆಂಬ ಪೆಸರಂ ಪಡೆದಂ ॥ 226 ॥

ಮ ವಿ ॥ ಸತತಂ ಸಂದು ಶಿವಾಗಮೋಕ್ತ ವಿವಿಧ ಕ್ಷೇತ್ರಂಗಳೊಳ್ ಶಾಂಭವಾ
ಯತನಾನೇಕ ನದೀನದ ಪ್ರಕರದೊಳ್ ಗೌರೀವರಾಂಘ್ರಿದ್ವಯಾ
ಶ್ರಿತ ವಾಕ್ಕಾಯಮನೋನುಗಂ ಚರಿಯಿಸುತ್ತುಂ ಬಂದು ಕಣ್ಡಂ ಸುರಾ
ರ್ಚ್ಚಿತನಂ ದಕ್ಷಿಣ ಸೋಮನಾಥನನಘೌಘತ್ರಾಸಿಯಂ ಪ್ರೀತಿಯಿಂ ॥ 227 ॥

ವಚನ ॥

ಅನ್ತು ಬಂದನವರತ ವಿನಮದಮರವರಮೌಳಿಮಣಿ ಕಿರಣ ಮಂಜರೀ ರಂಜಿತಾಂಘ್ರಿಯುಗ್ಮನಪ್ಪ ಹುಲಿಗೆಱೆಯ ಸೋಮನಾಥನನಾರಾಧಿಸುತ್ತಮಿರ್ಪ್ಪುದುಮಾ ಪರಮೇಶ್ವರಂ ಪ್ರತ್ಯಕ್ಷಮಾಗಿ ಸೋಮನಾಥ ದೇವರ್ಬೆಸಸಿದಡೇಕಾನ್ತದ ರಾಮಯ್ಯನಬ್ಬಲೂರ ಬ್ರಹ್ಮೇಶ್ವರಸ್ಥಾನದೊಳ್ ನಿಸ್ಪೃಹವೃತ್ತಿಯಿಂದಮಿರೆ,

ಕಂ ॥ ಉಲಿದಡ್ಡಿ ಬಂದು ಜೈನ
ರ್ಪಲರನ್ತಾ ಸಂಕಗೌಣ್ಡ ಸಹಿತಂ ಪಿರಿದುಂ
ಚಲದಿಂ ಕೈವಾರಿಸಿದ
ರ್ತೊಲಗದೆ ಜಿನದೈವನೆನ್ದು ಶಿವ ಸಂನಿಧಿಯೊಳ್ ॥ 228 ॥

ವಚನ ॥

ಅದಂ ಕೇಳ್ದೇಕಾನ್ತದ ರಾಮಯ್ಯಂನತಿಕೃದ್ಧನಾಗಿ ಶಿವಸಂನಿಧಿಯೊಳನ್ಯದೇವತಾಸ್ತವನಂ ಮಾಡಲಾಗದೆಂದಡದಂ ಮಾಣದೆ ನುಡಿಯುತ್ತಿರಲಿಂತೆಂದಂ

ಮ ವಿ ॥

ಜಗಮಂ ಮಾಡುವನಾವನಾವನದನಾಪತ್ಕಾಲದೊಳ್ ಕಾವನಿಂ
ಮಿಗೆ ಕೋಪಂ ತನಗಾಗೆ ಸಂಹರಿಸಲಾವಂ ದಕ್ಷನಾ ಶಂಭು ಸ
ರ್ವ್ವಗನಿರ್ದನ್ತೆ ಗತಪ್ರಭಾವ ವಿಭವಂ ಸಂಸಾರದೊಳ್ ಬಿರ್ದ್ದು ದಂ
ದುಗದೊಳ್ ಬಟ್ಟುಕಿ ತಪಕ್ಕೆ ಸಾರ್ದ್ದು ಸುಖಮಂ ಪೊರ್ದ್ದಿರ್ಪ್ಪನುಂ ದೇವನೇ ॥ 229 ॥

ಕಂ ॥ ಹರನನ್ತಿರೀವನೇ ನಿ
ಮ್ಮರುಹಂ ಮುಂ ಕೊಟ್ಟಿಟಾವುದಾವುದು ಮುನ್ನಂ
ಹರನೊಳ್ಪಡೆದರನೇಕ
ರ್ವ್ವರಮಂ ಬಾಣದಿನಿಶಾಳ ಭಕ್ತಗಣಂಗಳುಂ ॥ 230 ॥

ಕಂ ॥ ಎನೆ ಜೈನರೆಂಗು ನೀಂ ಮುಂ
ನಿನ ಹಿತರರ ಹೇಳಲೇಕೆ ನಿಂನಯ ಶಿರಮಂ

ಜನಮಱಿಯಲರಿದುಕೊಟ್ಟಾ
ತನೊಳಿಂ ಪಡೆ ನೀನೆ ಭಕ್ತಸಾತನೆ ದೇವಂ ॥ 231 ॥

ಕಂ ॥ ಎನಲೇಕಾನ್ತದ ರಾಮಂ
ಮನಸಿಜರಿಪುಗಿತ್ತು ತಲೆಯನಾಂ ಪಡೆದಡೆ ನೀ
ವೆನಗೀವ ಪಣಮದೇನೆನೆ
ಮುನಿದೆಂದರ್ಜ್ಜನನ ಕಿತ್ತು ಶಿವನಂ ನಿಲಿಪೆವು ॥ 232 ॥

ಕಂ ॥ ಎನೆ ಕುಡುವುದೋಲೆಯಂ ನೀ
ವೆನಗೆಂದಿತ್ತೋಲೆಗೊಂಡು ಶಿರಮಂ ತಾಂ ಭೋಂ
ಕೆನಲರಿದು ಕುಡುವ ಪದದೊಳ್
ಶಿವನಂ ಸಾಂನಿಧ್ಯಮಾಡಿ ರಾಮಂ ನುಡಿಗುಂ ॥ 233 ॥

ಚಂ ಮಾ ॥ ಉಡುಗದೆ ಶಂಭು ನೀನೆ ಶರಣೆಂನದಡಂ ಮನಮನ್ಯಭಾವದೋ
ಳೊಡರ್ದಡಮೀ ಕೃಪಾಣ ಮುಖದಿಂ ತಲೆಪೋಗದೆ ನಿಲ್ಕದಲ್ಲದಿ
ರ್ದ್ದಡೆ ಶಿವ ನಿಂನ ಮುನ್ನಡಿಗುರುಳ್ಗೆನುತಂ ಕಲಿ ರಾಮನಾರ್ದ್ದು ಕ
ಯ್ಗಿಡದರಿದಿಕ್ಕರಾಯಿಸಿದಂ ಶಿರಮಂ ಶಿವನಂಘ್ರಿಯುಗ್ಮದೊಳ್ ॥ 234 ॥

ಮ ವಿ ॥ ಅರೆಗೈಗೊಂಡನೆ ಕಿತ್ತು ನೋಡಿದನೆ ಕೂರ್ಪ್ಪಂಗಳ್ಕಿ ಮೈಗಾಯ್ದನೇ
ಸೆರಗಂ ಪಾರ್ದ್ದನೆ ಬಾಳ್ಗೆ ಭಕ್ತರೆನುತಂ ಬಲ್ಲಾಳು ರಾಮಂ ಸ್ವಕಂ
ಧರಮಂ ಚಕ್ಕನೆ ಹುಲ್ಲಕಟ್ಟನರಿವಂತಕ್ಲೇಶದಿಂದಾಗಳಂ
ತರಿದೀಶಾಂಘ್ರಿಯೊಳಿಕ್ಕಿ ಶಂಕರಗಣಕ್ಕಾನಂದವಂ ಮಾಡಿದಂ ॥ 235 ॥

ಕಂ ॥ ಅರಿದ ತಲೆ ಏಳುದೆವಸಂ
ಬರೆಗಂ ಮೆಱೆದಿಂ ಬಳಿಕ್ಕವಿತ್ತಂ ಹರನಾ
ದರದಿಂ ತಲೆಕಲೆಯಿಲ್ಲದೆ
ತಿರವಾದುದು ಲೋಕವಱಿಯೆ ರಾಮಂ ಪಡೆದಂ ॥ 236 ॥

ಕಂ ॥ ಬೆಱಗಾಗಿ ಜೈನರೆಲ್ಲಂ
ಮಱುಗಿ ಜಿನಪ್ರಳಯವೆಂಬುದಂ ಮಾಡದಿರೆಂ
ದೆಱಗಿ ಕಾಲ್ವಿಡಿಯೆ ಮಾಣದೆ
ಬಱಸಿಡಿಲಂತೆಱಗಿ ಜಿನನ ತಲೆಯಂ ಮುಱಿದಂ ॥ 237 ॥

ಮ ವಿ ॥ ಬಡಿಗೊಂಡೊರ್ಬ್ಬನೆ ಸೊಕ್ಕಿ ಬಾಳೆವನಮಂ ಕಾಡಾನೆ ಪೊಕ್ಕನ್ತಿರಲ್
ಕಡಗಲ್ ಕಾಪಿನ ವೀರರಂ ತುರುಗಮಂ ಸಾಮಂತರಂ ತೂಳ್ದು ಮಾ
ರ್ಪ್ಪಡೆಗಳ್ ಜೈನರ ಮಾರಿ ಬಂದುದೆನುತುಂ ಬೆಂಗೊಟ್ಟು ಪೋಗಲ್ ಜಿನಂ
ಕೆಡೆವಂನಂ ಬಡಿದಲ್ಲಿ ಕೈಕೊಳಿಸಿದಂ ಶ್ರೀ ವೀರಸೋಮೇಶನಂ ॥ 238 ॥

ಮ ವಿ ॥ ಅದನೆಲ್ಲಂ ನೆಱೆಪೋಗಿ ಬಿಜ್ಜಣ ಮಹೀಪಾಳಂಗೆ ಜೈನರ್ಕ್ಕಳು
ರ್ಕ್ಕವದಿಂ ಪೇಳ್ದು ವಿರೋಧವಾಗೆ ಪಿರಿದುಂ ದೂರುತ್ತಿರಲ್ ಕೋಪದು
ರ್ಮ್ಮದನಾ ಬಿಜ್ಜಣ ಭೂಭುಜಂ ಮುನಿಸಿನಿಂ ರಾಮೈಯನಂ ಕಂಡು ನೀ
ನಿದನನ್ಯಾಯಮನೇಕೆ ಮಾಡಿದೆಯೆನಲ್ಕೋಟ್ವೋಲೆಯಂ ತೋಱಿದಂ
॥ 239 ॥

ಕಂ ॥ ಅವರಿತ್ತಯೋಲೆಯಿದೆ ನೀ
ನವಧರಿಸುವುದಿಕ್ಕು ನಿಂನ ಭಂಡಾರದೊಳಿಂ
ನವರೊಡ್ಡವಿರಲಿ ಯಿನ್ನೊ
ಡ್ಡುವುದಾರ್ಪ್ಪಡೆ ನಿಂನ ಮುನ್ದೆ ಜಿನರಂ ಪಲರಂ ॥ 240 ॥

ವಚನ ॥

ಅನ್ತಪ್ಪಡೀ ತಲೆಯನರಿದವರ ಕೈಯೊಳೊಡ್ಡುವೆನವರದಂ ಸುಟ್ಟಂ ಬಳಿಕವಾಂ ಪಡೆವೆನೆನಗಾನೆಸೆಜ್ಜೆಯ ಬಸದಿಮುಖ್ಯವಾಗಿ ಯೆಂನುಱುವ ಬಸದಿ ಜಿನರಂ ಪಲರನೊಡ್ಡುವುದೆನೆ

ಬಿಜ್ಜಣರಾಯಂ ನಾಮೀ ಕೌತುಕಮಂ ನೋಡುವೆಮೆಂದು ಬಸದಿಗಳ ಪಂಡಿತರುಮಂ ಜೈನರಂ ಕರೆದು ನೀಮಾರ್ಪ್ಪಡೆ ಬಸದಿಗಳಂ ಪಣಂಮಾಡಿ ಓಲೆಯಂ ಕುಡಿಮೆನ್ದದಡೆ

ಅವರಾವೀ ಮುಂನೊಡೆದ ಬಸದಿಯಂ ದೂಱಲ್ ಬನ್ದೆವಲ್ಲದಿನೊಡ್ಡಿ ಜಿನಪ್ರಳಯಂ ಮಾಡಲು ಬಂದವರಲ್ಲವೆನೆ

ಬಿಜ್ಜಣರಾಯಂ ನಕ್ಕು ನೀವಿಂನುಸಿರದೆ ಪೋಗಿ ಸುಖದಿನಿರಿಮೆಂದವರಂ ಕಳಿಪಿ ರಾಮಯ್ಯಂಗಳಿಗೆಲ್ಲರುಮಱಿಯೆ ಜಯಪತ್ರಮಂ ಕೊಟ್ಟಂ

(ಈ ಮುಂದಿನ ಭಾಗ ಕಳಚೂರ್ಯರ ದೊರೆ ಬಿಜ್ಜಳನ ಆಳಿಕೆಯ ಕಾಲದ್ದು.)

ಬಿಜ್ಜಳ

ಮ ವಿ ॥ ಅರಿರಾಯಕ್ಷಿತಿಭೃಂನಗಾರಿಯರಿರಾಯಾಂಭೋಧಿ ಕುಂಭೋದ್ಭವಂ
ಅರಿರಾಯೇಂಧನ ತೀವ್ರವಹ್ನಿ ಅರಿರಾಯಾನಂಗ ಭಾಳೇಕ್ಷಣಂ
ಅರಿರಾಯೋಗ್ರಭುಜಂಗ ಭೂರಿಗರುಡಂ ಶ್ರೀ ಬಿಜ್ಜಣ ವೈರಿರಾ
ಜ್ಯ ರಮಾಕರ್ಷಣದೋಲಿತಾಸಿ ಸುಹೃದಂ ಕೀರ್ತ್ಯಂಗನಾವಲ್ಲಭಂ ॥ 241 ॥

ಉ ಮಾ ॥ ಚೋಳನನಿಕ್ಕಿ ಲಾಳನನಧಕ್ಕರಿಸಿ ಸ್ಥಿತಿಹೀನಮಾಡಿ ನೇ
ಪಾಳನನಂಧ್ರನಂ ತುಳಿದು ಗುರ್ಜರನಂ ಸೆಜೆಯಿಟ್ಟು ಚೇದಿ ಭೂ
ಪಾಳನ ಮೈಮೆಯಂ ಮುಱಿದು ವಂಗನ ಬೀಸಿಸಿ ಕಾದಿಕೊಂದು ಬಂ
ಗಾಳ ಕಳಿಂಗ ಮಾಗಧ ಪಟಸ್ವರ ಮಾಳವ ಭೂಮಿಪಾಳರಂ
ಪಾಳಿಸಿದಂ ಧರಾವಳಯಮಂ ಕಲಿಬಿಜ್ಜಣರಾಯ ಭೂಭುಜಂ
(ಪಂಚಪಾದ ವೃತ್ತ) ॥ 242 ॥

ಕಂ ॥ ಕೊಡದೊಳಗೆ ಪುಟ್ಟಿ ಕಡಲಂ
ಕುಡಿದಂ ಘಟಯೋನಿ ಪುಟ್ಟಿ ಕಳಚೂರ್ಯರೊಳೋ
ಗಡಿಸದೆ ಚಳುಕ್ಯರನ್ವಯ
ಗಡಲಂ ಕುಡಿದುರ್ಕ್ಕಿ ಸಜ್ಜನಂ ಬಿಜ್ಜಣನೊಳ್ ॥ 243 ॥

ವಚನ ॥

ಶ್ರೀಮತು ಬಿಜ್ಜಣದೇವಂ ರಾಮಯ್ಯಂಗಳ್ ಮಾಡಿದ ಪರಮ ಸಾಹಸಕಂ ನಿರತಿಶಯಮಪ್ಪ ಮಾಹೇಶ್ವರ ಭಕ್ತಿಗಂ ಮೆಚ್ಚಿ ವೀರಸೋಮನಾಥ ದೇವರ ದೇಗುಲದ ಮಾಟಕೂಟ ಪ್ರಾಕಾರ ಖಣ್ಡಸ್ಫುಟಿತ ಜೀರ್ಣ್ನೋದ್ಧಾರಕ್ಕಂ ದೇವರಂಗಭೋಗ ನೈವೇದ್ಯಕ್ಕಂ ಬನವಾಸೆ ಪನಿರ್ಚ್ಛಾಸಿರದ ಕಂಪಣಂ ಸತ್ತಳಿಗೆಯೆಪ್ಪತ್ತಱ ಮಂನೆಯ ಚಟ್ಟರಸನುಮಾ ಕಂಪಣದಗ್ರಾಯಿತ ಪ್ರಭು ಗೌಣ್ಡುಗಳಂ ಮುಂದಿಟ್ಟು ಶ್ರೀಮದು ಬಿಜ್ಜಣದೇವಂ ಸತ್ತಳಿಗೆಯೆಪ್ಪತ್ತಱೊಳಗೆ ಮಳುಗುಂದದಿಂ ತೆಂಕಣ ಗೋಗಾವೆಯೆಂಬ ಗ್ರಾಮಮಂ ಪ್ರಸಿದ್ಧ ಸೀಮಾಸಹಿತಂ ತ್ರಿಭೋಗಮಂ ಶ್ರೀಮದೇಕಾನ್ತದ ರಾಮಯ್ಯಂಗಳ ಕಾಲಂಕರ್ಚ್ಚಿ ಧಾರಾಪೂರ್ವ್ವಕಂ ಮಾಡಿಕೊಟ್ಟು ಪ್ರತಿಪಾಳಿಸಿದಂ

(ಈ ಮುಂದಿನ ಭಾಗ ಕಲ್ಯಾಣದ ಚಾಲುಕ್ಯರ ನಾಲ್ಕನೆಯ ಸೋಮೇಶ್ವರನ ಆಳಿಕೆಯ ಕಾಲದ್ದು.)

ಸೋಮೇಶ್ವರ IV

ಉ ಮಾ ॥ ಶ್ರೀ ನುತಕೀರ್ತಿ ವಿಕ್ರಮದೊಳೊಂದಿದ ಸೋಮಕುಲೈಕ ಭೂಷಣಂ
ತಾನೆನಿಪೀ ಚಳುಕ್ಯನೃಪರನ್ವಯದೊಳ್ ವಸುಧಾಧಿನಾಥರಾ
ಖ್ಯಾನ ಪರಾಕ್ರಮರ್ಕಳಿಯೆ ಧಾತ್ರಿ ಪರಾಹೃತೆಯಾಗೆ ತೈಲಪಂ
ತಾನೆ ಚಳುಕ್ಯ ಧಾತ್ರಿ ಕುಲಶೈಲನೆನಲ್ ಮುದದಿಂದೆ ತಾಳ್ದಿದಂ ॥ 244 ॥

ಶಾ ವಿ ॥ ಕೋಡುಳ್ಳುಗ್ರಮದೇಭವೊಂದೆರಡೆನಲ್ಕೆಂಬತ್ತುಮೊಡ್ಡಾಗಿರ
ಲ್ಕೋಡಿಟ್ಟಾನದೆ ತಳ್ತುಕಾದಿ ಗೆಲಿದಂ ಕೋಡಿಲ್ಲದೊಂದಾನೆಯಿಂ

ನಾಡಂ ಬೀಡನಿಭಂಗಳಂ ತುರಗಮಂ ಸೋಮೇಶ್ವರಂ ಬಿಲ್ಲಮಂ
ನೋಡಲ್ಕಾ ಕಳಚೂರ್ಯ್ಯ ವಂಶಮನದಂ ನಿರ್ಮೂಳವಂ ಮಾಡಿದಂ
॥ 245 ॥

ಮ ಸ್ರ ॥ ಧರೆನೀಸಾ ಪತ್ನವಾಗಲ್ ಸಿರಿ ನಿಜವಶದಿಂ ಸಂದುದಾರಕ್ಕೆ ತಾನಾ
ಗರವಾಗಲ್ ಕೀರ್ತ್ತಿ ದಿಕ್ಪಾಳಕನಿಕರ ಮುಖಾದೇಶವಾಗಲ್ ಜಯಾಸೌಂ
ದರಿ ನಿಚ್ಚಂ ತೋಳಬಾಳಂ ಸೆಱೆವಿಡಿದಿರೆ ಸಾಮ್ರಾಜ್ಯಮಂ ತಾಳ್ದಿದಂ ದು
ರ್ದ್ಧರ ಶೌರ್ಯಂ ವೀರಸೋಮೇಶ್ವರನಹಿತವಧೂನೇತ್ರ ನೀರೇಜಸೋಮಂ
॥ 246 ॥

ಕಂ ॥ ಅಂಧತಮವೆನಿಪ ಕಳಚೂ
ರ್ಯಾಂಧಂ ಮಸುಳಲ್ಕೆ ತಂನ ತೇಜದೆ ಧರೆಗನು
ಬಂಧಂ ತಂನೊಳೆ ಸಲೆ ಸ
ಮ್ಮಂಧಿಸೆ ಚಾಳುಕ್ಯರಾಯ ಸೋಮಂ ನೆಗಳ್ದಂ ॥ 247 ॥

(ಈ ಮುಂದಿನ ಭಾಗ ಕದಂಬ ಕಾಮದೇವರಸನ ಆಳಿಕೆಯ ಕಾಲದ್ದು.)

ಏಕಾಂತದ ರಾಮ

ಕಂ ॥ ಶ್ರೀಕಂಠ ಪದಾಂಬುಜಮನ
ನಾಕುಳ ಚಿತ್ತದೊಳೆ ಪೂಜಿಪಂ ಶಿವಸಮಯ
ಪ್ರಾಕಾರನೆನಿಸಿ ಸಲೆ ನೆಗ
ಳ್ದೇಕಾಂತದ ರಾಮನೀಶಭಕ್ತಿಪ್ರೇಮಂ ॥ 248 ॥

ಕದಂಬರ ಕಾಮದೇವ

ಸ್ರಗ್ಧರೆ ॥
ಶ್ರೀಯಂ ದೀರ್ಘಾಯುವಂ ಕೀರ್ತಿಯನನುದಿನವುಂ ಮಾಳ್ಕೆ ಗೀರ್ವಾಣವೃಂದ
ಜ್ಯಾಯಂ ಶ್ರೀ ವೀರಸೋಮಂ ವಿಧೃತ ಹಿಮಕರಂ ಕಾಮದೇವಂಗುದಾರ
ಶ್ರೀ ಯುಕ್ತಂಗದ್ರಿಜಾಸಸ್ಮಿತ ಸಿತ ತರಳಾಲೋಲ ವಿಸ್ತಾರಲೀಲಾ
ನೇ x ಳೋಕೋದ್ಧತ ಶ್ರೀ ಲಲಿತರತಿಕಳಾಲಾಸ್ಯ ಶೈಲೂಷವೇಷಂ ॥ 249 ॥

(ಈ ಮುಂದಿನ ಭಾಗ ಶಾಸನವನ್ನು ಸಂಕಲಿಸಿದ ಸರಣ ಎಂಬುವವನ ರಚನೆ.)

ಕಂ ॥ ಹರನೊಳ್ತವನಿಧಿಯಂ ತಾಂ
ದರವುರವಿಲ್ಲೆನಿಸಿ ಪಡೆದು ದೇಗುಲಮಂ ಪುರ
ಹರನ ಕಯಿಳಾಸದಂತಿರೆ
ವಿರಚಿಸಿದಂ ಶಂಭು ಭಕ್ತಿಧಾಮಂ ರಾಮಂ ॥ 250 ॥

ಉ ಮಾ ॥ ದೇಗುಲಕೆಂದು ಭಕ್ತಜನವಾದರದಿನ್ದಿದಿರೆರ್ದ್ದು ಕೊಟ್ಟಡಂ
ಹಾಗವನಾದಡಂ ಕಳದುಕೊಳ್ಳದೆ ಬೇಡದೆ ನಾಡೆ ದೈನ್ಯದಿಂ
ಪೋಗಿ ನೃಪಾಳರಂ ಶಿವನನುಗ್ರಹವಕ್ಷಯವಾಗೆ ಮಾಡಿದಂ
ದೇಗುಲವಂ ಹರಾದ್ರಿಗೆಣೆಯಾಗಿರೆ ರಾಮನಿದೇಂ ಕೃತಾರ್ತ್ಥನೋ ॥ 251 ॥

ಶಾಸನಕವಿ ಕೇಶವರಾಜ

ಕಂ ॥ ಕೇಶವರಾಜ ಚಮೂಪಂ
ಶಾಸನವಂ ಪೇಳ್ದನಂತದಂ ತಿರ್ದ್ದಿ ನಿರಾ
ಯಾಸನೆ ಬರದಂ ಈಶನ
ದಾಸಂ ಶಿವಚರಣಕಮಳ ಶರಣಂ ಸರಣಂ ॥ 252 ॥

25) ಸಾತೇನಹಳ್ಳಿ, K.I. Vol. IV, p. 7, ಕ್ರಿಶ. 1204

ಇದರಲ್ಲಿ ಹೊಯ್ಸಳರ ದೊರೆಯಾದ ಎರಡನೆಯ ಬಲ್ಲಾಳನು, ಸಾತೇನಹಳ್ಳಿಯ ಊರೊಡತಿ ಸೆಟ್ಟಿಕವ್ವೆ ಕಟ್ಟಿಸಿದ ಹರಿಹರೇಶ್ವರ ದೇವಾಲಯಕ್ಕೆ ದತ್ತಿ ನೀಡಿದುದನ್ನು ಹೇಳಿದೆ.

ಹರಿಹರಸ್ತುತಿ

ಶಾ ವಿ ॥ ಶ್ರೀಯಂ ಶಾಶ್ವತ ಕೀರ್ತ್ತಿಯಂ ವಿಜಯಮಂ ವಿಖ್ಯಾತ ನಾನಾನಯೋ
ಪಾಯ ಪ್ರೌಢಿಯ ಪೆಂಪನೀ ಹರಿಹರೇಶಂ ಕೂರ್ಮ್ಮಿಯಿಂದೀಗೆ ದೀ
ರ್ಘಾಯುರ್ವ್ವಾದಿ ಸಮನ್ವಿತಂ ಸಕಳ ಲೋಕಸ್ತುತ್ಯನ್ನಿತ್ಯಾತ್ಮಕಂ
ಜ್ಯಾಯಂ ವೆಣ್ಣಲ ಸೆಟ್ಟಿಕವ್ವಗಸವೀಬೊಂಮಂಗೆ ಸಂಪ್ರೇಮದಿಂ ॥ 253 ॥

ವೆಣ್ಣಲ ಸೆಟ್ಟಿಕವ್ವೆ

ಚಂ ಮಾ ॥ ತ್ರಿಭುವನಮಲ್ಲನಂ ಪೃಥಿವಿ ಶೆಟ್ಟಿಯುವೆಂದೆನಿಸಿರ್ಪ ನಾಮದೊಳ್
ವಿಭವನ ಕಾಮಿಸೆಟ್ಟಿಯ ಕುಲಾಂಗನೆ ವೆಣ್ಣಲಸೆಟ್ಟಿಕವ್ವೆಗೀ
ಗಭವನಶೇಷದೇವ ಮುನಿ ಕಿಂನರ ಪಂನಗ ಯಕ್ಷರಾಕ್ಷಸ
ಪ್ರಭುಕುಳವಂದಿತಂ ಹರಿಹರೇಶ್ವರನೊಲ್ದು ಮನೋನುರಾಗಮಂ ॥ 254 ॥

ಹರಿಹರೇಶ್ವರ ದೇವಾಲಯ

ಮ ಸ್ರ ॥ ಧರಣೀಂದ್ರಂ ಕಂಬವಂತಾ ಕಮಠನ ತಜಿಕಲ್ ದಿಗ್ಗಜಂ ಚಿತ್ರವಾಸೇ
ಶ್ವರವರ್ಗ್ಗಂ ಸುತ್ತಲುಂ ಪುತ್ರಳಿಗಳೆಸೆವ ಪಾತಾಟವೇಳುಂ ತಳಂ ಸ
ದ್ಗಿರಿವರ್ಗ್ಗಂ ಕೂಟವರ್ಗ್ಗಂ ಕನಕಗಿರಿಯೆ ದೇವಾಲಯಂ ಕಲ್ಪವೃಕ್ಷೋ
ತ್ಕರವೆಲ್ಲಂ ಪೂಮರಂ ತೀರ್ಥಮವುದಧಿಗಳಿಂತೊಪ್ಪಿತೀ ಮಧ್ಯಲೋಕಂ
॥ 255 ॥

ಮಧ್ಯಲೋಕ

ಮ ಸ್ರ ॥ ಇಳೆಯಿಂತೀರೇಳು ಲೋಕಂಗಳೊಳಪತಿಶಯಂ ಚೆಲ್ವಿನಿಂ ನೋಳ್ಪಡೇಳುಂ
ತಳವೇಳುಂ ದ್ವೀಪವೇಳುಂ ಕಡಲ ಬಳಗವೇಳುಂ ಕುಳಾದ್ರೀಂದ್ರದಿಂದಂ
ಬಳಸಿರ್ದಾ ಮೇರುವೇಳುಂ ಗ್ರಹದ ಚಿಳಕವೇಳುಂ ಯತಿಖ್ಯಾತಿಯೇಳುಂ
ಪೊಳೆವುದ್ಯದ್ಗ್ರಾಮ ರಾಗಂಗಳ ಬಱಿಗಮವೇಳುಂ ಸ್ವರಂ ತಂನೊಳೊಪ್ಪಲ್ ॥ 256 ॥

ಸಮುದ್ರ

ಕಂ ॥ ಆ ನೆಗಳೆ ಹರಿಯ ಸುತಸಂ
ತಾನ ಮನೋರಥದೆ ಪುಟ್ಟಿದ ಮರ್ದ್ದಿನ ಬಲನಿ
ರ್ಮ್ಮಾನಸರ ನೆಱವಿನಿಂದಂ
ಭೋನಿಧಿ ಬಳಸಿತ್ತು ಕಾಪಿನಂದಂದಿನೆಳೆಯಂ ॥ 257 ॥

ಮ ವಿ ॥ ಶರಣಾಯಾತ ಕುಭೃಂನಿಕಾಯವೊಳಗಿಕ್ಕುಂ ತಂನ ಹೃದ್ದೇಶದೊಳ್
ಹರಿಯಿರ್ಕ್ಕುಂ ಸಿರಿಗೆಯ್ದೆ ತಾಯೆನಿಕ್ಕುಂ ದಿಬ್ಯರತ್ನಂಗಳುಯ್ಮೆನೆ
ಬ್ಬರದಿಂದಿರ್ಕ್ಕುವುದಗ್ರ ಕಳ್ಪಕುಜವಿರ್ಕ್ಕುಂ ಭೂಮಿತನ್ಮೊಳ್ ನಿರಂ
ತರವಿರ್ಕ್ಕುಂ ಪೊಗಳ್ವಂಗಳುಂಬವೆನಿಸಿರ್ದ್ದಂಬೋಧಿ ಸಾಮಾನ್ಯನೇ ॥ 258 ॥

ಜಂಬೂದ್ವೀಪ

ಕಂ ॥ ಅಂಬುಧಿ ನೀರ್ವ್ವೇಲಿಯೆನಲ್
ಜಂಬೂದ್ವೀಪವನವೊಪ್ಪುಗುಂ ಪುಣ್ಯಫಳಂ
ಜಾಂಬೂನದಾದ್ರಿ ದೇವಕು
ಟುಂಬಂ ಸೇವಿಪುದು ಕಾಪಿನವರಿನ ಮುಖ್ಯರುಂ ॥ 259 ॥

ಭರತ ಭೂಮಿ

ಚಂ ಮಾ ॥ ಸುರಗಿರಿಯಿಂದೆ ತೆಂಕಣದಿಳಾವೃತವಂತದಱಿಂದೆ ತೆಂಕ ಕಂ
ಪುರುಷವದರ್ಕ್ಕೆ ತೆಂಕ ಹರಿವರ್ಷವದರ್ಕ್ಕೆ ಹಿಮಾದ್ರಿ ತೆಂಕಲಾ
ಗಿರಿಪರಿಯಿಂದೆ ತೆಂಕಣದು ಭಾರತವರ್ಷದ x ಲ್ಲಿ ಧಂರ್ಮ್ಮದಿಂ
ಸಿರಿಯಿನುದಾರದಿಂ ಬಿನದದಿಂ ಭರತಾವನಿವೊಪ್ಪಿ ತೋಱುಗುಂ ॥ 260 ॥

ಕಂ ॥ ಭರತಕ್ಷೇತ್ರಂ ಮೆಱೆಗುಂ
ಭರತಾಗಮ ಗೀತ ವಾದ್ಯ ನೃತ್ಯದ ಸುಖಲೋ
ಭರತರ ಧಂರ್ಮ್ಮೋಚಿತ ಲಾ
ಭರತರ ಹೆಸರಿಂದೆ ಕೂಡೆ ಜಸವೆಸೆವಿನೆಗಂ ॥ 261 ॥

ಬಲ್ಲಾಳ II

ಕಂ ॥ ತದಧಿಪತಿ ವೀರ ಬಲ್ಲಾ
ಳದೇವನುರ್ವ್ವೀನುತಂ ವಿರಾಜಿಪನೇನಂ
ಬುದೊ ಪೆಂಪಂ ಮೂಜಗಕಂ
ಸದನಂ ನಿಜಕೀರ್ತ್ತಿ ರಶ್ಮಿಯನೆ ಪಸರಿಸಿದಂ ॥ **262** ॥

ವಿಷ್ಣುವರ್ಧನ

ಚಂ ಮಾ ॥ ನಿರುಪಮಮಪ್ಪ ಹೊಯ್ಸಣ ನೃಪಾನ್ವಯವಾರಿಜ ತಿಗ್ಮರೋಚಿ ದು
ರ್ಧರರಿಪುಭೂಪಸಿಂಹ ರಣಕಾರಣಕಾಳಕೃತಾಂತನದ್ರಿಜಾ
ವರಪದಪದ್ಮಭೃಂಗನೆನುತಂ ಮಲೆರಾಜ ಮಹೇಶನಂ ವಸುಂ
ಧರೆ ಪೊಗಳಲ್ಕೆ ಪೆರ್ಮ್ಮೆವಡೆದಂ ಯದುವಂಶದ ವಿಷ್ಣುಭೂಭುಜಂ॥ **263** ॥

ನರಸಿಂಹ I

ಚಂ ಮಾ ॥ ಧುರದೊಳಿದಿರ್ಚ್ಚಿ ಮಾರ್ಮಲೆವರಿಲ್ಲೆನೆ ಕೊಂದುಕಡಂಗುವಂನೃಭೂ
ಪರನಿರದೊಕ್ಕಲಿಕ್ಕಿ ನೆಜೆ ಬೇಡುವರಿಲ್ಲೆನಲೆಯ್ದೆ ಕೊಟ್ಟು ಬೇ
ಳ್ವರಹಸವೋಡಿ ತುಷ್ಟಿವಡೆ ಕೀರ್ತ್ತಿಯನೆಣ್ದೆಸೆಗಂ ನಿಮಿರ್ಚ್ಚಿದಂ
ನಿರುಪಮ ವಿಷ್ಣುವರ್ಧನ ಸುತಂ ನರಸಿಂಹ ನೃಪಾಳನುರ್ಬ್ಬಿಯೊಳ್ ॥ **264** ॥

ಬಲ್ಲಾಳ II

ಚಂ ಮಾ ॥ ಅನತಾರಾತಿ ನೃಪಾಳಜಾಳ ವನದಾವೋಗ್ರಾಗ್ನಿ ವಾರಾಂಗನಾ
ಜನಸಂಮ್ಮೋಹನ ಪುಷ್ಪಚಾಪನತುಳೋದ್ಯದ್ ಗಂಡಭೇರುಂಡನೆಂ
ದೆನಸುಂ ಬಣ್ಣಿಸೆ ನಾರಸಿಂಹ ಧರಣೀನಾಥಾತ್ಮಜಂ ವಿಶ್ವಮೇ
ದಿನಿಯೊಳ್ ಭೂಪ ದಿಳೀಪನೆಂದೆನಿಪ x ಬಲ್ಲಾಳ ಭೂಪಾಳಕಂ ॥ **265** ॥

ಉ ಮಾ ॥ ಚೋಳನ ನೆತ್ತಿಯೊಳ್ಮುಳಿದ ಕೂರಸಿಯಾಯಗವಾಂಕೆಯಾಗೆ ಪಾಂ
ಚಾಳನ ಬಾಯನೆಯ್ದೆ ನೆಜೆನಟ್ಟಲುಗುರ್ಬಿಗಗುರ್ಬ್ಬುವೆತ್ತ ನೇ
ಪಾಳನ ಬೆಂನೊಳಯ್ದೆ ಬಳೆದಿರ್ದ್ದ ಮಹಾಸಬಳಂ ದಿಟಕ್ಕೆ ಬ
ಲ್ಲಾಳನ ಬೀರಮಂ ತ್ರಿಗುಣಿಸುತ್ತವೆವೇಳವೆ ಭೂತಳಾಗ್ರದೊಳ್ ॥ **266** ॥

ಮ ವಿ ॥ ಮರು ಪಾಂಚಾಳ ಕಳಿಂಗ ವಂಗ ತುಳು ನೇಪಾಳಾಂಗ ಸೌವೀರ ಬ
ರ್ಬ್ಬರ ಕಾಶ್ಮೀರ ತುರಃಕ ಕೊಂಗ ಖಸ ಶಾಳುಂಗಾಂಧ್ರ ಹಮ್ಮೀರಗು

ಜ್ಜರ ಚಕ್ರಾಧಿಪರಳ್ಕಿ ಬಳ್ಕಿ ಬೆಸನಂ ಪಾರ್ದ್ದಿರ್ಪ್ಪರೆಂದೆಂತು ದು
ರ್ಧ್ದರ ಶೌರ್ಯ್ಯಾಧಿಕನೋ ನೃಪಾಳ ಕುಳದೊಳ್ ಬಲ್ಲಾಳ ಭೂಪಾಳಕಂ
॥ 267 ॥

ಮಲ್ಲಿದೇವ

ಮ ವಿ ॥ ಜನತಾನಂದಮನೆಯ್ದೆ ತಾಳ್ದಜಿಲ್ನಾಡೊಳ್ ತಾನೆ ನಾಗಾವಿಯೆಂ
ದೆನೆ ಸಂಶೋಭಿಪುದಗ್ರಹಾರವದಜೊಳ್ಪುಟ್ಟಿರ್ದ್ದ ಸದ್ವಂಶದಿಂ
ವಿನಯಾಂಬೋನಿಧಿ ಮಲ್ಲಿದೇವನನಘಂ ತತ್ಕಾಂತೆ ಮಲ್ಲವ್ವೆಯೆಂ
ದೆನಿಪಾ ದಂಪತಿಗಳ್ಗೆ ಪುಟ್ಟಿ ಮುದಮಂ ಸದ್ಭಾಸ್ಕರಂ ಮಾಡಿದನ್ ॥ 268 ॥

ಚಂ ಮಾ ॥ ಮನುಮುನಿಮಾರ್ಗನೆಂದು ಹರಿಪಾದ ಪಯೋರುಹಭೃಂಗನೆಂದು ಮಾಂ
ತನನಿಧಿಯೆಂದು ವಂದ್ಯಜನಕಳ್ಪ ಮಹೀರುಹನೆಂದು ವಿಶ್ವಮೇ
ದಿನಿ ಪರಿಕೀರ್ತಿಕುಂ ಲಲಿತ ಭಾಗ್ಯವತೀ ಸುತನಂ ಸುಭಾಸ್ಕರಾಂ
ಕನ ತನುಜಾತ ಕಂಮಟನ ಮಲ್ಲನನರ್ತ್ಥಿಗೆ ಕೊಟ್ಟು ಬಲ್ಲನನ್ ॥ 269 ॥

ನಾಗರಖಂಡ

ಮ ವಿ ॥ ಭರತಕ್ಷೇತ್ರದ ಕುಂತಳೋರ್ವ್ವಿಯೊಳಣಂ ಸಂಶೋಭೆವೆತ್ತಿರ್ದ್ದ ನಾ
ಗರಖಂಡಂ ಬನವಾಸೆ ದೇಶದೊಳ್ಲಕ್ಷ್ಮಿಗೇಹವೆಂಬಂದದಿಂ
ಸಿರಿಯಿಂ ಧರ್ಮ್ಮದಿನತ್ಯುದಾರದಿನನಿಂದಾಚಾರದಿಂ ಸತ್ಯದಿಂ
ಪರಮಾನಂದದ ಗೊಟ್ಟಿಯಿಂ ಸೊಗಯಿಕುಂ ಬಲ್ಲರ್ಕ್ಕರಂ ಬಣ್ಣಿಸಲ್
॥ 270 ॥

ಬೊಮ್ಮ

ಉ ಮಾ ॥ ನಾಗರಖಂಡ ಸಪ್ತತಿಗಧೀಶ್ವರನೊಪ್ಪುವ ಬೊಂಮ ಭೂಭುಜಂ
ಸಾಗರ ಸಾಂಮ್ಯ ಸಂನುತ ಗಂಭೀರನಶೇಷ ಕಳಾ ಸಮಂನ್ವಿತಂ
ಚಾಗ ಸಹಸ್ರ ಬಾಹು ಪರಿರಕ್ಷಿಸುವಂ ನಿಜದೇಶವಲ್ಲಭಂ
ರಾಗದೊಳಂ ಯಥಾಕ್ರಮದಿನೆಂದು ಜನಂ ಹೊಗಳಲ್ ನಿರಂತರಂ ॥ 271 ॥

ಸೋಯಿದೇವ

ಮ ವಿ ॥ ಶರಣೆಂದೆಂದುದನೆಂದು ಬಂದು ಮಜೆಯಂ ಪೊಕ್ಕಿರ್ದ್ದವಂ ಬರ್ದ್ದನು
ದ್ಧರದೋರ್ಗ್ಗರ್ವ್ವದಿನಾ ಚತುರ್ವ್ವಳದ ಕೊರ್ಬ್ಬಿಂ ಮಾಜಿ ಮಾಜಾಂತು ಸಂ
ಗರದೊಳ್ನಿಂದರಿಭೂಪ ಸಂತತಿಯನಂತಾ ಸೋಯಿದೇವ ಕ್ಷಿತೀ
ಶ್ವರನುಗ್ರಾಸಿವುದಗ್ರ ರಾಕ್ಷಸ ಮುಖಾನೀಕಂಗಳೊಳ್ ತೂಂತುಗುಂ ॥ 272 ॥

ಬೊಪ್ಪದೇವ

ಮ ವಿ ॥ ಲಲನಾರತ್ನವೆನಿಪ್ಪ ಚೆಲ್ವಿನೊದವಂ ತಾಳ್ದೊಪ್ಪದಿಂದಿಪ್ಪ ಲ
ಚ್ಚಲೆ ಮಾದೇವಿಗೆ ಸೋಯಿದೇವ ಧರಣೀದಾಳಂಗೆ ಸಂಪ್ರೀತಿ ಪು
ಟ್ಟಲಣಂ ತಾಂ ನಿಗಳಂಕ ಮಲ್ಲನೆನಿಸಿರ್ದ್ದಾ ಬೊಪ್ಪದೇವಂ ಜಗ
ತ್ತಿಳಕಂ ಪುಟ್ಟಿದನಾದಿರಾಜ ಚರಿತಂ ಭೂಪಾಳ ವಿದ್ಯಾಧರಂ ॥ 273 ॥

ಚಂ ಮಾ ॥ ಹುಸಿವರ ಸೂಲನೆಂಬ ಜಸದಿಂದೆಸೆದಂ ನಿಗಳಂಕಮಲ್ಲನೀ
ವಸುಮತಿಯೆಲ್ಲಮಂ ನೆಱೆಯಥಾಕ್ರಮದಿಂದವೆ ಪಾಳಿಪುದ್ಧಸಾ
ಹಸಿಯಭಿಮಾನ ಮೇರುವರಿಗಂಡರ ದಾವಣಿಯೆಂದು ಬಣ್ಣಿಸಲ್
ವಸುಧೆಯನೂನನಿಧಿ ಬೊಪ್ಪ ನೃಪಾಳಕನೀ ಧರಿತ್ರಿಯೊಳ್ ॥ 274 ॥

ಮಾಳಲದೇವಿ

ಮ ವಿ ॥
ಧರಣೀಶಾಗ್ರಣಿ ಬೊಪ್ಪದೇವನ ಮುಖಾಂಭೋಜಾತದೊಳ್ ವಾಣಿ ದು
ರ್ದ್ಧರ ದೋರ್ದ್ದಂಡದೊಳೆಯ್ದೆ ಬೀರಸಿರಿ ವಕ್ಷೋರಂಗದೊಳ್ ಕೂರ್ಮೆಯಿಂ
ಸಿರಿಯಿಪ್ಪಂತಿರಲಿಪ್ಪಳೆಂದು ಪೊಗಳ್ಗುಂ ಭೂಮಂಡಳಂ ಸಂತತಂ
ಪಿರಿದುಂ ಮಾಳಲದೇವಿಯಂ ಬಹುಕಳಾ ಸಂಪನ್ನೆಯಂ ಚೆನ್ನೆಯನ್ ॥ 275 ॥

ಬೊಮ್ಮ ಭೂಪ

ಉ ಮಾ ॥ ಮಾಳಲದೇವಿಗಂ ನೃಪಶಿಖಾಮಣಿ ಬೊಪ್ಪನೃಪಂಗೆ ಪುಟ್ಟಿದಂ
ಲೀಲೆಯಿನೊಳ್ದಜಂ ನೃಪತಿವೇಶದೊಳೊಪ್ಪಿಸೆ ಪುಟ್ಟಿ ಧಾತ್ರಿಯಂ
ಪಾಳಿಸುವಂದದಿಂದೆ ನಯಶಾಸ್ತ್ರ ವಿಶಾರದನಾಗಿ ಬಂಮ ಭೂ
ಪಾಳನ ಶೇಷ ಸದ್ಗುಣ ಗಣಾಂನ್ವಿತ ಸಜ್ಜನ ಸಂಸ್ತುತಕ್ರಮನ್ ॥ 276 ॥

ಮ ವಿ ॥ ಧುರದೊಳ್ ಬಂಮ ನೃಪಾಳಕಂ ಮುಳಿಸಿನಿಂ ಖಳ್ಗಕ್ಕೆ ಕೈ ನೀಡೆ ನಿ
ರ್ಭರದಿಂ ಶಾತ್ರವ ಮಂಡಳೇಶ ನಿವಹಕ್ಕಾಭೀಳ ಕಾಳಾಲಯಂ
ಶರಣಾಶಾಂಬರವಂಬರಂ ಜಳಧಿ ಲಿಂಗಾಲಿಂಗನಂ ಸದ್ಗುಹಾಂ
ತರವಾಸಂ ಜಡೆದಂಡು ಮಂಡಿತಶಿರಂ ಕಾಶಾಂಬರಂ ಖರ್ಪ್ಪರಂ ॥ 277 ॥

ಚಂ ಮಾ ॥ ಹುಸಿವರ ಸೂಲನೆಂದೆನಿಸಿದಂ ಸ್ಥಿರ ಸತ್ಯಪತಾಕನಾಗಿ ಶೋ
ಭಿಸುವನುದಗ್ರ ವೀರದೊಳೆ ಗಂಡರ ದಾವಣಿಯಾಗಿ ವೈರಿಗು

ಬ್ಬಸವನೆ ಮಾಡಿ ಕೂಡೆ ಮುಱಿದುದ್ಧತರಂ ನಿಗಳಂಕಮಲ್ಲನೆಂ
ಬೆಸಕಮನಾಳ್ದನುರ್ವ್ವಿಯೊಳೆ ಮಂಡಳಿಕಾಗ್ರಣಿ ಬೊಮ್ಮ ಭೂಭುಜನ್
॥ 278 ॥

ಸಾತೆಯನಹಳ್ಳಿ

ಕಂ ॥ ಆ ನಾಗರಖಂಡದೊಳಂ
ತಾನದು ಸಾತೆಯನ ಹಳ್ಳಿಮೊಪ್ಪುತ್ತಿರ್ಕ್ಕುಂ
ಭೂನುತ ಬಣಂಜುವಟ್ಟಣ
ವಾನೇನಂ ಪೊಗಳ್ವೆನದಱ ಮಹಿಮೋನ್ನತಿಯನ್ ॥ 279 ॥

ಚಂ ಮಾ ॥ ಬಳದೊಳಗಿರ್ದ್ದ ಶಾಳಿವನದಿಂ ಕರಮೊಪ್ಪುವ ಹೂಗೊಳಂಗಳಿಂ
ದಳವಡೆ ಕಂಪನೆಣ್ದೆಸೆಗೆ ಬೀಱುವ ಬಂಧುರ ಪುಷ್ಪವಾಟಿಯಿಂ
ದಳಿಗಿಳಿ ಕೋಕಿಳ ಸ್ವನದಿನೊಪ್ಪುವ ನಂದನದಿಂ ವಿಳಾಸವಂ
ತಳೆದುದು ನೋಡೆ ಸಾತೆಯನಹಳ್ಳಿ ಬಣಂಜಿಗವಟ್ಟಣೋತ್ತಮಂ ॥ 280 ॥

ಬೊಮ್ಮ

ಕಂ ॥ ಎನಿಪಾ ಗ್ರಾಮಕ್ಕಧಿಪಂ
ಮನಸಿಜ ಸಮ ಮೂರ್ತ್ತಿ ಶಂಖರಾಂಕನ ತನೆಯಂ
ವಿನಯ ನಿಧಿ ಸೆಟ್ಟಿಕವ್ವೆಗ
ಮನುಪಮನೆನಿಸಿರ್ದ್ದ ಮೊಮ್ಮನಿಂತೀ ಬಮ್ಮನ್ ॥ 281 ॥

ಕಾಮಿಸೆಟ್ಟಿ

ಚಂ ಮಾ ॥ ವನಧಿಪರೀತ ಧಾತ್ರಿ ನೆಱೆ ಬಣ್ಣಿಸುಗುಂ ಭುವನತ್ರಯಕ್ಕೆ ಮ
ಲ್ಲನೆನೆಸೆದೊಪ್ಪುವೀ ಪೃಥಿವಿಸೆಟ್ಟಿಯ ನಂದನನಂ ಸಮಸ್ತ ಸ
ಜ್ಜನನುತೆ ಕಾಮಿಯಕ್ಕನ ತನೂಭವನಂ ಗುಣರತ್ನ ರಾಸಿಯಂ
ಮನಸಿಜ ರೂಪನಂ ನಯದ ಘಟ್ಟಿಯನಗ್ಗದ ಕಾಮಿಸೆಟ್ಟಿಯನ್ ॥ 282 ॥

ಚಂ ಮಾ ॥ ಬಳವದರಾತಿ ಮತ್ತಗಜಕೇಸರಿ ಡಾಯಿಗ ಬೇಂಟೆಕಾಱನ
ಗ್ಗಳಿಕೆಯ ವೀರ ವೈರಿಕುಳವಂ ರಣರಂಗದೊಳಿಕ್ಕಿ ಮೆಟ್ಟಿ ತೊ
ತ್ತಳದುಳಿವಂ ಜಗಕ್ಕಧಟನಂಜಿ ಶರಣ್ಗೆವರಲ್ಕೆ ವಾರ್ಧಿಯೆಂ
ದಿಳೆ ಪೊಗಳ್ಗುಂ ದಿಟಂ ಪೃಥಿವಿಸೆಟ್ಟಿಯನಗ್ಗದ ಕಾಮಿಸೆಟ್ಟಿಯಂ ॥ 283 ॥

ಚಂ ಮಾ ॥ ಶರಧಿಯನೇಳಿಕುಂ ವರಗಭೀರಗುಣಂ ಘನಧೈರ್ಯದೇಳ್ಗೆವೊಂ
ಕರಿಪುದು ಮೇರುವಂ ಪ್ರಬಳ ದೋರ್ವಳ ದುರ್ವ್ವಿನ ಪರ್ವ್ವತಾಂತಿರ
ಸ್ಕರಿಪುದು ಕೌರವಾರಿಯೆನುತ್ತವೆ ಬಣ್ಣಿಸುತ್ತಲಿರ್ಪ್ಪುದೀ ವಸುಂ
ಧರೆ ಪರಿದರ್ಕಱಿಂ ಪೃಥಿವಿಸೆಟ್ಟಿಯನಗ್ಗದ ಕಾಮಿಸೆಟ್ಟಿಯನ್ ॥ 284 ॥

ಚಂ ಮಾ ॥ ಎರೆದ ಬುಧಾಳಿಗಾನ್ತರಿಪು ಸನ್ತತಿಗನ್ಯಭಯಸ್ಥ ಚಿತ್ತಕಾಂ
ತರ ಶರಣಾಗತ ಪ್ರತತಿಗಾ ಹರಿನಂದನನಿಂದ್ರನಂದನಂ
ಶರನಿಧಿಯೆಂದು ಬಣ್ಣಿಪುದು ಸಜ್ಜನಸಂತತಿ ರಾಗದಿಂ ಮನೋ
ಹರಗುಣರಾಸಿಯಂ ಪೃಥಿವಿಸೆಟ್ಟಿಯನಗ್ಗದ ಕಾಮಿಸೆಟ್ಟಿಯನ್ ॥ 285 ॥

ಚಂ ಮಾ ॥ ಸುರುಚಿರ ಕೀರ್ತಿಕಾನ್ತನನಘಂ ಸಕಳೋತ್ತಮಧರ್ಮರಕ್ಷಕಂ
ಪರಸಮಯಾಂಧಕಾರತಪನಂ ರಿಪುಯೂಥಮದದ್ವಿಪೌಘ ಕೇ
ಸರಿ ವರ ವಂದಿ ಬೃಂದ ಜನ ಕಳ್ಪಮಹೀಜನೆನುತ್ತೆ ಸದ್ಬುಧೋ
ತ್ಕರವಭಿವರ್ಣ್ಣಿಕುಂ ಪೃಥಿವಿಸೆಟ್ಟಿಯನಗ್ಗದ ಕಾಮಿಸೆಟ್ಟಿಯನ್ ॥ 286 ॥

ವೆಣ್ನಲ ಸೆಟ್ಟಿಕವ್ವೆ

ಚಂ ಮಾ ॥ ಖಳರಳವಂ ಕಳಲ್ಚಿ ನೆಱೆ ಕಳ್ಳರ ಕೊಳ್ಳಿಯ ಬಾಧೆಯಂ ಬೆಗ
ಳ್ದಳಱೆ ತೆರಳ್ಚಿ ತೂಳ್ದಿ ನೆರೆ ಮನ್ನೆಯರನ್ನೆಯವಂ ನಿರಾಕುಳಂ
ಕಳೆದು ಬಣಂಜುಧರ್ಮ್ಮಮನೆ ಪಾಳಿಸಿ ಭೀತರನೆಯ್ದೆ ಕಾದು ನಿ
ರ್ಮ್ಮಳತರಕೀರ್ತ್ತಿಯಂ ಪಡೆದಳಾರ್ಪ್ಪಡಿ ವೆಣ್ನಲ ಸೆಟ್ಟಿಕವ್ವೆಯೊಳ್ ॥ 287 ॥

ಚಂ ಮಾ ॥ ಧರೆಗೆಸೆವೀ ಬಣಂಜುಸಮಯ ಪ್ರತಿಪಾಳನವರ್ತ್ತಿಯಿಂದೆ ದು
ರ್ದ್ಧರತರಮಪ್ಪ ಚಂಡಿಕೆಯೆ ವೆಣ್ನಲೆನಾರಿಯೆನಿಪ್ಪ ನಾಮಮಂ
ಧರಿಯಿಸಿ ಕೋಣವತ್ತಿಗಧಿಪೋತ್ತಮೆಯಾಗಿಯೆ ಪುಟ್ಟಿ ವೈರಿಸಂ
ಹರಣಮನೆಯ್ದೆ ಮಾಡಿದಳೆನುತ್ತಮೆ ಬಣ್ಣಿಸುಗುಂ ಜಗಜ್ಜನಂ ॥ 288 ॥

ಚಂ ಮಾ ॥ ಖಳರನೆ ಕೊಂದು ಮೀಱುವರ ಬಲ್ಗಜುಳಂ ಪಿಡಿದುರ್ಚ್ಚಿ ಕೀಱಿ ಮಾ
ಱ್ಮಲೆವರ ಮೂಳೆಯಂ ಮುಱಿದು ಮೆಚ್ಚದರಂ ಕಡಿದಿಕ್ಕಿ ಕೋಪದಿಂ
ಹಳಿವರನಾವಗಂ ತಱಿದು ದುಷ್ಟರ ನಿಟ್ಟೆಲುವಂ ನಿಮಿರ್ಚ್ಚಿದ
ಳ್ಚಳಯುತೆ ದುರ್ಗ್ಗಿಯೊಲ್ ಪ್ರಿಥುವಿಸೆಟ್ಟಿಯೆ ವೆಣ್ನಲನಾರಿ ನಾಮದಿಂ
॥ 289 ॥

ಚಂ ಮಾ ॥ ಮಡದಿಯರಾವಗಂ ಕೆರಸಿ ಕಾವಲಿ ತಂಬುಗೆ ಹುಟ್ಟು ಸಟ್ಟುಗಂ
ಕೊಡನೊರಲಕ್ಕಿಯೆಂಜಿವನೆ ಚಿಂತಿಸಿ ಕೋಟಲೆಗೊಂಬರಲ್ಲದೇಂ

ಮೃಡನನೆ ಸುಪ್ರತಿಷ್ಠೆಯನೆ ಮಾಡಿಸಿ ಕಲ್ವೆಸದಿಂದೆ ಗೇಹಮಂ
ಪೊಡವಿಯೊಳೊಪ್ಪೆ ಮಾಡಿಪರೆ ಸನ್ನುತೆ ವೆಣ್ಣಲೆ ಸೆಟ್ಟಿಕವ್ವೆವೊಲ್ ॥ **290** ॥

ಹರಿಪ

ಚಂ ಮಾ ॥ ಅಭಯವನಳ್ಕಿ ಬಳ್ಕಿ ಶರಣೆಂದವರ್ಗಂತಕಗೇಹಮಂ ತೊಡ
ರ್ದಭಿಮುಖರಾಗಿ ತಾಗಿದ ವಿರೋಧಿಗೆ ಬಂದೊಲವಿಂದೆ ಬೇಡಿದ
ರ್ಗಭಿಮತಮಂ ಮನೋಮುದದಿನಿತ್ತು ಜಸಕ್ಕಧಿನಾಥನಾದನೀ
ತ್ರಿಭುವನಮಲ್ಲನೀ ಪ್ರಿಥಿವಿಸೆಟ್ಟಿಯಿವಂ ಹರಿಪಂ ಧರಿತ್ರಿಯೊಳ್ ॥ **291** ॥

ಚಂ ಮಾ ॥ ಇಭಘಟೆಯಂ ಪಡಲ್ವಡಿಸಿ ಘೋಟಕ ಸಂಕುಳವಂ ಮರಳ್ಚಿ ಪೂ
ಣ್ದಭಿಮುಖರಾದ ವೀರಭಟರಂ ನೆಱೆಸುಂಟಗೆಗೊಂಡು ವೈರಿಭೂ
ಪ್ರಭುಗಳ ಮಸ್ತಕಾವಳಿಗಳಂ ಮುಳಿಸಿಂ ಪೊಡೆಸೆಂಡುವೊಯ್ದನೀ
ತ್ರಿಭುವನಮಲ್ಲನೀ ಪ್ರಿಥಿವಿಸೆಟ್ಟಿಯವಂ ಹರಿಪಂ ರಣೋರ್ವಿಯೊಳ್ ॥ **292** ॥

ಮ ವಿ ॥ ವುಡಿವಂ ಚಕ್ರವನಳ್ಕಿಪಂ ಜವನನಾ ದಿಗ್ದಂತಿಯಂ ಕೂಡೆ ಕೀ
ಳಿಡಿಪಂ ಮಿತ್ತುವನೊತ್ತುವಂ ಮುರಿವನಾ ಹೆಮ್ಮಾರಿಯಂ ಕಾಯ್ಪಿನಿಂ
ಸಿಡಿಲಂ ಮಾರ್ಪೊಡೆವಂ ಕೆಳರ್ದುರಗನಂ ಮಾರಿಕ್ಕುವಂ ಸಿಂಗವಂ
ಕಡಿವಂ ಭಾವಿಸೆ ಪ್ರಿಥ್ವಿಸೆಟ್ಟಿ ಹರಿಪಂ ವೆಣ್ಣಾಂಬಿಕಾನಂದನಂ ॥ **293** ॥

ಚಂ ಮಾ ॥ ಶರಧಿ ಸಮಾನ ವೀಕ್ಷಿಸೆ ಗಂಭೀರದೊಳೊಪ್ಪುವ ಕೂಟಿನೇಳ್ಗೆಯೊಳ್
ದೊರೆ ಮಕರಧ್ವಜಂ ಪ್ರಬಳದೋರ್ವ್ವಳದೊಳ್ ಪಡಿವಾಯುನಂದನಂ
ಸ್ಥಿರತೆಯೊಳಿಂದ್ರಭೂಧರನು ಪಾಸಟಿಯೆಂದಭಿವರ್ಣ್ಣಿಕುಂ ವಸುಂ
ಧರೆಯನುರಾಗದಿಂ ಪೃಥಿವೀಸೆಟ್ಟಿಯೊಳೀ ಹರಿದೇವಸೆಟ್ಟಿಯಂ ॥ **294** ॥

ಚಂ ಮಾ ॥ ಶರಣೆನುತಂಬೆ ಬಂದು ಮಱೆವೊಕ್ಕೊಡೆ ಕಾವೆಡೆಯಲ್ಲಿ ವಜ್ರಪಂ
ಜರವೆರೆದರ್ತ್ಥಿಗೀವೆಡೆಯೊಳೊಪ್ಪುವ ಕಳ್ಪಮಹೀಜವಾಂತಕಂ
ಧುರಧರೆಯಲ್ಲಿ ಕೊಲ್ವೆಡೆಗೆ ಕಾಳಂ ಕೃತಾಂತನೆನುತ್ತ ಬಣ್ಣಿಕುಂ
ವರವಿಬುಧವ್ರಜಂ ಪ್ರಿಥಿವಿಸೆಟ್ಟಿಯನೀ ಹರಿದೇವಸೆಟ್ಟಿಯನ್ ॥ **295** ॥

ಶಂಕರಸೆಟ್ಟಿ

ಉ ಮಾ ॥ ಆ ಹರಿದೇವಸೆಟ್ಟಿಯನುಜಾಗ್ರಣಿ ಶಂಕರಸೆಟ್ಟಿ ಭೀಕರೋ
ಗ್ರಾಹವರಂಗ ಭೀಮನೆಸೆವಗ್ಗದವಾರವಿಳಾಸಿನೀ ಜನ

ಕ್ಕಾ ಹರಿನಂದನಂ ಪ್ರಿಥಿವಿಸೆಟ್ಟಿ ಜಗತ್ರಯಮಲ್ಲನೆಂದು ತಾಂ
ಮೋಹದೆ ಬಣ್ಣಿಕುಂ ಧರಣಿ ವೆಂಣ್ಣಲೆನಾರಿಯ ಚಾರುಪುತ್ರನನ್ ॥ 296 ॥

ಮ ವಿ ॥ ಮದನಂ ರೂಪಿನೊಳಬ್ಜಜಂ ಕಳೆಗಳೊಳ್ ಗಂಗಾಸುತಂ ಶೌಚ ಸಂ
ಪದದೊಳ್ ಭಾನುಜನುದ್ಧದಾನ ಗುಣದೊಳ್ ಗಾಂಡೀವಿ ಮಿಕ್ಕಿರ್ದ ಶೌ
ರ್ಯ್ಯದೊಳಂ ತಾ ಖಚರೇಶ್ವರಂ ಪರಹಿತವ್ಯಾಪಾರದೊಳ್ ಗೋಮಿನೀ
ಸದನಂ ಶಂಕರಸೆಟ್ಟಿಯೆಂದು ಹೊಗಳ್ದುಂ ವಿಶ್ವಂಭರಾಮಂಡಳಂ ॥ 297 ॥

ಚಂ ಮಾ ॥ ಅನುಪಮಶೌರ್ಯನೆಂದು ವಿಬುಧಬ್ರಜ ರಕ್ಷಣದಕ್ಷನೆಂದು ಪೆಂ
ಪಿನಕಣಿಯೆಂದು ವೈರಿಸಮಯ ದ್ವಿಪಕೇಸರಿಯೆಂದು ಕಾಮಿನೀ
ಜನ ಕುಸುಮಾಸ್ತ್ರನೆಂದು ಭುವನತ್ರಯಮಲ್ಲನೆನಿಪ್ಪ ಶಂಕರಾಂ
ಕನನಭಿವರ್ಣ್ನಿಕುಂ ಪ್ರಿಥಿವಿಸೆಟ್ಟಿಯನಾಹವ ಪಂಚಮುಟ್ಟೆಯನಾ ॥ 298 ॥

ಚಂ ಮಾ ॥ ಸರಿ ನಿನಗಪ್ಪರಾರ್ ಹರಿಹರಾನುಜ ಸತ್ ಪೃಥಿವೀಶಸೆಟ್ಟಿ ಶಂ
ಕರ ಹರಪಾದ ಪಂಕರುಹ ಕಿಂಕರ ವಾರವಿಳಾಸಿನೀ ಮನೋ
ಹರ ಘನತೇಜ ತಿಗ್ಮಕರ ಶತ್ರು ನೃಪಾಳಬಳೌಘ ಹೃದ್ಘಯಂ
ಕರ ಶರಣಾಗತ ಪ್ರಕರ ರಕ್ಷಣಕಾರಣ ಖೇಚರೇಶ್ವರಾ ॥ 299 ॥

ಚೌಡವ್ವೆ

ಕಂ ॥ ವಿಳಸಿತ ಶಂಕರ ಸೆಟ್ಟಿಯ
ಕುಲವಧು ಚೌಡವ್ವೆ ತಳೆದಳಧಿಕೋನ್ನತಿಯಿಂ
ಲಲಿತಾಕೃತಿಯಂ ಗುಣಮಂ
ಸಲೆ ನಿಲೆ ಸೌಭಾಗ್ಯಮಂ x x ಚತುರತೆಯಂ ॥ 300 ॥

ಬಂಮಣ

ಮ ವಿ ॥ ತೊಡರ್ವಂಗಂತಕನಣ್ಮವಂಗೆ ಸಿಡಿಲಾಂತಿರ್ದಂಗೆ ದಾವಾನಳಂ
ಕಡುಪಿಂ ಮಾರ್ಮಲೆವಂಗೆ ಮಾರಿ ಮುಳಿಸಿಂದಾಂತಂಗೆ ಕಾಳೋರಗಂ
ಬಿಡದುರ್ಕ್ಕಿಂದಿದಿರಾಂತವಂಗೆ ಹಸಿದಿರ್ದ್ದಾ ಮೃತ್ಯುವೆಂದೆಂಬುದೀ
ಪೊಡೆವೀಮಂಡಳಂವಾವಗಂ ಪೃಥಿವಿಸೆಟ್ಟಿಖ್ಯಾತ ಬೊಂಮಾಂಕನಂ॥ 301 ॥

ಉ ಮಾ ॥ ವಾರವಿಳಾಸಿನೀಜನದ ಕಣ್ಗೆ ಮನೋಭವನಂತಿರುದ್ಧತೋ
ಗ್ರಾರಿಯ ಕಣ್ಗೆ ಕಾಳಯಮನಂತೆ ಧನಾರ್ತ್ಥಿಯ ಕಣ್ಗೆ ದಲ್ ಸುರೋ

ವ್ವೀರುಹದಂತೆ ತೋರ್ಪನೆನಲೀ ಭುವನತ್ರಯಮಲ್ಲ ಬಂಮಣಂ
ಧೀರನದೆಂತು ಸಾಧಿಸಿದನೋ ಬಹುರೂಪಿಣಿಯೆಂಬ ವಿದ್ದೆಯನ್ ॥ **302** ॥

ಗೋಪಾಲಕೃಷ್ಣ ಸ್ತುತಿ

ಶಾ ವಿ ॥ ಶ್ರೀನಾರೀ ಕಳಶಸ್ತನದ್ವಯ ಲಸತ್ಕಾಶ್ಮೀರ ಪಂಕಾಂಕಿತಾ
ನೂನೋರಸ್ಥಳನಬ್ಜಸಂಭವನುತಂ ತ್ರೈಲೋಕ್ಯರಕ್ಷಾಕ್ಷಮಂ ನಾನಾ
ನಾನಾ ದೇವ ಕಿರೀಟತಾಟಿತ ಪದಂ ಗೋಪಾಳದೇವೋತ್ತಮಂ
ತಾನೀಗೊಪ್ಪುವ ದಾಸಿರಾಜತನಮಂ ಬೊಪ್ಪಂಗಭೀಷ್ಟಾರ್ಥವಂ ॥ **303** ॥

ಬೊಪ್ಪರಾಜ

ಚಂ ಮಾ ॥ ಪರಿಕಿಸೆ ವಿಷ್ಣು ಪಾಂಡವರ್ಗೆ ಗುತ್ತನೃಪಂಗೊಲವಿಂದೆ ಭಟ್ಟಿ ಭಾ
ಸುರತರ ಚಂದ್ರಗುಪ್ತ ಧರಣೀಪತಿಗೊಪ್ಪುವ ವಿಷ್ಣುಗುಪ್ತನಾ
ದರದೊಳೆ ಮಂತ್ರಿಮುಖ್ಯರೆನಿಪಂತಿರೆ ವೆಂಣ್ನಲಸೆಟ್ಟಿಕವ್ವೆಗೀ
ಸ್ಥಿರತರ ಬೊಪ್ಪರಾಜನಖಿಳೋಂನತಿಯೆಲ್ಲವನಾಗು ಮಾಡುವನ್ ॥ **304** ॥

ಪಿನಾಕಪಾಣಿ ಮುನಿ

ಚಂ ಮಾ ॥ ಮಿಸುಪ ಪಿನಾಕಪಾಣಿ ಮುನಿಪುಂಗವನುಗ್ರತಪಕ್ಕೆ ಭೀತಿಗೊಂ
ಡ ಸಮಸರಂ ನಿಜೇಕ್ಷು ಧನುವಂ ಬಿಸುಟೋಡೆ ಪಿನಾಕಪಾಣಿಯೆಂ
ಬೆಸಕವನಾಳ್ದು ಬಿಲ್ವಮಠದಲ್ಲಿ ಅಧೀಶ್ವರನಾಗಿ ಕೀರ್ತಿಯಂ
ಪಸರಿಸಿದಂ ಸುಕಾಳಮುಖ ಸಂತತಿ ಚಾರುಸುಧಾಬ್ಧಿ ಚಂದ್ರಮಂ ॥ **305** ॥

ಸೆಟ್ಟಿಕವ್ವೆಯ ಗುರು ಹರಶಕ್ತಿದೇವ ಮುನಿ

ಮ ವಿ ॥ ಸರಿಯೇ ಮಿಕ್ಕಿನ ತಾಪಸರ್ಕಳಮೃತೇಶಾತ್ಮೋದ್ಭವಂ ಪುಣ್ಯ ಸು
ಸ್ಥಿರನಪ್ಪೀ ಹರಶಕ್ತಿದೇವ ಮುನಿಯೊಳ್ ಪೇಳ್ ಭೂರಿ ಭೂಚಕ್ರದೊಳ್
ದೊರೆಯೇ ಮಲ್ಲಿಗೆಗೆಕ್ಕೆ ಹಂಸಗೆ ಬಕಂ ರತ್ನಕ್ಕೆ ಲೋಷ್ಠಾಳಿ ಕೇ
ಸರಿಯೊಳ್ ಜಂಬುಕರಾಜಿಗಳ್ ಪಿಕನಿಕಾಯಕ್ಕಾ ಚಿರಂಜೀವಿಗಳ್ ॥ **306** ॥

ಚಂ ಮಾ ॥ ಸ್ಥಿರಹರಶಕ್ತಿ ದೇವ ಮುನಿಪೋತ್ತಮಹಸ್ತದೆ ದಾನದೀಕ್ಷೆಯಂ
ಸುರಕುಜನೀಕ್ಷಿಸಲ್ ತಳೆದವೋಲೆಸೆಗುಂ ಸುರಶೈಳದಲ್ಲಿ ಬಂ
ಧುರತರವಪ್ಪ ಕೆಂದಳಿರೆ ಕೆಂಜೆಡೆ ಪೂಗಣ ಲಾಕುಳಂ ಸುಭಾ
ಸುರವೆನಿಪಾ ವಿಭೂತಿಯೆ ಪರಾಗವಿಭೂತಿಫಳಂ ಕಮಂಡಲಂ ॥ **307** ॥

ಚಂ ಮಾ ॥ ಹುಸಿವ ಕನಲ್ವ ಬಯ್ವ ನಿಡುಸುಯ್ವ ಕರಂ ಕಸುಱುತ್ತಿರ್ಪ ಬ
ಗ್ಗಿಸುವ ಬಳಲ್ಚಿ ಬೇಸಱಿಪ ಬೇಸಱೊಳೊಂದಿದೆವೆಂಬ ಕೂಡೆ ದು

ಜ್ಜೆಸನದೊಳಿಕ್ಕೆ ದೇವರವನಂ ತವೆ ತಿಂಬ ತಪಸ್ವಿಯಲ್ಲಿ ಹೋ
ಲಿಸುವುದೆ ಭಾವಿಸಲ್ಕಮೃತರಾಶಿಸುತಂ ಹರಶಕ್ತಿದೇವನನ್ ॥ 308 ॥

ಚಂ ಮಾ ॥ ಒದವಿದ ಪುಣ್ಯದಿಂ ಶಿವಪದಾಂಬುಜ ಭಕ್ತಿಯಿನತ್ತುದಾರ ಸಂ
ಪದದಿನುದಗ್ರ ಧೈರ್ಯ್ಯದಿನಿಳಾತಳದೊಳ್ ವರಚಕ್ರವರ್ತಿಯೆಂ
ಬುದು ನುತ ವೀರಭದ್ರನಣವೆಂಬುದು ಭಾನುಜನೆಂಬುದದ್ರಿಯೆಂ
ಬುದು ಪೆಱತೊರ್ವನೆಂಬುದೆ ನೆಗಳ್ತೆಯೊಳೀ ಹರಶಕ್ತಿದೇವನಂ ॥ 309 ॥

ಕಂ ॥ ಧರೆಗೆಸೆವ ಕೋಣವತ್ತಿಗೆ
ಪಿರಿದೆನಿಪಧಿನಾಥೆ ಸೆಟ್ಟಿಕವ್ವೆಗೆ ಧರ್ಮ್ಮೋ
ತ್ಕರಲಾಭಕಾರಿಯೆನಿಪಂ
ಹರಶಕ್ತಿಬ್ರತನೆಂದು ಪೊಗಳ್ಗುಂ ಲೋಕಂ ॥ 310 ॥

26) ಅಬಲೂರು, E.I. Vol. V, p. 263, ಕ್ರಿ.ಶ. 1219

ಯಾದವರ ದೊರೆ ಸಿಂಘಣನ ಆಳಿಕೆಯ ಕಾಲದ ಈ ವೀರಗಲ್ಲು ಶಾಸನದಲ್ಲಿ, ಮಾಚ ಮತ್ತು ಗೋಮ ಎಂಬ ಅಣ್ಣತಮ್ಮಂದಿರು ಶತ್ರುಗಳ ಕುದುರೆದಳದೊಡನೆ ಹೋರಾಡಿ ಮರಣಿಸಿದ್ದನ್ನು ಹೇಳಿದೆ.

ಅಬ್ಬಲೂರು

ಚಂ ಮಾ ॥ ಗಿಳಿಕುಳದಿಂ ಪಿಕಾವಳಿಯಿನೊಪ್ಪುವ ನಂದನದಿಂ ವಿಳಾಸದಿಂ
ಬೆಳಸಿದ ಗಂಧಶಾಳಿಯಿ ಶಿವಾಲಯದೋಳಿಯಿ ಭಾಳನೇತ್ರಪೂ
ಜಿತಗೃಹದಿಂ ಬಳಾಧಿಕ ಕಳಾವಿದ ವೀರಸಮೂಹದಿಂದಿಳಾ
ತಳದೊಳಗಬ್ಬಲೂರತಿವಿಚಿತ್ರತರಂ ನಿಜಮಾಗಲೊಪ್ಪುಗುಂ ॥ 311 ॥

ಮಾಚ ಮತ್ತು ಗೋಮ

ಕಂ ॥ ಘಟ್ಟಿಸಿ ನೂಂಕಿದ ವಾಜಿಯ
ಥಟ್ಟಂ ಕಟ್ಟಾಳು ಬಡಗಿ ಮಾಚಂ ತಾಗಲ್
ನಿಟ್ಟಿಸಿ ಗೋಮನು ಇಸೆ ಪಡ
ಲಿಟ್ಟುದು ತತ್ಕ್ಷಣದಿ ವೈರಿಬಳವೆನಿತನಿತುಂ ॥ 312 ॥

ಕಂ ॥ ಸೋದರರಿಬ್ಬರ ವೀರಂ
ಮೇದಿನಿಗಚ್ಚರಿಯಿದೆನಿಸಿ ಧುರದೊಳ್ ಪಲರಂ
ಕಾದಿ ತವೆ ಕೊಂದು ಸ್ವರ್ಗ್ಗ
ಕ್ಕೋದರ್ಜ್ಜಸವೆಸೆಯೆ ಮಾಚನುಂ ಗೋಮನುಂ ॥ 313 ॥

ಹಾಸನ ಜಿಲ್ಲೆ

ಅರಕಲಗೂಡು ತಾಲ್ಲೂಕು

1) ಸುಳಗೋಡು ಸೋಮವಾರ 133, E.C. VIII (R), ಕ್ರಿಶ. 1080

ಇದರಲ್ಲಿ ಕೊಂಗಾಳ್ವರಾಜನಾದ ಪ್ರಥ್ವಿಕೊಂಗಾಳ್ವನು (ಅದಟರಾದಿತ್ಯ) ಗಂಡವಿಮುಕ್ತಸಿದ್ಧಾಂತ ದೇವರಿಗೆ ಬಸದಿಯನ್ನು ಮಾಡಿಸಿ ದತ್ತಿಯನ್ನು ನೀಡಿದನೆಂದು ಹೇಳಿದೆ. ಈ ಶಾಸನವನ್ನು ರಚಿಸಿದವನು ಕವಿ ವಿದ್ಯಾಧರ ಎನಿಸಿದ್ದ ಸಂಧಿವಿಗ್ರಹಿ ನಕುಳಾರ್ಯ.

ಕೊಂಗಾಳ್ವ ಜಿನಾಲಯ

ಮ ವಿ ॥ ಜಗದಾಶ್ಚರ್ಯಮಿದತ್ಯಪೂರ್ವಮಿದಱಿಂದಕ್ಕಬ್ಜಜಂ ಕೂಡ ಬ
ಟ್ಟಿಗೆಯಂ ತಿಟ್ಟಮಿಡಲ್ಕಿದೇಂ ನೆಱೆದನೇ ಪೇೞೆಂಬ ಕೊಂಗಾಳ್ವ ಜೈ
ನಗೃಹಂ ನಾಡೆ ಬೆಡಂಗುವೆತ್ತದಟರಾದಿತ್ಯಾವನೀನಾಥಕೀ
ರ್ತಿಗಡರ್ಪಿರ್ಪವೊಲಿಂತು ತೋರ್ಪುದೆನೆ ಮತ್ತೇವಣ್ಣಿಪಂ ಬಣ್ಣಿಪಂ ॥ 1 ॥

ಅದಟರಾದಿತ್ಯ

ಮ ಸ್ರ ॥ ಜಗದೊಳ್ ತಾನೀವ ದಾನಂ ನೆಗೞಲದಟರಾದಿತ್ಯಚೈತ್ಯಾಲಯಕ್ಕೆ
ಯ್ದೆ ಗುಣಾಂಭೋರಾಶಿ ವೀರಾಗ್ರಣಿ ವಿಜಯಭುಜೋದ್ಭಾಸಿ ದಿವ್ಯಾರ್ಚನಕ್ಕಂ
ದು ಗಡಂ ಸದ್ಭಕ್ತಿಯಿಂದಂ ತಱಿಗೞನಿಯ ಮಣ್ಣಲ್ಲಿ ನಾಲ್ವತ್ತೆರಟ್ಟಿಂ
ಡುಗಬೀಜಕ್ಕಿತ್ತನತ್ಯುತ್ಸವದಿನದಟರಾದಿತ್ಯನಾದಿತ್ಯತೇಜಂ ॥ 2 ॥

ಮ ಸ್ರ ॥ ಇನಿತಂ ಸಿದ್ಧಾಂತದೇವರ್ಗನುನಯದಱಿದಾಚಂದ್ರತಾರಂ ಸಲುತ್ತಿಂ
ತೆನೆ ಧಾರಾಪೂರ್ವಕಂ ಕೊಟ್ಟುದನುದಧಿಜಳಸ್ಥೂಳಕಲ್ಲೋಳಲೀಳಾ
ವನಿಚಕ್ರಕ್ಕೆಯ್ದೆ ಪರ್ಬಿತ್ತದನಿದನುದನೇನೆಂದಪ್ಪೆ ದಾನದೊಳ್ಪಾ
ವನುಮಂ ಮಿಕ್ಕಿರ್ಪಿನಂ ಮಾಡಿಸಿದನೆಸೆಯೆ ಸದ್ಧರ್ಮಿ ಕೊಂಗಾಳ್ವಭೂಪಂ
॥ 3 ॥

2) ಸುಳಗೋಡು ಸೋಮವಾರ 137, E.C. VIII (R), ಕ್ರಿಶ. ಸು. 11 ನೇ ಶತಮಾನ

ಈ ನಿಸಿದಿ ಶಾಸನದಲ್ಲಿ ಗೋಪನಂದಿ ಮುನಿಯ ಶಿಷ್ಯೆ ದೇವಶ್ರೀಕಂತಿಯು ಸಲ್ಲೇಖನದಿಂದ ಮುಡಿಪಿದ್ದನ್ನು ಹೇಳಿದೆ.

ಗೋಪಣಂದಿಯತಿ

ಮ ಸ್ರ ॥ ಜಿನಪಾದಾರ್ಚ್ಚನಭೃಂಗಂ ಮದನಮಹೇಶ್ವರಂ ಕರ್ಮನಿರ್ಮೂಳನಂ ವಾ
ಗ್ವನಿತಾಚಿತ್ತಪ್ರಿಯಂ ವಾದಿಕುಳಧರವಜ್ರಾಯುಧಂ ಚಾರುವಿದ್ವ

ಜ್ಜನಮಿತ್ರಂ ಭವ್ಯಚಿನ್ತಾಮಣಿ ಸಕಳಕಳಾಕೋವಿದಂ ಕಾವ್ಯಕಂಜಾ
ಸನನೆನ್ದಾನನ್ದದಿಂದಂ ಪೊಗಳೆ ನೆಗಟ್ದಿನೀ ಗೋಪಣಂದಿವ್ರತೀಂದ್ರಂ ॥ 4 ॥

ದೇವಶ್ರೀಕಂತಿ

ಸ್ರಗ್ಧರೆ ॥ ಏವೇಳ್ವೆಂ ಗೋಪಣನ್ದಿ ವ್ರತಿಪತಿಗಳ ಶಿಶ್ಯಾಖ್ಯೆಯಾ ಸಾಲ್ಕನ
ಕ್ಕಾವಾಸಸ್ಥಾನ ಮಾಗಿಟ್ದಮಳಚರಿತೆಯಜ್ಜ್ರ್ಯನಪಾದಾಬ್ಜದೊಳ್ಸ
ದ್ಭಾವಂ ಕಯ್ಗಣ್ಮೆ ಸಲ್ಲೇಖನದೊಳೆ ತನುವಂ ಬಿಟ್ಟು ಸಲ್ಲೀಲೆಯಿನ್ದಂ
ದೇವಶ್ರೀಕನ್ತಿಯದ್ದೇ೯ವಗಣಮಿದಿರ್ಗ್ಗೊಳಲ್ದೇವಲೋಕಕ್ಕೆ ಸನ್ದರ್ ॥ 5 ॥

3) ಸುಳಗೋಡು ಸೋಮವಾರ 138, E.C. VIII (R),
ಕ್ರಿಶ. ಸು 11 – 12 ನೇ ಶತಮಾನ

ಇದರಲ್ಲಿ ಪ್ರಭಾಚಂದ್ರದೇವನ ಸ್ಮರಣೆಗಾಗಿ ಸೋಮನು ಕೀರ್ತಿಸ್ತಂಭವನ್ನು ನೆಡಿಸಿದ್ದನ್ನು ಹೇಳಿದೆ.

ಕಂ ॥ ಪರಸಮಯ ತಿಮಿರ ದಿನಕರ
ನುರುತರ ಕವಿಗಮಕವಾದಿ ವಾಗ್ಮಿತ್ವಯದೊಡೆ
ಯಂ ಕಾಕಳಿನಾಡೊಳ್ ನಿರ
ತಿಶಯಂ ತಾನಾಗಿ ದಿವಿಜಲೋಕಕ್ಕೊಗೆದಂ ॥ 6 ॥

4) ಸುಳಗೋಡು ಸೋಮವಾರ 140, E.C. VIII (R),
ಕ್ರಿಶ. ಸು 11 – 12 ನೇ ಶತಮಾನ

ಇದರಲ್ಲಿ ಚಂಗಾಳ್ವ ನೃಪನು ತನ್ನ ಸತಿ ಏಚಬ್ಬರಸಿಗೆ ಪರೋಕ್ಷವಿನಯವಾಗಿ ಬಸದಿಯನ್ನು ನಿರ್ಮಿಸಿದ ಎಂದು ಹೇಳಿದೆ.

ಚಂಗಾಳ್ವ ನೃಪ

ಮ ವಿ ॥ x x x ಯಾದವ ವಂಶನೀರದಪದೋದ್ಯದ್ಭಾನು ಪೆರ್ಮ್ಮಯೆಜ್ರಿ
ಗನ್ನೃಪಂ ತಾಯ್ಬುಲಿ ರಾಜವಂಶ ವಿಳಸಂ ನೀರೇಜನೀಹಂಸಭಾ
ಮಿನಿ ಪೋಚಾಂಬಿಕೆದೇವೀ ಪುತ್ರನಸುಹೃದ್ಭೂಪಾಳದೋರ್ಗ್ಗರ್ವ್ವಮ
ರ್ದನನತ್ಯೂರ್ಜ್ಜಿತದಾನಶಾಳಿ ನೆಗಟ್ದಿಂ ಶ್ರೀ ಮತ್ಸ್ಯಭೂಪಾಳಕಂ ॥ 7 ॥

5) ಮಳಲಕೆರೆ 157, E.C. VIII (R), ಕ್ರಿಶ. 1248

ಇದರಲ್ಲಿ ಹೊಯ್ಸಳ ದೊರೆ ಸೋಮೇಶ್ವರನ ಆಳಿಕೆಯಲ್ಲಿ ಸಾತಣ್ಣ ಎಂಬುವವನು ಮಣಲಕೆರೆಯಲ್ಲಿ ಶಾಂತಿನಾಥ ಬಸದಿಯನ್ನು ಜೀರ್ಣೋದ್ಧಾರ ಮಾಡಿಸಿ ದತ್ತಿ ನೀಡಿದುದನ್ನು ಹೇಳಿದೆ.

ಸೋಮೇಶ್ವರ

ಕಂ ॥ ಭೂಮಾನೀಕಮನೋಜಂ
ಭೀಮಾಹಿತದೈತ್ಯತತಿಗೆ ದಶರಥರಾಮಂ
ಸೋಮಂ ಸುಜನ ಸುಧಾಬ್ಧಿಗೆ
ಸೋಮೇಶ್ವರದೇವನೆಂದು ವರ್ಣಿಪುದು ಜಗಂ ॥ 8 ॥

ನಾಕಯ್ಯನ ಮಗ ಸಾತಂಣ್ಣ

ಶಾ ವಿ ॥ ಲೋಕಾಶ್ಚರ್ಯ ನಿಯೋಗ ಯೋಗ ನಿಪುಣಂ ದುರ್ಗ್ಗಾಂಬಿಕಾವಲ್ಲಭಂ
ನಾಕಯ್ಯಂ ಭುವನಾಭಿರಾಮ ಚ x x ನೆಂಬಿನಂ ಕೊಂಗದೇ
ಶೈಕ ಶ್ರೀಕರಣಾಗ್ರಗಣ್ಯನೆಸೆದಂ ತತ್ಸೂನು ಕಾಮಾನುಜಾ
ಶಾಕೀರ್ಣ್ಣಾಯತ ಕೀರ್ತಿಕಾಂತನೆಸೆದಂ ಸಾತಂ ಗುಣಬ್ರಾತದಿಂ ॥ 9 ॥

ಕಂ ॥ ಪರಮ ಜಿನಚರಣದಾಮಂ
ವರವಿದ್ವಾರ್ಧಿಸ್ಸೋಮನಬಳಾಕಾಮಂ
ಕರಣಗಣಾಗ್ರಣಿ ಸೋಮಂ
ಕರಮಮಳಂ ವಾಣೀರಾಮಂ ? ॥ 10 ॥

ಜಿನಾಲಯದ ವರ್ಣನೆ

ಮ ಸ್ರ ॥ ಜಗತೀಸಂಭೂತ ಧರ್ಮಾಂಕುರ x x ದೆಂಬಂತೆ ಭೂಕಾಂತೆರಾಗಾ
ಜ್ಜಗದಿಂ ಪೊತ್ತಿರ್ದ್ದ ಪೊಂಗೆಲ್ಸದ ಕಳಸವಿದೆಂಬಂತೆ ಭವ್ಯಾವಳೀಕೇ
ಳಿಗೆರಮ್ಯಸ್ಥಾನವೆಂಬತಿರೆ ಸುಕೃತಿ ಸುಧಾಸೂತಿಬಿಂಬೋದಯಯ್ಯೆಂದ್ರೀ
ನಗವೇ ಬಂದಾವಗಂ ರಂಜಿಸಿದುದು ಈ ವಸುಧಾಚಕ್ರದೊಳು ಜೈನಗೇಹಂ
॥ 11 ॥

6) ರಾಮನಾಥಪುರ 46, E.C. VIII (R), ಕ್ರಿಶ. 1251

ಇದರಲ್ಲಿ ಹೊಯ್ಸಳ ದೊರೆ ಸೋಮೇಶ್ವರನ ಆಳಿಕೆಯಲ್ಲಿ ಮಹಾಪ್ರಧಾನಿ ಬೊಂಮಣ ದಣ್ಣಾಯಕರ ಅಧಿಕಾರಿ ಕಲ್ಲಯ್ಯನು ರಾಮನಾಥ ದೇವರ ಪೂಜೆಗೆಂದು ಹೂದೋಟವನ್ನು ದತ್ತಿ ಬಿಟ್ಟದ್ದನ್ನು ಹೇಳಿದೆ.

ಕಲ್ಲಯ್ಯ

ಶಾ ವಿ ॥ ತಾಂ ಗೌರೀಪತಿ ರಾಮನಾಥನ ಮಹಾದಿಬ್ಯಾಂಗರಂಗಾದಿಸ
ದ್ಭೋಗಕ್ಕೆಂದೊಲಿದಿಂತು ನಿರ್ಮ್ಮಿಸಿದನೀ ಪೂದೋಂಟಮೊಪ್ಪಲ್ ಮನೋ
ರಾಗಂ ಕೈಮಿಗೆ ಕೊಂಗಮಂಡಳದೊಳಧ್ಯಕ್ಷಾಂಕನಾದಂ ಮಹಾ
ಭಾಗಂ ಯೋಗ್ಯನಿದೊರ್ವ್ವನುರ್ವ್ವಿಗೆ ವಲಂ ಕಲ್ಲಂ ಕಳಾವಲ್ಲಭಂ ॥ 12 ॥

ಶಾ ವಿ ॥ ಶ್ರೀ ರಾಮೇಶ್ವರನದ್ರಿಜೇಶನಭವಂ ತ್ರೈಲೋಕ್ಯರಕ್ಷಾಕ್ಷಮಂ
ತಾರಾಧೀಶ ವಿಭೂಷಣಂ ಸರಣಸೌಖ್ಯಾಕಾರಕಂ ದೇವ ಬೃಂ
ದಾರಾಧ್ಯಂ ಕಲಿದೇವ ಮಂತ್ರಿಗೊಲವಿಂ ದೀರ್ಘಾಯುವಂ ಶ್ರೀಯುಮಂ
ಕಾರುಣ್ಯಂ ಬೆರಸಿತ್ತು ರಕ್ಷಿಸುಗೆ ಚಂದ್ರಾದಿತ್ಯರುಳ್ಳಂನೆಗಂ ॥ 13 ॥

ಅರಸೀಕೆರೆ ತಾಲ್ಲೂಕು

7) ನೇರ್ಲಿಗೆ, 284, E.C. X (R), ಕ್ರಿಶ. 971

ಈ ವೀರಗಲ್ಲು ಶಾಸನದಲ್ಲಿ ಅಣ್ಣವಸಯ್ಯನು ನೊಳಂಬರೊಡನೆ ಹೋರಾಡಿ ಆನೆಕಾಳಗದಲ್ಲಿ ಮಡಿದ ವಿಚಾರವನ್ನೂ ಗಂಗರಾಜ ಮಾರಸಿಂಹನು ನೇರಲಿಗೆಯನ್ನು ಕಲ್ನಾಟ್ಟು ಕೊಡುಗೆಯಾಗಿ ವಸಯ್ಯನ ಮಗ ಬೂತುಗನಿಗೆ ನೀಡಿದುದನ್ನೂ ಹೇಳಿದೆ.

ಕಂ ॥ ಮೊಱಗುವ ಪಱೆಯುಮನಾನೆಯ
ಪಱಯಿಗೆಯುಮನಾಂತ ಬಲಮಂ ಕಣ್ಡು ಚಲಂನೆ
ಗಱೆ ಪತಿಪೊಗೞೆ ಪೊಸ x x x
ತುಱಿದಿಕ್ಕಿದನಾನ್ತ ಘಟೆಯನಾಯದಗಣ್ಡಂ ॥ 14 ॥

ಕಂ ॥ ಕಟ್ಟಾನೆಮಲ್ಲನಂ ಕಡು
ಗಟ್ಟಿಗನುತ್ತಿಗನನೊಲಿಪನಂ ಚಟ್ಟಿಗನಂ
ತಟ್ಟುಟ್ಟಿಱಿಯಲ್ಲಾ ಸಂ
ಗಟ್ಟಿಪನನ್ದು ಸರಾಗದೊಸದೈರಾವಣಮಂ ॥ 15 ॥

8) ಕುಣದಹಳ್ಳಿ 254, E.C. X (R), ಕ್ರಿಶ. ಸು. 1060

ಇದರಲ್ಲಿ ಹೊಯ್ಸಳ ದೊರೆಯಾದ ವಿನಯಾದಿತ್ಯನ ಆಳಿಕೆಯಲ್ಲಿ ಧರ್ಮರಾಶಿವ್ರತಿ ದೇಸವಣಿಯ ಶಿವದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿದಂತೆ ಹೇಳಿದೆ.

ವಿನಯಾದಿತ್ಯ

ಮ ಸ್ರ ॥ ಪರಮಶ್ರೀಸರ್ವಧರ್ಮಂ ನೆಗೞೆ ಪರಮಹೀಪಾಳಕರ್ ತನ್ನ ತೇಜ
ಸ್ಫುರಿತಕ್ಕುಳ್ಳಂಜೆ ತನ್ನುಜ್ವಳಯಶಮವನೀಚಕ್ರಮಂ ಪರ್ವಿ ದಿಕ್ಕುಂ
ಜರದಂತಾಘಾಟದಿಂ ಬಳ್ವಳನೆ ಬಳೆದಿರಲ್ ವೀರಲಕ್ಷ್ಮೀನಿವಾಸಂ
ಧರಣೀಸಂಕೀರ್ತಿಯಂ ಪ್ರಜ್ವಳಿಸಿದ ವಿನಯಾದಿತ್ಯನಾದಿತ್ಯತೇಜಂ ॥ 16 ॥

ಧರ್ಮರಾಶಿ

ಚಂ ಮಾ ॥ ನೆಱೆ ತಪದೊಂದು ಪೆಂಪು ಗುಣದಾಗರಮೆಂಬುದಿದೊಂದು ಪೆಂಪು ಪೇ
ರಱಿಕೆಯ ಕೀರ್ತಿಯಿಂ ಕೆಱೆಯ ಕಟ್ಟದ ಪೆಂಪು ಸುರೇಶಭಕ್ತಿಯಿಂ

ತಱಿಸಲವಿಂದೆ ದೇಗುಲಮನೆತ್ತಿದ ಪೆಂಪು ಸಮಸ್ತಧಾತ್ರಿಯೊಳ್
ಪೆಱರನದೇಕೆ ಪೇೞ್ ಪೊಗೞ್ದಪೈ ಪೊಗೞಿಂ ಸಲೆ ಧರ್ಮರಾಶಿಯಂ
|| 17 ||

ಬರ್ಮಗವುಂಡ

ಕಂ || ಶ್ರೀಗಂ ವಿಶ್ರುತವಾಣಿ
ಶ್ರೀಗಂ ಹರಹಾಸಭಾಸಮೆನಿಸುವ ಕೀರ್ತಿ
ಶ್ರೀಗಂ ವಿನೂತವಿಜಯ
ಶ್ರೀಗಂ ನೆಲೆಯೆನಿಸಿ ನೆಗೞ್ದ ಬರ್ಮಬವುಂಡಂ || 18 ||

9) ಅರಸೀಕೆರೆ 38, E.C. X (R), ಕ್ರಿಶ. ಸು. 1100

ಈ ಶಾಸನದಲ್ಲಿ ಕಲ್ಯಾಣದ ಚಾಲುಕ್ಯರ ದೊರೆಯಾದ ತ್ರಿಭುವನಮಲ್ಲನ ಆಳಿಕೆಯಲ್ಲಿ ಹೊಯ್ಸಳರಾಜನಾದ ಎಱೆಯಂಗನ ಸಾಮಂತ ಕಚ್ಚವೆರ್ಗಡೆಯು ಅರಸಿಯ ಕೆರೆಯಲ್ಲಿ ಕನ್ನೆಗೆರೆಯನ್ನು ಕಟ್ಟಿಸಿ ತೂಬನಿಕ್ಕಿಸಿದಂತೆ ಹೇಳಿದೆ.

ಕಚ್ಚವೆರ್ಗಡೆ

ಕಂ || ಕಡಿತಲೆಗೊಂಡೊಡೆ ರಾವಣ
ನೆಡಱಿದರಂ ಗೆಲಲೆವೇಡಿ ಬಿಲ್ಗೊಂಡೊಡೆ
ಫಡ ಮಾತರ್ಜುನನಹಿತರ
ಪಡೆಯಂ ಕೊಲ್ವೆಡೆಗೆ ಕಚ್ಚವೆರ್ಗಡೆ ಭೀಮಂ || 19 ||

ಕಂ || ಧರ್ಮದೊಳಂ ದಾನದೊಳಂ
ಪೆರ್ಮೆಯೊಳಂ ಶೌಚ ಗುಣದೊಳಂ ಸತ್ಯದೊಳಂ
ನೂರ್ಮಡಿಯಯ್ನೂರ್ಮಡಿ ಸಾ
ಸಿರ್ಮಡಿ ಜಗದೊಳಗೆ ಕಚ್ಚವೆರ್ಗಡೆಯಾರ್ಗಂ || 20 ||

ಕಂ || ಚೆನ್ನಾಳ್ವರಸಿಯ ಕೆಱೆಯೊಳೆ
ಮುನ್ನಾರ್ಗಂ ಕರಮಸಾಧ್ಯಮೆನಿಸಿದ ಕೆಱೆಯಂ
ಕನ್ನೆಗೆಱೆಯಾಗೆ ಕಟ್ಟಿಸಿ
ಸನ್ನುತನೀ ಧರೆಗೆ ಕಚ್ಚವೆರ್ಗಡೆ ನೆಗೞ್ದಂ || 21 ||

ಕಂ || ಉಱೆ ತಾನಗೞಿಸೆ ತೀವಿದ
ಕೆಱೆಗಾದರದಿಂದೆ ತೂಂಬನಿಕ್ಕಿಸಿದಂ ಮೊ
ನ್ನಱು ನೂಱು ಸಮೆಯೆ ಧರ್ಮ
ಕ್ಕೆಱೆವಟ್ಟನೆನಿಪ್ಪ ಕಚ್ಚವೆರ್ಗಡೆ ಮುದದಿಂ || 22 ||

10) ಕಾಂಟೀಕೆರೆ 321, E.C. X (R), ಕ್ರಿಶ. ಸು. 1100

ಇದರಲ್ಲಿ ಹೊಯ್ಸಳ ದೊರೆಯಾದ ಎಱೆಯಂಗನ ಮಹಿಷಿ ಮಹಾದೇವಿಯು ಮುತ್ತನಪೊಸವೂರ ಕೆರೆಯನ್ನು ಕಟ್ಟಿಸಿದಂತೆ ಹೇಳಿದೆ.

ವಿನಯಾದಿತ್ಯ

ಉ ಮಾ ॥ ಸ್ವಸ್ತಿ ಸಮಸ್ತಮಂಡಳಿಕಮಂಡನನಾನತಭೂಪಮೌಳಿವಿ
ನ್ಯಸ್ತಪದಂ ಶರತ್ತುಹಿನದೀಧಿತಿಬಿಂಬವಿಡಂಬಕೀರ್ತಿ ಕಾಂ
ತಿಸ್ತಬಕಾವಳಂಬಿತಯಶಂ ಮನುಮಾರ್ಗನನೂನದಾನಿ ಲೋ
ಕಸ್ತುತನೆಂಬಿನಂ ನೆಗಟ್ದನೀ ಧರೆಯೊಳ್ ವಿನಯಾಯ್ತಪೊಯ್ಸಳಂ ॥ 23 ॥

ಎರೆಯಂಗ

ಕಂ ॥ ತತ್ತನಯಂ ಸಕಳಮಹೀ
ಪೋತ್ತಮನನವರತದಾನಿ ವೈರಿನೃಪಾಳೋ
ನ್ಮತ್ತಗಜಸಿಂಹನಬಳಾ
ಜತ್ತಕನೆಱೆಯಂಗಪೊಯ್ಸಳಂ ಭೂವಿನುತಂ ॥ 24 ॥

ಕಂ ॥ ಅಣ್ಣ ಮೊಱೆಗೊಳಿಸಿ ಚೋಳಿಕ
ರಣ್ಣಲೆಯಂ ತಳಿರನುಡಿಸಿ ನನ್ನುಗೆಯಂ ಮೂ
ವಣ್ಣಂಬರಿಸಿದನುರ್ವರೆ
ಬಣ್ಣಿಸಲೆಱೆಯಂಗನೃಪತಿ ಚಕ್ರಿಯ ಬೆಸದಿಂ ॥ 25 ॥

ಕಂ ॥ ಆಳಾಪಮೇನೊ ಹಿಮಕು
ತ್ಕೀಳದ ಸೇತುವಿನ ನಡುವಣವನಿಪಚಯಮಂ
ಕೀೞಿಟ್ಟೇೞಿದನೆಱೆಗನೃ
ಪಾಳಂ ಚಾಳುಕ್ಯಚಕ್ರವರ್ತಿಯ ಬೆಸದಿಂ ॥ 26 ॥

ಕಂ ॥ ಭೋರೆನೆ ನನ್ನುಗೆ ಯೆರ್ದೆಯೊಳ
ಗೋರಂತುರಿವಗ್ನಿಸಾಕ್ಷಿಯೊಳ್ ಕೆಯ್ಕೊಂಡಂ
ಧಾರಾಪೂರ್ವಕಮಾಗಿರೆ
ವೀರಶ್ರೀಯಂ ಪ್ರತಾಪಿ ಪೊಯ್ಸಳಭೂಪಂ ॥ 27 ॥

ಲಕ್ಷ್ಮೀದೇವಿ

ಕಂ ॥ ಆತನ ವಧು ಪತಿಹಿತಗುಣ
ಸೀತೆ ಬುಧವ್ರಾತಕಲ್ಪವಲ್ಲರಿ ಭುವನ

ಖ್ಯಾತೆ ಜನವಿನುತವಿನಯಾ
ನ್ವಿತೆ ಮಹಾದೇವಿ ಲಕ್ಷ್ಮೀದೇವಿಯೆ ಜಗದೊಳ್ ॥ 28 ॥

ತೇಜರಾಯ

ಕಂ ॥ ಓಡದವರಿಲ್ಲ ಭೂಪರ್
ಬೇಡದ ಜನಮಿಲ್ಲ ಪೊಗೞದವರಿಲ್ಲಣಮ
ಟ್ಟಾಡದ ಪರಧರೆಯಿಲ್ಲೆನ
ಲಾಡಂಬರಮಾಯ್ತು ತೇಜರಾಯನ ತೇಜಂ ॥ 29 ॥

ತೇಜರಾಯನ ಮಗ ಪಾಂಡ್ಯ

ಕಂ ॥ ತತ್ಪುತ್ರನಖಿಳಗುಣಸಂ
ಪತ್ಪದನರಿರಾಜವಿಜಯಹರಣಂ ನಿಜವಂ
ಶೋತ್ಪಲಚಂದ್ರಂ ರಿಪುಕುಳ
ಹೃತ್ಪುಟವಿಘಟನಪಟುಪ್ರಚಂಡಂ ಪಾಂಡ್ಯಂ ॥ 30 ॥

ಕಂ ॥ ಭುವನೈಕಮಲ್ಲನಂ ಭೂ
ಭುವನಮಸುಂಗೊಳೆ ಮರಳ್ಚಿ ರಾಜ್ಯಮನಧಿಕೋ
ತ್ಸವದಿಂ ತ್ರಿಭುವನಮಲ್ಲಂ
ಗವಯವದಿಂ ಕೊಂಡು ಕೊಟ್ಟ ಗಂಡಂ ಪಾಂಡ್ಯಂ ॥ 31 ॥

ಚಂ ಮಾ ॥ ನೆಣದ ಬಳಂಬೆ ಕೋಳ್ಮಿದುಳ ತಿಂತಿಣಿ ಮೂಳೆಯ ತೋರವೆಟ್ಟು ಬ
ಲ್ವೆಣಗಳಗುಂತಿ ನೆತ್ತರ ಕಡಲ್ ಪರಿವಟ್ಟೆ ಕರೋಟಿಮಾಲೆ ಸಂ
ದಣಿಸುವ ಭೂತಕೋಟಿಗಳಿನೊಪ್ಪಿರೆ ಪೆರ್ಚಿದರೀಂದ್ರಸಂಗರಾಂ
ಗಣಮದು ತಾನೆ ಪೇೞದೆ ವಿರಾಜಿಪ ಪಾಂಡ್ಯನ ಗಂಡಗರ್ವಮಂ ॥ 32 ॥

ಕರ್ಕಡರಾಯ

ಕಂ ॥ ಸೊರ್ಕಿದ ಮದಾಂಧಭೂಪರ
ನಟ್ಟಾಡಿಸಿ ತನ್ನ ಕೀರ್ತಿಯಂ ದಿಗ್ವಧುಗಳ್
ತಟ್ಕೈಸುವಿನೆಗಮೆಸೆದಂ
ಕರ್ಕಡಮಾರಾಯನುದಿತವಿಜಯಾದೇಯಂ ॥ 33 ॥

ಕಂ ॥ ತೊಂಡಿನೊಳೆ ಮಲೆಮಹೀಪರ
ಮಂಡಳಮಂ ಸೂರೆಗೊಂಡು ಮಾರ್ಕೊಂಡವರಂ

ಖಂಡಿಸಿದನಮಮ ದುಟ್ಟರ
ಗಂಡನ ಗಂಡಂಗೆ ಮಲೆವ ಮಂಡಳಮೊಳವೇ ‖ 34 ‖

11) ಗೋವಿಂದಪುರ 244, E.C. X (R), ಕ್ರಿಶ. 1136, 1157

ಇದರಲ್ಲಿ ಹೊಯ್ಸಳ ದೊರೆ ವಿಷ್ಣುವರ್ಧನನ ಆಳಿಕೆಯಲ್ಲಿ ನೀರುಗುಂದನಾಡ ಕರಿಗುಂದದ ಮಾಗುಡವ್ವೆಯ ಮಗ ಅನನ್ತಶಕ್ತಿಪಂಡಿತನು ಅವರ ಮಗ ಬ್ರಹ್ಮರಾಸಿಪಂಡಿತನು ಮೂಲಸ್ಥಾನದ ದೇವಾಲಯವನ್ನು ಮಾಡಿಸಿದುದನ್ನು ಹೇಳಿದೆ.

ಚಾವುಂಡಮಯ್ಯ

ಮ ಸ್ರ ‖ ವಿನಯಾಂಭೋರಾಸಿ ಸತ್ಯಬ್ರತ ಗುಣನಿಳಯಂ ವಿಕ್ರಮ ಶ್ರೀವಿಳಾಸಂ
ಘನಚಂಡಾಂಸು ಪ್ರತಾಪಂ ಸ್ಫುರಿತ ರಿಪುಕುಭೃದ್ಭೇದದಂಭೋಳಿ ವಂಶಾಂ
ಬುನಿಧಿ ಶ್ರೀಮತ್ರಿನೇತ್ರ ಪ್ರಭವನಧಿಕ ಪುಣ್ಯಾಶ್ರಯಂ ಪೆಂಪುವೆತ್ತಂ
ವನಧಿವ್ಯಾವೇಷ್ಟಿತೋರ್ವ್ವೀತಳವೆನಿತನಿತುಂ ಬಣ್ಣಿಸಲ್ ಚೌಂಡಮಯ್ಯಂ
‖ 35 ‖

ಚಾವುಂಡಮಯ್ಯನ ಐದು ಮಕ್ಕಳು

ಮ ವಿ ‖ ಭುವನಂ ಬಣ್ಣಿಸೆ ಪೆಂಪುವೆತ್ತು ನೆಗಬ್ದಾ ಚಾವುಂಡರಾಜಂಗವು
ತ್ಸವಮಂ ತಾಳ್ದಿದ ಜಕ್ಕಣಯ್ಯೆಗೊಗೆದಪ್ಪುರ್ಣ್ಯಾತ್ಮಜರ್ ಸಂದ ಮಾ
ಧವಚಂದ್ರಂ ಜಿನದೇವನುಜ್ವಳ ಯಶಶ್ರೀ ತೈಲಪಂ ರೇಚಿಧ
ರ್ಮ್ಮವಿಳಾಸಂ ಗುಣಿಪಾರ್ಶ್ವನುದ್ಧತರಿಸೇನಾರಕ್ಕಸಂ ರಕ್ಕಸಂ ‖ 36 ‖

ತೈಲದಂಡಾಧಿಪ

ಕಂ ‖ ಎರೆದಟ್ಟಿದನ್ಯವಧುಗಂ
ನೆರದಾಂತವಿರೋಧಿಜನಕೆ ಕಣ್ಣುಂ ಮನವುಂ
ಪರಿಕಿಸೆ ಸೋಲವೆನಲ್ಕಿಂ
ಧರೆಯೊಳ್ದೊರೆಯಾರೊ ತೈಲದಂಡಾಧಿಪನೊಳ್ ‖ 37 ‖

ಜಿನ್ನ

ಕಂ ‖ ಜಿನ್ನಂ ಸಮಸ್ತ ಗುಣಸಂ
ಪನ್ನಂ ಅಷ್ಟೇಷ್ಟತತಿಗೆ ಕೈ ತೀವಿರೆ ಚೆಂ
ಬೊಂನ್ನಂ ಕುಡುವೆಡೆಗಿನ ಸುತ
ನನ್ನಂ ಪರಹಿತದೊಳಾ ವಿಯಚ್ಚರನನ್ನಂ ‖ 38 ‖

ಜಿನ್ನನ ಮಗ ಚಾವುಂಡರಾಯ

ಕಂ ॥ ಪರಹಿತರಲ್ಲದ ಪುರುಷರ
ಚರಿತಮನಿಳಿಕೆಯ್ದು ಬುಧರನಾವಗವಾರ್ಪ್ಪಿಂ
ಪೊರೆವೆಡೆಗೆ ಚೌಂಡರಾಯಂ
ಪರಹಿತಮಂ ಕೇಣಿಗೊಂಡನಾದ್ಯರ ಕಯ್ಯೊಳ್ ॥ 39 ॥

ಚಾವುಂಡಯ್ಯನ ಮಗ ಪಾರ್ಶ್ವ

ಚಂ ಮಾ ॥ ವರವಧುನಲ್ಲನನ್ಯವಧುಗಲ್ಲನನೇಕಕುಲಾಗಮಂಗಳಂ
ಪರಿಕಿಸೆ ತಾನೆ ಬಲ್ಲನಘದೊಳ್ ಸಲೆ ಸಲ್ಲನಕೀರ್ತಿಯತ್ತಲ
ಲ್ಲರಿಬಲಮಲ್ಲನಿಷ್ಟಜನಕೆಲ್ಲ ಬುಧಾವಳಿಗೆಲ್ಲಮೀಯಲಾ
ಸುರಕುಜದನ್ನನೆಂದು ಧರೆ ಬಣ್ಣಿಪುದಾದರದಿಂದೆ ಪಾರ್ಶ್ವನಂ ॥ 40 ॥

12) ದೇಶಾಣ 253, E.C. X (R), ಕ್ರಿ.ಶ. 1139

ಇದರಲ್ಲಿ ಹೊಯ್ಸಳ ದೊರೆ ಮೊದಲನೆಯ ನರಸಿಂಹನ ಆಳಿಕೆಯಲ್ಲಿ ದೇಸಾಣಿಯ ತಟಾಕದ ಕೋಡಿಯಲ್ಲಿ ಜೈತುಗಿ ಎಂಬ ಗಜವೈದ್ಯನು ಜೈತೇಶ್ವರ ಶಿವನಿಳಯವನ್ನು ಮಾಡಿಸಿದುದನ್ನು ಹೇಳಿದೆ.

ವಿಷ್ಣುವರ್ಧನ

ಕಂ ॥ ತುಳುನಾಡಂ ಮಲೆನಾಡಂ
ತಲಕಾಡಂ ಕೊಂಡು ಮತ್ತೆಯುಂ ತಣಿಯದೆ ಭೂ
ತಳಮಂ ಕಂಚಿವರಂ ಕೊಂ
ಡಳವಡಿಸಿದ ವಿಷ್ಣು ಭೂಭುಜಂ ಕೇವಳಮೇ ॥ 41 ॥

ಗಜವೈದ್ಯ ಜೈತುಗಿ

ಕಂ ॥ ಸಯ್ತು ಪ್ರೌಢವಪುನಿಖಿಳ
ದ್ವೈತಪ್ರವರ್ತ್ತ ಹರಪದ ಭಕುತಿವಿತ್ತಂ
ಜೈಯ್ತು ಪ್ರಾಕೃತನೇನಾ
ಧ್ಯಾಯಿಯೊ ಶೇಷಭಿಷಗುವೈದ್ಯಾಭರಣಂ ॥ 42 ॥

ಮಾದಿಗೌಡ

ಕಂ ॥ ಪರಮ ಪದಮಧುರ ಮಧುಪಂ
ಪರವನಿತಾ ಸುರತ ವಿರತ ಮಾನೋಂನತನುಂ
ಪರಿಪೂರ್ಣ್ಣ ಗುಣನುತಂ
ಪರಹಿತನಿರುತಂ ಮಾದಿಗವುಂಡನೆಂಬುದನಱಿಯಾ ॥ 43 ॥

ಹೆಗ್ಗಡೆ ಮುದ್ದ

ಕಂ ॥ ಗುಣಿಯೆಂದಾಶ್ರಿತಚಿಂತಾ
ಮಣಿಯೆಂದು ಕರುಣದೆಯದೊದಪಿದ ಕುಧರದ ಸತು
ಕಣಿಯೆಂದು ಧೈರ್ಯ್ಯಚೂಡಾ
ಮಣಿಯೆಂದು ಹೆಗ್ಗಡೆ ಮುದ್ದನಂ ಹೊಗಳುವದೂ ॥ 44 ॥

ವಾಮಜೀಯ

ಹರಿಣೀ ವೃತ್ತ ॥ ವಿಪುಳತಪ ಲಕ್ಷ್ಮೀಕಾಂತಂ ಧರ್ಮ್ಮನಿರ್ಮ್ಮಳ ಭಾವನುಂ
ಸಫಳ ದಯಿತಾ ವಿಖ್ಯಾತಂ ಶಾನ್ತ ಚಿತ್ತಮನುತ್ತಮಂ
ನಿಪುಣ ಶಿವಶಾಸ್ತ್ರಾಸಾರಂ ಪೂಗ ಮಂಗಳಭೂಷಣಂ
ತಪಸಿ ಮುನಿಪಂ ವಾಮಂ ಗೀರ್ವ್ವಾಣನಾಮ ಲಲಾಮನುಂ ॥ 45 ॥

13) ಉಂಡಿಗನಾಳು 246, E.C. X (R), ಕ್ರಿಶ. 1139

ಇದರಲ್ಲಿ ಹೊಯ್ಸಳ ದೊರೆಯಾದ ವಿಷ್ಣುವರ್ಧನನ ಆಳಿಕೆಯಲ್ಲಿ ಕೇಸರಿಜೆಟ್ಟಿ ಒಂದು ದೇವಸ್ಥಾನವನ್ನು ಕಟ್ಟಿಸಿದಂತೆ ಹೇಳಿದೆ.

ಕಂ ॥ ಕೇಸರಿಗೆ ಶೌರ್ಯದೊಳ್ ದೊರೆ
ಕೇಸರಿ ಬಹುಬಂಧಮಲ್ಲವಿದ್ಯಾಬಲದೊಳ್
ಶಾಸಿತಮುಷ್ಟಿಕ ಚಾಣೂ
ರಾಸುರನೊಬ್ಬನೆ ಸಮಾನಮಾಶ್ರೀಕೃಷ್ಣಂ ॥ 46 ॥

ಕಂ ॥ ಪೆಸರುಂ ತನ್ನಯ ಕೀರ್ತಿಯು
ಯೆಸೆದಾಚಂದ್ರಾರ್ಕತಾರಮೊಪ್ಪುವಿನಂ ಮಾ
ಡಿಸಿದಂ ದೇಗುಲಮನಿದಂ
ವಸುಧಾವಧುವಿಂಗೆ ರತ್ನಭೂಷಣಮೆನಿಸಲ್ ॥ 47 ॥

14) ಕೆಲ್ಲಂಗೆರೆ 149, E.C. X (R), ಕ್ರಿಶ. 1142

ಕಲ್ಯಾಣದ ಚಾಲುಕ್ಯರ ದೊರೆ ಆರನೆಯ ವಿಕ್ರಮಾದಿತ್ಯನ ಆಳಿಕೆಯಲ್ಲಿ ಹೊಯ್ಸಳರ ದೊರೆ ವಿಷ್ಣುವರ್ಧನನು ಸಾಮಂತನಾಗಿದ್ದ. ತೆಲ್ಲಿಗ ಸಮುದಾಯದ ಜಕ್ಕವ್ವೆ ಎಂಬುವವಳು ಗ್ರಾಮೇಶ್ವರ ದೇವರ ಪ್ರತಿಷ್ಠೆ ಮಾಡಿಸಿದುದನ್ನು, ಹರಿಹರಪುರ/ಕೆಲ್ಲಂಗೆರೆಯ ಬ್ರಾಹ್ಮಣರು, ದೇವರ ಸೇವೆಗೆ ದತ್ತಿಯನ್ನು ನೀಡಿದುದನ್ನು ಇದರಲ್ಲಿ ಹೇಳಿದೆ.

ಬ್ರಾಹ್ಮಣರು

ಕಂ ॥ ಬಲ್ಲಿದರು ತೊಡರ್ದರ್ಡಾರ್ಗಂ
ಮೆಲ್ಲಿದರಿಷ್ಟತ್ವದೆಡೆಗೆ ಶಾಸ್ತ್ರೋಕುತಿಯಿಂ

ದಲ್ಲದೆ ನುಡಿಯರ್ ನುಡಿವಡೆ
ಕೆಲ್ಲಂಗೆಜೆಯೆಸೆವ ವಿಪ್ರರೇಂ ಕೇವಳವೇ ॥ 48 ॥

15) ಕರುಗುಂದ 241, E.C. X (R), ಕ್ರಿ.ಶ. 1158

ಇದರಲ್ಲಿ ಹೊಯ್ಸಳ ದೊರೆಯಾದ ಮೊದಲನೆಯ ನರಸಿಂಹನ ದಂಡನಾಯಕ ಶಾಂತಿಯಣ್ಣನು ಕರಿಗುಂದದಲ್ಲಿ ಬಸದಿಯನ್ನು ಮಾಡಿಸಿ ಭೂಮಿಯನ್ನು ದತ್ತಿ ಬಿಟ್ಟಂತೆ ಹೇಳಿದೆ.

ವಿನಯಾದಿತ್ಯ

ಕಂ ॥ ಬಲಿದೊಡೆ ಮಲೆದೊಡೆ ಮಲೆಪರ
ತಲೆಯೊಳ್ ಬಾಳಿಡುವನುದಿತಭಯರಸವಶದಿಂ
ಬಲಿಯದ ಮಲೆಯದ ಮಲೆಪರ
ತಲೆಯೊಳ್ ಕೈಯಿಡುವನೊಡನೆ ವಿನಯಾದಿತ್ಯಂ ॥ 49 ॥

ಎರೆಯಂಗ

ಕಂ ॥ ಆನತರಾಗದ ರಿಪುನೃಪ
ರಾನನಸರಸಿರುಹನಾಳಮಂ ಖಂಡಿಸಲೆಂ
ದಾನೀಳ್ಕುಮದಾನೀಳ್ಕುಮ
ದಾನೀಳ್ಕುಮದೆಱಗನೃಪನ ಭುಜದಸಿಹಂಸಂ ॥ 50 ॥

ತೈಲದಂಡಾಧಿಪ

ಕಂ ॥ ಎರೆದಟ್ಟಿದನ್ಯವಧುಗಂ
ನೆರೆದಾಂತ ವಿರೋಧಿಜನಕೆ ಕಣ್ಣುಂ ಮನಮುಂ
ಪರಿಕಿಸೆ ಸೋಲವೆನಲ್ಕಿಂ
ಧರೆಯೊಳ್ ದೊರೆಯಾರೊ ತೈಲದಂಡಾಧಿಪನೊಳ್ ॥ 51 ॥

ಕಂ ॥ ವರವನಿತೆಯರ್ಗೆ ರಿಪುಗ
ಳ್ಗೆರೆದರ್ಥಿಜನಕ್ಕೆ ತೈಲದಂಡಾಧೀಶಂ
ಹರಿತನಯಂ ಹರಿತನಯಂ
ಹರಿತನಯಂ ಧರೆಯೊಳೆಂದು ಪೊಗೞದರೊಳರೇ ॥ 52 ॥

ಚಾವುಂಡ

ಕಂ ॥ ಆವಾವ ಗುಣಂಗಳೊಳಂ
ಭಾವಿಸುವೊಡೆ ನೋಡ ಜಗದೊಳುಪ್ಪರವಟ್ಟಂ

ಕೇವಳಮೆ ಸಂಧಿವಿಗ್ರಹಿ
ಚಾವುಂಡಂ ಗುಣಕರಂಡನಮೃತದ ಪಿಂಡಂ ॥ 53 ॥

ಜಿನದೇವ

ಕಂ ॥ ಜಿನ್ನಂ ಸಮಸ್ತಗುಣಸಂ
ಪನ್ನಂ ಶಿಷ್ಟೇಷ್ಟತತಿಗೆ ಕೈ ತೀವಿರೆ ಚೆಂ
ಬೊನ್ನಂ ಕುಡುವೆಡೆಗಿನಸುತ
ನನ್ನಂ ಪರಹಿತದೊಳಾ ವಿಯಚ್ಚರನನ್ನಂ ॥ 54 ॥

ಜಗದೇಕಮಲ್ಲ ವಾದಿರಾಜ

ಕಂ ॥ ಆದಿತ್ಯನ ಕೆಲದೊಳ್ ಚಂ
ದ್ರೋದಯಮೆಸೆಯದವೊಲೀ ಧರಾಮಂಡಳದೊಳ್
ವಾದಿಗಳೆವೆಂಬ ಟುಂಟುಕ
ವಾದಿಗಳೆಸೆದಪರೆ ವಾದಿರಾಜನ ಸಭೆಯೊಳ್ ॥ 55 ॥

ಶ್ರೀಪಾಲ ತ್ರೈವಿದ್ಯ

ಕಂ ॥ ಆವನ ವಿಷಯಮೊ ಷಟ್ತ
ರ್ಕಾವಿಳಬಹುಭಂಗಿಸಂಗತಂ ಶ್ರೀಪಾಲ
ತ್ರೈವಿದ್ಯಗದ್ಯಪದ್ಯವ
ಚೋವಿನ್ಯಾಸಂ ನಿಸರ್ಗವಿಜಯವಿಳಾಸಂ ॥ 56 ॥

16) ಕೆಲ್ಲಂಗೆರೆ 160, E.C. X (R), ಕ್ರಿಶ. 1161

ಇದರಲ್ಲಿ ಹೊಯ್ಸಳ ದೊರೆಯಾದ ಮೊದಲನೆಯ ನರಸಿಂಹನ ಆಳಿಕೆಯಲ್ಲಿ ಕೆಲ್ಲಂಗೆರೆಯ ಮಹಾಜನರು ಧರ್ಮೇಶ್ವರ ದೇವರಿಗೆ ಭೂಮಿಯನ್ನು ದತ್ತಿ ಬಿಟ್ಟಂತೆ ಹೇಳಿದೆ.

ಕೆಲ್ಲಂಗೆರೆ

ಉ ಮಾ ॥ ಗ್ರಾಮಶಿರೋಮತ್ತನೀಯನಮರೇಂದ್ರಪುರಕ್ಕತಿರಂಮ್ಯಮಪ್ಪುದಂ
ತಾಮಸ ರಾಜಸೆಂಬೆರಡು ಬುದ್ಧಿಯೊಳಲ್ಲದೆ ಸತ್ವಬುದ್ಧಿಯಿಂ
ದಾಮಹಿಪಾಲಕಂ ಮಹಿಪರಾಭರಣಂ ಕುಡೆ ವಿಷ್ಣುಭೂಭುಜಂ
ಸೋಮಪಭೂಷಣ ದ್ವಿಶತರಿಂದ ಕೆಲ್ಲಂಗೆಱೆ ರಮ್ಯಮಾಗಳುಂ ॥ 57 ॥

ಶಿವಸ್ತುತಿ

ಶಾ ವಿ ॥ ಶ್ರೀಮಚ್ಚಂದ್ರಕಳಾವತಂಸನನಘಂ ಗೋಕ್ಷೀರಶುಭ್ರಪ್ರಭಂ
ಸಾಮಾರುಗ್ಯಜಾಥರ್ವಣಸ್ತುತನಹೀಂದ್ರಸ್ಯೋಪವೀತಂ ಶಿವಂ

ಸೋಮಾರ್ಕ್ಕಾನಳನೇತ್ರನೊಪ್ಪುವಮೃತೇಶಂ ದೇವದೇವೋತ್ತಮಂ
ಶ್ರೀಮನ್ ಮಂತ್ರಿ ನಿಧಾನನಪ್ಪ ಕಲಿದೇವರಿಗೀಗೆ ದೀರ್ಘಾಯುವಂ ॥ **58** ॥

ವಿಷ್ಣುವರ್ಧನ

ಕಂ ॥ ಮಲೆರಾಜರಾಜನೆನಿಪಂ
ಕಲಿಕಾಲಯುಧಿಷ್ಠಿರಂ ಚರಿತ್ರದಿನೆನಿಪಂ
ಬಲಿಶಿಬಿಖಚರೇಶ್ವರರಿಂ
ಸಲೆಯಧಿಕಂ ದಾನದೆಡೆಗೆ ವಿಷ್ಣುನೃಪಾಲಂ ॥ **59** ॥

ನರಸಿಂಹ I

ಚಂ ಮಾ ॥ ಅರಿನರಪಾಲಕೋಗ್ರಮದಕುಂಭಿವಿಷಾಣಮನೊತ್ತಿ ಕಿಟ್ಟಿ ಮಾ
ಣ್ದಿರದೆ ಕಜುತ್ತು ಪೊಯ್ಯೆ ಬಿದುವಿಂ ಶ್ರಿಗುಮೌಕ್ತಿಕಮುಣ್ಮಿ ಪಾಯೆ ಭೀ ?
ಕರತರಮಪ್ಪ ತನ್ನ ನಖಶಾಖೆಗಳಿಂದಮೆ ಸೀಳ್ವನಾಗಳುಂ
ನರಹರಿಯಂತಿರನ್ಯನೃಪಸಿಂಧುರಮಂ ನರಸಿಂಹಭೂಭುಜಂ ॥ **60** ॥

ಕೆಲ್ಲಂಗೆರೆ

ಉ ಮಾ ॥ ಭೃಂಗನಿನಾದದಿಂ ಪಿಕನಿನಾದಿನೊಳ್ಗಿಳಿವಿಂಡಿನೋಳಿಯಿಂ
ಮಂಗಳಲಕ್ಷ್ಮಿಯಿರ್ಪ ವನದಂತಿರೆ ಶೋಭಿಸುವಾ ಬನಂಗಳಿಂ
ತುಂಗತರಂಗದಿಂದೆಸೆದು ತೋರ್ಪ ತಟಾಕದಿನೊಳ್ಪುವೆತ್ತ ಕೆ
ಲ್ಲಂಗೆಱೆಯಂದಮಿಂದ್ರನಮರಾವತಿಯಂತೆ ಬಸಂತಮಾಗಳುಂ ॥ **61** ॥

17) ಪುಲ್ಲೇಕೆರೆ 184, E.C. X (R), ಕ್ರಿಶ. 1162

ಇದರಲ್ಲಿ ಹೊಯ್ಸಳ ದೊರೆಯಾದ ಮೊದಲನೆಯ ನರಸಿಂಹನ ಮಹಾಪ್ರಧಾನ ಶ್ರೀಕರಣದ ಬೂಚಿರಾಜನು ಹುಲ್ಲೆಯಕೆರೆಗೆ ಸೋಮನಾಥಪುರವೆಂದು ಹೆಸರಿಟ್ಟು ಅಗ್ರಹಾರವನ್ನು ಮಾಡಿ ಬ್ರಾಹ್ಮಣರಿಗೆ ದತ್ತಿ ಬಿಟ್ಟಂತೆ ಹೇಳಿದೆ.

ನರಸಿಂಹ I

ಮ ವಿ ॥ ನುತಧರ್ಮ್ಮಂ ರಿಪುಭೀಮನರ್ಜುನಯಶಂ ವಿದ್ವಿಷ್ಟಭೂಭೃದ್ಯಮಂ
ಕ್ಷಿತಿರಾಮಂ ಕೃತಸೀಮೆಗೀತಭರತಂ ಭಾಸ್ವತ್ಸುಮಿತ್ರೋದ್ಭವ
ಕ್ಷಿತಿಪಾಳಂ ನರಸಿಂಹದೇವನವನೀಶತ್ರುಘ್ನನನ್ತುದ್ಭಭಾ
ರತ ರಾಮಾಯಣ ಪೂರ್ವ ಪುಣ್ಯ ಪುರುಷ ಪ್ರಖ್ಯಾತಿಯಂ ತಾಳ್ದಿದಂ
॥ **62** ॥

ಬೂಚಿರಾಜ

ಮ ವಿ ॥ ಕಡೆದೀಡಾಡಿದ ಹಿಪ್ಪೆ ದುಗ್ಧನಿಧಿ ತಾಂ ಚಂದ್ರಂ ಕಳಂಕಾಂಕಿತಂ
ಮೃಡಶೈಳಂ ಬಜ಼ಿ ಬೆಳ್ಳಿ ಕಟ್ಟು ಹಿಮವನ್ತಂ ಮಂಜು ರುದ್ರಾಂಗವ
ಪ್ಪಡೆ ಮಾತೇಂ ವಿರಹಾರ್ತ್ಥವಿನಸುಂ ಸಚ್ಛಿದ್ರಮೆಂದೆಂದ x x x ?
x ಡೆ ಬೆಂಗಕೊಳ್ವುದು ಬೂಚಿರಾಜನ ಯಶಃಶ್ರೀ ಪರ್ವಿ ಮೂಲೋಕಮಂ
॥ 63 ॥

ಮ ವಿ ॥ ವದನಂ ಪಂಕಜವಕ್ಷಿಮತ್ಸ್ಯವುದರಂ ನೀರಂ ಪದಂ ಕೂರ್ಮ್ಮವು
ನ್ಮದ ಚಕ್ರಂ ಕು x x ಗೆ ಕಂನೆಗೆಜ಼ೆಯಂ ವಿಪ್ರೋತ್ತಮರ್ಗ್ಗಿತ್ತು ಮಂ
ತ್ರದ ಸಂಪೂರ್ಣ್ನತೆಯಿಂದದೆಯ್ದೆ ತಳೆದಂ ಕನ್ಯಾಂನಗೋ ಭೂಮಿ ದಾ
ನದ ಸತ್ ಪುಣ್ಯಮನೇಂ ನೃಸಿಂಹ ಸಚಿವಂ ವಿಪ್ರಪ್ರಿಯ ಬೂಚಣಂ
॥ 64 ॥

ಉ ಮಾ ॥ ಶ್ರೀಯ ಮನಃಪ್ರಿಯಂ ಜನಿತಕಾಮನಿಳಾಪ್ರಿಯನಬ್ಜಶಂಖಲ
ಕ್ಷ್ಮಾಯತಹಸ್ತನಾತ್ತವಿಜಯಂ ದ್ವಿಜರಾಜಸುಸೇವಿತಂ ಬಲ
ಜ್ಯಾಯನಭೇದ್ಯಮಂತ್ರಕುಶಲಂ ಬಲಿಬಂಧನನಂತೆ ರಾಯನಾ
ರಾಯಣನೆಂಬುದುರ್ವ್ವಿ ನರಸಿಂಹನರೇಂದ್ರನ ಮಂತ್ರಿ ಬೂಚನಂ ॥ 65 ॥

ಮ ವಿ ॥ ಪರಭೂಪಾಳಕಜಿಷ್ಣು ಶತ್ರುದಹನಂ ದುಷ್ಟಾರಿಕಾಲಂ ಮನೋ
ಹರಮಂತ್ರೋನ್ನತಿರಾಕ್ಷಸಂ ಭುವನಪಂ ಸಮ್ಯಗ್ಗುಣಸ್ಪರ್ಶನಂ
ವರವಿತ್ತೇಶನುಮೇಶನಂತಖಿಳದಿಕ್ಪಾಳಪ್ರಭಾವಾನ್ವಿತಂ
ನರಸಿಂಹಪ್ರಿಯಮಂತ್ರಿ ಮಂತ್ರವಿಳಸದ್ವಿದ್ಯಾಚಣಂ ಬೂಚಣಂ ॥ 66 ॥

ಚಂ ಮಾ ॥ ವಿನಯದ ಬೆಟ್ಟು ವೀರರಸದಾಗರಮೊಳ್ಪಿನ ಕೂರ್ಪು ಮಿಕ್ಕಮಾಂ
ತನದ ತವರ್ ವಿಧಾನನಿಳಯಂ ಜಯಲಕ್ಷ್ಮಿಯ ರಮ್ಯಹರ್ಮ್ಯಮಾ
ಳ್ದನ ಮನಮಾಶ್ರಿತಾಳಿಕವಚಂ ಬುಧಬಾಂಧವಕಾಮಧೇನು ಸ
ಜ್ಜನನಿಧಿಯೆಂಬುದುರ್ವ್ವಿ ವಿಭುಬೂಚಿಯನಾಹವಸವ್ಯಸಾಚಿಯಂ ॥ 67 ॥

18) ಕರಿಗುಂದ 242, E.C. X (R), ಕ್ರಿಶ. 1162

ಇದರಲ್ಲಿ ಹೊಯ್ಸಳ ದೊರೆ ಮೊದಲನೆಯ ನರಸಿಂಹನ ಆಳಿಕೆಯಲ್ಲಿ ಬಾಚಿಯಣನ ಮಗ ಮಾಚೆಯ್ಯನು ದೇವಾಲಯವನ್ನು ಮಾಡಿಸಿ, ಮಾದೇಶ್ವರದೇವರಿಗೆ ಭೂಮಿಯನ್ನು ದತ್ತಿ ನೀಡಿದುದನ್ನು ಹೇಳಿದೆ.

ಗುಜ್ಜಲದೇವಿ

ಕಂ ॥ ಭಾಗ್ಯವತಿ ರೂಪಗುಣವತಿ
ಯೋಗ್ಯವತಿ ಭೋಗವತಿ ಯಶವತಿ ಪ್ರಭವತಿ
ಪ್ರಗ್ನಾವತಿ ಪತಿಹಿತಸ
ಶ್ಲಾಗ್ಯತ್ಯವತಿ ಗುಜ್ಜಲದೇವಿ ಮಹಾಸತಿ ತಾಂ ॥ 68 ॥

ಕಂ ॥ ಯೆಸೆಗುಂ ಮೂಱುಂ ಜಗದೊಳ್
ಪಸರಿಸುಗುಂ ದೆಸೆಗಳ್ ನಭಮಂ ತೀವುವಿನಂ
ವಸುಮತಿ ದಿವಮಣಿಕಿರಣಂ
ಸಸಿಯುಳ್ಳಿನಂ ಜಸ ನಿಲ್ಕು ಗುಜ್ಜಲದೇವಿಯಾ ॥ 69 ॥

ಮಾದಿಗೌಡ

ಕಂ ॥ ಸದುಗುಣದ ಸತ್ಯದ ತವ
ರ್ಮೊದಲೀಶ ಸದನವಿದಿತಪುರಸ್ಸರ ಮನನುಂ
ನಿಧಿ ಬೇಡಜನದ ಹೆಗ್ಗಡೆ
ಮಾದೀ ದಯಾಳುವೆಂದು ಪೊಗಳ್ಗುಂ ಲೋಕಂ ॥ 70 ॥

ಚಂ ಮಾ ॥ ಮಹಿಮೆ ನಿಜಂ ಗುಣೋಂನ್ನತಿ ನಿಜಂ ಬಲಮುಂ ಚಲಮುಂ ನಿಜಂ ಕುಲಂ
ಮಹಿಮೆ ನಿಜಂ ಧನಾಗಮಬಲಂ ಹಿತಧರ್ಮ್ಮಬಲಂ ನಿಜಂ ಸತೀ
ಮಹಿಮೆ ನಿಜಂ ಸುತಾನುಬಲಬಂಧು ಬಲೋನ್ನತಿ ತಾಂ ನಿಜಂ ನಿಜಂ
ಮಹಿಮೆಯೆ ಮಾಲಗಯ್ದ ಮಹದೇವಗವುಂಡ ಗುಣಂಗಳಿನ್ನಿಜಂ ॥ 71 ॥

19) ಬಂದೂರು 268, E.C. X (R), ಕ್ರಿಶ. 1168

ಇದರಲ್ಲಿ ಹೊಯ್ಸಳ ದೊರೆಯಾದ ಎರಡನೆಯ ಬಲ್ಲಾಳನ ಆಳಿಕೆಯಲ್ಲಿ ಬೆಳ್ಳಿಯ ದಾಸಿಸೆಟ್ಟಿಯ ಸೋದರಳಿಯಂದಿರಾದ ಮಾದಿರಾಜ, ಶಂಕರಸೆಟ್ಟಿಯರು ಕೆಲವು ಬಸದಿಗಳಿಗೆ ಭೂಮಿಯನ್ನು ದತ್ತಿ ಬಿಟ್ಟಂತೆ ಹೇಳಿದೆ.

ವಿಷ್ಣುವರ್ಧನ

ಮ ವಿ ॥ ಮಲೆಯಂ ಸಾಧಿಸಿ ಮಾಣ್ದನೇ ತಳವನಂ ಕಾಂಚೀಪುರಂ ಕೋಯತೂರ್
ಮಲೆನಾಡಾ ತುಳುನಾಡು ನೀಲಗಿರಿಯಾ ಕೋಳಾಲಮಾ ಕೊಂಗು ನಂ
ಗಲಿಯುಚ್ಚಂಗಿ ವಿರಾಟರಾಜನಗರಂ ವಲ್ಲೂರಿವೆಲ್ಲಂ ಭುಜಾ
ಬಲದಿಂ ಲೀಲೆಯ ಸಾಧ್ಯಮಾದುದೆಣೆಯಾರ್ ವಿಷ್ಣುಕ್ಷಮಾಪಾಳನೊಳ್
॥ 72 ॥

ಬಲ್ಲಾಳ II

ಮ ವಿ ॥ ವಿನಯಶ್ರೀನಿಧಿಯಂ ವಿವೇಕನಿಧಿಯಂ ಬ್ರಹ್ಮಣ್ಯನಂ ಪೂರ್ಣಮು
ಣ್ಯನನುದ್ದಾಮಯಶೋರ್ಥಿಯಂ ಜಿತಜಗತ್ತ್ರಯ್ಯರ್ಥಿಯಂ ಸರ್ವಸ
ಜ್ಜನಸಂಸ್ತುತ್ಯನನುದ್ಧವದ್ವಿತರಣ ಶ್ರೀವಿಕ್ರಮಾದಿತ್ಯನಂ
ಮನುಜೇಶರ್ ಮಲೆರಾಜರಾಜನನದೇಂ ಬಲ್ಲಾಳನಂ ಪೋಲ್ವರೇ ॥ 73 ॥

ಶ್ರೀಪಾಲಯೋಗಿ

ಮ ವಿ ॥ ತಮಗಾಜ್ಞಾವಶಮಾದುದುನ್ನತಮಹೀಭೃತ್ಕೋಟಿ ತಮ್ಮಿಂದೆ ಬಿ
ಣ್ಪಮರ್ದತ್ತಿೀಧರೆಗೆಯ್ದೆ ತಮ್ಮ ಮುಖದೊಳ್ ಷಟ್ತರ್ಕವಾರಾಶಿವಿ
ಭ್ರಮಮಾಪೋಶನಮಾತ್ರಮಾದುದೆನಲಿಂ ಮಾತೇನಗಸ್ತ್ಯಪ್ರಭಾ
ವಮುಮಂ ಕೀೞ್ಪಡಿಸಿತ್ತು ಪೆಂಪಿನೆಸಕಂ ಶ್ರೀಪಾಲಯೋಗೀಂದ್ರರಾ ॥ 74 ॥

ಬೆಳ್ಳಿಯ ದಾಸಿಸೆಟ್ಟಿ

ಮ ಸ್ರ ॥ ಪಡೆವಂ ಸದ್ಧರ್ಮಮರ್ಯಾದೆಯೊಳೆ ಪರದುಗೆಯ್ದರ್ಥಮಂ ನ್ಯಾಯದಿಂದಂ
ಪಡೆದರ್ಥಂ ದೇವತಾಪೂಜೆಗೆ ಬಸದಿಗೆ ಶಿಷ್ಟೇಷ್ಟದಾನಕ್ಕೆ ನಿಚ್ಚಂ
ಕುಡೆ ಮತ್ತಂ ತನ್ನ ಭಾಗ್ಯಂ ತವನಿಧಿಯೆನೆ ನೀಳ್ದುಣ್ಮಿ ಕೆಯ್ಗಣ್ಮೆ ಪೆಂಪಂ
ಪಡೆದಂ ದಾಸಂ ವಿಯನ್ಮಂಡಪಕಳಿತಯಶಃಕಲ್ಪವಲ್ಲೀವಿಳಾಸಂ ॥ 75 ॥

20) ಬೆಂಡೆಕೆರೆ 51, E.C. X (R), ಕ್ರಿ.ಶ. 1171

ಇದರಲ್ಲಿ ಹೊಯ್ಸಳ ದೊರೆಯಾದ ಎರಡನೆಯ ಬಲ್ಲಾಳನ ಆಳಿಕೆಯಲ್ಲಿ ಜಯಗೊಂಡಪುರದ ಜನರು ಸಿರಿಧರದೇವರ ನಂದಾದೀವಿಗೆಗೆ ಹೊನ್ನನ್ನು ದಾನ ಕೊಟ್ಟಂತೆ ಹೇಳಿದೆ.

ಹೊಯ್ಸಳವಂಶ

ಕಂ ॥ ಸ್ವಸ್ತಿ ಶ್ರೀಯಿರ್ಪುತ್ತಮ
ವಾಸ್ತು ಜಯಶ್ರೀಯ ವಿಲಸಿತಾವಾಸಂ ಲೋ
ಕಸ್ತುತ್ಯೆ ಯಶೋವನಿತೆಯ
ವಿಸ್ತಾರಸ್ಥಾನಮೆಸೆವ ಹೊಯ್ಸಳವಂಶಂ ॥ 76 ॥

ವಿಷ್ಣುವರ್ಧನ

ಕಂ ॥ ಮುನಿಸಿಂದರುಣಂತೆ ಕಡೆಗೆ
ಣ್ಗಿನಿಸೊದವೆ ವಿರೋಧಿನರಪಸಪ್ತಾಂಗಂ ವಿ
ಷ್ಣುನೃಪಾಳಂಗಪ್ಪುವು ನೋ
ಡನುಪಮಮವನಳವಿಯಿತರರಳವಿಯೆ ಜಗದೊಳ್ ॥ 77 ॥

ಮ ವಿ ॥ ಬುಧಲೋಕಾಶ್ರಯನೆಂಬ ತಾರ್ಕ್ಷ್ಯರಥನೆಂಬಬ್ಜಾಯತಾಕ್ಷಂ ದಲೆಂ
ಬ ಧರಾಧಾರಕನೆಂಬ ಭೋಗಯುತನೆಂಬುದ್ಯದ್ಬಲಾನ್ವಿತನೆಂ
ಬ ಧರಿತ್ರೀವರನೆಂಬ ಲೋಕನುತನೆಂಬೀ ಪೆರ್ಮೆಯಿಂ ನೋಡೆ ವಿ
ಷ್ಣುಧರೇಶಂ ಸಲೆ ವಿಷ್ಣುವೋಲ್ ಸೊಗಯಿಪಂ ಲಕ್ಷ್ಮೀಮನೋವಲ್ಲಭಂ
॥ 78 ॥

ನರಸಿಂಹ I

ಚಂ ಮಾ ॥ ಕದನದೊಳಾಂತರಾತಿಗಳ ದಂತಿಯ ದಂತಮನೊತ್ತಿ ಕಿಬ್ಬು ತ
ದ್ಬಿದುವನೆ ಪೊಯ್ಯೆ ಪೋಬ್ದು ಪೊಱಪೊಣ್ಮೆ ಸರಕ್ತಕಮೌಕ್ತಿಕಂಗಳಾ
ಪದದೊಳವಂ ಜಯಾಂಗನೆಗೆ ಹಾರಮನೊಪ್ಪಿರೆ ಮಾಬ್ಪನೆಂದೊಡಾರ್
ಕದನದೊಳಾಂಪಿದಿರ್ಚುವದಟರ್ ಜಗದೊಳ್ ನರಸಿಂಹಭೂಪನಂ
॥ 79 ॥

ಕಂ ॥ ಕದನದೊಳಿದಿರ್ಚಿದದಟರ
ಮದರದನಿಯ ಬಿದುವಿನಲ್ಲಿ ನಟ್ಟಿ ಸರಲ್ ಬಾ
ಲದ ಮೊದಲೊಳುಚ್ಚಳಿಸುವೊಂ
ದದಟಾ ನೃಪನಾರಸಿಂಹದೇವಂಗೆ ನಿಜಂ ॥ 80 ॥

ಬಲ್ಲಾಳ II

ಕಂ ॥ ಅನುಪಮರಣನಿಸ್ತಾರಕ
ನನೂನಶಕ್ತ್ಯನ್ವಿತಂ ವಿಚಾರಕ್ಷಮನೆಂ
ಬ ನೆಗೞ್ತೆಯಿಂದೆ ಬಲ್ಲಾ
ಳನೃಪಾಳಂ ಕಾರ್ತಿಕೇಯನಂತೊಪ್ಪಿರ್ಪಂ ॥ 81 ॥

ಜಯಗೊಂಡಪುರ

ಚಂ ಮಾ ॥ ತುಱುಗಿದ ನಂದನಂ ಪರಿವ ಕಾಲ್ವೆ ಕಡಲ್ಗಿವೆ ತೋಡೆನಿಪ್ಪ ಪೆ
ರ್ಗ್ಗೞೆ ಬಳಸಿರ್ದ ಪೆರ್ವೆಳಸು ಸಂದಣಿವೆತ್ತ ಜನಂ ವಿಳಾಸದಿಂ
ಮೆಱೆವಮರಾಲಯಂ ಬಹುಗೃಹಂಗಳ ಗುಣ್ಪೆವಱಿಂದೆ ಚೆಲ್ವು ಕ
ಣ್ದೆಱೆದವೊಲೀ ಜಗಕ್ಕೆ ಜಯಗೊಂಡಪುರಂ ನಿಸದಂ ವಿರಾಜಿಕುಂ ॥ 82 ॥

ನಾಗದೇವ

ಚಂ ಮಾ ॥ ಹೃದಯಕಳಂಕನಲ್ಲದ ಜಡಾತ್ಮಕನಲ್ಲದ ಶೀತರೋಚಿಯೆಂ
ಬುದು ಗುರುಗೋತ್ರಶತ್ರುವಣಮಲ್ಲದ ಕೌಶಿಕನಲ್ಲದಿಂದ್ರನೆಂ

ಬುದು ವಿಪರೀತನಲ್ಲದ ಕುಜನ್ಮಕನಲ್ಲದ ಕಲ್ಪವೃಕ್ಷಮೆಂ
ಬುದು ವಿಬುಧಾಶ್ರಯೈಕನಿಧಿಯಂ ಧರೆ ದುಮ್ಮನ ನಾಗದೇವನಂ ॥ 83 ॥

21) ಅರಸೀಕೆರೆ 23, E.C. X (R), ಕ್ರಿಶ. 1173

ಇದರಲ್ಲಿ ಹೊಯ್ಸಳ ದೊರೆ ಎರಡನೇ ಬಲ್ಲಾಳನ ಆಳಿಕೆಯಲ್ಲಿ, ಅರಸಿಯಕೆರೆಯ ಚೆನ್ನಕೇಶವ ದೇವರಿಗೆ ಮಹಾಪ್ರಧಾನ ಹರಿಹರನು ನೀಡಿದ ದತ್ತಿಯನ್ನು ಹೇಳಿದೆ. ಈ ಶಾಸನವನ್ನು ಕವಿರಾಜ ದೇವಪಾರ್ಯನು ರಚಿಸಿದ್ದಾನೆ.

ಬಲ್ಲಾಳ II

ಶಾ ವಿ ॥ ಶ್ರೀಕಾಂತ ದೃಢ ಸಂಗಮೋಪಜನಿತಾಹ್ಲಾದಂ ಭುಜೋಪಾರ್ಜ್ಜಿತೋ
ರ್ವ್ವೀಕಾಂತಾರಮಣಂ ದ್ವಿಷದ್ಬಲಿಕುಲಪ್ರಧ್ವಂಸನೋಪಾಯ ಶೌ
ರ್ಯಾರ್ಕೀರ್ಣ್ಣೋರ್ಜ್ಜ್ವಳಕೀರ್ತ್ತಿಮತ್ಸಮಗುಣಂ ತಾನೆಂದು ರಕ್ಷಿಕ್ಕೆ ಲ
ಕ್ಷ್ಮೀಕಾಂತಂ ವಿಜಯಾವಹ ಪ್ರಣಯಿಯಂ ಬಲ್ಲಾಳಭೂಪಾಳನಂ ॥ 84 ॥

ಮ ಸ್ರ ॥
ಕರಿನಕ್ರಾಭೀಳ ಹೇಷಾರವಯುತ ಹಯ ಸಂದೋಹವೀಚೀ ಪದಾತಿ
ಸ್ಫುರದುತ್ತಾಲೀನ ಕೋಳಾಹಳ ಸಮರ ಮಹಾಂಬೋಧಿಯೊಳ್ತಂನ ದೋರ್ಮ್ಮಂ
ದರದಿಂದಂ ಮನ್ದರಾರಂಭಮನೊದವಿಸಿ ವೈರಿಕ್ಷಮಾಪಾಳ ಲಕ್ಷ್ಮೀ
ಕರಿಜಾತ್ಯಶ್ವಂಗಳಂ ಕೊಂಡತುಳಬಳಯುತಂ ವೀರಬಲ್ಲಾಳಭೂಪಂ ॥ 85 ॥

ಮ ಸ್ರ ॥
ಸುರರಾಜೇಭಮದಾನ್ಧಂ ಮಧುಪಕುಳಯುತಂ ಪುಂಡರೀಕಂ ಸದಾನೀ
ಚರತಂ ಗಂಗಾಹ್ರದಂ ಚಂದ್ರನರುಚಿ ಸಲೆ ದೋಷಾವಿಳಂ ತಾನೆನಲ್ ಪೇ
ಳ್ದೊರೆಯೇ ಬಲ್ಲಾಳಭೂಪಾಳನ ವಿಶದ ಯಶೋಲಕ್ಷ್ಮಿಯೊಳ್ ವರ್ಣ್ನಸಾಮ್ಯಂ
ಪಿರಿದುಂ ತಾನಾದೊಡಂ ನಿರ್ಮ್ಮಳಗುಣದಿನವಂ ಪೋಲಿಸಲ್ ಬಲ್ಲನಾವಂ ॥ 86 ॥

ಕೇಸಿರಾಜ

ಕಂ ॥ ಮಾರಂಗೆ ಸಾಂಗ ಮದನಾ
ಕಾರಂಗೆ ಪರಾಂಗನಾವಿದೂರಂಗೆ ಸದಾ
ಧೀರಂಗೆ ಸಕಳ ವಿಬುಧಾ
ಧಾರಂಗೆ ಸಮಾನರೆನಿಪ ಮಾನವರೊಳರೇ ॥ 87 ॥

22) ಹಿರೀಕಲ್ಲುಬೆಟ್ಟ 129, E.C. X (R), ಕ್ರಿಶ. 1174

ಇದರಲ್ಲಿ ಹೊಯ್ಸಳ ದೊರೆಯಾದ ಎರಡನೆಯ ಬಲ್ಲಾಳನ ಆಳಿಕೆಯಲ್ಲಿ ಕೇತಮಲ್ಲ ಮೊದಲಾದವರು ಅರೆಯ ಶಂಕರದೇವರಿಗೆ ಭೂಮಿಯನ್ನು ದತ್ತಿ ಬಿಟ್ಟಂತೆ ಹೇಳಿದೆ.

ಬಲ್ಲಾಳ II

ಚಂ ಮಾ ॥ ಕುಲಕೆ ಕಳಂಕಮಿಲ್ಲದ ವಿಶುದ್ಧಚರಿತ್ರದ ಕಲ್ಪಭೂಜಮಂ
ತೊಲತೊಲಗೆಂಬ ದಾನಗುಣದಾಂತರನುಗ್ರಭುಜಾಸಿಧಾರೆಯಿಂ
ಜಲಕನೆ ಮಾಡಿ ಸಗ್ಗಮನೆ ಮುಟ್ಟಿಸುವರ್ಜುನಸಚ್ಚರಿತ್ರಮ
ಗ್ಗಲಿಸಿದುದೆಂದು ಬಣ್ಣಿಪುದು ಬಲ್ಲುನೃಪಾಳನನೀ ಜಗಜ್ಜನಂ ॥ 88 ॥

ಕೇತಮಲ್ಲ

ಚಂ ಮಾ ॥ ಪುರುಷನಿಧಾನನೆಂದು ಪುರುಷಾರ್ಥಪುರೂರವನೆಂದು ಸತ್ಕವೀ
ಶ್ವರಜನವಂದ್ಯನೆಂದು ಧರೆ ಬಣ್ಣಿಸುತಿರ್ಪುದು ಕೇತಮಲ್ಲನಂ
ಪರಹಿತಖೇಚರಾಧಿಪನನೀ ಕಲಿಕಾಲದ ಕಲ್ಪಭೂಜನಂ
ವರಗುಣಿ ಮಂತ್ರಿಮಾನವಶಿಖಾಮಣಿಯಂ ಜಸದರ್ಥಿಗಂಡನಂ ॥ 89 ॥

23) ಮುರುಂಡಿ 227, E.C. X (R), ಕ್ರಿಶ. 1174

ಇದರಲ್ಲಿ ಹೊಯ್ಸಳ ದೊರೆಯಾದ ಎರಡನೆಯ ಬಲ್ಲಾಳನ ಮಹಾಪ್ರಧಾನ ಎರೆಯಣ್ಣನು ನಾರಸಿಂಹಪುರದೊಳಗೆ ಪಾಠಶಾಲೆಗಾಗಿಯೂ ವಿದ್ಯಾರ್ಥಿಗಳ ಭೋಜನಕ್ಕಾಗಿಯೂ ಮುರಿಹಿಂಡಿಯೆಂಬ ಗ್ರಾಮವನ್ನು ದತ್ತಿಯಾಗಿ ಬಿಟ್ಟಂತೆ ಹೇಳಿದೆ.

ನರಸಿಂಹ I

ಕಂ ॥ ವಿಷ್ಣುವ ಲಕ್ಷ್ಮಿಯ ಕುಲವ
ರ್ಧಿಷ್ಣುವೆನಲ್ ನೆಗಟ್ದನಿಕ್ಷು ಚಾಪನವೋಲ್ ಭ್ರಾ
ಜಿಷ್ಣುವೆ ಸಿಂಗದ ತೆಱದಿಂ
ಜಿಷ್ಣುವೆ ಪಸರಿಸಿದ ಜಸದ ನರಸಿಂಹನೃಪಂ ॥ 90 ॥

ಎರೆಯಣ್ಣನ ತಂದೆ ದಿವಾಕರ

ಚಂ ಮಾ ॥ ಜನದನುರಾಗಮಂ ಪಡೆದು ಸತ್ಪಥದೊಳ್ ನಡೆಗಲ್ತು ತೇಜದಿಂ
ದನುದಿನಮೆಯ್ದೆ ಪೆರ್ಚೆ ಕಮಳೋದಯಮಂ ತಳೆದಿರ್ದನಾವನಾ
ತನೆ ದಿನಪಂ ದಲೆಂದು ನುಡಿವಾ ನುಡಿಯಂ ತಳೆದಿಂತು ಪುಟ್ಟಿದಂ
ಮನುನಿಭ ಬೊಬ್ಬಿರಾಜವಿಭುಗಂ ವಧು ಚಾಮವೆಗಂ ದಿವಾಕರಂ ॥ 91 ॥

ಮಹಾಪ್ರಧಾನ ಎಱೆಯಣ್ಣ

ಚಂ ಮಾ ॥ ಮಿಱುಗುವ ಖಂಡದಿಂದೆಸೆವ ಮಂಡಳಿಗಳ್ ರಿಪು ಕುಂಭಿ ಕುಂಭದಿಂ
ಪೊಱಗೊಗುತಿರ್ಪ್ಪ ಮುತ್ತುಗಳ ಮಲ್ಲಿಗೆ ತೀವ್ರಕರಾಭಿಘಾತದಿಂ
ದೊಱಗುವರಾತಿಪತ್ರ ಮೇಲೆಗಂ x ಯಿಭೃಂಗನಿನಾದಮಾಗೆ ನೋ
ಡೆಱಗನ ಖಳ್ಗ ಕಾಂತೆಯ ವಿನೋದವನಕ್ಕೆಣೆಯಾಯ್ತು ಸಂಗರಂ ॥ 92 ॥

ಚಂ ಮಾ ॥ ಎಱಗದ ಗಂಡಮಂಡಳಿಯನಂಡಲೆದಾಳ್ದನ ಪಾದದಲ್ಲಿ ತಂ
ದೆಱಗಿಪನಾಂತರಂ ನಿಜಭುಜಾಸಿಯೊಳಾಸುರಮಾಗಲಾಜಿಯೊಳ್
ಕುಱಿದಱಿಮಾಡಿ ನಾಲ್ದೆಸೆಗಮಿಕ್ಕುವ ನಿಕ್ಕುವಮೆಂಬ ಬಲ್ಪುವೆ
ತ್ತೆಱಗನ ಗಂಡಡಿಂಡಿಮದ ಡಂಬರಮೊಪ್ಪುವುದೀ ಧರಿತ್ರಿಯೊಳ್ ॥ 93 ॥

24) ಜಯಚಾಮರಾಜಪುರ (ಹಲಕೂರು) 96, E.C. X (R), ಕ್ರಿಶ. 1177

ಇದರಲ್ಲಿ ಹೊಯ್ಸಳ ದೊರೆಯಾದ ಎರಡನೆಯ ಬಲ್ಲಾಳನ ಆಳಿಕೆಯಲ್ಲಿ ಹಲುಕೂರ ಮಹಾಪ್ರಭುಗಳು ಮುದ್ದಗೌಂಡ, ನಾರಸಿಂಗಗೌಂಡ ಮುಂತಾದವರು ಕಲಿದೇವರ ಸೇವೆಗೆ ಭೂಮಿಯನ್ನು ದತ್ತಿ ಬಿಟ್ಟಂತೆ ಹೇಳಿದೆ.

ಎರೆಯಂಗ

ಉ ಮಾ ॥ ಮಾಳವರಾಜ್ಯಮೂಳಮೆನಿಪಗ್ಗದ ಧಾರೆಯನಾತ್ಮಸೇನೆಯಿಂ
ಚಾಳಿಸಿ ಚಕ್ರವರ್ತಿಗೆ ಜಯಂ ಮಿಗೆ ತನ್ನ ಭುಜಪ್ರತಾಪಮಂ
ಪಾಳಿಸಿ ದಿಗ್ಜಯಪ್ರಕಟಕೀರ್ತಿಪತಾಕೆಯನುತ್ತರಾಶೆಯೊಳ್
ಕೀಲಿಸಿದಂ ದಿನೇಶಗಿದೀಕ್ಷಿಸುವಂತೆಱೆಯಂಗಭೂಭುಜಂ ॥ 94 ॥

ಬಲ್ಲಾಳ I

ಉ ಮಾ ॥ ಚೇರಮ ಬೀರಮಂ ಬಿಸುಡು ಪಾಂಡ್ಯ ಕಡಂಗದಿರಂಧ್ರ ರಂಧ್ರಮಂ
ಪಾರದಿರೊಡ್ಡ ಗೊಡ್ಡಮನದಂ ಬಿಡು ಮಾಳವ ಕಾಳೆಗಕ್ಕೆ ಮೆ
ಯ್ದಾರದೆ ಸಾರೆಲೇ ತಿಗುಳ ನೀಂ ಜಗುೞೆಂಬುದಪಾರವೀರದು
ರ್ವಾರಗಭೀರಧೀರತೆಯ ವಿಶ್ರುತಘೋಷಣೆ ಬಲ್ಲುಭೂಪನಾ ॥ 95 ॥

ವಿಷ್ಣುವರ್ಧನ

ಉ ಮಾ ॥ ಎತ್ತದ ಮುನ್ನಮೆತ್ತಿ ನಡೆಗೊಳ್ಳದ ಮುನ್ನಮಡುರ್ತು ಕೋಪದಿಂ
ಮುತ್ತದ ಮುನ್ನಮರ್ಥಮನೆ ತೆತ್ತಿರಿಮಿತ್ತಿರಿಮಾತ್ಮದುರ್ಗಮಂ
ಮತ್ತೆನವೇಡ ನಿರ್ಗಮಮಿದೆಂದು ವಿರೋಧಿಗೆ ವೀರಲಕ್ಷ್ಮಿ ಸಾ
ಱುತ್ತಿರೆ ವಿಷ್ಣುವಿಕ್ರಮದುಪಕ್ರಮಮಾಕ್ರಮಿಸಿತ್ತು ಲೋಕಮಂ ॥ 96 ॥

ಮ ವಿ ॥ ಕಮಳಾಕ್ಷಂ ಪುರುಷೋತ್ತಮಂ ವಿಬುಧಲೋಕಾಹ್ಲಾದನಂ ದ್ವಿಷ್ಟದೈ
ತ್ಯಮದಧ್ವಂಸನನಂತಭೋಗಯುತನುರ್ವೀದಾರಧೌರೇಯನು
ತ್ತಮಸತ್ವಾನ್ವಿತನುದ್ಭಯಾದವಕುಳಾಳಂಕಾರಮೆಂದಿಂತು ವಿ
ಷ್ಣುಮಹೀಶಂ ಸಲೆ ತಾನೆ ವಿಷ್ಣುವೆನಿಪಂ ಲಕ್ಷ್ಮೀವಧೂವಲ್ಲಭಂ ॥ 97 ॥

ನರಸಿಂಹ I

ಕಂ ॥ ಇದಿರಾದರಿಭೂಪಾಲರ
ಮದದಾನೆಯ ಕೊಂಬನುಡಿದು ದಂತದ ಬಳೆಯಂ
ಬಿದುವಿನ ಮುತ್ತಿನ ಹಾರಮ
ನೊದವಿಸಿ ಜಯಸಿರಿಗೆ ತುಡಿಸುವಂ ನರಸಿಂಹಂ ॥ 98 ॥

ಬಲ್ಲಾಳ II

ಮ ಸ್ರ ॥
ಧರೆಯಂ ವಿಕ್ರಾಂತದಿಂದೊಪ್ಪುವ ನಿಜಭುಜದೊಳ್ ತಾಳ್ದಿ ಮಾಱಾಂತು ನಿಂದಿ
ರ್ದರಿಭೂಪಾಳರ್ಕಳಂ ದಿಕ್ತಟದ ಕಡೆವರಂ ತೂಳ್ದಿ ತದ್ವೀರಲಕ್ಷ್ಮೀ
ವರನಾದಂ ವೀರಬಲ್ಲುಕ್ಷಿತಿಪತಿ ಶರಣಾಯಾತರಕ್ಷಾಕ್ಷಮಂ ಭಾ
ಸುರತೇಜಂ ರಾಜರಾಜಂ ಸಕಲಗುಣಗಣಾಂಭೋಜಿನೀರಾಜಹಂಸಂ ॥ 99 ॥

ಮ ಸ್ರ ॥ ತನಗಂ ಕಲ್ಪದ್ರುಮಕ್ಕಂ ವಿತರಣಗುಣದೊಳ್ ಮಚ್ಚರಂ ಶೂದ್ರಕಂಗಂ
ತನಗಂ ವಿಕ್ರಾಂತವಿದ್ಯೋತಿತ ಭುಜಬಲದೊಳ್ ಮಚ್ಚರಂ ಮೇರುವಿಂಗಂ
ತನಗಂ ಪೆಂಪುಳ್ಳ ಬಿಣ್ಪಿಂ ತಳೆದ ಮಹಿಮೆಯೊಳ್ ಮಚ್ಚರಂ ತಾನೆನಲ್ ಧ
ನ್ಯನಿಳಾಧೀಶರ್ಕಳೊಳ್ ವಿಶ್ರುತವಿಶದಯಶಂ ವೀರಬಲ್ಲಾಳದೇವಂ ॥ 100 ॥

ಶಾ ವಿ ॥ ಮೂಡಲ್ ಸಂಚಳಿಸಿತ್ತು ಕಂಚಿ ಪಡುವಲ್ ಗೋಳಿಟ್ಟುದಂಭೋಧಿಯೆ
ಚ್ಚೋಡಿತ್ತಗ್ಗದ ಚೇರದೇಶಮನಿತುಂ ಪಾಂಡ್ಯಾವನೀಮಂಡಳಂ
ಕಾಡೊಳ್ ಕೂಡೆ ತೆರಳ್ದು ಹೊಕ್ಕಡಗಿದತ್ತುದ್ದಾಮಸಂಗ್ರಾಮದೊಳ್
ಕೋಡಿಟ್ಟಂತು ಬರ್ದುಂಕುವನ್ನರೊಳರೇ ಬಲ್ಲಾಳಭೂಪಾಳನೊಳ್ ॥ 101 ॥

ಮ ಸ್ರ ॥ ಘನಶೌರ್ಯಂ ಬಲ್ಲುಭೂಪಂ ನಿಜವಿಜಯಹಯಾರೂಢನಾದಂ ಕಳಿಂಗಂ
ವನವಾಸೋದ್ಯುಕ್ತನಾದಂ ತುಳುವನಳವುಗೆಟ್ಟೋಡಿದಂ ಕೊಂಕಣಂ ಭೋಂ
ಕೆನೆ ಪುಣ್ಯಾರಣ್ಯಮಂ ಸಂವರಿಸಿದನಗಿದಂ ಗೂರ್ಜರಂ ಮಾಳವಂ ವಿಂ
ಧ್ಯನಿಕುಂಜಪ್ರಾಪ್ತನಾದಂ ಜಳಧಿನಿಕಟಮಂ ಚೋಳಿಕಂ ವೇಳೆಗೊಂಡಂ
॥ 102 ॥

ಚಂ ಮಾ ॥ ದಿಗಧಿಪರಂ ಪಳಂಚಲೆವ ವಿಕ್ರಮದೇಟ್ಗೆ ನಗಂಗಳೇಱುಮಂ
ನೆಗಪಲೊಡರ್ಚುವುಜ್ವಳದ ತೋಳ್ವಲಮಾ ನೆಗಟ್ದರ್ಕಬಿಂಬಮಂ
ಸುಗಿಯಿಪ ತೀವ್ರತೇಜಮಿವು ತನ್ನೊಳೆ ಸಮ್ಮತಮಾದುವೆಂದೊಡಾ
ನೃಗನಹುಷಾದಿಗಳ್ ದೊರೆಯೆ ಬಲ್ಲನೃಪಾಳನ ಬೀರದೇಟ್ಗೆಯೊಳ್ ॥ 103 ॥

ಬಮ್ಮಲದೇವಿ

ಕಂ ॥ ಇಂಗಡಲ ಸುತೆಯ ಪೆಂಪಂ
ಭಂಗಿಸುವ ವಿಲಾಸಮದ್ರಿಜಾತೆಯ ಸೊಬಗಂ
ಭಂಗಿಸುವ ಸೊಗಸು ತನಗೆನ
ಲೇಂ ಗಳ ಬಣ್ಣಿಸುವರಳವೆ ಬಮ್ಮಲೆವಧುವಾ ॥ 104 ॥

ನಾರಸಿಂಹಗೌಂಡ

ಕಂ ॥ ಈವ ಗುಣಂ ಬೇಡಲೊಡಂ
ಕಾವ ಗುಣಂ ಭೀತಿಯಿಂದೆ ಮಱೆವುಗಲೆನಸುಂ
ಭೂಮಿನುತಮಾಗಿ ತೋರ್ಪುವು
ಭಾವಕನಿಧಿ ನಾರಸಿಂಹಗೌಂಡನೊಳೆಂದುಂ ॥ 105 ॥

ಮುದ್ದಗೌಂಡ

ಶಾ ವಿ ॥ ನೋಡಲ್ಕತ್ತಳಗಂ ಸಹಸ್ರನಯನಂಗಂ ರೂಪು ಮಾರ್ಕೊಂಡು ಮಾ
ತಾಡಲ್ಕದ್ಭುತಮಂತಕಂಗಮೆನಸುಂ ವಿಕ್ರಾಂತಸತ್ಕೀರ್ತಿ ನೀ
ಳ್ದಾಡಲ್ಕಿಟ್ಟೆಡೆ ವಾರ್ಧಿವೇಷ್ಟಿತಧರಾಚಕ್ರಂ ದಲೆಂದೊಲ್ದು ಮಾ
ತಾಡುತ್ತಿರ್ಪುದು ಮುದ್ದಗೌಂಡನ ಗುಣವ್ರಾತಂಗಳಂ ವಂದಿಗಳ್ ॥ 106 ॥

25) ಕೆಂಗಲ್ಲು 325, E.C. X (R), ಕ್ರಿಶ. 1181

ಇದರಲ್ಲಿ ಹೊಯ್ಸಳ ದೊರೆ ಎರಡನೆಯ ಬಲ್ಲಾಳನ ಆಳಿಕೆಯಲ್ಲಿ ಅರಸೀಕೆರೆಯ ನಖರರು ಸಾವಿರೊಕ್ಕಲು ಉಗುರು ಮುನ್ನೂರ್ವರು ತ್ರಿಭುವನ ಶಕ್ತಿ ಪಂಡಿತರ ಶಿಷ್ಯರಾದ ಧರ್ಮರಾಶಿ ಪಂಡಿತರಿಗೆ ದೇವಾಲಯವನ್ನೂ, ಕೆರೆಯನ್ನೂ ಕಟ್ಟುವುದಕ್ಕೆ ನಿಯೋಜಿಸಿ ದತ್ತಿಗಳನ್ನು ಬಿಟ್ಟಿದುದನ್ನು ಹೇಳಿದೆ.

ವಿಷ್ಣುವರ್ಧನ

ಕಂ ॥ ಕೊಂಡಂ ತಳಕಾಡಂ ಕೈ
ಯ್ಕೊಂಡಂ ಮೇಲೆತ್ತಿ ಕೊಂಗನವಯವದಿಂದಂ
ಕೊಂಡಂ ವಿಷ್ಣುವೆ ಚೋಳನ
ಮಂಡಳಿಕರ ಮಂಡೆಗೊಂಡ ತನುಮಂಡಳಮಂ ॥ 107 ॥

ಅರಸಿಯಕೆರೆ

ಕಂ ॥ ಬಳಸಿದ ಪೂರ್ಣ್ನತಡಾಗಾ
ವಳಿಯಿಂ ಸುಳಿವಾ ವೀಚಿಯಿಂ ಬನಂಗಳ ಸೊಂಪಿಂ
ದಳತತಿಯಿಂದರಸಿಯಕೆಱೆ
ಯಿಳೆಯೊಳ್ ಸೊಗಯಿಪುದು ಜನದಕಣ್ಗಂ ಮನಕಂ ॥ 108 ॥

ಮ ಸ್ರ ॥
ಇಳೆಯೊಳ್ ಶೋಭಾಕರಂ ಕಣ್ಗರಸಿಯಕೆಱೆ ಪೀಯೂಷ ದಂತಿರ್ಪ್ಪರಂಬಾ
ಪಳದಿಂ ಜೇನೆಯಿವೋಲ್ ರಂಜಿಪ ಪನಸದಿನುದ್ಯಾನಮಂ ಪೋಲ್ವ ಚೂತಾ
ವಳಿಯಿಂದಂಭೋಧಿಯೋಲ್ ತುಂಬಿದ ಕೆಱೆಯ ನೀರಿಗಳ್ಕಿ ಪೊಕ್ಕಿರ್ದ್ದುದೋ ಕ
ಳ್ತಲೆಯಂ ಬಂತಿಪ್ಪ ತಾಮರೆಯಿನನುಪಮಮಾಗಿಪ್ಪ ತೆಂಗಿಂ ಕವುಂಗಿಂ ? ॥ 109 ॥

ಮ ಸ್ರ॥ ಶ್ರುತಿ ಮೆಯ್ವೆತ್ತಂತಿರ್ಪ್ಪರ್ ದ್ವಿಜವರ x ಳಕೇಶಂಬೊಲಿಕ್ಕುಂ ವಣಿಖಸಂ
ತತಿ ಸರ್ವ್ವೇಸಾದ್ರಿವೋಲಿರ್ಪ್ಪವು ಸುರನಿಳಯಂ ರಂಭೆವೋಲಿರ್ಪ್ಪ ಕಾಂತಾ
ತತಿಯಯ್ವತ್ತಿರ್ವ್ವರೊಳ್ ಸಾಟಿಯೆನಿಸುವ ಕೊಯ್ಲಾಳ್ಗಳಿಂ ಪುರವಸಮಾಸಂ
ಯುತಮಪ್ಪಾವಾರ್ಪಮಿತಿಯರಸಿಯಕೆಱೆಯಂ ಬಣ್ಣಿಪಂಣ್ಣಂಗಳ್ ॥ 110 ॥

ಕಂ ॥ ವೇದದ ಪುರಾಣದಾಗಮ
ದೋದಿನ ಗೇಯ ರಸಕಾವ್ಯ ನಾಟಕ ರಸ ಸಂ
ಪಾದನೆಯ ಜಾನದಮೊಪ್ಪು
ವುದಾದ ತದ್ಧರ್ಮ್ಮದಂದವರಸಿಯಕೆಱೆಯೊಳ್ ॥ 111 ॥

26) ಅರಸೀಕೆರೆ 6, E.C. X (R), ಕ್ರಿಶ. 1183

ಇದರಲ್ಲಿ ಹೊಯ್ಸಳರ ದೊರೆ ಎರಡನೇ ಬಲ್ಲಾಳನ ಆಳಿಕೆಯಲ್ಲಿ ಹೆಗ್ಗಡೆ ರೇವಣ್ಣ, ಕೇತುಮಲ್ಲ, ಮಹಾಜನ, ಗಾವುಂಡರು, ಗೊಜ್ಜರು ಮೊದಲಾದವರು, ಗೊಜ್ಜೇಶ್ವರ ದೇವರಿಗೆ ಕಣಿಗನ ಕೆರೆಯ ಕೆಳಗಿನ ಭೂಮಿಯನ್ನು ದತ್ತಿಯಾಗಿ ನೀಡಿದುದನ್ನು ಹೇಳಿದೆ. ಈ ಶಾಸನವನ್ನು ರಚಿಸಿದವನು ಮಲ್ಲಣ ಪಂಡಿತ.

ಎರೆಯಂಗ

ಕಂ ॥ ಅಱಿಯಂ ಪೆಱರಂಗನೆಯರ
ನಱಿಯಂ ಕೃಪಣತ್ವಮಂ ರಣಾಂಗಣದೊಳ್ ತಾ
ನಱಿಯಂ ಪೆಱಗಡಿಯಿಡುವುದ
ನಱಿಯದವರ ಹೊಗಳಲಱಿಯನೆಱೆಯಂಗ ನೃಪಂ ॥ 112 ॥

ಕಂ ॥ ಮೇರುಗೆ ಮೇಖಳೆ ಬಹುಕಳೆ
ವಾರಿರುಹಭವಂಗೆ ಪೂರ್ಣ್ನಕಳೆ ಚಂದ್ರಗೆ ಗಂ
ಭೀರಂಗೇಚಲದೇವಿಗ
ಭೀರಂಗೆಜೆಯಂಗ ನೃಪತಿಗೊಪ್ಪಂಬಡೆಗುಂ ॥ 113 ॥

27) ಅರಸೀಕೆರೆ 33, E.C. X (R), ಕ್ರಿಶ. 1184

ಇದರಲ್ಲಿ ಹೊಯ್ಸಳ ದೊರೆಯಾದ ಎರಡನೆಯ ಬಲ್ಲಾಳನ ಆಳಿಕೆಯಲ್ಲಿ ಅರಸಿಯಕೆರೆಯ ಕೊಯ್ಲಾಳ್ಗಳು ಕೊಯ್ಲಾಳೇಶ್ವರ ದೇವಾಲಯವನ್ನು ಕಟ್ಟಿಸಿ ಭೂಮಿಯನ್ನು ದತ್ತಿ ಬಿಟ್ಟಂತೆ ಹೇಳಿದೆ.

ಬಲ್ಲಾಳ II

ಮ ವಿ ॥ ಕಮಠಂ ಕಂದಮಹೀಂದ್ರನಾಳಮುದಿತಾಶಾಸಂಕುಳಂ ತದ್ದಳಂ
ಕಮನೀಯೋನ್ನತದಿಗ್ಗಜಂ ಮಧುಕರಂಬೊಲ್ ಶೋಭಿಪೀ ದೈತ್ಯಶ
ತ್ರುಮಹೀಭೃನ್ನುತಕರ್ಣಿಕಾಕುವಳಯಕ್ಕಾ ತನ್ನ ಪೀಯೂಷಹ
ಸ್ತಮೆ ತಾನಾಶ್ರಯಮೆಂದೊಡೇವೊಗಟ್ಟುದೋ ಶ್ರೀವೀರಬಲ್ಲಾಳನಂ ॥ 114 ॥

ಕೇತಯ್ಯ

ಮ ವಿ ॥ ಮದವದ್ವೈರಿಬಳಪ್ರಭೇದಿ ಸುಮನಸ್ಸಂದೋಹಸೇವೋನ್ನತಾ
ಸ್ಪದನುದ್ಯದ್ಗುರುವಾಕ್ಯನೀತಿಚರಿತಂ ಕಾತ್ಯಾಯನೀಕಾಂತಸ
ತ್ಪದನೀರೇರುಹಪೂಜನಾರತನೆನಲ್ಕೀಧಾತ್ರಿಯೊಳ್ ಶಕ್ರನಂ
ದದೆ ಪೆಂಪಂ ತಳೆದಿರ್ದನುದ್ಧವಿಭವಂ ಕೇತಯ್ಯನತ್ಯೂರ್ಜಿತಂ ॥ 115 ॥

ಕೊಯ್ಲಾಳ್ಗಳು

ಮ ವಿ ॥ ಸ್ಥಿರರೇ ಮೇರುಗೆ ಸನ್ನಿಭರ್ ಗುಣಿಗಳೇ ಧರ್ಮಾತ್ಮಜಪ್ರಖ್ಯರೀ
ವರೆ ಮಿತ್ರಾತ್ಮಜಪಾಟಿಗಳ್ ಕಲಿಗಳೇ ದೇವೇಂದ್ರಪುತ್ರಂಗವರ್
ದೊರೆಗಳ್ ಶೌಚಿಗಳೇ ನದೀಜನೆ ಸಮಂ ಗುಣ್ಬುಳ್ಳರೇ ಸಾಗರಂ
ನಿರುತಂ ಪಾಸಟಿಯೆಂದೊಡೇವೊಗಟ್ಟುದೋ ಕೊಯ್ಲಾಳ್ಗಳೊಂದಂದಮಂ
॥ 116 ॥

ಮ ವಿ ॥ ಜಲಮಂ ಕಾಂತೆಯರಾರ್ತು ದಾಂಟುವೊಡವರ್ ಗೇಣಂತರಕ್ಕಣ್ಮರೀ
ನೆಲದೊಳ್ ಚೋದ್ಯಮಿದೇನೊ ಕೇಳುಗುರ ಮೂನೂರ್ವರ್ಕಳೊಳ್ ಕೂಡಿ ನಿ
ರ್ಮಲೆ ಕೀರ್ತ್ಯಂಗನೆಯಂಬುಧಿಪ್ರಕರಮಂ ದಾಂಟಿರ್ದು ದಿಗ್ದಂತಿಸಂ
ಕುಲದಂತಾಗ್ರದೊಳೆಯ್ದೆ ನರ್ತಿಸುತುಮಿರ್ಪಳ್ ಗಾಳುವಿಂತಾವಳೋ
॥ 117 ॥

ಕಂ ॥ ಶರಣೆನೆ ಕಾವರ್ ಬೇಡಿದೊ
ಡಿರದೀವರ್ ವೈರಿಸಂಕುಳಂ ಬಂದೆಡಱಲ್
ಧುರದೊಳ್ ಗೆಲ್ವರೆನಲ್ಕೀ
ಧರೆಯೊಳ್ ಕೊಯ್ಲಾಳ್ಗಳಂದಮುಪಮಾತೀತಂ ॥ 118 ॥

28) ಅರಸೀಕೆರೆ 39, E.C. X (R), ಕ್ರಿಶ. 1184

ಇದರಲ್ಲಿ ಹೊಯ್ಸಳ ದೊರೆಯಾದ ಎರಡನೆಯ ಬಲ್ಲಾಳನ ಆಳಿಕೆಯಲ್ಲಿ ರಾಜಾಧ್ಯಕ್ಷದ ಹೆಗ್ಗಡೆ ರೇವಣ್ಣ ಮೊದಲಾದವರು ಬ್ರಹ್ಮದೇವರಿಗೆ ಭೂಮಿಯನ್ನು ದತ್ತಿ ಬಿಟ್ಟಂತೆ ಹೇಳಿದೆ.

ಬ್ರಹ್ಮದೇವರು

ಉ ಮಾ ॥ ಕತ್ತುರಿಗಂಪು ಕೈಸುರಿಗೆ ಹೊನ್ನೊಜೆ ಹಟ್ಟಿಗೆ ಸಣ್ಣ ಗಗ್ಗರಂ
ಮುತ್ತಿನ ದಂಡೆ ತೋಳಮಣಿ ಬಯ್ತಲೆ ನೆಯ್ದಲೆ ತೂಲಜನ್ನುರಂ
ಬೆತ್ತದ ಸೆಂಡುಕೋಲ್ ಮೊರೆವ ದಂತದ ಪಾವುಗೆ ಭೃಂಗದೋಲೆ ಮೆ
ಯ್ವೆತ್ತಿರೆ ರಾತ್ರಿಯೊಳ್ ಸುಳಿವ ಬ್ರಹ್ಮಯನೀಗೆಮಗಿಷ್ಟಸಿದ್ಧಿಯಂ ॥ 119 ॥

ಬಲ್ಲಾಳ II

ಮ ಸ್ರ ॥ ಕಲಿಕಾಲಕ್ಷತ್ರಪುತ್ರಪ್ರಬಳತರದುರಾಚಾರಸಂದೋಹದಿಂದಂ
ಹೊಲೆ ಹೊದ್ದಲ್ ಹೇಸಿ ಬೇಸತ್ತಳವಳಿದ ಮಹೀಕಾಂತೆಯಂ ರಕ್ಷಿಸಲ್ಕಾ
ಜಲಜಾಕ್ಷಂ ತಾನೆ ಬಂದಿಂತವತರಿಸಿದವೋಲ್ ವೀರಬಲ್ಲಾಳಭೂಪಂ
ಕುಲಜಾತ್ಯಾಕಾರಭಾರಂ ನೃಪವರನುದಯಂಗೆಯ್ದನಾಶ್ಚರ್ಯಶೌರ್ಯಂ ॥ 120 ॥

29) ತಳಲೂರು 161, E.C. X (R), ಕ್ರಿಶ. 1185

ಇದರಲ್ಲಿ ಹೊಯ್ಸಳ ದೊರೆಯಾದ ಎರಡನೆಯ ಬಲ್ಲಾಳನ ಆಳಿಕೆಯಲ್ಲಿ ಪೆರ್ಗಡೆ ಸಂಕಣ್ಣನು ಪಲ್ಲವಪುರದಲ್ಲಿ (ತಳಿರೂರು) ಶಂಕರೇಶ್ವರ ದೇವಸ್ಥಾನವನ್ನು ಕಟ್ಟಿಸಿ ಭೂಮಿಯನ್ನು ದತ್ತಿ ಬಿಟ್ಟಂತೆ ಹೇಳಿದೆ.

ಎರೆಯಂಗ

ಕಂ ॥ ತದಪತ್ಯಂ ಸಕಳಗುಣಾ
ಸ್ಪದನಸುಹೃನ್ನೃಪತಿನಿಕರಮದರದನಿಘಟಾ
ಬಿದುವಿದಳನ ಮಾರುತಿಯೆನಿ
ಸಿದನೇಚಲದೇವಿಯೆಱೆಯನೆಱೆಯಂಗನೃಪಂ ॥ 121 ॥

ವಿಷ್ಣುವರ್ಧನ

ಶಾ ವಿ ॥ ಅಂತಾ ಮೂವರೊಳುರ್ವರಾಭರಣದೊಳ್ ನಿಂದೊಪ್ಪಿದಂ ವಿಷ್ಣುಭೂ
ಕಾಂತಂ ಪೆರ್ದೊಱೆ ಮೇರೆಯಾದವನಿಯಂ ತಾನಾಳ್ದನಾತ್ಮೀಯಮಾ
ಶಾಂತಕ್ಕುಜ್ವಳಕೀರ್ತಿ ಪರ್ವುವಿನೆಗಂ ನಾನಾಗ್ರಹಾರಸ್ಫುರ
ತ್ಕಾಂತಿಪ್ರೋಜ್ವಳಿತಾಮರಾಲಯತಟಾಕಶ್ರೇಣಿಯಂ ಮಾಡಿದಂ ॥ 122 ॥

ನರಸಿಂಹ I

ಮ ವಿ ॥ ಒಗೆದಂ ಲೋಕದ ಸಯ್ಪು ಸಮ್ಮನಿಸೆ ಸರ್ವೋರ್ವೀತಳಾಳಂಕರಿ
ಷ್ಣುಗೆ ವೈರಿಕ್ಷಿತಿಪಾಲಜಿಷ್ಣುಗೆ ನಿಜಾಮ್ನಾಯಾಬ್ಧಿವರ್ಧಿಷ್ಣುಗಾ
ವಗಮಾಶಾಪರಿಪೂರಿತೋಜ್ವಳಯಶೋಭ್ರಾಜಿಷ್ಣುಗಾಭೂಪವಿ
ಷ್ಣುಗೆ ಪುತ್ರಂ ನರಸಿಂಹದೇವನತುಳಪ್ರೌಢಪ್ರತಾಪೋದಯಂ ॥ 123 ॥

ಬಲ್ಲಾಳ II

ಮ ವಿ ॥ ವಿನಯಾದಿತ್ಯನಿನುಳ್ಳರಲ್ದೆಜಗಪೃಥ್ವೀಪಾಳನಿಂ ಕಂಪನಾ
ಳ್ದು ನೃಪಾಗ್ರೇಸರನಪ್ಪ ವಿಷ್ಣುವಿನ ಕಯ್ಯೊಳ್ ತಳ್ತು ತನ್ನಾರಸಿಂ
ಹನ ಶೌರ್ಯಕ್ಕನುರಾಗಮಂ ಪಡೆದು ಪೆಂಪಿಂ ಪೊಯ್ಸಳಾಮ್ನಾಯಕೋ
ಕನದಂ ನಿತ್ಯನಿವಾಸಮಾಯ್ತು ಸಿರಿಗೀ ಬಲ್ಲಾಳಭೂಪಾಳನಾ ॥ 124 ॥

ಮ ವಿ ॥ ವಿಜಯಾಕೃಷ್ಟಿಗೆ ತೋಳ ಬಾಳ ಪೊಗರಾಯ್ತಾಲೇಖ್ಯಯಂತ್ರಾಕ್ಷರಂ
ಭುಜಗೋತ್ರಾಚಲಮೊಂದೆ ತಾಳ್ದಿತಖಿಳಕ್ಷ್ಮಾಚಕ್ರಮಂ ವಕ್ತ್ರಪಂ
ಕಜದೊಳ್ ಭಾರತಿ ನರ್ತಿಪಳ್ ಮುದದೆ ವಕ್ಷೋರಂಗದೊಳ್ ಸಂತತಂ
ನಿಜದಿಂದಂ ಸಿರಿಯಿರ್ಪಳೇವೊಗಟ್ಟುದೋ ಬಲ್ಲಾಳಭೂಪಾಳನಾ ॥ 125 ॥

ಮ ಸ್ರ ॥ ಭುವನಾಳೋಕಾಭಿರಾಮಂ ದಿಗವನಿತಳಪೂರ್ಣಾರ್ಜುನಶ್ಲೋಕನಾತ್ಮೋ
ತ್ಸವಕೃದ್ದಿಗ್ಜೈತ್ರಯಾತ್ರಾಜಿತನೃಪತಿಶತಾನೀಕನಾಭಾಸಮಾನ
ಸ್ವವಪುಶ್ರೀವತ್ಸಲಕ್ಷಣನೆನೆ ನಿಜಸಾಮರ್ಥ್ಯದಿಂದಾದ್ಯಧಾತ್ರೀ
ಧವರಂ ತಾಂ ತನ್ನೊಳುಜ್ಜೀವಿಸಿ ಪೆಸರ್ವಡೆದಂ ವೀರಬಲ್ಲಾಳದೇವಂ
॥ 126 ॥

ಮ ಸ್ರ ॥ ಧರೆ ತೇರ್ ದಿಕ್ಕುಂಭಿ ಯುಗ್ಮಂ ರವಿಶಶಿವಳಯಂ ಗಾಲಿಗಳ್ ಮೇರು ಬಿಲ್ ನೀ
ಳ್ದುರಗೇಂದ್ರಂ ಮೌರ್ವಿ ಕೃಷ್ಣಂ ಕಣೆ ಶಿಖಿಯಲಗಾ ವಾಯು ಪಿಳ್ಕಾಗೆ ರುದ್ರಂ
ಸುರಸೈನ್ಯಂ ಕೂಡೆ ಸುಟ್ಟಂ ತ್ರಿಪುರಮನಳವಿಂದಂದು ಬಲ್ಲಾಳನಿಂದು
ದ್ಧುರತೇಜಂ ವೈರಿದುರ್ಗೋತ್ಕರಮನಡಸಿ ಸುಟ್ಟಂ ಪ್ರತಾಪತ್ರಿಣೇತ್ರಂ ॥ 127 ॥

ಉ ಮಾ ॥ ಉಂಡಿಗೆ ಸಾಧ್ಯಮಾಯ್ತು ಹಿಮದಿಂ ಸಲೆ ಸೇತುವರಂ ಸಮಸ್ತಭೂ
ಮಂಡಲಮೊಲ್ಲದುದ್ಧತರ ನೆತ್ತಿಯ ಬತ್ತಿವೊಲಾಯ್ತು ತೀವ್ರರು
ಙ್ಮಂಡಲಮಂ ದಿಟಂ ಮಿಗುವ ತೇಜದ ದಳ್ಳುರಿ ಕೀರ್ತಿದಿಗ್ವಧೂ
ಮಂಡನಹಾರಮಾಯ್ತದು ನೃಪೇಂದ್ರಗುಣಂ ಚಲದಂಕರಾಮನಾ ॥ 128 ॥

ಸಂಧಿವಿಗ್ರಹಿ ಕೇಶಿರಾಜ

ಚಂ ಮಾ ॥ ಬರೆದುದು ಕೀರ್ತಿ ದಿಗ್ವಳಯಭಿತ್ತಿಯನೋವದೆ ಬಾರಿಸಿತ್ತು ಭಾ
ಸುರರುಚಿಯಿಂದೆ ಚಂದ್ರಮನ ಚಂದ್ರಿಕೆಯಂ ಸಲೆ ಮುದ್ರಿಸಿತ್ತು ಸಾ
ಗರಪರಿವೇಷ್ಟಿತಾವನಿಯನೆಂದೊಡದೇವೊಗಟ್ದಪ್ಪೆ ಸಂದ ಸಾ
ಕ್ಷರನಿಧಿ ಸಂಧಿವಿಗ್ರಹಿಲಲಾಮನನಗ್ಗದ ಕೇಶಿರಾಜನಂ ॥ 129 ॥

ಪೆರ್ಗಡೆ ಸಂಕಣ್ಣ

ಮ ವಿ ॥ ಕುಲದೊಳ್ ಶೀಲದೊಳೀಶಭಕ್ತಿಯೊಳನೂನೈಶ್ವರ್ಯದೊಳ್ ಮಿಕ್ಕ ವಾ
ಗ್ಬಲದೊಳ್ ಸತ್ಯದೊಳೋಜೆಯೊಳ್ ಸಕಲವಿದ್ಯಾಪ್ರೌಢಿಯೊಳ್ ಧೈರ್ಯದೊಳ್
ಚಲದೊಳ್ ಚಾಗದೊಳುರ್ವರಾತಳದೊಳಿಂದಾರಯ್ವೊಡಿಂತೀಗುಣಾ
ವಲಿಯಿಂ ಪೆರ್ಗಡೆಸಂಕಣಂಗೆ ಸರಿ ಯಾರ್ ಪೇಟನ್ಯಮಂತ್ರೀಶ್ವರರ್॥ 130 ॥

ಮಾಳವ್ವೆ

ಕಂ ॥ ಕಂಪಿಂ ಸೊಂಪಿಂ ಪೆಂಪಿಂ
ಪೊಂಪುಟಿವಡೆದಿರ್ದ ಮೆಲ್ಪಿನೊದವಿದ ಗುಣದಿಂ
ಗುಂಪಿಲ್ಲದೆ ಪಡೆದಳ್ ಪತಿ
ಗಿಂಪಂ ಮಾಳವ್ವೆ ಮಾಲತೀಮಾಲೆಯವೋಲ್ ॥ 131 ॥

ಪಲ್ಲವಪುರ

ಚಂ ಮಾ ॥ ಬಳಸಿದ ನಂದನಂಬಿಡಿದ ಪೂರ್ಣತಟಾಕದಿನಂತದಂ ಪುದುಂ
ಗೊಳೆ ಮದಗಂಧಶಾಲಿವನದಿಂ ಬಿಡದೊಪ್ಪುವ ಕರ್ವುದೋಂಟದಿಂ
ದೊಳಗೆ ಪೊದಟ್ವಿ ದೇವಕುಲಸಂಕುಲದಿಂ ದ್ವಿಜಸೌಧಗೇಹದಿಂ
ದೆಳೆಗೆಸೆದತ್ತು ಪಲ್ಲವಪುರಂ ವಸುಧಾತಳರತ್ನನೂಪುರಂ ॥ 132 ॥

ಉ ಮಾ ॥ ಒಂದೆಡೆ ವೇದನಾದಮಯಮೊಂದೆಡೆ ವಾದವಿನೋದರಮ್ಯಮ
ತ್ತೊಂದೆಡೆ ವಿಸ್ಮೃತಸ್ಮೃತಿವಿಭೂಷಿತಮೊಂದೆಡೆ ತಂತ್ರಸೇವ್ಯಮಿ
ನ್ನೊಂದೆಡೆ ಶಬ್ದಶಾಸ್ತ್ರಪರಿಭಾವಿತಮೆಂಬಿನೆಗಂ ವಿದಗ್ಧತಾ
ಮಂದಿರಮಾಯ್ತು ಪಲ್ಲವಪುರಂ ದ್ವಿಜಪಾವನಮಗ್ರಹಾರದೊಳ್ ॥ 133 ॥

30) ಕುರುವಂಕ 59, E.C. X (R), ಕ್ರಿಶ. 1186

ಇದರಲ್ಲಿ ಹೊಯ್ಸಳ ದೊರೆಯಾದ ಎರಡನೆಯ ಬಲ್ಲಾಳನ ಆಳಿಕೆಯಲ್ಲಿ ಬಿಟ್ಟಿಯಣ್ಣನು ಎತ್ತಿಸಿದ ಬೀರೇಶ್ವರ ದೇವಸ್ಥಾನಕ್ಕೆ ಕುರುವಕ್ಕದ ಎಕ್ಕಟಿಗಂಗರಕ್ಕರು ಭೂಮಿಯನ್ನು ದತ್ತಿ ಬಿಟ್ಟಂತೆ ಹೇಳಿದೆ.

ವಿಷ್ಣುವರ್ಧನ

ಮ ವಿ ॥ ಹರಿಸಂದೋಹವಿರಾಜಿತಂ ವಿವಿಧಪದ್ಮಾಲಂಕೃತಂ ಹಂಸಸಂ
ಚರಣಪ್ರೌಢಮುದಾತ್ತ ವಿಕ್ರಮಗುಣೋದ್ಯತ್ಪುಂಡರೀಕಾಂಕಸೌಂ
ದರಮಾಗಿರ್ಪುದಜಿಂದೆ ಪದ್ಮವನದಂದಂ ಭಾವಿಸಲ್ ವಿಷ್ಣುಭೂ
ವರನಿರ್ಪಾಪುರಮುಂ ಸುರೇಂದ್ರಪುರಮುಂ ವಿದ್ವಿಟ್ಪುರಾನೀಕಮುಂ॥ 134 ॥

ಕಂ ॥ ಇನತೇಜನಿಂದಿರಾವರ
ನಿನಜಸಮೋದಾರನಿಂದ್ರನಿಭವಿಭವನಿಳಾ
ಜನವಿನುತನಿದ್ಧ ಸತ್ಕೀ
ರ್ತಿನಿಧಾನಂ ವಿಷ್ಣುಭೂಪನಂಗಜರೂಪಂ ॥ 135 ॥

ಬಲ್ಲಾಳ II

ಮ ಸ್ರ ॥ ಫಣಿನಾಥಂ ಪಾಟಿ ಭೋಗಕ್ಕಮರಪತಿ ಸಮಂ ರೂಪಸಂಪತ್ತಿಗಬ್ಜೇ
ಕ್ಷಣನುದ್ಯದ್ವಿಕ್ರಮಾಡಂಬರಕೆ ದೊರೆ ಮಹೇಶಂ ನಿಜಾಜ್ಞಾವಿಶೇಷ
ಕ್ಕಣೆ ಧೀರೋದಾತ್ತಚಿತ್ತಕ್ಕಮಮ ಸರಿ ದಶಾಸ್ಯಾರಿ ದಾನಕ್ಕೆ ಮತ್ತಂ
ತೊಣೆ ಕರ್ಣಂ ತಾನೆನಲ್ಕೀವಸುಧೆಯೊಳೆಸೆದಂ ವೀರಬಲ್ಲಾಳಭೂಪಂ
॥ 136 ॥

ಮ ವಿ ॥ ಇಳೆ ಶುದ್ಧಸ್ಫಟಿಕೋಪಳಸ್ಥಗಿತಮಾಶಾಮಂಡಳಂ ದಿಗ್ವಧೂ
ಕುಳವೇಣೀಕುಸುಮೋಪಹಾರರಚಿತಂ ನಾಕಂ ನಿಳಿಂಪೇಶನಿ
ರ್ಮಳಶುಂಡಾಳರದಪ್ರಭಾಧವಳಿತಂ ತಾರಾಪಥಂ ತಾರಕೋ
ಜ್ವಳಿತಂ ತಾನೆನೆ ಕೊರ್ಬಿ ಪರ್ಬಿತು ಜಸಂ ಬಲ್ಲಾಳಭೂಪಾಳನಾ ॥ 137 ॥

ಅಂಗರಕ್ಕ

ಕಂ ॥ ಧುರದೊಳಿದಿರ್ಚಿದ ಪಗೆವರ
ನುರವಣೆಯಿಂ ಗೆಲ್ವ ತಕ್ಕು ರಿಪುಗಳ ಕುಟಿಲೋ
ತ್ಕರಮಂ ನೆಗಟ್ಚಿ ಪತಿಯಂ
ಗರಕ್ಷೆಯಂ ಮಾಟ್ಪುದಂಗರಕ್ಕಂಗೆ ನಿಜಂ ॥ 138 ॥

31) ಬಾಣಾವರ 55, E.C. X (R), ಕ್ರಿಶ. 1187

ಇದರಲ್ಲಿ ಹೊಯ್ಸಳರ ದೊರೆ ಎರಡನೇ ಬಲ್ಲಾಳನ ಆಳಿಕೆಯಲ್ಲಿ ಕಮ್ಮಟ ಚೆಟ್ಟಿ ಸೆಟ್ಟಿ ಎಂಬುವವನು ಬಾಣವುರದ ಚಟ್ಟೇಶ್ವರ ದೇವಾಲಯವನ್ನು ನಿರ್ಮಾಣ ಮಾಡಿಸಿದುದನ್ನು ಅನೇಕ ಕೆರೆಗಳನ್ನು ಕಟ್ಟಿಸಿ, ದತ್ತಿಯನ್ನು ನೀಡಿದುದನ್ನು ಹೇಳಿದೆ.

ಬಲ್ಲಾಳ II

ಮ ವಿ ॥ ಇಳೆ ಶುದ್ಧಸ್ಫಟಿಕೋಪಳ ಸ್ಥಗಿತವಾಶಾಮಂಡಳಂ ದಿಗ್ವಧೂ
ಕುಳ ವೇಣೀ ಕುಸುಮೋಪಹಾರರಚಿತಂ ನಾಕಂ ನಿಳಿಂಪೇಶ ನಿ
ರ್ಮ್ಮಳಶುಂಡಾಳರದ ಪ್ರಭಾಧವಳಿತಂ ತಾರಾಪಥಂ ತಾರಕೋ
ಜ್ವಳಿತಂ ತಾನೆನೆ ಕೊರ್ವ್ವಿ ಪರ್ವ್ವಿತು ಜಸಂ ಬಲ್ಲಾಳಭೂಪಾಳನಾ ॥ 139 ॥

ಮಾರಿಸೆಟ್ಟಿ

ಕಂ ॥ ವನಧಿಯವೋಲಪ ಕ್ಷೀ
ಣ ನಿಧಾನನಿಳೇಶನಿಂದು ಸುತನವೊಲಬ್ಜೇ
ಶನವೋಲ್ ಸನ್ಮಾರ್ಗ್ಗಂ ಸ
ಜ್ಜನಸೇವ್ಯಂ ಮಾರಿಸೆಟ್ಟಿ ಸದ್ವಿಪ್ರಕುಳಂ ॥ 140 ॥

ಚಟ್ಟಪಸೆಟ್ಟಿ

ಚಂ ಮಾ ॥ ಹರಿಯ ಹಯಕ್ಕೆ ತೋಡೆನಿಪ ಹೇಷ ಚಯಂಗಳನಿಂದ್ರದಂತ್ತಿಯೊ
ಳ್ದೊರೆಯೆನಿಸಿರ್ಪ್ಪ ದನ್ತಿಗಳನಭ್ರದೊಳಾದ ಸುಪಾಣಿ ಮುತ್ತಿನೊಳ್
ಸರಿಯೆನಿಸಿಪ್ಪ ಮುತ್ತುಗಳನೆಯ್ದೆ ಬಹಿತ್ರದೆ ತಂದು ಮಾಱುವಂ
ಧರಣಿಪರ್ಗೊಲ್ದು ಕಂಮಟದ x x x x x ಚಟ್ಟಪಸೆಟ್ಟಿ ಸಂತತಂ ॥ 141 ॥

32) ಅರಸೀಕೆರೆ 44, E.C. X (R), ಕ್ರಿಶ. 1189

ಇದರಲ್ಲಿ ಹೊಯ್ಸಳರ ದೊರೆ ಎರಡನೇ ಬಲ್ಲಾಳನ ಆಳಿಕೆಯಲ್ಲಿ ಹುರುವಳಿಯ ಕಾಳಗಾವುಂಡ ಎಂಬುವವನು ಮೇಳೇಶ್ವರ ದೇವಾಲಯದ ನಿರ್ಮಾಣ ಮಾಡಿಸಿ, ದತ್ತಿಯನ್ನು ನೀಡಿದುದನ್ನು ಹೇಳಿದೆ.

ಅರಸಿಯಕೆರೆಯ ಬನ

ಕಂ ॥ ಮುಳಿದಾಗಡೆ ಕೂರ್ಪ್ಪವರೊ
ಳ್ಗಿಳಿವುದು ತಿಳಿವುದು ಗಡೆನ್ದು ಸಾರುವ ತೆಱದಿಂ
ಗಳಪುವ ಗಿಳಿವಿಣ್ಡಿನ ಕಳ
ಕಳವರಸಿಯಕೆಱೆಯ ಬನದೊಳೊಪ್ಪುತ್ತಿರ್ಕ್ಕುಂ ॥ 142 ॥

ಅಮರಾವತೀಪುರ

ಉ ಮಾ ॥ ಶ್ರೀರಮಣೀ ವರೋಂನತ ಗೃಹೋಂನತಿಯಾಶ್ರಿತಂ ಕಲ್ಪಭೂರುಹೋ
ದಾರಸುಸೇವ್ಯ ಸೇವ್ಯತೇ ರಮಾರಮಣೀ ರಮಣಿಯವುದ್ಘವಿ
ಸ್ತಾರ ಬುದೌಘ ವಿಸ್ತರಮೆನಿಪ್ಪ ಗುಣಂ ಸಮನಾಗೆ ಶೋಭಿಕುಂ
ಧಾರಿಣಿಯಲ್ಲಿ ನೋಡಲಮರಾವತಿಯತ್ತಮರಾವತೀಪುರಂ ॥ 143 ॥

33) ಕಣೆಕಟ್ಟೆ 88, E.C. X (R), ಕ್ರಿಶ. 1189

ಇದರಲ್ಲಿ ಹೊಯ್ಸಳರ ದೊರೆ ಎರಡನೆಯ ಬಲ್ಲಾಳನ ಆಳಿಕೆಯಲ್ಲಿ ಕಳಿಕಟ್ಟೆಯ ಜಗತೀಕೊತ್ತಳಿಗಳು ಕೆರೆಗಳನ್ನು ಶಿವಾಲಯಗಳನ್ನು ನಿರ್ಮಿಸಿದುದನ್ನು ಹೇಳಿದೆ. ಇದನ್ನು ಶಾಂತಿನಾಥ ಕವಿ ರಚಿಸಿದ್ದಾನೆ.

ಸಾಮಂತ ಸೋಮ

ಕಂ ॥ ಕಟ್ಟಿದಿರೊಳಾಂತ ಸುಭಟರ
ನಿಟ್ಟೆಲುವಂ ಮುಱಿದು ತೇದು ತಿಲಕಮನಿಡುವಂ
ಸುಟ್ಟುರಿಪುವ ರಿಪುಪುರಮಂ
ನೆಟ್ಟನೆ ಸಾಮಂತ ಸೋಮ ಸಿತಗರಗಂಡಂ ॥ 144 ॥

ಕವಿ ಶಾಂತಿನಾಥ

ಕಂ ॥ ದಕ್ಷಿಣ ಸೋಮನ ಮಮ್ಮಂ
ಲಕ್ಷಣ ಕವಿ ಶಾಂತಿನಾಥ ಕವಿಕುಳತಿಳಕಂ
ದಾಕ್ಷಿಣ್ಯ ನಿಧಿ ಗುಣಾಕರ
ಶಿಕ್ಷಾಗುರು ಹೇಳಿದನರ್ತಿಯಿಂ ಶಾಸನಮಂ ॥ 145 ॥

34) ಅರಸೀಕೆರೆ 7, E.C. X (R), ಕ್ರಿಶ. 1189

ಇದರಲ್ಲಿ ಹೊಯ್ಸಳ ದೊರೆಯಾದ ಎರಡನೆಯ ಬಲ್ಲಾಳನು ರಾಜಧಾನಿಯಾದ ಅರಸಿಯಕೆರೆಯಲ್ಲಿ ಬಲ್ಲಾಳೇಶ್ವರ ದೇವಸ್ಥಾನವನ್ನು ಕಟ್ಟಿಸಿ ಭೂಮಿಯನ್ನು ದತ್ತಿ ಬಿಟ್ಟಂತೆ ಹೇಳಿದೆ. ಇದನ್ನು ರಚಿಸಿದವನು ತ್ರಿವಿಕ್ರಮಪಂಡಿತ.

ವಿನಯಾದಿತ್ಯ

ಮ ವಿ ॥ ಪದೆದಾ ಪೊಯ್ಸಳವಂಶದೊಳ್ಸಸಿಕಳಾ ನೈರ್ಮ್ಮಲ್ಯಮಂ ದೇವಭೂ
ಜದ ದಾನೋಂನತಿಯಂ ಪ್ರಭಾಕರನ ತೇಜೋರಾಸಿಯಂ ರಮ್ಯ ಪೂ
ರ್ವ್ವದಿಶಾಧೀಶ ಗಜೇಂದ್ರದೊಂದು ಮತಮಂ ತನ್ನಲ್ಲಿಜಿಂ ತಾಳ್ದಿ ಪು
ಟ್ಟಿದನುದ್ಯದ್ ವಿನಯಂಭೋರಾಶಿ ವಿನಯಾದಿತ್ಯಾವನೀಪಾಳಕಂ ॥ 146 ॥

ಕಂ ॥ ಯದುವಂಶಕಲ್ಪವೃಕ್ಷದೊ
ಳೊದವಿದ ನಿಜಶಾಖೆ ತಾನೆನಲ್ಕುದಯಿಸಿದಂ
ಸದಮಳಕೃಷ್ಣವಿಳಾಸಂ
ಮುದದಿಂ ಭುವನೈಕವೀರ ವಿನಯಾದಿತ್ಯಂ ॥ 147 ॥

ಎರೆಯಂಗ

ಕಂ ॥ ಎಱಗುವರಿನೃಪರ್ಗ್ಗೆ ಸಿಡಿಲವೊ
ಲೆಱಗುವನೆಱಗಿಸುವನಮರರಮಣಿಯರನದೇ
ನೆಱೆಯಂಗ ನೃಪತಿ ಗುಣಗಣ
ದೆಱೆಯನೊ ಮಾಡಿದರ್ಗ್ಗೆ ಮಾಳ್ಪರಿಲ್ಲೀ ಜಗದೊಳ್ ॥ 148 ॥

ವಿಷ್ಣುವರ್ಧನ

ಕಂ ॥ ಮುನಿಸಿಂದರುಣತೆ ಕಡೆಗ
ಣ್ಗೆನಿಸೊದವೆ ವಿರೋಧಿ ನೃಪರ ಸಪ್ತಾಂಗಂ ವಿ
ಷ್ಣುನೃಪಾಳಂಗಪ್ಪುವು ನೋ
ಡನುಪಮಮವನಳವಿಯಿತರರಳವಿಯೆ ಜಗದೊಳ್ ॥ 149 ॥

ಮ ವಿ ॥ ಬುಧಲೋಕಾಶ್ರಯನೆಂಬ ತಾರ್ಕ್ಷ್ಯರಥವೆಂಬಬ್ಜಾಯತಾಕ್ಷಂದಲೆಂ
ಬ ಧರಾಧಾರಕನೆಂಬ ಭೋಗಯುತನೆಂಬುದ್ಯದ್ ಬಲಾನ್ವಿತನೆಂ
ಬ ಧರಿತ್ರೀವರನೆಂಬ ಲೋಕನುತನೆಂಬೀ ಪೆರ್ಮ್ಮೆಯಿಂ ನೋಡೆ ವಿ
ಷ್ಣುಧರೇಶಂ ಸಲೆ ವಿಷ್ಣುವೊಲ್ ಸೊಗಯಿಪಂ ಲಕ್ಷ್ಮೀ ಮನೋವಲ್ಲಭಂ
॥ 150 ॥

ನರಸಿಂಹ I

ಚಂ ಮಾ ॥ ಕದನದೊಳಾನ್ತರಾತಿಗಳ ದನ್ತಿಯದನ್ತಮನೊತ್ತಿ ಕಿಟ್ಟು ತದ್
ಬಿದುವನೆ ಪೊಯ್ಯೆ ಪೋಳ್ದು ಪೊಱಮೊಣ್ಮೆ ಸರಕ್ತಕ ಮೌಕ್ತಿಕಂಗಳಾ
ಪದದೊಳವಂ ಜಯಾಂಗನೆಗೆ ಹಾರಮನೊಪ್ಪಿರೆ ಮಾಟ್ಪನೆಂದೊಡಾ
ರ್ಕ್ಕದನದೊಳಾಂಪಿದಿರ್ಚ್ಚುವದಟರ್ಜ್ಜಗದೊಳ್ ನರಸಿಂಹದೇವನಂ
॥ 151 ॥

ಕಂ ॥ ಕದನದೊಳಿದಿರ್ಚಿದರಿನೃಪ
ಮದರದನಿಯರದನದಲಿ ನಟ್ಟ ಸರಲ್ ವಾ
ಲದ ಮೊದಲೊಳುಚ್ಚಳಿಸುವೊಂ
ದದಟವನಿಪ ನಾರಸಿಂಹದೇವಂಗೆ ನಿಜಂ ॥ 152 ॥

ಬಲ್ಲಾಳ II

ಮ ಸ್ರ ॥ ಮುನಿಸಿಂ ಬಲ್ಲಾಳಭೂಪಂ ಕಿಱಿಯಸಿಲತೆಯಂ ಕೀಳ್ವರನ್ಯಾವನೀಪಾ
ಳನಿಕಾಯಂ ಸ್ಥಾನದಿಂದಂ ಜಡಿಯೆ ನಡುಗುವಬ್ಧೀರ್ಣತಿಯಿಂ ನೋೞ್ಪಡೀ ಪಾಂ
ಗು ನಿತಾಂತಂ ಚೋದ್ಯಮಿಂತೀ ತೆಱನನಱಿದೆನಾನೀಗಳೆಂತೆಂದೊಡಿಂತೀ
ತನ ಖಡ್ಗಕ್ಕಂ ವಿರೋಧಿ ಪ್ರತತಿಗೆವ x x x x x x ದಕ್ಕುವೆಂದುಂ ॥ 153 ॥

ಮ ಸ್ರ ॥ ಫಣಿನಾಥಂ ಪಾಟಿ ಭೋಗಕ್ಕಮರಪತಿ ಸಮಂ ರೂಪಸಂಪತ್ತಿಗಬ್ಜೇ
ಕ್ಷಣನುದ್ಯದ್ ವಿಕ್ರಮಾಡಂಬರಕೆ ದೊರೆ ಮಹೇಶಂ ನಿಜಾಜ್ಞಾವಿಶೇಷ
ಕ್ಕೆಣೆ ಧೀರೋದಾತ್ತಚಿತ್ತಕ್ಕಮಮ ಸರಿ ದಶಾಸ್ಯಾರಿ ದಾನಕ್ಕೆ ಮತ್ತಂ
ತೊಣೆ ಕರ್ಣ್ನಂ ತಾನೆನಲ್ಕೀ ವಸುಧೆಯೊಳೆಸೆದಂ ವೀರಬಲ್ಲಾಳಭೂಪಂ
॥ 154 ॥

ಉಮಾದೇವಿ

ಮ ವಿ ॥ ಲಲನಾನಿರ್ಮಿತಿಕೌಶಲಂ ಪಲವು ಕಾಲಕ್ಕಬ್ಜಜಂಗಿಂದು ಸ
ತ್ಫಲಮಾಯ್ತುತ್ತಮರೂಪೆಯಂ ವಿಮಳೆಯಂ ಬಲ್ಲಾಳವಿಶ್ವಂಭರೇ
ಶ ಲಸತ್ಕಾಮಿನಿಯಂ ಬುಧಾಳಿಗನಿಶಂ ಕೂರ್ತೀವುಮಾದೇವಿಯಂ
ಲಲನಾರತ್ನಮನುದ್ಘಕೀರ್ತಿಯುತೆಯಂ ಪೆತ್ತುತ್ತಮಪ್ರೌಢಿಯಿಂ ॥ 155 ॥

ಅರಸಿಯಕೆರೆ

ಕಂ ॥ ಮುಳಿದಾಗಡೆ ಕೂರ್ಪವರೊ
ತ್ತಿಳಿವುದು ಗಡೆನ್ದುಸಾಱುವ ತೆಱದಿಂ
ಗಳಪುವ ಗಿಳಿವಿಂಡಿನ ಕಳ
ಕಳವರಸಿಯಕೆಱೆಯ ಬನದೊಳೊಪ್ಪುತ್ತಿರ್ಕ್ಕುಂ ॥ 156 ॥

35) ದ್ಯಾಮೇನಹಳ್ಳಿ 277, E.C. X (R), ಕ್ರಿ.ಶ. 1189

ಇದರಲ್ಲಿ ಹೊಯ್ಸಳರ ದೊರೆಯಾದ ಎರಡನೆಯ ಬಲ್ಲಾಳನ ಆಳಿಕೆಯಲ್ಲಿ ಗಣಪಯ್ಯನು ದೇಮಯ್ಯನ ಹಳ್ಳಿಯಲ್ಲಿ ಮಲ್ಲಿಕಾರ್ಜುನ ದೇವಸ್ಥಾನವನ್ನು ಕಟ್ಟಿಸಿ ದತ್ತಿಯನ್ನು ಬಿಟ್ಟಂತೆ ಹೇಳಿದೆ.

ವಿಷ್ಣುವರ್ಧನ

ಮ ವಿ ॥ ಮಲೆಯಂ ಸಾಧಿಸಿ ಮಾಣ್ದನೇ ತಳವನಂ ಕಾಂಚೀಪುರಂ ಕೋಯತೂರ್
ಮಲೆನಾಡಾ ತುಳುನಾಡು ನೀಲಗಿರಿಯಾ ಕೋಳಾಲಮಾ ಕೊಂಗು ನಂ
ಗಲಿಯುಚ್ಚಂಗಿ ವಿರಾಟರಾಜನಗರಂ ವಲ್ಲೂರಿವೆಲ್ಲಂ ಸ್ವದೋ
ರ್ಬಲದಿಂ ಲೀಲೆಯೆ ಸಾಧ್ಯಮಾಧುವೆಣೆಯಾರ್ ವಿಷ್ಣುಕ್ಷಮಾಪಾಳನೊಳ್
॥ 157 ॥

ಬಲ್ಲಾಳ II

ಕಂ ॥ ಇದು ಸರ್ವಗ್ರಾಸಂಗೊ
ಳ್ವುದು ಭಾಸ್ವದ್ರಾಜಮುಂಡಳಂಗಳನಿಂ ಮೋ
ಕ್ಷದ ದೆಸೆಯಿಲ್ಲೆಂಬಿನಮೀ
ಯದುಪತಿ ಬಲ್ಲಾಳ ಬಾಹುರಾಹುವಿಚಿತ್ರಂ ॥ 158 ॥

36) ಬೊಮ್ಮೇನಹಳ್ಳಿ 139, E.C. X (R), ಕ್ರಿ.ಶ. 1194

ಇದರಲ್ಲಿ ಹೊಯ್ಸಳರ ದೊರೆ ಎರಡನೇ ಬಲ್ಲಾಳನ ಆಳಿಕೆಯಲ್ಲಿ ಮಧುಸೂದನ ದಂಡನಾಯಕನು ಮಲ್ಲಿಕಾರ್ಜುನ ಮೊದಲಾದ ದೇವಾಲಯಗಳನ್ನು ನಿರ್ಮಾಣ ಮಾಡಿಸಿದುದನ್ನು ಅವನ ತಮ್ಮ ಮಾಚಿರಾಜಯ್ಯನು ದತ್ತಿ ನೀಡಿದುದನ್ನು ಹೇಳಿದೆ.

ವಿಷ್ಣುವರ್ಧನ

ಚಂ ಮಾ ॥ ಮಲೆವ ವಿರೋಧಿ ಮಂಡಳಿಕ ಮಂಡಳಿಯಂ ಮರಳೊತ್ತಿಕೊಳ್ವ ಕೂ
ರಲಗಿನ ಕೋಳಕಾಳ ವಿಳಯಾಹಿಯ ಕೂಳೆನೆ ಗೆಲ್ದು ನೀಳ್ದ ತೋ
ಳ್ವಲದೆ ನಿಮಿರ್ಚ್ಚಿ ಧಾತ್ರಿಯನಪಾಕೃತ ಕಂಟಕಮಾಗೆ ರಾಜ್ಯದ
ಗ್ಗಲಿಕೆಯನಾಳ್ದು ಪಾಲಿಸಿದನಪ್ರತಿಮಂ ಕಲಿ ವಿಷ್ಣುವರ್ಧನಂ ॥ 159 ॥

ಬಲ್ಲಾಳ II

ಮ ಸ್ರ ॥
ನೊಸಲೊಳ್ಸಾಮ್ರಾಜ್ಯಪಟ್ಟಂ ಪದದೊಳಖಿಳ ಭೂಭೃತ್ ಶಿರೋರತ್ನಶೋಣಾಂ
ಶುಸಮೂಹಂ ತೋಳಬಾಳೊಳ್ ಜಯವಧು ವುರದೊಳ್ ಲಕ್ಷ್ಮಿ ದಿಕ್ಚಕ್ರದೊಳ್ಕೀ
ರ್ತಿ ಸಮೇತಂ ನಚ್ಚಿನಾಜ್ಞಾರಮೆ ರಮ್ಮಯಿಪಿನಂ ಸಾರ್ವಭೌಮತ್ವದಿಂ ರಂ
ಜಿಸಿದಂ ವಿಕ್ರಾನ್ತಕಾಂತಂ ಯದುಕುಳ ತಿಳಕಂ ವೀರಬಲ್ಲಾಳದೇವಂ
॥ 160 ॥

ಮಾಚಣ

ಮ ವಿ ॥ ಕರಚಕ್ರಂ ಮುರವಿದ್ವಿಷಂಗೆ ಬಳದ್ವಿಷ್ಟಂಗೆ ವಜ್ರಂ ಭಯಂಕರಾಭಾಳ
ಕರಭಾಳ ಪ್ರಬಳೇಕ್ಷಣ ಪುರಹರಂಗೋವಂಗೆ ಕಾಯ್ವುಗ್ರಕೇ
ಸರಿಗುಚ್ಚಂಡ ನಖಂ ಪ್ರಧಾನಮದುವೊಲ್ ಬಲ್ಲಾಳಭೂಪಂಗಿಳಾ
ಭರಣಂ ದ್ರೋಹಘರಟ್ಟ ಮಾಚಣನೆ ನಚ್ಚೆನ್ದುಂ ಜಯಕ್ರೀಡೆಯೊಳ್
॥ 161 ॥

ಮಧುಸೂದನ

ಕಂ ॥ ಎನಿತೊಳವು ನಿಯೋಗಮವಂ
ತನಿತರ್ಕ್ಕಂ ತಾನೆ ಧುರ್ಯ್ಯನೆನಿಪಂ ಬಲ್ಲಾ

ಳನ ರಾಜಗೃಹದೊಳೀಶ್ವರ
ನನುಜಾತಂ ಮಧುಹನಧಿಕೃತಾಮಳಚರಿತಂ || 162 ||

37) ಕೋಳಿಗುಂದ 301, E.C. X (R), ಕ್ರಿಶ. 1195

ಇದರಲ್ಲಿ ಹೊಯ್ಸಳ ದೊರೆ ಎರಡನೇ ಬಲ್ಲಾಳನ ಆಳಿಕೆಯಲ್ಲಿ, ಕೋಳಿಗುಂದದ ಜವನೆಯ ಮಾವಂತನು ತನ್ನ ಮಾತಾಪಿತೃಗಳಿಗೆ ಶ್ರೇಯಸ್ಸಾಗಲೆಂದು ಕೋಳಿಗುಂದದೂರಿನಲ್ಲಿ ವಿನಾಯಕನ ಪ್ರತಿಷ್ಠೆಯನ್ನು ಮಾಡಿಸಿ ಭೂಮಿಯನ್ನು ದತ್ತಿ ಕೊಟ್ಟದ್ದನ್ನು ಹೇಳಿದೆ.

ಹೊಯ್ಸಳವಂಶ

ಕಂ ॥ ಸ್ವಸ್ತಿಶ್ರೀಯಿರ್ಪುತ್ತಮ
ವಾಸ್ತು ಜಗಜ್ಜನಮನೋಹರಂ ಸುಜನಜನ
ಪ್ರಸ್ತುತ್ಯಂ ವಿಶದಯಶೋ
ವಿಸ್ತಾರಿತಮೆಸೆವುದಮಮ ಹೊಯ್ಸಳವಂಶಂ || 163 ||

ಬಲ್ಲಾಳ II

ಮ ವಿ ॥ ಪುದಿದಿರ್ದಟ್ಟಳೆ ಪೆರ್ಚಿದಾಳ್ವೆಜೆಯಗುರ್ವಾಗಿರ್ದ ಮೇಲ್ಗೊತ್ತಳಂ
ಕದನಕ್ಕದ್ಭುತಮಪ್ಪ ಡೆಂಕಣಿ ಕರಂ ಗುಣ್ಪುಳ್ಳಗುಟ್ ಕಾದಿ ಹೋ
ಗದೆನಿಪ್ಪಗ್ಗದ ದುರ್ಗದೊಂದು ಬಲದಿಂದಂ ಜೈತುಗಂ ಕಾದೆ ಬೇ
ಗದೆ ಕೊಂಡಂ ಕಲಿ ಲೊಕ್ಕಿಗೊಂಡಿಯನದಂ ಬಲ್ಲಾಳಭೂಪಾಳಕಂ
|| 164 ||

ಕಂ ॥ ಅನುಪಮಗುಣನಿಳಯಂ ತಾ
ನನವರತಂ ದಾನಿ ಸತ್ಯನಿಧಿ ತೇಜೋನಿಧಿ
ವಿನಯದಯಂ ಚಟ್ಟಯ್ಯನ
ವನಿತೆಯ ಮಲವ್ವೆಯ ಮಹಿಮೆಗಾರ್ಸಮನೊಳರೇ || 165 ||

ಜವನಯ್ಯ

ಕಂ ॥ ಜವನಂಜಕ್ಕುಲಿಪಂ ರಿಪು
ಜವನಂ ಮುಂಬಲ್ಲ ಕೀಳ್ವನನ್ತಾ ಧುರದೊಳ್
ಜವನೆಜೆ ಬೆಚ್ಚಿಸಿದಂತಿಜಿದಂ
ಜವನಯ ಮಾವನ್ತವೀರನಾಹವಧೀರಂ || 166 ||

38) ಮುದುಡಿ 214, E.C. X (R), ಕ್ರಿಶ. 1195

ಇದರಲ್ಲಿ ಹೊಯ್ಸಳ ದೊರೆಯಾದ ಎರಡನೆಯ ಬಲ್ಲಾಳನ ಮಾವಂತ ಕಾಟಯ್ಯ

ಮುಂತಾದವರು ಮುದವಡಿಯೂರ ಕೆರೆಯನ್ನು ಕಟ್ಟಿಸಿದಂತೆ ಹೇಳಿದೆ.

ವಿಷ್ಣುವರ್ಧನ

ಉ ಮಾ ॥ ಜಾರನೆ ವಜ್ರಿ ವಹ್ನಿ ಸುಡುವೋಜೆಯನುಳ್ಳವನರ್ಕಜಂ ಮಹಾ
ಕ್ರೂರನೆ ನಿಷ್ಕೃಪಂ ನಿರುತಿ ಬಾಡವಪೀಡಿತನಬ್ಧಿ ಸಂಚಳಂ
ಮಾರುತನರ್ಥತತ್ಪರನೆ ವಿತ್ತಪನೀಶ್ವರನಾಳ್ದನೆಂದು ಲ್ಕ್ಷ್ಮಿ ಸಂ
ಚಾರಿಸಿ ನೋಡಿ ಕೂಡಿದಳು ವಿಷ್ಣುವಿನೊಳ್ ಬಗೆಗೊಂಡು ನಲ್ಮೆಯಿಂ
॥ 167 ॥

39) ಕೋಳಿಗುಂದ 298, E.C. X (R), ಕ್ರಿಶ. 1197

ಇದರಲ್ಲಿ ಹೊಯ್ಸಳರ ದೊರೆ ಎರಡನೇ ಬಲ್ಲಾಳನ ಆಳಿಕೆಯಲ್ಲಿ ಕೇತಯ ಮಾವಂತ ಎಂಬುವವನು ಕೋಳಿಗುಂದದಲ್ಲಿ ಕೇತೇಶ್ವರ ದೇವಾಲಯವನ್ನು ನಿರ್ಮಾಣ ಮಾಡಿಸಿ ದತ್ತಿಯನ್ನು ಕೊಟ್ಟದ್ದನ್ನು ಹೇಳಿದೆ.

ಕೇತಯ

ಕಂ ॥ ಕಲಿತನದ ಪಾರ್ತ್ಥ ಕಣ್ಣನ
ಕಲಿಯೆಂಬೀ ಭೀಮಸೇನನಂ ನೆಜೆಪೋಲ್ವಂ
ಕಲಿತನದಳವಿಯೊಳೀತಂ
ಕಲಿ ಧುರದೊಳಗದಟನಲ್ತೆ ಜವನನ ಕೇತಂ ॥ 168 ॥

40) ಗಂಜಿಗೆರೆ 61, E.C. X (R), ಕ್ರಿಶ. 1197

ಇದರಲ್ಲಿ ಹೊಯ್ಸಳ ದೊರೆಯಾದ ಎರಡನೆಯ ಬಲ್ಲಾಳನ ಆಳಿಕೆಯಲ್ಲಿ ತಂತ್ರಪಾಳ ಮಹಾದೇವನು ಬೀಚೇಶ್ವರ ದೇವರಿಗೆ ಭೂಮಿಯನ್ನು ದತ್ತಿ ಬಿಟ್ಟಂತೆ ಹೇಳಿದೆ.

ವಿಷ್ಣುವರ್ಧನ

ಉ ಮಾ ॥ ಚೋಳನ ಜೂಬು ಮಾಳವನ ಗೋಟ್ಮುರಿ ಚೇರನನಟ್ಟಿ ತಿಂಬ ಮಾ
ಕಾಳಿ ವರಾಳನಂ ತುಜಿವ ಗಂಧಗಜಂ ಖಚನಳ್ಳೆಯಂಬು ನೇ
ಪಾಳನ ಬೆನ್ನ ಚೆಮ್ಮಟಿಗೆಯೀ ನಡೆತಂದನೆ ವೀರವಿಷ್ಣುಭೂ
ಪಾಳಕನೆಂಬ ಸಂಭ್ರಮಮೆ ವೈರಿನೃಪಾಳರ ಮಂಡಲಂಗಳೊಳ್ ॥ 169 ॥

ನರಸಿಂಹ I

ಉ ಮಾ ॥ ಮಾರಿಯ ಮಾರಿ ಮೃತ್ಯುವಿನ ನಾಲಗೆ ನಂಜಿನ ಪಂಜರ x
ಕಾರದಯಿಪ್ಪು ಬಂದೆಜಗಿ ಪೋಗೆ ಸಿಡಿಲ್ ಸಿಡಿಲೇಳ್ಗಿದಂ ಕಾದಿ ?
ಕೌರದ ಭ್ರಂಮರಂಕಷನೊಳಾಂತ್ತು ಬರ್ದುಂಕ್ಕುವಂನ್ನರರು
ವೀರವೆ ಮೂರ್ತ್ತಿಗೊಂಡುದಾ ನರನಾತನೊಳೀ ನರಸಿಂಗಭೂಪಂ ॥ 170 ॥

41) ತಳಲೂರು 162, E.C. X (R), ಕ್ರಿಶ. ಸು. 12 ನೇ ಶತಮಾನ

ಇದರಲ್ಲಿ ಹೊಯ್ಸಳ ದೊರೆ ಎರಡನೆಯ ಬಲ್ಲಾಳನ ಆಳಿಕೆಯಲ್ಲಿ ಓರಿಯದಂಡನಾಯಕ ದಾವಪ್ಪಯ್ಯನು ನೀರುಗುಂದ ನಾಡೊಳಗಣ ತಳಿರೂರನ್ನು ಅರವತ್ತೆರಡು ವೃತ್ತಿಗಳನ್ನಾಗಿ ಮಾಡಿ ಬ್ರಾಹ್ಮಣರಿಗೆ ದತ್ತಿಯಾಗಿ ಕೊಟ್ಟದ್ದನ್ನು ಹೇಳಿದೆ.

ಏಚಲದೇವಿ

ಕಂ ॥ ಆ ನರಪತಿಗಂಬೋಧಿಗ
ನೂನಗಭೀರತೆಯೆ ಸಮನಿಸಿಪ್ಪಂತಿರೆ ಸ
ನ್ಮಾನಿನಿ ಏಚಲದೇವಿ ಮ
ನೋನಯನ ಪ್ರೀತಿ ಸಮನಿಸಿರೆ ಸಮನಿಸಿದಳ್ ॥ 171 ॥

ಬಲ್ಲಾಳ II

ಕಂ ॥ ಆತನ ತನಯನತಿಪ್ರ
ಖ್ಯಾತನುದಾರಂ ಸಮಸ್ತಲೋಕಾಧಾರಂ
ನೀತಿವಿದನೆಂದೊಡುಪಮಾ
ತೀತಂ ಬಲ್ಲಾಳಭೂಪ ಸಮರಾಟೋಪಂ ॥ 172 ॥

42) ಅರಸೀಕೆರೆ 38, E.C. X (R), ಕ್ರಿಶ. ಸು. 12ನೇ ಶತಮಾನ

ಈ ಶಾಸನದಲ್ಲಿ ಕಲ್ಯಾಣದ ಚಾಲುಕ್ಯರ ದೊರೆಯಾದ ತ್ರಿಭುವನಮಲ್ಲನ ಆಳಿಕೆಯಲ್ಲಿ ಹೊಯ್ಸಳ ದೊರೆಯಾದ ಎರೆಯಂಗನ ಸಾಮಂತ ಕಚ್ಚವೆರ್ಗಡೆ ಅರಸಿಯಕೆರೆಯಲ್ಲಿ ಕನ್ನೆಗೆರೆಯನ್ನು ಕಟ್ಟಿಸಿ ತೂಬನಿಕ್ಕಿಸಿದಂತೆ ಹೇಳಿದೆ.

ಕಚ್ಚವೆರ್ಗಡೆ

ಕಂ ॥ ಆಳ್ದನ ಬೆಸಸಿದ ಬೆಸನಂ
ಕೇಳ್ದಂ ಕೊಟ್ಟು ಕಳೆವವೊಲುಳಿದು ನಿಲ್ವಳಿಯಾಳ್
ಕೇಳ್ದಡೆ ಕವಿಯಂ ಮುಟ್ಟುವ
ನಾಳ್ದನೆ ಗತಿಮತಿಯೆ ಕಚ್ಚವೆರ್ಗ್ಗಡೆ ಜಗದೊಳ್ ॥ 173 ॥

ಕಂ ॥ ಮೊನೆಯೊಳೀ ಕಯ್ಯೊಳೋಪನೆ
ಮೊನೆಯೊಳೆ ಸಂಗ್ರಾಮ ವಿಜಯಮೆರಡುಂ ತನ್ನಿಂ
ಜನಿಯಿಸುತಿರಲೆಱೆಯಂಗನ
ಮನೆ ಮೊನೆಯೆಂಬೆಡೆಗೆ ಕಚ್ಚವೆರ್ಗ್ಗಡೆ ನಿರುತಂ ॥ 174 ॥

ಕಂ ॥ ಕಡಿತಲೆಗೊಂಡೊಡೆ ರಾವಣ
ನೆಡಱಿದರಂ ಗೆಲಲೆವೇಡಿ ಬಿಲ್ಗೊಂಡೊಡೆ
ಫಡ ಮಾತರ್ಜುನನಹಿತರ
ಪಡೆಯಂ ಕೊಲ್ವೆಡೆಗೆ ಕಚ್ಚವೆರ್ಗಡೆ ಭೀಮಂ ॥ 175 ॥

ಕಂ ॥ ನಿಱಿದಪನೇಚಪನುಱೆಯಂ
ಪಱಿದಪನೆಂಬಿಟೆ ನುಡಿವರದುಗಳ ಪರಪೊಳತ
ನಮನಱಿಯಲ್ಲದೆ x x x
ನೆಱೆಮೊನೆ ಮುಟ್ಟಿದಡೆ ಬರ್ಮ್ಮನೊಬ್ಬನೆ ಬಂಟಂ ॥ 176 ॥

ಕಂ ॥ ಧರ್ಮದೊಳಂ ದಾನದೊಳಂ
ಪೆರ್ಮೆಯೊಳಂ ಶೌಚ ಗುಣದೊಳಂ ಸತ್ಯದೊಳಂ
ನೂರ್ಮಡಿಯಯ್ನೂರ್ಮಡಿ ಸಾ
ಸಿರ್ಮಡಿ ಜಗದೊಳಗೆ ಕಚ್ಚವೆರ್ಗಡೆಯಾರ್ಗಂ ॥ 177 ॥

ಕಂ ॥ ಚೆನ್ನಾಳ್ವರಸಿಯ ಕೆಱೆಯೊಳೆ
ಮುನ್ನಾರ್ಗಂ ಕರಮಸಾಧ್ಯಮೆನಿಸಿದ ಕೆಱೆಯಂ
ಕನ್ನೆಗೆಱೆಯಾಗೆ ಕಟ್ಟಿಸಿ
ಸನ್ನುತನೀ ಧರೆಗೆ ಕಚ್ಚವೆರ್ಗಡೆ ನೆಗಟ್ದಂ ॥ 178 ॥

ಕಂ ॥ ಉಱೆ ತಾನಗೞಿಸೆ ತೀವಿದ
ಕೆಱೆಗಾದರದಿಂದೆ ತೂಂಬನಿಕ್ಕಿಸಿದಂ ಪೊ
ನ್ನಱು ನೂಱು ಸಮೆಯೆ ಧರ್ಮ
ಕ್ಕೆಱೆವಟ್ಟನೆನಿಪ್ಪ ಕಚ್ಚವೆರ್ಗಡೆ ಮುದದಿಂ ॥ 179 ॥

43) ತಳಲೂರು 163, E.C. X (R), ಕ್ರಿಶ. ಸು. 1200

ಇದರಲ್ಲಿ ರೇವಣನು ತಳಿರೂರು ಅಗ್ರಹಾರದಲ್ಲಿ ವಿಷ್ಣುದೇವಸ್ಥಾನವನ್ನು ಕಟ್ಟಿಸಿದಂತೆ ಹೇಳಿದೆ.

ರೇವಣ

ಕಂ ॥ ಪರಹಿತದೊಳ್ ಚಲಮಂತಾ
ಸುರಗೃಹಮಂ ಮಾಡಿ ಕೀರ್ತಿವಡೆಯಲ್ ಚಲಮು

ರ್ವರೆಯೊಳ್ ಬುಧರಂ ದ್ವಿಜರಂ
ಪೊರೆವೆಡೆಯೊಳ್ ರೇವಣಂಗೆ ಚಲಮೆಸೆದಿರ್ಕುಂ ॥ 180 ॥

ಕಂ ॥ ವನನಿಧಿಪರಿವೃತವಿಶ್ವಾ
ವನಿತಳದೊಳಗಿದು ವಿಚಿತ್ರಮೆಂಬಂದದೆ ಸ
ಜ್ಜನವಿನುತರೇವಣಾರ್ಯಂ
ಮನುಚರಿತಂ ವಿಷ್ಣುಭವನಮಂ ಮಾಡಿಸಿದಂ ॥ 181 ॥

44) ಜಾಜೂರು 47, E.C. X (R), ಕ್ರಿ.ಶ. ಸು. 1200

ಇದರಲ್ಲಿ ಹೊಯ್ಸಳ ದೊರೆಯಾದ ಎರಡನೆಯ ಬಲ್ಲಾಳನ ಆಳಿಕೆಯಲ್ಲಿ ಎರಹಿಸೆಟ್ಟಿ ಕಲಿದೇವರಿಗೆ ಭೂಮಿಯನ್ನು ದತ್ತಿ ಬಿಟ್ಟಂತೆ ಹೇಳಿದೆ.

ವಿಷ್ಣುವರ್ಧನ

ಕಂ ॥ ಪರ ಮಂಡಳದಿಂ ರಕ್ಷಿಸಿ
ಪರಿವಾರಮನಾತ್ಮ ಧಾತ್ರಿಯಂ ಭೂಸುರರ್ಗಂ
ಸುರ ಪೂಜೆಗಮಿತ್ತನದಾರ್
ದೊರೆ ವಿಷ್ಣು ನೃಪಂಗೆ ಬಳದೊಳಂ ದಾನದೊಳಂ ॥ 182 ॥

ಬಲ್ಲಾಳ II

ಮ ವಿ ॥ ಕರಿಗಳ್ ಪಣ್ಣಿದ ಪೊನ್ನ ಪಣ್ಣುಗೆಯವೊಂದೇೞೆಂಟು ನೂಱೆಟ್ಟಿ ಪೆ
ರ್ದೆರೆಗಳ್ ಮೆಯ್ವುಡೆದಂದದಿಂ ಕವಿವ ಜಾತ್ಯಶ್ವಂಗಳೇೞೆಂಟು ಸಾ
ಯಿರವಸ್ತ್ರದ್ಯುತಿ ತಳ್ತ ಪಾಯದಳಮೊಂದೇೞೆಂಟು ಲಕ್ಕಂ ತೆರ
ಳ್ತರೆ ಹುಃ ಸೇವುಣರಂ ಪಡಲ್ವಡಿಸನೇ ಬಲ್ಲಾಳನೊಂದಾನೆಯಿಂ ॥ 183 ॥

ಚಂ ಮಾ ॥ ಅರಸುಗಳೆಂಬವರ್ ಬವರದೊಳ್ ಸೆರಗಿಂ ಪೆಱಗಿರ್ಪ ಬುದ್ಧಿಯಿಂ
ದರನೆಲೆಯೆಂದು ಮಾಡಿ ಪೆಱರಂ ಪೆಱರಿಂದಮೆ ಗೆಲ್ವರಲ್ಲದಿಂ
ತಿರೆ ಪೆಱಗಾಗೆ ತನ್ನ ಬಲಮನ್ಯಬಲಂ ಬೆಱಗಾಗಲೊಂದೆ ಸಿಂ
ಧುರದೊಳೆ ಗೆಲ್ವರೇ ಪಗೆಯನಾರ್ ಸಮನಿಂತಸಹಾಯಶೂರನೊಳ್
॥ 184 ॥

ಶಿವಶಕ್ತಿ

ಚಂ ಮಾ ॥ ಕುಮತಮನೊಳ್ಪುವೆತ್ತ ನುಡಿಯಿಂ ನೆಱೆ ಭಂಗಿಸಿ ಪೆಂಪುವೆತ್ತ ಶೈ
ವಮನಿಳೆಯೊಳ್ ಪ್ರತಿಷ್ಠಿಸಿ ಪರಾಕ್ರಮದಿಂದಮಿದಿರ್ಚೆ ತನ್ನ ವಿ

ಕ್ರಮದೊಳದಿರ್ಪಿ ತಾನೆ ಪಡೆದಂ ಸಮಯ ಪ್ರತಿಪಾಳಕ ಪ್ರಭು
ತ್ವಮನೆಲೆ ಪಾಟಿಯಾರೊ ಶಿವಶಕ್ತಿಯೊಳೀ ಮಹದೇವ ಜೀಯನೊಳ್
॥ 185 ॥

ಚಂದ್ರ ಭೂಷಣ

ಮ ವಿ ॥ ಪ್ರತಿಮಾ ಲಕ್ಷಣ ಯುಕ್ತನೆಂದು ವಿದಿತ ಪ್ರಾಸಾದ ಸಲ್ಲಕ್ಷಣಾ
ನ್ವಿತನೆಂದೀಶ ಪದಾರ್ಚನಾ ವಿಧಿ ವಿಧಾನ ಪ್ರೌಢನೆಂದನ್ಯ ದು
ರ್ಮತ ನಿರ್ಮೂಳಕನೆಂದು ಧಾತ್ರಿ ಪೊಗಟ್ಟುಂ ಕಾಳಾಮುಖಸ್ಥಾಸಕೋ
ದ್ಯತನಂ ಸದ್ಗುಣ ಚಂದ್ರ ಭೂಷಣನನುದ್ಯದ್ದಾನಿಯಂ ಮಾನಿಯಂ ॥ 186 ॥

ರಾಜವೂರ್

ಕಂ ॥ ಮದನಂಗೆ ರಾಜವೂರ್ ಸುಖ
ಸದನಂ ಬೆಳೆದಿರ್ಪ ಕಟಿಮೆಯಿಂ ಕೆಯ್ವೊಲದಿಂ
ಪುದಿದೊದವಿದ ಬನದಿಂ ತುಂ
ಬಿದ ಕೆಱೆಯಿಂ ಫಳಿತಮಾದ ತೆಂಗಿಂ ಕೌಂಗಿಂ ॥ 187 ॥

45) ಕಣಕಟ್ಟೆ 72, E.C. X (R), ಕ್ರಿಶ. 1208

ಇದರಲ್ಲಿ ಹೊಯ್ಸಳ ದೊರೆಯಾದ ಎರಡನೆಯ ಬಲ್ಲಾಳನ ಆಳಿಕೆಯಲ್ಲಿ ಕಳಿಕಟ್ಟಿಯ ಪ್ರಜೆ ಗಾವುಂಡುಗಳು ಬಿಟ್ಟಯ್ಯನಿಗೆ ಉಂಬಳಿಯನ್ನು ಕೊಟ್ಟಂತೆ ಹೇಳಿದೆ.

ಕಳಿಕಟ್ಟಿ

ಉ ಮಾ ॥ ತೀವಿದ ಚೆನ್ನನಪ್ಪ ಕೆಱೆಯೊಪ್ಪುವ ಕಾತ ಕವುಂಗು ಸುತ್ತಲುಂ
ಶ್ರೀವನಲಕ್ಷ್ಮಿ ಕಣ್ದೆಱೆದವೋಲ್ ಬೆಳೆದಿರ್ದ ಸುಗಂಧಶಾಲಿಯಿಂ
ದೀ ವಸುಧಾತಳಾಗ್ರದೊಳು ರಮ್ಯಮೆನಲ್ ಕಳಿಕಟ್ಟಿ ನಾಡೆಯುಂ
ದೇವಗೃಹಂಗಳಿಂದೆಸೆದು ಶೋಭಿಸುತಿರ್ದುದು ನೋೞ್ಪೊಡೂರ್ಗಳೊಳ್
॥ 188 ॥

46) ಅರಸೀಕೆರೆ 31, E.C. X (R), ಕ್ರಿಶ. 1219

ಇದರಲ್ಲಿ ಹೊಯ್ಸಳ ದೊರೆಯಾದ ಎರಡನೆಯ ಬಲ್ಲಾಳನ ಮಂತ್ರಿ ವಸುಧೈಕಬಾಂಧವ ರೇಚರಸ ಮೊದಲಾದವರು ಅರಸಿಯಕೆರೆಯಲ್ಲಿ ಸಹಸ್ರಕೂಟ ಜಿನಬಿಂಬವನ್ನು ಪ್ರತಿಷ್ಠೆ ಮಾಡಿ ಭೂಮಿಯನ್ನು ದತ್ತಿ ಬಿಟ್ಟಂತೆ ಹೇಳಿದೆ.

ಯಾದವ ವಂಶ

ಶಾ ವಿ ॥ ಶ್ರೀರಾಮಾವಸಥಂ ಜಗಜ್ಜನನುತಂ ಗೋತ್ರಾಸ್ಪದಂ ಭೂರಿಗಂ
ಭೀರಂ ಸತ್ವಸಮನ್ವಿತಂ ನಿಖಿಲವಸ್ತುಸ್ಥಾನಮುರ್ವೀತಳಾ

ಧಾರಂ ನಿತ್ಯಮುದಾತ್ತಮಪ್ರತಿಮಮೆಂಬೀಪೆರ್ಮೆಯಿಂ ಭಾವಿಸಲ್
ಪಾರಾವಾರದವೊಲ್ ನೆಗಟ್ತೆವಡೆದಿರ್ಕುಂ ಯಾದವಾಖ್ಯಾನ್ವಯಂ ॥ 189 ॥

ಬಲ್ಲಾಳ II

ಕಂ ॥ ಬುಧನಂತಿಳಾವರಂ ವಾ
ರಿಧಿಯಂತೆ ವಿಶಾಲವಿಲಸದಷಡಕ್ಷೀಣಂ
ಮಧುಸಖನಂತಸಮಾಸ್ತ್ರಂ
ಸುಧಾಂಶುಧರನಂತುಮಾಧವಂ ಬಲ್ಲಾಳಂ ॥ 190 ॥

ರೇಚರಸ

ಮ ವಿ ॥ ವದನಂ ವಾಗ್ವನಿತಾವಿಲಾಸ ಸದನಂ ವಕ್ಷಂ ರಮಾನರ್ತಕೀ
ವಿದಿತಾನರ್ತಮುದಾರಮರ್ಥಿಜನತಾಸಂತರ್ಪಣಂ ಕೀರ್ತಿಕೌ
ಮುದಿ ಜೈನಾರ್ಣವವರ್ಧನಂ ಗುಣಗಣಂ ಭೂಭೂಷಣಂ ಮೂರ್ತಿ ಚಾ
ರುದಯಾನ್ವಿತಮೆನಲ್ಕೆ ರೇಚಣಚಮೂಪಂ ಪೆರ್ಮೆಯಂ ತಾಳ್ದಿದಂ
॥ 191 ॥

ಕಂ ॥ ಒಸೆದವರಿವರೆನ್ನದೆ ಸಂ
ತೊಸಮಪ್ಪಿನಮಿತ್ತು ಪಡೆದನೀವಸುಮತಿಯೊಳ್
ವಸುಧೈಕಬಂಧುವೆಂಬೀ
ಪೆಸರಂ ರೇಚರಸನುಂತು ದೇಸಿಯಿನಾಯ್ತೇ ॥ 192 ॥

ನರಸಿಂಹ II

ಚಂ ಮಾ ॥ ಹೃದಯಕಳಂಕನಲ್ಲದ ಜಡಾತ್ಮಕನಲ್ಲದ ಕಲ್ಪವೃಕ್ಷವೆಂ
ಬುದು ಗುರುಗೋತ್ರಶತ್ರು ಚಣವಲ್ಲದ ಕೌಶಿಕನಲ್ಲದಿಂದ್ರನೆಂ
ಬುದು ವಿಪರೀತನಲ್ಲದ ಕುಜನ್ಮಕನಲ್ಲದ ಕಲ್ಪವೃಕ್ಷನೆಂ
ಬುದು ವಿಬುಧಾಶ್ರಯೈಕ ನಿಧಿಯಂ ಕುವರಾಗ್ರಣಿ ನಾರಸಿಂಹನಂ ॥ 193 ॥

ಅರಸಿಯಕೆರೆ

ಮ ಸ್ರ ॥ ನತಭೃಂಗಾಂಭೋಜಷಂಡಂ ಶುಕಪಿಕವಿವಿಧೋದ್ಯಾನಸಂಕೀರ್ಣಮಾಪೂ
ರ್ಣತಟಾಕಂ ಗಂಧಶಾಲೀಪರಿಮಳಕಳಿತಂ ಪುಷ್ಪಮುಂದ್ರೇಕ್ಷುವಾಪೀ
ವೃತಮುತ್ತುಂಗಪ್ರಭಾಭಾಸುರಸುರಗೃಹಸಂಪನ್ನಮುದ್ಯತ್ತ್ರಜಾಪೂ
ರಿತಮುರ್ವೀಮಂಡನಂ ಸಂದರಸಿಯಕೆಱೆಯಂ ಬಣ್ಣಿಸಲ್ ಬಲ್ಲನಾವಂ
॥ 194 ॥

ಸ್ರಗ್ಧರೆ ॥ ಸಾರಂ ನೋಳ್ಪರ್ಗ್ಗೆ ಪೆಂಪುಳ್ಳರಸಿಯಕೆಱೆಯೊಳ್ವಿಶ್ವ ವೇದಾಂಕ ವಿಪ್ರ
ವ್ರಿ್ರರ ಕಾಯ್ವಾಳ್ಗಳಾಢ್ಯರ್ಪ್ಪರೆದರಚಲವಾಕ್ಯರ್ತುರೀಯುರ್ವ್ರಿ್ನುತಾ
ಕಾರಂ ಕಾನ್ತಾಜನಂ ಕಾರುಗಳಮದರಿಳಾಮಂಡನಂ ದೇಗುಳಂ ಗಂ
ಭೀರೋದಾರಂ ತಟಾಕಂ ಫಳಭರಿತವನಂ ಪೂತ ಪೂದೋಟವೆಂದುಂ
॥ 195 ॥

ಅರಸಿಯಕೆರೆಯ ಜೈನರು

ಮ ಸ್ರ ॥ ನುಡಿ ಸತ್ಯೋದ್ಯೋತಗೇಹಂ ನಡೆವಳೆ ಜಿನಧರ್ಮ್ಮಾನುಗಂ ಶಕ್ರನಂ ನಾ
ಲ್ಮಡಿ ಜೈನಾಂಘ್ರಿದ್ವಯಾರಾಧನೆ ಧನದನಿಭಂ ಪೆರ್ಮ್ಮೆ ಸತ್ಪಾತ್ರದೊಳ್ಮೆ
ಯ್ವಡೆದಿಕ್ಕುನ್ದಾನವರ್ತ್ಥಾರ್ಜನೆ ನಿಖಿಳ ಜನೋಚ್ಛಾಹವಾವನ್ದದೇಂ ನೋ
ಳ್ಪಡೆ ಪೆಂಪಂ ತಾಳ್ದಿ ಸನ್ದೀಯರಸಿಯಕೆಱೆಯಾಭವ್ಯರೊಳ್ಪಾಟಿಯಾವಂ
॥ 196 ॥

47) ಬೆಂಡೇಕೆರೆ 52, E.C. X (R), ಕ್ರಿ.ಶ. 1232

ಇದರಲ್ಲಿ ಹೊಯ್ಸಳ ದೊರೆಯಾದ ಎರಡನೆಯ ನರಸಿಂಹನ ಆಳಿಕೆಯಲ್ಲಿ ದಾಮೋದರಸೆಟ್ಟಿ ಎಂಬುವವನು ಬೆಂಡೆಯಕೆರೆಯಲ್ಲಿ ದಾಮೋದರೇಶ್ವರ ದೇವಸ್ಥಾನವನ್ನು ಕಟ್ಟಿಸಿ ಭೂಮಿಯನ್ನು ದತ್ತಿ ಬಿಟ್ಟಂತೆ ಹೇಳಿದೆ.

ವಿಷ್ಣುವರ್ಧನ

ಚಂ ಮಾ ॥ ಯದುಕುಲ ವಾರ್ಧಿ ವರ್ಧನ ಸುಧಾಕರನುನ್ನತ ಕೀರ್ತಿಯುಕ್ತನ
ತ್ಯುದಿತ ಯಶೋಭಿರಾಮನತಿಧಾರ್ಮಿಕನಾಹವ ಭೀಮ ಸತ್ಯ ಸಂ
ಪದನತಿಧೀರನುನ್ನತ ಗಭೀರನುದಾರನೆನಿಪ್ಪ ಪೆಂಪಿನಿಂ
ದುದಧಿಪರೀತ ಭೂತಳಮುಮಂ ನೆಱೆ ತಾಳ್ದಿದ ವಿಷ್ಣುವರ್ಧನಂ ॥ 197 ॥

ಬಲ್ಲಾಳ II

ಮ ಸ್ರ ॥ ಮುಳಿಸಿಂದೆಟ್ಟಿಂದು ನಮ್ಮಂ ಬಳಸಿದೊಡರಿದಿಂತೀತನೊಳ್ ಕಾದಲುಂ ನ
ಮ್ಮಳವಲ್ಲಂ ಕಾಣ್ಬಮೆಂದಾ ರಿಪು ನೃಪರಿಗಿದೆಯ್ತಂದು ದೇವೆಮ್ಮನೆಮ್ಮೀ
ಸ್ಥಳದಿಂ ಬಿಟ್ಟೆಟ್ಟು ಪೋಪಂತಿರೆ ನೆನೆಯದಿರೆಂದರ್ಥ ಹಸ್ತ್ಯಶ್ವ ರತ್ನಾ
ವಳಿಯಂ ತಂದಿತ್ತು ಪಾದಕ್ಕೆಱಗುವರಿರದಾ ವೀರಬಲ್ಲಾಳಗೆಂದುಂ ॥ 198 ॥

ನರಸಿಂಹ II

ಚಂ ಮಾ ॥ ಉದಯಿಸಿದಂ ದಿವಾಕರನ ತೇಜದವೊಲ್ ಭವನಂತೆ ಶಕ್ತಿಯಿಂ
ದುದಧಿಯ ಮಾಟ್ಕೆಯಿಂದತಿ ಗಭೀರತೆ ಮೇರುವಿನಂತೆ ಬಿಣ್ಪಿನಿಂ
ಪದುಮಜನಂತಿರತ್ಯಧಿಕ ವಿದ್ಯೆಯೊಳಚ್ಯುತನಂತುಪಾಯದಿಂ
ದೊದವಿ ನಿರಂತರಂ ಧರೆಯ ತಾಳ್ದಿದನೀ ನರಸಿಂಹ ಭೂಭುಜಂ ॥ 199 ॥

ಚಂ ಮಾ ॥ ಪೊಡೆವ ನಿಸಾಳ ಕಾಹಳ ರವಂಗಳನಾಲಿಸಿ ವೈರಿರಾಯರಾ
ಪೊರ್ಡಡರಿಪ ಶಕ್ತಿಯಂ ಬಿಸುಟು ಕೈಮುಗಿದಂಜಿಕೆಯಿಂದೆ ಬಂದು ನಿ
ನ್ನೊಡನೆ ವಿರೋಧಮಂ ನೆಗಟ್ಟರಾರ್ ಬದುಕಿರ್ಪರದೆಲ್ಲಿ ಪೊಕ್ಕಪರ್
ಕಡುಪನೆ ಮಾಣ್ದು ಕಾವುದೆನುತಿರ್ಪರು ವೀರನೃಸಿಂಹರಾಯನೊಳ್॥ 200 ॥

ಚಂ ಮಾ ॥ ತನಗಿದಿರಾಗಲಂಜಿ ಶರಣೆಂದವರ್ಗಿತ್ತಭಯಪ್ರದಾನಮಂ
ತನಗಿದಿರಾಂತ ವೈರಿ ನೃಪರಂ ಪಲರಂ ತವೆ ಕೊಂದು ವಸ್ತು ವಾ
ಹನ ತತಿಯಂ ಧರಿತ್ರಿಯ ನಿಜಾಸಿಯೊಳಂ ನೆಱೆ ಕೊಂಡು ಕೀರ್ತಿ ಕಾ
ಮಿನಿಯನಿಳಾ ಜಯಾಂಗನೆಯನೊಲ್ದಿದನೀ ನರಸಿಂಹ ಭೂಭುಜಂ॥ 201 ॥

ದಾಮೋದರ ಸೆಟ್ಟಿ

ಕಂ ॥ ಕಟ್ಟಿಸಿದ ಕೆರೆ ಸುರಾಲಯ
ಮಿಟ್ಟಾರವೆ ಪಲವು ಸತ್ರಮಱವಂಟಿಗೆಯಂ
ನೆಟ್ಟನೆ ಗಣಿಸಲ್ ನೆಱೆಯಂ
ಸಿಟ್ಟಿಯ ಮಾಡಿದ ಚತುರ್ಮುಖಂ ನರರಳವೇ ॥ 202 ॥

48) ಅರಕೆರೆ 314, E.C. X (R), ಕ್ರಿ.ಶ. 1233

ಇದರಲ್ಲಿ ಹೊಯ್ಸಳ ದೊರೆಯಾದ ಎರಡನೆಯ ನರಸಿಂಹನ ಆಳಿಕೆಯಲ್ಲಿ ದಾಮೋದರಸೆಟ್ಟಿ ಸರ್ವಜ್ಞಪುರವೆಂಬ ಅರಕೆರೆಯಲ್ಲಿ ವಿಷ್ಣು ದೇವಸ್ಥಾನವನ್ನು ಕಟ್ಟಿಸಿ ಭೂಮಿಯನ್ನು ದತ್ತಿ ಬಿಟ್ಟಂತೆ ಹೇಳಿದೆ.

ಎರೆಯಂಗ

ಕಂ ॥ ತತ್ತನಯಂ ವಿಕ್ರಾಂತಗು
ಣೋತ್ತುಂಗಂ ಶತ್ರುಕುಳಮನೋಭಂಗಂ ಭೂ
ಪೋತ್ತಮನೆಱೆಯಂಗಂ ಭೂ
ಭೃತ್ತನಯಾಧೀಶಪದಪಯೋರುಹಭೃಂಗಂ ॥ 203 ॥

ಮ ಸ್ರ ॥ ಒದವಿದಿರ್ವೀರವೈರಿಕ್ಷಿತಿಪನಿಕರಸಂಗ್ರಾಮದೊಳ್ ಸಜ್ಜಿತಪ್ರೋ
ನ್ಮದದಂತಿವ್ರಾತಕುಂಭಸ್ಥಳಮನಳಱೆ ದೋರ್ದಂಡಚಂಡಾಸಿಯಿಂ ಪೊ
ಯ್ವುದುಮಲ್ಲಿಂದುಣ್ಮಿ ಮುಕ್ತಾವಳಿ ಜಯಲಲನಾಕಂಠಿಕಾಮಾಲೆ ತಾನಾ
ದುದೆನಲ್ ವಿಕ್ರಾಂತದಿಂದಾರೆಱೆಗನೃಪನೊಳಾಂಪುದ್ಧತಕ್ಷೋಣಿಪಾಲರ್
॥ 204 ॥

ಏಚಲದೇವಿ

ಉ ಮಾ ॥ ಆತನ ಕಾಂತೆಯೆಂತೆನೆ ಜಗತ್ತಳದೊಳ್ ಕಮನೀಯಕಾಮಿನೀ
ವ್ರಾತಮನೆಯ್ದೆ ನಿರ್ಮಿಸಿ ವಿರಿಂಚಿ ಜಿತಶ್ರಮನಾಗಿ ತನ್ನ ವಿ
ಜ್ಞಾತಸದರ್ಥಮಿಂತಿದೆನಿಪಂತಿರೆ ನಿರ್ಮಿಸಿದಂ ಗಡೆಂದೊಡೇ
ಮಾತೊ ಮೃಣಾಳಕೋಮಳೆಯನೇಚಲದೇವಿಯನೆಂತು ಬಣ್ಣಿಪರ್
॥ 205 ॥

ವಿಷ್ಣುವರ್ಧನ

ಮ ವಿ ॥ ಅವರೊಳ್ ಮಧ್ಯಮನಾಗಿಯುಂ ವಿನಯದಿಂದತ್ಯುತ್ತಮಂ ತಾನೆನಿ
ಪ್ಪ ವಿಶೇಷೋನ್ನತಿವೆತ್ತನುದ್ಧತವಿರೋಧಿಕ್ಷೋಣೀಪಾಲವ್ರಜಾ
ಹವಕಂಠೀರವಶೌರ್ಯನಪ್ರತಿಮಕಾಂತಾನೀಕ ನೇತ್ರೋತ್ಪಲೇಂ
ದುವಿಭಾಸೋಜ್ವಲಕೀರ್ತಿ ಮನ್ಮಥನಿಭಂ ಶ್ರೀವಿಷ್ಣುಭೂಪಾಲಕಂ **॥ 206 ॥**

ಮ ಸ್ರ ॥ ಮನುಮಾರ್ಗಂ ವಿಷ್ಣುಭಕ್ತಂ ರಿಪುಗಿರಿಕುಲಿಶಂ ವೀರವಿಷ್ಣುಕ್ಷಿತೀಶಂ
ಮುನಿಸಿಂದೇಟ್ಟಿಂದನಿನ್ನಾವೆಡೆಯೊಳಡಗುವಂ ನಮ್ಮ ಕಾವನ್ನನಾವಂ
ಮನವಂದಂತೀಗಳಾತಂ ನಡಪಲಿ ದಯೆಯಿಂದೆಂದು ಬಂದಂಜಿ ಭೂಪರ್
ಧನಮಂ ಹಸ್ತ್ಯಶ್ವರತ್ನಾವಳಿಯನವನಿಯಂ ಕೊಟ್ಟು ಕಾಣ್ಬರ್ ಕೆಲಂಬರ್
॥ 207 ॥

ನರಸಿಂಹ I

ಕಂ ॥ ತತ್ತನಯಂ ನರಸಿಂಹನ್ನ
ಪೋತ್ತಮನುದ್ಯತ್ಪ್ರತಾಪನಹಿತನೃಪಾಳೋ
ನ್ಮತ್ತೇಭಕುಂಭಿದಳನಾ
ಯತ್ತಾಯತಖಡ್ಗಕಳಿತನಿಜದೋರ್ದಂಡಂ **॥ 208 ॥**

ಬಲ್ಲಾಳ II

ಮ ಸ್ರ ॥ ನರಸಿಂಹೋರ್ವೀಶಕಾಂತಾತ್ಮಜನುರುತರಧರ್ಮೋಲ್ಲಸದ್ದುಗ್ಧನೀರಾ
ಕರರಾಕೇಂದೂಪಮಾನಂ ನಳನಹುಷದಿಳೀಪಾದಿಭೂಪಾಳಕೋದ್ಯ
ಚ್ಚರಿತಂ ದೋರ್ದರ್ಪವೈರಿಕ್ಷಿತಿಪನಿಕರಸಂಗ್ರಾಮಕೇಳೀವಿನೋದಂ
ಪರಿಭಾಸ್ವತ್ಕೀರ್ತಿವಲ್ಲೀವಲಯಿತ ಭುವನಂ ವೀರಬಲ್ಲಾಳಭೂಪಂ **॥ 209 ॥**

ಮ ಸ್ರ ॥ ಉರಗೇಂದ್ರಂ ಧಾತ್ರಿಯಂ ಧಾರಿಣಿ ಹಿಮಗಿರಿಯಂ ಹಿಮ್ಮಶೈಲಂ ಕುಭೃಜ್ಜಾ
ವರನಂ ಗೌರೀವರಂ ಚಂದ್ರನನಮಳಿನಚಂದ್ರಂ ಕಲಾಸೋಮಮಂ ನಿ

ಭರ್ಗರದಿಂದಂ ತಾಳ್ದುವಂತಪ್ರತಿಮ ಯದುಕುಲೋದ್ಭೂತಸಾಮ್ರಾಜ್ಯಲಕ್ಷ್ಮೀ
ಭರಮಂ ಹೇಲಾಸುಸಾಧ್ಯಂ ತನಗೆನೆ ತಳೆದಂ ವೀರಬಲ್ಲಾಳಭೂಪಂ
॥ 210 ॥

ಮ ಸ್ರ ॥
ಕರಿನಕ್ರಾಭೀಳಹೇಷಾರವಯುತ ಹಯಸಂದೋಹವೀಚೀಪದಾತಿ
ಸ್ಫುರದುತ್ಪಾಠೀನಕೋಲಾಹಲಸಮರಮಹಾಂಭೋಧಿಯೊಳ್ ತನ್ನದೋರ್ಮಂ
ದರದಿಂದಂ ಮಂಥನಾರಂಭಮನೊದವಿಸಿ ವೈರಿಕ್ಷಮಾಪಾಲಲಕ್ಷ್ಮೀ
ಕರಿಜಾತ್ಯಶ್ವಂಗಳಂ ಕೊಂಡತುಳಬಳಯುತಂ ವೀರಬಲ್ಲಾಳಭೂಪಂ ॥ 211 ॥

ಪದ್ಮಲದೇವಿ

ಕಂ ॥ ಆ ವಿಭುವಿನ ಪಟ್ಟಮಹಾ
ದೇವಿ ಮದದ್ವಿರದಗಮನೆ ಬಿಂಬಾಧರೆ ಲ
ಜ್ಜಾವತಿ ಪದ್ಮಲದೇವಿ ಕ
ಳಾವತಿ ಲಾವಣ್ಯಪುಣ್ಯವತಿ ಸೊಗಯಿಸಿದಳ್ ॥ 212 ॥

ಕಂ ॥ ರತಿಗಮರುಂಧತಿಗಂ ಸರ
ಸತಿಗಂ ರೇವತಿಗಮೆಸೆವ ಪಾರ್ವತಿಗಂ ಶ್ರೀ
ಸತಿಗಂ ಸಮನೆನಿಸಿ ಮಹಾ
ಸತಿ ಪದ್ಮಲದೇವಿ ತೊಳಗಿ ಬೆಳಗಿದಳೆಳೆಯಂ ॥ 213 ॥

ನರಸಿಂಹ II

ಮ ಸ್ರ ॥ ಕಮಠಂಗಿನ್ನೇಕೆ ಸರ್ವೋರ್ವಿಯ ಪೊಱೆ ಫಣಿರಾಜಂಗದಿನ್ನೇಕಿಳಾಭಾ
ರಮದಿನ್ನೇಕಾ ದಿಶಾದಂತಿಗೆ ದಿಗುಭರಮಂ ತಾಳ್ದುವಾಯಾಸಮಿನ್ನೇ
ಕೆ ಮಹೀಭೃನ್ಮೂಳಮಂ ಪೊರ್ದುವ ಗಸಣಿ ನೆಲಕ್ಕಾನೆ ಪೋ ಸಾಲ್ವೆನೆಂದ
ಶ್ರಮದಿಂ ಭೂಚಕ್ರಮಂ ವಿಕ್ರಮದೊಳೆ ತಳೆದಂ ಶ್ರೀನೃಸಿಂಹೋರ್ವಿಪಾಳಂ
॥ 214 ॥

ಮ ಸ್ರ ॥ ಕಡುಪಿಂದಂ ನಾರಸಿಂಹೋರ್ವಿಪನವಯವದಿಂದೆತ್ತಿ ಬಂದಪ್ಪನಿನ್ನಾ
ವೆಡೆಯಂ ಪೊಕ್ಕಿರ್ಪಮಿನ್ನಾವೆಡೆಯೊಳಡಗುವಂ ತಮ್ಮ ಕಾವನ್ನನಾವಂ
ಕುಡುವಂ ಹಸ್ತ್ಯಶ್ವರತ್ನಾವಳಿಯನವನಿಯಂ ಪ್ರಾಣದಿಂ ಬರ್ದೊಡೆಂತುಂ
ಪಡೆವಂ ಹಸ್ತ್ಯಶ್ವರತ್ನಾವಳಿಯನೆಳೆಯನೆಂದಿತ್ತು ಕಾಣ್ಬರ್ ನೃಪರ್ಕಳ್
॥ 215 ॥

ಚಂ ಮಾ ॥ ಕರಿಘಟೆ ಕೂಡೆ ನೂಂಕಿದುವು ವಾಜಿದಳಂ ನಡೆತಂದುವೊಡ್ಡಣಂ
ತರತರದಿಂದಮೊಡ್ಡಿ ನಡೆಗೋಂಟೆವೊಲೆತ್ತಿಬರುತ್ತುಮಿರ್ದುವಾ
ಸುರಮೆನೆ ಬರ್ಪ ಬಿಲ್ಲಣಿಗೆಯಾಂಪವರಾರೆನುತಂಜಿ ಭೂಭುಜರ್
ಕರುಣಿಸಿ ಕಾವುದೆಮ್ಮನೆನುತಿರ್ದಪರಾ ನರಸಿಂಹರಾಯನಂ ॥ **216** ॥

ಮ ವಿ ॥ ಒದವಿರ್ದ್ದಯದುವಂಶಜಂ ಮಲಪರೊಳ್ಗಂಡಂ ಭರಂಗೆಯ್ದು ತಾ
ನಿದಿರಾಂತಿರ್ದರಿಮಂಡಲಕ್ಕೆ ನಡೆಯಲ್ ಬೆನ್ನಿತ್ತು ಪೋದರ್ ಕೆಲರ್
ಕದನಕ್ಕೊಡ್ಡಿದಿರಾಂತ ವೈರಿನೃಪರಂ ಪೇಸೇಟೆ ಕೊಂದಂ ಪಲರ್
ಕದನಕ್ಕಂಜಿದೊಡಿತ್ತನೊಲ್ದಭಯಮಂ ಶ್ರೀನಾರಸಿಂಹೋರ್ವಿಪಂ ॥ **217** ॥

ಮ ಸ್ರ ॥
ಸುರರಾಜೇಭಂ ಮದಾಂಧಂ ಮಧುಪಕುಲಯುತಂ ಪುಂಡರೀಕಂ ಸದಾನೀ
ಚರತಂ ಗಂಗಾಹ್ರದಂ ಚಂದ್ರನ ರುಚಿ ಸಲೆ ದೋಷಾವಿಲಂ ತಾನೆನಲ್ ಪೇಟ್
ದೊರೆಯೇ ಶ್ರೀನಾರಸಿಂಹೋರ್ವಿಪನ ವಿಜಯಶ್ರೋಲ್ಲಕ್ಷ್ಮಿಯೊಳ್ ವರ್ಣಸಾಮ್ಯಂ
ಪಿರಿದುಂ ತಾನಾದೊಡಂ ನಿರ್ಮಳಗುನದಿನವಂ ಪೋಲಿಸಲ್ ಬಲ್ಲನಾವಂ ॥ **218** ॥

ಸರ್ವಜ್ಞಪುರ

ಉ ಮಾ ॥ ವೇದಮನೋದುತಿರ್ಪಧಿಕಶಾಸ್ತ್ರಮನೊರ್ಮೆಯೆ ಕೇಳುತಿರ್ಪ ಸಂ
ವಾದಿಪ ತರ್ಕಮಂ ಬಿಡದೆ ತರ್ಕಿಸುತಿರ್ಪ ಪುರಾಣಮಂ ಮನೋ
ಹ್ಲಾದದೆ ಪೇಳುತಿರ್ಪ ಸಕಲಸ್ಮೃತಿನಾಟಕಕಾವ್ಯದರ್ಥಮಂ
ಸಾಧಿಸುತಿರ್ಪ ವಿಪ್ರತತಿಯಿಂ ನೆಗೞ್ದೊಪ್ಪುತುಮಿರ್ಕು ಸಂತತಂ ॥ **219** ॥

49) ಹಾರನಹಳ್ಳಿ 232, E.C. X (R), ಕ್ರಿಶ. 1234

ಇದರಲ್ಲಿ ಹೊಯ್ಸಳರ ದೊರೆ ಎರಡನೇ ನರಸಿಂಹನ ಆಳಿಕೆಯಲ್ಲಿ ನಿಜೇಶ್ವರ ಭಟ್ಟ, ಸಂಕಣ್ಣ ಮತ್ತು ಗೋಪಣ್ಣ ಎಂಬುವವರು ಹಾರುವನಹಳ್ಳಿಯಲ್ಲಿ ಸೋಮನಾಥ ದೇವರನ್ನು ಪ್ರತಿಷ್ಠೆ ಮಾಡಿಸಿದುದನ್ನು ಹೇಳಿದೆ. ರಾಜಕುಮಾರ ಸೋವಿದೇವ ಮತ್ತು ಮಹಾಜನರು ದೇವರಿಗೆ ನೀಡಿದ ದತ್ತಿಯನ್ನು ಹೇಳಿದೆ.

ಸಮುದ್ರ ವರ್ಣನೆ

ಮ ಸ್ರ ॥ ಮಗರೋರ್ವ್ವೀಪಾಳ ನಿರ್ಮ್ಮೂಳಕನತುಳಬಳಂ ಚೋಳರಾಜ್ಯದ ಪ್ರತಿಷ್ಠಾ
ಪಕನಿಂತೀ ನಾರಸಿಂಹ ಕ್ಷಿತಿಪತಿ ಬರೆ ಸರ್ವಸ್ವಮಂ ಪಾಂಡ್ಯ ಭೂಪಾ
ಳಕರ್ತೆತ್ತಾಳಾಗೆ ಬಾಳೇಂದುಲಿದಪುದೆನಿಸಿತ್ತಾದಮುದ್ವೃತ್ತಮಚ್ಚಿ
ಪ್ರಕರೋಗ್ರಗ್ರಾಹನಕ್ರ ಕ್ರಮಣ ಜನಿತ ನಿರ್ಘ್ಯಾನ ರೌದ್ರಂ ಸಮುದ್ರಂ ॥ **220** ॥

50) ಹಿರಿಯೂರು 31, E.C. X (R), ಕ್ರಿಶ. 1254

ಇದರಲ್ಲಿ ಹೊಯ್ಸಳ ದೊರೆಯಾದ ಸೋಮೇಶ್ವರನ ಆಳಿಕೆಯಲ್ಲಿ ಮಹಾವಡ್ಡವ್ಯವಹಾರಿ ಕಂಡನಂಜಿಸೆಟ್ಟಿ ಮುತ್ತನ ಹೊಸವೂರಿನಲ್ಲಿ ಕುಂಜೇಶ್ವರ ದೇವಾಲಯವನ್ನು ಕಟ್ಟಿಸಿ ಭೂಮಿಯನ್ನು ದತ್ತಿ ಬಿಟ್ಟಂತೆ ಹೇಳಿದೆ.

ಸಳ

ಚಂ ಮಾ ॥ ಇದಿರೊಳಿದಿರ್ಚಿ ಮೇಲೆ ಪುಲಿ ಪಾಯ್ದೊಡೆ ದಿವ್ಯವಸಂತಿಕಾನಿವಾ
ಸದ ಜಿನಯೋಗಿರಾಜನೊಲವಿಂದಭಿಮಂತ್ರಿಸಿ ನೀಡೆ ಕೊಂಡು ಕುಂ
ಚದ ಸೆಳೆಯಿಂದದಂ ಪೊಡೆದು ಪೊಯ್ಸಳನೆಂಬಭಿಧಾನಮಂ ನಿಜಾಂ
ಗದೊಳೆಡೆಮಾಡಿದಂ ಯದುಕುಳಾಗ್ರಣಿ ತುಂಗಭುಜಾಬಳಂ ಸಳಂ ॥ 221 ॥

ಎರೆಯಂಗ

ಕಂ ॥ ಆ ವಸುಧಾನಾಥನ ಸುತ
ನೋವದೆ ರಿಪುಶಿರಮನೆರಡನೆರಡುಂ ಕರದಿಂ
ಸಾವಗಿಸದೊಡೆದು ಕಿಟ್ಟಿಂ
ಭಾವಿಸೆ ನೆಱೆಯಂಗನಾಜಿಗೆನಿಪೆಱೆಯಂಗಂ ॥ 222 ॥

ನರಸಿಂಹ II

ಕಂ ॥ ತತ್ತನಯಂ ಚೋಳನನೊ
ತ್ತೆತ್ತಿದನರಿಬಿರುದ ಮಗರಕಾಡವರಂ ತ
ಳ್ತೊತ್ತಿದನಾಕಳಿತಜಯಾ
ಯತ್ತಂ ನರಸಿಂಹರಾಯನಖಿಳೋಪಾಯಂ ॥ 223 ॥

ಸೋಮೇಶ್ವರ

ಮ ವಿ ॥ ಮಗರಕ್ಷೋಣಿಪನಂ ಪೊರಳ್ಚಿ ಕಡುಪಿಂದಾ ಕಾಡವೋರ್ವೀಶನಂ
ಮೊಗಮಂ ಪೊಯ್ದಿಡಿಯಿಕ್ಕಿ ಪಾಂಡ್ಯನೃಪನಂ ಬೇರಿಂದೆ ಕಿೞ್ತೆತ್ತಿ ಚ
ಕ್ರಿಗೆ ಚೋಳಂಗೆ ಪುನಃಪ್ರತಿಷ್ಠೆಯನದಂ ಕೈಸಾರ್ಚಿ ಕೋಪಪ್ರಸಾ
ದಗುಣಂಗಳ್ ನಿಜಮೆಂಬಿನಂ ನೆಗೞ್ದಪಂ ಶ್ರೀವೀರಸೋಮೇಶ್ವರಂ ॥ 224 ॥

ಮ ವಿ ॥ ಧರೆಯಿಂದನ್ಯನೃಪಾಳಕರ್ ಬಹಳ ಭಾರಗ್ರಸ್ತರೆಂದಿಂತಿಳಾ
ಭರಮಂ ತಾನೆ ಭುಜಾಗ್ರದೊಳ್ ತಳೆದು ತದ್ಭೂಪಾಳ ಭೂಭಾರಮಂ
ಭರದಿಂದಿಂಗಿಸುವಂ ನೃಪಾಳರೊಳಿದೇಂ ವಿಕ್ರಾಂತಕಾರುಣ್ಯತ
ತ್ಪರನೋ ಪೊಯ್ಸಳಚಕ್ರವರ್ತಿಯದಟಂ ಶ್ರೀವೀರಸೋಮೇಶ್ವರಂ ॥ 225 ॥

ಮ ವಿ ॥ ಯದುಚಕ್ರೇಶನ ಸೋಯಿದೇವನ ಭುಜಾದಂಡಕ್ಕೆ ದುರ್ಗತ್ರಯಂ
ಪದುಳಂ ನಿಲ್ಲದುದರ್ಕೆ ಚಿಂತಿಸಿ ರಿಪುಕ್ಷೋಣೀಶರಂತಾತನೆ
ಯ್ದದ ದುರ್ಗಂಗಳಿವೆಂದು ಪೆರ್ಮಡುವಿನೊಳ್ ಬಲ್ಲಾಡಿನೊಳ್ ಬೆಟ್ಟಿನೊಳ್
ಮದಿಸಿರ್ದಾವಗಮಿಂತು ಬಾಟ್ವರೆನೆ ತದ್ವಿಕ್ರಾಂತಮತ್ಯದ್ಭುತಂ ॥ 226 ॥

ಚಂ ಮಾ ॥ ಕೆರಳ್ದೊಡೆ ನಿಲ್ಲನಶ್ವಪತಿಯೆತ್ತಿದ ವಾರ್ತೆಗೆ ನಿಲ್ಲನಾಗಜೋ
ತ್ಕರಪತಿಯಾತ್ಮ ಸೈನ್ಯಚರಣೋತ್ಥರಜಃಪಟಳಕ್ಕೆ ನಿಲ್ಲನಾ
ನರಪತಿಯೆಂದೊಡಿನ್ನೆಣಿಕೆಗುಂಟೆ ಕಱುತ್ತಿದಿರಾಂಪ ರಾಯರು
ದ್ಧುರ ಧುರದಲ್ಲಿ ಸೋಮಧರಣೀಪತಿಯೊಳ್ ಚಲದಂಕರಾಮನೊಳ್
॥ 227 ॥

ಕಂ ॥ ಅರಿರಾಯರ ಶಿರಮಂ ನಿಜ
ಕರಪತ್ರಂ ಕೊಳ್ವುದರಿದೆ ಸೋಮನೃಪಾಳಂ
ಕರುಣಿಸದಟ್ಟಿದ ಪತ್ರಂ
ಶಿರಮಂ ಕೊಳ್ವುದು ವಿರೋಧಿಭೂಪಾಳಕರಾ ॥ 228 ॥

ಕುಂಜಸೆಟ್ಟಿ

ಕಂ ॥ ವೀರದ ಕಣಿ ವೀರದ ನಿಧಿ
ವೀರದ ನೆಲೆ ವೀರದಾಗರಂ ಮತ್ತಂ ತಾ
ವೀರದ ನಿಧಾನನೆನಿಪಂ
ವೀರಾಗ್ರಣಿ ಕುಂಜಸೆಟ್ಟಿ ವೀರವಿನೋದಂ ॥ 229 ॥

ಮ ವಿ ॥ ನಡೆದುಚ್ಚಂಗಿಗೆ ಬಂದ ರಾಯದಳಮಂ ಕೈಕೊಳ್ಳದೊಂದಂಗದಿಂ
ಬಿಡದೆಚ್ಚಾಡಿ ಶರಂಗಳಿಂ ತೆಮಱಿಯಂತಾಸೇನೆ ಪಿಂಗಲ್ಕೆ ತಾಂ
ಪಡೆದಂ ವೀರದ ಪೆರ್ಮೆಯಂ ಜಸದ ಸೊಂಪಂ ವೈರಿಕೋಳಾಹಳಂ
ಪಡಿಯಾರಗ್ಗದ ಕುಂಜಸೆಟ್ಟಿಗೆ ಮಹಾಸಂಗ್ರಾಮರಂಗಾಗ್ರದೊಳ್ ॥ 230 ॥

ಮ ವಿ ॥ ಕಲಿಬಲ್ಲಾಳ ನೃಪಾಳಕಂ ಬರಿಸಿ ಬಾಹಾಸಾಹಸಕ್ಕಾವಗಂ
ತಲೆಯಂ ತೂಗಿ ಸರಾಗದಿಂ ಸುಭಟಪಟ್ಟಂಗಟ್ಟಿ ಮೆಯ್ವೆರ್ಚಿತೀ
ನೆಲದೊಳ್ ಮುನ್ನಿನ ಸೆಟ್ಟಿವಟ್ಟಮೆನೆ ಕಣ್ಗೆಂಬಾದನುತ್ತುಂಗವೀ
ರಲಲಾಮಂ ಕಲಿ ಕುಂಜಸೆಟ್ಟಿ ರಣಧೀರಂ ವೈರಿಕೋಳಾಹಳಂ ॥ 231 ॥

ಕುಂಜನಂಬಿ ಸೆಟ್ಟಿ

ಶಾ ವಿ ॥ ನಾನಾರತ್ನಪರೀಕ್ಷೆಯೆಂಬುದದು ತನ್ನೊಂದಂಗಮಂತಿರ್ಕೆ ಧಾ
ತ್ರೀನಾಥರ್ಕಳ ಚಿತ್ತವೃತ್ತಿಗಳನಿಚ್ಛಾಮಾತ್ರದಿಂ ಬಲ್ಲನೆಂ
ಬೀನಿಸ್ತಾರದ ಕುಂಜನಂಬಿ ನೆಗಳ್ದಿಂ ಮಂತ್ರಾಂಗಸಾಮರ್ಥ್ಯವಿ
ದ್ಯಾನೈಪುಣ್ಯದಾರಮೇರು ಮಲೆಯಾಳಶ್ರೀಕುಳೋದ್ಧಾರಕಂ ॥ 232 ॥

ಶಾ ವಿ ॥ ತೆಂಕಲ್ ಹೊಯ್ಸಳಚಕ್ರವರ್ತಿ ಬಡಗಲ್ ತಾಂ ಬಲ್ಲಹಂ ಮೆಚ್ಚಿ ತ
ನ್ನಂ ಕೊಂಡಾಡುವಿನಂ ಸಮಂತುಭಯರಾಯರ್ಗೆಯ್ದೆ ಸಂಧಾನಮಂ
ಮುಂ ಕೈವರ್ತ್ತಿಸಿ ಸಂಧಿವಿಗ್ರಹದ ಮೆಯ್ಯಿಂ ಸತ್ಯವಾಕ್ಯಂ ದಯಾ
ಳಂಕಾರಂ ಸಲೆ ಕುಂಜನಂಬಿ ಮೆಱೆದಿರ್ಪಂ ಮಂತ್ರವಿದ್ಯಾಧರಂ ॥ 233 ॥

ಉ ಮಾ ॥ ಚೇರನ ಮಾಳವೇಂದ್ರನ ಕಳಿಂಗನ ಚೋಳನ ಪಾಂಡ್ಯಭೂತಳಾ
ಧಾರನ ಮುಟ್ಟಿದೊಂದವಸರಂಗಳನಾಗಳೆ ಪೂಣ್ದು ಮಾಡ್ದ ವಿ
ಸ್ತಾರದ ಪುಣ್ಯಸಂಪದದಿನೊಪ್ಪುವ ಸೆಟ್ಟಿಗೆ ಕುಂಜನಂಬಿಗಿ
ನ್ನಾರೆಣೆಯೆಂಬಿನಂ ನೆಗಟ್ದಿನಗ್ಗದ ಹೊಯ್ಸಳರಾಯರಾಜ್ಯದೊಳ್ ॥ 234 ॥

ಮುತ್ತನ ಹೊಸವೂರು

ಚಂ ಮಾ ॥ ಅನುದಿನಮೊಳ್ಪುವೆತ್ತೆಸೆವ ಹೊಯ್ಸಳದೇಶವಿಳಾಸಲಕ್ಷ್ಮಿಗಾ
ನನ ವನಜಾತಮಾವಿಷಯಕಾಂತೆಗೆ ಭೋಗದ ಜನ್ಮಭೂಮಿಯಾ
ಜನಪದಲಕ್ಷ್ಮಿಗಿಟ್ಟ ಹೊಸಬೊಟ್ಟೆನಿಸಿರ್ಪುದು ರೂಢಿವೆತ್ತ ಮು
ತ್ತನ ಹೊಸವೂರನೂನಸುಖಸಾಗರಮುನ್ನತಭೋಗದಾಗರಂ ॥ 235 ॥

ಕಂ ॥ ಹಸವಿಲ್ಲ ಜನಕೆ ಬೆಳೆಯಿಂ
ಹಸವಿಲ್ಲಳಿಗಲರ್ಗಳಿಂದೆ ಹಕ್ಕಿಗೆ ಬನದಿಂ
ಹಸವಿಲ್ಲೆಂದೆನೆ ಮುತ್ತನ
ಹೊಸವೂರೆಸೆವುದು ಸಮಸ್ತಸೌಖ್ಯಾವಾಸಂ ॥ 236 ॥

ಕಂ ॥ ಅಗಟಾಟಿದಿನಹಿರಾಜನ
ನಗರಮನಡಿಮೆಟ್ಟೆ ಕನಕಕೋಟೋನ್ನತಿಯಿಂ
ಮುಗಿಲಂ ಮುತ್ತನ ಹೊಸವೂರ್
ಮಿಗೆ ಮುಟ್ಟುವುದದಱಿ ಪೆಂಪನಿನ್ನೇವೇಳ್ವೆಂ ॥ 237 ॥

ಮ ವಿ ॥ ದೊರೆ ತಾನಿಂದ್ರಪುರಕ್ಕೆ ಪಾಟಿ ಧನದ ಶ್ರೀಪಟ್ಟಣಕ್ಕುರ್ವಿಯೊಳ್
ಸರಿ ತೂಕಂ ಬಗೆವಂದು ವಿಷ್ಣುನಗರಕ್ಕೆಂಬಂತೆ ಕೈಕೊಂಡ ಮೆ
ಯ್ಸಿರಿಯಿಂ ಮುತ್ತನ ಮೆಯ್ಮೆವೆತ್ತ ಹೊಸವೂರೊಪ್ಪಿರ್ಪುದುತ್ತುಂಗಮಂ
ದಿರಮಾಳಾಪರಿಪೂರಿತಂ ವಿವಿಧದೇವಾಗಾರವಿಸ್ತಾರಿತಂ ॥ 238 ॥

ಕುಂಜೇಶ್ವರ ದೇವಾಲಯ

ಮ ವಿ ॥ ಇದು ಕೈಲಾಸಮೊ ಮೇಣಿದೆತ್ತಿಸಿದರುದ್ಯತ್ಪುಣ್ಯಸಂಶುದ್ಧಬೀ
ಜದ ಹೇರೊಟ್ಟಿಲೊ ಮೇಣಿದಂತವರ ಭಾಸ್ವತ್ಕೀರ್ತಿತನ್ವಂಗಿ ಕೂ
ಡೆ ದಿಶಾಲೋಕನಿಮಿತ್ತಮೇಱುವೆಡೆಗೆಂದಿಕ್ಕಿರ್ದ ವೇದೀವಿಳಾ
ಸದ ವಿಸ್ತಾರಮೊ ಪೇಳೆನಲ್ಕೆ ಮೆಱೆಗುಂ ಶ್ರೀಕುಂಜನಾಥಾಶ್ರಯಂ ॥ 239 ॥

51) ಮೊಸಳೆ 288, E.C. X (R), ಕ್ರಿ.ಶ. 1267

ಇದರಲ್ಲಿ ಹೊಯ್ಸಳ ದೊರೆಯಾದ ಮೂರನೆಯ ನರಸಿಂಹನ ಮಹಾಪಸಾಯಿತ ಬಲ್ಲಣ್ಣನು ತನ್ನ ತಂದೆ ಕಟ್ಟಿಸಿದ ಚನ್ನಕೇಶವ ದೇವಸ್ಥಾನವನ್ನು ಸಿದ್ದಣ್ಣ, ದೇವಣ್ಣ, ಇವರುಗಳಿಗೆ ಪ್ರೀತಿದಾನವಾಗಿ ಕೊಟ್ಟಂತೆ ಹೇಳಿದೆ.

ವಿಷ್ಣುಸ್ತುತಿ

ಸ್ರಗ್ಧರೆ ॥ ಶ್ರೀರಾಮಾವಲ್ಲಭಂ ಸದ್ಗುಣಗಣನಿಲಯಂ ಸರ್ವಗಂ ಸರ್ವಲೋಕಾ
ಧಾರಂ ಭಕ್ತಪ್ರಿಯಂ ಶಾಶ್ವತನಖಿಳಜಗದ್ವಂದ್ಯನಾನಂದರೂಪಂ
ಕ್ಷೀರಾಂಭೋರಾಶಿಸಂಸ್ಥಂ ಭವದುರಿತಹರಂ ಮುಕ್ತಿದಂ ಭಕ್ತಿಗಮ್ಯಂ
ಕಾರುಣ್ಯಾಂಭೋಧಿ ನಾರಾಯಣನೆಮಗಮಳಾನಂದಮಂ ಮಾಳ್ಕನಂತಂ
॥ 240 ॥

52) ಮೊಸಳೆ 289, E.C. X (R), ಕ್ರಿ.ಶ. 1286

ಇದರಲ್ಲಿ ಹೊಯ್ಸಳ ದೊರೆಯಾದ ಮೂರನೆಯ ನರಸಿಂಹನ ದಂಡನಾಥ ಜೀರನ ವೈದ್ಯ ದೇವಪಿಳ್ಳೆಯಣ್ಣನಿಗೆ ಬಲ್ಲಣ್ಣನು ತನ್ನ ಕೊಡಗೆಯ ಗದ್ದೆಯನ್ನು ಕ್ರಯಕ್ಕೆ ಕೊಟ್ಟನೆಂದು ಹೇಳಿದೆ.

ನರಸಿಂಹ III

ಮ ಸ್ರ ॥ ಪರರಾಜ್ಯೋದಗ್ರಸಿಂಧುಪ್ರತತಿ ನಿಜಬಳಾಂಭೋಧಿಯೊಳ್ ಕೂಡೆ ಖಡ್ಗೋ
ದ್ಧುರಧಾರಾವಾರಿಯೊಳ್ ಶಾತ್ರವನೃಪನಿಕರಂ ಮಾಣದೋಲಾಡೆ ದಿಕ್ಪಾ
ಳರ ಹೆಂಡಿರ್ ತನ್ನ ಕೀರ್ತಿಪ್ರಸರಮನೊಲವಿಂ ಪಾಡೆ ಮೂಲೋಕಲಕ್ಷ್ಮೀ
ವರನಾದಂ ಸೋಯಿದೇವಾತ್ಮಜನತುಳಬಳಂ ನಾರಸಿಂಹಕ್ಷಿತೀಶಂ ॥ 241 ॥

ಬೀರದಂಡಾಧಿಪ

ಮ ಸ್ರ ॥
ಕಲಿ ಕಟ್ಟಾಳ್ ನಾರಸಿಂಹಾಧಿಪನ ಕಟಕದೊಳ್ ಬೀರದಂಡಾಧಿಪಂ ಮಂ
ಡಳಿಕಾಂಚತ್ತೋರಹತ್ತಂ ಭುಜಬಳದಳವಿಂ ಭೀಮನಿಂ ತೋರಹತ್ತಂ
ಬಳನಿಂದಂ ತೋರಹತ್ತಂ ಸಮರಸಮಯದೊಳ್ ಶೌರ್ಯದೊಳ್ ಪಾರ್ಥನಿಂದ
ಗ್ಗಳ x x ತೋರಹತ್ತಂ ವಿತರಣಗುಣದೊಳ್ ಕರ್ಣನಿಂ ತೋರಹತ್ತಂ ॥ 242 ॥

ವೈದ್ಯ ದೇವಪಿಳ್ಳೆ

ಕಂ ॥ ಅಂತೆನಿಪ ಬೀರರಥಿನೀ
ಕಾಂತನ ಮನೆಯಲ್ಲಿ ನೋಡೆ ಧನ್ವಂತರಿವೋಲ್
ಸಂತತಮಿರ್ಪಂ ಸುಖದಿನ
ನಂತಗುಣಂ ದೇವರಾಜನೂರ್ಜಿತತೇಜಂ ॥ 243 ॥

ಕಂ ॥ ವಿನಯನಿಧಾನಂ ಸಜ್ಜನ
ಜನಸೇವ್ಯಂ ಸರ್ವಸಮಯಸಮದರ್ಶಿಯೆನಿ
ಪ್ಪನುಪಮಗುಣದಿಂ ಮೆಱೆವಂ
ಜನವಂದ್ಯಂ ದೇವರಾಜನನುಪಮಪುಣ್ಯಂ ॥ 244 ॥

ಕಂ ॥ ಆತಂ ಗೌರೇಶ್ವರಮಂ
ಭೂತಳಮಱಿವಂತು ಭಕ್ತಿಯಿಂ ಮಾಡಿಸಿದಂ
ನೂತನವೈದ್ಯಕಲಾವಿ
ಖ್ಯಾತಂ ಶ್ರೀದೇವಪಿಳ್ಳೆ ಧರ್ಮನಿಧಾನಂ ॥ 245 ॥

53) ತಳಲುತೊರೆ 180, E.C. X (R), ಕ್ರಿಶ. ಸು. 13, 14 ನೇ ಶತಮಾನ

ಈ ವೀರಗಲ್ಲು ಶಾಸನದಲ್ಲಿ ತುಱುಗೋಳಿನಲ್ಲಿ ಮಡಿದ ರಾಮನನ್ನು ಹೊಗಳಿದೆ.

ಕಂ ॥ ಸುರದುಂದುಭಿಗಳ್ ಮೊಳಗಲ್
ಪರಸಿ ಪುರಾಂಗನೆಯರಿಕ್ಕಿ ಸೇಸೆಯನತ್ಯಾ
ದರದಿಂದ ರಾಮನಾಗಳ್
ಪರಮೋತ್ಸವದಿಂದೆ ದೇವಲೋಕಕ್ಕೋದಂ ॥ 246 ॥

54) ಸಿಂಗನಹಳ್ಳಿ, ಅರಸೀಕೆರೆ ತಾ. 261, E.C. X (R), ಕ್ರಿಶ. 1555

ಇದರಲ್ಲಿ ವಿಜಯನಗರದ ದೊರೆ ಮಹಾಮಂಡಳೇಶ್ವರ ರಾಮರಾಜನ ಆಳಿಕೆಯಲ್ಲಿ

ಹೊಳೆಯಗೊಂಡ ಗವುಡ ಎಂಬುವವನು ತನ್ನ ತಂದೆ ತಾಯಿಗಳಿಗೆ ಪುಣ್ಯವಾಗಬೇಕೆಂದು ಕಣುವೆ ರಾಮೇಶ್ವರ ದೇವಾಲಯವನ್ನು ನಿರ್ಮಾಣ ಮಾಡಿಸಿ, ಅಲ್ಲಿ ದೇವರ ಪ್ರತಿಷ್ಠೆಯನ್ನು ಮಾಡಿಸಿ, ದತ್ತಿಯನ್ನು ಕೊಟ್ಟದ್ದನ್ನು ಹೇಳಿದೆ.

ಶಿವಸ್ತುತಿ

ಕಂ ॥ ಪಳುಕಿನ ಕಳೆ ವೆಳಗಿನ ಮೈ
ವೊಳಪಿನ ತಿಳಿಜೊಂನ ನಗೆಯ ಕಱೆಗೊರಲಿಂ ಕ
ಣ್ಗೊಳಿಪ ಪೆಱೆದಲೆಯ ದೇವಂ
ಹೊಳೆಯನ ಪಾಲಿಸುಗೆ ಕರುಣದಿಂ ರಾಮೇಶಂ ॥ 247 ॥

ಹೊಳೆಯ ಗವುಂಡ

ಚಂ ಮಾ ॥ ಪೊಗಳಲದೇಕೆ ಕೀರ್ತಿಯೊಳ್ ಚಂದ್ರನ ಪೋಲಿಸೆ ದೋಶಿಯಾದ ಪಾ
ಲೊಗೆದ ಸಮುದ್ರಮಂ ಸರಿಯೆನಿಪ್ಪರೆ ಕೃಷ್ಣಗೆ ತಾಣಮಾಯ್ತು ಸೊಂ
ಪಗಣಿತವಾದ ಕಲ್ಪಲತೆಯೆಂಬೆನೆ ಮೇಲಣ ಲೋಕವೊಕ್ಕುದುಂ
ಜಗದೊಳು ಪೋಲಿಸಲ್ಹೊಳೆಯಗೌಂಡಗೆ ಮಿಕ್ಕರು ಸಾಟಿಯಪ್ಪರೇ ॥ 248 ॥

ಆಲೂರು ತಾಲ್ಲೂಕು

55) ಸೋಂಪುರ 17, E.C. VIII (R), ಕ್ರಿಶ. 1191

ಇದರಲ್ಲಿ ಹೊಯ್ಸಳ ದೊರೆಯಾದ ಎರಡನೆಯ ಬಲ್ಲಾಳನ ಆಳಿಕೆಯಲ್ಲಿ, ದೋರಸಮುದ್ರದ ನಗರ ಜಿನಾಲಯಕ್ಕೆ ವಜ್ರನಂದಿ ಸೈದ್ಧಾಂತ ದೇವರಿಗೆ ನಾಡಗೌಂಡುಗಳು ಭೂಮಿಯನ್ನು ದತ್ತಿಯಾಗಿ ನೀಡಿದಂತೆ ಹೇಳಿದೆ. ಈ ಶಾಸನವನ್ನು ಬರೆದವನು ತಿಪ್ಪರಾಯಕವಿ.

ವಿಷ್ಣುವರ್ಧನ

ಕಂ ॥ ಮೂವರರಸುಗಳೊಳಂ ತಾಂ
ಭಾವಿಸೆ ಮಧ್ಯಮನದಾಗಿಯುಂ ನೃಪ ಗುಣ ಸ
ದ್ಭಾವದಿನುತ್ತಮನಾದಂ
ಭಾವಿ ಭವದ್ಭೂತ ಜಿಷ್ಣು ವಿಷ್ಣು ನೃಪಾಳಂ ॥ 249 ॥

ನರಸಿಂಹ I

ಮ ಸ್ರ ॥
ಪಡೆಮಾತೇಂ ಬಂದು ಕಡಂಗಮೃತಜಳಧಿ ತಾಂ ಗರ್ವ್ವದಿಂ ಗಂಡವಾತಂ
ನುಡಿವಾತಂಗೇನನೆಂಬ್ಯೆ ಪ್ರಳಯಸಮಯದೊಳ್ ಮೇರೆಯಂಮೀಱೆಬರ್ಪ್ಪಾ
ಕಡಲಂನಂ ಕಾಳನನ್ನಂ ಮುಳಿದ ಕುಳಿಕನನ್ನಂ ಯುಗಾಂತಾಗ್ನಿಯಂನಂ
ಸಿಡಿಲಂನಂ ಸಿಂಗದನ್ನಂ ಪುರಹರನುರಿಗಂಣಂನನೀ ನಾರಸಿಂಹಂ ॥ 250 ॥

ಬಲ್ಲಾಳ II

ಮ ಸ್ರ ॥ ಕಲಿಕಾಲಕ್ಷತ್ರಪುತ್ರಪ್ರಬಳತರದುರಾಚಾರಸಂದೋಹದಿಂದಂ
ಪೊಲೆಪೊದ್ದಲ್ ಪೇಸಿ ಬೇಸತ್ತಳವಳಿದ ಮಹಾಕಾಂತೆಯಂ ರಕ್ಷಿಸಲ್ಕಾ
ಜಲಜಾಕ್ಷಂ ತಾನೇ ಬಂದಿಂತವತರಿಸಿದವೋಲ್ ವೀರಬಲ್ಲಾಳದೇವಂ
ಕುಲಜಾತ್ಯಾಚಾರಸಾರಂ ನೃಪವರನುದಯಂಗೆಯ್ದನಾಶ್ಚರ್ಯಶೌರ್ಯಂ
॥ 251 ॥

ಮ ಸ್ರ ॥
ಉರಿಗಣ್ಣಿಂ ಬೆಂದ ಚಂಡಾ ತ್ರಿಪುರ ಮುರಿದವೋಲ್ ಚುರ್ಚ್ಚುರಿಲ್ವಾರು ಗಾರ್ಗ
x x ರಿದಂ ಧಂದದ್ದ ಧಂಧಗಧಗ ಚೆಟಚೆಳ್ಚೆಳ್ಚಿಟೆಲಗಟ್ಟು ಪೊರ್ದಂ
ಬರವಂ ಕೈಗಣ್ಮೆ ದಿಕ್ಪಾಳಕರಳವಳಿಯಲ್ ವೀರಬಲ್ಲಾಳದೇವಂ
ದುರಿದಿತ್ತುಂಚ್ಚಂಗಿಯೆಂದೊಡೆ ರಿಪುನೃಪತೀ ಪೇಳಲುಂಟೇ ॥ 252 ॥

ಮ ವಿ ॥ ರಣರಂಗಾಂಗಣ ಶೂದ್ರಕಂ ನಡೆದೊಡಿಂತುಚ್ಚಂಗಿ ನುಚ್ಚಾಯ್ತು ತತ್
ಕ್ಷಣದಿಂ ನೋಡೆ ವಿರಾಟರಾಜಪುರಮೊರ್ತುತ್ತಾಯ್ತು ಮುನ್ನಾಂತ ಸೇ
ವುಣರಾಪೋಶನ ಮಾತ್ರಕಂ ನೆಱೆದರಿಲ್ಲೆಂದಂದು ಬಲ್ಲಾಳ ದೋ
ರ್ಗುಣಮಂ ಬಣ್ಣಿಸಲಣ್ಣ ಬಲ್ಲವರದಾರೀ ಭೂರಿ ಭೂಚಕ್ರದೊಳ್ ॥ 253 ॥

ಕವಿ ತಿಪ್ಪರಾಯ

ಕಂ ॥ ವಿರಚಿಸಿದ ತಿಪ್ಪರಾಯಂ
ನಿರುಪಮದಂಕಿತದ ಧರ್ಮಶಾಸನ ಕೃತಿಯಂ
ನರಕಲಿ x x ಸರಸ್ವತಿ ವಿ
ಬಿರುದಿನಗಣಿ ದೇವರಧಿಕಗುಣಗಣ ನಿಳಯಂ ॥ 254 ॥

ಕಂ ॥ ವರಕವಿ ತಾರ್ಕಿಕ ಸಿಂಹಂ
ಉರುತರ ಕೀರ್ತ್ತಿಶ್ರೀಬಿರುದ ತಿಪ್ಪನೃಪಾಲಂ
ನಿರುಪಮನುದಾರಚರಿತಂ
ಧುರದೊಳ್ ರಿಪುಮಂಡಳಿಕರ ಮಸ್ತಕಶೂಲಂ ॥ 255 ॥

ಚೆನ್ನರಾಯಪಟ್ಟಣ ತಾಲ್ಲೂಕು I

ಶ್ರವಣಬೆಳಗೊಳ

ಚಿಕ್ಕಬೆಟ್ಟ

56) ಸಂಖ್ಯೆ. 98, E.C. II (R), ಕ್ರಿ.ಶ. 7 ನೇ ಶತಮಾನ

ಇದರಲ್ಲಿ ನಂದಿಸೇನಮುನಿಗಳು ಸನ್ಯಸನ ವ್ರತ ಮಾಡಿ ದೇವಲೋಕಕ್ಕೆ ಹೋದರು ಎಂದು ಹೇಳಿದೆ.

ಮ ಸ್ರ ॥

ಸುರಚಾಪಂಬೋಲೆ ವಿದ್ಯುಲ್ಲತೆಗಳ ತೆಱವೋಲ್ ಮಂಜುವೋಲ್ ತೋಱಿ ಬೇಗಂ
ಪಿರಿಗುಂ ಶ್ರೀರೂಪಲೀಲಾಧನವಿಭವಮಹಾರಾಶಿಗಳ್ ನಿಲ್ಲವಾರ್ಗ್ಗಂ
ಪರಮಾರ್ತ್ಥಂ ಮೆಚ್ಚೆನಾನೀಧರಣಿಯುಳಿರವಾನೆಂದು ಸನ್ಯಾಸನಂಗೆ
ಯ್ದುರುಸತ್ವನ್ ನಂದಿಸೇನಪ್ರವರಮುನಿವರನ್ ದೇವಲೋಕಕ್ಕೆ ಸಂದಾನ್ ॥ 256 ॥

57) ಸಂಖ್ಯೆ 14, E.C. II (R), ಕ್ರಿ.ಶ. 7 ನೇ ಶತಮಾನ

ಇದರಲ್ಲಿ ಚರಿತಶ್ರೀ ಮುನಿಯ ವ್ರತವನ್ನು ಹೊಗಳಿದೆ.

ಮ ಸ್ರ ॥ ದುರಿತಾಭೂದ್ವೃಷಮಾನ್ಕಿಟ್ಟಿಲಱೆ ಪೊದೆದ ಜ್ಞಾನಶೈಲೇನ್ದ್ರಮಾನ್ಪೋಱ್
ದುರಮಿಥ್ಯಾತ್ವ ಪ್ರಮೂಢಸ್ಥಿರತರ ನೃಪನಾನ್ಮೆಟ್ಟಿ ಗನ್ಧೇಭಮಯ್ದಾನ್
ಸುರವಿದ್ಯಾವಲ್ಲಭೇನ್ದ್ರಾಸ್ಸುರವರಮುನಿಭಿಸ್ತುತ್ಯ ಕಟ್ಬಪ್ಪಿನಾಮೇಲ್
ಚರಿತಶ್ರೀ ನಾಮಧೇಯಪ್ರಭು ಮುನಿನ್ವ್ರತಗಳನ್ನೋನ್ತು ಸೌಖ್ಯಸ್ಥನಾಯ್ದಾನ್ ॥ 257 ॥

58) ಸಂಖ್ಯೆ 25, E.C. II (R), ಕ್ರಿ.ಶ. 7 ನೇ ಶತಮಾನ

ಕಳಂತೂರಿನ ಮಹಾಮುನಿಯು ಕಟವಪ್ರದ ಮೇಲೆ ಕಠಿಣವಾದ ಸಮಾಧಿ ವ್ರತವನ್ನು ನೂರೆಂಟು ವರ್ಷಗಳು ಆಚರಿಸಿದ್ದನ್ನು ಹೇಳಿದೆ.

ಶಾ ವಿ ॥ ಬಾಳಾ ಮೇಲ್ಮೆಖಿಮೇಲೆ ಸರ್ಪದ ಮಹಾದನ್ತಾಗ್ರದುಳ್ಸಲ್ವವೋಲ್
ಸಾಲಾಮ್ಬಾಲ ತಪೋಗ್ರದಿನ್ತು ನಡದೊಂ ನೂಱೆಣ್ಬು ಸಂವತ್ಸರಂ
ಕೇಳೊಯ್ಪಿನ್ಕಟವಪ್ರ ಶೈಲಮಡಱ್ದೇನಮ್ಮಾ ಕಳನ್ತೂರನಂ
ಬಾಲೇ ಪೆರ್ಗ್ಗೊರವಂ ಸಮಾಧಿನೆಱೆದೊನ್ ನೋನ್ತೆಯ್ದಿದೊರ್ಸ್ಸಿದ್ಧಿಯಾನ್ ॥ 258 ॥

59) ಸಂಖ್ಯೆ 94, E.C. II (R), ಕ್ರಿ.ಶ. 7 ನೇ ಶತಮಾನ

ಇದು ಚಂದ್ರದೇವಾಚಾರ್ಯರು ಕಳ್ವಪ್ಪಿಗೆ ಬಂದು ವ್ರತ ಸ್ವೀಕರಿಸಿ ಮರಣ ಹೊಂದಿದ್ದನ್ನು ಹೇಳುತ್ತದೆ.

ಮ ಸ್ರ ॥ ಅನವದ್ಯನ್ನದಿರಾಷ್ಟ್ರದುಳ್ಳೆ ಪ್ರಥಿತಯಶೋಕುನ್ದಕಾನ್ವನ್ದುಸ್ಸೈಲಾಮ್
ವಿನಯಾಚಾರ ಪ್ರಭಾವನ್ತಪದಿನ್ನಧಿಕನ್ಜನ್ದ್ರದೇವಾಚಾರ್ಯನಾಮನ್
ಉದಿತಶ್ರೀ ಕಟ್ವಪ್ಪಿನುಳ್ಳೇ ರಿಷಿಗಿರಿಶಿಲೆ ಮೇಲ್ನೋನ್ತು ತನ್ದೇಹಮಿಕ್ಕಿ
ನಿರವದ್ಯನ್ನೇಱಿ ಸ್ವರ್ಗ್ಗಂ ಶಿವನಿಲೆಪಡೆದಾನ್ಸಾಧುಗಳ್ಪೂಜ್ಯಮಾನನ್ ॥ 259 ॥

60) ಸಂಖ್ಯೆ 113, E.C. II (R), ಕ್ರಿ.ಶ. 7 ನೇ ಶತಮಾನ

ಇದು ಅನನ್ತಮತಿ ಕಂತಿಯರು ತಪಸ್ಸನ್ನಾಚರಿಸಿ ಮುಕ್ತಿಯನ್ನು ಗಳಿಸಿದುದನ್ನು ಹೇಳುತ್ತದೆ.

ಮ ವಿ ॥ ತಪಮಾನ್ಪ್ವಾದಶದಾ ವಿಧಾನಮುಖದಿನ್ಕೆಯ್ದೊನ್ದು ತಾ ಧಾತ್ರಿ ಮೇಲ್
ಚಪಲಿಲ್ಲಾ ನವಿಲೂರ ಸಂಘದ ಮಹಾನನ್ತಾಮತೀಗನ್ತಿಯಾರ್
ವಿಪುಲಶ್ರೀ ಕಟವಪ್ರನಲ್ಗಿರಿಯಮೇಲ್ನೋನ್ತೊಂದು ಸನ್ಮಾರ್ಗ್ಗದಿನ್
ಉಪಮೀಲ್ಯಾ ಸುರಲೋಕಸೌಖ್ಯದೆಡೆಯಾನ್ತಾಮೆಯ್ದಿಯಿಟ್ಟಾಳ್ ಮನಮ್
॥ 260 ॥

61) ಸಂಖ್ಯೆ 30, E.C. II (R), ಕ್ರಿ.ಶ. 700

ಪರಮ ಪ್ರಭಾವವುಳ್ಳ ಮಾಸೇನ ಮಹಾಮುನಿಗಳು ಕಟ್ವಪ್ಪು ಬೆಟ್ಟದ ಶ್ರೀ ಸಂಗಗಳು ರೂಪಿಸಿದ್ದ ಸಿದ್ಧರ ಸಮಯವನ್ನು ತಪ್ಪದೇ ಆಚರಿಸಿ ಸ್ವರ್ಗವನ್ನು ಪಡೆದರು. ಉಜ್ವಲವಾದ ಕನಕಪ್ರಭೆಯಿಂದ ಕಂಗೊಳಿಸುತ್ತಿದ್ದ ಭವನಗಳುಳ್ಳ ಆ ಸ್ವರ್ಗದಲ್ಲಿ ಸಹಸ್ರಾರು ಜನರು ಇವರನ್ನು ಗೌರವಿಸಿದರು ಎಂದು ತಿಳಿಸಿದೆ.

ಶಾ ವಿ ॥ ಮಾಸೇನರ್ ಪರಮಪ್ರಭಾವಋಷಿಯರ್ ಕಟ್ವಪ್ಪಿನಾವೆಟ್ಟದುಳ್
ಶ್ರೀಸಂಘಂಗಳ ಪೇೞ್ದ ಸಿದ್ಧಸಮಯಂ ತಪ್ಪಾದೆ ನೋಂತಿಂಬಿನಿನ್
ಪ್ರಾಸಾದಾಂತರಮಾನ್ ವಿಚಿತ್ರಕನಕಪ್ರಜ್ವಲ್ಯದಿನ್ ಮಿಕ್ಕುದಾನ್
ಸಾಸಿರ್ವರ್ ವರಪೂಜೆದಂದುಯೆ ಅವರ್ ಸ್ವರ್ಗಾಗ್ರಮಾನೇಱಿದಾರ್
॥ 261 ॥

62) ಸಂಖ್ಯೆ 34, E.C. II (R), ಕ್ರಿ.ಶ. 700

ಇದರಲ್ಲಿ ಶಾನ್ತಿಸೇನ ಮುನಿಗಳು ಅನಶನ ವ್ರತವನ್ನು ಕೈಗೊಂಡು ಮುಕ್ತಿಯನ್ನು ಗಳಿಸಿದರು ಎಂದು ಹೇಳಿದೆ.

ಮಲ್ಲಿಕಾ ಮಾಲೆ ॥ ಭದ್ರಬಾಹು ಸಚನ್ದ್ರಗುಪ್ತಮುನೀನ್ದ್ರ ಯುಗ್ಮದಿನೊಪೆವಲ್
ಭದ್ರಮಾಗಿದ ಧರ್ಮ್ಮಮನ್ದುವಱಿಕ್ಕೆ ವನ್ದಿನಿಸಲ್ಕಲೋ
ವಿದ್ರುಮಾಧರ ಶಾನ್ತಿಸೇನಮುನೀಶನಾಕ್ಕಿಎ ವೆಳ್ಗೊ[ಳ]
ಅದ್ರಿಮೇಲಶನಾದಿವಿಟ್ಟು ಪುನರ್ಭವಕ್ಕೆಱೆಯಾಗಿ ॥ 262 ॥

63) ಸಂಖ್ಯೆ 86, E.C. II (R), ಕ್ರಿ.ಶ. ಸು. 700

ಇದರಲ್ಲಿ ಸಸಿಮತಿಗಂತಿಯರು ಬೆಳ್ಗೊಳದಲ್ಲಿ ಮುಡಿಪಿದಂತೆ ಹೇಳಿದೆ.

ಮ ವಿ ॥ ನೆಱೆದಾದ ವ್ರತಶೀಲನೋನ್ಪಿಗುಣದಿಂ ಸ್ವಾಧ್ಯಾಯಸಂಪತ್ತಿನಿಂ
ಕಱೆಯಿಲ್ಲಲ್ಲತ್ತಪಧರ್ಮದಾ ಸಸಿಮತಿಶ್ರೀಗಂತಿಯರ್ ವಂದು ಮೇಲ್
ಅಱಿದಾಯುಷ್ಯಮನೆಂತು ನೋಡೆನಗೆ ತಾನಿಂತೆಂದು ಕಟ್ವಪ್ಪಿನುಳ್
ತೊಱೆದಾರಾಧನೆ ನೋಂತು ತೀರ್ಥಗಿರಿಮೇಲ್ ಸ್ವರ್ಗಾಲಯಕ್ಕೇಱಿದಾರ್
॥ 263 ॥

64) ಸಂಖ್ಯೆ 64, E.C. II (R), ಕ್ರಿ.ಶ. 975

ಇದು ಗಂಗದೊರೆ ಮಾರಸಿಂಹನ ನಿಷಧಿ ಶಾಸನ. ಅವನ ಪರಾಕ್ರಮ, ದಿಗ್ವಿಜಯಗಳನ್ನು ವರ್ಣಿಸುತ್ತದೆ.

ಮಾರಸಿಂಹ

ಕಂ ॥ ಕಾಳನೊ ರಾವಣನೋ ಶಿಶು
ಪಾಳನೊ ತಾನೆನಿಸಿ ನೆಗಟ್ದಿ ನರಗನ ತಲೆ ತ
ನ್ನಾಳಾಳ ಕೆಯ್ಗೆವಂದುದು
ಹೇಳಾಸಾಧ್ಯದೊಳೆ ಗಂಗಚೂಡಾಮಣಿಯಾ ॥ 264 ॥

ಕಂ ॥ ನುಡಿದನೆ ಕಾವುದನೇ ಎಟ್ದೆ
ಗಿಡದಿರು ಜವನಿಟ್ಟ ರಕ್ಕೆ ನಿನಗೀವುದನೇಂ
ನುಡಿದನೆಯಲ್ಲದು ಕಯ್ಯದು
ನುಡಿದುದು ತಪ್ಪುಗುಮೆ ಗಂಗಚೂಡಾಮಣಿಯಾ ॥ 265 ॥

ಉ ಮಾ ॥ ತುಂಗಪರಾಕ್ರಮಂ ಪಲವುಕಾಲಮಗುರ್ವಿಸೆ ಸುತ್ತಿ ಮುತ್ತಿ ಬಿ
ಟ್ಟಂ ಗಡ ಕಾಡುವಟ್ಟಿ ಕೊಳಲಾಜಿನೆ ಮುನ್ನಮೆನಿಪ್ಪ ಪೆಂಪಿನು
ಚ್ಚಂಗಿಯ ಕೋಟೆಯಂ ಜಗಮಸುಂಗೊಳೆ ಕೊಂಡ ನೆಗಟ್ತೆ ಮೂಱುಲೋ
ಕಂಗಳೊಳಂ ಪೊಗಟ್ತೆಗೆಡೆಯಾದುದು ಗುತ್ತಿಯ ಗಂಗಭೂಪನಾ ॥ 266 ॥

ಉ ಮಾ ॥ ಓಳಿಯೆ ಕೋದು ಪಲ್ಲವರ ಪಂದಲೆಯೆಲ್ಲಮನೆಯ್ದೆ ದಟ್ಟಿ ಕಾ
ಪಾಳಿಕರೂಱ್ ಸಾಱ್ ಪರಮಂಡಳಿಕರ್ಕಳನಮ್ಮ ನೀವುಮೀ
ಯೋಳಿಗೆ ನಿಮ್ಮ ಪಂದಲೆಗಳಂ ಬರಲೀಯದೆ ಕಂಡು ಬಾಟ್ವುದೇ
ಳೋಳಿಯೊಳೆಂಬಿನಂ ನೆಗಟ್ದುದೊಟ್ಟಜೆ ಮಂಡಳಿಕತ್ರಿಣೇತ್ರನಾ ॥ 267 ॥

ಚಂ ಮಾ ॥ ಬಗೆಯಲಳುಂಬಮಪ್ಪ ಬಲದಲ್ಲನನೋಡಿಸಿ ಗೆಲ್ದ ಶೌರ್ಯ್ಯಮಂ
ಪೊಗೞ್ವೆನೊ ಧಾತ್ರಿಯೊಳ್ನೆಗಟ್ಟ ವಜ್ಜಟನಂ ಜಿಡೆಯಟ್ಟಿದೇೞ್ಗೆಯುಂ
ಪೊಗೞ್ವೆನೊ ಪಲ್ಲವಾಧಿಪರ x x x ಳಮಂ ತವೆ ಕೊನ್ದ ಪೀರಮಂ
ಪೊಗೞ್ವೆನೊ ಪೇೞಿ ಮೇವೊಗೞೆನೆನ್ದಱಿಯೆಂ ಚಲದುತ್ತರಂಗನಂ ॥ 268 ॥

65) ಸಂಖ್ಯೆ 163, E.C. II (R), ಕ್ರಿ.ಶ. 982

ಇದು ರಾಷ್ಟ್ರಕೂಟರ ದೊರೆ ಇಂದ್ರರಾಜನ ನೆನಪಿಗಾಗಿ ಹಾಕಿಸಿರುವ ನಿಸಿದಿ ಶಾಸನ.

ಇಂದ್ರರಾಜ

ಮ ವಿ ॥ ಪರಭೂಮೀಶ್ವರಭೀಕರಂ ಕರನಿಶಾತೋಗ್ರಾಸಿ ಶತ್ರುಕ್ಷಿತೀ
ಶ್ವರವಿಧ್ವಂಸಪರಂ ಪರಾಕ್ರಮಗುಣಾಟೋಪಂ ವಿಪಕ್ಷಾವನೀ
ಶ್ವರಪಕ್ಷಕ್ಷಯಕಾರಣಂ ರಣಜಯೋದ್ಯೋಗಂ ದ್ವಿಷನ್ಮೇದಿನೀ
ಶ್ವರಸಂಹಾರಹವಿರ್ಭುಜಂ ಭುಜಬಳಂ ಶ್ರೀರಾಜಮಾರ್ತಂಡನಾ ॥ 269 ॥

ಮ ವಿ ॥ ಇಱಿಯಲ್ಕಣ್ಮುವರೀಯಲಾಜಿರರೆಬರ್ ಪೂಣ್ದೀವರಾರಾನುಮಾಂ
ತಿಱಿಯಲ್ಕಣ್ಮರದಾವ ಗಂಡಗುಣಮಾವೌದಾರ್ಯಮೆಂದಳ್ಕದಾಂ
ತಿಱಿವಣ್ಮುಂ ಪಿರಿದೀವ ಪೆಂಪುಮೆಸೆದೊಪ್ಪಿರ್ದಪ್ಪುವಾರ್ ಬಣ್ಣಿಸಲ್
ನೆಱೆವರ್ ಬೀರದ ಚಾಗದುನ್ನತಿಕೆಯಂ ಶ್ರೀರಾಜಮಾರ್ತಂಡನಾ ॥ 270 ॥

ಚಂ ಮಾ ॥ ಕಿಡದ ಜಸಕ್ಕೆ ತಾನೆ ಗುಱಿಯಾದ ಚಲಂ ನೆಱೆದರ್ಥಿಗರ್ಥಮಂ
ಕುಡುವ ಚಲಂ ತೊದಳ್ನುಡಿಯದಿರ್ಪ ಚಲಂ ಪರವೆಣ್ಣೊಳೋತೊಡಂ
ಬಡದ ಚಲಂ ಶರಣ್ಗೆವರೆ ಕಾವ ಚಲಂ ಪರಸೈನ್ಯಮಂ ಪೆಱಂ
ಗೆಡೆಮುಡದಟ್ಟಿ ಕೊಲ್ವ ಚಲಮಾಳ್ದ ಚಲಂ ಚಲದಂಕಕಾಜಿನಾ ॥ 271 ॥

ಚಂ ಮಾ ॥ ಇರು ಪೆಱದೇನನಿಂ ಪೊಗೞುತಿರ್ದಪುದೀವ ನೆಗೞ್ತೆ ಕಲ್ಪಭೂ
ಮಿರುಹದಿನಗ್ಗಳಂ ನುಡಿ ಸುರಾಚಳದಿಂದಚಳಂ ಪರಾಕ್ರಮಂ
ಖರಕರತೇಜದಿಂ ಬಿಸಿದು ಚಾಗದ ನನ್ನಿಯ ಬೀರದಂದಮೀ
ದೊರೆತೆನೆ ಬಣ್ಣಿಸಲ್ ನೆಱೆವರಾರಳವಂ ಚಲದಂಕಕಾಜಿನಾ ॥ 272 ॥

ಉ ಮಾ ॥ ದುಸ್ಥಿತಲೋಕಕಲ್ಪತರುವೆಂಬುದು ವೈರಿನರೇಂದ್ರಕುಂಭಿಕುಂ
ಭಸ್ಥಳಪಾಟನಪ್ರವಣಕೇಸರಿಯೆಂಬುದು ಕಾಮಿನೀಜನೋ
ರಸ್ಥಳಹಾರಮೆಂಬುದು ಮಹಾಕವಿ ಚಿತ್ತಸರೋರುಹಾಕರಾ
ವಸ್ಥಿತಹಂಸನೆಂಬುದು ಸಮಸ್ತಮಹೀಜನಮಿಂದ್ರರಾಜನಾ ॥ 273 ॥

ಚಂ ಮಾ ॥ ಪುಸಿವುದೆ ತಕ್ಕು ಕೊಟ್ಟೞಿಪಿ ಕೊಳ್ವುದೆ ಮಂತಣಮನ್ಯನಾರಿಗಾ
ಟಿಸುವುದೆ ಚಿತ್ತಮೀಯದುದೆ ಬಿನ್ನಣಮಾರುಮನೆಯ್ದೆ ಕೂರ್ತುೞ ಬಂ
ಚಿಸುವುದೆ ಕಲ್ತ ಕಲ್ಪಿಯೆನೆ ಮತ್ತವರಂ ಪೆಸರ್ಗೊಂಡದೆಂತು ಪೋ
ಲಿಸುವುದೊ ಪೇೞಿಮೀಗಡಿನ ರಾಜತನೂಜರೊಳಿಂದ್ರರಾಜನಂ ॥ 274 ॥

ಕಂ ॥ ನಿಖಿಳವಿನಮನ್ನರೇಶ್ವರ
ಮುಖಾಬ್ಜನೇತ್ರೋತ್ಪಳಾಳಕಾಳೋಳಶಿಳೀ
ಮುಖನಿಕರದಿನೆಸೆವುದು ಪದ
ನಖಕಮಳಾಕರವಿಳಾಸಮಹಿತರ ಜವನಾ ॥ 275 ॥

ಕಂ ॥ ಮನ್ನಿಸಿ ಪಿರಿದೀವಂ ತೊದ
ಳನ್ನುಡಿಯಂ ತೊಡರ್ದುೞ ಮಾಣನಳಱಿಂದಮಿದೇ
ನುನ್ನತಿವಡೆದುದೊ ಚಾಗದ
ನನ್ನಿಯ ಬೀರದ ನೆಗೞ್ತೆ ಚಳದಗ್ಗೞಿಯಾ ॥ 276 ॥

ಕಂ ॥ ಶರದಮೃತಕಿರಣರುಚಿಯಿಂ
ಚರಾಚರವ್ಯಾಪ್ತಿಯಿಂ ಜಗಜ್ಜನನುತಿಯಿಂ
ಕರಮೆಸೆದಿರ್ದಪುದೇನೀ
ಶ್ವರಮೂರ್ತಿಯ ಕೀರ್ತಿ ಕೀರ್ತಿನಾರಾಯಣನಾ ॥ 277 ॥

ಮ ವಿ ॥ ನುಡಿವರ್ ಬೀರಮನೊಂದುಗಂಡು ಸೆಡೆವರ್ ಚಾಗಕ್ಕೆ ಮುಯ್ವಾಂಪರೀ
ವೊಡೆ ಪಲ್ಗಿರ್ಚುವರಾಮೆ ಸೋಚಿಗಳೆಮೆಂದಿರ್ಪರ್ ಪರಸ್ತ್ರೀಯರೊಳ್
ಗಡಣಂ ನನ್ನಿಗೆ ಬೀಗುವರ್ ನುಡಿ ತೊದಳ್ ದೋಷಕ್ಕೆ ಪಕ್ಕಾದ
ಬಡಗಂಡರ್ ಕಲಿಕಾಲದೊಳ್ ಕಲಿಗಳೊಳ್ಗಂಡಂ ಪೆಱಂ ಗಂಡನೇ ॥ 278 ॥

ಕಂ ॥ ಶ್ರೀಗೆ ವಿಜಯಕ್ಕೆ ವಿದ್ದೆಗೆ
ಚಾಗಕ್ಕದಟಂಗೆ ಜಸಕೆ ಪೆಂಪಿಂಗಿನಿತ
ರ್ಕ್ಕಾಗರಮಿದೆನ್ದು ಕನ್ದುಕ
ದಾಗಮದೊಳೆ ನೆಗೞ್ಗುಮಲ್ತೆ ಬೀರರ ಬೀರಂ ॥ 279 ॥

ಪಿರಿಯಕ್ಕರ ॥

ಒಳಗಂ ದಕ್ಷಿಣ ಸುಕರ ದುಷ್ಕರಮಮಂ ಪೊಱಗಣ ಸುಕರ ದುಷ್ಕರ ಭೇದಮಂ
ಒಳಗೆ ವಾಮದ ವಿಷಮಮನಲ್ಲಿಯ ವಿಷಮದುಷ್ಕರಮನಿನ್ನದಱ ಪೊಱಗ

ಗ್ಗಳಿಕೆಯೆನಿಪತಿವಿಷಮಮನದಱಿತಿ ವಿಷಮ ದುಷ್ಕರಮೆಂಬ ದುಷ್ಕರಮಂ
ಎಳೆಯೊಳೊರ್ವ್ವನೆ ಚಾರಿಸಲ್ ಬಲ್ಲಂ ನಾಲ್ಕುಪ್ರಕರಣಮುಮನಿನ್ದ್ರರಾಜಂ ॥ 280 ॥

ಕಂ ॥ ಚಾರಿಸೆ ನಾಲ್ಕುಪ್ರಕರಣ
ಚಾರಣೆ ಮೂನೂಱಿ ಮೂವತೆಣ್ಟೆನಿಸಿದವಾ
ಚಾರಣೆಗಳನಶ್ರಮದಿಂ
ಚಾರಿಸುಗುಂ ಕೋಟಿತೆಱದಿನೆೞೆವಬೆಡಂಗಂ ॥ 281 ॥

ಪಿರಿಯಕ್ಕರ ॥
ಬಳಸುವೇೞುವ ಸುೞಿವಗಲ್ವಿನ್ತಪ್ಪ ಚಾರಣದೋಷಮಲ್ಲದೆ ಪೊಟ್ಟವ
ಟ್ಟಳೆಗೆ ಸಮನಾಗೆ ಗಿರಿಗೆಯ ಕೋಲ್ಮುಟ್ಟಿ ಮಿಗಲುಂ ನಿಲಲುಮಣಮೀಯವಿನ್ತೊ
ನ್ದಳವಿಯೊಳ್ ಬರೆ ಪೊಱಗೊಳಗೆಡದೊಳಂ ಬಲದೊಳಂ ಕಡುಗಡುಪಿನ್ನೆ ಬರ್ಪ
ವಳಯನ್ದಪ್ಪದೆ ಚಾರಿಸುವೋಜೆಯಂ ರಟ್ಟಕನ್ದರ್ಪನನ್ತಾವಂ ಬಲ್ಲಂ ॥ 282 ॥

ಕಂ ॥ ಮೆಳಸಿನನಿಲಿರಿದು ಗಿರಿಗೆಯ
ನಳೆದೊರ್ಗ್ಗಣ್ಕೋಲೊಳೊಳಗೆ ಪೊಱಗಣೆ ಮೆಱೆವೊ
ಳ್ಪುಳವಡೆ ಚಾರಿಪ ಬಹಲಿಕೆ
ಯಳವಿದು ಕೇವಳಮೆ ಕೀರ್ತಿನಾರಾಯಣನಾ ॥ 283 ॥

ಪಿರಿಯಕ್ಕರ ॥
ಗಿರಿಗೆ ಮೆಳಸಿನ್ದಂ ಕಿಱಿದಕ್ಕ ಕಾಲೊಳ್ಪು ನಾಲ್ವೆರಲಳವಿಗೆ ಕಿಱಿದುಮಕ್ಕ
ತುರಗಂ ಬೆಟ್ಟದಿಂ ಪಿರಿದಕ್ಕ ವಳಯಮುಂ ಭೂವಳಯದಿನತ್ತ ಪಿರಿದುಮಕ್ಕೆ
ಗಿರಿಗೆ ಕೋಲ್ವಳಿವಳಯಮಿನ್ತಿನಿತುಮಂ ಬಗೆವೊಂಗೆ ಕರಮರಿದಿನ್ತಿವಜೊಳ್
ಇರದೆ ಪತ್ತೆಣ್ಟುವಳಯಂ ಚಾರಿಸದನ್ನಂ ಭೋಗಮಿಕ್ಕವನಲ್ಲನಿನ್ದ್ರರಾಜಂ ॥ 284 ॥

ಕಂ ॥ ಕಡುಪುಗಳುದ್ದವಟಿಂ ಗಡ
ಬೆಡಂಗುಗಳ ಬೇೞೆಭಂಗಿಗಳಲಳಿಗಳಿದೇಂ
ಕಡುಜಾಣನೆ ಬದಿಕಯ್ವರ
ಮಡದರ್ದ್ದಪುಳೆನೆ ಬಿದ್ದಮೆೞ್ಯಿಮೆೞೆವಬೆಡಂಗಂ ॥ 285 ॥

ಕಂ ॥ ಉದ್ದವಟಿಮೆೞೆವರೆಂಬುದೆ
ಬಿದ್ದಂ ಮುನ್ನಲ್ಲಿ ಕಡುಪಿನೊಳ್ ಬಹುವಿಧದಿಂ

ದುದ್ದವಟಿಮೆಱೆದು ಮುರಿಗುಂ
ಬಿದ್ದಮೆನಲ್ ಬಲಳ್ದ ಪೊಱಗನೆಱೆವಬೆಡಂಗಂ ॥ 286 ॥

ಪಿರಿಯಕ್ಕರ ॥
ಎಱಕಮಲ್ಲದೆ ಪೊಲ್ಲದಾಗೆಱಗಿ ದೊರೆಕೊಣ್ಡೆ ಕೊಳ್ವ ತೆಱನಲ್ಲದಿ
ನೆಱೆಯೆ ಬರಲೆ ತಕ್ಕಡಿಯಲ್ಲಿ ಬೀಸುವಲ್ಲಿಯೆ ಬೀಸಲಱಿದೆಯಿಲ್ಲ
ಪಱಿಯನಾ ದಿಟ್ಟೆಮುರಿವಲ್ಲಿ ಕಡುಪಿನೊಳ್ ಮುರಿದಯಿಲ್ಲಿಲ್ಲಿಯ ಬಿನ್ನಣವ
ನ್ನೆಱಿಯೆ ಕಲ್ಪದೆ ಬೀರರ ಬೀರನಂ ಗಿಡೆಗಳಾಭರಣನಂ ನೋಡಿ ಕಲ್ಲಾ ॥ 287 ॥

ಕಂ ॥ ಆಸುವನುಂ ಕೂಸುವನುಂ
ಬೀಸುವನುಂ ಗಡಯೆ ನೆಗಟ್ದಿ ತಕ್ಕಡಿಯೊಳೆನು
ತ್ತಾಸದೆಯುಂ ಕುಂಕದೆಯುಂ
ಬೀಸಂದೆಯು ಬಿದ್ದಮೆೞೆಗುಮೆಱೆವಬೆಡಂಗಂ ॥ 288 ॥

ಪಿರಿಯಕ್ಕರ ॥
ಎಱಗಲಱಿಯದೆ ಜಿಣ್ಬುಕಮ್ಮಗುಟ್ಟುಂ ಬರಲಣಮಱಿಯದೆ ತಪ್ಪಂ ಪಿನ್ದುಂ
ತೆಱನನಱಿಯದೆ ಭಂಗಮನಿಕ್ಕಿಯುಂ ಮೂಱೆಡೆಗಲ್ಲದೆ ಕಟ್ಬಾಡಿಯುಂ
ಮುಱಿಯೆ ಪೊಯಿಸಿದನುರೆಯಂ ಕೊನ್ದು ಧರೆಗೆಡೆತಗರ್ಗಡಯಿವನೆನಿಸದೆ
ನೆಱೆಯೆ ಕಡುಜಾಣನೆನಿಸಲ್ಕೆ ಬರ್ಕ್ಕುಮೆ ಗೆಡೆಗಳಾಭರಣನ ಕಲ್ಲದನ್ನಂ ॥ 289 ॥

ಕಂ ॥ ಕಾಲ್ಗಳ ಕಯ್ಗಳ ತುರುಗದ
ಕಾಲ್ಗಳ ತಿಣಿವುಗಳೊಳಲ್ಲಿ ಬಂಚಿಸುತೆಱೆಗುಂ
ಗೆಲ್ಗುಮೆನೆ ನೆಗಟ್ದಿ ಮಾರ್ಗ್ಗದೆ
ಗೆಲ್ಗುಮೆ ಬಣದಲ್ಲಿ ಕೀರ್ತ್ತಿನಾರಾಯಣನಂ ॥ 290 ॥

66) ಸಂಖ್ಯೆ 165, E.C. II (R), ಕ್ರಿ.ಶ. 982

ಇದರಲ್ಲಿ ಪಿಟ್ಟುಗ ಎಂಬುವವನು ಸಲ್ಲೇಖನ ವ್ರತ ಮಾಡಿ ಮರಣ ಹೊಂದಿದುದನ್ನು ಹೇಳಿದೆ.

ಚಂ ಮಾ ॥ ಒಡನೆಯ ನಾಯಕರ್ಕ್ಕದಿದು ತಾಗುಮೆ x x ಮಜ್ಜಿವಕ್ಕದೊಡ್ಡುಪು
ಣ್ಬಡುವಿನವಿಟ್ದು ಸನ್ದು ಸವಕಟ್ಟಱಿದಲ್ಲಿಗೆ ನೂಂಕಿ ಬೀರಮ
ಜ್ಜಟಿವಿನಮಾಮೆ ತಳ್ತಿಱಿದು ಗೆಲ್ದೆವರಾತಿಯನೆನ್ದು ಪೊಚ್ಚಱಿಂ
ನುಡಿವಟುಗಣ್ಡರಂ ನಗುವುದೊಟ್ಟಜಿ ಮಾವನಗನ್ಧಹಸ್ತಿಯಂ ॥ 291 ॥

ಕಂ ॥ ಎನೆ ನೆಗಟ್ದಿ ಪಿಟ್ಟುಗಂ ಬೀ
ಡಿನ ಸೌಚೀರನೊ ಪ್ರಚಣ್ಡ ಭುಜದಣ್ಡಂ ಮಾ
ವನಗನ್ಧಹಸ್ತಿ ಕವಿಜನ
ವಿನುತಂ ಮೊನೆಮುಟ್ಟೆಗಂಡನಾಹವಶೌಣ್ಡಂ ॥ 292 ॥

67) ಸಂಖ್ಯೆ 172, E.C. II (R), ಕ್ರಿ.ಶ. ಸು. 10ನೇ ಶತಮಾನ

ಇದರಲ್ಲಿ ರಣಮೂರ್ಖ ವಂಶದ ಬಾಯಿಕ ಮತ್ತು ಜಾಬಯ್ಯೆಯ ಮಗಳಾದ ಸಾವಿಯಬ್ಬೆಯು ಯುದ್ಧದಲ್ಲಿ ಹೋರಾಟ ಮಾಡಿ ಮರಣ ಹೊಂದಿದ್ದನ್ನು ಹೇಳಿದೆ.

ಬಾಯಿಕ

ಕಂ ॥ ಶ್ರೀಯುವತಿಗೆ ನಿಜವಿಜಯ
ಶ್ರೀಯುವತಿಯೆ ಸವತಿಯೆನಿಸೆ ರಣಮೂರ್ಖನೃಪಾ
ಮ್ನಾಯದೊಳಾಯದ ಮೆಯ್ಗಲಿ
ಬಾಯಿಕನೆಂಬನ್ ನೆಗಟ್ತೆಯಂ ಪ್ರಕಟಿಸಿರ್ದನ್ ॥ 293 ॥

ಮಾದುವ ಮತ್ತು ದೋಯಿಲಮ್ಮ

ಕಂ ॥ ಶ್ರೀ ದಯಿತನ ಬಾಯಿಕನ ಮ
ನೋದಯಿತೆಗೆ ಜಭದೊಳೆಸೆದ ಜಾಬಯ್ಯೆಗೆ ತಾ
ಮಾದರ್ ತನಯರ್ ಪೇಟಿಲ್
ಮಾದುವರಂ ದೋಯಿಲಮ್ಮನೆಂಬರ್ ಪೆಸರಿಂ ॥ 294 ॥

ಸಾವಿಯಬ್ಬೆ

ಕಂ ॥ ಅವರೊಡವುಟ್ಟಿದೊಳಜೀವಿನ
ತವರೆನೆ ಧರ್ಮದದಗುಂತಿಯೆನೆ ನೆಗಟ್ದಳ್ ಭೂ
ಭುವನಕ್ಕೆ ಸಾವಿಯಬ್ಬೆಗ
ಮವನಿಜೆಗಂ ದೊರೆಯೆನಲ್ಕೆ ಪೆಂಡಿರುಮೊಳರೇ ॥ 295 ॥

ಉ ಮಾ ॥ ಶ್ರಾವಕಧರ್ಮದೊಳ್ ದೊರೆಯೆನಲ್ ಪೆಜಿರಿಲ್ಲೆನೆ ಸಂದ ರೇವತೀ
ಶ್ರಾವಕಿ ತಾನೆ ಸಜ್ಜನಿಕೆಯೊಳ್ ಜನಕಾತ್ಮಜೆ ತಾನೆ ರೂಪಿನೊಳ್
ದೇವಕಿ ತಾನೆ ಪೆಂಪಿನೊಳರುಂಧತಿ ತಾನೆ ಜಿನೇಂದ್ರಭಕ್ತಿಸ
ದ್ಭಾವದೆ ಸಾವಿಯಬ್ಬೆ ಜಿನಶಾಸನದೇವತೆ ತಾನೆ ಕಾಣಿರೇ ॥ 296 ॥

68) ಸಂಖ್ಯೆ 240, E.C. II (R), ಕ್ರಿ.ಶ. ಸು. 11ನೇ ಶತಮಾನ

ಇದರಲ್ಲಿ ಮಧುವಯ್ಯ ಎಂಬುವವನ ಭಕ್ತಿಯನ್ನು ವರ್ಣಿಸಿದೆ.

ಕಂ ॥ ವಿಧು ವಿಧುಧರಹಾಸ ಪಯೋಂ
ಬುಧಿ ಫೇನವಿಯಚ್ಚರಾಚಳೋಪಮಯಶನ
ಭ್ಯಧಿಕತರ ಭಕ್ತಿಯಿನ್ದಂ
ಮಧುವಂ ಬನ್ದಿಲ್ಲಿ ದೇವರಂ ಬನ್ದಿಸಿದಂ ॥ 297 ॥

69) ಸಂಖ್ಯೆ 79, E.C. II (R), ಕ್ರಿ.ಶ. ಸು. 1100

ಇದರಲ್ಲಿ ಕೊಂಡಕುಂದಾನ್ವಯದ ದೇವೇಂದ್ರಮುನಿಗಳನ್ನು ಹಾಗೂ ಅವರ ಪರಂಪರೆಯ ಜೈನಯತಿಗಳ ವ್ಯಕ್ತಿತ್ವವನ್ನು ಹೊಗಳಿದೆ.

ಗೋಪನಂದಿ

ಉ ಮಾ ॥ ತುಂಗಯಶೋಭಿರಾಮನಭಿಮಾನಸುವರ್ಣ್ನಧರಾಧರಂ ತಪೋ
ಮಂಗಳ ಲ್ಕ್ಷ್ಮಿವಲ್ಲಭನಿಳಾತಳವಂದಿತ ಗೋಪನಂದಿಯಾ
ವಂಗಮಸಾಧ್ಯಮಪ್ಪ ಪಲಕಾಲದ ನಿಂದ ಜಿನೇಂದ್ರಧರ್ಮ್ಮಮಂ
ಗಂಗನೃಪಾಳರಂದಿನ ವಿಭೂತಿಯ ರೂಢಿಯನೆಯ್ದೆ ಮಾಡಿದಂ ॥ 298 ॥

ಗೌಳದೇವ

ಕಂ ॥ ಧಾರಿಣಿಯೊಳ್ ಮನಸಿಜಸಂ
ಹಾರಿಗಳಂ ನೆನೆಯಲುಗ್ರಪಾಪಂ ಕಿಡುಗುಂ
ಸೂರಿಗಳನಮಳಗುಣಸಂ
ಧಾರಿಗಳಂ ಗೌಳದೇವಮಳಧಾರಿಗಳಂ ॥ 299 ॥

70) ಸಂಖ್ಯೆ 155, E.C. II (R), ಕ್ರಿ.ಶ. 1113

ಇದರಲ್ಲಿ ಬೂಚಿರಾಜನು ಸಲ್ಲೇಖನ ವ್ರತ ಸ್ವೀಕರಿಸಿ ಮರಣ ಹೊಂದಿದಾಗ ಅವನ ಸಹೋದರಿ (ಗಂಗರಾಜನ ಪತ್ನಿ) ಲಕ್ಷ್ಮಿಯು ನಿಸಿದಿ ಹಾಕಿಸಿದುದನ್ನು ಹೇಳಿದೆ.

ಲಕ್ಷ್ಮಿ

ಉ ಮಾ ॥ ಶ್ರೀವಧು ಚನ್ದ್ರಲೇಖೆ ಸುರಭೂರುಹದುದ್ಭವದಿಂ ಪಯೋಧಿವೇ
ಳಾವಧು ಪೆಂಪುವೆತ್ತವೊಲನಿಂದಿತೆ ನಾಗಲೆ ಚಾರುರೂಪಲೀ
ಲಾವತಿ ದಂಡನಾಯಕಿತಿ ಲಕ್ಕಲೆ ದೇಮತಿ ಬೂಚಿರಾಜನೆಂ
ಬೀ ವಿಭುಪುಟ್ಟೆ ಪೆಂಪುವಡೆದಾರ್ಜ್ಜಿಸಿದಳು ಪಿರಿದಪ್ಪ ಕೀರ್ತ್ತಿಯಂ॥ 300 ॥

ಬೂಚಣ

ಚಂ ಮಾ ॥ ವಿನಯದ ಸೀಮೆ ಸತ್ಯದ ತವರ್ಮನೆ ಶೌಚದ ಜನ್ಮಭೂಮಿಯೆಂ
ದನವರತಂ ಪೊಗೞ್ವುದು ಜನಂ ವಿಬುಧೋತ್ಕರಕೈರವಪ್ರಬೋ
ಧನ ಹಿಮರೋಚಿಯಂ ನೆಗೞ್ದ ಬೂಚಿಯನುದ್ಧಪರಾರ್ಥಸದ್ಗುಣಾ
ಭಿನವದಧೀಚಿಯಂ ಸುಭಟಭೀಕರವಿಕ್ರಮಸವ್ಯಸಾಚಿಯಂ ॥ 301 ॥

ಚಂ ಮಾ ॥ ಧರೆ ಲಘುವಾಯ್ತು ವಿಶ್ರುತವಿನೇಯನಿಕಾಯಮನಾಥಮಾಯ್ತು ವಾ
ಕ್ತರುಣಿಯುಮೀಗಳೀಜಗದೊಳಾರ್ಗಮನಾದರನೀಯೆಯಾದಳೆಂ
ದಿರದೆ ವಿಷಾದಮಾದಮೊದವುತ್ತಿರೆ ಭವ್ಯಜನಾಂತರಂಗದೊಳ್
ನಿರುಪಮನೆಯ್ದಿದಂ ನೆಗೞ್ದ ಬೂಚಿಯಣಂ ದಿವಿಜೇಂದ್ರಲೋಕಮಂ
॥ 302 ॥

71) ಸಂಖ್ಯೆ 156, E.C. II (R), ಕ್ರಿ.ಶ. 1115

ಇದರಲ್ಲಿ ಮೇಘಚಂದ್ರ ತ್ರೈವಿದ್ಯದೇವರ ಶಿಷ್ಯೆ ಲಕ್ಷ್ಮಿದೇವಿ ದಣ್ಣಾಯಕಿತಿಯು (ಮೇಘಚಂದ್ರ ತ್ರೈವಿದ್ಯದೇವರ) ಪರೋಕ್ಷ ವಿನಯವಾಗಿ ನಿಸಿದಿಗೆಯನ್ನು ನಿಲ್ಲಿಸಿದಂತೆ ಹೇಳಿದೆ.

ಮೇಘಚಂದ್ರ

ಮ ವಿ ॥ ಮುನಿನಾಥಂ ದಶಧರ್ಮಧಾರಿ ದೃಢಷಟ್ತ್ರಿಂಶದ್ಗುಣಂ ದಿವ್ಯಬಾ
ಣನಿಧಾನಂ ನಿನಗಿಕ್ಷುಚಾಪಮಳಿನೀಜ್ಯಾಸೂತ್ರಮೋರೊಂದೆ ಪೂ
ವಿನ ಬಾಣಂಗಳುಮೆಯ್ದೆ ಹೀನನಧಿಕಂಗಾಕ್ಷೇಪಮಂ ಮಾೞ್ಪುದಾ
ವ ನಯಂ ದರ್ಪಕ ಮೇಘಚಂದ್ರಮುನಿಯೊಳ್ ಮಾಣ್ ನಿನ್ನ
ದೋರ್ದರ್ಪಮಂ ॥ 303 ॥

ಮ ಸ್ರ ॥ ಶ್ರವಣೀಯಂ ಶಬ್ದ ವಿದ್ಯಾಪರಿಣತಿ ಮಹನೀಯಂ ಮಹಾತರ್ಕವಿದ್ಯಾ
ಪ್ರವಣತ್ವಂ ಶ್ಲಾಘನೀಯಂ ಜಿನನಿಗದಿತಸಂಶುದ್ಧಸಿದ್ಧಾಂತವಿದ್ಯಾ
ಪ್ರವಣಪ್ರಾಗಲ್ಭ್ಯಮೆಂದೆಂದುಪಚಿತಪುಳಕಂ ಕೀರ್ತಿಸಲ್ ಕೂರ್ತು ವಿದ್ವ
ನ್ನಿವಹಂ ತ್ರೈವಿದ್ಯನಾಮಪ್ರವಿದಿತನೆಸೆದಂ ಮೇಘಚಂದ್ರವ್ರತೀಂದ್ರಂ ॥ 304 ॥

ಮ ಸ್ರ ॥ ಕ್ಷಮೆಗೀಗಳ್ ಜವ್ವನಂ ತೀವಿದುದತುಳತಪಶ್ರೀಗೆ ಲಾವಣ್ಯಮೀಗಳ್
ಸಮಸಂದಿರ್ದತ್ತು ತನ್ನಿಂ ಶ್ರುತವಧುಗಧಿಕಪ್ರೌಢಿಯಾಯ್ತೀಗಳೆಂದಂ
ದೆ ಮಹಾವಿಖ್ಯಾತಿಯಂ ತಾಳ್ದಿದನಮಳಚರಿತ್ರೋತ್ತಮಂ ಭವ್ಯಚೇತೋ
ರಮಣಂ ತ್ರೈವಿದ್ಯವಿದ್ಯೋದಿತವಿಶದಯಶಂ ಮೇಘಚಂದ್ರವ್ರತೀಂದ್ರಂ
॥ 305 ॥

ಮ ಸ್ರ ॥
ಇದೆ ಹಂಸೀಬೃಂದಮೀಂಟಲ್ ಬಗೆದಪುದು ಚಕೋರೀಚಯಂ ಚಂಚುವಿಂದಂ
ಕರ್ದುಕಲ್ ಸಾರ್ದಪ್ಪುದೀಶಂ ಮುಡಿಯೊಳಿರಿಸಲೆಂದಿರ್ದಪಂ ಸಜ್ಜೆಗೇಱಲ್
ಪದೆದಪ್ಪಂ ಕೃಷ್ಣನೆಂಬಂತೆಸೆದು ಬಿಸಲಸತ್ಕಂದಳೀಕಂದಕಾಂತಂ
ಪುದಿದತ್ತೀ ಮೇಘಚಂದ್ರವ್ರತಿತಿಳಕಜಗದ್ವರ್ತಿಕೀರ್ತಿಪ್ರಕಾಶಂ ॥ 306 ॥

ಗಂಗರಾಜ

ಉ ಮಾ ॥ ಮತ್ತಿನ ಮಾತವತ್ತಿರಲಿ ಜೀರ್ಣಜಿನಾಲಯಕೋಟಿಯಂ ಕ್ರಮಂ
ಬೆತ್ತಿರೆ ಮುನ್ನಿನಂತಿರನಿತೂರ್ಗಳೊಳಂ ನೆಱೆ ಮಾಡಿಸುತ್ತುಮ
ತ್ಯುತ್ತಮಪಾತ್ರದಾನದೊದವಂ ಮೆಱೆಯುತ್ತಿರೆ ಗಂಗವಾಡಿ ತೊಂ
ಬತ್ತಱುಸಾಸಿರಂ ಕೊಪಣಮಾದುದು ಗಂಗಣದಂಡನಾಥನಿಂ ॥ 307 ॥

ಮ ಸ್ರ ॥ ಸಮದೋದ್ಯನ್ಮಾರಗಂಧದ್ವಿರದನಬಳಕಣ್ಠೀರವಂ ಕ್ರೋಧಲೋಭ
ದ್ರುಮಮೂಳಚ್ಛೇದನಂ ದುರ್ದ್ಧರವಿಷಯ ಶಿಳಾಭೇದವಜ್ರಪ್ರತಾಪಂ
ಕಮನೀಯಂ ಶ್ರೀ ಜಿನೇಂದ್ರಾಗಮಜಳನಿಧಿಪಾರಂ ಪ್ರಭಾಚಂದ್ರ ಸಿದ್ಧಾ
ನ್ತಮುನೀಂದ್ರಂ ಮೋಹವಿಧ್ವಂಸನಕರನೆಸೆದಂ ಧಾತ್ರಿಯೊಳ್ ಯೋಗಿನಾಥಂ
॥ 308 ॥

ಲಕ್ಷ್ಮಿ

ಕಂ ॥ ಶೋಭೆಯನೇಂ ಕಯ್ಕೊಂಡುದೊ
ಸೌಭಾಗ್ಯದ ಕಣಿಯೆನಿಪ್ಪ ಲಕ್ಷ್ಮೀಮತಿಯಿಂ
ದೀಭುವನತಳದೊಳಾಹಾ
ರಾಭಯಭೈಷಜ್ಯಶಾಸ್ತ್ರದಾನವಿಧಾನಂ ॥ 309 ॥

72) ಸಂಖ್ಯೆ 170, E.C. II (R), ಕ್ರಿ.ಶ. 1117

ಇದರಲ್ಲಿ ಹೊಯ್ಸಳ ಪೊಯ್ಸಳಶೆಟ್ಟಿ ಮತ್ತು ನೇಮಿಶೆಟ್ಟಿಯರ ತಾಯಂದಿರಾದ ಮಾಚಿಕಬ್ಬೆ, ಶಾಂತಿಕಬ್ಬೆಯರು ವ್ರತ ಮಾಡಿ ಮರಣ ಹೊಂದಿದುದನ್ನು ಹೇಳಿದೆ.

ಪೊಯ್ಸಳಸೆಟ್ಟಿ ಮತ್ತು ನೇಮಿಸೆಟ್ಟಿ

ಕಂ ॥ ಅಮಳಯಶರಮಳಗುಣಗಣ
ರಮಳಿನ ಜಿನಶಾಸನಪ್ರದೀಪಕರೆನೆ ಪೆಂ
ಪಮರ್ದ್ದಿರೆ ಪೊಯ್ಸಳಸೆಟ್ಟಿಯು
ಮಮೇಯಗುಣ ನೇಮಿಸೆಟ್ಟಿಯುಂ ಸುಖದಿನಿರಲ್ ॥ 310 ॥

73) ಸಂಖ್ಯೆ 82, E.C. II (R), ಕ್ರಿ.ಶ. ಸು. 1118

ಇದರಲ್ಲಿ ಹೊಯ್ಸಳ ದೊರೆ ವಿಷ್ಣುವರ್ಧನನ ಆಳಿಕೆಯಲ್ಲಿ ಮಹಾಪ್ರಧಾನ ದಂಡನಾಯಕನಾದ ಗಂಗರಾಜನು ತನ್ನ ತಾಯಿ ಪೋಚಿಕಬ್ಬೆ ಮಾಡಿಸಿದ ಬಸದಿಗೆ, ತನ್ನ ಪತ್ನಿ ಮಾಡಿಸಿದ ಬಸದಿಗೆ 'ಪರಮ' ಎಂಬ ಗ್ರಾಮವನ್ನು ದಾನ ನೀಡಿದ್ದನ್ನು ಹೇಳಿದೆ.

ಮಾರ ಮತ್ತು ಮಾಕಣಬ್ಬೆಯರ ಮಗ ಏಚ

ಮ ವಿ ॥ ಜನತಾಧಾರನುದಾರನನ್ಯವನಿತಾದೂರಂ ವಚಸ್ಸುಂದರೀ
ಘನವೃತ್ತಸ್ತನಹಾರನುಗ್ರರಣಧೀರಂ ಮಾರನೇನೆಂದಪ್ಪೆ
ಜನಕಂ ತಾನೆನೆ ಮಾಕಣಬ್ಬೆ ವಿಬುಧಪ್ರಖ್ಯಾತ ಧರ್ಮ್ಮಪ್ರಯು
ಕ್ತನಿಕಾಮಾತ್ತಚರಿತ್ರೆ ತಾಯೆನಲಿದೇನೇಚಂ ಮಹಾಧನ್ಯನೋ ॥ 311 ॥

ಕಂ ॥ ವಿತ್ರಸ್ತಮಳಂ ಬುಧಜನ
ಮಿತ್ರಂ ದ್ವಿಜಕುಳಪವಿತ್ರನೇಚಂ ಜಗದೊಳ್
ಪಾತ್ರಂ ರಿಪುಕುಳಕಂದಖ
ನಿತ್ರಂ ಕೌಂಡಿನ್ಯಗೋತ್ರನಮಳಚರಿತ್ರಂ ॥ 312 ॥

ಪೋಚಿಕಬ್ಬೆ

ಕಂ ॥ ಉತ್ತಮಗುಣತತಿ ವನಿತಾ
ವೃತ್ತಿಯನೊಳಕೊಂಡುದೆಂದು ಜಗಮೆಲ್ಲಂ ಕೆ
ಯ್ಯೆತ್ತುವಿನಮಮಳಗುಣಸಂ
ಪತ್ತಿಗೆ ಜಗದೊಳಗೆ ಪೋಚಿಕಬ್ಬೆಯೆ ನೋಂತಳ್ ॥ 313 ॥

ಗಂಗರಾಜ

ಕಂ ॥ ತೆಗೆ ವಾರುವಮಂ ಹಾರುವ
ಬಗೆಯಂ ತನಗಿರುಳ ಬವರಮೆನುತೆ ಸವಂಗಂ
ಬುಗುವ ಕಟಕಿಗರನಳಿಖಿಂ
ಪುಗಿಸಿದುದು ಭುಜಾಸಿ ಗಂಗದಂಡಾಧಿಪನಾ ॥ 314 ॥

ಕಂ ॥ ಪರಮಪ್ರಸಾದಮಂ ಪಡೆ
ದು ರಾಜ್ಯಮಂ ಧನಮನೇನುಮಂ ಬೇಡದನ
ಸ್ವರಮಾಗೆ ಬೇಡಿಕೊಣ್ಡಂ
ಪರಮನನಿದನರ್ಹದರ್ಚ್ಚನಾಂಚಿತ ಚಿತ್ತಂ ॥ 315 ॥

ಚಂ ಮಾ ॥ ಪಸರಿಸೆ ಕೀರ್ತ್ತನಂ ಜನನಿ ಪೋಚಲದೇವಿಯರರ್ತ್ಥಿವಟ್ಟು ಮಾ
ಡಿಸಿದ ಜಿನಾಲಯಕ್ಕಮೊಸೆದಾತ್ಮ ಮನೋರಮೆ ಲಕ್ಷ್ಮೀದೇವಿ ಮಾ
ಡಿಸಿದ ಜಿನಾಲಯಕ್ಕಮಿದು ಪೂಜನಯೋಜಿತಮೆಂದು ಕೊಟ್ಟು ಸ
ನ್ತೊಸಮನಜಸ್ರಮಾಂಪನೆನೆ ಗಂಗಚಮೂಪನಿದೇನುದಾತ್ತನೋ ॥ **316** ॥

ಪಿರಿಯಕ್ಕರ ॥
ಆದಿಯಾಗಿರ್ಪುದಾರ್ಹತಸಮಯಕ್ಕೆ ಮೂಲಸಂಘ ಕೊಂಡಕುಂದಾನ್ವಯಂ
ಬಾದುವೆಡದಂ ಬಳಯಿಪುದಲ್ಲಿಯ ದೇಸಿಗಗಣದ ಪುಸ್ತಕಗಚ್ಛದ
ಬೋಧ ವಿಭವದ ಕುಕ್ಕುಟಾಸನಮಲಧಾರಿದೇವರ ಶಿಷ್ಯರೆನಿಪ ಪೆಂಪಿಂ
ಗಾದಮೆಸೆದಿರ್ಪ ಶುಭಚಂದ್ರಸಿದ್ಧಾನ್ತದೇವರ ಗುಡ್ಡ ಗಂಗಚಮೂಪತೀ ॥ **317** ॥

ಪಿರಿಯಕ್ಕರ ॥
ಗಂಗವಾಡಿಯ ಬಸದಿಗಳೆನಿತೊಳವನಿತುಮಂ ತಾನೆಯ್ದೆ ಪೊಸಯಿಸಿದಂ
ಗಂಗವಾಡಿಯ ಗೊಮ್ಮಟದೇವರ್ಗೆ ಸುತ್ತಾಲಯಮನೆಯ್ದೆ ಮಾಡಿಸಿದಂ
ಗಂಗವಾಡಿಯ ತಿಗುಳರಂ ಬೆಂಕೊಂಡು ವೀರಗಂಗಂಗೆ ನಿಮಿರ್ಚಿ ಕೊಟ್ಟಂ
ಗಂಗರಾಜನಾ ಮುನ್ನಿನ ಗಂಗರ ರಾಯಂಗಂ ನೂರ್ಮಡಿ ಧನ್ಯನಲ್ತೇ ॥ **318** ॥

ಉ ಮಾ ॥ ಎತ್ತಿದನೆಲ್ಲಿಗಲ್ಲಿ ನೆಲೆವೀಡನೆ ಮಾಡಿದನೆಲ್ಲಿಗಲ್ಲಿ ಕಣ್
ಪತ್ತಿದುದೆಲ್ಲಿಗಲ್ಲಿ ಮನಮಾವೆಡೆಗೆಯ್ದಿದುದೆಲ್ಲಿಗಲ್ಲಿ ಸಂ
ಪತ್ತಿನ ಜೈನಗೇಹಮನೆ ಮಾಡಿಸೆ ದೇಶದೊಳಲ್ಲಿಗಲ್ಲಿಗೆ
ತ್ತೆತ್ತಲುಮಾವಗಂ ಪಟಿಯ ಮಾಟ್ಕೆವೊಲಾದುದು ಗಂಗರಾಜನಿಂ ॥ **319** ॥

ಮ ವಿ ॥ ಜಿನಧರ್ಮಾಗ್ರಣಿಯತ್ತಿಮಬ್ಬರಸಿಯಂ ಲೋಕಂ ಗುಣಂಗೊಳ್ವುದೇ
ಕೆನೆ ಗೋದಾವರಿನಿಂದ ಕಾರಣದಿನೀಗಳು ಗಂಗದಂಡಾಧಿನಾ
ಥನುಮಂ ಕಾವೇರಿ ಪೆರ್ಚ್ಚಿ ಸುತ್ತಿ ಪಿರಿದುಂ ನೀರೊತ್ತಿಯುಂ ಮುಟ್ಟತಿ
ಲ್ಲೆನೆ ಸಂಮ್ಯಕ್ತ್ವದ ಪೆಂಪನೇಂ ನೆಱೆಯೆ ಬಂಣಿಪಂಣನೇ ವಂಣಿಪಂ
॥ **320** ॥

74) ಸಂಖ್ಯೆ 136, E.C. II (R), ಕ್ರಿ.ಶ. 1120

ಇದರಲ್ಲಿ ಹೊಯ್ಸಳ ದೊರೆ ವಿಷ್ಣುವರ್ಧನನ ಮಹಾಪ್ರಧಾನಿ ಗಂಗರಾಜನ ತಾಯಿ ಪೋಚಿಕಬ್ಬೆಯ ಧರ್ಮಕಾರ್ಯಗಳನ್ನು ಹೇಳಿದೆ.

ಏಚ

ಕಂ ॥ ಜನವಿನುತನೇಚಿಗಾಂಕನ
ಮನಸ್ಸರೋಹಂಸಿ ಗಂಗರಾಜಚಮೂನಾ

ಥನ ಜನನಿ ಜನನಿ ಭುವನ
ಕ್ಕನೆ ನೆಗಳ್ದಳ್ಜೋಚಿಕಬ್ಬೆ ಗುಣದುನ್ನತಿಯಿಂ ॥ 321 ॥

75) ಸಂಖ್ಯೆ 158, E.C. II (R), ಕ್ರಿ.ಶ. 1120

ಈ ನಿಸಿದಿ ಶಾಸನದಲ್ಲಿ ಗಂಗರಾಜನ ಪತ್ನಿ ಲಕ್ಕಲೆ ದಂಡನಾಯಕಿತಿಯ ಸೋದರಿ ದೇಮಿಯಕ್ಕನನ್ನು ಹೊಗಳಿದೆ.

ಶಾ ವಿ ॥ ಶ್ರೀ ಚಾಮುಂಡ ಮನೋಮನೋರಥರಥವ್ಯಾಪಾರಣೈಕಕ್ರಿಯಾ
ಶ್ರೀ ಚಾಮುಂಡಮನಸ್ಸರೋಜರಜಸಾ ರಾಜದ್ವಿರೇಫಾಂಗನಾ
ಶ್ರೀ ಚಾಮುಂಡಗೃಹಾಂಗಣೋದ್ಗತ ಮಹಾಶ್ರೀಕಲ್ಪವಲ್ಲೀ ಸ್ವಯಂ
ಶ್ರೀ ಚಾಮುಂಡಮನಃಪ್ರಿಯಾಂ ವಿಜಯತಾಂ ಶ್ರೀ ದೇಮವತ್ಯಂಗನಾ
॥ 322 ॥

76) ಸಂಖ್ಯೆ 157, E.C. II (R), ಕ್ರಿ.ಶ. 1121

ಇದರಲ್ಲಿ ಹೊಯ್ಸಳರ ಮಹಾಪ್ರಧಾನಿ ಗಂಗರಾಜನ ಪತ್ನಿ ಲಕ್ಷ್ಮೀದೇವಿಯು ಸಲ್ಲೇಖನ ವ್ರತದಿಂದ ಮರಣ ಹೊಂದಿದ್ದನ್ನು ತಿಳಿಸಿದೆ.

ಲಕ್ಷ್ಮಿ

ಚಂ ಮಾ ॥ ಪರಮಪದಾರ್ಥನಿರ್ಣಯಮನಾಂತ ವಿದಗ್ಧತೆ ದುರ್ನಯಂಗಳೊಳ್
ಪರಿಚಯಮೆಂದುಮಿಲ್ಲದತಿಮುಗ್ಧತೆ ತನ್ನಿನಿಯಂಗೆ ಚಿತ್ತದೊಳ್
ಪಿರಿದನುರಾಗಮಂ ಪಡೆವ ರೂಪು ವಿನೇಯಜನಾಂತರಂಗದೊಳ್
ನಿರುಪಮಭಕ್ತಿಯಂ ಪಡೆವ ಪೆಂಪಿವು ಲಕ್ಷ್ಮಲೆಗೆಂದುಮನ್ವಿತಂ ॥ 323 ॥

ಕಂ ॥ ಸೌಭಾಗ್ಯದೊಳಮದರ್ಾದಂ
ಶೋಭಾಸ್ಪದಮಾದ ರೂಪಿನೊಳ್ಪಿಂ ಪ್ರತ್ಯ
ಕ್ಷೀಭೂತಲಕ್ಷ್ಮಿಯೆಂದಪು
ದೀಭೂತಳಮಿನಿತುಮೆಯ್ದೆ ಲಕ್ಷ್ಮೀಮತಿಯಂ ॥ 324 ॥

ಕಂ ॥ ವಿತರಣಗುಣಮದೆ ವನಿತಾ
ಕೃತಿಯಂ ಕೆಯ್ಕೊಂಡುದೆನಿಪ ಮಹಿಮೆಯ ಲಕ್ಷ್ಮೀ
ಮತಿಯೆಲವೊ ದೇವತಾಧಿ
ಷ್ಠಿತೆಯಲ್ಲದೆ ಕೇವಳಂ ಮನುಷ್ಯಾಂಗನೆಯೇ ॥ 325 ॥

77) ಸಂಖ್ಯೆ 135, E.C. II (R), ಕ್ರಿ.ಶ. 1123

ಇದರಲ್ಲಿ ಶುಭಚಂದ್ರದೇವನು ವ್ರತಮಾಡಿ ಮರಣ ಹೊಂದಿದಾಗ ಅವನ ಶಿಷ್ಯ

ಗಂಗರಾಜನು ನಿಸಿದಿಗೆಯನ್ನು ನಿಲ್ಲಿಸಿದಂತೆ ಹೇಳಿದೆ.

ದಿವಾಕರಣಂದಿ

ಮ ವಿ ॥ ವರಭವ್ಯಾನನಪದ್ಮಮುಳ್ಳಲರಲಜ್ಞಾನೀಕನೇತ್ರೋತ್ಪಳಂ
ಕೊರಗಲ್ ಪಾಪತಮಸ್ತಮಂ ಪರೆಯಲೆತ್ತಂ ಜೈನಮಾರ್ಗಾಮಳಾಂ
ಬರಮತ್ಯುಜ್ವಲಮಾಗಲೇಂ ಬೆಳಗಿತೋ ಭೂಭಾಗಮಂ ಶ್ರೀ ದಿವಾ
ಕರಣಂದಿವ್ರತಿವಾಕ್ ದಿವಾಕರಕರಾಕಾರಂಬೊಲುರ್ವೀನುತಂ ॥ 326 ॥

ಗಂಡವಿಮುಕ್ತಮಳಧಾರಿದೇವ

ಉ ಮಾ ॥ ಗಂಡವಿಮುಕ್ತದೇವಮಳಧಾರಿಮುನೀಂದ್ರರ ಪಾದಪದ್ಮಮಂ
ಕಂಡೊಡಸಾಧ್ಯಮೇಂ ನೆನೆದ ಭವ್ಯಜನಕ್ಕೆಮ ಕೊಂಡ ಚಂಡವೇ
ದಂಡವಿರೋಧಿದಂಡನೃಪದಂಡಪತತ್ ಪೃಥುವಜ್ರದಂಡಕೋ
ದಂಡಕರಾಳದಂಡಧರದಂಡಭಯಂ ಪೆಱಪಿಂಗಿ ಪೋಗವೇ ॥ 327 ॥

ಚಂ ಮಾ ॥ ಬಲಯುತರಂ ಬಟಿಲ್ಪುವ ಲತಾಂತಶರಂಗಿದಿರಾಗಿ ತಾಗಿ ಸಂ
ಚಳಿಸೆ ಪಳಂಚಿ ತೂಳ್ದವನನೋಡಿಸಿ ಮೆಯ್ವಗೆಯಾದ ದೂಸಱಿಂ
ಕಳೆಯದೆ ನಿಂದ ಕರ್ಬುನದ ಕರ್ಗಿದ ಸಿಪ್ಪಿನಮರ್ಕೆವೆತ್ತ ಕ
ತ್ತಳಮೆನಿಸಿತ್ತು ಪುತ್ತಡರ್ದ ಮೆಯ್ಯ ಮಳಂ ಮಳಧಾರಿದೇವರಾ ॥ 328 ॥

ಶುಭಚಂದ್ರ

ಕಂ ॥ ಶುಭಚಂದ್ರಮುನೀಂದ್ರಯಶಃ
ಪ್ರಭೆಯೊಳ್ ಸರಿಯಾಗಲಾಱದಿಂತೀಚಂದ್ರಂ
ಪ್ರಭೆದೆಗೆದು ಕಂದಿ ಕುಂದಿದ
ನಭವಶಿರೋಮಣಿಗದೇಕೆ ಕಂದುಂ ಕುಂದುಂ ॥ 329 ॥

ಚಂ ಮಾ ॥ ಮಱೆದುಮದೊಮ್ಮೆ ಲೌಕಿಕದ ವಾರ್ತ್ತೆಯನಾಡದ ಕೆತ್ತ ಬಾಗಿಲಂ
ತೆಱೆಯದ ಭಾನುವಸ್ತಮಿತಮಾಗಿರೆ ಪೋಗದ ಮೆಯ್ಯನೊಮ್ಮೆಯುಂ
ತುಱಿಸದ ಕುಕ್ಕುಟಾಸನಕೆ ಸೋಲದ ಗಂಡವಿಮುಕ್ತವೃತ್ತಿಯಂ
ಮಱೆಯದ ಘೋರದುಶ್ಚರ ತಪಶ್ಚರಿತಂ ಮಳಧಾರಿದೇವರ ॥ 330 ॥

ಉ ಮಾ ॥ ಕಂತುಮದಾಪಹರ್ಸ್ಸಕಳಜೀವ ದಯಾಪರ ಜೈನಮಾರ್ಗ್ಗ ರಾ
ದ್ಧಾಂತ ಪಯೋಧಿಗಳ್ ವಿಷಯವೈರಿಗಳುದ್ಧತ ಕರ್ಮ್ಮಭಂಜನ

ಸ್ರ್ವಂತತ ಭವ್ಯಪದ್ಮದಿನಕೃತ್ರಭರಂ ಶುಭಚಂದ್ರದೇವ
ಸಿದ್ಧಾಂತ ಮುನೀಂದ್ರರಂ ಪೊಗಳ್ವುದಂಬುಧಿವೇಷ್ಟಿತ ಭೂರಿಭೂತಳಂ ॥ 331 ॥

78) ಸಂಖ್ಯೆ 162, E.C. II (R), ಕ್ರಿ.ಶ. 1123

ಇದರಲ್ಲಿ ಹೊಯ್ಸಳರಾಜನಾದ ವಿಷ್ಣುವರ್ಧನನ ಮಹಿಷಿ ಶಾಂತಲದೇವಿ ಬೆಳ್ಗೊಳದಲ್ಲಿ ಸವತಿಗಂಧವಾರಣ ಬಸ್ತಿಯನ್ನು ಕಟ್ಟಿಸಿದಳೆಂದು ಹೇಳಿದೆ.

ಎರೆಯಂಗ

ಚಂ ಮಾ ॥ ಅರಿಪುರದೊಳ್ ಧಗದ್ಧಗಿಲ ದಂಧಗಿಲೆಂಬುದರಾತಿಭೂಮಿಪಾ
ಳರ ಶಿರದೊಳ್ ಗರಿಲ್ ಗರಿಗರೀಗರಿಲೆಂಬುದು ವೈರಿಭೂತಳೇ
ಶರ ಕುರುಳೊಳ್ ಚಿಮಿಲ್ ಚಿಮಿಚಿಮೀಚಿಮಿಲೆಂಬುದು ಕೋಪವಹ್ನಿ ದು
ರ್ಧರತರಮೆಂದೊಡಳ್ಕುಱದೆ ಕಾದುವರಾರೆಱೆಯಂಗದೇವನೊಳ್ ॥ 332 ॥

ವಿಷ್ಣುವರ್ಧನ

ಮ ಸ್ರ ॥ ಕೆಲರಂ ಕಿಟ್ಟಿಕ್ಕಿ ಬೇರಂ ಬಿದಿರ್ದು ಕೆಲರನತ್ಯುಗ್ರಸಂಗ್ರಾಮದೊಳ್ ಬಾ
ಟ್ಟಿಲೆಗೊಂಡಾಕ್ಷೇಪದಿಂದಂ ಕೆಲರ ತಲೆಗಳಂ ಮೆಟ್ಟಿ ನಿಂದುಗ್ರಕೋಪಂ
ಮಲೆವತ್ಯುದ್ವೃತ್ತರಂ ತೊತ್ತಟಿದುಟಿದು ನಿಜಪ್ರಾಜ್ಯಸಾಮ್ರಾಜ್ಯಮಂ ತೋ
ಳ್ವಲದಿಂ ನಿಷ್ಕಂಟಕಂ ಮಾಡಿದನಧಿಕಬಳಂ ವಿಷ್ಣು ಜಿಷ್ಣುಪ್ರತಾಪಂ ॥ 333 ॥

ಕಂ ॥ ಆ ನೆಗಳ್ದೆಱೆಗನೃಪಾ
ಳನ ಸೂನು ಬ್ರಿಹದ್ವೈರಿಮರ್ದ್ದನಂ ಸಕಳಧರಿ
ತ್ರೀನಾಥ ನರ್ತ್ಥಿಜನತಾ
ಭಾನುಸುತಂಜಿಷ್ಣು ವಿಷ್ಣುವರ್ಧನನೆಸೆದಂ ॥ 334 ॥

ಶಾಂತಲೆ

ಕಂ ॥ ಆ ನೆಗಟ್ದಿ ವಿಷ್ಣುನೃಪನ ಮ
ನೋನಯನಪ್ರಿಯೆ ಚಲಾಳಿನೀಲಾಳಕಿ ಚಂ
ದ್ರಾನನೆ ಕಾಮನ ರತಿಯೊಳ್
ತಾನೆಣೆ ತೊಣೆ ಸರಿ ಸಮಾನೆ ಶಾಂತಲದೇವಿ ॥ 335 ॥

ಮ ವಿ ॥ ಧುರದೊಳ್ ವಿಷ್ಣುನೃಪಾಳಕಂಗೆ ವಿಜಯಶ್ರೀ ವಕ್ಷದೊಳ್ ಸಂತತಂ
ಪರಮಾನಂದದಿನೋತು ನಿಲ್ವ ವಿಪುಳಶ್ರೀ ತೇಜದುದ್ದಾನಿಯಂ
ವರದಿಗ್ಭಿತ್ತಿಯನೆಯ್ದುಸಲ್ ನೆಱೆವ ಕೀರ್ತಿಶ್ರೀಯೆನುತ್ತಿರ್ಪ್ಪುದೀ
ಧರೆಯೊಳ್ ಶಾಂತಲದೇವಿಯಂ ನೆಱೆಯೆ ಬಣ್ಣಿಪ್ಪಾತನೇವಣ್ಣಿಪಂ ॥ 336 ॥

79) ಸಂಖ್ಯೆ 176, E.C. II (R), ಕ್ರಿ.ಶ. 1131

ಇದರಲ್ಲಿ ಹೊಯ್ಸಳ ದೊರೆಯಾದ ವಿಷ್ಣುವರ್ಧನನ ರಾಣಿ, ಶಾಂತಲದೇವಿಯು ಶಿವಗಂಗೆಯಲ್ಲಿ ಮರಣ ಹೊಂದಿದುದನ್ನು ತಿಳಿಸಿದೆ. ಅವಳ ತಾಯಿ ಮಾಚಿಕಬ್ಬೆಯು ಸಲ್ಲೇಖನ ವ್ರತ ಮಾಡಿ ಮರಣ ಹೊಂದಿದುದನ್ನೂ ತಿಳಿಸಿದೆ.

ವಿನಯಾದಿತ್ಯ

ಮ ವಿ ॥ ಎನಿತಾನುಂ ಕೆಱೆ ದೇಗುಲಂಗಳೆನಿತಾನುಂ ಜೈನಗೇಹಂಗಳಂ
ತೆನಿತುಂ ನಾರ್ಕ್ಕಳನೂರ್ಗ್ಗಳಂ ಪ್ರಜೆಗಳಂ ಸಂತೋಷದಿಂ ಮಾಡಿದಂ
ವಿನಯಾದಿತ್ಯನೃಪಾಳ ಪೊಯ್ಸಳನೆ ಸಂದಿರ್ದ್ದಾ ಬಲೀಂದ್ರಂಗೆ ಮೇ
ಲೆನೆ ಪೆಂಪಂ ಪೊಗಳ್ವನ್ನನಾವನೊ ಮಹಾ ಗಂಭೀರನಂ ಧೀರನಂ ॥ 337 ॥

ಉ ಮಾ ॥ ಇಟ್ಟಿಗೆಗೆಂದಗಲ್ದ ಕುಳಿಗಳ್ಕೆಱೆಯಾದವು ಕಲ್ಗಗೊಣ್ಡ ಪೆ
ರ್ವ್ವೆಟ್ಟು ಧರಾತಳಕ್ಕೆ ಸರಿಯಾದವು ಸುಣ್ಣದ ಭಂಡಿ ಬಂದ ಪೆ
ರ್ವ್ವಟ್ಟೆಯೆ ಪಳ್ಳಮಾಗುವೆನೆ ಮಾಡಿಸಿದಂ ಜಿನರಾಜಗೇಹಮಂ
ನೆಟ್ಟನೆ ಪೊಯ್ಸಳೇಶನೆನೆ ಬಣ್ಣಿಪರಾರ್ಮ್ಮಲೆ ರಾಜರಾಜನಂ ॥ 338 ॥

ಎರೆಯಂಗ

ಮ ವಿ ॥ ವಿನಯಾದಿತ್ಯನೃಪಾಳನಾತ್ಮಜನಿಳಾಲೋಕೈಕ ಕಲ್ಪದ್ರುಮಂ
ಮನುಮಾರ್ಗ್ಗಂ ಜಗದೇಕವೀರನೆಱೆಯಂಗೋರ್ವ್ವೀಶ್ವರಂ ಮಿಕ್ಕನಾ
ತನಪುತ್ರಂ ರಿಪುಭೂಮಿಪಾಳಕ ಮದಸ್ಸಂಮರ್ದ್ದನಂ ವಿಷ್ಣುವ
ರ್ದ್ಧನಭೂಪಂ ನೆಗಳ್ದಂ ಧರಾವಳಯದೊಳ್ ಶ್ರೀರಾಜಕಣ್ಠೀರವಂ ॥ 339 ॥

ವಿಷ್ಣುವರ್ಧನ

ಕಂ ॥ ಅರಿನರಪ ಶಿರಾಸ್ಫಾಳನ
ಕರನುದ್ಧತ ವೈರಿಮಂಡಳೇಶ್ವರ ಮದಸಂ
ಹರಣಂ ನಿಜಾನ್ವಯೈಕಾ
ಭರಣಂ ಶ್ರೀ ಬಿಟ್ಟಿದೇವನೀವರದೇವಂ ॥ 340 ॥

ಮ ವಿ ॥ ಎಳೆಯೊಳ ದುಷ್ಟರನುದ್ಧತಾರಿಗಳನಾಟಂದೊತ್ತಿ ಬೆಂಕೊಂಡು ದೋ
ರ್ಬ್ಬಳದಿಂದ ದೇಶಮನಾವಗಂ ತನಗೆ ಸಾಧ್ಯಂ ಮಾಡಿರಲು ಗಂಗಮಂ
ಡಲಮೆಂದೋಲೆಗೆ ತೆತ್ತುಮಿತ್ತು ಬೆಸನಂ ಪೂರ್ಣ್ದಿರ್ಪ್ಪಿನಂ ವಿಷ್ಣುಪೊ
ಯ್ಸಳನಿರ್ದ್ದಿಂ ಸುಖದಿಂದೆ ರಾಜ್ಯದೊದವಿಂದಂ ಸಂತೋಷಾಹದಿಂ ॥ 341 ॥

ಶಾಂತಲದೇವಿ

ಕಂ ॥ ಕಲಿಕಾಲ ವಿಷ್ಣುವಕ್ಷ
ಸ್ಥಳದೊಳ್ ಕಲಿಕಾಲಲಕ್ಷ್ಮಿ ನೆಲಸಿದಳೆನೆ ಶಾಂ
ತಲದೇವಿಯ ಸೌಭಾಗ್ಯಮ
ನೆಲಗಳ ಬಣ್ಣಿಸುವೆನೆಂಬನೇವಣ್ಣಿಸುವಂ ॥ **342** ॥

ಕಂ ॥ ಶಾನ್ತಲದೇವಿಗೆ ಸದ್ಗುಣ
ವನ್ತೆಗೆ ಸೌಭಾಗ್ಯ ಭಾಗ್ಯವತಿಗೆ ವಚಶ್ರೀ
ಕಾನ್ತೆಯುಮಗಜೆಯುಮಚ್ಯುತ
ಕಾನ್ತೆಯುಮೆಣೆಯಲ್ಲದುಳಿದ ಸತಿಯರ್ದೊರೆಯೇ ॥ **343** ॥

ಪಿರಿಯಕ್ಕರ ॥
ಗುರುಗಳು ಪ್ರಭಾಚಂದ್ರಸಿದ್ಧಾನ್ತದೇವರ್ ಪೆತ್ತತಾಯಿ ಗುಣನಿಧಿ ಮಾಚಿಕಬ್ಬೆ
ಪಿರಿಯಪೆರ್ಗ್ಗಡೆ ಮಾರಸಿಂಗಯ್ಯಂ ತಂದೆ ಮಾವನುಂ ಪೆರ್ಗ್ಗಡೆ ಸಿಂಗಿಮಯ್ಯಂ
ಅರಸಂ ವಿಷ್ಣುವರ್ಧನನೃಪಂ ವಲ್ಲಭಂ ಜಿನನಾಥಂ ತನಗೆಂದುಮಿಷ್ಟದೆಯ್ವಂ
ಅರಸಿ ಶಾನ್ತಲದೇವಿಯ ಮಹಿಮೆಯಂ ಬಣ್ಣಿಸಲ್ ಬಕ್ಕುಮೆ ಭೂತಳದೊಳ್ ॥ **344** ॥

ಮಾರಸಿಂಗ

ಉ ಮಾ ॥ ಈ ಕಲಿಕಾಲದೊಳ್ ಮನು ಬೃಹಸ್ಪತಿ ವಂದಿಜನಾಶ್ರಯಂ ಜಗ
ವ್ಯಾಪಿತಕಾಮಧೇನುವಭಿಮಾನಿ ಮಹಾಪ್ರಭು ಪಂಡಿತಾಶ್ರಯಂ
ಲೋಕಜನಸ್ತುತಂ ಗುಣಗಣಾಭರಣಂ ಜಗದೇಕದಾನಿಯ
ವ್ಯಾಕುಳಮಂತ್ರಿಯೆಂದು ಪೊಗಟ್ಟುಂ ಧರೆ ಪೆರ್ಗ್ಗಡೆ ಮಾರಸಿಂಗನಂ
॥ **345** ॥

ಮ ವಿ ॥ ದೊರೆಯೇ ಪೆರ್ಗ್ಗಡೆ ಮಾರಸಿಂಗವಿಭುವಿಂಗೀ ಕಾಲದೊಳ್
ಪುರುಷಾರ್ತ್ಥಂಗಳೊಳತ್ಯುದಾರತೆಯೊಳಂ ಧರ್ಮಾನುರಾಗಂಗಳೊಳ್
ಹರಪಾದಾಂಬುಜ ಭಕ್ತಿಯೊಳ್ ನಿಯಮದೊಳ್ ತಾನೆನಲ್
ಸುರಲೋಕಕ್ಕೆ ಮನೋಮುದಂಬೆರಸು ಪೋದಂ ಭೂತಳಂ ಕೀರ್ತ್ತಿಸಲ್
॥ **346** ॥

ಮಾಚಿಕಬ್ಬೆ

ಕಂ ॥ ಅರಸಿ ಸುರಗತಿಯನೆಯ್ದಿದ
ಳಿರಲಾಗೆನಗೆಂದು ಬಂದು ಬೆಳುಗೊಳದೊಳ್ ದು

ರ್ದ್ಧರಸನ್ಯಾಸನದಿಂ ಪರಿ
ಣತೆ ತಾಯಿ ಮಾಚಿಕಬ್ಬೆ ತಾನುಂ ತೊಱೆದಳ್ ॥ 347 ॥

ಚಂ ಮಾ ॥ ಅರೆಮುಗುಳ್ದಿರ್ದ್ದ ಕಣ್ಮಲರ್ಗ್ಗಳೋದುವ ಪಂಚಪದಂ ಜಿನೇಂದ್ರನಂ
ಸ್ಮರಿಯಿಸುವೋಜೆ ಬನ್ಧುಜನಮಂ ಬಿಡಿಪುನ್ನತಿ ಸನ್ಯಸಕ್ಕೆ ವಂ
ದಿರಲೊಸೆದೊಂದುತಿಂಗಳುಪವಾಸದೊಳಿಂಬಿನೆ ಮಾಚಿಕಬ್ಬೆ ತಾಂ
ಸುರಗತಿಗೆಯ್ದಿದಳ್ ಸಕಳ ಭವ್ಯರ ಸನ್ನಿಧಿಯೊಳ್ ಸಮಾಧಿಯಿಂ ॥ 348 ॥

ಕಂ ॥ ಆ ಮಾರಸಿಂಗಮಯ್ಯನ
ಕಾಮಿನಿ ಜಿನಚರಣಭಕ್ತೆ ಗುಣಸಂಯುತೆ ಉ
ದ್ಧಾಮಪ್ರತಿಬ್ರತೆ ಎನ್ದೀ
ಭೂಮಿಜನಂ ಪೊಗಳೆ ಮಾಚಿಕಬ್ಬೆಯೆ ನೆಗಟ್ಟಳ್ ॥ 349 ॥

ಚಂ ಮಾ ॥ ಜಿನಪದಭಕ್ತೆ ಬನ್ಧುಜನಪೂಜಿತೆಯಾಶ್ರಿತ ಕಾಮಧೇನು ಕಾ
ಮನಸತಿಗಂ ಮಹಾಸತಿ ಗುಣಾಗ್ರಣಿ ದಾನವಿನೋದೆ ಸಂತತಂ
ಮುನಿಜನಪಾದಪಂಕರುಹಭಕ್ತೆ ಜನಸ್ತುತೆ ಮಾರಸಿಂಗಮ
ಯ್ಯನಸತಿ ಮಾಚಿಕಬ್ಬೆಯೆನೆ ಕೀರ್ತ್ತಿಸುಗುಂ ಧರೆಮೆಚ್ಚಿ ನಿಚ್ಚಲುಂ ॥ 350 ॥

ಮ ವಿ ॥ ಜಿನನಾಥಂ ತನಗಾಪ್ತನಾಗೆ ಬಲದೇವಂ ತಂದೆ ಪೆತ್ತಬ್ಬೆ ಸ
ದ್ವನಿತಾಗ್ರೇಸರೆ ಬಾಚಿಕಬ್ಬೆಯೆನೆ ತಮ್ಮಂ ಸಿಂಗಣಂ ಸಂದಮಾಂ
ತನದಿಂದಗ್ಗದ ಮಾಚಿಕಬ್ಬೆ ಸುರಲೋಕಕ್ಕೋದಳೆಂದಂದು ಮೆ
ದಿನಿಯೆಲ್ಲಂ ಪೊಗಳುತ್ತಮಿರ್ಪ್ಪುದೆನೆ ಬಣ್ಣಿಪ್ಪಣ್ಣನೇವಣ್ಣಿಪಂ ॥ 351 ॥

ಸ್ರಗ್ಧರೆ ॥ ಪೆಂಡಿರ್ಸ್ಸನ್ಯಾಸನಂಗೊಂಡವರೊಳಗಿನಿತಂ ಬಲ್ಲರಾರೆಂಬಿನಂ ಕೈ
ಕೊಂಡಾಗಳ್ ಘೋರವೀರಬ್ರತಪರಿಣತೆಯಂ ಮೆಚ್ಚಿ ಸಂತೋಷದಿಂದಂ
ಪಾಂಡಿತ್ಯಂ ಚಿತ್ತದೊಳ್ ತಳ್ತಿರೆ ಜಿನಚರಣಾಂಭೋಜಮಮಂ ಭಾವಿಸುತ್ತಂ
ಕೊಂಡಾಡಲ್ ಧಾತ್ರಿ ತನ್ನಂ ಸುರಗತಿವಡೆದಳ್ ಲೀಲೆಯಿಂ ಮಾಚಿಕಬ್ಬೇ
॥ 352 ॥

ಕಂ ॥ ದಾನಮನನೂನಮಂ ಕಃ
ಕೇನಾರ್ತ್ಥಿಯೆಂದು ಕೊಟ್ಟು ಜಿನನಂ ಮನದೊಳ್
ಧ್ಯಾನಿಸುತಂ ಮುಡಿಪಿದಳಿ
ನ್ನೇನೆಂಬುದೊ ಮಾಚಿಕಬ್ಬೆಯೊಂದುನ್ನತಿಯಂ ॥ 353 ॥

ಕಂ ॥ ಪಂಡಿತಮರಣದಿನೀ ಭೂ
ಮಂಡಲದೊಳ್ ಮಾಚಿಕಬ್ಬೆಯಂತೆವೊಲಾರ್ಕೈ
ಕೊಂಡಿಂತು ನೆಗಟಿರೀಗಳ
ಖಂಡಿತಮಂ ಘೋರವೀರಸನ್ಯಾಸನಮಂ ॥ 354 ॥

ಬಲದೇವ

ಚಂ ಮಾ ॥ ಸಕಳಕಳಾಶ್ರಯಂ ಗುಣಗಣಾಭರಣಂ ಪ್ರಭು ಪಂಡಿತಾಶ್ರಯಂ
ಸುಕವಿಜನಸ್ತುತಂ ಜಿನಪದಾಬ್ಜ ಭೃಂಗನನೂನದಾನಿ ಲೌ
ಕಿಕಪರಮಾರ್ತ್ಥಮೆಂಬೆರಡುಮಂ ನೈಜೆಬಲ್ಲನೆನುತ್ತೆ ದಂಡನಾ
ಯಕ ಬಲದೇವನಂ ಪೊಗಳ್ವುದಂಬುಧಿವೇಷ್ಟಿತ ಭೂರಿ ಭೂತಳಂ
॥ 355 ॥

ಚಂ ಮಾ ॥ ಮುನಿನಿವಹಕ್ಕೆ ಭವ್ಯನಿಕರಕ್ಕೆ ಜಿನೇಶ್ವರಪೂಜೆಗಳ್ಗೆ ಮಿ
ಕ್ಕನುಪಮದಾನ ಧರ್ಮ್ಮದೊದವಿಂಗೆ ನಿರಂತರಮೊಂದೆ ಮಾರ್ಗ್ಗದಿಂ
ಮನೆಯೊಳನಾಕುಳಂ ಮದುವೆಯಂದದ ಪಾಂಗಿನೊಳುಣ್ಬುದೆಂದಡಿಂ
ಮನುಜನಿಧಾನನಂ ಪೊಗಳ್ವನೇವೊಗಳ್ವಂ ಬಲದೇವಮಾತ್ಯನಂ ॥ 356 ॥

ಮ ವಿ ॥ ಸ್ಥಿರನೇ ಮೇರುಗಿರೀಂದ್ರದಿಂದೆ ಮಿಗಿಲೇ ಗಂಭೀರನೇ ಜಾಪ್ಪು ಸಾ
ಗರದಿಂದಗ್ಗಳಮೆಂತು ದಾನಿಯೆ ಸುರೋರ್ವ್ವೀಜಕ್ಕೆ ಮೇಲ್ ಭೋಗಿಯೆ
ಸುರರಾಜಂಗೆಣೆಯೆಂದು ಕೀರ್ತ್ತಿಪುದು ಕಯ್ಕೊಂಡಕ್ಕಜಂ ಸಂತತಂ
ಧರೆಯೊಳ್ ಶ್ರೀ ಬಲದೇವಮಾತ್ಯನನಿಳಾಲೋಕೈಕ ವಿಖ್ಯಾತನಂ ॥ 357 ॥

ಕಂ ॥ ಬಲದೇವ ದಂಡನಾಯಕ
ನಲಂಘ್ಯಭುಜಬಳಪರಾಕ್ರಮಂ ಮನುಚರಿತಂ
ಜಲನಿಧಿವೇಷ್ಟಿತ ಧಾತ್ರೀ
ತಳದೊಳ್ ಸಮನಾರೊ ಮಂತ್ರಿ ಚೂಡಾಮಣಿಯೊಳ್ ॥ 358 ॥

80) ಸಂಖ್ಯೆ 174, E.C. II (R), ಕ್ರಿ.ಶ. 1139

ಇದು ಬಲದೇವನು ಮೋರಿಗೆರೆಯ ತೀರ್ಥದಲ್ಲಿ ಸನ್ಯಸನ ವಿಧಿಯಿಂದ ಮರಣ ಹೊಂದಿದಾಗ, ಅವನ ತಾಯಿ ನಾಗಿಯಕ್ಕ, ಸಹೋದರಿ ಬಿಜಿಯಕ್ಕ ಪರೋಕ್ಷವಿನಯವಾಗಿ ದಾನ ಮಾಡಿ, ಪ್ರಭಾಚಂದ್ರಸಿದ್ಧಾನ್ತದೇವರಿಗೆ ವೃತ್ತಿ ನೀಡಿದ್ದನ್ನು ಹೇಳುತ್ತದೆ.

ಪ್ರಭಾಚಂದ್ರದೇವ

ಮಾಲಿನಿ ॥ ಸಕಳಜನವಿನೂತಂ ಚಾರುಬೋಧತ್ರಿನೇತ್ರಂ
ಸುಕರ ಕವಿನಿವಾಸಂ ಭಾರತೀನೃತ್ಯರಂಗಂ
ಪ್ರಕಟಿತ ನಿಜಕೀರ್ತ್ತಿರ್ದ್ದಿವ್ಯಕಾನ್ತಾಮನೋಜಂ
ಸಕಳಗುಣಗಣೇಂದ್ರಂ ಶ್ರೀ ಪ್ರಭಾಚಂದ್ರದೇವಂ ॥ 359 ॥

ಬಾಚಿಕಬ್ಬೆ

ಕಂ ॥ ಸತಿರೂಪಮಲ್ತು ನೋೞ್ಪೊಡೆ
ಕ್ಷಿತಿಯೊಳ್ ಸೌಭಾಗ್ಯವತಿಯನುನ್ನತಮತಿಯಂ
ಪತಿಹಿತೆಯಂ ಗುಣವತಿಯಂ
ಸತತಂ ಕೀರ್ತಿಪುದು ಬಾಚೆಯಂ ಭುವನಜನಂ ॥ 360 ॥

ಬಲ್ಲಣ

ಕಂ ॥ ಎನ್ತೆನ್ತು ನೋೞ್ಪಡಂ ಗುಣ
ವನ್ತಂ ಕಲಿ ಶುಚಿ ದಯಾಪರಂ ಸತ್ಯವಿದಂ
ಭ್ರಾನ್ತೇನೆನುತಂ ಬುಧರ
ಶ್ರಾನ್ತಂ ಕೀರ್ತ್ತಿಪುದು ಧಾತ್ರಿಯೊಳ್ ಬಲ್ಲಣನಂ ॥ 361 ॥

81) ಸಂಖ್ಯೆ 175, E.C. II (R), ಕ್ರಿ.ಶ. 1139

ಇದರಲ್ಲಿ ಬಲದೇವದಂಡನಾಯಕನ ಮಗ ಸಿಂಗಿಮಯ್ಯನು ಸಮಾಧಿಮರಣ ಹೊಂದಿದಂತೆಯೂ, ಅವನ ಹೆಂಡತಿ ನಿಸಿದಿಗೆಯನ್ನು ನಿಲ್ಲಿಸಿದಂತೆಯೂ ಹೇಳಿದೆ.

ಬಲದೇವ ದಂಡನಾಯಕ

ಮ ವಿ ॥ ಸ್ಥಿರನೇ ಬಾಪ್ಪುಮರಾದ್ರಿಯಿಂದಮಧಿಕಂ ಗಂಭೀರನೇ ಬಾಪ್ಪು ಸಾ
ಗರದಿಂದಗ್ಗಳಮೆಂತು ದಾನಿಯೆ ಸುರೋರ್ವೀಜಕ್ಕೆ ಮೇಲ್ ಭೋಗಿಯೇ
ಸುರರಾಜಂಗೆಣೆಯೆಂದು ಕೀರ್ತಿಪುದು ಕೆಯ್ಕೊಂಡಟ್ಟಿಜಿಂ ಸಂತತಂ
ಧರೆಯೆಲ್ಲಂ ಬಲದೇವಮಾತ್ಯನನಿಳಾಲೋಕೈಕವಿಖ್ಯಾತನಂ ॥ 362 ॥

ಮ ವಿ ॥ ಪಲರುಂ ಮುನ್ನಿನ ಪುಣ್ಯದೊಂದೊದವಿನಿಂ ಭಾಗ್ಯಕ್ಕೆ ಪಕ್ಕಾದೊಡಂ
ಚಲದಿಂ ತೇಜದಿನೊಳ್ಪಿನಿಂ ಗುಣದಿನಾದೌದಾರ್ಯ್ಯದಿಂ ಧೈರ್ಯ್ಯದಿಂ
ಲಲನಾಚಿತ್ತಹರೋಪಚಾರವಿಧಿಯಿಂ ಗಾಂಭೀರ್ಯ್ಯದಿಂ ಶೌರ್ಯ್ಯದಿಂ
ಬಲದೇವಂಗೆ ಸಮಾನಮಪ್ಪರೊಳರೇ ಮತ್ತನ್ಯದಂಡಾಧಿಪರ್ ॥ 363 ॥

ಸಿಂಗಿಮಯ್ಯ

ಮ ಸ್ರ ॥
ಜಿನಧರ್ಮಾಂಬರ ತಿಗ್ಮರೋಚಿ ಸುಚರಿತ್ರಂ ಭವ್ಯವಂಶೋತ್ತಮಂ ಶಿ
ಷ್ಟನಿಧಾನಂ ಮಂತ್ರಿಚೂಡಾಮಣಿ ಬುಧವಿನುತಂ ಗೋತ್ರವಂಶಾಂಬರಾರ್ಕ್ಕಂ
ವನಿತಾಚಿತ್ತಪ್ರಿಯಂ ನಿರ್ಮ್ಮಳನನುಪಮನಸತ್ಯುತ್ತಮಂ ಕೂರೆ ಕೂರ್ಪಂ
ವಿನಯಾಂಭೋರಾಸಿ ವಿದ್ಯಾನಿಧಿ ಗುಣನಿಳಯಂ ಧಾತ್ರಿಯೊಳ್ ಸಿಂಗಿಮಯ್ಯಂ
॥ 364 ॥

ಚಂ ಮಾ ॥ ಜಿನಪದಭಕ್ತನಿಷ್ಟಜನವತ್ಸಳನಾಶ್ರಿತಕಲ್ಪಭೂರುಹಂ
ಮುನಿಚರಣಾಂಬುಜಾತ ಯುಗಭೃಂಗನುದಾರನನೂನದಾನಿ ಮ
ತ್ತಿನಪುರುಷರ್ಗ್ಗೆ ಪೋಲಿಪುದದಾರ್ದ್ದೊರೆಯೆಂಬಿನೆಗಂ ನೆಗರ್ದ್ದನೀ
ಮನುಜನಿಧಾನನೆಂದು ಪೊಗಳ್ಗುಂ ಧರೆ ಪೆರ್ಗ್ಗಡೆ ಸಿಂಗಿಮಯ್ಯನಂ
॥ 365 ॥

82) ಸಂಖ್ಯೆ 173, E.C. II (R), ಕ್ರಿ.ಶ. 1145

ಇದರಲ್ಲಿ ಹೊಯ್ಸಳ ದೊರೆ ವಿಷ್ಣುವರ್ಧನನ ರಾಣಿ, ಶಾಂತಲೆಯ ತಾಯಿ ಮಾಚಿಕಬ್ಬೆ ಹಾಗೂ ಅವಳ ಗುರು ಪ್ರಭಾಚಂದ್ರ ಸಿದ್ಧಾಂತದೇವರು ಸಲ್ಲೇಖನ ವ್ರತ ಮಾಡಿ ಮರಣ ಹೊಂದಿದುದನ್ನು ಹೇಳಿದೆ.

ಮೇಘಚಂದ್ರ

ಕಂ ॥ ಪೂಜಿತ ವಿದಗ್ಧವಿಬುಧಸ
ಮಾಜಂ ತ್ರೈವಿದ್ಯಮೇಘಚಂದ್ರಬ್ರತಿ ರಾ
ರಾಜಿಸಿದಂ ವಿನಮಿತಮುನಿ
ರಾಜಂ ವೃಷಭಗಣಭಗಣತಾರಾರಾಜಂ **॥ 366 ॥**

ಶುಭಕೀರ್ತಿ

ಮ ಸ್ರ ॥
ಘನದರ್ಪೋರ್ನ್ನದ್ಧಬೌದ್ಧಕ್ಷಿತಿಧರಪವಿಯೀಬಂದನೀಬಂದನೀಬಂ
ದನೆ ಸನ್ನೈಯಾಯಿಕೋದ್ಯತ್ತಿಮಿರತರಣಿಯೀಬಂದನೀಬಂದನೀಬಂ
ದನೆ ಸನ್ಮೀಮಾಂಸಕೋದ್ಯತ್ಕರಿಕರಿರಿಪುಯೀಬಂದನೀಬಂದನೀಬಂ
ದನೆ ಪೋ ಪೋ ವಾದಿ ಪೋಗೆಂದುಲಿವುದು ಶುಭಕೀರ್ತಿಸದ್ಧಕೀರ್ತಿಪ್ರಘೋಷಂ
॥ 367 ॥

ಕಂ ॥ ವಿತಥೋಕ್ತಿಯಲ್ತಜಂ ಪಶು
ಪತಿ ಶಾರ್ಙ್ಗಿಯೆನಿಪ್ಪ ಮೂವರುಂ ಶುಭಕೀರ್ತಿ

ವ್ರತಿಸನ್ನಿಧಿಯೊಳ್ ನಾಮೋ
ಚಿತಚರಿತರೆ ತೊಡರ್ದೊಡಿತರವಾದಿಗಳಳವೇ ॥ 368 ॥

ಕಂ ॥ ಸಿಂಗದ ಸರಮಂ ಕೇಳ್ದ ಮ
ತಂಗಜದಂತಳ್ಕಿ ಬಳ್ಕಲಲ್ಲದೆ ಸಭೆಯೊಳ್
ಪೊಂಗಿ ಶುಭಕೀರ್ತಿಮುನಿಪನೊ
ಳೇಂ ಗಡ ನುಡಿಯಲ್ಕೆ ವಾದಿಗಳ್ಗೆಂಟೆರ್ದೆಯೇ ॥ 369 ॥

ವೀರಣಂದಿ

ಕಂ ॥ ಹರಿಹರಹಿರಣ್ಯಗರ್ಭರ
ನುರವಣೆಯಿಂ ಗೆಲ್ದ ಕಾಮನಂ ದೀಪ್ತತಪೋ
ಭರದಿಂದುರಿಪಿದರೆನೆ ಬಿ
ತ್ತರಿಸದರಾರ್ವೀರಣಂದಿಸೈದ್ಧಾಂತಿಕರಂ ॥ 370 ॥

83) ಸಂಖ್ಯೆ 70, E.C. II (R), ಕ್ರಿ.ಶ. 1163

ದೇವಕೀರ್ತಿ ಮುನಿಯ ಪರವಾದಿ ಚಾತುರ್ಯತೆಯನ್ನು, ವಿದ್ಯಾಚಾತುರ್ಯತೆಯನ್ನು ಅವನ ಮರಣವನ್ನೂ ಇದು ಹೇಳುತ್ತದೆ.

ಚಂ ಮಾ ॥ ಚತುರತೆ ಸತ್ಕವಿತ್ವದೊಳಭಿಜ್ಞತೆ ಶಬ್ದಕಳಾಪದೊಳ್ ಪ್ರಸ
ನ್ನತೆ ಮತಿಯೊಳ್ ಪ್ರವೀಣತೆ ನಯಾಗಮತರ್ಕವಿಚಾರದೊಳ್ ಸುಪೂ
ಜ್ಯತೆ ತಪದೊಳ್ ಪವಿತ್ರತೆ ಚರಿತ್ರದೊಳೊಂದಿ ವಿರಾಜಿಸಲ್ ಪ್ರಸಿ
ದ್ಧತೆ ಮುನಿದೇವಕೀರ್ತಿವಿಬುಧಾಗ್ರಣಿಗೊಪ್ಪುವುದೀ ಧರಿತ್ರಿಯೊಳ್ ॥ 371 ॥

84) ಸಂಖ್ಯೆ 71, E.C. II (R), ಕ್ರಿ.ಶ. 1163

ಇದರಲ್ಲಿ ಮಹಾಪ್ರಧಾನ ಹುಳ್ಳರಾಜನು ತನ್ನ ಗುರು ದೇವಕೀರ್ತಿ ಪಂಡಿತರಿಗೆ ಪರೋಕ್ಷ ವಿನಯವಾಗಿ ನಿಸಿದಿಗೆಯನ್ನು ಮಾಡಿಸಿದಂತೆ ಹೇಳಿದೆ.

ಮ ವಿ ॥ ಗುರು ಸೈದ್ಧಾನ್ತಿಕಮಾಘನಂದಿಮುನಿಪಂ ಶ್ರೀಮಚ್ಚಮೂವಲ್ಲಭಂ
ಭರತಂ ಭಾತ್ರನಪಾರಶಾಸ್ತ್ರನಿಧಿಗಳ್ ಶ್ರೀ ಭಾನುಕೀರ್ತ್ತಿ ಪ್ರಭಾ
ಸ್ಫುರಿತಾಳಂಕೃತ ದೇವಕೀರ್ತ್ತಿಮುನಿಪರ್ಶ್ಶಿಷ್ಯರ್ಜ್ಜಗನ್ಮಂಡನ
ರ್ದ್ದೊರೆಯೇಂ ಗಂಡವಿಮುಕ್ತದೇವ ನಿನಗಿಂ ನೀ ನಾಮಸೈದ್ಧಾನ್ತಿಕರ್ ॥ 372 ॥

ಕೊಲ್ಲಾಪುರದ ಮಾಘಣಂದಿ

ಮ ಸ್ರ ॥ ಎಳಮಾವಿಂ ಬನಮಬ್ಜದಿಂ ತಿಳಿಗೊಳಂ ಮಾಣಿಕ್ಯದಿಂ ಮಂಡನಾ
ವಳಿ ತಾರಾಧಿಪನಿಂ ನಭಂ ಶುಭದಮಾಗಿರ್ಪಂತಿರಿರ್ದತ್ತು ನಿ
ರ್ಮಳಮೀಗಳ್ ಕುಲಚಂದ್ರದೇವಚರಣಾಂಭೋಜಾತಸೇವಾವಿನಿ
ಶ್ಚಳಸೈದ್ಧಾಂತಿಕಮಾಘಣಂದಿ ಮುನಿಯಿಂ ಶ್ರೀಕೊಂಡಕುಂದಾನ್ವಯಂ
॥ 373 ॥

ಮ ಸ್ರ ॥ ಹಿಮವತ್ಕುತ್ಕೀಲಮುಕ್ತಾಫಲತರಲತರತ್ತಾರಹಾರೇಂದುಕುಂದೋ
ಪಮಕೀರ್ತಿವ್ಯಾಪ್ತದಿಙ್ಮಂಡಳನವನತಭೂಮಂಡಳಂ ಭವ್ಯಪದ್ಮೋ
ಗ್ರಮರೀಚೀಮಂಡಳಂ ಪಂಡಿತತತಿವಿನತಂ ಮಾಘಣಂದ್ಯಾಖ್ಯವಾಚಂ
ಯಮಿರಾಜಂ ವಾಗ್ವಧೂಟೀನಿಟಿಲತಟಹಟನ್ನೂತ್ನಸದ್ರತ್ನಪಟ್ಟಂ ॥ 374 ॥

ಶ್ರುತಕೀರ್ತಿ

ಶಾ ವಿ ॥ ಆವೊಂ ವಾದಿಕಥಾತ್ರಯಪ್ರವಣದೊಳ್ ವಿದ್ವಜ್ಜನಂ ಮೆಚ್ಚೆ ವಿ
ದ್ಯಾವಷ್ಟಂಭಮನಪ್ಪುಕೆಯ್ದು ಪರವಾದಿಕ್ಷೋಣಿಭೃತ್ಪಕ್ಷಮಂ
ದೇವೇಂದ್ರಂ ಕಡಿವಂದದಿಂ ಕಡಿದೆಲೇ ಸ್ಯಾದ್ವಾದವಿದ್ಯಾಸ್ತ್ರದಿಂ
ತ್ರೈವಿದ್ಯಶ್ರುತಕೀರ್ತಿದಿವ್ಯಮುನಿವೊಲ್ ವಿಖ್ಯಾತಿಯಂ ತಾಳ್ದಿದೊಂ ॥ 375 ॥

ಕಂ ॥ ಶ್ರುತಕೀರ್ತಿತ್ರೈವಿದ್ಯ
ವ್ರತಿ ರಾಘವಪಾಂಡವೀಯಮಂ ವಿಬುಧಚಮ
ತ್ಕೃತಿಯೆನಿಸಿ ಗತಪ್ರತ್ಯಾ
ಗತದಿಂ ಪೇಟ್ದಿಮಲಕೀರ್ತಿಯಂ ಪ್ರಕಟಿಸಿದಂ ॥ 376 ॥

85) ಸಂಖ್ಯೆ 73, E.C. II (R), ಕ್ರಿ.ಶ. 1176

ಇದರಲ್ಲಿ ನಯಕೀರ್ತಿಗುರುವಿನ ಮರಣಾನಂತರ ಮಂತ್ರಿ ನಾಗದೇವನು ಅವರಿಗೆ ನಿಸಿದಿಯನ್ನು ಮಾಡಿಸಿದಂತೆ ಹೇಳಿದೆ.

ನಯಕೀರ್ತಿ

ಮ ವಿ ॥ ಗುರುವಾದಂ ಖಚರಾಧಿಪಂಗೆ ಬಲಿಗಂ ದಾನಕ್ಕೆ ಬಿಣ್ಪಿಂಗೆ ತಾಂ
ಗುರುವಾದಂ ಸುರಭೂಧರಕ್ಕೆ ನೆಗಟ್ದಾ ಕೈಲಾಸಶೈಲಕ್ಕೆ ತಾಂ
ಗುರುವಾದಂ ವಿನುತಂಗೆ ರಾಜಿಸುವಿರುಂಗೋಳಂಗೆ ಲೋಕಕ್ಕೆ ಸ
ದ್ಗುರುವಾದಂ ನಯಕೀರ್ತಿದೇವಮುನಿಪಂ ರಾದ್ಧಾಂತಚಕ್ರಾಧಿಪಂ ॥ 377 ॥

86) ಸಂಖ್ಯೆ 81, E.C. II (R), ಕ್ರಿ.ಶ. ಸು. 1180

ಇದರಲ್ಲಿ ಬಾಳಚಂದ್ರಮುನಿಗಳು ಸಲ್ಲೇಖನವನ್ನು ಸ್ವೀಕರಿಸಿ ಸ್ವರ್ಗಸ್ಥರಾದಾಗ ಅವರ ಶಿಷ್ಯೆ ಹೆಗ್ಗಡತಿ ಬಾಗಣಬ್ಬೆಯು ಪರೋಕ್ಷವಿನಯವಾಗಿ ನಿಸಿದಿಯನ್ನು ಮಾಡಿಸಿದ್ದನ್ನು ಹೇಳಿದೆ.

ಶುಭಕೀರ್ತಿ

ಕಂ ॥ ಪೋ ಸಾಲ್ವುದು ವಾದಿ ವೃಥಾ
ಯಾಸಂ ವಿಬುಧೋಪಹಾಸಮನುಮಾನೋಪ
ನ್ಯಾಸಂ ನಿಂನೀ ತೇಥೇ
ವಾಸಂ ಸಂದಪುದೇ ವಾದಿಚಕ್ರಾಂಕುಶನೊಳ್ ॥ 378 ॥

ವರ್ಧಮಾನಮುನಿ

ಕಂ ॥ ಸುರನದಿಯ ತಾರಹಾರದ
ಸುರದಂತಿಯ ರಜತಗಿರಿಯ ಚಂದ್ರನ ಬೆಳ್ಪಿಂ
ಪಿರಿದು ವರವರ್ಧಮಾನರ
ಪರಮತಪೋಧನರ ಕೀರ್ತಿ ಮೂಱುಂ ಜಗದೊಳ್ ॥ 379 ॥

87) ಸಂಖ್ಯೆ 72, E.C. II (R), ಕ್ರಿ.ಶ. 1313

ಇದರಲ್ಲಿ ಬೆಳಕೆರೆಯ ರಾಯರಾಜಗುರುವಾದ ಗೊಮ್ಮಟನು ಶುಭಚಂದ್ರದೇವರ ನಿಸಿದಿ ಮಾಡಿಸಿದ್ದನ್ನು ಹೇಳಿದೆ.

ಕಂ ॥ ದುರಿತಾಂಧಕಾರರವಿಹಿಮ
ಕರರೊಗೆದರ್ಪದ್ಮಣಂದಿ ಪಂಡಿತದೇವ
ರ್ವರ ಮಾಧವೇಂದು ಸಮಯಾ
ಭರಣರ್ ಶ್ರೀ ಮೂಲಸಂಘ ದೇಶೀಗಣದೊಳ್ ॥ 380 ॥

ಕಂ ॥ ಗುರು ರಾಮಚಂದ್ರಯತಿಪನ
ವರ ಶಿಷ್ಯ ಶುಭೇಂದು ಮುನಿಯ ನಿಸಿದಿಗೆಯಂ ವಿ
ಸ್ತರದಿಂ ಮಾಡಿಸಿದಂ ಬೆಳು
ಕರೆಯಧಿಪಂ ರಾಯರಾಜಗುರು ಗುಂಮಟ್ಟಂ ॥ 381 ॥

ದೊಡ್ಡಬೆಟ್ಟ

88) ಸಂಖ್ಯೆ 342, E.C. II (R), ಕ್ರಿ.ಶ. ಸು. 1175

ಇದರಲ್ಲಿ ಹೊಯ್ಸಳ ರಾಜನಾದ ಎರಡನೆಯ ಬಲ್ಲಾಳನ ಭಂಡಾರಿ ಹುಳ್ಳನು ಕೆಲವು ಗ್ರಾಮಗಳನ್ನು ದೊರೆಯಿಂದ ಪಡೆದು ಗೊಮ್ಮಟದೇವ ಮೊದಲಾದ ದೇವರುಗಳಿಗೆ ದತ್ತಿ ನೀಡಿದಂತೆ ಹೇಳಿದೆ.

ದಾಮ

ಉ ಮಾ ॥ ಇತ್ತಣ ಭೂಮಿಭಾಗದೊಳಧನ್ಯರದೇಕೆ ಭವತ್ಪ್ರತಾಪ ಸಂ
ಪತ್ತಿಯ ವರ್ಣ್ಣನಾವಿಧಿಗೆ ಗಂಗಚಮೂಪ ಜಿಗೀಷುವೃತ್ತಿಯಿಂ
ದೆತ್ತಿದ ನಿನ್ನ ಕಯ್ಯ ನಿಶಿತಾಸಿಯ ತೌಮೊನೆ ಬೆನ್ನಬಾರನೆ
ತ್ತುತ್ತಿರೆ ಪೋಗಿ ಕಂಚಿ ಗುಜಿಯುಪ್ಪಿನಮೋಡಿದ ದಾಮನೆಯ್ದನೇ ॥ 382 ॥

ಚಂ ಮಾ ॥ ಕದನದೊಳಂದು ನಿನ್ನ ತರವಾರಿಯ ಬಾರಿಗೆ ಮೆಯ್ಯನೊಡ್ಡಲಾ
ಱದೆ ನಳಿದಿನ್ನುಮಂತದನೆ ಜಾನಿಸಿ ಜಾನಿಸಿ ಗಂಗ ತನ್ನ ನಂ
ಬಿದ ಸುದತೀಕದಂಬದೆಲ್ದೆ ಪೌವನೆವೋಗಿರೆ ಪುಲ್ಲೆವೆರ್ಚುವೆ
ರ್ಚಿದಪನಹರ್ನ್ನಿಶಂ ತಿಗುಳದಾಮನರಣ್ಯಶರಣ್ಯವೃತ್ತಿಯಿಂ ॥ 383 ॥

ಬಲ್ಲಾಳ II

ಮ ವಿ ॥ ಚಿರಕಾಲಂ ರಿಪುಗಳ್ಗಸಾಧ್ಯಮೆನಿಸಿರ್ದುಚ್ಚಂಗಿಯಂ ಮುತ್ತಿ ದು
ರ್ದ್ಧರತೇಜೋನಿಧಿ ಧೂಳಿಗೋಂಟೆಯನೆ ಕೊಂಡಾ ಕಾಮದೇವಾವನೀ
ಶ್ವರನಂ ಸಂದೊಡೆಯಕ್ಷಿತೀಶ್ವರನನಾ ಭಂಡಾರಮಂ ಸ್ತ್ರೀಯರಂ
ತುರಗವ್ರಾತಮುಮಂ ಸಮಂತು ಪಿಡಿದಂ ಬಲ್ಲಾಳಭೂಪಾಳಕಂ ॥ 384 ॥

ಮ ವಿ ॥ ಲಲನಾಲೀಲೆಗೆ ಮುನ್ನವೆನ್ತು ಕುಸುಮಾಸ್ತ್ರಂ ಪುಟ್ಟಿದೊಂ ವಿಷ್ಣುಗಂ
ಲಲಿತ ಶ್ರೀವಧುವಿಂಗವಂತೆ ನರಸಿಂಹಕ್ಷೋಣಿಪಾಳಂಗವೇ
ಚಲದೇವಿವಧುಗಂ ಪರಾರ್ತ್ಥಚರಿತಂ ಪುಣ್ಯಾಧಿಕಂ ಪುಟ್ಟಿದೊಂ
ಬಲವದುರ್ವೈರಿಕುಳಾಂತಕಂ ಜಯಭುಜಂ ಬಲ್ಲಾಳಭೂಪಾಳಕಂ ॥ 385 ॥

ಬಾಳಚಂದ್ರಮುನಿ

ಕಂ ॥ ಪರಮಾಗಮವಾರಿಧಿ ಹಿಮ
ಕಿರಣಂ ರಾದ್ಧಾನ್ತಚಕ್ರಿ ನಯಕೀರ್ತ್ತಿಯಮೀ
ಶ್ವರ ಶಿಷ್ಯನಮಳನಿಜಚ
ತ್ಪರಿಣತನಧ್ಯಾತ್ಮಿ ಬಾಳಚಂದ್ರಮುನೀಂದ್ರಂ ॥ 386 ॥

89) ಸಂಖ್ಯೆ 336, E.C. II (R), ಕ್ರಿ.ಶ. ಸು. 1180

ಇದನ್ನು 'ಗೊಮ್ಮಟ ಜಿನೇಂದ್ರ ಗುಣಸ್ತವ ಶಾಸನ' ಎಂದು ಕರೆದಿದೆ. ಸುಜನೋತ್ತಂಸ ಎಂಬ ಬಿರುದಿನ ಬೊಪ್ಪಣಪಂಡಿತ ಎಂಬ ಕವಿಯು ಈ ಶಾಸನ ಕಾವ್ಯವನ್ನು ರಚಿಸಿದ್ದಾನೆ. ಇದರಲ್ಲಿ ಬಾಹುಬಲಿಯ ಕಥೆಯನ್ನೂ, ಅವನ ಮೂರ್ತಿಯ ಭವ್ಯತೆಯನ್ನೂ ಸುಂದರವಾಗಿ ವರ್ಣಿಸಿದೆ.

ಕಂ ॥ ಶ್ರೀ ಗೊಂಮಟ ಜಿನನಂ ನರ
ನಾಗಾಮರ ದಿತಿಜ ಖಚರಪತಿ ಪೂಜಿತನಂ
ಯೋಗಾಗ್ನಿಹತ ಸ್ಮರನಂ
ಯೋಗಿಧ್ಯೇಯನನಮೇಯನಂ ಸ್ತುತಿಯಿಸುವೆಂ ॥ 387 ॥

ಮ ವಿ ॥ ಕ್ರಮದಿಂ ಮೆಯ್ಯೊಣರ್ದಾಜಿದಕ್ರಮದೆ ಮಾತಂ ಬಿಟ್ಟು ತನ್ನಿಟ್ಟ ಚ
ಕ್ರಮದುಂ ನಿಃಪ್ರಭಮಾಗೆ ಸಿಗ್ಗನೊಳಕೊಂಡಾತ್ಮಾಗ್ರಜಂಗೊಳ್ಪುಗೆ
ಯ್ದು ಮಹೀರಾಜ್ಯಮನಿತ್ತು ಪೋಗಿ ತಪದಿಂ ಕರ್ಮ್ಮಾರಿವಿಧ್ವಂಸಿಯಾ
ದ ಮಹಾತ್ಮಂ ಪುರುಸೂನು ಬಾಹುಬಳಿವೋಲ್ ಮತ್ತಾರೊ
ಮಾನೋಂನತರ್ ॥ 388 ॥

ಚಂ ಮಾ ॥ ಧೃತಜಯಬಾಹು ಬಾಹುಬಳಿ ಕೇವಳಿರೂಪಸಮಾನ ಪಂಚವಿಂ
ಶತಿ ಸಮುಪೇತ ಪಂಚಶತ ಚಾಪ ಸಮುನ್ನತಿಯುಕ್ತಮಪ್ಪ ತ
ತ್ಪ್ರತಿ ಕೃತಿಯಂ ಮನೋಮುದದೆ ಮಾಡಿಸಿದಂ ಭರತಂ ಜಿತಾಖಿಳ
ಕ್ಷಿತಿಪತಿ ಚಕ್ರಿ ಪೌದನಪುರಾಂಕಿತದೊಳ್ಪುರುದೇವನಂದನಂ ॥ 389 ॥

ಮ ವಿ ॥ ಚಿರಕಾಲಂ ಸಲೆ ತಜ್ಜಿನಾನ್ತಿಕ ಧರಿತ್ರೀದೇಶದೊಳ್ ಲೋಕಭೀ
ಕರಣಂ ಕುಕ್ಕುಟಸರ್ಪ್ಪಸಂಕುಳಮಸಂಖ್ಯಂ ಪುಟ್ಟೆದಲ್ಕುಕ್ಕುಟೇ
ಶ್ವರ ನಾಮನ್ತದಘಾರಿಗಾದುದು ಬಳಿಕ್ಕಂ ಪ್ರಾಕೃತರ್ಗ್ಗಾಯ್ತಗೋ
ಚರಮನ್ತಾಮಹಿಮಂತ್ರ ತಂತ್ರ ನಿಯತರ್ಕ್ಕಾಣ್ಬರ್ಗ್ಗಡಿನ್ನುಂ ಪಲರ್ ॥ 390 ॥

ಶಾ ವಿ ॥ ಕೇಳಲ್ಕಪ್ಪುದು ದೇವ ದುಂದುಭಿರವಂ ಮಾತೇನೊ ದಿವ್ಯಾರ್ಚ್ಚನಾ
ಜಾಳಂ ಕಾಣಲುಮಪ್ಪುದಾ ಜಿನನ ಪಾದೋದ್ಯನ್ನಖ ಪ್ರಸ್ಫುರ
ಲ್ಲೀಲಾದರ್ಪ್ಪಣಮಂ ನಿರೀಕ್ಷಿಸಿದವರ್ಕ್ಕಾಣ್ಬರ್ನ್ನಿಜಾತೀತ ಜ
ನ್ಮಾಳಂಬಾಕೃತಿಯಂ ಮಹಾತಿಶಯಮಾದೇವಂಗಿಳಾವಿಶ್ರುತಂ ॥ 391 ॥

ಮ. ವಿ ॥ ಜನದಿಂ ತಜ್ಜಿನ ವಿಶ್ರುತಾತಿಶಯಮಂ ತಾಂ ಕೇಳ್ದು ನೋಳ್ಪತ್ತೆ ಚೇ
ತನೆಯೊಳ್ಪುಟ್ಟಿರೆ ಪೋಗಲುದ್ಯಮಿಸೆ ದೂರಂ ದುರ್ಗಮಂ ತತ್ಪುರಾ
ವನಿಯೆನ್ದಾರ್ಯಜನಂ ಪ್ರಬೋಧಿಸಿದೊಡನ್ತಾದಂದು ತದ್ದೇವ ಕ
ಲ್ಪನೆಯಿಂ ಮಾಡಿಪೆನೆನ್ದು ಮಾಡಿಸಿದನಿನ್ತೀ ದೇವನಂ ಗೋಮಟಂ ॥ 392 ॥

ಮ. ವಿ. ॥ ಶ್ರುತಮುಂ ದರ್ಶನ ಶುದ್ಧಿಯುಂ ವಿಭವಮುಂ ಸದ್ವೃತ್ತಮುಂ ದಾನಮುಂ
ಧೃತಿಯುಂ ತನ್ನೊಳೆ ಸನ್ದ ಗಂಗಕುಳಚಂದ್ರಂ ರಾಚಮಲ್ಲಂ ಜಗ
ನ್ನುತನಾ ಭೂಮಿಪನದ್ವಿತೀಯ ವಿಭವಂ ಚಾಮುಂಡರಾಯಂ ಮನು
ಪ್ರತಿಮಂ ಗೊಮ್ಮಟನಲ್ತೆ ಮಾಡಿಸಿದನಿನ್ತೀ ದೇವನಂ ಯತ್ನದಿಂ ॥ 393 ॥

ಮ. ವಿ ॥ ಅತಿ ತುಂಗಾಕೃತಿಯಾದೊಡಾಗದದಱೊಳ್ ಸೌಂದರ್ಯಮೌಂನತ್ಯಮುಂ
ನುತಸೌಂದರ್ಯಮುಮಾಗೆ ಮತ್ತತಿಶಯಂ ತಾನಾಗದೌಂನತ್ಯಮುಂ
ನುತ ಸೌಂದರ್ಯಮುಮೂರ್ಜ್ಜಿತಾತಿಶಯಮುಂ ತಂನಲ್ಲಿ ನಿನ್ದಿರ್ದ್ದುವೇಂ
ಕ್ಷಿತಿ ಸಂಪೂಜ್ಯಮೊ ಗೊಂಮಟೇಶ್ವರ ಜಿನಶ್ರೀರೂಪಮಾತ್ಮೋಪಮಂ
॥ 394 ॥

ಮ. ವಿ ॥ ಪ್ರತಿವಿದ್ಧಂ ಬರೆಯಲ್ಕಯುಂ ನೆಱೆಯೆ ನೋಡಲ್ನಾಕಲೋಕಾಧಿಪಂ
ಸ್ತುತಿಗೆಯ್ಯಲ್ಫಣಿನಾಯಕಂ ನೆಱೆಯನೆಂದಂದನ್ಯರಾರಾಪ್ಪರಿಂ
ಪ್ರತಿವಿದ್ಧಂ ಬರೆಯಲ್ ಸಮನ್ತವೆ ನೋಡಲ್ ಬಣ್ಣಿಸಲ್ ನಿಸ್ಸಮಾ
ಕೃತಿಯುಂ ದಕ್ಷಿಣ ಕುಕ್ಕುಟೇಶತನುವಂ ಸಾಶ್ಚರ್ಯ ಸೌಂದರ್ಯಮುಂ
॥ 395 ॥

ಮ. ವಿ ॥ ಮಱೆದುಂ ಪಾಱದು ಮೇಲೆ ಪಕ್ಷಿನಿವಹಂ ಕಕ್ಷದ್ವಯೋದ್ದೇಶದೊ
ಳ್ಮಱುಗುತ್ತುಂ ಪೊಱಪೊಣ್ಮುಗುಂ ಸುರಭಿ ಕಾಶ್ಮೀರಾರುಣಚ್ಛಾಯಮೀ
ತೆಱದಾಶ್ಚರ್ಯ್ಯಮನೀ ತ್ರಿಲೋಕದ ಜನಂ ತಾನೆಯ್ದೆ ಕಂಡಿರ್ದ್ದುದಾ
ನ್ನೆಱೆವರ್ನ್ನೆಟ್ಟನೆ ಗೊಮ್ಮಟೇಶ್ವರ ಜಿನಶ್ರೀಮೂರ್ತ್ತಿಯಂ ಕೀರ್ತ್ತಿಸಲ್
॥ 396 ॥

ಮ. ವಿ ॥ ನೆಲಗಟ್ಟಾನಾಗಲೋಕಂ ತಳಮವನಿ ದಿಶಾಭಿತ್ತಿ ಭಿತ್ತಿಬ್ರಜಂ ಸ್ವ
ಸ್ತಲಭಾಗಂ ಮುಚ್ಚಣಂ ಮೇಗಣ ಸುರರ ವಿಮಾನೋತ್ಕರಂ ಕೂಟಜಾಳಂ
ವಿಲಸತ್ತಾರೌಘಮನ್ತರ್ಹಿತತಮಣಿ ವಿತಾನಂ ಸಮಂತಾಗೆ ನಿತ್ಯಂ
ನಿಲಯಂ ಶ್ರೀ ಗೊಮ್ಮಟೇಶಂಗೆನಿಸಿದುದು ಜಿನೋಕ್ತಾವಳೋಕಂ ತ್ರಿಲೋಕಂ
॥ 397 ॥

ಚಂ ಮಾ ॥ ಅನುಪಮ ರೂಪನೇ ಸ್ಮರನುದಗ್ರನೆ ನಿರ್ಜ್ಜಿತ ಚಕ್ರಿ ಮತ್ತುದಾ
ರನೆ ನೆಱೆಗಲ್ದುಮಿತ್ತನಖಿಳೋರ್ವ್ವಿಯನತ್ಯಭಿಮಾನಿಯೇ ತಪಃ
ಸ್ಥನುಮೆರಡಂಘ್ರಿಯಿತ್ತೆಳೆಯೊಳಿರ್ದ್ದಪುದೆಂಬನನೂನ ಬೋಧನೇ
ವಿನಿಹಿತಕರ್ಮ್ಮಬಂಧನೆನೆ ಬಾಹುಬಳೀಶನಿದೇನುದಾತ್ತನೋ ॥ 398 ॥

ಮ ವಿ ॥ ಅಭಿಮಾನ ಸ್ಥಿರಭಾವಮಂ ನಮಗೆ ಮಾಳ್ಕತ್ಯುದ್ಧಮಾನೋನ್ನತಂ
ಶುಭಸೌಭಾಗ್ಯಮನಂಗಜಂ ಭುಜಬಳಾವಷ್ಟಂಭಮಂ ಚಕ್ರವ
ರ್ತಿಭುಜಾದರ್ಪ್ಪವಿಳೋಪಿ ಬಾಹುಬಳಿ ತೃಷ್ಣಾಚ್ಛೇದಮಂ ಮುಕ್ತರಾ
ಜ್ಯಭರಂ ಮುಕ್ತಿಯನಾಪ್ತನಿರ್ವೃತಿಪದಂ ಶ್ರೀ ಗೊಂಮಟೇಶಂ ಜಿನಂ ॥ 399 ॥

ಮ ವಿ ॥ ಸ್ಫುರದುದ್ಯತ್ಸಿತ ಕಾನ್ತಿಯಂ ಪರಿಸರತ್ಸೌರಂಭದಿಂದಂ ದಿಶೋ
ತ್ಕರಮಂ ಮುದ್ರಿಸುತಂ ನಮೇರು ಸುಮನೋವರ್ಷಂ ಸ್ಫುಟಂ ಗೊಂಮಟೇ
ಶ್ವರ ದೇವೋತ್ತಮ ಚಾರು ದಿವ್ಯಶಿರದೊಳ್ ದೇವರ್ಕ್ಕಳಿಂದಾದುದಂ
ಧರೆಯೆಲ್ಲಂ ನೆಱೆ ಕಂಡುದಾ ಮಹಿಮೆಯಾ ದೇವಂಗದಾಶ್ಚರ್ಯ್ಯಮೇ
॥ 400 ॥

ಮ ವಿ ॥ ಎನಗಾಯ್ತೀಕ್ಷಿಸಲಾಗದಾಯ್ತೆನಗೆ ಕಾಣಲ್ಕೆಂಬವೋಲಾಯ್ತೆ ಪೇಳ್
ವನಿತಾ ಬಾಳಕ ವೃದ್ಧ ಗೋಪತತಿಯುಂ ಕಂಡಟ್ಟಿಱಿಂದಾರ್ಪ್ಪಿನಂ
ದಿನವೊಂದಾವಗಮುದ್ಧ ದಿವ್ಯ ಕುಸುಮಾಸಾರಂ ಮಹೀಲೋಕಲೋ
ಚನ ಸಂತೋಷದಮಾಯ್ತು ಗೊಂಮಟ ಜಿನಾಧೀಶೋತ್ತಮಾಂಗಾಗ್ರದೊಳ್
॥ 401 ॥

ಚಂ ಮಾ ॥ ಮಿಱುಗುವ ತಾರಕಪ್ರಕರಮೀ ಪರಮೇಶ್ವರ ಪಾದಸೇವೆಗೆಂ
ದೆಱಪುದೆ ಭಕ್ತಿಯಿಂದಮೆನೆ ನಿರ್ಮ್ಮಳಿನಂ ಘನಪುಷ್ಪವೃಷ್ಟಿ ಬಂ
ದೆಱಗಿದುದಭ್ರದಿಂ ಧರೆಗದಭ್ರತರಾದ್ಭುತ ಹರ್ಷ ಕೋಟಿ ಕ
ಣ್ದೆಱೆದಿರೆ ಸಂದ ಬೆಳ್ಗುಳದ ಗೊಂಮಟನಾಥ ಪಾದಪದ್ಮದೊಳ್ ॥ 402 ॥

ಚಂ ಮಾ ॥ ಭರತನನಾದಿ ಚಕ್ರಧರನಂ ಭುಜಯುದ್ಧದೆ ಗೆಲ್ದ ಕಾಲದೊಳ್
ದುರಿತ ಮಹಾರಿಯಂ ತವಿಸಿ ಕೇವಳ ಬೋಧಮನಾಳ್ದ ಕಾಲದೊಳ್
ಸುರತತಿ ಮುನ್ನೆ ಮಾಡಿದುದು ಪೂಮಳೆಯೀ ದೊರೆಯಕ್ಕುಮೆಂಬಿನಂ
ಸುರಿದುದು ಪುಷ್ಪವೃಷ್ಟಿ ವಿಭು ಬಾಹುಬಳೀಶನ ಮೇಲೆ ಲೀಲೆಯಿಂ
॥ 403 ॥

ಉ ಮಾ ॥ ಕೆಮ್ಮಗಿದೇಕೆ ನಾಡ ಪಲವಂದದ ನಂದಿದ ಬಿಂದಿಗರ್ಕ್ಕಳಂ
ನೀಂಮ್ಮರುಳಾಗಿ ದೇವರಿವರೆಂದವರಂ ಮತಿಗೆಟ್ಟು ನಿನ್ನನೇ
ಕಮ್ಮ ತೊಳಲ್ಜಿದಪ್ಪೆ ಭವಕಾನನದೊಳ್ಪರಮಾತ್ಮರೂಪನಂ
ಗೊಮ್ಮಟದೇವನಂ ನೆನೆಯ ನೀಗುವೆ ಜಾತಿ ಜರಾದಿ ದುಃಖಮಂ ॥ **404** ॥

ಉ ಮಾ ॥ ಸಮ್ಮದವಾಗಲಾಗ ಕೊಲೆಯುಂ ಪುಸಿಯುಂ ಕಳವುಂ ಪರಾಂಗನಾ
ಸಮ್ಮತಿಯುಂ ಪರಿಗ್ರಹದಕಾಂಕ್ಷೆಯುಮೆಂಬಿವಜಿಂದಮಾದೊಡೆಂ
ದುಮ್ಮನುಜಂಗಿರತ್ರೆಯ ಪರತ್ರೆಯ ಕೇಡೆನುತುಂ ಮಹೋಜ್ಜದೊ
ಳ್ಗೊಮ್ಮಟದೇವನಿರ್ದ್ದು ಸಲೆ ಸಾಱುವವೋಲೆಸೆದಿರ್ದನೀಕ್ಷಿಸೈ ॥ **405** ॥

ಚಂ ಮಾ ॥ ಎಮ್ಮುಮನೀವಸನ್ತನುಮನಿಂದುವುಮಂ ನನೆವಿಲ್ಲುಮಂಬುಮಂ
ಕೆಮ್ಮಗನಾಥಯೂಥಮನೆ ಮಾಡಿ ಬಿಸುಟ್ಟು ತಪಕ್ಕೆ ಪೂಣ್ದು ನಿಂ
ದಿಮ್ಮಿಗಿಲಪ್ಪುದೇಂ ಪಡೆವುದೆಂದತಿಮುಗ್ಧೆಯರಟ್ಟನಾದಮುಂ
ಗೊಮ್ಮಟದೇವ ನಿನ್ನ ಕಿವಿಗೆಯ್ದುವೆ ನಿನ್ನವೊಲಾರೊ ನಿಃಕೃಪರ್ ॥ **406** ॥

ಉ ಮಾ ॥ ಎಮ್ಮನಿದೇಕೆ ನೀಂ ಬಿಸುಟೆಯೆಂದೆಳೆಯುಂ ಲತಿಕಾಂಗಿಯರ್ಕ್ಕಳುಂ
ತಮ್ಮಳಲಿಂದೆ ಬಂದು ಬಿಗಿಯಪ್ಪಿದರೆಂಬಿನಮಂಗದಲ್ಲಿ ಪು
ತ್ತಮ್ಮುರಿದೊತ್ತಿ ತಳ್ತ ಲತಿಕಾಳಿಯುಮೊಪ್ಪೆ ತಪೋನಿಯೋಗದೊ
ಳ್ಗೊಮ್ಮಟದೇವನಿರ್ದ್ದಿರವಹೀಂದ್ರ ಸುರೇಂದ್ರ ಮುನೀಂದ್ರ ವಂದಿತಂ
॥ **407** ॥

ಉ ಮಾ ॥ ತಮ್ಮನೆ ಪೋದರೆನ್ನನುಜರೆಲ್ಲರುಮೆಯ್ದೆ ತಪಕ್ಕೆ ನೀನುಮಿಂ
ತಮ್ಮ ತಪಕ್ಕೆ ಪೋದೊಡೆನಗೀ ಸಿರಿಯೊಪ್ಪುದು ಬೇಡೆನುತ್ತಮ
ಣ್ಣಂ ಮನಮಿಳ್ದುಮನ್ನುಮಿಗೆಯುಂ ಬಗೆಗೊಳದೆ ದೀಕ್ಷೆಗೊಂಡೆ ನೀಂ
ಗೊಮ್ಮಟದೇವ ನಿನ್ನ ತಱಿಸಂದಳವಾರ್ಯ್ಯಜನಕ್ಕೆ ಗೊಂಮಟಂ ॥ **408** ॥

ಉ ಮಾ ॥ ನಿಮ್ಮಡಿಯೆನ್ನಧಾತ್ರಿಯೊಳಗಿರ್ದಪುವೆಂಬಿದುವೇಡ ಧಾತ್ರಿ ತಾಂ
ನಿಮ್ಮದುಮೆನ್ನದುಂ ಬಗೆವೊಡಲ್ಲದು ಬೇಱಿದು ದೃಷ್ಟಿ ಬೋಧ ವೀ
ರ್ಯ್ಯಮ್ಮಹಿತಾತ್ಮಧರ್ಮ್ಮಮಭವೋಕ್ತಿಯೊಳೆಂಬ ನಿಜಾಗ್ರಜೋಕ್ತಿಯಿಂ
ಗೊಮ್ಮಟದೇವ ನೀಂ ಮನದ ಮಾನಕಷಾಯಮನೆಯ್ದೆ ತೂಳ್ದಿದೈ ॥ **409** ॥

ಉ ಮಾ ॥ ತಮ್ಮ ತಪಸ್ವಿಗಳ್ಗೆ ಕುತಪಸ್ಥಿತಿವೇಟ್ಟಿಬಳಾಂಗ ಸಂಗತಂ
ತಮ್ಮ ಶರೀರಮಾಗೆ ನೆಗಳ್ವನ್ನತರಾಪ್ತರಶಸ್ತವೃತ್ತಕಂ

ಕಮ್ಮರಿಯೋಜನಂದಮೆ ವಲಂ ಸ್ವಪರಾಕ್ಷಯ ಸೌಖ್ಯ ಹೇತುವಂ
ಗೊಮ್ಮಟದೇವ ನೀಂ ತಪಮನಾಂತುಪದೇಶಕನಾದುದೊಪ್ಪದೇ ॥ 410 ॥

ಉ ಮಾ ॥ ನೀಮ್ಮನಮಂ ನಿಜಾತ್ಮನೊಳಕಂಪಿತಮಾಗಿಡೆ ಮೋಹನೀಯ ಮು
ಖ್ಯಮ್ಮಣಿದೋಡಿ ಬೀಳೆ ಘನ ಘಾತಿಬಲಂ ಬಲಧೃಕ್ಪ್ರಬೋಧ ಸೌ
ಖ್ಯಮ್ಮಹಿಮಾನ್ವಿತಂ ನೆಗಳೆ ವರ್ತ್ತಿಸಿ ಮತ್ತಘಾತಿ ಘಾತದಿಂ
ಗೊಮ್ಮಟದೇವ ಮುಕ್ತಿಪದಮಂ ಪಡೆದೈ ನಿರಪಾಯ ಸೌಖ್ಯಮಂ ॥ 411 ॥

ಉ ಮಾ ॥ ಕಮ್ಮಿದವಪ್ಪ ಕಾಡ ಪೊಸವೂಗಳಿನರ್ಚ್ಚಿಸಿ ಪಾದಪದ್ಮಮಂ
ಸಮ್ಮದದಿಂದೆ ನೋಡಿ ಭವದಾಕೃತಿಯಂ ಬಲಂಗೊಂಡು ಬಲ್ಲ ಪಾಂ
ಗಿಂ ಮನಮೊಲ್ದು ಕೀರ್ತಿಪವರೇಂ ಕೃತಕೃತ್ಯರೋ ಶಕ್ರನಂದದಿಂ
ಗೊಮ್ಮಟದೇವ ನಿನ್ನನಱಿದರ್ಚ್ಚಿಸುತಿರ್ಪ್ಪವರೇಂ ಕೃತಾರ್ತ್ಥರೋ ॥ 412 ॥

ಮ ಸ್ರ ॥
ಕುಸುಮಾಸ್ತ್ರಂ ಕಾಮಸಾಮ್ರಾಜ್ಯದ ಮಹಿಮೆಯನಾಂತಿರ್ದ್ದೊಡಂ ಮುನ್ನೆ ತನ್ನೊಳ್
ವಸುಧಾಸಾಮ್ರಾಜ್ಯಯುಕ್ತಂ ಭರತಕರ ವಿಮುಕ್ತಂ ರಥಾಂಗಾಸ್ತ್ರಮುಗ್ರಾಂ
ಶು ಸಮಂತನ್ನುದ್ಘದೋರ್ದ್ದಂಡಮನೆಳಸಿದೊಡಂ ಬಿಟ್ಟವಂ ಮುಕ್ತಿ ಸಾಮ್ರಾ
ಜ್ಯ ಸುಖಾರ್ತ್ಥಂ ದೀಕ್ಷೆಯಂ ಬಾಹುಬಳಿ ತಳೆದನೆಮ್ಮನ್ನರೇನೆಂದೊ ಮಾಣ್ಬರ್ ॥ 413 ॥

ಕಂ ॥ ಮನದಿಂ ನುಡಿಯಿಂ ತನುವಿಂ
ದೆನಸುಂ ಮುನ್ನೆಱಿಪಿದಘಮನಲಱಿಪೆನೆಂಬೀ
ಮನದಿಂದಮೊಸೆದು ಗೊಂಮಟ
ಜಿನನಂ ಸ್ತುತಿಯಿಸಿದನಿಂತು ಸುಜನೋತ್ತಂಸಂ ॥ 414 ॥

ಕಂ ॥ ಸುಜನರ್ಭ್ಭವ್ಯರೆ ತನಗವ
ರಜಸ್ರಮುತ್ತಂಸಮಪ್ಪ ಪುರುಳಿಂ ಬೊಪ್ಪಂ
ಸುಜನೋತ್ತಂಸನೆನಿಪ್ಪಂ
ಸುಜನಗ್ಗುತ್ತಂಸಮೆಂಬ ಪುರುಳಿಂದೆನಿಸಂ ॥ 415 ॥

ಕಂ ॥ ಈ ಜಿನನುತಿ ಶಾಸನಮಂ
ಶ್ರೀ ಜಿನಶಾಸನವಿದಂ ವಿನಿರ್ಮ್ಮಿಸಿದಂ ವಿ
ದ್ಯಾಜಿತವೃಜಿನಂ ಸುಕವಿಸ
ಮಾಜನುತಂ ವಿಶದಕೀರ್ತ್ತಿ ಸುಜನೋತ್ತಂಸಂ ॥ 416 ॥

ಕಂ ॥ ವರಸೈದ್ಧಾಂತಿಕ ಚಕ್ರೇ
ಶ್ವರ ನಯಕೀರ್ತ್ತಿ ವ್ರತೀಂದ್ರ ಶಿಷ್ಯಂ ನಿಜ ಚಿ
ತ್ತರಿಣತನಧ್ಯಾತ್ಮ ಕಳಾ
ಧರನುಜ್ವಳಕೀರ್ತ್ತಿ ಬಾಳಚಂದ್ರ ಮುನೀಂದ್ರಂ ॥ 417 ॥

ಚಂ ಮಾ ॥ ಪೊಡವಿಗೆ ಸಂದ ಗೊಮ್ಮಟ ಜಿನೇಂದ್ರಗುಣಸ್ತವಶಾಸನಕ್ಕೆ ಕ
ನ್ನಡಗವಿ ಬಪ್ಪನೆಂದೆನಿಪ ಬೊಪ್ಪಣಪಂಡಿತನೊಲ್ದು ಪೇೞ್ದಿವಂ
ಕಡೆಯಿಸಿದಂ ಬಲಂ ಕವಡಮಯ್ಯನ ದೇವಣನೞ್ತಿಯಿಂದೆ ಬಾ
ಗಡಗೆಯ ರುದ್ರನಾದರದೆ ಮಾಡಿಸಿದಂ ವಿಳಸತ್ ಪ್ರತಿಷ್ಠೆಯಂ ॥ 418 ॥

90) ಸಂಖ್ಯೆ 444, E.C. II (R), ಕ್ರಿ.ಶ. ಸು. 1181

ಇದರಲ್ಲಿ ಹೊಯ್ಸಳ ದೊರೆಯಾದ ವೀರಬಲ್ಲಾಳನ ಮಂತ್ರಿಯಾದ, ಚಂದ್ರಮೌಳಿಯ ಹೆಂಡತಿ, ಆಚಿಯಕ್ಕನು ಬೆಳ್ಗೊಳದಲ್ಲಿ ಪಾರ್ಶ್ವನಾಥ ಬಸದಿಯನ್ನು ಕಟ್ಟಿಸಿ ಅದಕ್ಕೆ ದತ್ತಿಯನ್ನು ನೀಡಿದಂತೆ ಹೇಳಿದೆ.

ಬಲ್ಲಾಳ II

ಮ ಸ್ರ ॥ ರಿಪುಭೂಪಾಳೇಭಸಿಂಹಂ ರಿಪುನೃಪನಳಿನಾನೀಕರಾಕಾಶಶಾಂಕಂ
ರಿಪುರಾಜನ್ಯೌಘಮೇಘಪ್ರಕರನಿರಸನೋದ್ಧೂತವಾತಪ್ರಪಾತಂ
ರಿಪುಧಾತ್ರೀಶಾದ್ರಿವಜ್ರಂ ರಿಪುನೃಪತಿತಮಸ್ತೋಮವಿಧ್ವಂಸನಾರ್ಕಂ
ರಿಪುಪೃಥ್ವೀಪಾಳಕಾಳಾನಳನುದಯಿಸಿದಂ ವೀರಬಲ್ಲಾಳದೇವಂ ॥ 419 ॥

ಮ ಸ್ರ ॥ ಭರದಿಂದಂ ತನ್ನ ದೋರ್ಗರ್ವದಿನೊಡೆಯರಸಂ ಕಾಯ್ದು ಕಾದಲ್ಕಣಂ ಪೂ
ಣ್ದಿರೆ ಬಲ್ಲಾಳಕ್ಷಿತೀಶಂ ನಡೆದು ಬಳಸಿಯುಂ ಮುತ್ತೆ ಸೇನಾಗಜೇಂದ್ರೋ
ತ್ಕರದಂತಾಘಾತಸಂಚೂರ್ಣಿತಶಿಖರದೊಳುಚ್ಚಂಗಿಯೊಳ್ ಸಿಲ್ಕಿದಂ ಭಾ
ಸುರಕಾಂತಾದೇಶಕೋಶವ್ರಜಜನಕಹಯೌಘಾನ್ವಿತಂ ಪಾಂಡ್ಯಭೂಪಂ
॥ 420 ॥

ಚಂದ್ರಮೌಳಿ

ಮ ವಿ ॥ ವರತರ್ಕಾಂಬುಜಭಾಸ್ಕರಂ ಭರತಶಾಸ್ತ್ರಾಂಭೋಧಿಚಂದ್ರಂ ಸಮು
ದ್ಧುರಸಾಹಿತ್ಯಲತಾಲವಾಲನೆಸೆದಂ ನಾನಾಕಲಾಕೋವಿದಂ
ಸ್ಥಿರಮಂತ್ರಂ ದ್ವಿಜವಂಶಶೋಭಿತನಶೇಷಸ್ತುತ್ಯನುದ್ಯದ್ಯಶಂ
ಧರೆಯೊಳ್ ವಿಶ್ರುತಚಂದ್ರಮೌಳಿಸಚಿವಂ ಸೌಜನ್ಯಜನ್ಮಾಲಯಂ ॥ 421 ॥

ಆಚಿಯಕ್ಕ

ಮ ವಿ ॥ ಘನಬಾಹಾಬಹಳೋರ್ಮಿಭಾಸಿತೆ ಮುಖವ್ಯಾಕೋಚಪಂಕೇಜಮಂ
ಡನೆ ದೃಕ್ಮೀನವಿಲಾಸೆ ನಾಭಿವಿತತಾವರ್ತಾಂಕೆ ಲಾವಣ್ಯ ಪಾ
ವನವಾಸ್ಸಂಭೃತೆ ಚಂದ್ರಮೌಳಿವಧುವೀಶ್ರೀಯಾಚಿಯಕ್ಕಂ ಜಗ
ಜ್ಜನಸಂಸ್ತುತ್ಯೆ ಕಳಂಕದೂರೆ ನುತೆ ಗಂಗಾದೇವಿ ತಾನಲ್ಲಳೇ ॥ 422 ॥

ಮ ವಿ ॥ ಹರಿಣೀಲೋಚನೆ ಪಂಕಜಾನನೆ ಘನಶ್ರೋಣಿಸ್ತನಾಭೋಗಭಾ
ಸುರೆ ಬಿಂಬಾಧರೆ ಕೋಕಿಳಸ್ವನೆ ಸುಗಂಧಶ್ವಾಸೆ ಚಂಚತ್ತನೂ
ದರಿ ಭೃಂಗಾವಳಿನೀಳಕೇಶೆ ಕಳಹಂಸೀಯಾನೆಯೀ ಕಂಬುಕಂ
ಧರೆಯಪ್ಪಾಚಲದೇವಿ ಕಂತುಸತಿಯಂ ಸೌಂದರ್ಯದಿಂದೇಳಿಪಳ್ ॥ 423 ॥

ಉ ಮಾ ॥ ಗೌರಿ ತಪಂಗಳಂ ನೆಗಱ್ದು ತಾಂ ನೆರೆದಳ್ ಗಡ ಚಂದ್ರಮೌಳಿಯೊಳ್
ನಾರಿಯರ್ಗಿನ್ನದೇಸೊಬಗು ಪೇೞ್ ಪಲವುಂ ಭವದೊಳ್ ನಿರಂತರಂ
ಸಾರತಪಂಗಳಂ ಪಡೆದು ತಾಂ ನೆರೆದಂ ಗಡ ಚಂದ್ರಮೌಳಿ ಗಂ
ಭೀರೆಯೆನಿಪ್ಪ ತನ್ನನೆನಿಪಾಚಲೆವೋಲ್ ಸೊಬಗಿಂಗೆ ನೋಂತರಾರ್॥ 424 ॥

ಚೆಂದವ್ವೆ

ಕಂ ॥ ಆತನ ಸತಿಗೆ ಸಿತಾಂಬುಜ
ಶೀತಾಂಶುಶರತ್ಪಯೋದ ವಿಶದಯಶಃಶ್ರೀ
ಧೌತಧರಾತಳೆಗಖಿಳವಿ
ನೀತೆಗೆ ಚೆಂದವ್ವೆಗಬಲೆಯರ್ ದೊರೆಯುಂಟೇ ॥ 425 ॥

ಕಂ ॥ ಇಂದುಮುಖಿ ಮೃಗವಿಲೋಚನೆ
ಮಂದರಗಿರಿಧೈರ್ಯೆ ತುಂಗಕುಚಯುಗೆ ಭೃಂಗೀ
ಬೃಂದಶಿತಿಕೇಶವಿಳಸಿತೆ
ಚೆಂದವ್ವೆ ವಿನೂತೆಯಾದಳಖಿಳೋರ್ವರೆಯೊಳ್ ॥ 426 ॥

ಕಾಳವ್ವೆ

ಕಂ ॥ ಸರಸಿರುಹವದನೆ ಘನಕುಚೆ
ಹರಿಣಾಕ್ಷಿ ಮದೋತ್ಕಕೋಕಿಳಸ್ವನೆ ಮದವ
ತ್ಕರಿಪತಿಗಮನೆ ತನೂದರಿ
ಧರೆಯೊಳ್ ಕಾಳವ್ವೆ ರೂಪಿನಾಗರಮಾದಳ್ ॥ 427 ॥

ಆಚಿಯಕ್ಕನ ಮಗ ಸೋಮ

ಮ ವಿ ॥ ವರಲಕ್ಷ್ಮೀಪ್ರಿಯವಲ್ಲಭಂ ವಿಜಯಕಾಂತಾಕರ್ಣಪೂರಂ ವಿಭಾ
ಸುರವಾಣೀಹೃದಯಾಧಿಪಂ ತುಹಿನತಾರಕ್ಷೀರವಾರಾಶಿಪಾಂ
ಡುರಕೀರ್ತಿಶನುದಗ್ರ ದುರ್ಧರತುರಂಗಾರೂಢರೇವಂತನು
ದ್ಧುರಕಾಂತಾಕಮನೀಯಕಾಮನೆಸೆದಂ ಶ್ರೀಸೋಮನೀ ಧಾತ್ರಿಯೊಳ್ ॥ 428 ॥

ಹೊಯ್ಸಳವಂಶ

ಸ್ರಗ್ಧರೆ ॥ ಸ್ವಸ್ತಿ ಶ್ರೀಜನ್ಮಗೇಹಂ ನಿಭೃತನಿರುಪಮೌರ್ವ್ವಾನಳೋದ್ದಾಮತೇಜಂ
ವಿಸ್ತಾರಾಂತಃ ಕೃತೋರ್ವ್ವೀತಳಮಮಳಯಶಶ್ಚಂದ್ರ ಸಂಭೂತಿಧಾಮಂ
ವಸ್ತುಬ್ರಾತೋದ್ಭವ ಸ್ಥಾನಕಮತಿಶಯ ಸತ್ವಾವಳಂಬಂ ಗಂಭೀರಂ
ಪ್ರಸ್ತುತ್ಯಂ ನಿತ್ಯಮಂಭೋನಿಧಿನಿಭಮೆಸೆಗುಂ ಹೊಯ್ಸಳೋರ್ವ್ವೀಶ ವಂಶಂ ॥ 429 ॥

ವಿನಯಾದಿತ್ಯ

ಮ ವಿ ॥ ಅದಜೊಳ್ ಕೌಸ್ತುಭದೊಂದನರ್ಘ್ಯಗುಣಮಂ ದೇವೇಭದುದ್ದಾಮ ಸ
ತ್ವದಗುರ್ಬ್ಬಂ ಹಿಮರಶ್ಮಿಯುಜ್ವಳ ಕಳಾಸಂಪತ್ತಿಯಂ ಪಾರಿಜಾ
ತದುದಾರತ್ವದ ಪೆಂಪನೊರ್ಬ್ಬನೆ ನಿತಾಂತಂ ತಾಳ್ದಿ ತಾನಲ್ತೆ ಪು
ಟ್ಟಿದನುದ್ವೇಜಿತ ವೀರವೈರಿ ವಿನಯಾದಿತ್ಯಾವನೀಪಾಳಕಂ ॥ 430 ॥

ಸ್ರಗ್ಧರೆ ॥ ಆತಂ ಚಾಳುಕ್ಯ ಭೂಪಾಳನ ಬಲದ ಭುಜಾದಂಡಮುದ್ದಂಡ ಭೂಪ
ಬ್ರಾತಪ್ರೋತ್ತುಂಗ ಭೂಭೃದ್ವಿದಳನ ಕುಳಿಶಂ ವಂದಿಸಸ್ಯೌಘಮೇಘಂ
ಶ್ವೇತಾಂಭೋಜಾತ ದೇವದ್ವಿರದನ ಶರದಭ್ರೇಂದುಕುಂದಾವದಾತ
ಖ್ಯಾತಪ್ರೋದ್ಯದ್ಯಶಶ್ರೀ ಧವಳಿತಭುವನಂ ಧೀರನೇಕಾಂಗವೀರಂ ॥ 431 ॥

ಎರೆಯಂಗ

ಕಂ ॥ ಎಜೆಯನೆಳೆಗೆನಿಸಿ ನೆಗಳ್ದಿ
ರ್ದ್ದೆಜೆಯಂಗ ನೃಪಾಳತಿಳಕನಂಗನೆ ಚೆಲ್ವಿಂ
ಗೆಜೆವಟ್ಟು ಶೀಲಗುಣದಿಂ
ನೆಜೆದೇಚಲದೇವಿಯಂತು ನೋಂತರುಮೊಳರೇ ॥ 432 ॥

ವಿಷ್ಣುವರ್ಧನ

ಕಂ ॥ ಎಳೆಗೆಸೆವ ಕೋಯತುರ್ತ್ತ
ತ್ತಳವನಪುರಮಂತೆ ರಾಯರಾಯಪುರಂ ಬ

ಳ್ವಳ ಬಳೆದ ವಿಷ್ಣುತೇಜೋ
ಜ್ವಳನದೆ ಬೆಂದವು ಬಳಿಷ್ಠ ರಿಪುದುರ್ಗ್ಗಂಗಳ್ ॥ 433 ॥

ಮ ವಿ ॥ ಇನಿತಂ ದುರ್ಗ್ಗಮ ವೈರಿದುರ್ಗ್ಗಚಯಮಂ ಕೊಂಡಂ ನಿಜಾಕ್ಷೇಪದಿಂ
ದಿನಿಬರ್ಭೂಪರನಾಜಿಯೊಳ್ ತವಿಸಿದಂ ತಂನಸ್ತ್ರಸಂಘಾತದಿಂ
ದಿನಿಬರ್ಗ್ಗಾನತರ್ಗಿತ್ತನುದ್ಧಪದಮಂ ಕಾರುಣ್ಯದಿಂದೆಂದು ತಾ
ನನಿತಂ ಲೆಕ್ಕದೆ ಪೇಳ್ವೊಡಬ್ಜಭವನುಂ ವಿಭ್ರಾಂತನಪಂ ಬಲಂ ॥ 434 ॥

ನರಸಿಂಹ I

ಚಂ ಮಾ ॥ ಅವರ್ಗ್ಗೆ ಮನೋಜನಂತೆ ಸುದತೀಜನ ಚಿತ್ತಮನೀಳ್ಕೊಳಲ್ಕೆ ಸಾ
ಲ್ವವಯವಶೋಭೆಯಿಂದ ತನುವೆಂಬಭಿದಾನಮನಾನದಂಗನಾ
ನಿವಹಮನೆಚ್ಚು ಮುಯ್ವನಣಮಾನದೆ ಬೀರರನೆಚ್ಚು ಯುದ್ಧದೊಳ್
ತವಿಸುವೊನಾದನಾತ್ಮಭವನಪ್ರತಿಮಂ ನರಸಿಂಹಭೂಭುಜಂ ॥ 435 ॥

ಚಂದ್ರಮೌಳಿ

ಮ ಸ್ರ ॥ ತನಗಾರಾಧ್ಯಂ ಹರಂ ವಿಕ್ರಮಭುಜಪರಿಘಂ ವೀರಬಲ್ಲಾಳದೇವಾ
ವನಿಪಾಳಂ ಸ್ವಾಮಿ ವಿಭ್ರಾಜಿತ ವಿಮಳಚರಿತ್ರೋತ್ಕರಂ ಶಂಭುದೇವಂ
ಜನಕಂ ಶಿಷ್ಟೇಷ್ಟ ಚಿಂತಾಮಣಿ ಜನನಿ ಜಗತ್ಖ್ಯಾತೆ ಯಕ್ಕವೆಯೆಂದಂ
ದನಿಸಂ ಶ್ರೀ ಚಂದ್ರಮೌಳಿಪ್ರಭುಗೆ ಸಮಮೆ ಕಾಳೇಯಮಂತ್ರೀಶವರ್ಗ್ಗಂ
॥ 436 ॥

ಮ ವಿ ॥ ಪತಿಭಕ್ತಂ ವರಮಂತ್ರಶಕ್ತಿಯುತನಿಂದ್ರಂಗೆಂತು ಭಾಸ್ವದ್ವೃಹ
ಸ್ಪತಿ ಮಂತ್ರೀಶ್ವರನಾದನಂತೆ ವಿಳಸದ್ಬಲ್ಲಾಳ ದೇವಾವನೀ
ಪತಿಗೀವಿಶ್ರುತ ಚಂದ್ರಮೌಳಿ ವಿಬುಧೇಶಂ ಮಂತ್ರಿಯಾದಂ ಸಮು
ನ್ನತ ತೇಜೋನಿಳಯಂ ವಿರೋಧಿಸಚಿವೋನ್ಮತ್ತೇಭ ಪಂಚಾನನಂ ॥ 437 ॥

ಸೋವಣನಾಯಕ

ಮ ವಿ ॥ ವರವಿದ್ವಜ್ಜನಕಲ್ಪ ಭೂಜನಮಳಾಂಭೋರಾಸಿ ಗಂಭೀರನು
ದ್ಧುರದರ್ಪ ಪ್ರತಿನಾಯಕ ಪ್ರಕರ ತೀವ್ರಧ್ವಾಂತ ಸಂಘಾತಸಂ
ಹರಣಾರ್ಕ್ಕಂ ಶರದಭ್ರಶುಭ್ರ ವಿಳಸತ್ಕೀರ್ತ್ತ್ಯಂಗನಾ ವಲ್ಲಭಂ
ಧರೆಯೊಳ್ಸೋವಣನಾಯಕಂ ನೆಗಳ್ದನುದ್ಯದ್ಧೈರ್ಯ್ಯ ಶೌರ್ಯ್ಯಾಕರಂ
॥ 438 ॥

ಬಾಚವ್ವೆ

ಕಂ ॥ ಗಿರಿಸುತೆಗೆ ಜಹ್ನುಕನ್ನೆಗೆ
ಧರಣೀಸುತೆಗತ್ತಿಮಬ್ಬೆಗನುಪಮ ಗುಣದೊ
ಳ್ದೊರೆಯೆನಲಿಂತೀ ಸಕಳೋ
ರ್ವ್ವರೆಯೊಳ್ ಬಾಚವ್ವೆ ಶೀಳವತಿ ಸತಿ ನೆಗಳ್ದಳ್ ॥ 439 ॥

ಬಮ್ಮೆಯನಾಯಕ

ಮ ವಿ ॥ ಪರಸೈನ್ಯಾಹಿವಿಹಂಗಸೂರ್ಜ್ಜಿತ ಯಶಸ್ಸಂಗಂ ಜಿನೇಂದ್ರಾಂಘ್ರಿ ಪ
ದ್ಮರಜೋ ಭೃಂಗಸುದಾರ ತುಂಗನೆಸೆದಂ ತಂನೊಪ್ಪುವೀ ಸದ್ಗುಣೋ
ತ್ಕರದಿಂ ದೇಸಿಯ ದಣ್ಣನಾಯಕನಿಳಾಭೀಷ್ಟಾರ್ತ್ಥಸಂದಾಯಕಂ
ಧರೆಯೊಳ್ ಬಮ್ಮೆಯನಾಯಕಂ ನಿಖಿಳದೀನಾನಾಥ ಸಂತ್ರಾಯಕಂ
॥ 440 ॥

ಕಂ ॥ ಮಾರಂ ಮದನಾಕಾರಂ
ಹಾರಕ್ಷೀರಾಬ್ಧಿವಿಶದಕೀರ್ತ್ತ್ಯಾಧಾರಂ
ಧೀರಂ ಧರೆಯೊಳ್ನೆಗಳ್ದಂ
ದೂರೀಕೃತ ಸಕಳದುರಿತ ವಿಮಳಾಚಾರಂ ॥ 441 ॥

ಕಾಮ

ಕಂ ॥ ಹಾರಹರಹಾಸ ಹಿಮ ರುಚಿ
ತಾರ ಗಿರಿ ಸ್ಫಟಿಕ ಶಂಖ ಶುಭ್ರಾಂಬುರುಹ
ಕ್ಷೀರ ಸುರ ಸಿಂಧು ಶಾರದ
ನೀರದ ಭಾಸುರಯಶೋಭಿರಾಮಂ ಕಾಮಂ ॥ 442 ॥

ಆಚಿಯಕ್ಕ

ಮ ವಿ ॥ ಸಿರಿಗಂ ವಿಷ್ಣುಗವೆನ್ತು ಮುನ್ನವಸಮಾಸ್ತ್ರಂ ಪುಟ್ಟಿದೊಂ ಶಂಭುಗಂ
ಗಿರಿಸಂಜಾತೆಗವೆಂತು ಷಡ್ವದನನಾದೊಂ ಪುತ್ರನನ್ತೀಗಳೀ
ಧರಣೀವಿಶ್ರುತ ಚಂದ್ರಮೌಳಿವಿಭುಗಂ ಶ್ರೀ ಯಾಚಿಯಕ್ಕಂಗವು
ದ್ಧುರತೇಜಂ ಗುಣಿ ಸೋಮನುದ್ಭವಿಸಿದಂ ನಿಸ್ಸೀಮ ಪುಣ್ಯೋದಯಂ
॥ 443 ॥

ಕಾಳವ್ವೆ

ಕಂ ॥ ಸರಸಿರುಹವದನೆ ಘನಕುಚೆ
ಹರಿಣಾಕ್ಷಿ ಮದೋತ್ಕಕೋಕಿಳಸ್ವನೆ ಮದವ

ತ್ಕರಿಪತಿಗಮನೆ ತನೂದರಿ
ಧರೆಯೊಳ್ ಕಾಳವ್ವೆ ರೂಪಿನಾಗರಮಾದಳ್ ॥ 444 ॥

ನಯಕೀರ್ತಿದೇವ

ಮ ವಿ ॥ ವರಸೈದ್ಧಾಂತ ಪಯೋಧಿವರ್ಧನ ಶರತ್ತಾರಾಧಿಪಂ ತಾರಹಾ
ರ ರುಚಿಭ್ರಾಜಿತಕೀರ್ತ್ತಿಧೌತ ನಿಖಿಳೋರ್ವ್ವೀಮಂಡಳಂ ದುರ್ದ್ಧರ
ಸ್ಮರಬಾಣಾವಳಿ ಮೇಘಜಾಳಪವನಂ ಭವ್ಯಾಂಬುಜವ್ರಾತಭಾ
ಸುರ ನೀ ಶ್ರೀ ನಯಕೀರ್ತ್ತಿದೇವಮುನಿಪಂ ವಿಖ್ಯಾತಿಯಂ ತಾಳ್ದಿದೊಂ
॥ 445 ॥

ಬಾಳಚಂದ್ರಮುನಿ

ಮ ವಿ ॥ ಸ್ಮರಮಾತಂಗ ಮೃಗೇಂದ್ರ ಉದ್ಧ ನಯಕೀರ್ತ್ತಿಖ್ಯಾತಯೋಗೀಂದ್ರ ಭಾ
ಸುರಪಾದಾಂಬುರುಹಾನಮನ್ಮಧುಕರಂ ಚಂಚತ್ತಪೋಲಕ್ಷ್ಮೀಗೀ
ಶ್ವರನಾದೊಂ ನರಪಾಳಮೌಳಿಮಣಿ ರುಜ್ಮಾಳಾರ್ಚ್ಚಿತಾಂಘ್ರಿದ್ವಯಂ
ಸ್ಥಿರಸಾಧ್ಯಾತ್ಮಿಕ ಬಾಳಚಂದ್ರಮುನಿಪಂ ಚಾರಿತ್ರ ಚಕ್ರೇಶ್ವರಂ ॥ 446 ॥

91) ಸಂಖ್ಯೆ 432, E.C. II (R), ಕ್ರಿ.ಶ. ಸು. 1200

ಇವರಲ್ಲಿ ಜಿನವರ್ಮ ಎಂಬುವವನು ಕಂಖರಿವಾದ್ಯದಲ್ಲಿ ಚತುರನೆಂದು ವರ್ಣಿಸಿದೆ.

ಕಂ ॥ ಜಿನವರ್ಮನ ಕಂಖರಿಯ
ಧ್ವನಿ ಕಿವಿವುಗೆ ದುರ್ಜನಂಗೆ ಭಯಮುಂ ಸುಜನಂ
ಗನುರಾಗಮುಮುದಯಿಸುಗುಂ
ಘನನಾದದಿನೆಂತು ಹಂಸೆಗಂ ನವಿಲಿಂಗಂ ॥ 447 ॥

ಚೆನ್ನರಾಯಪಟ್ಟಣ ತಾಲ್ಲೂಕು II

92) ಬೆಕ್ಕ, 563, E.C. II (R), ಕ್ರಿ.ಶ. 1079

ಇದರಲ್ಲಿ ಚಾಲುಕ್ಯ ವಂಶದ ಹುಳ್ಳರಸನು ಸೋಮೇಶ್ವರ, ಮುದ್ರೇಶ್ವರ ದೇವಾಲಯಗಳಲ್ಲಿ ಪೂಜಾರಾಧನೆಗಾಗಿ ಭೂದಾನ ಮಾಡಿದ್ದನ್ನು ಹೇಳಿದೆ.

ಸಾಮಂತ ದಾಮೋದರ

ಮ ವಿ ॥ ಎನಿತಾನುಂ ಬವರಂಗಳೊಳ್ ಪಲಬರಂ ಬೆಂಕೊಂಡ ಗಂಡಿಂದಮೋ
ವೆನಿಸುತ್ತಂ ತಳಕಾಡೊಳಿನ್ನೆವರಮುಟ್ಟೀಗಳು ಕರಂ ಗಂಗರಾ
ಜನ ಖಳ್ಗಾಹತಿಗಳ್ಕಿ ಯುದ್ಧವಿಧಿಯೊಳ್ಬನ್ನಿತ್ತು ಸಾಯುಣ್ಣದೋ
ಡಿನಲುಂಡಿಜ್ಜಪಸತ್ತ ಶಯ್ಯಪಮಿಯೊಲ್ಸಾಮಂತ ದಾಮೋದರಂ ॥ 448 ॥

ಮುದ್ದರಸ

ಶಾ ವಿ ॥ ಚಾಳುಕ್ಯಾನ್ವಯಪದ್ಮಷಂಡವಿಳಸನ್ಮಾರ್ತಂಡನುಗ್ರಾವನೀ
ಪಾಳಶ್ರೀಮಧುಸೂದನಂ ಹರಿಶಿರಶ್ಚಂದ್ರಾವದಾತೋದ್ಧದಿ
ಕ್ಪಾಳವ್ಯಾಪಿವಿನೂತವಿಶ್ರುತಯಶಂ ಶಶ್ವಜ್ಜಯಶ್ರೀವಧೂ
ಲೀಳಂ ಮುದ್ದರಸಂ ಧರಿತ್ರಿ ಪೆಸರಂ ಜೀಯೆಂಬಿನಂ ತಾಳ್ದಿದಂ ॥ 449 ॥

ಮ ವಿ ॥ ಶರಣೆಂದಂಗಿದಿರಾಗಿ ಬಂದು ರಣದೊಳ್ ನಿಂದಂಗೆ ತನ್ನೊಂದು ದು
ರ್ಧರದೋರ್ದಂಡಮೆ ವಜ್ರಪಂಜರಮರಿಪ್ರಾಣಾನಿಳಾಹಾರಭೀ
ಕರಕಾಳೋರಗಮೆಂದೊಡಾವನೊ ಸಮಂ ಬಂಟಿಂಗೆ ಪೇೞೆಂದು ಮು
ದ್ದರಸಂ ಬಣ್ಣಿಸೆ ಧಾತ್ರಿ ಸಂದನೆಳೆಯೊಳ್ ಚಾಳುಕ್ಯವಂಶೋದ್ಭವಂ ॥ 450 ॥

ಬಾಚರಸ, ನಾಗರಸ

ಕಂ ॥ ಸ್ಮರನಿಭರಂಬುಧಿಯೊಳ್ಕೀ
ತರೋಚಿಯುಂ ಪಾರಿಜಾತಮುಂ ಪುಟ್ಟುವವೊಲ್
ಧರೆ ಪೊಗಳೆ ಪುಟ್ಟಿದರ್ಬ್ಬಾ
ಚರಸಂ ನಾಗರಸರೆಂಬರಿರ್ವ್ವರ್ತ್ತನೆಯರ್ ॥ 451 ॥

93) ಹಳೇಬೆಳ್ಗೊಳ 568, E.C. II (R), ಕ್ರಿಶ. 1093

ಇದರಲ್ಲಿ ಹೊಯ್ಸಳ ದೊರೆಯಾದ ಎರೆಯಂಗನು ಗೋಪನಂದಿ ಪಂಡಿತನಿಗೆ ಕೆಲವು ಗ್ರಾಮಗಳನ್ನು ದತ್ತಿಯಾಗಿ ಕೊಟ್ಟಂತೆ ಹೇಳಿದೆ.

ವಿನಯಾದಿತ್ಯ

ಕಂ ॥ ಎರೆದ ಮನುಜಂಗೆ ಸುರಭೂ
ಮಿರುಹಂ ಶರಣೆಂದವಂಗೆ ಕುಳಿಶಾಗಾರಂ
ಪರವನಿತೆಗನಿಳತನಯಂ
ಧುರದೊಳ್ ಪೊಣರ್ದಂಗೆ ಮೃತ್ಯು ವಿನಯಾದಿತ್ಯಂ ॥ 452 ॥

ಕಂ ॥ ರಕ್ಕಸಪೊಯ್ಸಳನೆಂಬಾ
ಜಿಕ್ಕರಮಂ ಬರೆದು ಪಟಮನೆತ್ತಿದೊಡಿದಿರೊಳ್
ಲಕ್ಕದ ಸಮಲೆಕ್ಕದೆ ಮಱು
ವಕ್ಕಂ ನಿಂದಪುವೆ ಸಮರಸಂಘಟ್ಟನದೊಳ್ ॥ 453 ॥

ಕಂ ॥ ಬಲಿದಡೆ ಮಲೆದಡೆ ಮಲ ಪರ
ತಲೆಯೊಳು ಬಾಳಿಡುವನುದಿತ ಭಯರಸವಸದಿಂ
ಬಲಿಯದ ಮಲೆಯದ ಮಲಪರ
ತಲೆಯೊಳು ಕೈಯಿಡುವನೊಡನೆ ವಿನಯಾದಿತ್ಯಂ ॥ 454 ॥

ಎರೆಯಂಗ

ಚಂ ಮಾ ॥ ಅನುಪಮಕೀರ್ತಿ ಮೂಱನೆಯ ಮಾರುತಿ ನಾಲ್ಕನೆಯುಗ್ರವಹ್ನಿಯ
ಯ್ದನೆಯ ಸಮುದ್ರಮಾಱನೆಯ ಪೂಗಣೆಯೇೞನೆಯುರ್ವರೇಶನೆಂ
ಟನೆಯ ಕುಳಾದ್ರಿಯೊಂಬತನೆಯುದ್ಧಸಮೇತ x x x ಹಸ್ತಿ ಪ
ತ್ತನೆಯ ನಿಧಾನಮೂರ್ತಿಯೆನೆ ಪೋಲ್ವವರಾರೆಱೆಯಂಗದೇವನಂ ॥ 455 ॥

ಚಂ ಮಾ ॥ ಅರಿಪುರದೊಳ್ ಧಗದ್ಧಗಿಲುಧಂಧಗಿಲೆಂಬುದರಾತಿಭೂಮಿಪಾ
ಳರದೊಳ್ ಠಗಿಲ್ಠಗಿಗಠಿಗಂಠಿಲೆಂಬುದು ವೈರಿಭೂತಳೇಶ್ವರ ?
ಕರುಳೊಳ್ ಚಿಮಿಲ್ಚಿಮಿಚಿಮಿಲ್ಚಿಮಿಲೆಂಬುದು ಪಱಿಹಿದು
ರ್ದ್ಧರತರಮೆಂದೊಡಳುಕುಱದೆ ಪೋಲುವರಾರ್ಮ್ಮಲೆರಾಜರಾಜನಂ
॥ 456 ॥

ಕಂ ॥ ಮುರರಿಪು ಪಿಡಿವ ಚಕ್ರದ
ಹರಿಗಂ ಕೇಸರಿಗಮಾಘಣೆದ್ಧಂಸಿಯ ವಿ
ಸ್ಫುರಿತನಖಹತಿಹಮೆಱೆಗನ
ಕರವಾಳ್ಗಮಿದಿರ್ಚೆ ಬರ್ದುಕಲಾರ್ಪರುಮೊಳರೇ ॥ 457 ॥

ಕಂ ॥ ಇರ್ಮ್ಮಡಿ ದಧೀಚಿಮುನಿಗೆ ಪ
ದಿರ್ಮ್ಮಡಿ ಗುತ್ತಂಗೆ ಚಾರುದತ್ತಂಗತ್ತಲ್
ನೂರ್ಮ್ಮಡಿ ರವಿಸೂನುಗೆ ಸಾ
ಸಿರ್ಮ್ಮಡಿ ಮೇಲ್ ದಾನಗುಣದಿನೆಱೆಯಂಗನೃಪಂ ॥ 458 ॥

ಗೋಪಣಂದಿಪಂಡಿತ

ಮ ಸ್ರ ॥ ಜಿನಪಾದಾಂಭೋಜಭೃಂಗಂ ಮದನಮದಹರಂ ಕರ್ಮ್ಮನಿರ್ಮೂಳನಂ ವಾ
ಗ್ವನಿತಾ ಚಿತ್ತಪ್ರಿಯಂ ವಾದಿಕುಳ ಕುಧರ ವಜ್ರಾಯುಧಂ ಚಾರುವಿದ್ವ
ಜ್ಜನಪಾತ್ರಂ ಭವ್ಯಚಿಂತಾಮಣಿ ಸಕಳಕಳಾಕೋವಿದಂ ಕಾವ್ಯಕಂಜಾ
ಸನನಂತಾನಂದದಿಂದಂ ಪೊಗಳೆ ನೆಗಳ್ದನೀ ಗೋಪಣಂದಿಬ್ರತೀಂದ್ರಂ
॥ 459 ॥

ಚಂ ಮಾ ॥ ಮಲೆಯದೆ ಸಾಂಖ್ಯ ಮಟ್ಟಮಿರು ಭೌತಿಕ ಪೊಂಗಿ ಕಡಂಗಿ ಬಾಗದಿರ್
ತೊಲತೊಲಗತ್ತ ಬೌದ್ಧ ತಲೆದೋಜಿದೆ ವೈಷ್ಣವ ನೀನಡಂಗು ವಾ
ಗ್ಬಲದ ಪೊಡರ್ಪು ಬೇಡ ಗಡ ಚಾರ್ವಕ ನಿಮ್ಮ ದರ್ಪಮಂ
ಸಲಿಪನೆ ಗೋಪಣಂದಿಮುನಿಪುಂಗವನೆಂಬ ಮದಾಂಧ ಸಿಂಧುರಂ ॥ 460 ॥

ಮ ವಿ ॥ ತಗೆಯಲ್ ಜೈಮಿನಿ ತಿಪ್ಪಿಕೊಂಡು ಪರಿಯಲ್ ವೈಶೇಷಿಕಂ ಪೋಗದುಂ
ಡಿಗೆಯೊತ್ತಲ್ ಸುಗತಂ ಕಡಂಗಿ ಬಳೆಗೋಯಲ್ ಕಕ್ಷಪಾದಂ ಜಿಡ
ಲ್ಪುಗೆ ಲೋಕಾಯತನೆಯ್ದೆ ಸಾಂಖ್ಯನಡಸಲ್ಕಮ್ಮಮ್ಮ ಷಟ್ತರ್ಕವೀ
ಧಿಗಳೊಳ್ ತೂಳ್ದಿತು ಗೋಪಣಂದಿದಿಗಿಭಪ್ರೋದ್ಭಾಸಿಗಂಧದ್ವಿಪಂ ॥ 461 ॥

ಚಂ ಮಾ ॥ ದಿಟ ನುಡಿವನ್ಯವಾದಿಮುಖಮುದ್ರಿತನುದ್ಧತವಾದಿ ವಾಗ್ಬಳೋ
ದ್ಭಟಜಯಕಾಳದಂಡನಪ ಶಬ್ದಮದಾನ್ಧ ಕುವಾದಿದೈತ್ಯ ಧೂ
ರ್ಜ್ಜಟಿ ಕುಟಿಳಪ್ರಮೇಯ ಮದವಾದಿಭಯಂಕರನೆಂದು ದಂಡುಳಂ
ಸ್ಫುಟಪಟುಘೋಷ ದಿಕುತಟಮನೆಯ್ದಿತು ವಾಕ್ಪಟು ಗೋಪಣಂದಿಯಂ
॥ 462 ॥

ಚಂ ಮಾ ॥ ಪರಮ ತಪೋನಿಧಾನ ವಸುದೈವ ಕುಟುಂಬಕ ಜೈನಶಾಸನಾಂ
ಬರ ಪರಿಪೂರ್ಣ್ನಚಂದ್ರ ಸಕಳಾಗಮ ತತ್ವ ಪದಾರ್ತ್ಥ ಶಾಸ್ತ್ರ ವಿ
ಸ್ತರ ವಚನಾಭಿರಾಮ ಗುಣರತ್ನವಿಭೂಷಣ ಗೋಪಣಂದಿ ನಿ
ನ್ನೊರೆಗಿನಿಸಪ್ಪೊಡಂ ದೊರೆಗಳಿಲ್ಲೆಣೆಗಾಣೆನಿಳಾತಳಾಗ್ರದೊಳ್ ॥ 463 ॥

94) ದೊಡ್ಡಗನ್ನಿ 140, E.C. II (R), ಕ್ರಿಶ. 1100

ಇದರಲ್ಲಿ ಕಲ್ಯಾಣದ ಚಾಲುಕ್ಯ ದೊರೆ ತ್ರಿಭುವನಮಲ್ಲನ ಆಳಿಕೆಯಲ್ಲಿ ಮುದ್ದಮ್ಮರಸನ ಮಗ ಬಾಚರಸನು ಒಂದು ಕೆರೆಯನ್ನು ಕಟ್ಟಿಸಿದ್ದುದನ್ನು ಹೇಳಿದೆ.

ಬಾಚರಸ

ಕಂ ॥ ಆಯುಂ ಶ್ರೀಯುಂ ಕೀ
ರ್ತ್ತಿಯುಮಾಯತಿಯುಂ ವೀರಲಕ್ಷ್ಮಿಯುಂ ಬಾಚಿಗನ
ಲುಯಾವಗಮೆನೆಲಸಿನಿಂದುದು
ತೋಯಧಿ ಧರೆ ಚಂದ್ರನರ್ಕ್ಕನುಳ್ಳನ್ನೆವರಂ ॥ 464 ॥

ಕಂ ॥ ತೊಂಡುತನದಿಂದಮುಕ್ಕ್ರುವ
ಮಿಂಡೆಯರಂ ಪಿಡಿದು ಮೆಟ್ಟಿ ಸಿರಮಂ ಕೀಳ್ಕುಂ

ಗಂಡನಿವನಲ್ತೆ ಮಲೆಪರೊ
ಳ್ಗಂಡನಮನೆಯಲ್ಲಿ ನೆಗರ್ದ್ದಮಂಡಲಗಾವಂ ॥ 465 ॥

95) ಶ್ರವಣಬೆಳಗೊಳ 484, E.C. II (R), ಕ್ರಿ.ಶ. ಸು. 1119

ಇದರಲ್ಲಿ ದಿವಾಕರಣಂದಿಯ ಶಿಷ್ಯೆ ಶ್ರೀಮತಿಗಂತಿ ಸನ್ಯಸನವಿಧಿಯಿಂದ ಮುಡಿಪಿದಳೆಂದು ಹೇಳಿದೆ.

ದಿವಾಕರನಂದಿ

ಮ ವಿ ॥ ಪರವಾದಿಕ್ಷಿತಿಭೃಂನಿಶಾತಕುಳಿಶಂ ಶ್ರೀ ಮೂಲಸಂಘಾಬ್ಜ
ಷಟ್ಚರಣಂ ಪುಸ್ತಗಚ್ಛ ದೇಶಿಗಗಣ ಪ್ರಖ್ಯಾತಯೋಗೀಶ್ವರಾ
ಭರಣಂ ಮನ್ಮಥಭಂಜನಂ ಜಗದೊಳಾದಂ ಖ್ಯಾತನಾದಂ ದಿವಾ
ಕರಣಂದಿಬ್ರತಿಪಂ ಜಿನಾಗಮಸುಧಾಂಭೋರಾಶಿತಾರಾಧಿಪಂ ॥ 466 ॥

ಉ ಮಾ ॥ ಅಂತೆನಲಿಂತೆನಲ್ಕಱಿಯೆನೆಯ್ದೆ ಜಗತ್ತ್ರಯವಂದ್ಯರಪ್ಪ ಪೆಂ
ಪಂ ತಳೆದಿರ್ದರೆಂಬುದನೆ ಬಲ್ಲೆನದಲ್ಲದೆ ಸಂಯಮಂ ಚರಿ
ತ್ರಂ ತಪಮೆಂಬಿವತ್ತಳಗಮಿಂತು ದಿವಾಕರಣಂದಿದೇವಸಿ
ದ್ಧಾಂತಿಗರ್ಗೆಂದೊಡೊಂದು ರಸನೋಕ್ತಿಯೊಳಾನದನೆಂತು ಬಣ್ಣಿಪಂ
॥ 467 ॥

ಮಳಧಾರಿದೇವ

ಚಂ ಮಾ ॥ ನೆಱೆಯ ತನುತ್ರಮಿಕ್ಕಿದವೊಲಿರ್ದ ಮಲಂ ತಿನೆ ಮೆಯ್ಯನೊರ್ಮೆಯುಂ
ತುಱಿಸುವುದಿಲ್ಲ ನಿದ್ದೆವರೆ ಮಗ್ಗುಲನಿಕ್ಕುವುದಿಲ್ಲ ಬಾಗಿಲಂ
ಕಿಱುತೆಱೆಯೆಂಬುದಿಲ್ಲುಗುಳ್ವುದಿಲ್ಲ ಮಲಂಗುವುದಿಲ್ಲಹೀಂದ್ರನುಂ
ನೆಱೆವನೆ ಬಣ್ಣಿಸಲ್ ಗುಣಗಣಾವಳಿಯಂ ಮಳಧಾರಿದೇವರಾ ॥ 468 ॥

ಶ್ರೀಮತಿಗಂತಿ

ಉ ಮಾ ॥ ಆ ಮುನಿ ದೀಕ್ಷೆಯಂ ಕುಡೆ ಸಮಗ್ರತಪೋನಿಧಿಯಾಗಿ ದಾನಚಿಂ
ತಾಮಣಿಯಾಗಿ ಸದ್ಗುಣಗಣಾಗ್ರಣಿಯಾಗಿ ದಯಾದಮಕ್ಷಮಾ
ಶ್ರೀಮುಖಲಕ್ಷ್ಮಿಯಾಗಿ ವಿನಯಾರ್ಣವಚಂದ್ರಿಕೆಯಾಗಿ ಸಂತತಂ
ಶ್ರೀಮತಿಗಂತಿಯರ್ ನೆಗೞ್ದಿರುರ್ವ್ವಿಯೊಳುರ್ವ್ವರೆ ಕೂರ್ತು ಕೀರ್ತ್ತಿಸಲ್
॥ 469 ॥

ಶುಭಚಂದ್ರದೇವ

ಉ ಮಾ ॥ ಕಂತುಮದಾಪಹರ್ಸ್ಸಕಳ ಜೀವದಯಾಪರಜ್ಜೈನಮಾರ್ಗ್ಗ ರಾ
ದ್ಧಾಂತಪಯೋಧಿಗಳ್ ವಿಷಯವ್ವೈರಿಗಳುದ್ಧತ ಕರ್ಮ್ಮಭಂಜನ

ಸ್ಗಂತತ ಭವ್ಯಪದ್ಮದಿನಕೃತ್ಸ್ತಭರಂ ಶುಭಚಂದ್ರದೇವ ಸಿ
ದ್ಧಾಂತಮುನೀಂದ್ರರಂ ಪೊಗಳ್ವುದಂಬುಧಿವೇಷ್ಟಿತಭೂರಿಭೂತಳಂ ॥ 470 ॥

ದಿವಾಕರನಂದಿ

ಮ ವಿ ॥ ಕರುಣಂ ಪ್ರಾಣಿಗಣಂಗಳೊಳ್ ಚತುರತಾಸಂಪತ್ತಿ ಸಿದ್ಧಾಂತದೊಳ್
ಪರಿತೋಷಂ ಗುಣಸೇವ್ಯಭವ್ಯಜನದೊಳ್ ನಿರ್ಮತ್ಸರತ್ವಂ ಮುನೀ
ಶ್ವರರೊಳ್ ಧೀರತೆ ಘೋರವೀರತಪದೊಳ್ ಕಯ್ಗಣ್ಮೆಪೊಣ್ಮಲ್ ದಿವಾ
ಕರಣಂದಿವ್ರತಿ ಪೆಂಪನೇಂ ತಳೆದನೋ ಯೋಗೀಂದ್ರಬೃಂದಂಗಳೊಳ್
॥ 471 ॥

96) ಚಲ್ಯ 569, E.C. II (R), ಕ್ರಿಶ. 1124

ಇದರಲ್ಲಿ ಹೊಯ್ಸಳ ದೊರೆಯಾದ ವಿಷ್ಣುವರ್ಧನನು ಶ್ರೀಪಾಲತ್ರೈವಿದ್ಯದೇವನಿಗೆ ಬಸದಿಯನ್ನು ಮಾಡಿಸಿ ಶಲ್ಯ ಎಂಬ ಗ್ರಾಮವನ್ನು ದತ್ತಿ ಕೊಟ್ಟಂತೆ ಹೇಳಿದೆ.

ವಿನಯಾದಿತ್ಯ

ಕಂ ॥ ಯದುಕುಳಕುಳಾದ್ರಿಶಿಖರದೊ
ಳುದಯಿಸಿದಂ ದುರ್ನಿರೀಕ್ಷತೇಜೋಹೃತಸಂ
ಪದರಾತಿರಾಜಮಂಡಲ
ನುದಾತ್ತಗುಣರತ್ನವಾರ್ಧಿ ವಿನಯಾದಿತ್ಯಂ ॥ 472 ॥

ಎರೆಯಂಗ

ಕಂ ॥ ಆತನ ತನಯಂ ಸಕಳಮ
ಹೀತಳಸಾಮ್ರಾಜ್ಯಲಕ್ಷ್ಮಿಯುಂ ತನಗೇಕ
ಶ್ವೇತಾತಪತ್ರಮಾಗೆ ಪು
ರಾತನನೃಪರೆಣೆಗೆ ವಂದನೆಱೆಯಂಗನೃಪಂ ॥ 473 ॥

ವಿಷ್ಣುವರ್ಧನ

ಮ ಸ್ರ ॥ ನೆನೆಯಲ್ ಪಾಪಕ್ಷಯಂ ನೋಡಿದೊಡಭಿಮತಸಂಸಿದ್ಧಿ ಸದ್ಭಕ್ತಿಯಿಂದಂ
ಮನಮೊಲ್ದಾರಾಧಿಸಲ್ಕಾ ಸುಕೃತದೊದವನೇವೇೞ್ವುದೆಂಬನ್ನೆಗಂ ಮು
ನ್ನಿನ ಪುಣ್ಯಂ ವೀರರಪ್ಪಾ ನಳನಹುಷರೊಳನ್ಯೂನನಾದಂ ಜಗತ್ಪಾ
ವನಸತ್ಯತ್ಯಾಗಶೌಚಾಚರಣಪರಿಣತಂ ವೀರವಿಷ್ಣುಕ್ಷಿತೀಶಂ ॥ 474 ॥

ಮ ಸ್ರ ॥ ಪೆಱತೇಂ ಸಪ್ತರ್ದ್ಧಿಯಿಂ ಸಂಭವಿಕುಮೊದವುಗುಂ ಪ್ರಾತಿಹಾರ್ಯ್ಯಂಗಳೆಲ್ಲಂ
ನೆಱೆದಿರ್ಕ್ಕುಂ ರೀತಿಯಿಂದೆ ಸಮವಸಿತಿಯುಮೀ ಕಷ್ಟಕಾಲಪ್ರಭಾವಂ

ಪೆಱಪಿಂಗಲ್ಕೀ ಮಹಾಯೋಗಿಯೊಳೆನೆ ತಪಮುಂ ಯೋಗ್ಯತಾಲಕ್ಷ್ಮಿಯುಂ ಕ
ಣ್ದೆಱೆದಂತಾಗಿರ್ಪ್ಪುದಿಂದಂದನುಪಮಮಪರಾತೀತ ದಿವ್ಯಪ್ರಭಾವಂ ॥ 475 ॥

ಚಂ ಮಾ ॥ ಅದಿಯಮನೋಡಿದೋಟಮನೆ ಜೋಡಿಸಿ ಕಲ್ತು ನೃಸಿಂಹವರ್ಮನೋ
ಡಿದನವನೋಟಮಂ ಗುಣಿಸಿ ಚೆಂಗಿರಿ ಚೆಂಗಿರಿಯಲ್ಲಿ ಕಲ್ತು ಕೊಂ
ಡದಟಿನ ಕೊಂಗರಾ ನೆಗಟ್ದಿ ಕೊಂಗರನೀಕ್ಷಿಸಿ ಪಾಂಡ್ಯನೋಡಿದಂ
ಯದುತಿಳಕಂಗೆ ವಿಷ್ಣುಧರಣೀಪತಿಗೋಡದರಾರ್ ಧರಿತ್ರಿಯೊಳ್ ॥ 476 ॥

ಶ್ರೀಪಾಲತ್ರೈವಿದ್ಯ

ಸ್ರಗ್ಧರೆ ॥ ಹೃದ್ಯ ಸ್ಯಾದ್ವಾದಭೂಭೃದ್ಭವನನುಪಮಷಟ್ತರ್ಕಭಾಸ್ವನ್ನಖಂ ಪಾ
ಯ್ದುದ್ಯದ್ದರ್ಪಾಂಧವಾದಿದ್ವಿರದನಘಟೆಯಂ ವಿಕ್ರಮಪ್ರೌಢಿಯಿಂದಂ
ವಿದ್ಯಾಸಿಂಹೀರತಿವ್ಯಾಪ್ತಿಯೊಳೆ ಸುಖಿಯಿಸುತ್ತಿರ್ಪುದುತ್ಸಾಹದಿಂ ತ್ರೈ
ವಿದ್ಯಶ್ರೀಪಾಲಯೋಗೀಶ್ವರನೆನಿಪ ಮಹಾವಾದಿಮತ್ತೇಭಸಿಂಹಂ ॥ 477 ॥

ಮ ವಿ ॥ ತಮಗಾಜ್ಞಾವಶಮಾದುದುನ್ನತಮಹೀಭೃತ್ಕೋಟಿ ತಮ್ಮಿಂದೆ ಬಿ
ಣ್ಪಮರ್ದತ್ತೀಧರೆಗೆಯ್ದೆ ತಮ್ಮ ಮುಖದೊಳ್ ಷಟ್ತರ್ಕವಾರಾಶಿವಿ
ಭ್ರಮಮಾಪೋಶನಮಾತ್ರಮಾದುದೆನಲಿಂ ಮಾತೇನಗಸ್ತ್ಯ ಪ್ರಭಾ
ವಮುಮಂ ಕೀಟ್ಟಿಡಿಸಿತ್ತು ಪೆಂಪಿನೆಸಕಂ ಶ್ರೀಪಾಲಯೋಗೀಂದ್ರನಾ ॥ 478 ॥

ಕಂ ॥ ಆವನ ವಿಷಯಮೊ ಷಟ್ತ
ರ್ಕ್ಕಾವಿಳ ಬಹುಭಂಗಿಸಂಗತಂ ಶ್ರೀಪಾಳ
ತ್ರೈವಿದ್ಯ ಗದ್ಯಪದ್ಯ ವ
ಚೋವಿನ್ಯಾಸಂ ನಿಸರ್ಗ್ಗ ವಿಜಯವಿಳಾಸಂ ॥ 479 ॥

97) ಅಗ್ರಹಾರ ಬೆಳಗಲಿ 98, E.C. II (R), ಕ್ರಿಶ. 1133

ಇದರಲ್ಲಿ ಹೊಯ್ಸಳ ದೊರೆಯಾದ ವಿಷ್ಣುವರ್ಧನನ ದಂಡನಾಯಕ ಗಂಗರಾಜನ ಮಗ ಬೊಪ್ಪದೇವ ಮೊದಲಾದವರು ಬೆಳ್ಗಲಿಯ ಗಂಗೇಶ್ವರ ದೇವರಿಗೆ ಭೂಮಿಯನ್ನು ದತ್ತಿ ಬಿಟ್ಟಂತೆ ಹೇಳಿದೆ.

ಗಂಗರಾಜ

ಮ ವಿ ॥ ಅದಟಾರ್ಪುನ್ನತಿ ಸತ್ಯಮಂತಚಲಧೈರ್ಯಂ ಶೌಚಮೌದಾರ್ಯಮ
ಣ್ಮು ದಿಟಂ ತನ್ನೊಳೆ ನಿಂದುವೆಂಬ ಗುಣಸಂಘಾತಂಗಳಂ ತಾಳ್ದಿ ಲೋ

ಕದ ವಂದಿಪ್ರಕರಂಗಳಂ ತಣಿಪಿ ಕಃ ಕೇನಾರ್ಥಿಯೆಂದಿತ್ತು ಚಾ
ಗದ ಪೆಂಪಿಂದಮ ಗಂಗರಾಜನೆಸೆದಂ ವಿಶ್ವಂಭರಾಭಾಗದೊಳ್ ॥ 480 ॥

ಮ ವಿ ॥ ತಳಕಾಡಂ ಸೆಳೆದಂತೆ ಕೊಂಗನೊಳಕೊಂಡಾ ಬಂಕಿಯಂ ತೂಳ್ದುದೋ
ರ್ಬ್ಬಳದಿಂ ಬೆಂಗಿರಿಯಂ ಕಳಲ್ಚಿ ನರಸಿಂಗಂಗಂತಕಾವಾಸಮಂ
ನಿಳಯಂ ಮಾಡಿ ನಿಮಿರ್ಚ್ಚಿ ವಿಷ್ಣುನೃಪನಸ್ವಾಮಾರ್ಗ್ಗದಿಂ ಗಂಗಮಂ
ಡಳಮಂ ಕೊಂಡನರಾತಿಯೂಥಮೃಗಸಿಂಗಂ ಗಂಗದಣ್ಡಾಧಿಪಂ ॥ 481 ॥

ಬೊಪ್ಪದಂಡಾಧಿಪ

ಮ ವಿ ॥ ಮಲೆವತ್ತುದ್ಧತದೇಶಕಂಟಕರನಾಟಂದೊತ್ತಿ ಬೆಂಕೊಂಡು ದೋ
ರ್ಬಲದಿಂ ಕೊಂಗರನೊತ್ತಿ ವೈರಿನೃಪರಂ ಬೆನ್ನಟ್ಟಿ ತೂಳ್ದನ್ಕಮಂ
ಡಲಮಂ ತತ್ಪತಿಗೆಯ್ದೆ ಮಾಡಿ ಜಗದೊಳ್ ಬೀರಕ್ಕೆ ತಾನಿಂತಗುಂ
ದಲೆಯಾದಂ ಕಲಿಗಂಗನಗ್ರತನಯಂ ಶ್ರೀಬೊಪ್ಪದಂಡಾಧಿಪಂ ॥ 482 ॥

ಏಚ

ಉ ಮಾ ॥ ಮಾಡಿಸಿದಂ ಜಿನೇಂದ್ರಭವನಂಗಳನಾ ಕೊಪಣಾದಿತೀರ್ತ್ಥದಲ್
ಮಾಡಿ ನೆಗಳ್ತೆವೆತ್ತೆಸೆವ ಬೆಳ್ಗೊಳದಲ್ಬಹುಚಿತ್ರಭಿತ್ತಿಯಿಂ
ನೋಡಿದರಂ ಮನಂಗೊಳಿಪುದೆಂಬಿನಮೇಚಚಮೂಪನರ್ತ್ತಿಕ
ಯ್ಯೂಗೆ ಧರಿತ್ರಿ ಕೊಂಡು ಕೊನೆದಾಡೆ ಜಸಂ ನಲಿದಾಡೆ ಲೀಲೆಯಿಂ ॥ 483 ॥

98) ಬಾಗೂರು 51, E.C. II (R), ಕ್ರಿಶ. 1142

ಇದರಲ್ಲಿ ಹೊಯ್ಸಳ ದೊರೆಯಾದ ಮೊದಲನೆಯ ನರಸಿಂಹನ ಆಳಿಕೆಯಲ್ಲಿ ಸೋವರಸ, ದಾವರಸ ಮೊದಲಾದವರು ನಾಗೇಶ್ವರ ದೇವರಿಗೆ ಭೂಮಿಯನ್ನು ದತ್ತಿ ಬಿಟ್ಟಂತ ಹೇಳಿದೆ.

ವಿಷ್ಣುವರ್ಧನ

ಚಂ ಮಾ ॥ ತಲೆಮಲೆ ಕೊಂಗು ನಂಗಲಿ ವಿರಾಟಪುರಂ ತಳಕಾಡು ಕೋಯತೂ
ರ್ವ್ವಲುಪಿನ ಕಂಚಿರಾಯಪುರವೊಳ್ಮಲೆ ಕೊಂಕಣ ಬೇಗಿಮಾಳವಂ
ಸುಲಲಿತ ಚಕ್ರಗೊಟ್ಟ ತುಳುದೇಶಮನಕ್ರಮದಿಂದ ವಿಷ್ಣು ಭೂ
ಲಲನಗಧೀಶನಪ್ರತಿಮನೋವದೆ ಕೊಂಡ ಭುಜಪ್ರತಾಪದಿಂ ॥ 484 ॥

ಕಂ ॥ ಕೊಂಡಂತಳಕಾಡಂ ಕೈ
ಕೊಂಡಂ ಮೇಲೆತ್ತಿ ಕೊಂಗನವಯವದಿಂದಂ

ಕೊಂಡಂ ವಿಷ್ಣುವೆ ಚೋಳನ
ಮಂಡಳಮಮಂ ಕಪ್ಪಗೊಂಡ ಪರಮಂಡಳಮಮಂ ॥ 485 ॥

ಲಕ್ಷ್ಮೀದೇವಿ

ಚಂ ಮಾ ॥ ಧರಣಿಜೆಗಾದಧೈರ್ಯ್ಯಧರೆಗಾದನೆಗಟ್ಟೆಯ ಪೆಂಪು ಪಾರ್ವ್ವತೀ
ವರವಧುಗಾದ ರೂಪು ಸೊಗಯಿಪ್ಪ ಮಹಾನದಿಗಾದ ನಿರ್ಮ್ಮಳಂ
ಸುರತರುಗಾದುದಾರತೆ ಸರಸ್ವತಿಗಾದ ಸುವಾಣಿ ವಿಷ್ಣು ಭೂ
ವರನ ಮಹಾನುಭಾವೆ ಸತಿ ಸಂನುತೆ ಲಕ್ಷ್ಮಲದೇವಿ ನಲ್ಮೆಯಿಂ ॥ 486 ॥

ಶಾಂತಲೆ

ಕಂ ॥ ಸೆಳೆನಡುವಿನುರುಳಿಗುರುಳಿನ
ತೊಳಪದರದ ಬೆಳಪ ಕಣ್ಗಳಬಳಾಜನದೀ
ಕಳಸಕುಚದ್ವಯದಾಕೆಯ
ವಿಳಸಿತವಾದರಸಿ ತನಗೆ ಶಾಂತಲದೇವಿ ॥ 487 ॥

ನರಸಿಂಹ I

ಚಂ ಮಾ ॥ ಉದಯನಗೇಂದ್ರಕೂಟ ತಟದೊಳ್ ದಿಕುಪಾಲಕರುತ್ತಮಾಂಗದೊಳ್
ವೊದವಿದ ದಿಗ್ಮದೇಭ ನಿಕರಂಗಳ ದಂತವನಂ ಬನಂಗಳೊಳ್
ಉದಧಿ ಚತುಷ್ಕಸಂಕುಳದಿ ಸಂಣ್ಮುಖದೊಳ್ ನಲಿದಾಡೆ ಪಾಡುತುಂ
ವಿದಳಿತಕೀರ್ತ್ತಿ ಕೀರ್ತ್ತಿಲತೆಯಂ ಬರೆದಳ್ ನರಸಿಂಹ ಭೂಪನಂ ॥ 488 ॥

ಕಂ ॥ ಇದಿರಾದರಿ ಭೂಪಾಳರ
ಮದದಾನೆಯ ಕೊಂಬನುಡಿದು ದಂನ್ತದ ಬಳೆಯಂ
ಬಿದುವಿನಮುತ್ತಿನಹಾರಮ
ನೊದವಿಸಿ ಜಯಶ್ರೀಗೆ ತೊಡಿಸುವಂ ನರಸಿಂಹನೃಪಂ ॥ 489 ॥

ದಾವಪ್ಪೈಯ್ಯ ದಂಡನಾಯಕ

ಕಂ ॥ ಉತ್ತಮನಧಿಕವಿಳಾಸಂ
ಮತ್ತೆಂನದೆ ಮಾಳ್ಪ ಸಕಳ ದಾನಾದಿಗಳಂ
ಗುತ್ತನ ಸರಿ ದೊರೆಯೆನಿಸಲ್
ಅತ್ಯಧಿಕಂ ದಾವಪ್ಪೈಯ್ಯದಂಣ್ಣಾಯಕನುಂ ॥ 490 ॥

ಕೇಶವ

ಕಂ ॥ ಉತ್ತರಿಪಂ ಜಸಲತೆಯಂ
ಬಿತ್ತರಿಪಂ ಸದ್ಗುಣಂಗಳಂ ಬುಧತತಿಯೊಳ್
ಕತ್ತರಿಪಂ ಭಯಲೋಭಮ
ನುತ್ತಮಪುರುಷಂ ಮಹಾಂತಗುಣಿ ಕೇಶವನುಂ ॥ 491 ॥

ಕೇಶವನ ಹೆಂಡತಿ ದಣ್ಣಲದೇವಿ

ಚಂ ಮಾ ॥ ಪೊಳೆವಲರ್ಗಣ್ಗಳೊಪ್ಪೆ ನಳಿತೋಳ್ಗಳ ಭಾವಮದೊಪ್ಪೆ ಕೋಮಳಾಂ
ಗುಳಿನಖಮೊಪ್ಪೆ ದಂತನಿಕರಂಗಳ ರೋಚಿಗಳೊಪ್ಪೆ ಜಂಘೆಯುಂ
ಸೆಳೆನಡುವುಂ ನಿತಂಬಮುಮದೊರ್ಪ್ಪಿರೆ ದಣ್ಣಲದೇವಿಯೊಪ್ಪು ತುಂ
ಸುಟಿವಳಪೂರ್ವರೂಪೆಯೆನೆ ಕೇಶವದೇವನ ಲಕ್ಷ್ಮಿ ಲೀಲೆಯಿಂ ॥ 492 ॥

ದಾವರಸ

ಕಂ ॥ ನುಡಿದುದೆ ದೇವಾಲಿಕೆ ಮೇಣ್
ನಡೆವಳಿ ಮನುಮಾರ್ಗಮಾರ್ಪು ಸುರಕುಜದ ಬನಂ
ಎಡೆಗೊಂಡ ರೂಪು ಕಾಮನ
ಹಿಡಿದಲರ್ಗಣೆಯೆನಿಪ ದಾವದಂಡಾಧಿಪನುಂ ॥ 493 ॥

ಕಂಚಲದೇವಿ, ಚಂಡಿಯಕ್ಕ

ಚಂ ಮಾ ॥ ಹೃದಯದೊಳಾಗಳುಂ ಶಿವಪದಾಂಬುಜಮಂತ್ತಳೆವರ್ ಮಹಂತರ
ಪ್ಪುದನಱಿದಾಗಳಂತವರ್ಗ್ಗೆ ತಕ್ಕುಚಿತಂಗಳನ್ನೆದೆ ಮಾಡುವರ್
ವಿದಿತವಿನೋದದಿಂದವೆ ಸುಧರ್ಮ್ಮವ ಮಾಳ್ಪರದಂದು ನೋರ್ಪ್ಪಡಂ
ಮೃದುವಚನಂ ಮಹಂತಗುಣಿ ಕಂಚಲದೇವಿಯು ಚಂಡಿಯಕ್ಕನುಂ
॥ 494 ॥

ಕಾಚವ್ವೆ

ಕಂ ॥ ಸತಿಯಂ ಪೋಲಿಸೆ ಕಾಮನ
ರತಿಯಂನಳು ದಾವದಂಡನಾಯಕನಸತಿ
ಬ್ರತಿಯೊಳರರೆ ಕಾಚವ್ವೆಗೆ
ಪ್ರತಿಯಾರು ಪವಿತ್ರಗೋತ್ರವಿಲ್ಲದ ಸತಿಯರ್ ॥ 495 ॥

ಮಾದೆಯನಾಯಕ

ಕಂ ॥ ಹುಟ್ಟುವುದು ವೊಡನೆ ಧರ್ಮ್ಮಂ
ಪುಟ್ಟಿದುದಂತಂತು ಬೆಳೆಯೆ ಬೆಳೆದುದು ತೇಜಂ

ನೆಟ್ಟನೆ ಮಾದೆಯನಾಯಕ
ಹುಟ್ಟಿದ ಸನ್ಮಂತ್ರಿ ನಾಯಕ ಶಿವನ ಬಸುಜೊಳ್ ॥ 496 ॥

99) ಶ್ರವಣಬೆಳಗೊಳ 476, E.C. II (R), ಕ್ರಿ.ಶ. ಸು. 1159

ಮೇರುಪರ್ವತದಂತೆ ಧೈರ್ಯನಿಧಿಯಾದ ಹುಳ್ಳಮಯ್ಯನು ಬೆಳ್ಗುಳತೀರ್ಥದಲ್ಲಿ ಚತುರ್ವಿಂಶತಿ ತೀರ್ಥಂಕರ ಜಿನಾಲಯವನ್ನು ಮಾಡಿಸಿದನು. ಭವ್ಯವಾದ ಚತುರ್ವಿಂಶತಿ ಜಿನಾಲಯದ ನೃತ್ಯ ಮಂಟಪದ ಪಕ್ಕದಲ್ಲಿ ಎರಡೂ ಕಡೆ ಸ್ಥಿರವಾದ ಜಿನಾಲಯಗಳನ್ನೂ ಸುಂದರವಾದ ವಿವಿಧ ಚಿತ್ತಾರದಿಂದ ಕೂಡಿದ ಪ್ರವೇಶದ್ವಾರವನ್ನೂ ಪ್ರಾಕಾರವನ್ನೂ ಮಾಡಿಸಿದುದನ್ನು ಇದರಲ್ಲಿ ಹೇಳಿದೆ.

ವಿನಯಾದಿತ್ಯ

ಸ್ರಗ್ಧರೆ ॥ ಆತಂ ಚಾಳುಕ್ಯಭೂಪಾಳನ ಬಲದ ಭುಜಾದಂಡಮುದ್ದಂಡ ಭೂಪ
ಬ್ರಾತಪ್ರೋತ್ತುಂಗ ಭೂಭೃದ್ವಿದಳನಕುಳಿಶಂ ವಂದಿಸಸ್ಯೌಘಮೇಘಂ
ಶ್ವೇತಾಂಭೋಜಾತ ದೇವದ್ವಿರದನ ಶರದಭ್ರೇಂದು ಕುಂದಾವದಾತ
ಖ್ಯಾತ ಪ್ರೋದ್ಯದ್ಯಶಃಶ್ರೀಧವಳಿತ ಭುವನಂ ಧೀರನೇಕಾಂಗವೀರಂ ॥ 497 ॥

ಎರೆಯಂಗ

ಕಂ ॥ ಎಱೆಯನೆಳೆಗೆನಿಸಿ ನೆಗಳ್ದಿ
ರ್ದ್ದೆಱೆಯಂಗ ನೃಪಾಳತಿಳಕನಂಗನೆ ಚೆಲ್ವಿಂ
ಗೆಱೆವಟ್ಟು ಶೀಲಗುಣದಿಂ
ನೆಱೆದೇಚಲದೇವಿಯನ್ತು ನೋನ್ತರುಮೊಳರೇ ॥ 498 ॥

ವಿಷ್ಣುವರ್ಧನ

ಮ ವಿ ॥ ಅವರೊಳ್ಮಧ್ಯಮನಾಗಿಯುಂ ಭುವನದೊಳ್ ಪೂರ್ವ್ವಾಪರಾಂಭೋಧಿಯೆ
ಯ್ದುವಿನಂ ಕೂಡೆ ನಿರ್ಮ್ಮಿಚ್ಚುವೊಂದು ನಿಜಬಾಹು ವಿಕ್ರಮಕ್ರೀಡೆಯು
ದ್ಭವದಿಂದುತ್ತಮನಾದನುತ್ತಮ ಗುಣವ್ರಾತ್ರೈಕಧಾಮಂ ಧರಾ
ಧವಚೂಡಾಮಣಿ ಯಾದವಾಬ್ಜದಿನಪಂ ಶ್ರೀ ವಿಷ್ಣುಭೂಪಾಳಕಂ ॥ 499 ॥

ಹುಳ್ಳ

ಮ ಸ್ರ ॥ ಧರೆಯಂ ಗೆಲ್ದಿರ್ದ ತಿಣ್ಪುಳ್ಳನನುದಧಿಯನೇನೆಂಬ ಗುಣ್ಪುಳ್ಳನಂ ಮಂ
ದರಮಂ ಮಾರ್ಕೊಳ್ವ ಪೆಂಪುಳ್ಳನನಮರಮಹೀಜಾತಮಂ ಮಿಕ್ಕ ಲೋಕೋ
ತ್ತರಮಪ್ಪಾರ್ಪುಳ್ಳನಂ ಪುಳ್ಳನನೆಸೆವ ಜಿನೇಂದ್ರಾಂಘ್ರಿ ಪಂಕೇಜಪೂಜೋ
ತ್ಕರದೊಳ್ ತಳ್ಪೊಯ್ದಲಂಪುಳ್ಳನನುಕರಿಸಲ್ ಮರ್ತ್ಯನಾವೊಂ ಸಮರ್ಥಂ
॥ 500 ॥

ಮ ಪಿ ॥ ಸುಮನಸ್ಸನ್ತತಿಸೇವಿತಂ ಗುರುವಚೋನಿರ್ದ್ದಿಷ್ಟನೀತಿಕ್ರಮಂ
ಸಮದಾರಾತಿಬಳ ಪ್ರಭೇದನಕರಂ ಶ್ರೀ ಜೈನಪೂಜಾ ಸಮಾ
ಜಮಹೋತ್ಸಾಹಪರಂ ಪುರನ್ದರನ ಪೆಂಪಂ ತಾಳ್ದಿ ಭಂಡಾರಿ ಹು
ಳ್ಳಮ ದಂಡಾಧಿಪನಿರ್ದ್ದಪಂ ಮಹಿಯೊಳುದ್ಯದ್ವೈಭವಭ್ರಾಜಿತಂ ॥ 501 ॥

ಮ ವಿ ॥ ಸತತಂ ಪ್ರಾಣಿವಧಂ ವಿನೋದಮನೃತಾಳಾಪಂ ವಚಃಪ್ರೌಢಿ ಸಂ
ತತಮನ್ಯಾರ್ಥಮನೀಟ್ಟುಕೊಳ್ವುದೆ ವಲಂ ತೇಜಂ ಪರಸ್ತ್ರೀಯರೊಳ್
ರತಿ ಸೌಭಾಗ್ಯಮನೂನಕಾಂಕ್ಷೆ ಮತಿಯಾಯ್ತೆಲ್ಲರ್ಗಮಾರ್ ಪೋಲ್ತಪರ್
ವ್ರತರತ್ನಪ್ರಕರಕ್ಕೆ ಶೀಳಭಟರೊಳ್ಗಾ ಹುಳ್ಳನಂ ಹುಳ್ಳನಂ ॥ 502 ॥

ಚಂ ಮಾ ॥ ಕಲಿತನಮುಂ ವಿಟತ್ವಮುಮನುಳ್ಳವನಾದಿಯೊಳೊರ್ವ್ವನುರ್ವ್ವಿಯೊಳ್
ಕಲಿವಿಟನೆಂಬನಾತನ ಜಿನಾಲಯಮಂ ನೆಜೆ ಜೀರ್ಣ್ನಮಾದುದಂ
ಕಲಿಸಲೆ ದಾನದೊಳರಮ ಸೌಖ್ಯರಮಾರತಿಯೊಳ್ವಿಟಂ ವಿ
ನಿಶ್ಚಲಮೆನಿಸಿರ್ದ್ದ ಹುಳ್ಳನದನೆತ್ತಿಸಿದಂ ರಜತಾದ್ರಿತುಂಗಮಂ ॥ 503 ॥

ಕಂ ॥ ಹುಳ್ಳಚಮೂಪನ ಗುಣಗಣ
ಮುಳ್ಳನಿತುಮನಾರೊ ನೆಜೆಯೆ ಪೊಗಟಲ್ ನೆಜೆವರ್
ಬಳ್ಳದೊಳಳೆದುದಧಿಯ ಜಳ
ಮುಳ್ಳನಿತುಮನಾರೊ ಪವಣಿಸಲ್ ನೆಜೆವನ್ನರ್ ॥ 504 ॥

ಉ ಮಾ ॥ ಸಂಶ್ರಿತಸದ್ಗುಣಂ ಸಕಳಭವ್ಯನುತಂ ಜಿನಭಾಷಿತಾರ್ತ್ಥ ನಿ
ಸ್ಸಂಶಯಬುದ್ಧಿ ಹುಳ್ಳಪೃಥನಾಪತಿ ಕೈರವಕುನ್ದ ಹಂಸಶು
ಭ್ರಾಂಶು ಯಶಂ ಜಗನ್ನುತದೊಳೀ ವರ ಬೆಳ್ಗುಳತೀರ್ತ್ಥದೊಳ್ ಚತು
ರ್ವ್ವಿಂಶತಿತೀರ್ತ್ಥಕೃನ್ನಿಳಯಮಂ ನೆಜೆ ಮಾಡಿಸಿದಂ ದಲಿನ್ತಿದಂ ॥ 505 ॥

ಕಂ ॥ ಗೊಮ್ಮಟಪುರ ಭೂಷಣಮಿದು
ಗೊಮ್ಮಟಮಾಯ್ತೆನೆ ಸಮಸ್ತಪರಿಕರಸಹಿತಂ
ಸಮ್ಮದದಿಂ ಹುಳ್ಳಚಮೂ
ಪಮ್ಮಾಡಿಸಿದಂ ಜಿನೋತ್ತಮಾಳಯಮನಿದಂ ॥ 506 ॥

ಮ ಸ್ರ ॥ ಪರಿಸೂತ್ರಂ ನೃತ್ಯಗೇಹಂ ಪ್ರವಿಪುಳವಿಳಸತ್ಕ ದೇಶಸ್ಥಶೈಳ
ಸ್ಥಿರಜೈನಾವಾಸಯುಗ್ಮಂ ವಿವಿಧಸುವಿಧ ಪತ್ರೋಲ್ಲಸದ್ಭಾವ ರೂಪೋ

ತ್ಕರ ರಾಜದ್ವಾರಹರ್ಮ್ಯಂ ಬೆರಸತುಳ ಚತುರ್ವ್ವಿಂಶತೀರ್ತ್ಥೇಶ ಗೇಹಂ
ಪರಿಪೂರ್ಣ್ಣಂ ಪುಣ್ಯಪುಂಜಪ್ರತಿಮಮೆಸೆದುದೀಯಂದದಿಂ ಹುಳ್ಳನಿಂದಂ
॥ 507 ॥

ನಯಕೀರ್ತಿ ವ್ರತಿ

ಚಂ ಮಾ ॥ ಭಯಮೋಹದ್ವಯದೂರನಂ ಮದನಘೋರಧ್ವಾನ್ತ ತೀವ್ರಾಂಶುವಂ
ನಯನಿಕ್ಷೇಪಯುತಪ್ರಮಾಣ ಪರಿನಿರ್ಣ್ಣೀತಾರ್ತ್ಥಸನ್ದೋಹನಂ
ನಯನಾನಂದನ ಶಾನ್ತಕಾನ್ತತನುವಂ ಸಿದ್ಧಾನ್ತಚಕ್ರೇಶನಂ
ನಯಕೀರ್ತ್ತಿಬ್ರತಿರಾಜನಂ ನೆನೆದೊಡಂ ಪಾಪೋತ್ಕರಂ ಪಿಂಗುಗುಂ ॥ 508 ॥

100) ಶ್ರವಣಬೆಳಗೊಳ 477, E.C. II (R), ಕ್ರಿ.ಶ. ಸು. 1159

ಇದರಲ್ಲಿ ಹೊಯ್ಸಳ ರಾಜನಾದ ಮೊದಲನೆಯ ನರಸಿಂಹನ ಮಂತ್ರಿ ಹುಳ್ಳನು ಭಾನುಕೀರ್ತಿವ್ರತಿಗೆ ಸವಣೇರು ಎಂಬ ಗ್ರಾಮವನ್ನು ದತ್ತಿ ಕೊಟ್ಟಂತೆ ಹೇಳಿದೆ.

ಹುಳ್ಳನ ಹೆಂಡತಿ ಪದ್ಮಾವತಿ

ಮ ವಿ ॥ ಕಮನೀಯಾನನಹೇಮತಾಮರಸದಿಂ ನೇತ್ರಾಸಿತಾಂಭೋಜದಿಂ
ದಮಳಾಂಗದ್ಯುತಿಕಾಂತಿಯಿಂ ಕುಚರಥಾಂಗದ್ವಂದ್ವದಿಂ ಶ್ರೀನಿವಾ
ಸಮೆನಲ್ ಪದ್ಮಲದೇವಿ ರಾಜಿಸುತುಮಿರ್ಪಳ್ ಹುಳ್ಳರಾಜಾಂತರಂ
ಗಮರಾಳಂ ರಮಿಯಿಪ್ಪ ಪದ್ಮಿನಿಯವೋಲ್ ನಿತ್ಯಪ್ರಸಾದಾಸ್ಪದಂ ॥ 509 ॥

ಮ ವಿ ॥ ಚಲಭಾವಂ ನಯನಕ್ಕೆ ಕಾರ್ಶ್ಯಮುದರಕ್ಕತ್ಯಂತರಾಗಂ ಪದೌ
ಷ್ಠಲಸತ್ಪಾಣಿತಳಕ್ಕೆ ಕರ್ಕಶತೆ ವಕ್ಷೋಜಕ್ಕೆ ಕಾರ್ಷ್ಣ್ಯಂ ಕಚ
ಕ್ಕಲಸತ್ವಂ ಗತಿಗಲ್ಲದಿಲ್ಲ ಹೃದಯಕ್ಕೆಂದಂದು ಪದ್ಮಾವತೀ
ಲಲನಾರತ್ನದ ರೂಪಶೀಲಗುಣಮಂ ಪೋಲ್ವನ್ನರಾರ್ ಕಾಂತೆಯರ್
॥ 510 ॥

ಭಾನುಕೀರ್ತಿವ್ರತಿ

ಮ ಸ್ರ ॥ ಉರಗೇಂದ್ರಕ್ಷೀರ ನೀರಾಕರ ರಜತಗಿರಿಶ್ರೀ ಸಿತಚ್ಛತ್ರ ಗಂಗಾ
ಹರಹಾಸ್ಯೈರಾವತೇಭ ಸಟಿಕ ವೃಷಭಶುಭ್ರಾಭ್ರನೀಹಾರ ಹಾರಾ
ಮರರಾಜಶ್ವೇತ ಪಂಕೇರುಹ ಹಳಧರವಾಕ್ಕಂಖ ಹಂಸೇಂದುಕುಂದೋ
ತ್ಕರ ಚಂಚತ್ಕೀರ್ತ್ತಿಕಾಂತಂ ಬುಧಜನವಿನುತಂ ಭಾನುಕೀರ್ತ್ತಿವ್ರತೀಂದ್ರಂ
॥ 511 ॥

101) ಬಿದರೆ 76, E.C. X (R), ಕ್ರಿಶ. 1165

ಇದರಲ್ಲಿ ಹೊಯ್ಸಳ ದೊರೆ ಎರಡನೆಯ ನರಸಿಂಹನ ಆಳಿಕೆಯಲ್ಲಿ ಅಂಗರಕ್ಷಕನಾಗಿದ್ದ

ಬೆಳ್ಳಪ್ಪಯ್ಯನಾಯಕನು ನೀರುಗುಂದನಾಡ ಕಗ್ಗನಬಿದಿರೆಯಲ್ಲಿ ಕಲಿದೇವರ ದೇಗುಲವನ್ನು ಮಾಡಿಸಿ, ದೇವರ ಸೇವೆಗೆ ದತ್ತಿ ನೀಡಿದುದನ್ನು ಹೇಳಿದೆ.

ಕಲಿದೇವ ದೇವಾಲಯ

ಚಂ ಮಾ ॥ ಇದು ರಜತಾದ್ರಿಯಿಂದೆ ಧರೆಗೇನಿಳಿತಂದುದೊ ನೋಡೆ ಕಾಂಚಶೈ
ಳದಿನೊಗೆತಂದು ಬಂದೆಸೆದುನಿಂದುದೊ ಪೇಳೆನುತುಂ ಧರಿತ್ರಿಗಿಂ
ನ್ತಿದು ಕರಚೋದ್ಯವೆಂದು ಜನ ಬಣ್ಣಿಸುತಂತಿರಲೊಪ್ಪಿತೋರ್ಕ್ಕುವೀ
ಬಿದಿರೆಯ ದೇವದೇವ ಕಲಿದೇವರ ದೇಗುಲಮೇಂ ವಿಚಿತ್ರಮೋ ॥ **512** ॥

ಹೊಯ್ಸಳ ವಂಶ

ಸ್ರಗ್ಧರೆ ॥ ಶ್ರೀನಾರೀಜನ್ಮಗೇಹಂ ಭುವನವಿನುತ ವುದ್ದಾಮ ಸತ್ವ ಪ್ರಯುಕ್ತಂ
ನಾನಾ ರತ್ನ ಪ್ರಕೀರ್ಣಂ ಪರಿಮಿಳಿತ x x ವಾರನಾರೀ ಪ್ರಯೋಗ
ಸ್ಥಾನಂ ವಾರಾಸಿಯಂತಂತಿರೆ ಗಡ ಧರೆಯೊಳ್ ರಾಜಕಾಂನ್ತಿ ಪ್ರವೃದ್ಧಂ
ತಾನಾಗುತ್ತಿರ್ಪುದೇಂ ಕೌತುಕಮೆ ಸತತಮೀ ಹೊಯ್ಸಳೋರ್ವ್ವೀಶವಂಶಂ
॥ **513** ॥

ಕೇತಯನಾಯಕ

ಉ ಮಾ ॥ ಭೂತಳದೊಳ್ ನೆಗರ್ತೆವಡೆದೊಪ್ಪುವ ರಾಯಚಳುಕ್ಯ ಕಟಕದೊಳ
ಗಾತನಕೀರ್ತಿಯುಂ ಚಲದ ಜಾಗದ ಹೆಮ್ಮೆಯನೊರ್ಮ್ಮೆಗೊರ್ಮ್ಮೆಯಿಂ
ತೀ ತೆರದಿಂ ಜನಂ ಪೊಗಳುತಿಪ್ಪ ಸದಾಸತೆಯಂಗರಕ್ಕದೊಳ್
ಕೇತಯನಾಯಕಂ ಪಡೆದ ಪುಣ್ಯಮನಂತಮಿದೇಂ ಕೃತಾರ್ತ್ಥನೋ ॥ **514** ॥

ಜಾಕಣವ್ವೆಯ ಮಗ ಬೆಳ್ಳಪ

ಕಂ ॥ ಬಡವರು ಚಿಂತಾಮಣಿಯಂ
ಪಡೆದಂತಿರೆ ದಾಸನೀಶನ ಕಯ್ಯೊಳ್
ಪಡೆದಾ ತವನಿಧಿಯಂತಿರೆ
ಪಡೆದಳ್ ತಾಂ ಚಾಕಣವ್ವೆ ಬೆಳ್ಳಪ ಸುತನಂ ॥ **515** ॥

ಚಂ ಮಾ ॥ ಇದು ಮದನಾರಿಗಂ ಸುರಗಣಾಂಬಿಕೆಗಂದು ವಿವಾಹಕಾಲದೊಳ್
ಮುದದಿ ಸುರರ್ಕ್ಕಳಿಂದ್ರಸಹಿತಂ ನೆರೆದರ್ತ್ತಿಯಿ ವಿಶ್ವಕರ್ಮ್ಮ ನೆ
ಮ್ಮದಿ ನೆಜೆಮಾಡಲಂತೆಸೆವ ಸೋಭನ ಮಂಟಪದಂತಿರೊಪ್ಪುವೀ
ಬಿದರೆಯೊಳೀಶ್ವರಾಲಯಮನೆತ್ತಿಸಿ ಬೆಳ್ಳಪನೇಂ ಕೃತಾರ್ತ್ಥನೋ ॥ **516** ॥

ಕಂ ॥ ನಡೆಗಲ್ತು ದೇವತಾಲಯ
ಕ್ಕೆಡೆಯಾಡಿಯುಂನುಡಿಗಲ್ತುಂ ನಮಶ್ಶಿವಾಯವೆಂಬೀನುಡಿಯಂ ?
ಪಡೆದಾತಂ ಧರ್ಮಾರ್ಜ್ಜಿತ
ಮೃಡ ಭಕ್ತ ಕೃತಾರ್ತ್ಥನಪ್ಪುದೊಂದಚ್ಚರಿಯೇ ॥ 517 ॥

ಮಲ್ಲೆಯನಾಯಕ, ಕೇತಯನಾಯಕ

ಉ ಮಾ ॥ ಇಲ್ಲದರ್ಗ್ಗೆಲ್ಲವೀವ ಮಱೆವೊಕ್ಕರೆ ತಪ್ಪದೆ ಕಾವ ಯುದ್ಧದೊಳ್
ಬಲ್ಲಿದರಪ್ಪರಂ ಮುರಿದು ಮೂಳೆಯ ಮಸುಳ್ಗುಣಸಾಗಲಿರ್ವರಂ ?
ಮಲ್ಲೆಯನಾಯ್ಕನಿಂ ಕಿಱಿಯ ಕೇತಯನಾಯಕರೆಂಬ ವೀರರಂ
ಹೊಲ್ಲವೆನಾಯಕಿತ್ತಿ ಪಡೆದಳ್ ಕುಲದೀಪಕರಂ ಸುಪುತ್ರರಂ ॥ 518 ॥

ಗೌರಲದೇವಿ

ಕಂ ॥ ಬಡವರ್ಗೆ ಕಲ್ಪವೃಕ್ಷಮ
ನೆಡಱಡಸಿದವರ್ಗ್ಗೆ ರತ್ನದಾಗರವಂ ತಾಂ
ಪಡೆದೀವ ತೆಱದೆ ಚಿಂಗಯ್ವೆ
ಪಡೆದಳ್ತಂತ್ರರತ್ನಮೆನಿಪ ಗೌರಲಸುತೆಯಂ ॥ 519 ॥

102) ಬೆಕ್ಕ 565, E.C. II (R), ಕ್ರಿ.ಶ. 1173

ಇದರಲ್ಲಿ ಹೊಯ್ಸಳ ದೊರೆಯಾದ ಎರಡನೆಯ ಬಲ್ಲಾಳನು ನಯಕೀರ್ತಿ ಸಿದ್ಧಾಂತ ಚಕ್ರವರ್ತಿಗೆ ಬೆಕ್ಕ ಎಂಬ ಗ್ರಾಮವನ್ನು ದತ್ತಿ ಕೊಟ್ಟಂತೆ ಹೇಳಿದೆ.

ಹೊಯ್ಸಳವಂಶ

ಸ್ರಗ್ಧರೆ ॥ ಶ್ರೀಕಾಂತಾಪೀನವಕ್ಷೋರುಹಗಿರಿಶಿಖರೋಜ್ಜೃಂಭಮಾಣಂ ವಿಶಾಳಂ
ಲೋಕೋದ್ಯತ್ತಾಪಲೋಪಪ್ರವಣವಿಳಸಿತಂ ವೀರವಿದ್ವಿಣ್ಮಹೀಪಾ
ನೇಕವ್ಯಾಮುಕ್ತಸಂಜೀವನಬಹಳಿತಮುದ್ಯದ್ಗುಣಸ್ತೋಮಮುಕ್ತಾ
ನೀಕಂ ನಿಷ್ಕಂಟಕಂ ನಿಶ್ಚಳಮೆನಲೆಸೆಗುಂ ಹೊಯ್ಸಳಕ್ಷತ್ರವಂಶಂ ॥ 520 ॥

ವಿನಯಾದಿತ್ಯ

ಮ ವಿ ॥ ಅದಱೊಳ್ ಮೌಕ್ತಿಕದಂತೆ ಪುಟ್ಟದನಿಳಾಪಾಳೌಘಚೂಡಾಮಣಿ
ತ್ವದಿನುದ್ಯದ್ಗುಣಶೋಭೆಯಿಂ ಸ್ವರುಚಿಯಿಂ ಸದ್ವೃತ್ತರಾರಾಜಿತ
ತ್ವದಿನತ್ಯುನ್ನತಜಾತಿಯಿಂ ಸಮವೆನಲ್ ಸಂಗ್ರಾಮರಂಗಾಗ್ರದೊಳ್
ಮದವದ್ವೈರಿಕುಳಪ್ರತಾಪಿ ವಿನಯಾದಿತ್ಯಂ ಧರಾಧೀಶ್ವರಂ ॥ 521 ॥

ಬಲ್ಲಾಳ II

ಮ ವಿ ॥ ಲಲನಾಲೀಲೆಗೆ ಮುಂನವೆಸ್ತು ಮದನಂ ಪುಟ್ಟಿರ್ದ್ದನಾವಿಷ್ಣುಗಂ
ವಿಲಸಚ್ಛ್ರೀವಧುವಿಂಗವಂತೆ ನರಸಿಂಹಕ್ಷೋಣಿಪಾಳಂಗವೇ
ಚಲದೇವಿಪ್ರಿಯೆಗಂ ಪರಾರ್ತ್ಥಚರಿತಂ ಪುಣ್ಯಾಧಿಕಂ ಪುಟ್ಟಿದಂ
ಬಲವದ್ವೈರಿಕುಳಾಂತಕಂ ಜಯಭುಜಂ ಬಲ್ಲಾಳಭೂಪಾಳಕಂ ॥ 522 ॥

ಮ ಸ್ರ ॥ ರಿಪುರಾಜದ್ರಾಜಸಂಪತ್ಸರಸಿರುಹಶರತ್ಕಾಲಸಂಪೂರ್ಣಚಂದ್ರಂ
ರಿಪುಭೂಪಾಳಪ್ರದೀಪಪ್ರಕರಪಟುತರೋದ್ಧೂತಭೂರಿಪ್ರವಾತಂ
ರಿಪುರಾಜನ್ಯೌಘಸೇನಾಜಳಧಿಕಬಳನೌರ್ವಾನಳೋಗ್ರಪ್ರತಾಪಂ
ರಿಪುಪೃಥ್ವೀಪಾಳಜಾಳಕ್ಷುಭಿತಯಮನಿವಂ ವೀರಬಲ್ಲಾಳದೇವಂ ॥ 523 ॥

ಮ ಸ್ರ ॥
ಗತಲಾಳಂ ಲಾಳನಾಳಂಚಿತ ಬಹಳಭಯೋಗ್ರಜ್ವರಂ ಗೂರ್ಜ್ಜರಂಸಂ
ಧೃತಶೂಳಂ ಗೌಳನಂಗೀಕೃತ ಕೃಶತರಸಂಪಲ್ಲವಂ ಪಲ್ಲವಂ ಪ್ರೋ
ಜ್ಝಿತಚೋಳಂ ಚೋಳನಾದಂ ಕದನವದನದೊಳ್ ಭೇರಿಯಂ ಪೊಯ್ಸೆ ವೀರಾ
ಹಿತಭೂಭೃಜ್ಜಾಳ ಕಾಳಾನಳವತುಳಭುಜಂ ವೀರಬಲ್ಲಾಳದೇವಂ ॥ 524 ॥

ನರಸಿಂಹ I

ಕಂ ॥ ವಿನುತನಯಕೀರ್ತ್ತಿ ಮುನಿಪದ
ವನರುಹಭೃಂಗಂ ವಿದಗ್ಧವನಿತಾನಂಗಂ
ಕನಕಾಚಳಗುಣತುಂಗಂ
ಘನವೈರಿಮದೇಭಸಿಂಹನೀ ನರಸಿಂಹಂ ॥ 525 ॥

ನಯಕೀರ್ತಿದೇವ

ಮ ವಿ ॥ ಸ್ಮರಶಸ್ತ್ರಾಂಬುಜದಂಡ ಚಂಡಮದವೇತಂಡಂ ದಯಾಸಿಂಧು ಬಂ
ಧುರ ಭೂಭೃದ್ವರನುದ್ಘ ಮೋಹ ಬಹಳಾಂಭೋರಾಶಿ ಕುಂಭೋದ್ಭವಂ
ಧರೆಯೊಳ್ತಾಂ ನೆಗಳ್ದಂ ಭಯಕ್ಷಯಕರಂ ಲೋಭಾರಿಶೋಭಾ ಹರಂ
ಸ್ಥಿರನೀ ಶ್ರೀ ನಯಕೀರ್ತ್ತಿದೇವ ಮುನಿಪಂ ಸಿದ್ಧಾನ್ತಚಕ್ರೇಶ್ವರಂ ॥ 526 ॥

ಭಾನುಕೀರ್ತಿವ್ರತಿ

ಮ ಸ್ರ ॥ ಉರಗೇಂದ್ರ ಕ್ಷೀರನೀರಾಕರ ರಜತಗಿರಿ ಶ್ರೀ ಸಿತಚ್ಛತ್ರ ಗಂಗಾ
ಹರಹಾಸೈರಾವತೇಭ ಸ್ಫಟಿಕ ವೃಷಭ ಶುಭ್ರಾಭ್ರನೀಹಾರಹಾರಾ

ಮರರಾಜ ಶ್ವೇತಪಂಕೇರುಹ ಹಳಧರವಾಕ್ತಂಖಹಂಸೇಂದುಕುಂದೋ
ತ್ಕರ ಚಂಚತ್ಕೀರ್ತಿಕಾಂತಂ ಬುಧಜನವಿನುತಂ ಭಾನುಕೀರ್ತಿವ್ರತೀಂದ್ರಂ
|| 527 ||

103) ಬಳಗಟ್ಟೆ 75, E.C. II (R), ಕ್ರಿಶ. 1178

ಇದರಲ್ಲಿ ಹೊಯ್ಸಳ ದೊರೆಯಾದ ಎರಡನೆಯ ಬಲ್ಲಾಳನ ಆಳಿಕೆಯಲ್ಲಿ ಸೂಜಿಯ ಮಾದೆಯನಾಯಕನು ಬಳ್ಳಿಗಟ್ಟದಲ್ಲಿ ಕುಸುಮೇಶ್ವರ ದೇವಸ್ಥಾನವನ್ನು ಕಟ್ಟಿಸಿ ಭೂಮಿಯನ್ನು ದತ್ತಿ ಬಿಟ್ಟಂತೆ ಹೇಳಿದೆ.

ಹೊಯ್ಸಳವಂಶ

ಕಂ || ಕೆಳರ್ದ್ದು ಪುಲಿಪಾಯಲಿರೆ ಹೊ
ಯ್ಸಳೆಯನೆ ಮುನಿ ಕಂಡು ಪೊಯ್ಸಳೆಯಲದಂ ಹೊ
ಯ್ಸಳನಾದಂ ಸಳನುಂ ಹೊ
ಯ್ಸಳವೆಸರಾದತ್ತು ಯಾದವರ್ಗ್ಗಂದಿಂದಂ || 528 ||

ಕಂ || ಧ್ವಜಪಟದೊಳ್ ರಿಪುಭೂಭೃ
ದ್ಧ್ವಜಧುರದೊಳ್ ಹೊಂನೊಳಲ್ತೆ ಪುಲಿಯುಂ ಸೆಳೆಯುಂ
ನಿಜಲಾಂಛನಮಾದುದು ರಿಪು
ವಿಜಯಿನಾ ಹೊಯ್ಸಳಕ್ಷಿತೀಶನಿಂದಿತ್ತಲ್ || 529 ||

ಸ್ರಗ್ಧರೆ || ಶ್ರೀನಾರೀಜನ್ಮಗೇಹಂ ಭುವನವಿನುತಮುದ್ದಾಮಸತ್ವಪ್ರಯುಕ್ತಂ
ನಾನಾರತ್ನಪ್ರಕೀರ್ಣಂ ಪರಿಮಿಳಿತವರಾನಂತಭೋಗಪ್ರಯೋಗ
ಸ್ಥಾನಂ ವಾರಾಶಿಯೆಂತಂತಿರೆ ಧರೆಯೊಳ್ ರಾಜಕಾಂತಿಪ್ರವೃದ್ಧಂ
ತಾನಾಗುತ್ತಿರ್ಪುದೇಂ ಕೌತುಕಮೆ ಸತತಮೀ ಪೊಯ್ಸಳೋರ್ವೀಶವಂಶಂ
|| 530 ||

ಬಲ್ಲಾಳ II

ಮ ವಿ || ನೆಱೆ ಮೂಲೋಕಮುಮೆಯ್ದದೆಯ್ದೆ ಬಳಸಲ್ ಪಕ್ಷೀಶನುಂ ಲಂಘಿಸಲ್
ನೆಱೆಯಂ ಕೂಟತಟಕ್ಕೆನಿಪ್ಪತುಳಭಾಸ್ವದ್ದುರ್ಗಮಂ ಪಾಂಡ್ಯನ
ಟ್ಟಱಿನುಚ್ಚಂಗಿಯ ಬೆಟ್ಟನಶ್ರಮದಿನಾಟಂದಣ್ಣೆಕಲ್ಲಾಡಿದಂ
ತಿಱಿಕಲ್ಲಾಡಿದನೇನತಿಪ್ರಬಳನೋ ಬಲ್ಲಾಳಭೂವಲ್ಲಭಂ || 531 ||

ಕೇತನಾಯಕ

ಚಂ ಮಾ || ಅಣಕವಿದೇಂ ನಲಂ ಮೊಳಗಿತಾಂ ಮೊಳಗೋವನೆ ಹಟ್ಟಗಾಱರಂ
ಕೇತನಾಯಕನ ಪಿರಾಜಿಪಡ್ಡಣದ ಬಲ್ಮೊಳಗಂ ನೆಱೆ ಕೇಳ್ದು ಬೆಚ್ಚಿ ತೆಂ

ಕಣದೆಸೆಯಿಂ ದಯಮಮಂ ತೊಱೆವಾಯ್ದಿರದೋಡೆ ಪೊಕ್ಕನಾ
ಕ್ಷಣದೊಳೆ ವಿಷ್ಣುವರ್ಧನನೃಪಂ ಬಳಿಕಂ ತಳಕಾಡಕೋಟೆಯಂ ॥ 532 ॥

ಸೂಜಿಯ ಸೋಮ

ಚಂ ಮಾ ॥ ತೊಡರ್ವರ ಮಾರಿ ಮೀಱುವರ ಮಿಟ್ಟುಱದಿರ್ಪರ ಬಮ್ಮರಕ್ಕಸಂ
ಪೊಡರ್ವರತಂಕಂ ಮಲೆದು ಸೈರಿಸದಿರ್ಪರ ಶೂಲಮೆಂಬ ಚೆ
ಲ್ವೊಡರಿಸುವಂಕಮಾಲೆಗಳೊಳೊಂದಿರೆ ದಿಗ್ವನಿತಾಳಿಯಟ್ಟಱಿಂ
ಗಡಣದೆ ಪಾಡುಗುಂ ನೆಗಟ್ದಿ ಸೂಜಿಯ ಸೋಮನನಾಜಿಭೀಮನಂ ॥ 533 ॥

ಉ ಮಾ ॥ ಅನ್ತು ಮಹತ್ವಮಂ ತಳೆದ ಸೂಜಿಯ ಕೇತಯನಾಯಕಂಗೆ ವಿ
ಕ್ರಾನ್ತಧನಂಗೆ ಪುಣ್ಯನಿಧಿ ಸೂಜಿಯ ಸೋಮಯನಾಯಕಂ ಜಗತ್
ಕನ್ತು ಸಮಂತು ತಂಮನೆನೆ ಪೆಂಪೆಸೆದಂ ಮರುದಾತ್ಮಜಂಗೆ ತಾ
ನೆನ್ತು ಧನಂಜಯಂ ಮುಸಲಿಗೆನ್ತು ಸರೋರುಹನೇತ್ರನಂತೆವೊಲ್ ॥ 534 ॥

ಅರಸವ್ವೆ ನಾಯಕಿತಿ

ಚಂ ಮಾ ॥ ಕುಲವತಿಯೆಂದು ಸತ್ಯವತಿಯೆಂದು ಯಶಸ್ವತಿಯೆಂದು ದಾನಸಂ
ಕುಲವತಿಯೆಂದು ಪುಂಣ್ಯವತಿಯೆಂದು ದಯಾವತಿಯೆಂದು ವಿಶ್ವ x
x x x ಸವ್ವೆಯಂ ನೆಗಳ್ದ ಸೂಜಿಯ ಸೋಮನ ಚಿತ್ತಕಾನ್ತೆಯಂ
ಸಲೆನಿಲೆ ಬಣ್ಣಿಕುಂ ಲಲಿತಗಾತ್ರೆಯನಂಬುಜಪತ್ರನೇತ್ರೆಯಂ ॥ 535 ॥

ಸೂಜಿಯ ಮಾದ

ಕಂ ॥ ಸೇಣಿಗೆ ಮಲೆವರ ಗಂಡಂ
ಸೇಣಿಯನುಱದುಂತೆ ಹಿಂತೆ ಹಱಿವರ ಗಂಡಂ
ಸೇಣಿಗೆ ಕೂರ್ಪರ ನಂಟಂ
ಸೇಣಿಗೆ ಸನ್ನಾಹನಲ್ತೆ ನಾಯಕಮಾದಂ ॥ 536 ॥

ಉ ಮಾ ॥ ಯಾದವಭೂಮಿಪಾಳವರನುತ್ತರದಿಗ್ವಿಜಯಕ್ಕೆ ಪೋಗಿ ಮುಂ
ತಾದರಿವೀರರೊಡ್ಡುಗಳನೀಕ್ಷಿಸಿ ಕೋಪದೆ ಪೇಳ್ವುದುಂ ರಣಾ
ಹ್ಲಾದದಿನಾಡೆ ವಂದಣಿಡಿಮಾಡಿದ ಮಾಳ್ಕೆಯ ಪಟ್ಟಗಾಜಿರಾ
ಮಾದೆಯನಾಯಕಂ ವಿಜಯಪಾಂಡ್ಯನಸೇನೆಯನೊಕ್ಕಲಿಕ್ಕಿದಂ ॥ 537 ॥

ಅರಸಿಯಕ್ಕ

ಚಂ ಮಾ ॥ ರತಿ ಮದನಂಗೆ ರೋಹಿಣಿ ಹಿಮಾಂಶುಗೆ ಸೀತೆ ರಘೂದ್ವಹಂಗೆ ಭಾ
ರತಿ ಕಮಳಾಸನಂಗೆ ಶಚಿ ವಜ್ರಿಗೆ ಲಕ್ಷ್ಮಿ ಚತುರ್ಭುಜಂಗೆ ವಿ
ಶ್ರುತಸತಿಯಾದವೋಲ್ನೆಗಳ್ದ ಸೂಜಿಯ ಮಾದೆಯನಾಯಕಂಗದೇಂ
ಸತಿಯೆನಿಸಿರ್ದ್ದಳೋ ಅರಸಿಯಕ್ಕನನೂನ ಗುಣಕ್ಕೆ ಭಾಜನಂ ॥ 538 ॥

ಕುಸುಮೇಶ್ವರ ದೇವಸ್ಥಾನ

ಕಂ ॥ ವಸುಧಾದೇವಿಯ ಮಕುಟವೊ
ಪೊಸತೊಂದಿಂದ್ರನ ವಿಮಾನಮಿಳಿದುದೊ ದಿವದಿಂ
ವಸುಮತಿಗೆಂದೆನೆ ಪಿರಿದುಂ
ಕುಸುಮೇಶ್ವರದೇವತಾಲಯಂ ಕಣ್ಗೆಸೆಗುಂ ॥ 539 ॥

104) ಸಂತೆಶಿವರ 85, E.C. X (R), ಕ್ರಿಶ. ಸು. 1180

ಇದರಲ್ಲಿ ಹೊಯ್ಸಳರ ದೊರೆಯಾದ ಎರಡನೆಯ ಬಲ್ಲಾಳನ ಸಂಧಿವಿಗ್ರಹಿ ನಾರಾಯಣನು ಶಿವಪುರದ ರಂಗನಾಥ ದೇವಾಲಯವನ್ನು ಜೀರ್ಣೋದ್ಧಾರ ಮಾಡಿಸಿ ಭೂಮಿಯನ್ನು ದತ್ತಿ ಬಿಟ್ಟಂತೆ ಹೇಳಿದೆ.

ನರಸಿಂಹ I

ಕಂ ॥ ತತ್ತನಯಂ ರಿಪುಭೂಭೃ
ನ್ಮತ್ತದ್ವಿರದನಘಟಾವಿಪಾಟನಪಟುಲೀ
ಲೋತ್ತಮಕರಾಸಿನಖರನು
ದಾತ್ತಬಲಪ್ರಥಿತಸಿಂಹನಾ ನರಸಿಂಹಂ ॥ 540 ॥

ನಾರಾಯಣ

ಉ ಮಾ ॥ ಶ್ರೀಯುದಯಂ ಪ್ರಭಾವದೆಸಕಂ ಪ್ರಭುಶಕ್ತಿಯಳುರ್ಕೆ ನಿಶ್ಚಳೋ
ಪಾಯದ ಮೈಮೆ ವಾಗ್ವಿಭವದುನ್ನತಿ ಧರ್ಮದ ಪೆರ್ಮೆ ಶೀಲದ
ತ್ಯಾಯತಿ ಕೂಡೆ ನೀರ್ಪುವಡೆದೊಳ್ಪೊಡವೆಂಬಿನಮೊಪ್ಪೆ ಮಂತ್ರಿನಾ
ರಾಯಣನೊಪ್ಪುವಂ ವಿನಯಭೂಷಣನೂರ್ಜಿತಕೀರ್ತಿವಲ್ಲಭಂ ॥ 541 ॥

105) ಬೊಮ್ಮೇನಹಳ್ಳಿ 571, E.C. II (R), ಕ್ರಿಶ. 1181

ಇದರಲ್ಲಿ ಹೊಯ್ಸಳ ದೊರೆಯಾದ ಎರಡನೆಯ ಬಲ್ಲಾಳನ ಮಂತ್ರಿ ಚಂದ್ರಮೌಳಿಯ ಹೆಂಡತಿ ಆಚಲದೇವಿ ಶ್ರವಣಬೆಳ್ಗೊಳದಲ್ಲಿ ಪಾರ್ಶ್ವನಾಥ ಬಸದಿಯನ್ನು ಕಟ್ಟಿಸಿ ದಾನ ಕೊಟ್ಟಂತೆ ಹೇಳಿದೆ.

ಹೊಯ್ಸಳ ವಂಶ

ಸ್ರಗ್ಧರೆ ॥ ಸ್ವಸ್ತಿಶ್ರೀ ಜನ್ಮಗೇಹಂ ನಿಭೃತನಿರುಪಮೋದಾತ್ತ ತೇಜೋಮಹಾವ್ವರ್ಂ
ವಿಸ್ತಾರಾನ್ತಃಕೃತೋರ್ವ್ವೀತಳಮವನತ ಭೂಭೃತ್ಕುಳತ್ರಾಣದಕ್ಷಂ
ವಸ್ತುಬ್ರಾತೋದ್ಭವ ಸ್ಥಾನಕಮಮಳ ಯಶಶ್ಚಂದ್ರ ಸಂಭೂತಿಧಾಮಂ
ಪ್ರಸ್ತುತ್ಯಂ ನಿತ್ಯಮಂಭೋನಿಧಿನಿಭಮೆಸೆಗುಂ ಹೊಯ್ಸಳೋರ್ವ್ವೀಶವಂಶಂ
॥ 542 ॥

ವಿನಯಾದಿತ್ಯ

ಮ ವಿ ॥ ಅದಜೊಳ್ಕೌಸ್ತುಭದೊಂದನರ್ಗ್ಘ್ಯಗುಣಮಂ ದೇವೇಭದುದ್ದಾಮ ಸ
ತ್ವದಗುರ್ವ್ವಂ ಹಿಮರಶ್ಮಿಯುಜ್ವಳ ಕಳಾಸಂಪತ್ತಿಯಂ ಪಾರಿಜಾ
ತದುದಾರತ್ವದ ಪೆಂಪನೊರ್ವ್ವನೆ ನಿತಾನ್ತಂ ತಾಳ್ದಿದನಲ್ತೆ ಪು
ಟ್ಟಿದನುದ್ವೃತ್ತ ತಮೋವಿಭೇದಿ ವಿನಯಾದಿತ್ಯಾವನೀಪಾಳಕಂ ॥ 543 ॥

ಬಲ್ಲಾಳ II

ಕಂ ॥ ಹೆಸರುಚ್ಚಂಗಿಯ ಕೋಟೆಯ
ನಸದೃಶಭುಜಬಳದೆ ಮುನ್ನೆ ಕೊಂಡರಸುಗಳಾರ್
ಅಸಹಾಯಶೂರ ಶನಿವಾ
ರಸಿದ್ಧಿ ಗಿರಿದುರ್ಗಮಲ್ಲ ಬಲ್ಲಾಳನವೋಲ್ ॥ 544 ॥

ಕಂ ॥ ಏಕಾಂಗವೀರಶೂದ್ರಕ
ನಾಕಾರಮನೋಜನರ್ಥಿಸುರತರು ತುರಗಾ
ನೀಕವರವತ್ಸರಾಜನ
ನೇಕಪ ಭಗದತ್ತನಲ್ತೆ ಬಲ್ಲಾಳನೃಪಂ ॥ 545 ॥

ಚಂದ್ರಮೌಳಿ

ಕಂ ॥ ಭರತಾಗಮತರ್ಕವ್ಯಾ
ಕರಣೋಪನಿಷತ್ಪುರಾಣ ನಾಟಕ ಕಾವ್ಯೋ
ತ್ಕರವಿದ್ವಜ್ಜನನುತನೆನೆ
ಸ್ಥಿರಪುಣ್ಯಂ ಚಂದ್ರಮೌಳಿಮಂತ್ರಿಲಲಾಮಂ ॥ 546 ॥

ಮ ವಿ ॥ ನುತಬಲ್ಲಾಳನೃಪಾಳ ದಕ್ಷಿಣಭುಜಾದಂಡಂ ಪಯಃಪೂರಹಾ
ರ ತುಷಾರ ಸ್ಫಟಿಕೇಂದು ಕುಂದಕಮನೀಯೋದ್ಯದ್ಯಶೋವಾರ್ದ್ಧಿ ವೇ
ಷ್ಟಿತದಿಕ್ಚಕ್ರನಪಾರ ಪುಣ್ಯನಿಳಯಂ ನಿಶ್ಶೇಷವಿದ್ವಜ್ಜನ
ಸ್ತುತನಪ್ಪೀವಿಭು ಚಂದ್ರಮೌಳಿ ಸಚಿವಂ ಧನ್ಯಂ ಪೆಱರ್ಧನ್ಯರೇ ॥ 547 ॥

ಬಾಳಚಂದ್ರಮುನಿ

ಕಂ ॥ ಪರಮಾಗಮವಾರಿಧಿ ಹಿಮ
ಕಿರಣಂ ರಾದ್ಧಾನ್ತಚಕ್ರಿ ನಯಕೀರ್ತ್ತಿಯಮೀ
ಶ್ವರಶಿಷ್ಯನಮಳ ನಿಜಚಿ
ತ್ವರಿಣತನಧ್ಯಾತ್ಮಿ ಬಾಳಚಂದ್ರ ಮುನೀಂದ್ರಂ ॥ 548 ॥

106) ಚೆನ್ನರಾಯಪಟ್ಟಣ 9, E.C. II (R), ಕ್ರಿಶ. 1181

ಇದರಲ್ಲಿ ಹೊಯ್ಸಳ ದೊರೆ ಎರಡನೆಯ ಬಲ್ಲಾಳನ ಮಂತ್ರಿ ಮಾಚಿರಾಜನ ಪತ್ನಿ ಶಾಂತಲದೇವಿಯು ಕೊಳತ್ತೂರಿನಲ್ಲಿ ಶಾಂತೇಶ್ವರ ದೇವರ ಪ್ರತಿಷ್ಠಾಪನೆಯನ್ನು ಮಾಡಿಸಿ, ಶಾಂತಸಮುದ್ರ ಕೆರೆಯನ್ನು ಕಟ್ಟಿಸಿ ದತ್ತಿ ನೀಡಿದುದನ್ನು ಹೇಳಿದೆ.

ಶಿವಸ್ತುತಿ

ಶಾ ವಿ ॥ ಶ್ರೀಗಂಗಾಜಳ ಪಾತನೋನ್ನತಜಟಾಜೂಟಂ ಕುಭೃಜ್ಜಾಕುಚಾ
ಭೋಗೋದ್ಘೃಷ್ಟ ವಿಶಾಳವಕ್ಷನಮೃತೇಶಂ ವಿಶ್ವವಿಶ್ವಂಭರಾ
ಭಾಗಬ್ಯಪ್ತ ಯಶೋವಿಳಾಸಿ ಶಶಿಚೂಡಂ ಮಾಚಿರಾಜಂಗಮೊ
ಲ್ದೀಗೀ ಶಾಂತಲದೇವಿಗಂ ಶುಭಮನಾಚಂದ್ರಾರ್ಕತಾರಂಬರಂ ॥ 549 ॥

ಮಾಚಿರಾಜ

ಉ ಮಾ ॥ ಶ್ರೀಕರಣಾಗ್ರಗಣ್ಯನುದಿತೋದಿತ ಪುಣ್ಯನಿಳಾವರಂಣ್ಯನಂ
ಗೀಕೃತಸತ್ಯಯಿದ್ಧಗುಣನಿತ್ಯನುದಂಚದಮಾತ್ಯನಂಗಜ
ಪ್ರಾಕೃತಿಯುತ್ತಮಪ್ರಕೃತಿ ರಕ್ಷಿತ ಸತ್ಕೃತಿ ಮಾಚಿರಾಜನಾ
ಶಾಕಳಿತೋಮತೇಜನಖಿಳೋನ್ನತ ಮಾರತನೂಜನೊಪ್ಪುವಂ ॥ 550 ॥

107) ಅತ್ತಿಹಳ್ಳಿ 133, E.C. II (R), ಕ್ರಿಶ. 1183

ಇದರಲ್ಲಿ ಹೊಯ್ಸಳ ದೊರೆ ಎರಡನೆಯ ಬಲ್ಲಾಳನ ರಾಣಿ ಬೊಮ್ಮಲದೇವಿಯ ತಾಯಿ ಸೋಮವ್ವೆಯು ಅತ್ತಿಹಳ್ಳಿಯಲ್ಲಿ ಅಮೃತೇಶ್ವರ ದೇವಾಲಯವನ್ನು ನಿರ್ಮಿಸಿ ಭೂಮಿ ದತ್ತಿಯನ್ನು ನೀಡಿದುದನ್ನು ಹೇಳಿದೆ.

ಬೊಮ್ಮಲದೇವಿ

ಕಂ ॥ ಆ ನೆಗಳ್ದ ವೀರನೃಪನ ಮ
ನೋನಯನಪ್ರಿಯೆ ಚಳಾಳನೀಳಾಳಕಚಂ
ದ್ರಾನನೆ ಕಾಮನರತಿಯ
ಲ್ತಾನೆಣೆತೊಣೆ ಸರಿಸಮಾನೆ ಬಮ್ಮಲದೇವೀ ॥ 551 ॥

ಕಂ ॥ ಬಮ್ಮಲದೇವಿಯ ಗುಣಮಂ
ಬಮ್ಮಲದೇವಿಯ ಸಮಸ್ತ ದಾನೋನ್ನತಿಯಂ
ಬಮ್ಮಲದೇವಿಯರಾ ಶೀ
ಲಮಚಿಂತ್ಯಂ ಭುವನೈಕದಾನಚಿಂತಾಮಣಿಯಂ ॥ 552 ॥

108) ಆನೆಕೆರೆ 33, E.C. II (R), ಕ್ರಿಶ. 1189

ಇದರಲ್ಲಿ ಹೊಯ್ಸಳ ದೊರೆ ಎರಡನೆಯ ಬಲ್ಲಾಳನ ಆಳಿಕೆಯಲ್ಲಿ ಆನೆಗಸಕೆರೆ ಅಥವಾ ಕೇಶವಪುರದ ಮಹಾಜನರಿಗೆ ನೀಡಿದ ದತ್ತಿಯ ವಿವರವಿದೆ. ಇದು ಕನ್ನಡದ ಪ್ರಸಿದ್ಧ ಕವಿ ಜನ್ನ ರಚಿಸಿದ ಶಾಸನ.

ವರಾಹ ಸ್ತುತಿ

ಉ ಮಾ ॥ ಶ್ರೀವಧುವಿಂಗೆ ಪೀಲಿದಱಿಯಿರ್ಪ್ಪವೊಲಿರ್ದ್ದುದು ಕೋಡೊಳಿರ್ದ್ದ ಧಾ
ತ್ರೀವಳಯಂ ಸಮುದ್ರಮದು ಝುಲ್ಲರಿಯಿರ್ಪ್ಪವೊಲಿರ್ದುದಾಂತ ದಂ
ಷ್ಟ್ರಾವರಶೋಭೆ ತೆತ್ತಿಸಿದ ಮುತ್ತಿನಕಾವುವೊಲಿರ್ದುದಿಂತು ಸ
ದ್ಭಾವಮನಾಳ್ದ ಸೂಕರವರಂ ಪೊರೆಗೀ ಗಿರಿದುರ್ಗ್ಗಮಲ್ಲನಂ ॥ 553 ॥

ಹೊಯ್ಸಳ ಲಾಂಛನ

ಕಂ ॥ ಅಲಗಿಂ ಸಿಂಗಮನಿಱಿದನ
ಕಲಿತನಮಂ ನಗುವ ತೆಱದೆ ಮೆಱೆವುದು ಸೆಳೆಯಿಂ
ಪುಲಿವೊಯ್ದ ಕುಱುಪು ಪೊಯ್ಸಳ
ಕುಲತಿಲಕರ ಮತ್ತಗಜದಟಕೆಯದೊಳೀಗಳ್ ॥ 554 ॥

ವಿಷ್ಣುವರ್ಧನ

ಉ ಮಾ ॥ ಮಾಳವ ಚೇರ ಕೇರಳ ನೊಳಂಬ ಕದಂಬ ಕಳಿಂಗ ವಂಗ ಬಂ
ಗಾಳ ವರಾಳ ಚೋಳ ಖಸ ಬರ್ಬ್ಬರ ಬಡ್ಡಹರಾದಿವೈರಿಭೂ
ಪಾಳರ ಮೂಳೆಯಂ ಮುಱಿದಮುಣ್ಣಿಗೆಯೊಳ್ಸೆಱೆಗೆಯ್ದ ವೀರಶಾ
ರ್ದೂಳಮನೊತ್ತಿ ಬಿಟ್ಟಣಕದಗ್ಗದಮೆಯ್ಗಲಿ ವಿಷ್ಣುವರ್ಧನಂ ॥ 555 ॥

ಚಂ ಮಾ ॥ ಶತಮುಖನಳ್ಕೆ ಮಾಡುವಮುಖಂಗಳ ಮೇರುಗಳೆಂದೆ ತಾರಕ
ಪ್ರತತಿಗಳಾರೆಯಲ್ಪುಗೆವ ದೇವಕುಲಂಗಳವಾರ್ದ್ಧಿಗೆತ್ತಹ
ಪ್ಪತಿ ಪೊಲಗೆಟ್ಟುನಿಟ್ಟಿಪ ತಟಾಕಚಯಂಗಳ ಪೆರ್ಮೆಯಿಂದಮೂ
ರ್ಜಿತಮೆನಿಪಗ್ರಹಾರಮವುವಿಷ್ಣುನೃಪಾಳಕನಿತ್ತ ದತ್ತಿಗಳ್ ॥ 556 ॥

ಬಲ್ಲಾಳ II

ಮ ಸ್ರ ॥ ಕದನಪ್ರೋಚಂಡಭೂಮಂಡಳಪತಿಗಳಬೇರ್ವ್ವೇಗ್ಗೆ ಬೆಂನೀರ ಪೊಯ್ಯಾ
ದುದು ಕಾಯ್ಕಿಂ ಬಾಳನೀರ್ಸ್ಸಂಗರಸಮಯದೊಳಿಂತಂತವಷ್ಟಂಭದಿಂ ತೂ
ಗಿದಬಾಳ್ಬಾಳ್ವೊತ್ತು ಬಾಳ್ವುಗ್ಗಡದಬಿರುದರಂ ತೂಗಿ ತುತ್ತಿಟ್ಟುದೇಂ ತಾ
ಳ್ದಿದನೋ ವಿಕ್ರಾಂತಮಂ ಯಾದವಕುಳತಿಳಕಂ ವೀರಬಲ್ಲಾಳ ದೇವಂ
॥ 557 ॥

ಮಾಚಣ ದಣ್ಣಾಯಕ

ಶಾ ವಿ ॥ ಸ್ವಸ್ತಿ ಶ್ರೀಮದಗಣ್ಯ ಪುಣ್ಯಭವನಂ ಶಿಷ್ಟೇಷ್ಟತುಷ್ಟಿಪ್ರಭಾ
ಹಸ್ತಂ ದಕ್ಷಿಣಚಕ್ರವಲ್ಲಭ ಸಭಾರತ್ನಪ್ರದೀಪಂ ಜಗ
ತ್ಪ್ರಸ್ತುತ್ಯಾಕೃತಿ ಮಂತ್ರಿಮಂಡಳಿಕ ದಂಡಾಧೀಶತತ್ತನ್ಮಹಾ
ನಿಸ್ತಾರೈಕಶರಣ್ಯನೂರ್ಜ್ಜಿತ ಯಶೋರಾಮಾಚಣಂ ಮಾಚಣಂ ॥ 558 ॥

ಮ ಸ್ರ ॥ ಸಿರಿಗದ್ಯದ್ಯೌವನಂ ವಾಣಿಗೆ ಸೊಬಗು ಕುಲಶ್ರೀಗೆ ನಿತ್ಯೋತ್ಸವಂ ಸ
ಚ್ಚರಿತಕ್ಕಾಲಂಬನಂ ಸ್ವಾಮಿಗೆ ಬಲದಭುಜಂ ರಾಜ್ಯ ಸಂತುಷ್ಟಿಗಾಯುಂ
ಸಿರಿಗೋತ್ರಕ್ಕೆಯ್ದೆ ಕಣ್ಣಿಂಗತಿಪರಹಿತಮಾರ್ಗಕ್ಕೆ ಜನ್ಮಾಕರಂ ಶ್ರೀ
ಕರಣಪ್ರೌಢಪ್ರಧಾನಂ ಸಕಳಬುಧಮರುದ್ಭೋಜನೀ ಮಾಚಿರಾಜಂ ॥ 559 ॥

ಕಂ ॥ ತ್ರಿಭುವನಕರ್ಣ್ಣಾಭರಣ
ಪ್ರಭದೊಳ್ ಕರ್ಣಾಟಕುಲದೊಳವರಿವರುವರೆಂ
ದುಭಯಕುಲಶುದ್ಧಿಗಾರುಮ
ನಭಿವರ್ಣಿಸವೇಡ ಮಾಚಿರಾಜನ ಸಭೆಯೊಳ್ ॥ 560 ॥

ರುದ್ದಿಮಯ್ಯ

ಮ ವಿ ॥ ತಳೆದಂ ತೇಜಮನದ್ವಿತೀಯ ಮಹಿಮಂ ಚಾಳುಕ್ಕರಾಜ್ಯಾಂಗನಾ
ಪುಳಕಂ ಶ್ರೇಷ್ಠವಶಿಷ್ಠ ಗೋತ್ರ ತಿಳಕಂ ಗೌರೀವಧೂಲೋಚನೋ
ತ್ಪಳಚಂದ್ರಂ ವಿಭು ರುದ್ದಿಮಯ್ಯರಥಿನೀಂದ್ರಂ ತತ್ಸುತಂ ಪೆರ್ಮ್ಮೆ ತಂ
ನೊಳೆ ತಳ್ವೊಯ್ದಿರೆ ರಾಮದೇವನೆಸೆದಂ ಸೌಜನ್ಯ ಸಾರೋದಯಂ ॥ 561 ॥

ಮ ವಿ ॥ ಪುರುಷರ್ಮೂವರೆ ಲೋಕವಂದ್ಯರವರಾರೆಂದಪ್ಪ ಕೇಳಬ್ಜವಿ
ಷ್ಟರನಬ್ಜೋದರನಬ್ಜನೇತ್ರನಿವರೆನ್ತುಂ ಖ್ಯಾತರೇನ್ ಮತ್ತೆ ಕೇಳ್
ಪುರುಷರ್ಮ್ಮೂವರೆ ಮಾಚಿರಾಜನೆಸೆವೀ ನಾರಾಯಣಂ ದಂಡನಾ
ಥರದೇವಂ ವಿಭುರುದ್ರನಿಂ ಪೆಸರಿಸೂಭೂದೇವರೊಳ್ ದೇವರೊಳ್
॥ 562 ॥

ಮಾಚನ ವಂಶ

ಚಂ ಮಾ ॥ ತನಯಸಮೂಹದೊಳ್ಕಿರಿಯ ರಾಮನ ದೇಸಿಗೆ ಸಂದ ಪಿಷ್ಟೆ ಪೆಂ
ಪಿನ ಸಿರಿಪಯ್ಯನುಂನತಿಕೆ ನಾರಣದೇವನ ಮೈಮೆ ಕೇಸಿರಾ
ಜನ ವಿನಯಂ ಮನಂಗೊಳಿಸೆ ಪೂತಕೊಳಕ್ಕೆ ಸಹಸ್ರಶಾಖೆಯಾ
ದನಿಮಿಷ ಭೂರುಹಕ್ಕೆ ದೊರೆಯಾದುದು ಮಾಚನವಂಶವರ್ದ್ಧನಂ
॥ 563 ॥

109) ಕುಂದೂರು 56, E.C. II (R), ಕ್ರಿಶ. 1191

ಇದರಲ್ಲಿ ಹೊಯ್ಸಳ ದೊರೆ ಎರಡನೇ ಬಲ್ಲಾಳನ ಆಳಿಕೆಯಲ್ಲಿ ಪ್ರತಿಹಾರಿ ಚಿಕ್ಕತಮ್ಮನು ಎಲಹಕ್ಕ ಗ್ರಾಮವನ್ನು ಮಹಾಜನರಿಗೆ ದಾನವಾಗಿ ನೀಡಿದ್ದನ್ನು ಹೇಳಿದೆ.

ಬಲ್ಲಾಳ II

ಚಂ ಮಾ ॥ ಪೊಗಳ್ವುದು ಕಳ್ಪವೃಕ್ಷಮೆ ಕವೀಶ್ವರನಾದೊಡೆ ಜಾಗದೇಳ್ಗೆಯುಂ
ಪೊಗಳ್ವುದು ಮೇರುಪರ್ವ್ವತಮೆ ಪಂಡಿತನಾದೊಡೆ ಧೈರ್ಯ್ಯವೃತ್ತಿಯುಂ
ಪೊಗಳ್ವುದು ಸಂದಸಾಗರಮೆ ಸತ್ಕವಿಯಾದೊಡೆ ಗುಣ್ದನಂ ನೆರೆ
ಪೊಗಳ್ಪರಲ್ಲದಂದು ಗುಣಗೌರವಮಂ ಗಿರಿದುರ್ಗ್ಗಮಲ್ಲನಂ ॥ 564 ॥

ಸಾಮಂತ ಮಾರ ಮತ್ತು ಅವನ ತಮ್ಮ ಚಿಕ್ಕತಮ್ಮ

ಮ ವಿ ॥ ಲಲಿನಾಮೋಹನ ಮಾರನೆಂದೆನಿಸುವಾಮಾರಂಗೆ ಲೋಕಾಂಬಿಕಾ
ವಿಳಸದ್ಗರ್ಬ್ಭದೊಳಟ್ಟಿಜಿಂ ಪಡಿಯರಂ ಸಾಮಂತ ಮಾರ ಯಶೋ
ನಿಳಯಂ ಪುಟ್ಟಿದನಂತವಂಗನುಜನಾದಂ ಚಿಕ್ಕತಮ್ಮಂ ಸಮು
ಜ್ವಳ ಸತ್ಕೀರ್ತ್ತಿಸುಧಾಮರೀಚಿ ವಿಮಳೀಭೂತಾವನೀಮಂಡಳಂ ॥ 565 ॥

ಕಂ ॥ ಗುಣಜಳನಿಧಿ ಪುರುಷಾರ್ತ್ಥದ
ಕಣಿ ಮೂರ್ತ್ತಿಮನೋಜನಖಿಳಯಾಚಕಚಿಂತಾ
ಮಣಿ ಸದೃಶಂ ಪ್ರತಿಹಾರಾ
ಗ್ರಣಿ ನೆಗಳ್ದಂ ಚಿಕ್ಕತಮ್ಮನುರ್ವ್ವೀತಳದೊಳ್ ॥ 566 ॥

110) ಜಿನನಾಥಪುರ 532, E.C. II (R), ಕ್ರಿ.ಶ. ಸು. 12ನೇ ಶತಮಾನ

ಇದರಲ್ಲಿ ಹೊಯ್ಸಳರಾಜನಾದ ವಿಷ್ಣುವರ್ಧನನ ಮಂತ್ರಿ ಗಂಗರಾಜನ ಅಣ್ಣನಾದ ಬಮ್ಮನ ಮಗ ಏಚಿರಾಜನು ಸಾಯಲು ಗಂಗರಾಜನ ಮಗ ಬೊಪ್ಪನು ನಿಸಿದಿಗೆಯನ್ನು ನಿಲಿಸಿದಂತೆ ಹೇಳಿದೆ.

ಎರೆಯಂಗ

ಕಂ ॥ ಎಱೆಯಂಗಪೊಯ್ಸಳಂ ತ
ಳ್ತಱೆಯಟ್ಟಿ ವಿರೋಧಿಭೂಪರಂ ಧುರದೆಡೆಯೊಳ್
ತಱಿಸಂದು ಗೆಲ್ದು ವೀರ
ಕ್ಕೆಱೆವಟ್ಟಾಗಿರ್ದು ಸುಖದೆ ರಾಜ್ಯಂಗೆಯ್ದಂ ॥ 567 ॥

ವಿಷ್ಣುವರ್ಧನ

ಕಂ ॥ ಕೊಂಗೇಟುಂ ಮಲೆಯೇಟುಮ
ನಂಗೆಯ್ಗಳವಡಿಸಿ ಲೊಕ್ಕಿಗುಂಡಿವರಂ ದೇ
ಶಂಗಳನಿಟ್ಟುಳಿಗೊಂಡ ನೃ
ಸಿಂಗಂ ಶ್ರೀವಿಷ್ಣುವರ್ಧನೋರ್ವೀಪಾಳಂ ॥ 568 ॥

ಬಮ್ಮ

ಕಂ ॥ ವ್ಯಾಪಿತದಿಗ್ವಳಯಯಶಃ
ಶ್ರೀಪತಿ ವಿತರಣವಿನೋದಪತಿ ಧನಪತಿ ವಿ
ದ್ಯಾಪತಿಯೆನಿಪ್ಪ ಬಮ್ಮಚ
ಮೂಪತಿ ಜಿನಪತಿಪದಾಬ್ಜಭೃಂಗನನಿಂದ್ಯಂ ॥ 569 ॥

111) ಕುಂಬೇನಹಳ್ಳಿ 572, E.C. II (R), ಕ್ರಿ.ಶ. ಸು. 12ನೇ ಶತಮಾನ

ಇದು ವಾದಿರಾಜದೇವನು ಪರವಾದಿಮಲ್ಲ ಜಿನಾಲಯ ನಿರ್ಮಿಸಿದ್ದನ್ನು ಹೇಳುತ್ತದೆ.

ಮ ವಿ ॥ ತಮಗಾಜ್ಞಾವಶಮಾದುದುಂನತ ಮಹೀಭೃತ್ಕೋಟಿ ತಂಮಿಂದೆ ಬಿ
ಣ್ಪಮರ್ದ್ದತ್ತೀ ಧರೆಗೆಯ್ದೆ ತಂಮ ಮುಖದೊಳ್ ಷಟ್ತರ್ಕವಾರಾಸಿವಿ
ಭ್ರಮಮಾಪೋಶನಮಾತ್ರಮಾದುದೆನಲಿಂ ಮಾತೇನಗಸ್ತ್ಯಪ್ರಭಾ
ವಮುಮಂ ಕಿಳ್ಪಡಿಸಿತ್ತು ಪೆಂಪಿನೆಸಕಂ ಶ್ರೀಪಾಲಯೋಗೀಂದ್ರನಾ ॥ 570 ॥

112) ಚೆನ್ನರಾಯಪಟ್ಟಣ 18, E.C. X (R), ಕ್ರಿ.ಶ. ಸು. 12ನೇ ಶತಮಾನ

ಇದರಲ್ಲಿ ಹೊಯ್ಸಳ ದೊರೆ ಮೊದಲನೆಯ ಬಲ್ಲಾಳನ ಆಳಿಕೆಯಲ್ಲಿ ಮಾಚಿರಾಜನ ಮಡದಿ ಶಾಂತಲದೇವಿಯು ಕೊಳತೂರಿನಲ್ಲಿ ಶಾಂತಿಸಮುದ್ರವೆಂಬ ಕೆರೆಯನ್ನು ಕಟ್ಟಿಸಿದ್ದನ್ನು ಹೇಳಿದೆ.

ವಿಷ್ಣುವರ್ಧನ

ಉ ಮಾ ॥ ದುರ್ದಮವೈರಿಭೂಭುಜರನೋವದೆ ವಿಕ್ರಮಬಾಹುದಂಡದಿಂ
ಮರ್ದಿಸಿ ಮತ್ತೆತ್ತದಾರೊ ಶರಣೆಂಸೆಮಗೆಂನ್ದು ನಿಜಾಂಘ್ರಿಪದ್ಮವಂ

ಪೊರ್ದಿದರಂ ಸುಧರ್ಮ್ಮದೊಳೆ ರಕ್ಷಿಸಿ ಕೀರ್ತ್ತಿಯನಾಂತು ಧಾತ್ರಿಯಂ
ಪೆರ್ದೊಱೆ ಮೇರೆಯಾಗೆ ಸಲೆ ಸಾಧಿಸಿದಂ ವಿಭು ವಿಷ್ಣುವರ್ಧನಂ ॥ 571 ॥

ಬಲ್ಲಾಳ I

ಮ ವಿ ॥ ಉದಯಂಗೆಯ್ದು ವಿರೋಧಿಭೂಭುಜ ಪುರಸ್ಸಂತಾನಮಂ ತೂಳ್ದಿ ತಂ
ನದಟಿಂ ಸಾಧಿಸಿ ವಿಶ್ವ ಭೂವಳಯಮಂ ಸಾಂಮ್ರಾಜ್ಯಲಕ್ಷ್ಮೀಮನೋ
ಮುದಮಂ ಮಂತ್ರಿನಿಜಾಪವರ್ಗ್ಗಹೃದಯಾಭ್ಯುತ್ಸಾಹದಿಂ ಮಾಡಿಯ
ಭ್ಯುದಯಂಬೆತ್ತನತಿಪ್ರತಾಪ ದಿನಪಂ ಬಲ್ಲಾಳಭೂಪಾಳಕಂ ॥ 572 ॥

ಮುಕುಂದ ಸ್ತುತಿ

ಸ್ರಗ್ಧರೆ ॥ ಬಲ್ಲಾಳಕ್ಷೋಣೀಪಾಳಂಗಭಿಮತಫಳಸಂಸಿದ್ಧಿಯಂ ಮಾಳ್ಕೆ ಲಕ್ಷ್ಮೀಸತಿ
ಲೋಲಂಬನಂ ಭೂಭುವನ ಭವನ ಸಂರಕ್ಷಣಂ ವಿಶ್ವವಿದ್ಯಾ
ಕಲ್ಲೋಳಾಂಭೋಧಿ ನಂಮ್ರಾಮರ ಮಕುಟಮಣಿದ್ಯೋತಿ ಪಾದಯಶೋದ
ವಲ್ಲಿಪ್ರೋದೂತಕಂದಂ ಮುದಿತನಖಿಳಯೋಗೀಂದ್ರಬೃಂದಂ ಮುಕುಂದಂ
॥ 573 ॥

ಮಾಚಿರಾಜ ಮತ್ತು ಶಾಂತಲದೇವಿ

ಉ ಮಾ ॥ ಶ್ರೀಕರಣಾಗ್ರಗಣ್ಯನುದಿತೋದಿತ ಪುಂಣ್ಯನಿಳಾವರೇಣ್ಯನಂ
ಸ್ವೀಕೃತಸತ್ಯಯಿಜ್ಯಗುಣ ನಿತ್ಯನುದಂಚದಮಾತ್ಯನಂಗಜ
ಪ್ರಾಕೃತಿಯುತ್ತಮ ಪ್ರಕೃತಿರಕ್ಷಿತ ಸತ್ಕೃತಿ ಮಾಚಿರಾಜನಾ
ಶಾಕಳಿತೋಮತೇಜನಖಿಳೋಂನತಮಾರತನೂಜನೊಪ್ಪುವಂ ॥ 574 ॥

113) ಕೆಂಬಾಳು 72, E.C. X (R), ಕ್ರಿಶ. ಸು. 1200

ಈ ವೀರಗಲ್ಲು ಶಾಸನದಲ್ಲಿ ಹೊಯ್ಸಳ ದೊರೆಯಾದ ಎರಡನೆಯ ಬಲ್ಲಾಳನ ಆಳಿಕೆಯಲ್ಲಿ ನಡೆದ ತುರುಗೋಳ್ ಕಾಳಗದಲ್ಲಿ ಕೇತಮಲ್ಲನು ಕಾದಿ ಮರಣಿಸಿದನೆಂದು ಹೇಳಿದೆ.

ಚಂ ಮಾ ॥ ಅರಸರ ದಾಟಿ ಮುತ್ತಿದೆಡೆಯೊಳ್ ತಱಿಸಂದಿದಿರಾಗಿ ತಾಗಿ ತ
ಳ್ತಿಱಿದು ಪಲಂಬರಂ ತಗುಳ್ದು ಕೋಳ್ಸೆಱೆಯಂ ತುಱುವಂ ಮಗುೞ್ಚಿ ಚೆ
ಚ್ಚರಮಿದಿರಾದ ವೀರಭಟರಂ ತಱಿದಿಕ್ಕಿಯೆ ತನ್ನದೊಂದು ದೋ
ರ್ಬಲದೊಳೆ ಕೇತಮಲ್ಲ ಸುರಲೋಕಮನೆಯ್ದಿದನಾಜಿರಂಗದೊಳ್ ॥ 575 ॥

ಕಂ ॥ ಸುರದುಂದುಮೆಯೆಸೆಯುತ್ತಿರೆ
ಸುರಕನ್ಯೆಯರೊಲ್ದು ಚಾಮರಂಗಳನಿಕ್ಕಲ್

ಕರಮೆಸೆವ ಸುರವಿಮಾನದೊ
ಳಿರಲುಯ್ದರ್ ಕೇತಮಲ್ಲನಾಯಕನಸುವಂ ॥ 576 ॥

114) ದಿಡಗ 125, E.C. X (R), ಕ್ರಿ.ಶ. 1206

ಇದರಲ್ಲಿ ಹೊಯ್ಸಳ ದೊರೆ ಎರಡನೆಯ ಬಲ್ಲಾಳನ ಆಳಿಕೆಯಲ್ಲಿ ರಾಜಗುರು ಕೇಸಿಯಣ್ಣನ ಸೋದರ ಬಲವಜಕ್ಕಯ್ಯನ ಮಗ ಎಡವಜಕ್ಕಯ್ಯನು ತನ್ನ ತಂದೆ ತಾಯಿಯರಿಗೆ ವೈಕುಂಠ ಪ್ರಾಪ್ತಿಯಾಗಲೆಂದು ಪರೋಕ್ಷವಿನಯವಾಗಿ ಬಲ್ಲೇಶ್ವರದೇವರಿಗೆ ಬಿಟ್ಟ ದಾನವನ್ನು ಹೇಳಿದೆ.

ಬಲ್ಲಾಳ II

ಮ ಸ್ರ ॥ ಘನಶೌರ್ಯಂ ಬಲ್ಲಾಳಂ ನಿಜವಿಜಯಹಯಾರೂಢನಾದಂ ಕಳಿಂಗಂ
ವನವಾಸೋದ್ಯುಕ್ತನಾದಂ ತುಳುವನಳವಿಗೆಟ್ಟೋಡಿದಂ ಕೊಂಕಣಂ ಭೋಂ
ಕನೆ ಪುಣ್ಯಾರಣ್ಯಮಂ ಸಂವರ್ಸಿದನಗಿದಂ ಗೂರ್ಜ್ಜರಂ ಮಾಳವಂ ವಿಂ
ಧ್ಯನಿಕುಂಜಪ್ರಾಪ್ತನಾದಂ ಜಳಧಿನಿಖಟದೊಳ್ ಚೋಳಿಕಂ ವೇಳೆಗೊಂಡಂ
॥ 577 ॥

115) ಅಗ್ರಹಾರ ಬೆಳುಗಲಿ 93, E.C. X (R), ಕ್ರಿ.ಶ. 1209

ಇದರಲ್ಲಿ ಹೊಯ್ಸಳ ದೊರೆಯಾದ ಎರಡನೆಯ ಬಲ್ಲಾಳನ ಆಳಿಕೆಯಲ್ಲಿ ಮಹಾಪ್ರಧಾನ ಕೇಶಿರಾಜನು ಬೆಳುಗಲಿಯನ್ನು ಕೇಶವಪುರವೆಂಬ ಅಗ್ರಹಾರ ಮಾಡಿ ಕೆರೆಗಳನ್ನು ಕಟ್ಟಿಸಿ ಕೇಶವ ದೇವಾಲಯವನ್ನು ಕಟ್ಟಿಸಿ ಅದಕ್ಕೆ ದತ್ತಿಯನ್ನು ಬಿಟ್ಟಂತೆ ಹೇಳಿದೆ.

ತ್ರಿಮೂರ್ತಿ ಸ್ತುತಿ

ಕಂ ॥ ಶ್ರೀವರನುಮಾವರಂ ವಾ
ಣೀವರನೆನೆ ನೆಗಳ್ದ ಮೂವರು ಕೇಶವಂ ಸೇ
ನಾವರನಭೀಷ್ಟಸಿದ್ಧಿಯ
ನೀವರ್ವೆಳುಗಲಿಯೊಳಿರ್ದ್ದುಸತತೋತ್ಸವದಿಂ ॥ 578 ॥

ಸಳ

ಮ ಸ್ರ ॥
ಸಳನೆಂಬೊಂ ಯಾದವೇಂದ್ರಂ ಶಶಕಪುರದ ವಾಸಂತಿಕಾದೇವಿಯಂ ನಿ
ಶ್ಚಳಮಂತ್ರಂ ಮಾಣದಾರಾಧಿಸೆ ಬನದೊಳಗಾಭೀಳಶಾರ್ದೂಳಮಾಭೂ
ತಳನಾಥಂಗೆಯ್ದೆ ಕಂಡಾ ಜಿನಮುನಿ ಸೆಳೆಯಂ ಕೊಟ್ಟು ಶಾರ್ದೂಳಮಂ ಪೊಯ್
ಸಳ ಎಂದಂ ಪೊಯ್ದೊಡಾತಂಗೆಸೆದುದು ಜಗದೊಳ್ ಪೊಯ್ಸಳೋರ್ವೀಶನಾಮಂ
॥ 579 ॥

ಎರೆಯಂಗ

ಕಂ ॥ ಆ ವಿನಯಾದಿತ್ಯನ ಸುತ
ನೀವಸುಧಾತಳದ ಕಲ್ಪತರು ವಂದಿಜನ
ಕ್ಕೀವೆಡೆಯೊಳ್ ಮಱೆವೊಕ್ಕೊಡೆ
ಕಾವೆಡೆಯೊಳ್ ಖಚರನೆನಿಸಿದಂ ನೃಪತಿಲಕಂ ॥ 580 ॥

ಕಂ ॥ ಎಱೆಯಂಗಂ ವಾಣೀಸತಿ
ಯೆಱೆಯಂಗಂ ಪದ್ಮಸದ್ಮೆಯೆನಿಸಿದ ಸಿರಿಯೊಂ
ದೆಱೆಯಂಗಂ x ಹ್ವಯನೀ
ಯಱೆಯಂಗಂ ದೊರೆ ಪೆಱಂಗೆ ಪೊರೆಯೆನಲಱಿಯಂ ॥ 581 ॥

ಏಚಲದೇವಿ

ಕಂ ॥ ಎಱೆಯಂಗದೇವನರಸಿಯ
ನಱಿಯಂ ಪೊಗಟಲ್ ಫಣೀಂದ್ರನುಂ ಸುರಪತಿಯುಂ
ನೆಱೆಯಂ ನೋಡಲ್ ಸೊಬಗಿನ
ನೆಱವುಂ ರೂಪಿನ ಬೆಡಂಗುಮಾಸತಿಗಧಿಕಂ ॥ 582 ॥

ವಿಷ್ಣುವರ್ಧನ

ಕಂ ॥ ಅವರೊಳ್ ವಿಷ್ಣುನೃಪಾಳಂ
ಭುವನಾಧಿಪನಾದನಾದಿರಾಜರ ಚರಿತ
ಕ್ಕವನೊರೆಗಲ್ಲಾದಂ ತ್ರೈ
ಭುವನಾಂತರ್ವರ್ತಿಕೀರ್ತಿವಲ್ಲಭನಾದಂ ॥ 583 ॥

ಉ ಮಾ ॥ ನೆಟ್ಟನೆ ಬಿಟ್ಟಿದೇವನೊಳಿದಿರ್ಚಿದರಾತಿನೃಪಾಳನಾವನುಂ
ಕೆಟ್ಟನೆ ಕಂಡು ತನ್ನೊಡಮೆಯೆಲ್ಲಮನೋವದೆ ಕೊಟ್ಟು ಪೊಣ್ಬು
ವಿಟ್ಟಿಗಮಿರ್ದನಿರ್ದನೆ ನಿಜಾನ್ವಯರಾಜ್ಯದೊಳೆಂದರಾತಿಗಳ್
ಬಿಟ್ಟು ವಿರೋಧಮಂ ಬಿಡದೆ ಕಾಲ್ವಿಡಿದೆಂದುದುಗೆಯ್ವರಾಗಳುಂ ॥ 584 ॥

ನರಸಿಂಹ I

ಕಂ ॥ ಆ ನರಸಿಂಹನೃಪಾಲಕ
ನಾನಲರಾತಿನೃಪರಿಲ್ಲ ಭೂತಳದೊಳ್ ಕೈ
ಯಾನಲಧನರ್ಕಳಿಲ್ಲೆನೆ
ತಾನಿಱಿವಂ ಪಿರಿದನೀವನಿಭರಿಪುಶೌರ್ಯಂ ॥ 585 ॥

ಬಲ್ಲಾಳ II

ಮ ಸ್ರ ॥ ಅವಿಧೇಯಕ್ಷೋಣಿಭೃತ್ಸಂತತಿ ಸಮರದೊಳಾವೀರಬಲ್ಲಾಳಧಾತ್ರೀ
ಧವನೊಳ್ ಮಾಱಾಂತು ನಿಂದಂದವನ ಭುಜಭುಜಂಗೋಗ್ರದಂಷ್ಟ್ರಾಭಖಡ್ಗ
ಪ್ರವಿಘಾತಾಭೀಳಕಾಯೋತ್ಥಿತರುಧಿರಜಳಾಸಕ್ತನಕ್ತಂಚರೀನೃ
ತ್ಯವಿಳಾಸಾಳೋಕನಪ್ರೀತಿಯನೊದವಿಸದೇ ನಾರದಂಗಂ ಜವಂಗಂ ॥ **586** ॥

ಮ ವಿ ॥ ಅರಿಭೂಪಾಳರನಾಹವಾಂಗಣದೊಳೆನ್ನುಂ x x ಬಲ್ಲಾಳಭೂ
ವರನೆಬ್ಬಿಟ್ಟಿದನೆಂಬ ಕಾದಿದೊಡೆ ಕಾಯ್ಬಿಂ ಕೊನ್ದನೆಂಬಂಜಿನಿಂ
ಶರಣಾಗೆಂದೊಡೆ ಕೊಂದನೆಂಬ ನುಡಿ ಪೇಳಲ್ ಕೇಳಲಕ್ಕುಂ x x
ಧರೆಯೊಳ್ ಕೇಳಲದೋರ್ಮ್ಮೆಯುಂ ರಿಪುನೃಪಾಳರ್ಸ್ಸಯ್ತುವೋದನುಟಂ
॥ **587** ॥

ಮ ಸ್ರ ॥
ನೃಪರಾರುಂ ವೀರಬಲ್ಲಾಳನೊಳದಿರದೆ ಮಾಱಾಂಪರ್ ಮೀಱಿ ಶಾರ್ದೂ
ಳಪತಾಕಾದಂಡವಳ್ಳಾಡಿದೊಡೆ ಮನದೊಳಳ್ಳಾಡುವರ್ ಪುಲ್ಲೆವಿಂಡಂ
ತೆ ಪೊಲಂಗೊಂಡಾಡುವರ್ ಪೊಣ್ಮಿದ x x ರಸದಿಂ ಸಂಗರಕ್ಷೋಣಿಯೊಳ್ ನಿ
ನ್ದಪರೆಂಬೀಗಾಂಪುವೇಡಾ ಮಱೆಯದರೊಳರೇ ಕಾದುವಣ್ಮುಳ್ಳಗಂಡರ್ ॥ **588** ॥

ನರಸಿಂಹ II

ಮ ಸ್ರ ॥ ದಿವಿಜೇಂದ್ರೇಭಕ್ಕೆ ಕೊಂಬುರ್ವರೆಯ ತಮಮನೆಬ್ಬಟ್ಟುವರ್ಕಂಗೆ ತೇಜಂ
ತವದುರ್ಕಂ ತಾಳ್ದಿ ಕೂರ್ಪಿಂದೆಸೆವ ಮಿಸುಪ ವಜ್ರಕ್ಕೆ ಬಲ್ಪುಗ್ರದೈತ್ಯಾ
ಟವಿಯಂ ತನ್ನಿಚ್ಚೆಯಿಂ ತಳ್ತಳುರ್ವ ಬಗೆಯ ಭರ್ಗಂಗೆ ಭಾಳಾಂಬಕಂ ಪು
ಟ್ಟುವವೋಲ್ ಬಲ್ಲಾಳರಾಯಂಗತುಳಭುಜಬಳಂ ಪುಟ್ಟಿದಂ ನಾರಸಿಂಹಂ
॥ **589** ॥

ಕಂ ॥ ನರಸಿಂಹರಾಯನುದ್ಧತ
ಕರಾಸಿಗಗನಾಹಿ ನುಂಗುವುದು ಸಂಗರದೊಳ್
ನರತುರಗಕರಿಕಳಂಕಾ
ಕರಮೆನಿಪರಿರಾಯವಿಪುಳವಿಧುಮಂಡಳಮಂ ॥ **590** ॥

ಕಂ ॥ ವೀರನರಸಿಂಹರಾಯನ
ಕೂರಸಿ ಕೂರದರಿರಾಯರಾನನದೊಳ್ ತೊ
ಲ್ಗಾರ ಸಿಡಿಲಂತಿರೆಱಗುವು
ದಾರೆಱಗದೆ ಮೀಱಿಬಾಳ್ವರವನೀತಳದೊಳ್ ॥ **591** ॥

ಸೋವಲದೇವಿ

ಚಂ ಮಾ ॥ ಹರಿಯೊಡವುಟ್ಟಿದಂದಿನ ಸುಭದ್ರೆಯೊ ರುಕ್ಮಿಯ ತಂಗೆಯಾದಳಾ
ಸಿರಿಯೆನೆ ಸಂದ ರುಕ್ಮಿಣಿಯೊ ಮದ್ರನೃಪಾನುಜೆಯಾದ ಮಾದ್ರಿಯೋ
ನಿರುಪಮಮಪ್ಪ ರೂಪವತಿ ಸಚ್ಚರಿತಾನ್ವಿತೆಯೆಂದು ಬಣ್ಣಿಕುಂ
ಧರೆ ನರಸಿಂಹರಾಯನೊಡವುಟ್ಟಿದ ಸೋವಲದೇವಿರಾಣಿಯಂ ॥ 592 ॥

ಉ ಮಾ ॥ ದರ್ಪ್ಪಿತವೈರಿಸಿಂಹನ ನೃಸಿಂಹನ ತಂಗೆಯಪೂರ್ವ್ವರೂಪ ಕಂ
ದರ್ಪ್ಪನ ವೀರಹೊಯ್ಸಳನ ನನ್ದನೆ ಯೀಪ್ಸಿತಸಾರವಸ್ತು ಸಂ
ತರ್ಪ್ಪಿತ ಭೂರಿಭೂತಳೆಯ ಪದ್ಮಲದೇವಿಯ ಪುತ್ರಿಯೆಂದೊಡಾ
ದರ್ಪ್ಪಕ ರಾಜ್ಯಲಕ್ಷ್ಮಿಯೆನೆ ಸೋವಲದೇವಿಯೆ ತಕ್ಕಳಲ್ಲಳೇ ॥ 593 ॥

ಉ ಮಾ ॥ ತೋಳ ಪೊದಟ್ಟು ನೀಳ್ದ ವಿಟಪಂ ಕರಶಾಖೆಗಳಳ್ಗೆಗೊಂಬಿನೊಂ
ದೋಳಿ ತಳಂ ವಿರಾಜಿಪ ತಳಿರ್ ನಖರಂ ಕುಸುಮಾಳಿ ಪೂಣ್ದು ಸ
ಲ್ಲೀಲೆಯಿನೀವ ಕಾಂಚನಮೆ ತಳ್ತಿಡಿದಿರ್ದ ಫಲೌಘಮಾಗೆ ಬ
ಲ್ಲಾಳನ ಪುತ್ರಿ ಕಲ್ಪಕುಜದಂದದೆ ಸೋವಲದೇವಿ ಕೊಟ್ಟಪಳ್ ॥ 594 ॥

ಮ ವಿ ॥ ಅರಿಭೂಭೃತ್ಕುಂಬಿಕುಂಭಂಗೆಳೆಸುಗಿಯದುಗ್ರಾಜೆಯಂ ವೈರಿಸಿಂಹಂ
ನರಸಿಂಹಂ ಪೊಕ್ಕು ಪಾಯೆತ್ತಿದೊಡೆ ಪೊರೆದು ರಕ್ತಾಂಬುವಿಂ ಮೌಕ್ತಿ x
x ರೆವೀರಾರಾತಿಯಂ ಸಂಹರಿಸಲೊಗೆದ ಕಾಳಾನಳಜ್ವಾಳೆಯಟ್ಟಾ
ಸುರಮಪ್ಪಂತಾಗೆ ಸುತ್ತುಂ ಕಿಡಿವಿಡುವ x ಲೊಪ್ಪಿರ್ದ್ದುದುಗ್ರಾಸಿಪಟ್ಟಂ
॥ 595 ॥

ಕೇಶಿರಾಜ

ಮ ವಿ ॥ ದಿಗಿಭವ್ರಾತದೊಳಿಂದ್ರದಂತಿ ದಿಗಧೀಶವ್ರಾತದೊಳ್ ಶಕ್ರನ
ಬ್ಧಿಗಳೊಳ್ ಪಾಲ್ಗಡಲದ್ರಿಸಂಕುಲದೊಳಸ್ವಪ್ನಾದ್ರಿ ದೇವರ್ಕಳೊಳ್
ನಗಜಾವಲ್ಲಭನಿರ್ಪ ಪೆಂಪುವಡೆದಿರ್ಪಂ ಹೊಯ್ಸಳೋರ್ವೀಶಮಂ
ತ್ರಿಗಳೊಳ್ ಕೇಶವದಂಡನಾಯಕನನೂನಶ್ರೀಗಧಿಷ್ಠಾಯಕಂ ॥ 596 ॥

ಕಂ ॥ ಜಲನಿಧಿಯಂ ಜಕ್ಕುಲಿಸುವ
ಕುಲನಗಮಂ ನಗುವ ಕೆಜೆಗಳಂ ದೇಗುಲಮಂ
ಕಲಿಯುಗಕಾನೀನಂ ಬೆ
ಳ್ಗಲಿಯೊಳ್ ಕೇಶವಚಮೂವರಂ ಮಾಡಿಸಿದಂ ॥ 597 ॥

ಕಂ ॥ ನಿಖಿಳಚಮೂಪರ ನುಡಿ ಜಳ
ಲಿಖಿತಂ ಕೇಶವಚಮೂವರಂ ಚತುರಚತು
ರ್ಮುಖನಾಡಿದ ನುಡಿಯೆ ಶಿಲಾ
ಲಿಖಿತಂ ಬಲ್ಲಾಳಭೂಮಿಪಾಳನ ಸಭೆಯೊಳ್ ॥ 598 ॥

116) ಅಗ್ರಹಾರ ಬೆಳುಗಲಿ 94, E.C. X (R), ಕ್ರಿಶ. 1209

ಇದರಲ್ಲಿ ಹೊಯ್ಸಳ ದೊರೆ ಎರಡನೆಯ ಬಲ್ಲಾಳನ ಆಳಿಕೆಯಲ್ಲಿ ಮಹಾಪ್ರಧಾನಿ ಕೇಶಿರಾಜನು ಕೇಶವಪುರವೆಂಬ ಅಗ್ರಹಾರವನ್ನು ಮಾಡಿಸಿ, ಕೆರೆಗಳನ್ನು ಕಟ್ಟಿಸಿ, ಈಶ್ವರ, ಕೇಶವ ದೇವಾಲಯಗಳ ಸೇವೆಗೆ ಕೊಟ್ಟ ದತ್ತಿಯನ್ನು ಹೇಳಿದೆ.

ಕೇಶವದಂಡನಾಥ

ಉ ಮಾ ॥ ಮಾಳವದಂಡನಾಥ ಗಜಕೇಸರಿ ಚೋಳಚಮೂಪಶೈಳದಂ
ಭೋಳಿವರಾಳಸೈನ್ಯಪತಿ ಸಾಗರಬಾಡವತೀಬ್ರವಹ್ನಿ ನೇ
ಪಾಳಬಳೇಶ ಕಂಜವನ ಕುಂಜರನೆಂಬುದು ಧಾತ್ರಿ ವೀರಬ
ಲ್ಲಾಳನಮಂತ್ರಿಮಂಡನಶಿರೋಮಣಿ ಕೇಶವದಂಡನಾಥನಂ ॥ 599 ॥

ಶಾ ವಿ ॥ ಆಯುರ್ವೃದ್ಧಿಯನಬ್ಜಜಂ ಸಿರಿಯಪೆರ್ಚ್ಚಂ ಶ್ರೀವರಂ ಕೀರ್ತಿಯಂ
ಜ್ಯಾಯಂ ಶಂಕರನಾಗಲುಂ ಕುಡೆ ಯದುಕ್ಷೋಣೀಶರಾಜ್ಯಕ್ಕೆ ತಾ
ನಾಯುರ್ವೃದ್ಧಿಯನಾಗಲುಂ ಸಿರಿಯಪೆರ್ಚ್ಚಂ ಕೀರ್ತ್ತಿಯಂ ಪೊಯ್ಸಳಾ
ಮ್ನಾಯಾಂಭೋಧಿಸುಧಾಂಶು ಕೇಶವಚಮೂಪಂ ಮಾಡುವಂ ಲೀಲೆಯಿಂ
॥ 600 ॥

ಶಾ ವಿ ॥ ಆ ಕರ್ಣಾಟಕುಳಪ್ರಭೂತರೊಳಗಾದಂ ವೀರಬಲ್ಲಾಳ ಧಾ
ತ್ರೀಕಾನ್ತಂಗೆ ಮಹಾ ಪ್ರಧಾನನಧಿನಾಥ ಪ್ರಾಜ್ಯರಾಜ್ಯಕ್ಕೆ ತಾಂ
ಪ್ರಾಕಾರಂ ಪ್ರಭು ಕೇಶಿರಾಜನಮರೇಂದ್ರಂಗಂಗಿರಂ ಯುದ್ಧವಂ
ಶ್ರೀಕೃಷ್ಣಂಗೆ ಯುಗಂಧರಪ್ರಿಯ ಸುತಂ ವತ್ಸೇಶ್ವರಂಗಾದವೊಲ್ ॥ 601 ॥

ಮ ವಿ ॥ ಗುರುದೇವದ್ವಿಜಪೂಜೆಯೊಳ್ ಪತಿಹಿತಬ್ಯಾಪಾರದೊಳ್ ಬಾಂಧವೋ
ತ್ಕರಸಂರಕ್ಷಣದೊಳ್ ಕಳಾವಿಭವದೊಳ್ ವಿಕ್ರಾನ್ತದೊಳ್ ತಂನೊಳಾ
ದ್ದೊರೆಯೆಂಬುಂನತಿವೆತ್ತು ಕೇಶವಚಮೂಪಂ ವೀರಬಲ್ಲಾಳಭೂ
ವರನಾಸ್ಥಾನದೊಳಿರ್ದ್ದಪಂ ಮಣಿಗಳೊಳ್ ಮಾಣಿಕ್ಯಮಿರ್ಪ್ಪಂದದಿಂ
॥ 602 ॥

ಚಂ ಮಾ ॥ ಕ್ಷಿತಿನುತಮಾಯ್ತು ಶೌಭರಿಯಸಂತತಿಯೆಂತೆಸೆದಿರ್ದ್ದ ತಂನ ಸಂ
ತತಿಯನಿಮಿರ್ಕ್ಕೆ ಕಟ್ಟಿಸಿದ ಪೆರ್ಗ್ಗೆಜೆ ಬಿಟ್ಟ ಮಹಾಗ್ರಹಾರಮಂ

ನ್ನತಿ x ಸುವರ್ಣ್ಣ ಪೂರ್ಣ್ಣಕಳಶಾಯತನಂಗಳ ಪೆಂಪಗಣ್ಯಮು
ತ್ಕತಿಶಯಮೆಂತು ಬಣ್ಣಿಪುದೊ ಮಂತ್ರಿಶಿಖಾಮಣಿ ಕೇಶಿರಾಜನಾ ॥ 603 ॥

ಕಂ ॥ ಇಟ್ಟಾರವೆ ಕಟ್ಟಿದಕೆಱೆ
ದಿಟ್ಟಿಗೆ ಸೊಗಯಿಸುವ ದೇವ ಭವನಾವಳಿ ತಾಂ
ಬಿಟ್ಟಗ್ರಹಾರದೊಳ್ ನೇ
ರ್ಪ್ಪಟ್ಟಿರ್ಪ್ಪುವು ಸುಕೃತಿ ಕೇಶಿರಾಜನೆ ಜಗದೊಳ್ ॥ 604 ॥

117) ಸಂತೆಶಿವರ 83, E.C. X (R), ಕ್ರಿಶ. 1223

ಇದರಲ್ಲಿ ಹೊಯ್ಸಳ ದೊರೆಯಾದ ಎರಡನೆಯ ನರಸಿಂಹನ ಆಳಿಕೆಯಲ್ಲಿ ಮಹಾಪ್ರಧಾನ ಅಮಿತ ದಂಡನಾಯಕನು ಶಿವರವೆಂಬ ಗ್ರಾಮವನ್ನು ಅಗ್ರಹಾರ ಮಾಡಿ ಬ್ರಾಹ್ಮಣರಿಗೆ ದತ್ತಿ ಬಿಟ್ಟಂತೆ ಹೇಳಿದೆ.

ನರಸಿಂಹ II

ಮ ಸ್ರ ॥ ಕಡಿತಕ್ಕೇಱಿತ್ತು ನಾಲ್ಕುಂ ಕಡಲ ಕಡೆವರಂ ಧಾತ್ರಿ ಕೀರ್ತ್ತಿವ್ರಜಂ ಸೋ
ರ್ಮ್ಮುಡಿಗಳ್ಗೇಱಿತ್ತು ದಿಕ್ಕಾಂತೆಯರ್ಗೆ ಸಕಲದಿಕ್ಪಾಳರುತ್ತಂಸಮಂ ಪಾ
ಯ್ದುಡದೇರ್ಱಿತ್ತಾಜ್ಞೆ ಸಿಂಹಾಸನಮನೊಸೆದು ತಾನೇಱಿ ಕುಳ್ಳಿರ್ಪ್ಪುದುಂ ನೂ
ರ್ಮ್ಮಡಿವೀರಂ ನಾರಸಿಂಹಂ ಯದುಕುಳತಿಳಕಂ ಸೋಮವಂಶಪ್ರದೀಪಂ
॥ 605 ॥

ಅಮಿತದಂಡನಾಯಕ

ಕಂ ॥ ಆ ನಾರಸಿಂಹದೇವಸ
ಭಾನಳಿನೀ ರಾಜಹಂಸನಾಶ್ರಿತ ಜನತಾ
ದಾನಾಭಿಮಾನನಮಿತ ಚ
ಮೂನಾಥಂ ರಾಯದಂಡನಾಯಕ ಹನುಮಂ ॥ 606 ॥

ಕಂ ॥ ಪುರುಷತ್ರಯಮೋ ಮೇಣಿದು
ಪುರುಷಾರ್ತ್ಥತ್ರಯಮೋ ಪೇಳಿಮೆನೆ ಮೂವರ್ಸ್ಸೋ
ದರರುಂ ಪೆಸರ್ವ್ವಡೆದರವ್ವಾ
ಮರಸಂ ಲಕುಮರಸನಮರ ದಂಡಾಧೀಶಂ ॥ 607 ॥

ಮ ಸ್ರ ॥ ಸವಬಿಂಡಂ ಜಿಟ್ಟಿ ತಂತಮ್ಮಿನಿಯರನಮಿತಂ ಗೆಲ್ದು ಸಂಗ್ರಾಮದೊಳ್ ವೈ
ರಿವಧೂಸಂತಾನಮೋರಂತಜಿಸುವುದು ಸತತ್ಕುಂಡಳಾಂದೋಳಿತ್ಯೈಕ

ಶ್ರವಣಂ ಹಸ್ತಚ್ಚಟಾಪ್ರಸ್ಫುತಿತಕುಚತಟಂ ನಿರ್ಯದತ್ಯುಷ್ಣಬಾಷ್ಪ
ಪ್ಲವಮಸ್ತವ್ಯಸ್ತಕೇಶಂ ಚಳದಳಕಚಯಂ ಗದ್ಗದೋತ್ಕಂಠಕಂಠಂ ॥ 608 ॥

ಮ ಸ್ರ ॥ ಕೃತಕೃತ್ಯಾಗಣ್ಯಪುಣ್ಯಾಮಿತವಿತರಣವಿಖ್ಯಾತಿಯಂ ತಾಳ್ದಲೆಂದು
ಗ್ರತಪಂಗೆಯ್ಯುತ್ತಮಿರ್ಕುಂ ಸುರತರು ಸಜಟಾವಲ್ಕಲಂ ಪುಷ್ಪಧೂಳೀ
ಸಿತಭಸ್ಮಾಲೇಪಮಾಲಂಬಿತಫಲವಿಲಸತ್ಕುಂಡಲಂ ಭೃಂಗಮಾಲಾ
ವಿಲಸತ್ಕೃಷ್ಣಾಜಿನಂ ಸೇವಿತವನಮುದಕಾಹಾರಮಾಬದ್ಧಮೌನಂ ॥ 609 ॥

ಮ ವಿ ॥
ಇಱಿಯಲ್ ಕಲ್ತ ಬಱಿಕ್ಕಮಿಲ್ಲ ಸರಿ ಭಂಗಂ ಶೌರ್ಯದೊಳ್ ಚಾಗಮಂ
ಮೞೆಯಲ್ ಕಲ್ತ ಬಱಿಕ್ಕಮಿಲ್ಲ ಕಲೆ ಕಂದೌದಾರ್ಯದೊಳ್ ಪೆರ್ಮೆಯಿಂ
ಪೆಱರಾರ್ ಪೊಯ್ಸಳರಾಜ್ಯದೊಳ್ ಪೆಸರ್ಗೊಳಲ್ ದಂಡಾಧಿಪರ್ ಮೀಸಲೇ
ಱಿಱಿವಂ ಗೋಸಗೆ ಚಾಗಮೀವನಮಿತಂ ಶೌರ್ಯಾಂಜನಾನಂದನಂ ॥ 610 ॥

ಅಮಿತ ದಂಡನಾಯಕನ ಮಗ ಬಲ್ಲಾಳ ದಂಡನಾಯಕ

ಮ ಸ್ರ ॥ ನರಸಿಂಹಂ ಚಕ್ರಿ ಚಕ್ರಂ ಬಗೆದೆಡೆಗಮಿತಂ ಧಾರೆ ಬಲ್ಲಾಳುದೇವಂ
ನರಸಿಂಹಂ ವಜ್ರಿ ವಜ್ರಂ ಸಮರದೊಳಮಿತಂ ಬಲ್ಪು ಬಲ್ಲಾಳುದೇವಂ
ನರಸಿಂಹಂ ಶೂಲಿ ಶೂಲಂ ಪಗೆಯೆರ್ದೆಗಮಿತಂ ಕೂರ್ಪು ಬಲ್ಲಾಳುದೇವಂ
ಸೆರಗುಂಟೇ ತಂದೆಮಕ್ಕಳ್ ಪತಿಹಿತವಿಜಯಾರಂಭದೊಳ್ ತಾವೆ ಮುಖ್ಯರ್
॥ 611 ॥

ಮ ವಿ ॥ ಪ್ರಕಟಾಟೋಪದಿನಾಂತರಾಯದಳಮಂ ಕಣ್ಮುಟ್ಟಿನೊಳ್ ನೋಡಿ ತೋ
ಡಿಕರಾಳಾಸಿಯನೆತ್ತಿ ತೂಗಿದಬಳಿಕ್ಕಂಮಮ್ಮ ಮೇಲಾಳಸೀ
ಸಕದಿಂವಾಹದಪೊಟ್ಟೆವಟ್ಟಳೆಗೆಪೊಯ್ವಂ ಘಾಯಚೌಖಂಡ ಚಂ
ಡಕರಂ ಪೇಷಣವಾಯುಸೂನು ಸುಭಟಂ ಬಲ್ಲಾಳದಂಡಾಧಿಪಂ ॥ 612 ॥

ಚಂ ಮಾ ॥ ತೊಡೆ ಮಡ ರೂಪುರೇಖೆ ದನಿಯೊಟ್ಟಜೆ ಕೂರ್ಪಳವಟ್ಟು ತೋರ್ಪಿನಂ
ತೊಡರ್ದ ವಿರೋಧಿರಾಯರಥಿನೀಶರ ನೆತ್ತಿಯ ತುಪ್ಪಸಾಣೆಯೊಳ್
ಕಿಡಿಗಿಡಿಗುಟ್ಟೆ ಘಾರುಫಣಿಲೆಂಚಿನೆಗಂ ಮಸೆವಂ ಕೃಪಾಣಮಂ
ಕಡುಗಲಿ ದಂಡನಾಥನಮಿತಾತ್ಮಜ ಪೇಷಣಹಣ್ಮ ಬಲ್ಲಿಗಂ ॥ 613 ॥

ಮ ವಿ ॥ ಇದು ತಾಂ ಸಂದುದು ವಂದಿ ಬಂದು ಮನೆಯೊಳ್ ಕೈವಾರಮಂ ಮಾಡಿ ಬೇ
ಡದ ಮುನ್ನೀವುದು ವೀರವೈರಿ ಮೊನೆಯೊಳ್ ಕಟ್ಟೇಟ್ಗೆಯಿಂ ಘಟ್ಟುಮಾ

ಡದ ಮುಂ ಗೆಲ್ವುದು ಭೀತನಳ್ಕಿದೆಡೆಯೊಳ್ ಕಾಯೆಂದು ಬಾಯ್ವಿಟ್ಟು ನೋ
ಡದ ಮುಂ ಕಾವುದು ವೀರಮಾರುತಿಗೆ ಬಲ್ಲಾಳಂಗೆ ಜಾತಿವ್ರತಂ ॥ **614** ॥

ಸಮುದ್ರ ವರ್ಣನೆ

ಸ್ರಗ್ಧರೆ ॥ ಗಂಭೀರಾಸ್ಫಾರ ವೇಳಾಂ ಬಹಳ ಪರಿವೃಢಲ್ಲೋರ್ಲ ಕಲ್ಲೋಲಮಾಲಾ
ರಂಭ ಪ್ರೋಡ್ಡೀನಫೇನ ಪ್ರಬಳ ಜಳಚರಲ್ಲೋರ್ತಪಾಠಿನ ಶುಂಭ
ತ್ಕುಂಭೀರಾಭೀಳ ನಕ್ರಪ್ರಕರ ಕಮಠನೀರೇಭರತ್ನ ಪ್ರಭಾವೋ
ಜ್ಜೃಂಭ ಪ್ರೋದ್ಭಾಸಿ ವೀಚೀನಿಚಯ ಘನಘನಧ್ವಾನ ರೌದ್ರಂ ಸಮುದ್ರಂ
॥ **615** ॥

ಸೀವರಪುರ

ಉ ಮಾ ॥ ಸಾಗರದಂತಜಶ್ರಜಳಪೂರ್ಣ ತಟಾಕ ಚಯಂಗಳಿಂ ವನಂ
ಪೂಗಮಹೀರುಹಂ ಕದಳೀ ತೆಂಗು ಲವಂಗ ತಮಾಳಜಾಳದಿಂ
ಬಾಗಿ ಪಲಂಗಳಿಂದೆಸೆವ ಕೆಯ್ವೊಲನೊಪ್ಪುವ ಗಂಧಶಾಳಿಯಿಂ
ದಾಗಳುಸೀವರಂವೆಸೆದು ತೋರ್ಪುದು ಪೊಯ್ಸಳನಾಡೊಳರ್ತ್ತಿಯಿಂ
॥ **616** ॥

118) ಕೆಂಬಾಳು 70, E.C. X (R), ಕ್ರಿ.ಶ. 1223 ಮತ್ತು 1235

ಇದರಲ್ಲಿ, (i) ಹೊಯ್ಸಳ ದೊರೆಯಾದ ಎರಡನೆಯ ನರಸಿಂಹನ ಆಳಿಕೆಯಲ್ಲಿ ಶ್ರೀಕರಣಾಗ್ರಣಿ ವಿಶ್ವನಾಥನು ಕೆಂಬಾಳನ್ನು ಅಗ್ರಹಾರ ಮಾಡಿ ಬ್ರಾಹ್ಮಣರಿಗೆ ದತ್ತಿ ಕೊಟ್ಟಂತೆ ಹೇಳಿದೆ. (ii) ಹೊಯ್ಸಳ ದೊರೆ ಸೋಮೇಶ್ವರನ ಆಳಿಕೆಯಲ್ಲಿ ಅದೇ ದೇವರಿಗೆ ಏಚಣ್ಣ ಮತ್ತು ರಾಯಣ್ಣರು ಕೊಟ್ಟ ದತ್ತಿಯನ್ನು ಹೇಳಿದೆ.

ನರಸಿಂಹ ಸ್ತುತಿ

ಉ ಮಾ ॥ ಶ್ರೀ ನಮಿತಾಮರೇಂದ್ರ ಭುಜಗೇಂದ್ರ ಖಗೇಂದ್ರ ನರೇಂದ್ರ ಮೌಳಿಸಂ
ತಾನಮಣಿ ಪ್ರಭಾವಿಲುಳಿತಾಂಘ್ರಯುಗಂ ದಿವಿಜೇಂದ್ರವರ್ದ್ಧನಂ
ಭೂನುತ ಸೋಯಿದೇವನೃಪನಚ್ಯುತನಚ್ಯುತಮೂರ್ತಿವೀರಲ
ಕ್ಷ್ಮೀ ನರಸಿಂಹದೇವನೊಸೆದೀಗೆ ನಿರಂತರಮುತ್ಸವಂಗಳಂ ॥ **617** ॥

ನರಸಿಂಹ II

ಮ ಸ್ರ ॥ ದೆಸೆಯಂ ತಳ್ವೊಯ್ಯೆ ಕೀರ್ತಿಪ್ರಸರದೊಡನೆ ಕಾಲ್ಗೂಡಿ ತೀವ್ರಪ್ರತಾಪಂ
ರಸೆಯಂ ತಟ್ಟೈಸೆ ಬಾಹಾಬಳದೊಡನೆ ತಳಂಗೊಂಡು ರಾಜಾಜ್ಞೆ ಧರ್ಮಾ
ವಸಥಂ ತಾನಾಗೆ ದಾನೋನ್ನತಿಯೊಡನೆ ತಡಂಬೊಕ್ಕು ಸತ್ಯವ್ರತಂ ಕೂ
ರಿಸಿದಂ ಶ್ರೀಕಾಂತೆಯಂ ಚೋಳಕುಳಕಮಳಕಂಜಪ್ರಿಯಂ ನಾರಸಿಂಹಂ
॥ **618** ॥

ಚಂ ಮಾ ॥ ಅದಿಯಮ ಚೇರ ಪಾಂಡ್ಯ ಮಕರೋದ್ಧತಕಾಡವರಂ ಕರ್ವತೆಗೊಂ
ಡುದನದನೇಕೆ ಬಣ್ಣಿಸುವೆ ಬಣ್ಣಿಸು ಚೋಳನನೆಟ್ಟಿರಕ್ಕೆ ತಂ
ದುದನೆಳೆ ಸೇತು ಮುಟ್ಟೆ ಬೆಸಕೆಯ್ದುದನಾತ್ರಿಕಳಿಂಗಭೂಪರ
ಟ್ಟಿದ ಕರಿ ಸಾಲೆವೊಕ್ಕಸಮಸಾಹಸಮಂ ನರಸಿಂಹರಾಯನಾ ॥ 619 ॥

ಮ ವಿ ॥ ರಸೆಯೊಳ್ ಕೂರ್ಮನನಿಟ್ಟು ವಾಸುಕಿಯನೂಡಂ ಕೊಟ್ಟು ತೂಗಾಡಿ ನಾ
ಲ್ದೆಸೆಗಂ ಜಾಱುಗುಮೆಂದು ಕೀಲಿಱಿದು ಕುತ್ಕೀಲಂಗಳಂ ತಳ್ಗದಂ
ತು ಸೆಱಂಗಿಂಗಜನಾನೆಯಂ ನಿಱಿಪಿನಿತ್ತಾಯಾಸಮೇಕೆಂದು ತೋ
ಳ್ವಸೆಯೊಳ್ ತಾಳ್ದಿದನುರ್ವರಾರಮಣಿಯಂ ಚೋಳಪ್ರತಿಷ್ಠಾಪಕಂ ॥ 620 ॥

ಸೋಮೇಶ್ವರ

ಮ ಸ್ರ ॥
ಕರಮಂತಶ್ಶೂನ್ಯಮಾಶಾಕರಿಗೆ ಭುಜಗರಾಜಂ ದ್ವಿಜಿಹ್ವಂ ಕುಳೋರ್ವೀ
ಧರಮೆಂತುಂ ಕರ್ಕಶಂಗಳ್ ಕಮಠನಣಮೆ ಮೆಯ್ದೋಱನೆಂದಿಟ್ಟು ದೋಷೋ
ತ್ಕರಮಂ ಮುಂದಿಟ್ಟು ತನ್ನಂ ತರೆ ಜಯವಧು ಬಂದಿರ್ದಪಳ್ ಕೂರ್ತು ವಿಶ್ವಂ
ಭರೆಯೀಗಳ್ ವೀರಸೋಮೇಶ್ವರನರಪ ಭುಜಾದಂಡದೊಳ್ ಲೀಲೆಯಿಂದಂ ॥ 621 ॥

ಕಂ ॥ ಪೊಸಮಸೆಯ ಧಾರೆಯೊಳ್ ತ
ಳ್ತೆಸೆದಿರೆ ಜಸದಗೆಗಳಂತೆ ಮುತ್ತುಗಳಿದಿರಾ
ದಸುಹೃತ್ಕರಿಶಿರಮಂ ಪೋ
ಟ್ಟಿಸಿಮಿಸುಪುದು ಸೋಯಿದೇವ ಭೂವಲ್ಲಭನಾ ॥ 622 ॥

ವಿಶ್ವನಾಥ

ಉ ಮಾ ॥ ಆ ಕುಳಶೈಳಧೈರ್ಯ್ಯನ ನೃಸಿಂಹನ ರಾಜಿತರಾಜಗೇಹದೊಳ್
ಶ್ರೀ ಕರಣಾಗ್ರಗಣ್ಯನುದಿತೋದಿತ ಪುಣ್ಯನುದಾರಸಾರ ವಾಕ್
ಶ್ರೀ ಕಮಳಾಕರಂ ಬುಧಸುಧಾಕರನಾಶ್ರಿತವಾರ್ದ್ಧಿ ವಿಶ್ವಧ
ರ್ಮ್ಮಾಕೃತಿ ವಿಶ್ವನಾಥನೆಸೆವಂ ವಸುಧಾಮರವಂಶಮಂಡನಂ ॥ 623 ॥

ಚಂ ಮಾ ॥ ದುಸರಮದಾಗೆ ಭಾರತಿಗೆ ಹಾರಮನೋಯರಮಾಗೆ ಕೋದವೋ
ಲೆಸೆವಿನಮಕ್ಕರಂ ಕರಯುಗಂಗಳೊಳಂ ಬರೆವಂ ಬುಧರ್ ಪರೀ
ಕ್ಷಿಸಿ ತಲೆದೂಗೆ ಪೇಟ್ವಿನವಧಾನಶತಂಗಳನಾಗಳುಂ ಶ್ರುತ
ವ್ಯಸನತೆ ಲೀಲೆ ಬಾಲ್ಯದೊಳಮೀಕರಣಾಗ್ರಣಿ ವಿಶ್ವನಾಥನಾ ॥ 624 ॥

ಮ ವಿ ॥ ಪಡೆದರ್ತ್ಥ ಬುಧರ್ಗಾಶ್ರಿತರ್ಗ್ಗತಿಥಿಗಳ್ಗಾಮ್ನಾಯಜಾತರ್ಗ್ಗೆ ಕ
ಯ್ಪಿಡಿಯಪ್ಪಂತಿರೆ ವಿಶ್ವನಾಥಸಚಿವಂ ಬಿಟ್ಟಗ್ರಹಾರಾಗ್ರದೊಳ್
ಕಡಲೆಳ್ತಂದೊಡಮಾಂಪ ಪೆರ್ಗ್ಗೆಜೆಗಳುಂ ತನ್ಮಧ್ಯದೊಳ್ ಶಾಶ್ವತಂ
ತೊಡಪಿರ್ಪ್ಪಂತೆವೊಲಿರ್ಪ ವಿಷ್ಣುಗೃಹಮುಂ ಧರ್ಮ್ಮಕ್ಕಡರ್ಪ್ಪಾತನಾ ॥ 625 ॥

ಈಶ್ವರದೇವ

ಕಂ ॥ ಅರಸಂಗೆ ನೃಸಿಂಹಂಗ
ಕ್ಕರಮುಂ ಲೆಕ್ಕಮುಮನೋಜೆಯಿಂ ತಿಳಿಸಿ ಕಳಾ
ಪರಿಣತಿಯಂ ಮೆಱೆದು ಚಮೂ
ಪರರೊಳ್ ಸಮನಾಗಿ ಸಂದನೀಶ್ವರದೇವಂ ॥ 626 ॥

119) ಅಗ್ರಹಾರ ಬೆಳುಗಲಿ 92, E.C. X (R), ಕ್ರಿ.ಶ. 1252

ಇದರಲ್ಲಿ ಹೊಯ್ಸಳ ದೊರೆಯಾದ ಸೋಮೇಶ್ವರನ ಆಳಿಕೆಯಲ್ಲಿ ಮಂತ್ರಿ ಕೇಶಿದಣ್ಣಾಯಕನು ಬೆಳುಗಲಿಯಲ್ಲಿ ಕೇಶವದೇವರನ್ನು ಪ್ರತಿಷ್ಠೆ ಮಾಡಿಸಿ ಭೂಮಿಯನ್ನು ದತ್ತಿಯಾಗಿ ಬಿಟ್ಟಂತೆ ಹೇಳಿದೆ.

ಕೇಶಿದಣ್ಣಾಯಕ

ಮ ಸ್ರ ॥ ಜಯಮಿರ್ಪ್ಪಂತಿರ್ದ್ದಪಂ ಹೊಯ್ಸಳನೃಪನ ಭುಜೋತ್ಖಾತಖಡ್ಗಕ್ಕೆ ಭಾಗ್ಯೋ
ದಯಮಿರ್ಪ್ಪಂತಿರ್ದ್ದಪಂ ಬಾಂಧವಬುಧಜನಶಿಷ್ಟೇಷ್ಟವರ್ಗಕ್ಕೆ ಪುಣ್ಯಾ
ಶ್ರಯಮಿರ್ಪ್ಪಂತಿರ್ದ್ದಪಂ ಶ್ರೀಶ್ರುತಿವಿಹಿತಪುರಾಣೋಕ್ತಮಾರ್ಗಕ್ಕುಮಾದೇ
ವಿಯ ರಾಜ್ಯಶ್ರೀವಧೂಟೀಮಣಿಮಯಮುಕುರಂ ಕೇಶವಂ ಕೀರ್ತಿಕಾಂತಂ
॥ 627 ॥

ಮ ಸ್ರ ॥ ಪರನಾರೀದೂರನಂ ಶೂರನನಖಿಳಜನಾಧಾರನಂ ಸಾರನಂ ವಿ
ಸ್ತರ ತೇಜೋದಿತ್ಯನಂ ನಿತ್ಯನನಮಳಗುಣಾಗಣ್ಯನಂ ಪುಣ್ಯನಂ ಸೌಂ
ದರರೂಪೋದ್ದಾಮನಂ ಕಾಮನನರಿನೃಪಹೃತ್ ಸೆಲ್ಲನಂ ಬಲ್ಲನಂ ಪೋ
ಲ್ವರದಾಬ್ರ್ಭೂಭಾಗದೊಳ್ ಚಾಗದೊಳಸಮತರಖ್ಯಾತಿಯಿಂ ನೀತಿಯಿಂದಂ
॥ 628 ॥

ಬೆಟ್ಟಚಮೂಪ

ಉ ಮಾ ॥ ದಾನನಿಧಾನ ದಾನಿಗಳ ಬಲ್ಲಹ ಕೀರ್ತಿವಿಳಾಸ ಕೀರ್ತಿಕಾಂ
ತಾನಯನಾಭಿರಾಮ ಬುಧಬಾಂಧವ ಬಾಂಧವಕಲ್ಪಭೂಜ ವಿ
ದ್ಯಾನಿಧಿ ಸತ್ಕಲಾನಿಧಿ ದಯಾನಿಧಿ ಬೆಟ್ಟಚಮೂಪ ನಿತ್ಯನಾ
ಗೀ ನೆಲನುಳ್ಳಿನಂ ದಿಗಿಭಮುಳ್ಳಿನಮಿಂದ್ವಿನಬಿಂಬಮುಳ್ಳಿನಂ ॥ 629 ॥

120) ಬಾಳಗಂಜಿ 134, E.C. X (R), ಕ್ರಿಶ. 1276

ಇದರಲ್ಲಿ ಹೊಯ್ಸಳ ದೊರೆಯಾದ ಮೂರನೆಯ ನರಸಿಂಹನ ಆಳಿಕೆಯಲ್ಲಿ ದಂಡನಾಯಕ ಪೆರುಮಾಳೆದೇವನು ಬಾಳುಗಚ್ಚಿನ ಐಂದ್ರಪರ್ವದ ಪಂಚಿಕೇಶ್ವರದೇವರ ಧರ್ಮಕ್ಕೆ ಭೂಮಿಯನ್ನು ದತ್ತಿಯಾಗಿ ಕೊಟ್ಟಂತೆ ಹೇಳಿದೆ.

ವರಾಹ ಸ್ತುತಿ

ಕಂ ॥ ಆದಿಕ್ರೋಢಂ ಧಾತ್ರಿಯ
ನಾದರದಿಂ ತಂನ ತೊಳಪ ದಂಷ್ಟ್ರಾಗ್ರದೊಳಂ
ದಾದಂ ನೆಗಪಿದನಂದಿಂ
ಮೇದಿನಿ ಸುಸ್ಥಿರತೆವೆತ್ತುದಾಚಂದ್ರಾರ್ಕ್ಕಂ ॥ 630 ॥

ನರಸಿಂಹ III

ಕಂ ॥ ಕುಲಮುಂ ಚಲಮುಂ ನಿಜಭುಜ
ಬಲಮುಂ ವಿಖ್ಯಾತಿಯುಂ ಪ್ರತಾಪೋದಯಮುಂ
ಕಲಿತನಮುಂ ಚೆಲುವುಂ ಜನ
ದೊಲವುಂ ನೃಪವೀರನಾರಸಿಂಹಂಗೆ ನಿಜಂ ॥ 631 ॥

ಪೆರುಮಾಳೆ ಮಂತ್ರಿ

ಶಾ ವಿ ॥ ಆ ವೀರೋರ್ಬ್ಬಿಪ ನಾರಸಿಂಹನೃಪರಾಜ್ಯಶ್ರೀಗಡರ್ಪ್ಪೆಂಬಿನಂ
ಭಾವಿಪ್ಪಂದು ನಿಜಾಧಿಪಂಗವಯವಂತಾಂ ಸರ್ವ್ವನಿರ್ಬ್ಬಾಹಕಂ
ಕಾವಂ ಕಂಡವರಂ ಕೃಪಾಳುತನದಿಂದಾರ್ಬ್ಬೇಡಿ ಕೈಯ್ಯಾಂತವ
ಗ್ಗ್ರೀವಂ ಶ್ರೀ ಪೆರುಮಾಳಮಂತ್ರಿ ಮಹಿಮಾವಷ್ಟಂಭಸೌರಂಭಕಂ ॥ 632 ॥

ಚಂ ಮಾ ॥ ಒದವಿದ ರಾಜ್ಯಲಕ್ಷ್ಮಿಯನೆ ಸಾರ್ಚುವ ಸಾಹಸದಿಂದೆ ಪುಂಣ್ಯಸಂ
ಪದಮದಗಂಧ ಬಂಧುರಗಜೇಂದ್ರಮನೇಜೆಸಿಕೊಂಡು ಮುಂದೆ ಮುದ
ದದಟಿನರಾತಿವರ್ಗ್ಗಮನೆ ಶಾಶಿಸುತೀ ಪೆರುಮಾಳೆಮಂತ್ರಿ ಸಾ
ರ್ಚ್ಚಿದನೆಸವಾಳ್ವ ವೀರನರಸಿಂಹನರೇಂದ್ರನ ರಾಜ್ಯಲಕ್ಷ್ಮಿಯಂ ॥ 633 ॥

ಶಾ ವಿ ॥ ಆತ್ರೇಯೋತ್ತಮಗೋತ್ರಜಾತತಿಳಕಂ ಶ್ರೀವಿಷ್ಣು ದೇವಂಗೆಯಂ
ಧಾತ್ರೀಸ್ತುತ್ಯತೆವೆತ್ತ ಮಂಚಗಮೌಂನತ್ಯೋದಯಂ ಪುಟ್ಟಿದಂ
ಪುತ್ರಂ ಶ್ರೀಪೆರುಮಾಳೆ ದೇವಸಚಿವಂ ರಾವುತರಾಯಂ ಸುಚಾ
ರಿತ್ರಂ ಶ್ರೀಗುರುರಾಮಕೃಷ್ಣ ಪದಯುಗ್ಮಾಂಭೋಜಪೂಜಾರತಂ ॥ 634 ॥

ಶಾ ವಿ ॥ ಶ್ರೀ ಸೌಭಾಗ್ಯಮನಾಂತು ವಾಗ್ವನಿತೆ ಸತ್ಯಂಬೆತ್ತು ಶೌರ್ಯಂ ಜಯ
ಶ್ರೀಸೊಂಪಂ ಪಡೆದತ್ಯುದಾರತೆ ಜನಾಭೀಷ್ಟಾರ್ಥಸಂಸಿದ್ಧಿಗೊಂ
ಡೀಸ್ಯೈಪಿಂ ವರವಕ್ಷ ವಕ್ತ್ರಭುಜಹಸ್ತಸ್ಥಾಯಿಗಳ್ ಸಂತತಂ
ಲೇಸಪ್ಪೀ ಪೆರುಮಾಳೆದೇವಸಚಿವಾಂಗಶ್ರೀಗಿವೇ ಭೂಷಣಂ ॥ 635 ॥

ಚಂ ಮಾ ॥ ಜವನಿಕೆಯೋಡಲಿರ್ಬಲದ ವೀರಭಟಾವಳಿ ನೋಡೆ ಖಡ್ಗದಿಂ
ದವೆ ಕಲಿರತ್ನಪಾಳನ ಶಿರೋಂಬುಜಮಂ ಜಯಲಕ್ಷ್ಮಿಗಿತ್ತು ತ
ಜ್ಜವನಿಕೆಗೊಂಡ ಗಂಡ ಪೆರುಮಾಳೆಚಮೂಪತಿಗಿಂತು ಸಾರ್ದುದಾ
ಜವನಿಕೆನಾರಣಾಂಕಮಿದು ರಾವುತರಾಯನುದಗ್ರದೋರ್ಬಳಂ ॥ 636 ॥

121) ಚೆನ್ನರಾಯಪಟ್ಟಣ 72, E.C. X (R), ಕ್ರಿಶ. ಸು. 12 – 13 ನೇ ಶತಮಾನ

ಹೊಯ್ಸಳ ದೊರೆ ಎರಡನೆಯ ಬಲ್ಲಾಳನ ರಾಣಿ ಚೋಳಮಹಾದೇವಿಯು ದುಷ್ಟಕಷ್ಟರ ಮಾತನ್ನು ಕೇಳಿ ಅವರ ಮೇಲೆ ಧಾಳಿಯನ್ನು ಮಾಡಿಸಿದಾಗ ಧಾಳಿಯು ಬೇವೂರನ್ನು ಮುತ್ತಿ ತುರುಗಳನ್ನು ಸೆರೆಹಿಡಿದು ಕೊಂಡೊಯ್ಯುತ್ತಿರುವಾಗ ಕೇತಮಲ್ಲನು ಎದುರಿಸಿ ಕಾದಿ ತುರುಗಳನ್ನು ಹಿಂತಿರುಗಿಸಿ ಮರಣಿಸುತ್ತಾನೆ. ಇದನ್ನು ತಿಳಿದು ಚೋಳಮಹಾದೇವಿಯು "ಯಮ್ಮ ಮಕ್ಕಳ ನಾವು ನೋಯಿಸಿದೆವು" ಎಂದು ಪಶ್ಚಾತ್ತಾಪಪಟ್ಟು ಕೇತಮಲ್ಲನಾಯಕನ ಮಗನನ್ನು ಕರೆದು ಸಮಾಧಾನ ಮಾಡಿ, ಉಡುಗೊರೆ ಕೊಟ್ಟು ಭೂಮಿಯನ್ನು ದತ್ತಿ ಬಿಟ್ಟದ್ದನ್ನು ಇದು ಹೇಳುತ್ತದೆ.

ಕೇತಮಲ್ಲ

ಚಂ ಮಾ ॥ ಅರಸರ ಧಾಳಿ ಮುತ್ತಿದೆಡೆಯೊಳ್ ತಜಿಸಂದಿದಿರಾಗಿ ತಾಗಿತ
ಳ್ತಿಱಿದು ಪಲಂಬರಂ ತಗುಳ್ದು ಕೊಳ್ಸೆರೆಯಂ ತುಱುವಂ ಮಗುಳ್ಚಿ ಬ
ಬ್ಬರಮಿದಿರಾದ ವೀರಭಟರಂ ತಱಿದಿಕ್ಕಿಯೆ ತನ್ನದೊಂದುದೋ
ರ್ಬ್ಬಳದೊಳೆ ಕೇತಮಲ್ಲ ಸುರಲೋಕಮನೆಯ್ದಿದನಾಜಿರಂಗದೊಳ್॥ 637 ॥

122) ಹೆಬ್ಬಳಲು 130, E.C. X (R), ಕ್ರಿಶ. ಸು. 12 – 13 ನೇ ಶತಮಾನ

ಇದರಲ್ಲಿ ಹೊಯ್ಸಳ ದೊರೆ ಎರಡನೆಯ ಬಲ್ಲಾಳನ ಆಳಿಕೆಯಲ್ಲಿ ಜವನೆಯಹೆಗ್ಗಡೆ ಸಿಂಗೇಶ್ವರದೇವರ ಪ್ರತಿಷ್ಠೆಯನ್ನು ಮಾಡಿಸಿ ಕಂನೆಗೆಱೆಯನ್ನು ಕಟ್ಟಿಸಿ ಭೂಮಿ ದತ್ತಿ ಕೊಟ್ಟದ್ದನ್ನು ಹೇಳಿದೆ.

ಶಿವ ಸ್ತುತಿ

ಶಾ ವಿ ॥ ಶ್ರೀಗೌರೀನಯನಪ್ರಿಯಂ ವಿಮಳಗಂಗಾಚಿತ್ತಸಂತರ್ಪ್ಪಣಂ
ನಾಗೇಂದ್ರಾದಿವಿಭೂಷಣಂ ತ್ರಿದಶವಂದ್ಯಂ ಕಾಮಸಂಹಾರಕಂ

ಯೋಗೀಂದ್ರಬ್ರಜಗೋಚರಂ ತ್ರಿಭುವನಾರಾಧ್ಯಂ ಗಣಾಧೀಶ್ವರಂ
ಸಿಂಗೇಶಂ ನಿಮಗೀಗೆ ನಿತ್ಯಸುಖಮಂ ಚಂದ್ರಾರ್ಕರುಳ್ಳಂನೆಗಂ ॥ 638 ॥

ಪಿರಾನೆಪೆರ್ಗ್ಗಡೆ

ಮ ವಿ ॥ ಕ್ಷಮೆಯಿಂ ಭೂಮಿಯನುಗ್ರತೇಜದೊದವಿಂದಾದಿತ್ಯನಂ ಭೋಗದಿಂ
ದಮರಾಗ್ರೇಸರನಂ ವಿವೇಕದೊದವಿಂ ವಾಗೀಶನಂ ಮಂತ್ರದಿಂ
ಸುಮನೋಮಂತ್ರಿಯನರ್ತ್ಥಿಯಿಂ ಬುಧಜನಂ ಪೋಲಿಪ್ಪುದೇಂ ಪಂಡಿತ
ರ್ಸ್ಸಮನಲ್ತೀಗ ಪಿರಾನೆಪೆರ್ಗ್ಗಡೆಗೆನಲ್ ಧನ್ಯಂ ಧರಾಚಕ್ರದೊಳ್ ॥ 639 ॥

ಗೊರವಿಯಕ್ಕ

ಉ ಮಾ ॥ ಆತನ ಭಾರ್ಯ್ಯೆ ರೂಪವತಿ ಗೋತ್ರಪವಿತ್ರೆ ಬುಧರ್ಗ್ಗೆ ಬೇಡಿತಂ
ಸಂತತಮರ್ತ್ಥಿಯಿಂ ಕುಡುವ ಕಲ್ಪಲತಾಸಮೆ ಸತ್ಯದಾಗರಂ
ನೀತಿಸಮೇತೆ ಸಚ್ಚರಿತೆ ಸೀತೆ ಪತಿಬ್ರತದಿಂ ಗುಣೌಘದಿಂ
ಭೂತಳಮಾತೆ ತಾಂ ಗೊರವಿಯಕ್ಕನೆ ರಾಜಿಪಳೀ ಧರಿತ್ರಿಯೊಳ್ ॥ 640 ॥

ಪೆರುಮಾಳೆ ದಂಡನಾಯಕ

ಕಂ ॥ ಪರಮಪುರುಷಾರ್ತ್ಥತೀರ್ತ್ಥಂ
ಪರಮವುದಾರ್ಯ್ಯಪ್ರಸಂಗತುಂಗಗುಣೌಘಂ
ವರಜನಸುರಭೂಜಾತಂ
ಸುರಿಗೆಯ ಪೆರುಮಾಳು ರಾಜ್ಯಸವನಂಜವನಂ ॥ 641 ॥

ಜವನಯ್ಯ

ಮ ಸ್ರ ॥ ಜಯಧೀರಂ ಸತ್ಯಸಾರಂ ದುರಿತ ತಿಮಿರದೂರಂ ಯಶಃಪುಂಜಭಾರಂ
ಪ್ರಿಯನೇತ್ರಂ ಲೋಕಮಿತ್ರಂ ಶಿವಪದನುತಗಾತ್ರಂ ಮಹಾಪುಣ್ಯಪಾತ್ರಂ
ಭಯನಾಶಂ ಶ್ರೇಷ್ಠ ದೇಶಂ ಸಕಳಗುಣಗಣಾಧೀಶನೌದಾರ್ಯ್ಯಕೋಶಂ
ನಯಮೇತಂ ಸದ್ವಿನೂತಂ ಸಚಿವ ಜವನ ತಾತಂ ಜಯಂತೀಸಮೇತಂ
॥ 642 ॥

ಕಂ ॥ ಜವನಂ ಮಂತ್ರಿಗಳೊಳ್ ಬು
ದ್ಧಿಹೃದಯಂ ಚಾಣಕ್ಯನಂ ದಿಟಂ ಪೋಲ್ತಪನೆಂ
ದವನಂ ಭುವನಂ ಪೊಗಳ್ವುದು
ಕುವಳಯ ಸುಧವಳಕೀರ್ತ್ತಿ ಕಾನ್ತಾಪತಿಯಂ ॥ 643 ॥

ಫಲಶ್ರುತಿ

ಮ ವಿ ॥ ನೆಗಳ್ದೀ ಧರ್ಮ್ಮಮನರ್ತ್ತಿಯಿಂ ನರಪರುಗ್ರಾಮೇಶರುಂ ಪಾಳಿಪ
ರ್ಗ್ಗಗನಂ ತೀವಿದ ಕೀರ್ತ್ತಿಯಂ ವಸುಧೆಯಂ ಪಾಳಿಪ್ಪರೀ ಧರ್ಮ್ಮದೊಳ್
ಬಗೆಯೊಳ್ ಕೇಡನೊಡರ್ಚ್ಚುವರ್ಕಿಡಿಪರುಂ ಪಿಷ್ಪಾಕ್ರಿಮಿಬ್ರಾತದೊಳ್
ಮಿಗೆ ತದ್ವಂಶಜರಾದಿಯಾಗೆ ಪುಗುಗುಂ ಚಂದ್ರಾರ್ಕತಾರಂಬರಂ ॥ 644 ॥

123) ಶ್ರವಣಬೆಳಗೊಳ 455, E.C. II (R), ಕ್ರಿ.ಶ. ಸು. 13ನೇ ಶತಮಾನ

ಹೊಯ್ಸಳ ಸೋಮೇಶ್ವರನ ಮಂತ್ರಿ ಹಿರಿಯ ಮಾಣಿಕ್ಕ ಭಂಡಾರಿ ರಾಮದೇವನಾಯಕನ ಸಮ್ಮುಖದಲ್ಲಿ ನಯಕೀರ್ತಿ ಗೊಮ್ಮಟಾಪುರದ ವ್ಯಾಪಾರಿಗಳಿಗೆ ನೀಡಿದ ಕಟ್ಟಳೆ ಪತ್ರ.

ಮ ವಿ ॥ ಭಯ ಲೋಭ ದ್ವಯದೂರನಂ ಮದನಘೋರಧ್ವಾಂತ ತೀಬ್ರಾಂಶುವಂ
ನಯನಿಕ್ಷೇಪಯುತ ಪ್ರಮಾಣ ಪರಿನಿರ್ಣ್ನೀತಾರ್ತ್ಥ ಸಂದೋಹನಂ
ನಯನಾನನ್ದನಶಾಂತಕಾಂತತನುವಂ ಸಿದ್ಧಾಂತಚಕ್ರೇಶನಂ
ನಯಕೀರ್ತ್ತಿ ಬ್ರತಿರಾಜನಂ ನೆನೆದೊಡಂ ಪಾಪೋತ್ಕರಂ ಪಿಂಗುಗುಂ
॥ 645 ॥

ಬೇಲೂರು ತಾಲ್ಲೂಕು

124) ಬಸ್ತಿಹಳ್ಳಿ 388, E.C. IX (R), ಕ್ರಿಶ. 954

ಇದರಲ್ಲಿ ಗಂಗರಾಜನಾದ ಬೂತುಗನ ಆಳಿಕೆಯಲ್ಲಿ ಮೋನಿಭಟಾರರಿಗೆ ಕಿರಿಯ ಮೋನಿಭಟಾರರು ನಿಸಿದಿಯನ್ನು ನಿಲ್ಲಿಸಿದರೆಂದು ಹೇಳಿದೆ.

ಮೋನಿಭಟಾರ

ಕಂ ॥ ಪೇನಿಗಳಂ ಪೊಗಟಿದಿರಭಿ
ಮಾನಿಗಳಂ ಗುಣದ ಕಣಿಗಳಂ ವಸುಮತಿಯೊಳ್
ದಾನಿಗಳನೂನಮಿಲ್ಲದ
ಮೋನಿಗಳಂ ಪೋಗಿ ಪೊಗಟಿ ಕೆಲ್ಲಂಗೆಱೆಯೊಳ್ ॥ 646 ॥

ಉ ಮಾ ॥ ತಾಂ ಗಡ ಕೊಳ್ವೆನೆಂದು ಬಲಗರ್ವದ ಬಲ್ಲಪನಲ್ಲಿ ಪೋಗಿ ಕಾ
ಯ್ದೊಂಗಡೆಯಾಗದಂತು ನುಡಿದಾರ್ಪಿನೆ ಮೆಚ್ಚಿಸಿ ಕೊಂಡರಿಂತು ಕೆ
ಲ್ಲಂಗೆಱೆಯಂ ಪಲರ್ ಪೊಗಟೆ ಮೋನಿಭಟಾರರೆನುತ್ತೆ ಲೋಕಮೆ
ಲ್ಲಂ ಗೆಡೆಗೊಂಡು ಕೊಂಡುಕೊನೆದಪ್ಪುದು ಸಾಹಸಮೇನನೂನಮೋ
॥ 647 ॥

125) ಹಳೇಬೀಡು 338, E.C. IX (R), ಕ್ರಿ.ಶ. 1062

ಇದರಲ್ಲಿ ಹೊಯ್ಸಳ ದೊರೆನಾದ ನೃಪಕಾಮನ ಮಗ ವಿನಯಾದಿತ್ಯನು ದೋರಸಮುದ್ರದ ಕೆರೆಗೆ ತೂಬನಿಕ್ಕಿಸಿ ಬಿತ್ತುವಟ್ಟವನ್ನು ಬಿಟ್ಟಂತೆ ಹೇಳಿದೆ.

ಕಂ ॥ ಅನುಪಮನೆನಿಸಿದ ನೃಪಕಾ
ಮನಾಮವ್ರೊಯ್ಸಳನ ನಂದನಂ ಜಗದಧಿಕಂ
ವಿನಯಾದಿತ್ಯಂ ಪೊಯ್ಸಳ
ನೆನಿಸಿ ಚಿರಂ ಗಂಗವಾಡಿಯಂ ಪಾಳಿಸುತುಂ ॥ 648 ॥

ಮ ವಿ ॥ ಅದಟಂ ದೋರಸಮುದ್ರದೊಳ್ ಸಮುದಿತೋದ್ಯಚ್ಚ್ರೀ ಸಮಾಲಿಂಗಿತಾ
ಭ್ಯುದಯಂ ಸತ್ಸುಖ ಸಂಕಥಾ ಬಿನದದಿಂ ರಾಜ್ಯಂಗೆಯುತ್ತಿರ್ದು ಜೀ
ವದಯೋಪೇತನುದಗ್ರ ವೈರಿ ಬಳ ನಿರ್ಘಾತಂ ವಿಶೇಷ ಪ್ರಭಾ
ಸ್ಪದನೀ ತೂಂಬನುದಾತ್ತನಿಕ್ಕಿಸಿದನಾಚಂದ್ರಾರ್ಕ ತಾರಂಬರಂ ॥ 649 ॥

ಕಂ ॥ ರಕ್ಕಸವ್ರೊಯ್ಸಳನುಗ್ರ ಚ
ಳಕ್ಕಂ ಯಾದವ ಕುಳಾಂಬುಜಾರ್ಕಂ ಮುದದಿಂ
ದಿಕ್ಕಿಸಿದನೆಸೆವಿನಂ ಮೇ
ಲಕ್ಕಮನೀ ಕೆಱೆಗೆ ರಾಜಮಾಂಧಾತ ನೃಪಂ ॥ 650 ॥

126) ತುಂಬದೇವನ ಹಳ್ಳಿ 513, E.C. IX (R), ಕ್ರಿ.ಶ. 1096

ಇದರಲ್ಲಿ ಕದಂಬ ವಂಶದ ಎಱೆಯಂಗನ ಅರಸಿ ಅಸವಬ್ಬರಸಿ ಎಂಬುವವಳು ಬಸದಿಯೊಂದನ್ನು ನಿರ್ಮಾಣ ಮಾಡಿಸಿದ ವಿಚಾರವಿದೆ. ಎರೆಯಂಗನ ವಂಶದ ವಿವರಣೆ ಇದೆ.

ಜಯವರ್ಮ್ಮ

ಮ ವಿ ॥ ಜಯವರ್ಮ್ಮಂ ಮುದದಿಂದಮಿಟ್ಟು ನಿಯತಂ ಪಟ್ಟವಳಿಗೆಯಂ ರಾಜ್ಯಲೀ
ಲೆಯನಿನಾಳ್ದುನ್ನತಿಯಿಂ ಮನಂಗೊಳಿಸಿ ವಿದ್ವಿಷ್ಟಬ್ರಜಕೆಯ್ದೆ ಭೀ
ತಿಯನಿತ್ತಾಯಮನಪ್ಪುಕೆಯ್ದು ಚಲಮಂ ಕೈಕೊಂಡು ಲೋಕಪ್ರಸಿ
ದ್ಧಿಯುತಂ ಮಾಡಿದನಾವಗನ್ನಿಲೆ ಕದಂಬಾಮ್ನಾಯ ವಿಖ್ಯಾತಿಯಂ ॥ 651 ॥

ರಣಕಿ ಕ್ಷಿತಿಪ

ಕಂ ॥ ಶ್ರೀಮತ್ಕದಂಬವಂಶ ಲ
ಲಾಮಾವನಿನಾಥರೊಳಗೆ ರಣಕಿಕ್ಷಿತಿಪಂ
ಭೀಮ ಪರಾಕ್ರಮನೆನಿಸಿದ
ನೀ ಮಹಿಯೊಳರಾತಿ ಜಯೋದಯದಿಂದಂ ॥ 652 ॥

ಹೃದುವ ನೃಪ

ಕಂ ॥ ಆತನ ಮಗನಮಳ ಗುಣೋ
ಪೇತನತಿ ಪ್ರಬಳ ಜಳದಘನ ಪವನನೆನಿ
ಪ್ಪಾತತಯ ಯಶೋವಿಳಾಸ ವಿ
ನೂತತೆಗೆಡೆಯಾಗಿ ನೆಗಟ್ದಿ ಕಲಿ ಹೃದುವನೃಪಂ ॥ 653 ॥

ಭೂತ

ಕಂ ॥ ತತ್ತನಯನತುಳ ಬಳನು
ದ್ಧೃತ್ತರಿಪು ಕ್ಷಿತಿಪ ಕುಧರವಜ್ರಂ ಧೀರೋ
ದಾರ್ತ್ತನೆನೆ ನೆಗಟ್ದನಕುಟಿಳ
ಚಿತ್ತಂ ಪೋಚಾಯಿನೂತ ಪೂತಂ ಭೂತಂ ॥ 654 ॥

ಚಿಣ್ಣ

ಕಂ ॥ ಆತಂಗೆ ಪುಟ್ಟಿ ಬಳವದ
ರಾತಿ ಮಹೀಭುಜರನಿಱಿದು ಗೆಲ್ದುರ್ಮ್ಮಿನೊಳು
ರ್ವ್ವೀ ತಳಮೆ ಪೊಗೞೆ ತೋರಿದ
ನಾತತಸಿತಕೀರ್ತ್ತಿ ನೊಸಲ ಕಣ್ಣಂ ಚಿಣ್ಣಂ ॥ 655 ॥

ಕಂ ॥ ಪುಟ್ಟಲೊಡಂ ನಿನ್ನಯ ಪೆಸ
ಱಿಟ್ಟಪರೀಜಗದ ಮನುಜರೆಂದಡೆ ಪೆಸರೊಂ
ದಿಟ್ಟಳಮಾದಡೆ ಕೊಲ್ಗುಂ
ಪಟ್ಟಳಿಗೆಯ ಚಿಣ್ಣನೆಂಬ ಭಯರಸದಿಂದಂ ॥ 656 ॥

ಎರೆಯಂಗ

ಕಂ ॥ ಎನೆ ನೆಗಟ್ದಿ ಚಿಣ್ಣನೃಪತಿಗ
ಮನವದ್ಯ ಲತಾಂಗಿ ಸುಗ್ಗಿಯಬ್ಬರಸಿಗಮು
ರ್ವ್ವಿನದೊಸೆಗೆ ಪುಟ್ಟೆ ಪುಟ್ಟಿದ
ತನಯನತಿ ಪ್ರಕಟವಿಷದ ಯಶನೆಱೆಯಂಗಂ ॥ 657 ॥

ಅಕ್ಕರ ॥ ನೆಗಟ್ದಿ ನೃಪರತ್ನನಾಳ್ವರನೆರ್ವ್ವಟ್ಟೆ ಭೀತಿಯಿಂ ಬಂದು
ಪೊಗಳೆ ತನ್ನನವರೆ ಪಟ್ಟಿಯೊಡೆಯನಂ ಪೆರಗಿಕ್ಕಿ ಕಾದು ನಿನ್ದಾಳ್ವರನಂ

ಬಗೆಯದಾನ್ತರಿಸೇನೆಯನೋಡಿಸಿ ಗೆಲ್ದುರ್ಮ್ಮಿನೆಸಕದಿಂ ಸಿನ್ದುಜಂಗಂ
ಮಿಗಿಲುದಗ್ರಬಳಾವಲೇಪನಂ ಭುಜ್ಜಾದಣ್ಡನೀ ನನ್ನಿ ಮಾರ್ತ್ತಣ್ಡದೇವಂ
|| 658 ||

ಕಂ || ಮಲೆದಿದಿರನಾನ್ತಚೋಳಿಕ
ಬಲಮೆತ್ತಿದೊಡಾನ್ತುಮದಿರದೆಱೆಯಂಗನ ದೋ
ರ್ವ್ವಳದಳವನೇವೊಗಳ್ವುದೊ ಜ
ಕ್ಕಲದೇವನನೆಯ್ದೆ ಕಾದು ಕಳಿಪಿದ ಚಲಮಂ || 659 ||

ಕಂ || ಗಂಗೆಗಡಲ್ಗಳನೊರೆಗಂ
ತಿಂಗಳ ಬೆಳ್ಪಿಂಗಮೊದವಲಡಕಿಲ್ವೆಳ್ಪಿಂ
ಸಂಗಳಿಸಿ ತೀವಿದ
ತ್ತೆಱೆಯಂಗನ ಜಸಮಖಿಳ ಭುವನಾಂತರದೊಳ್ || 660 ||

127) ರನ್ನಘಟ್ಟ 484, E.C. IX (R); MAR 1926 No. 7, ಕ್ರಿ.ಶ. 1096

ಇದರಲ್ಲಿ ಹೊಯ್ಸಳ ದೊರೆ ವಿನಯಾದಿತ್ಯನ ಆಳಿಕೆಯಲ್ಲಿ ಭಾಸಗವುಂಡ ಎಂಬುವವನು ರಣಕ ಕಟ್ಟ ಎಂಬ ಗ್ರಾಮವನ್ನು ಸ್ಥಾಪಿಸಿದುದನ್ನು, ಬಾಚೇಶ್ವರ ದೇವಾಲಯವನ್ನು ಕಟ್ಟಿಸಿದುದನ್ನು ಬಳ್ಳಿಗೆರೆ ಎಂಬ ಕೆರೆಯನ್ನು ನಿರ್ಮಾಣ ಮಾಡಿಸಿದುದನ್ನು ಹೇಳಿದೆ.

ವಿನಯಾದಿತ್ಯ

ಕಂ || ಸ್ವಸ್ತಿ ಸಮಸ್ತ ಧರಾಧಿಪ
ಮಸ್ತಕ ವಿನ್ಯಸ್ತ ಹಸ್ತನುದಿತ ಜಯಶ್ರೀ
ವಿಸ್ತಾರಿ ಸ್ತನ ಹಾರಂ
ಪ್ರಸ್ತುತ್ಯಂ ಪುಣ್ಯಮೂರ್ತಿ ವಿನಯಾದಿತ್ಯಂ || 661 ||

ಎರೆಯಂಗ

ಕಂ || ಚಲದಿನೆಱಗಂಗೆ ಮಲದಿ
ರ್ದ್ದೞಗದ ರಿಪುಬಳಕೆ ಕಾಳಸರ್ಪ್ಪಂ ತಂನಂ
ನೆಱೆಪೊಱೆಪ ಪತಿಗೆ ಸಂಣನ
ಮೆಱೆಯಂಗನ ಹನ್ಮನಲ್ತೆಮೊನೆಯೊಳೆ ಭಾಸಂ || 662 ||

ಭಾಸ

ಕಂ || ನೆಟ್ಟನೆಱಗಂಗೆ ಚಲದಿಂ
ದೊಟ್ಟೈಸುವ ವೈರಿ ಭೂಪರಂ ನೋಡ ಮೊದ

ಲ್ಗಟ್ಟದ ಭಾಸಂ ಪರಿಯಿಂ
ದೊಟ್ಟಜೆಯಿಂ ಗೆಲ್ಗುಮುಗ್ರ ಸಮರಾಂಗಣದೊಳ್ || 663 ||

ಕಂ || ಎಱಗಂಗೆ ಮಲೆದು ಚಲದಿಂ
ದೆಱಗದ ರಿಪುಬಳಕೆ ಕಾಳಸರ್ಪಂ ತನ್ನಂ
ನೆಱೆ ಪೊರೆವ ಪತಿಗೆ ಸನ್ನಣ
ಮೆಱೆಯಂಗನ ಹನುಮನಲ್ತೆ ಮೊನೆಯೊಳ್ ಭಾಸಂ || 664 ||

128) ಹಳೇಬೀಡು 341, E.C. IX (R), ಕ್ರಿಶ. 1097 – 98

ಇದರಲ್ಲಿ ಹೊಯ್ಸಳ ದೊರೆ ವಿನಯಾದಿತ್ಯನು ಕೆರೆಯ ತೂಬೊಂದನ್ನು ಮಾಡಿಸಿದ್ದನ್ನು ಹೇಳಿದೆ.

ವಿನಯಾದಿತ್ಯ

ಕಂ || ಬಲಿದೊಡೆ ಮಲೆದೊಡೆ ಮಲೆಪರ
ತಲೆಯೊಳ್ ಬಾಳಿಡುವನುದಿತಭಯರಸವಶದಿಂ
ಬಲಿಯದ ಮಲೆಯದ ಮಲೆಪರ
ತಲೆಯೊಳ್ ಕೈಯಿಡುವನೊಡನೆ ವಿನಯಾದಿತ್ಯಂ || 665 ||

ಕಂ || ತೊಱೆಯೆನಿತುಂ ಕುಳಿಯೆನಿತುಂ
ಕೆಱೆಯಾದುವು ನೆಗಟ್ದಿ ಗಂಗವಾಡಿಯ ತೊಂಬ
ತ್ತಱುಸಾಸಿರದೊಳಂ ಬಾ
ಪ್ಪೆಱೆಯಂಗನ ಜನಕನಂತು ಧರ್ಮ್ಮಿಗಳೊಳರೇ || 666 ||

ಕಂ || ಘನಶೌರ್ಯ್ಯಂ ಯದುನನ್ದನ
ವನಂ ಪೇಳ ಸತ್ಯವಾಕ್ಯ ದಿನಕೃತ್ತನಯ
ವಿನಯಾದಿತ್ಯ ನೃಪಾಳಕ
ನನುಪಮನೀ ತುಂಬನಿಂಬಿನಂ ಮಾಡಿಸಿದ || 667 ||

129) ದಬ್ಬೆ ಅಗ್ರಹಾರ 191, E.C. IX (R), ಕ್ರಿಶ. 1099

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆಯಾದ ಆರನೆಯ ವಿಕ್ರಮಾದಿತ್ಯನ ಸಾಮಂತ ಪೊಯ್ಸಳ ರಾಜನಾದ ತ್ರಿಭುವನಮಲ್ಲ ಹೊಯ್ಸಳದೇವನು ಗಂಗವಾಡಿಯನ್ನು ಆಳುತ್ತಿರಲು ಕೋಜಿಗೌಡನು ಕೋಜೇಶ್ವರ ದೇವರಿಗೆ ಭೂಮಿಯನ್ನು ದತ್ತಿ ಬಿಟ್ಟಂತೆ ಹೇಳಿದೆ.

ಕೋಚಿಗಾಂಕ

ಕಂ ॥ ಮನಮೊಸೆದು ಕೋಚಿಗಾಂಕಂ
ಗನುನಯದಿಂ ಮಾೞ್ಕೆ ಮಹಿಮೆಯಂ ಮದನ ಘನಾ
ಘನಪಟಳಪವನನಗಜಾ
ನನವೀಕ್ಷಣ ಲಂಪಟೋತ್ಕರಂ ನಿಟಿಲಾಕ್ಷಂ ॥ 668 ॥

ಕಂ ॥ ನೆರೆದೆರೆದ ಬುಧರ ನೆರವಿಗೆ
ಸುರುಚಿರತರ ಕನಕವಸ್ತುವಂ ಸುರಿವ ನಿರ
ನ್ತರ ಸುರತರು x x x
ಸರಿದೊರೆವನ್ದಪುದೆ ಕೋಚಿಗಾಂಕನ ಕೆಲದೊಳ್ ॥ 669 ॥

ಏಚಲೆ

ಕಂ ॥ ಇತ್ತಜಿಯರ್ತ್ತಾಂ ಮಾರಾ
ನಿತ್ತಡವೆಟ್ಟ್ದೆಯಾದ ವರನ್ಯಸ್ತ್ರಜನಮೆಲ್ಲಾ
ನಿತ್ತು ಕೃತಾರ್ತ್ಥೆಯೆನೆ ಬಳೆ
ಸಂ ತಿಳೋತ್ತಮೆ ಧರೆಯೊಳ್ ನೆಗಟ್ದಿಳೇಚಲನಾರೀ ॥ 670 ॥

130) ಬೇಲೂರು 168, E.C. IX (R), ಕ್ರಿಶ. 1117

ಈ ಶಾಸನದಲ್ಲಿ ಮೂರು ಮುಖ್ಯ ಗದ್ಯಭಾಗಗಳಿವೆ. i) ಶಾಂತಲೆಯ ವರ್ಣನೆ ii) ಮುಖ್ಯದ್ವಾರದಿಂದ ಕೂಡಿದ ಮಹಾಪ್ರಾಸಾದ ವರ್ಣನೆ ಹಾಗೂ iii) ಪ್ರಧಾನ ದೈವ ವಿಜಯನಾರಾಯಣನ ವರ್ಣನೆ. ಅಲ್ಲದೆ, ಹೊಯ್ಸಳದೊರೆ ಎರಡನೇ ಬಲ್ಲಾಳನು ಬೇಲೂರು ಚನ್ನಕೇಶವ ದೇವಾಲಯದ 'ಕಲ್ವೆಸ'ವನ್ನೂ ಜಾಳಂದ್ರ, ದೃಢವಾದ ಬಾಗಿಲುವಾಡ, ಅಡಿಗೆ ಮನೆ, ಉಗ್ರಾಣ, ಪ್ರಾಕಾರ, ವಾಸುದೇವ ಸರಸ್ಸನ್ನೂ ಮಾಡಿಸಿದಂತೆ ಹೇಳಿದೆ. ಇದನ್ನು ಬರೆದವನು 'ಬರೆವರಾಚಾರ್ಯ ಸೂರ್ಯಣಂ'.

ಶಾಂತಲೆ

ವಚನ ॥ ಸ್ವಸ್ತಿ ಸಮಸ್ತ ಮಂಗಳಾಭ್ಯುದಯ ಕರಲಕ್ಷಣಾಭಿರಾಮೆಯುಂ
ಸೌಭಾಗ್ಯ ಸೀಮೆಯುಂ
ಬಲಿಪುರವರಕ್ಷೀರ ವಾರಾಶಿಜನಿತಕಮಳೆಯುಂ ವಿಶುದ್ಧಾಚಾರ ವಿಮಳೆಯುಂ
ವಿಷ್ಣುವರ್ಧನ ಮನೋರಾಗ ಸಾಗರಾಬ್ಧಿವರ್ಧನ ಚಂದ್ರಲೇಖೆಯುಂ
ಪರಿವಾರ ಫಳಿತಕಲ್ಪ ಕುಜಶಾಖೆಯುಂ
ಸದರ್ತ್ಥ ಸರಸ ಸಮಯೋಚಿತವಚನಮಧುರಸಸ್ಯಂದಿ ವದನಾರವಿಂದೆಯುಂ
ನಗರಾಜನಂದನಾಪಾದಾರವಿಂದೆಯುಂದನವರ್ಧಿತಾ ನಂದೆಯುಂ

ಕಳಾಕಳಾಪರತ್ನ ಗರ್ಭ್ಗ ವಸುಂಧರೆಯುಂ
ಲಾವಣ್ಯಸಿಂಧು ವೇಳಾಲೀಲಾಯಮಾನ ಕೇಕರಾತಿಬನ್ಧುರೆಯುಂ
ವಿಚಿತ್ರನರ್ತನ ಪ್ರವರ್ತನ ಪಾತ್ರಶಿಖಾಮಣಿಯುಂ
ಸಕಳ ಸಮಯ ರಕ್ಷಾಮಣಿಯುಂ
ಸವತಿಗಂಧಹಸ್ತಿಯುಂ
ಇತ್ಯಾದಿ ನಾಮಾವಳೀ ಪ್ರಶಸ್ತಮಯಮೆನಿಸಿದ ಶ್ರೀಮತ್ಪಿರಿಯರಸಿ
ಪಟ್ಟಮಹಾದೇವಿ ಶಾಂತಲದೇವಿ

ಸ್ವಸ್ತಿ ಸಮಸ್ತ ಮಂಗಳಾಭ್ಯುದಯಕರ ಲಕ್ಷಣ ಲಕ್ಷಿತಮುಂ
ಶಬ್ದವಿದ್ದೆಯಂತೆ ಸೂತ್ರಮುಖ ಸಿದ್ಧಮುಂ
ಶ್ರುತಿಕದಂಬದಂತೆ ಪದಕ್ರಮಾನುವಿದ್ಧಮುಂ
ತ್ರಿವಿಕ್ರಮಾವತಾರದಂತಿರುಪಕ್ರಮ ಪ್ರವದ್ಧಮುಂ
ಚತುರ್ಮುಖನಂತೆ ಕಮಳೋದ್ಭವಮುಂ
ಶಶಿಖಂಡಮಂಡನನಂತೆ ಶಿಲಾಪುತ್ರಿಕಾಳಂ ಕೃತಮುಂ
ಶತ ಕ್ರತುವಿನಂತೆ ನಯನಾಭಿರಾಮಮುಂ
ಕುಲಗಿರಿಯಂತೆ ದೃಢಮೂಳಬಂಧಬಂಧಮುಂ
ಜಲಾಶಯದಂತೆ ಕುಮುದೋಲ್ಲಾಸಿಯುಂ
ಹರಗಿರಿಯಂತೆ ವೃಷ ಪದಾಂಕಿತಮುಂ
ಗುರುವರಣಮಾಗಿಯುಂ ತಮೋಗುಣಮಲ್ಲದೆಯುಂ
ಸ್ತಂಭಸಂಭೃತಮಾಗಿಯುಂ ರಜೋಗುಣಮಲ್ಲದೆಯುಂ
ಹರ್ಷೋತ್ಕರ್ಷಮಾಗಿಯುಂ ಸತ್ವಗುಣಮಲ್ಲದೆಯುಂ
ಸಿಂಹಗಜಾಳಿಯುನುಳ್ಳುದಾಗಿಯುಂ ಗಹನಮಲ್ಲದೆಯುಂ
ಜಳನಿಧಿಯಂತೆ ಗಭೀರಾಂತರಂಗಮುಂ
ಕನಕ ಶಿಖರಿಯಂತೆ ಧ್ರುವಗತಿನಿರುತಮುಂ
ಚಂದ್ರಮಂಡಳದಂತೆ ಸುಧಾವಳಂಬಿಯುಂ
ರವಿಮಂಡಳದಂತೆ ವಿಯತ್ ಪಥವರ್ತಿಯುಂ
ಗಗನ ಮಂಡಳದಂತೆ ಭಗಣಸಂಕ್ರಾಂತಮುಂ
ಬಹುಕೂಟ ಕೋಟಿ ಘಟಿತ ಕಳಶ ವಿಳಸಿತಮುಂ
ಬಹುಭೂಮಿಕೋದ್ಭಾಸಿತ ಶ್ರೀಮುಖದ್ವಾರಮುಮೆನಿಸಿದ
ಶ್ರೀಮನ್ಮಹಾಪ್ರಾಸಾದದೊಳ್

ಸ್ವಸ್ತಿ ಸಮಸ್ತ ಜಗದುದಯಕರಚತುರ ಚತುರಾನನೋದ್ಭೂತಿ ಪುಂಡರೀಕ
ಧವಳಿತೋದರನುಂ
ಭುಜಬಳ ನಿಯುಕ್ತ ಹಳಮುಖ ಸಮಾಕೃಷ್ಯ ಯಮುನಾನದೀ ಪ್ರವಾಹ
ವಿದಿತ ಸಾಮರ್ಥ್ಯ ಮುದ್ರಾಭದ್ರಬಳಭದ್ರ ಸಹೋದರನುಂ
ಅಮೃತಮಥನ ಸಮಯ ಸಂಸಿಕ್ತಸುವ್ಯಕ್ತ ಬಿಂದು ಬೃಂದ ತಾರಕಿತ ವಿಕಟ
ವಕ್ಷಸ್ಥಳ ವಿಯತ್ತಳನುಂ
ನಿಜಖುರಘಟಿತ ವಿಗಳಿತ ಸಕಳ ಜಲಧಿಕರ್ದ್ದಮಿತ ಪಾತಾಳಪಂಕ ಕೇಳೀ
ವಿಲೋಳ ವರಾಹರೂಪ ಹೇಳಾ ಸಮುತ್ಥಾಳಿತ ಧರಾತಳನುಂ
ಧರಣೀ ಭಾರಾವತಾರ ಪಾಂಡವೋಪಕಾರನುಂ
ಬಳಿಕರನಿಯುಕ್ತ ಧಾರಾ ಪ್ರವರ್ಧ್ಧಮಾನ ವೃತ್ತಿ ಲತಾರೂಢೋದ್ದಂಡ
ಪದ್ಮಜಾಂಡ ಸ್ಪೃಗಾಧಾರ ದಣ್ಡಾಯಮಾನ ಕಳೇವರ ತ್ರಿವಿಕ್ರಮಾವತಾರಮಿತ
ಧರಣೀಮಂಡಳನುಂ
ಅತಿ ಕ್ರೂರದನುಜ ವಿನಾಶ ವಿರಚಿತೋಪಾಯ ರಕ್ಷಿತಾಖಂಡಳನುಂ
ಸುರಾಸುರಕರಾಕೃಷ್ಟಮಾಣ ಮಂದರ ಭ್ರಮಣಭರಸಹಾತಿ ಧೀರಕ
ಮಠಾಕಾರದರ್ಶಿತದೃಢತ್ವನುಂ
ಪರಮ ಮಹತ್ಪರಿಮಾಣಗರ್ಭೀಕೃತಸಕಳಸತ್ವನುಂ
ಅಜ್ಞಾತ ಪರಮಾರ್ತ್ಥಸ್ವರೂಪನಾಗಿಯುಂ ಪ್ರಕಟನುಂ
ಅನಿಕಟೀಕೃತನಿಕಟನುಂ ಅದೂರಿಕೃತದೂರನುಂ
ಅತುಂಗೀಕೃತತುಂಗನುಂ ಅಸೂಕ್ಷ್ಮೀಕೃತ ಸೂಕ್ಷ್ಮನುಂ
ಅಗಹನೀಕೃತಗಹನನುಂ ಅನವರತ ಗಭೀರನುಂ
ಅವಿಸ್ತಾರ್ಯ್ಯಮಾಣವಿಸ್ತರ್ಣ್ಣನುಂ ಪರಂಬ್ರಹ್ಮಸ್ವರೂಪನುಮ್
ಎನಿಪ ಶ್ರೀಮದ್ ವಿಜಯನಾರಾಯಣ ದೇವರುಂ
ಶ್ರೀಮದ್ವಿಷ್ಣುವರ್ದ್ಧನ ಪೊಯ್ಸಳದೇವರ್

ಎರಡನೆಯ ಬಲ್ಲಾಳನು ಮಾಡಿಸಿದ ದೇವಾಲಯ

ಮ ವಿ ॥ ಎಸೆಯಲ್ ಜಾಳಕಜಾಳಕಂ ದೃಢಕವಾಟಂ ದ್ವಾರಶಾಖಾಳಿ ಬಾ
ಣಸು ಕೊಟ್ಟಾರಮುದಗ್ರವಪ್ರಮುದವಾಸಂ ವಾಸುದೇವಾಖ್ಯತೀ
ರ್ಥಸರಂ ಶ್ರೀವಿಜಯಾದಿಶಬ್ದವಿಳಸನ್ನಾರಾಯಣಂಗೊಲ್ದು ಕ
ಲ್ವೆಸದಿಂ ತೆಂಕಣ ಚಕ್ರಿ ಮಾಡಿಸಿದನೀಬಲ್ಲಾಳಭೂಪಾಳಕಂ ॥ 671 ॥

ಮ ಸ್ರ ॥
ಅಗೆವಂ ಪಾತಾಳಮೆಂಟುಂ ದೆಸೆಗಳಗಲದಿಂದುದ್ಧದಿಂ ವ್ಯೋಮಮುಂತಿ
ರ್ದೆಸಗಿಯಾಗಲ್ ಪೆರ್ಚೆ ಮೂಱುಂ ಭುವನದೊಳೆಸೆವುತ್ತುಂಗಿಯುಂ ಕೊಂಡ ಗಂಡಂ
ಮಗುಳ್ದುಂ ಪಾಂಡ್ಯಂ ಶರಣ್ಗೊಕ್ಕೊಡೆ ಕರುಣಿಸಿ ತದ್ರಾಜ್ಯಮಂ ಕೊಟ್ಟು ಮೂಱುಂ
ಜಗದೊಳ್ ವಿಖ್ಯಾತಿವೆತ್ತಂ ಹರಣಭರಣದಿಂ ವೀರಬಲ್ಲಾಳದೇವಂ ॥ 672 ॥

131) ಬೇಲೂರು 196, E.C. IX (R), ಕ್ರಿ.ಶ. 1117

ಇದರಲ್ಲಿ ಹೊಯ್ಸಳ ದೊರೆ ವಿಷ್ಣುವರ್ಧನ ಮತ್ತು ಅವನ ಪಟ್ಟದ ರಾಣಿ ಶಾಂತಲೆಯನ್ನು ಸ್ತುತಿಸಿದೆ.

ವಿನಯಾದಿತ್ಯ

ಕಂ ॥ ಕೊಂಕಣಿಗರಿವನ ಖಡ್ಗದ
ಕಂಕಣಮದೆ ನಮ್ಮನೆಲವೊ ಮುಱುಗಿಸುಗೆನುತುಂ
ಭೋಂಕಲ್ ಕೆದಱುವಿನಂ ನಿ
ಶ್ಯಂಕಂ ಪರಿಯಿಟ್ಟನಲ್ತೆ ವಿನಯಾದಿತ್ಯಂ ॥ 673 ॥

ಕಂ ॥ ಮಲೆಯರಸುಮಕ್ಕಳೆಲ್ಲಂ
ತಲೆಯಂ ತಡವುತ್ತುಮೆಬ್ದು ಪಾದಾಂಬುಜಮಂ
ತಲೆಯೊಳ್ ತಳೆವಿನೆಗಂ ಭುಜ
ಬಳಮಂ ತಳೆದಿರ್ಪನಲ್ತೆ ವಿನಯಾದಿತ್ಯಂ ॥ 674 ॥

ಕಂ ॥ ಯುಗಸಾಮರ್ಥ್ಯದೆ ಮುನ್ನಂ
ನೃಗನಹುಷಾದಿಗಳೊಳಾದ ಗುಣಮೇಂ ಗುಣಮೇ
ಮಿಗಿಲಾರ್ತಂ ಗುಣದಿಂ ಕಲಿ
ಯುಗಸಾಮರ್ಥ್ಯಮುಮನಳೆದು ವಿನಯಾದಿತ್ಯಂ ॥ 675 ॥

ವಿಷ್ಣುವರ್ಧನನ ರಾಣಿ ಶಾಂತಲೆ

ಕಂ ॥ ಪತಿಭಕ್ತಿ ಭವದ್ವಯಕಂ
ಹಿತಮೆಂಬುದನಱಿದು ವಿನಯದಿಂ ವಿಷ್ಣುಮಹೀ
ಪತಿಯಂ ಮೆಚ್ಚಿಸುತೆ ಮಹಾ
ಸತಿ ಶಾಂತಲದೇವಿ ಪಟ್ಟಮಂ ಧರಿಯಿಸಿದಳ್ ॥ 676 ॥

ಕಂ ॥ ಬಸನಂ ಪತಿಹಿತದಲ್ಲಿಯೆ
ಬಸನಂ ದ್ವಿಜದೇವ ಪೂಜೆಯಲ್ಲಿಯೆ ನೆಗಳ್ದಾ

ಬಸನಂ ನೋಂಪಿಗಳಲ್ಲಿಯೆ
ಬಸನಂಗಳ್ ಶಾಂತಿದೇವಿಯೊಳ್ ಪೆಱವೊಳವೇ ॥ 677 ॥

132) ಬೇಲೂರು 16, E.C. IX (R), ಕ್ರಿ.ಶ. 1117

ಇದರಲ್ಲಿ ಹೊಯ್ಸಳರ ದೊರೆಯಾದ ವಿಷ್ಣುವರ್ಧನನು ಬೇಲೂರಲ್ಲಿ ವಿಜಯನಾರಾಯಣ ದೇವಾಲಯವನ್ನು ಕಟ್ಟಿಸಿ, ದೇವರ ಪ್ರತಿಷ್ಠೆ ಮಾಡಿಸಿ, ಗ್ರಾಮಗಳನ್ನು ದತ್ತಿ ಬಿಟ್ಟಂತೆ ಹೇಳಿದೆ.

ಎರೆಯಂಗ

ಮ ಸ್ರ ॥
ಪೊಗೆ ಪೊಕ್ಕಾಶಾಧಿಪರ್ ಕಣ್ಗಳನೊರಸುವಿನಂ ದಿಗ್ಗಜಾಪಾಂಡುದಂತಂ
ಪೊಗೆಸುತ್ತಲ್ ಕರ್ಗ್ಗಿಕೊಂಡಿರ್ಪಿನಮಪಘನಮಾಗಿರ್ದ ರೋದೋಂತರಾಳಂ
ಪೊಗೆಯಿಂದಂ ಮೇಘಬೃಂದಾನ್ವಿತಮೆನಿಸುವಿನಂ ತೀವ್ರತೇಜೋನಲಂ ಕೆ
ಯ್ಮಿಗುವನ್ನಂ ಪೊಯ್ಸಳಂ ಭೋಜನ ಕುಱುಪಿನ ದುರ್ಗಂಗಳಂ ಕೂಡೆ ಸುಟ್ಟಂ ॥ 678 ॥

ಮ ಸ್ರ ॥ ನಿಜಸೇನಾಧೂಳಿಯಿಂ ಚೌಕದ ಕಿಳಿಗಿಳದಾ ಬೆಟ್ಟುಗಳ್ ಕೂಡೆ ಮೇಘ
ವ್ರಜದಿಂ ಪೂಣ್ದಿರ್ದುವೆಂಬಂತಿರೆ ನಡೆವದಟಂ ಕೊಂಡವಂ ಸುಟ್ಟು ಧೂಮ
ಧ್ವಜಮಂಭೋಜಪ್ರಣಾಶೋದಯಮನೊದವಿಸಲ್ ಪೊಯ್ಸಳಂ ಚಕ್ರಿ ಚೈತ್ರ
ಧ್ವಜಮಂ ರಾಗೋತ್ಕಟಂ ಕಟ್ಟಿದನೆನೆ ಪೆಱರಾರ್ ವೀರರಾ ಧೀರನಿಂದಂ
॥ 679 ॥

ಕಂ ॥ ಕರೆವಿಡಿದು ಬಳೆಯವಟ್ಟಣ
ಮುರಿವುದುಮೆಱೆಗಂಗನೃಪನ ಕೋಪಾನಳನಿಂ
ಸ್ಮರಿಯಿಸಿದುದು ರಾಮಶರ
ಸ್ಫುರಿತಾಗ್ನಿಯನಬ್ಧಿವೀಚಿನಿಚಯಾಚಕಿತಂ ॥ 680 ॥

ಮ ವಿ ॥
ಇನನೊರ್ವಂ ಪೊಱಗಾಗೆ ಪೇಱ್ ಪುದುವೆ ತೇಜಂ ಕ್ಷತ್ರಿಯಂಗರ್ಕನಂ
ದನನೊರ್ವಂ ಪೊಱಗಾಗೆ ಪೇಱ್ ಪುದುವೆ ದಾನಂ ಭೂಭುಜಂಗಬ್ಜಗ
ರ್ಭನುಮೊರ್ವಂ ಪೊಱಗಾಗೆ ಪೇಱ್ ಪುದುವೆ ಚಾತುರ್ಯಂ ನೃಪಂಗೆಂದು ಮೆ
ಚ್ಚನಿವಂ ಮತ್ತಿನ ಭೂಪರಂ ನೃಪವರಂ ಶ್ರೀರೂಪನಾರಾಯಣಂ ॥ 681 ॥

ಏಚಲದೇವಿ

ಕಂ ॥ ಆ ನರಪತಿಗಂಭೋಧಿಗ
ನೂನಗಭೀರತೆಯೆ ಸಮನಿಸಿರ್ಪಂತಿರೆ ಸ

ನ್ಮಾನಿನಿಯೇಚಲದೇವಿ ಮ
ನೋನಯನಪ್ರೀತಿ ಸಮನಿಸಲ್ ಸಮನಿಸಿದಳ್ ॥ 682 ॥

ಕಂ ॥ ಮೊಗಸಿರಿ ಲಕ್ಷ್ಮಿಗೆ ವಾಗ್ದೇ
ವಿಗೆ ಬುದ್ಧಿ ನಿಜೇಶ್ವರಂಗೆ ಹಿತಸಿದ್ಧಿಯೆನಲ್
ಸೊಗಯಿಸಿರೆ ರೂಪು ಮತಿಕಾ
ರ್ಯಗತಿಬೆಡಂಗಮರ್ದುದಾ ಮಹಾಸತಿಗೆಂತುಂ ॥ 683 ॥

ಕಂ ॥ ಶ್ರುತಿಕಥಿತ ಪಥದೊಳಮರ್ದಿರೆ
ಗತಿಗಳ್ಯುದ್ಧಾತ್ಮತತ್ವದೊಳ್ ನಿಮಿರ್ದಿರೆ ಸ
ನ್ಮತಿಗಳ್ ಪುಣ್ಯಾತ್ಮರವರ್
ಸ್ತುತಿಗಂ ರಾಜ್ಯಕ್ಕಮೊಪ್ಪೆ ಭಾಜನಮಾದರ್ ॥ 684 ॥

ವಿಷ್ಣುವರ್ಧನ

ಉ ಮಾ ॥ ದೋರಸಮುದ್ರದಲ್ಲಿ ಜಗದೇವನ ಸೇನೆಯನಿಕ್ಕಿ ತಮ್ಮ ತೋಳ್
ವೀರ ಸಮುದ್ರಮಾಗೆ ಜಯಲಕ್ಷ್ಮಿಗೆ ತದ್ಗಜ ವಕ್ತ್ರರಕ್ತ ಕಾ
ಶ್ಮೀರ ವಿಲೇಪನಂ ನೆಱಪಿ ತತ್ವದಕಂ ಬೆರಸೆಯ್ದಿಕೊಂಡು ಭಂ
ಡಾರಮನಾ ನೃಪರ್ತ್ತಳೆದ ವೀರಮನಾರೋ ಗಭೀರಮೆಂನದರ್ ॥ 685 ॥

ಮ ವಿ ॥ ಮೊದಲೊಳ್ ಪೊಯ್ಸಳ ರಾಜ್ಯಲಕ್ಷ್ಮಿಯೊದವಂ ತೋಳ್ ಬಲ್ಪಿನಿಂ ತಾಳ್ದಿ ತಂ
ನುದಯಂ ರಂಜಿಸೆ ತಂನ ಬಲ್ಪೊದವೆ ತಂನಾರ್ಪ್ಪೞೆ ತಂನಾಜ್ಞೆ ಮೀ
ಱೆ ದಿಶಾಚಕ್ರಮನೊತ್ತಿಕೊಂಡು ತಳಕಾಡಂ ಗಂಗರಾಜ್ಯಕ್ಕೆ ತಾಂ
ಮೊದಲಾದಂ ಯದುವಂಶವರ್ಧನಕರಂ ಶ್ರೀವಿಷ್ಣು ಭೂಪಾಳಕಂ ॥ 686 ॥

ಕಂ ॥ ಪಿಂಗದೆ ತೋಳೊಳ್ ಕೊರ್ವಿ ಮ
ಲಂಗಿರೆ ಜಯಲಕ್ಷ್ಮಿ ಲಕ್ಷ್ಮಿ ವರ್ಧಿಸೆ ಸುಟ್ಟಂ
ಗಂಗರ ಕುಱುಪಿನ ಪುರಮಂ
ತುಂಗಬಳಂ ವಿಷ್ಣುವೆಂಬ ಭುಜಬಳಗಂಗಂ ॥ 687 ॥

ಮ ವಿ ॥ ಎಲೆ ಕಾವೇರಿಯ ವಾರಿ ಕೂಡೆ ಪೊಲಸಾದತ್ತೆಂದು ಪೇವೈಸುತುಂ
ಕೆಲದೊಳ್ ಕೂಪಜಳಾಶಿಯಪ್ಪಿನೆಗಮಾ ರಾಜೇಂದ್ರಚೋಳಂ ಭುಜಾ
ಬಲದಿಂ ವಿಷ್ಣು ತದೀಯಸೇನೆಯ ಪೆಣಂಗಳ್ ತನ್ನದೀಪೂರದೊಳ್
ಕಲಸಲ್ ವಿಕ್ರಮಕೇಳಿಯಂ ಮೆಱೆದನತ್ಯುಗ್ರಪ್ರತಾಪೋದಯಂ ॥ 688 ॥

ಮ ವಿ ॥ ಧನದಂ ದಕ್ಷಿಣ ವಾಯುವೇಕೆ ತಡೆದತ್ತೋ ತೀಡಿತಿಲ್ಲಿಂನುವೆಂ
ಬಿನೆಗಂ ವೈರಿ ಕರೋಟಿ ಕೋಟಿ ಮುಖನಾಸಾರಂಧ್ರದೊಳ್ ಮಂದ್ರ ನಿ
ಸ್ವನಮುಣ್ಮಲ್ ಮಳಯಾನಿಳಂ ಸುಟಿದು ಕಾಲಕ್ಷೇಪಮಂ ವಿಷ್ಣುಭೂ
ಪನ ಚೈತ್ರೋರ್ವ್ವರೆಯಲ್ಲಿ ಮಾಡುವುದು ಕಾವೇರೀ ನದೀ ತೀರದೊಳ್
॥ 689 ॥

ಮ ಸ್ರ ॥ ಶರಣೆನ್ನೆನ್ನೀಶನಂ ವಾರಿಧಿಯೊಳಕಟ ಮೈನಾಕ ನೀರ್ವಕ್ಕಿವೋಲ್ ಪೊ
ಕ್ಕಿರವೇಡಾ ವಜ್ರಿಗಿನ್ನಂಜದಿರಧಿಕಬಳಂ ಕಾದಪಂ ನಿನ್ನನೆಂದಾ
ದರದಿಂ ಭೀತಾದ್ರಿಯಂ ತನ್ನಯ ವಿಮಳಯಶೋಲಕ್ಷ್ಮೀ ಕಾರುಣ್ಯದಿಂದಂ
ಕರೆವಂತಂಭೋಧಿಯಂ ಪೊರ್ದಿರೆ ಸೊಗಯಿಸಿದಂ ಜಿಷ್ಣು ವಿಷ್ಣುಕ್ಷಿತೀಶಂ
॥ 690 ॥

ಮ ಸ್ರ ॥
ಶರಣೆಂಗಾ ಚಂದ್ರನಿಂ ಚಂದನದಿನತಿಶಯಂ ಶೀತಳಂ ನಿರ್ಮ್ಮಳಂ ಮ
ಚ್ಚರವೆಂಗಾ ರುದ್ರನುದ್ರೇಕದೆ ಕೆದಱಿಪನಂದುಂಡುದಂ ನಂಜನೆಂಬಂ
ತಿರೆ ತೋರ್ಕುಂ ತನ್ನ ಕಾಯ್ಪುಂ ಮಲೆಯದರಿನೃಪಂ ಕಾಣ್ಗೆ ಮೇಣ್ ಕಾದುಗೆಂತುಂ
ಪಿರಿಯಂ ಪೇಟ್ ಮಾಣ್ಬನೇ ತೋಱದೆ ನಿಜಗುಣಮಂ ಜಿಷ್ಣು ವಿಷ್ಣು ಕ್ಷಿತೀಶಂ ॥ 691 ॥

ಮ ಸ್ರ ॥ ರವಿ ತೇಜೋಲತೆಯೊಳ್ ಪೊದಟ್ದಿ ತಳವೆಂಬಂತಿರ್ಪ್ಪಿನಂ ಪೂರ್ಣ್ಣಬಿಂ
ಬವನುಳ್ಳಿಂದು ಯಶೋವಿಶಾಳಲತೆಯೊಳ್ ಪೂಗೊಂಚಲಂತಿರ್ಪ್ಪಿನಂ
ಧವಳಚ್ಛತ್ರದ ತಣ್ಪು ಭೂಮಿಗಮರ್ದಿಪ್ಪಂತಿಪ್ಪಿನಂ ಕ್ಷತ್ರಧ
ರ್ಮ್ಮವಿಡಂಬಂ ಪೊಗಟ್ವಂಗಳುಂಬವೆನಿಸಿತ್ತು ವಿಷ್ಣುಭೂಪಾಳನೊಳ್॥ 692 ॥

ಮ ವಿ ॥ ಇವನೀ ದಕ್ಷಿಣಬಾಹುದಂಡದೊಳೊಡಂಬುಟ್ಟಾಗಿ ತೋಱಿರ್ಪ್ಪ ಮೆ
ತ್ತೆವೊಲಾಯ್ತಾದಿವರಾಹನೆತ್ತಿದ ಧರಿತ್ರೀಮಂಡಳಂ ತೇಜದಿಂ
ದವರಲ್ದಂಬುಜದಂತಿರಂಬರದೊಳಿರ್ದತ್ತುಷ್ಣರುಙ್ಮಂಡಳಂ
ಸವನೇ ಸಾಹಸದೊಳ್ ನಳಾದಿನರಪಾಳರ್ ವಿಷ್ಣುಭೂಪಾಳನೊಳ್ ॥ 693 ॥

ಮ ವಿ ॥ ಜವನುಂ ತನ್ನಯ ಗಂಡಲಚ್ಚಣವೆನಿಪ್ಪಾ ಮೀಸೆಯಂ ತಿರ್ದ್ದಲಂ
ಜುವಿನಂ ಕುಂದುಗುವೆಂದು ಕಾಲುಗುರ್ಗ್ಗಳಾನಮ್ರಾರಿಗಳ್ ಸುಯ್ಯಲಂ
ಜುವಿನಂ ತೇಜದ ಸೋಂಕಿನಿಂದವೆಮೆಸೀಗೆಂದುದ್ಧತನ್ರೋರ್ಡಲಂ
ಜುವಿನಂ ವಿಕ್ರಮ ವಿಭ್ರಮಂ ಸೊಗಯಿಸಿತ್ತೀ ವಿಷ್ಣುಭೂಪಾಲನೊಳ್
॥ 694 ॥

ಚಂ ಮಾ ॥ ದೆಸೆಗಳನೊತ್ತಿಕೊಂಡ ಧನದಿಂದಮಿವಂ ಸಲೆ ಮಾಡುವಧ್ವರ
ಪ್ರಸರದೊಳಂಜುತುಂ ಹವಿಗೆ ನೀಡುವ ಶಕ್ರನ ಕೆಯ್ಯ ಕಂಪಮುಂ
ಪ್ರಸರಿಪ ಧೂಮಸಂಚಯದೆ ಕಾಡಿಗೆಗೊಳ್ವ ಸರೋಜಜಾಂಡಮುಂ
ಬೆಸಗೊಳವೇಡ ವಿಷ್ಣು ಪುರುಷೋತ್ತಮನೆಂದಿವು ತಾವೆ ಪೇೞವೇ ॥ 695 ॥

ಮ ಸ್ರ ॥
ಪದುಳಂ ನಿಂದಂತುಮಿಂತುಂ ನಿಮಿರ್ವ ನೆಲಕೆ ಬೇರಿರ್ಪವೋಲಿರ್ಪ ತೋಳ್ ಸೊ
ರ್ಕದ ವೀರಶ್ರೀಗೆ ಸೊರ್ಕೇಱಿಸುವ ಮಸಕಮಂ ಪೆತ್ತ ಬಾಳ್ ದಿಗ್ಗಜಾನೀ
ಕದ ಮೆಯ್ಯಂ ಸುಯ್ಯುಮಂ ಬೆಚ್ಚನಿಪ ಬಿಸಿಯ ತೇಜಂ ಪೊದಟ್ದಿರ್ಪಿನಂ ಕೊ
ರ್ವಿದ ರಾಜ್ಯಶ್ರೀಯುಮಾಯುಂ ತನಗೆ ದೃಢಮೆನಲ್ ವಿಷ್ಣು ರೋಚಿಷ್ಣುವಾದಂ
॥ 696 ॥

ಉ ಮಾ ॥ ಮುದ್ರಿಸಲಾದಿರಾಜ ಚರಿತಂಗಳನಾತ್ಮ ಚರಿತ್ರಮಾವಗಂ
ಮುದ್ರಿಸಲಾಜ್ಞೆ ಭೂತಳಮನುದ್ಧತಮಪ್ಪರ ಗಂಡಗರ್ವಮಂ
ಮುದ್ರಿಸೆ ತೋಳಬಾಳ ಬಳಮುಜ್ವಳಕೀರ್ತಿ ಜಗಂಗಳೆಲ್ಲಮಂ
ಮುದ್ರಿಸೆ ಪೆಂಪೆ ಮುದ್ರೆ ತನಗಾಗಿರೆ ವಿಷ್ಣುಸಮುದ್ರಮೊಪ್ಪುಗುಂ ॥ 697 ॥

ಮ ವಿ ॥ ಸ್ಥಿರನೇ ಕೈಯೊಳೆ ಧಾತ್ರಿಯಂ ನಿಲಿಸಿದಂ ತೇಜಸ್ವಿಯೇ ವಹ್ನಿಯಂ
ಕೊರಗಿರ್ಪಂ ಕುಡಲಾರ್ಪನೇ ಕನಕಶೈಳಂದೂರಮಾಗಿರ್ದ್ದನಿ
ತ್ತರಿಸಿತ್ತೇಂ ಶುಚಿಯೆ ನಿರೀಕ್ಷಿಸಿದವನ್ನಿಱ್ಬಾಪಿಗಳ್ ಚೆಲ್ವನೇ
ಹರನಂ ಮೋಹಿಸಲಾರ್ಪನೆಂತುಮಧಿಕಂ ಶ್ರೀವಿಷ್ಣುಭೂಪಾಳಕಂ ॥ 698 ॥

ಮ ಸ್ರ ॥ ಬಳಸುತ್ತುಂ ಕೀರ್ತಿಸುತ್ತುಂ ಸುೞಿದು ಸುೞಿದು ತಕ್ಕೈಸಿರಲ್ ಕೂಡೆ ಶೇಷೋ
ಜ್ವಳ ಕಾಯಂ ತೀವಿದಾ ಪೇೞಿಗೆವೋಲಿರೆ ಸರೋಜಾತಜಾಂಡಂ ಧರಿತ್ರೀ
ತಳಮೆಲ್ಲಂ ತನ್ನ ದೀರ್ಘಾಯುವನೆ ಪರಿಸಿ ಪಟ್ಟೆಳ್ವಿನಂ ಕ್ಷತ್ರಧರ್ಮೋ
ಜ್ವಳ ಹರ್ಮ್ಯೋತ್ತುಂಗಶೃಂಗಾರ್ಪಿತ ಮಣಿಕಳಶಂ ವಿಷ್ಣುಪೆತ್ತಂ ಬೆಡಗಂ
॥ 699 ॥

133) ಘಟ್ಟದಹಳ್ಳಿ 261, E.C. IX (R), ಕ್ರಿಶ. 1120

ಇದರಲ್ಲಿ ಹೊಯ್ಸಳರ ದೊರೆಯಾದ ವಿಷ್ಣುವರ್ಧನನ ಆಳಿಕೆಯಲ್ಲಿ, ಕೇತಮಲ್ಲ ಎಂಬುವವನು ದೋರಸಮುದ್ರದಲ್ಲಿ ಶಿವಾಲಯವೊಂದನ್ನು ಕಟ್ಟಿಸಿ, ವಿಷ್ಣುವರ್ಧನ ಪೊಯ್ಸಳದೇವ ಎಂಬ ದೇವರನ್ನು ಪ್ರತಿಷ್ಠೆ ಮಾಡಿಸಿ, ದತ್ತಿ ಕೊಟ್ಟದ್ದನ್ನು ಹೇಳಿದೆ.

ಬಲ್ಲಾಳ I

ಮ ಸ್ರ ॥
ಪರಮಾರಾಧ್ಯಂ ಮಹೇಶಂ ಕುಲವಧು ವಿಜಯಶ್ರೀನೆಲಂ ಪೋಷ್ಯವರ್ಗ್ಗಂ
ದೊರೆಗಳ್ ವೈವಾಹ ಸಂಬಂಧಿಗಳೆನೆ ನೆಗಱ್ದಾ ರಾಯನಂಭೋಜಜಾಂಡೋ
ದರದೊಳ್ ತೆಂಗಾಯ ನೀರಂತಿರೆ ತಿಳಿದ ಜಸಂ ತಂನ ಭಂಡಾರಮಾಗು
ತ್ತಿರೆ ಬಲ್ಲಾಳಾವನೀಶಂ ಪೊಗೞೆ ಜಗ ಮಹೇಶಂ ಮಹತ್ವಕ್ಕೆ ನೋಂತಂ ॥ 700 ॥

134) ಬಸ್ತಿಹಳ್ಳಿ 389, E.C. IX (R), ಕ್ರಿಶ. 1133

ಇದರಲ್ಲಿ ಹೊಯ್ಸಳ ದೊರೆ ವಿಷ್ಣುವರ್ಧನನ ಆಳಿಕೆಯಲ್ಲಿ ಗಂಗರಾಜನ ಮಗ ಬೊಪ್ಪನು ದೋರಸಮುದ್ರದಲ್ಲಿ ಕಟ್ಟಿಸಿದ ಪಾರ್ಶ್ವನಾಥ ಬಸ್ತಿಗೆ ಭೂಮಿಯನ್ನು ದತ್ತಿ ಕೊಟ್ಟದ್ದನ್ನು ಹೇಳಿದೆ.

ಸಳ

ಮ ಸ್ರ ॥
ಮುದದಿಂ ಜೈನಬ್ರತೀಶಂ ಶಶಕಪುರದ ಪದ್ಮಾವತೀದೇವಿಯಂ ಮಂ
ತ್ರದಿನಾದಂ ಸಾಧಿಸಲ್ಕಿಕ್ರಿಯೆಯೊಳ್ ಪುಲಿ ಮೇಲ್ವಾಯೆ ಯೋಗೀಶ್ವರಂ ಕುಂ
ಚದ ಕಾವಿಂದಾಂತದಂ ಪೊಯ್ಸಳಯೆನಲಭಯಂ ಪೊಯ್ವುದುಂ ಪೊಯ್ಸಳಂಕಂ
ಯದುಭೂಪರ್ಗ್ಗಾದುದಂದಿಂದೆಸೆದುದು ಸೆಳೆಯಿಂ ಲೋಳ ಶಾರ್ದ್ದೂಳ ಚಿಹ್ನಂ
॥ 701 ॥

ಉಪೇಂದ್ರ ವಜ್ರ ॥ ಆ ಸಂದ ಯಕ್ಷೀವರದೊಳ್ವಸಂತಂ
ಲೇಸಾಗಿ ತಾತ್ಕಾಳಿಕ ನಾಮದಿಂದಂ
ವಾಸನ್ತಿಕಾ ದೇವತೆಯೆಂದು ಪೂಜಾ
ವ್ಯಾಸಂಗಮಂ ಮಾಡಿದನಾ ನೃಪಾಳಂ ॥ 702 ॥

ಹೊಯ್ಸಳ ವಂಶ

ಕಂ ॥ ಕಯ್ಸಾರ್ದ್ದಿರೆ ಪುಲಿಯುಂಡಿಗೆ
ಕಯ್ಯಾರ್ದ್ದಿರೆ ವೀರಲಕ್ಷ್ಮಿ ರಿಪುನೃಪರಾಜ್ಯಂ
ಕಯ್ಸಾರ್ದ್ದಿರೆ ಪಲರಾದ
ರ್ಪ್ಪೊಯ್ಸಳ ನಾಮದೊಳೆ ಯಾದವೋರ್ವ್ವೀಪತಿಗಳ್ ॥ 703 ॥

ವಿನಯಾದಿತ್ಯ

ಕಂ ॥ ಸತ್ಕುಳದೊಳಗಿಂದು ಮಹೀ
ಭೃತ್ಕುಳದೊಳಗಚಳನಾಥನೆಸೆವಂತೆಸೆದಂ

ತತ್ಕುಳದೊಳ್ ವಿಜಿತಾರಿಕು
ಭೃತ್ಕುಳನಾದಿತ್ಯಮೂರ್ತಿ ವಿನಯಾದಿತ್ಯಂ ॥ 704 ॥

ಎರೆಯಂಗ

ಕಂ ॥ ತದಪತ್ಯಂ ರಿಪುನೃಪಭುಜ
ಮದಮರ್ದನನಖಿಳವಿಬುಧಜನತಾಸೌಖ್ಯ
ಪ್ರದನುದಿತೋದಿತಮಹಿಮಾ
ಸ್ಪದನೆನಿಪೆಱೆಯಂಗಭೂಪನಂಗಜರೂಪಂ ॥ 705 ॥

ಕಂ ॥ ಎಱೆಯಂಗನ ಕೂರಸಿ ತಲೆ
ಗೆಱಗದ ಮುನ್ನಱಿದು ಬಂದು ಪದಕೆಱಗದವರ್
ಪಱಿಯೆ ತಲೆ ಮುಱಿಯೆ ನಿಟ್ಟೆ
ಲ್ವೊಱೆದುಗೆ ಬಿಸುನೆತ್ತರೆಱಗದಿರ್ಪರೆ ಧುರದೊಳ್ ॥ 706 ॥

ವಿಷ್ಣುವರ್ಧನ

ಕಂ ॥ ಆಂತವರೊಳ್ ವಿಷ್ಣುಮಹೀ
ಕಾಂತಂ ನಿಮಿರ್ದೆಸೆಯೆ ಕೂರ್ಪುಮಾರ್ಪುಂ ಜಸಮಾ
ದಂ ತೊಳಗಿ ಬೆಳಗೆ ಪೆರ್ಮೆಯ
ನಾಂತಂ ನಳನಹುಷ ಭರತಚರಿತಪ್ರತಿಮಂ ॥ 707 ॥

ಕಂ ॥ ಸ್ಥಿರಮಾಗಿ ವಿಷ್ಣುವರ್ಧನ
ಧರಣೀಪಾಲಂಗೆ ಪಟ್ಟಮಾಗಲೊಡಂ ಸಾ
ಗರದಂತನಹಿತಧರಣೀ
ಶ್ವರರೊಡನೆಯ್ದಿತ್ತು ವಿಶದಕೀರ್ತಿಪ್ರಸರಂ ॥ 708 ॥

ಚಂ ಮಾ ॥ ಪೊಡರದೆ ಸಾಧ್ಯಮಾಯ್ತು ಮಲೆಯೆಲ್ಲಮುಮಾ ತುಳುದೇಶಮೆಲ್ಲಮುಂ
ನಡೆಯೆ ಕುಮಾರನಾಡು ತಳಕಾಡುಗಳೆಂಬಿವು ಕೆಯ್ಗೆ ಸಾರ್ದುವ
ತ್ತಡಿಯಿಡೆ ಮುಂಚೆ ಕಂಚಿ ಬೆಸಕೆಯ್ದುದು ವಿಷ್ಣುನೃಪಂ ಕೃಪಾಣಮಂ
ಜಡಿಯದ ಮುನ್ನೆ ಕೊಂಗನೃಪರಿತ್ತರಿಭಂಗಳನೇಂ ಪ್ರತಾಪಿಯೋ ॥ 709 ॥

ಉ ಮಾ ॥ ಚೋಳನೃಪಾಳ ಪಾಂಡ್ಯನೃಪ ಕೇರಳಭೂಪ ಭುಜಾವಲೇಪವಿ
ಸ್ಫಾಳನನಾಂಧ್ರಗಂಧಗಜಕೇಸರಿ ಲಾಟವರಾಟಧಾರಿಣೀ

ಪಾಳಘನಾನಿಳಂ ಕದನಶೂರಕದಂಬವನಾಗ್ನಿ ವಿಷ್ಣುಭೂ
ಪಾಲನವಾರ್ಯಶೌರ್ಯನಿಧಿಯಾತನ ಶೌರ್ಯಮನಾರೊ ಕೀರ್ತಿಪರ್ ॥ 710 ॥

ಚಂ ಮಾ ॥ ನಿರುಪಮಿತಾಂಗಿಯಂ ರುಚಿರಕುಂತಳೆಯಂ ನುತಮಧ್ಯೆಯಂ ಮನೋ
ಹರತರಕಾಂಚಿಯಂ ಧೃತಸರಸ್ವತಿಯಂ ವಿಳಸದ್ವಿನೀತೆಯಂ
ಸ್ಫುರದುರುಕೀರ್ತಿಮನ್ಮಧುರೆಯಂ ಸ್ಥಿರಮಾಗಿರೆ ತನ್ನ ತೋಳೊಳೊ
ಲ್ದಿರಿಸಿದನುರ್ವರಾಂಗನೆಯನಪ್ರತಿಮಂ ವಿಭು ವಿಷ್ಣುಭೂಭುಜಂ ॥ 711 ॥

ಗಂಗರಾಜ

ಉ ಮಾ ॥ ಮತ್ತಿನಮಾತವತ್ತಿರಲಿ ಜೀರ್ಣ್ಣಜಿನಾಲಯ ಕೋಟಿಯಂ ಕ್ರಮಂ
ಬೆತ್ತಿರೆ ಮುಂನಿನಂತೆ ಪಲಮಾರ್ಗ್ಗಳೊಳಂ ನೆಱೆಮಾಡಿಸುತ್ತವ
ತ್ಯುತ್ತಮ ಪಾತ್ರದಾನದೊದವಂ ಮೆಱೆವುತ್ತಿರೆ ಗಂಗವಾಡಿ ತೊಂ
ಬತ್ತಱುಸಾಸಿರಂ ಕೊಪಣವಾದುದು ಗಂಗಣ ದಂಡನಾಥನಿಂ ॥ 712 ॥

ಚಂ ಮಾ ॥ ನುಡಿ ತೊದಳಾದೊಡೊಂದು ಪೊಣರ್ದ್ದಂಜಿದೊಡಂತೆರನ್ಯನಾರಿಯೊಳ್
ನುಡಿಗೆಡೆಯಾಗೆ ಮೂಱು ಮಱೆವೊಕ್ಕರನೊಪ್ಪಿಸೆ ನಾಲ್ಕು ಬೇಡಿದಂ
ಪಡೆಯದೊಡಯ್ದು ಕೂಡಿದೆಡೆ ಪೋಗದೊಡಾಱಧಿಪಂಗೆ ತಪ್ಪಿ ಬ
ಱ್ದೊಡೆಗಡಿವೇೞುಮೇೞು ನರಕಂಗಳಿವೆಂದಪನಲ್ತೆ ಗಂಗಣಂ ॥ 713 ॥

ಗಂಗರಾಜನ ಮಗ ಬೊಪ್ಪ

ಕಂ ॥ ಆ ಗಂಗ ಚಮೂಪತಿಗಂ
ನಾಗಲದೇವಿಗಮಧೀತ ಶಾಸ್ತ್ರಂ ಪುತ್ರಂ
ಚಾಗದ ಬೀರದ ನಿಧಿಯುಂ
ಭೋಗ ಪುರಂದರನುಮಪ್ಪ ಬೊಪ್ಪ ಚಮೂಪಂ ॥ 714 ॥

ಮ ಸ್ರ ॥ ಪರಮಾರ್ಥಂ ವಿದ್ವದರ್ಥಂ ತವಿಸದನ ಧನಂ ವ್ಯರ್ಥಮೆಂದರ್ಥಿಸಾರ್ಥಂ
ನಿರವದ್ಯಂ ಜ್ಞಾತವಿದ್ಯಂ ದಳಿತರಿಪುಮನೋದ್ಯಂ ತಿರಸ್ಕಾರಿತಾದ್ಯಂ
ಧರೆ ತನ್ನಂ ಕೀರ್ತಿಪನ್ನಂ ವಿಬುಧತತಿಗೆ ಪೊನ್ನಂ ವಿಪಶ್ಚಿತ್ಪ್ರಸನ್ನಂ
ಕರೆದೀವ ಬೊಪ್ಪದೇವಂ ಸಮರಮುಖದಶಗ್ರೀವನುದ್ಯತ್ಪ್ರಭಾವಂ ॥ 715 ॥

ಮ ಸ್ರ ॥ ಸಮರಾಯಾತಾಹಿತಕ್ಷೋಣಿಭೃದತುಳಬಳೋದ್ಯಾನದೊಳ್ ಪಾವಕಾನು
ಕ್ರಮದಿಂದಂ ಕ್ರೀಡಿಸುತ್ತುಂ ರಿಪುನೃಪತಿಶಿರಃಕಂದುಕಕ್ರೀಡಿತಂ ತ

ತ್ರಮಯೋದ್ಭೂತಾರುಣಾಂಭೋಭರಿತ ಸಮರಧಾತ್ರೀಸರೋಮಧ್ಯದೊಳ್ ವಿ
ಕ್ರಮಲಕ್ಷ್ಮೀಲೋಲನೋಲಾಡುವನೆರೆವ ಬುಧರ್ಗಪ್ಪ ದಂಡೇಶಬೊಪ್ಪಂ ॥ 716 ॥

ಕಂ ॥ ಲೋಭಿಗಳಂ ಪೋಲಿಪುದೆ ಯ
ಶೋಭಾಜನನಪ್ಪ ಬೊಪ್ಪದಂಡೇಶನೊಳಿ
ನ್ನೀಭೂಭುವನದೊಳಾಹಾ
ರಾಭಯಭೈಷಜ್ಯಶಾಸ್ತ್ರದಾನೋನ್ನತಿಯಿಂ ॥ 717 ॥

ಪ್ರಭುಚಂದ್ರದೇವ

ಕಂ ॥ ಜಿನಧರ್ಮವನಧಿ ಪರಿವ
ರ್ದ್ಧನ ಚಂದ್ರಂಗ್ಗಂಗಮಂಡಳಾಚಾರ್ಯ್ಯಪ್ಪಾ
ವನ ಚರಿತರೆಂದು ಪೊಗಟ್ವುದು
ಜನಂ ಪ್ರಭಾಚಂದ್ರದೇವ ಸೈದ್ಧಾಂತಿಕರಂ ॥ 718 ॥

ದೋರಸಮುದ್ರ

ಚಂ ಮಾ ॥ ಜಳಜಭವಂಗಮಿಂತು ಬರೆಯಲ್ ಕಡೆಯಲ್ ಕರುವಿಟ್ಟು ಗೆಯ್ದಲ
ತ್ತಳಗಮೆನಿಪ್ಪುದಂ ತೊಳಪ ಬೆಳ್ಳಿಯ ಬೆಟ್ಟನೆ ಪೋಲ್ವುದಂ ಜಗ
ತ್ತಿಳಕಮನೀಜಿನಾಲಯಮನೆತ್ತಿಸಿದಂ ವಿಭು ಬೊಪ್ಪದೇವನ
ಗ್ಗಳಿಕೆಯ ರಾಜಧಾನಿಗಳೊಳೊಪ್ಪುವ ದೋರಸಮುದ್ರಮಧ್ಯದೊಳ್ ॥ 719 ॥

ನಯಕೀರ್ತಿದೇವ

ಉ ಮಾ ॥ ಭ್ರಾಂತಿನೊಳೇನೊ ಮುಂನೆಗಳ್ದ ಚಾರಣ ಶೋಭಿತ ಕೊಂಡಕುಂದೆಯೊಳ್
ಶಾಂತರಸಪ್ರವಾಹವೆಸೆದಿರ್ಪ್ಪಿನವಿರ್ದ್ದ ಮುನೀಂದ್ರ ಕೀರ್ತಿಯಾ
ಶಾಂತವನೆಯ್ದಿತಂತವರ ಸಂತತಿಯೊಳ್ನಯಕೀರ್ತಿದೇವ ಸೈ
ದ್ಧಾಂತಿಕ ಚಕ್ರವರ್ತಿ ಜಿನಶಾಸನಮಂ ಬೆಳಗಲ್ಕೆ ಪುಟ್ಟಿದಂ ॥ 720 ॥

ನರಸಿಂಹ I

ಮ ಸ್ರ ॥ ಕಪಿಯೇಜಿಂಗೆಂದು ಬಂದಾ ಮಸಣನ ಸಮು ಸೈನ್ಯಂಗಳಂ ವಿಷ್ಣುಭೂಪಂ
ತವೆ ಕೊಂದು ಪ್ರಾಜ್ಯಸಾಮ್ರಾಜ್ಯಮನತುಳಭುಜಂ ಕೊಳ್ವುದಂ ಪುಟ್ಟಿದ ಭೂ
ಭುವನಕ್ಕುತ್ಸಾಹಮಾಗುತ್ತಿರೆ ಬುಧನಿಧಿ ಲಕ್ಷ್ಮೀ ಮಹಾದೇವಿಗಾಗಳ್
ರವಿತೇಜಂ ಪುಣ್ಯಪುಂಜಂ ದಶರಥನಹುಶಾಚಾರ ಸಾಗರಂ ಕುಮಾರಂ
॥ 721 ॥

ಕಂ ॥ ಭೂಭೃತ್ಪತಿ ಮದಕರಿಹರಿ
ಶೋಭಾಸ್ಪದನಚಳತಾಸಮುತ್ತುಂಗಂ ಶ್ರೀ
ಪ್ರಾಭವನುದಿತಾಖಂಡಳ
ವೈಭವನೇಂ ಗೋತ್ರತಿಳಕನಾದನೊ ಪುತ್ರಂ ॥ 722 ॥

135) ಹಳೇಬೀಡು 328, E.C. IX (R), ಕ್ರಿ.ಶ. 1136

ಇದರಲ್ಲಿ ಹೊಯ್ಸಳರ ದೊರೆ ವಿಷ್ಣುವರ್ಧನನ ಆಳಿಕೆಯಲ್ಲಿ ವಿಷ್ಣು ಸಮುದ್ರದ ರತ್ನ ವ್ಯಾಪಾರಿಗಳು ಮತ್ತು ನಖರರು, ಮಾಣಿಕೇಶ್ವರ ದೇವರಿಗೆ ದತ್ತಿ ಕೊಟ್ಟದ್ದನ್ನು ಹೇಳಿದೆ. ಕಾಳಾಮುಖ ಶೈವಪಂಥದ ಮುನಿಗಳನ್ನು ಸ್ತುತಿಸಿದೆ.

ಕಾಳಾಮುಖ ಮುನಿಗಳು

ಮ ಸ್ರ ॥ ನೆಗೞ್ದೆರ್ದ್ದಂತಾ ಮಠಂ ಜೀವನಿರೆ ವಿನುತ ಕಾಳಾಮುಖರ್ದ್ದಾತೃಯತ್ತಂ
ಪೊಗಳಲ್ ಚೆಲ್ವಾದುದಾ ಪರ್ವ್ವತವಳಿಯೆನಲೀಶಾನಶಕ್ತಿ ಬ್ರತೀಂದ್ರಂ
ಮಿಗೆ ವಾಣೀಕಾಂತೆಯಂ ಕೂರಿಸಿ ತಪಮೆ ಧನಂ ತಾನೆನಲು ಚಾರು ಚಾರಿ
ತ್ರಗುಣಂ ಮೂಲೋಕದೊಳ್ವಾಶ್ವತಮೆನಿಪ ಯಶಶ್ರೀಗೆ ತಾನಾಣ್ಮನಾದಂ
॥ 723 ॥

ದೇವೇಂದ್ರ ಪಂಡಿತ

ಕಂ ॥ ಅನ್ತವರ ಮಗಳ ಮಗನುಂ
ಸನ್ತತಿಯ ದೀಕ್ಷೆಯಿಂದಮೆನಿಸಿದ ವಾಣೀ
ಕಾನ್ತನತಿವಿನುತನೆನಿಸಿ ನಿ
ತಾನ್ತಂ ದೇವೇಂದ್ರಪಂಡಿತಂ ರಂಜಿಸುವಂ ॥ 724 ॥

ಕಲ್ಯಾಣಶಕ್ತಿ

ಕಂ ॥ ವಿನುತಯಶಂ ದೇವೇಂದ್ರಾರಿ
ಜನಕಂ ವಾಣಿ ಮಿಸುಪ ಸಜ್ಜನವೆನಿಪಂ
ತನಗೆಂದುಂ ವಿಶ್ರುತಕೀ
ರ್ತಿನುತಂ ಕಲ್ಯಾಣಶಕ್ತಿ ಪಂಡಿತದೇವಂ ॥ 725 ॥

136) ಬೇಲೂರು 106, E.C. IX (R), ಕ್ರಿ.ಶ. 1136

ಇದರಲ್ಲಿ ಹೊಯ್ಸಳರ ದೊರೆಯಾದ ವಿಷ್ಣುವರ್ಧನನ ರಾಜ್ಯವಿಸ್ತರಣೆ, ಕೀರ್ತಿ ಅವನ ಸೇನಾಪತಿ ವಿಷ್ಣು ದಂಡಾಧಿಪನ ಪರಾಕ್ರಮ, ಅವನ ತಾತ, ಉದಯಾದಿತ್ಯ ಹಾಗೂ ಅಜ್ಜಿ ಶಾಂತಿಯಕ್ಕ, ಅಪ್ಪ ಚಿಣ್ಣ ದಂಡಾಧಿಪ, ತಾಯಿ ಚಂದಲೆ, ಇವರನ್ನು ವರ್ಣಿಸಿದೆ.

ವಿಷ್ಣುವರ್ಧನ

? ॥
ಸಂಗರದೊಳಾನ್ತ ದಿಗನರಸಿಯರಂ ಬಿಸುಟು ಜಗುದೆ ತಗುಳ್ದವನ ರಾಜ್ಯಮನೇ
ಬೆಂಗಿರಿಗಳಾಧರಣೀ ಭಾಗದೊಳ್ ಸೋಯಿ ನರಸಿಂಗನ ವಧೂನಿಕರಮಂ ಪಡೆದುxxಯ್ದು
ದಂಗರರನಿಕ್ಕೆ ಬಿಡಿಸಿಗಳಿಕೆನೆ ತುಳಿದು ಗಂಗೆವರಮತ್ತಮಗುಳ್ದುತ್ತರ ಧರಿತ್ರೀ
ರಂಗ ನೃಪಾಳರನಸಂಗೊಳೆ ನೆಜೆಗಂಗ ನೃಪನಂದನನವಾರ್ಯ್ಯತರ ಶೌರ್ಯ್ಯಂ
॥ 726 ॥

ಮ ಸ್ರ ॥ ಅತಿದೀರ್ಘಘ್ರಾಣಹಸ್ತಂ ನಿಶಿತದಶನದಂಷ್ಟ್ರಾಂಕುರಂ ಪಕ್ಷರಕ್ಷಾ
ಯತಪಕ್ಷಂ ತಾರ್ಕ್ಷ್ಯನಂತೋವಗಿಸಿ ತುಟಿಯೆ ತನ್ನಾನೆ ಪಾಂಡ್ಯಾವನೀಭೃ
ತ್ಸೃತನಾವಿಧ್ವಂಸನೋಪಾರ್ಜಿತಜಯವಧುವಂ ವಿಷ್ಣು ತುಚ್ಛಾಜಿಲಜ್ಜಾ
ಸ್ಮಿತನಾಂತಂ ಚೋಳಗೌಳಾಸುರಸಮರಜಯಶ್ರೀಸಮಾಲಿಂಗಿತಾಂಗಂ
॥ 727 ॥

ಮ ಸ್ರ ॥ ಪೆಸರ್ಗ್ಗೊಂಡಾವಾವ ದೇಶಂಗಳನೆಣಿಸುವ ದುರ್ಗ್ಗಂಗಳಂ ಬ
ಣ್ಣಿಸಿ ಪೇಳುತ್ತಿರ್ಪ್ಪುದಾವಾವವನೀಪತಿಗಳಂ ಲೆಕ್ಕಿಸುತಿರ್ಪ್ಪುದೆಂಬೊಂ
ದೆಸಕಂ ಕೈಗಣ್ಮೆ ನಾಲ್ಕು ಕಡಲತಡಿವರಂ ದಿಗ್ಜಯಕ್ರೀಡೆಯೊಳ್
ಸಾಧಿಸಿದಂ ಭೂತಳಮಂ ಕ್ಷತ್ರಿಯ ಕುಳತಿಳಕಂ ವೀರ ವಿಷ್ಣುಕ್ಷಿತೀಶಂ
॥ 728 ॥

ವಿಷ್ಣುದಂಡಾಧಿಪ (ಬಿಟ್ಟಿಯಣ್ಣ)

ಕಂ ॥ ಪುಟ್ಟಿದನಾರ್ಪುಂ ಕೂರ್ಪುಂ
ನೆಟ್ಟನೆ ತನ್ನೊಡನೆ ಪುಟ್ಟೆ ರಿಪುಗಳ್ಗೆ ಭಯಂ
ಪುಟ್ಟೆ ನಿಜಪತಿಗೆ ಚಕ್ರಂ
ಪುಟ್ಟಿದುದೆನೆ ವಿಷ್ಣು ಸುಭಟಚೂಡಾರತ್ನಂ ॥ 729 ॥

ವಾದಿರಾಜ

ಚಂ ಮಾ ॥ ಕುವಳಯಮೆಯ್ದೆ ತನ್ನುದಯದಿಂ ಪರಿತೋಷಮನೆಯ್ದೆ ವಿಶ್ವಬಾಂ
ಧವಜನಲೋಲಲೋಚನಚಕೋರಚಯಂ ನಿಜದೇಹಕಾಂತಿಯಿಂ
ತವದನುರಾಗಮಂ ತಳೆಯೆ ಕಾಶ್ಯಪಗೋತ್ರಪವಿತ್ರನೇಜ್ಗೆವಾ
ಡಿವದೆಳದಿಂಗಳಂತನುದಿನಂ ಬಳೆದಂ ಪಿರಿದುಂ ವಿಭೂತಿಯಿಂ ॥ 730 ॥

ಇಮ್ಮಡಿ ದಂಡನಾಯಕ

ಚಂ ಮಾ ॥ ಅನುಪಮಮಪ್ಪ ದಿಗ್ವಿಜಯದಿಂ ಜಯನೊಳ್ ಪಡಿಯಾಗಿ ಬಲ್ಪಿನಿಂ
ತನಗಪರಾಜಿತತ್ವಮಳವಟ್ಟಿರೆ ತೇಜದಳುರ್ಕೆಯಿಂ ಜಗ

ಜ್ಜನಮನುರಾಗದಿಂದಮಿತತೇಜನೆನಲ್ ಕ್ರಮವಿಕ್ರಮಂಗಳಿಂ
ನೆನೆಯಿಸುವಂ ಪುರಾತನ ಮಹಾತ್ಮರನಿಮ್ಮಡಿದಂಡನಾಯಕಂ ॥ 731 ॥

ಮ ಸ್ರ ॥ ಪೆಸರಂಬೆತ್ತೆತ್ತಲುಂ ಬೇರ್ವರಿದು ಬೆಳೆದು ಶಾಖಾನುಶಾಖಾಳಿ ನೀಳ್ದೆ
ಣ್ದೆಸೆಗಂ ತಳ್ತೊಪ್ಪೆ ಸರ್ವರ್ತುಕಸಕಳಫಳೈಶ್ವರ್ಯದಿಂ ಲೋಕಮಂ ರ
ಕ್ಷಿಸುತಿರ್ಕಾಪೂರ್ಣಚೇತೋರಥಯುತಕಮಳಾಕಲ್ಪವಲ್ಲೀವಿಳಾಸಾ
ವಸಥಂ ಶ್ರೀವಿಷ್ಣುದಂಡಾಧಿಪ ದಿವಿಜಕುಜಾತಂ ವಿಪಶ್ಚಿದ್ವಿನೂತಂ ॥ 732 ॥

ಮ ಸ್ರ ॥ ಸಮಸಂದಕ್ಷುಣ್ಣಪುಣ್ಯೋದಯಮುದಯನಗಾರೂಢಭಾನು ಪ್ರಭಾವಿ
ಭ್ರಮದಿಂದಂ ನಿಚ್ಚನಿಚ್ಚಂ ಪೊಸಯಿಸೆ ಕಮಳಾನಂದಮಂ ವಿಶ್ವನೇತ್ರೋ
ಪಮನೆಂದುಂ ತೇಜದಿಂದಂ ಬೆಳಗುಗುಮೆಳೆಯಂ ವಿಷ್ಣು ವಿಷ್ಣುಕ್ಷಿತೀಶ
ಕ್ರಮಪಂಕೇಜಾತಭೃಂಗಂ ಚಪಳರಿಪುಚಮೂನಾಥಮತ್ತೇಭಸಿಂಗಂ ॥ 733 ॥

ಮ ಸ್ರ ॥ ಅಭಿರಾಮಾಕಾರದಿಂದಪ್ರತಿಮಭುಜಬಳಾಟೋಪದಿಂದಪ್ರಮೇಯ
ಪ್ರಭುಮಂತ್ರೋತ್ಸಾಹಶಕ್ತಿತ್ರಿತಯದಿನಮರ್ದುತ್ಸಾಹದಿಂ ವಿಷ್ಣುಭೂವ
ಲ್ಲಭಸಪ್ತಾಂಗಕ್ಕಮಾಳಂಬನಮೆನೆ ನೆಗಟ್ದಕ್ಷುಣ್ಣಪುಣ್ಯಾಢ್ಯನೇಕ
ಪ್ರಭುವಾದಂ ವಿಷ್ಣುದಂಡಾಧಿಪನಖಿಳಬುಧಪ್ರಾಣರಕ್ಷಾಪ್ರವೀಣಂ ॥ 734 ॥

ಮ ಸ್ರ ॥ ಪರಿಪೂರ್ಣೇಂದುಪ್ರಭಾವಿಭ್ರಮದೊಳಮರ್ದು ಗಂಗಾಪಗಾಸ್ಫಾರರುಗ್ವಿ
ಸ್ತರಮಂ ತಳ್ಕೈಸಿ ದುಗ್ಧಾರ್ಣವನವರುಚಿಯಂ ತಾಳ್ದಿ ನೀಳ್ದಪ್ಪುದಾದಂ
ಧರೆಯಿಂ ದಿಕ್ಚಕ್ರದಿಂ ಮಂದರಶಿಖರದಿನತ್ತಲ್ ವಿಯನ್ಮಂಡಪಾಗ್ರಂ
ಬರೆಗಂ ಶ್ರೀವಿಷ್ಣುದಂಡಾಧಿಪ ವಿಮಳಯಶಃಕಲ್ಪವಲ್ಲೀವಿಳಾಸಂ ॥ 735 ॥

ಮ ಸ್ರ ॥ ಮಗವೀತಂ ಕೊಂಗುಗೊಳ್ವಂಗಡ ಗಜಘಟೆಯಂತರ್ಪ್ಪನೀತಂಗಡ ಪೊಂ
ನಗೆಯಿಂಬುದ್ಧಂಡರು ತಪಿಸೆ ಪರನೃಪರಂ ಕಾದಿ ಬೆಂಕೊಂಡು ಕೊಂಗಂ
ಜಗಮುತ್ಕೋಚಂಗೊಳಲ್‌ಸಾಧಿಸಿ ಗಜಘಟೆಯಿಂ ತನ್ನ ಬಾಹಾಬಳಂ ಕೈ
ಮಿಗೆ ತಂದಾಳ್ದಂಗತಿ ಪ್ರೀತಿಯನೊದವಿಸಿದಂ ವಿಷ್ಣುದಂಡಾಧಿನಾಥಂ
॥ 736 ॥

ಮ ಸ್ರ ॥
ದಿಗಧೀಶರ್ ತಮ್ಮ ತಮ್ಮಿರ್ದೆಡೆಯೊಳಗಿದಡಂಗಿರ್ಪಿನಂ ಚೋಳಲಾಳಾ
ದಿಗಳಾಟಂಗೊಂಡು ದುರ್ಗಾಶ್ರಯದೊಳೆ ಸಕಳತ್ರಂ ಭಯಂಗೊಂಡು ಗೋಳುಂ
ಡೆಗೊಳುತ್ತಿರ್ಪನ್ನಮಂಭೋನಿಧಿನಿಕಟಮಹೀಪಾಳರಂ ವಿಷ್ಣು ವಿಕ್ರಾಂ
ತಗುಣಂ ಕಯ್ಗಣ್ಮೆ ಬೆಂಕೊಂಡದಟನವರ ಸರ್ವಸ್ವಮಂ ಸೂಱೆಗೊಂಡಂ ॥ 737 ॥

ಚಂ ಮಾ ॥ ಉರಿದುದು ರಾಯರಾಯಪುರಮಾಪುರವಹ್ನಿಶಿಖಾಕಳಾಪಮಾ
ಪರಿದುವೆ ಕಾಂಚಿಯತ್ತಲೆನುತುಂ ನಡೆ ನೋಡುವ ಚೋಳಚೇರಪಾಂ
ಡ್ಯರ ಬಗೆಯೊಳ್ ಧಿಗಿಲ್ಲೆನೆ ಚಮೂಪಶಿಖಾಮಣಿ ವೀರವಿಷ್ಣುಭೀ
ಕರತರದೋಃಪ್ರತಾಪಶಿಖಿ ನೀಳ್ದು ಪೊದಟ್ಟುದಗುರ್ವು ಪರ್ವಿರಲ್ ॥ 738 ॥

ಉದಯಾದಿತ್ಯ

ಮ ಸ್ರ ॥ ಪದಮತ್ಯುತ್ತುಂಗ ಗೋತ್ರಾಚಲಶಿಖರದೊಳೊಪ್ಪುತ್ತಿರಲ್ ತನ್ನ ನಿತ್ಯಾ
ಭ್ಯುದಯಂ ಭೂಮಂಡಳೋತ್ಸಾಹಮನೊದವಿಸೆ ಸಾನಂದಸಸ್ಮೇರಲಕ್ಷ್ಮೀ
ವದನಾಬ್ಜಶ್ರೀಯೊಳೊಪ್ಪಂಬಡೆಯೆ ನಿಜವಿಳಾಸಂ ಜಗದ್ವಂದ್ಯಮಾದ
ತ್ತುದಯಾದಿತ್ಯಪ್ರಭಾವಂ ಪ್ರಕಟಿತಭುವನಾಭೋಗತೇಜೋವಿಳಾಸಂ ॥ 739 ॥

ಶಾಂತಿಯಕ್ಕ

ಕಂ ॥ ಆತನ ಕುಲವಧು ಭುವನ
ಖ್ಯಾತೆ ಜಗತ್ಪೂತೆ ಭಾಗ್ಯಸೌಭಾಗ್ಯಗುಣೋ
ಪೇತೆ ಮನೋಭವವಿಭವಸ
ಮೇತೆಯೆನಲ್ ಶಾಂತಿಯಕ್ಕನೊರ್ವಳೆ ನೋಂತಳ್ ॥ 740 ॥

ಚೆಣ್ಣದಂಡನಾಥ

ಕಂ ॥ ಆ ದಂಪತಿಗಳ ಭಾಗ್ಯದಿ
ನಾದಂ ಸತ್ಪುತ್ರನಾತ್ಮಗೋತ್ರ ಪವಿತ್ರಂ
ಮೇದಿನಿಗೆ ತಾನೆ ಸುರತರು
ವಾದಂ ಶ್ರೀ ಚೆಣ್ಣರಾಜ ದಂಡಾಧಿನಾಥಂ ॥ 741 ॥

ಮ ಸ್ರ ॥ ಪರಮಬ್ರಾಹ್ಮಪ್ರಭಾವಂ ಮನುಜಪರಿಬೃಢಾಕಾರಮಂ ತಾಳ್ದಿತೆಂಬಂ
ತಿರೆ ಧೀರೋದಾತ್ತಸತ್ವೋನ್ನತಿಯೊಳಮರ್ದು ನಾನಾಗುಣಾನರ್ಘರತ್ನೋ
ತ್ಕರಮಂ ರತ್ನಾಕರಂ ತಾನೆನೆ ತಳೆದೆಜೆಯಂಗಾವನೀನಾಥಧಾತ್ರೀ
ಭರಮಂ ತಾಳ್ದಿರ್ದನೇಕಪ್ರಭುವೆನೆ ಭುವನಂ ಚೆಣ್ಣದಂಡಾಧಿನಾಥಂ ॥ 742 ॥

ಇವನ ಹೆಂಡತಿ ಚಂದಲೆ

ಚಂ ಮಾ ॥ ಕುಲದ ಪೊಗಟ್ತೆ ಶೀಲದ ನೆಗಟ್ತೆ ಮನೋಭವರಾಜ್ಯಲಕ್ಷ್ಮಿಯಂ
ನಿಲಿಸಿದ ಗಾಡಿ ಲೋಕದೊಳಗಾವಗಮೀಮಿಗಿಲಂದದಿಂದಮ
ಗ್ಗಲಿಸಿದ ರೂಢಿ ತನ್ನೊಳಮರ್ದೊಪ್ಪಿರೆ ಚೆಣ್ಣಚಮೂಪಕಾಂತೆ ಚಂ
ದಲೆ ನೆಜೆ ತಾಳ್ದಿದಳ್ ಧರೆಗಗುಂದಲೆಯಪ್ಪ ಗುಣಪ್ರಭಾವಮಂ ॥ 743 ॥

ಚಂ ಮಾ ॥ ಫಣಿಪತಿಗಂ ವಚೋವಿಷಯಮಲ್ಲವು ಭಾವಿಸೆ ಚೆಂದಿಯಕ್ಕನೊ
ಳ್ಗುಣಮವು ನಿಷ್ಕಳಂಕನಿಜರೂಪದೊಳೊಪ್ಪಿರೆಯುಂ ಪೊಗಟ್ತೆಯೊಳ್
ತಣಿಯದೆ ಧಾತ್ರಿ ಲಕ್ಷ್ಮಿ ರತಿ ಭಾರತಿ ರೇವತಿ ಸತ್ಯಭಾಮೆ ರು
ಕ್ಮಿಣಿ ಭುವನಪ್ರಣೂತೆ ಧರಣೀಸುತೆಯೆಂಬುದು ಲೋಕಮಾತೆಯಂ
॥ 744 ॥

ವಾದಿರಾಜ

ಚಂ ಮಾ ॥ ಕುವಳಯವಯ್ದೆ ತನ್ನುದಯದಿಂ ಪರಿತೋಷಮನೆಯ್ದೆ ವಿಶ್ವಬಾಂ
ಧವ ಜನ ಲೋಲಲೋಚನ ಚಕೋರಚಯಂ ನಿಜದೇಹಕಾಂತಿಯಿಂ
ತವದನುರಾಗಮಂ ತಳೆಯೆ ಕಾಶ್ಯಪಗೋತ್ರಪವಿತ್ರನೇಳ್ಗೆ ವಾ
ದಿವದೆಳದಿಂಗಳನ್ತನುದಿನಂ ಬಳೆದಂ ಪಿರಿದುಂ ವಿಭೂತಿಯಿಂ ॥ 745 ॥

ಇಮ್ಮಡಿ ದಂಡನಾಯಕ

ಚಂ ಮಾ ॥ ಅನುಪಮಮಪ್ಪ ದಿಗ್ವಿಜಯದಿಂ x ಯನೊಳ್ ಪಡಿಯಾಗಿ ಬಲ್ಪಿನಿಂ
ತನಗಪರಾಜಿತತ್ವಮಳವಟ್ಟಿರೆ ತೇಜದಳುರ್ಕೆಯಿಂ ಜಗ
ಜ್ಜನಮನುರಾಗದಿಂದಮಿತತೇಜನೆನಲ್ಕ್ರಮ ವಿಕ್ರಮಂಗಳಿಂ
ನೆನೆಯಿಸುವಂ ಪುರಾತನ ಮಹಾತ್ಮರನಿಮ್ಮಡಿ ದಂಡನಾಯಕಂ ॥ 746 ॥

ಶ್ರೀಪಾಲ ತ್ರೈವಿದ್ಯದೇವ

ಮ ಸ್ರ ॥ ಅವಸರ್ಪ್ಪಿಣ್ಯ x ರ್ಧ್ದರ್ದಿಂತುಳುಗಡೆ ಜಿನಜೀಮೂತ ಸಂಘಾತಮೀ ಭೂ
ಭುವನಾಂತೆ ಕಾದುವನ್ನಂ ಸುರಿದ ಸಕಳ ವಿದ್ಯಾನಟೀ ಪೂರದಿಂತೀ
ವಿ ವಿಪಶ್ಚಿತ್ತಾಪ ಸಂತಾಪಮನುಡುಗಿಸುತ್ತಿರ್ದ್ದಪ್ಪುದಾದಂ ಮುನೀಂದ್ರ
ಪ್ರವರ ಶ್ರೀಪಾಲಯೋಗೀಶ್ವರನೆನಿಪ ಜಗತ್ಸಾರ್ತ್ಥಕೃತ್ಪುಣ್ಯತೀರ್ಥಂ ॥ 747 ॥

ಕಂ ॥ ಆವನ ವಿಷಯಮೊ ಷಟ್ತ
ರ್ಕ್ಕಾವಿಳ ಬಹುಭಂಗಿ ಸಂಗತಂ ಶ್ರೀಪಾಳ
ತ್ರೈವಿದ್ಯ ಗದ್ಯಪದ್ಯ ವ
ಚೋವಿನ್ಯಾಸಂ ನಿಸರ್ಗ ವಿಜಯಂ ವಿಳಾಸಂ ॥ 748 ॥

137) ದಬ್ಬೆ ಅಗ್ರಹಾರ 193, E.C. IX (R), ಕ್ರಿಶ. 1138

ಈ ವೀರಗಲ್ಲು ಶಾಸನದಲ್ಲಿ ಹೊಯ್ಸಳರ ದೊರೆಯಾದ ವಿಷ್ಣುವರ್ಧನನು ಹಾನುಗಲ್ಲು ಕೋಟೆಯನ್ನು ಮುತ್ತಿ ಕಾದುವಾಗ ಕಲಿರಾಯನು ದೊರೆಯ ಅಪ್ಪಣೆಯನ್ನು ಪಡೆದು ಯುದ್ಧದಲ್ಲಿ ತನ್ನ ಶೌರ್ಯವನ್ನು ಮೆರೆದು ಸತ್ತನೆಂದು ಹೇಳಿದೆ.

ಕಲಿರಾಯ

ಚಂ ಮಾ ॥ ಸುರಿವ ಸರಲ್ಗೆ ಪಾಯ್ವ ಚತುರಂಗದಳಕ್ಕಣೆದಾರ್ದು ನೂಂಕುವಾ
ಸುರತರಮಪ್ಪ ಸಿಂಧುರಘಟಾವಳಿಗಳ್ಕದೆ ಕಾದಿ ಬೀರರ
ಜ್ಜರಿವಡೆ ಮಾಚಗೌಂಡನ ಮಗಂ ಕಲಿರಾಯನೆ ಕೀರ್ತಿಯಂ ವಸುಂ
ಧರೆ ಪೊಗಟ್ವಿನ್ನೆಗಂ ಪಡೆದನಾಹವದೊಳ್ ರಣರಂಗಶೂದ್ರಕಂ ॥ 749 ॥

ಕಂ ॥ ಹಾನುಂಗಲ್ಲಿನ ಕೋಂಟೆಯ
ಲಾನೆಯನೇಱಿಟ್ಟು ಹೊಯ್ಸಳಂ ನೋಡುತಿರಲ್
ತಾನಿಱಿದು ಕೊಂದನಿದಿರಾ
ನ್ತಾನೆಯ ಕುದುರೆಯ ದಳಂಗಳಿಂ ಕಲಿರಾಯಂ ॥ 750 ॥

ಕಂ ॥ ಎತ್ತಿದ ಮೊನೆಯೊಳ್ ರಾಯಂ
ಕುತ್ತಲ್ ಕಾಲಾಳುಮಶ್ವಮುಂ ಮೇಲಾಳಂ
ತೆತ್ತಮುರುಳ್ದೊಡೆ ಪೆಣನಂ
ಬಿತ್ತಿದ ತೆಱನಾಯ್ತು ಸುರಿಯೆ ಪೂಮಱೆ ನಭದಿಂ ॥ 751 ॥

ಕಂ ॥ ಕರಿತುರಗವೀರಭಟರಂ
ಧುರದೊಳ್ ತಳ್ತಿಱಿದು ಕೊಂದ ರಾಯನನಾಗಳ್
ಸುರಗಣಿಕೆಯರುಯ್ದರ್ ವಿ
ಸ್ತರದಿಂ ಪುಷ್ಪಕವಿಮಾನಮೇಱಿಸಿ ನಭದೊಳ್ ॥ 752 ॥

ಕಂ ॥ ಆಳಿಂ ಮುನ್ನಿಱಿವಂ ಪಿರಿ
ದಾಳಂ ತವೆ ಕೊಂದು ಹಾನುಗಲ್ಲಾಹವದೊಳ್
ಕಾಳಗವುಂಡನ ತಮ್ಮಂ
ಲೀಳೆಯ ಸುರಲೋಕಕೆಯ್ದಿದಂ ಕಲಿರಾಯಂ ॥ 753 ॥

ಕಂ ॥ ಅರಸನ ಸಮೀಪದೊಳ್ ವಿ
ಸ್ತರದಿಂನ್ದಂ ಕುದುರೆಯೇಱಿ ಕಾಳಗವುಣ್ಡಂ
ವರವೀರನಪ್ಪ ತಮ್ಮನ
ಧುರಮಂ ನೋಡುತಿರೆ ಕಾದಿದಂ ಕಲಿರಾಯಂ ॥ 754 ॥

138) ಬಸ್ತಿಹಳ್ಳಿ 403, E.C. IX (R), ಕ್ರಿ.ಶ. 1138

ಇದರಲ್ಲಿ ಹೊಯ್ಸಳರ ದೊರೆಯಾದ ವಿಷ್ಣುವರ್ಧನನ ಆಳಿಕೆಯಲ್ಲಿ ಹೆಗ್ಗಡೆ ಮಲ್ಲಿಮಯ್ಯನು ಜಿನಾಲಯವನ್ನು ಕಟ್ಟಿಸಿ ಭೂಮಿಯನ್ನು ದತ್ತಿಯಾಗಿ ಬಿಟ್ಟಂತೆ ಹೇಳಿದೆ.

ಜಿನ ಸ್ತುತಿ

ಕಂ ॥ ಶ್ರೀದೇವೇಂದ್ರ ನತಶ್ರೀ
ಪಾದಂ ಶ್ರೀಪದ ವಿನಮ್ರ ಶಿಷ್ಯ ಜನಂಗ
ಳ್ಗಾದರದಿಂದಂ ಗೆಯ್ಗೆ ಶು
ಭೋದಯಮಂ ಮುಕ್ತಿವಲ್ಲಭಂ ಮಲ್ಲಿಜಿನಂ ॥ 755 ॥

ಕೊಂಡಕುಂದಾನ್ವಯದ ಮಲ್ಲಿಮಯ್ಯ

ಕಂ ॥ ಮುನಿ ಜನದೋದಿಸಿದೋಜೆಯೊ
ಳನುವದಿಪುದಿದೊಂದೆ ಕೊಂಡಕುಂದಾನ್ವಯ ನಂ
ದನವನ ಶುಕಮೆಂದೆನಗಿನಿ
ತನುಗ್ರಹಂಗೆಯ್ಗೆ ಕರುಣದಿಂ ಮುನಿ ನಿವಹಂ ॥ 756 ॥

ಗಂಗರಾಜ

ಕಂ ॥ ಶ್ರೀಮಜ್ಜಿನ ಧರ್ಮಶ್ರೀ
ಧಾಮಂ ಶಕ್ತಿತ್ರಯ ಪ್ರವರ್ಧಿತ ವಿಷ್ಣು
ಶ್ರೀಮುಖ್ಯಂ ರತ್ನತ್ರಯ
ಭೂಮಿ ಮಹಾಮಾನ ಮೇರು ಶೃಂಗಂ ಗಂಗಂ ॥ 757 ॥

139) ಪಂಡಿತನಹಳ್ಳಿ 458, E.C. IX (R), ಕ್ರಿ.ಶ. 1146

ಈ ವೀರಗಲ್ಲು ಶಾಸನದಲ್ಲಿ ಹೊಯ್ಸಳರ ದೊರೆಯಾದ ವಿಷ್ಣುವರ್ಧನನ ಆಳಿಕೆಯಲ್ಲಿ ಬಲ್ಲವೆರ್ಗಡೆ ಎಂಬುವವನು ಚೆಂಗಾಳ್ವರ ಮೇಲಿನ ಯುದ್ಧದಲ್ಲಿ ಮರಣ ಹೊಂದಿದುದನ್ನು ಹೇಳಿದೆ.

ಬಲ್ಲವೆರ್ಗಡೆ

ಕಂ ॥ ಕುದುರೆಯುಮಂ ಮೇಲಾಳುವ
ನದಿರದೆ ಕೊಂದಿಕ್ಕಿ ತನ್ನಭುಜಬಳದಿಂದ
x x ಮಾಗಿದಿರ್ಚ್ಚೆ ಪಾಯಿಸಿ
ಮುದದೆ ಜಯಾಂಗನೆಯನೊಲಿಸಿದಂ ಬಲ್ಲಂ ॥ 758 ॥

ಕಂ ॥ ಎತ್ತಿದ ಕುದುರೆಯ ದಳಮಂ
ತೊತ್ತಳದುಳಿ x ಪೆಳಱೆ ಪೆಸಱೆ ತಗು
ಳ್ದೆತ್ತಿದಣಮಣಿಯೆ ಪಾಯಿಸಿ
ತತ್ತರದಱಿದಿಱಿದು ಬಲ್ಲು ಸ್ವರ್ಗತನಾದಂ ॥ 759 ॥

140) ಹಳೇಬೀಡು 268, E.C. IX (R), ಕ್ರಿ.ಶ. ಸು. 1150

ಇದರಲ್ಲಿ ಹೊಯ್ಸಳದೊರೆ ಮೊದಲನೆಯ ನರಸಿಂಹನ ಆಳಿಕೆಯಲ್ಲಿ ಚಟ್ಟಯೋವ ಎಂಬುವವನು ವೃತ್ತಿಯನ್ನು ಬಿಟ್ಟದ್ದನ್ನು ದಾಖಲಿಸಿದೆ. ಈ ಶಾಸನವನ್ನು ವಿಜಯಪುರದ ಮಾಧವ ಎಂಬ ಕವಿ ರಚಿಸಿದ್ದಾನೆ.

ಹೊಯ್ಸಳ

ಕಂ ॥ ಶ್ರೀಯುವತೀಶ್ವರನಬ್ಜದ
ಳಾಯತ ಲೋಚನನನಂತಂಗೊಲಿಗೆಂದುಂ
ಶ್ರೀಯಂ ಪರನೃಪವಿಜಯ
ಶ್ರೀಯಂ ಹೊಯ್ಸಳಮಹೀವಂಶಕೆಲ್ಲಂ ॥ 760 ॥

ಸಳ

ಕಂ ॥ ದ್ವಾರವತಿಯಿಂದೆ ಬಂದಂ
ನೀರೇರುಹಲೋಚನಾನ್ವಯಂ ಸಳನೆಂಬಂ
ವೀರ ಜಿನಯೋಗಿ ನಡಪ
ಲ್ಕೋರಂತಿರೆ ಕೊಡಗಿನ ಮಲೆಗೆ ಕಡುನಲವಿಂದಂ ॥ 761 ॥

ವಾಸಂತಿಕಾದೇವಿ

ಕಂ ॥ ವಿಸರುಹನಯನನ ಕುಲಜಂ
ಹೆಸರಿಟ್ಟಂ ಕಂಡು ಶುನಕನಂ ಗೆಲೆ ಶಶಕಂ
ಸೊಸೆವೂರೆಂದಲ್ಲಿಯೆ ತಾಂ
ವಸೆಯಿಸೆ ವಾಸಂತಿಕಾಖ್ಯೆ ತಂ ನೃಪದಯ್ವಂ ॥ 762 ॥

ಕಂ ॥ ಆಂತಾ ನೃಪಕುಳದೇವತೆ
ಚಿಂತಿತಫಳಮಂ ವಿರೋಧಿನಿರ್ಮ್ಮೂಲನಮಂ
ಸಂತತಮೊಲ್ದೀವುದ
ಱಿಂದತು ಯದುವಂಶದೇಳ್ಗೆಯೊಂದಚ್ಚರಿಯೇ ॥ 763 ॥

ಹೊಯ್ಸಳ ವಂಶ

ಕಂ ॥ ಅಲ್ಲಿರ್ದು ತಂ ನರೇಂದ್ರಂ
ಸಲ್ಲಲಿತವೆನಿಪ್ಪ ಬೆತ್ತದೊಪ್ಪುವ ಸೆಳೆಯಿಂ
ಮಲ್ಲಳಿಸಿ ಪಾಯ್ದ ಪುಲಿಯಂ
ತಲ್ಲಳಿಸದೆ ಹೊಯ್ದು ಕೊಂದು ಹೊಯ್ಸಳನಾದಂ ॥ 764 ॥

ಹೊಯ್ಸಳ ಲಾಂಛನ

ಕಂ ॥ ಅಂದಿಂದಿತ್ತಲ್ ಸಲೆನಿಲೆ
ಸಂದುದು ಶಾರ್ದೂಳಲಾಂಛನಂ ನಿಜಭಟರೊಳ್
ಸಿಂದದ ಪಟದೊಳ್ ಹೊಂನೊಳ್
ವಂದಿಜನಂ ಹೊಗಳೆ ಹೊಯ್ಸಳಾನ್ವಯಗೆಲ್ಲಂ ॥ 765 ॥

ವಿಷ್ಣುವರ್ಧನ

ಕಂ ॥ ದನುಜರ ಕುಳಮಂ ನಿರ್ಮೂ
ಳನಮಂ ಮಾಡಲ್ಕೆ ಪುಟ್ಟಿದಂದಿನ ಕೃಷ್ಣಂ
ಮನಮೊಲ್ದು ಭೂಪಕುಳದೊಳ್
ಜನಿಯಿಸಿ ಬಳೆದಂತೆ ವಿಷ್ಣುವರ್ಧನನಾದಂ ॥ 766 ॥

ಮ ವಿ ॥ ಮಲೆಯಂ ಸಾಧಿಸಿ ಕೊಂಗು ಚಂಗ ವಿಷಯ ಕ್ಷೋಣೀಶರಂ ಗೆಲ್ದು ದೋ
ರ್ಬಲದಿಂ ಕಪ್ಪಮನೆಯ್ದೆ ಕೊಂಡರಿಗಳಂ ಬೆಂಕೊಂಡು ಗಂಗೋರ್ವಿಗಂ
ಚಲದಿಂ ಕೂಡೆ ನೊಣಂಬವಾಡಿ ಮಹಿಗಂ ಶ್ರೀ ಕೃಷ್ಣವೇಣೀ ನದೀ
ಜಲದಿಂ ದಕ್ಷಿಣ ಭೂಮಿಗಂ ಪತಿಯೆನಲ್ ಶ್ರೀ ವಿಷ್ಣು ಕಣ್ಗೊಪ್ಪಿದಂ ॥ 767 ॥

ನರಸಿಂಹ I

ಚಂ ಮಾ ॥ ಜನನಿಯ ಗರ್ಭದಿಂದೊಗೆದ ಲಗ್ನದ ಮೇಲೆ ಬಟಿಕ್ಕೆ ಯಾಮದೊಳ್
ಜನಕನರಾತಿಯಂ ಕವಿಯ ಕಾಳೆಗದೊಳ್ ನೆಱೆ ಕೊಂದು ಗೆಲ್ದು ಬಂ
ದನುನಯದಿಂ ಪ್ರತಾಪ ನರಸಿಂಹನೆನಲ್ ಪೆಸರಿಟ್ಟು ಪಟ್ಟಮಂ
ಜನಿಯಿಸಿದಂದು ಕಟ್ಟಿದನೆನಲ್ ದೊರೆವೆತ್ತುದು ರಾಜ್ಯ ಸಂಪದಂ ॥ 768 ॥

ಚಟ್ಟಲೆ

ಕಂ ॥ ಕಡುಗಲಿತನದಿಂ ಚಟ್ಟಲೆ
ಕಡೆಗಣ್ಣಿಂ ನೋಡಿ ನೆಱೆದ ಜನತತಿಗೆಲ್ಲಂ

ಪೊಡವಟ್ಟು ರವಳಬೋವ
ನೊಡನಪ್ಪಿದಳೆಂದೊಡವಳನೇವಣ್ಣಿಪುದೋ ॥ 769 ॥

ಬಿಟ್ಟಿಬೋವ

ಕಂ ॥ ಸುರಪತಿಯ ಮಂತ್ರಿ ಮಂತ್ರ
ಸ್ಫುರಣೆಯನಿಳಿಕೆಯ್ದು ತಂನ ವಾಕ್ಪರಿಣತಿಯಿಂ
ನರಸಿಂಹಕ್ಷೋಣೀಶ್ವರ
ನರಮನೆಯೊಳ್ ಬಿಟ್ಟಿಬೋವನೊಪ್ಪುತ್ತಿರ್ಪ್ಪಂ ॥ 770 ॥

ಶಾಸನ ಕವಿ ಮಾಧವ

ಕಂ ॥ ನರಸಿಂಹ ನೃಪತಿ ಬೆಸಸ
ಲ್ಕರವರಿಸದೆ ರವಳ ಬೋವನುಂ ಚಟ್ಟಲೆಯುಂ
ಗರುಡನನಪ್ಪಿದ ಪರಿಯಂ
ವಿರಚಿಸಿದಂ ವಿಜಯಪುರದ ಮಾಧವ ವಿಬುಧಂ ॥ 771 ॥

141) ಬೇಲೂರು 120, E.C. IX (R), ಕ್ರಿಶ. ಸು. 1153

ಇದರಲ್ಲಿ ಹೊಯ್ಸಳ ದೊರೆ ಮೊದಲನೆಯ ನರಸಿಂಹನ ಕಾಲದಲ್ಲಿ ಮಹಾಪ್ರಧಾನ ಮಾಚಯಣ್ಣ ದಂಡನಾಯಕನು ಆದಿದೇವನ ಬಸದಿಗೆ (ಬಲ್ಲ ಜಿನಾಲಯ) ದತ್ತಿಯನ್ನು ಕೊಟ್ಟದ್ದನ್ನು ಹೇಳಿದೆ.

ಅನಂತವೀರ್ಯ ವ್ರತಿ

ಕಂ ॥ ವರ್ಗತ್ಯಾಗದ ಸೂಚಿತ
ಮಾರ್ಗ್ಗೋಪನ್ಯಾಸದಮಳದ ಮಾರ್ನ್ನುಡಿಯಲ್ಕಾ
ಭರ್ಗ್ಗಂಗವರಿದೆನಲ್ಕೆ ನಿ
ರರ್ಗ್ಗಳ ಮಾದತ್ತನನ್ತವೀರ್ಯ ಬ್ರತಿಗಳ್ ॥ 772 ॥

ಮಾಚ

ಕಂ ॥ ಸುರಗುರು ಮಂತ್ರಕ್ರಮದೊಳ್
ಧುರದೊಳ್ ಸಿಂಹಪ್ರತಾಪನಪ್ರತಿಮತೇಜಂ
ಸುರತರು ವಿತರಣ ಗುಣದಿಂ
ನರಸಿಂಹಮಹೀಶಮಂತ್ರಿ ಮಾಚಚಮೂಪಂ ॥ 773 ॥

142) ಹುಲಿಕೆರೆ 410, E.C. IX (R), ಕ್ರಿಶ. ಸು. 1160

ಇಲ್ಲಿ ಹೊಯ್ಸಳರ ದೊರೆ ಮೊದಲನೇ ನರಸಿಂಹನ ಆಳಿಕೆಯಲ್ಲಿ ಚಟ್ಟನು ಚಟ್ಟಸಮುದ್ರವೆಂಬ ಕೆರೆಯನ್ನೂ, ಚಟ್ಟೇಶ್ವರವೆಂಬ ದೇವಸ್ಥಾನವನ್ನೂ ಕಟ್ಟಿಸಿ ಭೂಮಿಯನ್ನು ದತ್ತಿ ನೀಡಿದಂತೆ ಹೇಳಿದೆ. ಇದೊಂದು ಪುಟ್ಟ ಚಂಪೂಕಾವ್ಯದಂತಿದೆ. ಕವಿಯ ಹೆಸರು ತಿಳಿದಿಲ್ಲ.

ವಿನಯಾದಿತ್ಯ

ಕಂ ॥ ವಿನಯಸ್ಫೂರ್ತಿನಿಧಾನಂ
ವಿನಯಾದಿತ್ಯಾಭಿಧಾನನರ್ಥಿನಿಧಾನಂ
ವಿನತಜನಜಳನಿಧಾನಂ
ಜನಿಯಿಸಿದಂ ಶತ್ರುಘಾತಶರಸಂಧಾನಂ ॥ 774 ॥

ಎರೆಯಂಗ

ಕಂ ॥ ಎಱಗಿದಗೆ ಹೊನ್ನ ಮೞೆಯಂ
ಲೆಱಪಂ ಮಾಱಾಂತ ಭೂಮಿಪಾಳರ ತಲೆಯೊಳ್
ಬಱಸಿಡಿಲಂದದೆ ತೊಟ್ಟೆನ
ಲೆಱಗುವನೆಱೆಯಂಗದೇವನದಟರ ಗೋವಂ ॥ 775 ॥

ವಿಷ್ಣುವರ್ಧನ

ಮ ವಿ ॥ ಪಡುವಲ್ ಪಶ್ಚಿಮವಾರ್ಧಿ ಮೂಡ ನೆಗಟ್ದಾಕಾಂಚೀಪುರಂ ತೆಂಕ ನೋ
ಟ್ಪೊಡೆ ಸಚ್ಚಂದನಮಂದಮಾರುತಚಳಶ್ರೀಖಂಡಷಂಡಾಚಲಂ
ಬಡಗಲ್ ಪೆರ್ದೊಱೆ ಮೇರೆಯಾಗೆ ನೆಲನಂ ವಿಕ್ರಾಂತದಿಂದಾಳ್ದನೆಂ
ದೊಡೆ ಪೋಲ್ವನ್ನನದಾವನೀಭುಜಬಳಭ್ರಾಜಿಷ್ಣುವಂ ವಿಷ್ಣುವಂ ॥ 776 ॥

ಮ ವಿ ॥ ತರದಿಂ ತಪ್ಪದೆ ತಾರಕಾತತಿಗಳಂ ತಾರಾಧ್ವದೊಳ್ ತಳ್ವದೊಂ
ದೆರಡೆಂದಿಂತೆಣಿಸಲ್ಕಮಪ್ಪುದುಱದಾಂತೀ ವಿಷ್ಣುಭೂಪಾಳನೊಳ್
ಶರಣಾಯಾತರನಣ್ಮಿ ಸತ್ತ ನೃಪರಂ ಬೆನ್ನಿತ್ತರಂ ಲೆಕ್ಕಿಸ
ಲ್ಕರಿದಿಂದ್ರಾರ್ಚಿತವಾಸುಕಿಪ್ರಭೃತಿಗಂ ಮೇಲಾದರಾರಾರ್ಪವರ್ ॥ 777 ॥

ವಿಷ್ಣುವರ್ಧನನ ರಾಣಿ ಲಕ್ಷ್ಮಾದೇವಿ

ಮ ವಿ ॥ ಪವಳಂ ಬಾಯ್ ನವಮೌಕ್ತಿಕಾಳಿ ಸುಲಿಪಲ್ ಶಂಖಂ ಕೊರಲ್ ಚಂದ್ರನೊ
ಪ್ಪಿವ ಭಾಳಂ ನವಮೇಘಜಾಳಮಳಕಂ ಸ್ವಚ್ಛಾಂಬು ಲಾವಣ್ಯಮು
ಣ್ಮುವ ಪೀಯೂಷರಸಂ ತೊದಳ್ನುಡಿ ಚಳದ್ವೀಚೀಚಯಂ ತೋಳೆನಲ್
ನವದುಗ್ಧಾಬ್ಧಿವಿಳಾಸಲಕ್ಷ್ಮಿಯೆನೆ ಲಕ್ಷ್ಮಾದೇವಿ ಕಣ್ಗೊಪ್ಪುವಳ್ ॥ 778 ॥

ಮ ವಿ ॥ ಧರಣೀಕಾಮಿನಿ ತನ್ನ ಪೇೞ್ದುದನೆ ಗೆಯ್ವಾಯತ್ತೆಯಾಗಿರ್ಪಳಾ
ಗಿರಿರಾಜಾತ್ಮಜೆಯಪ್ಪ ಪೆಂಪಿನುಮೆಯುಂ ತನ್ನಾಕೆ ವಾಕ್ಕಾಂತೆಯುಂ
ಪಿರಿದುಂ ತಾಂ ನುಡಿದಂತೆ ಕಾಮಸತಿಯುಂ ತನ್ನನ್ನಳೆಂದಂದು ಸುಂ
ದರಿಯರ್ ಭಾಗ್ಯವಿಳಾಸವಿಭ್ರಮದೆ ಲಕ್ಷ್ಮಾದೇವಿಗಾರಗ್ಗಳಂ ॥ 779 ॥

ನರಸಿಂಹ I

ಮ ಸ್ರ ॥ ಭುವನೈಕಾಶ್ಚರ್ಯಮಾಯ್ತೀತನ ಚರಿತಮದೆಂತೆಂಬೆ ಕಾದಂಬಸೈನ್ಯಂ
ಕವಿಯೇೞಿಂಗೆಂದು ಬಂಕಾಪುರದೊಳಿರಲದಂ ಕೇಳ್ದು ಗರ್ಭಸ್ಥನಾಗಿ
ರ್ದವತಾರಂಗೆಯ್ದುತುಂ ತದ್ಬಳಮನರೆದು ತತ್ರಾಜ್ಯಸಾಮ್ರಾಜ್ಯಸರ್ವ
ಸ್ವವನಾದಂ ತಂದೆಗಿತ್ತಂ ಜಸಮೆಸೆವಿನೆಗಂ ನಾರಸಿಂಹಕ್ಷಿತೀಶಂ ॥ 780 ॥

ಮ ಸ್ರ ॥
ನಳ ನಾಭಾಗಾಂಬರೀಷ ಪ್ರಥಿತ ಪೃಥು ಹರಿಶ್ಚಂದ್ರ ತಚ್ಚಂದ್ರಗುಪ್ತೋ
ಜ್ಜ್ವಳಕೀರ್ತ್ಯಾರಾಮ ರಾಮಾರ್ಜುನ ಪುರು ಸಗರ ಖ್ಯಾತದುಷ್ಯಂತ ಧಾತ್ರೀ
ತಳಪಾಳರ್ ಕೂಡಿ ಬಂದೀ ಕಲಿಯುಗದೊಳಗೊಂದಾದವೋಲ್ ಕ್ಷತ್ರಧರ್ಮಂ
ತೊಳಗಲ್ ವಿಖ್ಯಾತಿವೆತ್ತಂ ಯದುಕುಳತಿಳಕಂ ನಾರಸಿಂಹಕ್ಷಿತೀಶಂ ॥ 781 ॥

ಮ ವಿ ॥ ಧುರದೊಳ್ ಶೂದ್ರಕನೂರ್ಜಿತಾರ್ಥಚಯದಿಂ ಧೈರ್ಯಕ್ರಮಕ್ಷತ್ರಿಯಂ
ಪರಸೈನ್ಯಾಂಬುಧಿಬಾಡವಂ ದಲಿದಱಿಂ ತಾಂ ವರ್ಣಸಾಂಕರ್ಯಮಂ
ನರಸಿಂಹಂ ತಳೆದಿರ್ದನಿರ್ದುಮಿದು ಮತ್ತಾಶ್ಚರ್ಯಕಂ ವರ್ಣಸಂ
ಕರಮೀರಾಷ್ಟ್ರದೊಳೇನುಮಿಲ್ಲೆನಿಸಿ ಧಾತ್ರೀಚಕ್ರಮಂ ರಕ್ಷಿಪಂ ॥ 782 ॥

ಮ ವಿ ॥ ನುತಧರ್ಮಂ ರಿಪುಭೀಮನರ್ಜುನಯಶಂ ವಿದ್ವಿಷ್ಟಭೂಭೃದ್ಯಮಂ
ಕ್ಷಿತಿರಾಮಂ ಕೃತಸೀಮಗೀತಭರತಂ ಭಾಸ್ವತ್ಸುಮಿತ್ರೋದ್ಭವಂ
ಕ್ಷಿತಿಪಾಳಂ ನರಸಿಂಹದೇವನವನೀ ಶತ್ರುಘ್ನನಂತುದ್ಭಭಾ
ರಥ ರಾಮಾಯಣ ಪೂರ್ವಪುಣ್ಯಪುರುಷ ಪ್ರಖ್ಯಾತಿಯಂ ತಾಳ್ದಿದಂ
॥ 783 ॥

ಮ ವಿ ॥ ಸಬಳಂ ಚಂಚು ತುರಂಗಮಂಗಮೆರಡುಂ ಪಕ್ಷಂಗಳೆಂಬಂತಿರಲ್
ನಿಜಿಡಂ ಪೊಣ್ಮಿದ ಪಕ್ಕರಕ್ಕೆ ಕುಡುಕಾಗಲ್ಕನ್ಯಸೈನ್ಯಂಗಳಾ
ತ್ತಬಲಂ ಪಕ್ಷದೊಳಿಕ್ಕಿ ರಕ್ಷಿಸಿದನಿಂತೀ ಗಂಡಭೇರುಂಡ ಸೈ
ನ್ಯಬಲಂಚೆತ್ತಿರೆ ನಾರಸಿಂಹನೃಪನಾತ್ಮಾವಾಪ್ತಸಪ್ತಾಂಗಮಂ ॥ 784 ॥

ಮ ವಿ ॥ ಉಱಿದಾಂತೊಡ್ಡಿದರಾತಿರಾಜಬಳಮಂ ತನ್ನೊಂದು ಮೆಯ್ಯಿಂದೆ ನಿಂ
ದಿಱಿದೀವೀ ನೃಸಿಂಹನಂತು ಜಸಮಂ ಪೆತ್ತಂದದೇಂ ತಪ್ಪೆ ಕಂ
ಡಱಿಯಲ್ ಕಾಳೆಗಮಂ ಪೊಗೞ್ತೆಗೆಳಸುತ್ತಿರ್ಪರ್ ಕೆಲರ್ ಪೇೞಿದೇಂ
ತೆಱೆಯೋ ಸುಂಕಮೋ ಸೂಱೆಯೋ ಪರಕೆಯೋ ಪನ್ನಾಯವೋ
ಬಿಟ್ಟಿಯೋ ॥ 785 ॥

ಚಂ ಮಾ ॥ ಸಿರಿಗೆಡೆಯಾದ ಪುಷ್ಕರದೊಳೊಂದಿದ ದೀರ್ಘ ಸುವೃತ್ತಹಸ್ತದಿಂ
ಪರಿಣತಮಾದ ಕೋಪದಿನನುಗ್ರಹದಿಂ ಸ್ಥಿರಪದ್ಮವಕ್ತ್ರದಿಂ
ದುರುತರವಂಶದಿಂದೆಸೆವ ದಾನದಿನೀನರಸಿಂಹಭೂಭುಜಂ
ಪರಿಚಿತಭದ್ರಲಕ್ಷಣದಿನೊಪ್ಪುವ ಬಪ್ಪನ ಗಂಧವಾರಣಂ ॥ 786 ॥

ಚಂ ಮಾ ॥ ಸಮದದೊಳಿಷ್ಟಮಾದ ಕವಳಂ ತನಗಾಗಿರಲನ್ಯಸೈನ್ಯದಿಂ
ಸಮನಿಸೆ ಹಸ್ತಿನೀಸಹಿತ ಪದ್ಮಿನಿಯಲ್ಲಿ ವಿನೋದವಿಶ್ರಮಂ
ಸಮುಚಿತದಾನಲಕ್ಷ್ಮಿವೆರಸೊಲ್ದವೊಲಾಡುವುದೊತ್ತಿ ತನ್ನನಾ
ಕ್ರಮಿಸುವೆನೆಂಬನಂ ನೆಲಕೆದರ್ಪುದು ಬಪ್ಪನ ಗಂಧವಾರಣಂ ॥ 787 ॥

ಚಂ ಮಾ ॥ ನೆಣದ ಬಣಂಬೆ ಪೆರ್ವೆಣದ ಬೆಟ್ಟು ಕರುಳ್ಗಳ ಬಳ್ಳವಳ್ಳಿ ಸಂ
ದಣಿಸಿದ ಕಂಡ ವರ್ಧಿಸುವ ಪಂದಲೆ ನೆತ್ತರನೀಂಟಿ ರಾಗದಿಂ
ಕುಣಿಕುಣಿದಾಡಿ ಪಾಡುವ ನಿಶಾಟೆಯರೆಂಬಿವಱಿಂದೆ ಸಂಗರಾಂ
ಗಣಮತಿರೌದ್ರಮಾಗಿಱಿದು ಕೊಲ್ವುದು ಬಪ್ಪನ ಗಂಧವಾರಣಂ ॥ 788 ॥

ನರಸಿಂಹನ ಮಹಿಷಿ ಚಾಗಲೆ

ಕಂ ॥ ಪರಿವಾರಸುರಭಿಯೆನಿಸುವ
ನರಸಿಂಹನರೇಂದ್ರಮಹಿಷಿ ಚಾಗಲೆ ನಿಚ್ಚಂ
ಪರಿಜನವತ್ಸಸ್ನೇಹದೆ
ತೊರೆದಮೃತಮನಱಿದು ಕಱೆಯುತಿರ್ಪುದು ಸಹಜಂ ॥ 789 ॥

ಕಂ ॥ ಸಿರಿಸದ ಹೂವಿನ ಮಾಲೆಯ
ಸರಿಯೆನಿಸುವ ಸಿರಿಯನೆಸೆಯೆ ತಾಳ್ದಿದ ನಳಿತೋಳ್
ನರಸಿಂಹಂಗಿದು ವಜ್ರ
ಸ್ಥಿರಪಂಜರಬಂಧಮೆನಿಸಿದುದು ಚಾಗಲೆಯಾ ॥ 790 ॥

ಚಟ್ಟ

ಮ ಸ್ರ ॥ ನರಸಿಂಹಕ್ಷೋಣೀಪಾಳಂಗಣುಗನಣುವನೆಂತಂತಿರಲ್ ಸ್ವಾಮಿ ಸಂಪ
ತ್ತರಿಪೂರ್ಣ ಕರ್ಣನೆಂತಂತಧಿಕವಿತರಣಂ ದುಗ್ಧವಾರಾಶಿಯೆಂತಂ
ತಿರೆ ಗಂಭೀರಂ ಪ್ರತಾಪಾನ್ವಿತನುದಿತದಿನಾಧೀಶನೆಂತಂತೆನಲ್ ತಾಂ
ಸಿರಿಗಂ ಬರ್ಮಂಗಮುರ್ವೀಜನವಿನುತಗುಣಂ ಪುಟ್ಟಿದಂ ಕೂಸಚಟ್ಟಂ
॥ 791 ॥

ಕಂ ॥ ಭೃಗುಮತದೊಳಾದ ಪರಿಣತಿ
ಪೊಗಟಿಲ್ ದೇವಂಗಮರಿದು ನೆಟ್ಟನೆ ಚಟ್ಟಂ
ತ್ರಿಗುಣಿಸುವ ತಿರುಗಿ ಪಾಯಿಪ
ನಿಗತಂದಿವಿವೆಡೆಯೊಲಾದಿಭೃಗುವಂ ಮಿಗುವಂ ॥ 792 ॥

ಕಂ ॥ ಭೃಗುವಿಂ ನಾಕಪನಿಂದಂ
ನೆಗಟ್ದಾ ಬೇತಾಳನಿಂದೆ ಶೂದ್ರಕನಿಂದಂ
ಬಿಗಿವೊಟ್ಟಜೆಯಿಂ ಚಟ್ಟಂ
ದ್ವಿಗುಣಂ ತ್ರಿಗುಣಂ ಚತುರ್ಗುಣಂ ಪಂಚಗುಣಂ ॥ 793 ॥

ಕಂ ॥ ಎಡೆಗಡಿವ ಬಿಡುವ ಬಿಡಿಸುವ
ಪಿಡಿದೊತ್ತುವ ಪೊತ್ತುಪರಿವ ಕುತ್ತುವ ಬಲ್ಪು
ಗ್ಗಡಮೊಟ್ಟಜೆಯಿಂ ಚಟ್ಟಯ
ನೊಡನಾರ್ ಮಾರ್ಕೊಲನಿಲ್ಲಿ ಬಿಡಲೊಡರಿಸುವರ್ ॥ 794 ॥

ಮ ವಿ ॥ ಧರೆಗಾಳಂಬನಮಾಗಿ ಪೆಂಪು ಮುಗಿಲಂ ಮುಟ್ಟಿತ್ತೆನಲ್ ಕೊಟ್ಟು ಬೇ
ಟ್ಪರ ಬೇಟ್ಪಂತುಟನೆನ್ನ ಪೊನ್ನ ತೆಱದಿಂ ಸಾಫಲ್ಯಮಂ ತಾಳ್ದದಾ
ದರದಿಂ ಸದ್ವಿಜರಾಜಮಿತ್ರನಿಕರಂ ತನ್ನಂ ಸಮಾಶ್ರೈಸಿಯುಂ
ತಿರಿಯುತ್ತಿರ್ದಪ್ಪುದಿನ್ನುಮೆಂದು ನಗುವಂ ಪೊಂಬೆಟ್ಟಮಂ ಚಟ್ಟಯಂ
॥ 795 ॥

ಕಂ ॥ ಕೂಸನೊಡನಾಡುವೆಡೆಯೊಳ್
ಭಾಸುರಸುರಮಂತ್ರಿ ಮಂತ್ರದೊಳ್ ರಿಪುತಂತ್ರೋ
ಗ್ರಾಸುರರಣರಂಗಾಗ್ರದೊ
ಳಾಸುರಕೇಸರಿವಿಳಾಸಿ ನೆಟ್ಟನೆ ಚಟ್ಟಂ ॥ 796 ॥

ಕಂ ॥ ರಂಬೆಗಮೂರ್ವಶಿಗಂ ಮಿಗಿ
ಲೆಂಬವಳೇಕಾಂತದಲ್ಲಿ ಪರವಧು ಸಲೆ ತ
ನ್ನಂ ಬಯಸಿ ಬಂದು ನಿಲಲವ
ಳಂ ಬಗೆಯಿಂ ನೋಡನಳಿಪಿ ಮುಟ್ಟಂ ಚಟ್ಟಂ ॥ 797 ॥

ಕಂ ॥ ಕಲಿಯುಗಬಲಿ ಕಲಿಯುಗಶಿಬಿ
ಕಲಿಯುಗವಿದ್ಯಾಧರೇಶಿ ಕಲಿಯುಗಕರ್ಣಂ
ಕಲಿಯುಗಕಲ್ಪಕ್ಷ್ಮಾಜಂ
ಕಲಿಯುಗಸುರಧೇನುವೆನಿಸಿ ಕೊಟ್ಟಂ ಚಟ್ಟಂ ॥ 798 ॥

ಕಂ ॥ ಎಣಿಕೆವೆರಸೊಂದು ಪೊಟ್ಟಿನ
ಗುಣದಿಂದಂ ಕುಡುವ ಕರ್ಣನೇಂ ಗಳ ಚಟ್ಟಂ
ಗೆಣೆಯೆ ಧನಕನಕರಾಶಿಯ
ನೆಣಿಸದೆ ಕುಡುತಿರ್ಪನೀತನೊಳ್ದಾಪೊಟ್ಟುಂ ॥ 799 ॥

ಕಂ ॥ ಪಿರಿದುಂ ಚಿತ್ರಾನ್ವಿತಮಂ
ಬರಸಂಗತಮುತ್ತರೋತ್ತರಂ ತಾನೆನಲು
ರ್ವರೆ ತಣಿಯಲ್ ಮುದದಿಂ ಪೊಂ
ಗಜೆವುದು ಚಟ್ಟಯನ ಹಸ್ತಮಪ್ರತಿಹಸ್ತಂ ॥ 800 ॥

ಮ ಸ್ರ ॥
ಪಿರಿದುಂ ಭ್ರಾಂತಿಂದೆ ನಾಲ್ಕುಂ ಕಡಲ ಕಡೆವರಂ ನೋಡಿದೆಂ ನೋಡಬಂದೆಂ
ಸಿರಿಯಿಂದಂ ಶೀಲದಿಂದಂ ಸನಯವಿನಯದಿಂ ದಾನದಿಂ ಧರ್ಮದಿಂದಂ
ಗುರುದೇವಬ್ರಾಹ್ಮಣಾಳೀಪರಿಚರಣಭವದ್ಭಕ್ತಿಯಿಂ ಶಕ್ತಿಯಿಂದಂ
ದೊರೆಯಂ ಚಟ್ಟಂಗೆ ಕಾಣೆಂ ಗಳಪಲಜಿಯೆನಾಂ ಚಾಗದಿಂ ಭೋಗದಿಂದಂ ॥ 801 ॥

ಮ ವಿ ॥ ಹರಹಾಸಂ ದರಹಾಸಮಾಗೆ ಹಿಮವತ್ಕುಕ್ಷೀಳಮುಂ ಶಂಭುಭೂ
ಧರಮುಂ ತುಂಗಕುಚಂಗಳಾಗೆ ಮುಖಮಾಗಲ್ ಚಂದ್ರಮಂ ಚೆನ್ನದಾ
ವರಣಂ ದುಗ್ಧಸಮುದ್ರಮಾಗೆ ದಶನಂ ದಿಗ್ದಂತಿದಂತಂಗಳಾ
ಗಿರೆ ತಾರಾನಖೆ ಕೂಸಚಟ್ಟನ ಯಶಶ್ರೀ ಲೋಕದೊಳ್ ವರ್ತಿಪಳ್ ॥ 802 ॥

ಕಂ ॥ ಕೆಜೆಗಂ ದೇಗುಲಕಂ ತಾ
ನಜಿಸಿದ ಧನಮನಿತುಮೆನಿಸಿ ಜಸದಿಂ ಚಟ್ಟಂ

ನೆಱೆದಂ ಬಱಿದೊಱೆವೋದುದು
ಕೆಱೆಗಂ ದೇಗುಲಕಮಾಗದುೞಿದವರರ್ಥಂ || 803 ||

ಕಂ || ಮಣ್ಣ ಸಮನೆನಿಸಿ ಹೊನ್ನಂ
ಮಣ್ಣಂಗೆಯ್ವವಗೆ ನೆಱೆಯೆ ಕೊಟ್ಟುಂ ಚಟ್ಟಂ
ಮಣ್ಣುಂಡು ಹೋದದೆನಿಸದೆ
ತಣ್ಣನೆ ತಣಿಪಿದನಶೇಷಮಂ ಜೀವನದಿಂ || 804 ||

ಕಂ || ಸೀತಾಪ್ರಾಪ್ತಿಯ ಫಳಮಾ
ಸೇತುಗೆ ಚಟ್ಟಯನ ಧರ್ಮಸೇತುಗೆ ಫಳಮಾ
ಸೇತುಹಿಮಾದ್ರಿಸಮುದ್ರ
ಖ್ಯಾತಿಸುಪುಣ್ಯಂ ವಿಶಾಲಶಾಲಿಕ್ಷೇತ್ರಂ || 805 ||

ಮ ವಿ || ರಸಭಾವೋಜ್ಜ್ವಳಮೂರ್ತಿ ಪದ್ಮವದನಂ ಕಲ್ಹಾಂಘ್ರಿ ಚಕ್ರಸ್ತನಂ
ಬಿಸದೋರ್ವಲ್ಲರಿ ರಾಜಹಂಸಗಮನಂ ಮೀನಾಂಬಕಂ ನೀಳಕಾ
ಪಿಸರತ್ಕುಂತಳಮೊಪ್ಪೆ ಕನ್ನೆಗೆಱೆಯುಂ ಚಟ್ಟಂ ಧನಂಗೊಟ್ಟು ಕ
ಟ್ಟಿಸಿ ಚಟ್ಟೇಶ್ವರಸದ್ವರಂಗೆ ಫಳಿಸಲ್ ಹಸ್ತೋದಕಂ ಮಾಡಿದಂ || 806 ||

ಚಟ್ಟಸಮುದ್ರ

ಮ ವಿ || ಪಿರಿದಾಯಾಸದಿನರ್ಥಮಂ ನೆರಪಿದಂ ಚಟ್ಟಂಯೊಲಿಂತೀಶಮಂ
ದಿರಮಂ ಪೂರ್ಣತಟಾಕಮಂ ನಿಜಯಶೋರ್ಥಂ ಮೇರುವಾರಾಶಿಸು
ಸ್ಥಿರಮಪ್ಪಂತಿರೆ ಮಾಡ್ದುದಂತು ಚಪಳಂ ತಾನರ್ಥಮೆಂದಾಗಳುಂ
ನಿರತಂ ಚಟ್ಟಸಮುದ್ರಮಾರ್ದಱಿಪುಗುಂ ವ್ಯಾಲೋಲಕಲ್ಲೋಲದಿಂ || 807 ||

ಶಾ ವಿ || ನಾಡೆನ್ನಂ ನಡುಪಿಟ್ಟುಕೊಂಡುದದಱಿಂ ಮಜ್ಜೀವನಂ ಸಾರ್ಥಕಂ
ನಾಡಿಂದಂ ಪೊಱಗಾಯ್ತುಸೇವ್ಯಸಲಿಲಂ ತಾನುಪ್ಪುನೀರೆಂದು ಜೋ
ಡಾದುತ್ತಿರ್ಪುದು ನಿರ್ಮಳಾಂಬುಭರಿತಶ್ರೀಸಾರಸಾರೋವರಂ
ನೋಡೀ ಚಟ್ಟಸಮುದ್ರಮಿಲ್ಲಿ ಲವಣಾಂಭೋರಾಶಿಯುಂ ಪೆರ್ಮೆಯುಂ
|| 808 ||

ಮ ವಿ || ಎಳನೀರಂ ಸವಿ ಲಾಘವಂ ಗಗನಮಂ ತಣ್ಪಾಹಿಮಾದ್ರೀಂದ್ರಮಂ
ತಳಿರಂ ಬಣ್ಣಿಗೆ ಶುದ್ಧಿ ಬಾಂದೊಱೆಯನಾಗಾಂಭೀರ್ಯಮಂಭೋಧಿಸಂ

ಕುಳಮಂ ಕೀಟ್ಬಿಡಿಸುತ್ತಿರಲ್ಕೆ ವಿಸರತ್ಸೌರಭ್ಯಸೌಲಭ್ಯಸಂ
ಕಳಿತಂ ಚಟ್ಟಸಮುದ್ರಮುದ್ಧೃತ ಜಗತ್ತಾಪಂ ಸಮಂತೊಪ್ಪುಗುಂ ॥ 809 ॥

ಕಂ ॥ ಫಳಮಂ ಪೊಗೆಜ್ವೊಡಳುಂಬಂ
ಬೆಳೆವುದು ಮುಂದತ್ತ ಭುಕ್ತಿಯಂ ಮುಕ್ತಿಯುಮಂ
ಜಳದಿಂ ಚಟ್ಟ ಸಮುದ್ರಂ
ಬೆಳೆವುದು ಪಿಂತಿತ್ತ ಕರ್ವುಮಂ ಕಟಿವೆಯುಮಂ ॥ 810 ॥

ಚಟ್ಟೇಶ್ವರ ದೇವಾಲಯ

ಚಂ ಮಾ ॥ ನರತುರಗಾಳಿಯಿಂ ಗಜರಥಾವಳಿಯಿಂ ಪೊಸಪೊನ್ನರಾಶಿಯಿಂ
ಸ್ಥಿರಪರಿಪೂರ್ಣಮಾಯ್ತಿದುವೆ ರಾಜ್ಯಮದೇವುದು ಬೆಳ್ಳಿಕಟ್ಟು ಬೆ
ಳ್ಕರಿಪುದು ಕೆಮ್ಮನೆಂದು ರಜತಾದ್ರಿಯಿನಿಲ್ಲಿಯೆ ಬಂದು ನಿಲ್ವಿನಂ
ಗಿರಿಪತಿ ಶಂಭುಮಂದಿರಮನೆತ್ತಿಸಿದಂ ಗುಣಿ ಕೂಸಚಟ್ಟಯಂ ॥ 811 ॥

ಕಂ ॥ ಪಲರಂ ರಕ್ಷಿಸಿ ಮತ್ತಂ
ಪಲವಂ ನಡೆದೇಗುಲಂಗಳಂ ಮಾಡಿಸಿದಂ
ನೆಲನೆಲ್ಲಮಱಿಯೆ ಚಟ್ಟಂ
ನೆಲೆದೇಗುಲಮುಮನಿದೊಂದನೊಲ್ದೆತ್ತಿಸಿದಂ ॥ 812 ॥

ಚಟ್ಟನ ಹೆಂಡತಿ ಮಹಾದೇವಿ

ಕಂ ॥ ಅಂತೆನಿಸಿ ನೆಗಟ್ದಿ ಚಟ್ಟನ
ಕಾಂತೆ ಮನಃಕಾಂತೆ ಕಂತುಕಾಂತೆಯ ರೂಪಿಂ
ಕಾಂತತನುಕಾಂತಿ ಜಿತಶಶಿ
ಕಾಂತೆ ಮಹಾದೇವಿ ದೇವಿಯೆನಿಪಳ್ ಗುಣದಿಂ ॥ 813 ॥

ಮ ವಿ ॥ ಚರಣಾಬ್ಜಂ ಬೆರಲುಂಗುಟಂ ನಖಕುಳಂ ಮೇಂಗಾಲ್ ಮಡಂ ಜಂಘೆಗಳ್
ವರವೃತ್ತೋರು ನಿತಂಬಬಿಂಬಂ ಮಧುರಂ ವಕ್ಷೋರುಹಂ ತೋಳ್ ತಳಂ
ಕೊರಲೋಷ್ಠಂ ಸುಲಿಪಲ್ ಕಪೋಲಫಲಕಂ ಕಣ್ಬುರ್ವು ಕರ್ಣಂ ನೊಸಲ್
ವರನೀಲಾಳಕಮೊಪ್ಪೆಯೊಪ್ಪಿದಪಳೀ ಮಾದೇವಿ ಮಾದೇವಿವೋಲ್ ॥ 814 ॥

143) ಬೆಳವಾಡಿ 560, E.C. IX (R), ಕ್ರಿ.ಶ. ಸು. 1160

ಇದರಲ್ಲಿ ಹೊಯ್ಸಳರ ದೊರೆಯಾದ ಮೊದಲನೆಯ ನರಸಿಂಹನ ಆಳಿಕೆಯಲ್ಲಿ ಜನ್ನಮಯ್ಯಹೆಗ್ಗಡೆಯು ಬೆಳವಾಡಿ ಜನ್ನೇಶ್ವರ ದೇವರಿಗೆ ಭೂಮಿಯನ್ನು ದತ್ತಿ ಬಿಟ್ಟಂತೆ ಹೇಳಿದೆ.

ಎರೆಯಂಗ

ಕಂ ॥ ಯಾದವವಂಶಕ್ಕಮರೆ ಮ
ಹೋದಯಮೆಱೆಯಂಗನೃಪತಿ ವಿನಯಾದಿತ್ಯಂ
ಗಾದಂ ತನಯಂ ವಿನಯಂ
ಸೋದರಮೆನೆ ತನಗೆ ನೆಗಟ್ದಿ ಧೀರೋದಾತ್ತಂ ॥ 815 ॥

ವಿಷ್ಣುವರ್ಧನ

ಚಂ ಮಾ ॥ ಇಱಿದ ನೆಲಂಗಳಾಂತವರ ನೆತ್ತರನಟ್ಕಿಸಲಾಱದೀಗಳುಂ
ದುಱಿತೊಱೆಯುತ್ತುಮಿರ್ದಪುವು ತೀಂಬ ಕಟಂಗಳನೆಂಟುಮಾನೆಗಳ್
ತಱಿತಱಿನಪ್ಪಿನಂ ಜಯದ ಲಚ್ಚಣಗಂಬದೊಳುರ್ದಿಕೊಳ್ವುವಾ
ವಱಿವೆವೆ ವಿಷ್ಣುವಿಕ್ರಮದುಪಕ್ರಮಮಂ ಪೊಗಟಲ್ ಕುಬುದ್ಧಿಗಳ್ ॥ 816 ॥

ಮ ವಿ ॥ ಮದವದ್ವೈರಿಯನಾಂತು ಪೊಯ್ಯೆ ಜಯಶೀಲಂ ವಿಷ್ಣು ವಿದ್ವಿಷ್ಟನು
ರ್ಬಿದ ಕತ್ತಾಱದೆ ಪಾಱಿ ಬಿಟ್ದಿ ತನಿಗಂದಂ ಕಪ್ಪೆಗೂಂತಿರ್ಕುತಿ
ರ್ದುದು ವೀರರ್ಕಳ ಬಿಟ್ದಿ ತೋಳ್ ಪಿಡಿದ ಖಟ್ಗಂ ಪೊಯ್ವ ಸೂಜ್ದೋಱುತಿ
ರ್ದುದಿದೇನದ್ಭುತಮಾಯ್ತೊ ವೀರವಿಭವಂ ಸಂಗ್ರಾಮರಂಗಾಗ್ರದೊಳ್
॥ 817 ॥

ಉ ಮಾ ॥ ಮುಕ್ಕುಟಿಸಿರ್ಪಳಾದಿನರಪಾಳರ ಕೀರ್ತಿಯನಾತ್ಮಕೀರ್ತಿ ತಿಂ
ದಕ್ಕುಳಿಸಿರ್ಪಳನ್ಯಬಳಮಂ ಬಸಿಱಿಂ ನಿಜಖಡ್ಗಕಾಳಿ ಕೆ
ಯ್ಮಿಕ್ಕುದು ತೇಜಮಾಂ ಬಿರುದನೆಂಬನ ಮೀಸೆ ಕರಂಪುನಾರ್ಪಿನಂ
ಮೊಕ್ಕಳಮಾಯ್ತು ರಾಜಗುಣಮೀಕ್ಷಿಸಲೀ ಕಲಿವಿಷ್ಣುಭೂಪನೊಳ್ ॥ 818 ॥

ಕಂ ॥ ಓರೆಯಗಲಾದ ಭೂಮಿಗೆ
ನೀರೆಱಗುವುದುಚಿತಮೆಱಗದುನ್ನತಭೂಭೃ
ದ್ಧಾರಿಣಿಗೆ ಕೀಱಿ ಪರಿವುದು
ಭೋರೆನೆ ತರವಾರಿವಾರಿ ಬಿಟ್ಟಿಗನೃಪನಾ ॥ 819 ॥

ಕಂ ॥ ಕರವಾಳವಾಡೆ ಪಾಂಡ್ಯಂ
ಕರವಾಳಿಂ ಹೊಯ್ಸಳೇಶನಿಱಿಯಲ್ ನೋಡ
ಲ್ಕರವಾಳಲ್ಲದೆ ಕಾದ
ಲ್ಕರವಾಳಿಲ್ಲಾಯ್ತು ನೋಡೆ ತಿಗುಳನ ಪಡೆಯೊಳ್ ॥ 820 ॥

ಮ ವಿ ॥ ಕಮಠೇಂದ್ರಾದಿಗಳಾಂತು ಪರ್ಬಿದ ನೆಲಂ ನಿಷ್ಕಂಪದಿಂದಿರ್ದ ನಿ
ನ್ನ ಮಹಾಬಾಹುವ ತೀನನೇಂ ಕಳೆಗುಮೇ ಪಾಂಡ್ಯಂ ಕುಭೃನ್ಮಾತ್ರನ
ಕ್ಕುಮೆಲೇ ಹೊಯ್ಸಳ ಮೇರುವಲ್ಲಿ ಭುಜಮಂ ಮಾಱುರ್ದು ದಿಗ್ದಂತಿದಂ
ತಮನಿಂತಂತೊರಸಲ್ಲದುಂತೆ ಕಳೆವೈ ದೋರ್ದಂಡಕಂಡೂತಿಯಂ ॥ **821** ॥

ಮ ಸ್ರ ॥ ಧುರದೊಳ್ ಬಂದೊಡ್ಡಿ ವೈರಿಪ್ರಕರಮಿರಲವಷ್ಟಂಭದಿಂ ಬಿಟ್ಟಿದೇವಂ
ಕರವಾಳಂ ತೋಡಿಕೊಂಡಿಂ ಬಟಿಕಮೆಲೆ ಮಹಾದೇವ ಕಾಲಾಗ್ನಿರುದ್ರಂ
ಗುರಿಗಣ್ ಬಂದಂತೆ ಮಾಕಾಳಿಗೆ ಗರವಿಡಿದಂತಿಂದ್ರದಿಗ್ದಂತಿ ಕಾಯ್ಪಿಂ
ಪರಿಘಂಗೊಂಡಂತಗುರ್ಬುರ್ಬಿದುದೆನೆ ಭರದಿಂ ಮೀಱಿ
ಮಾಱಾಂಪನಾವಂ ॥ **822** ॥

ಮ ವಿ ॥ ಒದವಲ್ ರಾಗರಸಪ್ರವಾಹಮದಟಿಂ ಪಣ್ಗೊಂಬಿನಂ ಪೊಯ್ಯೆ ಕೂ
ಡಿದ ತಾಳಂ ಲಯಮಂ ನೆಗಚ್ಚಿ ಜಡಿದಂ ಸೋಲಿಕ್ಕೆ ಗಂಡಾಜಿರಂ
ಗದೊಳಂದಾಂತಿರಳೊಪ್ಪೆ ಬಾಹು x x x ಶಿಕ್ಷಾಯುಕ್ತಚಂಡಾಸಿದು
ರ್ಮದವೀರಾರಿನಿವಾರಣಾಭಿನಯಮಂ ಶ್ರೀವಿಷ್ಣುಭೂಪಾಳನಾ ॥ **823** ॥

ವಿಷ್ಣುವರ್ಧನನ ಮಹಿಷಿ ಲಕ್ಷ್ಮಿ

ಚಂ ಮಾ ॥ ನಗೆ ಸುಧೆಯೊಳ್ ನಿಶಾರಮಣನೊಳ್ ವದನಂ ಸುರಕುಂಭಿಕುಂಭದೊಳ್
ಬಿಗಿದ ಕುಚಂ ಸುರದ್ರುಮದ ಪಲ್ಲವದೊಳ್ ಪದಪಲ್ಲವಂ ತಳ
ರ್ದೊಗೆದುವೆನಿಪ್ಪ ಪಟ್ಟದ ಮಹಾಸತಿ ಲಕ್ಷ್ಮಿಗೆ ಶೇಷನಾಂತ ಭೂ
ಮಿಗೆ ಪತಿಯಪ್ಪ ವಿಷ್ಣು ಪತಿಯೆಂದೊಡದೊಪ್ಪುವುದೆಂತು ನೋೞ್ಪೊಡಂ
॥ **824** ॥

ಜನ್ನಮಯ್ಯ

ಉ ಮಾ ॥ ಉತ್ತಮ ಜೀವನಕ್ಕೆ ಕುಮುದಕ್ಕೆ ಗಭೀರಗುಣಕ್ಕೆ ಸತ್ವಸ
ದ್ವೃತ್ತಿಗತಿಪ್ರಸನ್ನತೆಗೆ ತನ್ನವೊಲಾಶ್ರಯಮಾಗಿ ಪೆರ್ಮೆಯಂ
ಪೆತ್ತುದೆನಿಪ್ಪುದೊಂದು ಕೆಱೆಯಂ ನೆಱೆ ಕಟ್ಟಿಸಿ ದೇವಪೂಜನಾ
ವೃತ್ತಿಗೆ ಜನ್ನಮಯ್ಯವಿಭು ತಾನದನಿತ್ತನಿದೇನುದಾತ್ತನೋ ॥ **825** ॥

144) ಬೇಲೂರು 136, E.C. IX (R), ಕ್ರಿ.ಶ. 1164

ಇದರಲ್ಲಿ ಹೊಯ್ಸಳ ದೊರೆ ಮೊದಲನೆಯ ನರಸಿಂಹನ ಆಳಿಕೆಯಲ್ಲಿ, ಅವನ ಕೈಕೆಳಗಿನ ಅಧಿಕಾರಿ ಬಿಟ್ಟಿಬೋವ ಎಂಬುವವನು, ಬೇಲೂರಿನಲ್ಲಿ ಬಿಟ್ಟೇಶ್ವರ ದೇವಾಲಯವನ್ನು ನಿರ್ಮಾಣ ಮಾಡಿಸಿ, ಹೊಯ್ಸಳಸಮುದ್ರ ಎಂಬ ಕೆರೆಗೆ ತೂಬನ್ನು ಮಾಡಿಸಿ, ದತ್ತಿಯನ್ನು

ನೀಡಿದುದನ್ನು ಹೇಳಿದೆ. ಈ ಶಾಸನವನ್ನು ಬರೆದವನು ಮಹದೇವ.

ಎರೆಯಂಗ

ಕಂ ॥ ಎಱಗದವಂದಿರ ತಲೆಗಳ
ನೆಱಗಿಪನೆಱಗಿಪನರಾತಿ ಲಕ್ಷ್ಮಿಯನಿದಿರಿಂ
ಗೆಱಗದ ಬಲುಪಿಂದಂ ತನ
ಗೆಱಗಿಪನೆಱೆಯಂಗನತುಳ ವಿಜಯ ಶ್ರೀಯಂ ॥ 826 ॥

ವಿಷ್ಣುವರ್ಧನ

ಮ ವಿ ॥ ಅವರೊಳ್ ಮಧ್ಯಮನಾಗಿಯುಂ ಪೂರ್ವ್ವಾಪರಾಂಬೋಧಿ ಯೆ
ಯ್ದುವಿನಂ ಕೂಡೆ ನಿಮಿರ್ಚ್ಚುವೊಂದು ನಿಜನಿಃಪ್ರತ್ಯೂಹ ವಿಕ್ರಾಂತ ದು
ರ್ದ್ಧವದಿಂದುತ್ತಮನಾದನುತ್ತಮ ಗುಣಭ್ರಾಜಿಷ್ಣು ಲಕ್ಷ್ಮೀವಧೂ
ಧವನುದ್ವೃತ್ತ ವಿರೋಧಿ ದೈತ್ಯಮಂಥನಂ ಶ್ರೀ ವಿಷ್ಣುಭೂಪಾಳಕಂ ॥ 827 ॥

ನರಸಿಂಹ I

ಮ ಸ್ರ ॥
ಅರಿಭೂಪರ್ಬಂದು ಮೆಯ್ದೋಱಿದೊಡವಯವದಿಂ ತೋಱನೇ ಕ್ರೂರದೈತ್ಯೇ
ಶ್ವರ ವಕ್ಷ ಕ್ಷೇತ್ರ ನಿರ್ದ್ದಾರಿಣ ನಖನಿಕರೋಚ್ಚಂಡದೋರ್ದಂಡಮಂ ಭೀ
ಕರ ಜಿಹ್ವಾಕೀರ್ಣದೀರ್ಣಾನನಮನೊಗೆದ ಕೂರ್ದಾಡೆಯಂ ಸಂಚಳಿತ್ಕೇ
ಸರಭಾಸ್ವತ್ಕಂಠಮಂ ಘರ್ಘರ ಘನರವಮಂ ನಾರಸಿಂಹ ಕ್ಷಿತೀಶಂ ॥ 828 ॥

ಮ ವಿ ॥ ವಿಭವೇಂದ್ರಂ ಶುಭದಂಡದಾತನಹಿತ ಪ್ರಧ್ವಂಸರಕ್ಷಾಧಿಪಂ
ಶುಭ ರತ್ನಾಕರ ನಾಯಕಂ ನತಜಗತ್ತ್ರಾಣಂ ಬುಧ ಶ್ರೀಧನ್ಯೆ
ಶೈಭವಂ ತಾನೆನೆ ಲೋಕಪಾಳತೆಯನೇಕಾಯತ್ತಮಂ ಮಾಡಿನಿಂ
ದಭಿರೂಪಸ್ತುತನಾದನಲ್ತೆ ನರಸಿಂಹ ಕ್ಷೋಣೀಪಾಳೋತ್ತಮಂ ॥ 829 ॥

ಬಿಟ್ಟಿ ಬೋವ

ಚಂ ಮಾ ॥ ಜನವಿನುತಂ ವಿವೇಕನಿಧಿ ಸಚ್ಚರಿತಾಶ್ರಯನಾತ್ಮವಂಶವ
ರ್ಧನನಭಿಮಾನಮೇರು ಸುಜನಾಗ್ರಣಿ ದಾನವಿನೋದಿ ಪುಣ್ಯ ಭಾ
ಜನನನವದ್ಯನೆಂದು ಧರೆ ಬಣ್ಣಿಪುದರ್ಕ್ಕಜೊಳೆಯ್ದೆ ಬಿಟ್ಟಿಬೋ
ವನನಿನತೇಜನಂ ಗುಣಸಮಾಜನನಾಶ್ರಿತಕಲ್ಪಭೂಜನಂ ॥ 830 ॥

ಕಂ ॥ ನಿರುಪಮ ಚಾರಿತ್ರಂ ಮಂ
ದರ ಧೈರ್ಯ್ಯನಪಾರ ಗುಣಗಣಾಧಾರಂ ಶಂ

ಕರ ಪಾದಪದ್ಮಭಕ್ತಂ
ನರರಳವೇ ಬಿಟ್ಟಿಬೋವನೂರ್ಜ್ಜಿತತೇಜಂ ॥ 831 ॥

ಕಂ ॥ ಹರನಲ್ಲದಂನ್ಯ ದೆಯ್ವವ
ನಿರುತಂ ತಾನಱಿಯ ಧರ್ಮಬುದ್ಧಿಯನಱಿವಂ
ಪರಮಾರ್ಥ ಬಿಟ್ಟಿಬೋವಂ
ಧರೆಯೊಳ್ಸತ್ಕೀರ್ತಿಯಿಂದೆ ಪೆಸರಂ ಪಡೆದಂ ॥ 832 ॥

ಮ ವಿ ॥ ರಸವತ್ ಚಿತ್ರವನೇಕ ಪತ್ರ ಪಲವುಂ ಕೂಟಂಗಳಿಂ ಗೋತ್ರ ಶೈ
ಳಸಮಾನೋನ್ನತಮಾಗಿ ದೇವಕುಳಮಂ ತಾನಿನ್ತಿದಂ ಕೂಡೆ ಮಾ
ಡಿಸಿದಂ ಬೆಲ್ಪುರದೊಳ್ವಿಚಿತ್ರಮೆನಲೀಗಳ್ ಬಿಟ್ಟಿಬೋವಂ ಕರಂ
ವಸುಧಾಚಕ್ರದೊಳೆಂದು ಬಣ್ಣಿಸುವರೊಲ್ದಾನಂದದಿಂ ಸಂತತಂ ॥ 833 ॥

145) ಹಳೇಬೀಡು 317, E.C. IX (R), ಕ್ರಿ.ಶ. 1173

ಇದರಲ್ಲಿ ಹೊಯ್ಸಳರ ದೊರೆ ಮೊದಲನೆಯ ನರಸಿಂಹನ ಆಳಿಕೆಯಲ್ಲಿ ಗಳಗೆಯ ನಾಯಕನು ದೋರಸಮುದ್ರದಲ್ಲಿ ಗಳಗೇಶ್ವರ ದೇವಸ್ಥಾನವನ್ನು ಕಟ್ಟಿಸಿ ದತ್ತಿ ಬಿಟ್ಟಿರುವುದನ್ನು ಹೇಳಿದೆ.

ವಿನಯಾದಿತ್ಯ

ಶಾ ವಿ ॥ ಸ್ವಸ್ತಿ ಶ್ರೀಪ್ರಿಯನರ್ಜುನೋರ್ಜಿತಯಶಂ ವಾಜೀಶಯಾನೋತ್ಸವಂ
ನ್ಯಸ್ತಾನಂತಸುಭೋಗಭೋಗಿವಿನುತಂ ಶ್ರೀಧರ್ಮರಮ್ಯಂ ಜಯಾ
ಭ್ಯಸ್ತಂ ಸೂಕ್ತಸುದರ್ಶನಾಂಕನೆಸೆದಂ ಶ್ರೀವಿಷ್ಣುಸಾಮ್ರಾನ್ವಯಂ
ತ್ರಸ್ತಾನ್ಯಾಸುರರಾಜರಾಜ ವಿನಯಾದಿತ್ಯಾವನೀವಲ್ಲಭಂ ॥ 834 ॥

ಬಲ್ಲಾಳ ವಿಷ್ಣುವರ್ಧನೋದಯಾದಿತ್ಯರು

ಕಂ ॥ ಸಲ್ಲಲಿತವಾಗ್ವಧೂಟೀ
ವಲ್ಲಭರತಿವಿಪುಳಸಕಳಲಕ್ಷ್ಮೀಕಾಂತಾ
ವಲ್ಲಭರುದಯಂಗೆಯ್ದರ್
ಬಲ್ಲಾಳಂ ಬಿಟ್ಟಿದೇವನುದಯಾದಿತ್ಯಂ ॥ 835 ॥

ನರಸಿಂಹ I

ಕಂ ॥ ಬಂದು ಕವಿದರಿಬಳಾಂಬುಧಿ
ನಿಂದುದು ನರಸಿಂಹನೊಂದೆ ಸಬಳದ ಮೊನೆಯೊಳ್

ಬಿಂದುವಿನಂದದೆ ಮುಂನಂ
ನಿಂದವೊಲಂಭೋಧಿ ರಾಮನಂಜಿನ ಮೊನೆಯೊಳ್ || 836 ||

ಗಳಗೆಯ ನಾಯಕನ ತಂದೆ ಮಲ್ಲಪ

ಉ ಮಾ || ಕಂಟದ ಬಂಟರಾಗಿ ಬುಧಸಂತತಿಗಂ ಪತಿಗಂ ಕುಬುದ್ಧಿಯಿಂ
ಕಂಟಕರಪ್ಪ ಟುಂಟುಕರದಿರ್ಕೆಮ ಸದ್ಬುಧಗಿರ್ಗಿಂದ್ರ ಭುಜದೊಳ್
ಟೆಂಟಣಿಸುತ್ತುಮಿರ್ಪ ನಿಜಬುದ್ಧಿಯಿನಾತ್ಮನೃಪಂಗೆ ಕೂಡೆ ನಿ
ಷ್ಕಂಟಕಮಾಗೆ ಮಾಡಿದನಿಳಾತಳಮೆಲ್ಲಮನೊಲ್ದು ಮಲ್ಲಪಂ || 837 ||

ಗಳಗೆಯ ನಾಯಕ

ಕಂ || ನರಸಿಂಹಭೂಮಿಪಾಳನ
ಕರಾಸಿ ಮಚ್ಚರಿಪರೆರ್ದೆಯ ಗೂಂಟಂ ವಿದ್ಯಾ
ಭರಣಂ ತಾನೆನೆ ರಂಜಿಪ
ನರಿಬಿರುದರನಡಸಿ ಪಿಡಿವ ಕೊಳಗಂ ಗಳಗಂ || 838 ||

ಕಂ || ಗಗನಚರ ಕರ್ಣ ಶಿಬಿ ಬಲಿ
ಮಗಧಾಧಿಪರಿಂದಮಮಳದಾನೋದಯದಿಂ
ಜಗದೊಳ್ ನಾಯಕಗಳಗಂ
ದ್ವಿಗುಣಂ ತ್ರಿಗುಣಂ ಚತುರ್ಗುಣಂ ಪಂಚಗುಣಂ || 839 ||

ಚಿಕವ್ವೆ

ಕಂ || ರತಿಯಂ ಸೊಬಗಿಂ ಸಾರ
ಸ್ವತಿಯಂ ವಾಕ್ಪ್ರೌಢಿಯಿಂದೆಣೆಯೆನಿಪಳೇನ
ಕ್ಷಿತಿಯೊಳ್ನಾಯಕ ಗಳಗನ
ಸತಿ ವರ ಚಿಕವ್ವೆಗುಳಿದರ್ಸತಿಯದೊರ್ರೆಯೇ || 840 ||

ಕಂ || ಹರಿಗೆ ಸಿರಿಯನ್ತೆ ಶಂಭುಗೆ
ಗಿರಿಸುತೆಯನ್ತಬ್ಜಜಂಗೆ ವಾಗ್ದೇವತೆಯ
ನ್ತಿರೆ ನಾಯಕ ಗಳಗಂಗಾ
ದರದಿಂ ಚಿಕ್ಕವ್ವೆ ನಾಡೆಯುಂ ಸತಿ ಮಿಸುಪಳ್ || 841 ||

ಗಳಗೇಶ್ವರ ದೇವಾಲಯ

ಉ ಮಾ ॥ ಕ್ಷೀರಸಮುದ್ರದಂತೆ ಸಿರಿಗಾಲಯಮಾಗಿ ಧರಿತ್ರಿಗೊಪ್ಪುವೀ
ದೋರಸಮುದ್ರದೊಳ್ ಗಳಗಣಂ ಗಳಗೇಶ್ವರ ದಿವ್ಯಗೇಹಮಂ
ಸಾರಹರಾದ್ರಿಸನ್ನಿಭಮನೊಲ್ದೆಸೆಯುತ್ತಿರೆ ಮಾಡಿದಂ ಲಸ
ದ್ವೀರನುದಾರನತ್ಯಮಲಸದ್ಗುಣಹಾರನಿಳಾತಳಸ್ತುತಂ ॥ 842 ॥

ಮಾಚಣ

ಕಂ ॥ ಹರನ ಬೆಸದಿಂದೆ ಯಜ್ಞೇ
ಶ್ವರರೇಕಪ್ರಾಣರಭಯಗಿರಿಯಂ ಕಾವಂ
ನ್ತಿರೆ ಗದಗ ಮಾಚಣಂಗಳ್ಕಾ
ವರೊಲ್ದು ಹೊಯ್ಸಳನ ಕಟಕಮಂ ದೋರ್ವ್ವಳದಿಂ ॥ 843 ॥

146) ಬೇಲೂರು 101, E.C. IX (R), ಕ್ರಿ.ಶ. 1173

ಇದರಲ್ಲಿ ಹೊಯ್ಸಳರ ದೊರೆ ಮೊದಲನೆಯ ನರಸಿಂಹನ ಆಳಿಕೆಯಲ್ಲಿ ಮಹಾಪಸಾಯಿತ ತಿರುಮಲೆ ಎಂಬುವವನು ನರಸಿಂಹದೇವರಿಗೆ ಬಿಟ್ಟ ದತ್ತಿಯನ್ನು ಹೇಳಿದೆ.

ನರಸಿಂಹ I

ಕಂ ॥ ತತ್ತನಯಂ ಯಾದವ ವಂ
ಶೋತ್ತಮವದಾತ್ತ ಕೀರ್ತಿಸಾಹಸಧನನು
ದ್ವೃತ್ತ ವಿರೋಧಿ ನೃಪಾಳಕ
ಮತ್ತದ್ವಿಪ ಸಿಂಹನೆನಿಸಿದಂ ನರಸಿಂಹಂ ॥ 844 ॥

ಮ ವಿ ॥ ಅರಿದೈತ್ಯಾಧಿಪ ವಕ್ಷಮಂ ಕರನಖಾನೀಕಂಗಳಿಂ ಪೋಳ್ದು ಬಲ್
ಗರುಳಂ ತೋಡಿದ ನಾರಸಿಂಹನೆನಲಕ್ಕುಂ ವೈರಿ ವಿರೋಧಿ ವಿ
ಶಾಳವಕ್ಷಸ್ಥಳಮಂ ಸ್ವಖಡ್ಗನಖರ ವ್ಯಾಘಾತದಿಂ ಪೋಳ್ದು ಬಲ್?
ಗರುಳಂ ತೋಡುವ ನಾರಸಿಂಹ ನೃಪನಂ ಸಂಗ್ರಾಮರಂಗಾಗ್ರದೊಳ್
॥ 845 ॥

147) ಬೇಲೂರು 108, E.C. IX (R), ಕ್ರಿ.ಶ. 1174

ಹೊಯ್ಸಳರ ದೊರೆ ಎರಡನೆಯ ಬಲ್ಲಾಳನ ಆಳಿಕೆಯಲ್ಲಿ ಬಿಟ್ಟಿಬೋವ ಎಂಬುವವನು ಸ್ಥಾಪಿಸಿದ ಬಿಟ್ಟೇಶ್ವರದೇವರಿಗೆ ಕೊಟ್ಟ ದತ್ತಿಯನ್ನು ಇದರಲ್ಲಿ ಹೇಳಿದೆ.

ವಿಷ್ಣುವರ್ಧನ

ಮ ವಿ ॥ ಅವರೊಳ್ ಮಧ್ಯಮನಾಗಿಯುಂ ಧರಣಿಯಂ ಪೂರ್ವಾಪರಾಂಭೋಧಿಮ
ಯ್ದುವಿನಂ ಕೂಡೆ ನಿಮಿರ್ಚುವೊಂದು ನಿಜನಿಃಪ್ರತ್ಯೂಹವಿಕ್ರಾಂತದು

ದ್ಭವದಿಂದುತ್ತಮನಾದನುತ್ತಮ ಗುಣ ಭ್ರಾಜಿಷ್ಣು ಲಕ್ಷ್ಮೀ ವಧೂ
ಧವನುದ್ವೃತ್ತ ವಿರೋಧಿ ದೈತ್ಯಮಥನಂ ಶ್ರೀ ವಿಷ್ಣುಭೂಪಾಳಕಂ ॥ **846** ॥

ನರಸಿಂಹ I

ಮ ವಿ ॥ ಅರಿದೈತ್ಯಾಧಿಪ ವಕ್ಷಮಂ ಕರನಖಾನೀಕಂಗಳೊಳ್ ಬಲ್ಗಬ
ಲ್ಗರುಳಂ ತೋಡಿದ ನಾರಸಿಂಹನೆನಲಕ್ಕುಂ ವೈರಿ ವೀರಾವನೀ
ಶ್ವರ ವಕ್ಷಸ್ಥಳಮಂ ಸ್ವಖಡ್ಗನಖರ ವ್ಯಾಘಾತದಿಂ ಪೋಳ್ದು ಬ
ಲ್ಗರುಳಂ ತೋಡುವ ನಾರಸಿಂಹ ನೃಪನಂ ಸಂಗ್ರಾಮರಂಗಾಗ್ರದೊಳ್
॥ **847** ॥

ನರಸಿಂಹ II

ಚಂ ಮಾ ॥ ತರಳವಿಲೋಚನಾಂಚಳಕೆ ಕೆಂಪಿನಿತುಂಬರೆ ಬಕ್ಕುವಾಗಳಿಂ
ತರಿನರಪಾಳ ಸಂಕುಳದ ಪಂದಲೆ ಕೈಗೆ ತುರಂಗರಾಜಿ ಮಂ
ದುರಕೆ ಗಜಾಳಿಸಾಲ್ದೆಗ ಧನಂ ನಿಜಕೋಶಗೃಹಾಂತರಕ್ಕೆತ
ದ್ಧರೆ ಕಡಿತಕ್ಕೆ ವುಂಡಿಗೆಗವೋಲೆಗವೀ ನರಸಿಂಹದೇವನಾ ॥ **848** ॥

ಬಲ್ಲಾಳ II

ಕಂ ॥ ಆತನ ತನಯನತಿಪ್ರ
ಖ್ಯಾತನುದಾರಂ ಸಮಸ್ತಲೋಕಾಧಾರಂ
ನೀತಿವಿದನೆಂದೊಡುಪಮಾ
ತೀತಂ ಬಲ್ಲಾಳ ಭೂಪ ಸಮರಾಟೋಪಂ ॥ **849** ॥

ಉ ಮಾ ॥ ಸಾಹಸದೊಳ್ ಧರಾಧರಧರಂಭುಜವೀರ್ಯನಿಜಪ್ರತಾಪ x x
x x ದೊಳಜುರ್ನಂ ಬಳವಿರೋಧಿನೃಪಾಳಸಮಸ್ತಸೈನಿಕ
ವ್ಯೂಹಮನಾವಗಂ ತವಿಪ ಚಂಡ ಪರಾಕ್ರಮನೆಂದೊಡೇಂ ರಣೋ
ತ್ಸಾಹ ಜಯಾಂಗನಾ ರಮಣ ಬಲ್ಲು ನೃಪಾಳನೊಳಾರಿದಿರ್ಚುವರ್ ॥ **850** ॥

ಮ ಸ್ರ ॥ ಉರಗೇಂದ್ರಂ ಧಾತ್ರಿಯಂ ಧಾರಿಣಿ ಹಿಮಗಿರಿಯಂ ಹರ್ಮ್ಯಶೈಳಂ ಕೃಭೃಜ್ಜಾ
ವರನಂ ಗೌರೀವರಂ ಚಂದ್ರನನಮಳಿನ ಚಂದ್ರಂ ಕಳಾಸ್ತೋಮಮಂ ನಿ
ರ್ಭರದಿಂದಂ ತಾಳ್ದುವಂತಪ್ರತಿಮಯದುಕುಳೋದ್ಭೂತ ಸಾಮ್ರಾಜ್ಯ ಲಕ್ಷ್ಮೀ
ಭರಮಂ ಹೇಳಾ ಸುಸಾಧ್ಯಂ ತನಗೆನೆ ತಳೆದಂ ವೀರಬಲ್ಲಾಳ ಭೂಪಂ
॥ **851** ॥

ಉ ಮಾ ॥ ಕೇಳ ವಸನ್ತ ಬಾಳ ಸಹಕಾರದ ತಣ್ಣೆಳಲಾಶ್ರಿತಾಳಿಗಾ
ಭೀಳ ಲಯಾಹಿ ನಿಷ್ಠುರ ಫಣೌಘದ ಮೆಯ್ನೆಳಲುದ್ಧತಾರಿಗು
ನ್ಮೀಳಿತ ಪುಂಡರೀಕದ ನೆಳಲ್ ಜಯಲಕ್ಷ್ಮಿಗೆನಿಪ್ಪ ವೀರಬ
ಲ್ಲಾಳನ ತೋಳ ಬಾಳ ನೆಳಲಾದುದು ಧಾತ್ರಿಗೆ ವಜ್ರ ಪಂಜರಂ ॥ **852** ॥

148) ಕೂಡಲೂರು 225, E.C. IX (R), ಕ್ರಿಶ. 1178

ಇದರಲ್ಲಿ ಹೊಯ್ಸಳರ ದೊರೆ ಎರಡನೆಯ ಬಲ್ಲಾಳನ ಮಹಾಪ್ರಧಾನ ತಂತ್ರಪಾಳ ಹೆಮ್ಮಾಡಿ ಎಂಬುವವನು ಕೂಡಲೂರಲ್ಲಿ ಹರಿಹರದೇವರನ್ನು ಪ್ರತಿಷ್ಠೆ ಮಾಡಿಸಿ ಭೂಮಿಯನ್ನು ದತ್ತಿಯಾಗಿ ನೀಡಿದಂತೆ ಹೇಳಿದೆ.

ವಿಷ್ಣುವರ್ಧನ

ಮ ವಿ ॥ ಕುಡದಿರ್ದಗ್ಗದ ದಾನಮಿಲ್ಲವನ ಬಾಣಶ್ರೇಣಿಗುಳ್ಳಿಕ್ಕಿ ಬೆಂ
ಗುಡದುರ್ವೀಶ್ವರರಿಲ್ಲ ವಿಶ್ರುತಜಯಸ್ತಂಭಂ ಸ್ವನಾಮಾಂಕಿತಂ
ನಡದಾಶಾತಟಮಿಲ್ಲ ಕೀರ್ತಿಭರದಿಂದಾನಂದಮಂ ತಾಳ್ದದೊಂ
ದೆಡೆಯುಂ ಲೋಕದೊಳಿಲ್ಲೆನಲ್ಕೆ ನೆಗಳ್ದಂ ಶ್ರೀವಿಷ್ಣುಭೂಪಾಳಕಂ ॥ **853** ॥

ನರಸಿಂಹ I

ಚಂ ಮಾ ॥ ಜವನ ಪೊಡರ್ಪು ಚಂಡಿಕೆಯ ಕಾಯ್ಪು ಪುರಾರಿಯ ಕಣ್ಣ ಕಿಚ್ಚು ಮಾ
ಧವನ ಗದಾಭಿಘಾತಮಮರೇಂದ್ರನ ವಜ್ರಭವಾನಲಾರ್ಚಿ ತ
ಳ್ತವೊಲೊಗೆತಂದ ದುರ್ಧರತರಪ್ರಬಳಪ್ರಥಿತಪ್ರತಾಪಮಂ
ಬವರದೊಳೆಯ್ದೆ ಬೀಱುವುದು ಭೂರಿಭುಜಂ ನರಸಿಂಹಭೂಪನಾ ॥ **854** ॥

ಬಲ್ಲಾಳ II

ಮ ವಿ ॥ ಎಳೆವೆಣ್ಣಾಧವಳಾತಪತ್ರದ ನೆಟಿಲ್ ಸಂಪ್ರೀತಿಯೊಳ್ ಕೂಡೆ ಕ
ಜ್ಜಳಮಂ ಕೂರಸಿ ವೈರಿಕಾಂತೆಯರ ಕಣ್ಣಿಂ ದೂರದೀಡಾಡೆ ಚಾ
ಪಳಮಂ ಗೋಮಿನಿ ಬಿಟ್ಟು ಪೇರುರದೊಳೆಂದುಂ ಲೀಲೆಯಿಂದಾಡೆ ದಿ
ಗ್ವಳಯಾರೂಢಭುಜಪ್ರತಾಪನೆಸೆವಂ ಬಲ್ಲಾಳಭೂಪಾಳಕಂ ॥ **855** ॥

ಮ ವಿ ॥ ತ್ರಿದಶೇಭೇಂದ್ರದ ಬಲ್ಪನಿಂಗಡಲ ಗುಣ್ಪಂ ಪಾರ್ವತೀಸೂತಿಶೈ
ಲದ ಧೈರ್ಯ್ಯೋನ್ನತಿಯಂ ಸುಧಾಂಶುವ ಕಲಾಸಂಪತ್ತಿಯಂ ಶಂಕರಾಂ
ಗದ ವಿಶ್ವಸ್ತವನೀಯ ವೃತ್ತಿಯನಿಳಾಲೋಕಕ್ಕೆ ತನ್ನಿಂದೆ ಮಾ
ಱ್ಪುದದೆಂದುಂ ಮಹನೀಯಕೀರ್ತಿ ವಿಭವಂ ಬಲ್ಲಾಳಭೂಪಾಳನಾ ॥ **856** ॥

ಮ ವಿ ॥ ಸದಯಾಂತಃಕರಣಂ ರಣಪ್ರಣಯಿ ವೀರಾಗ್ರೇಸರಂ ಪಾಪಭೀ
ರು ದಿನಾಧೀಶಲಸ್ತ್ರತಾಪನವನೀತಾಪಾಪಹಂ ಕಾಮಸ
ಮ್ಮದರೂಪಂ ಪರಕಾಮಿನೀವಿಷಯನಿಷ್ಕಾಮಮಂ ಮಿಳದ್ಭಾವನಾ
ಸ್ಪದನೆಂದುಂ ಗುಣವೃದ್ಧನದ್ಭುತಗುಣಂ ಬಲ್ಲಾಳಭೂಪಾಳಕಂ ॥ 857 ॥

ಕಂ ॥ ಪದುಳಂ ಪಾಳಿಪನೆಳೆಯಂ
ವಿದಿತಗುಣಂ ಸಕಳಜಳಧಿಜಳಮೇಖಳೆಯಂ
ಮದವದರಿಕರಟಿಸಂಕುಳ
ಬಿದುವಿದಳನಭೀಮಬಾಹು ಬಲ್ಲಾಳನೃಪಂ ॥ 858 ॥

ತಂತ್ರಪಾಳ ಹೆಮ್ಮಾಡಿ

ಮ ವಿ ॥ ಶ್ರುತಶೀಲಂ ಭುವನಾಶ್ರಯಂ ಪರಿಚಯಾವಜ್ಞಾನದೂರಂ ಬುಧ
ಸ್ತುತಭಾವಂ ವಿನುತಾನವದ್ಯವಿಭವಂ ಸಾಮಾದ್ಯುಪಾಯಪ್ರಗ
ಲ್ಭತರಾಭ್ಯುನ್ನತಿ ತಂತ್ರಪಾಳನೆಳೆಯೊಳ್ ಪೆರ್ಮಾಡಿ ತಾಂ ತಾಳ್ದಿದಂ
ಮತಿಯಂ ಮೈಮೆಯನೊಳ್ಪನಾಚರಣಮಂ ಸಂಪ್ರೀತಿಯಂ ನೀತಿಯಂ
॥ 859 ॥

ಚಂ ಮಾ ॥ ಅಱಿತದ ಮಾತು ನಾಲಗೆಯ ಬಡ್ಡೆಗೆ ಬಾರದ ದೀನಮಾನಸರ್
ಮಱೆವುಗೆ ಕಾವ ಮಾತು ಮನದೊಳ್ ಪೊಱಪೊಣ್ಮದ ಮಾನಸಿಕ್ಕೆಯಂ
ನೆಱಪುವ ಮಾತು ನೀತಿನಿಲಯಕ್ಕೊಳಸಲ್ಲದಮಾತ್ಯವೃತ್ತಿಯಂ
ಜಱೆವುದು ತಂತ್ರಪಾಳಶಿಖಾಮಣಿ ಪೆರ್ಮನ ಕೀರ್ತಿಡಿಂಡಿಮಂ ॥ 860 ॥

149) ಹಿರೇಹಳ್ಳಿ 240, E.C. IX (R), ಕ್ರಿ.ಶ. 1182

ಇದರಲ್ಲಿ ಹೊಯ್ಸಳರ ದೊರೆ ಎರಡನೆಯ ಬಲ್ಲಾಳನಿಗೆ ಶನಿವಾರಸಿದ್ಧಿ ಎಂಬ ಬಿರುದು ಬರಲು ಕಾರಣ, ದ್ರೋಹಘರಟ್ಟನಾದ ವಿಷ್ಣುದಂಡಾಧಿಪ ಹಾಗೂ ಆತನು ಮಾಡಿಸಿದ ಅಗ್ರಹಾರದ ವಿಷಯಗಳಿವೆ. ಆದಿಗೌಂಡ ಎಂಬುವವನು ಒಂದು ಊರನ್ನು ನಿರ್ಮಾಣ ಮಾಡಿಸಿ, ಅದರಲ್ಲಿ ಆದಿಮಲ್ಲಿಕಾರ್ಜುನ ದೇವಾಲಯವನ್ನು ಮಾಡಿಸಿ, ಅದಕ್ಕೆ ಭೂಮಿಯನ್ನು ದತ್ತಿಯಾಗಿ ನೀಡಿದಂತೆ ಹೇಳಿದೆ.

ಬಲ್ಲಾಳ II

ಕಂ ॥ ಸಕಳಕಳಾಪರಿಪೂರ್ಣಂ
ಸಕಳೋರ್ವೀನಯನಸುಖದನಕಳಂಕಂ ತಾ
ನಕುಟಿಳನಪೂರ್ವನವಶೀ
ತಕರಂ ಬಲ್ಲಾಳದೇವನುದಯಂಗೆಯ್ದಂ ॥ 861 ॥

ಕಂ ॥ ಶನಿವಾರದಂದೆ ಪಾಂಡ್ಯಾ
ವನಿಪನ ಸಪ್ತಾಂಗಮೆಯ್ದೆ ಸಿದ್ಧಿಸಿದುದಱಿಂ
ಶನಿವಾರಸಿದ್ಧಿವೆಸರಂ
ಜನಪತಿ ಬಲ್ಲಾಳದೇವನೆಸೆದಿರೆ ತಳೆದಂ ॥ 862 ॥

ಬೊಪ್ಪದಂಡನಾಥ

ಮ ವಿ ॥
ಮಲೆನಾಡಂ ತುಳುನಾಡನಗ್ಗದ ಬಯಲ್ನಾಡಂ ಲಸಚ್ಚೋಳಮಂ
ಡಲಮಂ ಪೆರ್ದೊಱೆ ಮೇರೆಯಾಗೆ ಬಡಗಲ್ ಶ್ರೀವಿಷ್ಣುಭೂಪಂಗೆ ಭೂ
ತಲಮಂ ಸಾಧಿಸಿ ಕೊಟ್ಟು ಮಾಣ್ದು ರಣದೊಳ್ ಮಾಱಾಂತರಂ ಕೊಂದ ದೋ
ರ್ಬಲದಿಂ ದ್ರೋಹಘರಟ್ಟನೆಂದು ಪೆಸರ್ವೆತ್ತಂ ಬೊಪ್ಪದಂಡಾಧಿಪಂ ॥ 863 ॥

ಆದಿಗೌಂಡ

ಕಂ ॥ ಹಸಿದರ ಮೊಗಮಂ ನೋಡಂ
ಹಸಿವುಂ ನೀರಱ್ಕೆಯಿಲ್ಲ ಕಂಡೊಡೆ ತನ್ನಂ
ವಸುಮತಿಗೆನಿಪ ಮಹಾಪ್ರಭು
ವಸುಧೆಯೊಳಾರ್ ಕಾಣ್ಬರಾದಿಗೌಂಡಂಗೆಣೆಯಂ ॥ 864 ॥

ಕಂ ॥ ಹಸುಗೂಸುಗಳ್ಗೆ ಹಾಲಂ
ಹಸಿದರ್ಗ್ಗನ್ನಮುಮನಟ್ಕಿಱಿಂದಂ ನಿಚ್ಚಂ
ಹಸಗಾಲದೊಳಂ ಸಲಿಸುವ
ಬೆಸನದಿನಾರಾದಿಗೌಂಡನಂ ಪೋಲ್ವನ್ನರ್ ॥ 865 ॥

ಕಂ ॥ ಕೆಱೆಯಂ ಕಟ್ಟಿಸುತಿರ್ಪುದು
ಮಱವಂಟಿಗೆಯಿಡಿಸುತಿರ್ಪುದೆಸೆವಾರವೆಯಂ
ನೆಱೆ ಮಾಡಿಸುವುದುಮಲ್ಲದೆ
ಪೆಱತೊಂದಿಲ್ಲಾದಿಗೌಂಡನುಜ್ಜುಗಮೆಂದುಂ ॥ 866 ॥

150) ಹಳೇಬೀಡು 330, E.C. IX (R), ಕ್ರಿಶ. ಸು. 1185

ಇದರಲ್ಲಿ ಹೊಯ್ಸಳ ದೊರೆ ಎರಡನೇ ಬಲ್ಲಾಳನ ಆಳಿಕೆಯಲ್ಲಿ ಹನ್ನವಣದ ನಕರರು ನಕರೇಶ್ವರದೇವರಿಗೆ ದತ್ತಿಯನ್ನು ಬಿಟ್ಟಂತೆ ಹೇಳಿದೆ.

ವಿನಯಾದಿತ್ಯ

ಕಂ ॥ ಯಾದವಕುಳಪೂರ್ವಾದ್ರಿಯೊ
ಳಾದಿತ್ಯನಿದೊರ್ವನೆನಿಸಿ ತನ್ನಯ ತೇಜಂ
ಮೇದಿನಿಗೆ ತೊಳಗೆ ಕಲಿ ವಿನ
ಯಾದಿತ್ಯನತಿಪ್ರತಾಪಯುತನುದಯಿಸಿದಂ ॥ 867 ॥

ಎರೆಯಂಗ

ಕಂ ॥ ಎಱೆಯಂಗಂ ಗಂಡಗುಣ
ಕ್ಕೆಱೆಯಂ ಗಂಗಾಸರಿತ್ಸಮಪ್ರಥಿತಯಶ
ಕ್ಕೆಱೆಯಂಗಂಗಾರ್ ಸಮನೆನಿ
ಪೆಱೆಯಂಗಂ ಗರ್ವಿತಾಂತಕಂ ತತ್ತನಯಂ ॥ 868 ॥

ವಿಷ್ಣುವರ್ಧನ

ಮ ಸ್ರ ॥ ಗಡಿ ಮೂಡಲ್ ಕಂಚಿ ತೆಂಕಲ್ ಪೆಸರೆಸಕದ ಕೊಂಗಿತ್ತ ವಾರಾಶಿತೀರಂ
ಪಡುವಲ್ ತತ್ಕೃಷ್ಣವೇಣ್ಣಾನದಿ ಬಡಗೆನೆ ದುರ್ವೃತ್ತರಂ ತೋಳ ಬಾಳಿಂ
ಕಡಿದಾದಂ ಗುಡ್ಡೆಯಿಟ್ಟುರ್ವರೆಗಿದು ಸತತಂ ಸೀಮೆಯೆಂಬಂತು ಬಲ್ಪಿಂ
ದೆಡೆಗೊಂಡಂ ವಿಕ್ರಮಕ್ರೀಡೆಯಿನೆಸೆಯೆ ಧರಾಚಕ್ರಮಂ ವಿಷ್ಣುಭೂಪಂ
॥ 869 ॥

ನರಸಿಂಹ I

ಕಂ ॥ ಅರಿನೃಪಶಿಶುಹೃದ್ವಿದಳನ
ಕರಾಳಕರವಾಳಮುಖರನಖರನೃಸಿಂಹಂ
ಪರರದನಿಸಂಘಸಿಂಹಂ
ನರಸಿಂಹಂ ವಿಪುಳವಿಕ್ರಮಂ ತತ್ತನಯಂ ॥ 870 ॥

ಮ ವಿ ॥ ನೆಲನಂ ಮುನ್ನಲೆದುದ್ಧತಾಸುರನಿಕಾಯಂ ಬದ್ಧರೋಷಾನ್ವಿತಂ
ಕಲಿಕಲ್ಕಪ್ರಭವರ್ಕಳಾಗೆ ಧರಣೀಸಂರಕ್ಷಣಾರ್ಥಂ ಭುಜಾ
ಬಲಯುಕ್ತಂ ಕಲಿಕಾಲದೊಳ್ ನಿಖಿಳವಿದ್ವಿಡ್ದೈತ್ಯವಿಧ್ವಂಸಕಂ
ಕಲಿ ಪನ್ನೊಂದನೆಯಂ ಮುರಾರಿ ನೆಗಟ್ದಂ ಬಲ್ಲಾಳಭೂಪಾಳಕಂ ॥ 871 ॥

ಮ ವಿ ॥ ಧರೆಯೊಳ್ ಮುನ್ನೆ ನರೇಂದ್ರನೆಂಬೆಸಕದಾಚೋಳಂಗೆ ಕೋಳ್ವೋಗದಂ
ಬರಿದಂ ನಚ್ಚಿನ ದೇವದುರ್ಗಮನದಂ ದಾಱಿಟ್ಟು ಪಾಂಡ್ಯಾವನೀ
ಶ್ವರಸಾಮ್ರಾಜ್ಯಸಮೇತಮೊಟ್ಟಜೆಯಿನೀತಂ ಕೊಂಡನುಚ್ಚಂಗಿಯಂ
ಪರದುರ್ಗತ್ರಿಪುರತ್ರಿಣೇತ್ರನದಟಂ ಬಲ್ಲಾಳ ಭೂಪಾಳಕಂ ॥ 872 ॥

ವರ್ತಕರು

ಕಂ ॥ ಉಂನತ ವಿಭವರ್ಗ್ಗುಣ ಸಂ
ಪಂನರ್ಶ್ರೀವಪಾದಶೇಖರರ್ ಸ್ಥಿರ ಧರ್ಮ್ಮೋ
ತ್ಪಂನದ್ದೋರಸಮುದ್ರದ
ಹಂನವಣಂಗಳು ವಿಶುದ್ಧಕೀರ್ತಿವಿಳಾಸರ್ ॥ 873 ॥

ಕಲ್ಯಾಣಶಕ್ತಿ

ಕಂ ॥ ಈಶಾನಶಕ್ತಿ ಮುನಿ ಸಕ
ಳಾಶಾಂತರ್ವ್ವರ್ತ್ತಿಚರಿತನವನ ಸುತಂ ಗೌ
ರೀಶ ದಯಾರ್ಜ್ಜಿತ ತಪದ ಸು
ಕೋಶಂ ಕಲ್ಯಾಣಶಕ್ತಿಯಾತನ ತನಯಂ ॥ 874 ॥

ದೇವೇಂದ್ರವ್ರತಿ

ಕಂ ॥ ಪಡೆದು ಮಡಗುವರ ಗಂಡಂ
ಪಿಡಿದ ಚಲಕ್ಕೆಯ್ದೆ ಬಲ್ಪುಗುಂದದ ಗಂಡಂ
ಪೊಡರ್ವ ಪರಸಮಯಿಗಿವನೋ
ಗಡಿಸದ ಯಮದಂಡಮೆನಿಸಿದಂ ದೇವೇಂದ್ರಂ ॥ 875 ॥

ಈಶಾನಶಕ್ತಿವ್ರತಿ

ಸ್ರಗ್ಧರೆ ॥ ಶ್ರೀಮತ್ಸತ್ಯಂ ದೃಢತ್ವಂ ಶಮೆ ದಮೆ ದಯೆ ವಾತ್ಸಲ್ಯಧರ್ಮಂ ಸ್ವಭಾವಂ
ತಾಮೀತಂಗೀತನಂ ಪೋ ಕಲಿಮಲಿನಮಣಂ ಪೊರ್ದ್ದಿತಿಲ್ಲೆಂಬಿನಂ ತ
ನ್ನೀಮಾರ್ಗಂ ವಿಶ್ವಲೋಕಸ್ತುತಮೆನಿಸುವಿನಂ ಪುಣ್ಯಪಾತ್ರಂ ಸುವಿದ್ಯಾ
ಧಾಮಂ ದೇವೇಂದ್ರನಿಂ ನೇರ್ಗ್ಗಿಱಿಯನೆಸೆವನೀಶಾನಶಕ್ತಿವ್ರತೀಶಂ ॥ 876 ॥

ಕಂ ॥ ಯತಿಮೂರ್ತಿಯ ಬಲಿ ತಾಪಸ
ಸುತನುವ ಸುರಧೇನು ವರ್ಣಿವೇಷದ ನಿಧಿ ವಿ
ಶ್ರುತಮುನಿರೂಪದ ಪರುಸಂ
ಕ್ಷಿತಿಯೊಳಗೀಶಾನಶಕ್ತಿ ದಾನವಿನೋದಂ ॥ 877 ॥

151) ವೀರದೇವನಹಳ್ಳಿ 438, E.C. IX (R), ಕ್ರಿ.ಶ. 1186

ಇದರಲ್ಲಿ ಹೊಯ್ಸಳರ ದೊರೆಯಾದ ಎರಡನೆಯ ಬಲ್ಲಾಳನ ದಂಡನಾಥ ವೀರಯ್ಯನು ದೊರೆಯ ಹೆಸರಿನಲ್ಲಿ ಒಂದು ಅಗ್ರಹಾರವನ್ನು ಮಾಡಿಸಿ, ಅಲ್ಲಿ ಕೆರೆಗಳನ್ನು ಕಟ್ಟಿಸಿ, ದೇವಾಲಯವನ್ನು ನಿರ್ಮಿಸಿ, ಭೂಮಿಯನ್ನು ದತ್ತಿಯಾಗಿ ನೀಡಿದಂತೆ ಹೇಳಿದೆ.

ಬಲ್ಲಾಳ II

ಕಂ ॥ ನೆರೆದಾಂತ ಕೋಟಿಭಟರೊಳ್
ಪರಿದೊರ್ವನೆಯುಮ್ಮದೂರ ಧುರದೊಳ್ ಧರೆಯ
ಚ್ಚರಿವಡೆ ನೆತ್ತರ ಕಡಲಂ
ಪರಿಯಿಸಿದಂ ಬಾಲಲೀಲೆಯೊಳ್ ಬಲ್ಲಾಳಂ ॥ 878 ॥

ಶಾ ವಿ ॥ ಚೋಳಂ ಮುತ್ತಿರೆ ಪನ್ನೆರಟ್ಟರಿಸಕಂ ಕೋಳ್ವೋಯ್ತು ತಾಂ ಪೋದನೆಂ
ಬಾಳಾಪಂಬೆರಸಾರ್ದದೊಂದು ಮೊಟನಂ ಮೇಲ್ ಪೆರ್ಚುವುಚ್ಚಂಗಿಯಂ
ಹೇಳಾಸಾಧ್ಯಮದಾದುದೆಂದು ದಿವಿಜರ್ ಚೋದ್ಯಂಬಡುತ್ತೀಯೆ ಬ
ಲ್ಲಾಳಾಳ್ದಂ ಗಿರಿದುರ್ಗಮಲ್ಲವೆಸರಂ ಬಲ್ಲಾಳಭೂಪಾಳಕಂ ॥ 879 ॥

ಕಂ ॥ ಕಡುವೇಗಿ ಧರ್ಮಗುಣಮಂ
ಬಿಡುವುದು ಖರದೂಷಣಾನ್ವಿತಂ ಮೂದಲೆಯಂ
ಪಡೆದುದು ಬಲ್ಲಾಳನ ದಿಟ
ನುಡಿಯೊಳ್ ಪಡಿಯಾಗಲಾರ್ಪುದೇ ರಾಮಶರಂ ॥ 880 ॥

ವೀರದೇವ

ಮ ಸ್ರ ॥ ವರ ಭಾರದ್ವಾಜ ಗೋತ್ರಾಮಳ ವಿಮಳ ಸುಧಾವಾರ್ಧಿ ಸಂಪೂರ್ಣಚಂದ್ರಂ
ಸ್ಥಿರವಾಗಂಗಾತನೂಜಂ ಸಮರಮುಖಲಸದ್ರುದ್ರ ದೇವಾತ್ಮಜಾತಂ
ಸುರಮಂತ್ರಿ ಬ್ರಾಜಮಾನಾಚ್ಯುತನನುಜನಿವಂ ವೀರಬಲ್ಲಾಳ ಪೃಥ್ವೀ
ಶ್ವರ ರಾಜಾವಾಸ ಮುಖ್ಯಂ ಧೃತಸಕಳಧರಾದೇವನೀ ವೀರದೇವಂ ॥ 881 ॥

ಕಂ ॥ ಮನುಮುನಿ ಚರಿತ್ರಪಾತ್ರಂ
ವಿನಯಾಂಬುಧಿ ವೇದಶಾಸ್ತ್ರವಿದಿತ ವಿನೋದಂ
ಜನಗೀತನೀತಿನಿಧಿ ಸ
ಜ್ಜನವಿನುತಂ ಸಕಳಗುಣಸಮುದ್ರಂ ರುದ್ರಂ ॥ 882 ॥

ವೀರಯ್ಯನ ತಾಯಿ ಗಂಗದೇವಿ

ಕಂ ॥ ರತಿಯಂ ರೂಪಿಂದಂ ಪಾ
ರ್ವತಿಯಂ ಸೊಬಗಿಂದೆ ಮೈಮೆಯಿಂದಂ ಸಿರಿಯಂ
ಸತಿ ಗಂಗಾದೇವಿಯರುಂ
ಧೃತಿಯಂ ಪತಿಭಕ್ತಿಯಿಂದೆ ನೂರ್ಮಡಿ ಮಿಗುವಳ್ ॥ 883 ॥

ಗಂಗಾದೇವಿ

ಮ ವಿ ॥ ವನಿತಾ ಸಂಸ್ಥಿತಿಗಂ ವಿಶುದ್ಧಯಶಕಂ ದೃಷ್ಟಾಂತವಾಗಿರ್ದ್ದು ಶಿ
ಷ್ಟನಿಧಾನಾಚ್ಯುತ ದೇವನಂ ಬುಧನುತ ಶ್ರೀವೀರನಂ ಪೆತ್ತಳೋ
ಯೆನಿಪಳ್ ನಿರ್ಮ್ಮಳಧರ್ಮಮೂರ್ತಿ ಸತಿ ಸಂದಾ ರುದ್ರದೇವೋತ್ತಮಾಂ
ಗನೆ ನಿತ್ಯಸ್ಥಿತಿಯೋಗ್ಯ ಭಾಗ್ಯೆಯೆನೆ ಗಂಗಾದೇವಿ ಸಾಮಾನ್ಯೆಯೇ ॥ 884 ॥

ವೀರಯ್ಯನ ಅಣ್ಣ ಅಚ್ಯುತ

ಉ ಮಾ ॥ ಅಚ್ಯುತಭಾವನಾಪರಿಣತಾಚ್ಯುತನಚ್ಯುತಪುಣ್ಯಮೂರ್ತಿ ಸಂ
ದಚ್ಯುತರಾಜನೀತಿ ವಿನಯೋನ್ನತಿ ಸಜ್ಜನದಾನಮಾನಜಾ
ತಾಚ್ಯುತಕೀರ್ತಿ ಲ್ಕಕ್ಷ್ಮಿ ವಿಜಯಂ ಯದುರಾಜನ ಮಂತ್ರಿಗೀಗಳಿಂ
ತಚ್ಯುತದೇವನೆಂಬ ಪೆಸರಾದುದಿದಲ್ಲದೆ ದೇಸೆಗಾದುದೇ ॥ 885 ॥

ವೀರಯ್ಯ

ಚಂ ಮಾ ॥ ನೆನೆದ ಮನಂ ಕೃತಾರ್ಥಮಿರದಱ್ತಿಯೆ ನೋಡುವ ಕಣ್ ಕೃತಾರ್ಥಮೊ
ಲ್ದನುನಯದಿಂದೆ ಕೀರ್ತಿಸುವ ಜಿಹ್ವೆ ಕೃತಾರ್ಥಮುದಾತ್ತವೃತ್ತನಂ
ಧನದಳಿಪಿಂದೆ ತನ್ನನೊಸೆದರ್ಥಿಸುವರ್ಥಿಜನಂ ಕೃತಾರ್ಥಮೆಂ
ದೆನೆ ವಿಭುವೀರದೇವನೆ ಕೃತಾರ್ಥನೆನಿಪ್ಪುದಿದಾವ ವಿಸ್ಮಯಂ ॥ 886 ॥

ಕಂ ॥ ಇರ್ಮ್ಮಡಿ ವಾಚಸ್ಪತಿಗೆ ಪ
ದಿರ್ಮ್ಮಡಿ ಭಟ್ಟಿಗೆ ವಿನೂತಚಾಣಕ್ಯಂಗಂ
ನೂರ್ಮ್ಮಡಿ ಮಂತಣದೊಳ್ ಸಾ
ಸಿರ್ಮ್ಮಡಿ ಯೌಗಂಧರಾಯಣಂಗೀ ವೀರಂ ॥ 887 ॥

ಕಂ ॥ ಪುರುಷೋತ್ತಮಾವತಾರಂ
ನರಪತಿ ಬಲ್ಲಾಳದೇವ ಸಚಿವಂ ವೀರಂ
ಪುರುಷೋತ್ತಮ ಲಾಂಛನಮಾ
ಸಿರಿದೇವಿಯ ಕೂಡೆ ಬಂದು ನೆಲಸಿರ್ದ್ದುದಱಿಂ ॥ 888 ॥

ಕಂ ॥ ಕಮಠಾಂಘ್ರಿ ಮೀನನಯನಂ
ಕಮಳಾನನಮಮಳಜೀವನಂ ವಿಪುಳಫಳಂ
ಸಮನಿಸೆ ಕಟ್ಟಿಸಿದಂ ತ
ತ್ಕ್ರಮಮಮರ್ದೆಸೆವಂತು ಕನ್ನೆಗೆಱೆಯಂ ವೀರಂ ॥ 889 ॥

ಕಂ ॥ ಸುರಗಿರಿ ಶರನಿಧಿ ತನ್ನೊಳ್
ಪಿರಿದುಂ ಮಚ್ಚರಿಪುದುದ್ಧಗುಣ್ಪಿಂದವನೊ
ತ್ತರಿಪಂ ಸುಮಂತ್ರಿವೀರಂ
ಸುರಭವನತಟಾಕದಿಂದಮಿದು ಮಂತ್ರಫಳಂ ॥ 890 ॥

152) ಪಂಡಿತನಹಳ್ಳಿ 459, EC IX (R), ಕ್ರಿ.ಶ. 1195

ಇದರಲ್ಲಿ ಹೊಯ್ಸಳರ ದೊರೆಯಾದ ಎರಡನೆಯ ಬಲ್ಲಾಳನ ಆಳಿಕೆಯಲ್ಲಿ ಮಹದೇವ ಎಂಬುವವನು ಈಶ್ವರನ ಪ್ರತಿಷ್ಠೆ ಮಾಡಿಸಿ, ಭೂಮಿಯನ್ನು ದತ್ತಿಯಾಗಿ ಕೊಟ್ಟದ್ದನ್ನು ಹೇಳಿದೆ.

ಯಾದವ ವಂಶ

ಕಂ ॥ ಶ್ರೀದಯಿತೋದ್ಭವ ಭೂ ಚಂ
ದ್ರೋದಯ ಕಲ್ಪದ್ರುಮಾಶ್ರಿತೋದ್ಭವ ಚ x
ಮೇದಿನಿಯೊಳ್ ನಿತ್ಯೋರ್ಜಿತ
ಯಾದವಕುಲ ದುಗ್ಧವಾರ್ಧಿ ಪೆಸರ್ವೆತ್ತೆಸೆದರ್ ॥ 891 ॥

ಹೊಯ್ಸಳ ಎಂಬ ಹೆಸರು

ಕಂ ॥ ಸಳನೆಂಬನಾಗೆ ಯಾದವ
ಕುಳದೊಳ್ ಪುಲಿ ಪಾಯೆ ಕಂಡು ಮುನಿಪುಲಿಯಂ ಪೊಯ್
ಸಳ ಎನೆ ಪೊಯ್ದುದಱಿಂ ಪೊ
ಯ್ಸಳವೆಸರವನಿಂದಮಾಯ್ತು ತದ್ವಂಶಜರೊಳ್ ॥ 892 ॥

ವಿನಯಾದಿತ್ಯ

ಕಂ ॥ ವಿನಯಂ ಪ್ರತಾಪಮೆಂಬೀ
ಜನನಾಥೋರ್ಜಿತ ಚರಿತ್ರ ಯುಗದಿಂ ಜಗದೊಳ್
ಜನನಯನಮೆನಿಸಿ ನೆಗಟ್ದಿಂ
ವಿನಯಾದಿತ್ಯಂ ಸಮಸ್ತಭುವನಸ್ತುತ್ಯಂ ॥ 893 ॥

ಬಲ್ಲಾಳ II

ಕಂ ॥ ಆ ವಿಭುವಿನ ಪಟ್ಟಮಹಾ
ದೇವಿಗೆ ಸದ್ಗುಣಚರಿತ್ರದಿಂದಂ ಸೀತಾ
ದೇವಿಗೆ ಮಿಗಿಲಾದೇಚಲ
ದೇವಿಗೆ ಬಲ್ಲಾಳದೇವನುದಯಂಗೆಯ್ದಂ ॥ 894 ॥

ಮಾದಲದೇವಿ

ಉ ಮಾ ॥ ನ್ಯಾಯವಿನೂತೆ ಸದ್ಗುಣ ಸಮನ್ವಿತೆ ಗೋತ್ರಪವಿತ್ರೆ ದಾನಸಂ
ದಾಯಿನಿ ಲೋಕಮಾನ್ಯೆ ಪತಿಭಕ್ತೆ ಮನೋಹರಮೂರ್ತಿ ವಿಶ್ವಭೂ
ಷಾಯಿತೆ ಬೊಪ್ಪಭಟ್ಟರ ಮನೋಹರಿ ಮಾದಲದೇವಿ ಲ್ಕಕ್ಷ್ಮೀನಾ
ರಾಯಣ ದೇವರಂ ನಿಲಿಪಿ ಪುಣ್ಯಮನಾರ್ಜಿಸಿದಳ್ ನಿರಂತರಂ ॥ **895** ॥

ಮಹದೇವ

ಮ ವಿ ॥ ಸಹವಾಸಿ ಪ್ರವರಂ ಮಹಾ ಭರತ ಶಾಸ್ತ್ರಾಂಭೋಜಿನೀ ಪ್ರೋಲ್ಲಸ
ನ್ಮಿಹಿರಂ ಗೌತಮಗೋತ್ರ ವಾರ್ಧಿ ವಿಲಸತ್ಪೂರ್ಣೇಂದು ವರ್ಣಂ ತ್ರಯೀ
ಮಹಿತಂ ವಿಶ್ವಜನಾಗ್ರಗಣ್ಯನನವದ್ಯಾಪಾರ ಪುಣ್ಯೋದಯಂ
ಮಹದೇವಂ ಮನಮೊಲ್ದು x x ಮ ಮಹೇಶಸ್ಥಾಪನಂ ಮಾಡಿದಂ ॥ **896** ॥

153) ಬೇಲೂರು 134, EC IX (R), ಕ್ರಿಶ. 1197

ಇದರಲ್ಲಿ ಹೊಯ್ಸಳರ ದೊರೆಯಾದ ಎರಡನೆಯ ವೀರಬಲ್ಲಾಳನ ಆಳಿಕೆಯಲ್ಲಿ ಮಹಾಪ್ರಧಾನ ಪಡಿಯರ ಸಾಮಂತ ದೊರೆಯ ಎಂಬುವವನು ಮೈಸನಾಡಿನ ಎಲಹಕ್ಕವನ್ನು ಅಗ್ರಹಾರವಾಗಿ ಪರಿವರ್ತಿಸಿ ಅಲ್ಲಿ ಚೆನ್ನಕೇಶವ ದೇವಾಲಯವನ್ನು ಪ್ರತಿಷ್ಠೆ ಮಾಡಿಸಿ, ಸಾವಂತಸಮುದ್ರ ಮತ್ತು ಬ್ರಹ್ಮಸಮುದ್ರ ಎಂಬ ಕೆರೆಗಳನ್ನು ಕಟ್ಟಿಸಿ, ದತ್ತಿಯನ್ನು ನೀಡಿದುದನ್ನು ಹೇಳಿದೆ.

ಕೆಳೆಯಬ್ಬರಸಿ

ಕಂ ॥ ಕೆಳೆ ನಡೆಯಿಂ ಕಳಹಂಸೆಗೆ
ಕೆಳೆ ನುಡಿಯಿಂ ಕೋಕಿಳಕ್ಕೆ ಸೋಗೆಗೆ ಮುಡಿಯಿಂ
ಕೆಳೆ ಕೆಳೆಯಬ್ಬರಸಿಯೆ ತ
ತ್ಕುಳವಧುವಾದಳ್ ತದೀಯಸುತನೆಱೆಯಂಗಂ ॥ **897** ॥

ಸಾಮಂತ ಮಾರ

ಮ ವಿ ॥ ಸೆರಗಂ ನೋಳ್ಪರಗಂಡನುದ್ಧತರ ಗಂಡಂ ಬಾಸೆಯಂ ಮಾಡಿ ಮಾ
ಣ್ಬರ ಗಂಡಂ ಬಿರುದಿಂಗೆ ಪೊಂಗುವರ ಗಂಡಂ ಬೇಡಿತುದಂ ತಪ್ಪು
ವರ ಗಂಡಂ ಸಲೆ ಕೂಡಿ ತಪ್ಪುವರ ಗಂಡಂ ಗಂಡರೊಳ್ ಸ್ವಾಮಿದ್ರೋ
ಹರ ಗಂಡಂ ಪೆಸರ್ವೆತ್ತ ಗಂಡರೊಳರೇ ಸಾಮಂತಮಾರಂಬರಂ ॥ **898** ॥

ಬಿಕ್ಕಿಯಕ್ಕ

ಮ ವಿ ॥ ವಿನಯಕ್ಕಾಗರಮಾದ ಲಕ್ಷ್ಮಿ ನಯಮಂ ಕಯ್ಕೊಂಡ ಸೌಭಾಗ್ಯವೋ
ಪನ ಪೆಂಪಿಂಗನುವಾಗಿ ತೋರ್ಪ್ಪರಭಿಮಾನಂ ಲಕ್ಷಣಶ್ರೀ ಮಂ

ಡನಮಿರ್ಪ್ಪನ್ತೆವೊಲಿರ್ಪ್ಪ ರೂಪು ಜಸಮಂ ಕಯ್ಕೊಂಡ ಸಾವನ್ತ ಮಾ
ರನ ಚಿತ್ತಪ್ರಿಯೆ ಚಿಕ್ಕಿಯಕ್ಕನೆ ವಲಂ ಗೋತ್ರಕ್ಕೆ ನೇತ್ರೋತ್ಸವಂ ॥ 899 ॥

154) ಬೇಲೂರು 163, E.C. IX (R), ಕ್ರಿಶ. 1198

ಇದರಲ್ಲಿ ಹೊಯ್ಸಳರ ದೊರೆ ಎರಡನೆಯ ಬಲ್ಲಾಳನ ಆಳಿಕೆಯಲ್ಲಿ ಚಂದಿಸೆಟ್ಟಿಯು ಬಾಚಲೇಶ್ವರದಲ್ಲಿ ಹರಿಹರೇಶ್ವರ ದೇವಾಲಯವನ್ನು ಮಾಡಿಸಿದುದನ್ನು ಹೇಳಿದೆ.

ವಿಷ್ಣುವರ್ಧನ

ಮ ಸ್ರ ॥
ತುಳುದೇಶಂ ಚಕ್ರಗೊಟ್ಟಂ ತಳವನಪುರಮುಚ್ಚಂಗಿ ಕೋಳಾಲಮೇಟುಂ
ಮಲೆ ವಲ್ಲೂರ್ ಕಂಚಿ ಕೊಂಗರ್ಬಿಸುವ ಹಡಿಯಘಟ್ಟಂ ಬಯಲ್ನಾಡು ನೀಳಾ
ಚಳದುರ್ಗಂ ರಾಯರಾಯೋತ್ತಮಪುರಿ ತೆರೆಯೂರ್ ಕೋಯತೂರ್ ಗೊಂದವಾಡಿ
ಸ್ಥಳಮಂ ಭ್ರೂಭಂಗದಿಂ ಕೊಂಡತುಳಭುಜಬಳಾಟೋಪನೀ ವಿಷ್ಣುಭೂಪಂ ॥ 900 ॥

ನರಸಿಂಹ I

ಕಂ ॥ ಇದಿರಾದರಿ ಭೂಪಾಳರ
ಮದದಾನೆಯಕೊಂಬನುಡಿದು ದಂತದ ಬಳೆಯಂ
ಬಿದುವಿನ ಮುತ್ತಿನ ಹಾರಮ
ನೊದವಿದ ಜಯವಧುಗೆ ತುಡಿಸುವಂ ನರಸಿಂಹಂ ॥ 901 ॥

ಬಲ್ಲಾಳ II

ಕಂ ॥ ನೃಗ ನಹುಷ ನಳ ಭಗೀರಥ
ಸಗರ ಪುರೂರವ ಯುಧಿಷ್ಠಿರಾದಿ ನೃಪಾಳ
ರ್ಗಗಣಿತ ಮಹಿಮಂ ನೂರ್ಮಡಿ
ಮಿಗೆವಂದಂ ನಿಜಚರಿತ್ರದಿಂ ಬಲ್ಲಾಳಂ ॥ 902 ॥

ಮ ವಿ ॥ ಅಸುಹೃತ್ಪಾಂಡ್ಯನೃಪಾಳರಕ್ತಜಳದಿಂ ನೀರೂಡಿ ಸುಜ್ಜೆಂಬಿನಂ
ಮಸೆದಂ ಚಿಲ್ಲಮಮಸ್ತಶಾಣತಳದೊಳ್ ಘೋರೆಂಬಿನಂ ಜೈತುಗಿ
ಪ್ರಸೃತಾಸ್ಯಾಂಬುಜಕೋಶದೊಳ್ ಕಿಱಿಪುವಂ ಘಣ್ಮೆಂಬಿನಂ ಕೂರ್ಪು ದ
ಳ್ಪಿಸೆ ಬಲ್ಲಾಳನೃಪಾಳಕಂ ನಿಜಭುಜಪ್ರೌಢಪ್ರತಾಪಾಸಿಯಂ ॥ 903 ॥

155) ಬಸ್ತಿಹಳ್ಳಿ 398, E.C. IX (R), ಕ್ರಿಶ. ಸು. 12 ನೇ ಶತಮಾನ

ಇದು ಹೊಯ್ಸಳರ ದೊರೆ ವಿಷ್ಣುವರ್ಧನನನ್ನು ಹೊಗಳುತ್ತದೆ.

ವಿಷ್ಣುವರ್ಧನ

ಉ ಮಾ ॥ ಚೋಳನಜೂಬು ಮಾಳವನ ಗೋಣ್ಮುರಿ ಚೇರನನದ್ದಿತಿಂಬ ಮಾ
ಕಾಳಿ ಕರಾಳನಂತುಳಿವಗಂಧಗಜಂ ಬಸನಳ್ಳೆಯಂಬು ನೇ
ಪಾಳಿನ ಬೆಂನಚಿಮ್ಮಟಿಗೆಯೀನಡೆತಂದನೆ ಧೀರ ವಿಷ್ಣುಭೂ
ಪಾಳಕನೆಂಬ ಸಂಭ್ರಮಮೆ ವೈರಿನೃಪಾಳರ ಮಂಡಲಂಗಳೊಳ್ ॥ 904 ॥

156) ಗೊರೂರು 493, EC IX (R), ಕ್ರಿಶ. ಸು. 12 ನೇ ಶತಮಾನ

ಇದು ಸತ್ಯವೆಗ್ಗಡೆ ಎಂಬುವವನ ನಿಸಿದಿಯನ್ನು ಹೇಳುತ್ತದೆ.

ಉ ಮಾ ॥ ಮೇಲೆನಿಸಿಪ್ಪುದೀ ಮಲೆಗೆ ಧಾತ್ರಿಯೊಳಂ ಕಿಸುವಳ್ಳಿಯನ್ತದ
ಪಾಳಿಸಿ ಸಂತತಂ ಸುಖದಿನಿರ್ಪ್ಪಿನೆಗಂ ಸಿರಿಪುಟ್ಟೆ ಪುಟ್ಟಿದಂ
ಹಿರಿಯ ಬಾಸೆವೆಗ್ಗಡೆಗವಾತನ ವಲ್ಲಭೆ ನಿಜಿಕಬ್ಬೆಗಂ
ಲೀಲೆಯೊಳೆಂದೆ ಬಣ್ಣಿಪುದು ಪೆರ್ಗ್ಗಡೆ ಸತ್ಯಮನಂ ಜಗಜ್ಜನಂ ॥ 905 ॥

ಮ ವಿ ॥ ಸ್ಥಿರನೇ ಬಾಪ್ಪಮರಾದ್ರಿಯಿಂದಧಿಕ ಗಂಭೀರನೆ ಬಾಪ್ಪು ಸಾ
ಗರದಿಂದಗ್ಗಳದನ್ತು ದಾನಿಯೇ ಸುರೋರ್ವ್ವೀಜಕೆ ಮಾಱಣ್ದಳಂ
ಸುರರಾಜಂಗೆಣೆಯನ್ದೆ ಕೀರ್ತಿಪುದು ಕೈಗೊಂಡಕ್ಕಱಿಂ ಸನ್ತತಂ
ಧರೆಯೆಲ್ಲಂ ಸಲೆ ಸತ್ಯವೆರ್ಗ್ಗಡೆಯೊಳೌದಾರ್ಯ್ಯಮಂ ಶೌರ್ಯ್ಯಮಂ
॥ 906 ॥

157) ಕಟ್ಟೇಸೋಮನಹಳ್ಳಿ 424, EC IX (R), ಕ್ರಿಶ. ಸು. 12 ನೇ ಶತಮಾನ

ಈ ವೀರಗಲ್ಲು ಶಾಸನದಲ್ಲಿ ಹೊಯ್ಸಳರ ದೊರೆಯಾದ ಎರಡನೆಯ ಬಲ್ಲಾಳನ ಆಜ್ಞಾನುಸಾರವಾಗಿ ಅರಹಲ್ಲ, ಮದ್ದ ಎಂಬ ಸಹೋದರರು ಹಾನಿಯ ಕೋಟೆಯ ಯುದ್ಧದಲ್ಲಿ ಕಾದಿ ಮಡಿದರೆಂದು ಹೇಳಿದೆ.

ಚಂ ಮಾ ॥ ತೊಡೆ ಕಡಿವೋಗೆ ಕತ್ತು ಬಿಡೆ ಕಿಬ್ಬರಿಯಿಬ್ಬಗಿಯಾಗೆ ಪೇರುರಂ
ಪಡಿದೆಱೆದಂತೆ ಬಾಯ್ದೆಱೆಯೆ ನೆತ್ತರ ಸುಟ್ಟುಱೆ ಮಂದಮಪ್ಪಿನಂ
ಕಡಿತಲೆಯಿಂ ಸಿಡಿಲ್ ಪೊಡೆವವೋಲ್ ಪೊಡೆದಿಕ್ಕಿದರಾಂತ ಬೀರರಂ
ತೊಡರ್ದ್ದರಹಲ್ಲನಾಯಕನುಮಾತನ ತಮ್ಮನೆನಿಪ್ಪ ಮದ್ದನುಂ ॥ 907 ॥

ಕಂ ॥ ಹಾನಿಯ ಕೋಟೆಯ ಬವರದೊ
ಳೇನುಂ ಸೆರಗಿಲ್ಲದಿಱಿದು ಮದ್ದಂ ದಿವಿಜಾ
ಸ್ಥಾನಕ್ಕೆ ಪೋಗೆ ಪಗೆಯಂ
ತಾನುಂ ತಳ್ತಿಱಿದು ಪೋದನೆಸೆವರಹಲ್ಲಂ ॥ 908 ॥

ಚಂ ಮಾ ॥ ಪೆಣದ ಬಣಂಬೆ ನೆತ್ತರ ಕಡಲ್ ಕಿಱುಗಂಡದರಾಸಿ ಸುತ್ತಲುಂ
ಕಣಕೆನೆ x x ದ ಪಂದಲೆಯಗುತ್ತ ಮರುಳ್ ಪಱೆಗುಟ್ಟೆ ಕಂಡದಿಂ
ಕುಣಿವರಿವೀರರಟ್ಟೆ ಕರಮದ್ಭುತಮಾಗಿರೆ ಯೋಗಿನೀ ಗಣ
ಕ್ಕುಣಿಸಿನ ತಾಣಮಾದುದರಹಲ್ಲನ ಮದ್ದನ ಗೆಲ್ದ ಕೊಳ್ಗುಳಂ ॥ 909 ॥

ಕಂ ॥ ತೆಱಪಂ ನಿಟ್ಟಿಸಿ ಕುಕಿಱ
ದಿಱ ಕರಂ ಮೆಟ್ಟಿತಕ್ಕು ಬೊಕ್ಕೆನೆಯೆನೆ ತ
ತ್ತಱದಱದ ಕಡಿತಲೆಯೊ
ಳ್ಚರಸಿಡಿಲರಹಲ್ಲ ವೀರನುಂ ಮದ್ದನುಂ ॥ 910 ॥

ಕಂ ॥ ಹಱವಡಿಯ ಬೀರರೆಲ್ಲಂ
ಪೆಱತೆಗೆವೆಡೆಯೊಳ್ ಹಾನಿಯ ಕೋಟೆಯೊಳೇಂ ತ
ತ್ತಱದರೊ ಭೋಗನ ಪಡೆ x
ಬಱದಾ x ರಹಲ ಮದ್ದನಾಯಕರದಟಂ ॥ 911 ॥

ಕಂ ॥ ಅಸಿಮುಸುಳ ಕಣೆಯ ಶರ ಪ
ಟ್ಟೆ ಸಮುದ್ಗರ ಪಿಂಡಿವಾಳ ತೋಮರ ಚಕ್ರ
ಪ್ರಸದ ಕೋಳ್ಗಿರಿಯ
ದೆಸಗ್ಗವೆಣ್ಣಲ್ಲನಾದನೆಸೆವರಹಲ್ಲಂ ॥ 912 ॥

158) ಹಳೇಬೀಡು 373, EC IX (R), ಕ್ರಿ.ಶ. ಸು. 12 ನೇ ಶತಮಾನ

ಹೊಯ್ಸಳರ ದೊರೆ ಎರಡನೇ ಬಲ್ಲಾಳನ ಆಳಿಕೆಯಲ್ಲಿ ತಳಾರ ಸುಂಕದ ಮಹದೇವಣ್ಣ, ಬೂಚಿಯ ಬೊಪ್ಪಿಸೆಟ್ಟಿಯರು ಮಾಡಿಸಿದ ಮಲ್ಲಿಕಾರ್ಜುನ ದೇವಾಲಯಕ್ಕೆ, ಕೂಚಿವೆಗ್ಗಡೆ ನೀಡಿದ ದತ್ತಿಯನ್ನು ಇದರಲ್ಲಿ ಹೇಳಿದೆ.

ನರಸಿಂಹ I

ಕಂ ॥ ತತ್ತನಯನಹಿತಮದವ
ನ್ಮತ್ತದ್ವಿರದನಘಟಾವಿಪಾಟನ ಪಟುಲೀ
ಲೋತ್ತಮಕರಾಸಿನಖರನು
ದಾತ್ತ ಯಶಪ್ರತಥ ಸಿಙ್ಗನಾ ನರಸಿಙ್ಗಂ ॥ 913 ॥

ಬಲ್ಲಾಳ II

ಕಂ ॥ ಲಲನಾಲಲಾಮಮಂ ಯೆನಿಪೇ
ಚಲದೇವಿಗಮಾ ನೃಸಿಂಹ ಪತಿಗಂ ತನೆಯಂ

ಕಲಿಕಾಲದಿಳೀಪಂ ನಿ
ಶ್ಚಲ ಸತ್ಯಯುಧಿಷ್ಠಿರಂ ನೃಪಂ ಬಲ್ಲಾಳಂ ॥ 914 ॥

ಸುಂಕರ ಕೇತಮಲ್ಲ

ಚಂ ಮಾ ॥ ನಡವಳಿ ಪೆಂಪುವೆತ್ತ ಶಿವಧರ್ಮ್ಮದ ಪೇಳ್ವೆಗೆ ಸತ್ಯಧರ್ಮ್ಮದಿಂ
ಪಡೆದ ಧನಂ ಶಿವಾಲಯದ ಪೂಜೆಗೆ ಜೌವನದೆ x ಪೆರ್ಮೆಯಂ
ಪಡೆವೆಡೆಗಾದರಂ ಪಿರಿಯರಪ್ಪವರ್ಗಾವರಮಿಕ್ಕ ದಾಣಮೆಂ
ದಡೆಪಡಿಯಾರ್ನೆಗಳ್ತೆಯ ತಳಾರದ ಸುಂಕದ ಕೇತಮಲ್ಲನೊಳ್ ॥ 915 ॥

ಬಸವಿಯಕ್ಕ

ಕಂ ॥ ನೀತಿಗೆ ತಕ್ಕ ಚರಿತ್ರೆ
ಜ್ಯೋತಿಗೆ ತೊಡವಾದರೂಪು ತನಗಮರ್ದಿರೆ ವಿ
ಖ್ಯಾತನ ತಳಾಱಂ ಸುಂಕದ
ಕೇತನಸತಿ ಬಸವಿಯಕ್ಕನೆಸೆದಳ್ ಜಸದೊಳ್ ॥ 916 ॥

159) ಮಾರೇನಹಳ್ಳಿ 244, E.C. IX (R), ಕ್ರಿ.ಶ. ಸು. 1200

ಇದರಲ್ಲಿ ಹೊಯ್ಸಳರ ದೊರೆ ಎರಡನೆಯ ಬಲ್ಲಾಳನ ಆಳಿಕೆಯಲ್ಲಿ ಬೆನಕ ಎಂಬುವವನ ಪತ್ನಿಯಾದ ಮಾರವೆ ಎಂಬುವವಳು ಶಾಂತಲೇಶ್ವರ ದೇವರಿಗೆ ದತ್ತಿ ಕೊಟ್ಟಿದ್ದನ್ನು ಹೇಳಿದೆ. ಇದನ್ನು ಬಾಚಯ್ಯ ಎಂಬುವವನು ರಚಿಸಿದ್ದಾನೆ.

ಎರೆಯಂಗ

ಕಂ ॥ ಆ ವಿನಯಾದಿತ್ಯಂಗಂ
ಪಾವನ ಚಾರಿತ್ರೆ ಕೆಳೆಯಬರಿಸಿಗಮಖಿಳೋ
ರ್ವ್ವೀವರನುದಯಂಗೆಯ್ದಂ
ಶ್ರೀವರಪದ ಪದ್ಮಭೃಂಗನೆಱೆಯಂಗನೃಪಂ ॥ 917 ॥

ಕಂ ॥ ಎಱಗದವಂದಿರ ತಲೆಗಳ
ನೆಱಗಿಪನೆಱಗಿಪನರಾತಿಲಕ್ಷ್ಮಿಯನಿದಿರಿಂ
ಗೆಱಗದ ಬಲ್ಪಿಂದಂ ತನ
ಗೆಱಗಿಪನೆಱೆಯಂಗನತುಳ ವಿಜಯಶ್ರೀಯಂ ॥ 918 ॥

ವಿಷ್ಣುವರ್ಧನ

ಮ ವಿ ॥ ಅವರೊಳ್ ಮಧ್ಯಮನಾಗಿಯುಂ ಧರಣಿಯಂ ಪೂರ್ವಾಪರಾಂಭೋಧಿಯೆ
ಯ್ದುವಿನಂ ಕೂಡೆ ನಿಮಿರ್ಚುವೊಂದು ನಿಜನಿಷ್ಪ್ರತ್ಯೂಹವಿಕ್ರಾಂತದು

ಧ್ಭವದಿಂದುತ್ತಮನಾದನುತ್ತಮಗುಣಭ್ರಾಜಿಷ್ಣು ಲಕ್ಷ್ಮೀವಧೂ
ಧವನುದ್ವೃತ್ತವಿರೋಧಿದೈತ್ಯಮಥನಂ ಶ್ರೀವಿಷ್ಣುಭೂಪಾಳಕಂ ॥ 919 ॥

ಮಾರವ್ವೆ

ಕಂ ॥ ಜಂಗಮ ಕಲ್ಪ ಲತಾಫಲ
ಮಂ ಗೆಡೆಗೊಂಡವೊಲುದಾರೆ ಮಾರವೆ ಪೆತ್ತಳ್
ತುಂಗಯಶಮೆಂಬ ಪೊಸವೆಳು
ದಿಂಗಳ ಬಿತ್ತೆನಿಪ ಭದ್ರನಂ ನಂದನನಂ ॥ 920 ॥

ಶಾಂತಲೇಶ್ವರಗುರು

ಚಂ ಮಾ ॥ ಅನುದಿನವುತ್ತರೋತ್ತರ ಶುಭೋದಯಮಂ ಪಡೆದೀಗೆ ರಾಗಮಂ
ಬೆನಕನುದಾರಮಾವಗಮನೇಕಸುರೇಂದ್ರ ನರೇಂದ್ರರುಂದ್ರಾ ಕಾಂ
ಚನ ಮಕುಟಾಳಿರಣ x ರಣ x ತಿಘೂರ್ಣಿತನೂತ್ನರತ್ನರ
ಶ್ಮಿನಿವೃತ ಪಾದಪೀಠನಿಕಟಂ ತ್ರಿಜಗದ್ಗುರು ಶಾಂತಲೇಶ್ವರಂ ॥ 921 ॥

160) ಬೆಳವಾಡಿ 560, E.C. IX (R), ಕ್ರಿ.ಶ. 1207

ಇದರಲ್ಲಿ ಹೊಯ್ಸಳ ದೊರೆಯಾದ ಎರಡನೆಯ ನರಸಿಂಹನ ಆಳಿಕೆಯಲ್ಲಿ ಜನ್ನಮಯ ಹೆಗ್ಗಡೆಯು ಬೆಳವಾಡಿ ಜನ್ನೇಶ್ವರದೇವರಿಗೆ ಭೂಮಿಯನ್ನು ದತ್ತಿಯಾಗಿ ಕೊಟ್ಟಂತೆ ಹೇಳಿದೆ.

ಶಿವಸ್ತುತಿ

ಸ್ರಗ್ಧರೆ ॥
ಶ್ರೀಮದ್ಗೀರ್ಬ್ಬಾಣ ಪೂರ್ಬ್ಬಂ ಮದನ ಮದಹರಂ ಶಶ್ವದೈಶ್ವರ್ಯ್ಯ ಧುರ್ಯ್ಯಂ
ಸೋಮಂ ಪ್ರೋತ್ತುಂಗಗಂಗಾತರಳತರತರಂಗೌಘ ಚಂ x x ರಸಿ
ಸೋಮಂ ಜನ್ನಂಗೆ ಜೀನೇಶ್ವರನಭಿಮತಮಂ ಪ್ರೀತಿಯಿಂದೀಗೆ ರಾಗೋ
ದ್ಧಾಮಂ ಪ್ರೇಮಾರ್ದ್ರ ಗೌರೀಹೃದಯಕಮಳಿನೀ ಲೋಕನೇತ್ರಂ ತ್ರಿಣೇತ್ರಂ ॥ 922 ॥

ಎರೆಯಂಗನ ಮಕ್ಕಳು

ಕಂ ॥ ಮೂವರ್ದೇವರ ಶಕ್ತಿಯಿ
ನಾವರೊಳಂ ತಪ್ಪದೆನಿಸಿ ನೆಗಟ್ಟಿತ್ತಾಯಿಂ
ದೀವರ ಲೋಚನೆಗೇಚಲ
ದೇವಿಗೆ ಬಲ್ಲಾಳವಿಷ್ಣು ವಿನಯಾದಿತ್ಯರ್ ॥ 923 ॥

ಬಲ್ಲಾಳ I

ಮ ಸ್ರ ॥ ಜಳಧಿವ್ಯಾವೇಷ್ಟಿತೋರ್ವ್ವೀಪತಿಯೆನಿಸಿ ಸುಖಂ ಬಾಳ್ಗೆಯಾಚಂದ್ರತಾರಂ
ತಳಕಾಡಂ ಕೊಂಡಗಂಡಂ ತಿಗುಳರ ಪಡೆಯಂ ಕೂಡೆ ಬೆಂಕೊಂಡಗಂಡಂ
ತಳವಾರಲ್ ತಳ್ತ ಭೂಪಾಳರ ಪೆಡತಲೆಯಂ ತೊಪ್ಪೆನಲ್ ಪೊಯ್ದಗಂಡಂ
ಬಳವದ್ರಾಜ್ಯಂಗಳಂ ಪೊಯ್ದಲಗಿನ ಮೊನೆಯಿಂದೊತ್ತಿ ಕಯ್ಕೊಂಡ ಗಂಡಂ
॥ 924 ॥

ವಿಷ್ಣುವರ್ಧನ

ಮ ಸ್ರ ॥ ಇವನೀ ತೋಳ್ಗಂಬದೊಳ್ ಪುತ್ತಳಿಯವೊಲವನೀದೇವಿ ತಾನಿರ್ಪ್ಪಳೆಂದುಂ
ತವದಿಕ್ಕುಂ ವಿಕ್ರಮಶ್ರೀ ಪೊಗವೊಲಿವನತೀಬ್ರಾಸಿಯೊಳು ಬಿಟ್ಟೆವಂದಾ
ಜವನಿರ್ಪ್ಪಂ ಕೋಣನಿಂದಂ ಪಗೆವರ ಪೆಣನಂ ಪೇಟಲೀವಿಷ್ಣುವಂ ಕೊಂ
ದವನಾವಂ ಗೆಲುವನಾವಂ ನಡುಗದಿದಿರನಾಟಂದು ನಿಂದಾಂಪನಾವಂ
॥ 925 ॥

161) ಕಟ್ಟೇಸೋಮನಹಳ್ಳಿ 434, E.C. IX (R), ಕ್ರಿ.ಶ. 1214

ಇದರಲ್ಲಿ ಹೊಯ್ಸಳರ ದೊರೆಯಾದ ಮೊದಲನೆಯ ನರಸಿಂಹನು ಚೆನ್ನಸೋಮನಾಥ ದೇವರಿಗೆ ದತ್ತಿಯನ್ನು ಬಿಟ್ಟಂತೆ ಹೇಳಿದೆ.

ನರಸಿಂಹ I

ಕಂ ॥ ಆ ನರಸಿಂಹಂ ರಿಪುನೃಪ
ಸೇನಾಜಳನಿಧಿಗೆ ಬಾಡಬಂ ರಿಪುಭೂಭೃ
ತ್ಸೇನಾವನರಾಜಿಗೆ ದಾ
ವಾನಳನೇಕಾಂಗವೀರನತಿಗಂಭೀರಂ ॥ 926 ॥

162) ಶಿವನೇನಹಳ್ಳಿ 243, E.C. IX (R), ಕ್ರಿ.ಶ. 1217

ಇದರಲ್ಲಿ ಹೊಯ್ಸಳರ ದೊರೆ ಎರಡನೆಯ ಬಲ್ಲಾಳನ ಆಳಿಕೆಯಲ್ಲಿ ಶಿವನಯ್ಯ ಎಂಬುವವನು ಶಿವನಯ್ಯನ ಹಳ್ಳಿಯಲ್ಲಿ ಶಿವಲಿಂಗೇಶ್ವರ ದೇವಾಲಯವನ್ನು ಕಟ್ಟಿಸಿ, ಭೂಮಿಯನ್ನು ದತ್ತಿಯಾಗಿ ನೀಡಿದಂತೆ ಹೇಳಿದೆ.

ಯಾದವವಂಶ

ಕಂ ॥ ಸಿರಿಗೆ ತವರ್ಮನೆ ವಿಷ್ಣುಗೆ
ಪರಮೋತ್ಸವಭೂಮಿ ನಿರ್ಮಳಂ ವಿಸ್ತೀರ್ಣಂ
ನಿರತಂ ಪಾಲ್ಗಡಲೊಳ್ಪಿಂ
ಪೊರೆದುದು ಗಂಭೀರಮಾದ ಯಾದವವಂಶಂ ॥ 927 ॥

ವಿನಯಾದಿತ್ಯ

ಕಂ ॥ ವಿನಯಂ ಪ್ರತಾಪಮೆಂಬೀ
ಜನನಾಥೋಚಿತಚರಿತ್ರಯುಗದಿಂ ಜಗಮಂ
ಜನನಯನಮೆನಿಸಿ ಪೊರೆದಂ
ವಿನಯಾದಿತ್ಯಂ ಸಮಸ್ತಭುವನಸ್ತುತ್ಯಂ ॥ 928 ॥

ಎರೆಯಂಗ

ಕಂ ॥ ಆತಂಗತಿಮಹಿಮಂ ಹಿಮ
ಸೇತುಸಮಾಖ್ಯಾಕೀರ್ತಿ ಮೂರ್ತಿಮನೋಜಂ
ಪಾತಿತಸಂಗರರಿಪುನೃಪ
ಜಾತಂ ತನುಜಾತನಾದನೆಱೆಯಂಗನೃಪಂ ॥ 929 ॥

ಶಿವನಯ್ಯ

ಮ ವಿ ॥ ಶಿವನಯ್ಯಂ ವಿನಯಾಂಬುರಾಶಿ ಶಿವನಯ್ಯಂ ಧರ್ಮ್ಮನಿಸ್ತಾರಕಂ
ಶಿವನಯ್ಯಂ ನಿಜಗೋತ್ರಭಾನು ಶಿವನಯ್ಯಂ ಮಿತ್ರನಿತ್ಯೋತ್ಸವಂ
ಶಿವನಯ್ಯಂ ಶಿವಲಿಂಗಪಾದಯುಗ ನಿತ್ಯಾರಾಧಕಂ ವೀರಯಾ
ದವ ಬಲ್ಲಾಳನ ರಾಜ್ಯದಲ್ಲಿ ಶಿವನಯ್ಯಂ ತಾಳ್ದಿದಂ ಖ್ಯಾತಿಯಂ ॥ 930 ॥

163) ಹಳೇಬೀಡು 300, E.C. IX (R), ಶಾಸನ ಸರಸ್ವತಿ, ಕ್ರಿಶ. ಸು. 1220

ಇದರಲ್ಲಿ ಹೊಯ್ಸಳರ ದೊರೆಯಾದ ಎರಡನೆಯ ಬಲ್ಲಾಳನು ಮರಣಹೊಂದಿದಾಗ ಅವನ ದಂಡನಾಥನಾದ ಕುವರಲಕ್ಷ್ಮನು ತಾನು ಮಾಡಿದ್ದ ಪ್ರತಿಜ್ಞೆಯಂತೆ, ತನ್ನ ಸತಿಯೊಡನೆ ಹಾಗೂ ತನ್ನ ಕೈಕೆಳಗಿನ ಸಾವಿರ ಜನ ವೀರರೊಡನೆ ಆತ್ಮಬಲಿ ನೀಡಿದಂತೆ ಹೇಳಿದೆ. ಇವರನ್ನು ಲೆಂಕವಾಳಿಗಳು/ಗರುಡರು ಎಂದು ಗುರುತಿಸುತ್ತಾರೆ. ತಾವು ಪ್ರತಿಜ್ಞೆ ಮಾಡಿದುದನ್ನು ನೆನಪಿಸಿಕೊಳ್ಳುವ ಸಲುವಾಗಿ ತಮ್ಮ ಕಾಲಿಗೆ ಗಂಡಪೆಂಡೇರವನ್ನು ಧರಿಸಿರುತ್ತಿದ್ದರು. ಇದನ್ನು ಬರೆದ ಕವಿಯ ಹೆಸರು ತಿಳಿದಿಲ್ಲ.

ಕುಮಾರ ಲಕ್ಷ್ಮ

ಶಾ ವಿ ॥ ಶ್ರೀಯಂ ಶ್ರೀಧರನಾಯುವಂ ವನಜಜಂ ಗೌರೀವರಂ ಕೀರ್ತ್ತಿಯಂ
ಕಾಯಕ್ಕೊಪ್ಪುವ ಕಾನ್ತಿಯಂ ವಿಧು ದಿನೇಶಂ ತೇಜಮಂ ಭೋಗಿನೀ
ಜ್ಯಾಯಂ ಭೋಗಮನೆಣ್ಬರುಂ ದಿಗದಿಪರ್ತ್ತಂತಂಮೊಳುಳ್ಳೊಳ್ಪನೊ
ಲ್ದೀಯುತ್ತಿರ್ಕ್ಕೆ ಕುಮಾರ ಲಕ್ಷ್ಮ ರಥಿನೀನಾಥಂಗತಿಪ್ರೀತಿಯಿಂ ॥ 931 ॥

ವಸಂತವಲ್ಲಭೆ

ಕಂ ॥ ಶ್ರೀದಯಿತಂ ಯದುಕುಳದೊಳ
ಗಾದಂ ಸಳನೆಂಬನೋರ್ವ್ವ ನೃಪನಾ ನೃಪನಿಂ
ದಾದುದು ಶಶಕಪುರಮದ
ರ್ಕ್ಕಾದಧಿದೆಯ್ವಂ ವಸನ್ತ ವಲ್ಲಭೆಯೆಂಬೊಳ್ ॥ 932 ॥

ಬಲ್ಲಾಳ II

ಶಾ ವಿ ॥ ಆ ವಿಷ್ಣುಕ್ಷಿತಿಪಾಲಕಂಗೆ ತನೂಜಾತಂ ನಾರಸಿಂಹೋರ್ವ್ವಿಪಂ
ಭೂವಂದ್ಯಂ ತನುಜಾತನಾ ನೃಪವರಂಗಂಭೋಧಿ ಮರ್ಯ್ಯಾದೆಯಾ
ದೀ ವಿಶ್ವಂಭರೆಯಂ ನಿಜೋನ್ನತ ಭುಜಸ್ತಂಭಾಗ್ರದೊಳ್ ತಾಳ್ದಿದಂ
ದೇವೇಂದ್ರಾದ್ರಿ ಸಮಾನಮಾನ ಮಹಿಮಂ ಬಲ್ಲಾಳ ಭೂಪಾಳಕಂ ॥ 933 ॥

ಮ ಸ್ರ ॥
ದ್ವಿಷದುರ್ವ್ವೀಪಾಲರಂ ವಿಕ್ರಮಗುಣ ನಿಲಯಂ ವೀರಬಲ್ಲಾಳದೇವಂ
ವಿಷಮಾರಣ್ಯಂಗಳೊಳ್ ನಿರ್ಜರ ಯುವತಿಯರುತ್ಸಂಗದೊಳ್ ತಂಮ ರಾಜ್ಯಾ
ಭಿಷವ ಬ್ಯಾಸಂಗದೊಳ್ ಸಂಗರದೊಳೆಡಱಿ ಬೆಂನಿತ್ತರಂ ಸತ್ತರಂ ತಂ
ನಿಷುವಿಂಗೂಡಾಗದಾಳಾದರನಿರಿಸಿದನೇಂ ಭೂಪರಿಂತಾಗವೇಡಾ ॥ 934 ॥

ಕಂ ॥ ನೃಗ ನಳ ನಹುಷ ಯುಧಿಷ್ಠಿರ
ಸಗರ ಭಗೀರಥ ದಿಳೀಪ ಪುರು ಪುತ್ಸಾಯು
ರ್ಗ್ಗನ ಚರ ಭರತರಾಮಾ
ದಿಗಳಳವೇ ನೆಗಟ್ದ ವೀರಬಲ್ಲಾಳ ನೃಪಂ ॥ 935 ॥

ಮ ಸ್ರ ॥
ನೃಪರಾರುಂ ವೀರ ಬಲ್ಲಾಳನೊಳದಿರದೆ ಮಾಱಾಂಪರೇ ಮೀಱಿ ಶಾರ್ದೂ
ಳಪತಾಕಾ ದಂಡಮಳ್ಳಾಡಿದೊಡೆ ಮನದೊಳಳ್ಳಾಡುವರ್ಪ್ಪುಲ್ಲೆವಿಂಡಂ
ತೆ ಪೊಲಂಗೊಂಡೋಡುವರ್ ಪೊಣ್ಮಿದ ಭಯದೊದವಿಂ ಸಂಗರಕ್ಷೋಣಿಯಿಂದಾಂ
ತಪೆವೆಂಬಾ ಗಾಂಪುವೇಡಾವಱಿಯದರೊಳರೇ ಕಾದುವಣ್ಮುಳ್ಳ ಗಂಡರ್ ॥ 936 ॥

ಉ ಮಾ ॥ ವಿಕ್ಕೆಯನಿರ್ಪ್ಪ x x x x x ಯ ಕೋವಣನಿರ್ಪ್ಪ ಹಾನುಗಲ್
ಪೊಕ್ಕಿಲೆ ಸೈವುಣರ್ವ್ವಲಿದು ನಿಂದ ನೆಗಟ್ತೆಯ ಲೊಕ್ಕಿಗುಂಡಿ ಲೋ
ಕಕ್ಕೆ ಕೊಳಲ್ಕೆ ಬಾರದೆನಿಪಗ್ಗದ ಪಾಂಡ್ಯನ ಬೆಟ್ಟುಗೊಟ್ಟ ನೀ
ರಕ್ಕರದನ್ತೆ ಪೊಯ್ಸಳನ ಧಾಳಿಯ ಗಾಳಿಗೆ ಕೆಟ್ಟುವಲ್ಲವೇ ॥ 937 ॥

ಕಂ ॥ ಗಿರಿವನಜಲದುರ್ಗ್ಗಂಗಳ
ನುರವಣಿಯಿಂ ಪವಿವೊಲಗ್ನಿವೊಲ್ ಗ್ರೀಷ್ಮದವೋ
ಲಿರದೊಡೆವುದು ಸುಡುವುದು ಪುಡಿ
ವರೆ ತವಿಪುದು ಯದುನೃಪಾಲ ಕೋಪಾಟೋಪಂ ॥ 938 ॥

ಮ ಸ್ರ ॥ ಅಸದಾಳಾಪಕ್ಕೆ ಪಕ್ಕಾಗದ ನುಡಿ ತೊಡರ್ದಂದಾರುಮಂ ಯುದ್ಧದೊಳ್ ಭಂ
ಗಿಸಿ ಗೆಲ್ಲಂಗೊಳ್ವ ಶೌರ್ಯಂ ನೆರೆದೆರೆಯೆ ಬುಧಶ್ರೇಣಿ ಪೂಣ್ದೀವ ದಾನ
ಬ್ಬೆಸನಂ ಮರ್ಯ್ಯಾದೆಯಂ ದಾಂಟದೆ ವಸುಮತಿಯಂ ಕಾವ ಕಾರುಣ್ಯಮಾವೊಂ
ಗೆಸೆಗುಂ ಬಲ್ಲಾಳದೇವಂಗೆಸೆಗುಮಮಮ ಭೂಪಾಳರಿಂತಾಗವೇಡಾ
॥ 939 ॥

ಕುವರಲಕ್ಷ್ಮ

ಚಂ ಮಾ ॥ ಎನೆ ನೆಗಟ್ದಾ ನೃಪೋತ್ತಮನ ಮಂತ್ರಿ ಶಿಖಾಮಣಿ ವಂದಿ ಬೃಂದನಂ
ದನವನ ಮಾಧವಂ ಖರಕರ ಪ್ರತಿಮೋರ್ಜ್ಜಿತತೇಜನಾಹವಾ
ವನಿಯೊಳರಾತಿ ಭೂಭುಜರನಿಕ್ಕುವ ತಕ್ಕಿನ ವಿಕ್ರಮಾರ್ಜುನಂ
ಮನುಜ ಮಹೇಶ್ವರಂ ಕುವರಲಕ್ಷ್ಮನನಿಂದಿತ ವೀರವಂಶಜಂ ॥ 940 ॥

ಕಂ ॥ ಅರಮನೆ ತೊಟ್ಟಿಲ್ ನೆಗಟ್ದಾ
ದರಮದು ಬಾಯ್ವೆಣ್ಣೆ ದಾದಿಯರ್ತ್ತಂನಂತಃ
ಪುರಮೆನೆ ಬಲ್ಲಾಳನೃಪಂ
ಪೊರೆದ ಮಗಂ ಕುವರಲಕ್ಷ್ಮದಂಡಾಧೀಶಂ ॥ 941 ॥

ಕಂ ॥ ಗುರುವುಂ ದೈವಮುಮಾಳ್ದನೆ
ಪರತ್ರೆಗಂ ತನಗಿರತ್ರೆಗಂ ಪೆಱನೋರ್ವ್ವಂ
ಗುರುವಿಲ್ಲ ದೈವಮಿಲ್ಲೆನೆ
ಧರೆಗೆಸೆದೊಂ ಕುವರಲಕ್ಷ್ಮದಂಡಾಧೀಶಂ ॥ 942 ॥

ಕಂ ॥ ಅರಮನೆ ನೆರೆಮನೆ ನಂಟಂ
ನರಪತಿ ತನಗಾಪ್ತ ಪರಿಜನಂ ಸಚಿವರೆನಲ್
ದೊರೆವಡೆದಂ ಬಲ್ಲಾಳನ
ಪುರದಳವಿಗೆ ಕುವರಲಕ್ಷ್ಮದಂಡಾಧೀಶಂ ॥ 943 ॥

ಕುವರಲಕ್ಷ್ಮನ ಹೆಂಡತಿ ಸುಗ್ಗಲದೇವಿ

ಉ ಮಾ ॥ ಆತನ ಕಾಂತೆ ಕಂತುವಿನ ಕಾಂತೆಗೆ ರಾಮನ ಭಾಮೆಗಬ್ಜಸಂ
ಜಾತನ ಚಿತ್ತವಲ್ಲಭೆಗೆ ರುದ್ರನ ಮೆಯ್ದೊಡವಾದ ಭೂಧರೋ
ದ್ಭೂತೆಗೆ ಚಂದ್ರನಂಗನೆಗೆ ನಾಗನ ನಾಗಿಣಿಗೀಕೆ ಪೋಲ್ವೆಯೀ
ಭೂತಳದೊಳ್ ಪೆಱದ್ರೊರೆಯೆ ಸುಗ್ಗಲದೇವಿಗೆ ರಾಯರಾಣಿಯರ್
॥ 944 ॥

ಉ ಮಾ ॥ ವಾರಿಜದರ್ಪಣೇಂದು ಮುಖಿ ವಾರಣಹಂಸಮಯೂರಯಾನೆ ಕಲ್
ಹಾರಕುರಂಗ ಮತ್ಸ್ಯನಿಭಲೋಚನೆ ಕೋಕಿಲ ಚಾರು ಕೀರ ವೀ
ಣಾರವೆ ಕೋಕ ತಾಳಫಳ ಹೇಮ ಘಟಸ್ಥನಿಯೆಂದೊಡಾರುಮೀ
ಧಾರಿಣಿಯೊಳ್ ವಧೂತ್ತಮೆಗೆ ಸುಗ್ಗಲದೇವಿಗೆ ಪೋಲ್ವೆಯಪ್ಪರೇ ॥ 945 ॥

ಉ ಮಾ ॥ ಈ ಧರೆಯೊಳ್ ನೆಗೞ್ತೆವಡೆದಿರ್ದ್ದ ಪತಿಬ್ರತದುನ್ನತಿಕ್ಕೆ ತಾಂ
ಸಾಧನೆವೋಯ್ತು ಮುಂ ನೆಗಳ್ದರುಂಧತಿಯೊಳ್ ಪದೆದೀಗಳೀಕ್ಷಿಸಲ್
ಸಾಧನೆವೋಯ್ತು ಪೆಂಪುವಡೆದಿರ್ದ್ದ ಪತಿಬ್ರತದುನ್ನತಿಕ್ಕೆ ಲ
ಕ್ಷ್ಮೀಧರ ದಂಡನಾಥನ ಮನಃಪ್ರಿಯೆ ಸುಗ್ಗಲದೇವಿ ರಾಣಿಯೊಳ್ ॥ 946 ॥

ಕುವರಲಕ್ಷ್ಮ

ಉ ಮಾ ॥ ಆಳರಸೆಂಬ ಭೇದಮಿನಿತಪ್ಪೊಡಮಿಲ್ಲಿವರಲ್ಲಿ ತೇಜಮುಂ
ಲೀಳೆಯ ರಾಜ್ಯಚಿಂಹ್ನಮುಮವಿರ್ವ್ವರೊಳಂ ಸಮಮಕ್ಕುಮೆಂಬಿನಂ
ಪಾಳಿಸುವರ್ದ್ಧರಾವಳಯಮಂ ಪರಮೋತ್ಸವದಿಂದೆ ವೀರ ಬ
ಲ್ಲಾಳ ನೃಪಾಳನುಂ ಕುವರಲಕ್ಷ್ಮಚಮೂಪನುಮೇಂ ಸಪುಣ್ಯರೋ ॥ 947 ॥

ಮ ವಿ ॥ ಧನಮುಂ ಪ್ರಾಣಮುಮೆಂಬಿವಂ ಕುವರಲಕ್ಷ್ಮಂ ವೀರಬಲ್ಲಾಳದೇ
ವನ ದಾನೋನ್ನತಿಗಂ ಜಯೋನ್ನತಿಗಮೀಯಲ್ ಪೂಣ್ಡು ಮುಂದಿಟ್ಟು ರಾ
ಮನ ಬೀಡಿಂಗಣುವಂ ಯಮಾತ್ಮಜನ ಬೀಡಿಂಗರ್ಜ್ಜುನಂ ಚಂದ್ರಜೂ
ಟನ ಬೀಡಿಂಗೆ ಕುಮಾರನಿರ್ಪ್ಪ ತೆಱದಿಂದಿರ್ದ್ದಪ್ಪನೇಂ ಧೀರನೋ ॥ 948 ॥

ಉ ಮಾ ॥ ಸಾಧಿಸಿಕೊಟ್ಟನಾಳ್ದ ಯದುವಂಶ ನಮೇರುಗೆ ಕೂಡೆ ದಕ್ಷಿಣಾಂ
ಭೋಧಿವರಂ ಧರಾವಳಯಮಂ ಬುಧಕೋಟಿಗೆ ಕೊಟ್ಟನರ್ಥಮಂ
ಸಾಧನೆವೋಯ್ತು ಸರ್ವನಿಧಿಯೆಂಬಿನೆಗಂ ದೊರೆಯಾರ್ಕ್ಕುಮಾರಲ
ಕ್ಷ್ಮೀಧರ ದೇವನೊಳ್ ಪತಿಹಿತಕ್ರಮದೊಳ್ ಪದೆದೀವ ದಾನದೊಳ್॥ 949 ॥

ಚಂ ಮಾ ॥ ವಿನಯದ ಪೆರ್ಮೆ ಲಕ್ಷ್ಮಿಗೆ ವಿವೇಕದ ಮೆಯ್ಸಿರಿ ವಾಣಿಗಾಶ್ರಿತ
ರ್ಗ್ಗನುನಯದಿಂದಮೀವ ಬಗೆ ದಾನಗುಣಕ್ಕೆ ಕಡಂಗಿ ಸಂಗರಾ
ವನಿಯೊಳರಾತಿಯಂ ತವಿಪ ತಕ್ಕು ಜಯಾಂಗನೆಗೀಗಳಲ್ತೆ ನೆ
ಟ್ಟನೆ ದೊರೆವೆತ್ತುದೀ ಕುವರಲಕ್ಷ್ಮಚಮೂಪನೊಳಾದ ಸಂಗದಿಂ ॥ 950 ॥

ಉ ಮಾ ॥ ಎಕ್ಕವದಂ ದಲೀ ಕುವರಲಕ್ಕೆಯನಾಡಿದ ಮಾತು ಕಲ್ಲೊಳಿ
ಟ್ಕಕರದಂತೆ ಸತ್ಯ ಪರಿಪಾಳನಶೀಳಮನುಳ್ಳುವಾವಕಾ
ರ್ಯ್ಯಕ್ಕಮನರ್ಥಕಂ ಪೆಜಿರ ಮಾತು ವಿಚಾರಿಸಿ ನೋಡೆ ನೀರೊಳಿ
ಟ್ಟಕರದಂತೆ ಸತ್ಯಪರಿಪಾಳನ ಶೀಳಮನುಳ್ಳವೆಲ್ಲಿಯುಂ ॥ 951 ॥

ಕಂ ॥ ಅಱುವತ್ತು ನಾಲ್ಕು ಕಳೆಗಳೊ
ಳಱಿಯದ ಕಳೆಯಿಲ್ಲ ಕುವರಲಕ್ಷ್ಮ ಚಮೂಪಂ
ಗಱಿಯದುವೆರಡೊಳವಿಲ್ಲೆನ
ಲಱಿಯಂ ಸೋಲ್ತಱಿಯನರ್ಥಿಗಂ ಪಗೆವಂಗಂ ॥ 952 ॥

ಕಂ ॥ ಆತಂ ಪತಿಭಕ್ತಿ ಸಮ
ನ್ವಿತಂ ಬಲ್ಲಾಳ ಭೂಮಿಪಾಳಂಗೆ ಜಗತ್
ಪೂತ ಚರಿತ್ರಂ ಕೊಟ್ಟಂ
ವೀತಭಯಂ ಭಾಷೆಯಂ ಪ್ರತಾಪ ವಿನೂತಂ ॥ 953 ॥

ಮ ವಿ ॥ ತೊಡರಂ ದೇಸೆಗೆ ಕಾಲೊಳಿಕ್ಕಿ ಪಡೆದರ್ತ್ಥಂ ಬೀಸರಂಬೋಗದಂ
ತೊಡಲಂ ರಕ್ಷಿಸಿ ನಂಬಿದಾಳ್ದನೆಡಜೊಳ್ ಮತ್ತೊಂದು ಸಂತಾನಮಂ
ಪಿಡಿವುದ್ಯೋಗದಿನಿರ್ಪ್ಪಮಾತ್ಯರೆಣೆಯೇ ಬಲ್ಲಾಳದೇವಂಗೆ ಸಂ
ಗಡಮೆಂತಪ್ಪೆಡೆಯಲ್ಲಿಯುಂ ಕುವರಲಕ್ಷ್ಮಂ ತಾನೆ ತಾತ್ಪರ್ಯದಿಂ ॥ 954 ॥

ಚಂ ಮಾ ॥

ತೊಡರೆಡಗಾಲೊಳೊಪ್ಪುವುದು ಬಲ್ಲಗೆಯಂ ಮದದನ್ತಿಗಿಕ್ಕಿ ಬ
ಲ್ಪೊಡರಿಸುವೊಂದು ಭಂಗಿಯೊಳೆ ಪೊಂದೊಡರೊಳ್ ತೊಡರ್ದಿರ್ದ್ದ ಪಾಪೆಗಳ್
ತೊಡರ ತೊಡರ್ಪ್ಪಿನೊಳ್ ತೊಡರಲಣ್ಮದ ಭಾಷೆಯಮಾತ್ಯರಂಜಿ ಕಾ
ಲ್ವಿಡಿದವೊಲಿರ್ಪ್ಪವೇಂ ಕುವರಲಕ್ಷ್ಮಚಮೂಪತಿಗಿಂತಿದೊಪ್ಪದೇ ॥ 955 ॥

ಉ ಮಾ ॥ ಮುತ್ತಿನ ಪೆಂಡೆಯಂ ಮುರಹರಂ ಕನಕಾದ್ರಿಯೊಳಂದು ಶೇಷನಂ
ಸುತ್ತಿದ ಭಂಗಿಯಿಂದಮೆಸೆದಿರ್ಪ್ಪುದು ಪೊಂನ ತೊಡರ್ತದದ್ರಿಯಂ

ಸುತ್ತಿದ ಕರ್ಣಿಕಾರವನಮಾಲೆವೊಲಿರ್ಪುದು ಕೊಟ್ಟ ಭಾಷೆಗ
ಚ್ಚೊತ್ತಿದ ಮಾಳ್ಕೆಯಿಂ ಕುವರಲಕ್ಷ್ಮ ಚಮೂಪನ ಪಾದಪದ್ಮದೊಳ್ ॥ **956** ॥

ಮ ವಿ ॥ ತೊಡರುಂ ಪಾಪೆಗಳುಂ ಝುಣಜ್ಝಣರವಂ ಕಯ್ಗಗ್ಮೆ ವಾಮಾಂಘ್ರಿಯೊಳ್
ನುಡಿಯುತ್ತಿರ್ಪ್ಪುವು ಕೊಟ್ಟ ಭಾಷೆಗಿವನೊಳ್ ಮತ್ತಾರುಮೇನಾರ್ಪ್ಪರೇ
ನುಡಿದಂತಣ್ಮಲದೆಂದುಮೆಂಬ ನುಡಿಯಂ ಬಲ್ಲಾಳದೇವಂಗೆ ಕೈ
ಪಿಡಿಯುಂ ಕಟ್ಟಿದ ಗೇಣುಮೀತನೆ ವಲಂ ದಂಡೇಶ ಲಕ್ಷ್ಮೀಧರಂ ॥ **957** ॥

ಉ ಮಾ ॥ ತಾರಗೆಯನ್ತೆ ತಳ್ತೆಸೆವ ಮುತ್ತಿನ ಮೊತ್ತದಿನಾದ ಗಂಡಪೆಂ
ಡಾರಮುಮಿಕ್ಕೆ ಚಂಪಕನವೋದ್ಗಮ ದಾಮದ ಚೆಲ್ವನಾಳ್ದು ವಾ
ಮಾರುಣ ಪಾದದೊಳ್ ಪೊಳೆವ ಪೊಂದೊಡರುಂ ಪತಿಭಕ್ತಿಯುಕ್ತಿ ವಿ
ಸ್ತಾರ ಕುಮಾರಲಕ್ಷ್ಮ ರಥಿನೀಪತಿಗೊಪ್ಪುಗುಮೊಪ್ಪವನ್ಯರೊಳ್ ॥ **958** ॥

ಕಂ ॥ ತಳತಳ ತೊಳಗುತ್ತುಂ ಪ
ಜ್ಜಳಿಸುವ ಮೌಕ್ತಿಕದ ಪೆಂಡೆಯಂ ವಿಷ್ಣುಪದ
ಕ್ಕಳವಟ್ಟುದೊಂದು ಧ್ರುವಮಂ
ಡಳದಂದದೆ ಕುವರಲಕ್ಷ್ಮನಂಘ್ರಿಯೊಳೆಸೆಗುಂ ॥ **959** ॥

ಸುಗ್ಗಲದೇವಿ

ಮ ವಿ ॥ ಜಯಸಿಂಹ ಕ್ಷಿತಿಪಾಳಕಂಗೆ ಜಗಮೆಲ್ಲಂ ಬಣ್ಣಿಸಲ್ ಪೂಣ್ಬು ಭಾ
ಷೆಯನಾ ಸುಗ್ಗಲದೇವಿಕೊಟ್ಟ ತೆಱದಿಂ ಬಲ್ಲಾಳ ಭೂಪೋತ್ತಮ
ಪ್ರಿಯಪುತ್ರಂಗೆ ಕುಮಾರಲಕ್ಷ್ಮ ರಥಿನೀನಾಥಂಗೆ ಕೊಟ್ಟಳ್ ಮನಃ
ಪ್ರಿಯೆಯೀ ಸುಗ್ಗಲದೇವಿ ಭಾಷೆಯನಿಳಾಚಕ್ರಂ ಪೊಗೞ್ವನ್ನೆಗಂ ॥ **960** ॥

ಮ ವಿ ॥ ಎಡಗಾಲೊಳ್ ತೊಡರಂ ತೊಡರ್ಚಿ ಪತಿಯ ಬೆಳ್ಮಾಡಿ ನಿನ್ನೊಂದು ಪಿಂ
ಬಡಿನೊಳ್ ನಿಲ್ವವಳಲ್ಲೆನೆಂದು ಸುಖದಿಂದುಂಡುಟ್ಟು ಕಾಲಂ ಕೞ
ತ್ತಡಸಲ್ ಪುಚ್ಚೞವನ್ಯಕಾಮಿನಿಯರಂ ಜೋಡಾಡುವಂತಿಕ್ಕಿದಳ್
ತೊಡರಂ ಸುಗ್ಗಲದೇವಿ ತಂನೆಡದ ಪಾದಾಂಭೋಜದೊಳ್ ಲೀಲೆಯಿಂ
॥ **961** ॥

ಸಾವಿರ ಭಟರು

ಚಂ ಮಾ ॥ ಧರೆಗೆ ನೆಗೞ್ತೆವೆತ್ತೆಸೆವ ಶಕ್ತಿಗೆ ಶೂದ್ರಕ ಭೂಭುಜಂಗೆ ಭಾ
ಸುರಮೆನೆ ಭಾಷಿತಂ ನೆಱಪುವಗ್ಗದ ಬೀರರದಯ್ವವರಯ್ವದಿಂ

ಬರೆ ಸುಭಟೋತ್ತಮರ್ಕ್ಕುವರಲಕ್ಷ್ಮಚಮೂಪತಿಗಿತ್ತು ಭಾಷೆಯಂ
ಧರೆ ಪೊಗೞ್ವನ್ನೆಗಂ ನೆಱಪುವಗ್ಗದ ಪೀರರದೊಂದು ಸಾಸಿರಂ ॥ 962 ॥

ಕಂ ॥ ತೊೞೆದಾಳ್ದನೊಡನೆ ಸಾಯದೆ
ಪೆಱಗುಳಿದಂತೊೞೆದು ಸತ್ತವನ ವೇಳೆ ದಲಾ
ವೞವೆವದನೆಂಬ ಗಂಡರೆ
ತೊೞೆದರ್ಕ್ಕಲಿ ಕುವರಲಕ್ಷ್ಮನೊಡನತಿಸುಭಟರ್ ॥ 963 ॥

ಕುವರಲಕ್ಷ್ಮ

ಚಂ ಮಾ ॥ ನಿಱಸಿದ ವೀರಶಾಸನದ ಕಲ್ ದೊರೆವೆತ್ತ ಯಶೋಂನತಿಕ್ಕೆಯಂ
ನಿಱಸಿದುದಷ್ಟದಿಗ್ವಳಯದೊಳ್ ದೊರೆಯಾವನೊ ಪೂಣ್ದ ಪೂಣ್ಕೆಯಂ
ನೆಱಪುವ ಬಲ್ಪಿನೊಳ್ ಕುವರಲಕ್ಷ್ಮಚಮೂಪತಿಯಂನನೆಂದು ತಂ
ನೆಱಕದೆ ಬಂಣಿಕುಂ ಧರಣಿ ಹೊಯ್ಸಳರಾಯನ ಗಂಧಹಸ್ತಿಯಂ ॥ 964 ॥

ಚಂ ಮಾ ॥ ಒಡದೊೞೆದಾಳ್ದನುಳ್ಳೊಡಮೆಯಂ ಕವರ್ದಾದದೆಡಱಲ್ಲಿ ತಂಮ ನಾ
ಣಡಿಗಿಡೆ ಕೊಟ್ಟ ಭಾಷೆಗೊದವಲ್ಕಣಮಾರದೆ ಪಿಂತೆ ಬಾೞ್ವ ನಿ
ಗ್ಗಡಿ ಸಚಿವರ್ಕ್ಕಳಂ ನಗುವವೋಲೆಸೆದಿರ್ಪ್ಪುದು ವೀರಶಾಸನಂ
ಪೊಡವಿಯೊಳೆಂದೊಡಾರ್ದ್ದೊರೆ ಯದುಕ್ಷಿತಿಪಾಳನ ಮಂತ್ರಿ ಲ್ಕ್ಷ್ಮನೊಳ್
॥ 965 ॥

ಶಾಸನ ಸ್ತಂಭ

ಕಂ ॥ ಇಲ್ಲದ ಸಲ್ಲದ ಭಾಷೆಗೆ
ಕಲ್ಲಂ ನಿಱಸುವರನುಱದೆ ನಗುವವೊಲಿರ್ಕ್ಕುಂ
ಪಲ್ಲವಿಸಿ ಕುವರಲಕ್ಷ್ಮನ
ಕಲ್ಲ ಕವಲ್ತೆಸೆವ ಕಾನ್ತಿ ದಿಗ್ಭಿತ್ತಿಗಳೊಳ್ ॥ 966 ॥

ಕಂ ॥ ದೊರೆ ಪತಿಭಕ್ತಿಗೆ ತನ್ನೊಳ್
ಗರುಡಂ ಗರುಡಂಗೆ ತಾನೆ ದೊರೆ ಪೆಱರಾರುಂ
ದೊರೆಯಲ್ಲರೆಂಬ ತೆಱದಿಂ
ದೊರೆಯಾದುವು ತಂನ ಗರುಡನೆಸೆವಾಕೃತಿಗಳ್ ॥ 967 ॥

ಕುವರ ಲ್ಕ್ಷ್ಮ

ಕಂ ॥ ವೀರದ ಶಾಸನಮಂ ಮು
ನ್ನಾರುಂ ನಿಱಸಿದವರಿಲ್ಲ ಬಲ್ಲಾಳ ಧರೀ

ಶ್ರೀರಮಣನ ಮಂತ್ರಿವರಂ
ವೀರಭಟಂ ಕುವರಲಕ್ಷ್ಮ ದಂಡೇಶನವೋಲ್ ॥ 968 ॥

ಕಂ ॥ ತಂನೊಡನೆ ತೊಱೆದ ಸುಭಟರ
ತಂನ ಮನಃಪ್ರಿಯೆಯ ತಂನ ಪರಮಾಯುಷ್ಯಂ
ತಂನಾಳ್ದಂಗಾಯ್ತೆನಿಸಿದ
ನೇಂ ನೆಟ್ಟನೆ ಕಲಿಯೊ ಕುವರಲಕ್ಷ್ಮ ಚಮೂಪಂ ॥ 969 ॥

ಉ ಮಾ ॥ ಆರ ಮನಕ್ಕೆ ವೀರರಸಮಚ್ಚರಿಯಾಗಿರಲುಣ್ಮೆ ಪೊಣ್ಮದೊ
ಲ್ದಾರ ಮನಕ್ಕೆ ಹರ್ಷಪುಳಕಂ ತನುವಿಂ ಪೊಱಪೊಣ್ಮದೀಕ್ಷಿಪಂ
ದಾರ ಮನಕ್ಕೆ ಭೀತಿಯೊದವಾಗದು ನಿನ್ನಯ ಪೂಣ್ಕೆ ರಾಯಸಾ
ಧಾರ ಕುಮಾರಲಕ್ಷ್ಮ ರಥಿನೀಶ್ವರ ಭಾವಿಸುವಂದು ನಾಡೆಯುಂ ॥ 970 ॥

ಉ ಮಾ ॥ ಭಾಸೆಗೆ ತಪ್ಪುವಂಕದ ನೆಗಟ್ತೆಯ ಲೆಂಕರಗಂಡನೆಂಬುದಂ
ಬೀಸರಮಾಗದುದ್ಧರಿಪೊಡೇ ತೊದಳುದ್ಧರಿಪಂ ವಿರೋಧಿ ಸಂ
ತ್ರಾಸಿತ ವಿಕ್ರಮಂ ಕುವರಲಕ್ಷ್ಮಚಮೂವರನೊಲ್ದ ಮಾಟ್ಕೆಯಿಂ
ಭಾಸೆಯನಿತ್ತು ಪುಚ್ಚೞಿವರಲ್ಲದೆ ಭಾಸೆಯನುದ್ಧರಿಪ್ಪರೇ ॥ 971 ॥

ಮ ವಿ ॥ ಇದು ಬಲ್ಲಾಳ ನೃಪಾಳಕಂಗೆ ಪಿರಿದುಂ ನಿತ್ಯತ್ವಮಂ ಮಾಡ್ಪುದ
ಭ್ಯುದಯಕ್ಕಾಗರಮೆಂದು ಬಂಣಿಸೆ ಜಗಂ ಭಾಸ್ವತ್ ಶಿಲಾಸ್ತಂಭಮಂ
ಸದಳಂಕಾರದ ವೀರಶಾಸನಮನೀ ದಂಡೇಶ ಲ್ಕ್ಷ್ಮೀವರಂ
ಸುದತೀ ಸಂಯುತಮೇಱಿದಂ ಪತಿಹಿತವ್ಯಾಪಾರಮಂ ತೋಱಿದಂ ॥ 972 ॥

164) ಕುಮಾರನಹಳ್ಳಿ 463, E.C. IX (R), ಕ್ರಿಶ. 1223

ಇದರಲ್ಲಿ ಹೊಯ್ಸಳರ ದೊರೆ ಎರಡನೆಯ ನರಸಿಂಹನ ಆಳಿಕೆಯಲ್ಲಿ ಭಟ್ಟೋಪಾಧ್ಯಾಯ ಎಂಬುವವನು ಕುಮಾರನಹಳ್ಳಿಯಲ್ಲಿ ಶಿವಾಲಯವೊಂದನ್ನು ಕಟ್ಟಿಸಿದುದನ್ನೂ ವರದ ಸಿದ್ಧಮಲ್ಲಿಕಾರ್ಜುನ ದೇವರನ್ನು ಪ್ರತಿಷ್ಠೆ ಮಾಡಿಸಿದುದನ್ನೂ ಹೇಳಿದೆ.

ಏಚಲದೇವಿ

ಕಂ ॥ ಆ ನರಪತಿಗಂಭೋಧಿಗ
ನೂನ ಗಭೀರತೆಯೆ ಸಮನಿಸಿಪ್ಪಂತಿರೆ ಸ
ನ್ಮಾನಿನಿ ಯೇಚಲದೇವಿ ಮ
ನೋನಯನಪ್ರೀತಿ ಸಮನಿಸಿರೆ ಸಮನಿಸಿದಳ್ ॥ 973 ॥

ಬಲ್ಲಾಳ II

ಕಂ ॥ ಆತನ ತನಯನತಿ ಪ್ರ
ಖ್ಯಾತನುದಾರಂ ಸಮಸ್ತಲೋಕಾಧಾರಂ
ನೀತಿವಿದನೆಂದೊಡುಪಮಾ
ತೀತಂ ಬಲ್ಲಾಳ ಭೂಪಂ ಸಮರಾಟೋಪಂ ॥ 974 ॥

165) ಗೋಣೀಸೋಮನಹಳ್ಳಿ 420, E.C. IX (R), ಕ್ರಿಶ. 1227

ಇದರಲ್ಲಿ ಹೊಯ್ಸಳ ದೊರೆಯಾದ ಎರಡನೇ ನರಸಿಂಹನ ಆಳಿಕೆಯಲ್ಲಿ ಸೋಮಯ್ಯ, ನಾಗಯ್ಯಗಳು ಸೋಮನಾಥ ದೇವರ ಪ್ರತಿಷ್ಠೆಯನ್ನು ಮಾಡಿಸಿ, ಭೂಮಿಯನ್ನು ದತ್ತಿಯಾಗಿ ಬಿಟ್ಟಂತೆ ಹೇಳಿದೆ.

ನರಸಿಂಹ II

ಮ ವಿ ॥ ಧುರದೊಳ್ ಬಂದುಜಿದೊಡ್ಡಿ ನಿಂದರಿಬಳವ್ರಾತಕ್ಕೆ ಕಯ್ಯಾಂತು ನಿಂ
ದೆರೆದರ್ಥಿಪ್ರಕರಕ್ಕೆ ವಾರವನಿತಾನೀಕಕ್ಕೆ ಗಂಭೀರಸಾ
ಗರನೀವೀರನೃಸಿಂಹನಾಂತಿಜೀಯಲೀಯಲ್ ಸೋಲಿಸಲ್ ನೋೞ್ಪೊಡಾ
ಹರಿಪುತ್ರಂ ಹರಿಪುತ್ರನಾಹರಿಸುತಂ ತಾನೆಂದೊಡೇವಣ್ಣಿಪೆಂ ॥ 975 ॥

ಉ ಮಾ ॥ ಪಾಳಿಸಿ ಚೋಳನಂ ಮಗರನಾನೆಯನರ್ಥಮನೆಯ್ದೆ ಕೊಂಡು ನಿ
ರ್ಮೂಳಿಸಿ ಪಾಂಡ್ಯಪಲ್ಲವಮಹೀಶರನಾಳ್ವೆಸಗೆಯ್ಸಿ ಕೂಡೆ ಬಾ
ಯ್ಕೇಳಿಸಿ ಪೂರ್ವದಿಗ್ವಳಯಮಂ ಕಡಲಾಂಕೆಯದಾಗೆ ಶೌರ್ಯದಿಂ
ದೇಳಿಸಿದಂ ನೃಸಿಂಹನೃಪನಾಜಿಯೊಳಾದಿನೃಪಾಳಜಾಳಮಂ ॥ 976 ॥

166) ಹಳೇಬೀಡು 321, E.C. IX (R), ಕ್ರಿಶ. 1265

ಇದರಲ್ಲಿ ಹೊಯ್ಸಳರ ದೊರೆ ಮೂರನೆಯ ನರಸಿಂಹನ ಆಳಿಕೆಯಲ್ಲಿ ತ್ರಿಕೂಟ ರತ್ನತ್ರಯ ಶಾಂತಿನಾಥ ಜಿನಾಲಯಕ್ಕಾಗಿ ಮಾಘನಂದಿ ಸಿದ್ಧಾಂತಿಗೆ ಕಲ್ಲಂಗೆರೆಯನ್ನು ಕಾಲುವಳ್ಳಿ ಸಹಿತ ದಾನ ಕೊಟ್ಟದ್ದನ್ನು ಹೇಳಿದೆ.

ಹೊಯ್ಸಳರ ಶಾರ್ದೂಲ ಚಿಹ್ನ

ಮ ಸ್ರ ॥
ಮುದದಿಂ ಜೈನವ್ರತೀಶಂ ಶಶಕಪುರದ ಪದ್ಮಾವತೀ ದೇವಿಯಂ ಮಂ
ತ್ರದಿನೆಂತುಂ ಸಾಧಿಸಲ್ ವಿಕ್ರಿಯೆಯೊಳೆ ಪುಲಿ ಮೇಲ್ವಾಯೆ ಯೋಗೀಶ್ವರಂ ಕುಂ
ಚದ ಕಾವಿಂದಾಂತದಂ ಪೊಯ್ ಸಳ ಎನಲಭಯಂ ಪೊಯ್ದುದುಂ ಪೊಯ್ಸಳಾಂಕಂ
ಯದುಭೂಪರ್ಗಾದುದಂದಿಂದೆಸೆದುದು ಸೆಳೆಯಿಂ ಲೋಲ ಶಾರ್ದೂಲ ಚಿಹ್ನಂ
॥ 977 ॥

ವಿನಯಾದಿತ್ಯ

ಕಂ ॥ ಸತ್ಕುಲದೊಳಗಿಂದು ಮಹೀ
ಭೃತ್ಕುಲದೊಳಗಚಲ ನಾಥನೆಸೆವಂತೆಸೆದಂ
ತತ್ಕುಲದೊಳ್ ವಿಜಿತಾರಿ ಕು
ಭೃತ್ಕುಲನಾದಿತ್ಯಮೂರ್ತಿ ವಿನಯಾದಿತ್ಯಂ ॥ 978 ॥

ಎರೆಯಂಗ

ಕಂ ॥ ತದಪತ್ಯಂ ರಿಪುನೃಪ ಭುಜ
ಮದ ಮರ್ದನನಖಿಲ ವಿಬುಧ ಜನತಾ ಸೌಖ್ಯ
ಪ್ರದನುದಿತೋದಿತ ಮಹಿಮಾ
ಸ್ಪದನೆನಿಪೆಱೆಯಂಗ ಭೂಪನಂಗಜ ರೂಪಂ ॥ 979 ॥

ನರಸಿಂಹ II

ಮ ವಿ ॥ ಕಲಿ ಬಲ್ಲಾಳನ ಸೂನು ಗೆಲ್ದ ರಣರಂಗಂ ತಳ್ತ ಮುಂಡಂಗಳಿಂ
ದೆಲೆದೋಂಟಕ್ಕೆಣೆಯಾಯ್ತು ಭೇದಿಸಿದ ವೀರಾಸಾರದಿಂ ಧಾರೆವ
ಟ್ಟಲನಿಟ್ಟಂತೆವೊಲಾಯ್ತು ಭಾನುವಳಯಂ ಶ್ರೀರಾಯಭೇರುಂಡನೆ
ಕ್ಕಲಸಿಂಹಂ ನರಸಿಂಹನೇಂ ತುಱಿದನೋ ತನ್ನಾನೆಯಿಂದಾರ್ಯರಂ ॥ 980 ॥

ಸೋಮೇಶ್ವರ

ಮ ಸ್ರ ॥ ಹೊಗುಬಾ ಹಮ್ಮೀರ ಹೋ ಗೂರ್ಜರ ಹೆಱತೆಗೆ ನಿಂದಲ್ಲೆ ನಿಲ್ಲಂಧ್ರ ನಿನ್ನೋ
ಲಗವೇಱಿತ್ತಿತ್ತ ಸಾರ್ ಮಾಳವ ಕುಡು ತೆಱಹಂ ಲಾಳ ಗೌಳಂಗೆ ಮಾಣ್ ಮಾ
ತುಗಳಂ ಬಂಗಾಳ ದೇವಂ ಬೆಸಸುವ ನುಡಿಯಂ ವಂಗ ಕೇಳೆಂಬರೆತ್ತಂ
ನೆಗಟ್ದೇ ಸೋಮೇಶನಾಸ್ಥಾನದೊಳರಿ ಬಿರುದಕ್ಷತ್ರರಂ ವೇತ್ರ ಹಸ್ತರ್ ॥ 981 ॥

ನರಸಿಂಹ III

ಮ ಸ್ರ ॥ ಮುಳಿಸಿಂದಂ ಕಂಬದಿಂ ಮೂಡಿದನೆನಿಸಿದ ಡೊಂಬಿಂಗೆ ಹೇವೈಸಿ ತಾಂ ಬಿ
ಜ್ಜಳದೇವೀ ರಾಣಿಗಂ ಹೊಯ್ಸಳ ಕುಳತಿಳಕಂ ಸೋಯಿದೇವಂಗಮುರ್ವೀ
ವಳಯಂ ಬಾಪ್ಪೆಂಬಿನಂ ಪುಟ್ಟಿದನಹಿತ ಹಿರಣ್ಯಾಕ್ಷ ದೈತ್ಯೇಂದ್ರ ವಕ್ಷ
ಸ್ಥಳ ಚಂಡೋಗ್ರಾಸಿಧಾರಾ ನಖ ವಿದಳನಸಿಂಹಂ ನೃಪಂ ನಾರಸಿಂಹಂ
॥ 982 ॥

ಮ ಸ್ರ ॥ ಬಳದಿಂದಂ ಚೋಳ ಪಾಂಡ್ಯಾವನಿಪರನೊಲವಿಂ ಸ್ಥಾಪನಂಗೆಯ್ದು ಹಿಮ್ಮಾ
ಚಳದಿಂದಂ ಸೇತು ಸೀಮಾವನಿಯನಿಳೆ ಬಬಾಪ್ಪೆಂಬಿನಂ ಬಾಹು ಮೂಳ

ಸ್ಥಳದೊಳ್ ಶ್ವೇತಾತಪತ್ರಂ ತನಗಮರ್ವಿನೆಗಂ ತಾಳ್ದಿದಂ ರಾಯರೊಳ್ ಜಿ
ಜ್ಜಳದೇವೀ ನಂದನಂ x x ಕರಟಿಘಟಾಸಿಂಹನೀ ನಾರಸಿಂಹಂ ॥ 983 ॥

ಮ ಸ್ರ ॥ ಇಳೆಯೊಳ್ ತನ್ನಾಣೆ ತನ್ನುಬ್ಬಟೆಯ ವಿತರಣಂ ತನ್ನ ತೋಳ್ವಲ್ಲು ತನ್ನು
ಜ್ಜ್ವಳ ವೃತ್ತಂ ತೇಜಂ ಪಸರಿಸೆ ಧರಣೀಪಾಳರೊಳ್ ಕೀರ್ತಿಗಿಂತೇಂ
ನೆಲೆಯಾಗಿರ್ದಪ್ಪನೋ ಬಾಪ್ಪೆನೆ ಸಕಳ ಜನಂ ಸೋಯಿದೇವಾತ್ಮಜಂ ಜಿ
ಜ್ಜಳದೇವೀ ನಂದನಂ ಹೊಯ್ಸಳಕುಳಕಮಳೋತ್ತಂಸಹಂಸಂ ನೃಸಿಂಹಂ
॥ 984 ॥

ವರ್ಧಮಾನ ಮುನಿ

ಮ ವಿ ॥ ಪರಮ ಶ್ರೀ ಜಿನಶಾಸನಕ್ಕೆ ಮೊದಲಾದೀಮೂಲಸಂಘಂ ನಿರಂ
ತರಮೊಪ್ಪುತ್ತಿರೆ ನಂದಿಸಂಘವೆಸರಿಂದಾದನ್ವಯಂ ಪೆಂಪುವೆ
ತ್ತಿರೆ ಸಂದರ್ಬ್ಬಳಗಾರ ಮುಖ್ಯಗಣದೊಳ್ ಹೊಯ್ಸಾನ್ವಯಕ್ಕಿಂತಿವ
ರ್ಗ್ಗುರುಗಳ್ ತಾಮೆನೆ ವರ್ಧಮಾನಮುನಿಮುಖ್ಯರ್ದ್ಧಾರಿಣೀಚಕ್ರದೊಳ್
॥ 985 ॥

167) ಹಳೇಬೀಡು 383, E.C. IX (R), ಕ್ರಿಶ. 1266

ಇದರಲ್ಲಿ ಹೇಮಚಂದ್ರ ತ್ರೈವಿದ್ಯ ಎಂಬ ಜೈನಯತಿಯು ಸಲ್ಲೇಖನದಿಂದ ಮರಣಹೊಂದಿದುದನ್ನು ಹೇಳಿದೆ. ಈ ನಿಸಿದಿ ಸ್ಮಾರಕವನ್ನು ನಿಲ್ಲಿಸಿದ ಪಾಯ್ಯ ಎಂಬುವವನು ಸಲ್ಲೇಖನದಿಂದಲೇ ಮರಣಿಸಿದನೆಂದು ಹೇಳಿದೆ.

ತಿಪ್ಪಣ

ಮ ವಿ ॥ ಅಸಮಾನಾಮಳ ಜೈನಧರ್ಮವಿತತಾಂಭೋರಾಶಿಸಂವರ್ದ್ಧನ
ಕೆ ಸುಧಾದೀಧಿತಿಯೆಂಬ ಬಬ್ಯಸುಹೃದರ್ತ್ಥಿಬ್ರಾತ ಸಂಕಲ್ಪಿತ
ಪ್ರಸರಾಮರ್ತ್ತ್ಯ ಕುಜಾತನೆಂದು ಸಲೆ ಧಾತ್ರಿಮಂಡಳಂ ಕೂಡೆ ಬ
ಣ್ಣಿಸೆ ಪೆಂಪಂ ತಳೆದಂ ಸರಸ್ವತಿ x x ಲೀಲಾದರ್ಪ್ಪಣನ್ತಿಪ್ಪಣಂ ॥ 986 ॥

ಪಾಯ್ಯ

ಕಂ ॥ ನೆನೆಯುತ್ತುಂ ಪಂಚಪದಮ
ನನೂನ ಸಲ್ಲೇಖನಾವಿಧಾನದಿನೊಡಲಂ
ಜನವಿನುತಂ ಬಿಟ್ಟಮರಾಂ
ಗನಾನನಾಂಭೋಜ ಭೃಂಗನಾದಂ ಪಾಯ್ಯಂ ॥ 987 ॥

168) ಹಳೇಬೀಡು 267, E.C. IX (R), ಕ್ರಿಶ. 1270

ಇದರಲ್ಲಿ ಹೊಯ್ಸಳರ ದೊರೆಯಾದ ಮೂರನೆಯ ನರಸಿಂಹನ ಆಳಿಕೆಯಲ್ಲಿ

ಹಾಥಿಸೆಟ್ಟಿ ಎಂಬುವವನು ದೋರಸಮುದ್ರದ ನಿಂಬಜಾದೇವಿಗೆ ದತ್ತಿಯನ್ನು ನೀಡಿದ್ದನ್ನು ಹೇಳಿದೆ.

ಹೊಯ್ಸಳ ವಂಶ

ಕಂ ॥ ಶ್ರೀಕಾಂತಾಕಾಂತೋದರ
ಕೋಕನದದೊಳೊಗೆದನೊಲ್ದು ಸೃಷ್ಟಿಗಧೀಶಂ
ನಾಕಾಧೀಶ್ವರವಂದ್ಯಂ
ಲೋಕೇಶಂ ಬ್ರಹ್ಮನಮಳಕೀರ್ತಿನಿಧಾನಂ ॥ 988 ॥

ಚಂ ಮಾ ॥ ವನಜಜನೋತು ಮಾನಸಸುಪುತ್ರರನತ್ಯಧಿಕಪ್ರಸಿದ್ಧರಂ
ಮನದನುರಾಗದಿಂದೆ ಪಡೆದಂ ನವಸಂಖ್ಯೆಯಿನಲ್ಲಿಯತ್ರಿಯೆಂ
ಬನುಪಮಪುಣ್ಯಪುಂಜನುದಿತೋದಿತವಿಕ್ರಮನುದ್ಧತೇಜನಾ
ತನ ನಿಜಕೀರ್ತಿ ವರ್ತಿಸೆ ಪಿತಾಮಹನಿಂದಧಿಕಂ ತ್ರಿಲೋಕದೊಳ್ ॥ 989 ॥

ಉ ಮಾ ॥ ಆ ಸರಸೀಜಸಂಭವನ ಮಾನಸನಂದನನತ್ರಿಯೊರ್ಮೆ ಕಂ
ಜಾಸನವಿಷ್ಣುರುದ್ರರನುಪಾರ್ಜಿಸೆ ಮೆಚ್ಚಿಯವರ್ ಪ್ರಸನ್ನರಾ
ದಾ ಸಮಯಾನುರಾಗದೊಳೆ ನೀವೆನಗಾತ್ಮಜರಾಗಿಮೆಂದೆನಲ್
ಭಾಸುರತೇಜರುದ್ಭವಿಸಿದರ್ ತ್ರಿಜಗನ್ನುತಕೀರ್ತಿಭಾಜನರ್ ॥ 990 ॥

ಕಂ ॥ ಹರಿ ದತ್ತಾತ್ರೇಯನುಮಾ
ವರನೇ ದೂರ್ವಾಸನಬ್ಜಜಂ ಚಂದ್ರಂ ಭಾ
ಸುರಚಿತ್ತತಮದ್ಯಗುದ್ಭವ
ರುರುತೇಜಃಪುಂಜರಾದರತ್ರಿಗೆ ಪುತ್ರರ್ ॥ 991 ॥

ಸ್ರಗ್ಧರೆ ॥ ಆ ಮೂವರ್ ದೇವರಂಶೋದ್ಭವರೊಳಗಧಿಕಂ ಚಾರುತಾರಾಳಿಶೋಭಿ
ವ್ಯೋಮಾಧೀಶಂ ಚಕೋರೀಚಯಹೃದಯಸುಖಾನಂದಕಂದಂ ತ್ರಿಣೇತ್ರೋ
ದ್ದಾಮೋದ್ಯಜ್ಜೂಟದೇಶೋಜ್ಜ್ವಳರುಚಿರಸುಧಾರೋಚಿದಿಗ್ವ್ಯಾಪಿ ಚಂದ್ರಂ
ಭೂಮೀಶೋತ್ಪತ್ತಿಯಾಯ್ತಾತನ ಪೆಸರೆಸೆವಿಂ ಸೋಮವಂಶಾವತಾರಂ
॥ 992 ॥

ಕಂ ॥ ತಾರಾಧೀಶತನೂಭವ
ನಾರಿಂದಂ ಚೆಲ್ವನಾಗಿ ಸೌಮ್ಯನೆನಿಪ್ಪಂ
ಧಾರಿಣಿಯಂ ರಕ್ಷಿಸಲು ಪು
ರೂರವನಂ ಪಡೆದನವನಿಗವನೇ ದೇವಂ ॥ 993 ॥

ಉ ಮಾ ॥ ಚಾರುಪುರೂರವೋರ್ವಿಪನ ನಂದನನಾಯುನರೇಂದ್ರನಾತನಿಂ
ಧಾರಿಣಿಪಾಲಕಂ ನಹುಷನಾ ನಹುಷಕ್ಷಿತಿನಾಥನಾತ್ಮಜಂ
ಶೂರಯಯಾತಿಭೂಭುಜ x x ಕುತೂಹಳನಬ್ಧಿವೇಷ್ಟಿತೋ
ದಾರಧರಿತ್ರಿವಿಸ್ತೃತಯಶಂ ಪಡೆದಂ ಯದುವೆಂಬ ಚಕ್ರಿಯಂ ॥ 994 ॥

ಉ ಮಾ ॥ ಆ ಯದುವಂಶದೊಳ್ ವಿವಿಧ ವೀರದ ಚಾಗದ ಭೋಗದೊಳ್ವಿನಾ
ಖ್ಯಾಯಿಕೆ ತನ್ನೊಳೊಪ್ಪೆ ಧರಣೀಭರಮಂ ಭುಜದಲ್ಲಿ ತಾಳ್ದಿಕೊಂ
ಡಾಯತಚಿತ್ತದಿಂ ಜಗಮನುದ್ಧರಿಸುತ್ತತಿತೇಜದೆಟ್ಟರಂ
ಸ್ಥಾಯಿಯೆನಲ್ಕೆ ವಿಕ್ರಮದಿನಾಳ್ದನಿಳಾತಳಮಂ ಸಳೋರ್ವಿಪಂ ॥ 995 ॥

ಕಂ ॥ ಶ್ರೀಸಂಪತ್ತಿಯ ಶಶಪುರ
ವಾಸಂತೀವಾಸದಲ್ಲಿ ಸಿದ್ಧಮುನೀಂದ್ರಂ
ಲೇಸೆನೆ ಸಳಂಗೆ ವಿದ್ಯಾ
ಭ್ಯಾಸಂಗೆಯ್ಯುತ್ತುಮಿರ್ದನಿರ್ಪನ್ನೆವರಂ ॥ 996 ॥

ಚಂ ಮಾ ॥
ಅಳವಿಯೊಳೆಟ್ಟಿ ಪಾಯ್ವ ಪುಲಿಯಂ ಮುನಿ ಹೊಯ್ ಸಳ ಎಂದ ತತ್ ಕ್ಷಣಂ
ಸೆಳೆಯೊಳಡುರ್ತು ಪೊಯ್ದು ಸೆಳೆಯಂ ನೆಗಪಲ್ಕತಿಚಿತ್ರಮಾದುದಾ
ಸೆಳೆಗೊನೆಯಲ್ಲಿ ನೇಲ್ವ ಪುಲಿಯೆತ್ತಿದ ಸಿಂದವೆನಲ್ಕೆ ಕೀರ್ತಿಯಂ
ತಳೆದ ಸಳಂಗೆ ಹೊಯ್ಸಳವೆಸರ್ ಪ್ರಕಟೀಕೃತಮಾಯ್ತು ಲೋಕದೊಳ್ ॥ 997 ॥

ನರಸಿಂಹ II

ಶಾ ವಿ ॥ ಶ್ರೀ ಸೋಮೇಶ್ವರ ಚಕ್ರಿಗಂ ವರಜಯಶ್ರೀಬಿಜ್ಜಲಾರಾಣಿಗಂ
ಭೂ ಸೌಭಾಗ್ಯ ನಿಧಾನನೂರ್ಜ್ಜಿತಬಳಂ ಶ್ರೀ ನಾರಸಿಂಹಂ ಜಯಾ
ವಾಸಂ ವಾಸವತೇಜನುದ್ಭವಿಸಿದಂ ಸಾಹಿತ್ಯಸರ್ಬ್ಬಜ್ಞನೆಂ
ಬಾ ಸಂಪತ್ತಿ ಧರಿತ್ರಿಯೊಳ್ ಪಸರಿಸಲ್ ವೀರಾವತೋರೋರ್ವ್ವಿಪಂ ॥ 998 ॥

169) ಕಟ್ಟೇಸೋಮನಹಳ್ಳಿ 431, E.C. IX (R), ಕ್ರಿಶ. 1276

ಈ ವೀರಗಲ್ಲು ಶಾಸನದಲ್ಲಿ ಹೊಯ್ಸಳರ ದೊರೆಯಾದ ಮೂರನೆಯ ನರಸಿಂಹನ ಆಳಿಕೆಯಲ್ಲಿ ಸೇವುಣ ರಾಮದೇವನ ಸೇನಾಪತಿ, ಸಾಳುವ ತಿಕ್ಕಮನು ಸೈನ್ಯದೊಡನೆ ಬಂದು ಬೆಳವಾಡಿಯಲ್ಲಿ ನೆಲೆಸಿರಲು ಚಿಕ್ಕಕೇತಯ ದಣ್ಣಾಯಕನ ಮಗ ಅಂಕೆಯನಾಯಕನು ಅವನೊಡನೆ ಯುದ್ಧ ಮಾಡಿ ಮರಣಿಸಿದನೆಂದು ಹೇಳಿದೆ.

ಅಂಕೆಯನಾಯಕ

ಉ ಮಾ ॥ ದೋರಸಮುದ್ರಮಂ ನಿಮಿಷಮಾತ್ರದಿಂ ಕೊಂಡಪೆನೆಂದು ಸಾಳುವರ
ವೀರನ ವಿಜಯದೇವ ಹರಿಪಾಳನಿರುಂಗುಳ ಸೇನೆಯಿಂದೆ ತಾಂ
ಭೋರನೆ ಬಂದು x x ವನು ಮತ್ತೆ ಚಮೂಧರ ಚಿಕ್ಕಕೇತಣಂ
ವೈರಿಯನಾವಗೆಲ್ವನೆನೆ ಅಂಕನು ತಾಂ ನುಡಿದಂ ಸಮಗ್ರದಿಂ ॥ 999 ॥

ಕಂ ॥ ಹೊಸಬಿರುದರ ಗಂಡಂ ನಾ
ಲ್ದೆಸೆಗಂ ಕವಿತರ್ಪ ಸೇವುಣರ ಸೈನ್ಯಕಮಂ
ದೆಸೆವಲಿಗೆಯ್ದಂ ಪೊಯ್ದಂ
ವಸುಧಾತಳದಲ್ಲಿ ವೀರಭಟರುರುಳ್ವಿನೆಗಂ ॥ 1000 ॥

ಚಂ ಮಾ ॥ ಕಿಡಿ ಕಿಡಿ ಸೂಸೆ ಮಸ್ತಕದ ಸಿಪ್ಪುಗಳಾಗಳೆ ಪಾಜೆ ವಾಜಿಗಳ್
ಕಡಿಕಡಿಯಾಗೆ ನೆತ್ತರ ಕಡಲ್ ಪರಿಯಲ್ ಕಲಿಯಂಕನೇಜಿ ಪೊ
ಯ್ದೊಡೆ ಹರಿಪಾಳನಳ್ಕಿದನು ಸಾಳುವನೋಡಿದನೇವೆನೆಂದು ಬಾ
ಯ್ವಿಡುತುಮೆ ಜೇಯಿದೇವನನುವಿಲ್ಲದೆ ಮೆಯ್ದೆಗೆದಂ ಮಹಾಜಿಯೊಳ್
॥ 1001 ॥

170) ಬೇಲೂರು 131, E.C. IX (R), ಕ್ರಿ.ಶ. 1276

ಈ ವೀರಗಲ್ಲು ಶಾಸನದಲ್ಲಿ ಹೊಯ್ಸಳರ ದೊರೆಯಾದ ಮೂರನೆಯ ನರಸಿಂಹನ ರಾಜಧಾನಿ ದೋರಸಮುದ್ರದ ಮೇಲೆ ಸೇವುಣದಳ ಮುಖ್ಯನಾದ ತಿಕ್ಕಮನೆನ್ನುವವನು ಆಕ್ರಮಣ ಮಾಡಿದಾಗ ಅವನನ್ನು ಎದುರಿಸಿ ಯುದ್ಧದಲ್ಲಿ ಸಾವನ್ನಪ್ಪಿದ ಖಂಡೇರಾಯ ರಾಣೆಯ ಶೌರ್ಯವನ್ನು ವರ್ಣಿಸಿದೆ.

ಖಂಡೇರಾಯ ರಾಣೆ

ಮ ಸ್ರ ॥
ಅದಟಿಂದಂ ಸಾಳುವಂ ಸೇವುಣ ನೃಪತಿಗಣಂ ಬಾಸೆಗೊಟ್ಟೆಯ್ದೆ ಬಂದು ಶ್ರೀ
ಮದದೋರಾಂಬೋಧಿಯಂ ಮುತ್ತಿದಂದು x x ಕಳಕ್ಕೆಯ್ದಿಮಾಜಿಾಂತು ಪೊಯ್ದಂ
ಯದುರಾಯಂ ನಾರಸಿಂಹಂ ಪೊಗಳ್ವಿನಂ ಸುಭಟಂ ಗೋಪನುದ್ಯನ್ಮದೇಭಂ
ಮದದಿಂದೀರಾಜಿಸಾಸಿರ್ಕುದುರೆಯ ದಳಮಂ ದುಮ್ಮಿಮಟ್ಟಟ್ಟಿ ಕೊಂದಂ ॥ 1002 ॥

ಕಂ ॥ ಅತಿಬಳದೆ ಮಾರರಾಣೆಯ
ಸುತ ಸಿಂಗನ ಕುವರ ರಾಣೆಯಂ ಪೊಣರ್ದಿಜಿಯ
ಲ್ಕೈತರೆ ಕೋಟಿಭಟರ್ಕ್ಕ
ಳ್ಮತಖಂಡೋಚ್ಚಂಡಮಾಗಿ ಪಂದಲೆಗೆ ಕೊಟ್ಟರ್ ॥ 1003 ॥

ಉ ಮಾ ॥ ಅಟ್ಟಿದ ಮುಟ್ಟಿದಂತಿಱಿದ ಸಾಳುವನಂ ಹರಿಪಾಳನೇಱಿಲಾ
ಘಟ್ಟುಮನೊಕ್ಕಲಿಕ್ಕಿದನು ವೋವದೆ ಕಾಯ್ದು ಕಡಂಗಿ ಪೊಯ್ದುರಿ
ಗೊಟ್ಟನನುಯ್ಯೆ ದೇವತತಿ ಖಂಡೆಯರಾಯನು ಸಿಂಗನಾತ್ಮಜಂ
ನೆಟ್ಟನುಯೆ x x ದ್ಭುತ ಮಸೆದ ರಾಣೆಯನಾಂತಿಱಿಯಲ್ಕೆಯಾಜಿಯೊಳ್ ॥ 1004 ॥

ಖಂಡೆಯರಾಯನ ರಾಣಿ

ಚಂ ಮಾ ॥ ಧೊರೆಧೊರೆಯೆಂದ ಮೂದಲಿಸಿ ಬಿಟ್ಟಡೆ ಖಂಡೆಯರಾಯರಾಣೆಯಂ
ಧುರಗಲಿ ಪೊಯ್ದುಡಾಹವದೊಳಟ್ಟಿಗಳಾಡಿದವೆಯ್ದೆ ಬಲ್ವೆಣಂ
ಮೊರೆದವು ನೆತ್ತರೆಂಟು ದೆಸೆಗಂ ಕಳಿಲಾದುದು ಖಂಡದಿಂಡೆಗ
ಳ್ಪರಿದವು ಕಾಳಿಜಂ ಕರುಳ ಮಾಲೆಗಳುರ್ವ್ವಿದವೆತ್ತಸೋಳ್ವೊಡಂ ॥ 1005 ॥

171) ಬಸ್ತಿಹಳ್ಳಿ 405, E.C. IX (R), ಕ್ರಿಶ. 1279

ಇದರಲ್ಲಿ ಅಭಯಚಂದ್ರಸಿದ್ಧಾಂತ ದೇವರಿಗೆ ದೋರಸಮುದ್ರದ ನಕರಗಳು (ವರ್ತಕರು) ನಿಸಿದಿಗೆಯನ್ನು ಮಾಡಿಸಿದರೆಂದು ಹೇಳಿದೆ.

ಮಾಘನಂದಿ

ಉ ಮಾ ॥ ಇಂತು ಪೊಗಟ್ತೆವೆತ್ತ ಯತಿಸಂತತಿಯೊಳ್ಕುಳಭೂಷಣಾಖ್ಯ ಸೈ
ದ್ಧಾಂತಿಕ ಶಿಷ್ಯನೂರ್ಜಿತ ಜಿನಾಲಯಕಾರಕನಿಂಬದೇವ ಸಾ
ವಂತನ ಸುಬ್ರತಕ್ಕೆ ಗುರು ವಾಗ್ವನಿತಾಪತಿ ಮಾಘನಂದಿ ಸೈ
ದ್ಧಾಂತಿಕ ಚಕ್ರವರ್ತಿವೆಸೆದಂ ವಸುಧಾಪತಿ ರಾಜಪೂಜಿತಂ ॥ 1006 ॥

ಚಾರುಕೀರ್ತಿ ಪಂಡಿತ

ಕಂ ॥ ಧವಳಯಶೋನೀರಂಜಿತ
ಭುವನಂ ಕವಿಗಮಕಿವಾದಿವಾಗ್ಮಿವಿತಾನ
ಪ್ರವರಂ ಸಾರ್ಥಕನಿಜನಾ
ಮವಿಳಾಸಂ ಚಾರುಕೀರ್ತಿಪಂಡಿತದೇವಂ ॥ 1007 ॥

ಸಮುದಾಯದ ಮಾಘನಂದಿ

ಕಂ ॥ ಕುಮತೌಘನಿವಾರಕನಂ
ನಮಸ್ಕರಿಪ್ಪೆಂ ಜಿನಾಗಮೋದ್ಧಾರಕನಂ
ವಿಮಳದಯಾಧಾರಕನಂ
ಸಮುದಾಯದ ಮಾಘನಂದಿಭಟ್ಟಾರಕನಂ ॥ 1008 ॥

ಅಭಯಚಂದ್ರ

ಮ ವಿ ॥ ಸವಿಶೇಷಾಗಮವಾಕ್ಸುಧೌಷಧಮನೀಂಟಲ್ ಕೊಟ್ಟಕಾರ ತ್ರಿದೋ
ಷವಿಕಾರಂಗಳನೆತ್ತಿ ಕಿಟ್ಟು ವಿಳಸದ್ರತ್ನತ್ರಯಂ ರಕ್ಷೆಯಾ
ಗೆ ವಿನೇಯಾಳಿಗೆ ಕಟ್ಟಿ ರಕ್ಷಿಸಿದನೀಸಿದ್ಧಾಂತಚಕ್ರೇಶನೇಂ
ಭವರೋಗಕ್ಕೆ ಸುವೈದ್ಯನೋ ಅಭಯಚಂದ್ರಂ ಬಾಳಚಂದ್ರಾತ್ಮಜಂ ॥ **1009** ॥

ಮ ವಿ ॥ ಅಱಿದಾತ್ಮೀಯಸಮಾಧಿಯಂ ತೊಱೆದು ಸರ್ವಾಹಾರಮಂ ದೇಹಮಂ
ಮೆಱೆದಕ್ಷೋಭತೆಯಂ ಜಗಂ ಪೊಗೞೆ ಪರ್ಯಂಕಾಸನಪ್ರಾಪ್ತಿಯಿಂ
ನೆಱೆದಾತ್ಮೋದ್ಭಕಳಾಂಶುವಂ ದಿವದೊಳಂ ತೋರ್ಪೆಂ ದಲೆಂಬಂದದಿಂ
ತಱಿಸಂದಂ ಸುರಮಂದಿರಕ್ಕಭಯಚಂದ್ರಂ ರುಂದ್ರಸೈದ್ಧಾಂತಿಕಂ ॥ **1010** ॥

172) ಬಸ್ತಿಹಳ್ಳಿ 403, E.C. IX (R), ಕ್ರಿಶ. ಸು. 12–13ನೇ ಶತಮಾನ

ಇದರಲ್ಲಿ ಹೆಗ್ಗಡೆ ಮಲ್ಲಿಮಯ್ಯ ಎಂಬುವವನು ಮಲ್ಲಿನಾಥನ ಸಮವಸರಣ ಪ್ರತಿಮೆಯನ್ನು ಪ್ರತಿಷ್ಠಾಪಿಸಿ, ದತ್ತಿಯನ್ನು ಕೊಟ್ಟದ್ದನ್ನು ಹೇಳಿದೆ.

ಜಿನಮುನಿಗಳ ಪ್ರಶಸ್ತಿ

ಕಂ ॥ ಮುನಿಜನದೋದಿಸಿದೋಜೆಯ
ನನುವದಿಪುದಿದೊಂದೆ ಕೊಂಡಕುಂದಾನ್ವಯ ನ
ನ್ದನವನಶುಕವೆಂದೆನಗಿನಿ
ತನನುಗ್ರಹಂಗೆಯ್ಗೆ ಕರುಣದಿಮ್ಮುನಿನಿವಹಂ ॥ **1011** ॥

ಕಂ ॥ ಶ್ರೀಮಜ್ಜಿನಧರ್ಮ್ಮ ಶ್ರೀ
ಧಾಮಂ ಶಕ್ತಿತ್ರಯ ಪ್ರವರ್ದ್ಧಿತ ವಿಷ್ಣು
ಶ್ರೀ ಮುಖ್ಯಂ ರತ್ನತ್ರಯ
ಭೂಮಿ ಮಹಾಮಾನ ಮೇರುಶೃಂಗಂ ॥ **1012** ॥

173) ಬೇಲೂರು 144, E.C. IX (R), ಕ್ರಿಶ. 1397

ಇದರಲ್ಲಿ ವಿಜಯನಗರದ ರಾಜನಾದ ಎರಡನೆಯ ಹರಿಹರನ ಮಂತ್ರಿ ಗುಂಡದಂಡಾಧಿಪನು ಬೇಲೂರು ಚನ್ನಕೇಶವ ದೇವಸ್ಥಾನದಲ್ಲಿ ದೇವರ ಸೇವೆಗೆ ಏರ್ಪಾಡು ಮಾಡಿ, ಕಲ್ಲುಬರಗೆಯ ತುರುಕ ಗಂಗಸಲಾರನು ಮುರಿದು ಸುಡಿಸಿದಂಥ ಆ ದೇವಸ್ಥಾನದ ಬಾಗಿಲುವಾಡದ ಗೋಪುರವನ್ನು ಏಳುನೆಲೆಯಾಗಿ ಮಾಡಿಸಿದಂತೆ ಹೇಳಿದೆ.

ಗುಂಡದಂಡಾಧಿಪ

ಮ ಸ್ರ ॥ ಧುರಧೀರಂ ಗುಂಡದಂಡಾಧಿಪನ ನಿಜಯಶಃಕಾಂತೆ ಭೂಭಾಗದೊಳ್ ಮ
ತ್ಸರದಿಂದಂ ಶ್ರೀವಧೂಸಂಗಮನುಱಿದೊಲವಿಂದಂ ದಿಶಾಚಕ್ರದೊಳ್ ಡಾ
ವರಿಸಲ್ಕಾಕಾಂತೆಯಂ ಭಾರತಿ ಜಗದ ಕಪಿವ್ರಾತಜಿಹ್ವಾಳಿಯೊಳ್ ತ
ತ್ತಿರು ನೀನೆಂದೊಲ್ದು ಸಂತೈಸಲು ನಟವಿಧದಿಂ ನೃತ್ಯವಾಡುತ್ತುಮಿರ್ಪಳ್ ॥ 1013 ॥

ಮ ಸ್ರ ॥ ಭರದಿಂದಂ ರೌದ್ರಸಂಗ್ರಾಮದೊಳಹಿತರ ಬೆಂಬತ್ತಿ ಪೊಯ್ಯಲ್ಕೆ ಬಿಟ್ಟರ್
ತುರಗಂ ರೌತರ್ ಗಜಂ ಜೋದರು ಬಹಳಪದಾತಿಪ್ರತಾನಂ ಧರಾಧೀ
ಶ್ವರರೊಂದೇ ತಾಣದೊಳ್ ಮಾರಿಗೆ ಮನದೊಲವಿಂದಿಟ್ಟಗಲ್ ತಾನದೆಂಬಂ
ತರರೇ ಶ್ರೀಗುಂಡದಂಡಾಧಿಪನ ಬಹಳಬಾಹಾಬಳಕ್ಕಾಂಪನಾವಂ ॥ 1014 ॥

ಕಂ ॥ ಧುರದೊಳ್ ಗುಂಡಾಮಾತ್ಯಂ
ನರಮೇಧವ ಮಾಡದುಱಿಯನೆಂದೆನಲಾಭೀ
ತರು ಮರನನೇಱಿ ಹೂವಿನ
ತಱುವಾಯ್ ತಱುವಾಯೆನುತ್ತುಮಿರ್ದರ್ಅರದೇನೋ ॥ 1015 ॥

ಸಕಲೇಶಪುರ ತಾಲ್ಲೂಕು

174) ರಾಜೇಂದ್ರಪುರ 36, E.C. V, part II (Rice), ಕ್ರಿಶ. ಸು 1030

ಇದರಲ್ಲಿ ವಾಮಶಿವದೇವನ ಮಗ ಚಾಮನ ಸ್ತುತಿರೂಪವಾದ ಪದ್ಯಗಳಿವೆ.

ಕಂ ॥ ಶ್ರೀಮಚ್ಛಶಾಂಕಧರಸ
ತ್ಕೋಂಳಪದಪದ್ಮಭೃಂಗನಘರಿಪುಸಿಂಗಂ
ವಾಮಶಿವದೇವಪುತ್ರಂ
ಚಾಮಂ ಕಾದಂಬರಾಜ್ಯಮೂಳಸ್ತಂಭಂ ॥ 1016 ॥

ಕಂ ॥ ಅಳವಱಿವು ನನ್ನಿ ಪೆಂಪ
ಸ್ಖಳಿತಗುಣಂ ಪತಿಹಿತಿಕ್ಕೆಯೆಂಬಿವು ತನ್ನೊಳ್
ಬಳೆದು ಪುದಿದಿರೆ ಸುಪುತ್ರಃ
ಕುಳದೀಪಕ ಎನಿಸಿ ಚಾವವೆಗ್ಗಡೆ ನೆಗಟ್ದಂ ॥ 1017 ॥

ಕಂ ॥ ಶಿಷ್ಟಜನವತ್ಸಳಂ ದ
ರ್ಮಿಷ್ಟಂ ನಿಜಕುಳಪವಿತ್ರನಮಳಚರಿತ್ರಂ

ದುಷ್ಟಜನದೂರನೆಂದೀ
ಸೃಷ್ಟಿ ಸಲಲ್ ಪೊಗಟೆ ನೆಗಟೆ ಚಾವನೆ ಬಲ್ಲಂ || 1018 ||

175) ಹಳೇಬೇಲೂರು 45, E.C. IX (R), ಕ್ರಿ.ಶ. 1095

ಇದರಲ್ಲಿ ಕದಂಬರಾಜನಾದ ದಯಸಿಂಹನ ತಾಯಿ ಮೇಚಲದೇವಿ ಹಾರುವ ಬೆಲುಹೂರಲ್ಲಿ ಕೆರೆಯನ್ನು ಕಟ್ಟಿಸಿ, ದೇವಸ್ಥಾನವನ್ನು ಮಾಡಿಸಿ, ಭೂಮಿಯನ್ನು ದತ್ತಿಯಾಗಿ ಬಿಟ್ಟದ್ದನ್ನು ಹೇಳಿದೆ.

ದಯಸಿಂಹ

ಕಂ || ಆ ವಿಭುದುದ್ಧರ ಸಂಗಂ
ಶ್ರೀವಧುಗೆಣೆ ಮೇಚಲರಸಿಗಂ ಪುಟ್ಟಿದವ
ರ್ಮೂರ್ವರ್ಸ್ವರ್ತ್ಥಿಗನೃಪ
ನುರ್ವ್ವಿವರ ಚಾಗಿ ಮಹರಾಜ ದಯಸಿಂಹ ನೃಪಂ || 1019 ||

ಕಂ || ಶ್ರೀಮತ್ಕದಂಬವಂಶಶಿ
ಖಾಮಣಿ ದಯಸಿಂಹದೇವನನುಪಮಗುಣದು
ದ್ದಾಮತೆಯಂ ನೆಱೆ ಪೊಗಟಿ
ಲ್ಕೇಮಾತಜನಜಿಯನೆಂದೊಡುಟಿದವರಳವೇ || 1020 ||

ಚಂ ಮಾ || ಭುಜಬಳಗರ್ವದೊಳ್ ನೆಗಳ್ವ ಸಾಹಸಭೀಮ ಪರಾಕ್ರಮಂ ಗುಣಂ
ಬ್ರಜದೊಳ್ ಧರ್ಮ್ಮನನ್ದನನುದಾರದೊಳಗ್ಗಳ ಕರ್ಣನಿನ್ದವಂ
ಬುಜನು ಸಮಸ್ತ ವಿದ್ಯೆಯೊಳು ಭಾವಿಪಡಪ್ರತಿಮಪ್ರತಾಪನಂ
ಗಜ ಸಮರೂಪನೆಂಬುದು ಮಹೀತಳದೊಳ್ ದಯಸಿಂಹದೇವನಾ
|| 1021 ||

ಮ ವಿ || ಧುರದೊಳ್ ಬಂದುಱದೊಡ್ಡಿದಂದರಿಬಳವ್ರಾತಕ್ಕೆ ಕೆಯ್ಯಾಂತು ನಿಂ
ದೆರೆದರ್ಥಿಪ್ರಕರಕ್ಕೆ ವಾರವನಿತಾನೀಕಕ್ಕೆ ಗಂಭೀರಸಾ
ಗರನಪ್ಪಿದಯಸಿಂಹನಾಂತಿಱಯಲೀಯಲ್ ಸಾರಿಸಲ್ ಬಲ್ಲನಾ
ಹರಿಪುತ್ರಂ ಹರಿಪುತ್ರನಾಹರಿಸುತಂ ತಾನೆಂದೊಡೇವಣ್ಣಿಪೆಂ || 1022 ||

ಚಂ ಮಾ || ಸ್ತುತಿವಚನಂಗಳಲ್ದು ರಿಪುಕೋಟಿ ಗಭೀರ ಪರಾಕ್ರಮಂ ದಯಾ
ಸತಿ ಸತಿಯಪ್ಪಕಾರಣದೆ ತಾನೆ ಕೃಪಂ ಮನಮೊಲ್ದು ಬಂದವ
ರ್ಗ್ಗತಿಶಯವಾಗಲಿತ್ತು ವಿಷ x x x ಕೀರ್ತ್ತಿಯೆನಲ್ಕೆ ಬೇಱೆ ಭಾ
ರತ ಕಥೆಯೆಂಬುದೇಕೆ ದಯಸಿಂಹ ನೃಪಾಳ ಚರಿತ್ರೆ ಸಾಲದೇ || 1023 ||

ಚಂ ಮಾ ॥ ಮಿಸುಗುವ ತಾರಕಾದ್ರಿರುಚಿಯಿಂ ದುಗುಧಾರ್ಣವಫೇನರೋಚಿಯಿಂ
ದೆಸೆಗಳನಾವಗಂ ಬೆಳಗುತಿರ್ಪ ಹಿಮಾಕರಬಿಂಬದಿಂ ವಿರಾ
ಜಿಸುವಮರೇಂದ್ರದಂತಿಯ ತನುಚ್ಛವಿಯಿಂ ಮಿಗಿಲಾಗಿ ಪರ್ವಿ ರಂ
ಜಿಸುವುದು ಕೀರ್ತಿ ಧಾತ್ರಿಯೊಳಗುಜ್ವಳದಿಂ ದಯಸಿಂಹಭೂಪನಾ ॥ 1024 ॥

ಕಂ ॥ ಚತುರಾಸ್ಯಂಗಂ ನೆಗಳ್ದಹಿ
ಪತಿಗಂ ದಯಸಿಂಹ ಭೂಪನೌದಾರ್ಯ್ಯ ಗುಣೋ
ನ್ನತಿಯಂ ಪೊಗಳಲ್ಕರಿದೆನ
ಲಿತರ ನೆಜೆಪೊಗಟಿಜೆವರೀ ಜಗದೊಳ್ ? ॥ 1025 ॥

ಮೇಚಲದೇವಿ

ಕಂ ॥ ಅತಿಚತುರೋಕ್ತಿಯೊಳೆ ಸರ
ಸ್ವತಿಗಂ ಮಿಗಿಲೆನಿಸಿ ಭುವನದೊಳ್ ಧರ್ಮಗುಣ
ಪ್ರತತಿಗೆ ನೆಲೆಯಾಗಿ ಮಹಾ
ಸತಿ ಮೇಚಲದೇವಿ ಸಂತತಂ ಸೊಗಯಿಸುಗುಂ ॥ 1026 ॥

ಮೇಚಲ ಸಮುದ್ರ

ಕಂ ॥ ಸರಸಿಜ ಸಂಕುಳದಿಂದಂ
ತರದಿಂ ತುಂಬಿಗಳ ಹಂಸೆಗಳ ಬಳಗದಿನ
ಚ್ಚರಿಯೆನಿಸಿ ತೋರ್ಪ್ಪುದಿನ್ತೀ
ಧರಣಿಗೆ ಮೇಚಲಸಮುದ್ರವೆಂಬ ತಟಾಕಂ ॥ 1027 ॥

ಹಾಸನ ತಾಲ್ಲೂಕು

176) ಶಾಂತಿಗ್ರಾಮ 167, E.C. VIII (R), ಕ್ರಿ.ಶ. 1122

ಇದರಲ್ಲಿ ಹೊಯ್ಸಳ ದೊರೆಯಾದ ವಿಷ್ಣುವರ್ಧನನು ತನ್ನ ರಾಣಿ ಶಾಂತಲದೇವಿಗೆ ಸಲ್ಲುವ ಶಾಂತಿಗ್ರಾಮದ ಧರ್ಮೇಶ್ವರದೇವರಿಗೆ ಭೂಮಿಯನ್ನು ದತ್ತಿ ಬಿಟ್ಟಂತೆ ಹೇಳಿದೆ.

ಬಲ್ಲಾಳ ಮತ್ತು ವಿಷ್ಣುವರ್ಧನ

ಕಂ ॥ ಮದದಿನಿದಿರಾದ ಪಾಂಡ್ಯನ
ಮದಮಂ ನಿಜಖಟ್ಗಬಳದೆ ಕರ್ಚಿಯೆ ಕಳೆದೋ
ವದೆ ರಾಜ್ಯಲಕ್ಷ್ಮಿಯಂ ಕೊಂ
ಡದಟರ್ ಕೇವಳಮೆ ವಿಷ್ಣುಬಲ್ಲಾಳನೃಪರ್ ॥ 1028 ॥

ವಿಷ್ಣುವರ್ಧನ

ಚಂ ಮಾ ॥ ಪರನೃಪರಂ ತಡಂ ಸದೆದು ಬೇಲಿಯನಿಕ್ಕಿ ಪಟುಪ್ರತಾಪಮು
ರ್ಬ್ಬಿರೆ ತಳಕಾಡು ನೀಡುಗಡಿದಳ್ಳುಱೆಸುಟ್ಟು ತುರಂಗಮಾಂಘ್ರಿ ಸಂ
ಚರಣದಿನುರ್ತ್ತು ವೀರರಸದೊಳ್ ಪದನಾದಡೆ ಕೂಡೆಬಿತ್ತಿದಂ
ಸುರಚಿರ ಕೀರ್ತ್ತಿಯಂ ನೃಪಶಿಖಾಮಣಿ ಸಾಹಸಗಂಗ ಪೊಯ್ಸಳಂ॥ 1029 ॥

ಮ ಸ್ರ ॥
ಧುರದೊಳ್ ಮಾಱಾಂತರಂ ಕೊಂದಪನೆರೆದ ಜನಕ್ಕಿತ್ತಪಂ ಭೀತಿಯಿಂದಂ
ಶರಣೆಂದಾರ್ ಬಂದೊಡಂ ಕಾದಪನಿದು ಪುಸಿಯೆಂಬುದ್ಧತರ್ ಕಾದಿ ನೋಟ್ಕಿ
ಚ್ಚರಿಯಿಂದಂ ಬೇಡಿ ನೋಟ್ಕಿಲ್ಲದೊಡೆ ಮಱೆಗೆವಂದಿರ್ದು ನೋಟ್ಕಟ್ಟಿ ಕೊಲ್ಲುಂ
ಕರೆದೀಗುಂ ಕಾಗುಮೆಂತುಂ ಸೆಣಸುವದಟರಾರ್ ಪೊಯ್ಸಳಂಗಂ ಜವಂಗಂ ॥ 1030 ॥

ಶಾಂತಲೆ

ಕಂ ॥ ಪತಿಭಕ್ತೆ ಭವದ್ದೆಯ್ವಕ್ಕಂ
ಹಿತಮೆಂಬುದನಱಿದು ವಿನಯದಿಂ ವಿಷ್ಣುಮಹೀ
ಪತಿಯಂ ಮೆಚ್ಚಿಸುತೆ ಮಹಾ
ಸತಿ ಶಾನ್ತಲದೇವಿ ಪಟ್ಟಮಂ ಧರಿಯಿಸಿದಳ್ ॥ 1031 ॥

ಚಂ ಮಾ ॥ ಗಿರಿಜೆಯ ಪಾದಪದ್ಮವಿಗಳಜ್ಜಳದಿಂದಮೆ ಕೊರ್ಬ್ಬಿ ನೀತಿ ವಿ
ಸ್ತರಿಸಿರೆ ಸೊಂಪುವೆತ್ತು ಪುರುಷವ್ರತದಿಂ ದಳಮೇಱೆ ಭಾಗ್ಯಮಂ
ಜರಿಗಳನಾಂತು ರಂಜಿಸುವ ಶಾಂತಲದೇವಿಯ ರೂಪಕಲ್ಪವ
ಲ್ಲರಿಯಡರ್ದತ್ತು ವಿಷ್ಣುನೃಪನೆಂಬ ಸಮುನ್ನತಕಲ್ಪವೃಕ್ಷಮಂ ॥ 1032 ॥

ಮ ವಿ ॥ ಸತತಂ ನೋೞ್ಪೊಡೆ ಲಕ್ಷ್ಮಿ ದೇವತೆ ರಣವ್ಯಾಪಾರದೊಳ್ ಖಟ್ಗದೇ
ವತೆ ಬಿಣ್ಪಿಂದಮೆ ಭೂಮಿದೇವತೆ ಜನಕ್ಕೆಲ್ಲಂದದಿಂ ಪುಣ್ಯದೇ
ವತೆ ವಾಗ್ದೇವತೆ ವಿದ್ಯೆಯೊಳ್ ಸಕಲಕಾರ್ಯ್ಯೋದ್ಯೋಗದೊಳ್ ಮಂತ್ರದೇ
ವತೆ ನಾಥಂಗೆನೆ ಶಾಂತಿದೇವಿಯನದಿನ್ನೇವಣ್ಣಿಪಂ ಬಣ್ಣಿಪಂ ॥ 1033 ॥

ಕಂ ॥ ಬೆಸನಂ ಪತಿಹಿತದಲ್ಲಿಯೆ
ಬೆಸನಂ ದ್ವಿಜದೇವಪೂಜೆಯಲ್ಲಿಯೆ ನೆಗೞ್ದಾ
ಬೆಸನಂ ನೋಂಪಿಗಳಲ್ಲಿಯೆ
ಬೆಸನಂಗಳ್ ಶಾಂತಿದೇವಿಯೊಳ್ ಪೆಱವೊಳವೇ ॥ 1034 ॥

ಕಂ ॥ ಪತಿಯ ಕಳಂಕಮನಾತ್ಮ
ದ್ಯುತಿಯಿಂದಪಹರಿಸಳೆಂದು ಸಲೆ ರೋಹಿಣಿಯಂ
ಪತಿಹಿತೆ ಶಾಂತಲದೇವಿಯ
ಸಿತಕೀರ್ತಿಜ್ಯೋತ್ಸ್ನೆ ಸಂತತಂ ನಗುತಿರ್ಕುಂ ॥ 1035 ॥

177) ಯೆಲೆಗುಂದ 66, E.C. VIII (R), ಕ್ರಿ.ಶ. 1135

ಇದರಲ್ಲಿ ಹೊಯ್ಸಳರಾಜನಾದ ವಿಷ್ಣುವರ್ಧನನ ರಾಣಿ ಶಾಂತಲೆಯೂ ಅವಳ ಮಗಳು ಚಿಕ್ಕಶಾಂತಲೆಯೂ ಸಾಯಲು ಶಾಂತಲೆಯ ತಾಯಿ ಜಕ್ಕಿಯಬ್ಬೆ, ಮಗಳ ಮತ್ತು ಮೊಮ್ಮಗಳ ಜ್ಞಾಪಕಾರ್ಥವಾಗಿ ಎಲೆಗುಂದದಲ್ಲಿ ಶಿವಾಲಯಗಳನ್ನು ಕಟ್ಟಿಸಿದಂತೆಯೂ ಅವಕ್ಕೆ ವಿಷ್ಣುವರ್ಧನನು ಭೂಮಿಯನ್ನು ದತ್ತಿ ಬಿಟ್ಟಂತೆ ಹೇಳಿದೆ.

ಕೇತಯನಾಯಕ

ಕಂ ॥ ನಾಯಕರತ್ನಂ ಪದಕದೊ
ಳಾಯತಮೇನಿರ್ಪ್ಪತೆಱದೆ ನಿರ್ಮ್ಮಳಿಣಗುಣ
ಶ್ರೀಯುತನೇರಿದ ಕೇತಯ
ನಾಯಕನಾತ್ಮೀಯ ಪತಿಗೆ ಭೂಷಣತೆಯಿಂ ॥ 1036 ॥

ಜಕ್ಕಿಯಬ್ಬೆ

ಕಂ ॥ ನಿರ್ಮಳಮೆಂತುಂ ಬಗೆ ತಾಂ
ನಿರ್ಮಳಮೆಂತುಂ ಚರಿತ್ರಮಾತ್ಮೀಯಗುಣಂ
ನಿರ್ಮಳಮೆಂತುಮೆನಲ್ ಸ
ದ್ಧರ್ಮಪದಂ ಜಕ್ಕಿಯಬ್ಬೆಯೊಳ್ ಸೊಗಯಿಸುಗುಂ ॥ 1037 ॥

ಶಾಂತಲೆ

ಕಂ ॥ ಕಂತುವ ಚಿಂತಾಮಣಿ ಸೀ
ಮಂತಿನಿಯರ್ಗೀಕೆ ತಾನೆ ಚೂಡಾಮಣಿಯೀ
ಶಾಂತಲೆ ರಕ್ಷಾಮಣಿ ತಾ
ನಿಂತು ಪಲರ್ಗೆನಿಸಿ ನೆಗಟ್ದಳವನೀತಳದೊಳ್ ॥ 1038 ॥

ಕಂ ॥ ಆಪಾಲ್ಗಡಲ ಮಗಳು ತಾಂ
ಶ್ರೀ ಪುರುಷೋತ್ತಮನನೊಲಿಸಿ ನೆಲೆಸಿದಳುರದೊಳ್
ಭೂಪತಿ ವಿಷ್ಣುವನೊಲಿಸಿದೊ
ಡೀ ಪುಣ್ಯೋದರೆ ನೆಲೆಸಿದಳ್ ತಾನುರದೊಳ್ ॥ 1039 ॥

ವಿಷ್ಣುವರ್ಧನನ ಕಿರಿಯ ರಾಣಿ ಚಿಕ್ಕ ಶಾಂತಲೆ

ಕಂ ॥ ಪುರ್ವ್ವಿನ ಸೋಗೆಯನೀಕೆಯ
ಕರ್ವ್ವಿನ ಬಿಲ್ಲಮನ ವಿಜಯಕೀರ್ತ್ತಿಯ ನೆತ್ತಂ
ಪರ್ವ್ವಿ ಸಲೆ ಸಾರಮೆನಿಸಿಯೆ
ಸರ್ವ್ವಕಳಾಪ್ರೌಢೆ ಚಿಕ್ಕಸಾಂತಲೆ ನೆಗಳ್ದಳ್ ॥ 1040 ॥

ಕಂ ॥ ಅನವರತಂ ಗೌರಿಯ ಪದ
ವನರುಹದೊಳ್ ತನ್ನ ಭಕ್ತಿ ಮಧುರಸದವೊಲಿ
ರ್ಪ್ಪಿನೆಗಂ ಶಾನ್ತಲೆ x x
ಮನೆ ಮಲರ್ದ್ದರ್ಚ್ಚಿಸುವಳೆಸೆಯೆ ಶಿವವಲ್ಲಭೆಯಂ ॥ 1041 ॥

ಕಂ ॥ ಪತಿಹಿತಲಕ್ಷಣಮಾ ಕ್ಷಿತಿ
ಪತಿಹಿತಮಾಚಾರಮಾತ್ಮಹೃದಯಂ
ಪತಿಹಿತಮಾಗಿಜ್ಜಿಮ್ ಮಾ
ಸತಿ ಶಾನ್ತಲದೇವಿ ಪತಿಹಿತಬ್ರತೆ ನೆಗಳ್ದಳ್ ॥ 1042 ॥

178) ಮುಗುಳೂರು 14, E.C. VIII (R), ಕ್ರಿಶ. 1147

ಇದರಲ್ಲಿ ಹೊಯ್ಸಳ ರಾಜನಾದ ಮೊದಲನೆಯ ನರಸಿಂಹನು ಮುಗುಳಿಯ ಗೋವಿಂದ ಜಿನಾಲಯಕ್ಕೆ ಭೂಮಿಯನ್ನು ದತ್ತಿ ಬಿಟ್ಟಂತೆ ಹೇಳಿದೆ.

ವಿಷ್ಣುವರ್ಧನ

ಸ್ರಗ್ಧರೆ ॥ ಶ್ರೀಕಾಂತಾನೇತ್ರನೀಳೋತ್ಪಳವದನ ಸರೋಜಾತಸಸ್ಮೇರ ಲೀಲಾ
ಲೋಕಂ ಲೋಕತ್ರಯೋಜ್ಜೃಂಭಿತವಿಶದಯಶಶ್ಚಂದ್ರಿಕಾ ದೋಃ ಪ್ರತಾಪ
ವ್ಯಾಕೀರ್ಣ್ನಾತ್ಯಕ್ತಯುಕ್ತಕ್ರಮಕಳಿತಕುಭೃಚ್ಚಕ್ರಖೇದಪ್ರಮೋದ
ಶ್ರೀಕಂ ಶ್ರೀವಿಷ್ಣುಭೂಪಂ ಬೆಳಗುಗೆ ಜಗಮಂ ರಾಜಮಾರ್ತಾಂಡರೂಪಂ
॥ 1043 ॥

ಮ ಸ್ರ ॥ ಜಿತಪಂಚೇಷತ್ವದಿಂದೀಶ್ವರನೆನಿಸಿಯುಮುದ್ಯತ್ಸುಧಾಕಾಂತನತ್ಯೂ
ರ್ಜಿತತೇಜೋಲ್ಲಕ್ಷ್ಮಿಯಿಂ ತೀವ್ರಕರನೆನಿಸಿಯುಂ ದೃಶ್ಯರೂಪಂ ಕಳಾಸಂ
ಭೃತಭಾಸ್ವದ್ವೃತ್ತದಿಂದಂ ವಿಧುವೆನಿಸಿಯುಮಾತ್ಮೀಯನಿತ್ಯೋದಯೋತ್ಸಾ
ರಿತದೋಷಾಶೇಷನಿಂತಾವನೊಳಮಸದೃಶಂ ಧೀರವಿಷ್ಣುಕ್ಷಿತೀಶಂ ॥ 1044 ॥

ಮ ಸ್ರ ॥ ಅರಿಸೇನಾಚಕ್ರಚಕ್ರಂ ಪೊರಳೆ ರಿಪುಕುಭೃತ್ತುಂಗವಭ್ರಾಂತಿ ತಳ್ತೊ
ಪ್ಪಿರೆ ತನ್ನುಗ್ರಾಸಿಯಿಂದುಚ್ಚಳಿಸಿ ಧರೆಗುರುಳ್ತರ್ಪ ವಿದ್ವಿಟ್ಶಿರಂಗಳ್

ತರದಿಂ ಕುಂಭಂಗಳಂ ಪೋಲ್ತೆಸೆಯೆ ನವಘಟೀಯಂತ್ರದಿಂ ವಿಷ್ಣು ಯುದ್ಧಾ
ಜಿರವಾಪೀವೈರಿರಕ್ತಾಂಬುವನೆ ನಿಜಯಶೋವಲ್ಲಿಗೆತ್ತುತ್ತುಮಿರ್ಪಂ ॥ 1045 ॥

ಕಂ ॥ ಮಗುಮಗುಳ್ದು ಪೊಕ್ಕು ದುರ್ಗಮ
ನಗಟ್ಟಿಗಟ್ಟಾವಾರ್ಧಿವರೆಗಮಡ್ಡಂತಿಗಟಂ
ತಗುತಗುಳ್ದು ಕೊಂದನೋವದೆ
ಜಗಬಿರುದರನಜಿಸಿ ವಿಷ್ಣುವರ್ಧನದೇವಂ ॥ 1046 ॥

ಪೆರ್ಮಾಡಿ ವಂಶ

ಮ ಸ್ರ ॥ ನಿಯತಸ್ಯಾದ್ವಾದ ವಿದ್ಯಾವಿಭವಭವನಮಾಗಿರ್ಪ ನಿರ್ಧೂತದೋಷ
ತ್ರಯಮಪ್ಪುದ್ಯುತ್ತಪೋಲಕ್ಷ್ಮಿಗೆ ಸಲೆ ನೆಲೆಯಾಗಿರ್ಪ ರೂಢಾಕಳಂಕಾ
ನ್ವಯದೊಳ್ಭವ್ಯಾಳಿಗೆಲ್ಲಂ ಮೊದಲೆನಿಸಿ ಕರಂ ಪೆಂಪುವೆತ್ತಿತ್ತು ಪೆರ್ಮಾ
ಡಿಯವಂಶಂ ಲೋಕವಂ ಕೀರ್ತಿಯೊಳು ಬೆಳಗಿತತ್ತುಜ್ವಳಾಚಾರಸಾರಂ
॥ 1047 ॥

ಮಸಣಸೆಟ್ಟಿ, ಪ್ರಭಾಮಾರಿಸೆಟ್ಟಿ

ಚಂ ಮಾ ॥ ಅವರ್ಗೆ ಮಗಂ ಸಮಸ್ತಗುಣರತ್ನಸುಧಾಂಬುಧಿ ಮಸ್ಣಸೆಟ್ಟಿ
ಭುವನ ವಿನೂತನಾತನನುಜಂ ನೆಗರ್ದಂ ಪ್ರಭುಮಾರಿಸೆಟ್ಟಿ ಬಾ
ನ್ಧವಜನ ಸರ್ವ್ವಭವ್ಯಜನ ಕಲ್ಪಮಹೀರುಹನಾಮಹಾತ್ಮನೀ
ತವದ ವಿಭೂತಿಯಂ ಪಡೆದುದರ್ಹತೆಯಂ ಧರೆಯೊಳ್ ನಿರಂತರಂ
॥ 1048 ॥

ಬಸದಿಯ ವರ್ಣನೆ

ಕಂ ॥ ದೋರಸಮುದ್ರದ ನಡುವಿದು
ಮೇರು ಮಹೀಧರಮೆನಲ್ಕೆ ಮಾಡಿಸಿದಂ ಶ್ರೀ
ಮಾರನುತ್ತುಂಗಜಿನಾ
ಗಾರಮೆನಿಪ್ಪ ವಿಶ್ವಕರ್ಮ ನಿರ್ಮಿತಮೆನಿಸಲ್ ॥ 1049 ॥

ಭರತರಾಜ ಚಮೂಪ

ಚಂ ಮಾ ॥
ಮನುಚರಿತರ್ ಸಮಸ್ತಭುವನ ಸ್ತವನೀಯ ಜಿನೇಂದ್ರಧರ್ಮವಾ
ರಿನಿಧಿ ಸರೋಜಿನೀ ಪ್ರಭವರಾಗವಿವರ್ಧನರಾಜಹಂಸರ
ಣ್ಣನು ಮನುಜನ್ಮನುಂ ಗುಣಯುತಗ್ರ್ಗಣವರ್ಜ್ಜನಪಾರಿಜಾತರಾ
ಮನಿಮಡಿಯಾಗಿಯುಂ ಭರತರಾಜ ಚಮೂಪನುಮೆಂಬುದೀ ಜಗದೊಳ್ ? ॥ 1050 ॥

ವಿಷ್ಣುವರ್ಧನ

ಕಂ ॥ ಹಿಮದಿಂ ಸೇತುವರಂ ಮ
ತ್ತೆ ಮಗುಟ್ಬಾಸೇತುವಿಂ ಹಿಮಂಬರೆಗಂ ವಿ
ಕ್ರಮಕೇಳಿಯಿಂ ತೊಟಲ್ವಂ
ಸಮದಕ್ಷತ್ರಿಯರನಱಿಸಿ ವಿಷ್ಣುನೃಪಾಳಂ ॥ **1051** ॥

179) ಹೊನ್ನಾವರ 95, E.C. VIII (R), ಕ್ರಿ.ಶ. 1149

ಇದರಲ್ಲಿ ಹೊಯ್ಸಳ ರಾಜನಾದ ವಿಷ್ಣುವರ್ಧನನ ಆಳಿಕೆಯಲ್ಲಿ ಸಾಮಂತ ಶಂಕರದಂಡನಾಥನು ಹೊನ್ನವಾರದಲ್ಲಿ ಕೇಶವ ದೇವರನ್ನು ಪ್ರತಿಷ್ಠೆ ಮಾಡಿಸಿದಂತೆ ಹೇಳಿದೆ.

ವಿನಯಾದಿತ್ಯ

ಕಂ ॥ ಆದಿತ್ಯರ್ಪ್ಪನ್ನಿರ್ವ್ವರು
ಮಾದೊಡಮೇಂ ಮಣ್ಡಳಾಗ್ರದಿಂದಿರುಳುಂ ಸಂ
ಪಾದಿತ ತೇಜನೆ ತಾಂ ವಿನ
ಯಾದಿತ್ಯಂ ದಿನಪನೆನಿಸಿದಾತಂ ಜನಪಂ ॥ **1052** ॥

ಕಂ ॥ ಕರೆವಿಡಿದು ಬಳೆಯಪಟ್ಟಣ
ಮುರಿವುದುಮೆಱೆಯಂಗನೃಪನ ಕೋಪಾನಲನಂ
ಸ್ಮರಿಯಿಸಿದುದು ರಾಮ ಶರ
ಸ್ಫುರಿತಾಗ್ನಿಯನಬ್ಧಿ ವೀಚಿನಿಚಯಾಚಕಿತಂ ॥ **1053** ॥

ಕಂ ॥ ಶ್ರುತಿಕಥಿತಪಥದೊಳಳವಡೆ
ಗತಿಗಳ್ ಶುದ್ಧಾತ್ಮತತ್ವದೊಳ್ತಿಳಿದಿರೆ ಸ
ನ್ಮತಿಗಳ್ಪುಣ್ಯಾತ್ಮರವ
ಸ್ತುತಿಗಂ ರಾಜ್ಯಕ್ಕಮೊಪ್ಪೆ ಭಾಜನಮಾದರ್ ॥ **1054** ॥

ವಿಷ್ಣುವರ್ಧನ

ಮ ಸ್ರ ॥ ಇವನೀ ತೋಳ್ಗಂಬದೊಳ್ ಪುತ್ತಳಿಯವೊಲವನೀದೇವಿ ತಾನಿರ್ಪಳೆಂದುಂ
ತವದಿರ್ಕ್ಕುಂ ವಿಕ್ರಮಶ್ರೀ ಪೊಗರ್ವ್ವೊಲಿವನ ತೀವ್ರಾಸಿಯೊಳ್ ಬಿಟ್ಟವಂದಾ
ಜವನಿರ್ಕ್ಕುಂ ಕೋಣನಿಂದಂ ಪಗೆವರ ಪೆಣನಂ ಪೇಱಲೀ ವಿಷ್ಣುವಂ ಕಾ
ದುವನಾವಂ ಗೆಲ್ವನಾವಂ ನಡುಗದಿದಿರೊಳಾಟಂದು ಬಂದಿರ್ಪನಾವಂ
॥ **1055** ॥

ದಂಡಾಧೀಶ ಕೋಣೆಯ ಶಂಕರ

ಮ ಸ್ರ ॥ ಮಲೆಯೊಳರ್ಪ್ಪಾಳ್ವಿಕಾಜಿರ್ಕ್ಕಡಗುವರಸುಮಕ್ಕಳ್ಗೆಯಾಧೀಶರಿರ್ಪ್ಪಾ
ದಲ x ಸ್ಸಾರ್ಮಂತದಣ್ಣಾಧಿಪರೊದಪಿ ಭರಂಗೆಯ್ದು ನಿನ್ದಲ್ಲಿಯುಮ್ಮಂ
ಚಲಮಂ ಪೆರ್ಚ್ಚುತ್ತಿರಲ್ ಪೊಯ್ಸಿದನಿಜಿದನೊಟ್ಟಯಿಸಿದನ್ತರ್ಗ್ಗೆವೊಯ್ದಂ?
ಗೆಲವಂ ಕೈಕೊಣ್ಡನೀ ಶಂಕರ ಚತುರ ಚಮೂಪಂ ಪ್ರಚಂಡಪ್ರತಾಪಂ
॥ 1056 ॥

ಹೊನ್ನಾವರದ ಬೋಕಗಾವುಂಡ

ಕಂ ॥ ತನ್ನಿಂ ಪೆಱಿರಿಂ ಧರ್ಮ್ಮ
ಕ್ಕನ್ನಯಮಂ ಪೊರ್ದ್ದಲಿಯ್ಯದಾಚಂದ್ರಾರ್ಕ್ಕಂ
ಮನ್ನಣೆಯಿದೆಂದು ನೆಗಳ್ದ
ತ್ಯುನ್ನತನೀ ಹೊನ್ನವುರದ ಬೋಕಗವುಣ್ಡಂ ॥ 1057 ॥

180) ಹೆರಗು 146, E.C. VIII (R), ಕ್ರಿಶ. 1155

ಇದರಲ್ಲಿ ಹೊಯ್ಸಳ ದೊರೆಯಾದ ಮೊದಲನೆಯ ನರಸಿಂಹನ ಆಳಿಕೆಯಲ್ಲಿ ಮಹಾಪ್ರಧಾನಿ ಚಾವಿಮಯ್ಯನ ಹೆಂಡತಿ ಜಕ್ಕಲೆಯು ಹೆರಗಿನಲ್ಲಿ ಬಸ್ತಿಯನ್ನು ಕಟ್ಟಿಸಿ ಭೂಮಿಯನ್ನು ದತ್ತಿ ನೀಡಿದುದನ್ನು ಹೇಳಿದೆ.

ಚಾವಿಮಯ್ಯ

ಮ ವಿ ॥ ಇನನಂ ತೇಜದೊಳಿಂದ್ರನಂ ವಿಭವದೊಳ್ ಚಾಣಕ್ಯನಂ ನೀತಿಯೊಳ್
ಮನುವಂ ಚಾರುಚರಿತ್ರದೊಳ್ ಜಳಧಿಯಂ ಗಾಂಭೀರ್ಯದೊಳ್ ಧೈರ್ಯದೊಳ್
ಕನಕಾದ್ರೀಂದ್ರಮನೆಯ್ದೆ ಪೋಲ್ವನದಟಿಂ ತ್ರೈಲೋಕ್ಯಮುಂ ಮೆಚ್ಚಿದ
ರ್ಜುನನಂ ಶ್ರೀಪಡೆವಳ್ಳಚಾಮನೆನಲಿನ್ನೇವಣ್ಣಿಪಂ ಬಣ್ಣಿಪಂ ॥ 1058 ॥

ಚಂ ಮಾ ॥ ವರವನಿತಾಜನಂಗಳ ಮನಂ ಕುಸುಮಾಸ್ತ್ರಶರಕ್ಕೆ ಸದ್ಬುಧೋ
ತ್ಕರಕರಪಂಕಜಂ ಬಹುಸುವರ್ಣಚಯಕ್ಕಧಿನಾಥಮಂದಿರಂ
ಸ್ಥಿರತರರಾಜ್ಯಲಕ್ಷ್ಮಿಗೆಡೆಯಾದುವು ರೂಪವಿಳಾಸದೇಳ್ಗೆಯಿಂ
ನಿರುಪಮದಾನದಿಂ ಪತಿಹಿತೋನ್ನತಿಯಿಂ ಪಡೆವಳ್ಳಚಾಮನಾ ॥ 1059 ॥

ಚಂ ಮಾ ॥ ಅನುಪಮಮಪ್ಪ ಬಂಧುನಿವಹಂ ನಿಜಪಕ್ಷಮನರ್ಘ್ಯರತ್ನಮಂ
ಡನತತಿ ಪಂಚವರ್ಣಮಖಿಳೋಗ್ರಭುಜಾಸಿಯೆ ಚಂಚು ದುಷ್ಟದು
ರ್ಜನರಿಪುಭೂಭುಜರ್ ಭುಜಗರಾಗೆ ನೆಗೞ್ತೆಯನಾಂತ ಬಿಟ್ಟಿದೇ
ವನ ಗರುಡಂ ಸಮಂತೆಸೆದನೀ ಧರೆಯೊಳ್ ಪಡೆವಳ್ಳಚಾಮಣಂ ॥ 1060 ॥

ಚಾವಿಮಯ್ಯನ ಹೆಂಡತಿ ಚಕ್ಕಲೆ

ಕಂ ॥ ರತಿಯನ್ನಳ್ ರೂಪಿಂ ಭಾ
ರತಿಯನ್ನಳ್ ವಾಗ್ವಿಳಾಸದಿಂ ಸೌಷ್ಠವದಿಂ
ಕ್ಷಿತಿಯನ್ನಳ್ ಪೆರ್ಮೆಗರುಂ
ಧೃತಿಯನ್ನಳ್ ಜಕ್ಕಿಯವ್ವೆ ಕಾಂತಾರತ್ನಂ ॥ 1061 ॥

ಉ ಮಾ ॥ ಕೋಮಳಮಾಗಿ ತಾನೆ ಶುಭಲಕ್ಷಣಯುಕ್ತಮೆನಿಪ್ಪ ಮೂರ್ತಿಯಿಂ
ವ್ಯೋಮಮನೆಯ್ದೆ ಪರ್ಬಿ ದಿಗುದಂತಿವರಂ ನಿಮಿರ್ದಿರ್ದ ಕೀರ್ತಿಯಿಂ
ಶ್ರೀಮುಖದಿಂದಮುದ್ಭವಿಪ ಸತ್ಯದ ಮೆಲ್ನುಡಿಯಿಂದೆ ಗೋತ್ರಚಿಂ
ತಾಮಣಿ ಜಕ್ಕಿಯವ್ವೆ ಸಲೆ ರಂಜಿಸಿದಳ್ ಶಚಿದೇವಿಯಂದದಿಂ ॥ 1062 ॥

ಕಂ ॥ ಬಂದೆರೆಯೆ ವಂದಿಜನಮಾ
ನಂದದಿನಾಕ್ಷಣದೆ ಕಲ್ಪಕುಜದಾರವೆಯೀ
ವಂದದಿನೀವಳ್ ಬೇಳ್ಪುದ
ನೆಂದುಂ ಜಕ್ಕವ್ವೆದೇವಿ ಜಗತೀತಳದೊಳ್ ॥ 1063 ॥

ಉ ಮಾ ॥ ತಕ್ಕಳ ಮಿಕ್ಕ ಸೋರ್ಮುಡಿಯ ವೃತ್ತಕುಚಂಗಳ x x x ನೋ
ಟಕ್ಕಲರಂಬಿವೆಂಬ ನಗೆಗಣ್ಗಳ ರೊಕ್ಕಮೆನಿಪ್ಪ ಹೊನ್ನ ಬ
ಣ್ಣಕ್ಕೆ ವಿಶೇಷಮಪ್ಪಧರಕಾಂತಿಯ ಜಕ್ಕಲನಾರಿಯೊಂದು ಭಾ
ವಕ್ಕೆ ಗುಣಕ್ಕೆ ವಾಗ್ವಿಭವದುನ್ನತಿಗಾರ್ ದೊರೆ ಪೆಂಡಿರುರ್ವಿಯೊಳ್ ॥ 1064 ॥

ಮ ವಿ ॥ ಜಿನರಾಜಾಂಘ್ರಿಯನೊಪ್ಪುವರ್ಚ್ಚನೆಗಳಿಂ ಸದ್ಭಕ್ತಿಯಿಂದರ್ಚ್ಚಿಪ
ಳ್ವಿನಯಂಗುಂದದೆ ಲೋಕಪೂಜ್ಯರೆನಿಸಿಪ್ಪಾಚಾರ್ಯ್ಯರಂ ಪ್ರೀತಿಯ
ಪ್ಪ ನವಾಜ್ಞಾಮೃತದಂನದಿಂ ತಣಿಪುವಳ್ ಶ್ರೀ ಜೈನಗೇಹಂಗಳಂ
ಮನಮುತ್ಸಾಹದೆ ಮಾಳ್ಪಳೀ ಧರಣಿಯೊಳ್ ಜಕ್ಕವ್ವೆಯಿಂತಪ್ಪರಾರ್ ॥ 1065 ॥

ಚಂ ಮಾ ॥ ತಳದೊಳಶೋಕೆಯೊಪ್ಪುವ ತಳಿರ್ ಮುಖಪಂಕಜದೊಳ್ ಸರೋಜಮಾ
ಜುಬಿಗುರುಳೋಳಿಯೊಳ್ ಮಧುಪಸಂಕುಳಮೊಳ್ನುಡಿಗಳ್ಗೆ ಮಿಕ್ಕ ಕೋ
ಗಿಲೆವಜಿ ಯಾನದೊಳ್ ಗಜಸಮುಚ್ಚಯಮುದ್ಧಪಯೋಧರಕ್ಕೆ ಪೊಂ
ಗಳಸಮೆನಿಪ್ಪಿವೇಂ ದೊರೆಯೆ ಜಕ್ಕಲೆನಾರಿಯ ರೂಪಿನೇಳ್ಗೆಯೊಳ್
॥ 1066 ॥

ನಯಕೀರ್ತ್ತಿಸಿದ್ಧಾಂತದೇವ

ಮ ವಿ ॥ ಸಕಳ ವ್ಯಾಕರಣಾರ್ತ್ಥಶಾಸ್ತ್ರಚಯದೊಳ್ ಕಾವ್ಯಂಗಳೊಳ್ ಮಿಕ್ಕನಾ
ಟಕದೊಳ್ ವಸ್ತುಕವಿತ್ವದೊಳ್ ನೆಗಟ್ದ ಸಿದ್ಧಾಂತಂಗಳೊಳ್ ಪಾರಮಾ
ರ್ತ್ಥಿಕದೊಳ್ ಲೌಕಿಕದೊಳ್ ಸಮಸ್ತ ಕಳೆಯೊಳ್ಪಾಂಗಿನ ನಡೆಯಲ್ಲ
ಧಿಕನಾದಂ ನಯಕೀರ್ತ್ತಿದೇವಯತಿಪಂ ಸಿದ್ಧಾನ್ತ ಚಕ್ರೇಶ್ವರಂ ॥ 1067 ॥

181) ಮುದುಗೆರೆ 142, E.C. VIII (R), ಕ್ರಿಶ. 1156

ಇದರಲ್ಲಿ ಹೊಯ್ಸಳ ದೊರೆಯಾದ ಮೊದಲನೆಯ ನರಸಿಂಹನ ಆಳಿಕೆಯಲ್ಲಿ ಸಾಮಂತ ಎರೆಯಮಯ್ಯನು ಮುದುಗೆರೆಯಲ್ಲಿ ಎರಗೇಶ್ವರ ದೇವಾಲಯವನ್ನು ಕಟ್ಟಿಸಿ ಭೂಮಿಯನ್ನು ದತ್ತಿ ಬಿಟ್ಟಂತೆ ಹೇಳಿದೆ.

ಸೇನಾಧಿಪತಿ ಬೋಕಣ

ಚಂ ಮಾ ॥ ದಿಗುವಿಜಯಪ್ರತಾಪನಿಧಿ ಬೋಕಣನೆತ್ತಿದನೆಂದೊಡತ್ತಲಿ
ರ್ದಗಿಯದೆ ಚೋಳನಂಜಿ ಹೆಱಹಿಂಗದೆ ಮಾಳವನೋಡಿ ದುರ್ಗಮಂ
ಪುಗದೆ ಕಳಿಂಗನೋಸರಿಸಿ ಹೋಗದೆ ಗುಜ್ಜರನಾಂತು ಯುದ್ಧದೊಳ್
ಮಿಗುವರೆ ಬಿಟ್ಟದೇವಗರುಡಂಗಿದಿರಾಗಿ ಧರಿತ್ರಿಮಧ್ಯದೊಳ್ ॥ 1068 ॥

ಮ ಸ್ರ ॥
ತುಳುದೇಶಂ ಚಂಗಭೂಪಾವನಿ ನೆಗಳ್ದ ಬಯಲ್ನಾಡು ಕೊಂಗೊರ್ವ್ವಿಪಾಳ
ಸ್ಥಳಮುದ್ಯುತ್ ಚೋಳಭೂಮಂಡಳನಿರುಗೊಳರೊದ್ದ ಪ್ರಸಿದ್ಧಂಗಳಾಗಿ
ರ್ದ್ದಳೆಯಂ ತಂನೊಂದೆ ಬಾಹುಬಳದಿನಧಿನೃಪಂಗಾವಗಂ ಮಾಡಿ ಶೌರ್ಯೋ
ಜ್ವಳ ವೀರಶ್ರೀಗೆ ಕಯ್ಗಂನಡಿಯೆನೆ ನೆಗಳ್ದಂ ಬೋಕಣಂ ಧಾತ್ರಿಗೆಲ್ಲಂ ॥ 1069 ॥

ಚಂ ಮಾ ॥ ತೊಡರ್ದರಿ ಭೂಮಿಪಾಳಕರದೇಶಮನಿಕ್ಕುಳಿಗೊಂಡು ಭೀತಿಯಿಂ
ನಡುಗುವ ಮಂಡಳೇಶ್ವರರ ಮಂಡಲಮಂ ಪರಿರಕ್ಷಿಸುತ್ತವೊಂ
ದೆಡೆ ತವೆಕೊಂಡು ವೀರ ನರಸಿಂಹ ನೃಪಂಗೆ ಸಮಸ್ತಧಾತ್ರಿಯಂ
ಹಡವಳ ಬೋಕಣಂ ನೆಱೆಯೆ ಮಾಡಿದ ಮೂಡಣಸಾಗರಂಬರಂ॥ 1070 ॥

ಚಿಣ್ಣವೆಗ್ಗಡೆ

ಮ ವಿ ॥ ಕೃತಕೃತ್ಯಂ ಜನತಾಧಿಪತ್ಯಪದಮಂ ಕೈಯ್ಗೊಂಡು ಮಂತ್ರಿತ್ವದು
ನ್ನತಿಯಿಂ ಬಿಱ್ರನೆ ಬೀಗಿಕೊಂಡಿರದೆ ದೀನಾನಾಥರಂ ಶಿಷ್ಟರಂ
ಸುತಬಂಧುಪ್ರಿಯವರ್ಗ್ಗಮುಂ ತಣಿಪೆ ಧಾತ್ರೀಚಕ್ರದೊಳ್ ತಾನೆ ಸಂ
ಸ್ತುತನಾದಂ ಸಲೆ ಚಿಣ್ಣವೆಗ್ಗಡೆಯೆನಲ್ಕೇವಣ್ಣಿಪ್ಪಂ ಬಣ್ಣಿಪಂ ॥ 1071 ॥

ಮಾಕಿಯಕ್ಕ

ಕಂ ॥ ಆತನ ವಲ್ಲಭೆ ಜಗವಿ
ಖ್ಯಾತೆಯನೊಳಕೊಂಡು ಸೀತೆಗಂ ದ್ರೌಪತಿಗಂ
ನೀತಿವಿದೆಯೆನಿಪಳಖಿಳೋ
ರ್ವ್ವೀತಳದೊಳ್ಮಾಕಿಯಕ್ಕ ಲಲನಾರತ್ನಂ ॥ 1072 ॥

ಚಂ ಮಾ ॥ ಮುರಹರ ವಕ್ಷದೊಳ್ ಪೊಳೆವ ಲಕ್ಷ್ಮಿಯ ಕಾಂತಿಯನಾಂತು ಪದ್ಮದೊಳ್
ಪರಿವೆರಸಿರ್ಪ ಭಾರತಿಯ ಸಾರತೆಯಂ ಗೆಡೆಗೊಂಡು ಚೆಲ್ವನಂ
ಕುರಿಸುವ ಪಾರ್ವತೀಪದಸರೋಜದ ಕೆಂಪಿನ ಸೊಂಪನಾಳ್ದು ವಿ
ಸ್ತರಿಸುವ ಮಾಕಿಯಕ್ಕನ ಜಸಂ ವಸುಧಾತಳಸೇವ್ಯಮಲ್ಲವೇ ॥ 1073 ॥

ಎರಗ ಮಂತ್ರಿ

ಮ ವಿ ॥ ಪುರುಹೂತಂ ವಿಭವಪ್ರಭಾವದೊದವಂ ತತ್ತೇಜಮಂ ವಹ್ನಿಸು
ಸ್ಥಿರಮಂ ಧರ್ಮನಿವೇಶನಿತ್ಯಪದಮಂ ನೈರಿತ್ಯನಿಷ್ಪಾರ್ತ್ಥಮಂ
ವರುಣಂ ಸೇವ್ಯಮವಾಯುವೆವ್ವನಚಲಶ್ರೀಯಂ ಕುಬೇರಂ ನಿರಂ
ತರವೀಶಾನ್ಯನನನ್ತ ಕಾನ್ತಿಯನೆಱಗಂಗಿತ್ತರುತ್ಸಾಹದಿಂ ॥ 1074 ॥

ಚಂ ಮಾ ॥ ಹಡೆವಳಬೋಕಣಂ ಕುಡೆ ನಿಯೋಗಮನೂರ್ಜಿತತೇಜದೆಟ್ಟಿರಂ
ಪೊಡವಿಗಪೂರ್ವಮಾಗೆ ಮಱೆವೊಕ್ಕೊಡೆ ಖೇಚರಚಕ್ರಿ ನನ್ನಿಯಂ
ನುಡಿವೊಡೆ ಕರ್ಣನಾಂತೊಡೆ ಕೃತಾಂತನೆನಲ್ಕೆ ಪೊಗೞ್ತೆವೆತ್ತ ಹೆ
ಗ್ಗಡೆಯೆಱಗಂ ಪ್ರತಾಪನಿಧಿ ಶೋಭಿಸುವ ಶಶಿಸೂರ್ಯರುಳ್ಳಿನಂ ॥ 1075 ॥

ಉ ಮಾ ॥ ವಿಕ್ರಮಮಂ ಪೊಣರ್ಚ್ಚಿ ದೆಸೆಯಂತುವರಂ ಜಸವಂ ನಿಮಿರ್ಚ್ಚಿ ಭೂ
ಚಕ್ರದೊಳೀತನಿಂದಧಿಕರಿಲ್ಲೆನೆ ಬೋಕನರಾಜ್ಯಲಕ್ಷ್ಮಿಗಾ
ದಿಕ್ರಮದಿಂದೆ ತಾನೆ ಮನೆವೆರ್ಗ್ಗಡೆಯಾದನೆಱಂಗನೆಂಬಿಂನಂ
ಚಕ್ರಿ ಪರಾಕ್ರಮಂ ಸುಭಟಮಂತ್ರಿ ಶಿಖಾಮಣಿ ಧಾತ್ರಿಗೊಪ್ಪುವಂ ॥ 1076 ॥

ಚಂ ಮಾ ॥ ನುಡಿ ಕನಕಾದ್ರಿಯೊಳ್ ಪದುಮಜಂ ಕಡೆದಕ್ಕರಮಾರ್ಪು ಬೇೞ್ಪುದಂ
ಕುಡುವ ಸುರದ್ರುಮಕ್ಕೆ ಪಡಿ ಮಾೞ್ಪ ಪರಾರ್ಥತೆ ಖೇಚರಂಗೆ ನೂ
ರ್ಮಡಿ ಪತಿಭಕ್ತಿ ಮಾರುತಸುತಂಗೆ ಪದಿರ್ಮಡಿಯೆಂದೊಡಣ್ಣ ಹೆ
ಗ್ಗಡೆಯೆಱಗಂಗೆ ಪಾಸಟಿಯೆ ಮತ್ತಿನ ಮಾನವರೀ ಧರಿತ್ರಿಯೊಳ್॥ 1077 ॥

ಚಂ ಮಾ ॥ ಪಡವಳ ಬೋಕನೆತ್ತಿದನದೋ ಬರುತ್ತಿರ್ದ್ದನೆ ಮುಂದೆಱಂಗವೆ
ಗ್ಗಡೆಯೆನೆ ಚೋಳಮಂಡಳದ ಕೊಂಗಿನದೇಶದ ಭೂಮಿಪಾಳಕ
ನ್ನಡುಗಿ ಸರಣ್ಯವೆಂದು ಗಜವಾಜಿ ಪದಾರ್ಥಮನೀಯ್ವುದಾಂಪರೇ
ತೊಡರ್ದರಮಾರಿಗಂ ಜವನ ಬಾರಿಗೆ ವೈರಿತಳಪ್ರಹಾರಿಗಂ ॥ 1078 ॥

ಕಂ ॥ ಎಱಗಂ ಸತೀವಿಳಾಸ
ಕ್ಕೆಱಗಂ ಸತ್ಪುಣ್ಯವಲ್ಲದಳಿಪಂ ಪಾಪ
ಕ್ಕೆಱಗನೆನೆ ಹೆಮ್ಮೆವಡೆದಿ
ರ್ದೆಱೆಯಮವೆರ್ಗ್ಗಡೆ ಸರಿಯೇ ಮತ್ತಿನ ಮನುಜರ್ ॥ 1079 ॥

ಎರಗನ ಹೆಂಡತಿ ಬಾಚಲೆ

ಚಂ ಮಾ ॥ ನಿರುಪಮ ದಾನಶೀಳೆ ಸುಭಲಕ್ಷಣೆ ಸದ್ಗುಣವಂಶಜಾತ ಭಾ
ಸುರತರ ಕೀರ್ತ್ತಿಯಿಂ ತಳೆದೆಱಂಗನ ಸಜ್ಜನಲಕ್ಷ್ಮಿಯೆಂದು ಸಾ
ಕ್ಷರಿಕ ಜನಂಗಳರ್ತ್ತಿಯೊಳೆ ಕೀರ್ತ್ತಿಸೆ ಬಾಚಲೆ ನಾರಿಯೊಪ್ಪುವಳ್
ಪರಿಜನಕಾಮಧೇನು ಶಶಿಸೂರ್ಯಧರಿತ್ರಿಕುಳಾದ್ರಿಯುಳ್ಳಿನಂ ॥ 1080 ॥

ಕಂ ॥ ಶೃಂಗಾರದ ಕಣಿ ಮದನನ
ಜಂಗಮಲತೆಗೆ ಸಿರಿಗೆ ತಾನೆ ಕಯ್ಗನ್ನಡಿ ಲೇ
ಸಿಂಗೆ ನೆಲೆಯೆನಿಸಿ ನೆಗಳ್ದಿ
ರ್ದಂಗನೆ ಬಾಚವ್ವೆಗೆಣೆಯೆ ಮತ್ತಿನ ಮನುಜರ್ ॥ 1081 ॥

ಕಂ ॥ ಹರನರ್ಧಾಂಗದೊಳದ್ರಿಜೆ
ಹರಿಯುರದೊಳ್ ಲ್ಷಕ್ಮಿ ಶೋಭಿಪಂತಿರೆ ವಿಶ್ವಂ
ಭರೆಗೆಸೆವೆಱಂಗನೊಪ್ಪುವ
ವರವಧು ಬಾಚವ್ವೆಯೆಸೆವಳವನೀತಳದೊಳ್ ॥ 1082 ॥

ಎರಗನ ಹೆಂಡತಿ ಮಾಚಲದೇವಿ

ಮ ವಿ ॥ ದೆಸೆಯಂ ಕಣ್ಗಳ ಕಾಂತಿಯಿಂ ಧವಳಿಪಳ್ ಲಾವಣ್ಯದಿಂ ಸೋಲಿಪಳ್
ವಸುಧಾಚಕ್ರಮನುದ್ಘಯೌವನವನಶ್ರೀಯೊಳ್ ಮನಃಕಾಂತನಂ
ಸಸಿಯಂ ಸೂರ್ಯನ ಮಾರನಂ ನಿಲಿಸುವಳ್ ಸೌಭಾಗ್ಯದೊಳ್ ರೂಪಿನೊಳ್
ಜಸದೊಳ್ ಮಾಚಲದೇವಿ ಮಾಳ್ಪಳೆಱಗಂಗಾನಂದಸಂದೋಹಮಂ
॥ 1083 ॥

ಉ ಮಾ ॥ ಭೂಮಿಯೊಳುಳ್ಳ ಚೆಲ್ವನಬುಜೋದ್ಭವನೀ ಸತಿಯಂಗಭಿತ್ತಿಯೊಳ್
ಕಾಮಿಸಿ ತಿಟ್ಟವಿಟ್ಟನೆನೆ ಪಾದಯುಗಂ ಕಟಿ ನಾಭಿ ಲೇಸಿನು
ದ್ದಾಮತೆವೆತ್ತ ವೃತ್ತಕುಚಮಿಂದುನಿಭಾನನಮಬ್ಜಲೋಚನಂ
ಕೋಮಲೆಗೊಪ್ಪುಗುಂ ನೆಗಟ್ದಿ ಮಾಚಲದೇವಿಗೆ ಭೂತಳಾಗ್ರದೊಳ್
॥ 1084 ॥

ಕಂ ॥ ಲಲನಾರತ್ನಂ ಲೇಸಿನ
ಕುಲದೆಯ್ವಂ ಸದ್ವಿವೇಕಿ ಲೋಕೋತ್ತಮೆ ಮಾ
ಚಲದೇವಿಯೆಂದು ಬಣ್ಣಿಪು
ದಲಘುನಿತಂಬಿನಿಯ ನಖಿಳವಸುಧಾಚಕ್ರಂ ॥ 1085 ॥

ಕಂ ॥ ದಿನಕರ ತೇಜನೆಱೆಗಂಗ
ಪರಮಚಾರಿತ್ರೆ ಬಾಚಿಯಕ್ಕಂಗಂ ಸ ?
ಜ್ಜನಸೇವ್ಯನೊಗೆದನಖಿಳಾ
ವನಿ ಬಣ್ಣಿಸೆ ಬೊಮ್ಮದೇವನೂರ್ಜ್ಜಿತಭಾವಂ ? ॥ 1086 ॥

ಎರಗನ ಮಗ ಬಮ್ಮದೇವ

ಚಂ ಮಾ ॥ ಅತಿಶಯರೂಪದಿಂದತನುವಲ್ಲದ ಕಂತು ಕಳಂಕಮಿಲ್ಲದೂ
ರ್ಜಿತಕುಮುದಪ್ರಿಯಂ ನೆಗಟ್ದಿ ಬಂಧುಜನಪ್ರಿಯನಿಷ್ಟಶಿಷ್ಟಸಂ
ತತಿಖಗಕಲ್ಪಭೂಜನಿನತೇಜನೆಱಂಗತನೂಜನೆಂಬುದು
ನ್ನತಸಿರಿಗಾಣ್ಮನಂ ಧರೆ ನೆಗಟ್ತೆಯ ಹೆಮ್ಮೆಯ ಬಮ್ಮದೇವನಂ ॥ 1087 ॥

ಶಿವಾಲಯ

ಚಂ ಮಾ ॥ ಒದವಿದ ಪುಣ್ಯಸಂಚಯಮೆ ಸನ್ನಿದವಾದುದು ಧರ್ಮದೆಳ್ತರಂ
ಪುದಿದು ನೆಗಳ್ತೆವೆತ್ತು ಗಿರಿಶಾದ್ರಿಗೆ ಶಾದ್ರಿಶವಾದುದೂರ್ಜ್ಜಿತ
ಕ್ಕಿದೆ ಶುಭಸೂಚನಂ ತ್ರಿಜಗಲೋಚನವೆಂಬಿನವೊಪ್ಪುತಿಪ್ಪುದಂ
ಮುದುಗೆಱೆಯಲ್ಲಿ ಮಾಡಿಸಿದನುಂತಮಂ ಶಿವರಮ್ಯಹರ್ಮ್ಯವಂ ॥ 1088 ॥

182) ಕೋರವಂಗಲ 129, E.C. VIII (R), ಕ್ರಿ.ಶ. 1160

ಇದರಲ್ಲಿ ಹೊಯ್ಸಳ ದೊರೆಯಾದ ಮೊದಲನೆಯ ನರಸಿಂಹನ ಆಳಿಕೆಯಲ್ಲಿ ಮಂತ್ರಿ ಗೋವಿಂದರಾಜನು ಕೋರವಂಗಲದಲ್ಲಿ ಗೋವಿಂದೇಶ್ವರ ದೇವಾಲಯವನ್ನು ಕಟ್ಟಿಸಿ ಭೂಮಿಯನ್ನು ದತ್ತಿ ಬಿಟ್ಟಂತೆ ಹೇಳಿದೆ.

ವಿಷ್ಣುವರ್ಧನ

ಶಾ ವಿ ॥ ಶ್ರೀಮದ್ಯಾದವವಂಶವಾರ್ಧಿವಿಳಸತ್ಸಂವರ್ಧನೋದ್ಯತ್ಸುಧಾ
ರಾಮಂ ದೃಪ್ತನೃಪಾಳಜಾಳಜಳಜಾತಬ್ರಾತ ಸಂಮರ್ದ್ದನೋ
ದ್ದಾಮಾನೇಕಪಮಿಷ್ಟಶಿಷ್ಟಜನತಾಕಲ್ಪಾಂಘ್ರಿಪಂ ತಾನೆನಲ್
ಭೂಮಿಪಾಳಕಮೌಳಿರತ್ನಮೆಸೆದಂ ಶ್ರೀವಿಷ್ಣುಭೂಪಾಳಕಂ ॥ 1089 ॥

ಗೋವಿಂದರಾಜ

ಕಂ ॥ ನರಸಿಂಹ ಭೂಮಿಪಾಳಕ
ನರಮನೆಯೊಳ್ ಮಾನ್ಯಪುರುಷನಚಳಿತಲಕ್ಷ್ಮೀ
ಚರಿತಂ ಬುಧನಿಧಿ ಮನುಮುನಿ
ಚರಿತಂ ಗೋವಿಂದರಾಜನೂರ್ಜಿತ ತೇಜಂ ॥ 1090 ॥

ಕಂ ॥ ತಂತ್ರದ ಹೆಗ್ಗಡೆ ಮತ್ತಂ
ತಂತ್ರಾಳೋಚನೆಗೆ ವುಚಿತಲೋಚನನೆನಿಪಂ
ತಂತ್ರಮನನಿತುಮನೋರ್ವ್ವನೆ
ಜಂತ್ರದ ಕೀಲ್ನಂತೆ ನಿಂದು ನಿಲಿಸಲ್ ನೆಱೆದಂ ॥ 1091 ॥

ಕಂ ॥ ಗೋವಿಂದನನ್ವಯೋಂನತಿ
ದೇವೇಂದ್ರನ ಗುರುಗಮರಿದು ಹೊಗಳಲ್ ದಿಟದಿಂ
ಶ್ರೀವತ್ಸಂ ಬ್ರಹ್ಮರ್ಷಿಮ
ಹೀವಿಶ್ರುತನಾದನಾ ಮುನೀಂದ್ರನ ಕುಲದೊಳ್ ॥ 1092 ॥

ಮ ವಿ ॥ ಪುರುಷಾಕಾರದ ಪಾರಿಜಾತಮಹಿಜಂ ವಿಪ್ರೋತ್ತಮಾನೀಕ ಭೂ
ಸುರ ಚಿಂತಾಮಣಿ ವೇದಶಾಸ್ತ್ರವಿಹಿತಾನುಷ್ಠಾನ ಸಂಸಿದ್ಧ ಸಿ
ದ್ಧರಸಂ ಸತ್ಯಹಿತೋಕ್ತಿಯುಕ್ತ ಸುರಭಿಬ್ರಾತಂ ವಿವೇಕಾನ್ವಿತಂ
ಪುರುಷಂ ಪುಟ್ಟಿದುದಿಂದೆನುತ್ತೆ ಧರೆಗೊಂದಾನಂದವಂದಪ್ಪಿನಂ ॥ 1093 ॥

ಮ ವಿ ॥ ಕಲಿಕಾಲಕ್ಕಗಿದೋಡಿದಾಸುಚರಿತಂ ಮಾಕಾಂಬಿಕಾಗರ್ಭನಿ
ಶ್ಚಲದುಗ್ಧಾಬ್ಧಿಯೊಳೊಂದಿ ನಿಂದು ಬಱಿಯಂ ಮೆಯ್ಗೊಂಡು ಗಂಡೇಱೆ ತ
ತ್ಕಲಿಯಂ ತಾಂ ಬಿಡೆ ಬೆಂಕೊಳಲ್ಕೆ ತಲೆದೋಱಿತ್ತೆಂದು ಸರ್ವೋರ್ವರಾ
ತಲಮೆಲ್ಲಂ ಪೊಗಟ್ಬಂತದೇಂ ನೆಗಟ್ದನೋ ಗೋವಿಂದನಾನಂದದಿಂ
॥ 1094 ॥

ಮ ವಿ ॥ ನಡೆಗಲ್ವಲ್ಲಿಯೆ ಧರ್ಮದಲ್ಲಿ ನಡೆಯಲ್ ಕಲ್ತಂ ಕಳಾಳಾಪದಿಂ
ನುಡಿಗಲ್ವಲ್ಲಿಯೆ ಸತ್ಯಮಂ ನುಡಿವುದಂ ಕಲ್ತಂ ಪರಾರ್ಥಮಂ
ಪಡೆವಂದೇ ಜಸಮಂ ತೆರಳ್ಚಿ ಪಡೆಯಲ್ ಕಲ್ತಂ ದಲೆಂದಂದು ಪೆ
ರ್ಗಡೆ ಗೋವಿಂದನವೋಲದಾರ್ ಸುಕೃತಿಗಳ್ ವಿಶ್ವಂಭರಾಭಾಗದೊಳ್
॥ 1095 ॥

ಮ ವಿ ॥ ನದಿಗಳ್ ಗಂಗೆಗಳಾದುವೆಯ್ದೆ ಗಿರಿಗಳ್ ಕೈಲಾಸಮಾಗಿರ್ದುವು
ನ್ಮದಮಾತಂಗಕುಳಂ ಸುರೇಂದ್ರಗಜಮಾಯ್ತಂಭೋಧರಂ ಶಾರದಾಂ
ಬುದಮಾಯ್ತಬ್ಧಿಗಳೆಯ್ದೆ ದುಗ್ಧನಿಧಿಯಾಯ್ತೆಂದಂದು ಗೋವಿಂದನಂ
ದದಿನಾರ್ ಕೀರ್ತಿಯನಿಂತುಪಾರ್ಜಿಸಿದವರ್ ಸನ್ಮಾನದಾನಂಗಳಿಂ ॥ 1096 ॥

ಗೋವಿಂದರಾಜನ ಹೆಂಡತಿ ಸಾಂತವೆ

ಮ ವಿ ॥ ರತಿಯೆಂತಂಗಭವಂಗೆ ಲಕ್ಷ್ಮಿ ಹರಿಗೆನ್ತಬ್ಜೋದ್ಭವಂಗಾ ಸರ
ಸ್ವತಿಯೆಂತಾ ಹಿಮಶೈಳಜಾತೆ ಗಿರಿಶಂಗೆಂತಾ ವಶಿಷ್ಟಂಗರುಂ
ಧತಿಯೆಂತನ್ತಿರೆ ಕಾಂತೆ ಸಾಂತವೆ ಲಸದ್ಗೋವಿಂದರಾಜಂಗೆ ಸ
ನ್ತತ ಸೌಭಾಗ್ಯ ಸುಭಾಗ್ಯ ಯೋಗ್ಯಸತಿಯಾದಳ್ ಪುಣ್ಯಸಂಪತ್ತಿಯಂ
॥ 1097 ॥

ಕಂ ॥ ಪೊಗಟೆ ಜಗಮಿಂತನಾರತ
ಮಗಣಿತಗುಣಮಣಿಗಣಾಂಗಭೂಷಣೆ ಬಗೆಯೊಳ್
ಬಗೆಯದೆ ಪೆಱತಂ ಪತಿರೇ
ವ ಗುರುಃ ಸ್ತ್ರೀಣಾಮೆನುತ್ತೆ ಸಾಂತವೆ ನೆಗಟ್ದಿಳ್ ॥ 1098 ॥

ಮರ್ದ್ದೆಯ

ಮ ವಿ ॥ ಸುರಭೂಜಾತದ ಕಲ್ಪವಲ್ಲಿಯ ಲಸತ್ಸಂಯೋಗವೆನ್ತರ್ಥಿ ಸಂ
ಕರಸಂಕಲ್ಪಿತಕಲ್ಪನಕ್ಷಮಫಳಂ ತಾನಾದುದನ್ತೀ ವಧೂ
ಸರಸಂಯೋಗಮಭೀಷ್ಟಶಿಷ್ಟಫಲ ಸಂಪೂರ್ಣ್ಣನ್ದಲಾಯೆಂಬಿನಂ
ಪರಮೋತ್ಸಾಹದೆ ಪುಟ್ಟಿದಂ ಬುಧವಿಪತ್ಸಂಮರ್ದ್ದನಂ ಮರ್ದ್ದೆಯಂ
॥ 1099 ॥

ಕಂ ॥ ಮತ್ತಮವಿಮುಕ್ತನವರ್ಗ್ಗಳ
ಚಿತ್ತದೊಳವಿಮುಕ್ತನಾಗಿನಿಂದಾ ಮೋಹಂ
ಸುತ್ತೆ ಸುತನಾದನೆಂದೆನೆ
ಸುತ್ತೇನ ವಿಮುಕ್ತದೇವನಾತ್ಮಜನಾದಂ ॥ 1100 ॥

183) ಜಕ್ಕೇನಹಳ್ಳಿ 116, E.C. VIII (R), ಕ್ರಿ.ಶ. 1170

ಇದರಲ್ಲಿ ಹೊಯ್ಸಳ ದೊರೆಯಾದ ಮೊದಲನೆಯ ನರಸಿಂಹನ ಆಳಿಕೆಯಲ್ಲಿ ಮಹಾಪ್ರಧಾನ ಹೆಗ್ಗಡೆ ಕಾಳಿಮಯ್ಯನು ಜಕ್ಕೆಯನಹಳ್ಳಿಯಲ್ಲಿ ಕಾಳೇಶ್ವರದೇವರನ್ನು ಪ್ರತಿಷ್ಠೆ ಮಾಡಿಸಿ ಭೂಮಿಯನ್ನು ದತ್ತಿ ಬಿಟ್ಟಂತೆ ಹೇಳಿದೆ.

ವಿಷ್ಣುವರ್ಧನ

ಮ ಸ್ರ ॥
ಪದದೊಳ್ ಕೂರ್ಮಸ್ವರೂಪಂ ನಯನಯುಗಳದೊಳ್ ಮತ್ಸ್ಯರೂಪಂ ಘನಗ್ರೀ
ವದೊಳಾದಿಕ್ರೋಡರೂಪಂ ನಡುವಿನೊಳೆ ನೃಸಿಂಹತ್ವಮಾತ್ಮಪ್ರಭಾವಾ
ಸ್ಪದದೊಳ್ ರಾಮತ್ರಯತ್ವಂ ಮತಿವಿಕಸನದೊಳ್ ಬುದ್ಧರೂಪಾಗಿ ಗುಜ್ಞಾ
ಗದ ಕಲ್ಕಿತ್ವಕ್ಕೆ ಮೆಯ್ದಾರದ ಹರಿಯೆನಿಪಂ ವಿಷ್ಣು ಜಿಷ್ಣು ಕ್ಷಿತೀಶಂ ॥ 1101 ॥

ಚಂ ಮಾ ॥ ಸ್ತುತಿವಚನಂಗಳಲ್ತು ರಿಪುಕೋಟಿಗೆ ಭೀಮಪರಾಕ್ರಮಂ ದಯಾ
ಸತಿ ಸತಿಯಪ್ಪ ಕಾರಣದೆ ತಾನೆ ಕೃಪಂ ಮನಮೊಲ್ದು ಬೇಟ್ಟುವ
ರ್ಗತಿಶಯಮಾಗಲಿತ್ತು ವಿಪುಲಾರ್ಜುನಕೀರ್ತಿಯೆನಲ್ಕೆ ಬೇಜೆ ಭಾ
ರತಕಥೆಯೆಂಬುದೇಕೆ ಸಲೆ ವಿಷ್ಣುನೃಪಾಳಚರಿತ್ರೆ ಸಾಲದೇ ॥ 1102 ॥

ನರಸಿಂಹ I

ಚಂ ಮಾ ॥ ತರಳವಿಲೋಚನಾಂಚಳಕೆ ಕೆಂಪಿನಿತುಂ ಬರೆ ಬಕ್ಕುವಾಗಳಾಂ
ತರಿನರಪಾಳಸಂಕುಳದ ಪಂದಲೆ ಕಯ್ಗೆ ತುರಗರಾಜಿಮಂ
ದುರಕೆ ಗಜಾಳಿಸಾಲೆಗೆ ಧನಂನಿಜಕೋಶಗೃಹಾಂತರಕ್ಕೆ ತ
ದ್ಧರೆ ಕಡಿತಕ್ಕೆ ವುಂಡಿಗೆಗವೋಲೆಗೆ ವೀರನಾರಸಿಂಹದೇವನಂ ॥ 1103 ॥

ಮ ಸ್ರ ॥ ಅರಿಭೂಪರ್ವ್ವಂದು ಮೆಯ್ದೋಜಿದೊಡವಯವದಿಂ ತೋಜಿನೇ ಕ್ರೂರದತ್ತ್ಯೇ
ಶ್ವರ ವಕ್ಷಕ್ಷೇತ್ರ ನಿರ್ದ್ದಾರುಣನಖನಿಕರೋಚ್ಚಂಡದೋರ್ದ್ದಂಡಮಂ ಭೀ
ಕರಜಿಹ್ವಾಕೀರ್ಣಗೀರ್ಣ್ನಾನನಮನೊಗೆದ ಕೂರ್ದ್ದಾಡೆಯಂ ಸಂಚಳತ್ತೇ
ಸರಭಾಸ್ವತ್ ಕಣ್ಠಮಂ ಘರ್ಘ್ಝರ ಘನರವಮಂ ನಾರಸಿಂಹಕ್ಷಿತೀಶಂ
॥ 1104 ॥

ಚಂ ಮಾ ॥ ಅಹಿಪತಿಯಂತೆ ಭೋಗಿ ಶಶಿಯಂತೆ ಕಲಾಧರನೀಶನಂತುಮಾ
ಸಹನಮರೇಂದ್ರನಂತೆ ವಿಭವಾನ್ವಿತನುನ್ನತಮೇರು ಸೂರ್ಯನಂ
ತಹಿಮಕರಪ್ರಭಾವನಮರೇಜ್ಯನವೋಲ್ ಬಹುತತ್ವಕೋವಿದಂ
ಮಹಿನುತನೆಂದು ಬಣ್ಣಿಪುದು ಧಾತ್ರಿಯೊಳೀ ನರಸಿಂಹದೇವನಂ ॥ 1105 ॥

ಗೋವಿಂದ

ಕಂ ॥ ವೇದಾಧ್ಯಯನಾಧ್ಯಾಪನ
ವೇದಾರ್ತ್ಥವಿಚಾರವೇದ ವಿಹಿತಾನುಷ್ಠಾ
ನಾದಂ ವೇದವಿನೋದನ
ನಾದಂ ಗೋವಿಂದನೆಂಬ ವಿಪ್ರೋತ್ತಂಸಂ ॥ 1106 ॥

ನಾಗರುದ್ರ

ಕಂ ॥ ಆಯಯ್ಯನ ಹಿರಿಯಮಗಂ
ನ್ಯಾಯದಿನಾಚಾರದಿಂದ ವುಚಿತದಿನತುಳ
ಶ್ರೀಯಿಂ ಜಸದಿಂ ಜಗತೀ
ಜ್ಯಾಯಂ ತಾನಾಗಿ ನಾಗರುದ್ರಂ ನೆಗಳ್ದಂ ॥ 1107 ॥

ನಾಗರುದ್ರನ ತಮ್ಮ ಮರ್ದ್ದಿಮಯ್ಯ

ಕಂ ॥ ಶ್ರೀರಮಣೀಪತಿ ಸುಗುಣೋ
ದಾರಂ ಸ್ಫುರದಮೃತಮೂರ್ತ್ತಿ ಮೂರ್ತ್ತಿಮನೋಜಂ
ದಾರಿದ್ರ್ಯವಿದ್ರುತರ್ಗ್ಗೆ ವಿ
ಚಾರಿಸೆ ಮರ್ದ್ದನಿಸಿ ಮದ್ದಿಮಯ್ಯಂ ನೆಗಳ್ದಂ ॥ 1108 ॥

ಕಾಳಿಮಯ್ಯ

ಚಂ ಮಾ ॥ ವನಧಿಗದೊಂದೆ ಗುಣ್ಪು ಸಹಜಂ ಕನಕಾದ್ರಿಗದೊಂದೆ ಪೆಂಪು ಮ
ತ್ತನುಪಮದಾನಮೊಂದೆ ನಿಜಮಾ ದಿವಿಜಕ್ಷಿತಿಜಕ್ಕೆ ನೋಟ್ಪೊಡಾ
ವನಧಿಯ ಗುಣ್ಪು ಮೇರುವಿನ ಪೆಂಪು ಸುರದ್ರುಮದಾರ್ಪದಾವಗಂ
ತನಗೆನಲೀ ಧರಾತಳದೊಳಾರ್ ದೊರೆ ಹೆಗ್ಗಡೆ ಕಾಳಿಮಯ್ಯನೊಳ್
॥ 1109 ॥

ಚಂ ಮಾ ॥ ಜಡಿ ರಿಪುರಕ್ತವಾರಿಯೊಳಗಾಜಳಕೇಳಿಗೊಡರ್ಚದಿರ್ದೊಡಂ
ಜಡಿ ಕಡಿದಿಕ್ಕಿ ವೈರಿಭಟಖಂಡದೊಳಿಂಡೆಯನಾಡದಿರ್ದೊಡಂ
ಜಡಿ ಸಮದೇಭಕುಂಭಯುಗಮಂ ಬಿಡೆ ಸೌಳನೆ ಸೀಳದಿರ್ದೊಡಂ
ಜಡಿಯೆನುತಿರ್ಪ ಕಾಳನ ಕರಾಸಿ ಕರಂ ಜಡಿಯುತ್ತುಮಿರ್ಪುದು ॥ 1110 ॥

ಕಂ ॥ ಕೊಟ್ಟು ಜಸದರ್ತ್ಥಿಗಂಡಂ
ಕಟ್ಟಾಯದ ಬಿರುದ ನುಡಿವ ಸಿತಗರಗಂಡಂ
ನೆಟ್ಟನೆ ಪರವನಿತೆಯರೊಡ
ವುಟ್ಟಿದನೆನೆ ಕಾಳಿಮಯ್ಯ ಬಂಟರಭಾವಂ ॥ 1111 ॥

ಮ ವಿ ॥ ಕನಕಾದ್ರೀಂದ್ರಮಸುನ್ನತಿಕ್ಕೆ ವಿಭವಂ ದೇವೇಂದ್ರನಂ ಮೂರ್ತಿ ಕಾ
ಮನನಾರ್ತೀವ ಗುಣಂ ದಧೀಚಿ ಬಲಿ ಗುತ್ತಂ ಚಾರುದತ್ತಂಗಮೊಂ
ದಿನಿತಾನುಂ ಮಿಗಿಲೆಂದೊಡೇವೊಗಟ್ಟಿಪೆಂ ವಿದ್ವಜ್ಜನಾಧಾರನಂ
ವಿನಯಾಂಭೋನಿಧಿ ಕಾಳಿಮಯ್ಯನನತಿಪ್ರಖ್ಯಾತನಂ ಧಾತ್ರಿಯೊಳ್ ॥ 1112 ॥

ಚಂ ಮಾ ॥ ಜನವಿನುತಂ ವಿವೇಕನಿಧಿ ಸಚ್ಚರಿತಾಶ್ರಯನಾತ್ಮವಂಶವ
ರ್ಧನನಭಿಮಾನಮೇರು ಸುಜನಾಗ್ರಣಿ ದಾನವಿನೋದಿ ಪುಣ್ಯಭಾ
ಜನನನವದ್ಯನೆಂದು ಧರೆ ಬಣ್ಣಿಪುದಟ್ಟಿಜೊಳೆಯ್ದೆ ಕಾಳಿಮ
ಯ್ಯನನಿನತೇಜನಂ ಗುಣಿಸಮಾಜನನಾಶ್ರಿತಕಲ್ಪಭೂಜನಂ ॥ 1113 ॥

ಚಂ ಮಾ ॥ ಸಮರದೊಳಾಂತರಾತಿನರನಾಥವಧೂವದನಕ್ಕೆ ಹಾರವಂ
ಕಮಳದಳಾಕ್ಷಿಯುಗ್ಮದೊಳೆ ಕಂಕಣಮೊಪ್ಪಿರೆ ರಮ್ಯಮಪ್ಪ ಕುಂ
ಕುಮಘನಪರ್ವತೋಪಮಕುಚಂಗಳೊಳಂದುಗೆಮಾಡಿದೊಂದು ವಿ
ಕ್ರಮಘನಶೌರ್ಯದುನ್ನತಿಗೆ ಸಲ್ಲದೆ ಹೆಗ್ಗಡೆ ಕಾಳಿಮಯ್ಯನೊಳ್ ॥ 1114 ॥

ಚಂ ಮಾ ॥ ಮಿಸುಗುವ ತಾರಕಾದ್ರಿರುಚಿಯಿಂದಮೃತಾರ್ಣವಫೇನರೋಚಿಯಿಂ
ದೆಸೆಗಳನಾವಗಂ ಬೆಳಗುತಿರ್ಪ ಹಿಮಾಕರಬಿಂಬದಿಂ ವಿರಾ
ಜಿಸುವಮರೇಂದ್ರದಂತಿಯ ತನುಚ್ಛವಿಯಿಂ ಮಿಗಿಲಾಗಿ ಪರ್ವಿ ರಾ
ಜಿಸುವುದು ಕೀರ್ತಿ ಧಾತ್ರಿಯೊಳಗೀ ವಿಭು ಹೆಗ್ಗಡೆ ಕಾಳಿಮಯ್ಯನಾ ॥ 1115 ॥

184) ಕಿತ್ತನಕೆರೆ 106, E.C. VIII (R), ಕ್ರಿ.ಶ. 1173

ಇದರಲ್ಲಿ ಹೊಯ್ಸಳ ದೊರೆ ಎರಡನೆಯ ಬಲ್ಲಾಳನ ಆಳಿಕೆಯಲ್ಲಿ ರಾಣಿ ಉಮಾದೇವಿಯ ಹಿರಿಯಮನೆವೆರ್ಗ್ಗಡೆ ಕೇಸಿಮಯ್ಯ, ಬಿಟ್ಟಯಣ್ಣ ಹೆಗ್ಗಡೆ ಮೊದಲಾದವರು ಸಿದ್ದೇಶ್ವರದೇವರ ಸೇವೆಗೆ ಭೂಮಿಯನ್ನು ದತ್ತಿಯಾಗಿ ಕೊಟ್ಟದ್ದನ್ನು ಹೇಳಿದೆ.

ಕಂ ॥ ಲಿಂಗಮೆನೆ ಜನನಿ ಜನಕಂ
ಲಿಂಗಮೆನೆನಗಾಳ್ದನಾಪ್ತಬಾಂಧವ ಭ್ರಾತೃ
ಲಿಂಗಮೆನೆ ಸರ್ವಮೆನಿಸುವ
ಸಂಗಂ ದೊರೆಕೊಳ್ಗೆ ಜನ್ಮಜನ್ಮಾಂತರದೊಳ್ ॥ 1116 ॥

ಕಂ ॥ ವಿನಯ ಪ್ರತೀಪ ರೂಪಂ
ವಿನಯಾದಿತ್ಯಂ ಸಮಸ್ತ ಭುವನ ಸ್ತುತ್ಯಂ

ಜನಕ್ಕೆ ತಾಳ್ದಿ ಕರ್ಣ
ನೆನಿಪ್ಪಂ ಸನ್ಮಾರ್ಗ್ಗವೃತ್ತಿ ನಿತ್ಯಾಭ್ಯುದಯಂ ॥ 1117 ॥

ಬಲ್ಲಾಳ II

ಮ ವಿ ॥ ರಣರಂಗಾಂಗಣ ಶೂದ್ರಕಂ ನಡೆದೊಡಿಂತುಚ್ಚಂಗಿನುಚ್ಚಾತತ್ ?
ಕ್ಷಣದಿಂ ನೋಡೆ ವಿರಾಟರಾಜಪುರಮೊತ್ತುತ್ತಾಯ್ತು ಮುಂತಾಂನ್ತ ಸೇ
ವುಣರಾಪೋಶನ ಮಾತ್ರಕಂ ನೆಱೆದರಿಲ್ಲೆಂದಂದು ಬಲ್ಲಾಳ ದೋ
ರ್ಗ್ಗುಣಮಂ ಬಣ್ಣಿಸಲಣ್ಣ ಬಲ್ಲವರದಾರೀ ಭೂರಿಭೂಚಕ್ರದೊಳ್॥ 1118 ॥

ಮ ವಿ ॥ ಅನತೋಗ್ರೀವರೆನಿಪ್ಪ ಪಾಂಡ್ಯಕುಳಮಂ ನಿರ್ಮ್ಮೂಳನಂ ಗೆಯ್ದು ಜೇ
ಯನನುದಾತ್ತ ಮುರಾರಿ ಕೇಶವನ ಸರ್ವ್ವಸ್ವಂಗಳಂ ಗೆಲ್ದ ಧೀ
ರನ ನಾಟೋಪದಿನಾಂತ ಸೇವುಣರನೊಂದಾನೆಯೊಳ್ ಗೆಲ್ದ ವೀ
ರನನಾರಾಂಪ ನೃಪಾಳಕರ್ಕದನದೊಳು ಬಲ್ಲಾಳಭೂಪಾಳನಂ ॥ 1119 ॥

185) ಕೋರವಂಗಲ 128, E.C. VIII (R), ಕ್ರಿ.ಶ. 1173

ಇದರಲ್ಲಿ ಹೊಯ್ಸಳ ದೊರೆಯಾದ ಎರಡನೆಯ ಬಲ್ಲಾಳನ ಮಹಾಪ್ರಧಾನ ಶ್ರೀಕರಣದ ಬೂಚಿರಾಜನು ಕೋರವಂಗಲದ ಬೂಚೇಶ್ವರದೇವರಿಗೆ ಭೂಮಿಯನ್ನು ದತ್ತಿ ಬಿಟ್ಟಂತೆ ಹೇಳಿದೆ.

ವಿಷ್ಣುವರ್ಧನ

ಶಾ ವಿ ॥ ಶ್ರೀಮದ್ಯಾದವವಂಶವಾರ್ಧಿವಿಳಸತ್ಸಂವರ್ಧನೋದ್ಯತ್ಸುಧಾ
ಧಾಮಂ ದೃಪ್ತನೃಪಾಳಜಾಳಜಳಜಾತವ್ರಾತಸಮ್ಮರ್ದನೋ
ದ್ದಾಮಾನೇಕಪನಿಷ್ಪಶಿಷ್ಟ ಜನತಾಕಲ್ಪಾಂಘ್ರಿಪಂ ತಾನೆನಲ್
ಭೂಮೀಪಾಳಕಮೌಳಿರತ್ನಮೆಸೆದಂ ಶ್ರೀವಿಷ್ಣುಭೂಪಾಳಕಂ ॥ 1120 ॥

ಏಚಲಾದೇವಿ

ಕಂ ॥ ನರಸಿಂಹನೃಪನ ಚಿತ್ತೇ
ಶ್ವರಿ ಚಿತ್ತೋದ್ಭವನ ಕಾನ್ತೆಯಾಕೃತಿಯಂ ಧಿ
ಕ್ಕರಿಪಳ್ ಪಟ್ಟ ಮಹಾದೇ
ವಿ ರೂಪವಿಭ್ರಮದೊಳೆಂದೊಡೇವಣ್ಣಿಪುದೋ ॥ 1121 ॥

ಮ ವಿ ॥ ರಮಣೀರತ್ನಮನರ್ಥಿಕಲ್ಪಲತೆಯಂ ವಾಗ್ದೇವತಾಜನ್ಮಗೇ
ಹಮನೊಳ್ಪಿಂಗೆ ನಿವಾಸಮಂ ಗುಣಗಣಕ್ಕಾವಾಸಮಂ ಪೆರ್ಮೆಗಾ

ರ್ಮಮನಂಗೋದ್ಭವನಾಜ್ಞೆ ಪೆಣ್ಬರಿಜನಾದಂ ತಾಳ್ದಿದಂತಿರ್ದು ಪ
ಟ್ಟಮನಾಂತೇಚಲದೇವಿಯಂ ಭುವನದೊಳ್ ಪೋಲ್ವನ್ನರಾರ್ ಕಾಂತೆಯರ್ ॥ **1122** ॥

ಬಲ್ಲಾಳ II

ಮ ವಿ ॥ ವಿಳಸತ್ಕೂರ್ಮಪದಂ ಫಣಿಪ್ರಭುನಿಭೋದ್ಯದ್ದೀರ್ಘಹಸ್ತಂ ಕುಳಾ
ಚಳಧೀರಂ ದಿಗಿಭೋನ್ನತಂ ಭುಜಬಳಾವಷ್ಟಂಭದಿಂ ನೀಳಕುಂ
ತಳೆಯಂ ಸನ್ನುತಪುಣ್ಯೆಯಂ ರುಚಿರಕಾಂಚೀಯುಕ್ತೆಯಂ ಲೀಲೆಯಿಂ
ತಳೆದಂ ಸುಸ್ಥಿರಮಾಗೆ ಭೂರಮಣಿಯಂ ಬಲ್ಲಾಳಭೂಪಾಳಕಂ ॥ **1123** ॥

ಮ ವಿ ॥ ಬಡವರ್ಗೀಯದ ಚಾಗಮಾಜಿಮುಖದೊಳ್ ಬೆನ್ನಿತ್ತ ಶೌರ್ಯಂ ತೊದ
ಳ್ಗಿಡೆಯಾದೊಳ್ನುಡಿ ದುರ್ಯಶಕ್ಕೆ ಗುಜಿಯಾಗಿರ್ದೊಳ್ಪು ದುರ್ಮಾರ್ಗಮಂ
ಗೆಡೆಗೊಂಡಾಚರಣಂ ಗಡಂ ತಮಗೆನಲ್ ಚೀಯೆಂಬಿನಂ ಬಾಳ್ದ ನಿ
ಗ್ಗಡಿಗಳ್ ಮತ್ತಿನ ಭೂಭುಜರ್ ದೊರೆಯೆ ಪೇಟ್ ಬಲ್ಲಾಳಭೂಪಾಳನೊಳ್
॥ **1124** ॥

ಬೂಚಿರಾಜ

ಕಂ ॥ ಶ್ರೀಕರಣತಂತ್ರ ಮಂತ್ರ
ಕ್ಕೇಕ ಪ್ರಭು ನಾರಸಿಂಹದೇವನ ಮನೆಯೊಳ್
ಲೋಕೋಪಕಾರ ಕರಣಂ
ಶ್ರೀಕರಣದ ಬೂಚಿರಾಜನೂರ್ಜ್ಜಿತ ತೇಜಂ ॥ **1125** ॥

ಬಾಚಲದೇವಿ

ಕಂ ॥ ಪತಿಭಕ್ತಿಯೊಳೆಂದುಮರುಂ
ಧತಿ ಸೊಬಗಿನೊಳೆಸೆವ ರೂಪಿನಿಂದೊಪ್ಪುವ ಪಾ
ರ್ವತಿ ವಿಭವದಲ್ಲಿ ಲಕ್ಷ್ಮೀ
ಸತಿ ಬಾಚಲದೇವಿಯೆನಿಸಿ ಜಸಮಂ ಹಡೆದಳ್ ॥ **1126** ॥

ಗೋವಿಂದ

ಕಂ ॥ ಸಿರಿಸತಿ ಗೋವಿಂದನ ಪೇ
ರುರದೊಳ್ ನೆಲಸಿರ್ಪ ತೆಱದೆ ಸೊಬಗಿನೊಳೆಂದುಂ
ಸ್ಥಿರಮಾಗಿರೆ ಬಾಚಲೆ ಬೂ
ಚರಸನ ಸರ್ವಾಂಗಲಕ್ಷ್ಮಿ ತಾನಾಗಿರ್ಪಳ್ ॥ **1127** ॥

ಮದ್ದಿಮಯ್ಯ

ಮ ವಿ ॥ ಕನಕಾದ್ರೀಂದ್ರಮನುಂನತಿಕ್ಕೆ ಜಳಧಿ ಬ್ರಾತಂಗಳಂ ಗುಣ್ಪು ಭೂ
ವಿನುತೌದಾರ್ಯ್ಯಮನಲ್ಪಕಲ್ಪಕುಜಮಂ ಪೆಂಪಂಬರಾಭೋಗಮಂ
ದ್ಯುನದೀನನ್ದನನಂ ವಿನೂತಚರಿತಂ ಕೀಳ್ಮಾಡೆಮೇಲ್ಮಾಡಿದಂ
ಜನತಾನಂದಮನಿಂದು ಸುಂದರ ಯಶ ಶ್ರೀಮದ್ದಿರಾಜದ್ವಿಜಂ ॥ 1128 ॥

ಮಾಕವ್ವೆ

ಕಂ ॥ ಆ ನೆಗಳ್ದ ಮದ್ದಿರಾಜನ
ಮಾನಸಕಳಹಂಸೆಯೆನಿಸಿ ಕುಲವಧು ನೆಗಳ್ದಳ್
ಭೂನುತ ಪತಿವ್ರತೋಂನತ
ಜಾನಕಿಯಂ ಜಡಿದು ನೂಕಿ ಮಾಂಕವೆಯೆಂಬಳ್ ॥ 1129 ॥

ಮದ್ದಿಮಯ್ಯ ಮತ್ತು ಮಾಕವ್ವೆಯರ ಮಗ

ಕಂ ॥ ಪುತ್ರಂ ಪುಟ್ಟಿದನಮಳ ಚ
ರಿತ್ರಂ ಸರ್ವ್ವೋರ್ವ್ವರಯ್ಯಮಿತ್ರಂ ಧಾ
ತ್ರೀನೇತ್ರೋತ್ಸವ ಕರಗುಣ
ಗಣಪಾತ್ರಂ ದಾಕ್ಷಿಣ್ಯಪುಣ್ಯ ಜನ್ಮಕ್ಷೇತ್ರಂ ॥ 1130 ॥

ಗೋವಿಂದ

ಕಂ ॥ ಶ್ರೀವತ್ಸಗೋತ್ರ ತಿಳಕಂ
ಶ್ರೀವಲ್ಲಭನಖಿಳಧರಣಿ ಧಾರಣ ಚತುರಂ
ಗೋವಿಂದನಂತಿರದಜಿಂ
ಗೋವಿಂದಾಖ್ಯಾನಮಾದುದಾತಂಗುಚಿತಂ ॥ 1131 ॥

ಗೋವಿಂದನ ತಮ್ಮ ನಾಕ

ಕಂ ॥ ಶ್ರೀಕರಣಾಗ್ರಣಿ ತಂತ್ರ
ಕ್ಕೇಕಪ್ರಭು ನಾರಸಿಂಹದೇವನ ಮನೆಯೊಳ್
ಶ್ರೀಕಾನ್ತ ಕಾನ್ತ ಸಹಜವಿ
ವೇಕಂ ಸತ್ಕೀರ್ತ್ತಿ ವಿಹಿತಲೋಕಂ ನಾಕಂ ॥ 1132 ॥

ನರಸಿಂಹ

ಮ ವಿ ॥ ಧರೆಯಂ ರಕ್ಷಿಸಲೆಂದು ಕೃಷ್ಣನವತಾರಂಗೆಯ್ದುವೋಲ್ ತತ್ಕುಲೋ
ದ್ಧರನತ್ಯುಂನತವೃತ್ತಿಯಿಂ ಸಕಳರಾಜ್ಯಶ್ರೀಗಡಪ್ಪಾಗಿ ಬೂ

ಚರಸಂಗಂ ಸತಿ ಬಾಚಲಾಂಬಿಕೆಗವತ್ಯುತ್ಸಾಹದಿಂ ಪುಟ್ಟಿದಂ
ನರಸಿಂಹ ಕ್ಷಿತಿಪಾಳನಾಮದ ಕುಮಾರಂ ನಾರಸಿಂಹೋತ್ತಮಮಂ ॥ 1133 ॥

ಚಂದವ್ವೆ

ಕಂ ॥ ಅಚ್ಚೊತ್ತಿದನ್ತೆ ಅಮರ್ದ್ದ
ಪ್ಪಿರ್ಪ್ಪೊಪ್ಪಂ ಬಡೆದು ಲಲಿತಲತೆಯೋಂಸತೆ ಮ
ಚ್ಚಿತ್ತದೊಳು ದೇವಶಕ್ತಿಯ
ಚಿತ್ತೇಶ್ವರಿ ಚಂದ್ರನನ್ತೆ ಚಂದವೆಯೆಸೆದಳ್ ॥ 1134 ॥

ಕಂ ॥ ಗಿರಿಸುತೆಯ ಚರಣ ಸರಸಿಜ
ಪದಭಕ್ತೆಯ ನಿರತಿಶಯದ ಗುಣದುಂನತೆಯಂ
ಧರೆ ಮೆಚ್ಚಿ ನುತಿಯಿಪರ್ಸ್ಸ
ಜ್ಜನನಿಧಿಯೆಂದು ಚಂದವೆಯನನವರತಂ ॥ 1135 ॥

ಕಂ ॥ ಲೋಕಯ್ಯಜನನಿಯೆನಿಸಿದು
ಮಾರಮಣಿಯ ವರದಪುತ್ರಿ ಸುಚರಿತ್ರೆಯೆಯೆಂ
ದೀಕೆಯನೆ ಮೆಚ್ಚಿ ಪೊಗಳ್ವ
ಲ್ಲೋರ್ಕದವದ್ದೇವಶಕ್ತಿವಧು ಚಂದವೆಯಂ ॥ 1136 ॥

186) ಮರ್ಕುಲಿ 174, E.C. VIII (R), ಕ್ರಿ.ಶ. 1173

ಇದರಲ್ಲಿ ಹೊಯ್ಸಳ ಎರಡನೆಯ ಬಲ್ಲಾಳನ ಪಟ್ಟಬಂಧೋತ್ಸವದ ಸಮಯದಲ್ಲಿ ಮಹಾದಾನ ಮಾಡುತ್ತಿದ್ದಾಗ, ಸಂಧಿವಿಗ್ರಹಿ ಬೂಚಿಮಯ್ಯನು ಮಱಿಕಲಿಯಲ್ಲಿ ತ್ರಿಕೂಟ ಬಸದಿಯನ್ನು ಮಾಡಿಸಿ, ದೇವರ ಸೇವೆಗೆಂದು ದತ್ತಿ ಬಿಟ್ಟದ್ದನ್ನು ಹೇಳಿದೆ.

ಯದುಕುಲ

ಕಂ ॥ ಶ್ರೀಕಾನ್ತರ್ಯ್ಯದುಕುಳರ
ತ್ನಾಕರದೊಳ್ಕೌಸ್ತುಭಾದಿಗಳವೋಲ್ಪಲರುಂ
ಲೋಕೋಪಕಾರಪರಿಣತ
ರೇಕಿಕೃತಸಕಳರಾಜಗುಣರಪ್ಪಿನೆಗಂ ॥ 1137 ॥

ಎರೆಯಂಗ

ಕಂ ॥ ಎಱಗಿದ ಜನಕ್ಕೆ ಪೊಂಮುಗಿ
ಲೆಱಗಿದವೊಲ್ ಲೋಕವಡ್ಡಮೆನೆ ಪೊಂಮಳೆಯಂ

ಕಱೆವನುಱಿದೆಱಿಗದಹಿತಂ
ಗೆಱಿಗಿದ ಬಱಿಸಿಡಿಳೆನಿಪ್ಪನೆಱೆಯಂಗ ನೃಪಂ ॥ 1138 ॥

ವಿಷ್ಣುವರ್ಧನ

ಕಂ ॥ ಮಂಡಳಮಂ ನಿಜಮಂ ದ್ವಿಜ
ಮಂಡಳಿಗಂ ದೇವತಾಲಯಕ್ಕಂ ಕೊಟ್ಟಂ
ಖಣ್ಡೆಯವತ್ತಳೆಯಂ ಪರ
ಮಂಡಳಮಂ ವೀರವಿಷ್ಣುವರ್ಧನನಾಳ್ದಂ ॥ 1139 ॥

ನರಸಿಂಹ I

ಮ ಸ್ರ ॥ ರಿಪು ಸರ್ಪದ್ದರ್ಪದಾವಾನಳಬಹಳಶಿಖಾಜಾಳಕಾಳಾಂಬುವಾಹಂ
ರಿಪುಭೂಪಾಳಪ್ರದೀಪಪ್ರಕರಪಟುತರಸ್ಫಾರಝುಂಝಾಸಮೀರಂ
ರಿಪುನಾಗಾನೀಕತಾರ್ಕ್ಷ್ಯಂ ರಿಪುನೃಪನಳಿನೀಷಣ್ಡವೇದಣ್ಡರೂಪಂ
ರಿಪುಭೂಭೃದ್ಭೂರಿವಜ್ರಂ ರಿಪುನೃಪಮದಮಾತಂಗಸಿಂಹಂನೃಸಿಂಹಂ
॥ 1140 ॥

ಮ ವಿ ॥ ಸ್ಥಿರನೇ ಭೂಭೃದಧೀಶ್ವರಂ ಸಧನನೇ ಲಕ್ಷ್ಮೀಸುತಂ ಮೂರ್ತಿಭಾ
ಸುರನೇ ವಿಷ್ಣುತನೂಭವಂ ಸುಭಟನೇ ತಾಂನರಸಿಂಹಂ ಗಡಂ
ಸ್ಥಿರತೇಜಸ್ವಿಯೆ ವಿಶ್ವವಿಕ್ರಮಗುಣಂ ನೈಸರ್ಗ್ಗಿಕಂ ನೋಳ್ಪಡೀ
ನರಸಿಂಹಂಗೆಣೆಯಪ್ಪ x x x ಗುಣಾದ್ಯಾರೋಪ ಭೂಪಾಳಕರ್ ॥ 1141 ॥

ಬಲ್ಲಾಳ II

ಕಂ ॥ ಸಕಳಕಳಾಪರಿಪೂರ್ಣ್ಣಂ
ಸಕಳೋರ್ವ್ವಿನಯನಸುಖದನಕಳಂಕಂ ಮ
ತ್ತಕುಟಿಳನಪೂರ್ವ್ವಾನವಶೀ
ತಕರಂ ಬಲ್ಲಾಳದೇವನುದಯಂಗೆಯ್ದಂ ॥ 1142 ॥

ಮ ಸ್ರ ॥ ವಿನಯಂ ವಿಕ್ರಾನ್ತಿಪುಣ್ಯೋದಯಮಿವರೊಳ್ಗೆ ಲೋಕೈಕಸಂಧಾನಸಂಪ
ಜ್ಜನಿತೈಕಾಯತ್ತರಾಜ್ಯಂ ಸುದೃಢಮೆನಿಪುದೀ ಸ್ಥೈರ್ಯ್ಯಸತ್ಕೀರ್ತ್ತಿಸಂಪ
ತ್ತಿನಿಮಿತ್ತಂ ಪೆತ್ತುಮಂ ಮುಪ್ಪರಿವಡೆದುಭಯಾಯತ್ತಸ x ದಿ ಬಲ್ಲಾ
ಳನರಾಜ್ಯಂ ರಾಮರಾಜ್ಯಂ ಸಕಳಜನಮನಃ ಪ್ರಾಜ್ಯಮತ್ಯನ್ತ ಪೂಜ್ಯಂ
॥ 1143 ॥

ಮ ವಿ ॥ ವಿನಯಶ್ರೀನಿಧಿಯಂ ವಿವೇಕನಿಧಿಯಂ ಬ್ರಹ್ಮಣ್ಯನಂ ಪೂರ್ಣ್ಣಪು
ಣ್ಯನನುದ್ದಾಮ ಯಶೋರ್ತ್ಥಿಯಂ ಜಿತಜಗತ್ತ್ರತ್ರರ್ತ್ಥಿಯಂ ಸರ್ವ್ವಸ
ಜ್ಜನ ಸಂಸ್ತುತ್ಯನನುದ್ಭವದ್ವಿತರಣ ಶ್ರೀ ವಿಕ್ರಮಾದಿತ್ಯನಂ
ಮನುಜೇಶರ್ಯ್ಯದುರಾಜರಾಜನನದೇಂ ಬಲ್ಲಾಳನಂ ಪೋಲ್ವರೇ॥ 1144 ॥

ಕಂ ॥ ಇದು ಸರ್ವ್ವಗ್ರಾಸಂಗೊ
ಳ್ವುದು ಭಾಸ್ವದ್ರಾಜಮಂಡಳಂಗಳ ನಿರ್ಮೋ
ಕ್ಷದ x ಯರೆಂಬಿನಮೀ
ಯದುಪತಿ ಬಲ್ಲಾಳಬಾಹುರಾಹುವಿಚಿತ್ರಂ ॥ 1145 ॥

ಮ ವಿ ॥ ದಿಗಿಭಂಗಳ್ ಮದವಿಹ್ವಳಂಗಳಚಳಂ ಕಲ್ಲೂರ್ಮ್ಮ ನಿಂತೊರ್ಮ್ಮೆಯುಂ
ಮೊಗಮೀಯಂ ಭುಜಗಾಧಿಪಂ ವಿಷಧರಂ ಸಾರಲ್ಕಯೋಗ್ಯಂಗಳೆಂ
ದು ಗುಣೋದಗ್ರಸಮಗ್ರಲಕ್ಷಣಲಸದ್ದೋರ್ದ್ದಂಡದೊಳ್ಸಂತೊಸಂ
ಮಿಗೆ ಭೂಕಾಮಿನಿಯಿರ್ದ್ದಪಳ್ x x x x ಬಲ್ಲಾಳ ಭೂಪಾಳನಾ ॥ 1146 ॥

187) ಹೆರಗು 147, E.C. VIII (R), ಕ್ರಿಶ. 1174

ಇದರಲ್ಲಿ ಹೊಯ್ಸಳ ದೊರೆಯಾದ ಎರಡನೆಯ ಬಲ್ಲಾಳನು ಹೆರಗಿನ ಪಾರ್ಶ್ವನಾಥ ಬಸದಿಗೆ ದತ್ತಿಯನ್ನು ನೀಡಿದಂತೆ ಹೇಳಿದೆ.

ಬಲ್ಲಾಳ II

ಮ ಸ್ರ ॥
ಮನಮೊಲ್ದುದ್ಯದ್ಯಶ ಶ್ರೀಪತಿ ನೆಲೆ ಮೊದಲಾಗಲ್ವನ್ನೆರಳ್ಜೊಂ
ನನಪಾರೌದಾರ್ಯ್ಯ ಪರ್ಯ್ಯಂನ್ನತನುಮುದಧಿಯುಂ ಮೇರುವಾಚಂದ್ರನು ನಿ
ಲ್ವಿನವತ್ಯುತ್ಸಾಹದಿಂದಂ ಪೆರಗಿನ ಜಿನಗೇಹಕ್ಕೆ ಬಿಟ್ಟಂ ಪುರಂಧ್ರೀ
ಜನಲೀಲಾನಂಗರೂಪಂ ಮಥನ ಜಯಭುಜಂ ವೀರಬಲ್ಲಾಳ ದೇವಂ ॥ 1147 ॥

ಜಕ್ಕವ್ವೆ

ಮ ವಿ ॥ ಅತಿಶೋಭಾಕರಮಪ್ಪ ವಿಷ್ಣುವಿನ ವಕ್ಷಸ್ಥಾನದೊಳ್ ಲಕ್ಷ್ಮಿಯು
ನ್ನತಿವೆತ್ತಿರ್ಪವೊಲಿರ್ಕೆ ಕೀರ್ತಿಯುತನೊಳ್ ಶ್ರೀಜಾಮನೊಳ್ ಕೂಡಿ ಸಂ
ಗತಸತ್ವರ್ ಬಹುಪುತ್ರರಂ ಪಡೆಯುತುಂ ಜಕ್ಕವ್ವೆ ಚಂದ್ರಾರ್ಕರುಂ
ಕ್ಷಿತಿಯುಂ ಮೇರುನಗೇಂದ್ರಮುಳ್ಳಿನೆಗಮಿಂ ಭದ್ರಂ ಶುಭಂ ಮಂಗಳಂ
॥ 1148 ॥

ಫಲಶ್ರುತಿ

ಮ ವಿ ॥ ಇವನೀಯಂದದಿನೆಯ್ದೆ ಪಾಲಿಸಿದವರ್ಗ್ಗಿಷ್ಟಾರ್ಥಸಂಸಿದ್ಧಿ ಸಂ
ಭವಿಕುಂ ಕೊಂಡಳಿದಂಗೆ ಗಂಗೆ ಗಯೆ ಕೇದಾರಂ ಕುರುಕ್ಷೇತ್ರಮಂ
ಬಿವಜೊಳ್ ಪೇಸದೆ ಪಾರ್ವರಂ ಗೊರವರಂ ಗೋಬೃಂದಮಂ ಪೆಂಡಿರಂ
ತವೆ ಕೊಂದಿಕ್ಕಿದ ಪಾಪಮೆಯ್ದುಗುಮವಂ ಬೀೞ್ಗುಂ ನಿಗೋದಂಗಳೊಳ್
॥ 1149 ॥

188) ಹುಲ್ಲೇನಹಳ್ಳಿ 102, E.C. VIII (R), ಕ್ರಿಶ. 1181

ಇದರಲ್ಲಿ ಹೊಯ್ಸಳ ಎರಡನೆಯ ನರಸಿಂಹ ಆಳಿಕೆಯಲ್ಲಿ ಹುಲ್ಲೇಹಳ್ಳಿಯ ವಡ್ಡಸೆಟ್ಟಿ, ಸಿವನಾಡ ಸಾಹಣಿಯರು ಮಲ್ಲಿಕಾರ್ಜುನದೇವರಿಗೆ ದತ್ತಿ ಬಿಟ್ಟದ್ದನ್ನು ಹೇಳಿದೆ.

ಮ ಸ್ರ ॥ ಪೆಸರ್ಗೊಂಡಾವಾವ ದೇಶಂಗಳನೆಣಿಸುವುದಾವಾವ ದುರ್ಗ್ಗಂಗಳಂ ಬ
ಣ್ಣಿಸುತ್ತಿರ್ಪ್ಪುದಾವಾವವನಿಪತಿಗಳಂ ಲೆಕ್ಕಿಸುತ್ತಿರ್ಪ್ಪುದೆಂಬೊಂ
ದೆಸಕಂ ಕಯ್ಗಣ್ಮೆ ನಾಲ್ಕುಂ ಕಡಲತಡಿವರಂ ದಿಗ್ಜಯಕ್ರೀಡೆಯೊಳ್ ಸಾ
ಧಿಸಿದಂ ಭೂಲೋಕಮಂ ಕ್ಷತ್ರಿಯ ಕುಳತಿಳಕಂ ವಿಷ್ಣು ಜಿಷ್ಣುಪ್ರತಾಪಂ
॥ 1150 ॥

189) ಹೊನ್ನಾವರ 95, E.C. VIII (R), ಕ್ರಿಶ. ಸು. 12ನೇ ಶತಮಾನ

ಇದರಲ್ಲಿ ಹೊಯ್ಸಳ ದೊರೆಯಾದ ಮೊದಲನೆಯ ನರಸಿಂಹನ ಮಹಾಪ್ರಧಾನ ಹೆಗ್ಗಡೆ ಲಕುಮಯ್ಯನು ಕೇಶವದೇವರಿಗೆ ಭೂಮಿಯನ್ನು ದತ್ತಿ ಬಿಟ್ಟಂತೆ ಹೇಳಿದೆ.

ಉ ಮಾ ॥ ಉತ್ತರಮಾಗೆ ಹಸ್ತಮಿಜಿವೀವೆಡೆಯೊಳ್ ಜಯಲಕ್ಷ್ಮಿ ಲಕ್ಷ್ಮಿಲೋ
ಕೋತ್ತರಮಾಗಿರಲ್ ನಡೆವ ಲ್ಕ್ಷ್ಮಚಮೂಪತಿಯಾಳ್ದನಟ್ಕಱಿಂ
ಪೆತ್ತು ಜನಂಗೆಳೆಯ್ದೆ ಮುದದಿಂ ಪೊಗೞುತ್ತಿರೆ ಭುಕ್ತಿಮುಕ್ತಿಗೆಂ
ದಿತ್ತನು ಭಕ್ತಿಯಿಂದೆಸೆವ ಕೇಶವಮೂರ್ತಿಗನಂತಭೂಮಿಯಂ ॥ 1151 ॥

190) ಕೋರವಂಗಲ 133, E.C. VIII (R), ಕ್ರಿಶ. ಸು. 12 ನೇ ಶತಮಾನ

ಇದರಲ್ಲಿ ಹೊಯ್ಸಳ ದೊರೆಯಾದ ಮೊದಲನೆಯ ನರಸಿಂಹನ ಆಳಿಕೆಯಲ್ಲಿ ಸಾಮಂತ ನಾಕರಸನು ಕೋರಮಂಗಲದಲ್ಲಿ ನಾಕೇಶ್ವರ ದೇವಾಲಯವನ್ನು ಕಟ್ಟಿಸಿ ಭೂಮಿಯನ್ನು ದತ್ತಿ ಬಿಟ್ಟಂತೆ ಹೇಳಿದೆ.

ನಾಕರಸ

ಶಾ ವಿ ॥ ತಂತ್ರ ಶ್ರೀಕರಣಾಧಿಕಾರನಿರತಂ ಪಂಚಾಂಗಸಂರಕ್ಷಕಂ
ಮಂತ್ರಾಳೋಚನ ನಿರ್ಜ್ಜಿತಾಮರಗುರುಪ್ರಜ್ಞಂ ಜಗದ್ವರ್ಧಕಂ
ಧಾತ್ರೀ ಸರ್ವ್ವಜನೋಪಕಾರಕರಣ ಕ್ರೀಡಾಗ್ರಹೀತಾವ್ರತಂ
ತನ್ತ್ರೀ ಮೇದುರನಾದ ಸೋದರಸುಧಾವಾಣೀಕಣಂ ನಾಕಣಂ ॥ 1152 ॥

ಶಾ ವಿ ॥ ಲೋಕೈಕಪ್ರಿಯದಿವ್ಯಸೇವ್ಯಸುಧೆಯಿಂ ಸಂಕಲ್ಪಿತಾರ್ಥಪ್ರದಾ
ನೈಕಾಕಾರಸುರದ್ರುಮಾಳಿಪದದಿಂ ವಾಚಸ್ಪತಿಖ್ಯಾತಿಯಿಂ
ನಾಕಂ ಮೇಲಖಿಳೋರ್ವಿ ಕೀೞೆನೆ ಜಗದ್ವಿಖ್ಯಾತಮೆಂದಂದು ಮ
ತ್ತೇಕೈಕೋತ್ತಮವಸ್ತುವಿಂ ದೊರೆಯೆ ಪೇೞ್ ನಾಕಂಗಿಳಾಲೋಕದೊಳ್ ॥ 1153 ॥

ಮ ವಿ ॥ ತನಗೀ ಲೋಕಮನೆಯ್ದೆ ರಕ್ಷಿಪ ಮನಂ ತಾನುಳ್ಳುದಾ ಪಕ್ಷಿಗಾ
ತ್ಮನನಂತೊಪ್ಪಿಸಲಪ್ಪುದೇ ಬೞಿಕೆ ಪೇೞ್ ಮಿಕ್ಕರ್ಗ್ಗದೇಗೆಯ್ವನೆಂ
ದನವದ್ಯಾತ್ಮಪರೋಪಕಾರಕರಣಂ ವಿಖ್ಯಾತಜೀಮೂತವಾ
ಹನನಂ ಕೇಳ ವಿವೇಕಿ ನಾಕಿ ನಗುವಂ ಲೋಕೋಪಕಾರೋದಯಂ ॥ 1154 ॥

ಮ ವಿ ॥ ಪಡೆವರ್ ಪೊಂಗಳನೆಲ್ಲರುಂ ತಮಗುಣಲ್ ಪೆಂಡಿರ್ಗೆ ಮಕ್ಕಳ್ಗೆ ಬ
ಯ್ತಿಡಲಂತಲ್ತು ನಿಜೇಷ್ಟಶಿಷ್ಟತತಿಗಿಷ್ಟಾಪೂರ್ತಮಂ ನಿರ್ಮ್ಮಿಸಲ್
ಪಡೆವಂ ಧರ್ಮದಿನರ್ಥಮಂ ಪರಹಿತವ್ಯಾಪಾರನೆಂದಂದು ಹೆ
ಗ್ಗಡೆ ನಾಕಣ್ಣನೆ ವಿಶ್ವಧಾತ್ರಿಯೊಳಗಿಂ ಧನ್ಯಂ ಪೆಱರ್ಧನ್ಯರೇ ॥ 1155 ॥

ನಾಕಣ

ಮ ವಿ ॥ ಎಸೆದಿರ್ದ್ದಿಂದು ಕಲಾಕಲಾಪಮುಮನಾ ದುಗ್ಧಾಬ್ಧಿಯೊಳ್ ಪುಟ್ಟಿದಾ
ಪೊಸ ಪೀಯೂಷಮುಮಂ ತೆರಳ್ಚಿ ಪದಪಿಂ ಧಾತ್ರಂ ಪದಂಗೆಯ್ವ ಸಂ
ತೊಸದಿಂ ಧರ್ಮ್ಮದೊಳೋದಿ ನಿರ್ಮ್ಮಿಸಿದನೀ ವಿಶ್ವಂಭರಾರಕ್ಷಣ
ವ್ಯಸನವ್ಯಾಪ್ತಯಶೋವಿಳಾಸವಿಳಸದ್ಭೂನಾಕನಂ ನಾಕನಂ ॥ 1156 ॥

ಮ ವಿ ॥ ನುಡಿಗಳ್ ಕರ್ಣರಸಾಯನಂ ತನು ಜಗನ್ನೇತ್ರಕ್ಕೆ ಚಂದ್ರೋದಯಂ
ಕುಡುವಾರ್ಪರ್ತ್ಥಿಜನಂಗಳಂಗಣನಿಧಿವ್ರಾತಂ ಸದಾಚಾರಮಾ
ಮೃಡಚೂಡಾಮಣಿಮಂದಮಂದವಿಸರದ್ಗಂಗಾಪಗಾಪೂತಮೆಂ
ದೊಡೆ ಪೋಲ್ವನ್ನನದಾವನಾಶ್ರಿತಕೃತಶ್ರೀಲೋಕನಂ ನಾಕನಂ ॥ 1157 ॥

ಕಂ ॥ ಮಿಗಿಲಬ್ಜಜಂಗೆ ವಾಗ್ದೇ
ವಿಗೆ ಚಾತುರ್ಯ್ಯದೊಳೆನಲ್ಕೆ ವಿಬುಧರ್ಗ್ಗೆಲ್ಲಂ
ಜಗದೊಳಗೆ ನೆಗಳ್ದ ನಾಕಂ
ದ್ವಿಗುಣಂ ತ್ರಿಗುಣಂ ಚತುರ್ಗ್ಗುಣಂ ಪಂಚಗುಣಂ ॥ 1158 ॥

ಮ ವಿ ॥ ನೆಲದೊಳ್ ಪೊಂಗಳನೇಕೆ ಪೂಳ್ವರೆನುತಂ ತಾಂ ಲುಬ್ಧರಂ ಮಾಣದಂ
ಡಲೆಯುತ್ತಿರ್ಪ ವಿವೇಕಿ ನಾಕಿ ಪಡೆದಾ ಸರ್ವಸ್ವಮಂ ಕೋರಮಂ
ಗಲದೊಳ್ ತನ್ನಯ ಜನ್ಮಭೂಮಿಯದಿಳಾವಿಖ್ಯಾತಮಪ್ಪಂತಿರಲ್
ಶಿಲೆಯೊಳ್ ಬಯ್ತನುಮೇಶ್ವರಾಲಯಕೃತಿವ್ಯಾಪಾರಪಾರಾಯಣಂ ॥ **1159** ॥

ಮ ವಿ ॥ ಸ್ಥಿರನೇ ಸದ್ಗುಣಿಯೇ ವಿವೇಕನಿಧಿಯೇ ವಿದ್ವಜ್ಜನಾಧಾರನೇ
ನಿರಹಂಕಾರವಿನೋದನೇ ಮನುಮುನಿಪ್ರಖ್ಯಾತನೇ ನಾಕನೇ
ಸ್ಥಿರನೇ ಸದ್ಗುಣಿಯೇ ವಿವೇಕನಿಧಿಯೇ ವಿದ್ವಜ್ಜನಾಧಾರನೇ
ನಿರಹಂಕಾರವಿನೋದನೇ ಮನುಮುನಿಪ್ರಖ್ಯಾತಕೀರ್ತಿಧ್ವಜಂ ॥ **1160** ॥

ಕಂ ॥ ಎರೆದ ಮನುಜಂಗೆ ಸುರಭೂ
ಮಿರುಹಂ ಶರಣೆಂದವಂಗೆ ಕುಲಿಶಾಗಾರಂ
ಪರವನಿತೆಗನಿಲತನಯಂ
ನಿರುಪಮಗುಣಧರ್ಮತತಿಪತಾಕಂ ನಾಕಂ ॥ **1161** ॥

ಉ ಮಾ ॥ ಒಂದೆ ಮುಹೂರ್ತದಲ್ಲಿ ಪರಮೇಶ್ವರನಂ ಪರಿವಾರ ದೇವತಾ
ಬೃಂದಸಮನ್ವಿತಂ ನೆಗಳ್ದ ಶಾಸನಮುಂ ಸಕಳೋರ್ವ್ವರಾಮರಾ
ನನ್ದಸಮನ್ವಿತಂ ಸಿರಿಯನರ್ತ್ತಿಗಳಲ್ಲಿ ಯಶಸ್ಸಮನ್ವಿತಂ
ಕುಂದದಿರಲ್ ಪ್ರತಿಷ್ಠಿಸಿದನೇಂ ಕೃತಕೃತ್ಯನೋ ನಾಕಿಲೋಕದೊಳ್॥ **1162** ॥

191) ಶಾಂತಿಗ್ರಾಮ 158, E.C. VIII (R), ಕ್ರಿಶ. ಸು. 12 ನೇ ಶತಮಾನ

ಇದರಲ್ಲಿ ಹೊಯ್ಸಳ ದೊರೆ ಎರಡನೆಯ ಬಲ್ಲಾಳನ ಆಳಿಕೆಯನ್ನು ಹೇಳಿದೆ. ಸರಸ್ವತಿಭಟ್ಟ ನಾರಾಯಣಸ್ವಾಮಿಯವರ ಶಿಷ್ಯರಾದ ಪರಮಹಂಸರ ಶಿಷ್ಯ ಅಚಲಪ್ರಕಾಶಯತಿಯು ಶಾಂತಿಗ್ರಾಮದಲ್ಲಿ ಮಾಡಿಸಿದ್ದ ಯೋಗನರಸಿಂಹ ದೇವಾಲಯಕ್ಕೆ, ದೊರೆಯು ದತ್ತಿ ಬಿಟ್ಟದ್ದನ್ನು ಹೇಳಿದೆ.

ವರಾಹ ಸ್ತುತಿ

ಚಂ ಮಾ ॥ ಅದಿರದು ಧಾತ್ರಿ ತುಳ್ಕದು ಕಡಲ್ನೆಲೆದಪ್ಪದು ದಿಗ್ಗಜಬ್ರಜಂ
ಬೆದಱದು ಮಧ್ಯಲೋಕದ ಜನಂ ಸಲೆ ಕಂಪಿಸದದ್ರಿ ತೊಟ್ಟನೆ
ತ್ತಿದನಿದು ಚೋದ್ಯಮೆಂದು ವಿಭುದರ್ಪ್ಪರಿಕೀರ್ತ್ತಿಸೆ ಪೊಕ್ಕು ಧಾತ್ರಿಯಂ
ಪದುಳದಿನೊಂದೆ ಕೋಡೊಳಿರದೆತ್ತಿದ ಸೂಕರನೀಗೆ ಭೋಗಮಂ
॥ **1163** ॥

ಚಂ ಮಾ ॥ ಬಳಸಿದ ಲಕ್ಷ್ಮಿ ಕಳ್ವಲತೆ ವಾರಿಧಿ ಸುತ್ತಿದ ವಾರಿ ತೋಳು ಮನಂ
ಗೊಳಿಸುವ ಶಾಖೆಯೊಳೀ ತಳಿರುಜ್ವಳ ಕೌಸ್ತುಭಮಾಗೆ ಶೋಭೆಯಂ
ತಳೆದ ಮುರಾರಿ ಕಳ್ವಕುಜದೊಳು ಭುವನತ್ರಯಸೃಷ್ಟಿ ಪುಷ್ಟಿಯಂ
ಫಳಿಯಿಸಲೆಂದು ಪುಟ್ಟಿದಲರಂತೆ ವೊಲಿರ್ದ್ದಿದು ನಾಭಿನೀರಜಂ ॥ 1164 ॥

ಕಂ ॥ ಅದಜೊಳ್ ವಿರಿಂಚಿತುಂಬಿವೊ
ಲುದಯಿಸಿದಂ ವೇದಸುಸ್ವರಂ ಮುಕ್ತರಜಂ
ತದಮಳಮಾನಸದೊಳ್ ಪು
ಟ್ಟಿದನತ್ರಿ ತದತ್ರಿನೇತ್ರಪುತ್ರಂ ಸೋಮಂ ॥ 1165 ॥

ಕಂ ॥ ಕಮಳಭವಂಬ್ರಹ್ಮಂ ತತು
ಕಮಳಜ ಹೃತ್ಕಮಳ ಜನ್ಮನತ್ರಿ ದೃಗುದ್ಯ
ತ್ಕಮಳಜನವಂಗೆ ಸೋಮಂ
ಕಮಳೋದಯ ರೂಢಿಯಾಯ್ತು ವಂಶಕ್ಕೆಲ್ಲಂ ॥ 1166 ॥

ಬಿಟ್ಟಿಗ

ಮ ವಿ ॥ ದೆಸೆಯೊಳ್ ನಿಶ್ಚಳಮಿರ್ಪದೇವರೆದೆ ಢಕ್ಕಾಧ್ವಾನದಿಂ ಢಕ್ಕೆ ವಾ
ಜಿಸೆ ಸೇನಾರಜದಿಂ ಕೆಸರ್ಮ್ಮಸಗೆ ವಾರಾಶಿಬ್ರಜಂ ಬೆಟ್ಟುಘ
ಟ್ಟಿಸಿದಂತಾಳೆ ಧರಿತ್ರಿಯೊಳ್ ವಿಜಯಯೋಗೋದ್ಯೋಗದಿಂ ಹೋಗಿ ಸಾ
ಧಿಸಿ ವೀರಾರಿನೃಪಾಳರಂ ಬರಿಸಿದಂ ಮೂವಟ್ಟಿಗಂ ಬಿಟ್ಟಿಗಂ ॥ 1167 ॥

ಬಲ್ಲಾಳ II

ಶಾ ವಿ ॥ ಸಂದುಗ್ರಾಹಿತರಕ್ತದಿಂದಮಳಿಜೂದತ್ತೀ ಮಹೀಚಕ್ರವಿಂ
ನೆಂದಿಂಗಾಱುವುದೊಟ್ಟಿದಟ್ಟೆಗಳ ಬೆಟ್ಟಲ್ಲೆಲ್ಲಿಯುಂ ಬಟ್ಟೆಯಿಂ
ನೆಂದಿಂಗಪ್ಪುದು ಮಾರಿಗಂ ಪಸಿವದೆಂದಿಂಗಪ್ಪುದೆಂಬೆಂನೆಗಂ
ಕೊಂದಂ ಸೇವುಣತಂತ್ರಮಂ ಬವರದೊಳ್ ಬಲ್ಲಾಳಭೂಪಾಳಕಂ ॥ 1168 ॥

ಮ ವಿ ॥ ರಸೆಯಂ ತಳ್ಕೆನೆ ತಾಗಿ ವಾಯುಪಥಮಂ ಪೊತ್ತೆತ್ತಿ ದಿಕ್ಸಂಧಿಯಂ
ವಸುಧಾಭಾಗದಿನೊತ್ತಿ ಸೀಳ್ದು ಕಡಲ x x x x x
ಟ್ಟಿಸಿವಿದ್ಯುದ್ನೃಪಕಾಂತೆಯರ್ಕ್ಕಳೆರ್ದೆಗಳ್ ಝಲ್ಲೆಂಜಿನಂ ಪೊಣ್ಮೆದ
ಳ್ಳಿಸುಗಂ ದಕ್ಷಿಣಚಕ್ರವರ್ತ್ತಿಯ ಲುಠತ್ಕೋದಂಡ ಮೌರ್ಬ್ಬೀರವಂ ॥ 1169 ॥

ಅಚಲಪ್ರಕಾಶಮುನಿ

ಮ ವಿ ॥ ಹರಿಹಂಸಂ ರವಿಹಂಸನಂಚೆ ಖಗರಾಜಂ ನಾಮದಿಂ ಹಂಸನೆಂ
ಬರವಂ ತಾಳ್ದಿವನೊಚ್ಚತಂ ಪರಮಹಂಸಂ ಸನ್ಮುನೀಂದ್ರಾಂಬುಜೋ
ತ್ಕರ ಹಂಸಂ ಕುಸುಮಾಸ್ತ್ರ ಸಂತಮಸಹಂಸಂ ಯೋಗ್ಯರಕ್ಷೈಕ ತ
ತ್ಪರಹಂಸಂ ಪೆಸರಿಂದಮಂತೆಸೆದರಾರು ವಿಶ್ವಂಭರಾಭಾಗದೊಳ್ ॥ 1170 ॥

ಮ ವಿ ॥ ದಯೆನಿಚ್ಚಲ್ವಳವಟ್ಟ ಸಾಧನ ಚತುಷ್ಕಂ ಕಟ್ಟೆ ವೇದಬ್ರಜಂ
ನಯಮಂ ಬೀರುವ ಚಾರುವಾರಿಜವನಂ ಕ್ರೌಂಚೋತ್ಕರಂ ಶಿಷ್ಯಸಂ
ಚಯಮಾಗುತ್ತಿರೆ ಸಂತತಂ ಪರಮಹಂಸಸ್ವಾಮಿ ತಾಂ ಹಂಸನಾ
ಗಿಯೆ ದಲ್ ಕ್ರೀಡಿಸುವಂ ವಿನಿರ್ಮ್ಮಳವೆನಿಪದ್ವೈತಕಾಸಾರದೊಳ್ ॥ 1171 ॥

ಮ ವಿ ॥ ಶ್ರುತಿ ಕಳ್ಪಾವನಿಜಂ ದಶೋಪನಿಷದಂ ಶಾಖಾಚಯ ಪರ್ಣ ಸಂ
ತತಿ ವರ್ಣ್ಣಂ ಕುಸುಮಂ ಪದಂ ಶತಗುಣೋಪ್ರೋಕ್ತಾತೀತಾನಂದಮ
ನ್ವಿತಗಾನಂದಮನೀವ ಪಕ್ವ ಫಳಮಪ್ಪಂನಂ ರಸಾಸ್ವಾದಸಾ
ರತೆಯಂ ಪೆತ್ತಚಳಪ್ರಕಾಶನೆ ಶುಕಂ ಸತ್ವಕ್ಷಶೋಭಾಸ್ಪದಂ ॥ 1172 ॥

ಚಂ ಮಾ ॥ ನೊಸಲೊಳಳಂಕೆಗೊಂಡಿರೆ ಮನಂ ಮನದಲ್ಲಿಯೆ ವಾಯುಪಂಚಕಂ
ಮಿಸುಕದೊಡಂಗೆ ಕಣ್ಗಳರೆಮುಚ್ಚಿದವೋಲಿರೆ ಪಂಕಜಾಸನಂ
ಬಿಸುಗೆಯ ನಾಳ್ದವೋಲಮರೆ ಹಸ್ತದೊಳೊಂದಿರೆ ಯೋಗಮುದ್ರೆ ರಂ
ಜಿಸುವುದಖಂಡಭೋಗದ ಸಮಾಧಿಯ ಪೆ x x x x x ॥ 1173 ॥

ಮ ವಿ ॥ ಅಚಳಂಯೋಗ ನಿಯೋಗಭಾವವಚಳನ್ತಂಸಂವಿತ್ತಿಮ x x
ತ್ತಚಳಮಂತ್ರ ಕಳಾವಿಳಾಸಮಚಳಂ ಶಿಷ್ಯಾನುಕೂಲ್ಯಂ ಸಮಂ
ತ ಚಳಂ ಧರ್ಮಪದ ಪ್ರತಿಷ್ಠಯಚಳಂ ಸತ್ಯಂ ದಮಂಶಾಂತಿಯುಂಸ
ದಚಳ ಪ್ರಕಾಶರ್ x x x ಅನವದ್ಯಾನ್ಯಾಮಸಂಪತ್ತಿಯೊಳ್ ॥ 1174 ॥

ಕಂ ॥ ಧರಣೀನಾಥರ ಸಪ್ತಾಂ
ಗರಾಜ್ಯಮೂನಾಂಗಮೆಂದು ಪರಮದಯಾಳಂ
ಕರಣರಚಳಪ್ರಕಾಶರ
ದೊರೆವೆತ್ತಷ್ಟಾಂಗಯೋಗ ರಾಜ್ಯಂ ನಗುಗುಂ ॥ 1175 ॥

ಕಂ ॥ ಹತ್ತು ಕರಣಂಗಳ್ ನೇಜಿ
ಹತ್ತುಂ ದೆಸೆಗೋಡಿ ಪೋದುವರಿಗಳವಾಜುಂ

ಪೊತ್ತಾನಲಾಜಿದುಳಿದವು
ಮತ್ತೇಂಯಚಳಪ್ರಕಾಶಮುನಿ ಬಲವಂತಂ ॥ 1176 ॥

ಮ ವಿ ॥ ಸುಡಿಗಳ್ ಪಂಡಿತಗೋಷ್ಠಿಯೊಳ್ ನವರಸ ಪ್ರಸ್ಯಂದಮಂ ಲೀಲೆಯಿಂ
ಪಡೆಗುಂ ಸನ್ಮುನಿಪಾರ್ಶ್ವದೊಳ್ ವಿಪುಳವೇದಾನ್ತ ಪ್ರದೀಪತ್ವಮಂ
ಪಡೆಗುಂ ಮನ್ನಿಸುತಿರ್ಪ್ಪದಾಜಿ ರಸಮಗ್ರಸ್ಥಾನದೊಳ್ಶೈಮೆಯಂ
ಪಡೆಗುಂ ಸಂದಚಳಪ್ರಕಾಶಮುನಿಪ ಶ್ರೀ ವಾಗುವಿದ್ಯಾಧರಂ ॥ 1177 ॥

ಮ ವಿ ॥
ಸಮಯಂಗಳ್ಕರ ಮೌಕ್ತಿಕಕ್ಕೆ ಸಮನೆಲ್ಲಂ ಮಂತ್ರದೊಳ್ ತಂತ್ರದೊಳ್
ಸಮಸಂದೊಪ್ಪುವ ಯಂತ್ರದೊಳ್ ಗಣಿತದೊಳ್ ಗಾಂಧರ್ವದೊಳ್ ಮನ್ಮಥಾ
ಗಮದೊಳ್ ವಾಸ್ತುವಿನೊಳ್ ಭಿಷಗ್ವಿಷಯದೊಳ್ ಸಾಹಿತ್ಯದೊಳ್ ನಾಟಕ
ಕ್ರಮದೊಳ್ ಸಂದಚಳಪ್ರಕಾಶನೆ ವಲಂ ಬಲ್ಲಂ ಪೆಜಿರ್ಬ್ಬಲ್ಲರೇ ॥ 1178 ॥

ಕಂ ॥ ಮುದದಿನಚಳಪ್ರಕಾಶರ
ಪದಿನಾಲ್ಕುಂ ವಿದ್ದೆಯೆಸಕಂ ಸ್ತುತಿಯಿಸಲೀ
ಪದಿನಾಲ್ಕುಂ ಲೋಕಮನಾ
ಬಿದಿಮುನ್ನಮೆ ಮಾಡಿ ಚದುರಂ ಪಡೆದಂ ॥ 1179 ॥

192) ನಿಟ್ಟೂರು 69, E.C. VIII (R), ಕ್ರಿ.ಶ. 1213

ಈ ಶಾಸನದಲ್ಲಿ, ಅರೆಯದಾರಿಯಲ್ಲಿ ನಡೆದ ಯುದ್ಧದಲ್ಲಿ ಬೇಡರ ಜಕ್ಕನು ಸತ್ತಾಗ ದೇವಯ್ಯ, ಮಾರಯ್ಯರು ವೀರಗಲ್ಲನ್ನು ಸ್ಥಾಪಿಸಿದುದನ್ನು ಹೇಳಿದೆ.

ಉ ಮಾ ॥ ನೋಡಿರೆ ವೀರನಂ ನೆಗಳ್ದ ಸಾಹಸಮಲ್ಲನನಾಜಿರಂಗದೊಳ್
ಕೂಡಿಯೆ ಬಂದರಂ ನೆಜಿಯೆ ಕಾಯಲು ನಿಂದನದೊಂದೆಬಿಲ್ಲಿನಿಂ
ಜೂಥಿಗೆ ಸಂದಮೆಟ್ಟಜೆಯ ದಾರಿಯೊಳೊಪ್ಪಿರೆ ನಾಡೆ x x x
x ಡಿಳೆನಿಟ್ಟನಂದದಡಿನ್ನಾ ಕಲಿಬೇಡರ ಜಕ್ಕನುರ್ವ್ವಿಯೊಳ್ ॥ 1180 ॥

ಕಂ ॥ ಹೆಂಡಿರುಡೆವುಚ್ಚುವಾಗಳ್
x x ಕಲಿಬಿಲ್ಲನೆಸೆಯೆ ಬೇಡರ ಜಕ್ಕಂ
ಖಂಡದೊಳಿಂಡೆಯನಾಡಿಯೆ
ಚ್ಚಂಡಂ ಕಲಿ ಸತ್ತು ಪಡೆದನಾ ಸುರಪುರಮಂ ॥ 1181 ॥

ಕಂ ॥ ಹೂವಿನ ವಿಮಾನವೇಱಿಸಿ
ತೀವಿದ ಜೌವನೆಯರೆಸೆವರತಿಚೆಂನೆಯರುಂ
ದೇವಾಂಗನೆಯರ್ಪ್ಪಲರುಂ
ಭಾವಿಸಿ ಸುರಲೋಕಕೆಸೆಯೆ ಜಕ್ಕನನುಯ್ದರ್ ॥ 1182 ॥

ಕಂ ॥ ಸುರವನಿತೆಯರುಯ್ಯಲೊಡಂ
ಸುರದುಂದುಭಿ ಪೊಯ್ಯೆ ಸುರಿಯೆ ಪೂವಿನ ಮೞೆಯುಂ
ಸುರಲೋಕದಲ್ಲಿ ಜಕ್ಕನ
ನಿರಿಸಿಯೆ ತಾಂ ವೀರರಸವ ಪಾಡಿದರಾಗಳ್ ॥ 1183 ॥

193) ಕುದುರೆಗುಂಡಿ 81, E.C. VIII (R), ಕ್ರಿಶ. 1214

ಈ ವೀರಗಲ್ಲು ಶಾಸನದಲ್ಲಿ ಹೊಯ್ಸಳ ದೊರೆ ಎರಡನೆಯ ಬಲ್ಲಾಳ ಆಳಿಕೆಯಲ್ಲಿ ಮಸಣೋಜನು ಭಂಡಿಮಿಟ್ಟೆಯ ಘಟ್ಟದಲ್ಲಿ ಕಳ್ಳರೊಂದಿಗೆ ಹೋರಾಡಿ, ಅವರನ್ನು ಕೊಂದು ತಾನೂ ಮರಣಹೊಂದಿದುದನ್ನು ಹೇಳಿದೆ.

ಕಂ ॥ ಅರವರಿಸದಾಳುತನದೊಳ್
ಪರಕಲಿಸಿದನೊಂದಿಯಟ್ಟಣಂಗಳೊಳಾಳ್ಕು
ದುರೆ ಕೊಳ್ಗುಳಲದನಿಱಿದುಂ
ಸುರಲೋಕ ಪ್ರಾಪ್ತನಾದನಾ ಮಸಣೋಜಂ ॥ 1184 ॥

194) ನಿಟ್ಟೂರು 70, E.C. VIII (R), ಕ್ರಿಶ. 1221

ಈ ವೀರಗಲ್ಲು ಶಾಸನದಲ್ಲಿ ಹೊಯ್ಸಳ ರಾಜನಾದ ಎರಡನೆಯ ಬಲ್ಲಾಳ ಆಳಿಕೆಯಲ್ಲಿ ಮಾಧವ ದಣ್ಣಾಯಕನು ವಜ್ರದೇವನ ಮೇಲೆ ದಂಡೆತ್ತಿ ಹೋದಾಗ ಬಮ್ಮನು ಕಾಳಗದಲ್ಲಿ ಕಾದಿ ಸತ್ತು ವೀರಸ್ವರ್ಗವನ್ನು ಪಡೆದನೆಂದು ಹೇಳಿದೆ.

ಚಂ ಮಾ ॥ ತೊಲತೊಲಗೆಂದು ಮಾರ್ಮಲೆವ ವಜ್ರನ ಸೇನೆಯನೊಕ್ಕಲಿಕ್ಕಿ ತಾಂ
ತೊಲಗದೆ ನಿಂದು ವೈರಿಭಟರುಂ ತವೆ ಕೊಂದು ರಣಾಜಿರಂಗದೊಳ್
ಮಲೆದಿದಿರಾಂತರಂ ತಱಿದು ಕಣ್ಬಸವೊತ್ತುವಿನೊಂದು ತಳ್ಗಿನಿಂ
ಕಲಿತನಮಂ ನೃಸಿಂಹನರನಾಥನ ನಾಯಕ ಬಮ್ಮನುರ್ವಿಯೊಳ್ ॥ 1185 ॥

ಕಂ ॥ ಬಱಿಸಿಡಿಲೆಱಗುವ ತೆಱದಿಂ
ದುಱಿದಾಂತರನಿಕ್ಕಿ ಪೊಕ್ಕು ಸಂಗರಧರೆಯೊಳ್
ಕುಱಿದಱಿದಱಿದಂ ಪಲಬರ
ನುಱೆಕಲಿ ನಿಟ್ಟೂರ ಮಾಚಗೌಂಡನ ಬಮ್ಮಂ ॥ 1186 ॥

ಹೊಳೆನರಸೀಪುರ ತಾಲ್ಲೂಕು

195) ಅಂಕನಾಥಪುರ 61, E.C. VIII (R), ಕ್ರಿಶ. ಸು. 10 ನೇ ಶತಮಾನ

ಇದರಲ್ಲಿ ಕದಂಬ ವಂಶದ ಬಾಸಬೆಯ ಮಗನಾದ ರಾಚೇಯನು ಮೋಹಪಾಶವನ್ನು ಹರಿದು ವ್ರತ ಮಾಡಿ ದೇವನಾದದ್ದನ್ನು ಹೇಳಿದೆ.

ಚಂ ಮಾ ॥ ತೊಱೆದುಱೆ ಮೋಹಪಾಶಮನಸುಂಗೊಳೆಯೊತ್ತಿದರುತ್ತಮಾದಮಿ
ನ್ನುಱುಗುಱೆ ಬಾಟಿಲೀಯದಿದು ನಿಕ್ಕುವಮೆಂಬುದನೊಪ್ಪೆ ಸಂಜಿ ತಾ
ನ್ನೆಱೆದ ಕದಂಬನಗ್ಗಳದ ಬಾಸಬೆಗಾದಮೆ ಪುತ್ರನುತ್ತಮ
ನ್ನೆಱೆದಿರೆ ನೋನ್ತು ಮೂರುದಿನಮಂ ಸುರನಾಗಿದನಿನ್ತು ರಾಚೆಯಂ
॥ 1187 ॥

196) ಮೂಡಲಹಿಪ್ಪೆ 108, E.C. VIII (R), ಕ್ರಿಶ. 1171

ಈ ವೀರಗಲ್ಲು ಶಾಸನದಲ್ಲಿ ಕೊಂಗಾಳ್ವ ರಾಜನಾದ ತ್ರಿಭುವನಮಲ್ಲ ವೀರದುಡ್ಡ ಕೊಂಗಾಳ್ವದೇವನ ಆಜ್ಞಾನುಸಾರವಾಗಿ ತಮ್ಮಡಿಯ ರುದ್ರನು ಮೊಳತೆಯಬೀಡಿನ ಯುದ್ಧದಲ್ಲಿ ಕಾದಿ ಮಡಿದನೆಂದು ಹೇಳಿದೆ.

ತಮ್ಮಡಿಯ ರುದ್ರ

ಕಂ ॥ ಎರೆವರ್ಥಿಜನಕೆ ಸುರತರು
ನಿರುತಂ ಕಾಮಿನಿಯರಲ್ಲಿಗಭಿನವ ಕಾಮಂ
ಪರಬಳಕೆ ಭೀಮಸೇನಂ
ಹರಪದಯುಗಭೃಂಗನೆನಿಪ ತಮ್ಮಡಿ ರುದ್ರಂ ॥ 1188 ॥

ಕಂ ॥ ಕ್ಷುದ್ರತೆಯಿಲ್ಲದೆ ರಣದೊಳ್
ಭದ್ರಗಜಂ ಪರಿದು ತಾಗುವಂತರಿಬಳಮಂ
ರೌದ್ರಾಕಾರದೆ ಕೊಲ್ಗುಂ
ರುದ್ರಂ ಕಾಳಾಗ್ನಿರುದ್ರನಂದದಿನಾಗಳ್ ॥ 1189 ॥

ಕಂ ॥ ಧರಣೀಪತಿ ಕೊಂಗಾಳ್ವಂ
ಗನುವರವಾದೆಡೆಗೆ ಪರಿದು ತಮ್ಮಡಿ ರುದ್ರಂ
ಪರಬಳವನಿಱಿದು ತಱಿದೊಡೆ
ಸುರಕಾಂತೆಯರುಯ್ದರವನನತಿಮುದದಿಂದಂ ॥ 1190 ॥

197) ಯಳ್ಳೇಶಪುರ 71, E.C. VIII (R), ಕ್ರಿಶ. 1238

ಇದರಲ್ಲಿ ಹೊಯ್ಸಳ ದೊರೆ ಸೋಮೇಶ್ವರನ ಆಳಿಕೆಯಲ್ಲಿ ಸೋವಣನು ಯಳ್ಳೇಶ್ವರ

ದೇವರ ಸೇವೆಗೆ ನೀಡಿದ ದತ್ತಿಯನ್ನು, ಅವನ ಗುರುಗಳಾದ ಬಂಮ್ಮಣ್ಣಗಳು ಒಂದು ಹೂದೋಟವನ್ನು, ತಂದೆ ನಾಗಣ್ಣನು ನೈವೇದ್ಯಕ್ಕೆಂದು ಗದ್ದೆ ದತ್ತಿಯನ್ನು ನೀಡಿದ್ದನ್ನು ಹೇಳಿದೆ.

ಚಂ ಮಾ ॥ ಸ್ಥಿರತರ ರೂಪು ಸಾಹಸದೊಳೊಂದಿದ ಪೌರುಷದೋಜೆಯಿಂ ನಿರಂ
ತರದೊಳೆ ಧೈರ್ಯ ಗುಣ್ಪು ನಿಜ ತೇಜವೊಡಂಬಡೆ ಸತ್ಯದಿಂ ಕರಂ
ಸುರುಚಿರಮಾದ ಬಲ್ಪು ಧೃತಿ ದಾನ ಗುಣಂ ಸುಭಗತ್ವ ಶೌಚಮಂ
ಸ್ಫುರಿಯಿಪ ಸತ್ವದಿಂ ನೆಗೞ್ದ ನಾಗನ ಸೋಮನ ನೈಜವೀ ಗುಣಂ ॥ **1191** ॥

ಚಂ ಮಾ ॥ ಕರಿತುರಯಂಗಳಿಂದೆಸೆವ ಪಟ್ಟದಸಾಹಣವೆಂಬ ತೇಜಮಂ
ಧುರದಜಯಕ್ಕೆ ತೋರ್ಪ್ಪ ಪುಲಿವೊಪ್ಪುವ ಶಿಂದದೆ ವಂಕಿಯಿಂ ನಿರಂ
ತರದೊಳೆ ಭೋಗಕರ್ಪ್ಪುರಕಧೀಶನೆ ನೀನೆನೆ ಸೋವಿರಾಯನಿಂ
ವರವೆನೆ ಪೆತ್ತ ನಾಗನ ಸುತಂ ಸಲೆ ಸೋಮನವೋಲ್ ಕೃತಾರ್ಥರಾರ್
॥ **1192** ॥

ಚಂ ಮಾ ॥ ಧುರದೊಳಿದಿರ್ಚಿದನ್ಯಸುಭಟಾಳಿಯ ಕಂಡು ಕನಲ್ದ ಕೋಪದಿಂ
ದುರವಣೆಯಿಂದವೇಱಿ ನಿಜ ಖಳ್ಗದೆ ಪೊಯ್ದೊಡೆ ಸೀಸಕಂ ಶಿರಂ
ಉರದ ತದೀಯ ಗದ್ದಿಗೆಯ ಪಲ್ಲಣವಂದಳ ಪಕ್ಕರಕ್ಕೆಯಂ
ತುರಗಮನುರ್ಚಿತಾ ನಿಜದ ತೋಳ್ವಲ ನಾಗನ ಸೋಮನುರ್ವಿಯೊಳ್
॥ **1193** ॥

198) ಮಾವನೂರು 95, E.C. VIII (R), ಕ್ರಿ.ಶ. 1282

ಇದರಲ್ಲಿ ಹೊಯ್ಸಳ ರಾಜನಾದ ಮೂರನೆಯ ನರಸಿಂಹನು ಮಾವನೂರಲ್ಲಿ ದೇವರಸನ ಹೆಸರಿನಲ್ಲಿ ಅವನ ತಮ್ಮ ಅಪ್ಪರಸನು ಕಟ್ಟಿಸಿದ ದೇವೇಶ್ವರ, ಅಪ್ಪರಸನ ಹೆಸರಿನಲ್ಲಿ ಅವನ ಹೆಂಡತಿ ದೇವವ್ವೆ ಕಟ್ಟಿಸಿದ ಅಪ್ಪೇಶ್ವರ ಎಂಬ ಎರಡು ದೇವಸ್ಥಾನಗಳಿಗಾಗಿ, ದೇವವ್ವೆಗೆ ತವನಿಧಿ ಎಂಬ ಗ್ರಾಮವನ್ನು ದತ್ತಿಯಾಗಿ ಕೊಟ್ಟಂತೆ ಹೇಳಿದೆ.

ಮಾವನೂರೊಡೆಯ ದೇವರಸ

ಚಂ ಮಾ ॥ ಜಡೆ ಮುಡಿಯೊಳ್ ಸುರಾಪಗೆಯನಾಂತ ಮಹೇಶ್ವರನೊಲ್ದ ಶೈವ ಸಂ
ಗಡಿಗನ ಪುಣ್ಯ ಪೋಷಕನ ವೀತ ಗುಣೌಘನ ಮರ್ತ್ಯ ಲೋಕದೊಳ್
ನಡೆವ ಶಶಾಂಕ ಶೇಖರನ ಸರ್ವ ಸಮ್ಯೆಕನ ಚಾರು ಮಾವನೂ
ರೊಡೆಯರೆನಿಪ್ಪ ದೇವರಸನುನ್ನತಶೀಳಮಿಳಾವಿಭೂಷಣಂ ॥ **1194** ॥

ಅಪ್ಪರಸ ದೇವರಸ

ವಚನ ॥

ಸ್ವಸ್ತಿ ಸಮಸ್ತ ಸಮುದ್ರಮುದ್ರಿತಮಪ್ಪ ಧರಾಕಾಂತೆಯ ಶಿರಃಕಂಜದಂತೆ,

ಪುರತ್ರಯ ವಿಪಿನ ದಹನ ದಾವಾನಳನ ಸುಕೃತ ಸರ್ವಸ್ವದ ಗವಸಣಿಗೆಯಂತೆ, ಸಕಳ ಭಕ್ತರ ಪುಣ್ಯಶಾಲೆಯಂತೆ, ಮುಕ್ತ್ಯಂಗನೆಯ ತಾಯ್ಮನೆಯಂತೆ, ಧರ್ಮಾರ್ಥ ಕಾಮ ಮೋಕ್ಷಂಗಳಪ್ಪ ಚತುರ್ವಿಧ ಪುರುಷಾರ್ಥಂಗಳ ಜನ್ಮಕ್ಷೇತ್ರದಂತೆ, ಮೆಱೆವ ಶ್ರೀ ಪರ್ವತದ ಮೇಲೆ ಮೂಜಗಕೆ ಸೋಜಿಗಮಪ್ಪೋಜೆಯಿಂ ರಾಜಿಸುವ ರಾಜೇಂದ್ರ ಚೂಡಾಮಣಿಯ ಮನ್ಮಥ ಮತ್ತೇಭಮೃಗಾಧಿಪನ, ಕೀನಾಶ ಬಳಬಳಾಹಕ ಮಹಾಬಳನ, ಶಾರ್ದೂಲ ದೈತ್ಯಧ್ವಾಂತ ಪ್ರದ್ಯೋತನನ, ದರ್ಪಿಷ್ಠ ಕುಂಜರಾಸುರ ಮರಾಳ ಹರ್ಷ ವಿಳಯಜಳದ ಗರ್ದನನ, ಸುರ ಸರಿತ್ಸಮುದ್ಭೂತ ಲೋಲತರ ಕಲ್ಲೋಲಮಾಲಾ ಸಂಘಟ್ಟಿತ ಜಟಾಜಾಲನ, ಶ್ರೀ ಪರ್ವತಾಧೀಶ್ವರನಪ್ಪ ಮಲ್ಲಿಕಾರ್ಜುನನ ಕಾರುಣ್ಯಕಾಂತಿ ಕಾಯಮಂ ತಳೆದಂತೆ ಜನಿಯಿಸಿದ ಪರ್ವತಯ್ಯ
ಚಂದ್ರನುದಯದಿಂ ಮುನ್ನಂ ಬೆಳ್ದಿಂಗಳೊಗೆವಂತೆ, ಫಳ ರಸಮನೀಂಟುವುದಱಿಂ ಮುನ್ನಂ ಸವಿ ಜಿಹ್ವೆಯಂ ಮುತ್ತುವಂತೆ, ತನಗೆ ಗುರುಪ್ರಾಪ್ತಿಯಪ್ಪುದಱಿಂ ಮುನ್ನಮೆ ಪೂರ್ವವಾಸನಾ ಸಂಬಂಧದಿಂದುರ್ವಿ ಕೊರ್ವಿ ಪರ್ವತಮನೇಱಿ ಶ್ರೀ ಮಲ್ಲಿಕಾರ್ಜುನನಂ ಸುತ್ತಿ ಮುತ್ತಿ ಪತ್ತಿ ಪರಿದು ನೆರೆದಾಲಿಂಗಿಸಿ ತನ್ನ ಚಿತ್ತವನೀಶಾಂಘ್ರಿಯೊಳ್‌ಸೆಱೆಯಿಟ್ಟ ನೇಹಮಂ ಕಂಡು

ಶ್ರೀ ಮಲ್ಲಿಕಾರ್ಜುನಂ ಕಾರುಣ್ಯಂ ಮಾಡೆ ಗುರು ಕಾರುಣ್ಯಂ ಬಡೆದು ಶಾಂತಿಯಂ ತಳೆದ ನಿರ್ಮಳ ಜ್ಯೋತಿಯಂತೆ ಮೆಱೆಯುತ್ತಿರೆ, ಶಿವನುಭಯನೇತ್ರದಿಂ ಚಂದ್ರ ಸೂರ್ಯರೊಗೆದಂತೆ ಪರ್ವತಯ್ಯನುಭಯವಹ ಕಾರುಣ್ಯ ಕಟಾಕ್ಷದಿಂದುದಯಿಸಿದ ಅಪ್ಪರಸ ದೇವರಸರ್ಗೆ ಚಂದ್ರಂಗೆ ಬೆಳ್ದಿಂಗಳಂ ಬೆಳ್ದಿಂಗಳಿಂಗೆ ಪರಿಮಳಮಂ ಪರಿಮಳಕ್ಕೆ ಸವಿಯಂ ಸವಿಗೆ ರೂಪಂ ರೂಪಿಂಗೆ ಸೌಂದರ್ಯಮಂ ಕೊಡುವಂತೆ ಉಪದೇಶಂ ಮಾಡೆ,

ಕೈಕೊಂಡ ಅಪ್ಪರಸ ದೇವರಸರ್ ಪುಟವಿಟ್ಟ ಪುಣ್ಯಂ ಪುರುಷಾಕಾರವಾದಂತೆ, ಶಾಂತಿ ಸಾಕಾರವೆತ್ತಂತೆ, ಪರಮಾರ್ಥಂ ಶರೀರವಡೆದಂತೆ, ಭಕ್ತಿ ಜ್ಞಾನಂ ಸಂಸಾರವಂ ಸವಿವಂತೆ, ಮೆಱೆಯುತ್ತೆ, ಲೋಭವಡಿಯಿಡದ ಕರಪಲ್ಲವಂಗಳ, ಅನೃತವಂಕುರಿಸದ ರಸನಾಪ್ರದೇಶದ, ಸಂಸ್ಕೃತಿ ಸರಸವಾಡದ ಚರಿತಶುದ್ಧಿಯ, ಕಾಮನ ಡಾಮರಕೊಳಸೋರದ ಮನದ ಬಿನದದ, ಮಾಯೆಯಾಜ್ಞೆಯನುಲ್ಲಂಘಿಸಿದ ಚಿತ್ತವೃತ್ತಿಯ, ಶಬ್ದ ಸ್ಪರ್ಶ ರೂಪ ರಸ ಗಂಧಾದಿ ಭೋಗಕ್ಕೆಳಸದ ಕರಣಾವಳಿಯ ಮಹಾಮಹಿಮರೆನಿಸಿ, ತಿಲ ಮಧ್ಯದೊಳಿರ್ಪ ತೈಲದಂತೆ, ಕಾಷ್ಠಮಧ್ಯದೊಳಿರ್ಪ ಅಗ್ನಿಯಂತೆ, ಜಲಮಧ್ಯದೊಳಿರ್ಪ ಕಮಳದಂತೆ, ತಾಂ ಮಾನುಷ ಚರಿತರಪ್ಪುದಱಿಂ ಸಂಸಾರಮಂ ಸೋಂಕದೆ ಅನವರತಂ ಶಿವನೊಳವಿರಳಪೂಜೆಯಂ ಮಾಡುತಂ ಮೂಲೋಕಮಂ ತೀವಿದ ಶೈವಕೀರ್ತಿಯಂ ತಳೆದು ಸುಖದೊಳಿರ್ದರ್

199) ಬಾಗಿವಾಳು 103 A, E.C. VIII (R), ಕ್ರಿ.ಶ. 1303

ಈ ವೀರಗಲ್ಲು ಶಾಸನದಲ್ಲಿ ಹೊಯ್ಸಳ ದೊರೆಯಾದ ಮೂರನೇ ಬಲ್ಲಾಳ ಆಳಿಕೆಯಲ್ಲಿ ಸೋಮೆಯನಾಯಕನು, ಕಂಪಿಲದೇವನು ಹೊಳಲ್ಕೆರೆಯನ್ನು ಮುತ್ತಿಗೆ ಹಾಕಿದಾಗ ಹೋರಾಡಿ ಮಡಿದುದನ್ನು ಹೇಳಿದೆ.

ಕಂ ॥ ಜೀಯೆನುತಿರೆ ಪರಿವಾರಂ
ರಾಯಂ ಬಲ್ಲಾಳದೇವ ಚಾಗೆನೆ ರಿಪುಗಳ
ಬಾಯನೊಱಿಮಾಡಿ ಖಳ್ಗಮ
ನಾಯತದಿಂ ತೊಡಿಸುತಿರ್ಪ್ಪ ಮಯ್ದುನ ಸೋಮನ್ ॥ 1195 ॥

ಆಂಧ್ರಪ್ರದೇಶ ರಾಜ್ಯ

ಅನಂತಪುರ ಜಿಲ್ಲೆ

1) ಹೇಮಾವತಿ, ಮಡಕಶಿರಾ ಮಂ. 165, E.C. XXV, ಶಿರಾ 165, ಕ್ರಿಶ. 942

ಇದರಲ್ಲಿ ನೊಳಂಬಾದಿರಾಜನ ಆಳಿಕೆಯಲ್ಲಿ ದಿಲೀಪರಸನಿಂದ ಸನ್ನೇಶ್ವರದೇವರಿಗೆ ದತ್ತಿಯನ್ನು ಪಡೆದ, ವಕ್ಕಾಣಿಭಟಾರರ ಶಿಷ್ಯನಾದ ಚಿಲ್ಲುಕಭಟಾರನ ತಪಸ್ಸನ್ನು ಬಣ್ಣಿಸಲಾಗಿದೆ.

ಚಂ ಮಾ ॥ ಹರನರಸಂ ಸುರರ್ನ್ನೆರದ ಗುಣ್ಡು ಜಟಾವಳಿ ತೊಂಗಲಿನ್ದ್ರದು
ರ್ದ್ಧರಗಿರಿ ಸೇತು ಧರ್ಮ್ಮಗಟಿಯಜ್ಞದ ಮದ್ದಳೆ ಧೂಮವೇಳೆ ವಿ
ಸ್ಫುರಿತ ಶಿವಾಗಮಂ ಸುರಿಗೆಯಾಗಿರೆ ಪಾಪವನೊತ್ತಿ ಕುತ್ತಿ ನಿ
ಷ್ಠುರಮಿಱಿದಿನ್ತು ಕೊನ್ದ ತಪದಜ್ಕಮಿದೀ ತಪದಜ್ಕಕಾರನಾ ॥ 1 ॥

2) ಹೆಂಜೇರು, ಮಡಕಶಿರಾ ಮಂ. 96, E.C. XXV, ಶಿರಾ 96, ಕ್ರಿಶ. 982

ಇದರಲ್ಲಿ ರಾಷ್ಟ್ರಕೂಟರ ದೊರೆ ಇಂದ್ರರಾಜನನ್ನು ಹೊಗಳಿ, ಅವನು ವ್ರತಮಾಡಿ, ದೇವಲೋಕವನ್ನು ಪಡೆದನೆಂದು ಹೇಳಿದೆ.

ಇಂದ್ರರಾಜ

ಚಂ ಮಾ ॥ ವನದಿನಭೋನಿಧಿ ಪ್ರಮಿತ ಸಂಖ್ಯೆ ಶಕಾವನಿಪಾಳ ಕಾಳಮಂ
ನೆನೆಯಿಸೆ ಚಿತ್ರಭಾನು ಪರಿವರ್ತ್ತಿಸೆ ಚೈತ್ರ ಸಿತೇತ ರಾಷ್ಟಮೀ
ದಿನಯುತ ಭೌಮವಾರದೊಳನಾಕುಳ ಚಿತ್ತದೆ ನೋನ್ತು ತಾಳ್ದಿದಂ
ಜನನುತನಿನ್ದ್ರರಾಜನಖಿಳಾಮರರಾಜ ಮಹಾವಿಭೂತಿಯಂ ॥ 2 ॥

3) ಮಧೂಡಿ, ಹಿಂದೂಪುರ ಮಂ. 83, ಕ.ವಿ.ಶಾ.ಸಂ. V, ಕ್ರಿಶ. 1169

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ಜಗದೇಕಮಲ್ಲನ ಆಳಿಕೆಯಲ್ಲಿ ಹಿರಿಯ ತಂತ್ರಪಾಳ ನಾಮಣನು ಮಧುವಾಡಿಯಲ್ಲಿ ನಾಗೇಶ್ವರ ದೇವಾಲಯವನ್ನು ಮಾಡಿಸಿ, ದತ್ತಿ ನೀಡಿದುದನ್ನು ಹೇಳಿದೆ.

ಕೊಟ್ಟಿತೊಣೆ

ಕಂ ॥ ಸುರರಾಜಪುರ ಕಮಳಕಾ
ಪುರಕಾ ಧರಣೇಂದ್ರ ಪುರಕ್ಕದೇ ತೆಱದಿಂದಂ
ಪರಿಕಿಪೊಡೆ ಕಾರ್ತಿಕೇಯನ
ಪುರವಧಿಕಂ ಕೊಟ್ಟತೊಣೆ ಸಮಸ್ತಾವನಿಯೊಳ್ ॥ 3 ॥

ತಂತ್ರಪಾಳ ನಾಮಣ

ಚಂ ಮಾ ॥ ಮನುಜ ಮನೋಜನೆಂಬುದಬಳಾಜನ ಕಂತಕನೆಂಬುದಾಂತರಂ
ಮುನಿದು ಕಡಂಗಿ ಕೊಲ್ವೆಡೆಗೆ ಭಾನುಜನೆಂಬುದು ಬೇಳ್ವವರ್ಗೆ ಹಾ
ವನಿ ಪರನಾರಿಗೆಯೆಂಬುದು ಧರಿತ್ರಿ ನೆಗಳ್ತೆಯ ತಂತ್ರಪಾಳ ನಾಮ
ಣನನುದುವೃತ್ತರಾತಿಗತಿ ಭೀಮನನುದ್ಧತ ದೈತ್ಯರಾಮನಂ ॥ 4 ॥

4) ಮಲಯನೂರು, ಕಲ್ಯಾಣದುರ್ಗ ಮಂ. 184, ಕ.ವಿ.ಶಾ.ಸಂ. V, ಕ್ರಿ.ಶ. 1179

ಇದರಲ್ಲಿ ಕಲ್ಯಾಣದ ಚಾಲುಕ್ಯ ದೊರೆಯೊಬ್ಬನ ಆಳಿಕೆಯಲ್ಲಿ ಅವನ ಮಹಾಮಂಡಳೇಶ್ವರ ಮಲ್ಲದೇವ ಚೋಳ ಮಹಾರಾಜನ ರಾಣಿ ಲಕ್ಷ್ಮಾದೇವಿಯನ್ನು ಹೊಗಳಿದೆ.

ಕಂ ॥ ದೇವದ್ರುಮಮಂ ಲಕ್ಷ್ಮಾ
ದೇವಿಯುಮಂ ಕಮಳಸಂಭವಂ ತೂಗಿದೊಡಾ
ದೇವದ್ರುಮಕ್ಕೆ ಲಕ್ಷ್ಮಾ
ದೇವಿ ದಶಾಫಲದ ಬಿಣ್ಪಿನಿಂ ಘನವಾದಳ್ ॥ 5 ॥

5) ಮಲಕಾಪುರಂ, ಆದೋನಿ ಮಂ. 308, ಕ.ವಿ.ಶಾ.ಸಂ. V, ಕ್ರಿ.ಶ. 1184

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ತ್ರೈಳೋಕ್ಯಮಲ್ಲ ಸೋಮೇಶ್ವರನ ಆಳಿಕೆಯಲ್ಲಿ ಎಜೆಯಮ್ಮಸೆಟ್ಟಿ ಕರೆಕಂಠದೇವಪುರದಲ್ಲಿ ಮಾಡಿಸಿದ ಬ್ರಹ್ಮೇಶ್ವರದೇವರಿಗೆ, ಮಹಾದಂಡನಾಯಕ ಪದ್ಮದೇವರಸ ಹಾಗೂ ಮಹಾಪ್ರಧಾನ ವತ್ಸರಾಜನು ನೀಡಿದ ದತ್ತಿಯನ್ನು ಹೇಳಿದೆ.
ದಂಡನಾಯಕ ಕಾಳಿದಾಸನನ್ನು ಹೊಗಳಿದೆ.

ಕಾಳಿದಾಸನ ಮಗ ಲಕ್ಷ್ಮೀದೇವ

ಮ ವಿ ॥ ಬಳವದ್ವೀರ ಚಳುಕ್ಯ ಭೂಪಸಚಿವಂ ಖ್ಯಾತಂ ಹರಿಶ್ಚಂದ್ರನು
ಜ್ವಳ ಕೀರ್ತಿ ಪ್ರಿಯನಾತನಗ್ರತನಯಂ ಶ್ರೀಕಾಳಿದಾಸಂ ಪ್ರಧಾ
ನಲಲಾಮಂ ತದನುಪ್ರಸೂತನಧಿಕಂ ಶ್ರೀಲಕ್ಷ್ಮೀದೇವಂ ಮಹೀ
ತಳಮಂ ಮಂತ್ರಬಳ ಪ್ರತಾಪಭರದಿಂ ಸ್ವಾಯತ್ತಮಂ ಮಾಡಿದಂ ॥ 6 ॥

ಬಮ್ಮಿದೇವ

ಮ ವಿ ॥ ಅದಟಂ ಸಾಧಿತನುರ್ವ್ವಿಶಾತ್ರವ ಕುಳ ತತ್ಕಾಳಿದಾಸಂಗ ಪು
ಟ್ಟಿದನುನ್ಮೂಳಿತ ದುರ್ಗವರ್ಗನಧಿರಾಜ ಪ್ರಾಜ್ಯಸಾಮ್ರಾಜ್ಯ ಸಂ
ಪದದುನ್ನತ್ತುಹಿನಾಂಶು ಬಾಹುಬಳ ಭೀಮಂ ಮಂತ್ರಿವರ್ಯ್ಯ ಜಗ
ದ್ವಿದಿತಂ ತುಂಬುಳ ಬಂಮಿದೇವನೆನಿಪಂ ಹಂಸಾಂಗನಾವಲ್ಲಭಂ ॥ 7 ॥

ಮ ವಿ ॥ ಬೆಸನಂ ರಾಯಮುರಾರಿ ಸೋಮಮಹಿಪಂ ಪೇಳಲ್ಬರಂಗೆಯ್ಯದೆ
ಯ್ದಿಸಮಗ್ರಾಜಿಯೊಳಲ್ಲು ಮಲ್ಲ ನೃಪನಂ ಮುಂ ಕಟ್ಟಿದಂ ಮತ್ತಮೊ

ರ್ಮ್ಮ ಸಮುದ್ರಾವಧಿಯಾಗೆ ಚೋಳೆಯನಾಡಂ ಸೂಱೆಗೊಂಡಾತನಂ
ಮಸಕಂಗುಂದಿಸಿ ವಾರ್ಧಿಯಂ ಪುಗಿಸಿದಂ ಶ್ರೀಬ್ರಹ್ಮದಂಡಾಧಿಪಂ ॥ 8 ॥

ಚಂಡುಗಿ ದಂಡನಾಯಕಂ

ಉ ಮಾ ॥ ಆತನ ತಮ್ಮನತ್ಯಧಿಕ ತೇಜನುಮಾರಣಾಂಘ್ರಿ ಪದ್ಮಸಂ
ಪೂತಮನಸ್ಥನಿಂದ್ರವಿಭವಂ ಪರಿರಕ್ಷಿತ ಭೂಮಿ ಭೂಸುರ
ವ್ರಾತನಖಂಡಿತಾಚರಿತ ದಾನಚಯಂ ಸಫಳೀ ಕೃತಾತ್ಮ ಪು
ಣ್ಯಾತಿಶಯಂ ವಿರಾಜಿಸಿದನುರ್ವಿಗೆ ಚಂಡುಗಿ ದಂಡನಾಯಕಂ ॥ 9 ॥

ಪದ್ಮಿದೇವ

ಉ ಮಾ ॥ ತುಂಬುಳ ಬಮ್ಮಿದೇವ ರಥಿನೀಪತಿಗಂ ಸುಜನಪ್ರಣೂತ ಹರಿ
ಸಾಂಬಿಕೆಗಂ ಮನೋರಥಮ ಪುಟ್ಟುವ ಮಾಳ್ಕೆಯಿನೊಲ್ದು ಪುಟ್ಟಿ ವಂ
ಶಾಂಬರಮಂ ಪ್ರಭಾವಿಸಿದನಪ್ರತಿಮ ಪ್ರಬಳ ಪ್ರತಾಪಿ ವೀ
ರಾಂಬುಧಿ ಪದ್ಮಿದೇವನೆನೆ ಸಂದನಮಾತ್ಯಜನೈಕ ಭೂಷಣಂ ॥ 10 ॥

ಎರೆಯಮ್ಮಸೆಟ್ಟಿ

ಉ ಮಾ ॥ ಶ್ರೀನಿಳಯಂ ವಿವೇಕಿ ನಗರಾಗ್ರಣಿ ವೈಶ್ಯಲಲಾಮನುತ್ತಮಂ
ಮಾನಿತಗೋತ್ರನೀಶ್ವರಪದಾಂಬುಜ ಭಕ್ತನುದಾರಯುಕ್ತನು
ತ್ತಾನಿತ ತೇಜನಾಶ್ರಿತ ಜನಾಮರಭೂರುಹನೆಂದು ಸನ್ತತಂ
ತಾನೊಲವಿಂದ ಬಂಣಿಪುದು ಧಾರಿಣಿಯಿಂತೆಱೆಯಮ್ಮಸೆಟ್ಟಿಯಂ ॥ 11 ॥

ಹೋಚಿಸೆಟ್ಟಿ

ಉ ಮಾ ॥ ಆ ವಿಭುವಿಂಗೆ ಪುಟ್ಟಿದನುದಾರ ಗುಣಾಂಬುಧಿ ಹೋಚಿಸೆಟ್ಟಿ ನಾ
ನಾವಿಧ ವಸ್ತುವೀಕ್ಷಣ ವಿಚಕ್ಷಣನಕ್ಷಯ ಪುಣ್ಯನಬ್ಧವೇ
ಳಾವಧಿವರ್ತಿತಕೀರ್ತಿ ಶುಭಮೂರ್ತಿ ಗುರುದ್ವಿಜ ದೇವಭಕ್ತ x
ತೀವಸುಧಾತಳಾಗ್ರದೊಳದೇಂ ಪೆಸರ್ವೆತ್ತನೊ ವೈಶ್ಯಮಂಡನಂ ॥ 12 ॥

6) ನಂದವರಂ, ಆದೊನಿ ಮಂ. 297, ಕ.ವಿ.ಶಾ.ಸಂ. V, ಕ್ರಿ.ಶ. 1186

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ವೀರನಾರಾಯಣ ಸೋಮೇಶ್ವರದೇವನ ಆಳಿಕೆಯಲ್ಲಿ ದಂಡನಾಯಕ ಮಾಳಪರಸನು ಅಗ್ರಹಾರ ನಂದಾವುರದ ಮಲ್ಲಿಕಾರ್ಜುನದೇವರ ಸೇವೆಗೆ ನೀಡಿದ ದತ್ತಿಯನ್ನು ಹೇಳಿದೆ. ಈ ಶಾಸನವನ್ನು ರಚಿಸಿದವನು ಭಾಸ್ಕರಕವಿ.

ಬೊಪ್ಪದೇವನ ಮಗ ಮಾಳಪ

ಮ ವಿ ॥ ಅರಿಭೂಭೃದ್ಬಳ ಭಂಜನಂ ಜನನುತೋದ್ಯತ್ಕೀರ್ತಿ ಲಕ್ಷ್ಮೀಶ್ವರಂ
ವರವಂಶ ಪ್ರಭವಂ ಭವಸ್ತುತ ಪದಾಂಭೋಜಾತ ಸೇವಾಪರಂ
ಪರಮೋಪಾಯ ಚತುರ್ಭುಜಂ ಭುಜಬಳಸ್ವಾಯತ್ತ ಸಾಮ್ರಾಜ್ಯ ಸೌ
ಖ್ಯರತಂ ಮಾಳಪದಂಡನಾಥನೆಸೆದಂ ಶ್ರೀಬೊಪ್ಪ ದೇವಾತ್ಮಜಂ ॥ 13 ॥

ಕಂ ॥ ಪವನ ಪಥದನ್ತುಪಾಶ್ರಿತ
ಕವಿರಾಜನನನ್ತನಂತೆ ಬಹುಭೋಗಧರಂ
ದಿವಸಕರನಂತೆ ತೇಜೋ
ಭವನಂ ಮಾಳಪ ಚಮೂಪನೆಸೆವಂ ಧರೆಯೊಳ್ ॥ 14 ॥

7) ಹೆಂಜೇರು, ಮಡಕಶಿರಾ ಮಂ. 102, ಕ.ವಿ.ಶಾ.ಸಂ. V, ಕ್ರಿಶ. 1206

ಇದರಲ್ಲಿ ಹೊಯ್ಸಳರ ದೊರೆಯಾದ ಮೂರನೆಯ ಬಲ್ಲಾಳನ ಸೇನಾಧಿಪತಿ ದಾಮದಂಡನಾಯಕನು ಹೆಂಜೇರ ನೊಣಂಬೇಶ್ವರದೇವರಿಗೆ ದತ್ತಿಯನ್ನು ಬಿಟ್ಟಂತೆ ಹೇಳಿದೆ.

ದಾಮದಂಡನಾಯಕನ ವಂಶಾವಳಿ

ಮ ವಿ ॥ ಕರಮೊಪ್ಪಿರ್ಪುದು ಧಾತ್ರಿಯೊಳ್ ಕರಡಿಕಲ್ ನಾಡಂತದರ್ಕಾಸ್ಪದಂ
ತಿರೆ ಶೋಭಿಪ್ಪುದು ನಂದವಾಡಿಗೆಯೆನಿಪ್ಪೊಂದಗ್ರಹಾರಂ ಧರಾ
ಮರ ಮುಖ್ಯಂ ನರಸಿಂಹದೇವ ಘಳಿಸಂ ತಾನಲ್ಲಿ ಪೆಂಪುಳ್ಳನಾ
ಪುರುಷಂಗಾದ ತನೂಭವಂ ಬಹುಕಳಾ ಲಕ್ಷ್ಮೀಧರಂ ಶ್ರೀಧರಂ ॥ 15 ॥

ಮ ವಿ ॥ ನೆಗಟ್ದಾ ಶ್ರೀಧರದೇವನೆಂಬಧಿಕ ಪುಣ್ಯಂಗಾದ ಪುತ್ರಂ ಸಮ
ಸ್ತ ಗುಣವ್ರಾತ ಸಮೇತನಪ್ಪ ಮಹದೇವಂ ತನ್ಮಹಾದೇವ ಮಂ
ತ್ರಿಗೆ ಕಂಜೋದರ ಮೂರ್ತಿಯಪ್ಪ ಮಗನಾದಂ ಮಲ್ಲಿದೇವಂ ಬಱಿ
ಕ್ಕೊಗೆದಂ ಮಲ್ಲರಸಂಗೆ ಬೆಟ್ಟರಸನೆಂಬೀ ನಂದನಂ ನಲ್ಮೆಯಿಂ ॥ 16 ॥

ಬೆಟ್ಟರಸನ ಮಗ ದಾಮ

ಉ ಮಾ ॥ ಮಾಧವದಂಡನಾಥನನುಜಂ ವಿಭುಕೇಶವ ಮಲ್ಲಿದೇವಂ ದಂ
ಡಾಧಿಪರಗ್ರಜಂ ನೆಗಟ್ದ ಮಾಣಿಕದೇವನ ತಂದೆ ಮಾಯಿದೇ
ವೀಧವನೊಳ್ಪುವೆತ್ತೆಸೆವ ಲಕ್ಷ್ಮಿಯ ನಂದನನೆಂದು ಬಣ್ಣಿಕುಂ
ಶ್ರೀಧರಮೂರ್ತಿಯಂ ವಿಶದ ಕೀರ್ತಿಯನೀ ಧರೆ ದಾಮರಾಜನಂ ॥ 17 ॥

8) ತಾಡಪತ್ರಿ, ತಾಡಪತ್ರಿ ಮಂ. 207, ಕ.ವಿ.ಶಾ.ಸಂ. V, ಕ್ರಿಶ. 1208

ಇದರಲ್ಲಿ ಮಹಾಮಂಡಲೇಶ್ವರ ಉದಯಾದಿತ್ಯದೇವನು ತನ್ನ ರಾಜಧಾನಿ

ತಾಟಿಪಾರಪುರದಲ್ಲಿರುವ ಚಂದ್ರನಾಥ ಪಾರ್ಶ್ವನಾಥದೇವರ ಬಸದಿಗೆ ಭೂಮಿಯನ್ನು ದತ್ತಿ ನೀಡಿದಂತೆ ಹೇಳಿದೆ.

ಜಂಬೂದ್ವೀಪ

ಕಂ ॥ ನವರತ್ನ ಭರಿತ ಜಳಚರ
ನಿವಹ ಪರಿಕ್ಷುಭಿತ ಬಹಳ ಕಲ್ಲೋಳ ರವ
ಪ್ರವಿಘೂರ್ಣಮಾನ ಲವಣಾ
ರ್ಣವ ಪರಿವೃತಮೆನಿಪುದುಂಟು ಜಂಬೂದ್ವೀಪಂ ॥ 18 ॥

ತಾಟಿಪಾರಪುರ

ಕಂ ॥ ಆ ಜನಪದಕ್ಕೆ ತಲೆ ಸಲೆ
ರಾಜಾಶ್ರಯಮೆನಿಸಿ ತಾಟಿಪಾಱ ಪುರಂ ವಿ
ಭ್ರಾಜಿಸುಗುಮಮರ ಪನ್ನಗ
ರಾಜ ಪುರಕ್ಕೆಣೆಯೆನಿಪ್ಪ ಮಹಿಮೋನ್ನತಿಯಿಂ ॥ 19 ॥

ಉ ಮಾ ॥ ಪೆನ್ನೆ ನಿಸರ್ಗದಿಂದೆವಲಿಬನ್ನೆ(?)ಯನೂನ ಜಲಪ್ರವಾಹ ಸಂ
ಪನ್ನೆ ನದಿ ನದ ಪ್ರಕರದೊಳ್ ಕಡು ಚೆನ್ನೆ ತಟೀ ಮಹೀರುಹೋ
ತ್ಪನ್ನ ಫಳಾವಿಪನ್ನೆ ನಿಜ ನಿರ್ಮಳಿನೋದಕದಿಂ ಪ್ರಸನ್ನೆಯೆಂ
ದುನ್ನತಿವೆತ್ತು ತೋರ್ಪ ನದಿ ತತ್ಪುರಮಂ ಬಳಸಿರ್ಪುದೆತ್ತಲುಂ ॥ 20 ॥

ಮ ಸ್ರ ॥ ಫಳ ಪುಷ್ಪೋಪೇತ ನಾನಾ ತರು ಲತೆಗಳಿನುತ್ಫುಲ್ಲ ನೀರೇಜ ಷಂಡಂ
ಗಳಿನತ್ಯುದ್ದಂಡ ಕೂಜತ್ಪಿಕ ಶುಕಕುಳದಿಂ ಗಂಧಶಾಳೇಯ ವಪ್ರಾ
ವಳಿಯಿಂ ಪುಂಡ್ರೇಕ್ಷು ವಾಟಂಗಳಿನುಪವನದಿಂ ಪೂರ್ಣ ವಾಪೀ ತಟಾಕಂ
ಗಳಿನಾಶಾಮಂಡಳಂ ತತ್ಪುರವರದ ಬಹಿರ್ಭಾಗದೊಳ್ ನಾಡೆ ರಯ್ಯಂ ॥ 21 ॥

ಮ ವಿ ॥ ವಿಳಸದ್ಬ್ರಹ್ಮಪುರಂಗಳಿಂ ವಿವಿಧ ಕೂಟೋತ್ತುಂಗ ದೇವಾಲಯ
ಗಳಿನತ್ಯಾಯತ ರಮ್ಯ ಹರ್ಮ್ಯತತಿಯಿಂ ನಾನಾ ಸ್ಫುರದ್ರತ್ನ ಸಂ
ಕುಳ ರಾಜ ದ್ವಿಪಣಿ ಸ್ಥಳಂಗಳಿನನೇಕಾಕೀರ್ಣ ಪಣ್ಯಾಂಗನೋ
ಜ್ಜ್ವಳ ಸೌಧಂಗಳಿನಾವಗಂ ಸೊಗಯಿಸಿರ್ಕುಂ ತತ್ಪುರಾಭ್ಯಂತರಂ ॥ 22 ॥

ಸೋಮಿ ದೇವ

ಮ ಸ್ರ ॥ ಅರಿಭೂಭೃತ್ಕುಂಭಿ ಕುಂಭಸ್ಥಳ ವಿಗಳಿತ ರಕ್ತಾರ್ದ್ರ ಮುಕ್ತಾಫಳಾಳಿ
ಸ್ಫುರಿತೋದ್ಯದ್ರಂಗವಲ್ಲೀ ವಿಳಸಿತ ರಣರಂಗಾಂಗಣೋದ್ವೃತ್ತ ಬಾಹಾ

ಪರಿಘಾವಿರ್ಭೂತ ವೈಕುರ್ವಣ ವಿವಿಧ ಭುಜ ಪ್ರೇತ ಭೇತಾಳ ಭೂತೋ
ದ್ಧುರತಾ ಜೇಗೀಯಮಾನಾರ್ಜಿತ ನಿಜ ವಿಜಯಂ ಸೋಮಿದೇವಕ್ಷಿತೀಶಂ ॥ 23 ॥

ಉದಯಾದಿತ್ಯ

ಮ ವಿ ॥ ಮದವದ್ವೈರಿನೃಪಾಳ ಸೈನ್ಯ ತಿಮಿರ ಪ್ರಧ್ವಂಸನಂಗೆಯ್ದು ಪೆ
ರ್ಚಿದ ರಾಗಂ ನಿಜ ಮಂಡಳಕ್ಕೆಸೆಯೆ ದಿಕ್ಚಕ್ರಾಂತಮಂ ತನ್ನ ತೇ
ಜದಗುರ್ವಿಂ ಸಮಜುತ್ತುಮಭ್ಯುದಯಮಂ ಕೈಕೊಂಡ ಸಯ್ಪಿಂದಮಿಂ
ತುದಯಾದಿತ್ಯ ಕುಮಾರನಪ್ರತಿಹತೋದಗ್ರ ಪ್ರತಾಪೋದಯಂ ॥ 24 ॥

ಕಂ ॥ ಪ್ರತ್ಯರ್ಥಿ ನೃಪತಿ ಬಳ ತಿಮಿ
ರಾತ್ಯಯಮ ಮಾಟ್ಟಿ ತೇಜದಿಂ ಸೋಮಿನೃಪಾ
ಪತ್ಯನೆನಿಸಿದ ಕುಮಾರಂ
ಪ್ರತ್ಯಕ್ಷಂ ತಾನೆ ನೋೞ್ಪೊಡುದಯಾದಿತ್ಯಂ ॥ 25 ॥

ಮ ವಿ ॥ ಸ್ಮರನಂ ರೂಪಿನೊಳಿಂದ್ರನಂ ವಿಭವದೊಳ್ ಕಾನೀನನಂ ದಾನದೊಳ್
ಹರಿಯಂ ವಿಕ್ರಮಶಕ್ತಿಯೊಳ್ ಯಮಜನಂ ಸತ್ಯೋಕ್ತಿಯೊಳ್ ತೀವ್ರ ಭಾ
ಸ್ಕರನಂ ತೇಜದೊಳಂಬುಜಪ್ರಭವನಂ ಚಾತುರ್ಯದೊಳ್ ಹೇಮ ಭೂ
ಧರಮಂ ಧೈರ್ಯದೊಳೆಯ್ದೆ ಪೋಲ್ವನುದಯಾದಿತ್ಯೋರ್ವರಾವಲ್ಲಭಂ
॥ 26 ॥

ಕಂ ॥ ಉದಯಾದಿತ್ಯ ಕುಮಾರಂ
ಕದನದೊಳಿದಿರಾದ ಮದವದಹಿತ ಮಹೀಭೃ
ತ್ಸುದತಿಯರ ವದನ ವನಜ
ಕ್ಕದವಟಲಂ ಮಾಡುವಂದಮಿದು ಬಿಸವಂದಂ ॥ 27 ॥

ಅವನ ಹೆಂಡತಿ ರಾಜಲದೇವಿ

ಕಂ ॥ ಆ ನೃಪನ ವನಿತೆ ಸಕಲ ಕ
ಲಾನಿಧಿ ಸೌಭಾಗ್ಯ ಭೋಗಭಾಗಿನಿ ಶಶಿಬಿಂ
ಬಾನನೆ ರಾಜಲದೇವಿ ಯ
ಶೋನಂದನ ವನ ವಸಂತಲಕ್ಷ್ಮಿಯೆನಿಪ್ಪಳ್ ॥ 28 ॥

ಬಾಹುಬಲಿ ವ್ರತಿ

ಉ ಮಾ ॥ ಅಲ್ಲಿ ನೆಗಟ್ತೆವೆತ್ತ ಯತಿ ಸಂಕುಳದೊಳ್ ಪಿರಿದುಂ ಪ್ರಸಿದ್ಧರೆಂ
ದೆಲ್ಲರುಮೆಯ್ದೆ ಕೂರ್ತು ಪರಿಕೀರ್ತಿಸೆ ಬಾಹುಬಲಿವ್ರತೀಂದ್ರರು

ತ್ಫುಲ್ಲ ಸರೋಜನೇತ್ರರನವದ್ಯ ಚರಿತ್ರರಮೋಘ ಸಂಭವಾ
ಪಲ್ಲತಿಕಾ ಲಪಿತ್ರರೆನೆ ವರ್ತಿಸಿದರ್ ವಸುಧಾತಳಾಗ್ರದೊಳ್ ॥ 29 ॥

ಕಡಪ ಜಿಲ್ಲೆ

9) ದಾನವುಲಪಾಡು, ಜಮ್ಮಲಮಡುಗು ಮಂ. E.I. X, p.150, ಕ್ರಿ.ಶ. 10 ನೇ ಶತಮಾನ

ಇದರಲ್ಲಿ ರಾಷ್ಟ್ರಕೂಟರ ದೊರೆ ಮೂರನೆಯ ಇಂದ್ರನ ಆಳಿಕೆಯಲ್ಲಿ ಶ್ರೀವಿಜಯ ಎಂಬುವವನ ಕಾರ್ಯ ಹಾಗೂ ಸೇನಾಬಲಗಳ ವರ್ಣನೆ ಮಾಡಿ, ಆತನು ಸನ್ಯಸನ ವಿಧಿಯಿಂದ ಮುಡಿಪಿದ ಸಂಗತಿಗಳನ್ನು ಹೇಳಿದೆ. ಈ ಶಾಸನವನ್ನು ಪಂಪಪೂರ್ವಯುಗದ ಮೊದಲನೇ ಗುಣವರ್ಮಕವಿ ರಚಿಸಿದ್ದಾನೆ.

ಕಂ ॥ ಪತಿಯ ಬೆಸದಿಂದಮಹಿತರ
ನತಿಕೋಪದಿನಿಕ್ಕಿ ಗೆಲ್ದು ಪ್ರತಿಪಾಳಿಸಿದಂ
ಚತುರುದಧಿವಳಯಮೆಲ್ಲಮ
ನತಿರಥನೀ ದಣ್ಡನಾಯಕಂ ಶ್ರೀವಿಜಯಂ ॥ 30 ॥

ಕಂ ॥ ತುರಗದಳಂಗಳನೊಡ್ಡಿದ
ಕರಿಘಟೆಯಂ ಪಿರಿಯ ನೆರವಿಯಂ ಬಲ್ಲಣಿಯಂ
ಧುರದೆಡೆಯೊಳಿಱಿದು ಗೆಲ್ಗುಂ
ಕರದಸಿ ಕರಮರಿದು ರಣದೊಳನುಪಮಕವಿಯಾ ॥ 31 ॥

ಕಂ ॥ ವಸುಮತಿಯೊಳಗಿಟ್ಟೆಣ್ಬುಂ
ದೆಸೆಗಳ ಕುಸುಕುರುಮನೆಯ್ದಿ ಮಾಣದೆ ಮತ್ತಂ
ಬಿಸರುಹಗರ್ಭಾಣ್ಡಕ್ಕಂ
ಪಸರಿಸಿದುದು ಕೀರ್ತ್ತಿ ನೆಟ್ಟನನುಪಮಕವಿಯಾ ॥ 32 ॥

ಕಂ ॥ ಅಟ್ಟವಿಧಕರ್ಮ್ಮಮೆಲ್ಲಮ
ನಟ್ಟುಂಬರಿಗೊಣ್ಡು ಕೊಡಿಪೆನೆಂಬುದೆ ಬಗೆಯಿಂ
ಪುಟ್ಟಿದನುದಾತ್ತ ಸತ್ತ್ವಂ
ನೆಟ್ಟನೆ ವಿಬುಧೇನ್ದ್ರವನ್ದ್ಯನಱಿವಿಂಗೋಜಮ್ ॥ 33 ॥

ಕಂ ॥ ತಾನಱಿದು ತೊಱೆದು ನೆಟ್ಟನೆ
ಮಾನಿಸವಾಟಾವುದೆಂದು ಸನ್ಯಾಸನದೊಳ್

ಮಾನಸಿಕೆಗಿಡದೆ ಕೊಣ್ಡೊನ
ನೂನಸುಖಾಸ್ಪದಮನಟ್ಟಿಯೊಳ್ ಶ್ರೀವಿಜಯಂ ॥ 34 ॥

ಕಂ ॥ ನಿರ್ಗ್ಗತಭಯನೀ ನರಸಂ
ಸರ್ಗ್ಗಮನಾನೊಲ್ಲೆನೆನ್ದು ಪೇಸಿ ಬಿಸುರ್ವ್ವಂ
ಸ್ವರ್ಗ್ಗದ ಭೋಗಮನುಣ್ಡಪ
ವರ್ಗ್ಗಕ್ಕಡಿಯಿಟ್ಟೊನಱಿದೊನನುಪಮಕವಿಯಂ ॥ 35 ॥

ಕಂ ॥ ದಣ್ಡಿನ ಸಾಮಗ್ರಿಗೆ ಪರ
ಮಣ್ಡಳಮಳ್ಖಡೆ ಸರ್ವ್ವವಿಕ್ರಂ ತುಂಗಂ
ದಣ್ಡಿನ ಬೀರಶ್ರೀಗೊ
ಳ್ಗಣ್ಡಂ ಶ್ರೀದಣ್ಡನಾಯಕಂ ಶ್ರೀವಿಜಯಂ ॥ 36 ॥

ಕಂ ॥ ಚಣ್ಡಪರಾಕ್ರಮನುಱದರಿ
ಮಣ್ಡಲಿಕರನಟ್ಟಿ ಪಿಡಿದು ಪತಿಗೊಪ್ಪಿಸುವೊ
ಳ್ಗಣ್ಡಂ ಪ್ರಚಣ್ಡನೀ ಭೂ
ಮಣ್ಡಲದೊಳ್ದಣ್ಡನಾಯಕಂ ಶ್ರೀವಿಜಯಂ ॥ 37 ॥

ಕರೀಂನಗರ ಜಿಲ್ಲೆ

10) ಕುರ್ಕ್ಯಾಲ, ಕುರ್ಕ್ಯಾಲ ಮಂ., ಕ.ವಿ.ಶಾ.ಸಂ. V, ಕ್ರಿಶ. ಸು. 960

ಇದು ಪಂಪಕವಿಯ ತಮ್ಮ ಜಿನವಲ್ಲಭನ ಗುಣಗಳನ್ನು ವರ್ಣಿಸುತ್ತದೆ. ಅವನು ವೃಷಭಪರ್ವತದ ಅಂದರೆ, ಇಂದಿನ ಬೊಮ್ಮಲಮ್ಮನಗುಟ್ಟದ ಮೇಲೆ ಚಕ್ರೇಶ್ವರಿಯ ವಿಗ್ರಹವನ್ನೂ, ಇತರ ಜಿನಬಿಂಬಗಳನ್ನೂ ಮಾಡಿಸಿದುದನ್ನು ಹೇಳಿದೆ. ಹಾಗೆಯೇ ಮದನವಿಳಾಸವೆಂಬ ವನವನ್ನೂ, ಕವಿತಾಗುಣಾರ್ಣವ ಎಂಬ ಕೆರೆಯನ್ನೂ, ತ್ರಿಭುವನತಿಲಕ ಎಂಬ ಬಸದಿಯನ್ನೂ ಮಾಡಿಸಿದನೆಂದು ಹೇಳಿದೆ. ಇದರಲ್ಲಿ ತೆಲುಗು ಭಾಷೆಯ ಅತ್ಯಂತ ಪ್ರಾಚೀನ ಮೂರು ಕಂದಪದ್ಯಗಳು ಇವೆ.

ವಚನ ॥

ಸ್ವಸ್ತಿ ಸಕಳಕಳಾಪಪ್ರವೀಣಂ ಭವ್ಯರತ್ನಾಕರಂ ಗುಣಪಕ್ಷಪಾತಿ
ಬೆಂಗಿನಾಡ ಸಪ್ತಗ್ರಾಮಗಳೊಳಗಣ ವಂಗಿಪಱ್ಱು
ಕಮ್ಮೆಬ್ರಾಹ್ಮಣಂ ಜಮದಗ್ನಿ ಪಂಚಾರ್ಷೇಯಂ ಶ್ರೀವತ್ಸಗೋತ್ರಂ ಗುಂಡಿಕಱ್ಱು
ನಿಡುಂಗೊಣ್ಡೆಯ ಅಭಿಮಾನಚನ್ದ್ರನ ಮರ್ಮ್ಮಂ ಭೀಮಪಯ್ಯನ

ಬೆಳ್ವೊಲದಣ್ಣಿಗೆಱೆಯ ಜೋಯಿಸಸಿಂಘನ ಮರ್ಮ್ಮಳಬ್ಬಣಬ್ಬೆಯ ಮಗಂ
ಕೊಣ್ಡಕುನ್ದೆಯ ದೇಸಿಗ ಗಣದ ಪೊತ್ಥಗೆಯ ಬಳಿಯ ಪಣ್ಡರಂಗವಲ್ಲಿಯ
ಜಯಣನ್ದಿ ಸಿದ್ಧಾನ್ತ ಭಟಾರರ ಗುಡ್ಡಂ
ಜಿನವಲ್ಲಭಂ ಸಬ್ಬಿನಾಡ ನಟ್ಟನಡುವಣ ಧರ್ಮ್ಮವುರದುತ್ತರ ದಿಗ್ಭಾಗದ
ವೃಷಭಗಿರಿಯೆಂಬನಾದಿಸಂಸಿದ್ಧ ತೀರ್ತ್ಥದ ದಕ್ಷಿಣ ದಿಶಾಭಾಗದೀ ಸಿದ್ಧಶಿಲೆಯೊಳ್
ತಮ್ಮ ಕುಲದೈವಮಾದ್ಯನ್ತ ಜಿನಬಿಂಬಂಗಳುಮಂ ಚಕ್ರೇಶ್ವರಿಯುಮಂ
ಪೆಱವುಂ ಜಿನಪ್ರತಿಮೆಗಳುಮಂ ತ್ರಿಭುವನತಿಲಕಮೆಂಬ ಬಸದಿಯುಮಂ
ಕವಿತಾಗುಣಾರ್ಣವಮೆಂಬ ಕೆಱೆಯುಮಂ ಮದನವಿಳಾಸಮೆಂಬ ಬನಮುಮಂ
ಮಾಡಿಸಿದಂ

ಚಂ ಮಾ ॥ ಬಗೆಯಲಳುಂಬಮೀ ಬಗೆಯನಾರ್ಬ್ಬಗೆವೊರ್ಬ್ಬಗೆಗಾಸೆಯಲ್ತು ದಿ
ಟ್ಟಗೆ ಪೊಲನಲ್ತು ನೀಳ್ದ ಸಱಿಯೊಳ್ಜಿನಬಿಂಬಮನೀತನೀಗಳೆ
ನ್ತಗಱಿಸಿದಪ್ಪೊನೆನ್ದು ಬಗೆವನ್ನೆವರಂ ಜಿನಬಿಂಬಮಲ್ಲಿ ತೊ
ಟ್ಟಗೆ ನೆಗೞ್ದಿೞ್ದುವೇಂ ಚರಿತಮಚ್ಚರಿಯೋ ಜಿನವಲ್ಲಭೇನ್ದ್ರನಾ ॥ 38 ॥

ಚಂ ಮಾ ॥ ಇದು ಕವಿತಾಗುಣಾರ್ಣವನ ಕೀರ್ತಿಯ ಮೂರ್ತ್ತಿವೊಲಾಗಿ ದಕ್ಷಿಣಾ
ರ್ದ್ಧದ ವೃಷಭಾದ್ರಿಯಕ್ಕೆ ವಷಭೇಶ್ವರ ಬಿಂಬ ಸನಾಥಮೆಂಬಲಂ
ಪೊದವೆ ನಿಜದ್ವಿಜಾವಸಥ ಪರ್ವ್ವತಮಂ ಜಿನಚೈತ್ಯಮಾಗೆ ಮಾ
ಡಿದ ಜಿನವಲ್ಲಂಭಗೆ ಜಿನವಲ್ಲಭನಪ್ಪುದುಮೊನ್ದು ಚೋದ್ಯಮೋ ॥ 39 ॥

ತರಳ ವೃತ್ತ ॥ ಚದುರ ಮಯ್ಮೆಯ ಸತ್ಕವಿತ್ವದ ಸಂದ ಪಂಪನ ತಮ್ಮನೋ
ರ್ವ್ವದೆ ಪೊಗೞ್ತೆಯೆ ಬಾಜಿಸಲ್ಬರೆಯಲ್ಕವಿತ್ವದ ತತ್ತ್ವದೊ
ಳ್ಪುದಿದು ನೇರ್ವ್ವಡೆ ಪೇೞಿಲುರ್ವ್ವಿಗಪೂರ್ವಮಾಗಿರೆ ಬಲ್ಲೊನ
ಪ್ಪುದಱಿನೊರ್ವ್ವನೆ ವಾಗ್ವಧೂವರವಲ್ಲಭಂ ಜಿನವಲ್ಲಭಂ ॥ 40 ॥

ಚಂ ಮಾ ॥ ವಿನುತ ಚಳುಕ್ಯ ವಂಶಪತಿ ಮಿಕ್ಕರಿಕೇಸರಿ ಸನ್ದ ವಿಕ್ರಮಾ
ರ್ಜುನ ವಿಜಯಕ್ಕೆ ಧರ್ಮವುರಮೆನ್ದುಮದೇಯಮಿದೆನ್ದು ಕೀರ್ತ್ತಿಶಾ
ಸನಮೆನೆ ಕೊಟ್ಟ ಶಾಸನದ ಪಂಪನ ನಂಬಿದುದೊನ್ದು ಜೈನಶಾ
ಸನದ ನೆಗೞ್ತೆಯಂ ವೃಷಭಪರ್ವ್ವತಮನ್ತದು ತಾನೆ ಪೇೞದೇ ॥ 41 ॥

ಮ ವಿ ॥ ಎಸಗಲ್ಗಾಳಿ ಪುಗಲ್ಪತಂಗಕಿರಣಂ ಸಾರಲ್ಮಿಗಂ ಪಾಱಲಾ
ಗಸದೊಳ್ಪಕ್ಕಿಗಳಲ್ಲಿ ಸಲ್ಲವೆನಿಸಿರ್ದ್ದನ್ಯೋದಯಂ ಧರ್ಮದೊ

ಳ್ಜಸಮಂ ಪೊಂಪುಱಿಮಾಡೆ ಮೆಚ್ಚಿ ಹರಿಗಂ ಪಂಪಂಗೆಗೊಟ್ಟಾ ದ್ವಿಜಾ
ವಸಥಗ್ರಾಮಮದೇನ್ನೆಗಟ್ತೆಯ ಕಳಾಪಗ್ರಾಮಮಂ ಪೋಲ್ತುದೋ ॥ 42 ॥

ಚಂ ಮಾ ॥ ಬರೆದುದೆ ತಾಂಬ್ರಶಾಸನಮದೇಯಮೆ ಧರ್ಮ್ಮವುರಂ ನೆಗಱ್ತೆವೆ
ತ್ತರಿಗನ ಕೊಟ್ಟುದೇ ನೆಗಟ್ದಿ ಪಂಪನ ಪೆತ್ತುದೆ ಪೇಱಿಮೆನ್ನು ನೀ
ಮ್ಮರುಳೆ ಪಲರ್ಮ್ಮೆಯುಂ ಪಲಬರಂ ಬೆಸಗೊಳ್ಳದೆ ಪೋಗಿ ನೋಡ ಸು
ನ್ದರ ವೃಷಭಾಚಳೋನ್ನತ ಶಿಳಾತಳದೊಳ್ಬರೆದಕ್ಕರಂಗಳಂ ॥ 43 ॥

ಕರ್ನೂಲು ಜಿಲ್ಲೆ

11) ಚಿನ್ನತುಂಬುಳಂ, ಆದೊನಿ ಮಂ. 293, ಕ.ವಿ.ಶಾ.ಸಂ. V, ಕ್ರಿಶ. 1092

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ಆರನೆಯ ವಿಕ್ರಮಾದಿತ್ಯನ (ತ್ರಿಭುವನಮಲ್ಲ) ಆಳಿಕೆಯಲ್ಲಿ ಮಹಾಮಂಡಳೇಶ್ವರ ಕಲಿದೇವ ದಂಡನಾಯಕನು ಕಟ್ಟಿಸಿದ ಸೋಮೇಶ್ವರ ದೇವಾಲಯದ ದೇವರ ಸೇವೆಗೆ, ಚೋಳ ಮಹಾರಾಜ ಘಟೆಯಂಣ ಎಂಬುವವನು ನೀಡಿದ ದತ್ತಿಯನ್ನು ಹೇಳಿದೆ.

ಕಲಿದೇವ

ಚಂ ಮಾ ॥ ಅಕುಟಿಲ ಧರ್ಮದೊಳ್ನೆಗರ್ದ್ದ ಧರ್ಮಸುತಂ ಬಳದೊಳ್ ಮರುತ್ಸುತಂ
ಪ್ರಕುಪಿತ ವೈರಿ ಸಂಹರಣದೊಳ್ವಿಜಯಂ ಜಯಕುಂತವಿದ್ದೆಯೊ
ಳ್ನಕುಳನಪಾರಬೋಧಗುಣದಲ್ಸಹದೇವನೆನಲ್ಕೆ ಪಾಂಡು ಪಂ
ಚಕರುಮನೆಯ್ದೆ ಪೋಲ್ವ ಕಲಿದೇವ ನೃಪಾಳನನೊರ್ಬನೆಂಬುದೇ ॥ 44 ॥

ಕಂ ॥ ಪರಿಕಿಸೆ ಪೌರುಷದೊಳ್ಕಡು
ವಿರಿಯಗ್ಗದ ಪಾಂಡುಪುತ್ರರೀ ಕಲಿಯುಗದೇ
ತರವಿಂಗೇಕೆಯೊ ಕಮ್ಮರಿವಾ ?
ಯ್ದರು ಹಿಮದೊಳೆಂಬನವನಿಪ ತನಯಂ ॥ 45 ॥

ತ್ರಿಪುರಾಂತಕ ದೇವಾಲಯ

ಚಂ ಮಾ ॥ ಬಲಿನಗರಕ್ಕೆ ಮೂಗೆನಿಸಿದಾ ತ್ರಿಪುರಾಂತಕ ದೇವತಾಲಯಾ
ವಳಿ ಮುನಿವತ್ರಿಲೋಚನನ ಭೂಪತಿ ರಾಜಿಯ ಪಿಂದೆ ಪಿರ್ಗಿ ಪಿ
ತ್ತಲೆಸೆತೆಯಿಲ್ಲದಲ್ಲುಗುತಮಿಙ್ದುದನೀಕ್ಷಿಸಿ ಬಿರ್ಚೆ ಮಾಡೆ ಮಂ
ಡಳಿಕ ಲಲಾಮನೇಂ ನಿಲಿಸೆ ನಿನ್ದವೊ ಬೆಳ್ಳಿಯಬೆಟ್ಟ ನಿಲ್ವವೊಲ್ ॥ 46 ॥

12) ಕರಕಾಂತಪುರಂ 277, ಆದೋನಿ ಮಂ.,ಕ.ವಿ.ಶಾ.ಸಂ. V, ಕ್ರಿಶ. 1106

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ಆರನೆಯ ವಿಕ್ರಮಾದಿತ್ಯನ (ತ್ರಿಭುವನಮಲ್ಲ) ಆಳಿಕೆಯಲ್ಲಿ ಮಹಾಮಂಡಳೇಶ್ವರ ಮಲ್ಲರಸನು ಕರೆಕಂಠದೇವರ ಸೇವೆಗೆ ನೀಡಿದ ದತ್ತಿಗಳನ್ನು ಹೇಳಿದೆ.

ಮಲ್ಲರಸ

ಕಂ॥ ಮುಟ್ಟಿದಲಗಹಿತರಂ ಬೆ
ನ್ನಟ್ಟಿದಲಗು ಜಗದೊಳುಳ್ಳ ಕಂಟಕರಂ ಕೂ
ರ್ಬಟ್ಟಳಮೆನಿಸುವ ಚಕ್ರಿಯ
ಕಟ್ಟಿದಲಗು ಮಲ್ಲಿಭೂಪನಾದಿ ದಿಳೀಪಂ ॥ 47 ॥

ಮ ಸ್ರ ॥ ಬೆಸನಂ ಶ್ರೀವಿಕ್ರಮಾಂಕಂ ಬೆಸಸೆ ಪಸದಮೆನ್ದಾನ್ತು ಕೊಣ್ಡಂ ಬಳಿಕ್ಕಾ
ವೆಸಕಂ ಕೀಳಾಗದಾರಾರೊಳವು ಕಳಲದಾರಾರ ತೇಜಪ್ರಭಾವ
ಪ್ರಸರಂ ಪಿನ್ದಾಗದಾರಾರದಟುಮುಱಿಯದಾರಾರ ಶೌರ್ಯೋದಯಂ ನೀ
ರಸಮನ್ತೇನಾಗದುದ್ಯದ್ರಿಪು ನೃಪಮದವಿಚ್ಛೇದನಂ ಮಲ್ಲಭೂಪಂ ॥ 48 ॥

13) ಹೊಳಲಗುಂದಿ 337, ಆಲೂರು ಮಂ, SII Vol IX, No.210, ಕ್ರಿಶ. 1125

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ಆರನೆಯ ವಿಕ್ರಮಾದಿತ್ಯ (ತ್ರಿಭುವನಮಲ್ಲ) ಆಳಿಕೆಯಲ್ಲಿ ಮಹಾಮಂಡಳೇಶ್ವರ ದಶವರ್ಮ ದೇವರಸನು ಹೊಳಲುಕೊಂಡೆಯ ಬ್ರಹ್ಮೇಶ್ವರ ದೇವರ ಸೇವೆಗೆ ನೀಡಿದ ದತ್ತಿಯನ್ನು ಹೇಳಿದೆ. ಮಾರ್ತಂಡದೇವ ಎಂಬುವವನನ್ನು ಹೊಗಳಿದೆ.

ಕಂ ॥ ಕೂರ್ತೀರ್ವನರ್ತ್ಥಿಜನಕಂ
ತೊತ್ತಿರುವಂ ಧುರದಲಾನ್ತ ಪಗೆವರ ಬಲಮಂ
ಕತ್ತಿಯೊಳಾನ್ತಂಗಧಿಕಂ
ಮಾರ್ತಂಡ ನೃಪಂಗೆ ಧರೆಯೊಳೆಣೆವಂದಪರೇ ॥ 49 ॥

14) ಕರಕಾಂತಪುರಂ, ಆದೋನಿ ಮಂ., SII Vol IX, No.226, ಕ್ರಿಶ. 1132

ಕಲ್ಯಾಣದ ಚಾಲುಕ್ಯರ ದೊರೆ ಭೂಲೋಕಮಲ್ಲ ಸೋಮೇಶ್ವರ (IV) ಹಾಗೂ ಯುವರಾಜ ತೈಲಪದೇವನ ಆಳಿಕೆಯ ಈ ಶಾಸನದಲ್ಲಿ ಸಿಂದವಂಶದ ಬಾಚರಸನು ತುಂಬಳದ ಕರೆಕಂಠದೇವರ ಸೇವೆಗೆ ನೀಡಿದ ದತ್ತಿಯನ್ನು ಹೇಳಿದೆ.

ವಾಸುಕಿ ಸ್ತುತಿ

ಉ ಮಾ ॥ ಶ್ರೀ ಸುರರಾಜ ರಾಜನೆ ಭವಂ ಮೊದಲಾಗೆ ಸಮಸ್ತ ದೇವರುಂ
ಭಾಸುರ ತೇಜರಾದಿತಿದನು ಪ್ರಮುಖಾಖಿಳ ದೈತ್ಯರಾಜರುಂ

ಭಾಸುರ ವಂದ್ಯರಬ್ಧಿ ಮಥನೋದಯದೊಳ್ನೆರೆದೊಳ್ದು ಬಂದ ದೇ
ವಾಸುರರಿತ್ತಹೀಂದ್ರ ಪದವೊಪ್ಪಿತೊ ವಾಸುಗೆಗೀ ಜಗಂಗಳೊಳ್ ॥ 50 ॥

ಚೊಕ್ಕಿ ನೃಪ

ಕಂ ॥ ಅತುಳಭುಜಬಳದಿನನುಪಮ
ವಿತರಣಗುಣದಿಂ ಧರಿತ್ರಿಯಂ ಮೆಚ್ಚಿಸಿದಂ
ತತವಜರನವೊಲ್ ತಳೆದಂ
ನುತ ಲಕ್ಷ್ಮೀದೇವಿಯಂ ನುತಂ ಚೊಕ್ಕಿನೃಪಂ ॥ 51 ॥

ಚೊಕ್ಕಿಯ ವಂಶ

ಚಂ ಮಾ ॥ ಅತುಳಭುಜಪ್ರತಾಪರವಗಾತ್ಮಜರಾದರನುಕ್ರಮೋಕ್ತಿಯಿಂ
ನುಗುಣಿ ಜೋಯಿಗಂಕನುವಳಂಕೆಯ ಚೇರಮನುಂ ಜಯೋದ್ಭವಂ
ಸಿತಗರಗಣ್ಡನೀ ನೆಗಟ್ದಿ ಬಾಚಿಭೂಪನತ್ಯುದಾರನೂರ್ಜಿತ
ಜಿತಸಿತಕೀರ್ತಿ ಜೋಯಿಯ ಕುಮಾರನುಮಾ ಕಲಿ ಚೋಳದೇವನುಂ
॥ 52 ॥

ಬಾಚಿಭೂಮಿಪ

ಉ ಮಾ ॥ ಈ ನೃಪರೊಳ್ ಪೊಡರ್ಪಸೆಯ ವಿಶ್ವಧರಿತ್ರಿಯನೆಯ್ದೆ ತಾಳ್ದಿಧಾ
ತ್ರೀನುತನಾಗಿ ದೋರ್ಬಳದಿನಾ ದಿಪುದಾನವರಂ ಭುಜಾಸಿಯಿಂ
ತಾನುಜಿದಿರ್ಕ್ಕೆ ವಂದಿಜನಕಲ್ಪಕುಜಾತನೆನಲ್ಕೆ ಸಾಲ್ದು ಲ
ಕ್ಷ್ಮೀ ನಿಳಯಂ ಬಬಾಪ್ಪೆಸೆದನೀ ಕಲಿ ಸಿಂದರ ಬಾಚಿಭೂಮಿಪಂ ॥ 53 ॥

ಕಂ ॥ ನಡೆಗಲ್ಪಂದುಂ ಪೆಜಿಗ
ಣ್ಗಡಿಯಿಡನಿದು ಸಹಜಮೆಂದು ನೋರ್ಪಡಮೆನ್ತು
ನುಡಿಗಲ್ಪಂದುವೆರಳ್ನುಡಿ
ನುಡಿಯಂ ಕಲಿ ಸತ್ಯವಾಕ್ಯನೀ ಬಾಚಿನೃಪಂ ॥ 54 ॥

ಚಂ ಮಾ ॥ ಮದವತರಾತಿಮತ್ತಗಜ ಮಸ್ತಮನೊರ್ಮೆಯೆ ಬಾಚಿಭೂಪನಾ
ನ್ತೊದವಿದ ಕೋಪದಿಂ ನಿಜಭುಜಾಸಿಯೊಳಿಬ್ಬಗಿಯಾಗೆ ಪೊಯ್ಯೆ ವೇ
ಗದಿನುಗುತಿರ್ಪ ನೂತ್ನವರ ಮೌಕ್ತಿಕರಾಜಿಗಳೆಯ್ದೆ ಪೋಲ್ತವಾ
ಕದನದೊಳಾದ ಬೀರಸಿರಿ ಮುತ್ತಿನ ಸೇಸೆಯನಿಕ್ಕುವಂದಮಂ ॥ 55 ॥

ಗುತ್ತಿಕಲ್ಲು

ಕಂ ॥ ಗಿರಿನಿರ್ಝರದಿಂ ಸಿಂಧುವ
ಪರಿಕಾಲಿಂ ಬಳೆದ ಗಂಧಶಾಳಿಯವನದಿಂ
ವರಪುಂಡ್ರೇಕ್ಷು ಸುವಾಟೋ
ತ್ಕರದಿಂ ದ್ರೋಣಾಮುಖಾಖ್ಯವದು ಸೊಗಯಿಸುಗುಂ ॥ 56 ॥

ಕಂ ॥ ಬೀಯವು ಮಾವುಂ ಮಲ್ಲಿಗೆ
ಯಾಯುರ್ವರ್ಧನಮೆ ಜನಕೆ ಬೆಳಸುಂ ಶ್ರೀಯ
ಶ್ರೇಯಮು ಮಂಗಲವು ಪುಣ್ಯ
ಸ್ತ್ರೀಯರ್ಪತಿಭಕ್ತರೆಂದುವಾ ನಾಡೂರೊಳ್ ॥ 57 ॥

ಬಾಚಿ

ಉ ಮಾ ॥ ಶ್ರೀಕರಮಾಯ್ತು ತಂನುದಯದೊಳ್ ತನಗೊಪ್ಪುವ ಪೂರ್ವವೃತ್ತಿರಾ
ಜ್ಯಾಕರಮಾಯ್ತು ತೈಲಪನೃಪಂ ಬೆಸಸಲ್ ಸಲೆ ಸಿಂದವಾಡಿ ಲೀ
ಲಾಕರಮಾಯ್ತು ಅಟವಿಯ ವಿಪ್ರಜನಂಗಳನೆಯ್ದೆ ರಕ್ಷೆಗೆ
ಯ್ಯಾಕೃತಿಯೆಂಬಿನಂ ನೆಗಟ್ದನೀ ಕಲಿಬಾಚಿ ಮಂಡಲೇಶ್ವರಂ ॥ 58 ॥

15) ಕರಕಾಂತಪುರಂ, ಆದೋನಿ ಮಂ. 278, ಕ.ವಿ.ಶಾ.ಸಂ V, ಕ್ರಿ.ಶ. 1164

ಇದರಲ್ಲಿ ಕಳಚುರ್ಯರ ದೊರೆ ಬಿಜ್ಜಳನ ಆಳಿಕೆಯನ್ನು ಹೇಳಿದೆ. ದಂಡನಾಯಕ ಕಾಳಿದಾಸ ದಂಡಾಧೀಶನ ಮಗ ಬಮ್ಮಿದೇವರಸನು ಬ್ರಹ್ಮೇಶ್ವರದೇವರ ಸೇವೆಗೆ ನೀಡಿದ ದತ್ತಿಯನ್ನು ಹೇಳಿದೆ.

ಕಾಳಿದಾಸ ದಂಡಾಧೀಶ

ಕಂ ॥ ತತ್ಪಾದ ಪದ್ಮ ಮಧುಕರ
ನುತ್ಪಾಟಿತ ವೈರಿ ವೃಕ್ಷ ಮೂಳಂ ಧರಣೀ
ಭೃತ್ಪುತ್ರೀ ಪತಿಭಕ್ತಂ
ಸತ್ಪುರುಷಂ ಕಾಳಿದಾಸ ದಂಡಾಧೀಶಂ ॥ 59 ॥

ಬಮ್ಮ ಚಮೂಪ

ಕಂ ॥ ಆತನ ಕುಮಾರನುಪಮಾ
ತೀತಗುಣಾಧಾರನಭವಪದ ನಖ ರುಕ್ಚಂ
ದ್ರಾತಪ ಚಕೋರನಹಿತ ಕು
ಜಾತೋಗ್ರ ಕುಠಾರನೆನಿಪ ಬಮ್ಮಚಮೂಪಂ ॥ 60 ॥

ಬಮ್ಮಿಸೆಟ್ಟಿ

ಕಂ ॥ ಅಕಳಂಕ ಚರಿತನಾಶ್ರಿತ
ನಿಕಾಯ ಪೋಷಕನನೇಕ ನೀತಿಯುತಂ ವೈ
ಶ್ಯಕುಲ ಪ್ರಧಾನನಮಳ
ಪ್ರಕಟಯಶಂ ಬಮ್ಮಿಸೆಟ್ಟಿ ನೂತ್ನ ಕುಬೇರಂ ॥ 61 ॥

ಕಂ ॥ ಎನೆ ನೆಗಳ್ದ ಬಮ್ಮಿಸೆಟ್ಟಿಗವ
ನೂನಂ ಭಾಗ್ಯವತಿ ಕೇತಿಕಬ್ಬೆಗಮಾದಂ
ತನಯಂ ಶ್ರೋತ್ರಿಯ ಕುಳಮಂ
ಡನನೆಜೆಯಮ ಸೆಟ್ಟಿ ಶಿವಪದಾಬ್ಜಭ್ರಮರಂ ॥ 62 ॥

ಕಂ ॥ ಶ್ರೋತ್ರಿಯನೆಜೆಯಮನಮಳ ಚ
ರಿತ್ರಂ ಪ್ರತಿಪಕ್ಷ ಜೈತ್ರನವ್ಯವಧೂಟೀ
ಪುತ್ರಂ ವಿಶಿಷ್ಟ ಬುಧಜನ
ಮಿತ್ರಂ ನಿರ್ಮಳಿನ ವೈಶ್ಯಗೋತ್ರ ಪವಿತ್ರಂ ॥ 63 ॥

ಪ್ರಕಾಶಂ ಜಿಲ್ಲೆ

16) ತ್ರಿಪುರಾಂತಕಂ 358, ತ್ರಿಪುರಾಂತಕಂ ಮಂ., ಕ.ವಿ.ಶಾ.ಸಂ V, ಕ್ರಿ.ಶ. 1126

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ಆರನೆಯ ವಿಕ್ರಮಾದಿತ್ಯನ (ತ್ರಿಭುವನಮಲ್ಲ) ಆಳಿಕೆಯಲ್ಲಿ ಅನಂತಪಾಲ ದಂಡನಾಯಕನ ತಂಗಿಯ ಮಗ ಗೋವಿಂದ ದಂಡನಾಯಕನು ತ್ರಿಪುರಾಂತಕ ದೇವರ ಸೇವೆಗೆ ದತ್ತಿ ನೀಡಿದುದನ್ನು ಹೇಳಿದೆ.

ಭೀಮ ದಂಡಾಧಿನಾಥ

ಮ ಸ್ರ ॥ ದ್ವಿಜವಂಶಾಂಭೋದ ಮಾರ್ಗ ದ್ಯುಮಣಿ ಸಕಳ ಸಾಮಂತ ಚಕ್ರಾಧಿನಾಥಂ
ವಿಜಯಶ್ರೀ ಕೇಳಿ ಕೌಕ್ಷೇಯಕ ಕಳಿತ ಭುಜಾದಂಡನುದ್ವೃತ ವೈರಿ
ಧ್ವಜಿನೀ ಪ್ರಧ್ವಾನ್ತ ವಿಧ್ವಂಸನಪಟುತರ ಮಾರ್ತಂಡನೆಂದರ್ತಿಯಿಂ ವಿ
ಶ್ವಜನಂ ಭ್ಯಾವರ್ಣಿಸುತ್ತಿರ್ಪ್ಪಿನಮೆಸೆದದಟಂ ಭೀಮದಂಡಾಧಿನಾಥಂ ॥ 64 ॥

ಗೋವಿಂದ ದಂಡಾಧಿಪ

ಮ ವಿ ॥ ಘನಶೌರ್ಯ್ಯ ಜಿನನಾಥರಾಜಪುರದಿಂದಂ ಕಾದಿ ತಂದಂ ಕುಮಾ
ರನ ಸರ್ವಸ್ವಮನಟ್ಟಿ ಮುಟ್ಟಿ ಪಿಡಿತಂದಂ ದೂಚಿಯಂ ಗೊಂಕನಂ
ಮುನಿದಾಕ್ಷೇಪದೆ ದೇವನಿರ್ಮ್ಮಿತದ ಚೋಳೋರ್ವ್ವೀಶನಂ ತಂದನೋ
ವೆನೆ ಸುಟ್ಟಂ ಪರಿಯಿಟ್ಟು ಬೆಂಗೀಪುರಮಂ ಗೋವಿಂದ ದಂಡಾಧಿಪಂ
॥ 65 ॥

ಗಣೇಶ್ವರ ಚಮೂಪ

ಮ ವಿ ॥ ಧರಣೀಕಾಂತೆಯ ಮಧ್ಯದೇಶಮೆನಿಸಿರ್ದಾ ಮಧ್ಯದೇಶಂ ಮನೋ
ಹರಮಾತ್ಮಾರ್ಜ್ಜಿತ ಪೂರ್ವಜನ್ಮ ಸುಕೃತಂ ಮುನ್ನಿಲ್ಲದಂದಲ್ಲಿಮ
ರ್ತ್ಯರ ಜನ್ಮಂ ದೊರೆಕೊಳ್ಳದೆಂಬ ಮಹನೀಯ ಸ್ಥಾನದೊಳ್ಪುಟ್ಟಿ ಭೂ
ಸುರ ತೇಜಂ ನೆಗಟ್ದಂ ಗಣೇಶ್ವರ ಚಮೂಪಂ ವಿಪ್ರವಂಶೋತ್ತಮಂ ॥ 66 ॥

ಪದ್ಮನಾಭ

ಉ ಮಾ ॥ ಆ ರಮಣೀ ಮನೋರಮಣನಗ್ರಜನಿಷ್ಟ ವಿಶಿಷ್ಟ ಲೋಕ ನಿ
ಸ್ತಾರಕನನ್ವಯಾಂಬರ ಶರತ್ಸಮಯೇಂದು ಪಯೋಧಿಯಂತೆ ಗಂ
ಭೀರನುದಾರ ಚಾರುಚರಿತಂ ಗುಣಭೂಷಣನೆಂದು ಬಣ್ಣಿಸಲ್
ಧಾರಿಣಿ ಪದ್ಮನಾಭನನುದಾತ್ತ ಯಶಂ ನೆಗಟ್ದಂ ಧರಿತ್ರಿಯೊಳ್ ॥ 67 ॥

ಕೃಷ್ಣರಾಜ

ಮ ಸ್ರ ॥ ನೆಗಳ್ದಿರ್ದಾ ಪದ್ಮನಾಭಂಗಣುಗಿನ ತನಯಂ ವೀರ ವಿದ್ವಿಷ್ಟಸೇನಾ
ಮೃಗಯುಧಾಭೀಳ ಕಂಠೀರವನನುಪಮ ಸೌಂದರ್ಯ್ಯನುರ್ಬೀ ತಳವ್ಯಾ ?
ಪ್ತ ಗುಣಂ ಕೀರ್ತಿಪ್ರಿಯಂ ಕುನ್ತಳ ವಿಷಯ ವಧೂಮಂಡನಂ ಶಾಶ್ವತಿ ಲ
ಕ್ಷ್ಮಿಗಡರ್ಪಾದಂ ಧರಿತ್ರೀ ನಯನ ಕುಮುದಿನೀ ಚಂದ್ರಮಂ ಕೃಷ್ಣರಾಜಂ
॥ 68 ॥

ಮ ವಿ ॥ ಪುರುಷಾರ್ಥಕ್ಕೆಡೆ ವಿಕ್ರಮಕ್ಕೆ ನೆಲೆ ಧರ್ಮಕ್ಕಾರ್ಮನೌದಾರ್ಯ್ಯದಾ
ಗರಮೊಳ್ಪಿಂಗೆರೆವಟ್ಟು ನಿರ್ಮಳತೆಗಾವಾಸಂ ನಯಕ್ಕಿಕ್ಕೆ ಸ
ಚ್ಚರಿತಕ್ಕಾಶ್ರಯಮೆಂದು ಲೋಕವನಿತುಂ ಕೆಯ್ವಾರದಿಂ ಬಣ್ಣಿಸು
ತ್ತಿರೆ ಪೇಳ್ ಕೃಷ್ಣಚಮೂಪನೊಳ್ ಸಮನೆನಲ್ಕಾವಂ ಧರಾಚಕ್ರದೊಳ್॥ 69 ॥

ಮಹೇಶ್ವರ ದಂಡಾಧಿಪ

ಮ ವಿ ॥ ಶರಣಾಯಾತ ಶರಣ್ಯನೆಂದು ವಿಭವಕ್ಕಾವಾಸಮೆಂದು ಸಂ
ಗರಭೂ ಭೈರವನೆಂದಿಳಾವಳಯಮಾ ಭೀಮಾತ್ಮಜಾತಂಗೆ ಸಾ
ದರದಿಂದಂ ಪೆಸರೀಯೆ ಪೆಂಪುವಡೆದಂ ಚಾತುರ್ಯಕಂದಂ ಮಹೇ
ಶ್ವರ ದಂಡಾಧಿಪನೀ ಚಳುಕ್ಯಕುಳ ಮೂಳಸ್ತಂಭನ್ನೆಂಬನ್ನೆಗಂ ॥ 70 ॥

ಅನಂತಪಾಲ

ಕಂ ॥ ತತ್ತನಯನಸಮನಖಿಳಜ
ಗತ್ತಿಳಕಂ ಕೀರ್ತಿವಲ್ಲರೀ ವಳಯಿತ ದಿ

ಗ್ಭಿತ್ತಿ ರಿಪುನೃಪತಿಕುಳ ಫಣ
ಭೃತಾರ್ಕ್ಯನನನ್ತಪಾಳ ದಂಡಾಧೀಶಂ ॥ 71 ॥

ಚಂ ಮಾ ॥
ಒದವಿದ ಮಾನಸಿಕ್ಕೆ ತಲೆದೋಱದ ಮುನ್ನಮೆ ಮುಂಬಿ ಮೂರ್ತಿಗೊಂ
ಡುದು ಸಿರಿ ಕೆಚ್ಚುಗೊಂಡುದು ಮನಂ ಬಗೆಗೊಂಡುದು ನನ್ನಿ ನಾಂಟುಗೊಂ
ಡುದು ನಯಮೋಜೆಗೊಂಡುದಜಿತಂ ನೆಲೆಗೊಂಡುದು ರೂಢಿ ರೂಪುಗೊಂ
ಡುದು ನುಡಿ ರಾಸಿಗೊಂಡುದು ನೆಗಟ್ತೆಯ ತೇಜವನನ್ತಪಾಳನಾ ॥ 72 ॥

ಉ ಮಾ ॥ ಆನುವನೀವ ಚೌತನವನನ್ತಮಗುರ್ಬಿನ ಬಲ್ಪನನ್ತವಾ
ಸ್ಥಾನದೊಳಾದಯಂ ಮಿಗುವ ತೇಜವನನ್ತವಧೀಶನೆಂದುದಂ
ತಾನೆ ತಗುಳ್ದು ಮಾರ್ಪದಟನನ್ತವಿದಿರ್ಚಿದ ಭೂಮಿಪಾಳ ಸಂ
ತಾನಮನೊಕ್ಕಲಿಕ್ಕುವ ವಿನೋದವನನ್ತವನನ್ತಪಾಳನಾ ॥ 73 ॥

ಚಂ ಮಾ ॥ ಅಕಪಟದಿಂದ ಕಂಡ ಪರಭೂಮಿಪರೊಳ್ವೆಸಗೆಯ್ವ ರಾಷ್ಟ್ರಕಂ
ಟಕರೆನಿಪನ್ಯಮಂಡಳಿಕರಾಹವದೊಳ್ ಚಿಱತೋಡೆ ಕಾದಿ ಚೋ
ಳಿಕ ಪಡೆಯಂ ಪಡಲ್ವಡಿಸಿ ಕಂಚಿವರಂ ಸಲೆ ಸೂಱೆಗೊಂಡ ಚೋ
ಳಕಟಕಸೂಱೆಕಾರನೊಳಿದಿರ್ಚುವನಾವನನನ್ತಪಾಳನೊಳ್ ॥ 74 ॥

ಪದ್ಮಲದೇವಿ

ಕಂ ॥ ಆ ನೆಗಟ್ದನನ್ತಪಾಳ ಚ
ಮೂನಾಥನ ಭಗಿನಿ ಕೃಷ್ಣರಾಜನ ಸತಿ ಸ
ನ್ಮಾನಿತೆ ಪದ್ಮಲದೇವಿ ಮ
ಹೀನುತನಗ್ರಜೆ ಮಹೇಶ ದಂಡಾಧಿಪನಾ ॥ 75 ॥

ಮ ವಿ ॥ ನಯನಾನಂದಮನಿತ್ತು ತನ್ನ ಪತಿಗತ್ಯೌದಾರ್ಯಮಾಶ್ಚರ್ಯಮಾ
ಗೆ ಯಶಂ ಲೋಕಮನೆಲ್ಲಮಂ ಬಳಸೆ ಕಾಂತಾರತ್ನಮೆಂಬೊಂದು ರೂ
ಢಿಯನುತ್ಪಾದಿಸಿ ಕೃಷ್ಣರಾಜನ ಮನಃಪದ್ಮಾಕರವಾಸಹಂ
ಸಿಯೆನಲ್ ಪದ್ಮಲದೇವಿ ಭೂಭುವನದೊಳ್ವಿಖ್ಯಾತಿಯಂ ತಾಳ್ದಿದಳ್ ॥ 76 ॥

ಲಕ್ಷ್ಮದಂಡನಾಯಕ

ಮ ಸ್ರ ॥ ಭುಜದಂಡೋಗ್ರ ಪ್ರತಾಪಕ್ಕಗಿದು ರಿಪುಕುಳಂ ಗೂಡುಗೊಂಡಿರ್ದು ವೀರ
ಧ್ವಜನೆಮ್ಮಂ ಕೊಲ್ಲುಗಿಮಾರ್ಕ್ಕಾವರೊ ಶರಣಮೆನಲ್ಕೆಂದು ಕಂಗೆಟ್ಟು ಬಾಯಬಿ

ಟ್ಟು ಜಿತಾಜಿಕ್ಷೋಣಿಗಾಕಂಪಿಸೆ ನೆಗಟ್ಟಿದಟಂಗಾಗರಂ ತೀವ್ರತೇಜಂ
ನಿಜವಂಶವ್ಯೋಮ ವಿಭ್ರಾಜಿತವಿಧುವೆನಿಪಂ ಲಕ್ಷ್ಮದಂಡಾಧಿನಾಥಂ ॥ 77 ॥

ಗೋವಿಂದರಾಜ

ಮ ಸ್ರ ॥ ಅನುಜಾತಂ ಲಕ್ಷ್ಮರಾಜಂಗನುಪಮ ಮಹಿಮಂ ಶತ್ರು ನಿರ್ಭೇದಿ ಚೋಳಾ
ವನಿಪಾ ಕಂಪಂ ಜಗದ್ಜುಂಭುಕನೆನಿಪದಟಂ ಪೂರ್ವದಿಗ್ವಾರ್ಧಿವೇಳಾ
ವನ ರಾಜದ್ರಾಜಹಂಸಂ ಸುಭಟಜನ ಚಮತ್ಕಾರನನ್ಯಾಂಗನಾದೂ
ರನುದಾರಂ ಕೀರ್ತಿವಲ್ಲೀ ಪರಿಕಲಿತ ದಿಶಾಭಿತ್ತಿ ಗೋವಿಂದರಾಜಂ ॥ 78 ॥

ಮ ವಿ ॥ ಗಗನಂ ನಾಟ್ಯ ಗೃಹಂ ಯಶೋನಟಿಗೆ ವಕ್ಷೋಮಂಡಳಂ ಪ್ರಾಜ್ಯರಾ
ಜ್ಯಗೃಹಂ ಶ್ರೀಗೆ ಕೃಪಾಣಧಾರೆ ವಿಳಸದ್ಧಾರಾಗೃಹಂ ವೀರಲ
ಕ್ಷ್ಮಿಗೆ ವಕ್ತ್ರಂ ಜನನೀಗೃಹಂ ಸಕಳವಿದ್ಯಾಲಕ್ಷ್ಮಿಗೆಂಬೀ ಪೊಗ
ರ್ತೆಗೆ ಕೇಳೀಗೃಹಮಾದನೇಂ ಪಿರಿಯನೋ ಗೋವಿಂದ ದಂಡಾಧಿಪಂ
॥ 79 ॥

ಮ ವಿ ॥ ಕಲಿಯೇ ಖರ್ಗಸಹಾಯನೀವನೆ ಜಗದ್ಧಾರಿದ್ರ್ಯವಿದ್ರಾವಣಂ
ನಿಲೆ ಮಾತಾಡುವನೇ ತೊದಳ್ಗೆಡೆಗುಡಂ ಚಾರಿತ್ರಸಂಪನ್ನನೇ
ಕಲಿಕಾಲಕ್ಕೊಜೆಗಟ್ಟಿದಂ ಶುಚಿಯೆ ಗಂಗಾಸೂನು ಗಂಭೀರನೇ
ಗೆಲೆವಂದಂ ಜಳರಾಸಿಯಂ ಪಿರಿಯರಾಗೋವಿಂದರಾಜಂಬರಂ ॥ 80 ॥

ಮ ವಿ ॥ ಮೊನೆಯೊಳ್ ಪಾರದೆ ಮಂತ್ರ ತಂತ್ರಬಳವಂ ಸಾಮರ್ಥ್ಯದಿಂದಂ ಜಯಾಂ
ಗನೆಮಾಜೂಂನ್ತಮದಾನೆಯಂ ಕುದುರೆಯಂ ಭಂಡಾರಮಂ ರತ್ನಮಂ
ಧನಮಂ ಬೆಳ್ಗೊಡೆಯಂ ವಿಲಾಸಿನಿಯರಂ ಗೋವಿಂದ ದಂಡಾಧಿನಾ
ಥನ ದೋರ್ದಂಡ ಕೃಪಾಣಧಾರೆಯೊಳಗಿರ್ದಾಕರ್ಷಣಂ ಮಾಡುವಳ್
॥ 81 ॥

ತೆಲಂಗಾಣ ರಾಜ್ಯ

ನಿಜ಼ಾಮಾಬಾದ್ ಜಿಲ್ಲೆ

17) ಬೋದನ ?, ನಿಜ಼ಾಮಾಬಾದ್ ಮಂ. ಕ.ವಿ.ಶಾ.ಸಂ. V, ಕ್ರಿ.ಶ. 1143

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ಎರಡನೇ ಜಗದೇಕಮಲ್ಲನ ಆಳಿಕೆಯಲ್ಲಿ ನಾರಾಯಣದಂಡನಾಥನು ಮನೆವೆರ್ಗ್ಗಡೆ ಬೊಮ್ಮಣಯ್ಯ, ಮನ್ನೆಯ ಕಾಚರಸ, ಸರಸ್ವತೀಪುರದ ತಳಾರ ಸಾಂತಯ ನಾಯಕರೇ ಮೊದಲಾದವರ ಅನುಮತದಲ್ಲಿ ತಾನು

ನಿರ್ಮಿಸಿದ ಸ್ವಯಂಭುಮಲ್ಲಿಕಾರ್ಜುನದೇವ ಹಾಗೂ ಮಾಧವದೇವರ ಸೇವೆಗೆಂದು ದತ್ತಿಗಳನ್ನು ನೀಡಿದುದನ್ನು ಹೇಳಿದೆ.

ಬೋದನ

ಕಂ ॥ ಬೋದನಮೆಸೆದುದು ನಿಖಿಳ ಧ
ರಾ ದೇವೀಮುಖ ಸುಕರಲೀಲಮೆನೆ ಸಕಳಂ ಜ
ನಾಧಾರಕರ ಸದನಪುರ
ವೇ ದೊರೆತನೆನಿಸಿಕೊಂಡ ವಿಶೋಭಾ ನಿಲಯಂ ॥ 82 ॥

ನಾರಣ ದಂಡಾಧೀಶ

ಮ ಸ್ರ ॥ ಗುಣದೊಳ್ಸಂತಾನದೊಲ್ದಾನದೊಳಖಿಳ ಕಳಾಪ್ರೌಢಿಯೊಳ್ರೂಡಿಯೊಳ್ ಲ
ಕ್ಷಣದೊಳ್ಚಾತುರ್ಯದೊಳ್ಧೈರ್ಯದೊಳುಂ ಸಮ್ಮಂದೊಳ್ಸಕ್ಯದೊಳ್ವಿಪ್ರ ಸಂತ
ರ್ಪಣದೊಳ್ವಿಕ್ರಾಂತದೊಳ್ತಂನೊರಗೆ ವರ್ಪಂನರಾರ್ಪೇಳೆ ನಲ್ನಾ
ರಣ ದಂಡಾಧೀಶನಿರ್ದಂ ನಿಜಕುಲ ವಿಮಳಂಬೋಧಿ ಸಂಪೂರ್ಣ ಚಂದ್ರಂ ॥ 83 ॥

ಕಂ ॥ ವಿತ್ತಪರಿತ್ತಪರೆನಲಾ
ನೆತ್ತಜೀವೆಂ ದಂಡನಾಥ ನಾರಾಯಣನಂ
ನಿತ್ತಪರೆ ಬುಧರ ಪೊರೆಯಂ
ಪೊತ್ತಪರೆ ಧರಿತ್ರಿಯೊಳ್ಜಸಂ ಬೆತ್ತಪರೇ ॥ 84 ॥

ಕಂ ॥ ಅವದಾನ ನಿಧಾನಂ ಮಾ
ಧವ ವಿಭು ಸಹಜಕವಿ ಸಾರ್ವಭವುಮಂ ವಾಕ್ಶ್ರೀ
ಧರನೀ ಶಾಸನಮಂ ವಿನ
ಯ ವಿಲಾಸಂ ಪೇಳ್ದನುಚಿತ ಚತುರೋಕ್ತಿಗಳಿಂ ॥ 85 ॥

ಕಂ ॥ ವನಜಭವಂ ಸಮೆದನೊ ವಿಶ್ವಕ ?
ರ್ಮ ನಿರ್ಮಿತಮೋ ಮಯನ ಮಾಟಂ ಪೇಳೆಂ
ಬಿನೆಗಂ ತ್ರಿಕೂಟದೊಪ್ಪುಗು
ಮನಿತಕ್ಕಮದೊಂದೆ ಮಂಟಪಂ ಸೊಗಯಿಸುಗುಂ ॥ 86 ॥

ಚಂ ಮಾ ॥ ವಿಲಸದುಮಾ ಮಹೇಶ್ವರರ ಮುರಾರಿ ಕುಮಾರಿಗಳಿಂದೆ ಭೈರವಂ
ಸುಲಲಿತ ದಂಡಿಭಾನು ಫಣಿ ಪದ್ಮಭವಂ ಗಣನಾಥನೆಂಬವ

ನೊರ್ಲಸಿರೆ ಮಾತೃಕಾರಣಯುತಂ ಬಲದಿಂದೆಣಿಸಲ್ಕೆ ತನ್ನ ದೇ
ಗುಲದೊಳಗಲ್ತೆ ನೆಗಳ್ತೆವಡೆದಂ ಪ್ರಭುನಾರಣ ದಂಡನಾಯಕಂ ? ॥ 87 ॥

ಚಿದ್ದಣ ದಂಡನಾಯಕ

ಚಂ ಮಾ ॥ ಕರಿಘಟೆ ಕೂಡೆ ನೂಂಕಿದಮವಾಜಿಗಳಿಂ ನಡೆತಂದ ಗಂಡಣಿಂ ?
ಕರಕರದಿಂದ ವಡ್ಡಿನಡೆಗೊಟ್ಟವೊಲೆತ್ತಿ ಬರುತ್ತಲಿರ್ದ ವಾ
ಸುರವೆನೆ ಬಪ್ಪ ಚಲ್ಲಣಿಗೆ ಚಿಲ್ಲಣೆಗೊಡ್ಡಿಪನಾವನೆಂಬೀ ಸಂ
ಗರದೊಳಿದಿರ್ಚಿ ಗೆಲ್ದ ಸುಭಟಾಗ್ರಣಿ ಚಿದ್ದಣ ದಂಡನಾಯಕಂ ॥ 88 ॥

ಮ ಸ್ರ ॥ ಅದಟಿಂ ಮಾಜೂಂಪ ಗಾಂಪಂ ಬಿಸುಟೆಸಕವಿದಿಂ ಪೆಟ್ಟು ಪೋಯ್ದಕ್ಕಟಾ ಸ್ವಾ
ಯದರಿಂ ವೀರಾರಿ ಸಾಮಂತರಿರ ಕದನದೊಳ್ ಚಿದ್ದದಂಡಾಧಿನಾಥ
ಗಿರಿರಾಗಲ್ ಮಾರಿಯೊಳ್ಮಾರ್ಮಲೆಯಲುರವಿದಿರ್ಚಲ್ ಮದೇಭೇಂದ್ರದೊಳ್ಪ
ರ್ವುದೆ ಕಾದಲ್ಕಾಲ್ದು ಕಾಲಾಂತಕನೊಳೆಲೆಲೆ ಚಾಮುಂಡಿಯೊಳ್ಜೆಲ್ಲವಾಡಲ್
॥ 89 ॥

ನಾಗಲದೇವಿ

ಕಂ ॥ ಹರಿಗೆ ಸಿರಿ ಕಮಲಯೋನಿಗೆ
ಸರಸ್ವತಿ ಪಶುಪತಿಗೆ ಗೌರಿ ಸತಿಯೊಪ್ಪುವೊಲಾ
ಪುರುಷಂಗೆ ಚಾರು ಬಿಂಬಾ
ಧರೆ ನಾಗಲದೇವಿ ಚಿತ್ತವಲ್ಲಭೆಯಾದಳ್ ॥ 90 ॥

ನಾರಣ ದಂಡನಾಥ

ಚಂ ಮಾ ॥ ಪದನಜಿದಾಸೆದಪ್ಪಿಸದೆ ಬೇಳ್ವರ ಬೇಳ್ಪುದನಿತ್ತು ಸದ್ಗುಣಾ
ಪ್ರದನೆನಿಸಲ್ಕೆ ತಂನ್ನ ಪೆಸರಂಗಳ ನಾರಣದಂಡನಾಥನೆಂ
ಬುದು ಶುಚಿಯೆಂಬುದೆ ಖಚರ ನಾಯಕನೆಂಬುದೆ ಚಾರು ದಾ x ನೆಂ
ಬುದೆ ಬಲಿಯಂಬುದೆ ರವಿತನೂಭವನೆಂಬುದೆ ಮಹತ್ವನೆಂಬುದೇ ॥ 91 ॥

ಮ ಸ್ರ ॥ ಪೊಗಳುತ್ತಿರ್ದರ್ಪ್ಪೆ ನಾರಾಯಣನಿರೆ ಪರರಂ ದಂಡನಾಥರ್ಕ್ಕಳಂ ವಾ
ವಿಗಳಂ ವಾರಾಸಿಯಿರ್ದಂದಿತರ ತರುಗಳಂ ಕಲ್ಪಭೂಜಾತವಿರ್ದಂ
ದಗಮಾಶಾಬ್ರಾತಮಂ ಮಂದರ ಮಹೀಗತವಿರ್ದ್ದಂದು ಭಾಗ್ಯಕ್ಕೆ ಪಾರಂ
ನ್ಯ ಗಜಾನೀಕಂಗಳ್ವಾಸರ ಮದಗಜಮಿರ್ದ್ದಂತಿರ್ದ್ದ ಮೂಢತ್ವದಿಂದಂ
॥ 92 ॥

ಮಧ್ಯಪ್ರದೇಶ ರಾಜ್ಯ

18) ಜುರಾ, ಜಬಲ್ ಪುರ ಜಿಲ್ಲೆ, ಮಧ್ಯಪ್ರದೇಶ, E.I. Vol. XIX, p. 289,
ಕ್ರಿಶ. ಸು. 10ನೇ ಶತಮಾನ

ಇದರಲ್ಲಿ ರಾಷ್ಟ್ರಕೂಟರ ದೊರೆ ಮೂರನೆಯ ಕೃಷ್ಣನನ್ನು ಪ್ರಶಸ್ತಿ ರೂಪದಲ್ಲಿ ಹೊಗಳಿದೆ.

ಕಂ ॥ ಭಾರತದೊಳಿಜಿದನಿಂದ್ರನೊ
ಳೋರಾಸನ ಜಾಣನೆನಿಪ ಪಾಂಡ್ಯನ ಕುಲಮಂ
ಬೇರಿನ್ದೆ ಕಿಟ್ಟಿ ಚೋಟನ
ಬೇರಂ ಬೇರಿನ್ದೆ ಕಿಟ್ಟಿನಾನೆವೆಡಙ್ಗಂ ॥ 93 ॥

ಕಂ ॥ ಸೋಲದೆ ಪರವನಿತೆಗೆ ಕಣ್
ಸೋಲದು ಮೊಲೆವಾಲನೂಡಿ ನಡಪಿದ ತಾಯಿಂ
ಮೇಲೆನೆ ಬಗೆಗುಂ ನೋಡಿರೆ
ಸೋಲದು ಚಿತ್ತಂ ಪರಾಂಗನಾಪುತ್ರಕನಾ ॥ 94 ॥

ಕಂ ॥ ನೋಡಿರೆ ಪರವಧುಗೆ ಮನಂ
ಕೂಡದು ಸೂೞ್ಸೋೞೊಳೆತ್ತಿ ನಡಪಿದ ತೋಳು
ಣ್ಡಾಡಿದ ಮೊಲೆ ಬಸಿಱೊಳಗಿ
ೞ್ದಾಡಿದ ಚಿತ್ತಂ ಪರಾಂಗನಾಪುತ್ರಕನಾ ॥ 95 ॥

ತಮಿಳುನಾಡು ರಾಜ್ಯ

19) ಧರ್ಮಪುರಿ, ಧರ್ಮಪುರಿ ತಾ. 90, ಕ.ವಿ.ಶಾ.ಸಂ., IV,
ಕ್ರಿಶ. ಸು. 9ನೇ ಶತಮಾನ

ಇದರಲ್ಲಿ ವಿದ್ದೆರಾಜೇಂದ್ರ ಎಂಬ ಲಾಕುಳ ಪಂಥದ ಶೈವನ ಹೊಗಳಿಕೆ ಇದೆ. ತಗಡೂರಿನ ವರ್ಣನೆ ಇದೆ.

ತಗಡೂರು

ಮ ವಿ ॥ ಕಲಿ ಚೋರೇಶ್ವರ ಪಲ್ಲವೇಶ್ವರ ಮಹಾಭೋಗೇಶ್ವರೋತ್ತುಂಗ ನಿ
ರ್ಮ್ಮಲ ನನ್ನೇಶ್ವರ ಕೀರ್ತಿಶಾಸನ ಲಸತ್ಕಾಂಚೀಭುಜಂಗೇಶ್ವರಾ
ವಲಿ ಕಂಠೀರವ ರೂಪನನ್ದನ ಮನಪ್ರಾಕಾರ ಸಂಸ್ಥಾನದಿ
ನ್ನೆಲಕೆಲ್ಲಂ ಪಡಿಚಂದಮಾಯ್ತು ತಗಡೂರೀ ವಿದ್ದೆರಾಜೇಂದ್ರರಿಂ ॥ 96 ॥

ವಿದ್ದರಾಜ

ಉ ಮಾ ॥ ಅಕ್ಕರ ಗಂಗ ಜೇಡಿದ ನರರಿಗೆ ತಪಸ್ವಿಗೆ ದೇಸಿಗಂಗೆ ಕ
ಟ್ಟಕ್ಕಲಿಗಂಗ ದೀನ ನಟ ಪಾಟಕ ವನ್ದಿಜನಕ್ಕೆ ರಾಗದಿ
ನ್ನಕ್ಕೊಡೆನಿನ್ದುನೋಡಿದೊಡೆ ಮೆಚ್ಚಿದೊಡೋತೊಡೆ ಕೂರ್ತ್ತೊಡೀಗಳುಂ
ಮಿಕ್ಕಡ x ವೆನೆಂಬುದಿದುವೀವಂ ಗುಣಂ ಸಲೆವಿದ್ದರಾಜಿಯಾ ॥ 97 ॥

ಕೇರಳ ರಾಜ್ಯ

20) ತಳಂಗೆರೆ, ಕಾಸರಗೋಡು ತಾ., E.I. XXIX, p. 205,
ಕ್ರಿಶ. ಸು. 10ನೇ ಶತಮಾನ

ಇದರಲ್ಲಿ ಜಯಸಿಂಹನೆಂಬ ದೊರೆ ತನ್ನರಸಿಯಾದ ಮೋಚಬ್ಬರಸಿಗೆ ಕನ್ಯಾದಾನವಾಗಿ ಭೂಮಿಯನ್ನು ದತ್ತಿಯಾಗಿ ನೀಡಿದುದನ್ನು ಹೇಳಿದೆ.

ಜಯಸಿಂಹ

ಕಂ ॥ ಶ್ರೀಚಪಳತೆಯಂ ವಚನ
ಶ್ರೀಚತುರಾನನ ವಿರಾಮಮಂ ಬಿಸುಟು ಜಯ
ಶ್ರೀಚಾರುನೇತ್ರೆಯೊಡನೆರೆ
ದಾಚಂದ್ರಾರ್ಕ್ಕಂ ವಿರಾಜಿಸಲ್ ಜಯಸಿಂಹಂ ॥ 98 ॥

ಕಂ ॥ ಇನ್ನಪ್ಪ ಭೂಪರೆಲ್ಲಂ
ನಿನ್ನೊರೆಗಂ ದೊರೆಗವಾರರದಱಿಂದಾರುಂ
ಮನ್ನಿಸದೂರಂ ಗುಣಸಂ
ಪನ್ನ ಸಮನ್ತೀವುದೆನಗೆ ಕನ್ಯಾದಾನಂ ॥ 99 ॥

ಕೆರೆಯ ನಿರ್ಮಾಣ

ಉತ್ಸಾಹ ॥ ಊರ ಕಡೆಯ ತೊಱೆಯ ತಡಿಯ ಕರಿಯಕಲ್ಲ ಮೋಱದಿಂ
ಪುತ್ತೂರ ಪೊಲೆಯರಿಪ್ಪ ಕೇರಿಯೊವಟಿ ನೀರ ಭೂಮಿಯಂ
ಸಾರ ಭೂರುಹಂಗಳೋಳಿಯೊಳಗೆ ನೆಱೆದ ಕೆಱೆಯನಂ
ಭೋರುಹಾಕ್ಷಿ ತನ್ನ ಧನದಿನೊಪ್ಪೆ ಮಾಡಿಸಿಟ್ಟುದಂ ॥ 100 ॥

ಮಹಾರಾಷ್ಟ್ರ ರಾಜ್ಯ

21) ಕೊಲ್ಲಾಪುರ 36, ಕೊಲ್ಲಾಪುರ ತಾ., ಕೊಲ್ಲಾಪುರ, ಕ.ವಿ.ಶಾ.ಸಂ. VI,
ಕ್ರಿಶ. 1040

ಇದರಲ್ಲಿ ರಟ್ಟವಂಶದ ದೊರೆ ಕಾರ್ತವೀರ್ಯನ ಆಳಿಕೆಯಲ್ಲಿ ಮಹಾಪ್ರಧಾನ

ಮಾದಿರಾಜ ದಣ್ಣಾಯಕನಿಗೆ ಕಂಕಣನೂರಿನ ಪ್ರಭುತ್ವವನ್ನು ವಹಿಸಿಕೊಟ್ಟಿದ್ದನ್ನು ಹೇಳಿದೆ.

ಶಾ ವಿ ॥ ದಣ್ಣಾಧೀಶ ಪಯೋಜ ಪಂಕಜ ಸಕಲ ದಣ್ಡೇಶ ವಾಣೀವರಂ
ದಣ್ಡಾಧೀಶ ವಿಶಾಲ ಭಾಳ ತಿಳಕಂ ದಣ್ಡೇಶ ದೈತ್ಯಾಂತಕಂ
ದಣ್ಣಾಧೀಶ ವರೇಣ್ಯ ಪುಣ್ಯಭುವನಂ ದಣ್ಡೇಶ ನೇತ್ರತ್ರಯಂ
ದಣ್ಣಾಧೀಶ್ವರ ಮಾದಿರಾಜನೆಸೆವಂ ದಣ್ಡೈಕ ಧರ್ಮಾತ್ಮಜಂ ॥ 101 ॥

22) ಮುರಮ್ 5, ಒಮರ್ಗಾ ತಾ., ಕ.ವಿ.ಶಾ.ಸಂ. VI, ಕ್ರಿಶ. 1041

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ಆಹವಮಲ್ಲನ ಆಳಿಕೆಯಲ್ಲಿ ಮೊರಬರ ಅಧಿಕಾರಿ ರಾಜರಸನು ತನ್ನ ತಾಯಿಯ ಹೆಸರಿನಲ್ಲಿ ಜಿನಾಲಯವನ್ನು ಕಟ್ಟಿಸಿ, ದತ್ತಿ ನೀಡಿದುದನ್ನು ಹೇಳಿದೆ.

ಆಹವಮಲ್ಲ

ಕಂ ॥ ಚೋಳ ಶಿರಕ್ಕಂದುಕ ಕೇಳಿ
ಲೋಲಂ ಲತಾ ಗಜ ಘಟೌಘಮ್ಮೃಗೇಂದ್ರಂ
ಮಾಳವ ಮಧು ಮಧುಮದನಂ
ಚಾಳುಕ್ಯಕುಳಪ್ರದೀಪನಾಹವಮಲ್ಲಂ ॥ 102 ॥

ರಾಜರಸ

ಕಂ ॥ ರಾಜಿತ ಪರಹಿತ ಖರೋಚರ
ರಾಜಂ ವಿಭವ ಪ್ರಭಾವ ನಿರತಿಶಯ ಮರು
ದ್ರಾಜಂ ರಿಮು ಫಣಿಕುಲಖಗ
ರಾಜಂ ಧೃತಿಶ್ಚಲ ರಾಜನುಯ್ಯಲರಾಜಂ ॥ 103 ॥

23) ತಡಿಖೇಲ್ 77, ದೆಗ್ಲೂರು ತಾ., ನಾಂದೇಡ್, ಕ.ವಿ.ಶಾ.ಸಂ. VI, ಕ್ರಿಶ. 1047

ಕಲ್ಯಾಣದ ಚಾಲುಕ್ಯರ ದೊರೆ ಮೊದಲನೆಯ ಸೋಮೇಶ್ವರನ (ತ್ರೈಲೋಕ್ಯಮಲ್ಲ) ಆಳಿಕೆಯಲ್ಲಿ ಅವನ ಅಧಿಕಾರಿಗಳಾದ ನಾಗವರ್ಮ ಮತ್ತು ಮಾಧವರು ದೊರೆಯ ಯುದ್ಧವಿಜಯಗಳಲ್ಲಿ ಪ್ರಧಾನ ಸಹಾಯಕರಾಗಿದ್ದರು. ನಾಗವರ್ಮನು ಅನೇಕ ದೇವಾಲಯಗಳನ್ನು ನಿರ್ಮಾಣ ಮಾಡಿಸಿ ದತ್ತಿ ನೀಡಿದುದನ್ನು ಇದರಲ್ಲಿ ಹೇಳಿದೆ.

ಶಿವಸ್ತುತಿ

ಶಾ ವಿ ॥ ಶ್ರೀರಾಮಾ ರಮಣೀಪ್ರಿಯಂ ದಿನಪತೋಯಾತ್ಮಾನಳೋರ್ವೀ ಮರು
ತ್ತಾರೇಶಾಂಬರಮೂರ್ತ್ತಿ ಭಕ್ತಿಜನತಾಭೀಷ್ಟಪ್ರದಂ ಶೈಳಪು
ಶ್ರೀರಾಮಂ ಜಿತಕಾಮನೀಶ್ವರನಘಪ್ರಧ್ವಂಸಕಂ ವಿಶ್ವಲೋ
ಕಾರಾಧ್ಯಂ ನಮಗೀಗೆ ಮಿಕ್ಕ ದಯೆಯಿಂದಿಷ್ಟಾರ್ಥ ಸಂಸಿದ್ಧಿಯಂ ॥ 104 ॥

ಚಾಳುಕ್ಯವಂಶ

ಕಂ ॥ ಶ್ರೀವನಿತೇಶನ ಪೊಕ್ಕುಳ
ತಾವರೆಯೊಳ್ ಪುಟ್ಟಿದಜನಿನೆಡೆವಱಿಯದೆ ಬಂ
ದೀ ವಸುಧೆಯೊಳೇನೆಸೆದುದೊ
ಪಾವನ ಚಾಳುಕ್ಯವಂಶಮಾವಂಶಭವಂ ॥ 105 ॥

ತ್ರೈಲೋಕ್ಯಮಲ್ಲ ಸೋಮೇಶ್ವರ

ಮ ಸ್ರ ॥ ಧರೆಯಂ ಹಿಮ್ಯಾದ್ರಿಯಿಂ ಸೇತುವರಮುದಯಶೈಳೇಂದ್ರದಿಂದಸ್ತಶೈಳಂ
ಬರಮೇಕಚ್ಛತ್ರದಿಂದಂ ಸುರಪತಿ ವಿಭವಂ ಪಾಳಿಸುತ್ತಿರ್ದ್ದನುರ್ಬ್ಬೀ
ಶ್ವರ ಚೂಡಾರತ್ನನತ್ಯುದ್ಧತ ಮಗಧ ಕಳಿಂಗಾಂಗ ವಿದ್ವಿಟ್ಟುಭೃತ್ತ್ವಂ
ಹರಣಂ ತ್ರೈಳೋಕ್ಯಮಲ್ಲಂ ಶಶಿ ವಿಶದ ಯಶೋವಲ್ಲಭಂ ಸಾರ್ವಭೌಮಂ
॥ 106 ॥

ಮ ವಿ ॥ ಚರಣಾಬ್ಧಕ್ಕೆ ವಿನಮ್ರರಾಗಿಸಿದನುಗ್ರಾರ್ದ್ಘೋಷದಿಂ ಕೊಂಕಣೇ
ಶ್ವರರಂ ಧಾರೆಯನತ್ತನೋಡಿಸಿದನತ್ಯುದ್ವೃತ್ತನಂ ಮಾಳವೇ
ಶ್ವರನಂ ಚೋಳನನಿಕ್ಕಿದಂ ಕದನದೊಳ್ ವೆಂಗೀ ಕಳಿಂಗಾವನೀ
ಶ್ವರನಾಳ್ಮಾಡಿದನೇಂ ಪ್ರತಾಪತರನೋ ತ್ರೈಳೋಕ್ಯಮಲ್ಲಾಧಿಪಂ ॥ 107 ॥

ನಾಗವರ್ಮ - ಮಾಧವ

ಕಂ ॥ ಎನೆ ನೆಗಳ್ದಾಹವಮಲ್ಲಾ
ವನಿಪನ ಭುಜಯುಗಳಮೆನಿಸಿಧರ್ಮದವದ್ವೈ
ರಿನರೇಂದ್ರ ಸೈನ್ಯ ವಿಧ್ವಂ
ಸನಪಟುಗಳ್ ನಾಗವರ್ಮನುಂ ಮಾಧವನುಂ ॥ 108 ॥

ವಸಿಷ್ಠ-ಮೈತ್ರಾವರ್ಣ

ಕಂ ॥ ಸರಸಿರುಹೋದರನುದರಾಂ
ಬುರುಹದೊಳೊಗೆದಜನಕುಲದೊಳೊಗೆದರ್ ವಿಶ್ವಂ
ಭರೆಗೆ ವಶಿಷ್ಠರ್ ಮೈತ್ರಾ
ವರುಣರ್ ಕೌಂಡಿಣ್ಯರೆಂಬ ಮುನಿಗಣ ಮುಖ್ಯರ್ ॥ 109 ॥

ಆದಿತ್ಯ

ಮ ಸ್ರ ॥ ಅವರೊಳ್ಕೌಂಡಿಣ್ಯ ಗೋತ್ರ ಪ್ರಭವರವನಿಪಾಳಾರ್ಚ್ಚಿತವೇದವೇದಾಂ
ಗವಿದರ್ಪ್ರಾರಬ್ಧ ಹೋಮನಳಜು ಬಹಳ ಧೂಮಾವೃತಾಶಾಂತರಾಳ

ಪ್ರವರಸ್ವಾಧ್ಯಾಯಶೀಳರ್ಸಲೆ ಪಲರವನೀಖ್ಯಾತ ತದ್ವಾಜಿವಂಶಾ
ರ್ಣ್ನವದೊಳ್ ಶೀತಾಂಶುವೋಲ್ಪುಟ್ಟಿದನಭಿನುತನಾದಿತ್ಯನಾದಿತ್ಯ ತೇಜಂ
॥ 110 ॥

ಗೋವಿಂದ

ಕಂ ॥ ಆದಿತ್ಯನ ತನಯಂ ನಾ
ಗಾದಿತ್ಯಂ ಖ್ಯಾತವಿಪ್ರ ವಂಶಾಂಬರವೇ
ಶಾದಿತ್ಯ ತನ್ನಂದನ
ನಾದಂ ಗೋವಿಂದನಖಿಳಭುವನಾನಂದಂ ॥ 111 ॥

ಕಂ ॥ ವಿದಿತಯಶಂ ಸುಚರಿತನೆನಿ
ಸಿದ ಗೋವಿಂದಂಗೆ ಸೂನು ನಾಗಾದಿತ್ಯ
ತದನುಜರಿಳಾಸ್ತುತರ್ಕ್ಕಾ
ಳಿದಾಸ ನಾರಾಯಣಯ್ಯುಪಾರ್ಯ ಕುಮಾರರ್ ॥ 112 ॥

ನಾರಾಯಣನ ಮಕ್ಕಳು, ನಾಗವರ್ಮ-ಮಾಧವ

ಮ ವಿ ॥ ಹಿಮಕುಂದೇಂದು ವಿಶುದ್ಧ ಕೀರ್ತಿಯೆನಿಪಾ ನಾರಾಯಣಂಗಂ ವಧೂ
ತ್ತಮೆಯೆಂಬೊಳ್ಪಿನ ಸಾಯಕಬ್ಬೆಗಮಜೇಯಂ ನಾಗವರ್ಮ್ಮಂ ಪರಾ
ಕ್ರಮಯುಕ್ತಂ ಗುಣಿ ಮಾದಿರಾಜನೆನಲಾದರ್ವೀರಲಕ್ಷ್ಮೀ ರಮಾ
ರಮಣೀವಲ್ಲಭರಿಷ್ಟಶಿಷ್ಟ ಬುಧಬೃಂದಾನಂದನರ್ಣ್ನದನಂ ॥ 113 ॥

ನಾಗವರ್ಮ

ಶಾ ವಿ ॥ ಶ್ರೀಗಂ ರಾಜ್ಯ ವಿಭೂತಿಗಂ ನೆಲೆಯೆನಿಪ್ಪಾತ್ಮೀಯ ಮಾಣಿಕ್ಯ ಬಾ
ಣ್ಡಾಗಾರಂ ಮೊದಲಾದ ಮಿಕ್ಕ ಬೆಸನಂ ತ್ರೈಳೋಕ್ಯಮಲ್ಲಂ ಜಯ
ಶ್ರೀ ಗೇಹಂ ಕುಡೆ ಪೆತ್ತು ಶೌಚಗುಣಿ ದಕ್ಷಂ ಸ್ವಾಮಿಭಕ್ತಂ ಯಶ
ಶ್ರೀಗಾವಾಸಮೆನಲ್ಕೆ ಸಂದ ನರರಾರ್ ಶ್ರೀ ನಾಗವರ್ಮ್ಮಂಬರಂ ॥ 114 ॥

ಮ ಸ್ರ ॥ ಎನಗೀತಂ ಯುದ್ಧದೊಳ್ ದಕ್ಷಿಣ ವಿಜಯ ಭುಜಾದಣ್ಡಮೆಂದರ್ಕ್ಕಜಿ
ಳ್ದನೃಪಂ ತ್ರೈಳೋಕ್ಯಮಲ್ಲಂ ಕುಡೆ ಚಮರರುಹಚ್ಛತ್ರ ತೂರ್ಯಾವಳೀ ನಿ
ಸ್ವನ ನಾನಾ ಕೇತನಾಳಂಕೃತಮನೆ ಸಮ ದಣ್ಡಾಧಿನಾಥತ್ವಮಂ ಪೆ
ತ್ತನಜೇಯಂ ನಾಗವರ್ಮ್ಮಂ ಸ್ಫುರದಸಿದಳಿತೋಗ್ರಾಹಹಿನ್ನಾರ್ಗವರ್ಮ್ಮಂ
॥ 115 ॥

ಚಂ ಮಾ ॥ ಕರಮಿದಸಾಧ್ಯವೆಂಬ ಕೊಳನಂ ಭುಜಗರ್ಭದೆ ಕೊಂಡಸುಗ್ರ ಸಂ
ಗರ ಜಯ ನಾಗವರ್ಮ ವಿಭು ಸಾಧಿಸಿದಂ ಸವಲಕ್ಕೆ ವಿಂಧ್ಯಮಂ
ಪರಿವರಿದೆಯ್ದು ವಿಂಧ್ಯಪತಿ ಮಲ್ಲನನಾಜಿಯೊಳಾಂತು ಕೊಂದನಾ
ದುರ್ರಿಪಿದನೊಂದೆ ಕೊಳ್ಳಿಯೊಳೆ ಸೇವುಣದೇಶಮನೇಂ ಪ್ರತಾಪಿಯೋ
॥ 116 ॥

ಚಂ ಮಾ ॥ ಅದಟರೆವೆಂದು ಬೀಗಿ ಬೆಸೆದಿರ್ಪ್ಪನಿತಲ್ಲದೆ ಪೂಣ್ದು ಪೋಗಿಡಂ
ಗದ ಸವಲಕ್ಕ ವಿಂಜದ ವರಾಳದ ಲಂಜಿಯ ಚಕ್ರಗೊಟ್ಟದ
ಗ್ಗದ ನೃಪರುಂ ಪಳಂಚಲೆದು ವೀರಶಿಖಾಮಣಿ ನಾಗವರ್ಮನಂ
ದದೆ ನೆಲನಂ ನಿಮಿರ್ಚ್ಚಿದವರಾರ್ಗಳ ಚಕ್ರಿಯ ದಂಡನಾಯಕರ್ ॥ 117 ॥

ಮ ವಿ ॥ ಬಗೆದೊಂ ಪೇಳದೊಡೇನು ವೈರಿ ನರಪ ಸರ್ವಸ್ವಂಗಳಂ ತಂದು ಚ
ಕ್ರಿಗೆ ಗೊಟ್ಟಂಕದ ನಾಗವರ್ಮನಳವಂ ಬೆಟ್ಟಾದವೇಂ ಪೊನ್ನ ರಾ
ಶಿಗಳೇಂ ಪೇಳವೆ ರತ್ನಭೂಷಣ ಗಣಂಗಳ್ ಪೇಳವೇ ವಾಜಿರಾ
ಜಿಗಳೇಂ ಪೇಳವೆ ಗಂಧ ಸಿಂಧುರ ಘಟಾನೀಕಂಗಳೇಂ ಪೇಳವೇ ॥ 118 ॥

ಮ ಸ್ರ ॥ ಮನಮೊಲ್ದಾರ್ಗೀಯನಾರಿಂ ಪೊಗಳಿಸನವನೀ ಮಂಡನಂ ವೀರಲಕ್ಷ್ಮೀ
ಸ್ತನಹಾರಂ ವಾಜಿವಂಶಾಬರ ಹಿಮಕಿರಣಂ ಸತ್ಯರಾಧೇಯನೌದಾ
ರ್ಯ್ಯನಿಧಾನಂ ಭೃತ್ಯಚಿಂತಾಮಣಿಯೆನಿಸಿದ ಪೆಂಪಿಂ ಯಶಃಶ್ರೀ ನದೀನ
ರ್ತನ ನಾನಾ ನಾಟ್ಯರಂಗೀಕೃತ ವಿಬುಧಯಶಃ ಪ್ರಾಂಗಣಂ ನಾಗವರ್ಮ್ಮಂ
॥ 119 ॥

ಮಾಧವ

ಕಂ ॥ ಎನೆ ನೆಗಳ್ದ ನಾಗವರ್ಮಾಂ
ಕನ ತಮ್ಮಂ ಧರ್ಮಸುತನ ತಮ್ಮನ ಬಲದೇ
ವನ ತಮ್ಮನ ಭೀಮನ ತ
ಮ್ಮನವೊಲ್ ಮಾಧವನು ಮಾರ ಮಾಧವನಾದಂ ॥ 120 ॥

ಕಂ ॥ ದಾಕ್ಷಿಣ್ಯ ಜಳಧಿ ಬುಧಜನ
ರಕ್ಷಾಮಣಿ ಮಾದಿರಾಜ ದಣ್ಣಾಧೀಶಂ
ರಕ್ಷಿಸೆ ಸತ್ವವಿನಿವಹಕ
ಕ್ಕಕ್ಷಯ ನಿಧಿಯಾಯ್ತು ಚಕ್ರವರ್ತಿಯ ಕಟಕಂ ॥ 121 ॥

ಕಂ ॥ ಕ್ಷಿತಿನುತ ನಾಗವರ್ಮ
ಸತಿಯಕ್ಷಾಂಬಿಕೆ ವಿನೂತೆ ಕೌಶಿಕ ಗೋತ್ರೋ
ದ್ಗತೆ ಪೆಂಪಿನೊಳಗೆ ಸುತೆ ಭೂ
ಸುತೆ ಶೀಲದೊಳೆನಿಸಿ ಭುವನವಿಶ್ರುತೆಯಾದಳ್ **॥ 122 ॥**

ನಾರಾಯಣ

ಕಂ ॥ ಆ ದಂಪತಿಗೆ ತನೂಭವ
ನಾದಂ ನಾರಾಯಣಂ ಧರಾಮರಕುಳ ದು
ಗ್ಧೋದಧಿ ವರ್ಧನ ವಿಧುಲ
ಕ್ಷ್ಮೀದಯಿತಂ ಬಂಧುಬೃಂದಕಲ್ಪಮಹೀಜಂ **॥ 123 ॥**

ಮ ವಿ ॥ ಕಮಳಾಕ್ಷಂ ಪುರುಷೋತ್ತಮಂ ವಿಬುಧ ಬೃಂದಾನಂದನಂ ಗೋಮಿನೀ
ರಮಣಂ ಬಾಹುಬಳೋದ್ಧತಾರಿದನುಜ ಪ್ರಧ್ವಂಸಕಂ ಶಂಖಚ
ಕ್ರಮನೋಹಾರಿಕರಾಬ್ಜನಂಬೆಸಕದಿಂ ವಿಖ್ಯಾತ ನಾರಾಯಣೋ
ಪಮನಾದಂ ಹಿಮಕುಂದ ಚಂದನ ಯಶೋವ್ಯಾಭಾಸಿ ನಾರಾಯಣಂ
॥ 124 ॥

24) ನಾರಂಗವಾಡಿ 15, ನಾರಂಗವಾಡಿ ತಾ., ಕ.ವಿ.ಶಾ.ಸಂ. VI, ಕ್ರಿ.ಶ. 1051

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ಮೂರನೆಯ ಸೋಮೇಶ್ವರನ ಆಳಿಕೆಯಲ್ಲಿ ಮಹಾಮಂಡಲೇಶ್ವರ ಮಂಗರಸನ ಅಪ್ಪಣೆಯಂತೆ ಬೋಚರಸ ಎಂಬುವವನು ಭೋಗೇಶ್ವರದೇವರಿಗೆ ನೀಡಿದ ದತ್ತಿಯನ್ನು ಹೇಳಿದೆ.

ದೇವತಾಸ್ತುತಿ

ಉ ಮಾ ॥ ಶ್ರೀ ರಮಣೀಶ ಸಿದ್ಧ ದಿವಿಜೇಂದ್ರ ಫಣೀಂದ್ರ ದಿನೇಂದ್ರ ಚಂದ್ರವಾಕ್
ಶ್ರೀ ರಮಣೀಶ ವಂದಿತ ಪದಾಂಬುರುಹದ್ವಯ ಶುದ್ಧಬುಧ ಸಾಂ
ಖ್ಯಾರುಹ ಯೋಗಯೋಗಿ ಹೃದಯೋಜ್ವಲ ಮಾನಸ ರಾಜಹಂಸ ಮು
ರಾರಿ ವೃಕಧ್ವಜಮ್ ನಮಗೆ ಮಾಳ್ಕೆ ನಿರಂತರಸಂಖ್ಯ ಕೋಟಿಯಂ **॥ 125 ॥**

ಬೋಚರಸ

ಶಾ ವಿ ॥ ಶ್ರೀಯಂ ಶ್ರೀಧರ ಪಾದಪದ್ಮಯುಗಳಂ ದೀರ್ಘಾಯು ಕಲ್ಯಾಣವಾಕ್
ಶ್ರೀಯಂ ಶ್ರೀಧರನಾಭಿ ಕೂಚನಳಿನಾಂಸಾನಂಘ್ರಿಯುಗ್ಮಂ ಜಯ
ಶ್ರೀಯಂ ಶ್ರೀಧರ ಲೋಚನಾರ್ಚಿತ ಪದಂಬೋಜಾತಯುಗಂ ಯಸ್ಯಾ
ಶ್ರೀಯಂ ಬೋಜರಸಂಗೆ ಮಾಳ್ಕೆ ಮುದದಿಂ ಚಂದ್ರಾರ್ಕತಾರಂಬರಂ
॥ 126 ॥

ಮ ಸ್ರ ॥ ಹರಪಾದಾಂಬೋಜಭೃಂಗ ದ್ವಿಜ ಬುಧಜನ ಕಲ್ಪದ್ರುಮಂ ಸತ್ವರತ್ನಾ
ಕರ ಭಾಸ್ವತ್ತೇಜಸಂದಯ್ಯನ ಕುಲವಿಮಲಾಂಭೋಜಿನೀ ರಾಜಹಂಸಂ
ಪರನಾರೀದೂರ ಮೀನಧ್ವಜನಮಲಯಶೋವಲ್ಲಭಂ ನೀತಿವಿದ್ಯಾ
ಧರ ಸಾಮಂತಾಧಿಪಂ ಬೋಚರಸ ಕೃತಯುಗಾಚಾರ ಸನ್ಮಾರ್ಗ ಮೇರೂ
॥ 127 ॥

ಚಂ ಮಾ ॥ ಪರವಧು ರಂಭೆಯೂರ್ವಶಿಯೆನಿಪ್ಪಡೆ ತಂನ ಸಹೋದರಂ ರಣಾ
ಜಿರದೊಳಿದಿರ್ಚಿದಂ ನೆಗಳ್ದ ರಾವಣನಾದೊರ್ಡಖಿಲ್ಕನಂತವಂ
ಪರಧನಮೇರು ಶೈಲಮೆನಿಸಿರ್ದೊಡೆ ಬುಡಮದೆಂಬ ಪೆಂಪಿನಿಂ
ಧರೆಯೊಳುದಾರ ವೀರಶುಚಿಯೊರ್ವನೆ ಬೋಚರಸಂ ಗುಣಾರ್ಣವಂ
॥ 128 ॥

ಕಂ ॥ ಕಂತು ಸ್ವರೂಪಾನಾಶ್ರಿತ
ಚಿಂತಾಮಣಿ ಶೌಚಜಾನ್ಹವೀ ಸುತವಿದ್ವಿ
ಷ್ಟಾಂತಕನಮಲಯಶಸ್ಸಾ
ಮಂತಂ ಬೋಚರಸ ವಿಜಯ ಲಕ್ಷ್ಮೀಕಾತಂ ॥ 129 ॥

ಮಾಚಿಯಬ್ಬೆ

ಕಂ ॥ ಧರೆಗವತರಿಸಿದರುಂಧತಿ
ಪಿರಿದುಂ ಪತಿಭಕ್ತಿಯಿಂದಮೆನಿಸುವ ಪೆಂಪಿಂ
ಪರಮಾನುರೂಪನಂ ಬೋ
ಚರಸನ ವಧು ಪುಣ್ಯಮೂರ್ತಿ ಮಾಚಿಯಬ್ಬರಸೀ ॥ 130 ॥

ಬೋಚರಸನ ದೇವಾಲಯ ನಿರ್ಮಾಣ

ಚಂ ಮಾ ॥ ಇದು ರಜತಾದ್ರಿಯೋಳ್ಪೊರೆ ಸುಧಾಧವಳಾಕೃತಿಯಿಂದಮತ್ತಮಿಂ
ತಿದು ಕನಕಾದ್ರಿಯೊಳ್ ಪಡಿ ಮಹೋನ್ನತಮಪ್ಪ ವಿಳಾಸರೇಖೆಯಿಂ
ತೊದವಿದ ಚೆಲ್ವಿನಿಂದೆನಿಪ ದೇವಕುಲಂಗಳಿಂ ಧಾತ್ರಿಯುಳ್ಳಿನಂ
ಪದುರಮಿರಲ್ಕೆ ಬೋಚರಸ ಮಾಡಿಸಿದಂ ಧರೆ ಕೂರ್ತು ಕೀರ್ತಿಸೇ ॥ 131 ॥

ಮ ಸ್ರ ॥

ಹರಿಯಿಂ ಕ್ಷೀರಾಬ್ಧಿ ಪೂಜ್ಯಂ ದಿನಕರ ರುಚಿಯಿಂದಂಬರಂ ಪೂಜ್ಯಂ ವಿಶ್ವಂ
ಭರಪೂಜ್ಯಂ ಸೃಷ್ಟಿಯಿಂ ಕಾಂಚನ ಕುಧರ ಮಹಾಪೂಜ್ಯವಾ ಸ್ಥಾಣುವಿಂ ಬೋ
ಚರಸ ಸ್ವಾಮಿತ್ವದಿಂ ನಾಗರಕವಡಿಕೆ ವೈಕುಂಠಕಾಂತವಿಳಾಸಂ
(ನಾಲ್ಕನೆಯ ಪಾದ ಇಲ್ಲ) ॥ 132 ॥

ನಾಗರವಡಿಕೆ

ಕಂ ॥ ಬಾವಿ ಬನ ವಿಕ್ಷುವಾತಂ
ತೀವಿದ ಪೆರ್ಗ್ಗಿಜೆ ತಟಾಕ ಪರಿಖಾ ಜಳನವ
ದೇವಕುಲ ನಿಚಯದಿಂ ವಿ
ಶ್ವಾವಂ ಲಕ್ಷ್ಮೀಮುಖಾಬ್ಜದಮಾಗ್ರಾಮಂ ॥ 133 ॥

ಕಂ ॥ ಶ್ರೀಗೆ ತವರ್ಮನೆ ಮನಸಿಜ
ರಾಗೋದಯ ಜನ್ಮಭೂಮಿಯೆನೆ ಚೆಲ್ವಿಂದಂ
ಸಾಗರ ಪರಿವೃತ ಧಾತ್ರಿಗೆ
ನಾಗರವಡಿಕೆ ಮುಖಾಬ್ಜಂವಿಪ್ಪಂತಿರ್ಕ್ಕುಂ ॥ 134 ॥

25) ಮುಂಬಯಿ ಪ್ರಿನ್ಸ್ ಆಫ್ ವೇಲ್ಸ್ ಮ್ಯೂಸಿಯಂ 101, ಕ.ವಿ.ಶಾ.ಸಂ. VI, ಕ್ರಿ.ಶ. 1060

ಕಲ್ಯಾಣದ ಚಾಲುಕ್ಯರ ದೊರೆ ತ್ರೈಲೋಕ್ಯ ಮಲ್ಲದೇವನ ಆಳಿಕೆಯಲ್ಲಿ, ಮಣಲ ವಂಶದ ಸಾಮಂತ ಇಂದ್ರಕೇಶಿಯು ಬ್ರಾಹ್ಮಣರಿಗೆ ಮತ್ತು ಜೈನಗುರುಗಳಿಗೆ ನೀಡಿದ ದತ್ತಿಯನ್ನು ಹೇಳಿದೆ.

ಇಂದ್ರಕೇಶಿ

ಮ ವಿ ॥ ಜಯಕಾಂತಾ ರಮಣಂ ದ್ವಿಷನ್ನೃಪ ವಧುನೇತ್ರೋತ್ಪಲಾಂಭೋಜಿನೀ
ದಯಿತಂ ತಾರ ತುಷಾರ ಹಾರ ಹರಹಾಸಭಾಸ ಕೀರ್ತ್ಯಾಂಗನಾ
ಪ್ರಿಯಮತ್ಯುನ್ನತ ಚಾರು ವೀರಚರಿತಂ ಸತ್ಯಾಂಧವಂ ಭಾಷ್ಯಮ
ನ್ನೆಯ ಸಿಂಗಂ ನೆಗಳ್ದಿಂದ್ರಕೇಶಿ ಸುಭಟ ಪ್ರಸ್ತುತ್ಯ ದೋರ್ಬಿಕ್ರಮಂ ॥ 135 ॥

ಕವ್ವರಸಿ

ಕಂ ॥ ಆ ನೃಪಕಾಂತೆ ಪತಿವ್ರತೆ
ದಾನಿ ದಯಾನಿಧಿ ಚೆಲ್ವೆ ಕವ್ವರಸಿ ಗುಣಾ
ನೂನೆ ಜಿನಧರ್ಮ ಭೂಷಣೆ
ಜಾನಕಿಗೆ ರೂಪವಿಭಾವದಿ ಮಿಗಿಲೆನಿಪಳೂ ॥ 136 ॥

ಜಯಕೇಶಿ

ಕಂ ॥ ಆ ದಂಪತಿಗೆ ತನೂಭವ
ನಾದಂ ಜಯಕೇಶಿ ವೈರಿಯಸ್ತಿರೆ ಕರ್ಣ
ಚ್ಛೇದನ ಕೃಪಾಣ ಫಣಿ ದಿ
ಶಾದಂತಿ ವಿಲಗ್ನ ಕೀರ್ತಿವಲ್ಲೀವಲಯಂ ॥ 137 ॥

ಮೌಲರಸ

ಕಂ ॥ ಗ್ರಾಮೇಶ್ವರ ನಗಧರ ದಿಪದ
ತಾಮರಸ ಕಾಲಿಮುಖಂ ಪರಾನ್ಮುಖವೈರಿ
ಸೋಮಮಭಿಮುಖ ಸುಹೃನ್ನಿಧಿ
ಸಾಮಾನ್ಯನೇ ದಂಡನಾಯಕಂ ಮೌಲರಸಂ ॥ 138 ॥

26) ಕೊಲ್ಲಾಪುರ 21, ಕರವೀರ ತಾ., ಕ.ವಿ.ಶಾ.ಸಂ. VI, ಕ್ರಿಶ. ಸು. 10-11ನೇ ಶತಮಾನ

ಇದರಲ್ಲಿ ಶಿಲಾಹಾರ ವಂಶದ ದೊರೆ ಮಹಾಮಂಡಳೇಶ್ವರ ಗಂಡರಾದಿತ್ಯನ ಆಳಿಕೆಯಲ್ಲಿ ಜೈನಧರ್ಮದ ಏಳಿಗೆಗೆ ನಿಂಬದೇವ ಎಂಬುವವನು ನೀಡಿದ ಕೊಡುಗೆಯನ್ನು ವರ್ಣಿಸಿದೆ.

ರೂಪನಾರಾಯಣ, ಗಂಡರಾದಿತ್ಯದೇವ

ಉ ಮಾ ॥ ಶ್ರೀಯುವತೀ ಲತಾ ಲಲಿತಕಲ್ಪ ಮಹಾಮಹೀಜಂಗೆ ಶೌಚಗಾಂ
ಗೇಯ ಧರಾಧಿಪಂಗೆ ಖಚರೇಂದ್ರ ಭವಂಗೆ x x x ರೂಪನಾ
ರಾಯಣದೇವ ಭೂಪತಿಗೆ ಗಂಡರದೇವ ನೃಪಂಗೆ ರೂಪನಾ
ರಾಯಣ ದೇವನಾದಿಜಿನನಾದಮೆ ಮಾಳ್ಕಭಿವಾಂಛಿತಾರ್ತ್ಥಮಂ ॥ 139 ॥

ಮಾಘನಂದಿ ಮುನಿ

ಮ ವಿ ॥ ಎಳಮಾವಿಂ ಬನವಬ್ಜದಿಂ ತಿಲಿಗೊಟಿಂ ಮಾಣಿಕ್ಯದಿಂ ಮಂಡನಾ
ವಳಿ ತಾರಾಧಿಪನಿಂ ನಭಂ ಶುಭದವಾಗಿರ್ಪ್ಪಂತಿರ್ದತ್ತು ನಿ
ರ್ಮ್ಮಳವೀಗಳ್ ಕುಳಚಂದ್ರದೇವ ಚರಣಾಂಭೋಜಾತ ಸೇವಾವಿನಿ
ಶ್ಚಳ ಸೈದ್ಧಾಂತಿಕ ಮಾಘನಂದಿಮುನಿಯಿಂ ಶ್ರೀ ಕೊಂಡಕುಂದಾನ್ವಯಂ
॥ 140 ॥

ನಾಗಲದೇವಿ

ಚಂ ಮಾ ॥ ಪರನರಪಾಲ ಭುಂಭುಕಬಳಂ ಕಬಳಂ ಮರಿದುಗ್ಧ ವಿದ್ವಿಷ
ತ್ಪುರಮದೆ ಧೂಳಿ ಸಜ್ಜರಮುದಾತ್ತಯಶಂ ಜಯ ಡಿಂಡಿಮಂ ಮನೋ
ಹರತರ ವೀರಲಕ್ಷ್ಮಿಯೆ ಕರೇಣುವೊಲಾಗಿರೆ ಯೋಗ್ಯಮಾಯ್ತಧೀ
ಶ್ವರಗೃಹ ಪಟ್ಟವರ್ಧನಕೆ ನಾಗಲದೇವಿಯ ಗಂಧವಾರಣಂ ॥ 141 ॥

ಆದಿನಾಥ ಬಸದಿ

ಮ ಸ್ರ ॥ ವರವೈಶ್ಯಾಬಾಣದಿಂದಿರ್ಕೆಲದೊಳೆಸೆವ ವಾರಾಂಗನಾ ಗೇಹದಿಂ ವಿ
ಸ್ತರ ಮಾನಸ್ತಂಭದಿಂ ಮಾಡದಿನೆಸೆವ ವಿತಾನ ಪ್ರತಾನೋಲ್ಲಸನ್ಮಂ

ದಿರದಿಂ ಚೆಂಬೊನ್ನೊಱಂದಂಬಡೆದ ಪಡಿಗೞಿಂದಿಂದ್ರನಿಂದಾದಿತೀರ್ತ್ಥೇ
ಶ್ವರ ಚೈತ್ಯಾಗಾರಮಂ ಮಾಡಿಸಿದನಸದಳಂ ರಂಜಿಸಲ್ ನಿಂಬದೇವಂ
॥ 142 ॥

27) ಖಿದ್ರಾಪುರ 48, ಶಿರೋಳ ತಾ., ಕ.ವಿ.ಶಾ.ಸಂ. VI,
ಕ್ರಿ.ಶ. ಸು. 11-12ನೇ ಶತಮಾನ

ಇದರಲ್ಲಿ ದಂಡನಾಯಕ ಬೊಪ್ಪಣ ಚಮೂಪನ ಹೊಗಳಿಕೆ ಇದೆ

ಮ ವಿ ॥ ಇನತೇಜಂ ಪೊಗದನ್ತೆ ಕೊರ್ವ್ವಿದ ಕುಭೃದ್ವಂಶಂಗಳಂ ಸೀಳ್ದು ದ
ಣ್ಡನಿಯೋಗಂ ಗುಣವೃತ್ತಿ ವಿಶ್ರುತ ವಿಳಾಸಂ ಕೂಡ ಮೆಯ್ವೆತ್ತುತೋ
ರ್ಪ್ಪನೆಗಂ ವೈರಿಘರಟ್ಟ ಭೂಮಿಪತಿಗೇಕಚ್ಛತ್ರಮಂ ಮಾಡಿ ಮೇ
ದಿನಿಯಂ ಮೆಚ್ಚಿದ ನಮ್ಮ ಬೊಪ್ಪಣ ಚಮೂನಾಥನ್ನಿಜಪ್ರೌಢಿಯಂ ॥ 143 ॥

28) ಖಿದ್ರಾಪುರ 49, ಶಿರೋಳ ತಾ., ಕ.ವಿ.ಶಾ.ಸಂ. VI,
ಕ್ರಿ.ಶ. ಸು. 11-12ನೇ ಶತಮಾನ

ಇದರಲ್ಲಿ ಬೊಪ್ಪಣ ದಂಡನಾಯಕನ ಹೊಗಳಿಕೆ ಇದೆ

ಚಂ ಮಾ ॥ ಅನುಪಮ ಧರ್ಮನನ್ದನ ಗುಣೋನ್ನತ ಭೀಮ ಭುಜಪ್ರತಾಪಮ
ರ್ಜ್ಜುನ ವರಕೀರ್ತ್ತಿನೂತ ನಕುಳಾಭ್ಯುದಯ ಸಹದೇವ ಕಾರ್ಯ್ಯ ಕೀ
ರ್ತ್ತನೆ ನಿಜವಾಗಿರಲ್ ನೆಗರ್ದ್ದ ಪಾಣ್ಡವರೈವತ್ತಕ ರೂಪದಿಂ
ಜನಿಯಿಸಿದನ್ತೆ ರಂಜಿಸುವನರ್ವ್ವಿಗೆ ಬೊಪ್ಪಣದಣ್ಡನಾಯಕಂ ॥ 144 ॥

29) ಖಿದ್ರಾಪುರ 50, ಶಿರೋಳ ತಾ., ಕ.ವಿ.ಶಾ.ಸಂ. VI,
ಕ್ರಿ.ಶ. ಸು. 11-12ನೇ ಶತಮಾನ

ಇದರಲ್ಲಿ ಬಹುಶಃ ದಂಡನಾಯಕ ಬೊಪ್ಪಣ ನಾಯಕನನ್ನು ಹೊಗಳಿದೆ.

ಚಂ ಮಾ ॥ ಬವರದೊಳದ್ಭುತಂ ಸಿರಿಪತಿಧ್ವಜನೀಶನ ಶೋಣ ಪಾಣಿಪ
ಲ್ಲವಕಳಿತಾಸಿ ಕಾಳ ಭುಜಗಂ ಭುಜಗರ್ವ್ವದಿನಾನ್ತಕಾಜಿಯ
ನ್ತವಿಸುವ ನಂಜುವೊಯ್ವ ಸಿಡಿಲೊಯ್ವ ಜವಂ ಬಜಿಕೆಯ್ವ ಮೃತ್ಯುವ ನುಂ
ಗುವ ಹೊಸಮಾರಿ ಭೂತ ಬಲಿಗೆಯ್ದೊಲಿದಾಡುವ ರೌದ್ರಭೈರವಂ ॥ 145 ॥

30) ಖಿದ್ರಾಪುರ 53, ಶಿರೋಳ ತಾ., ಕ.ವಿ.ಶಾ.ಸಂ. VI,
ಕ್ರಿ.ಶ. ಸು. 11-12ನೇ ಶತಮಾನ

ಇದರಲ್ಲಿ ಸಿರಿಯಣ್ಣ ಎಂಬುವವನನ್ನು ಹೊಗಳಿದೆ.

ಮ ವಿ ॥ ನುಡಿಕಲ್ಲೊಳ್ಕೊರೆದಕ್ಕರಕ್ಕೆ ಮಱುವೊಕ್ಕಂ ಕೀರ್ತಿಲೋಕಕ್ಕೆ ಬೆ
ಳ್ಗೊಡೆ ಬೆತ್ತಂ ಕರುಣಾರಸಕ್ಕೆ ಕಳಶಂ ಪಿತ್ತಂ ದರಿದ್ರಂಗೆ ಕೈ
ಪಿಡಿಗುಟ್ಟಂ x x ಮಾನದಣ್ಡಮಜಿತಂ ಸಾರಸ್ವತಶ್ರೀಗೆ ಕಂ
ನಡಿಧಾರಂ ಧರೆಗೋಜೆನೆಲ್ ಸಿರಿಯಣಂ ಧನ್ಯಂ ಪೆಜಿರ್ ಧನ್ಯರೇ ॥ 146 ॥

31) ಖಿದ್ರಾಪುರ 54, ಶಿರೋಳ ತಾ., ಕ.ವಿ.ಶಾ.ಸಂ. VI,
ಕ್ರಿಶ. ಸು. 11-12ನೇ ಶತಮಾನ

ಇದರಲ್ಲಿ ಬೊಪ್ಪಣ ದಂಡನಾಯಕ ಎಂಬುವವನನ್ನು ಹೊಗಳಿದೆ.

ಚಂ ಮಾ ॥ ಇದು ದಿಟಮೆಂದೆ ಮಾತು ದಿವಿಜಾಧಿಪನಿಪ್ಪುದೆ ದೇವಲೋಕವ
ಗ್ಗದ ಮೃಗರಾಜನಿಪ್ಪುದೆ ಬನಂ ಗಜವಿಪ್ಪುದೆ ಸೇನೆ ಚಂದ್ರನಿ
ಪ್ಪುದೆ x ಸನಂ ಚಮೂಪತಿ ಶಿಖಾಮಣಿ ಬೊಪ್ಪಣ ದಣ್ಡನಾಥನಿ
ಪ್ಪುದೆ ಸಭೆ ಕಳ್ಪಭೂಮಿರುಹವಿಪ್ಪುದೆ ಬಂಧುರ ಮಂದರಾಚಳಂ
॥ 147 ॥

32) ಕರಾಡಖೇಡ 71, ದೆಗ್ಲೂರು ತಾ., ಕ.ವಿ.ಶಾ.ಸಂ. VI,
ಕ್ರಿಶ. ಸು. 11-12ನೇ ಶತಮಾನ

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ಆರನೆಯ ವಿಕ್ರಮಾದಿತ್ಯನ ಆಳಿಕೆಯಲ್ಲಿ ಅವನ ಸಾಮಂತ ವಹ್ನಿವಂಶದ ಕರ್ಕನು ಕರಡಿಕಲ್ಲಿನ ಸೋಮೇಶ್ವರ ದೇವಾಲಯಕ್ಕೆ ನೀಡಿದ ದತ್ತಿಯನ್ನು ಹೇಳಿದೆ.

ಸೋಮನಾಥ ದೇವರ ಸ್ತುತಿ

ಮ ಸ್ರ ॥ ಗಿರಿಕನ್ಯಾಲೋಳ ನೇತ್ರೋತ್ಪಳ ವಿಕಸನ ಶೀತಾಂಶುಬಿಂಬೋದಯಂ ಭೀ
ಕರ ಶೂಲೋದ್ಧಾಂತಾಂಧಾಸುರನುದಿತ ಲಲಾಟೇಕ್ಷಣಾಗ್ನಿಜ್ವಳನ್ನು
ರ್ಮ್ಮರ ನಿಕ್ಷಿಪ್ತಾಂಗ ಜನ್ಮಾವಯವನನುದಿನಂ ರಕ್ಷಿಸುತಿರ್ಕೆ ಕೂರ್ತಾ
ದರದಿಂ ಶ್ರೀ ಸೋಮನಾಥಂ ಸಕಳ ಭುವನಮಂ ಸರ್ವಲೋಕೈಕನಾಥಂ
॥ 148 ॥

ಬ್ರಹ್ಮ

ಕಂ ॥ ನಿಜ ಜಠರ ಕೋಟರಾಂತ
ಸ್ಥ ಜಗತ್ರಯನೆನಿಪ ಹರಿಯ ಪೊಕ್ಕುಳ ಕನಕಾಂ
ಬುಜದೊಳುದಯಿಸಿದನನುಪಮ
ನಜರನನಿಂದ್ಯಂ ಹಿರಣ್ಯಗರ್ಭಂ ಬ್ರಹ್ಮಂ ॥ 149 ॥

ಮಾನವ್ಯ

ಕಂ ॥ ಎನೆ ನೆಗಳ್ದ ಪದ್ಮಗರ್ಭನ
ತನಯಂ ಸ್ವಾಯಂಭುವೆಂಬ ಮನು ತನ್ಮನುನಂ
ದನನಖಿಳ ವೇದವೇದಾಂ
ಗ ನಿರೂಪಣ ಚತುರಚೇತಸಂ ಮಾನವ್ಯಂ ॥ 150 ॥

ಹರೀತ

ಕಂ ॥ ಆ ಮಾನವ್ಯ ಸುತನಖಿಳಾ
ಳಾಮರ ನತಚರಣ ನಖರ ದೀಧಿತಿ ಗಂಗಾಂ
ಭೋಮಜ್ಜನ ಪರಿಹೃತ ಘನ
ತಾಮಸ ಕಲಿಮಲಕಳಂಕನೆನಿಪ ಹರೀತಂ ॥ 151 ॥

ಕಂ ॥ ಪರಿಗತ ಪಂಚಶಿಖಂ ಮು
ಕ್ತಿರಮಾಹೃದ್ಛಿನ್ನ ಪಂಚವಿಶಿಖಂ ಧುರಫ
ಟ್ಟರದಪ್ಪಟು ಪಂಚಮುಖನಾ
ಹರೀತ ಯತಿಪತಿಗೆ ಪುಟ್ಟಿದಂ ಹಾರೀತಂ ॥ 152 ॥

ಚಾಳುಕ್ಯ ವಂಶೋದಯ

ಕಂ ॥ ಆತತ ಯಶನೆನಿಸಿದ ಹಾ
ರೀತಿಯ ಸಂಧ್ಯಾರ್ಘ್ಯ ಸಮಯ ಚುಳುಕೋದಕದಿಂ
ಖ್ಯಾತಿವಡೆದುದಯಿಸಿತ್ತು ವಿ
ನೂತಂ ಚಾಳುಕ್ಯ ವಂಶವೆಂಬುದು ಪೆಸರಿಂ ॥ 153 ॥

ತೈಲಪ

ಮ ಸ್ರ ॥ ಬಳವದ್ವಿಕ್ರಾಂತದಿಂ ಸಾಧಿಸಿ ಮಹಿಮೆಯನೇಕಾತಪತ್ರಂ ಧರಿತ್ರೀ
ತಳವೆಂಬಂತಾಳ್ದ ಚಾಳುಕ್ಯರೊಳತುಳಬಳಂ ರಾಷ್ಟ್ರಕೂಟ ಕ್ಷಿತೀಂದ್ರಾ
ಚಳವಜ್ರಂ ರಾಷ್ಟ್ರಕೂಟಾನ್ವಯ ಘನಪವನಂ ರಾಷ್ಟ್ರಕೂಟಾವನೀ ಪಾ
ಳಲ್ಪುಂಠದ್ದಾವಾಗ್ನಿ ದಿಗ್ವರ್ತಿತ ವಿಶದಯಶಂ ಪುಟ್ಟಿದಂ ತೈಲಭೂಪಂ ॥ 154 ॥

ಜಯಸಿಂಹ

ಉ ಮಾ ॥ ಆ ನರಪಾಳ ಸಿಂಹನನುಜಂ ನೃಪಸಿಂಹನುದಗ್ರಕೀರ್ತಿಲ
ಕ್ಷ್ಮೀನಿಳಯಂ ಚಳುಕ್ಯ ಕುಳಭೂಷಣನಪ್ರತಿಮ ಪ್ರತಾಪನಂ

ಬೋನಿಧಿ ಮೇಖಳಾವೃತ ಧರಾಪರಿರಕ್ಷಣದಕ್ಷನುಗ್ರತೇ
ಜೋನಿಧಿ ಸಾಹಸಾಭರಣಸಾತ್ತಜಯಂ ಜಯಸಿಂಹವಲ್ಲಭಂ ॥ 155 ॥

ತ್ರೈಲೋಕ್ಯಮಲ್ಲ ಸೋಮೇಶ್ವರ

ಮ ವಿ ॥ ಜಯಸಿಂಹ ಕ್ಷಿತಿಪಂಗೆ ಪುಟ್ಟಿದನಿಳಾ ವಿಸ್ತಾರಿತೋದಾತ್ತ ಕೀ
ರ್ತಿಯುತಂ ತೀವ್ರ ನಿಜಪ್ರತಾಪ ದಹನಜ್ವಾಳಾವಳೀ ದಗ್ಧ ದು
ರ್ಜಯ ವೀರಾರಿಪುರಂ ಸಮಸ್ತ ನೃಪ ಚೂಡಾರತ್ನ ರಾರಾಜಿತಾಂ
ಘ್ರಿಯುಗಂ ನಿರ್ಮಳ ಸೋಮವಂಶತಿಳಕಂ ತ್ರೈಲೋಕ್ಯಮಲ್ಲ ನೃಪಂ
॥ 156 ॥

ಭುವನೈಕಮಲ್ಲ ಸೋಮೇಶ್ವರ

ಕಂ ॥ ಸಾಹಸಧನನೆನೆ ನೆಗಳ್ದಿ
ರ್ದ್ದಾಹವಮಲ್ಲ ಕ್ಷಿತೀಶನಗ್ರತನೂಜಂ
ಬಾಹುಬಳ ವಿಜಿತವೈರಿ ಸ
ಮೂಹಂ ಭುವನೈಕಮಲ್ಲನೆನೆ ಪೆಸರ್ವಡೆದಂ ॥ 157 ॥

ವಿಕ್ರಮಾದಿತ್ಯ VI

ಕಂ ॥ ಭುವನೈಕಮಲ್ಲನನುಜಂ
ಭುವನತ್ರಯವರ್ತಿ ಕೀರ್ತಿ ಚಾಳುಕ್ಯ ಕುಳಾ
ರ್ಣವ ಹಿಮಮರೀಚಿ ಕೇವಳ
ನೇ ವಿಕ್ರಮಾದಿತ್ಯನಖಿಳನೃಪಸಂಸ್ತುತ್ಯಂ ॥ 158 ॥

ಮ ವಿ ॥ ನೆಲನಂ ವಾರ್ಧಿವರಂ ನಿಮಿರ್ಚಿ ನಿಖಿಳಾಶಾದಂತಿ ದಂತಂಗಳಂ
ವಿಳಸನ್ನಿರ್ಮಳಕೀರ್ತಿವಲ್ಲರಿಗಡರ್ಪಂ ಮಾಡಿ ವಿಕ್ರಾಂತದಿಂ
ಚಲಮಂ ಪೂಣ್ದರಿಭೂಪಕೋಪಶಿಖಿಯಂತಗ್ಗೋತ್ತಿ ಚಾಳುಕ್ಯರೊ
ಳ್ಕಲಿ ಬಲ್ಲಾಳನೆ ಸಂದ ಪೆಂಪನುಪಮಂ ಚಾಳುಕ್ಯ ಚಕ್ರೇಶನಾ ॥ 159 ॥

ಕಂ ॥ ನೃಗ ನಹುಷ ನಳ ಭಗೀರಥ
ಸಗರ ಪುರೂರವ ದಿಳೀಪ ಪೃಥು ರಘು ರಾಮಾ
ದಿಗಳಾರು ಮುನ್ನಮಿಲ್ಲೆನೆ
ನೆಗರ್ತ್ತೆಯಂ ವಿಕ್ರಮಾರ್ಕನೊರ್ವ್ವನೆ ಪಡೆದಂ ॥ 160 ॥

ಯೋಗಿ

ಮ ಸ್ರ ॥
ನೆಲಸಿರ್ದಮ್ಮೊಂದೆ ಬಿಣ್ಪಿಂ ಬಡಗಣದೆಸೆಯುಂ ಕೊಣ್ಡು ನೆಲ್ದಪ್ಪುದೋರ್ಮ್ಮಂ
ಡಲಮಕ್ಕುಂ ವಿಶ್ವಮೆಂದುಮ್ಮಳಿಸಿ ಬೆಸಸೆ ವಿಶ್ವಾಮರಶ್ರೇಣಿ ಮಾಜಿಂ
ಡಲವಾದಂ ತೆಂಕಮುಯ್ ಮುಟ್ಟೆರಡು ದೆಸೆಯೊಳ್ ತೂಕಕಂ ಬಂದದಿಂ ನಿ
ಶ್ಚಲಯೋಗಂ ಯೋಗಿವೃಂದಾರಕ ವಿನುತ ಪದಾಂಬೋರುಹಂ ಕುಂಭಜನ್ಮಂ ॥ 161 ॥

33) ಮುರಮ್ 4, ಒಮರ್ಗಾ ತಾ., ಕ.ವಿ.ಶಾ.ಸಂ. VI, ಕ್ರಿಶ. 1107

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ಎರಡನೆಯ ಜಯಸಿಂಹನ ಆಳಿಕೆಯಲ್ಲಿ, ಅವನ ಅಧಿಕಾರಿ ಮೊರಂಬದ ಸಿಂಗ ಎಂಬ ಬಿರುದಿನ ರಾಜರಸ ಎಂಬುವವನು ಮೊರಂಬದಲ್ಲಿ ನಿರ್ಮಿಸಿದ ರಾಜ ಜಿನಾಲಯಕ್ಕೆ ದತ್ತಿ ನೀಡಿದುದನ್ನು ಹೇಳಿದೆ.

ಜಯಸಿಂಹ

ಚಂ ಮಾ ॥ ಅನುದಿನ ವಾದಿರಾಜ ಚರಿತೋನ್ನತಿಯಂ ನೆರೆಕಂಡು ವಿಶ್ವ ಮೇ
ದಿನಿ ಪುರುಪುಚ್ಛನೆಂದು ನಳನೆಂದು ನದೀಭವನೆಂದು ಧರ್ಮ್ಮನಂ
ದನ ವಿಭುವೆಂದು ಭಾನುಸುತನೆಂದು ಪುರೂರವನೆಂದು ನೀತಿಮಂ
ತನನನುದಾತ್ತನಂ ಪೊಗಳ್ವುದಾದರದಿಂ ಜಯಸಿಂಹರಾಯನಂ ॥ 162 ॥

ರಾಜರಸ

ಮ ವಿ ॥ ಧುರದೊಳ್ ಬಾಳ್ದಲೆಯಾಗಿ ಚೋಳೆಯನನಾ ಭೂಪಾಳ ಕಾಂತಾಳಿಯಂ
ಹರಿಸಂದೋಹಮನುದ್ಘಕೇಲನಮನುದ್ಧ್ಯದ್ವಸುವಂ ಶಂಖಚಾ
ಮರಭೇರೀಕಹಳಾತಪತ್ರಚಯಮಂ ಕೈಕೊಂಡು ತಂದೀಯಲಾ
ದರದಿಂದಾಗಳೆ ಚಕ್ರಿ ಮೆಚ್ಚುಗುಡುತಂ ಸ್ವಾಮಿತ್ವಮಂ ಬೀರಿದಂ ॥ 163 ॥

ಕಂ ॥ ಭುಜಪೌರುಷಮಂ ವೀರ
ಬ್ರಜ ಮುಳಿದಿರೆ ಸಂದನಾದೆ ನೀಂ ರಾಜಮಹೀ
ಭುಜ ನೀನೆ ವೀರನಾರೀ
ಭುಜಂಗನಾಗೆಂದು ನಾಥನಿತ್ತಂ ಪೆಸರಂ ॥ 164 ॥

ಕಂ ॥ ಸಮೆದ ರಿಪುನೃಪ ಗಜವ್ಯೂ
ಹಮನುಗ್ರಕೃಪಾಣ ನಖದೆ ಸೀಳ್ದಿಕ್ಕಿದ ವಿ
ಕ್ರಮರಾಜ ಮಹೀಶ್ವರನೀ
ನೆ ಮೊರಂಬದ ಸಿಂಗವೆಂದು ಪತಿ ಪೆಸರಿತ್ತಂ ॥ 165 ॥

34) ಮುದಗಡ 106, ನೀಲಂಗಾ ತಾ., ಕ.ವಿ.ಶಾ.ಸಂ. VI, ಕ್ರಿ.ಶ. 1107

ಕಲ್ಯಾಣದ ಚಾಲುಕ್ಯರ ದೊರೆ ಆರನೆಯ ವಿಕ್ರಮಾದಿತ್ಯನ ಆಳಿಕೆಯಲ್ಲಿ ಅವನ ದಂಡನಾಯಕ ನಾರಾಯಣಭಟ್ಟ ಎಂಬುವವನು ನಿರ್ಮಾಣ ಮಾಡಿಸಿದ್ದ, ನೀಲಕಂಠೇಶ್ವರ ಹಾಗೂ ಕೀರ್ತಿನಾರಾಯಣ ದೇವಾಲಯಗಳಿಗೆ ನೀಡಿದ ದತ್ತಿಯನ್ನು ಇದರಲ್ಲಿ ಹೇಳಿದೆ.

ಶ್ರೀನಿವಾಸ ಸ್ತುತಿ

ಸ್ರಗ್ಧರೆ ॥ ಶ್ರೀಕಾನ್ತೋತ್ತುಂಗ ಪೀನಸ್ತನ ಘಸೃಣ ರಜೋರಂಜಿತೋರಸ್ಥಳ ವಾಕ್
ಶ್ರೀಕಾನ್ತ ನಿತ್ಯೋದಯನಖಿಳ ಗುಣಾಧಿಕೃತ ಶಂಖ ಚಕ್ರ
ಶ್ರೀಕಾನ್ತಾತ್ಮೀಯ ಹಸ್ತಾಂಬುಜನಖಿಳ ಜಗದ್ರಕ್ಷಣೋದಾತ್ತ ಕೀರ್ತಿ
ಶ್ರೀಕಾನ್ತಂ ಶ್ರೀಧರ ರಕ್ಷಿಸುಗೆ ಭುವನಮಂ ಶಾಶ್ವತ ಶ್ರೀನಿವಾಸಂ ॥ 166 ॥

ಬ್ರಹ್ಮ

ಶಾ ವಿ ॥ ಶ್ರೀ ರಮಣೀ ವಿನೋದಸುಖದಿಂದ ಹರಿಸೋತ್ಪುಳಕಾಂಗನಪಂ
ಧಾರಿಣಿ ಗೆಯ್ದೆ ತನ್ನ ಪುಳಕಾಂಕಿತ ರೂಪದಿ ಕಾದೆ ಸೂಚಿಸಲ್
ವಾರಿಜನಾಭಿ ನಾಭಿ ನವಕನ್ದ ಸಮುತ್ಥ ಸರೋಜಮಿರ್ಪ್ಪದಂ
ಬೋರುಹಗರ್ಭದಲ್ಲಿ ಜಗದುದ್ಭವ ಕಾರಣನಾಗಿ ಪುಟ್ಟಿರ್ದ್ದಂ ॥ 167 ॥

ಆಹವಮಲ್ಲ

ಉ ಮಾ ॥ ಮಾಳವನನ್ತಡಂಗಡಿದ ಗೂರ್ಜರನಂ ಪಡೆಸೆಣ್ಣುವೊಯ್ದ ನೇ
ಪಾಳನ ನೆತ್ತರಂ ಕುಡಿದ ಪಾಂಡ್ಯನ ಪಂದಲೆಯೆತ್ತಿದಾಜಿಯೊಳ್
ಚೋಳನನೇಱಿದಾನೆವೆರಸೋವದೆ ನುಂಗಿದುಗುರ್ಬ್ಬಿಂ ಪೇಳಲುಂ
ಕೇಳಲುಮಿನ್ನುವದ್ಭುತ ರಸಾವಹವಾಹವಮಲ್ಲದೇವನಂ ॥ 168 ॥

ವಿಕ್ರಮಾದಿತ್ಯ VI

ಮ ಸ್ರ ॥ ಧರೆಯಂ ದಾಯಾದ ಭೂಪಾಳಕರನಳುಱೆ ಬೆಂಕೊಣ್ಡು ಕಣ್ಡು ಮುತ್ತ ಪಾ
ರೆ ಪಿನ್ದೆಯಟ್ಟಿ ಪೆರ್ಚೆ ರಾಜ್ಯಕ್ಕಳಿಪಿದರ ನಡಂಗೊಟ್ಟಿ ದಂಡಧಿ ಕರ್ಣಾ
ದಿರಿಪು ಕ್ಷ್ಮಾಪಾಳ ಸಪ್ತಾಂಗಮನೆಡಕುಳಿಗೊಂಡಾಜಿಯೊಳ್ ಚೋಳ ಮಾಳ
ವ್ಯರನಿಪ್ಪತ್ತೊಂದು ಸೂಳ್ ತೂಳ್ದಿದನತುಳಬಳಂ ವಿಕ್ರಮಾದಿತ್ಯದೇವಂ
॥ 169 ॥

ಚಂ ಮಾ ॥ ಎಱಗದುದಗ್ರಾಂಲ್ತೊಱೆಯಬಾಯಾದ ನೆಲದ ರಾಯರಿಲ್ಲ ಕ ?
ಣ್ಣುಱಿಗೊಟೆಗೊಬ್ಬ ಜಿತ್ತು ಮಸೆಗೆಯ್ದುದ ಮಣ್ಡಳನಾಥರಿಲ್ಲ ತ
ನ್ನಱಕೆಯ ವಸ್ತು ವಾಹನಮನಟ್ಟಿದರಿಲ್ಲೆನೆ ಬಣ್ಣಿಸಲ್ಕದಾ
ರ್ನೆಱೆವರೊ ವೀರವೃತ್ತಿಯನಗುರ್ಬ್ಬಿನ ವಿಕ್ರಮ ಚಕ್ರವರ್ತಿಯಂ ॥ 170 ॥

ನೀಲಕಂಠ

ಮ ವಿ ॥ ಪ್ರತಿವಾದಿ ಪ್ರತಿಭಾ ಪ್ರದೀಪ ಕಳಿಕಾರುಹ ನೀಲ ದುಷ್ಟವಾ ?
ದಿತ ಮುಃಖಣ್ಡನಚಂಡ ಚಂಡಕಿರಣಂ ವಿಮಳವಾದೀಂದ್ರ ಮೆ ?
ಯ್ವೆತಿರೇಸಾರ ಬಹುಪ್ರಕಾರ ಪಟಪಾಂಡಿತ್ಯೋದಯ ಖ್ಯಾತಿ ಪಂ
ಡಿತ ಚೂಡಾಮಣಿ ನೀಳಕಂಠನೆಸೆದಂ ವಾದೀಭಕಂಠೀರವಂ ॥ 171 ॥

ಮ ಸ್ರ ॥ ದ್ವಿಜವಂಶಂಪೂರ್ವ ಪೂರ್ವಾಚಳ ದಿವಸಕರರ್ಬಂಧ ನಿದ್ರಾವಿಶೇಷಾಂ
ಬುಜ ಗರ್ಭಂ ಶಬ್ದ ವಿದ್ಯಾವಿಭವ ಭವಸುತಂ ತರ್ಕವಿದ್ಯಾತ್ರಿಣೇತ್ರಂ
ಗಜವಿದ್ಯಾಪಾಳಕಾವಂ ಚತುರ ತುರಗ ವಿದ್ಯಾಸಭಾ ಶಾಲಿಹೋತ್ರಂ
ನಿಜ ರಾಜದ್ರಾಜವಿದ್ಯಾಗುರುವೆನಿಸಿದನಾ ವಾದವಿದ್ಯಾವಿನೋದಂ ॥ 172 ॥

ಗಿರಿಜಾದೇವಿ

ಕಂ ॥ ಆ ನೀಳಕಂಠ ವಿಬುಧನ
ಮಾನವಮಂಡನನ ಸತಿ ಮಹಾಸತಿ ನೆಗಳ್ದಳ್
ಮಾನವತಿ ಗಿರಿಜೆ ಗಿರಿಜೆಯ
ಮಾನವ ಮಹಿಳಾಸ್ವರೂಪಮನ್ತಾಳ್ದಿವೊಲ್ ॥ 173 ॥

ನೀಲಕಂಠ, ಗಿರಿಜಾದೇವಿಯರ ಮಗ

ಚಂ ಮಾ ॥ ಪರಹಿತವೀ ಮಹಾಪುರುಷನಿಂದೊಸೆದಿರ್ದಪುದೀತನನ್ತ ಬೀ
ಳ್ವರ ಬೇಳೆಗೆಯ್ವರಿಂದ್ರರ ತವರ್ಮನೆ ಶಿಷ್ಯರ ಸಯ್ವ ಪೊದ್ದಿದ
ಕ್ಕರಿಗರ ಜೀವವಾಶ್ರಿತರ ಬಾಳ್ಮೆದಲಾಳ್ವನ ಜೀವರಕ್ಕನಂ
ಧಿರನದಿಗೋಜೆಯೆಂಬುದು ಜಗಜ್ಜನವಾ ಜಗದೇಜ ಬಂಧುವಂ ॥ 174 ॥

35) ಅಕ್ಕಲಕೋಟೆ 118, ಅಕ್ಕಲಕೋಟೆ ತಾ., ಕ.ವಿ.ಶಾ.ಸಂ. VI, ಕ್ರಿಶ. 1114

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ಆರನೆಯ ವಿಕ್ರಮಾದಿತ್ಯನ ಆಳಿಕೆಯಲ್ಲಿ ಮಹಾಮಂಡಳೇಶ್ವರ ಶಿಲಾಹಾರರ ಇಂದರಸನು ಕರಂಜಿಗಿಯ ಸಿದ್ಧಗಜ್ಜೇಶ್ವರ ದೇವಾಲಯಕ್ಕೆ ದತ್ತಿ ನೀಡಿದುದನ್ನು ಹೇಳಿದೆ.

ಧನಸಂಗ್ರಹ

ಕಂ ॥ ಧನಸಂಗ್ರಹನಮಳ ಯಶೋ
ಧನಸಂಗ್ರಹಣ ನತನೃಪತಿ ನಿರ್ಜಿತ ತೇಜೋ
ಧನಸಂಗ್ರಹನಖಿಳಕಳಾ
ಧನಸಂಗ್ರಹನೆನಿಸಿದಂ ಧರಾಮಂಡಲದೊಳ್ ॥ 175 ॥

ಉ ಮಾ ॥ ಒಂದೆರಡೆಂದು ಲೆಕ್ಕಿಸುವಡಂ ತುರಗಂ ಪದಿನೆಂಟು ಸಾಯಿರಂ
ಗುಂದದು ಕೊಂತದೊಳ್ನೆಗಳ್ದ ಬೀರರಶೀತಿಸಹಸ್ರಮಾಹವ
ಕ್ಕೆಂದಡಳುಂಬಮಪ್ಪಿತರ ವೀರ ಪದಾತಿ ಬಳಕೆ ಲೆಕ್ಕವಿ
ಲ್ಲೆಂದಡೆ ಮತ್ತದೇಂ ವೊಗಳ್ವೆ ನಾಂ ಧನಸಂಗ್ರಹ ಭೂಮಿಪಾಳನಂ ॥ 176 ॥

ಇಂದ್ರಭೂಪ

ಮ ವಿ ॥ ಉರಗಾರಾತಿಗೆ ತಂನನಿತ್ತು ಭುಜಗವ್ರಾತಂಗಳಂ ಕಾದನ
ನ್ತರವುನ್ಮೀಳಿಸಿದಂ ಮದೀಯ ಕುಲಸಂಜಾತಂ ದಲೆಂದಜ್ಜಪ
ಜ್ಜರ ಪೆಂಪಿಂದಮೆ ಪಾಂಗುತಿರ್ದ್ದಪನೆ ತಾನಾ ಖೇಚರೇಂದ್ರಂಗಮೇಂ
ಬೆರಲಿಂದಗ್ಗಳಮೀವ ಕಾವ ಗುಣಮಂ ಪೂಣ್ದಿಂದಭೂಪಾಳಕಂ ॥ 177 ॥

ಫಲಶ್ರುತಿ

ಕಂ ॥ ಪರಿಕಿಸದೀ ಧರ್ಮದೊಳರ
ಸರ ಕಾಣಿಕೆ ಕೊಳ್ಳಿಯರುವಣಂ ಕಿಱುಸುಂಕಂ
ಪುರಧರ್ಮಂ ಬಣ್ಣಿಗೆಯೆಂ
ದರೆವೀಸಮನಳಿಪಿಕೊಂಡವಂ ಚಾಂಡಾಳಂ ॥ 178 ॥

36) ಹೇರಲೆ 58, ಹಾತಕಣಗಿಲೆ ತಾ., ಕ.ವಿ.ಶಾ.ಸಂ. VI, ಕ್ರಿಶ. 1118

ಇದರಲ್ಲಿ ಕೊಲ್ಲಾಪುರದ ಶಿಲಾಹಾರರ ದೊರೆ ಗಂಡರಾದಿತ್ಯನ ಆಳಿಕೆಯಲ್ಲಿ ನಾಗಲಾದೇವಿಯ ಅಪ್ಪಣೆಯಂತೆ ಚಂದ್ರಪ್ರಭ ತೀರ್ಥಂಕರ ದೇವರಿಗೆ ದತ್ತಿ ನೀಡಿದುದನ್ನು ಹೇಳಿದೆ.

ಗುರುಪರಂಪರೆ

ಕಂ ॥ ಸತತಂ ತ್ರಿಭುವನ ಚಂದ್ರ
ವ್ರತಿಪರನೀ ನಾಗಚಂದ್ರ ಸೈದ್ಧಾನ್ತಿಗರಂ
ನುತ ವಿಬುಧ ಬಾಳಚಂದ್ರ
ವ್ರತಿಪೋತ್ತಮರಂ ಧರಾತಳಂ ಬಣ್ಣಿಸುಗುಂ ॥ 179 ॥

ಬಾಳಚಂದ್ರ ವ್ರತಿ

ಮ ಸ್ರ ॥
ಧರೆಗೆಲ್ಲಂ ತನ್ನ ಪೆಂಪಗ್ಗಳಿಸೆ ಗುರು ಜನಾಮ್ನಾಯ ಸದ್ಧರ್ಮ ರಕ್ಷಾ
ಪರನಾದಂ ದಾನಿಯಾದಂ ಚತುರಚರಿತನಾದಂ ಸುಸೈದ್ಧಾನ್ತಿಕಾಗ್ರೇ
ಸರನಾದಂ ಬಾಳಚಂದ್ರವ್ರತಿ ಯತಿತಿಳಕಂ ಬಾಪು ವಿಖ್ಯಾತ ಕೊಲ್ಲಾ
ಪುರ ತೀರ್ತ್ಥಾಧೀಶ ಚಂದ್ರಪ್ರಭ ಜಿನಭವನಾಚಾರ್ಯ್ಯನಾಚಾರ್ಯ್ಯವರ್ಯ್ಯಂ ॥ 180 ॥

ಶಾನ್ತಿವೀರಮುನಿ

ಕಂ ॥ ಸುರತರುಗೆ ಶಾಖೆ ನಿಮಿರ್ದ್ದಂ
ಕುರಿಸಿದೊಡೆಂಬಂತೆ ಬಾಳಚಂದ್ರ ಮುನೀಂದ್ರಾ
ಭರಣರ್ಗೆ ಶಿಷ್ಯನೆಸೆದಂ
ಪರಹಿತಕೌದಾರ್ಯ ಶಾನ್ತಿವೀರ ಮುನೀಂದ್ರಂ ॥ 181 ॥

ನೇಮಣ

ಚಂ ಮಾ ॥ ಸುರುತರುವಂ ಪಳಂಚಲೆವುತಿರ್ಪ್ಪುದು ದಾನದ ಪೆಂಪು ಲೋಕದೊಳ್
ಶರದಮಳೌಘವಂ ನಗುತಮಿರ್ಪುದು ಕೀರ್ತಿಯ ಕೊರ್ಬ್ಬು ನಿಚ್ಚಲುಂ
ಗಿರಿವರನಾಥನೊಳ್ಗೆಣಸುತಿರ್ಪುದು ಧೈರ್ಯದ ಬಿಣ್ಪೆನಲ್ಕೆ ತಾಂ
ಧರೆಗತಿಸೇವ್ಯನಾದನತಿಚಾರುಗುಣೋತ್ಕರ ವಾರ್ಧಿ ನೇಮಣಂ ॥ 182 ॥

ಮೈಲಿಯಕ್ಕ

ಚಂ ಮಾ ॥ ಅತಿಶಯ ಶೀಳದೊಳ್ ವಿನುತ ಸೀತೆಗೆ ಪಾಸಟಿ ಚಾರು ರೂಪಿನೊಳ್
ರತಿಗನುಸಾರಿ x ಸುಭಗನೊಳ್ಗಿರಿಜಾತೆಗೆ ತೋಡು ಭೋಗದು
ನ್ನತಿಕೆಯೊಳಿಂದ್ರಕಾನ್ತೆಗೆ ಸಮಂ ಸಲೆಯೆನ್ದು ಮನೋನುರಾಗದಿಂ
ಸ್ತುತಿಯಿಸುತಿರ್ಪ್ಪುದೀ ಧರಣಿ ನೇಮನ ಕಾಮಿನಿ ಮೈಲಿಯಕ್ಕನಂ ॥ 183 ॥

37) ಭೀಮ್ರಾ 80, ದೆಗ್ಲೂರ ತಾ., ಕ.ವಿ.ಶಾ.ಸಂ. VI, ಕ್ರಿಶ. 1122

ಇದರಲ್ಲಿ ಕಲ್ಯಾಣದ ಚಾಲುಕ್ಯ ದೊರೆ ಆರನೆಯ ವಿಕ್ರಮಾದಿತ್ಯನ ಆಳಿಕೆಯಲ್ಲಿ ಪಟ್ಟಮಹಾದೇವಿ ಮಲ್ಲಣಿದೇವಿಯ ಭಂಡಾರದ ವಾಜಿವಂಶದ ನಾಗವರ್ಮನನ್ನು ಹೊಗಳಿದೆ. ಅದೇ ವಂಶದ ರೇವಣಯ್ಯನು ಕಲ್ಲುಕುಂಭಂಗಾವೆಯಲ್ಲಿ ದೇವಾಲಯವೊಂದನ್ನು ಕಟ್ಟಿಸಿದುದನ್ನು ಹೇಳಿದೆ. ವಿಕ್ರಮಾದಿತ್ಯನ ಇನ್ನೊಬ್ಬ ರಾಣಿ ಸುಗ್ಗಲದೇವಿಯು ರೇವಣೇಶ್ವರ ದೇವಾಲಯಕ್ಕೆ ನೀಡಿದ ದತ್ತಿಯನ್ನು ಹೇಳಿದೆ.

ರೇವಣೇಶ್ವರ ಸ್ತುತಿ

ಮ ವಿ ॥ ಪರಮಶ್ರೀ ವನಿತಾ ವಿಲೋಚನ ಚಕೋರೀ ಪೂರ್ಣಚಂದ್ರ ಜಗ
ದ್ವರದಂ ದೇವ ಸಮಾಜಪೂಜಿತ ಪದಾಂಭೋಜದ್ವಯಂ ಪನ್ನಗೇ
ಶ್ವರ ರಾರಾಜಿತ ತುಂಗ ಪಿಂಗಳ ಜಟಾಜೂಟಾಂತಕಂ ರೇವಣೇ
ಶ್ವರ ದೇವಂ ನಮಗೀಗೆ ಮಂಗಳ ಮಹಾಶ್ರೀಯಂ ಜಯಶ್ರೀಯುಮಂ
॥ 184 ॥

ಬ್ರಹ್ಮ

ಕಂ ॥ ಕಮಳೇಶನಾಭಿಕಾಂಚನ
ಕಮಳದೊಳೊಗೆದಂ ಸಮಸ್ತ ನರ್ಮ್ಮಾಣ ಗುಣ
ಕ್ರಮಬೀಜನೆನಿಸಿ ವೇದಾಂ
ಗಮಯಂ ವಂದ್ಯಂ ಹಿರಣ್ಯಗರ್ಭಂ ಬ್ರಹ್ಮಂ ॥ 185 ॥

ಹಾರೀತಿ

ಮ ವಿ ॥ ಎನಿಸಿರ್ದ್ದಂಬುಜಗರ್ಭನಾತ್ಮ ತನುಜಂ ಸ್ವಾಯಂಭು ಸಂಜ್ಞಾನ್ವಿತಂ
ಮನು ತನ್ನಂದನನಪ್ರತರ್ಕ್ಯ ಮಹಿಮಂ ಮಾನವ್ಯನೆಂಬಂ ಮಹಾ
ಮುನಿ ಮಾನವ್ಯ ಸುತಂ ಹರೀತಿಯತಿನಾಥಂ ತದ್ಧರೀತಂಗೆ ವ
ಜ್ರನಖಂ ಪಂಚಶಿಖಂ ಶ್ರುತಿಸ್ಮೃತಿ ಮುಖಂ ಹಾರೀತಿ ಲೋಕೋತ್ತಮಂ
॥ 186 ॥

ಚಾಲುಕ್ಯ ವಂಶ

ಮ ಸ್ರ ॥
ಪ್ರಕಟಂ ಹಾರೀತಿ ಮಂತ್ರಾತ್ಮಕನನುಪಮಿತಂ ಕೊಟ್ಟ ಸನ್ಮಾರ್ಘ್ಯಚುಳ್ಕೋ
ದಕದಿಂದಂ ಪುಟ್ಟಿ ಚಾಳುಕ್ಯಕುಳರೆನಿಸಿ ಸೋಮನ್ವಯಖ್ಯಾತರುಂ ಕೌ
ಶಿಕ ಗೋತ್ರೋಪೇತರುಂ ನಿರ್ಜ್ಜಿತ ವಿಜಯ ಭುಜಾಟೋಪರುಂ ಭೂರಿ ಭೂಭುಂ
ಭಕರುಂ ವಿಷ್ಣುಪ್ರಸಾದೋದಯರುಮೆನಿಸಿದರ್ಸತ್ಯವಾಕ್ಯರ್ಚ್ಚಳುಕ್ಯರ್ ॥ 187 ॥

ಚಂ ಮಾ ॥ ಪಡೆದು ಕುಮಾರನಿಂ ವರಶಿಖಿಧ್ವಜ ಕೋಟಿಯನೊಳ್ಪುವೆತ್ತ ಪೆ
ಳ್ಗೊಡೆಗಳನಾಜುಮಂ ಮಹಿಷಮರ್ದಿನಿಯಂ ಪಡೆದಚ್ಯುತಂ ಕುಜ
ಲ್ಪಡೆದು ವರಾಹಮುದ್ರೆಯನೆನಲ್ದೊರೆವೆತ್ತ ಚಳುಕ್ಯ ವಂಶಮೇಂ
ಪಡೆದುದೋ ದುರ್ಗ್ಗಿಯಂ ತಮಗಮುರ್ತ್ತರಮುಮಾ ಕುಲದೈವವೆಂಬುದಂ
॥ 188 ॥

ಕಂ ॥ ತ್ರಿಜದ್ವ್ಯಾಪಕ ಕೀರ್ತ್ತಿ
ಧ್ವಜನಬ್ಧಿಪರೀತ ಧಾತ್ರಿಯಂ ವೀರಚತು
ರ್ಭುಜನೆನಿಸಿ ವಿಷ್ಣುವರ್ಧನ
ವಿಜಯಾದಿತ್ಯಾವನೀಶನಾಳ್ದಿಂ ಬಳಿಕಂ ॥ 189 ॥

ಮ ಸ್ರ ॥ ಜಯಮಮಂ ಕೈಕೊಂಡಯೋಧ್ಯಾಧಿಪನೆನಿಸಿ ಧರಾಚಕ್ರಮಂ ವೀರಸತ್ಯಾ
ಶ್ರಯನಾಳ್ದುಂ ತಂನೃಪಾನಾಂತರವವನಿಯ ನಾಳ್ದರ್ಪಲರ್ಭೂಭುಜರ್ನಿ

ರ್ಭಯರಂನ್ದೆಚ್ಚೀನ ಷಷ್ಟಿಕ್ರಮಗಣನೆನಿಸಲ್ ಸಿಂಹಪೀಠಂ ಬಳಿಕ್ಕಂ
ಜಯಸಿಂಹಂ ವೀರನಾಳ್ದಿಂಬಳಿಕವೆಳೆಯನಾ ಷೋಡಶೋರ್ವೀಶರಾಳ್ದರ್ ॥ 190 ॥

ಪುಲಿಕೇಶಿ I (ಬಾದಾಮಿ ಚಾಲುಕ್ಯ)

ಕಂ ॥ ಅವರಿಂ ಬಳಿಕ್ಕ ಮಹಿಮಾ
ರ್ಣವನೆನಿಸಿದ ಮಂಗಳಾರ್ಣವಂ ರಣರಾಗಂ
ಧವಳ ಯಶೋನಿಧಿ ಪೊಲೆಕೇ
ಶಿವಲ್ಲಭಂ ಧರೆಯನಾಳ್ದನಂತರಮಾಗಳ್ ॥ 191 ॥

ಕಂ ॥ ಧರೆಯಂ ಕತ್ಯರನಾತಂ
ಮರುಳ್ತನಂಗೊಂಡ ಸಮಯದೊಳ್ ರಾಷ್ಟ್ರಕುಮಾ
ರರನೇಕರಾಳ್ವುದಂ ರ
ಟ್ಟರ ಪೆಸರ್ಗಿಭತತಿಗೆ ಭಾರಿ ಮುಳಿವವೊಲಾಗಳ್ ॥ 192 ॥

ತೈಲಪ

ಮ ಸ್ರ ॥ ಪರಿಯಟ್ಟೇಕಾಂಗದಿಂದೀ ಮಸಗಿದ ಜವನಂ ಪೋಲ್ತು ಕೋಡಿಟ್ಟತಂ ರ
ಟ್ಟರ ಬೇರಂ ಬೇಗದೊಳ್ಕಿರ್ತಱಿಸಿ ತವಿಸಿ ತನ್ನೊರ್ಣ್ಣೆ ತನ್ನೋಲೆ ತನ್ನೆ
ಳ್ತರ ವಾಶಾಧೀಶರಂ ಧಿಕ್ಕರಿಸೆ ಭುಜಲತಾರತ್ನ ಕೇಯೂರಮೆಂಬಂ
ತಿರೆ ತಾಳ್ದಿರ್ದ್ದಂ ಧರಾಚಕ್ರಮನತುಳಬಳಂ ತೈಲಪ ಕ್ಷೋಣೀಪಾಳಂ
॥ 193 ॥

ಮ ಸ್ರ ॥ ಜನನಾಥಂ ತೈಲಪಂ ತತ್ತನಯನತಿಬಳಂ ವೀರ ಸತ್ಯಾಶ್ರಯಂ ತ
ತ್ತನುಜಾತಂ ವಿಕ್ರಮಾಂಕಂ ತದನುಜನೆನೆ ಸನ್ದಯ್ಯಣಂ ತದ್ಧರಾಧೀ
ಶನ ತಮ್ಮಂ ಕ್ಷತ್ರಧರ್ಮಂ ಜಯನಿಧಿ ಜಯಸಿಂಹಂ ತದಗ್ರಾತ್ಮಜಂ ಮೇ
ರುನಿಭಂ ತ್ರೈಲೋಕ್ಯಮಲ್ಲಂ ತದವನಿಪಸುತಂ ಸೋವಿದೇವ ಕ್ಷಿತೀಶಂ
॥ 194 ॥

ವಿಕ್ರಮಾದಿತ್ಯ VI

ಮ ಸ್ರ ॥ ಪರಮುತ್ತಿಂ ತೆಂಕ ಲಂಕಾಪುರಿ ಬಡಗಲಯೋಧ್ಯಾಪುರಂ ಮೇರೆಯೆಂಬಂ
ತಿರೆ ತನ್ನುಗ್ರಾಸಿಯಿಂದಂ ನಿಮಿರ್ದ್ದ ನೆಲದೊಳಾಜ್ಞಾಪ್ರತಾಪ ಪ್ರಭಾವ
ಲ್ಲರಿಗಳ್ತಳ್ವಾಯ್ತು ನೀಳ್ದಾಗಸಮನಡರ್ದ್ದವೆಂದಂದು ಸಾಮಾನ್ಯವೇ ಭೀ
ಕರ ದಿಗ್ಜೈತ್ರಾನಕ ತ್ರಾಸಿತರಿಪುಹೃದಯಂ ವಿಕ್ರಮಾದಿತ್ಯದೇವಂ ॥ 195 ॥

ಮಲ್ಲಣಿದೇವಿ

ಕಂ ॥ ಆ ವಿಕ್ರಮಾಂಕ ನೃಪನ ಮ
ನೋವಲ್ಲಭ ರಾಯರಾಣಿ ಮುಖತಿಳಕೆ ಕಳಾ
ಕೋವಿದೆ ನೆಗಳ್ದಲ್ಮಲ್ಲಣಿ
ದೇವಿ ಜಗಜ್ಜನನಿ ಪಟ್ಟಮಾದೇವಿಯೆನಲ್ ॥ 196 ॥

ನಾಗವರ್ಮ

ಕಂ ॥ ಎನಿಸಿದ ಮಲ್ಲಣಿದೇವಿಯ
ಮನೆಯೊಳ್ ಶುಚಿದಕ್ಷನಾಗಿ ಮಾಣಿಕ ಭಂಡಾ
ರನಿಯೋಗಮಮಂ ಸಮಸ್ತಾ
ವನೀಜನಂ ಪೊಗಳೆ ನಾಗವರ್ಮಂ ನೆಗಳ್ದಂ ॥ 197 ॥

ಅವರವಾಡಿ

ಕಂ ॥ ಕುಂತಲದೇಶ ವಧೂ ಮೃದು
ಕುಂತಳದೇಶದೊಳೆಸೆವ ಸಾಯಿರಬಾಡ
ಕ್ಕನ್ತೊಡವಿದೆನಿಸಿ ಕೂಡೆ ಬ
ಸನ್ತಮೆನಿಪ್ಪವರವಾಡಿಯೆಳ್ನೂಱದರೊಳ್ ॥ 198 ॥

ಕಲ್ಲಕುಂಬರಿಗಾವೆ

ಕಂ ॥ ಶ್ರೀವೆರಸು ರೂಢಿವೆರಸು ಕ
ಳಾವಿಭವಂ ಬೆರಸು ಜನಪದಂ ವೆರಸು ಧರಿ
ತ್ರೀ ವಧುಗೆ ಕಲ್ಲಕುಂಬರಿ
ಗಾವೆ ವಿಭೂಷಣದವೊಲ್ವಿರಾಜಿಪುದದಜೊಳ್ ॥ 199 ॥

ಗೋಪಾಳಕ್ರಮಿತ

ಶಾ ವಿ ॥ ಶ್ರೀ ಪಂಕೇರುಹ ಗರ್ಭವಂಶ ತಿಳಕಂ ಷಟ್ಕರ್ಮ ಧರ್ಮ್ಮಕ್ರಮ
ವ್ಯಾಪಾರಂ ಪರಮಾರ್ಥ ತತ್ವಮಹಿಮಂ ಸಾಹಿತ್ಯ ವಿದ್ಯಾವಿದಂ
ಶಾಪಾನುಗ್ರಹತೋ ಸಮರ್ಥನವಂದ್ಯಾಚಾರ ಗಂಗಾತ್ಮಜಂ
ಗೋಪಾಳಕ್ರಮಿತಂ ನೆಗಳ್ತೆವಡೆದಂ ಮಾಂಧಾತ ಗೋತ್ರೋತ್ತಮಂ ॥ 200 ॥

ಕಂ ॥ ಗೋಪಾಳ ಕ್ರಮಿತಂ ನತ
ಭೂಪಾಳ ಕಿರೀಟ ರತ್ನರಂಜಿತಪದನು

ರ್ವ್ವೀಪರಿವೃತ ಕೀರ್ತಿ ದಯಾ
ರೂಪಂ ಶ್ರೀ ವಾಜಿವಂಶಭೂಷಣನೆನಿಪಂ ॥ 201 ॥

ರೇವಣಭಟ್ಟ

ಕಂ ॥ ಅವರ ಮಗಂ ಧರ್ಮಗುಣ
ಪ್ರವರ್ದ್ಧನಂ ಸೂಕ್ತ ಸತ್ಯಸಂಪನ್ನಂ ದಾ
ನವಿನೋದಂ ವಾಜಿಕುಳಾ
ರ್ಣವಚಂದ್ರಂ ನೆಗಳ್ದನಲ್ತೆ ರೇವಣಭಟ್ಟಂ ॥ 202 ॥

ಮ ಸ್ರ ॥
ಗೆಡೆಗೊಂಡೆಂಭತ್ತು ನಾಲ್ಕುಂ ತೆಱದ ವಿಷಚಮತ್ಕಾರದೊಳ್ ರೂಢಿಯಂ ಮುಂ
ಪಡೆದಾಲಂಬಂಗೆ ಗೆಲ್ಲಂಗುಡದ ಮಹಿಮೆಯಂ ತಾಳ್ದ ಮೂಱುಂ ವಿಷಂಗ
ಳ್ನಡೆ ನೋಡಲ್ಮಂತ್ರಿಸಲ್ತಂತ್ರಿಸಲವಯವದಿಂ ನಿರ್ವಿಷಂ ತಾವೆನೆಲ್ಗಾ
ರುಡಿಗಂ ಶ್ರೀ ರೇವಣಯ್ಯಂ ನೆಗಳ್ದನವನಿಯೊಳ್ ಮಂತ್ರವಿದ್ಯಾಸಮುದ್ರಂ ॥ 203 ॥

ಮಧುಸೂಧನ

ಕಂ ॥ ಆ ರೇವಣಾರ್ಯ ಸುತನನಿ
ವಾರಿತ ದಾನಪ್ರಸಂಗನಾಶ್ರಿತಜನ ವಿ
ಸ್ತಾರಂ ವಾಜಿಕುಳಾಳಂ
ಕಾರಂ ಮಧುಸೂದನಂ ಪೊಗಳಟ್ತೆಯನಾಳ್ದಂ ॥ 204 ॥

ರೇವಣಯ್ಯ ನಾಯಕ II

ಕಂ ॥ ಅವರೊಳುದಯಿಸಿದನುತ್ಕೃ
ಷ್ಟವಾಜಿವಂಶೋದಯಾಚಳ ದ್ಯುಮಣಿಕಳಾ
ರ್ಣವನನುಪನು ಮಾಂಧಾತ
ಪ್ರವರಂ ಶ್ರೀ ರೇವಣಯ್ಯ ನಾಯಕನೆಸೆದಂ ॥ 205 ॥

ಉ ಮಾ ॥ ತೀವುವಿನಂ ಜಸಂ ದೆಸೆಯನಾಶ್ರಿತರಾಶ್ರಮ ಕೋಟಿಯಂ ಧನಂ
ತೀವುವಿನಂ ವಿಶುದ್ಧ ಮನುಸೂತ್ರಪದಂ ನಿಜಚಿತ್ತವೃತ್ತಿಯಂ
ತೀವುವಿನಂ ವಿರಾಜಿಸಿದನಪ್ರತಿಮ ಪ್ರತಿಭಾಗುಣಂ ವಚ
ಶ್ರೀ ವಧು ಕೊಟ್ಟ ಮುದ್ರಿಕೆಯ ಪಕ್ಕದ ಕೇವಣದಂತೆ ರೇವಣಂ ॥ 206 ॥

ಹರನ ಪ್ರತಿಷ್ಠೆ

ಉ ಮಾ ॥ ತಾಮಸ ರಾಜಸಂಗಳ ನಂದಿರ್ಪ್ಪಿ ಪ್ರಭುತ್ವದ ಕಲ್ಲಕುಂಬರಿ
ಗ್ರಾಮೆಯೊಳಿಂದುಶೇಖರನನೀಶ್ವರನಂ ಹರನಂ ಪ್ರತಿಷ್ಠೆಗೆ
ಯ್ದೀ ಮಹಿ ಬಣ್ಣಿಪಂತು ಪುರುಷಾರ್ಥಮನಾರ್ಜಿಸಿದಂ ದಯಾಂತ ಸೋ
ದ್ಧಾಮನೆನಿಪ್ಪ ರೇವಣನ ಸತ್ವಗುಣ ಧರೆಗೆಕ್ಕಲಾವಣಂ ॥ 207 ॥

ನಾಲಿಕಬ್ಬೆ

ಕಂ ॥ ಗುಣಗಣವತಿ ನಯವತಿ ರೇ
ವಣಯ್ಯ ನಾಯಕನ ಸತಿ ದಯಾವತಿ ಶುಭ ಲ
ಕ್ಷಣ ಲಕ್ಷಿತೆ ಪತಿಹಿತೆ ಧಾ
ರಿಣಿ ಬಣ್ಣಿಸೆ ನಾಲಿಕಬ್ಬೆ ಪೆಂಪು ಪಡೆದಳ್ ॥ 208 ॥

ರೇವಣಯ್ಯ ನಾಯಕ ನಾಲಿಕಬ್ಬೆಯ ಮಗ ನಾಗರಾಜ

ಮ ವಿ ॥ ಮನುಸೂತ್ರಂಚರಿತಂ ಸ್ಥಿರೋನ್ನತಿ ಸುರಾದ್ರಿ ಪ್ರಕ್ರಮಂ ಪುಣ್ಯವ
ರ್ಧನವಾತ್ಮೀಯಧನಂ ಗಭೀರ ಗುಣವಾರ್ಧಿಪ್ರಖ್ಯ ಮುಖ್ಯಂ ಜಗ
ಜ್ಜನ ರಕ್ಷಾ ಕ್ಷಮ ವಾರ್ಪು ನಿರ್ಮಳ ಯಶಂ ದಿಕ್ಕಾಮಿನೀ ರತ್ನಮಂ
ಡನವೆಂಬಂತಿರೆ ನಾಗರಾಜನೆಸೆದಂ ಮಾಂಧಾತಗೋತ್ರೋತ್ತಮಂ ॥ 209 ॥

38) ಅಕ್ಕಲಕೋಟೆ 119, ಅಕ್ಕಲಕೋಟೆ ತಾ., ಕ.ವಿ.ಶಾ.ಸಂ. VI, ಕ್ರಿಶ. 1122

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ಆರನೆಯ ವಿಕ್ರಮಾದಿತ್ಯನ ಆಳಿಕೆಯಲ್ಲಿ ಮಹಾಮಂಡಳೇಶ್ವರ ಇಂದರಸನ ಹಡಪವಳ ದಂಡನಾಯಕ ಮಾಧವಭಟ್ಟನು ದೈತಾಣದಲ್ಲಿ ನಿರ್ಮ್ಮಿಸಿದ ಕಂದರ್ಪೇಶ್ವರ ಹಾಗೂ ಕೇಶವೇಶ್ವರ ದೇವಾಲಯಗಳಿಗೆ ನೀಡಿದ ದತ್ತಿಯನ್ನು ಹೇಳಿದೆ.

ದಾಸಿಯ ಭಟ್ಟ

ಉ ಮಾ ॥ ವಿಪ್ರಕುಳಾಂಬರಾರ್ಕನನವದ್ಯ ಯಶೋನಿಧಿ ಶೌಚಸಾರ ಸೌ
ಖ್ಯಪ್ರಿಯನಪ್ರತರ್ಕ್ಯಮಹಿಮೋದಯನುತ್ತಮನುದ್ಧದಾನಸಂ
ನ ಪ್ರಭು ಕರ್ಮಠಾಂ ನೆಗಳ್ದ ಕೌಶಿಕ ಗೋತ್ರ ಪವಿತ್ರ ಸುದ್ಧ ಧಾ
ತ್ರೀ ಪ್ರವಿಭಾಸಿ ತಾಂ ನೆಗಳ್ದ ದಾಸಿಯಣಭಟ್ಟನಿಳಾತಳಾಗ್ರದೊಳ್ ॥ 210 ॥

ಕಂ ॥ ಧರೆ ಪೊಗಳೆ ನೆಗಳ್ದನಮಳಿನ
ಚರಿತಂ ವಿಪ್ರಾನ್ವಯಾಂಬರಾರ್ಕಂ ತೇಜೋ
ವರನಖಿಳವಿಭವವಂದಿತ
ನಿರುಪಮಗುಣನೆನಿಸಿ ನೆಗಳ್ದರ್ದಾಸಿಯಭಟ್ಟರ್ ॥ 211 ॥

39) ಕರಾಡಖೇಡ 74, ದೆಗ್ಲೂರು ತಾ., ಕ.ವಿ.ಶಾ.ಸಂ. VI, ಕ್ರಿಶ. 1133

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ಭೂಲೋಕಮಲ್ಲನ (ಮೂರನೆಯ ಸೋಮೇಶ್ವರ) ಆಳಿಕೆಯಲ್ಲಿ ಅವನ ಪಟ್ಟಮಹಾದೇವಿಯ ಮನೆವೆರ್ಗಡೆ ದಂಡನಾಯಕ ಶ್ರೀಧರಯ್ಯ ಎಂಬುವವನು ಸೋಮನಾಥ ದೇವಾಲಯಕ್ಕೆ ನೀಡಿದ ದತ್ತಿಯನ್ನು ಹೇಳಿದೆ.

ವಿಕ್ರಮಾದಿತ್ಯ VI

ಮ ವಿ ॥ ಹಿಮದಿಂ ಸೇತುವರಂ ನಿಮಿರ್ಚ್ಚಿ ನೆಲನಂ ನಿಃಕಂಟಕಂ ಮಾಡಿ ವಿ
ಕ್ರಮದಿಂ ದಿಟ್ಟೆಗರಾಯರಂ ಕವರ್ದುಕೊಂಡಮ್ಮಮ್ಮ ಭೂದೇವ ಲೋ
ಕಮನೋರಂತೆ ಸಹಸ್ರ ಷೋಡಶ ಮಹಾದಾನಂಗಳಂ ಕೊಟ್ಟು ಕೂ
ಡೆ ಮಹೋತ್ಸಾಹದೊಳಕ್ಕರ್ಜಿಂ x x ಡಿದಂ ಪೆರ್ಮಾಡಿ ಚಕ್ರೇಶ್ವರಂ
॥ 212 ॥

40) ಏರಿಗೆ 63, ದೆಗ್ಲೂರ ತಾ., ಕ.ವಿ.ಶಾ.ಸಂ. VI, ಕ್ರಿಶ. 1134

ಇದರಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ಭೂಲೋಕಮಲ್ಲದೇವನ ಆಳಿಕೆಯಲ್ಲಿ ಮಹಾಮಂಡಳೇಶ್ವರ ಎಜೆಯರಸನು ನಕರೇಶ್ವರದ ಕೇಶವ ದೇವಾಲಯಕ್ಕೆ ನೀಡಿದ ದತ್ತಿಯನ್ನು ಹೇಳಿದೆ.

ಫಲಶ್ರುತಿ

ಕಂ ॥ ಕೋಟಿ ಪಯಂ ಕಪಿಲೆಯನೆ
ಕ್ಕೋಟಿ ತಪೋಧನರ ವೇದವಿದರಂ ಪನ್ನಿ
ಕ್ಕೋರ್ಟಿಯನೆ ಕೋಟಿ ತೀರ್ಥದೆ
ಕೋಟಿ ಮಹಾದಿನದೊಳಳಿದನಿಂತಿದನಳಿದಂ ॥ 213 ॥

41) ಮುಂಬಯಿ ಪ್ರಿನ್ಸ್ ಆಫ್ ವೇಲ್ಸ್ ಮ್ಯೂಸಿಯಂ 102, ಕ.ವಿ.ಶಾ.ಸಂ. VI, ಕ್ರಿಶ. 1138

ಕಲ್ಯಾಣದ ಚಾಲುಕ್ಯರ ದೊರೆ ಆರನೆಯ ವಿಕ್ರಮಾದಿತ್ಯನ ಆಳಿಕೆಯಲ್ಲಿ ಮಹಾಮಂಡಳೇಶ್ವರ ಗೋವೆಯ ಕದಂಬರ ಜಯಕೇಶಿಯ ಕಾಲದಲ್ಲಿ ನವಿಲೂರಿನ ಕುರುಬ ಸೇಣಿಗರು ಸೆಣಗೇಶ್ವರ ದೇವರಿಗೆ ನೀಡಿದ ದತ್ತಿಯನ್ನು ಇದರಲ್ಲಿ ಹೇಳಿದೆ.

ಜಯಕೇಶಿ

ಉ ಮಾ ॥ ಶ್ರೀ ಕದಂಬ ಕುಲಾಬ್ಧಿಚಂದ್ರನಮಳಚ್ಚಾಳುಕ್ಯ ದೌಹಿತ್ರಜಂ
ಲೋಕವ್ಯಾಪಿತ ಕೀರ್ತಿಕಾಂತನಹಿತಕ್ಷ್ಮಾಪಾಳ ಸಾಮ್ರಾಜ್ಯ ಶ್ರೀ
ಸ್ವೀಕಾರಂ ಶರಣಾಗತಾರ್ತ್ಥಿ ಜನತಾ ಸಂತಾನ ಮನ್ವಾಂ ಶಾ
ಸ್ತ್ರಾಕಾಂಕ್ಷಾರ್ಥ ಚರಿತ್ರನೆಂಬುದು ಜಗಂ ಜೇಕೇಶಿ ಭೂಪಾಲನಂ ॥ 214 ॥

ಮ ವಿ ॥ ವರಗಂಗಾಜಳ ಚಂದ್ರಚೂಡನಗಜಾರ್ದ್ಧಾಂಗಂ ಸೃಜತ್ಪಾಲನೋ
ತ್ತರರೂಪಂ ಶಿವನೀಶನಾದ್ಯನಭವಂ ಶ್ರೀ ಸಪ್ತಕೋಟೀಶನಂ
ಸ್ಥಿರ ವಾರಾಧಿ ಸಿನಿಚ್ಚನಿಚ್ಚವಹವಂ ಜೇಕೇಶಿ ಭೂಪಾಲನಾ
ದರದಿಂ ಕೈ ಕೊಳುತಿರ್ಪನೆಂಬುದು ಜಗಂ ಮಹೇಶ್ವರೋರ್ವ್ವೀಶನಾ ॥ 215 ॥

ಹಲಸಿಗೆ ನಾಡು

ಚಂ ಮಾ ॥ ಹಲಸಿಗೆ ನಾಡು ನಾಡೆ ಸೊಗಯಿಪ್ಪುದು ಭೂವಳಯಕ್ಕೆ ಶೋಭೆಯಂ
ತಳೆದೆಲೆವಳ್ಳಿ ಪೂಗಿಫಳ ಮಾಮರ ಕೋಮಳ ಮಾತುಳಂಗ ವಾ
ಜಳರುಹ ಷಂಡ ಮಂಡಿತ ತಟಾಕ ಸುನಿರ್ಜ್ಝರ ವಾರಿಧಾರೆಯಿಂ
ಪುಳಿನಮೆನಿಪ್ಪುದೂರ್ಗಳ ಬಹಿರ್ವ್ವನವಾಸವನಂದನಾಸ್ಪದಂ ॥ 216 ॥

ಚಂ ಮಾ ॥ ತಿಳಿಗೊಳನೊಂದನೊಂದಿ ಪರಿಯುತ್ತಿರಲಾ ಪರಿನೀರನುಂಡು ಕ
ತ್ತಲಿಪೆಲೆವಳ್ಳಿ ಪೂಗಿಫಳ ಬಾಳೆ ರಸೋತ್ಕರ ವೀಳೆ ತೆಂಗು ಮಾದು
ಫಳಕರಿಯಿಕ್ಷುದಂಡ ಕಳಿದೋತ್ಕರ ಭಾರದಿನೊಪ್ಪಿ ತೋರುತಂ
ಬೆಳೆದು ತದುರ್ವ್ವೀತಜ್ಜನಕೆ ಮಾಡೆ ಬಸಂತಮನಾವಕಾಲಮಂ ॥ 217 ॥

ಚಂ ಮಾ ॥

ಸಸಿವರನೊಂದು ತೋಂಟದೊಳು ಪೂಗಿಫಳಂಗಳ ಭಾರದಿಂದ ಪೊಂ
ದೆಸಗೊರಗಿರ್ದುದೊಂದೆಡೆಯೊಳೊಂದೆಡೆಯೊಳ್ ತುರುಗಿರ್ದ್ದ ಗೊಂಚಲಿಂ
ಸಸಿನಮೆನಿಪ್ಪುದೊಂದೆಡೆಯೊಳೊಂದೆಡೆಯೊಳ್ ಕೊನೆ ಕೆಂಪನಾಗಿ ನಾಲ್
ದೆಸೆಗ್ಗೆಸೆದಿಪ್ಪುದೊಂದೆಡೆಯೊಳೊಂದೆ ಫಳಂ ಗೊನೆಯಿಂದಲೊಪ್ಪುಗುಂ ॥ 218 ॥

ಚಂ ಮಾ ॥ ಬಲಿದೆಲೆವಳ್ಳಿಯಾ ಮರದಿನಾ ಮರಕೊಯ್ಯನೆ ಕಯ್ಯ ನೀಡಿ ಕ
ತ್ತಲಿಸೆ ತದಂಧಕಾರದೊಳಗಾ ಮರನೊಯ್ಯನೆ ಸೋಂಕೆ ಸೋಂಕೆ ಮ
ತ್ತಲೆವವರಿಲ್ಲ ವಾಯುವಂಶದಿಂದುಲಿಹಾಗಿರೆ ತೋಂಟಕಾರ ಬಂ
ದೆಲೆಯನೆ ಕೊಯ್ದು ಜರೆವಮುಗಾಗಳೆ ಮಾಪ್ಪುದನ್ನೆದೆ ಮಾಡುವರ್ ?
॥ 219 ॥

ಕಂ ॥ ಎರೆಹಾಳು ಹರಳು ತೋಂಟದ
ಬರಿಯೊಳ್ ಕಾಲುವೆಯನುಂಬ ಗದ್ದೆಗಳಿಂದಂ
ಪಿರಿದೆಲೆಯ ಪುರ್ವ್ವಳ್ಳಿಯ
ಧರೆಯೆಲ್ಲಂ ಬೆಳೆಸು ಕಳಸವಿಟ್ಟಂತಿರ್ಕ್ಕುಂ ॥ 220 ॥

ಇನ್ನೂರ್ವರು ಬ್ರಾಹ್ಮಣರು

ಮ ವಿ ॥ ವರಶಾಸ್ತ್ರಾರ್ಥ ವಿಶಾರದರ್ಸ್ಸಕಳ ವೇದಾನೀಕ ಸಂಪನ್ನರು
ತ್ತರ ತಾರ್ಕ ಪ್ರಮೇಯ ಪ್ರಮಾಣರರೆದರ್ಗ್ಗಾನಂದದಿಂದೀವೊಡಂ
ಸುರ ಭೂಜೋಪಮರರ್ಗ್ಗಳಿಂ ತಲೆಯ ಪುರ್ವ್ವಳ್ಳಿ ದ್ವಿಜಶ್ರೇಷ್ಠರಂ
ಪಿರಿದಿಂನೂರ್ವ್ವರನಾಗಳಂ ಪೊಗಳುಗುಂ ಭೂಲೋಕ ವಿದ್ವಜ್ಜನಂ ॥ 221 ॥

ವ್ಯಾಪಾರಿಗಳು

ಮ ವಿ ॥ ಮಿಗೆ ಸಾಹಿತ್ಯ ಸಮಸ್ತ ಶಾಸ್ತ್ರ ವಿಷಯ ವ್ಯಾಪಾರದೊಳ್ ಪೇಳ್ವಡೇ
ಭೃಗುಮಿಂದತ್ಯಧಿಕಾರಳಾಸುರಿಗೆ ವಿಣ್ಣಾಳಾಪದೊಳ್ ವೀರದೊಳ್
ಹಗೆ ಸಿಂಹಕ್ಕಿದಿರಾಗೆ ತಾಗಿ ಕೊಲುವರ್ಪಾವಂನವಿಲಾನ್ವಯ
ಮ್ರ್ರುಗಿಲಿಂತೊಪ್ಪೆ ಕುರಿಂಬ ಸೇಣಿಗರಿದೇಂ ಲೋಕಕ್ಕೆ ವಿಖ್ಯಾತರೋ
॥ 222 ॥

42) ಮಾಡಗಿಹಾಳ 115, ಮೀರಜ್ ತಾ., E.I. XV, p. 315, ಕ್ರಿ.ಶ. 1172

ಇದರಲ್ಲಿ ಕಳಚೂರ್ಯರ ದೊರೆ ರಾಯಮುರಾರಿ ಸೋಯಿದೇವನ ಆಳಿಕೆಯಲ್ಲಿ ವರ್ಣಕವಿ ಕನ್ನಡಜಾಣ ಎಂಬ ಬಿರುದಿನ ಬಿಜ್ಜಯನಾಯಕ ಎಂಬುವವನು ಮಾಳಿಗೆಯ ಗ್ರಾಮದಲ್ಲಿ ಸೋಮನಾಥ ಮತ್ತು ಬಿಜ್ಜೇಶ್ವರ ದೇವಾಲಯಗಳನ್ನು ಮಾಡಿಸಿದುದನ್ನೂ ಅದಕ್ಕೆ ಬಂದ ದತ್ತಿಗಳನ್ನೂ ಹೇಳಿದೆ. ಬಿಜ್ಜಯನಾಯಕನನ್ನು ವರ್ಣಕವಿ, ಕನ್ನಡಜಾಣ ಎಂದು ಹೊಗಳಿದೆ.

ಬಿಜ್ಜಳ

ಸ್ರಗ್ಧರೆ ॥ ಲಾಳಂ ಬಾಳ್ಗೊಟ್ಟು ಕೋಳ್ಗೊಟ್ಟುೞಿದನುೞಿದನಾ ಚೇರಮಂ ಬೀರಮಂ ನೇ
ಪಾಳಂ ಕಾಡಾಲಯಕ್ಕೆಯ್ದಿದನತಿಭಯದಿಂ ಶೌರ್ಯಸಂಪತ್ತಿಯಿಂ ಪಾಂ
ಚಾಳಂ ಚಾಳಾದನಾಳಾಳೆನಿಸಿ ಬರ್ದುಕಿದಂ ಭೀಮಸಂಗ್ರಾಮಕೇಳೀ
ಲೋಳಂ ಚೋಳಂ ದಿಟಂ ಬಂದಪನೆನಲದಟಂ ಬಿಜ್ಜಳಕ್ಷೋಣಿಪಾಳಂ
॥ 223 ॥

ಮ ವಿ ॥ ರಾಜಮಹಾಭಿದಾನಮನೆ ಚಂದ್ರನೊಳಪ್ರತಿಮಪ್ರತಾಪದಾ
ರಾಜತೆಯಂ ನಿದಾಘಸಮಯಾರ್ಕನೊಳೂರ್ಜಿತಸಾರ್ವಭೌಮಮೆಂ
ಬೀ ಜಸಮಂ ದಿಶಾಕರಿಯೊಳಲ್ಲದೆ ವೈರಿನೃಪಾಳರಲ್ಲಿ ರಾ
ರಾಜಿಸಲೀಯದಿಂತು ನೆಗೞ್ದಂ ವಿಭು ದೋರ್ಬಳಚಕ್ರಿ ಬಿಜ್ಜಳಂ ॥ 224 ॥

ಸೋಯಿದೇವ

ಮ ವಿ ॥ ನಳನೀತಂ ಬಲಿರಾಜನೀತನತುಳಂ ಮಾಂಧಾತನೀತಂ ಪ್ರಮಂ
ಜುಳ ರೂಪೋನ್ನತಿಯಿಂ ಸುದಾನತತಿಯಿಂ ಮಾನತ್ವದಿಂ ನೋರ್ಪ್ಪಡೆಂ

ದೆಳೆ ಬಂಣಿಪ್ಪುದು ಷೋಡಶಾವನಿಪ ಚಾರಿತ ಪ್ರಭಾವ ಪ್ರಪೇ
ಶಳನಂ ಶ್ರೀ ಗಿರಿದುರ್ಗಮಲ್ಲ ವಿಭವಂ ಸೋಮಾವನೀಪಾಳಸಂ ॥ 225 ॥

ಚಂ ಮಾ ॥ ಎನಗಿನಸೋಮಭೂಪನರಿಭೂಪಜಯಾಂಗನೆಯೊಳ್ ನಿರಂತರಂ
ಮನವೆಳಸಿರ್ಪನಾಕೆಯಿರಲಾತನ ಸನ್ನಿಧಿಯಲ್ಲಿ ನಿಲ್ವುದಿಂ
ತೆನಗಿದು ಧರ್ಮಮಲ್ಲದುದಜಿಂ ದೆಸೆಯಂತರದೊಳಿರ್ಪೆನೆಂದು ದಿ
ಗ್ವನಿತೆಯರಲ್ಲಿ ತನ್ನೃಪಯಶೋಂಗನೆ ಮಾಣದೆ ಮಾತನಾಡುವಳ್ ॥ 226 ॥

ಚಂ ಮಾ ॥ ವಿನಮಿತಗೌಳ ಪಾಂಡ್ಯ ಮಲಯಾಳ ವರಾಳ ನೃಪಾಳಜಾಳಮಂ
ಡನಮಣಿಮಾಳಿಕಾರುಚಿರಮಂಜರಿಯಿಂದಮೆ ಪುಂಜಮಾಗಿ ರಂ
ಜನೆವಡೆದಾಗಳೇಂ ಸೊಗಯಿಸಿರ್ಪುದೊ ತನ್ನ ಪದಾರವಿಂದಮೆಂ
ದೆನಲಳವಂತುಟಿಂತುಟೆನಿಪಂತುಟೆ ಸೋಮಧರಾಧಿನಾಥನಾ ॥ 227 ॥

ಬಿಜ್ಜಯನಾಯಕ

ಮ ವಿ ॥ ವಿದಿತಾಶಾಗಜ ಮಾಳೆಯಂತಿರೆ ಸಪದ್ಮಂ ಚಂದ್ರನಂತು ಕಳಾ
ಪದಳಂ ವಾಸುಗಿಯಂತು ಭಾಸುರ ಭುಜಂಗಾಧಾರನಂಬೋಧಿಯಂ
ತುದಿತ ಸ್ತುತ್ಯ ಸರಸ್ವತೀಗಣಯುತಂ ಸಾಹಿತ್ಯವಿದ್ಯಾಧರಂ
ವಿದಿತಂ ಬಿಜ್ಜಯನಾಯಕಂ ವಿತರಣ ವ್ಯಾಪಾರ ಕೇಳೀವಿದಂ ॥ 228 ॥

ಮ ವಿ ॥ ಧನಮಂ ಸಂವರಿಪಲ್ಲಿ ಚಿಂತೆ ರಿಪುವರ್ಗಂ ತಂನನಾಂತಲ್ಲಿ ಭೀ
ತಿ ನಿತಾಂತಂ ಸಕಲಾರ್ಥಿ ಬೇಡಿದೆಡೆಯೊಳ್ ಲೋಭಂ ದಿಟಂ ತಂನೊಳಿ
ಲ್ಲೆನೆ ನಿಶ್ಚಿಂತತೆ ವೀರವೃತ್ತಿ ವಿಪುಳೋದಾರತ್ವವೆಂಬೀ ಗುಣ
ಕ್ಕೆನಸುಂ ಬಿಜ್ಜಯನಾಯಕಂ ಗುರುವೆನಿಪ್ಪಂ ಭೂತರೀಭಾಗದೊಳ್ ॥ 229 ॥

ಚಂ ಮಾ ॥ ಕಳಚುರಿರಾಜರಾಜ್ಯಗೃಹದೀಪಕನೆಂಬ ಮಹತ್ವದೇಟ್ಗೆ ತ
ನ್ನೊಳೆ ರಿಪುರಾಯದಂಡುಗೆ, ಪಡಿಗ್ಗಹನೆಂಬುರುವೀರದೇಟ್ಗೆ ತ
ನ್ನೊಳೆ ಬುಧರೀಯೆ ವರ್ಣಕವಿ ಕನ್ನಡಜಾಣನೆನಿಪ್ಪ ಬಲ್ಮೆ ತ
ನ್ನೊಳೆ ನೆಲಸಲ್ಕುದಾತ್ತನೆನೆ ಬಿಜ್ಜಯನಾಯಕನಿರ್ದನುರ್ವಿಯೊಳ್ ॥ 230 ॥

ಲೋಕಾಭರಣ ವ್ರತಿ

ಮ ವಿ ॥ ಚರಿತಂ ಭೂಭುವನೈಕ ಪಾವನ ವಿಲಾಸಂ ಕೀರ್ತಿ ದಿಗ್ದಂತಿ ಬಂ
ಧುರ ದಂತಾವೃತವಾತ್ಮ ದಿಬ್ಯವದನಂ ವಾಗ್ದೇವತಾ ನರ್ತನೋ

ದ್ಧುರರಂಗಂ ಹೃದಯಂ ಸದಾಶಿವ ಪದಧ್ಯಾನಾಸ್ಪದಂ ತಾನೆನಲ್
ವರ ಲೋಕಾಭರಣ ಬ್ರತೀಂದ್ರನತುಳಪ್ರಖ್ಯಾತಿಯಂ ತಾಳ್ದಿದಂ ॥ 231 ॥

ಕಲ್ಯಾಣದೇವ ಯತಿ

ಕಂ ॥ ಸ್ಮರನಂ ತನ್ನಯ ತಪದಿಂ
ಹಿರಿದುಂ ಬೆಂಕೊಂಡು ಶಂಭು ತತ್ವಾಗಮದೊಳ್
ಪರಿಣತನೆನೆ ತನಗೆಱಗಿಸಿ
ಧರೆಯಂ ಕಲ್ಯಾಣದೇವಯತಿಪಂ ನೆಗಳ್ದಂ ॥ 232 ॥

ಮಾಳಿಗೆ

ಕಂ ॥ ಅಳಕಾಪುರಿಯೆನೆ ಧನದಾ
ವಳಿಯಿಂದಮರಾವತಿಯೆನೆ ವಿಬುಧಾಶ್ರಯದಿಂ
ವಿಳಸದ್ಭೋಗಾವತಿಯೆನೆ
ಸಲೆ ಭೋಗಿಗಳಿಂ ಬಬಾಪ್ಪು ಮಾಳಿಗೆ ರಯ್ಯಂ ॥ 233 ॥

ಅಕಾರಾದಿ ಪಟ್ಟಿ

ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-೫೬೦೦೦೨

ಶಾಸನಗಳು ನಮ್ಮ ಪರಂಪರೆಯ ಬೇರುಗಳು. ಶಾಸನಗಳು ಮಹತ್ವದ ದಾಖಲೆಗಳಾಗಿದ್ದು, ಅವುಗಳನ್ನು ಪ್ರಭುತ್ವವೇ ಹಾಕಿಸಿದ್ದರೂ ಅಲ್ಲಿ ಕೇವಲ ರಾಜ ಮಹಾರಾಜರ ವಿಷಯಗಳು ಮಾತ್ರವೇ ಇಲ್ಲ. ಅಲ್ಲಿ ಶ್ರೀಸಾಮಾನ್ಯರಾದಿಯಾಗಿ ಪ್ರಾಣಿಗಳ ಕೊಡುಗೆ ಸಾಹಸಗಳನ್ನು ದಾಖಲಿಸಲಾಗಿದೆ. ಹಾಗಾಗಿ ಶಾಸನಗಳನ್ನು ಆಧರಿಸಿ ಶ್ರೀಸಾಮಾನ್ಯರ ಅಸಾಮಾನ್ಯ ಸಾಧನೆಗಳನ್ನು, ಜೀವನ ಮೌಲ್ಯಗಳನ್ನು, ಸಾಹಿತ್ಯಕ್ಕೆ ನಾಯಕ ನಾಯಕಿಯರಾಗಬಲ್ಲ ಜೀವಂತ ಪಾತ್ರಗಳನ್ನು ಕಾಣುವ ಹಾಗೂ ಕಟ್ಟಿಕೊಳ್ಳುವ, ಕಟ್ಟಿಕೊಡುವ ಅವಕಾಶವಿದೆ. ಇವು ಭಾಷೆ, ಸಾಹಿತ್ಯ, ಸಂಸ್ಕೃತಿ, ಇತಿಹಾಸ ಮೊದಲಾದ ಹತ್ತಾರು ನೆಲೆಗಳ ಅಧ್ಯಯನಕ್ಕೆ ಬಹಳ ಪ್ರಮುಖವಾದ ಆಕರಗಳಾಗಿವೆ.

ಬಿ.ವಿ. ವಸಂತಕುಮಾರ್
ಅಧ್ಯಕ್ಷರು
ಕರ್ನಾಟಕ ಸಾಹಿತ್ಯ ಅಕಾಡೆಮಿ

₹ ೪೦೦/-

KARNATAKA SAHITHYA ACADEMY
9 789391 554422
ಶಾಸನ ಪದ್ಯ ಸಿರಿ ಸಂಪುಟ ೨ ಬೆಲೆ ರೂ. ೪೦೦/-